ಸದೃಢ ಭಾರತ ಸಂಘದ ಧ್ಯೇಯ

ಆರ್‌ಎಸ್‌ಎಸ್ ಪ್ರಾಂತ ಕಾರ್ಯಕಾರಿಣಿ ಗಿರೀಶ ಹೆಬ್ಬಾರ ಹೇಳಿಕೆ | ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶಿಕ್ಷಾ ವರ್ಗ ಸಂಪನ್ನ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ವ್ಯಕ್ತಿ ನಿರ್ಮಾಣವಾಗಬೇಕು. ವ್ಯಕ್ತಿ ನಿರ್ಮಾಣದ ಮೂಲಕ ಸಮೃದ್ಧ ಸಮಾಜ ಮತ್ತು ಸದೃಢ ರಾಷ್ಟ್ರ ನಿಮಾಣವೇ ಆರೆಸ್ಸೆಸ್ ಮೂಲ ಆಶಯ ಎಂದು ಆರ್‌ಎಸ್‌ಎಸ್ ಪ್ರಾಂತ ಕಾರ್ಯಕಾರಿಣಿ ಸದಸ್ಯ ಗಿರೀಶ ಹೆಬ್ಬಾರ ಹೇಳಿದರು.

» ಭಾರತ ಮತ್ತೆ ವಿಶ್ವಗುರು ಆಗಬೇಕು ಎನ್ನುವದೇ ಸಂಘದ ಗುರಿ

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜಿಲ್ಲಾ ಪ್ರಾಥಮಿಕ ಶಿಕ್ಷಾ ವರ್ಗದ ನಿಮಿತ್ತ ನಗರದ ಬಸವೇಶ್ವರ ಪಬ್ಲಿಕ್ ಶಾಲೆ ಮೈದಾನದಲ್ಲಿ ಶುಕ್ರವಾರ ಸಂಜೆ ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಬೌದ್ಧಿಕ ನೀಡಿದ ಅವರು, ನಿತ್ಯಶಾಖೆ ಡಾ.ಹೆಡಗೆವಾರ್ ಅವರ ಮಂತ್ರವಾಗಿತ್ತು. ಶಾಖೆಯಲ್ಲಿ ಸಂಸ್ಕಾರ ಪಡೆದ ಒಬ್ಬ ವ್ಯಕ್ತಿ ಹೃದಯದ ಗುಂಡಿಗೆ ಗಟ್ಟಿಗೊಳ್ಳುತ್ತದೆ. ಸಮಾಜದಲ್ಲಿ ಸವಾಲುಗಳನ್ನು ಎದುರಿಸುವ ಶಕ್ತಿ ಬರುತ್ತದೆ. ಆಗ ಸಮಾಜ ಸಬಲವಾಗುತ್ತದೆ ಎಂದರು.

ಭಾರತ ಮತ್ತೆ ವಿಶ್ವಗುರು ಆಗಬೇಕು ಎನ್ನುವದೇ ಸಂಘದ ಗುರಿ. ಮಹತ್ವದ ಉದ್ದೇಶಕ್ಕೆ ನಿಸ್ವಾರ್ಥದಿಂದ ಸ್ವಯಂ ಸೇವಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ವ್ಯಕ್ತಿ ನಿರ್ಮಾಣದ ಕಾರ್ಯ ವೇಗ ಪಡೆಯಬೇಕು. ಶಾಖೆ ಇಲ್ಲದ ಗ್ರಾಮದಲ್ಲಿ ಶಾಖೆ ಆರಂಭಿಸಬೇಕು. ಇರುವ ಗ್ರಾಮಗಳಲ್ಲಿ ಹೊಸ ಶಾಖೆ ತೆರೆಯಬೇಕು. ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಯುವಕರನ್ನು ಸಂಘದ ಕಚೇರಿಗೆ ಕರೆತರಲು ಪ್ರಯತ್ನಿಸಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ಗವಿಮಠದ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಉತ್ತಮ ಸಂಸ್ಕಾರ ನೀಡುವ, ರಾಷ್ಟ್ರಾಭಿಮಾನ ಬೆಳೆಸುವ ಕೆಲಸ ಸಂಘದಲ್ಲಿ ನಡೆಯುತ್ತಿದೆ. ಹಿಂದು ಸಂಘಟಿತರಾಗಬೇಕು. ಭಾರತೀಯರೆಲ್ಲರೂ ಒಂದು ಎನ್ನುವ ಭಾವ ಪ್ರತಿಯೊಬ್ಬರಲ್ಲಿಯೂ ಬೆಳೆಯಬೇಕು ಎಂದರು.

ವರ್ಗಾಧಿಕಾರಿ ಶ್ರೀಕಾಂತ ಬಡದಾಳೆ ಒಂದುವಾರ ನಡೆದ ಪ್ರಾಥಮಿಕ ಶಿಕ್ಷಾ ವರ್ಗದ ವರದಿ ವಾಚನ ಮಾಡಿದರು. ಜಿಲ್ಲಾ ಸಂಘ ಚಾಲಕ ಶಿವರಾಜ ಅಲಶೆಟ್ಟಿ, ಉಪಸ್ಥಿತರಿದ್ದರು. ಸತೀಶ ಪಮಬಾಳ ನಿರೂಪಣೆ ಮಾಡಿದರು. ಸ್ವಯಂ ಸೇವಕರಿಂದ ಪ್ರದರ್ಶನ ಜರುಗಿತು.

ವಿಜಯವಾಣಿ ಚಿತ್ರಗಳು



ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜಿಲ್ಲಾ ಪ್ರಾಥಮಿಕ ಶಿಕ್ಷಾ ವರ್ಗದ ನಿಮಿತ್ತ ಬಸವಕಲ್ಯಾಣದಲ್ಲಿ ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಬೌದ್ಧಿಕ ಆರೆಸ್ಸೆಸ್ ಪ್ರಾಂತ ಕಾರ್ಯಕಾರಿಣಿ ಸದಸ್ಯ ಗಿರೀಶ ಹೆಬ್ಬಾರ, ಶ್ರೀಕಾಂತ ಬಡದಾಳೆ, ಶಿವರಾಜ ಅಲಶೆಟ್ಟಿ ಇದ್ದರು



ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜಿಲ್ಲಾ ಪ್ರಾಥಮಿಕ ಶಿಕ್ಷಾ ವರ್ಗದ ನಿಮಿತ್ತ ಬಸವಕಲ್ಯಾಣದಲ್ಲಿ ಆರೆಸ್ಸೆಸ್ ಗಣವೇಷಧಾರಿಗಳಿಂದ ಆಕರ್ಷಕ ಪಥ ಸಂಚಲನ ಜರುಗಿತು.

ಕಲ್ಯಾಣದಲ್ಲಿ ಪಥ ಸಂಚಲನ

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜಿಲ್ಲಾ ಪ್ರಾಥಮಿಕ ಶಿಕ್ಷಾ ವರ್ಗದ ನಿಮಿತ್ತ ನಿಮಿತ್ತ ನಗರದಲ್ಲಿ ಆಕರ್ಷಕ ಪಥ ಸಂಚಲನ ನಡೆಯುತು. ಸುಮಾರು 4 ಕಿಲೋ ಮೀಟರ್ ನಡೆದ ಪಥ ಸಂಚನಲ್ಲಿ ನಗರ ಸೇರಿ ಜಿಲ್ಲೆಯ ವಿವಿಧ ಗ್ರಾಮಗಳಿಂದ ಆಗಮಿಸಿದ ಸುಮಾರು 300 ಕ್ಕೂ ಹೆಚ್ಚು ಸ್ವಯಂಸೇವಕರು ಸಂಘದ ಗಣವೇಷ ಧರಿಸಿ ಪಥ ಸಂಚಲನದಲ್ಲಿ ಭಾಗವಹಿಸಿದ್ದರು. ಬಸವೇಶ್ವರ ಪಬ್ಲಿಕ್ ಶಾಲೆ ಮೈದಾನದಿಂದ ಅರಂಭವಾಗಿ ಅಂಬೇಡ್ಕರ್ ವೃತ್ತ, ಹುಲಸೂರ ರಸ್ತೆ ಕ್ರಾಸ್, ನಾರಾಯಣಪುರ ಕ್ರಾಸ್, ಬನಶಂಕರಿ ಗಲ್ಲಿ, ಬಸವೇಶ್ವರ ದೇವಸ್ಥಾನ, ಕಾಳಿ ಗಲ್ಲಿ ಮೂಲಕ ಮುಖ್ಯ ರಸ್ತೆ ಮಾರ್ಗವಾಗಿ ಗಾಂಧಿ ಚೌಕ್, ಬಸವೇಶ್ವರ ವೃತ್ತ ಮೂಲಕ ಶಾಲೆ ಮೈದಾನದವರೆಗೆ ಪಥ ಸಂಚಲನ ಜರುಗಿತು.ಭಾರತ ಮಾತೆ ಭಾವಚಿತ್ರ, ಭಗವಾ ಧ್ವಜದೊಂದಿಗೆ ನಡೆದ ಪಥ ಸಂಚಲನದಲ್ಲಿ ಗಣವೇಶದಲ್ಲಿ ಲಾಠಿ ಹಿಡಿದು ಶಿಸ್ತಿನಿಂದ ಸ್ವಯಂ ಸೇವಕರು ಪಥ ಸಂಚಲನ ನಡೆಸುವಾಗ ದಾರಿಯುದ್ದಕ್ಕೂ ಜನರು ಪುಷ್ಪವೃಷ್ಟಿಗೈದರು. ಭಾರತ್ ಮಾತಾಕೀ, ಒಂದೇ ಮಾತರಂ ಜೈಘೋಷ ಮೊಳಗಿದವು. ಪಥ ಸಂಚಲನದಲ್ಲಿ ಮುಂಭಾಗದಲ್ಲಿ ಪುಷ್ಪಾಲಂಕರದಿಂದ ಶೃಂಗರಿಸಿದ್ದ ತೆರೆದ ವಾಹನದಲ್ಲಿ ಭಾರತ ಮಾತೆ, ಡಾ.ಹೆಡಗೆವಾರ ಹಾಗೂ ಗುರೂಜಿ ಭಾವಚಿತ್ರ ಗಮನ ಸೆಳೆದವು. ಕೇಸರಿ ಸ್ವಾಗತ ಕಮಾನುಗಳು ಮತ್ತು ಕೇಸರಿ ಧ್ವಜ ಅಳವಡಿಸಲಾಗಿತ್ತು. ಅಕ್ಕಮಹಾದೇವಿ ಕಾಲೇಜು ಮೈದಾನದಲ್ಲಿ ನಡೆದ ಸಮಾವೇಶದಲ್ಲಿ ನಗರ ಸೇರಿ ವಿವಿಧೆಡೆಯ ಸಾರ್ವಜನಿಕರು ಭಾಗವಹಿಸಿದ್ದರು.

ಪೊಲೀಸ್ ಬಿಗಿ ಬಂದೋಬಸ್ತ್

ನಗರದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ರಸ್ತೆಯುದ್ದಕ್ಕೂ ಅಯ್ದ ಸ್ಥಳಗಳಲ್ಲಿ ಪೊಲೀಸ್ ನಿಯೋಜಿಸಲಾಗಿತ್ತು. ಹುಮನಾಬಾದ್ ಡಿವೈಎಸ್ಪಿ ಮಹೇಶ್ವರಪ್ಪ ಸ್ಥಳದಲ್ಲಿದ್ದು ಅವಲೋಕನ ನಡೆಸಿದರು. ಸಿಪಿಐ ಮಲ್ಲಿಕಾರ್ಜುನ ಯಾತನೂರ, ಪಿಎಸ್ ಐ ಸುನೀಲಕುಮಾರ ಸೇರಿ ವಿವಿಧ ತುಕ್ಕಡಿಗಳು ಭದ್ರತೆ ಒದಗಿಸಿದ್ದವು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 19 ಅಕ್ಟೋಬರ್ 2019
19 OCTOBER 2019

Scanned with OKEN Scanner

ವಿಜಯ ಕರ್ನಾಟಕ www.vijaykarnatakaepaper.com ಶನಿವಾರ,19 ಅಕ್ಟೋಬರ್ 2019 ನಮ್ಮ ಬೀದರ್

ಬಸವಕಲ್ಯಾಣ ನಗರದಲ್ಲಿ ಸ್ವಯಂ ಸೇವಕ ಸಂಘದಿಂದ ಆಕರ್ಷಕ ಪಥ ಸಂಚಲನ

ಆರ್‌ಎಸ್‌ಎಸ್‌ನಿಂದ ಸಂಸ್ಕೃತಿ ಜಾಗೃತಿ



ಬಸವಕಲ್ಯಾಣದಲ್ಲಿ ಶುಕ್ರವಾರ ಸಂಜೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಾಥಮಿಕ ಶಿಕ್ಷಾ ವರ್ಗದ ಸಾರ್ವಜನಿಕ ಸಮಾರಂಭದಲ್ಲಿ ಕಲಬುರಗಿಯ ಪ್ರಾಂತ ಕಾರ್ಯಕಾರಣಿ ಸದಸ್ಯ ಗಿರೀಶ ಹೆಬ್ಬಾರ ಮಾತನಾಡಿದರು.



ಬಸವಕಲ್ಯಾಣ ಪ್ರಾಥಮಿಕ ಶಿಕ್ಷಾ ವರ್ಗದವರಿಂದ ನಗರದಲ್ಲಿ ಆಕರ್ಷಕ ಪಥ ಸಂಚಲನ ಜರುಗಿತು.

ವಿಕ ಸುದ್ದಿಲೋಕ ಬಸವಕಲ್ಯಾಣ

ಇಂದಿನ ಯುವಕರಲ್ಲಿ ದೇಶದ ಸಂಸ್ಕೃತಿ, ಪರಂಪರೆ ಮೂಡಿಸುವ ಕೆಲಸ ಆರ್‌ಎಸ್‌ಎಸ್ ಮಾಡುತ್ತಿದೆ. ಪ್ರಾಥಮಿಕ ಶಿಕ್ಷಾ ವರ್ಗದಲ್ಲಿ ಯುವ ಸಮೂಹಕ್ಕೆ ಇದನ್ನೇ ಕಲಿಸಲಾಗುತ್ತದೆ ಎಂದು ಕಲಬುರಗಿಯ ಪ್ರಾಂತ ಕಾರ್ಯಕಾರಣಿ ಸದಸ್ಯ ಗಿರೀಶ ಹೆಬ್ಬಾರ ಹೇಳಿದರು.

ನಗರದ ಅಕ್ಕ ಮಹಾದೇವಿ ಕಾಲೇಜು ಮೈದಾನದಲ್ಲಿ ಶುಕ್ರವಾರ ಸಂಜೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಾಥಮಿಕ ಶಿಕ್ಷಾ ವರ್ಗದ ಸಾರ್ವಜನಿಕ ಸಮಾರಂಭದಲ್ಲಿ ಮಾತನಾಡಿ, ದೇಶದ ವಿವಿಧೆಡೆ ಆರ್ ಎಸ್‌ಎಸ್ ಕರ್ತವ್ಯ ನಿರ್ವಹಿಸಿ ಜನರಲ್ಲಿ ದೇಶಾಭಿಮಾನ ಮೂಡಿಸುವ ಕೆಲಸ ನಿರಂತರವಾಗಿ ಮಾಡುತ್ತಿದೆ ಎಂದರು.

ಈ ಸಂಘ ಜನಿಸಿ 94 ವರ್ಷಗಳು ಜನಿಸಿವೆ. ಡಾ. ಹೆಗಡೆವಾರ ಅವರು ಆರ್‌ಎಸ್‌ಎಸ್ ಸ್ಥಾಪಿಸಿದ್ದಾರೆ. ಇಲ್ಲಿ ಸಂಸ್ಕಾರ ಪಡೆದ ಸ್ವಯಂ ಸೇವಕ ಸಮಾಜದ ಅನನ್ಯ ಪಾತ್ರದಲ್ಲಿ ಸಾಧನೆ ಮಾಡುತ್ತಾರೆ. ಶಾಖೆಯಲ್ಲಿ ದಂಡ ಪ್ರದರ್ಶನ ಮಾಡುವ ಮೂಲಕ ಸವಾಲು ಎದುರಿಸಲು ಸಹಕಾರಿಯಾಗುತ್ತದೆ. ಇದರಿಂದ ಸಮಾಜ ಸುಧಾರಣೆಯಾಗುತ್ತದೆ ಎಂದು ಹೇಳಿದರು.

ನಮ್ಮ ದೇಶದ ಸಂಸ್ಕೃತಿ, ಪರಂಪರೆ ಹಾಗೂ ಇತಿಹಾಸದ ಪ್ರಜ್ಞೆ ಮೂಡಬೇಕಾದರೆ ನಮಗೆ ಅರಿವು ಮುಖ್ಯವಾಗಿದೆ. ಶಾಖೆಯಲ್ಲಿ ಈ ಅರಿವಿನ ಜೊತೆಗೆ ಉತ್ತಮವಾದ ಸಂಸ್ಕಾರ ಕಲಿಸಲಾಗುತ್ತಿದೆ. ಸಮಾಜ ಮುಖಿಯಾಗಿ ದೇಶದಲ್ಲಿ ಬದಲಾವಣೆ ತರಬೇಕು, ಆ ನಿಟ್ಟಿನಲ್ಲಿ ಯುವಕರಲ್ಲಿ ಸಂಘ ಸ್ಫೂರ್ತಿ ನೀಡುತ್ತಿದೆ ಎಂದರು.

ವೇಗವಾಗಿ ಈ ಸಂಘ ಬೆಳೆಯಬೇಕು, ಹೆಚ್ಚು ಜನರು ಇದರಲ್ಲಿ ಭಾಗವಹಿಸಬೇಕು. ಸದ್ಯ ಜಿಲ್ಲೆಯ 69 ಗ್ರಾಮಗಳಿಂದ ಶಿಬಿರಾರ್ಥಿಗಳು ಭಾಗವಹಿಸಿದ್ದಾರೆ ಎಂದು ತಿಳಿಸಿದರು.

ಸಾನ್ನಿಧ್ಯ ವಹಿಸಿದ್ದ ಶ್ರೀಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಆರ್‌ಎಸ್‌ಎಸ್ ದೇಶದ ಸಂಸ್ಕೃತಿ ಇತಿಹಾಸದ ಬಗ್ಗೆ ತಿಳಿಸಿಕೊಡುವ ಕೆಲಸ ಮಾಡುತ್ತಿದೆ. ಜೊತೆಗೆ ಜನರಲ್ಲಿ ಶಿಸ್ತು, ಸಮಯ ಹಾಗೂ ಜವಬ್ದಾರಿ ಕರ್ತವ್ಯಗಳು ತಿಳಿಸಿಕೊಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಸಂಘ ಚಾಲಕ ಶಿವರಾಜ ಅಲಶೆಟ್ಟೆ ಉಪಸ್ಥಿತರಿದ್ದರು. ವರ್ಗಾಧಿಕಾರಿ ಶ್ರೀಕಾಂತ ಬಡದಾಳೆ ವರದಿ ವಾಚನ ಮಾಡಿದರು.

ಪ್ರಾಥಮಿಕ ಶಿಕ್ಷಾ ವರ್ಗದದವರಿಂದ ವಿವಿಧ ಶಾರೀರಿಕ ಪ್ರದರ್ಶನಗಳು ಜರುಗಿದವು. ಕಳೆದ ಎಂಟು ದಿನಗಳಿಂದ ನೀಡಿದ ತರಬೇತಿಯ ಕೊನೆಯ ದಿನ ಸಾರ್ವಜನಿಕವಾಗಿ ಪ್ರದರ್ಶನ ನೀಡಿ ಗಮನ ಸೆಳೆದರು.

ಪಥ ಸಂಚಲನ: ಅಕ್ಕಮಹಾದೇವಿ ಕಾಲೇಜು ಮೈದಾನದಿಂದ ಆರಂಭಗೊಂಡ ಪಥ ಸಂಚಲನ ಪ್ರಮುಖ ರಸ್ತೆಗಳ ಮೂಲಕ ಮುಖ್ಯ ರಸ್ತೆಯ ಮಾರ್ಗವಾಗಿ ಮರಳಿ ವೇದಿಕೆಯವರೆಗೂ ಆಗಮಿಸಿತು. ನಗರದೆಲ್ಲೆಡೆ ಭಗವಾ ಮಯವಾಗಿತ್ತು. ಅಂಗಡಿಗಳ ವ್ಯಾಪಾರಸ್ಥರು ಹಾಗೂ ಗಣ್ಯರು ಸ್ವ ಇಚ್ಛೆಯಿಂದ ಸ್ವಾಗತ ಕಮಾನುಗಳು ಹಾಕಿಕೊಂಡಿದ್ದರು. ಮಹಿಳೆಯರು ತಮ್ಮ ನಿವಾಸಗಳ ಮುಂದೆ ರಂಗೋಲಿ ಹಾಕಿ ಪಥ ಸಂಚಲನಕ್ಕೆ ಹೂವು ಹಾಕಿ ಸ್ವಾಗತಿಸಿದರು.

ನಿರ್ಮಲ ಮನಸ್ಸಿನ ಗವಿಮಠದ ಗುರುಗಳು: ಡಾ. ಜಯಸಿದ್ದೇಶ್ವರ್ ಶ್ರೀಗಳು



ಬಸವಕಲ್ಯಾಣ

ಅಣ್ಣ ಮಲ, ಮಾಯಮಲ, ಕರ್ಮಮಲ ಕಳೆಯುವ ಶಕ್ತಿ ಗುರುವಿನಲ್ಲಿದೆ. ಹಾಗಾಗಿ ಗುರುವಿನ ಸಾನಿಧ್ಯದಲ್ಲಿ ನೆಮ್ಮದಿಯ ಜೀವನ ಪಡೆಯಬಹುದು ಎಂದು ಸೋಲಾಪೂರದ ಸಂಸದರು ಹಾಗೂ ಮಹಾರಾಷ್ಟ್ರ ದ ಗೌಡಗಾಂವ ಹಿರೇಮಠದ ಡಾ. ಜಯಸಿದ್ದೇಶ್ವರ್ ಶಿವಾಚಾರ್ಯರು ಹೇಳಿದರು.

ಪಟ್ಟಣದ ತ್ರಿಪುರಾಂತದ ಗವಿಮಠದ ಅಭಿನವಘನಲಿಂಗ ರುದ್ರಮುನಿ ಶಿವಾಚಾರ್ಯರ ಹುಟ್ಟು ಹಬ್ಬ ಮತ್ತು ಪಟ್ಟಾಧಿಕಾರದ ವರ್ಧಂತಿ ಮಹೋತ್ಸವದ ಸಾನಿಧ್ಯವಹಿಸಿ ಮಾತನಾಡಿದ ಅವರು, ಶ್ರೀಮಠದ ಅಭಿವೃದ್ಧಿಗಾಗಿ ಸಂಸದರಾಗಿ ಸಂಪೂರ್ಣ ಸಹಕಾರ ನೀಡುವ ಮತ್ತು ಬೀದರ್ ಸಂಸದರು ಕೇಂದ್ರ ಸರ್ಕಾರದ ಗಮನಸೇಳೆದು ಗವಿಮಠಕ್ಕೆ ಅನುದಾನ ಒದಗಿಸಬೇಕು. ಶ್ರೀಗಳು ಚಿಕ್ಕವರಾಗಿದ್ದರೂ ಅವರ ಕಾರ್ಯ ಮಾತ್ರ ದೊಡ್ಡದಾಗಿದೆ. ನಿರ್ಮಲ ಮನಸ್ಸಿನ ಮೃದು ಸ್ವಭಾವದ ಗುರುಗಳು ಮಾಡುವ ಪ್ರತಿಯೊಂದು ಕಾರ್ಯಕ್ಕೆ ಸದ್ಭಕ್ತರ ಸಹಕಾರ ಇರಲಿ ಎಂದರು.

ಸಂಸದ ಭಗವಂತ ಖೂಬಾ ಅವರು ಮಾತನಾಡಿ, ಭಾರತವು ಋಷಿಮುನಿಗಳಿಗೆ ನೀಡಿದ ದೇಶ ಆಧ್ಯಾತ್ಮಿಕ ಶ್ರೀಮಂತಿಕೆ ಉತ್ತಮ ಸಂಸ್ಕೃತಿ – ಪರಂಪರೆ ಇರುವ ದೇಶ ನಮ್ಮದು ಎಂದರು. ಯುವಕರು ದುಶ್ಚಟಕ್ಕೆ ಬಲಿಯಾಗದೆ ವ್ಯಸನಮುಕ್ತ ಜೀವನ ನಡೆಸುವಮೂಲಕ ಸದೃಡ ಸಮಾಜ ನಿರ್ಮಿಸಬೇಕಾಗಿದೆ, ಮುಂಬರುವ ದಿನಗಳಲ್ಲಿ ಭಾರತ ವಿಶ್ವ ಗುರುವಾಗಲಿದೆ ಎಂದು ಅವರು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವವನ್ನು ಶ್ಲಾಘಿಸಿದರು. ಮುಖ್ಯ ಅತಿಥಿಗಳಾಗಿದ್ದ ಬಿಜೆಪಿ ಯುವ ಮುಖಂಡ ಶರಣು ಸಲಗರ ಅವರು ಮಾತನಾಡಿ, ಸಮಾನತೆಯ ಸಂದೇಶ ನೀಡಿದ ಪುಣ್ಯ ಭೂಮಿಯಲ್ಲಿ ನಾವೆಲ್ಲ ಹುಟ್ಟಿರುವುದು ಒಂದು ಭಾಗ್ಯ. ಶ್ರೀಮಂತ ಪರಂಪರೆ ಇರುವ ನಮ್ಮ ದೇಶದಲ್ಲಿ ರೈತ ಮತ್ತು ಸೈನಿಕರು ಕಷ್ಟದಲ್ಲಿದ್ದಾರೆ. ಅವರಿಗೆ ಸಹಾಯ [illegible] ಮಾಡುವುದರೊಂದಿಗೆ ಆತ್ಮಬಲ ತುಂಬುವ ಕಾರ್ಯ [illegible] ಮಾಡಬೇಕು. ಗುರುವಿನ ಸಾನಿಧ್ಯಕ್ಕೆ ಬಂದಾಗ ನೆಮ್ಮದಿ [illegible] ಸಿಗುವುದು ಎಂದರು.

ಬಸವರಾಜ್ ಪಾಟಾ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಗವಿಮಠದ ಶ್ರೀಗಳು ಸಾಮಾಜಿ ಕಳಕಳಿ ಉಳ್ಳವರಾಗಿದ್ದು, ಯುವಕರು ದಿಶ್ಚಟಕ್ಕೆ ಬಲಿಯಾಗಬಾರದೆಂದು ಪಾದಯಾತ್ರೆ ಮಾಡುವಮೂಲಕ ನಿಮ್ಮ ದುಶ್ಚಟಗಳು ನಮ್ಮ ಜೋಳಿಗೆಯಲ್ಲಿ ಹಾಕಿ ಎಂದು ಸಂದೇಶ ನೀಡಿದ್ದಾರೆ ಎಂದರು.

ಶ್ರೀ ಮದ್ವೀರ ಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಅವರು ಸ್ವಾಗತಿಸಿದರು, ಉಪನ್ಯಾಸಕ ಬಸವರಾಜ್ ಸ್ವಾಮಿ ಅವರು ಕಾರ್ಯಕ್ರಮ ನಿರೂಪಿಸಿದರು,

ಇದೆ ಸಂದರ್ಭದಲ್ಲಿ ನಿವೃತ್ತ ಪ್ರಿನ್ಸಿಪಾಲ್ ದಯಾನಂದ್ ಶೀಲವಂತ್ ದಂಪತಿಗಳು ಶ್ರೀಗಳಿಗೆ ತುಲಾಭಾರ ನೆರವೇರಿಸಿದರು. ಜ್ಯೋಲಕ್ಷ್ಮಿ ಭಜನಾ ಸಂಘ ಹುಲಸೂರ, ಹೇಮರಡ್ಡಿ ಮಲ್ಲಮ್ಮಾ ಭಜನಾ ಸಂಘ ತೊಗಲೂರ, ಬೇಲೂರಿನ ನಾಗಲಿಂಗೇಶ್ವರ, ಭಾಗ್ಯವಂತಿ, ಸಿದ್ರಾಮೇಶ್ವರ, ರೇವಣಸಿದ್ದೇಶ್ವರ ಭಜನಾಮಂಡಳಿಯ ಸದಸ್ಯರು ಶ್ರೀಗಳ ಹುಟ್ಟಹಬ್ಬಕ್ಕೆ ಭಕ್ತಿ ಸೇವೆಗೈದರು.

ರಾಹುಲ್ ತುಪಾರೆ ಅವರು ಪ್ರಾರ್ಥನಾ ಗೀತೆ ಹಾಡಿದರು. ವೇದಿಕೆಯ ಮೇಲೆ ಜಿಲ್ಲಾ ಪಂಚಾಯತಿ ಸದಸ್ಯ ಗುಂಡುರೆಡ್ಡಿ, ಅಣ್ಣಾರಾವ್ ರಾಠೋಡ್, ಕಾಂಗ್ರೆಸ್ ಮುಖಂಡ ಶಿವರಾಜ್ ನರಶೆಟ್ಟಿ, ಬಿಜೆಪಿ ಮುಖಂಡ ವಿಜಯಕುಮಾರ್ ಮಂತಾಳೆ, ಗವಿಮಠದ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ್, ಮೀರ್ ಅಜಗರ್ ಅಲಿ ನವರಂಗ್, ವಿಜಯಕುಮಾರ್ ರೆಡ್ಡಿ, ಓಂನಾಥ್ ಪಾಟೀಲ್ ಅವರು ಉಪಸ್ಥಿತರಿದ್ದರು. ವಿವಿಧ ಸಂಘಟನೆಗಳಿಂದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಗೌರವಿಸಲಾಯಿತು.

ಕ್ರಾಂತಿ ರವಿವಾರ, ಸೆಪ್ಟೆಂಬರ್ 29, 2019

Scanned with OKEN Scanner

ವಿಶ್ವಗುರು ಸ್ಥಾನಕ್ಕೆ ಧರ್ಮ ಮಾರ್ಗ

ಸಂಸದ ಜಯಸಿದ್ದೇಶ್ವರ ಶ್ರೀ ಹೇಳಿಕೆ | ಅಭಿನವ ಶ್ರೀ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಭಾರತಕ್ಕೆ ಅಧ್ಯಾತ್ಮವೇ ದೊಡ್ಡ ಶಕ್ತಿ. ಅಧ್ಯಾತ್ಮ ಚಿಂತನೆಯೊಂದಿಗೆ ಧರ್ಮ ಮಾರ್ಗದಲ್ಲಿ ನಡೆದಾಗ ಬದುಕು ಸಾರ್ಥಕಗೊಳ್ಳುವ ಜತೆಗೆ ಸುಂದರ ಸಮಾಜ ನಿರ್ಮಾಣ ಸಾಧ್ಯ. ಎಲ್ಲರ ಏಳ್ಗೆ ಬಯಸುವ ನಮ್ಮ ಧರ್ಮದ ತಳಹದಿ, ಅಧ್ಯಾತ್ಮದ ಶಕ್ತಿ ಭಾರತವನ್ನು ಮತ್ತೆ ವಿಶ್ವ ಗುರುವಾಗಿ ನಿಲ್ಲುವಂತೆ ಮಾಡಲಿದೆ ಎಂದು ಮಹಾರಾಷ್ಟ್ರದ ಸೊಲ್ಲಾಪುರ ಸಂಸದ ಹಾಗೂ ಗೌಡಗಾಂವ ಸಂಸ್ಥಾನ ಹಿರೇಮಠದ ಶ್ರೀ ಡಾ. ಜಯಸಿದ್ದೇಶ್ವರ ಶಿವಾಚಾರ್ಯ ಹೇಳಿದರು.

ತ್ರಿಪುರಾಂತನ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿ ಮಠದಲ್ಲಿ ಶನಿವಾರ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದಲ್ಲಿ ಮಾತನಾಡಿ, ದೇಶದ ಶಕ್ತಿಗೆ ಧರ್ಮ, ಅಧ್ಯಾತ್ಮ ನೆಲೆಯಾಗಿವೆ ಎಂದು ಪ್ರತಿಪಾದಿಸಿದರು.

» ಜಗತ್ತೇ ಭಾರತವನ್ನು ಗೌರವದಿಂದ ನೋಡುವಂತೆ ಮಾಡಿದ ಕೀರ್ತಿ ಮೋದಿ ಅವರಿಗೆ ಸಲ್ಲುತ್ತದೆ

ಸಂಸದ ಭಗವಂತ ಖೂಬಾ ಮಾತನಾಡಿ, ಭಾರತದ ಸಂಸ್ಕೃತಿ, ಪರಂಪರೆ ಶ್ರೀಮಂತಿಕೆಯಿಂದ ಕೂಡಿದೆ. ಅಧ್ಯಾತ್ಮವು ವಿಶ್ವಕ್ಕೆ ಭಾರತ ನೀಡಿದ ಶ್ರೇಷ್ಠ ಕೊಡುಗೆ. ಭಾರತಕ್ಕೆ ಸಮರ್ಥ ನಾಯಕತ್ವ ಸಿಕ್ಕಿದೆ. ಪ್ರಧಾನಿ ನರೇಂದ್ರ ಮೋದಿ ಅವರ ದೇಶಾಭಿಮಾನ, ಸಮಾಜ ಕಾಳಜಿ ಎಲ್ಲರಿಗೂ ಪ್ರೇರಣೆ ಎಂದರು.

ಬಿಜೆಪಿ ಮುಖಂಡ ಶರಣು ಸಲಗರ್ ಮಾತನಾಡಿ, 12ನೇ ಶತಮಾನದ ಕಲ್ಯಾಣದ ವೈಭವ ಮರು ಸ್ಥಾಪನೆ ಆಗಲು ಪ್ರತಿಯೊಬ್ಬರ ಆಲೋಚನೆಯಲ್ಲಿ ಬದಲಾವಣೆ ಆಗಬೇಕಿದೆ. ಸಮಾಜ, ದೇಶಕ್ಕೆ ಕೊಡುಗೆ ನೀಡಬೇಕು ಎನ್ನುವ ಭಾವನೆ ಬಂದಾಗ ಮಾತ್ರ ಪರಿವರ್ತನೆ ಸಾಧ್ಯ ಎಂದು ಹೇಳಿದರು.

ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನೇತೃತ್ವ, ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಜಿಪಂ ಸದಸ್ಯರಾದ ಗುಂಡುರಡ್ಡಿ, ಆಣ್ಣಾರಾವ ರಾಠೋಡ್, ಮುಖಂಡರಾದ ಶಿವರಾಜ ನರಶೆಟ್ಟಿ, ಅರ್ಜುನ ಕನಕ, ವಿಜಯಕುಮಾರ ಮಂಠಾಳೆ, ಆನೀಲ ಪಾಟೀಲ್ ಇತರರಿದ್ದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ತ್ರಿಪುರಾಂತನಲ್ಲಿ ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದಲ್ಲಿ ಸೊಲ್ಲಾಪುರ ಸಂಸದ ಶ್ರೀ ಡಾ. ಜಯಸಿದ್ದೇಶ್ವರ ಶಿವಾಚಾರ್ಯ ಮಾತನಾಡಿದರು. ಸಂಸದ ಭಗವಂತ ಖೂಬಾ, ಮುಖಂಡರಾದ ಶರಣು ಸಲಗರ್, ಬಸವಂತಪ್ಪ ಲವಾರೆ ಇತರರಿದ್ದರು.

ಜಗತ್ತು ತೋರಿಸಿದ ತಂದೆ-ತಾಯಿ ನಿಜವಾದ ದೇವರು. ಅವರ ಋಣ ಎಂದಿಗೂ ತೀರಿಸಲಾಗದು. ಭೂ ಲೋಕದಿಂದ ಸ್ವರ್ಗದ ದಾರಿ, ಭಗವಂತನ ಸಾಮೀಪ್ಯಕ್ಕೆ ಹೋಗುವ ದಾರಿ ತೋರುವ ಗುರುವಿಗೆ ಯಾವತ್ತೂ ಮರೆಯಕೂಡದು. ಧರ್ಮ ಮಾರ್ಗ ಮತ್ತು ಗುರುವಿನ ಮಾರ್ಗದರ್ಶನದಲ್ಲಿ ನಡೆದಾಗಲೇ ಬದುಕು ಸಾರ್ಥಕವಾಗುತ್ತದೆ.

| ಶ್ರೀ ಡಾ. ಜಯಸಿದ್ದೇಶ್ವರ ಶಿವಾಚಾರ್ಯ ಸೊಲ್ಲಾಪುರ ಸಂಸದ

ಕೆಲವರಿಗೆ ಅಧಿಕಾರಕ್ಕೆ ಬರಬೇಕೆಂಬ ಏಕೈಕ ಗುರಿ ಇರುತ್ತದೆ. ಇಂಥವರು ಯಶಸ್ಸು ಆಗುವುದಿಲ್ಲ. ಕೇವಲ ಭಾಷಣದಿಂದ ಸಮಾಜವು ಶ್ರೀಮಂತವಾಗದು. ಮಹಾತ್ಮರ, ಮಹಾಪುರುಷರ ಚಿಂತನೆ ಜೀವನದಲ್ಲಿ ಅಳವಡಿಸಿಕೊಂಡಾಗ ಸಮಾಜದಲ್ಲಿ ಶ್ರೀಮಂತಿಕೆ ಗಟ್ಟಿಗೊಳಿಸಲು ಸಾಧ್ಯ. ನಿಸ್ವಾರ್ಥ, ಸಮರ್ಪಣಾ ಭಾವದಿಂದ ದುಡಿದವರಿಗೆ ಸಮಾಜ ಗುರುತಿಸುತ್ತದೆ.

| ಭಗವಂತ ಖೂಬಾ ಬೀದರ್ ಸಂಸದ

ಬಸವರಾಜ ಪಾರಾ ಪ್ರಾಸ್ತಾವಿಕ ಮತನಾಡಿದರು. ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಬಸವರಾಜ ಮಠಪತಿ ನಿರೂಪಣೆ ಮಾಡಿದರು. ನಗರಸಭೆ ಮಾಜಿ ಅಧ್ಯಕ್ಷ ಮೀರ್ ಅಜರ್‌ಅಲಿ ನವರಂಗ ಅವರನ್ನು ಗೌರವಿಸಲಾಯಿತು. ಅಭಿನವ ಶ್ರೀಗಳ ತುಲಾಭಾರ ಓಂನಾಥ ಪಾಟೀಲ್, ದಯಾನಂದ ಶೀಲವಂತ ಅವರಿಂದ ಜರುಗಿತು.

ಅಭಿನವ ಶ್ರೀಗಳಿಗೆ ಸನ್ಮಾನ

ಜನ್ಮ ದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದ ರೂವಾರಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಮಹಾರಾಷ್ಟ್ರದ ಗೌಡಗಾಂವ ಪೂಜ್ಯರು, ವೇದಿಕೆಯ ಮೇಲಿದ್ದ ಗಣ್ಯರು ಹಾಗೂ ಸಂಘ-ಸಂಸ್ಥೆ ಪದಾಧಿಕಾರಿಗಳು, ಗವಿಮಠದ ಭಕ್ತರು ಸನ್ಮಾನಿಸಿದರು. ಎರಡು ದಿನ ವಿವಿಧ ಕಾರ್ಯಕ್ರಮ ನಡೆದವು.

ಗವಿ ಮಠದ ಪ್ರಗತಿಯಾಗಲಿ

ಇಲ್ಲಿನ ಗವಿಮಠ ಪವಿತ್ರ ತಾಣ. ಹಲವರು ತಪಸ್ಸು ಮಾಡಿದ ಪುಣ್ಯ ನೆಲದ ಅಭಿವೃದ್ಧಿಯಾಗಬೇಕು ಎಂದು ಸೊಲ್ಲಾಪುರ ಸಂಸದ ಶ್ರೀ ಡಾ. ಜಯಸಿದ್ದೇಶ್ವರ ಶಿವಾಚಾರ್ಯ ಹೇಳಿದರು. ಕಿರಿಯ ವಯಸ್ಸಿನಲ್ಲಿ ಅಭಿನವ ಶ್ರೀಗಳು ಉತ್ತಮ ಕಾರ್ಯ ಮಾಡುತ್ತಿದ್ದಾರೆ. ಸಮಾಜ ಪರ ಕಾಳಜಿ ಹೊಂದಿದ್ದಾರೆ ಎಂದರು. ಕೇಂದ್ರ ಪ್ರವಾಸೋದ್ಯಮ ಇಲಾಖೆಯ ವಿಕಾಸ ಕೇಂದ್ರದ ಅಡಿಯಲ್ಲಿ ಪ್ರಸಾದಂ ಎನ್ನುವ ವಿಭಾಗವಿದೆ. ಇಲ್ಲಿಗೆ ಪ್ರಸ್ತಾವನೆ ಕಳಿಸಿದರೆ ಬಡ ವಿದ್ಯಾರ್ಥಿಗಳಿಗೆ ಪ್ರಸಾದನಿಲಯ ಆರಂಭಿಸಲು ಅನುಕೂಲವಾಗಲಿದೆ. ಈ ಕುರಿತು ಪ್ರಸ್ತಾವನೆ ಸಲ್ಲಿಸಿದರೆ ಬೀದರ್ ಸಂಸದರೊಂದಿಗೆ ತಾವು ಪ್ರಯತ್ನಿಸುವುದಾಗಿ ಭರವಸೆ ನೀಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಶನಿವಾರ ಜರುಗಿದ ಜನ್ಮ ದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದಲ್ಲಿ ತ್ರಿಪುರಾಂತ ಗವಿಮಠದ ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರನ್ನು ಸೊಲ್ಲಾಪುರದ ಸಂಶದ ಶ್ರೀ ಡಾ.ಜಯಸಿದ್ದಲಿಂಗ ಶಿವಾಚಾರ್ಯ ಸತ್ಕರಿಸಿದರು.



ಬಸವಕಲ್ಯಾಣ ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನ ನಿಮಿತ್ತ ನಗರದ ವೈಷ್ಣವಿ ಬಡಾವಣೆಯಲ್ಲಿ ಗುರುವಾರ ಸಸಿ ನೆಡಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸೇರಿ ಅನೇಕರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » KALABURAGI
ಭಾನುವಾರ 29 ಸೆಪ್ಟೆಂಬರ್ 2019
29 SEPTEMBER 2019

Scanned with OKEN Scanner

ಸಂಯುಕ್ತ ಕರ್ನಾಟಕ ಸೋಮವಾರ, 29, ಜುಲೈ, 2019, ಕಲಬುರಗಿ

ಅಭಿನವ ಶ್ರೀಗಳ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ

'ಜ್ಞಾನದ ಮಾರ್ಗ ತೋರುವವನೆ ನಿಜವಾದ ಗುರು'

ಸಂ.ಕ.ಸಮಾಚಾರ
ಬಸವಕಲ್ಯಾಣ

ಅಜ್ಞಾನವನ್ನು ಕಳೆದು ಜ್ಞಾನದ ಮಾರ್ಗ ತೋರುವ ಮೂಲಕ ಸಮಾಜಕ್ಕೆ ಮಾರ್ಗದರ್ಶನ ಮಾಡುವರೆ ನಿಜವಾದ ಗುರುಗಳು ಎಂದು ಸೋಲಾಪೂರಸಂಸದರುಹಾಗೂ ಮಹಾರಾಷ್ಟ್ರದ ಗೌಡಗಾಂವ ಸಂಸ್ಥಾನ ಹಿರೇಮಠದ ಶ್ರೀ ಡಾ.ಜಯಸಿದ್ದೇಶ್ವರ ಶಿವಾಚಾರ್ಯರು ನುಡಿದರು.

ತ್ರಿಪುರಾಂತ್ನ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿ ಮಠದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡುತ್ತ ಸಮಾಜದ ಏಳಿಗೆಯಲ್ಲಿ ಗುರುವಿನ ಸೇವೆ ಮತ್ತು ಕೊಡುಗೆ ಅನನ್ಯ ಎಂದು ಬಣ್ಣಿಸಿದರು. ಭಾರತ ಎಂದರೆ ಜ್ಞಾನದಲ್ಲಿ ಕೂಡಿಕೊಂಡು ಹೋಗುವದು ಎಂದರ್ಥವಾಗುತ್ತದೆ. ಇಲ್ಲಿ ಗುರುವಿಗೆ ಅತ್ಯಂತ ಮಹತ್ವದ ಸ್ಥಾನವಿದೆ.ಧರ್ಮದಮಾರ್ಗದಲ್ಲಿ ಗುರುವಿನ ಮಾರ್ಗದರ್ಶನದಲ್ಲಿ ನಡೆದಾಗ ಬದುಕಿನಲ್ಲಿ ಸಾರ್ಥಕತೆ ಕಾಣಲು ಸಾಧ್ಯವಾಗುತ್ತದೆ. ಜಗತ್ತನ್ನು ತೋರಿಸಿದ ತಂದೆ-ತಾಯಿ ನಿಜವಾದ ದೇವರು. ಅವರ ಋಣ ಎಂದೆಂದಿಗೂ ತೀರಿಸಲಾಗದು ಎಂದರು.

ಬೀದರ್ ಸಂಸದ ಭಗವಂತ ಖೂಬಾ ಮಾತನಾಡಿ ಭಾರತದ ಋಷಿ, ಮುನಿಗಳ, ಸಾಧು-ಸಂತರ, ಶರಣರ, ದಾರ್ಶನಿಕರ ಭೂಮಿ. ಇಲ್ಲಿಯ ಸಂಸ್ಕೃತಿ, ಪರಂಪರೆ ಶ್ರೀಮಂತಿಕೆಯಿಂದ ಕೂಡಿದೆ. ಆಧ್ಯಾತ್ಮ ವಿಶ್ವಕ್ಕೆ ಭಾರತ ನೀಡಿದ ಶ್ರೇಷ್ಠ ಕೊಡುಗೆ. ಇದಕ್ಕೆ ಸರಿಸಾಟಿ ಇಲ್ಲ. ಹೀಗಾಗಿ ಭಾರತ ಸರ್ವಕಾಲಿಕ ವಿಶ್ವಗುರು ಎಂದರು. ಬಿಜೆಪಿ ಮುಖಂಡ ಶರಣು ಸಲಗರ್ ಮಾತನಾಡಿದರು. ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು.

ಜಿಪಂ ಸದಸ್ಯರಾದ ಗುಂಡುರೆಡ್ಡಿ, ಅಣ್ಣಾರಾವ ರಾಠೋಡ, ಮುಖಂಡರಾದ ಶಿವರಾಜ ನರಶೆಟ್ಟಿ, ಅರ್ಜುನ ಕನಕ, ವಿಜಯಕುಮಾರ ಮಂಠಾಳೆ, ಅನೀಲ ಪಾಟೀಲ್ ಉಪಸ್ಥಿತರಿದ್ದರು.ಶ್ರೀಮದ್ವೀರಶೈವ ಸದ್ಭೋಧನಾ ಸಮಸ್ಥೆ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಬಸವರಾಜ ಪಾರಾ ಪ್ರಾಸ್ತಾವಿಕ ಮತನಾಡಿದರು. ಬಸವರಾಜ ಮಠಪತಿ ಕಾರ್ಯಕ್ರಮ ನಿರೂಪಿಸಿದರು. ಇದೇ ವೇಳೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ತುಲಾಭಾರ ಕಾರ್ಯಕ್ರಮ ಓಂನಾಥ ಪಾಟೀಲ್, ದಯಾನಂದ ಶೀಲವಂತ ಅವರಿಂದ ಜರುಗಿತು. ನಗರಸಭೆ ಮಾಜಿ ಅಧ್ಯಕ್ಷ ಮೀರ ಅಜರಲಿ ನವರಂಗ ಅವರಿಗೆ ಗವಿ ಮಠದಿಂದ ವಿಶೇಷವಾಗಿ ಸನ್ಮಾನಿಸಲಾಯಿತು.



ಬಸವಕಲ್ಯಾಣ : ಗವಿ ಮಠದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ಯ ಸನ್ಮಾನಿಸಲಾಯಿತು.

ಅಧಿಕಾರದ ದಾಹ ಇರಬಾರದು.

ಇತ್ತೀಚೆಗೆ ಕೆಲವರಿಗೆ ಹೇಗಾದರು ಮಾಡಿ ಅಧಿಕಾರಕ್ಕೆ ಬರಬೇಕು ಎನ್ನುವದು ಒಂದೇ ಗುರಿಯಾಗಿದೆ. ಭಾಷಣದಿಂದ ಸಮಾಜ ಶ್ರೀಮಂತವಾಗದು,ನಿಸ್ವಾರ್ಥವಾಗಿಸಮರ್ಪಣಾಮನೋಭಾವದಿಂದ ಆತ್ಮ ಸಾಕ್ಷಿಯಾಗಿ ಶೃದ್ಧೆಯಿಂದ ದುಡಿದಾಗ ಸಮಾಜ ಗುರುತಿಸುತ್ತದೆ. ಅಧಿಕಾರದ ದಾಹ ಇರಬಾರದು.

-ಭಗವಂತ ಖೂಬಾ.
ಸಂಸದರು

ಗವಿ ಮಠದ ಪ್ರಗತಿಯಾಗಲಿ

ಗವಿಮಠ ಪವಿತ್ರ ಸ್ಥಳವಾಗಿದ್ದು, ಇಲ್ಲಿಯ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಪ್ರತಿಯೊಬ್ಬರು ಸಹಕರಿಸಬೇಕು. ಕಿರಿಯ ವಯಸ್ಸಿನಲ್ಲಿ ಅಭಿನವ ಶ್ರೀಗಳು ಉತ್ತಮ ಕಾರ್ಯ ಮಾಡುತ್ತಿದ್ದಾರೆ. ಸಮಾಜಪರ ಕಾಳಜಿಯಿಂದ ಸಮಾಜ ಮುಖಿ ಕಾರ್ಯದಲ್ಲಿ ತೊಡಗಿರುವ ಶ್ರೀಗಳ ಕಾರ್ಯ ಪ್ರಶಂಸನಾರ್ಹ. ಕೇಂದ್ರ ಇಲಾಖೆಯಲ್ಲಿ ಪ್ರವಾಸೋದ್ಯಮ ವಿಕಾಸ ಕೇಂದ್ರದಲ್ಲಿ ಪ್ರಸಾದಂ ಎನ್ನುವ ವಿಭಾಗವಿದೆ. ಅಲ್ಲಿ ಪ್ರಸ್ತಾವನೆ ಕಳಿಸಿದರೆ ಇಲ್ಲಿ ಬಡ ವಿದ್ಯಾರ್ಥಿಗಳಿಗೆ ಪ್ರಸಾದ ನಿಲಯ ಆರಂಭಿಸಲು ಅನುಕೂಲವಾಗಲಿದೆ. ಈ ಕುರಿತು ಪ್ರಸ್ತಾವನೆ ಸಲ್ಲಿಸಿದರೆ ಬೀದರ್ ಸಂಸದರೊಂದಿಗೆ ಚರ್ಚಿಸುತ್ತೇನೆ.

-ಡಾ.ಜಯಸಿದ್ದೇಶ್ವರ ಶಿವಾಚಾರ್ಯರು
ಸಂಸದರು, ಮಹಾರಾಷ್ಟ್ರ

Scanned with OKEN Scanner

ಶ್ರೀ ಅಭಿನವಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರದ ವರ್ದಂತಿಮಹೋತ್ಸವ

ನಿರ್ಮಲ ಮನಸ್ಸಿನ ಗವಿಮಠದ ಗುರುಗಳು



ಬಸವಕಲ್ಯಾಣ ಸೆ.೨೮. ಅಣ್ವ ಮಲ, ಮಾಯಮಲ, ಕರ್ಮಮಲ ಕಳೆಯುವ ಶಕ್ತಿ ಗುರುವಿನಲ್ಲಿದೆ ಹಾಗಾಗಿ ಗುರುವಿನ ಸಾನಿಧ್ಯದಲ್ಲಿ ನೆಮ್ಮದಿಯ ಜೀವನ ಪಡೆಯಬಹುದು ಎಂದು ಸೋಲಾಪೂರದ ಸಂಸದರು,ಮಹಾರಾಷ್ಟ್ರದ ಗೌಡಗಾಂವ ಹಿರೇಮಠದ ಪೂಜ್ಯಶ್ರೀ ಡಾ. ಜಯಸಿದ್ದೇಶ್ವರ ಶಿವಾಚಾರ್ಯರು ನುಡಿದರು.

ಅವರು ತ್ರಿಪೂರಾಂತದ ಗವಿಮಠದ ಪೂಜ್ಯಶ್ರೀ ಷ.ಬ್ರ.ಅಭಿನವಘನಲಿಂಗ ರುದ್ರಮುನಿ ಶಿವಾಚಾರ್ಯರ ಹುಟ್ಟು ಹಬ್ಬ ಮತ್ತು ಪಟ್ಟಾಧಿಕಾರದ ವರ್ದಂತಿ ಮಹೋತಸವದ ಸಾನಿಧ್ಯ ವಹಿಸಿ ಮಾತನಾಡಿ ಶ್ರೀಮಠದ ಅಭಿವೃದ್ಧಿಗಾಗಿ ಸಂಸದರಾಗಿ ಸಂಪೂರ್ಣ ಸಹಕಾರ ನೀಡುವೆ ಮತ್ತು ಬೀದರ ಸಂಸದರು ಕೇಂದ್ರ ಸರ್ಕಾದಗಮನ ಸೇಳೆದು ಗವಿಮಠಕ್ಕೆ ಅನುದಾನ ಒದಗಿಸಬೇಕು ಶ್ರೀಗಳು ಚಕ್ಕವರಾಗಿದ್ದಾರೆ ಕಾರ್ಯ ಮಾತ್ರ ದೊಡ್ಡ ದಾಗಿದೆ ನಿರ್ಮಲ ಮನಸ್ಸಿನ ಮೃದು ಸ್ವಭಾವದ ಗುರುಗಳು ಮಾಡುವ ಪ್ರತಿಯೊಂದು ಕಾರ್ಯಕ್ಕೆ ಸದ್ಭಕ್ತರ ಸಹಕಾರ ಇರಲಿ ಎಂದರು.

ಭಾರತ ಋಷಿಮುನಿಗಳಿಗೆ ನೀಡಿದ ದೇಶ ಆಧ್ಯಾತ್ಮಿಕ ಶ್ರೀಮಂತಿಕೆ ಉತ್ತಮ ಸಂಸ್ಕೃತಿ-ಪರಂಪರೆ ಇರುವ ದೇಶ ನಮ್ಮದಾಗಿದೆ ಎಂದು ಹೆಮ್ಮೆಯಿಂದ ಹೇಳಬೇಕೆಂದು ಬೀದರ ಸಂಸದ ಭಗವಂತ ಖೂಬಾ ಹೇಳಿದರು, ಅವರು ಮುಂದೆ ವರೆದು ಮಾತನಾಡಿ ಯುವಕರು ದುಶ್ಚಟಕ್ಕೆ ಬಲಿಯಾಗದೆ ವ್ಯಸನಮುಕ್ತ ಜೀವನ ನಡೆಸುವಮೂಲಕ ಸದೃಡ ಸಮಾಜ ನಿರ್ಮಿಸಬೇಕಾಗಿದೆ, ಮುಂಬರುವ ದಿನಗಳಲ್ಲಿ ಭಾರತ ವಿಶ್ವ ಗುರುವಾಗಲಿದೆ ಎಂದರು.

ಮುಖ್ಯ ಅತಿಥಿಗಳಾಗಿ ಬಿಜೆಪಿ ಯುವ ಮುಖಂಡ ಶರಣು ಸಲಗರ ಮಾತನಾಡಿ ಸಮಾನತೆಯ ಸಂದೇಶ ನೀಡಿದ ಪೂಣ್ಯ ಭೂಮಿಯಲ್ಲಿ ನಾವೆಲ್ಲ ಹುಟ್ಟಿರುವುದು ಒಂದು ಭಾಗ್ಯ, ಶ್ರೀಮಂತ ಪರಂಪರೆ ಇರೋನಮ್ಮ ದೇಶದಲ್ಲಿ ರೈತ ಮತ್ತು ಸೈನಿಕರು ಕಷ್ಟದಲ್ಲಿದ್ದಾರೆ ಅವರಿಗೆ ಸಹಾಯ ಮಾಡುವದರೊಂದಿಗೆ ಆತ್ಮಬಲ ತುಂಬುವ ಕಾರ್ಯ ಮಾಡಬೇಕು, ಗುರುವಿನ ಸಾನಿಧ್ಯಕ್ಕೆ ಬಂದಾಗ ನೆಮ್ಮದಿ ಸಿಗುವುದು ಎಂದರು.

ಬಸವರಾಜ ಪಾರ ಪ್ರಸ್ತಾವಿಕ ನುಡಿ ಮಾತನಾಡಿ ಗವಿಮಠದ ಶ್ರೀಗಳು ಸಾಮಾಜಿ ಕಳಕಳಿ ಉಳ್ಳವರಾಗಿದ್ದು ಯುವಕರು ದಿಶ್ಚಟಕ್ಕೆ ಬಲಿಯಾಗಬಾರದೆಂದು ಪಾದಯಾತ್ರೆ ಮಾಡುವ ಮೂಲಕ ನಿಮ್ಮ ದುಶ್ಚಟಗಳು ನಮ್ಮ ಜೋಳಿ ಗೆಯಲ್ಲಿ ಹಾಕಿ ಎಂದು ಸಂದೇಶ ನೀಡಿದ್ದಾರೆ ಎಂದರು. ಶ್ರೀ ಮದ್ವೀರ ಶೈವ ಸದ್ಬೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪಾ ಲವಾರೆ ಸ್ವಾಗತಿಸಿದರು, ಉಪನ್ಯಾಸಕ ಬಸವರಾಜ ಸ್ವಾಮಿ ನಿರೂಪಿಸಿದರು,

ಇದೆ ಸಂದರ್ಭದಲ್ಲಿ ನಿವೃತ ಪ್ರಾಚಾರ್ಯ ದಯಾನಂದ ಶೀಲವಂತ ದಂಪತಿಗಳು ಶ್ರೀಗಳಿಗೆ ತುಲಾಭಾರ ನೆರವೇರಿಸಿದರು.

ಜೈಲಕ್ಷ್ಮಿ ಭಜನಾ ಸಂಘ ಹುಲಸೂರ, ಹೇಮರಡ್ಡಿ ಮಲ್ಲಮ್ಮಾ ಭಜನಾ ಸಂಘ ತೊಗಲೂರ, ಬೇಲೂರಿನ ನಾಗ ಲಿಂಗೇಶ್ವರ, ಭಾಗ್ಯವಂತಿ,ಸಿದ್ರಾಮೇಶ್ವರ, ರೇವಣಸಿದ್ದೇಶ್ವರ ಭಜನಾಮಂಡಳಿಯ ಸದಸ್ಯರು ಶ್ರೀಗಳ ಹುಟ್ಟಹಬ್ಬಕ್ಕೆಭಕ್ತಿ ಸೇವೆಗೈದರು. ರಾ ಹುಲ್ ತುತಾರೆಪ್ರಾರ್ಥನಾಗೀತೆ ಹಾಡಿದರು,

ವೇದಿಕೆಯಲ್ಲಿ ಜಿಲ್ಲಾ ಪಂಚಾತ ಸದಸ್ಯರಾದ ಗುಂಡುರಡ್ಡಿ, ಅಣ್ಣಾರಾವ ರಾಠೋಡ ಕಾಂಗ್ರೇಸ ಮುಖಂಡ ಶಿವರಾಜ ನರಶಟ್ಟೆ, ಬಿಜೆಪಿ ಮುಖಂಡ ವಿಜಯಕುಮಾರ ಮಂಠಾಳೆ, ಗವಿಮಠದ ಟ್ರಸ್ಟನ ಅಧ್ಯಕ್ಷರಾದ ಶರಣಪ್ಪಾ ಬಿರಾದಾರ, ಮೀರ ಅಜರಲಿ ನವರಂಗ, ವಿಜಯ ಕುಮಾರ ರಡ್ಡಿ ಓಂನಾಥ ಪಾಟೀಲ ಉಪಸ್ಥಿತರಿದ್ದರು, ಇದೆ ಸಂದರ್ಭದಲ್ಲಿ ವಿವಿಧ ಸಂಘಟನೆಯಿಂದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾ ಚಾರ್ಯರಿಗೆ ಗೌರವಿಸಲಾಯಿತು.

ವಿಜಯ ಕರ್ನಾಟಕ
ಭಾನುವಾರ,29 ಸೆಪ್ಟೆಂಬರ್ 2019

ಗುರು ಇಲ್ಲದೆ ಸಮಾಜವೇ ಇಲ್ಲ



ಬಸವಕಲ್ಯಾಣ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿ ಮಠದಲ್ಲಿ ಶನಿವಾರ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಹುಟ್ಟು ಹಬ್ಬ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದ ಕಾರ್ಯಕ್ರಮದಲ್ಲಿ ಸೊಲ್ಲಾಪುರ ಸಂಸದ ಡಾ. ಜಯಸಿದ್ದೇಶ್ವರ ಶಿವಾಚಾರ್ಯರು ಮಾತನಾಡಿದರು. ಪೂಜ್ಯರು, ಗಣ್ಯರು ಉಪಸ್ಥಿತರಿದ್ದರು.

■ ವಿಕ ಸುದ್ದಿಲೋಕ ಬಸವಕಲ್ಯಾಣ

ಜಗತ್ತನ್ನು ತೋರಿದವರು ತಂದೆ-ತಾಯಿಗಳಾದರೆ, ಉತ್ತಮ ಮಾರ್ಗದರ್ಶನದತ್ತ ನಮ್ಮೆಲ್ಲರನ್ನು ಕರೆದೊಯ್ಯುವ ಗುರುವಿನ ಋಣ ತೀರಿಸಲಾಗದು ಎಂದು ಸೊಲ್ಲಾಪುರ ಸಂಸದ, ಡಾ.ಜಯಸಿದ್ದೇಶ್ವರ ಶಿವಾಚಾರ್ಯರು ನುಡಿದರು.

ನಗರದ ಶ್ರೀಮರಾಂತನ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿ ಮಠದಲ್ಲಿ ಶನಿವಾರ ಹಮ್ಮಿಕೊಂಡ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಹುಟ್ಟು ಹಬ್ಬ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗುರು ಇಲ್ಲದೆ ಸಮಾಜ ಇಲ್ಲ ಗುರುವಿಗಿಂತ ಮತ್ತೊಬ್ಬ ಬಂಧುವಿಲ್ಲ. ಹೀಗಾಗಿ ಗುರುವಿನ ಸೇವೆ ಮಾಡಿದಾಗ ಮಾತ್ರ ಭಕ್ತನಿಗೆ ಮುಕ್ತಿ ಸಿಗಲು ಸಾಧ್ಯ. ಹೀಗಾಗಿ ಗುರು ಮಾಡುವ ಒಳ್ಳೆಯ ಕಾರ್ಯಕ್ಕೆ ಭಕ್ತನು ಸಹಕರಿಸಿದಾಗ ಮಾತ್ರ ಎಲ್ಲ ಕಾರ್ಯಗಳು ಯಶಸ್ವಿಗೊಳ್ಳಲು ಸಾಧ್ಯ ಎಂದು ತಿಳಿಸಿದರು.

ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಚಿಕ್ಕ ವಯಸ್ಸಿನಲ್ಲೇ ಸಮಾಜದ ಸೇವೆ ಮಾಡುತ್ತಿದ್ದಾರೆ. ಅವರ ಒಳ್ಳೆಯ ಕಾರ್ಯಕ್ಕೆ ಭಕ್ತ ಸಮೂಹ ಎಂದಿಗೂ ಕೈ ಜೋಡಿಸಬೇಕು ಎಂದು ಸಲಹೆ ನೀಡಿದರು.

ಬೀದರ ಸಂಸದ ಭಗವಂತ ಖೂಬಾ ಮಾತನಾಡಿ, ಭಾರತ ದೇಶ ಋಷಿ ಮುನಿಗಳ, ಸಾಧು-ಸಂತರ ಹಾಗೂ ಯೋಗಿಗಳ ದೇಶವಾಗಿದೆ. ಹೀಗಾಗಿ ಭಾರತ ವಿಶ್ವಕ್ಕೆ ಗುರುವಾಗಿದೆ. ಜೊತೆಗೆ ಸರ್ವ ಕಾಲಕ್ಕೂ ಇದು ಹೀಗೆ ಮುಂದುವರಿಯುತ್ತದೆ ಎಂದರು.

ನಮ್ಮ ದೇಶದಲ್ಲಿನ ಸಂಸ್ಕೃತಿ, ಪರಂಪರೆ ಬೇರೆ ಯಾವ ದೇಶದಲ್ಲಿಯೂ ಇಲ್ಲ ಗುರುವಿನ ಸೇವೆಯಿಂದ ನಮ್ಮ ಜೀವನ ಸಾರ್ಥಕವಾಗಲು ಸಾಧ್ಯ ಎಂದರು.

ಬಿಜೆಪಿ ಮುಖಂಡ ಶರಣು ಸಲಗರ ಮಾತನಾಡಿ, ದುಶ್ಚಟಗಳಿಗಾಗಿ ಶ್ರೀಗಳು ಜೋಳಿಗೆ ಹಿಡಿದು ಪಾದಯಾತ್ರೆ ಮಾಡಿದ್ದಾರೆ. ಒಂದು ದಿನಕ್ಕೆ ದುಶ್ಚಟಗಳಿಗಾಗಿ 20 ಲಕ್ಷ ಖರ್ಚಾಗುತ್ತಿದೆ. ಹೀಗಾಗಿ ಸ್ವಲ್ಪ ಯೋಚಿಸುವ ಅಗತ್ಯವಿದೆ ಎಂದು ಜನರಲ್ಲಿ ಮನವಿ ಮಾಡಿದರು.

ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ನಗರ ಸಭೆ ಮಾಜಿ ಅಧ್ಯಕ್ಷ ಮೀರ ಅಜರಲಿ ನವರಂಗ, ಜಿಪಂ ಸದಸ್ಯರಾದ ಗುಂಡುರಡ್ಡಿ ಅಣ್ಣಾರಾಯ ಪಾಟೀಲ, ಶರಣಪ್ಪಾ ಬಿರಾದಾರ, ಅನಿಲ ಪಾಟೀಲ, ಓಂನಾಥ ಪಾಟೀಲ, ಪ್ರೊ.ದಯಾನಂದ ಶೀಲವಂತ, ಅರ್ಜುನ ಕನಕ, ವಿಜಯಕುಮಾರ ಮಂಠಾಳೆ, ಶಿವರಾಜ ನರಶಟ್ಟೆ ವಿಜಯಕುಮಾರ ರಡ್ಡಿ ಉಪಸ್ಥಿತರಿದ್ದರು.

ನ್ಯಾಯವಾದಿ ಬಸವರಾಜ ಪಾರಾ ಪ್ರಾಸ್ತಾವಿಕ ಮಾತನಾಡಿದರು. ಬಸವಂತಪ್ಪಾ ಲವಾರೆ ಸ್ವಾಗತಿಸಿದರೆ, ಬಸವರಾಜ ಹಿರೇಮಠ ನಿರೂಪಿಸಿದರು. ಭಕ್ತರು ಶ್ರೀಗಳಿಗೆ ಶಾಲು ಹೊದಿಸಿ ಸನ್ಮಾನಿಸಿದರು.

ತುಲಾಭಾರ ಸೇವೆ

ಮಾತಾಪಿತ-ಗುರುವಿನ ಋಣ ತೀರಿಸಿ

■ ಗವಿಮಠ ಅಭಿವೃದ್ಧಿಗೆ ಮನವಿ ಸಲ್ಲಿಸಿ ■ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ

ಬಸವಕಲ್ಯಾಣ: ಜೀವನದಲ್ಲಿ ಜನ್ಮ ನೀಡಿದ ತಂದೆ-ತಾಯಿ ಹಾಗೂ ಗುರುಗಳ ಋಣ ತೀರಿಸಲು ಎಂದಿಗೂ ಸಾಧ್ಯವಿಲ್ಲ ಎಂದು ಮಹಾರಾಷ್ಟ್ರದ ಗೌಡಗಾಂವ ಹಿರೇಮಠದ ಹಾಗೂ ಸೋಲಾಪುರ ಸಂಸ್ಥದರಾದ ಡಾ। ಜಯಸಿದ್ದೇಶ್ವರ ಶಿವಾಚಾರ್ಯರು ಹೇಳಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಶನಿವಾರ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನೋತ್ಸವ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸ್ವರ್ಗದಲ್ಲಿ ಇದ್ದಾಗ, ನಮ್ಮನ್ನು ಭೂ ಲೋಕಕ್ಕೆ ತಂದು ಬಿಟ್ಟವರು ತಂದೆ-ತಾಯಿ ಮತ್ತು ಭೂ ಲೋಕದಿಂದ ಪುನಃ ಸ್ವರ್ಗಕ್ಕೆ ಒಯ್ದು ಬಿಡುವವರು ಯಾರಾದರು ಇದ್ದರೆ, ಅದು ಗುರುಗಳು ಮಾತ್ರ. ಆ ಕಾರಣಕ್ಕಾಗಿಯೇ ಜೀವನದಲ್ಲಿ ಇವರಿಬ್ಬರ ಋಣ ತೀರಿಸಲು ಸಾಧ್ಯವಿಲ್ಲ ಎಂದು ನುಡಿದರು.

ಗವಿಮಠ ಪವಿತ್ರ ಸ್ಥಳವಾಗಿದೆ. ಹೀಗಾಗಿ ಲೋಕಸಭೆಯಲ್ಲಿ ವಿಕಾಸ ಕೇಂದ್ರದಲ್ಲಿರುವ ಪ್ರಸಾದಂ ವಿಭಾಗಕ್ಕೆ ಗವಿಮಠದ ಅಭಿವೃದ್ಧಿಗಾಗಿ ಮನವಿ ಅನುದಾನ ಸಿಗಬಹುದು ಎಂಬ ವಿಶ್ವಾಸ ನನಗಿದೆ ಎಂದು ಸ್ಥಳದಲ್ಲಿದ್ದ ಬೀದರ ಸಂಸದ ಭಗವಂತ ಖೂಬಾ ಅವರಿಗೆ ಸಲಹೆ ನೀಡಿದರು.





ಬಸವಕಲ್ಯಾಣ: ಗವಿಮಠದಲ್ಲಿ ನಡೆದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರ ವರ್ಧಂತಿ ಮಹೋತ್ಸವವನ್ನು ಮಹಾರಾಷ್ಟ್ರದ ಗೌಡಗಾಂವ ಹಿರೇಮಠ ಹಾಗೂ ಸೋಲಾಪುರ ಸಂಸದ ಡಾ। ಜಯಸಿದ್ದೇಶ್ವರ ಶಿವಾಚಾರ್ಯರು ಉದ್ಘಾಟಿಸಿದರು.

ಬಸವಕಲ್ಯಾಣ: ಗವಿಮಠದಲ್ಲಿ ನಡೆದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಅಂಗವಾಗಿ ಪ್ರೊ। ದಯಾನಂದ ಶೀಲವಂತ ಅವರಿಂದ ತುಲಾಭಾರ ಸೇವೆ ನಡೆಯಿತು.

ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬಹಳ ಚಿಕ್ಕವಯಸ್ಸಿನಲ್ಲಿ ಸನ್ಯಾಸ ಸ್ವೀಕಾರ ಮಾಡಿದ್ದು ಅವರಿಗೆ ಸುದೀರ್ಘವಾದ ಜೀವನ ಮತ್ತು ಸಮಾಜ ಸೇವೆ ಮಾಡುವಂತಹ ಹುಮ್ಮಸ್ಸು ಶ್ರೀ ಜಗದ್ಗುರು ಘನಲಿಂಗ ಶ್ರೀಗಳು ನೀಡಲಿ ಎಂದು ಹಾರೈಸಿದರು.

ಬೀದರ ಸಂಸದ ಭಗವಂತ ಖೂಬಾ ಮಾತನಾಡಿ, ಭಾರತ ಸಾಧು ಸಂತರ ದೇಶ. ದೇಶದಲ್ಲಿ ಜನ್ಮ ತಾಳಿದ ನಾವು ಪುಣ್ಯವಂತರು. ಭಾರತ ದೇಶ ಸಂಸ್ಕೃತಿ-ಪರಂಪರೆಯಿಂದ ಶ್ರೀಮಂತವಾಗಿದೆ ಎಂದು ನುಡಿದರು.

ಬಿಜೆಪಿ ಯುವ ಮುಖಂಡ ಶರಣು ಸಲಗರ ಮಾತನಾಡಿ, ಮಕ್ಕಳಿಗೆ, ನಾವು ಕೆಟ್ಟ ಚಟಗಳನ್ನು ಬಿಡಿಸಲು ಸಾಧ್ಯವಾಗುತ್ತಿಲ್ಲ ಪ್ರತಿ ತಿಂಗಳು ಬಸವಕಲ್ಯಾಣ 6 ಕೋಟಿ ರೂ. ದುಶ್ಚಟಗಳಿಗೆ ಖರ್ಚಾಗುತ್ತಿವೆ. ಇದು ಬದಲಾಗಬೇಕು ಎಂಬ ಉದ್ದೇಶದಿಂದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು 'ನಿಮ್ಮ ದುಶ್ಚಟಗಳನ್ನು ನನ್ನ ಜೋಳಿಗೆಯಲ್ಲಿ ಹಾಕಿ' ಎಂದು ಪಾದಯಾತ್ರೆ ಕೈಗೊಂಡಿರುವುದು ನಿಜಕ್ಕೂ ಶ್ಲಾಘನೀಯ. 12ನೇ ಶತಮಾನದ ಕಲ್ಯಾಣ ಮತ್ತೆ ಕಟ್ಟಬೇಕಾದರೆ ಆಲೋಚನಗಳು ಬದಲಾಗಬೇಕು ಎಂದರು.

ಬಸವರಾಜ ಪಾರಾ ಮಾತನಾಡಿದರು. ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಕೆಬಿಇ ನಿವೃತ್ತ ಅಭಿಯಂತರರು ಶರಣಪ್ಪಾ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಜಿಪಂ ಸದಸ್ಯರಾದ ಗುಂಡುರೆಡ್ಡಿ, ಹಣಮಂತವಾಡಿ (ಆರ್), ಅಣ್ಣಾರಾವ್ ರಾಠೋಡ, ವಿಜಯಕುಮಾರ ಮಂಠಾಳೆ, ನಗರಸಭೆ ಮಾಜಿ ಅಧ್ಯಕ್ಷ ಮೀರ ಅಜರಲಿ ನವರಂಗ, ಬಸವಂತಪ್ಪ ಲವಾರೆ, ಓಮನಾಥ ಪಾಟೀಲ, ರೇಣುಕಾ ಎಂ.ಮಳ್ಳಿ, ಶಿವರಾಜ ನರಶೆಟ್ಟಿ ಪ್ರೊ। ರುದ್ರೇಶ್ವರಸ್ವಾಮಿ ಗೋರ್ಟಾ ಇತರರಿದ್ದರು.

ಉದಯವಾಣಿ
ರವಿವಾರ, ಸೆಪ್ಟೆಂಬರ್ 29, 2019

Scanned with OKEN Scanner

ಶಿವಾನುಭವ ಚಿಂತನ

ಸಾಧನೆಗೆ ಸತತ ಪ್ರಯತ್ನ ಮುಖ್ಯ

■ ಗುರುವಿನಲ್ಲಿ ಭಕ್ತಿಯಿಟ್ಟು ನಡೆದಾಗ ಕಷ್ಟ ದೂರವಾಗಿ ಸುಖ ದೊರೆಯಲು ಸಾಧ್ಯ

ಬಸವಕಲ್ಯಾಣ: ಸಾಧನೆಗೆ ವಯಸ್ಸು ಮುಖ್ಯವಲ್ಲ, ಸತತ ಪ್ರಯತ್ನ ಮುಖ್ಯವಾಗಿದೆ ಎಂದು ನಗರದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ನಡೆದ ಶಿವಾನುಭವ ಚಿಂತನ ಮಾಸಿಕ ಅಮಾವಾಸ್ಯೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಸ್ವಾಮೀಜಿ ಮಾತನಾಡಿದರು.

ಗುರುವಿನಲ್ಲಿ ಭಕ್ತಿ ಹೊಂದಿದರೆ ಸಾಧನೆ ಸುಲಭ. ಭಕ್ತರಲ್ಲಿ ಭಕ್ತಿ ಮೂಡಿಸಿ ಸಂಸ್ಕಾರ ಕಲಿಸುವುದೇ ಶಿವಾನುಭವ ಚಿಂತನ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ ಎಂದು ಹೇಳಿದರು.

ಹಿರಿಯ ನಾಗರಿಕರು ಬೀದರ ಜಿಲ್ಲಾ ಆಡಳಿತ ಹಿರಿಯ ನಾಗರಿಕರಿಗಾಗಿ ಏರ್ಪಡಿಸಿದ್ದ 200 ಮೀಟರ್ ನಡಿಗೆ ಹಾಗೂ ಜಾನಪದ ಗೀತೆ ಸ್ಪರ್ಧೆಗಳಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ತಾಲೂಕಿಗೆ ಕೀರ್ತಿ ತಂದಿದ್ದಾರೆ ಎಂದು ಹೇಳಿದರು.

ಹುಮನಾಬಾದ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ನಿವೃತ್ತಿ ಹೊಂದಿದ ಗೋರ್ಟಾ ಮೂಲದ ಬಸವರಾಜ ಮಠಪತಿ ಅವರನ್ನು ಸನ್ಮಾನಿಸಿ ಆಶೀರ್ವದಿಸುತ್ತ ಮಠಪತಿ ಅವರು 85ರ ಇಳಿವಯಸ್ಸಿನಲ್ಲೂ ನಿತ್ಯ ನಸುಕಿನಲ್ಲಿ ಬೇಗ ಎದ್ದು ಬಹು ದೂರ ನಡೆದು ಯೋಗ ವ್ಯಾಯಾಮ ಮಾಡುತ್ತ ಯುವಕರಂತೆ ಲವಲವಿಕೆಯಿಂದ ಮಾದರಿಯಾಗಿ ಬದುಕುತ್ತಿದ್ದಾರೆ ಎಂದು ಹೇಳಿದರು. ಬಸವರಾಜ ಮಠಪತಿ ಮಾತನಾಡಿ, ನಡಿಗೆ ಯೋಗ ಮಾಡುತ್ತ ವೃತ್ತಿಯಲ್ಲಿಯೂ ಸಾರ್ಥಕ ಸೇವೆ ಮಾಡಿದ ಸಮಾಧಾನವಿದೆ. ನನ್ನ ಗುರುಗಳಾದ ಲಿಂ। ರಾಚೋಟಿ ಶಿವಾಚಾರ್ಯರು, ಗವಿಮಠ ಗುರುಗಳ ಆಶೀರ್ವಾದ ಸದಾ ನನಗೆ ಪ್ರೇರಣೆ. ಗುರುವಿನಲ್ಲಿ ಅಪಾರ ಶಕ್ತಿ ಇದೆ. ಗುರುವಿನಲ್ಲಿ ಭಕ್ತಿಯಿಟ್ಟು ನಡೆದಾಗ ಕಷ್ಟಗಳು ದೂರಾಗಿ ಸುಖ ದೊರೆಯುತ್ತವೆ ಎಂದು ನುಡಿದರು.

ನಗರದ ಪುಣ್ಯಕೋಟಿ ಪಿಯು ಕಾಲೇಜಿನ ಪ್ರಾಚಾರ್ಯ ಪ್ರೊ। ಸೂರ್ಯಕಾಂತ ಶೀಲವಂತ ಅಧ್ಯಕ್ಷತೆ ವಹಿಸಿದ್ದರು.

ನಾಗಣ್ಣ ಭೂಶೆಟ್ಟೆ ಮಲ್ಲಿಕಾರ್ಜುನ ಶೀಲವಂತ, ಶಿವಕುಮಾರ ಮಠ, ವೀರಣ್ಣ ಶೀಲವಂತ, ರುದ್ರಮಣಿ ಹಿರೇಮಠ ಇದ್ದರು. ಪ್ರೊ। ರುದ್ರೇಶ್ವರಸ್ವಾಮಿ ಸ್ವಾಗತಿಸಿದರು. ಪ್ರೊ। ಬಸವರಾಜ ನಿರುಪಿಸಿದರು.



ಬಸವಕಲ್ಯಾಣ: ಗವಿಮಠದಲ್ಲಿ ನಡೆದ ಶಿವಾನುಭವ ಚಿಂತನ ಮಾಸಿಕ ಅಮಾವಾಸ್ಯೆ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಉದಯವಾಣಿ ಕಲಬುರಗಿ
ಗುರುವಾರ, ಅಕ್ಟೋಬರ್ 31, 2019

ವಾಲ್ಮೀಕಿ ಸಮಾಜ ಇತಿಹಾಸ ನಿರ್ಮಿಸಿದ ಸಮಾಜವಾಗಿದೆ

ಕೋಹಿನೂರ ಗ್ರಾಮದಲಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಬಿಜೆಪಿ ಯುವ ಮುಖಂಡ ಶರಣು ಸಲಗರ ಅಭಿಪ್ರಾಯ

• **ಕನ್ನಡಪ್ರಭ ವಾರ್ತೆ** ಬಸವಕಲ್ಯಾಣ

ವಾಲ್ಮೀಕಿ ಸಮುದಾಯ ರಾಜ್ಯದಲ್ಲೇ ಅತ್ಯಂತ ದೊಡ್ಡ ಹಾಗೂ ಪ್ರಭಾವಿಯಾಗಿದ್ದು, ಇತಿಹಾಸ ನಿರ್ಮಿಸಿದ ಸಮಾಜವಾಗಿದೆ ಎಂದು ಬಿಜೆಪಿ ಯುವ ಮುಖಂಡ ಶರಣು ಸಲಗರ ಹೇಳಿದರು.

ತಾಲೂಕಿನ ಕೋಹಿನೂರ ಗ್ರಾಮದಲ್ಲಿ ಬುಧವಾರ ಆಯೋಜಿಸಿದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಾಮಾಯಣ ಮಹಾಕಾವ್ಯ ರಚಿಸಿ ಭಾರತದ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕೀರ್ತಿ ಆದಿಕವಿ ವಾಲ್ಮೀಕಿ ಅವರಿಗೆ ಸಲ್ಲುತ್ತದೆ ಎಂದರು.

ಸರ್ಕಾರ ವಾಲ್ಮೀಕಿ ಸಮುದಾಯದ ಜನರ ಹಾಗೂ ವಿದ್ಯಾರ್ಥಿಗಳ ಏಳ್ಗೆಗೆಗೆ ವಿವಿಧ ಯೋಜನೆಗಳನ್ನು ಪರಿಚಯಿಸಿದ್ದು, ಎಲ್ಲರು ಅವುಗಳ ಸದುಪಯೋಗ ಪಡೆದುಕೊಳ್ಳಬೇಕು. ಐಎಎಸ್, ಕೆಎಎಸ್‌ಗಳಂಥ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಮುದಾಯದ ಯುವಜನತೆ ಸಜ್ಜಾಗಿ ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿ ಸಾಧನೆ ಗೈಯಬೇಕು ಎಂದು ಸಲಹೆ ನೀಡಿದ ಅವರು, ಮಹರ್ಷಿ ವಾಲ್ಮೀಕಿ ಬರೆದಿರುವ ರಾಮಾಯಣದಿಂದ ನಾವು ಅನೇಕ ವಿಷಯಗಳು ಕಲಿತ್ತಿದ್ದೇವೆ. ಇನ್ನೂ ಕಲಿಯ ಬೇಕಾದದ್ದು ಬಹಳಷ್ಟಿದೆ ಎಂದರು.

ತ್ರಿಪುರಾಂತನ ಗವಿಮಠದ ರುದ್ರಮುನಿ ಶಿವಾಚಾರ್ಯರರು ಸಾನಿಧ್ಯ ವಹಿಸಿ ಮಾತನಾಡಿ, ವಾಲ್ಮೀಕಿ ಅವರ ರಾಮಾಯಣ ಮಹಾಕಾವ್ಯದಲ್ಲಿನ 24 ಶ್ಲೋಕಗಳನ್ನು ನಾವೆಲ್ಲ ಓದಿ ತಿಳಿದುಕೊಂಡು ಅವುಗಳಂತೆ ನಡೆಯುವಂತರಾಗಬೇಕು. ದುಡ್ಡಿನಿಂದ ಔಷಧಿ, ಸೌಂದರ್ಯ ವರ್ಧಕಗಳು, ಆಹಾರ ಏನೆಲ್ಲವನ್ನು ಖರೀದಿಸಬಹುದು. ಆದರೆ, ಶಾಂತಿ-ನೆಮ್ಮದಿ ಖರೀದಿ ಸಲಾಗದು. ದೈನಂದಿನ ಧಾವಂತದ ಬದುಕಿನಲ್ಲಿ ನಾವು ಹಣ ಗಳಿಕೆ ಹಾಗೂ ಲಾಭದ ಹಿಂದೆಯೇ ಓಡುತ್ತಿದ್ದು, ಶಾಂತಿ-ನೆಮ್ಮದಿ ಬಗ್ಗೆ ಚಿಂತಿಸುತ್ತಿಲ್ಲ. ರಾಮಾಯಣ ಓದುವುದರಿಂದ ಮನಸ್ಸಿಗೆ ಶಾಂತಿ ಸಿಗುತ್ತದೆ ಎಂದರು.

ಸಮಾಜದಲ್ಲಿ ಗುರುವಿಗೆ ಮಹತ್ವದ ಸ್ಥಾನವಿದ್ದು ನಮಗೆ ವಿದ್ಯೆ ಕಲಿಸಿದ ಗುರುಗಳನ್ನು ನಾವು ಯಾವತ್ತೂ ಮರೆಯಬಾರದು. ಸಂತರ, ಶಿವಶರಣರ ಸಾಹಿತ್ಯ ಓದುವುದರಿಂದ ಮನ ಶುದ್ಧವಾಗುತ್ತದೆ. ನುಡಿದಂತೆ ನಡೆಯುವ ಗುಣ ಬೆಳೆಸಿಕೊಂಡರೆ ಆದಿಕವಿ ವಾಲ್ಮೀಕಿ ಅವರಿಗೆ ಸಲ್ಲಿಸುವ ಗೌರವ ಎಂದರು. ರಂಗನಾಥ್ ದೊರೆ ವಿಶೇಷ ಉಪನ್ಯಾಸ ನೀಡಿದರು. ಮಾನಪ್ಪ ನಾಯಕ ಹಾಗೂ ರತಿಕಾಂತ್ ಕೋಹಿನೂರ ಮಾತನಾಡಿದರು.

ಕಲ್ಯಾಣ ಕರ್ನಾಟಕ ವಾಲ್ಮೀಕಿ ನಾಯಕರ ಸಂಘದ ವಿಭಾಗೀಯ ಅಧ್ಯಕ್ಷ ನಂದಕುಮಾರ ಮಾಲಿಪಾಟೀಲ್, ಶಿವಶರಣಪ್ಪ ಸಂತಾಜಿ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ರಾಜಕುಮಾರ ಸಿರಗಾಪೂರ, ಸಂಜು ಸುಗೂರೆ, ಶಿವಾಜಿ ಸಿತಾಳಗೇರೆ, ಚಂದ್ರಕಾಂತ್ ಕಲಕೋರಾ, ಡಾ. ಅಮರನಾಥ ಜಮಾದಾರ, ಅಂಬಾರಾಯ ಉಗಾಜಿ, ಹರೀಶ್, ವೀರ ಮದಕರಿ ನಾಯಕರ ಸೇನೆಯ ಸದಸ್ಯರು, ಗ್ರಾಮದ ಹಿರಿಯ ಮುಖಂಡರು ಸೇರಿದಂತೆ ವಾಲ್ಮೀಕಿ ಸಮಾಜದ ನೂರಾರು ಜನರು ಜಯಂತಿಯಲ್ಲಿ ಪಾಲ್ಗೊಂಡಿದ್ದರು.



ಬಸವಕಲ್ಯಾಣ ತಾಲೂಕಿನ ಕೋಹಿನೂರ ಗ್ರಾಮದಲ್ಲಿ ಬುಧವಾರ ಆಯೋಜಿಸಿದ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನ ಬಿಜೆಪಿ ಯುವ ಮುಖಂಡ ಶರಣು ಸಲಗರ ಉದ್ಘಾಟಿಸಿ ಮಾತನಾಡಿದರು. ಗವಿಮಠದ ರುದ್ರಮುನಿ ಶಿವಾಚಾರ್ಯರರು, ನಂದಕುಮಾರ ಮಾಲಿಪಾಟೀಲ್, ಶಿವಶರಣಪ್ಪ ಸಂತಾಜಿ, ಸಂಜು ಸುಗೂರೆ, ರತಿಕಾಂತ್ ಕೋಹಿನೂರ, ಶಿವಾಜಿ ಸಿತಾಳಗೇರೆ ಮತ್ತಿತರರು ಇದ್ದರು.

ಕನ್ನಡಪ್ರಭ
ಗುರುವಾರ 31.10.2019

Scanned with OKEN Scanner

ಸಾಧನೆಗೆ ಸತತ ಪ್ರಯತ್ನ ಮುಖ್ಯ

■ ಗುರುವಿನಲ್ಲಿ ಭಕ್ತಿಯಿಟ್ಟು ನಡೆದಾಗ ಕಷ್ಟ ದೂರವಾಗಿ ಸುಖ ದೊರೆಯಲು ಸಾಧ್ಯ

ಬಸವಕಲ್ಯಾಣ: ಸಾಧನೆಗೆ ವಯಸ್ಸು ಮುಖ್ಯವಲ್ಲ, ಸತತ ಪ್ರಯತ್ನ ಮುಖ್ಯವಾಗಿದೆ ಎಂದು ನಗರದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ನಡೆದ ಶಿವಾನುಭವ ಚಿಂತನ ಮಾಸಿಕ ಅಮಾವಾಸ್ಯೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಸ್ವಾಮೀಜಿ ಮಾತನಾಡಿದರು.

ಗುರುವಿನಲ್ಲಿ ಭಕ್ತಿ ಹೊಂದಿದರೆ ಸಾಧನೆ ಸುಲಭ. ಭಕ್ತರಲ್ಲಿ ಭಕ್ತಿ ಮೂಡಿಸಿ ಸಂಸ್ಕಾರ ಕಲಿಸುವುದೇ ಶಿವಾನುಭವ ಚಿಂತನ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ ಎಂದು ಹೇಳಿದರು.

ಹಿರಿಯ ನಾಗರಿಕರು ಬೀದರ ಜಿಲ್ಲಾ ಆಡಳಿತ ಹಿರಿಯ ನಾಗರಿಕರಿಗಾಗಿ ಏರ್ಪಡಿಸಿದ್ದ 200 ಮೀಟರ್ ನಡಿಗೆ ಹಾಗೂ ಜಾನಪದ ಗೀತೆ ಸ್ಪರ್ಧೆಗಳಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ತಾಲೂಕಿಗೆ ಕೀರ್ತಿ ತಂದಿದ್ದಾರೆ ಎಂದು ಹೇಳಿದರು.

ಹುಮನಾಬಾದ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ನಿವೃತ್ತಿ ಹೊಂದಿದ ಗೋರ್ಟಾ ಮೂಲದ ಬಸವರಾಜ ಮಠಪತಿ ಅವರನ್ನು ಸನ್ಮಾನಿಸಿ ಆಶೀರ್ವದಿಸುತ್ತ ಮಠಪತಿ ಅವರು 85ರ ಇಳಿವಯಸ್ಸಿನಲ್ಲೂ ನಿತ್ಯ ನಸುಕಿನಲ್ಲಿ ಬೇಗ ಎದ್ದು ಬಹು ದೂರ ನಡೆದು ಯೋಗ ವ್ಯಾಯಾಮ ಮಾಡುತ್ತ ಯುವಕರಂತೆ



ಬಸವಕಲ್ಯಾಣ: ಗವಿಮಠದಲ್ಲಿ ನಡೆದ ಶಿವಾನುಭವ ಚಿಂತನ ಮಾಸಿಕ ಅಮಾವಾಸ್ಯೆ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಲವಲವಿಕೆಯಿಂದ ಮಾದರಿಯಾಗಿ ಬದುಕುತ್ತಿದ್ದಾರೆ ಎಂದು ಹೇಳಿದರು. ಬಸವರಾಜ ಮಠಪತಿ ಮಾತನಾಡಿ, ನಡಿಗೆ ಯೋಗ ಮಾಡುತ್ತ ವೃತ್ತಿಯಲ್ಲಿಯೂ ಸಾರ್ಥಕ ಸೇವೆ ಮಾಡಿದ ಸಮಾಧಾನವಿದೆ. ನನ್ನ ಗುರುಗಳಾದ ಲಿಂ। ರಾಚೋಟಿ ಶಿವಾಚಾರ್ಯರು, ಗವಿಮಠ ಗುರುಗಳ ಆಶೀರ್ವಾದ ಸದಾ ನನಗೆ ಪ್ರೇರಣೆ. ಗುರುವಿನಲ್ಲಿ ಅಪಾರ ಶಕ್ತಿ ಇದೆ. ಗುರುವಿನಲ್ಲಿ ಭಕ್ತಿಯಿಟ್ಟು ನಡೆದಾಗ ಕಷ್ಟಗಳು ದೂರಾಗಿ ಸುಖ ದೊರೆಯುತ್ತವೆ ಎಂದು ನುಡಿದರು.

ನಗರದ ಪುಣ್ಯಕೋಟಿ ಪಿಯು ಕಾಲೇಜಿನ ಪ್ರಾಚಾರ್ಯ ಪ್ರೊ। ಸೂರ್ಯಕಾಂತ ಶೀಲವಂತ ಅಧ್ಯಕ್ಷತೆ ವಹಿಸಿದ್ದರು.

ನಾಗಣ್ಣ ಭೂಶೆಟ್ಟೆ ಮಲ್ಲಿಕಾರ್ಜುನ ಶೀಲವಂತ, ಶಿವಕುಮಾರ ಮಠ, ವೀರಣ್ಣ ಶೀಲವಂತ, ರುದ್ರಮಣಿ ಹಿರೇಮಠ ಇದ್ದರು. ಪ್ರೊ। ರುದ್ರೇಶ್ವರಸ್ವಾಮಿ ಸ್ವಾಗತಿಸಿದರು. ಪ್ರೊ। ಬಸವರಾಜ ನಿರೂಪಿಸಿದರು.

ವಾಲ್ಮೀಕಿ ಸಮಾಜ ಇತಿಹಾಸ ನಿರ್ಮಿಸಿದ ಸಮಾಜವಾಗಿದೆ

ಕೋಹಿನೂರ ಗ್ರಾಮದಲಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಬಿಜೆಪಿ ಯುವ ಮುಖಂಡ ಶರಣು ಸಲಗರ ಅಭಿಪ್ರಾಯ

• ಕನ್ನಡಪ್ರಭ ವಾರ್ತೆ ಬಸವಕಲ್ಯಾಣ

ವಾಲ್ಮೀಕಿ ಸಮುದಾಯ ರಾಜ್ಯದಲ್ಲೇ ಅತ್ಯಂತ ದೊಡ್ಡ ಹಾಗೂ ಪ್ರಭಾವಿಯಾಗಿದ್ದು, ಇತಿಹಾಸ ನಿರ್ಮಿಸಿದ ಸಮಾಜವಾಗಿದೆ ಎಂದು ಬಿಜೆಪಿ ಯುವ ಮುಖಂಡ ಶರಣು ಸಲಗರ ಹೇಳಿದರು.

ತಾಲೂಕಿನ ಕೋಹಿನೂರ ಗ್ರಾಮದಲ್ಲಿ ಬುಧವಾರ ಆಯೋಜಿಸಿದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಾಮಾಯಣ ಮಹಾಕಾವ್ಯ ರಚಿಸಿ ಭಾರತದ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕೀರ್ತಿ ಆದಿಕವಿ ವಾಲ್ಮೀಕಿ ಅವರಿಗೆ ಸಲ್ಲುತ್ತದೆ ಎಂದರು.

ಸರ್ಕಾರ ವಾಲ್ಮೀಕಿ ಸಮುದಾಯದ ಜನರ ಹಾಗೂ ವಿದ್ಯಾರ್ಥಿಗಳ ಏಳ್ಗೆಗೆ ವಿವಿಧ ಯೋಜನೆಗಳನ್ನು ಪರಿಚಯಿಸಿದ್ದು, ಎಲ್ಲರು ಅವುಗಳ ಸದುಪಯೋಗ ಪಡೆದುಕೊಳ್ಳಬೇಕು. ಐಎಎಸ್, ಕೆಎಎಸ್‌ಗಳಂಥ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಮುದಾಯದ ಯುವಜನತೆ ಸಜ್ಜಾಗಿ ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿ ಸಾಧನೆ ಗೈಯಬೇಕು ಎಂದು ಸಲಹೆ ನೀಡಿದ ಅವರು, ಮಹರ್ಷಿ ವಾಲ್ಮೀಕಿ ಬರೆದಿರುವ ರಾಮಾಯಣದಿಂದ ನಾವು ಅನೇಕ ವಿಷಯಗಳು ಕಲಿತ್ತಿದ್ದೇವೆ. ಇನ್ನೂ ಕಲಿಯ ಬೇಕಾದದ್ದು ಬಹಳಷ್ಟಿದೆ ಎಂದರು.

ತ್ರಿಪುರಾಂತನ ಗವಿಮಠದ ರುದ್ರಮುನಿ ಶಿವಾಚಾರ್ಯರು ಸಾನಿಧ್ಯ ವಹಿಸಿ ಮಾತನಾಡಿ, ವಾಲ್ಮೀಕಿ ಆವರ ರಾಮಾಯಣ ಮಹಾಕಾವ್ಯದಲ್ಲಿನ 24 ಶ್ಲೋಕಗಳನ್ನು ನಾವೆಲ್ಲ ಓದಿ ತಿಳಿದುಕೊಂಡು ಅವುಗಳಂತೆ ನಡೆಯುವಂತರಾಗಬೇಕು. ದುಡ್ಡಿನಿಂದ ಔಷಧಿ, ಸೌಂದರ್ಯ ವರ್ಧಕಗಳು, ಆಹಾರ ಏನೆಲ್ಲವನ್ನು ಖರೀದಿಸಬಹುದು. ಆದರೆ, ಶಾಂತಿ-ನೆಮ್ಮದಿ ಖರೀದಿ



ಬಸವಕಲ್ಯಾಣ ತಾಲೂಕಿನ ಕೋಹಿನೂರ ಗ್ರಾಮದಲ್ಲಿ ಬುಧವಾರ ಆಯೋಜಿಸಿದ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನ ಬಿಜೆಪಿ ಯುವ ಮುಖಂಡ ಶರಣು ಸಲಗರ ಉದ್ಘಾಟಿಸಿ ಮಾತನಾಡಿದರು. ಗವಿಮಠದ ರುದ್ರಮುನಿ ಶಿವಾಚಾರ್ಯರರು, ನಂದಕುಮಾರ ಮಾಲಿಪಾಟೀಲ್, ಶಿವಶರಣಪ್ಪ ಸಂತಾಜಿ, ಸಂಜು ಸುಗೂರೆ, ರತಿಕಾಂತ್ ಕೋಹಿನೂರ, ಶಿವಾಜಿ ಸಿತಾಳಗೇರೆ ಮತ್ತಿತರರು ಇದ್ದರು.

ಸಲಾಗದು. ದೈನಂದಿನ ಧಾವಂತದ ಬದುಕಿನಲ್ಲಿ ನಾವು ಹಣ ಗಳಿಕೆ ಹಾಗೂ ಲಾಭದ ಹಿಂದೆಯೇ ಓಡುತ್ತಿದ್ದು, ಶಾಂತಿ-ನೆಮ್ಮದಿ ಬಗ್ಗೆ ಚಿಂತಿಸುತ್ತಿಲ್ಲ. ರಾಮಾಯಣ ಓದುವುದರಿಂದ ಮನಸ್ಸಿಗೆ ಶಾಂತಿ ಸಿಗುತ್ತದೆ ಎಂದರು.

ಸಮಾಜದಲ್ಲಿ ಗುರುವಿಗೆ ಮಹತ್ವದ ಸ್ಥಾನವಿದ್ದು ನಮಗೆ ವಿದ್ಯೆ ಕಲಿಸಿದ ಗುರುಗಳನ್ನು ನಾವು ಯಾವತ್ತೂ ಮರೆಯಬಾರದು. ಸಂತರ, ಶಿವಶರಣರ ಸಾಹಿತ್ಯ ಓದುವುದರಿಂದ ಮನ ಶುದ್ಧವಾಗುತ್ತದೆ. ನುಡಿದಂತೆ ನಡೆಯುವ ಗುಣ ಬೆಳೆಸಿಕೊಂಡರೆ ಆದಿಕವಿ ವಾಲ್ಮೀಕಿ ಆವರಿಗೆ ಸಲ್ಲಿಸುವ ಗೌರವ ಎಂದರು. ರಂಗನಾಥ್ ದೊರ ವಿಶೇಷ ಉಪನ್ಯಾಸ ನೀಡಿದರು. ಮಾನಪ್ಪ ನಾಯಕ ಹಾಗೂ ರತಿಕಾಂತ್ ಕೋಹಿನೂರ ಮಾತನಾಡಿದರು.

ಕಲ್ಯಾಣ ಕರ್ನಾಟಕ ವಾಲ್ಮೀಕಿ ನಾಯಕರ ಸಂಘದ ವಿಭಾಗೀಯ ಅಧ್ಯಕ್ಷ ನಂದಕುಮಾರ ಮಾಲಿಪಾಟೀಲ್, ಶಿವಶರಣಪ್ಪ ಸಂತಾಜಿ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ರಾಜಕುಮಾರ ಸಿರಗಾಪೂರ, ಸಂಜು ಸುಗೂರೆ, ಶಿವಾಜಿ ಸಿತಾಳಗೇರೆ, ಚಂದ್ರಕಾಂತ್ ಕಲಕೋರಾ, ಡಾ. ಅಮರನಾಥ ಜಮಾದಾರ, ಅಂಬಾರಾಯ ಉಗಾಜಿ, ಹರೀಶ್, ವೀರ ಮದಕರಿ ನಾಯಕರ ಸೇನೆಯ ಸದಸ್ಯರು, ಗ್ರಾಮದ ಹಿರಿಯ ಮುಖಂಡರು ಸೇರಿದಂತೆ ವಾಲ್ಮೀಕಿ ಸಮಾಜದ ನೂರಾರು ಜನರು ಜಯಂತಿಯಲ್ಲಿ ಪಾಲ್ಗೊಂಡಿದ್ದರು.

Scanned with OKEN Scanner

ಪರಮಾತ್ಮ ಸದಾಚಾರ ಪ್ರಿಯ : ತ್ರಿಪುರಾಂತ ಶ್ರೀ

ಸಂಯುಕ್ತ ಕರ್ನಾಟಕ

ಕಲಬುರಗಿ | 11, ಆಗಸ್ಟ್, 2019 | ಭಾನುವಾರ

ಸಂ.ಕ.ಸಮಾಚಾರ ಬಸವಕಲ್ಯಾಣ

ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಸದಾಚಾರ ತತ್ವವನ್ನು ಪ್ರತಿಪಾದಿಸುತ್ತವೆ ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು. ತ್ರಿಪುರಾಂತ ಗವಿಮಠದಲ್ಲಿ ಪವಿತ್ರ ಶ್ರಾವಣ ಮಾಸ ನಿಮಿತ್ತ ಜಗದ್ಗುರು ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್, ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ಮತ್ತು ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ಸಹಯೋಗದಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡುತ್ತಿದ್ದರು.

ಸದಾಚಾರ ಶಂಭೂ ಪ್ರಿಯ ಎಂದು ಸಿದ್ಧಾಂತ ಶಿಖಾಮಣಿ ಹೇಳುತ್ತದೆ. ಅದೇ ರೀತಿ ಆಚಾರವೇ ಸ್ವರ್ಗ ಅನಾಚಾರವೇ ನರಕ ಎಂದು ವಚನ ಸಾಹಿತ್ಯ ಹೇಳುತ್ತದೆ ಎಂದು ವಿವರಿಸಿದರು. ಸರಾಫ್ ಹಾಗೂ ಸುವರ್ಣಕಾರ ಸಂಘದ ಅಧ್ಯಕ್ಷ ಬಾಳಾಸಾಹೇಬ ಕುಲ್ಕರ್ಣಿ ಮಾತನಾಡಿ ಭಕ್ತರ ಸಹಕಾರದಿಂದ ಮಠದ ಅಭಿವೃದ್ಧಿ ಕಾರ್ಯದ ಜತೆಗೆ ಗವಿಮಠದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಗವಿಮಠದ ಶ್ರೀಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ಮಠದ ಪರಿಸರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಕ್ಕೆ ಸಹಾಯ-ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಸನ್ಮಾನ ಸ್ವೀಕರಿಸಿದ ಬಸವಕಲ್ಯಾಣ ಇಜಿನಿಯರಿಂಗ್ ಕಾಲೇಜಿನ ನಿವೃತ್ತ ಉಪನ್ಯಾಸಕ ಪ್ರೊ. ದಯಾನಂದ ಶೀಲವಂತ ಉಪನ್ಯಾಸ ನೀಡಿ, 36 ವರ್ಷಗಳ ಸುದೀರ್ಘ ವೃತ್ತಿ ಬದುಕಿನ ಜತೆಗೆ ಗುರುವಿನ ಸೇವೆ ಮಾಡುತ್ತ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸದಾ ತೊಡಗಿಕೊಂಡಿದ್ದು, ಇದು ಜೀವನ ನಡೆಸಿ ತೃಪ್ತಿ ತಂದಿದೆ ಎಂದರು. ನಿವೃತ್ತ ಸೈನಿಕ ಶಿವಕುಮಾರ ಮಠ ರಾಯಪಳ್ಳಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಅಧ್ಯಕ್ಷ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಪ್ರೊ. ರುದ್ರೇಶ್ವರ ಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಸಂಸ್ಥೆಯ ನಿಕಟ ಪೂರ್ವ ಅಧ್ಯಕ್ಷ ವೀರಣ್ಣ ಶೀಲವಂತ ಪ್ರಾರ್ಥನಾ ಗೀತೆ ಹಾಡಿದರು. ವೀರಪ್ಪ ಬಾಗೇವಾಡಿ ಜಾನಪದ ಗೀತೆ, ಬಿಡಿಪಿಸಿ ನಿದೇರ್ಶಕಿ ಕಲ್ಪನಾ ಶೀಲವಂತ ಆರತಿ ಗೀತೆ ಹಾಡಿದರು.

ತಾ.ಪಂ. ಮಾಜಿ ಉಪಾಧ್ಯಕ್ಷ ಕಲ್ಲಪ್ಪ ಖಸಗೆ, ಪ್ರಮುಖರಾದ ವೀರಶೆಟ್ಟಿ ಮಲ್ಲಶೆಟ್ಟಿ, ಮಲ್ಲಿಕಾರ್ಜುನ ಅಲ್ಲಶೆಟ್ಟಿ, ಮಲ್ಲಿಕಾರ್ಜುನ ಅಲಗೂಡೆ, ವಿಶ್ವನಾಥಪ್ಪ ಬಿರಾದಾರ, ಓಂನಾಥ ಪಾಟೀಲ್, ಸಂತೋಷ ಬಿರಾದಾರ, ಆರ್. ಎಸ್.ಪಾಟೀಲ್, ಬಸವರಾಜ ಬಿರಾದಾರ, ಪ್ರಭುಲಿಂಗಯ್ಯ ಟಂಕಸಾಲಿಮಠ, ವಿಠಲ ಜಾಧವ, ರಮೇಶ ರಾಜೋಳೆ, ಚೆನ್ನಪ್ಪ ಅಳಿಕಟ್ಟಿ, ಸುಭದ್ರಾಬಾಯಿ ಸ್ವಾಮಿ, ಸುನಂದಾ ನಂದಿ, ಪಾರ್ವತಿ ರೋಜೆ, ಶಾಂತಾಬಾಯಿ ಪವಾಡೆ, ಪ್ರೇಮಲಾ ರೇಣುಕಾ ಮಠಪತಿ, ಸುಶೀಲಾಬಾಯಿ ರಾಮಣ್ಣವರ ಸೇರಿದಂತೆ ಪ್ರಮುಖರು ರಾಸುರೆ, ರಾಚಮ್ಮ ಚಿಂಚೊಳೆ, ಉಪಸ್ಥಿತರಿದ್ದರು.



ಬಸವಕಲ್ಯಾಣ : ತ್ರಿಪುರಾಂತ ಗವಿಮಠದಲ್ಲಿ ಪವಿತ್ರ ಶ್ರಾವಣ ಮಾಸ ನಿಮಿತ್ತ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸೇವಾ ನಿವೃತ್ತಿ ಹೊಂದಿದ ಉಪನ್ಯಾಸಕ ದಯಾನಂದ ಶೀಲವಂತ ಅವರನ್ನು ಸನ್ಮಾನಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಬಾಳಾಸಾಹೇಬ ಕುಲ್ಕರ್ಣಿ, ಶಿವಕುಮಾರ ಮಠ ರಾಯಪಳ್ಳಿ, ಪ್ರೊ. ರುದ್ರೇಶ್ವರ ಸ್ವಾಮಿ, ಕಾಶಿನಾಥ ಸ್ವಾಮಿ ಉಪಸ್ಥಿತರಿದ್ದರು.



ಬಸವಕಲ್ಯಾಣ ತಾಲೂಕಿನ ಮಂಠಾಳ ಕ್ರಾಸ್ ಹತ್ತಿರ ತುಳಜಾ ಭವಾನಿ ದರ್ಶನಕ್ಕೆ ತೆರಳುತ್ತಿರುವ ಪಾದಯಾತ್ರಿಗಳಿಗೆ ಹೊನ್ನಾ ಪರಿವಾರ ವತಿಯಿಂದ ಉಚಿತ ಔಷಧಿ ಹಾಗೂ ಲಾಡು ವಿತರಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಸ್ವಾಮೀಜಿ, ಜಿಪಂ ಸದಸ್ಯ ಗುಂಡುರೆಡ್ಡಿ ವಿತರಣೆಗೆ ಚಾಲನೆ ನೀಡಿದರು. ವಿನೋದ ಹೊನ್ನಾ, ಮಹೇಶ ಹೊನ್ನಾ ಸೇರಿ ಅನೇಕರಿದ್ದರು.

ಶುಕ್ರವಾರ 27 ಸೆಪ್ಟೆಂಬರ್ 2019
27 SEPTEMBER 2019



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನದ ನಿಮಿತ್ತ ನಗರದ ನೀಲಾಂಬಿಕಾ ಕಾಲೇಜು ಪರಿಸರದಲ್ಲಿ ಸ್ವಚ್ಛತೆ ನಡೆಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸುರೇಶ ಅಕ್ಕಣ್ಣ, ಸೂರ್ಯಕಾಂತ ಶೀಲವಂತ, ಶಿವರಾಜ ಬೆಲ್ಲಾಪುರೆ, ನರಸಿಂಗ್ ರೆಡ್ಡಿ ಗದಲೆಗಾಂವ, ಆಶ್ವಿನ್ ಗೋರ್ಟೆ, ಶ್ರೀನಿವಾಸ ಸಿಂಧೆ, ವಿದ್ಯಾ ದೇವರಾಜ ಉಬ್ಬಣ, ಬಸಂತಪ್ಪ ಲವಾರೆ, ವೀರಣ್ಣ ಶೀಲವಂತ, ಸಿದ್ದರಾಮ ಪಾಟೀಲ್, ಇತರರಿದ್ದರು.

ಭಾನುವಾರ 6 ಅಕ್ಟೋಬರ್ 2019
6 OCTOBER 2019



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ನಿವೃತ್ತ ಎಫ್‌ಡಿಎ ರೇವಣಸಿದ್ಧಯ್ಯ ಮಠಪತಿ ಅವರನ್ನು ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆಯಿಂದ ಸನ್ಮಾನಿಸಲಾಯಿತು. ಶ್ರೀ ರುದ್ರಮುನಿ ಶಿವಾಚಾರ್ಯರು, ಬಸವಂತಪ್ಪ ಲವಾರೆ, ಪ್ರೊ.ಸೂರ್ಯಕಾಂತ ಶೀಲವಂತ, ಮಲ್ಲಿಕಾರ್ಜುನ ನಂದಿ, ವೀರಣ್ಣ ಶೀಲವಂತ, ಶರಣಪ್ಪ ಬುಕ್ಕಿಗಾರ, ಹವಯ್ಯ ಸ್ವಾಮಿ, ಪ್ರೊ.ದಯಾನಂದ ಶೀಲವಂತ, ಬಸಲಿಂಗಯ್ಯ ಶಂಕರಗುಡಿ, ವಿಶ್ವನಾಥ ಬಿರಾದಾರ ಇತರರಿದ್ದರು.

Scanned with OKEN Scanner

ಭಕ್ತರ ದುಶ್ಚಟಗಳು ಅಭಿನವ ಶ್ರೀಗಳ ಜೋಳಿಗೆಯಲ್ಲಿ

ಶ್ರೀಗಳ ಜನ್ಮದಿನದ ಪ್ರಯುಕ್ತ ಪಾದಯಾತ್ರೆ: ವ್ಯಸನಮುಕ್ತ ಸಮಾಜಕ್ಕೆ ಸಂಕಲ



ಬಸವಕಲ್ಯಾಣ: ತ್ರಿಪುರಾಂತ ಗವಿಮಠದ ಗುರುಗಳಾದ ಪೂಜ್ಯಶ್ರೀ ಷ.ಬ್ರ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನದ ಪ್ರಯುಕ್ತ ವ್ಯಸನ ಮುಕ್ತ ಸಮಾಜದ ಸಂಕಲ್ಪದೊಂದಿಗೆ ಶ್ರೀಗಳ ನೇತೃತ್ವದಲ್ಲಿ ಶುಕ್ರವಾರ ಬೆಳಿಗ್ಗೆ ೧೧ ಗಂಟೆಗೆ ಶ್ರೀ ಬಸವೇಶ್ವರ ದೇವಸ್ಥಾನದಿಂದ ಪಾದಯಾತ್ರೆ ಹಮ್ಮಿಕೊಳ್ಳಲಾಗಿತ್ತು,

ದೇವಸ್ಥಾನದಿಂದ ,ಗಾಂಧಿ ವೃತ್ತ, ಬಸವೇಶ್ವರ ವೃತ್ತ, ಅಂಬೇಡ್ಕರ ವೃತ್ತ, ಹರಳಯ್ಯನವರ ವೃತ್ತ, ಶಿವಾಜಿ ವೃತ್ತ ಮಾರ್ಗವಾಗಿ ತ್ರಿಪುರಾಂತದ ವರೆಗೆ ನಡೆದ ಪಾದಯಾತ್ರೆಯ ಉದ್ದಕ್ಕೂ ದುಶ್ಚಟಗಳಿಂದ ದೂರವಿರಿ ಆರೋಗ್ಯ ವಂತರಾಗಿ ಬದುಕಿ ಎನ್ನುವ ಘೋಷಣೆಗಳನ್ನು

ಕೂಗುತ್ತಾ ವ್ಯಸನಕ್ಕೆ ದಾಸರಾದವರು ತಮ್ಮ ದುಶ್ಚಟಗಳನ್ನು ಚೀಟಿಯಲ್ಲಿ ಬರೆದು ಮತ್ತು ಕೆಲವರು ಗುಟಕಾ, ಸಿಗರೇಟು, ಬೀಡಿ, ತಂಬಾಕು ಸುಣ್ಣದಡಬ್ಬಿ ಗಳನ್ನು ಜೋಳಿಗೆಗೆ ಹಾಕಿ ಇಂದಿನಿಂದ ವ್ಯೆಸನ ಮುಕ್ತನಾಗುವೆ ಎಂದು ನುರಾರು ಜನ ಸಂಕಲ್ಪ ಮಾಡಿದರು.

ಈ ಪಾದಯಾತ್ರೆಯಲ್ಲಿ ಕೌಡ್ಯಾಳ ಚರ್ಚನ ಫಾದರ್ ಸಂತೋಷ ಬಾಪು, ಬಿ.ಜೆ.ಪಿ. ಮುಖಂಡ ಶರಣು ಸಲಗರ, ಪರ್ತಾಪೂರ ಜಿಲ್ಲಾ ಪಂಚಾಯತ ಸದಸ್ಯ ಅಣ್ಣಾರಾವ ರಾಠೋಡ, ಮಲ್ಲಯ್ಯಾ ಸ್ವಾಮಿ ಹಿರೇಮಠ,

ಶರಣಪ್ಪಾ ಬಿರಾದಾರ, ಬಸವಂತಪ್ಪಾ ಲಾವರೆ, ಬಸವಣಪ್ಪನಂದಿ, ಬಸವರಾಜ ಪಾರಾ, ಸಾಗರ ದಂಡೊತಿ, ದಯಾನಂದ ಶಿಲವಂತ, ಮನೋಹರ ಮೈಸೆ,ಅರ್ಜುನ ಕನಕ, ಬಸವರಾಜ ಸ್ವಾಮಿ, ವೀರಶೆಟ್ಟಿ ಮಲಶೆಟ್ಟಿ, ಎಂ.ಎಂ.ತಂಬಾಕೆ, ಸಂಜು ಗಾಯಕವಾಡ, ಗ್ರಾ.ಪಂ.ಸದಸ್ಯ ರತಿಕಾಂತ ಕೋಹಿನೂರ, ಕಸಾಪ ಮಾಜಿ ಅಧ್ಯಕ್ಷ ಚಂದ್ರಕಾಂತ ಸ್ವಮಿ, ಡಾ.ಬಸವರಾಜ ಸ್ವಾಮಿ , ಚನ್ನವೀರ ಜಮಾದಾರ,

ನರಸಿಂಗರಡ್ಡಿ ಗದ್ದೇಗಾಂವ, ನೈಮೋದ್ದೀನ ಚಾಬುಕ ಸವಾರ, ಹಾಫೀಝು ಅಕ್ಬರ, ಖಿತಬೋದ್ದೀನ್, ಪ್ರಾಚಾರ್ಯ ಪ್ರಭುಲಿಂಗಯ್ಯಾ ಬಿ.ಟಂಕಸಾಲಿಮಠ, ಸೂರ್ಯಕಾಂತ ಶೀಲವಂತ ಹಾಗೂ ರಾ ಪೂರವಂತ, ದೀಲೀಪಕುಮಾರ ಗಿರಗ ಎಬಿವಿಪಿಯ ಲೋಕೇಶ ಮೋಳಕೆರೆ, ವಿ ಶೀಲವಂತ, ಮಲ್ಲಿಕಾರ್ಜುನ ಶೀಲ ಶಿವಕುಮಾರ ಬಿರಾದಾರ, ಸ ರಮೇಶಸ್ವಾಮಿ ಸೇರಿದಂತೆ ನೂ ಯುವಕರು ಎಲ್ಲಾ ಸಮಾಜ ಬಾಂಧ ಪಾಲ್ಗೊಂಡಿದ್ದರು. ವಿವಿಧ ಶಾಲಾಕಾಲೆ ವಿದ್ಯಾರ್ಥಿಗಳು,ಮತ್ತು ವಿವಿಧ ಸಂಘಟ ಪದಾಧಿಕಾರಿಗಳು ಭಾಗವಹಿಸಿದ್ದರು.

ಕರ್ನಾಟಕ ಸಂಧ್ಯಾಕಾಲ ಶನಿವಾರ ಸೆಪ್ಟೆಂಬರ್ 28, 2019

ಅಧ್ಯಾತ್ಮಿಕ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಹುಟ್ಟು ಹಬ್ಬ ಕಾರ್ಯಕ್ರಮದಲ್ಲಿ ಖೂಬಾ ಅಭಿಮತ

ಭಾರತ ಅಧ್ಯಾತ್ಮಿಕದಲ್ಲಿ ಶ್ರೀಮಂತಿಕೆ ಹೊಂದಿದ ದೇಶ

• ಕನ್ನಡಪ್ರಭ ವಾರ್ತೆ ಬಸವಕಲ್ಯಾಣ

ಭಾರತ ದೇಶ ಋಷಿ ಮುನಿಗಳ, ಸಾಧು ಸಂತರ ಹಾಗೂ ಯೋಗಿಗಳ ದೇಶವಾಗಿ ವಿಶ್ವಕ್ಕೆ ಗುರುವಾಗಿದೆ. ಜೊತೆಗೆ ಸರ್ವ ಕಾಲಕ್ಕೂ ಇದು ಹೀಗೆ ಮುಂದುವರೆಯುತ್ತದೆ ಎಂದು ಬೀದರ್‌ನ ಸಂಸದ ಭಗವಂತ ಖೂಬಾ ಹೇಳಿದರು.

ನಗರದ ತ್ರಿಪುರಾಂತನ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿ ಮಠದಲ್ಲಿ ಶನಿವಾರ ಹಮ್ಮಿಕೊಂಡ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಹುಟ್ಟು ಹಬ್ಬ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡಿ, ವಿಶ್ವದಲ್ಲಿ ಅನೇಕ ರಾಷ್ಟ್ರಗಳು ಶ್ರೀಮಂತಿಕೆಯ ಸಾಲಿನಲ್ಲಿವೆ. ಆದರೆ ಭಾರತ ದೇಶ ಅಧ್ಯಾತ್ಮಿಕದಲ್ಲಿ ಶ್ರೀಮಂತಿಕೆ ಹೊಂದಿದ ದೇಶವಾಗಿದೆ. ನಮ್ಮ ದೇಶದಲ್ಲಿನ ಸಂಸ್ಕೃತಿ, ಪರಂಪರೆ ಬೇರೆ ಯಾವ ದೇಶದಲ್ಲಿಯೂ ಇಲ್ಲ, ಗುರುವಿನ ಸೇವೆ ಸದಾ ಕಾಲ ಮಾಡಿದಾಗ ಮಾತ್ರ ನಮ್ಮ ಜೀವನ



ಬಸವಕಲ್ಯಾಣದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಹುಟ್ಟು ಹಬ್ಬ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದ ಕಾರ್ಯಕ್ರಮದಲ್ಲಿ ಸಂಸದ ಭಗವಂತ ಖೂಬಾ ಮಾತನಾಡಿದರು. ಡಾ. ಜಯಸಿದ್ದೇಶ್ವರ ಶಿವಾಚಾರ್ಯರು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು.

ಸಾರ್ಥಕವಾಗಲು ಸಾಧ್ಯ. ಮನುಷ್ಯನ ಹುಟ್ಟು ಮತ್ತು ಸಾವಿನ ಮಧ್ಯೆ ಉತ್ತಮ ಬದುಕು ರೂಪಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಮಹಾರಾಷ್ಟ್ರದ ಸೋಲಾಪೂರನ ಸಂಸದ, ಡಾ. ಜಯಸಿದ್ದೇಶ್ವರ ಶಿವಾಚಾರ್ಯರು ಮಾತನಾಡಿ, ಗುರು ಇಲ್ಲದೆ ಸಮಾಜ ಇಲ್ಲ, ಗುರುವಿಗಿಂತ ಮತ್ತೊಬ್ಬ ಬಂಧುವಿಲ್ಲ ಹೀಗಾಗಿ ಗುರುವಿನ ಸೇವೆ ಮಾಡಿದಾಗ ಮಾತ್ರ ಭಕ್ತನಿಗೆ ಎಲ್ಲವೂ ಮುಕ್ತಿ ಸಿಗಲು ಸಾಧ್ಯ ಹೀಗಾಗಿ ಗುರು ಮಾಡುವ ಒಳ್ಳೆಯ ಕಾರ್ಯಕ್ಕೆ ಭಕ್ತನು ತನ್ನ ಕೈಲಾದಷ್ಟು ಸಹಾಯ ಸಹಕಾರ ಮಾಡಿದಾಗ ಮಾತ್ರ ಯಾವುದೇ ಕಾರ್ಯಗಳು ಯಶಸ್ವಿಗೊಳ್ಳಲು ಸಾಧ್ಯ ಎಂದು ತಿಳಿಸಿದರು.

ಜಗತ್ತು ತೋರಿದ ತಂದೆ ತಾಯಿ ಜೊತೆಗೆ ಉತ್ತಮ ಮಾರ್ಗದರ್ಶನದತ್ತ ನಮ್ಮೆಲ್ಲರನ್ನು ಕರೆದೊಯ್ಯುವ ಗುರುವಿನ ಋಣ ಅಪಾರ. ಹೀಗಾಗಿ ತಂದೆ ತಾಯಿ ಮತ್ತು ಗುರುವಿನ ಸೇವೆ ಸದಾ ಕಾಲ ಮಾಡಿದಾಗ ಮಾತ್ರ ಜೀವನ ಸಾರ್ಥಕವಾಗಲು ಸಾಧ್ಯ ಎಂದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಿಕ್ಕ ವಯಸ್ಸಿನಲ್ಲೇ ಸಮಾಜದ ಬಗ್ಗೆ ಕಳಕಳಿಯ ಜೊತೆಗೆ ಸಮಾಜ ಸೇವೆ ಮಾಡುತ್ತಿದ್ದಾರೆ. ಅವರ ಒಳ್ಳೆಯ ಕಾರ್ಯಕ್ಕೆ ಭಕ್ತ ಸಮೂಹ ಎಂದಿಗೂ ಅವರ ಬೆನ್ನೆಲುಬಾಗಿ ನಿಲ್ಲುವ ಮೂಲಕ ಮತ್ತಷ್ಟು ಕಾರ್ಯಕ್ಕೆ ಕೈ ಜೋಡಿಸಬೇಕು ಎಂದು ಸಲಹೆ ನೀಡಿದರು.

ಕನ್ನಡಪ್ರಭ ಬೆಂಗಳೂರು ಭಾನುವಾರ 29.9.2019



ಬಸವಕಲ್ಯಾಣ: ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನದ ಅಂಗವಾಗಿ ವೈಷ್ಣವಿ ಕಾಲೋನಿಯಲ್ಲಿ ಸಸಿ ನೆಡಲಾಯಿತು. ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂದಿ, ಬಸವರಾಜ ಪಾರಾ, ಅನೀಲ ಪಾಟೀಲ ಇದ್ದರು.

ಸಂಯುಕ್ತ ಕರ್ನಾಟಕ ಬೆಂಗಳೂರು ಸೆಪ್ಟೆಂಬರ್ 27, 2019

Scanned with OKEN Scanner

ಬೀದರ ಶನಿವಾರ, 28, ಸೆಪ್ಟೆಂಬರ್, 2019, ಕಲಬುರಗಿ ಸಂಯುಕ್ತ ಕರ್ನಾಟಕ

ತ್ರಿಪುರಾಂತ ಶ್ರೀಗಳಿಂದ ಜೋಳಿಗೆ ಪಾದಯಾತ್ರೆ

ದುಶ್ಚಟಗಳ ವಿರುದ್ಧ ಜಾಗೃತಿ ಅಭಿಯಾನ

ಸಂ.ಕ. ಸಮಾಚಾರ ಬಸವಕಲ್ಯಾಣ

ತ್ರಿಪುರಾಂತ ಗವಿಮಠದ ಪೀಠಾಧ್ಯಕ್ಷ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ನಗರದಲ್ಲಿ ಅಭಿನವ ಘನಲಿಂಗ ಜೋಳಿಗೆ ಪಾದಯತ್ರೆ ಜರುಗಿತು.

ನಗರದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ನೆರವೇರಿಸಿದ ನಂತರ ದೇವಸ್ಥಾನದಿಂದ ಗಾಂಧಿ, ಬಸವ, ಅಂಬೇಡ್ಕರ್ ವೃತ್ತ ಹಾಗೂ ಹರಳಯ್ಯ ವೃತ್ತದ ಮೂಲಕ ತ್ರಿಪುರಾಂತ ಪ್ರವಾಸಿ ಮಂದಿರದ ವರೆಗೆ ಮುಖ್ಯ ರಸ್ತೆ ಮಾರ್ಗವಾಗಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಜೋಳಿಗೆ ಹಿಡಿದು ಪಾದಯಾತ್ರೆ ನಡೆಸಿದರು. ಬನ್ನಿ ನಿಮ್ಮ ದುಶ್ಚಟಗಳನ್ನು ನನ್ನ ಜೋಳಿಗೆಗೆ ಹಾಕಿ, ಆರೋಗ್ಯ ಕಾಪಾಡಿಕೊಂಡು ಆರೋಗ್ಯವಂತರಾಗಿ, ಧರ್ಮವಂತರಾಗಿ ಆರೋಗ್ಯಪೂರ್ಣ ಸಮಾಜ ಕಟ್ಟೋಣ ಬನ್ನಿ ಎನ್ನುವ ಘೋಷವಾಕ್ಯದೊಂದಿಗೆ ನಡೆದ ಪಾದಯಾತ್ರೆಯಲ್ಲಿ ಹಲವರು ಗುಟಕಾ ಪಾಕೇಟ್, ತಂಬಾಕು ಪುಡಿ, ಬಿಡಿ, ಸಿಗರೇಟ್‌ಗಳನ್ನು ಜೋಳಿಗೆಗೆ ಹಾಕಿ ಈ ಚಟದಿಂದ ಮುಕ್ತರಾಗಲು ಸಂಕಲ್ಪ ಮಾಡಿದರು.

ಪಾದಯಾತ್ರೆ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಶ್ರೀಗಳು, ಸಧೃಡ ಆರೋಗ್ಯದಿಂದ ಮಾತ್ರ ಸಧೃಡ ಸಮಾಜ ನಿರ್ಮಿಸಲು ಸಾಧ್ಯ ಎನ್ನುವ ಸದುದ್ದೇಶದಿಂದ ಯುವಕರಲ್ಲಿಯ ದುಶ್ಚಟಗಳ ವಿರುದ್ಧ ಒಂದಿಷ್ಟು ಅರಿವು ಮೂಡಿಸಬೇಕು ಎನ್ನವದು ತಮ್ಮ ಮೂರು ವರ್ಷದ ಸಂಕಲ್ಪವಾಗಿದೆ. ಸಮಾಜದಲ್ಲಿಯ ಅನೇಕ ಯುವಕರು ಚಟಗಳಿಗೆ ಅಕರ್ಷಿತರಾಗುತ್ತಿದ್ದಾರೆ.



ಬಸವಕಲ್ಯಾಣ : ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ನಗರದಲ್ಲಿ ಅಭಿನವ ಶ್ರೀಗಳು ಅಭಿನವ ಘನಲಿಂಗ ಜೋಳಿಗೆಯೊಂದಿಗೆ ಪಾದಯತ್ರೆ ನಡೆಸಿದರು.

ಈ ಬಗ್ಗೆ ಜಾಗೃತಿ ಮೂಡಿಸಲು ತಮ್ಮ ಜನ್ಮದಿನ ಮತ್ತು ವರ್ಧಂತಿ ಮಹೋತ್ಸವದ ನಿಮಿತ್ತ ನಗರದಲ್ಲಿ ಪಾದಯಾತ್ರೆ ನಡೆಸಿ ದುಶ್ಚಟಗಳನ್ನು ಜೋಳಿಗೆಗೆ ಹಾಕಿ ಎಂದು ಬಿಕ್ಷೆ ಬೇಡುತ್ತಿದ್ದು, ಚಟಗಳಿಂದ ಮುಕ್ತರಾಗಿ ಆರೋಗ್ಯ ವಂತರಾಗಿ, ವ್ಯಸನ ಮುಕ್ತ, ಅರೋಗ್ಯ ಪೂರ್ಣ ಸಮಾಜ ನಿರ್ಮಾಣಕ್ಕೆ ಕೈಜೋಡಿಸುವಂತೆ ಕೇಳಿಕೊಳ್ಳಲಾಗುತ್ತಿದೆ ಎಂದರು.

ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಜಾಗೃತಿ ಮೂಡಿಸಬೇಕು ಎನ್ನುವದು ಅಭಿನವ ಶ್ರೀಗಳ ಮೂರು ವರ್ಷದ ಸಂಕಲ್ಪವಾಗಿದೆ. ಈ ಕಾರ್ಯಕ್ಕೆ ಇಂದು ಚಾಲನೆ ಸಿಕ್ಕಿದೆ. ಜೋಳಿಗೆ ಪಾದಯಾತ್ರೆ ವೇಳೆ ನೂರಾರು ಜನ ತಂಬಾಕು, ಸಿಗರೇಟ್‌ಗಳನ್ನು ಜೋಳಿಗೆಗೆ ಹಾಕಿ ಚಟ ಬಿಡುವುದಾಗಿ ಸಂಕಲ್ಪ ಮಾಡಿರುವದು ಸಂತಸ ತಂದಿದೆ ಎಂದರು. ಬಿಜೆಪಿ ಮುಖಂಡ ಶರಣು ಸಲಗರ್, ಯುವ ಮುಖಂಡರಾದ ಶಿವಕುಮಾರ ಬಿರಾದಾರ, ರತಿಕಾಂತ ಶಿರ್ಶೆವಾಡಿ ಮಾತನಾಡಿ ಶ್ರೀಗಳು ಜೋಳಿಗೆ ಹಿಡಿದು ಪಾದಯಾತ್ರೆ ನಡೆಸುವ ಮೂಲಕ ದುಶ್ಚಟಗಳ ವಿರುದ್ಧ ಜಾಗೃತಿ ಮೂಡಿಸುವಲ್ಲಿ ಮಹತ್ವದ ಕಾರ್ಯಕ್ಕೆ ಮುಂದಾಗಿದ್ದಾರೆ. ಇವರ ಕಾರ್ಯ ಇತರರಿಗೆ ಮಾದರಿಯಾಗಲಿ ಎಂದರು.

ಕೌಡಿಯಾಳದ ಫಾದರ್ ಬಾಮು, ಮೌಲಾನಾ ಅಕ್ಬರಲಿ, ಗವಿಮಠದ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ, ಜಿಪಂ ಸದಸ್ಯ ಅಣ್ಣಾರಾವ ರಾಠೋಡ, ಆರ್‌ಎಸ್‌ಎಸ್‌ನ ಭಾಗ್ಯವಾಚಾರಿ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಶಿವಾನಂದ ಮೇತ್ರೆ, ಮುಖಂಡರಾದ ಅರ್ಜುನ ಕನಕ, ಮನೋಹರ್ ಮೈಸೆ, ನರಸಿಂಗರೆಡ್ಡಿ, ಚನ್ನವೀರ ಜಮಾದಾರ, ಲೋಕೇಶ ಮೊಳಕೆರೆ, ಮಲ್ಲಿಕಾರ್ಜುನ ನಂದಿ, ದಯಾನಂದ ಶೀಲವಂತ, ವೀರಣ್ಣ ಶೀಲವಂತ, ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ರುದ್ರೇಶ್ವರ ಸ್ವಾಮಿ, ಸಂಜೀವ ಗಾಯಕವಾಡ, ರೇವಣಯ್ಯ ಮಠಪತಿ, ಡಾ.ಬಸವರಾಜ ಸ್ವಾಮಿ, ಬಸವರಾಜ ಮಠಪತಿ, ಸಂಜುಕುಮಾರ ಸುಗರೆ, ಚಂದ್ರಕಾಂತ ಸ್ವಾಮಿ, ಚಂದ್ರಕಾಂತ ಪಾಟೀಲ್, ಬಸವರಾಜ ಪಾರಾ, ಸಾಗರ ದಂಡೋತಿ, ಅಮರ ಬಡದಾಳೆ ಸೇರಿದಂತೆ ಪ್ರಮುಖರು, ಗವಿ ಮಠದ ಭಕ್ತರು ಹಾಗೂ ವಿದ್ಯಾರ್ಥಿಗಳು ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು. ಪಾದಯಾತ್ರೆ ಆರಂಭಕ್ಕೂ ಮುನ್ನ ದೇವಸ್ಥಾನದಲ್ಲಿ ಅಭಿನವ ಶ್ರೀಗಳನ್ನು ಬಿಡಿವಿಸಿ ಅಧ್ಯಕ್ಷ ಮಲ್ಲಯ್ಯ ಸ್ವಾಮಿ ಹಿರೇಮಠ ಸನ್ಮಾನಿಸಿದರು. ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಶನಿವಾರ ಬೆಳಗ್ಗೆ 11ಕ್ಕೆ ತ್ರಿಪುರಾಂತ್‌ನ ಶ್ರಿ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿ ಮಠದಲ್ಲಿ ಜರುಗಲಿದೆ.

Scanned with OKEN Scanner

ಸೊಲ್ಲಾಪುರ ಸಂಸದ ಜಯಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ

ರುದ್ರಮುನಿ ಗವಿಮಠ ಶರಣರ ತಪೋ ತಾಣ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಘನಲಿಂಗ ರುದ್ರಮುನಿ ಗವಿಮಠವು ಐತಿಹಾಸಿಕ ಮಹತ್ವ ಪಡೆದಿದ್ದು 12 ನೇ ಶತಮಾನದ ಶರಣರ ತಪೋತಾಣವಾಗಿತ್ತು' ಎಂದು ಸೊಲ್ಲಾಪುರ ಸಂಸದ ಜಯಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಮಠದಲ್ಲಿ ಶನಿವಾರ ಆಯೋಜಿಸಿದ್ದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರ ಮಹೋತ್ಸವದಲ್ಲಿ ಅವರು ಮಾತನಾಡಿದರು.

'ಮಠದಲ್ಲಿ ಹೆಚ್ಚಿನ ಅಭಿವೃದ್ಧಿ ಆಗಬೇಕಾಗಿದ್ದು ಬೀದರ್ ಸಂಸದರ ಜತೆಯಲ್ಲಿ ನಾನು ಕೂಡ ಈ ಸ್ಥಳದ ವಿಕಾಸಕ್ಕೆ ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಅನುದಾನ ದೊರಕಿಸಲು ಪ್ರಯತ್ನಿಸುತ್ತೇನೆ. ಗುರುವಿನ ಮಹತ್ವ ಗೋವಿಂದನಕ್ಕಿಂತ ದೊಡ್ಡದಿದೆ. ತಂದೆ ತಾಯಿಯೇ ದೇವರಾಗಿದ್ದಾರೆ' ಎಂದರು.

ಸಂಸದ ಭಗವಂತ ಖೂಬಾ ಮಾತನಾಡಿ, 'ಜನಪ್ರತಿನಿಧಿಗಳು ಬರಿ ಮಾತನಾಡದೆ ಜನರ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿಸಬೇಕು. ಶರಣರು ಹಾಗೂ ಸಂತರು ಸಮಾಜ ಪರಿವರ್ತನೆಗೆ ಪ್ರಯತ್ನಿಸಿದ್ದು ಅವರ ಸಂದೇಶದ ಪಾಲನೆಯಾಗಲಿ' ಎಂದು ಅವರು ಹೇಳಿದರು.

ಬಿಜೆಪಿ ಮುಖಂಡ ಶರಣು ಸಲಗರ ಮಾತನಾಡಿ, 'ಜೀವನ ಇರುವವರೆಗೆ ಉತ್ತಮವಾದುದನ್ನು ಸಾಧಿಸಬೇಕು. ದರ್ಪ, ದೌರ್ಜನ್ಯದಿಂದ ಏನೂ ಸಾಧ್ಯವಿಲ್ಲ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ದುಶ್ಚಟ ಬಿಡಿಸುವುದಕ್ಕೆ ಜೋಳಿಗೆ ಯಾತ್ರೆ ನಡೆಸಿರುವುದು ಮಾದರಿ ಕಾರ್ಯ' ಎಂದರು.

ಪ್ರೊ.ರುದ್ರೇಶ್ವರ ಗೋರಟಾ, ಬಸವರಾಜ ಪಾರಾ ಮಾತನಾಡಿದರು. ಓಂನಾಥ ಪಾಟೀಲ ಹಾಗೂ ದಯಾನಂದ ಶೀಲವಂತ ದಂಪತಿಗಳಿಂದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ತುಲಾಭಾರ ನೆರವೇರಿಸಲಾಯಿತು. ನಗರಸಭೆ ಮಾಜಿ ಅಧ್ಯಕ್ಷ ಮೀರ್ ಅಜರಅಲಿ ನವರಂಗ ಅವರ ವಿಶೇಷ ಸನ್ಮಾನ ನಡೆಯಿತು.

ಜಿಲ್ಲಾ ಪಂಚಾಯಿತಿ ಸದಸ್ಯರಾದ ಗುಂಡುರೆಡ್ಡಿ, ಅಣ್ಣಾರಾವ್ ರಾಠೋಡ, ಶಿವರಾಜ ನರಶೆಟ್ಟಿ, ಬಾಬು ಹೊನ್ನಾನಾಯಕ್, ಅರ್ಜುನ ಕನಕ, ವಿಜಯಕುಮಾರ ಮಂಠಾಳೆ, ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಶರಣಪ್ಪ ಬಿರಾದಾರ, ಅನಿಲ ಪಾಟೀಲ, ಸಾಗರ ದಂಡೋತಿ ಪಾಲ್ಗೊಂಡಿದ್ದರು.



ಬಸವಕಲ್ಯಾಣದಲ್ಲಿ ಶನಿವಾರ ನಡೆದ ಪಟ್ಟಾಧಿಕಾರ ಮಹೋತ್ಸವದಲ್ಲಿ ಸೊಲ್ಲಾಪುರ ಸಂಸದ ಜಯಸಿದ್ಧೇಶ್ವರ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು

MBBS
SMOLENSK STATE MEDICAL UNIVERSITY, RUSSIA

ಪ್ರಜಾವಾಣಿ ಭಾನುವಾರ • ಸೆಪ್ಟೆಂಬರ್ 29, 2019

ಅಭಿನವ ಶ್ರೀಗಳ ಜನ್ಮದಿನ: ವಿವಿಧೆಡೆ ಸ್ವಚ್ಛತಾ ಕಾರ್ಯ



ಬಸವಕಲ್ಯಾಣ: ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದ ಅಂಗವಾಗಿ ಪ್ರಮುಖ ವೃತ್ತಗಳಲ್ಲಿ ಸ್ವಚ್ಛತಾ ಕಾರ್ಯ ನಡೆಯಿತು.

ಬಸವಕಲ್ಯಾಣ: ಇಲ್ಲಿನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರ ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದ ಅಂಗವಾಗಿ ನಗರದ ಪ್ರಮುಖ ವೃತ್ತಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಯಿತು.

ನಗರದ ಡಾ। ಬಿ.ಆರ್. ಅಂಬೇಡ್ಕರ್ ವೃತ್ತ, ಶಿವಾಜಿ ವೃತ್ತ ಮತ್ತು ನಿಲಾಂಬಿಕಾ ಕಾಲೇಜಿನ ಸುತ್ತಮುತ್ತ ಸ್ವಚ್ಛತಾ ಕಾರ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಎಲ್ಲ ಸಂಘಟನೆ ಪದಾಧಿಕಾರಿಗಳು ಮತ್ತು ಕಾಲೇಜಿನ ವಿದ್ಯಾರ್ಥಿಗಳ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪ್ರಾಚಾರ್ಯ ಸುರೇಶ ಅಕ್ಕಣ್ಣ ಎನ್‌ಎಸ್‌ಎಸ್ ಅಧಿಕಾರಿ ಶಿವರಾಜ ಬೆಲ್ಲಾಪುರೆ, ಉಪನ್ಯಾಸಕ ಅಧ್ಯಕ್ಷ ನರಸಿಂಗರೆಡ್ಡಿ ಗದ್ಲೇಗಾಂವ, ಅಶ್ವಿನ ಗೊರ್ಟೆ, ಶ್ರೀನಿವಾಸ ಸಿಂಧೆ, ಉಪನ್ಯಾಸಕಿ ವಿದ್ಯಾ, ದೇವರಾಜ ಉಬ್ಬಣ್ಣ, ಬಸಂತಪ್ಪ ಲವಾರೆ, ವೀರಣ್ಣ ಶೀಲವಂತ, ಸಿದ್ದರಾಮ ಪಾಟೀಲ, ಮಲ್ಲಿಕಾರ್ಜುನ ನಂದಿ, ಬಾಬುರಾವ ಉಳ್ಳೆ, ಬಸವರಾಜ ಪಾರಾ, ಸಾಗರ ದಂಡೋತಿ, ಬಸವರಾಜ ಅಲಶೇಟ್ಟಿ, ಸುನೀಲ ಚಪಾತೆ, ಮಹಾದೇವ ಖಂಡಾಳೆ, ಮಹಾಂತಯ್ಯಸ್ವಾಮಿ, ರತಿಕಾಂತ ಕೋಹಿನೂರ ಅಂಬ್ರೀಶಸ್ವಾಮಿ, ಲೋಕೇಶ ಮೋಳಕೆರೆ, ನವನಾಥ ಮೇತ್ರೆ, ನವೀನ ಗುಂಗೆ, ಅನೀಲ ತ್ರಿಪುರಾಂತ ಇದ್ದರು.

ಉದಯವಾಣಿ ಕಲಬುರಗಿ
ಶುಕ್ರವಾರ, ಸೆಪ್ಟೆಂಬರ್ 27, 2019

100 ಸಸಿ ನೆಟ್ಟು ಪಟ್ಟಾಧಿಕಾರ ವರ್ಧಂತಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಇಲ್ಲಿನ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರ ವರ್ಧಂತಿ ಅಂಗವಾಗಿ ಗುರುವಾರ ಇಲ್ಲಿನ ವೈಷ್ಣವಿ ಓಣಿಯಲ್ಲಿ ಸಸಿಗಳನ್ನು ನೆಡಲಾಯಿತು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಸಿಗಳನ್ನು ನೆಟ್ಟು ನೀರೆರೆದರು. 100 ಸಸಿಗಳನ್ನು ನೆಡಲಾಯಿತು.

ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ವೀರಶೈವ ಸಂಘಟನಾ ವೇದಿಕೆ ವಿಭಾಗೀಯ ಅಧ್ಯಕ್ಷ ಬಸವರಾಜ ಪಾರಾ, ತಾಲ್ಲೂಕು ಘಟಕದ ಅಧ್ಯಕ್ಷ ಅನಿಲ ಪಾಟೀಲ, ಸಾಗರ ದಂಡೋತಿ, ಬಸವರಾಜ ಅಲಶೆಟ್ಟಿ, ಸುನಿಲ ಚಪಾತೆ, ಮಹಾಂತಯ್ಯ ಸ್ವಾಮಿ, ರಾಚಯ್ಯ, ವೀರಶೆಟ್ಟಿ ಪಾಟೀಲ, ಅಮರ ಬಡದಾಳೆ, ನವೀನ ಗುಂಗೆ, ಸಂಜೀವ ಭೋಸ್ಗಾ ಪಾಲ್ಗೊಂಡಿದ್ದರು.

ಇಲ್ಲಿನ ಶಿವಾಜಿ ಪಾರ್ಕ್ ಹಾಗೂ ನೀಲಾಂಬಿಕಾ ಕಾಲೇಜಿನ ಅವರಣದಲ್ಲಿ ಈಚೆಗೆ ಸ್ವಚ್ಛತಾ ಕಾರ್ಯಕ್ರಮ ನಡೆಯಿತು.



ಪ್ರಜಾವಾಣಿ ಶುಕ್ರವಾರ • ಸೆಪ್ಟೆಂಬರ್ 27, 2

Scanned with OKEN Scanner

ಸೊಲ್ಲಾಪುರ ಸಂಸದ ಜಯಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ

ರುದ್ರಮುನಿ ಗವಿಮಠ ಶರಣರ ತಪೋ ತಾಣ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಘನಲಿಂಗ ರುದ್ರಮುನಿ ಗವಿಮಠವು ಐತಿಹಾಸಿಕ ಮಹತ್ವ ಪಡೆದಿದ್ದು 12 ನೇ ಶತಮಾನದ ಶರಣರ ತಪೋತಾಣವಾಗಿತ್ತು' ಎಂದು ಸೊಲ್ಲಾಪುರ ಸಂಸದ ಜಯಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಮಠದಲ್ಲಿ ಶನಿವಾರ ಆಯೋಜಿಸಿದ್ದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರ ಮಹೋತ್ಸವದಲ್ಲಿ ಅವರು ಮಾತನಾಡಿದರು.

'ಮಠದಲ್ಲಿ ಹೆಚ್ಚಿನ ಅಭಿವೃದ್ಧಿ ಆಗಬೇಕಾಗಿದ್ದು ಬೀದರ್ ಸಂಸದರ ಜತೆಯಲ್ಲಿ ನಾನು ಕೂಡ ಈ ಸ್ಥಳದ ವಿಕಾಸಕ್ಕೆ ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಅನುದಾನ ದೊರಕಿಸಲು ಪ್ರಯತ್ನಿಸುತ್ತೇನೆ. ಗುರುವಿನ ಮಹತ್ವ ಗೋವಿಂದನಕ್ಕಿಂತ ದೊಡ್ಡದಿದೆ. ತಂದೆ ತಾಯಿಯೇ ದೇವರಾಗಿದ್ದಾರೆ' ಎಂದರು.

ಸಂಸದ ಭಗವಂತ ಖೂಬಾ ಮಾತನಾಡಿ, 'ಜನಪ್ರತಿನಿಧಿಗಳು ಬರಿ ಮಾತನಾಡದೆ ಜನರ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿಸಬೇಕು. ಶರಣರು ಹಾಗೂ ಸಂತರು ಸಮಾಜ ಪರಿವರ್ತನೆಗೆ ಪ್ರಯತ್ನಿಸಿದ್ದು ಅವರ ಸಂದೇಶದ ಪಾಲನೆಯಾಗಲಿ' ಎಂದು ಅವರು ಹೇಳಿದರು.



ಬಸವಕಲ್ಯಾಣದಲ್ಲಿ ಶನಿವಾರ ನಡೆದ ಪಟ್ಟಾಧಿಕಾರ ಮಹೋತ್ಸವದಲ್ಲಿ ಸೊಲ್ಲಾಪುರ ಸಂಸದ ಜಯಸಿದ್ಧೇಶ್ವರ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು

ಬಿಜೆಪಿ ಮುಖಂಡ ಶರಣು ಸಲಗರ ಮಾತನಾಡಿ, 'ಜೀವನ ಇರುವವರೆಗೆ ಉತ್ತಮವಾದುದನ್ನು ಸಾಧಿಸಬೇಕು. ದರ್ಪ, ದೌರ್ಜನ್ಯದಿಂದ ಏನೂ ಸಾಧ್ಯವಿಲ್ಲ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ದುಶ್ಚಟ ಬಿಡಿಸುವುದಕ್ಕೆ ಜೋಳಿಗೆ ಯಾತ್ರೆ ನಡೆಸಿರುವುದು ಮಾದರಿ ಕಾರ್ಯ' ಎಂದರು.

ಪ್ರೊ.ರುದ್ರೇಶ್ವರ ಗೋರಟಾ, ಬಸವರಾಜ ಪಾರಾ ಮಾತನಾಡಿದರು. ಓಂನಾಥ ಪಾಟೀಲ ಹಾಗೂ ದಯಾನಂದ ಶೀಲವಂತ ದಂಪತಿಗಳಿಂದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ತುಲಾಭಾರ ನೆರವೇರಿಸಲಾಯಿತು. ನಗರಸಭೆ ಮಾಜಿ ಅಧ್ಯಕ್ಷ ಮೀರ್ ಅಜರಅಲಿ ನವರಂಗ ಅವರ ವಿಶೇಷ ಸನ್ಮಾನ ನಡೆಯಿತು.

ಜಿಲ್ಲಾ ಪಂಚಾಯಿತಿ ಸದಸ್ಯರಾದ ಗುಂಡುರೆಡ್ಡಿ, ಅಣ್ಣಾರಾವ್ ರಾಠೋಡ, ಶಿವರಾಜ ನರಶೆಟ್ಟಿ, ಬಾಬು ಹೊನ್ನಾನಾಯಕ್, ಅರ್ಜುನ ಕನಕ, ವಿಜಯಕುಮಾರ ಮಂಠಾಳೆ, ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಶರಣಪ್ಪ ಬಿರಾದಾರ, ಅನಿಲ ಪಾಟೀಲ, ಸಾಗರ ದಂಡೋತಿ ಪಾಲ್ಗೊಂಡಿದ್ದರು.

MBBS
SMOLENSK STATE MEDICAL UNIVERSITY, RUSSIA

ಪ್ರಜಾವಾಣಿ ಶುಕ್ರವಾರ • ಸೆಪ್ಟೆಂಬರ್ 27, 2019

ಅಭಿನವ ಶ್ರೀಗಳ ಜನ್ಮದಿನ: ವಿವಿಧೆಡೆ ಸ್ವಚ್ಛತಾ ಕಾರ್ಯ



ಬಸವಕಲ್ಯಾಣ: ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದ ಅಂಗವಾಗಿ ಪ್ರಮುಖ ವೃತ್ತಗಳಲ್ಲಿ ಸ್ವಚ್ಛತಾ ಕಾರ್ಯ ನಡೆಯಿತು.

ಬಸವಕಲ್ಯಾಣ: ಇಲ್ಲಿನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರ ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದ ಅಂಗವಾಗಿ ನಗರದ ಪ್ರಮುಖ ವೃತ್ತಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಯಿತು.

ನಗರದ ಡಾ। ಬಿ.ಆರ್. ಅಂಬೇಡ್ಕರ್ ವೃತ್ತ, ಶಿವಾಜಿ ವೃತ್ತ ಮತ್ತು ನಿಲಾಂಬಿಕಾ ಕಾಲೇಜಿನ ಸುತ್ತಮುತ್ತ ಸ್ವಚ್ಛತಾ ಕಾರ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಎಲ್ಲ ಸಂಘಟನೆ ಪದಾಧಿಕಾರಿಗಳು ಮತ್ತು ಕಾಲೇಜಿನ ವಿದ್ಯಾರ್ಥಿಗಳ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪ್ರಾಚಾರ್ಯ ಸುರೇಶ ಅಕ್ಕಣ್ಣ ಎನ್.ಎಸ್.ಎಸ್ ಅಧಿಕಾರಿ ಶಿವರಾಜ ಬೆಲ್ಲಾಪುರೆ, ಉಪನ್ಯಾಸಕ ಅಧ್ಯಕ್ಷ ನರಸಿಂಗರೆಡ್ಡಿ ಗದ್ಲೇಗಾಂವ, ಆಶ್ವಿನ ಗೊರ್ಟೆ, ಶ್ರೀನಿವಾಸ ಸಿಂಧೆ, ಉಪನ್ಯಾಸಕಿ ವಿದ್ಯಾ, ದೇವರಾಜ ಉಬ್ಬಣ್ಣ ಬಸಂತಪ್ಪ ಲವಾರೆ, ವೀರಣ್ಣ ಶೀಲವಂತ, ಸಿದ್ಧರಾಮ ಪಾಟೀಲ, ಮಲ್ಲಿಕಾರ್ಜುನ ನಂದಿ, ಬಾಬುರಾವ ಉಳ್ಳೆ, ಬಸವರಾಜ ಪಾರಾ, ಸಾಗರ ದಂಡೋತಿ, ಬಸವರಾಜ ಆಲಶೆಟ್ಟಿ, ಸುನೀಲ ಚಪಾತೆ, ಮಹಾದೇವ ಖಂಡಾಳೆ, ಮಹಾಂತಯ್ಯಸ್ವಾಮಿ, ರತಿಕಾಂತ ಕೋಹಿನೂರ ಅಂಬ್ರೀಶಸ್ವಾಮಿ, ಲೋಕೇಶ ಮೋಳಕೆರೆ, ನವನಾಥ ಮೇತ್ರೆ, ನವೀನ ಗುಂಗೆ, ಅನೀಲ ತ್ರಿಪುರಾಂತ ಇದ್ದರು.

ಉದಯವಾಣಿ ಕಲಬುರಗಿ
ಶುಕ್ರವಾರ, ಸೆಪ್ಟೆಂಬರ್ 27, 2019

100 ನೇ ಸುತ್ತು ಪಟ್ಟಾಧಿಕಾರ ವರ್ಧಂತಿ



ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಇಲ್ಲಿನ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರ ವರ್ಧಂತಿ ಅಂಗವಾಗಿ ಗುರುವಾರ ಇಲ್ಲಿನ ನೈಸ್ಸಿ ಟೊಯೆಲ್ಲಿ ಸಗಳನ್ನು ನಡೆಸಲಾಯಿತು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಗಳನ್ನು ಸುತ್ತು ನೀಡಿದರು. 100 ಸಗಳನ್ನು ನಡೆಸಲಾಯಿತು.

ಪ್ರಮುಖರಾದ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ವೀರಶೈವ ಸಂಘಟನಾ ವಿಭಾಗೀಯ ಅಧ್ಯಕ್ಷ ಬಸವರಾಜ ಪಾರಾ, ಕಾಲ್ಗುಲು ಘಟಕದ ಅಧ್ಯಕ್ಷ ಅನಿಲ ಪಾಟೀಲ, ಸಾಗರ ದಂಡೋತಿ, ಬಸವರಾಜ ಆಲಶೆಟ್ಟಿ, ಸುನೀಲ ಚಪಾತೆ, ಮಹಾದೇವ ಖಂಡಾಳೆ, ಮಹಾಂತಯ್ಯಸ್ವಾಮಿ, ರತಿಕಾಂತ ಕೋಹಿನೂರ ಅಂಬ್ರೀಶಸ್ವಾಮಿ, ಲೋಕೇಶ ಮೋಳಕೆರೆ, ನವನಾಥ ಮೇತ್ರೆ, ನವೀನ ಗುಂಗೆ, ಅನೀಲ ತ್ರಿಪುರಾಂತ ಇದ್ದರು.

ಪ್ರಜಾವಾಣಿ ಶುಕ್ರವಾರ • ಸೆಪ್ಟೆಂಬರ್ 27, 20

Scanned with OKEN Scanner

ದುಶ್ಚಟ ತ್ಯಜಿಸಲು ಜೋಳಿಗೆ

ರುದ್ರಮುನಿ ಶ್ರೀ ಪಾದಯಾತ್ರೆ | ವರ್ಧಂತಿ ಮಹೋತ್ಸವ ನಿಮಿತ್ತ ಅರ್ಥಪೂರ್ಣ ಅಭಿಯಾನ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನ, ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ನಗರದಲ್ಲಿ ಶುಕ್ರವಾರ ಅಭಿನವ ಘನಲಿಂಗ ಜೋಳಿಗೆ ಪಾದಯಾತ್ರೆ ಜರುಗಿತು.

ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ನೆರವೇರಿಸಿದ ನಂತರ ಪ್ರಮುಖ ಮಾರ್ಗಗಳ ಮೂಲಕ ತ್ರಿಪುರಾಂತ ಪ್ರವಾಸಿ ಮಂದಿರವರೆಗೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಜೋಳಿಗೆ ಹಿಡಿದು ಹೆಜ್ಜೆ ಹಾಕಿದರು. ಮಾರ್ಗದುದ್ದಕ್ಕೂ ಶ್ರೀಗಳು ಬನ್ನಿ ನಿಮ್ಮೆಲ್ಲ ದುಶ್ಚಟಗಳನ್ನು ನನ್ನ ಜೋಳಿಗೆಗೆ ಹಾಕಿ. ಧರ್ಮವಂತ, ಆರೋಗ್ಯವಂತರಾಗಿ ಸದೃಢ ಸಮಾಜ ಕಟ್ಟೋಣ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

> » ಗವಿಮಠದಲ್ಲಿ ಇಂದು ನಡೆಯಲಿದೆ ಶ್ರೀಗಳ ಜನ್ಮ ದಿನ, ಪಟ್ಟಾಧಿಕಾರ ವರ್ಧಂತಿ ಕಾರ್ಯಕ್ರಮ

ಶ್ರೀಗಳ ಜತೆಗೆ ಗಣ್ಯರು, ಮುಖಂಡರು, ಭಕ್ತರು ಹೆಜ್ಜೆ ಹಾಕಿದರು. ಪಾದಯಾತ್ರೆ ವೇಳೆ ಹಲವರು ಗುಟ್ಕಾ ಪ್ಯಾಕೆಟ್, ತಂಬಾಕು ಪುಡಿ, ಬೀಡಿ, ಸಿಗರೇಟ್ ಜೋಳಿಗೆಗೆ ಹಾಕಿದರು. ಇಂದಿನಿಂದಲೇ ಈ ಚಟಗಳಿಂದ ಮುಕ್ತರಾಗುತ್ತೇವೆ ಎಂದು ಸಂಕಲ್ಪ ಮಾಡಿದರು. ಶ್ರೀಗಳ ಜೋಳಿಗೆ ಯಾತ್ರೆ ದುಶ್ಚಟಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಜತೆಗೆ ಆರೋಗ್ಯದ ಮಹತ್ವವೂ ಸಾರಿತು.

ಬಿಜೆಪಿ ಮುಖಂಡ ಶರಣು ಸಲಗರ ಮಾತನಾಡಿ, ಉತ್ತಮ ರಸ್ತೆ, ದೊಡ್ಡ ದೊಡ್ಡ ಕಟ್ಟಡ ನಿರ್ಮಾಣವಾದರೆ ಅಭಿವೃದ್ಧಿ ಅಥವಾ ಬದಲಾವಣೆ ಆಗಿದೆ ಎಂದು ಹೇಳಲಿಕ್ಕಾಗದು. ಬೌದ್ಧಿಕ ಮತ್ತು ಸಾಮಾಜಿಕ ಬದಲಾವಣೆ ಮುಖ್ಯವಾಗಿದೆ. ಇಂದು ಅನೇಕ ಯುವಕರು ದುಶ್ಚಟಕ್ಕೆ ಬಲಿ ಆಗುತ್ತಿರುವುದರಿಂದ ದೇಶದ ಸಂಪನ್ಮೂಲ ಮಣ್ಣು ಪಾಲಾಗುತ್ತಿದೆ. ದುಶ್ಚಟಗಳಿಂದ ದೂರವಿರುವ ಸಮಾಜ ಅಭಿವೃದ್ಧಿಯತ್ತ ಹೆಜ್ಜೆ ಹಾಕುತ್ತದೆ ಎಂದರು.



ವಿಜಯವಾಣಿ

ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಯುವ ಮುಖಂಡರಾದ ಶಿವಕುಮಾರ ಬಿರಾದಾರ, ರತಿಕಾಂತ ಸರ್ಸಿವಾಡಿ ಅವರು ಶ್ರೀಗಳ ಅಭಿಯಾನ ಶ್ಲಾಘಿಸಿದರು. ಪಾದಯಾತ್ರೆ ಆರಂಭಕ್ಕೂ ಮುನ್ನ ಬಸವೇಶ್ವರ ದೇವಸ್ಥಾನದಲ್ಲಿ ಅಭಿನವ ಶ್ರೀಗಳನ್ನು ಬಿಡಿಪಿಸಿ ಅಧ್ಯಕ್ಷ ಮಲ್ಲಯ್ಯ ಸ್ವಾಮಿ ಹಿರೇಮಠ ಗೌರವಿಸಿದರು.

ಫಾದರ್ ಬಾಪು, ಮೌಲಾನಾ ಅಕ್ಬರ್ ಅಲಿ, ಗವಿಮಠದ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ, ಜಿಪಂ ಸದಸ್ಯ ಅಣ್ಣಾರಾವ ರಾಠೋಡ್, ಆರ್‌ಎಸ್‌ಎಸ್ ಜಿಲ್ಲಾ ಕಾರ್ಯವಾಹ ಭಾರ್ಗವ್ ಬಾರಿ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಶಿವಾನಂದ ಮೇತ್ರೆ, ಪ್ರಮುಖರಾದ ಅರ್ಜುನ ಕನಕ, ಮನೋಹರ ಮೈಸೆ, ನರಸಿಂಗರಡ್ಡಿ, ಚನ್ನವೀರ ಜಮಾದಾರ, ಲೋಕೇಶ ಮೊಳಕೆರೆ, ಅನೀಲ ಪಾಟೀಲ್, ಮಲ್ಲಿಕಾರ್ಜುನ ನಂದಿ, ದಯಾನಂದ ಶೀಲವಂತ, ವೀರಣ್ಣ ಶೀಲವಂತ, ಸೂರ್ಯಕಾಂತ ಶೀಲವಂತ, ರುದ್ರೇಶ್ವರ ಸ್ವಾಮಿ, ಸಂಜೀವ ಗಾಯಕವಾಡ, ರೇವಣಯ್ಯ ಮಠಪತಿ, ಡಾ.ಬಸವರಾಜ ಸ್ವಾಮಿ, ಬಸವರಾಜ ಮಠಪತಿ, ಸಂಜುಕುಮಾರ ಸುಗರೆ, ಚಂದ್ರಕಾಂತ ಸ್ವಾಮಿ, ಚಂದ್ರಕಾಂತ ಪಾಟೀಲ್, ಬಸವರಾಜ ಪಾರಾ, ಸಾಗರ ದಂಡೋತಿ, ಅಮರ ಬಡದಾಳೆ, ನವೀನ್ ಗುಂಗೆ, ಮಹಾಂತಯ್ಯ ಸ್ವಾಮಿ ಇತರರಿದ್ದರು.

ಶನಿವಾರ ಬೆಳಗ್ಗೆ 11ಕ್ಕೆ ತ್ರಿಪುರಾಂತ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಶ್ರೀಗಳ ಜನ್ಮ ದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಡೆಯಲಿದೆ.

ಬಸವಕಲ್ಯಾಣದಲ್ಲಿ ಶನಿವಾರ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಜೋಳಿಗೆ ಹಿಡಿದು ಪಾದಯಾತ್ರೆ ನಡೆಸಿ ದುಶ್ಚಟಗಳನ್ನು ತ್ಯಜಿಸುವಂತೆ ಸಾರ್ವಜನಿಕರಲ್ಲಿ ಬೇಡಿಕೊಂಡರು. ಫಾದರ್ ಬಾಪು, ಅಣ್ಣಾರಾವ ರಾಠೋಡ್, ಅರ್ಜುನ ಕನಕ, ಶರಣು ಸಲಗರ, ಮನೋಹರ ಮೈಸೆ, ವೀರಣ್ಣ ಶೀಲವಂತ ಇತರರಿದ್ದರು.

ದುಶ್ಚಟಗಳು ಸಮಾಜದ ದೊಡ್ಡ ಪಿಡುಗು. ಯುವಸಮೂಹಕ್ಕೆ ಇದು ಕುತ್ತಾಗಿ ಪರಿಣಮಿಸಿದೆ. ಇದರ ವಿರುದ್ಧ ಜಾಗೃತಿ ಮೂಡಿಸಬೇಕೆಂಬುದು ಸಂಕಲ್ಪ. ಪ್ರತಿಯೊಬ್ಬರೂ ಆರೋಗ್ಯವಂತರಾಗಿದ್ದರೆ ಸುಂದರ ಸಮಾಜ ನಿರ್ಮಾಣ ಸಾಧ್ಯ. ಇಂಥ ಅಭಿಯಾನ ನಿರಂತರ ಹಮ್ಮಿಕೊಳ್ಳಲಾಗುವುದು. ಎಲ್ಲರೂ ಕೈಜೋಡಿಸಬೇಕು.

| ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯ
ಗವಿಮಠ ಬಸವಕಲ್ಯಾಣ

ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು. ಈ ನಿಟ್ಟಿನಲ್ಲಿ ಅಭಿನವ ಶ್ರೀಗಳು ಮಾಡುತ್ತಿರುವ ಜೋಳಿಗೆ ಅಭಿಯಾನ ಮಹತ್ವಪೂರ್ಣ ಹಾಗೂ ಮಾದರಿಯಾಗಿದೆ. ಪಾದಯಾತ್ರೆ ವೇಳೆ ನೂರಾರು ಜನರು ತಂಬಾಕು, ಸಿಗರೇಟ್ ತಂದು ಜೋಳಿಗೆಗೆ ಹಾಕಿ ಚಟ ಬಿಡುವುದಾಗಿ ಪ್ರಮಾಣ ಮಾಡಿರುವುದು ಖುಷಿ ತಂದಿದೆ.

| ಬಸವಂತಪ್ಪ ಲವಾರೆ
ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ



ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನದ ನಿಮಿತ್ತ ಬಸವಕಲ್ಯಾಣದ ವೈಷ್ಣವಿ ಕಾಲನಿಯಲ್ಲಿ ಸಸಿ ನೆಡಲಾಯಿತು. ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂದಿ, ಅನೀಲ ಪಾಟೀಲ್, ಬಸವರಾಜ ಪಾರಾ, ಬಸವರಾಜ ಅಲ್ಲುಶೆಟ್ಟಿ, ಸುನೀಲ ಚಪಾತೆ, ಸಾಗರ ದಂಡೋತಿ, ಮಹಾಂತಯ್ಯ ಸ್ವಾಮಿ, ಅಮರ ಬಡದಾಳೆ, ನವೀನ್ ಗುಂಗೆ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » KALABURAGI
ಶನಿವಾರ 28 ಸೆಪ್ಟೆಂಬರ್ 2019
28 SEPTEMBER 2019

ಹಾರಕೂಡ ಶ್ರೀಗಳಿಗೆ ಪ್ರಶಸ್ತಿ : ಅಭಿನವ ಶ್ರೀಗಳ ಹರ್ಷ

ಸಂ.ಕ.ಸಮಾಚಾರ ಬಸವಕಲ್ಯಾಣ



ಶಿವಾಚಾರ್ಯರತ್ನ,ಧರ್ಮರತ್ನ,ಹಾರಕೂಡನ ಶ್ರೀ ಡಾ.ಚೆನ್ನವೀರ ಶಿವಾಚಾರ್ಯರಿಗೆ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿರುವುದು ಅಪಾರ ಸಂತಸವನ್ನುಂಟು ಮಾಡಿದೆ ಎಂದು ತ್ರಿಪುರಾಂತ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದ್ದಾರೆ.

ಧರ್ಮ, ಆಧ್ಯಾತ್ಮದ ಜತೆಗೆ, ಕಲೆ, ಸಾಹಿತ್ಯ, ಸಂಸ್ಕೃತಿ ಸೇರಿದಂತೆ ಸಾಮಾಜಿಕ ವ್ಯವಸ್ಥೆ ಸುಧಾರಣೆಗಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶ್ರೀಗಳು ಅಪಾರ ಕೆಲಸ ಮಾಡಿದ್ದಾರೆ. ಶ್ರೀಗಳು ತಮ್ಮ ಮಠದಿಂದ ಇಲ್ಲಿಯವರೆಗೆ 83 ಕೃತಿಗಳನ್ನು ಪ್ರಕಟಿಸುವ ಮೂಲಕ ಸಾಹಿತ್ಯ ಕ್ಷೇತ್ರ ಸಮೃದ್ಧಿಗೊಳಿಸಿದ್ದಾರೆ. ನಾಡಿನ ಕಲಾವಿದರನ್ನು, ಸಾಹಿತಿಗಳನ್ನು ಗುರುತಿಸಿ ಪ್ರತಿವರ್ಷ ಪ್ರಶಸ್ತಿಯನ್ನು ನೀಡುವ ಮೂಲಕ ಪ್ರತಿಭಾನ್ವಿತರನ್ನು ಪ್ರೋತ್ಸಾಹಿಸುತ್ತಿರುವ ಹಾರಕೂಡ ಶ್ರೀಗಳಿಗೆ ರಾಜ್ಯೋತ್ಸವ ಪ್ರಶಸ್ತಿ ದೊರಕಿರುವುದು ನಮ್ಮೆಲ್ಲರಿಗೂ ಅತಿ ಸಂತೋಷವನ್ನುಂಟು ಮಾಡಿದೆ ಎಂದು ತ್ರಿಪುರಾಂತ ಶ್ರೀಗಳು ತಿಳಿಸಿದ್ದಾರೆ.



ಬಸವಕಲ್ಯಾಣ ಬೇಲೂರು ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ರೇವಣಸಿದ್ದಯ್ಯ ಮಠಪತಿ ಅವರಿಗೆ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಸನ್ಮಾನಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸೇರಿ ಅನೇಕರಿದ್ದರು.

ಸಂಯುಕ್ತ ಕರ್ನಾಟಕ
ಬುಧವಾರ, 30, ಅಕ್ಟೋಬರ್, 2019, ಕಲಬುರಗಿ

Scanned with OKEN Scanner

ದುಶ್ಚಟ ಬಿಡಿಸಲು ಜೋಳಿಗೆ ಯಾತ್ರೆ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದಲ್ಲಿ ಶುಕ್ರವಾರ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ದುಶ್ಚಟ ಬಿಡಿಸುವುದಕ್ಕಾಗಿ ಜೋಳಿಗೆ ಯಾತ್ರೆ ನಡೆಸಿದರು

ಬಸವಕಲ್ಯಾಣ: ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪಟ್ಟಾಧಿಕಾರಿ ವರ್ಧಂತಿ ಅಂಗವಾಗಿ ಶುಕ್ರವಾರ ದುಶ್ಚಟ ಬಿಡಿಸುವುದಕ್ಕಾಗಿ ಪಟ್ಟಣದಲ್ಲಿ ಜೋಳಿಗೆ ಯಾತ್ರೆ ಕೈಗೊಂಡರು.

ಬಸವೇಶ್ವರ ದೇವಸ್ಥಾನದಿಂದ ಮುಖ್ಯರಸ್ತೆ ಮೂಲಕ ತ್ರಿಪುರಾಂತದವರೆಗೆ ಪಾದಯಾತ್ರೆ ನಡೆಸಿದರು.

ಕೆಲವರು ಜೋಳಿಗೆಯಲ್ಲಿ ಗುಟ್ಕಾ, ಬೀಡಿ, ಸಿಗರೇಟ್, ತಂಬಾಕು ಹಾಕಿ ಇನ್ನು ಮುಂದೆ ಇವುಗಳನ್ನು ಜಗಿಯುವುದಿಲ್ಲವೆಂದು ಪ್ರಮಾಣ ಮಾಡಿದರು.

ಜಿಲ್ಲಾ ಪಂಚಾಯಿತಿ ಸದಸ್ಯ ಅಣ್ಣಾರಾವ್ ರಾಠೋಡ್, ಫಾದರ್ ಬಾಪು, ಹಿರಿಯ ಮುಖಂಡರಾದ ಅರ್ಜುನ ಕನಕ, ಮನೋಹರ ಮೈಸೆ, ಶರಣು ಸಲಗರ, ಸಂಜೀವ ಗಾಯಕವಾಡ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಶಿವಾನಂದ ಮೇತ್ರೆ, ಚಂದ್ರಕಾಂತಸ್ವಾಮಿ ನಾರಾಯಣಪುರ, ಬಸವಂತಪ್ಪ ಲವಾರೆ, ವೀರಣ್ಣ ಶೀಲವಂತ, ಡಾ.ಬಸವರಾಜ ಸ್ವಾಮಿ, ಬಸವರಾಜ ಪಾರಾ, ಲೋಕೇಶ ಮೋಳಕೆರೆ, ರತಿಕಾಂತ ಕೊಹಿನೂರ, ನರಸಿಂಗರೆಡ್ಡಿ ಗದ್ದೇಗಾಂವ, ಚನ್ನವೀರ ಜಮಾದಾರ, ರುದ್ರೇಶ್ವರ ಗೋರಟಾ, ಮಹಾಂತಯ್ಯ ಸ್ವಾಮಿ ಪಾಲ್ಗೊಂಡಿದ್ದರು.

ದೊಡ್ಡಪ್ಪ ಅಪ್ಪ ಬಿ.ಇಡಿ ಕಾಲೇಜು, ಪುಣ್ಯಕೋಟಿ ಕಾಲೇಜು, ನೀಲಾಂಬಿಕಾ ಕಾಲೇಜುಗಳ ವಿದ್ಯಾರ್ಥಿಗಳು ಕೂಡ ಪಾಲ್ಗೊಂಡು ದುಶ್ಚಟ ಬಿಟ್ಟರೆ ಸುಖಿ ಕುಟುಂಬ ಎಂಬ ಫಲಕ ಪ್ರದರ್ಶಿಸಿ ಜಾಗೃತಿ ಮೂಡಿಸಿದರು.

ಪ್ರಜಾವಾಣಿ ಶನಿವಾರ • ಸೆಪ್ಟೆಂಬರ್ 28, 2019

ದುಶ್ಚಟದಿಂದ ದೂರವಿರಲು ಜೋಳಿಗೆ ಪಾದಯಾತ್ರೆ

ತ್ರಿಪುರಾಂತನ ರುದ್ರಮುನಿ ಶಿವಾಚಾರ್ಯರ ಜನ್ಮ ದಿನೋತ್ಸವ ನಿಮಿತ್ತ ಪಾದಯಾತ್ರೆ



ಬಸವಕಲ್ಯಾಣದಲ್ಲಿ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಶುಕ್ರವಾರ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಜೋಳಿಗೆ ಹಿಡಿದು ಪಾದಯಾತ್ರೆ ನಡೆಸಿದರು.

• **ಕನ್ನಡಪ್ರಭ ವಾರ್ತೆ** ಬಸವಕಲ್ಯಾಣ

ನಗರದ ಶ್ರೀಪುರಾಂತನ ರುದ್ರಮುನಿ ಶಿವಾಚಾರ್ಯರ ಜನ್ಮ ದಿನೋತ್ಸವ ಹಾಗೂ ಪಟ್ಟಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಶುಕ್ರವಾರ ನಗರದ ಬಸವೇಶ್ವರ ದೇವಸ್ಥಾನದಿಂದ ತ್ರೀಪುರಾಂತ ವರೆಗೂ ಜೋಳಿಗೆ ಪಾದಯಾತ್ರೆ ನಡೆಸಲಾಯಿತು.

ಇದಕ್ಕೂ ಮುನ್ನ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಬಸವೇಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಈ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಶ್ರೀಗಳ ಭಕ್ತರು, ಅಭಿಮಾನಿಗಳು ಈ ಕಾರ್ಯಕ್ಕೆ ಕೈಜೋಡಿಸಿದರು. ದುಶ್ಚಟಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ವ್ಯಸನ ಮುಕ್ತ ಜೀವನಕ್ಕಾಗಿ ನಿಮ್ಮ ದುಶ್ಚಟಗಳನ್ನು ನನ್ನ ಜೋಳಿಗೆಯಲ್ಲಿ ಹಾಕಿ, ನೀವು ಆರೋಗ್ಯವಂತರಾಗಿರಿ ಎಂಬ ಧ್ಯೇಯ ವಾಕ್ಯದೊಂದಿಗೆ ಈ ಪಾದಯಾತ್ರೆ ಹಮ್ಮಿಕೊಳ್ಳಲಾಗಿತ್ತು. ಅನೇಕ ಯುವಕರು, ವಯಸ್ಕರು ತಮ್ಮ ಬಳಿ ಇದ್ದ ಗುಟಕಾ, ತಂಬಾಕು ಸೇರಿದಂತೆ ತಂಬಾಕು ಪದಾರ್ಥವುಳ್ಳ ಪದಾರ್ಥಗಳನ್ನು ಶ್ರೀಗಳ ಜೋಳಿಗೆಗೆ ತಂದು ಹಾಕಿದರು.

ಪಾದಯಾತ್ರೆಯ ಮುಂದೆ ಶ್ರೀಗಳು ಜೋಳಿಗೆ ಹಿಡಿದು ಹೊರಟರೆ ವ್ಯಸನ ಮುಕ್ತ ಮಾಡುವ ಜನರು ಇನ್ನಾದರೂ ಮುಂದೆ ತಾವು ಇಂತಹ ದುಶ್ಚಟಗಳಿಂದ ದೂರ ಇರುತ್ತೇವೆ. ಇನ್ಮುಂದೆ ಈ ಪದಾರ್ಥಗಳನ್ನು ಮುಟ್ಟಲ್ಲ. ಆರೋಗ್ಯವಂತರಾಗಿ ಬಾಳುತ್ತೇವೆ ಎಂದು ಶ್ರೀಗಳ ಬಳಿ ಹೇಳಿಕೊಂಡರು.

ಬಸವೇಶ್ವರ ದೇವಸ್ಥಾನದಿಂದ ಮುಖ್ಯ ರಸ್ತೆಯ ಮಾರ್ಗವಾಗಿ ಗಾಂಧಿವೃತ್ತ, ಬಸವೇಶ್ವರ ವೃತ್ತ, ಡಾ. ಅಂಬೇಡ್ಕರ ವೃತ್ತ, ಹರಳಯ್ಯ ವೃತ್ತ, ಶಿವಾಜಿ ಪಾರ್ಕ್ ಮುಂಭಾಗದ ಮೂಲಕ ತ್ರೀಪುರಾಂತನ ಪ್ರವಾಸಿ ಮಂದಿರ ವರೆಗೂ ಈ ಜೋಳಿಗೆ ಪಾದಯಾತ್ರೆ ನಡೆಸಲಾಯಿತು.

ಈ ವೇಳೆ ಮುಖಂಡ ಶರಣು ಸಲಗರ, ಜಿಪಂ ಸದಸ್ಯ ಅಣ್ಣಾರಾವ ರಾಠೋಡ, ಶಿವಾನಂದ ಮೇತ್ರೆ, ಅರ್ಜುನ ಕನಕ, ಮನೋಹರಮೈಸೆ, ನರಸಿಂಗರಡ್ಡಿಗದಲೇಗಾಂವ, ರತಿಕಾಂತಕೊಹಿನೂರ, ಚಂದ್ರಕಾಂತ ಸ್ವಾಮಿ, ಚನ್ನವೀರ ಜಮಾದಾರ, ಬಸವರಾಜ ಪಾರಾ, ಸಂಜು ಜಾಧವ, ಸಂಜು ಗಾಯಕವಾಡ, ಕಾಶಿನಾಥ ಸ್ವಾಮಿ ಸೇರಿದಂತೆ ಅನೇಕರು ಪಾದಯಾತ್ರೆಯಲ್ಲಿ ಭಾಗವಹಿಸಿದರು.

ಕನ್ನಡಪ್ರಭ ಶನಿವಾರ 28.9.2019

ಹಾರಕೂಡ ಶ್ರೀಗಳಿಗೆ ರಾಜ್ಯೋತ್ಸವ ಪ್ರಶಸ್ತಿ : ಹರ್ಷ



ಬಸವಕಲ್ಯಾಣ: ತಾಲೂಕಿನ ಹಾರಕೂಡ ಹಿರೇಮಠದ ಪೀಠಾಧಿಪತಿ ಡಾ.ಚೆನ್ನವೀರ ಶಿವಾಚಾರ್ಯರಿಗೆ ರಾಜ್ಯ ಸರಕಾರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿದ್ದು, ಈ ಭಾಗದ ಭಕ್ತರಲ್ಲಿ ಸಂತಸ ತಂದಿದೆ ಎಂದು ಬಸವಕಲ್ಯಾಣದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದ್ದಾರೆ. ಶ್ರೀ ಮಠದಿಂದ ನಾಡಿನ ಕಲಾವಿದರು, ಸಾಹಿತಿ, ಸಂಗೀತಗಾರರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದ್ದಾರೆ. ಜತೆಗೆ ಮಠದಿಂದ 83 ಕೃತಿಗಳನ್ನು ಪ್ರಕಟಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಕರ್ನಾಟಕ ಮಿತ್ರ ಬುಧವಾರ, ಅಕ್ಟೋಬರ್ 30, 2019

ಡಾ। ಚೆನ್ನವೀರ ಶ್ರೀಗಳಿಗೆ ರಾಜ್ಯೋತ್ಸವ ಪ್ರಶಸ್ತಿ: ಹರ್ಷ



ಬಸವಕಲ್ಯಾಣ: ಸುಕ್ಷೇತ್ರ ಹಾರಕೂಡದ ಧರ್ಮರತ್ನ ಡಾ। ಚೆನ್ನವೀರ ಶಿವಾಚಾರ್ಯರು ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಹಿನ್ನೆಲೆಯಲ್ಲಿ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹರ್ಷವ್ಯಕ್ತ ಪಡಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಶ್ರೀಗಳು ಕಲ್ಯಾಣ ಕರ್ನಾಟಕ ಭಾಗದಲ್ಲಿ ಕನ್ನಡನಾಡು ನುಡಿಗಾಗಿ ಮತ್ತು ಕಲಾವಿದರ ಬೆಳವಣಿಗಾಗಿ ಸಾಕಷ್ಟು ಶ್ರಮಿಸಿದ್ದಾರೆ. ಈವರೆಗೆ 83 ಕೃತಿಗಳನ್ನು ಪ್ರಕಟಿಸಿದ ಶ್ರೀಗಳನ್ನು ಸರ್ಕಾರ ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಿರುವುದಕ್ಕೆ ಇಡೀ ಕಲ್ಯಾಣ ಕರ್ನಾಟಕಕ್ಕೆ ಸಂತೋಷವಾಗಿದೆ ಎಂದು ತಿಳಿಸಿದ್ದಾರೆ.

Scanned with OKEN Scanner

ಸ್ವಾಮೀಜಿ ಜನ್ಮದಿನ ಸ್ವಚ್ಛತಾ ಕಾರ್ಯ



ಬಸವಕಲ್ಯಾಣ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನದ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಸ್ವಚ್ಛತಾ ಕಾರ್ಯ ನಡೆಯಿತು.

■ ವಿಕ ಸುದ್ದಿಲೋಕ ಬಸವಕಲ್ಯಾಣ

ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನದ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದ ನಿಮಿತ್ತ ನಗರದ ಶಿವಾಜಿ ಪಾರ್ಕ್, ಅಂಬೇಂಡ್ಕರ ವೃತ್ತ ಹಾಗೂ ಸರಕಾರಿ ನೀಲಾಂಬಿಕಾ ಕಾಲೇಜಿನ ಆವರಣದಲ್ಲಿ ಸ್ವಚ್ಛತಾ ಕಾರ್ಯ ನಡೆಯಿತು.

ಪ್ರಾಚಾರ್ಯ ಸುರೇಶ ಆರ್ಣಾ ಎನ್ ಎಸ್‌ಎಸ್ ಅಧಿಕಾರಿ ಶಿವಾರಾಜ ಬೆಲ್ಲಾ ಪೂರೆ, ನರಸಿಂಗ್ ರೆಡ್ಡಿ ಗದಲೆಗಾಂವ, ಅಶ್ವಿನ್ ಗೂರ್ಟೆ, ಶ್ರೀನಿವಾಸ ಸಿಂದೆ, ವಿದ್ಯಾ ದೇವರಾಜ ಉಚ್ಚಾಗ್ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲಾರೆ, ವೀರಣ್ಣಾ ಶೀಲವಂತ, ಸಿದ್ದರಾಮ ಪಾಟೀಲ, ಮಲ್ಲಿಕಾರ್ಜುನ ನಂದಿ, ಬಾಬುರಾವ ಉಳ್ಳೆ, ಬಸವರಾಜ ಪಾಠಾ, ಸಾಗರ ದಂಡೋತಿ, ರತಿಕಾಂತ ಕೋಹಿನೂರ ಇತರರಿದ್ದರು.

ವಿವಿಧ ಸಂಘಟನೆಯ ಪದಾಧಿಕಾರಿಗಳು, ಭಕ್ತರು ಮತ್ತು ಕಾಲೇಜಿನ ಪ್ರಾಚಾರ್ಯರು, ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಗುರುವಾರ,26 ಸೆಪ್ಟೆಂಬರ್ 2019 ನಮ್ಮ ಬೀದರ್

ವ್ಯಸನಗಳ ಭಿಕ್ಷೆ ಬೇಡಿ ಜೋಳಿಗೆ ಹಿಂಡಿದ ಶ್ರೀ

ಸ್ವಾಮೀಜಿ ಪಟ್ಟಾಧಿಕಾರ ಮಹೋತ್ಸವ ನಿಮಿತ್ತ ಪಾದಯಾತ್ರೆ | ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಸಂಕಲ್ಪ

■ ವಿಕ ಸುದ್ದಿಲೋಕ ಬಸವಕಲ್ಯಾಣ

ನಗರದ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನೋತ್ಸವ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಶುಕ್ರವಾರ ನಗರದಲ್ಲಿ ಜೋಳಿಗೆ ಪಾದಯಾತ್ರೆ ನಡೆಸಲಾಯಿತು. ನಗರದ ಶ್ರೀ ಬಸವೇಶ್ವರ ದೇವಸ್ಥಾನದಿಂದ ತ್ರಿಪುರಾಂತವರೆಗೂ ಪಾದಯಾತ್ರೆ ನಡೆಸಿ ಜನರಿಂದ ಪೂಜ್ಯರು ವ್ಯಸನಗಳ ಭಿಕ್ಷೆ ಪಡೆದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಬಸವೇಶ್ವರ ದೇವಸ್ಥಾನದಲ್ಲಿ ದೇವರಿಗೆ ವಿಷೇಶ ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಭಕ್ತರು, ಅಭಿಮಾನಿಗಳು ಭಾಗವಹಿಸಿ, ದುಷ್ಚಟಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು.

ಚಟಗಳನ್ನು ಹಾಕಿ: ''ವ್ಯಸನ ಮುಕ್ತ ಜೀವನಕ್ಕಾಗಿ ನಿಮ್ಮ ದುಷ್ಚಟಗಳನ್ನು ನನ್ನ ಜೋಳಿಗೆಯಲ್ಲಿ ಹಾಕಿ. ನೀವು ಆರೋಗ್ಯವಂತರಾಗಿರಿ ''ಎಂಬ ಧ್ಯೇಯ ವಾಕ್ಯದೊಂದಿಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿತ್ತು.



ಬಸವಕಲ್ಯಾಣ ವ್ಯಸನಮುಕ್ತ ಸಮಾಜ ನಿರ್ಮಾಣಕ್ಕಾಗಿ ಶುಕ್ರವಾರ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜೋಳಿಗೆಯಲ್ಲಿ ಜನರು ಗುಟಕಾ, ತಂಬಾಕ ಪದಾರ್ಥಗಳನ್ನು ಹಾಕಿದರು.

ಅನೇಕ ಯುವಕರು, ವಯಸ್ಕರರು ತಮ್ಮ ಬಳಿ ಇದ್ದ ಗುಟಕಾ, ತಂಬಾಕು, ತಂಬಾಕು ಪದಾರ್ಥಗಳನ್ನು ಜೋಳಿಗೆಗೆ ತಂದು ಹಾಕಿದರು.

ಪೂಜ್ಯರು ಜೋಳಿಗೆ ಹಿಡಿದು ಪಾದಯಾತ್ರೆ ನಡೆಸುವಾಗ ಜನರು ತಂಬಾಕು ಪದಾರ್ಥಗಳನ್ನು ಜೋಳಿಗೆಗೆ ಹಾಕಿ, ಇನ್ಮುಂದೆ ವ್ಯಸನ ತ್ಯಜಿಸಿ ಆರೋಗ್ಯವಂತರಾಗಿ ಬಾಳುವುದಾಗಿ ಶ್ರೀಗಳ ಬಳಿ ಹೇಳಿಕೊಂಡರು.

ಬಸವೇಶ್ವರ ದೇವಸ್ಥಾನದಿಂದ ಮುಖ್ಯ ರಸ್ತೆಯ ಮಾರ್ಗವಾಗಿ ಗಾಂಧಿ, ಬಸವೇಶ್ವರ ವೃತ್ತ, ಅಂಬೇಡ್ಕರ್ ವೃತ್ತದ ಮೂಲಕ ಸಾಗಿ ತ್ರಿಪುರಾಂತನ ಐಬಿವರೆಗೂ ಪಾದಯಾತ್ರೆ ನಡೆಯಿತು.

ಪುಟ III

ವಿಜಯ ಕರ್ನಾಟಕ ಶನಿವಾರ,28 ಸೆಪ್ಟೆಂಬರ್ 2019

ಶ್ರೀಗಳಿಗೆ ರಾಜ್ಯೋತ್ಸವ ಮುಕುಟ, ಭಕ್ತರ ಹರ್ಷ

ಬಸವಕಲ್ಯಾಣ: ಧಾರ್ಮಿಕ, ಆಧಾತ್ಮಿಕ, ಸಾಹಿತ್ಯ, ಶಿಕ್ಷಣ ಹೀಗೆ ನಾನಾ ಕ್ಷೇತ್ರಗಳ ಮೂಲಕ ಸಮಾಜಕ್ಕೆ ಮಹತ್ವದ ಕೊಡುಗೆ ನೀಡುತ್ತಿರುವ ಹಾರಕೂಡ ಸಂಸ್ಥಾನ ಹಿರೇಮಠದ ಪೀಠಾಧಿಪತಿ ಶ್ರೀ ಡಾ.ಚನ್ನವೀರ ಶಿವಾಚಾರ್ಯರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರಕಿರುವುದಕ್ಕೆ ಭಕ್ತರು ವ್ಯಾಪಕ ಹರ್ಷ ವ್ಯಕ್ತಪಡಿಸಿದ್ದಾರೆ. ಜಿಲ್ಲೆಯ ರಾಜಕೀಯ ಗಣ್ಯರು, ಜನಪ್ರತಿನಿಧಿಗಳು, ಸಾಹಿತಿಗಳು, ಕಲಾವಿದರು ಸೇರಿ ವಿವಿಧ ಕ್ಷೇತ್ರದ ಪ್ರಮುಖರು, ಭಕ್ತರು ಶ್ರೀಗಳನ್ನು ರಾಜ್ಯದ ಉನ್ನತ ಪ್ರಶಸ್ತಿಗೆ ಆಯ್ಕೆ ಮಾಡಿದ ಸರ್ಕಾರಕ್ಕೆ ಧನ್ಯವಾದ ಸಲ್ಲಿಸಿದ್ದಾರೆ.



ಶಿವಾಚಾರ್ಯ ರತ್ನ, ಧರ್ಮ ರತ್ನ ಹಾರಕೂಡದ ಶ್ರೀ ಡಾ.ಚನ್ನವೀರ ಶಿವಾಚಾರ್ಯರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿರುವುದು ಸಂತಸ ಉಂಟು ಮಾಡಿದೆ. ಧರ್ಮ, ಅಧ್ಯಾತ್ಮದ ಜತೆಗೆ, ಕಲೆ, ಸಾಹಿತ್ಯ, ಸಂಸ್ಕೃತಿ ಸೇರಿ ಸಾಮಾಜಿಕ ವ್ಯವಸ್ಥೆ ಸುಧಾರಣೆಗೆ ಶ್ರೀಗಳು ಅಪಾರ ಕೆಲಸ ಮಾಡಿದ್ದಾರೆ. ಮಠದಿಂದ ಇದುವರೆಗೆ 83 ಕೃತಿ ಪ್ರಕಟಣೆ ಸೇರಿ ವಿವಿಧ ಕ್ಷೇತ್ರಗಳನ್ನು ಸಮೃದ್ಧಗೊಳಿಸಿದ್ದಾರೆ.

| ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಗವಿಮಠ ಬಸವಕಲ್ಯಾಣ



ಕಲ್ಯಾಣ ಕರ್ನಾಟಕ ಭಾಗದದಲ್ಲಿ ಮಹತ್ವದ ಕೊಡುಗೆ ನೀಡಿರುವ ಹಾರಕೂಡ ಶ್ರೀಗಳಿಗೆ ರಾಜ್ಯೋತ್ಸವ ಪ್ರಶಸ್ತಿ ಘೋಷಿಸಿರುವುದು ಖುಷಿ ತಂದಿದೆ. ಇದು ಇಡೀ ಭಾಗಕ್ಕೆ ಸಂದ ಗೌರವ. ಶ್ರೀಗಳಿಗೆ ಪ್ರಶಸ್ತಿ ನೀಡಿದ್ದರಿಂದ ಮೌಲ್ಯ ಹೆಚ್ಚಿದೆ.

| ಬಿ.ನಾರಾಯಣರಾವ ಶಾಸಕ



ಶ್ರೀ ಡಾ.ಚನ್ನವೀರ ಶಿವಾಚಾರ್ಯರು ಹಾಗೂ ಹಾಮುನಗರ ತಾಂಡಾದ ಜಾನಪದ ಕಲಾವಿದ ಭೀಮಸಿಂಗ್ ರಾಠೋಡಗೆ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ಸೂಕ್ತ ವ್ಯಕ್ತಿಗಳಿಗೆ ಸಂದ ಗೌರವ.

| ಯಶೋಧಾ ರಾಠೋಡ್ ತಾಪಂ ಅಧ್ಯಕ್ಷೆ ಬಸವಕಲ್ಯಾಣ



ಕನ್ನಡದ ಸಂತರೆಂದೇ ಹೆಸರಾಗಿರುವ ಡಾ.ಚನ್ನವೀರ ಶಿವಾಚಾರ್ಯರರಿಗೆ ರಾಜ್ಯದ ಉನ್ನತ ಪ್ರಶಸ್ತಿ ದೊರಕಿರುವುದು, ಹರ್ಷ ಮೂಡಿಸಿದೆ. ತ್ರಿವಿಧ ದಾಸೋಹಿ, ಭಕ್ತರ ಒಳಿತು ಬಯಸುವ ಕಾಯಕಯೋಗಿಗಳ ಸಂಕೀರ್ಣ ಕ್ಷೇತ್ರದಲ್ಲಿನ ಸಾಧನೆ ಕಲ್ಯಾಣ ಕರ್ನಾಟಕ ನಾಡಿಗೆ ಹೆಮ್ಮೆ.

| ಶರಣು ಸಲಗರ ಬಿಜೆಪಿ ಯುವ ಮುಖಂಡ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 30 ಅಕ್ಟೋಬರ್ 2019
30 OCTOBER 2019

Scanned with OKEN Scanner

ಉದಯವಾಣಿ ಕಲುಬುರಗಿ ಶನಿವಾರ, ಸೆಪ್ಟೆಂಬರ್ 28, 2019

ಅಭಿನವ ಶ್ರೀ ಜನ್ಮದಿನ ■ ಕೆಟ್ಟ ವ್ಯಸನಗಳ ಸಹವಾಸ ಕೈಬಿಟ್ಟ ಜನರು

ವ್ಯಸನ ಮುಕ್ತ ಸಮಾಜಕ್ಕೆ ಪಾದಯಾತ್ರೆ

ಬಸವಕಲ್ಯಾಣ: ಇಲ್ಲಿನ ತ್ರಿಪುರಾಂತ ಗವಿಮಠದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರು ತಮ್ಮ ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಅಂಗವಾಗಿ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕಾಗಿ ನಗರದಲ್ಲಿ ಶುಕ್ರವಾರ ಜೋಳಿಗೆ ಪಾದಯಾತ್ರೆ ನಡೆಸಿದರು.

ನಿಮ್ಮ ದುಶ್ಚಟಗಳನ್ನು ನನ್ನ ಜೋಳಿಗೆಗೆ ಹಾಕಿ ಎಂಬ ವಾಕ್ಯದೊಂದಿಗೆ ಬಸವೇಶ್ವರ ದೇವಸ್ಥಾನದಿಂದ ಆರಂಭವಾದ ವ್ಯಸನ ಮುಕ್ತ ಜೋಳಿಗೆ ಪಾದಯಾತ್ರೆಯನ್ನು ನಗರದ ಪ್ರಮುಖ ರಸ್ತೆ ಮೂಲಕ ಮಡಿವಾಳ ಮಾಚೇಶ್ವರ ವೃತ್ತದ ವರೆಗೆ ಕೈಗೊಂಡರು. ರಸ್ತೆ ಉದ್ದಕ್ಕೂ ಕೆಟ್ಟ ಚಟಕ್ಕೆ ಬಲಿಯಾದ ಸಾರ್ವಜನಿಕರು ತಂಬಾಕು, ಗುಟಕಾ, ಸಿಗರೇಟ್ ವಸ್ತುಗಳನ್ನು ಜೋಳಿಗೆಯಲ್ಲಿ ಹಾಕುವ ಮೂಲಕ ಇನ್ನುಂದೆ ಯಾವುದೇ ಕಾರಣಕ್ಕೂ ಕೆಟ್ಟ ವ್ಯಸನಗಳ ಸಹವಾಸಕ್ಕೆ ಹೋಗುವುದಿಲ್ಲ ಎಂದು ಶ್ರೀಗಳಿಗೆ ಮಾತುಕೊಟ್ಟರು. ವ್ಯಸನ ಮುಕ್ತ ಸಮಾಜ ಹಾಗೂ ಕುಟುಂಬಗಳಿಗಾಗಿ ಮೂರು ವರ್ಷದಿಂದ ಸಂಕಲ್ಪ ಮಾಡಿದ್ದೇನೆ. ಹೀಗಾಗಿ ವಿವಿಧ ಸಂಘ, ಸಂಸ್ಥೆಗಳ ಮತ್ತು ಭಕ್ತರ ಸಮ್ಮುಖದಲ್ಲಿ ನಗರದಲ್ಲಿ ನಿಮ್ಮ ದುಶ್ಚಟಗಳನ್ನು ನನ್ನ ಜೋಳಿಗೆಗೆ ಹಾಕಿ ಎಂಬ ಹೆಸರಿನಲ್ಲಿ ಪಾದಯಾತ್ರೆ ಕೈಗೊಂಡಿದ್ದೇನೆ ಎಂದು ಶ್ರೀಗಳು ಹೇಳಿದರು. ಕೌಡಿಯಾಳದ ಫಾದರ್ ಸಂತೋಷ ಬಾಪು, ಬಿಜೆಪಿ ಮುಖಂಡ ಶರಣು ಸಲಗರ, ಕಾಂಗ್ರೆಸ್ ಮುಖಂಡ ಅರ್ಜುನ ಕನಕ, ಜೆಪಂ ಸದಸ್ಯ ಅಣ್ಣಾರಾವ್ ರಾಠೋಡ, ಪ್ರೊ। ನರಸಿಂಗರೆಡ್ಡಿ ಬಸಂತಪ್ಪ ಲವಾರೆ, ಬಸವರಾಜ ಪಾರಾ, ವೀರಣ್ಣ ಶೀಲವಂತ, ಮಹಾಂತಯ್ಯ ಸ್ವಾಮಿ, ರತಿಕಾಂತ ಹೋಕಿನೂರ, ಲೋಕೇಶ ಮೋಳಕೇರೆ, ಪ್ರೊ। ರುದ್ರೇಶ್ವರಸ್ವಾಮಿ ಗೋರ್ಟಾ, ಸಂಜು ಗಾಯಕವಾಡ ಸೇರಿದಂತೆ ವಿವಿಧ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಬಸವಕಲ್ಯಾಣ: ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಜೋಳಿಗೆ ಪಾದಯಾತ್ರೆ ನಡೆಸಿದರು.

ವಾಲ್ಮೀಕಿಯಿಂದ ಇತಿಹಾಸ ನಿರ್ಮಾಣ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಜಿವಾಲ್ಮೀಕಿ ಸಮುದಾಯ ರಾಜ್ಯದಲ್ಲೇ ಅತ್ಯಂತ ದೊಡ್ಡ ಹಾಗೂ ಪ್ರಭಾವಿಯಾಗಿದ್ದು ಇತಿಹಾಸ ನಿರ್ಮಿಸಿದ ಸಮಾಜವಾಗಿದೆ ಎಂದು ಬಿಜೆಪಿ ಯುವ ಮುಖಂಡ ಶರಣು ಸಲಗರ ಹೇಳಿದರು.

ತಾಲೂಕಿನ ಕೋಹಿನೂರ ಗ್ರಾಮದಲ್ಲಿ ಬುಧವಾರ ಆಯೋಜಿಸಿದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಾಮಾಯಣ ಮಹಾಕಾವ್ಯ ರಚಿಸಿ ಭಾರತದ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕೀರ್ತಿ ಆದಿಕವಿ ವಾಲ್ಮೀಕಿ ಅವರಿಗೆ ಸಲ್ಲುತ್ತದೆ ಎಂದರು.

ಸರಕಾರ ವಾಲ್ಮೀಕಿ ಸಮುದಾಯದ ಜನರ ಹಾಗೂ ವಿದ್ಯಾರ್ಥಿಗಳ ಏಳ್ಗೆಗೆ ವಿವಿಧ ಯೋಜನೆಗಳನ್ನು ಪರಿಚಯಿಸಿದ್ದು, ಅವುಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು. ಸಾನ್ನಿಧ್ಯ ವಹಿಸಿದ ತ್ರಿಪುರಾಂತನ ಗವಿಮಠದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ವಾಲ್ಮೀಕಿ ರಾಮಾಯಣ ಮಹಾಕಾವ್ಯ ಓದಿ ತಿಳಿಯಬೇಕು. ದುಡ್ಡಿನಿಂದ ಔಷಧಿ, ಸೌಂದರ್ಯವರ್ಧಕಗಳು, ಆಹಾರ ಏನೆಲ್ಲವನ್ನು ಖರೀದಿಸಬಹುದು. ಆದರೆ, ಶಾಂತಿ-ನೆಮ್ಮದಿ ಖರೀದಿಸಲಾಗದು. ರಾಮಾಯಣ ಓದುವುದರಿಂದ ಮನಸ್ಸಿಗೆ ಶಾಂತಿ ಸಿಗುತ್ತದೆ ಎಂದರು.

ಕಲ್ಯಾಣ ಕರ್ನಾಟಕ ವಾಲ್ಮೀಕಿ ನಾಯಕರ ಸಂಘದ ವಿಭಾಗೀಯ ಅಧ್ಯಕ್ಷ ನಂದಕುಮಾರ ಮಾಲಿಪಾಟೀಲ್, ಶಿವಶರಣಪ್ಪ ಸಂತಾಜಿ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ರಾಜಕುಮಾರ ಸಿರಗಾಪುರ, ಸಂಜು ಸುಗೂರೆ, ಶಿವಾಜಿ ಸಿತಾಳಗೇರೆ, ಚಂದ್ರಕಾಂತ್ ಕೆಲಕೋರಾ, ಡಾ. ಅಮರನಾಥ ಜಮಾದಾರ, ಅಂಬಾರಾಯ ಉಗಾಜಿ ಇದ್ದರು. ರಂಗನಾಥ್ ದೂರೆ ವಿಶೇಷ ಉಪನ್ಯಾಸ ನೀಡಿದರು. ಮಾನಪ್ಪ ನಾಯಕ ಹಾಗೂ ರತಿಕಾಂತ್ ಕೋಹಿನೂರ ಮಾತನಾಡಿದರು. ಹರೀಶ್ ನಿರೂಪಿಸಿದರು. ವೀರ ಮದಕರಿ ನಾಯಕರ ಸೇನೆಯ ಸದಸ್ಯರು, ಗ್ರಾಮದ ಹಿರಿಯ ಮುಖಂಡರು ವಾಲ್ಮೀಕಿ ಸಮಾಜದ ನೂರಾರು ಜನರು ಜಯಂತಿಯಲ್ಲಿ ಪಾಲ್ಗೊಂಡಿದ್ದರು.



ಕೋಹಿನೂರ ಗ್ರಾಮದಲ್ಲಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಬಿಜೆಪಿ ಶರಣು ಸಲಗರ ಮಾತನಾಡಿದರು. ಗವಿಮಠದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ನಂದಕುಮಾರ ಮಾಲಿಪಾಟೀಲ್, ಶಿವಶರಣಪ್ಪ ಸಂತಾಜಿ, ಸಂಜು ಸುಗೂರೆ, ರತಿಕಾಂತ್ ಕೋಹಿನೂರ, ಶಿವಾಜಿ ಇದ್ದರು.

ವಿಜಯ ಕರ್ನಾಟಕ ಗುರುವಾರ, 31 ಅಕ್ಟೋಬರ್ 2019

Scanned with OKEN Scanner

ಜಯಂತಿ ಆಚರಣೆ ■ ಸರಕಾರದ ಯೋಜನೆ ಸದ್ಬಳಕೆ ಮಾಡಿಕೊಳ್ಳಿ

ಉದಯವಾಣಿ ಕಲಬುರಗಿ
ಗುರುವಾರ, ಅಕ್ಟೋಬರ್ 31, 2019

ವಾಲ್ಮೀಕಿ ರಾಜ್ಯದಲ್ಲೇ ಅತ್ಯಂತ ದೊಡ್ಡ ಸಮುದಾಯ

ಬಸವಕಲ್ಯಾಣ: ವಾಲ್ಮೀಕಿ ಸಮುದಾಯ ರಾಜ್ಯದಲ್ಲೇ ಅತ್ಯಂತ ದೊಡ್ಡ ಹಾಗೂ ಪ್ರಭಾವಿಯಾಗಿದೆ. ಇತಿಹಾಸ ನಿರ್ಮಿಸಿದ ಸಮಾಜವಾಗಿದೆ. ರಾಮಾಯಣ ಮಹಾಕಾವ್ಯ ರಚಿಸಿ ಭಾರತದ ಸಾಹಿತ್ಯ ಶ್ರೀಮಂತಗೊಳಿಸಿದ ಕೀರ್ತಿ ಆದಿಕವಿ ವಾಲ್ಮೀಕಿ ಅವರಿಗೆ ಸಲ್ಲುತ್ತದೆ ಎಂದು ಬಿಜೆಪಿ ಯುವ ಮುಖಂಡ ಶರಣು ಸಲಗರ ಹೇಳಿದರು.

ತಾಲೂಕಿನ ಕೋಹಿನೂರಿನಲ್ಲಿ ಬುಧವಾರ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ವಾಲ್ಮೀಕಿ ಸಮುದಾಯದ ಜನರು ಹಾಗೂ ವಿದ್ಯಾರ್ಥಿಗಳ ಏಳ್ಗೆಗೆ ವಿವಿಧ ಯೋಜನೆ ಪರಿಚಯಿಸಿದೆ. ತಾವು ಅವುಗಳ ಸಮರ್ಪಕ ಉಪಯೋಗ ಪಡೆದುಕೊಳ್ಳಬೇಕು. ಐಎಎಸ್, ಕೆಎಎಸ್‌ಗಳಂಥ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಮುದಾಯದ ಯುವಜನರು ಸಜ್ಜಾಗಿ ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿ ಸಾಧನೆ ಮಾಡಬೇಕು. ಮಹರ್ಷಿ ವಾಲ್ಮೀಕಿ ಬರೆದಿರುವ ರಾಮಾಯಣದಿಂದ ನಾವು ಅನೇಕ ವಿಷಯ ಕಲಿತಿದ್ದೇವೆ.



ಬಸವಕಲ್ಯಾಣ: ಕೋಹಿನೂರಿನಲ್ಲಿ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಬಿಜೆಪಿ ಯುವ ಮುಖಂಡ ಶರಣು ಸಲಗರ ಮಾತನಾಡಿದರು.

ಇನ್ನೂ ಕಲಿಯಬೇಕಾದ್ದು ಬಹಳಷ್ಟಿದೆ ಎಂದು ಹೇಳಿದರು. ಸಾನ್ನಿಧ್ಯ ವಹಿಸಿದ್ದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು ಮಾತನಾಡಿ, ವಾಲ್ಮೀಕಿ ರಾಮಾಯಣ ಮಹಾಕಾವ್ಯದಲ್ಲಿನ 24 ಶ್ಲೋಕಗಳನ್ನು ನಾವೆಲ್ಲ ಓದಿ ತಿಳಿದುಕೊಂಡು ಅವುಗಳಂತೆ ನಡೆಯುವಂತರಾಗಬೇಕು. ದುಡ್ಡಿನಿಂದ ಔಷಧ, ಸೌಂದರ್ಯ ವರ್ಧಕಗಳು, ಆಹಾರ ಏನೆಲ್ಲ ಖರೀದಿಸಬಹುದು. ಆದರೆ, ಶಾಂತಿ-ನೆಮ್ಮದಿ ಖರೀದಿಸಲಾಗದು. ದೈನಂದಿನ ಧಾವಂತದ ಬದುಕಿನಲ್ಲಿ ನಾವು ಹಣ ಗಳಿಕೆ ಹಾಗೂ ಲಾಭದ ಹಿಂದೆಯೇ ಓಡುತ್ತಿದ್ದು, ಶಾಂತಿ-ನೆಮ್ಮದಿ ಬಗ್ಗೆ ಚಿಂತಿಸುತ್ತಿಲ್ಲ. ರಾಮಾಯಣ ಓದುವುದರಿಂದ ಮನಸ್ಸಿಗೆ ಶಾಂತಿ ಸಿಗುತ್ತದೆ ಎಂದು ಹೇಳಿದರು.

ಶಿವಶರಣಪ್ಪ ಸಂತಾಜಿ ಅಧ್ಯಕ್ಷತೆ ವಹಿಸಿದ್ದರು. ರಂಗನಾಥ ದೊರೆ ವಿಶೇಷ ಉಪನ್ಯಾಸ ನೀಡಿದರು.

ಕಲ್ಯಾಣ ಕರ್ನಾಟಕ ವಾಲ್ಮೀಕಿ ನಾಯಕರ ಸಂಘದ ವಿಭಾಗೀಯ ಅಧ್ಯಕ್ಷ ನಂದಕುಮಾರ ಮಾಲಿಪಾಟೀಲ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ರಾಜಕುಮಾರ ಸಿರಗಾಪುರ, ಸಂಜು ಸುಗೂರೆ, ಶಿವಾಜಿ ಸಿತಾಳಗೇರೆ, ಚಂದ್ರಕಾಂತ ಕಲಕೋರಾ, ಡಾ। ಅಮರನಾಥ ಜಮಾದಾರ, ಅಂಬಾರಾಯ ಉಗಾಜಿ, ಮಾನಪ್ಪ ನಾಯಕ, ರತಿಕಾಂತ ಕೋಹಿನೂರ ಹರೀಶ ನಿರೂಪಿಸಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ನ.8 ಮತ್ತು 9ರಂದು ನಡೆಯಲಿರುವ ಶ್ರೀ ಡಾ.ಚನ್ನವೀರ ಶಿವಾಚಾರ್ಯರರ 57ನೇ ಜನ್ಮದಿನದ ಪ್ರಚಾರ ರಥಕ್ಕೆ ಗುರುವಾರ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು. ಶ್ರೀ ಚೆನ್ನಮಲ್ಲ ದೇವರು, ಸಿಪಿಐ ಯಾತನೂರ, ಪಿಎಸ್‌ಐ ಸವಿತಾ, ಮುಖಂಡರಾದ ಸುನೀಲ ಪಾಟೀಲ್, ಶರಣು ಸಲಗರ್, ಸಿದ್ದು ಹೊಳಕುಂದೆ, ಡಾ.ಬಸವರಾಜ ಸ್ವಾಮಿ, ಸೂರ್ಯಕಾಂತ ಸ್ವಾಮಿ, ಪಂಚಾಕ್ಷರಿ ಹಿರೇಮಠ, ಚಂದ್ರಕಾಂತ ಸ್ವಾಮಿ, ಪ್ರಭುಲಿಂಗಯ್ಯ ಇತರರಿದ್ದರು.

ಶುಕ್ರವಾರ 25 ಅಕ್ಟೋಬರ್ 2019
25 OCTOBER 2019

ವಿಜಯ ಕರ್ನಾಟಕ
ಬುಧವಾರ,30 ಅಕ್ಟೋಬರ್ 2019

ಬಸವಕಲ್ಯಾಣದಲ್ಲಿ ಶಿವಾನುಭವ ಚಿಂತನ ಮಾಸಿಕ ಅಮವಾಸ್ಯೆ ಕಾರ್ಯಕ್ರಮ

ಸಾಧನೆಗೆ ವಯಸ್ಸು ಮುಖ್ಯವಲ್ಲ ,ಪ್ರಯತ್ನ ಮುಖ್ಯ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಸಾಧನೆಗೆ ವಯಸ್ಸು ಮುಖ್ಯವಲ್ಲ .ಸತತ ಪ್ರಯತ್ನ ಮಾಡಿದಾಗ ಜೀವನದಲ್ಲಿ ಯಶಸ್ಸು ಸಿಗಲು ಸಾಧ್ಯ ಎಂದು ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಸಂಸ್ಥಾನದಲ್ಲಿ ಸೋಮವಾರ ನಡೆದ ಶಿವಾನುಭವ ಚಿಂತನ ಮಾಸಿಕ ಅಮವಾಸ್ಯೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶಿರ್ವಚನ ನೀಡಿದರು. ಹಿರಿಯ ನಾಗರಿಕ ದಿನಾಚರಣೆ ನಿಮಿತ್ತ ಜಿಲ್ಲಾ ಆಡಳಿತ ಹಿರಿಯ ನಾಗರಿಕರಿಗಾಗಿ ಏರ್ಪಡಿಸಿದ 200 ಮೀಟರ್ ನಡಿಗೆ ಹಾಗೂ ಜಾನಪದ ಗೀತೆ ಸ್ಪರ್ಧೆಗಳಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ತಾಲೂಕಿಗೆ ಕೀರ್ತಿ ಬಸವರಾಜ ಮಠಪತಿ ಸಲ್ಲುತ್ತದೆ ಎಂದರು.ಸನ್ಮಾನ ಸ್ವೀಕರಿಸಿ ಬಸವರಾಜ ಮಠಪತಿ ಮಾತನಾಡಿ, ಕಳೆದ ಸುಮಾರು 50 ವರ್ಷಗಳಿಂದ ನಾನು ನಿರಂತರ ದೂರದ ನಡಿಗೆ ಯೋಗ ಮಾಡುತ್ತ ವೃತ್ತಿಯಲ್ಲಿಯೂ ಸಾರ್ಥಕ ಸೇವೆ ಮಾಡಿದ ಸಮಾಧಾನವಿದೆ. ನನ್ನ ಗುರುಗಳಾದ ಮೆಹಕರನ ಲಿಂ. ರಾಚೋಟಿ ಶಿವಾಚಾರ್ಯರ ಗವಿಮಠ ಗುರುಗಳ ಆಶೀರ್ವಾದ ಸದಾ ನನಗೆ ಪ್ರೇರಣೆ. ಗುರುವಿನಲ್ಲಿ ಅಪಾರ ಶಕ್ತಿ ಇದೆ. ಗುರುವಿನಲ್ಲಿ ಭಕ್ತಿಯಿಟ್ಟು ನಡೆದಾಗ ಕಷ್ಟಗಳು ದೂರಾಗಿ ಸುಖ, ಶಾಂತಿ, ನೆಮ್ಮದಿ ದೊರೆಯುತ್ತದೆ. ಈ ಸಂದರ್ಭದಲ್ಲಿ ಗುರುಗಳು ನನ್ನನ್ನು ಸನ್ಮಾನಿಸಿ ಪ್ರೇರಣೆ ಹೆಚ್ಚಿಸಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು. ನಗರದ ಪುಣ್ಯಕೋಟಿ ಪಿಯು ಕಾಲೇಜಿನ ಪ್ರಾಚಾರ್ಯ ಪ್ರೊ.ಸೂರ್ಯಕಾಂತ ಶೀಲವಂತ ಅಧ್ಯಕ್ಷತೆ ವಹಿಸಿದ್ದರು. ಕಲಾವಿದರಾದ ನಾಗಣ್ಣ ಭೂಶೆಟ್ಟಿ ಮಲ್ಲಿ ಕಾರ್ಜುನ ಶೀಲವಂತ ಸಂಗೀತ ಸೇವೆ ಸಲ್ಲಿಸಿದರು.ಪ್ರೊ.ರುದ್ರೇಶ್ವರ ಸ್ವಾಮಿ ಸ್ವಾಗತಿಸಿದರು.ಪ್ರೊ.ಬಸವರಾಜ ನಿರೂಪಿಸಿದರು.



ಬಸವಕಲ್ಯಾಣದಲ್ಲಿ ನಡೆದ ಶಿವಾನುಭವ ಚಿಂತನ ಮಾಸಿಕ ಅಮವಾಸ್ಯೆ ಕಾರ್ಯ ಕ್ರಮದಲ್ಲಿ ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶಿರ್ವಚನ ನೀಡಿದರು. ಬಸವರಾಜ ಮಠಪತಿ, ಪ್ರೊ.ಸೂರ್ಯಕಾಂತ ಶೀಲವಂತ ಇದ್ದರು.

Scanned with OKEN Scanner

ವಿಜಯವಾಣಿ ಚಿತ್ರ



ಬಸವಕಲ್ಯಾಣದಲ್ಲಿ ಶ್ರೀ ಡಾ.ಚನ್ನವೀರ ಶಿವಾಚಾರ್ಯರ ಜನ್ಮದಿನ ಸಮಿತ್ತ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ 57 ಸಾಧಕರನ್ನು ಸನ್ಮಾನಿಸಲಾಯಿತು. ಶ್ರೀ ರಾಜೇಶ್ವರ ಶಿವಾಚಾರ್ಯ, ಶ್ರೀಲಿಂಗನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಶಾಸಕ ಬಿ.ನಾರಾಯಣರಾವ ಇತರರಿದ್ದರು.

ಶನಿವಾರ 9 ನವೆಂಬರ್ 2019
9 NOVEMBER 2019

ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವುದಕ್ಕೆ ತ್ರಿಪುರಾಂತ ಸ್ವಾಮೀಜಿ ಶ್ಲಾಘನೆ

ವೃತ್ತಿ ತೊರೆದು ಪ್ರವೃತ್ತಿ ಪೋಷಿಸಿದ ಭೀಮಸಿಂಗ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಸನ್ಮಾನ
- ಉಪನ್ಯಾಸಕರ ಸಂಘದಿಂದ ಆಯೋಜನೆ
- ಉತ್ತಮ ಕಲಾವಿದರಿಗೆ ಪ್ರೋತ್ಸಾಹ ಅಗತ್ಯ



ಬಸವಕಲ್ಯಾಣದಲ್ಲಿ ಮಂಗಳವಾರ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಭೀಮಸಿಂಗ ರಾಠೋಡ ಅವರನ್ನು ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದಿಂದ ಸನ್ಮಾನಿಸಲಾಯಿತು

ಬಸವಕಲ್ಯಾಣ: 'ಭೀಮಸಿಂಗ ರಾಠೋಡರು ಶಿಕ್ಷಕ ವೃತ್ತಿ ತೊರೆದು ಭಜನ ಹಾಗೂ ಜಾನಪದ ಗೀತೆಗಳ ಗಾಯನದ ಪ್ರವೃತ್ತಿಯನ್ನು ಪೋಷಿಸಿದ್ದರಿಂದ ಅವರಿಗೆ ರಾಜ್ಯೋತ್ಸವದಂಥ ಪ್ರತಿಷ್ಠಿತ ಪ್ರಶಸ್ತಿ ದೊರೆತಿದೆ' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತಾಲ್ಲೂಕು ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಹಾಗೂ ಶರಣನಾಡು ಕಾಲೇಜಿನ ಆಶ್ರಯದಲ್ಲಿ ಮಂಗಳವಾರ ಇಲ್ಲಿನ ನೀಲಾಂಬಿಕಾ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಭೀಮಸಿಂಗ ರಾಠೋಡ ಅವರ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಇಂದು ಎಲ್ಲರಿಗೂ ನೌಕರಿ ಬೇಕಾಗಿದೆ. ಆದರೆ, ಭೀಮಸಿಂಗ ಬಡತನದ ಪರಿಸ್ಥಿತಿಯಲ್ಲೂ ನೌಕರಿ ಬಿಟ್ಟರೂ ಗಾಯನ ಬಿಡಲಿಲ್ಲ. ಇವರಿಗೆ ದೊಡ್ಡ ಪ್ರಶಸ್ತಿ ದೊರೆತಿರುವುದು ಈ ಭಾಗದ ಕಲಾವಿದರಿಗೆ ಪ್ರೇರಣೆ ದೊರೆತಂತಾಗಿದೆ. ಸಂಗೀತ ಪ್ರಾಣಿಗಳ ರೋಗಗಳನ್ನು ದೂರ ಮಾಡುವ ಜತೆಗೆ ಪಕ್ಷಿಗಳು ಹಾಗೂ ಸಸ್ಯಗಳು ಕೂಡ ಸಂಗೀತಕ್ಕೆ ಉತ್ತಮ ಪ್ರತಿಕ್ರಿಯೆ ನೀಡಿರುವುದು ಸಂಶೋಧನೆಗಳಿಂದ ತಿಳಿದುಬಂದಿದೆ' ಎಂದು ಅವರು ಹೇಳಿದರು.

ತಾಲ್ಲೂಕು ಉಪನ್ಯಾಸಕರ ಸಂಘದ ಅಧ್ಯಕ್ಷ ನರಸಿಂಗರಡ್ಡಿ ಗದ್ದೇಗಾಂವ ಮಾತನಾಡಿ, 'ಸಂಗೀತ, ಸಾಹಿತ್ಯ ಹಾಗೂ ಇತರ ಕ್ಷೇತ್ರದವರಿಗೆ ಪ್ರೋತ್ಸಾಹ ನೀಡುವುದು ಅಗತ್ಯವಾಗಿದೆ. ಭೀಮಸಿಂಗ ಅವರು ಉತ್ತಮ ಜಾನಪದ ಕಲಾವಿದ ಆಗಿದ್ದು ಸರ್ಕಾರ ಅವರಿಗೆ ಪ್ರಶಸ್ತಿ ನೀಡಿರುವುದು ಸಂತಸ ತಂದಿದೆ' ಎಂದರು.

ಹಿರಿಯ ಮುಖಂಡ ಅರ್ಜುನ ಕನಕ ಮಾತನಾಡಿ, 'ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುವ ಹಾಗೂ ಎಲೆಮರೆ ಕಾಯಿಯಂತಿರುವ ಬಡ ಕುಟುಂಬದ ಕಲಾವಿದರನ್ನು ಗುರುತಿಸುವುದು ಎಲ್ಲರ ಕರ್ತವ್ಯವಾಗಿದೆ' ಎಂದು ಅವರು ಹೇಳಿದರು.

ತಾಲ್ಲೂಕು ಸಾಕ್ಷರತಾ ಸಂಯೋಜಕ ಚನ್ನವೀರ ಜಮಾದಾರ ಮಾತನಾಡಿ, 'ತಾಲ್ಲೂಕಿನ ಹಾರಕೂಡ ಚನ್ನವೀರ ಶಿವಾಚಾರ್ಯರಿಗೆ ಹಾಗೂ ಭೀಮಸಿಂಗ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ದೊರೆತಿದ್ದು ಇಬ್ಬರೂ ಮುಡಿಬಿ ಹೋಬಳಿಯವರು ಆಗಿದ್ದಾರೆ. ಇವರಿಂದ ತಾಲ್ಲೂಕಿನ ಕೀರ್ತಿ ಹೆಚ್ಚಿದೆ' ಎಂದರು.

ಪ್ರಾಚಾರ್ಯ ಸುರೇಶ ಅಕ್ಕಣ್ಣ ಧನಸಿಂಗ ರಾಠೋಡ, ವಿನೋದ ಜಾಧವ, ಅಶೋಕರೆಡ್ಡಿ ನಿಂಗಾವರೆ ಮಾತನಾಡಿದರು.

ಭೀಮಸಿಂಗ ಹಾಗೂ ತಾಲ್ಲೂಕು ಆಡಳಿತದ ರಾಜ್ಯೋತ್ಸವ ಪ್ರಶಸ್ತಿ ಪಡೆದ ಮನೋಹರ ಮೈಸೆ ಅವರನ್ನು ಸನ್ಮಾನಿಸಲಾಯಿತು.

ಮಾನವದಾಸ ರಾಠೋಡ, ಆನಂದಬಾಬು ಹೊನ್ನಾನಾಯಕ, ಚಂದ್ರಕಾಂತ ಕಿವಡೆ, ಕೆ.ಜಿ. ಶರಣಪ್ಪ, ಸುಧಾಕರ ಮಹೇಂದ್ರಕರ, ಅನಿಲಕುಮಾರ ರಂಜೇರಿ, ವಿಜಯಕುಮಾರ ರಾಠೋಡ ಉಪಸ್ಥಿತರಿದ್ದರು.

Scanned with OKEN Scanner

ಸದ್ಗುರುವಿನ ದರ್ಶನದಿಂದ ಜೀವನ ಸಾರ್ಥಕ

ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಅಭಿನವ ಶ್ರೀ ಅಭಿಮತ

• **ಕನ್ನಡಪ್ರಭ ವಾರ್ತೆ** ಬಸವಕಲ್ಯಾಣ

ಸದಾ ಸದ್ಗುರುವಿನ ದರ್ಶನ, ಸಜ್ಜನರ ಸಹವಾಸದಿಂದ ಜೀವನ ಸಾರ್ಥಕ ಮಾಡಿಕೊಳ್ಳಬಹುದು ಎಂದು ನಗರದ ಸಂಸ್ಥಾನ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಎನ್.ಜಿ.ಓ. ಕಾಲೋನಿಯ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ಮಠಪತಿ ಗೋರ್ಟಾ ಅವರ ಮನೆಯಲ್ಲಿ ಸೋಮವಾರ ಸಾಯಂಕಾಲ ನಡೆದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಮಾತನಾಡಿ, ಪ್ರತಿಯೊಬ್ಬರು ಜೀವನದಲ್ಲಿ ಗುರುಗಳು, ಸಜ್ಜನರ ಸಹವಾಸ, ಭಗವಂತನನ್ನು ಭಜಿಸುತ್ತ, ಎಲ್ಲರನ್ನು ಧಯೆ, ಕರುಣೆ, ಪ್ರೀತಿಯಿಂದ ಕಾಣುತ್ತಾ, ಧರ್ಮ ಪರಿಪಾಲನೆ ಮಾಡುತ್ತ, ಎಲ್ಲರಿಗೂ ಉಪಕಾರ ಮಾಡುತ್ತ ಬದುಕಿದಾಗ ಶಾಂತಿ ನೆಮ್ಮದಿ ಸದಾ ದೊರೆಯುತ್ತೆ ಎಂದು ತಿಳಿಸಿದರು.

ನಗರದ ಪುಣ್ಯಕೋಟಿ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಸೂರ್ಯಕಾಂತ ಶೀಲವಂತ ಮಾತನಾಡಿ, ಭಕ್ತರು ಸದಾ ಧರ್ಮ ಚಿಂತನೆಯಲ್ಲಿ ತೊಡಗುವುದು ಒಳ್ಳೆಯದು. ಮನಸ್ಸುಗಳು ಒಡೆಯಲು ಒತ್ತಡದ ಬದುಕು ಕಾರಣ. ಆ ಒಡೆದ ಮನಸ್ಸುಗಳನ್ನು ಒಂದು ಗೂಡಿಸೋದು ಈ ಸದ್ಭಾವ ಚಿಂತನ ಕಾರ್ಯಕ್ರಮದ ಉದ್ದೇಶ. ಇಂಥಾ ಮಹಾ ಕಾರ್ಯವನ್ನು ಪ್ರತಿ ತಿಂಗಳು ಭಕ್ತರ ಮನೆಯಲ್ಲಿ ಗವಿಮಠದ ಗುರುಗಳು ಮಾಡುತ್ತಿರುವುದು ನಮ್ಮೆಲ್ಲರ ಪುಣ್ಯ. ಹೀಗಾಗಿ ನಾವೆಲ್ಲರೂ ಗುರುಗಳಿಗೆ ಚಿರಋಣಿಗಳಾಗಿದ್ದೇವೆ ಎಂದು ನುಡಿದರು.



ಬಸವಕಲ್ಯಾಣ ನಗರದ ಎನ್‌ಜಿಓ ಕಾಲೋನಿಯಲ್ಲಿ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಬಸವರಾಜ ಮಠಪತಿ ಗೋರ್ಟಾ ಮಾತನಾಡಿ, ಗುರುವಿನ ಮಹಿಮೆ ಅಪಾರ. ಗುರುವಿನಲ್ಲಿ ಅಪಾರ ಶಕ್ತಿ ಇದೆ. ನಮ್ಮ ಪರಿವಾರ ಸದಾ ಗುರುವಿನಲ್ಲಿ ಶ್ರೇದ್ಧೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದುದರಿಂದ ಸದಾ ಗುರುವಿನ ಕೃಪೆಯಿಂದ ಸುಖ ಶಾಂತಿ ದೊರೆಯುತ್ತಿದೆ ಎಂದು ಸಾರ್ಥಕತೆ ನುಡಿದರು.

ಈ ಸಂಧರ್ಭದಲ್ಲಿ ಶಿಕ್ಷಕ ಬಸವಕಾಂತ ಗೋಣಿ, ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಮದ್ವೀರಶೈವ ಸದ್ಭೋಧನ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಪ್ರೊ.ದಯಾನಂದಶೀಲವಂತ, ಗುರುಲಿಂಗಯ್ಯ ಕಟಗಿಮಠ, ಗುರುಲಿಂಗಯ್ಯ ಮಠಪತಿ, ಮಲ್ಲಿಕಾರ್ಜುನ ನಂದಿ, ರೇವಣಸಿದ್ಧಯ್ಯ ಮಠಪತಿ, ಡಾ. ಬಸವರಾಜ ಸ್ವಾಮಿ, ಸುಭಾ? ಕುಂಬಾರ, ಧನ್ಂಜಯ, ಸಂಜು ಕಲ್ಯಾಣಿ, ಚಂದ್ರಶೇಖರ್ ಸ್ವಾಮಿ, ಪಾರ್ವತಿ ಮಠಪತಿ, ಮೊದಲಾದವರು ಉಪಸ್ಥಿತರಿದ್ದರು.

ಕನ್ನಡಪ್ರಭ ಗುರುವಾರ 14.11.2019

ಮೈಸಲಗಾ ತಾಂಡಾದಲ್ಲಿ ದೀಪೋತ್ಸವ ಸಂಭ್ರಮ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ತಾಲೂಕಿನ ಮೈಸಲಗಾ ತಾಂಡಾದ ಭಾಗ್ಯವಂತಿ ದೇವಿ ಮಂದಿರದಲ್ಲಿ ಶುಕ್ರವಾರ ರಾತ್ರಿ ದೀಪಾವಳಿ ಹಬ್ಬದ ನಿಮಿತ್ತ ಲಕ್ಷ ದೀಪೋತ್ಸವ ಕಾರ್ಯಕ್ರಮ ಅದ್ಧೂರಿಯಾಗಿ ನಡೆಯಿತು.

ತ್ರಿಪುರಾಂತನ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು ಮಾತನಾಡಿ, ಗ್ರಾಮದಲ್ಲಿ ಘತ್ತರಗಿ ಭಾಗ್ಯವಂತಿ ದೇವಿಯ ದೇವಸ್ಥಾನ ಇರುವುದು ಭಕ್ತಿ-ಶಕ್ತಿಯ ಸಂಕೇತವಾಗಿದೆ. ದೇವಿಯ ಮಹಿಮೆ ಅಪಾರವಾಗಿದ್ದು, ನಂಬಿದ ಭಕ್ತರಿಗೆ ಕೈ ಬಿಡುವುದಿಲ್ಲ. ದೀಪಾವಳಿ ಹಬ್ಬದ ನಿಮಿತ್ತ ಇಂದು ಲಕ್ಷ ದೀಪೋತ್ಸವ ಜರುಗಿದ್ದು, ದೀಪದಂತೆ ನಿಮ್ಮ ಜೀವನವು ಕೂಡ ಶಾಂತವಾಗಿ ಬೆಳಗಲಿ. ನಿಮ್ಮನ್ನು ನಂಬಿದವರಿಗೆ ಸುಖ-ಶಾಂತಿ ದೊರೆಯಲಿ ಎಂದರು.

ಶುಕ್ರವಾರ ಬೆಳಗ್ಗೆ ಜನವಾಡಾ ಹಾಗೂ ಕಣಮುಸ ಗ್ರಾಮದ ಜೈ ಹನುಮಾನ ಭಜನಾ ಸಂಘಗಳ ಕಲಾವಿದರಿಂದ ವಿಶೇಷ ಭಜನಾ ಕಾರ್ಯ ನಡೆಯಿತು. ಮುಡಬಿ, ಏಕಲೂರ, ಹಣಮಂತವಾಡಿ ಸೇರಿದಂತೆ ಮೈಸಲಗಾ ಸುತ್ತಲಿನ ಅನೇಕ ಗ್ರಾಮಗಳ ಸದ್ಭಕ್ತರು ದೀಪೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಬಸವಕಲ್ಯಾಣ ತಾಲೂಕಿನ ಮೈಸಲಗಾ ತಾಂಡಾದಲ್ಲಿ ಭಾಗ್ಯವಂತಿ ದೇವಿ ಮಂದಿರದಲ್ಲಿ ಶುಕ್ರವಾರ ರಾತ್ರಿ ಜಯಶಾಂತಲಿಂಗ ಸ್ವಾಮಿಜಿ ಹಾಗೂ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಲಕ್ಷ ದೀಪೋತ್ಸವ ಕಾರ್ಯಕ್ರಮ ಜರುಗಿತು.

ದೀಪಾವಳಿ ಹಬ್ಬದ ನಿಮಿತ್ತ ಲಕ್ಷ ದೀಪೋತ್ಸವ ಕಾರ್ಯಕ್ರಮ

ಹೀರನಾಗಾಂವ ಮಠದ ಜಯಶಾಂತಲಿಂಗ ಮಹಾಸ್ವಾಮಿಗಳು ನೇತೃತ್ವ ವಹಿಸಿದ್ದರು. ಮೈಸಲಗಾ ಭಾಗ್ಯವಂತಿ ದೇವಿ ಶಕ್ತಿ ಪೀಠದ ಶಂಕರ ಆಯಿ ಉತ್ಸವದ ಅಧ್ಯಕ್ಷತೆ ವಹಿಸಿದ್ದರು. ತಾಪಂ ಮಾಜಿ ಅಧ್ಯಕ್ಷ ಗುರುಲಿಂಗಪ್ಪ ಸೈದಾಪುರೆ, ಶಂಭುಲಿಂಗ ಮಲಕರ್ಜ, ಬಿಜೆಪಿ ಯುವ ಮುಖಂಡ ಶರಣು ಸಲಗರ ಹಾಗೂ ತಾಂಡಾದ ಹಿರಿಯ ಮುಖಂಡರು ಉಪಸ್ಥಿತರಿದ್ದರು.

ವಿಜಯ ಕರ್ನಾಟಕ ಭಾನುವಾರ,3 ನವೆಂಬರ್ 2019

Scanned with OKEN Scanner

ಪ್ರಜಾಯಕರ್ನಾಟಕ
ಗುರುವಾರ,14 ನವೆಂಬರ್ 2019

ಮನೆ ಮನಗಳಲ್ಲಿ ಸದ್ಭಾವ ಚಿಂತನ ಕಾರ್ಯಕ್ರಮ

ಉಪಕಾರದಿಂದ ಮನಸ್ಸಿಗೆ ನೆಮ್ಮದಿ

ವಿಕ ಸುದ್ದಿಲೋಕ ಬಸವಕಲ್ಯಾಣ

ಪ್ರತಿಯೊಬ್ಬರು ಜೀವನದಲ್ಲಿ ಸಜ್ಜನರ ಸಹವಾಸ, ಎಲ್ಲರನ್ನು ದಯೆ, ಕರುಣೆ, ಪ್ರೀತಿಯಿಂದ ಕಂಡು ಉಪಕಾರ ಮಾಡಿದಾಗ ಮಾತ್ರ ಮನಸ್ಸಿಗೆ ಶಾಂತಿ ನೆಮ್ಮದಿ ದೊರೆಯಲಿದೆ ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.



ಬಸವಕಲ್ಯಾಣ ನಗರದ ಎನ್‌ಜಿಒ ಕಾಲೊನಿಯಲ್ಲಿ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ನಗರದ ಎನ್‌ಜಿಒ ಕಾಲೋನಿಯ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ಮಠಪತಿ ಗೋರ್ಟಾ ಅವರ ಮನೆಯಲ್ಲಿ ಇತ್ತೀಚಿಗೆ ನಡೆದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ನಗರದ ಪುಣ್ಯಕೋಟಿ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ.ಸೂರ್ಯಕಾಂತ ಶೀಲವಂತ ಮಾತನಾಡಿ, ಭಕ್ತರು ಸದಾ ಧರ್ಮ ಚಿಂತನೆ ಯಲ್ಲಿ ತೊಡಗುವುದು ಒಳ್ಳೆಯದು.ಮನಸ್ಸುಗಳು ಒಡೆಯಲು ಒತ್ತಡದ ಬದುಕು ಕಾರಣ.ಆ ಒಡೆದ ಮನಸ್ಸುಗಳನ್ನು ಒಂದು ಗೂಡಿಸುವುದು ಈ ಸದ್ಭಾವ ಚಿಂತನ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಬಸವರಾಜ ಮಠಪತಿ ಗೋರ್ಟಾ ಮಾತ ನಾಡಿ,ಗುರುವಿನ ಮಹಿಮೆ ಅಪಾರ. ಗುರುವಿನಲ್ಲಿ ಅಪಾರ ಶಕ್ತಿ ಇದೆ. ನಮ್ಮ ಪರಿವಾರ ಸದಾ ಗುರುವಿನಲ್ಲಿ ಶ್ರದ್ಧೆ ಭಕ್ತಿಯಿಂದ ನಡೆದುಕೊಳ್ಳುವುದರಿಂದ ಸುಖ ಶಾಂತಿ ದೊರೆಯಲಿದೆ ಎಂದರು.

ಈ ಸಂಧರ್ಭದಲ್ಲಿ ಶಿಕ್ಷಕ ಬಸವಕಾಂತ ಗೋಣಿ, ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ,ಶ್ರೀಮದ್ವೀರಶೈವ ಸದ್ಬೋ ಧನ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಪ್ರೊ ದಯಾನಂದ ಶೀಲವಂತ, ಗುರುಲಿಂಗಯ್ಯ ಕಟಗಿಮಠ, ಗುರು ಲಿಂಗಯ್ಯ ಮಠಪತಿ, ಮಲ್ಲಿಕಾರ್ಜುನ ನಂದಿ, ರೇವಣಸಿದ್ಧಯ್ಯ ಮಠಪತಿ, ಡಾ. ಬಸವರಾಜ ಸ್ವಾಮಿ, ಸುಭಾಷ ಕುಂಬಾರ, ಧನಂಜಯ, ಸಂಜು ಕಲ್ಯಾಣಿ, ಚಂದ್ರಶೇಖರ್ ಸ್ವಾಮಿ, ಪಾರ್ವತಿ ಮಠಪತಿ ಸೇರಿ ಅನೇಕರಿದ್ದರು. ವೀರಣ್ಣ ಶೀಲವಂತ ಪ್ರಾರ್ಥನಾಗೀತೆ ಹಾಡಿದರು. ಪ್ರೊ ರುದ್ರೇಶ್ವರ ಸ್ವಾಮಿ ಸ್ವಾಗತಿಸಿದರು. ಅಭಿಷೇಕ ರಾಮಣ್ಣ ನಿರೂಪಿಸಿದರು.

ಕಲಬುರಗಿ ಉದಯವಾಣಿ
ಗುರುವಾರ, ನವೆಂಬರ್ 7, 2019

ಯುವ ಪೀಳಿಗೆಗೆ ರಾಠೋಡ ಮಾದರಿ



ಬಸವಕಲ್ಯಾಣ: ನಗರದ ನೀಲಾಂಬಿಕಾ ಪ.ಪೂ ಕಾಲೇಜಿನಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಕರ್ನಾಟಕ ರಾಜ್ಯೋತ್ಸವ ಪುರಸ್ಕೃತ ಭೀಮಸಿಂಗ್ ರಾಠೋಡ ಅವರನ್ನು ಸತ್ಕರಿಸಲಾಯಿತು.

ಬಸವಕಲ್ಯಾಣ: ಕಲಾವಿದ ಭೀಮಸಿಂಗ್ ರಾಠೋಡ ಕೇವಲ ಹೊಟ್ಟೆಪಾಡಿಗಾಗಿ ನೌಕರಿ ಮಾಡಿ ಬದುಕದೇ ಸಂಗೀತ, ಗಾಯನ ಮತ್ತು ಭಜನೆಗಾಗಿ ಜೀವನ ಮುಡುಪಾಗಿಟ್ಟಿದ್ದಾರೆ ಎಂದು ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಭೀಮಸಿಂಗ್ ರಾಠೋಡ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸಿಕ್ಕಿರುವ ಹಿನ್ನೆಲೆಯಲ್ಲಿ ತಾಲೂಕು ಉಪನ್ಯಾಸಕರ ಸಂಘ ಹಾಗೂ ಶರಣರ ನಾಡು ಪದವಿ ಮಹಾವಿದ್ಯಾಲಯದಲ್ಲಿ ನಗರದ ನೀಲಾಂಬಿಕಾ ಪ.ಪೂ ಕಾಲೇಜಿನಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಸಾನಿಧ್ಯ ವಹಿಸಿ ಅವರು ಮಾತನಾಡಿ, ತಮ್ಮನ್ನು ತಾವು ಕಲಾ ಸೇವೆಗೆ ಸಮರ್ಪಿಸಿಕೊಂಡ ಸಾಧಕರು. ಇವರು ಮುಂದಿನ ಪೀಳಿಗೆಗೆ ಮಾದರಿಯಾಗಿದ್ದಾರೆ ಎಂದರು.

ಮುಖಂಡ ಅರ್ಜುನ ಕನಕ ಮಾತನಾಡಿ, ಭೀಮಸಿಂಗ್ ರಾಠೋಡ ಅಪ್ಪಟ ಗ್ರಾಮೀಣ ಪ್ರತಿಭೆ. ಎಲೆ ಮರೆ ಕಾಯಿಯಂತೆ ಅವರು ಸಲ್ಲಿಸಿದ ಸೇವೆ ಪರಿಗಣಿಸಿ ರಾಜ್ಯೋತ್ಸವ ಪ್ರಶಸ್ತಿ ಸಿಕ್ಕಿರುವುದು ಸಂತೋಷದ ಸಂಗತಿ ಎಂದರು.

ಪ್ರೊ। ನರಸಿಂಗ್‌ರೆಡ್ಡಿ ಗದ್ಲೇಗಾಂವ್ ಮಾತನಾಡಿ, ನಮ್ಮ ಭಾಗದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪಡೆದ ಭೀಮಸಿಂಗ್ ರಾಠೋಡ ನಮಗೆಲ್ಲ ಸ್ಫೂರ್ತಿ ಎಂದರು.

ಚೆನ್ನವೀರ ಎಸ್.ವಿ.ಜಮಾದಾರ್ ಮಾತನಾಡಿ, ಬೀದರ್ ಜಿಲ್ಲೆಗೆ ಈ ಬಾರಿ 2 ರಾಜ್ಯೋತ್ಸವ ಪ್ರಶಸ್ತಿ ಬಂದಿರುವುದು ಹೆಮ್ಮೆಯ ವಿಷಯ ಎಂದರು.

ಸುರೇಶ ಅಕ್ಕಣ್ಣ ಅಧ್ಯಕ್ಷತೆ ವಹಿಸಿದರು. ಮನೋಹರ ಮೈಸೆ, ಧನಸಿಂಗ್ ರಾಠೋಡ, ಅನಿಲಕುಮಾರ ರಜೇರೆ, ಚಂದ್ರಕಾಂತ ಕಿವಡೆ, ಅಶೋಕರೆಡ್ಡಿ ಅನಂದ ಬಾಬು ಹೊನ್ನನಾಯಕ, ಸುಧಾಕರ್ ಮಹೇಂದ್ರಕರ್, ಶರಣಪ್ಪ ಕೆ.ಜಿ, ವಿಜಯಕುಮಾರ ಜಾಧವ ಇತರರು ಇದ್ದರು. ಚೆನ್ನವೀರ ಜಮಾದಾ ನಿರೂಪಿಸಿದರು. ಅಶೋಕರೆಡ್ಡಿ ಸ್ವಾಗತಿಸಿದರು.

ಪ್ರಜಾಯಕರ್ನಾಟಕ
ಶುಕ್ರವಾರ,8 ನವೆಂಬರ್ 2019

ಶ್ರೀಮಹಾಲಕ್ಷ್ಮಿ ಮೂರ್ತಿ ಪ್ರತಿಷ್ಠಾಪನೆ | ಕಳಸಾರೋಹಣ | ಧರ್ಮ ಸಭೆ

ದೇವರ ಮೇಲಿರಲಿ ನಂಬಿಕೆ



ಬಸವಕಲ್ಯಾಣ ತಾಲೂಕಿನ ಹಣಮಂತವಾಡಿ (ಎಂ) ಗ್ರಾಮದಲ್ಲಿ ಶ್ರೀಮಹಾಲಕ್ಷ್ಮಿ ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಹಾಗೂ ಧರ್ಮ ಸಭೆ ಕಾರ್ಯಕ್ರಮದಲ್ಲಿ ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು

ವಿಕ ಸುದ್ದಿಲೋಕ ಬಸವಕಲ್ಯಾಣ

ತಾಲೂಕಿನ ಹಣಮಂತವಾಡಿ (ಎಂ) ಗ್ರಾಮದಲ್ಲಿ ಶ್ರೀ ಮಹಾಲಕ್ಷ್ಮೀ ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಹಾಗೂ ಧರ್ಮ ಸಭೆ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮದ ಸಾನಿಧ್ಯ ವಹಿಸಿ ಅಶೀರ್ವಚನ ನೀಡಿದ ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ಭಕ್ತರು ಧರ್ಮ, ಅಧ್ಯಾತ್ಮಿಕದಿಂದ ಜೀವನ ಸಾಗಿಸಿದರೆ ಜೀವನದಲ್ಲಿ ಸುಖ, ಶಾಂತಿ ನೆಮ್ಮದಿ ಕಾಣಲು ಸಾಧ್ಯ ಎಂದರು.

ಅಲ್ಲದೆ ಭಕ್ತಿ ಪೂರ್ವಕವಾಗಿ ದೇವರಿಗೆ ನಿತ್ಯ ನಮಸ್ಕರಿಸುವ ಪರಂಪರೆ ರೂಢಿಸಿಕೊಳ್ಳಬೇಕು ಎಂದ ಶ್ರೀಗಳು, ಭಕ್ತಿಯೊಂದಿದ್ದರೆ ಕಲ್ಲೂ ಕೂಡಾ ದೇವರಾಗುತ್ತದೆ. ದೇವಸ್ಥಾನ ಅದೊಂದು ಪವಿತ್ರ ತಾಣ ಎಂಬ ಭಾವನೆ ಬಂದ ಬರುತ್ತದೆ.ಆಗ ಕೆಟ್ಟದನ್ನೆಲ್ಲಾ ಹೊರಗಿಟ್ಟು ಭಕ್ತಿಯಿಂದ ಒಳಗೆ ಹೋಗಬೇಕೆಂಬ ಎಚ್ಚರ ನಮ್ಮಲ್ಲಿ ಜಾಗೃತಗೊಳ್ಳಲಿದೆ ಎಂದರು.ದೇವರ ಮೇಲೆ ನಂಬಿಕೆ ಇಟ್ಟರೆ ದೇವರು ಎಂದು ನಮಗೆ ಕೈ ಬಿಡುವುದಿಲ್ಲ ಎಂದರು.ಮಾತೆ ಮಹಾದೇವಿ ತಾಯಿ ಅವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಜಿ ಪಂ ಸದಸ್ಯೆ ನಿರ್ಮಲಾ ಮಾನೆಗೋಪಾಳೆ ಉಪಸ್ಥಿತರಿದ್ದರು. ಗ್ರಾಮದ ಹಿರಿಯ ರಾದ ಬಾಬು ರೆಡ್ಡಿ ನಾರಾಯಣರಾವ, ಧನರಾಜ ಪಾಟೀಲ್, ನಾಮದೇವ, ಪಂಡಿತ ರೆಡ್ಡಿ ಶ್ರೀರಂಗ, ಶಿವರಾಜ ಪಾಟೀಲ್, ರಾಜರೆಡ್ಡಿ ಕಲ್ಯಾಣೆ, ಮಾಣಿಕ ರೆಡ್ಡಿ ಸುಭಾಷ, ಅರವೀಂದ ವಿಟೋಬಾನೆ, ಶಿವರಾಜ ಪೂಜಾರಿ ಸೇರಿ ಅನೇಕರಿದ್ದರು.

ಪ್ರಜಾಯಕರ್ನಾಟಕ

Scanned with OKEN Scanner

ಚಾಂಗಲೇರಾ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಧರ್ಮ ಸಭೆಯಲ್ಲಿ ತಡೋಳಾ ಮೆಹಕರ್ ಶ್ರೀಗಳ ಆಗ್ರಹ

ಚಾಂಗಲೇರಾದಲ್ಲಿ ವೇದಪಾಠ ಶಾಲೆ ಆರಂಭಿಸಿ

ವಿಕ ಸುದ್ದಿಲೋಕ ಚಿಟಗುಪ್ಪ

ಚಾಂಗಲೇರಾದ ವೀರಭದ್ರೇಶ್ವರ ದೇವಸ್ಥಾನದಲ್ಲಿ ವೇದಪಾಠ ಶಾಲೆ ಆರಂಭಿಸಬೇಕು ಎಂದು ತಡೋಳಾ ಮೆಹಕರ್ ರಾಜೇಶ್ವರ ಶಿವಾಚಾರ್ಯರು ಹೇಳಿದರು.

ವೀರಭದ್ರೇಶ್ವರರ ಜಾತ್ರಾ ಮಹೋತ್ಸವ ನಿಮಿತ್ತ ಬುಧವಾರ ರಾತ್ರಿ ನಡೆದ ಧರ್ಮಸಭೆಯಲ್ಲಿ ಮಾತನಾಡಿದ ಅವರು,ತಾವು ಹಲವು ವರ್ಷಗಳಿಂದ ಮನವಿ ಸಲ್ಲಿಸುತ್ತಾ ಬಂದಿದ್ದೇವೆ. ಆದರೆ,ಇಲ್ಲಿವರೆಗೂ ಆಗಿಲ್ಲ ಆದಷ್ಟು ಬೇಗ ಇಲ್ಲಿ ಒಂದು ವೇದ ಪಾಠಶಾಲೆ ಆರಂಭಿಸಲು ಸರ್ಕಾರ ಮುಂದಾಗಬೇಕು ಎಂದು ಹೇಳಿದರು.

ಜಾತ್ರಾ ಮಹೋತ್ಸವಗಳು ಭಾವೈಕ್ಯತೆಯ ಪ್ರತೀಕವಾಗಿವೆ. ಚಾಂಗಲೇರಾ ಗ್ರಾಮದ ವೀರಭದ್ರೇಶ್ವರರ ಮಹಿಮೆ ಅಪಾರ. ಲಕ್ಷಾಂತರ ಭಕ್ತಾದಿಗಳು ಮಂದಿರಕ್ಕೆ ಆಗಮಿಸುವರು. ಕಾರಣ ಇಲ್ಲಿ ಸುಸಜ್ಜಿತ ಭವ್ಯ ಯಾತ್ರಿ ಭವನ ನಿರ್ಮಾಣ, ಮಹಾದ್ವಾರ ನಿರ್ಮಾಣ ಸೇರಿ' ಹಲವು ಜನಪರ ಯೋಜನೆಗಳನ್ನು ಜಾರಿಗೆ ತರಬೇಕಿದೆ ಎಂದರು. ಶಾಸಕ ಬಂಡೆಪ್ಪ ಕಾಶೆಂಪುರ ಮಾತನಾಡಿ,ಚಾಂಗಲೇರಾ ವೀರಭದ್ರೇಶ್ವರರ ಮಹಿಮೆ ಅಪಾರ.ಇಲ್ಲಿ ಜಾತಿ ಮತ ಭೇದವೆನ್ನದೇ ಎಲ್ಲಾ ಸಮಾಜ ಬಾಂಧವರು ಒಟ್ಟಾಗಿ ಸೇವೆ ಸಲ್ಲಿಸುತಿರುವುದು ಹೆಮ್ಮೆಯ ವಿಷಯವಾಗಿದೆ. ಮಂದಿರ ಅಭಿವೃದ್ಧಿಗೆ ನಾನು ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. ಮುಂದೆಯೂ ಸಹ ಮಂದಿರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುವುದಾಗಿ ಹೇಳಿದರು.

ಯುವ ಮುಖಂಡ ಸಂತೋಷ ರಾಸೂರ ಮಾತನಾಡಿ,ಚಾಂಗಲೇರಾ ವೀರಭದ್ರೇಶ್ವರ ಮಂದಿರವು ಅಭಿವೃದ್ಧಿ ಪಥದತ್ತ ಸಾಗಿದ್ದು ,ಮಂದಿರದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು.

ಹುಮನಾಬಾದ ಹಿರೇಮಠ ಸಂಸ್ಥಾನದ ರೇಣುಕ ಗಂಗಾಧರ ಶಿವಾಚಾರ್ಯರು, ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರ ಮುನಿ ಶಿವಾಚಾರ್ಯರು ಮಾತನಾಡಿದರು. ಹುಮನಾಬಾದ ತಹಸೀಲ್ದಾರ ನಾಗಯ್ಯ ಹಿರೇಮಠ, ಚಿಟಗುಪ್ಪ ತಹಸೀಲ್ದಾರ ಮಹಮದ್ ಜಿಯಾವುದ್ದೀನ್, ಮಂದಿರದ ಅಧ್ಯಕ್ಷ ವಿಜಯಕುಮಾರ ವಾಲಿ, ಜಯಸಿಂಗ ರಾಠೋಡ್, ರಾಮುಲು ಮಂತ್ರಿ, ಜಗನಾಥ ಬೇಡರ, ಸುಭಾಷ ಆರಡ್ಡಿ, ಸಂಗಮೇಶ ಥೊಂಟಿ, ಏಶಪ್ಪ ಉಪಾರ ಸೇರಿ ಅನೇಕರಿದ್ದರು. ರವಿ ಘಾರೇಲ್ ನಿರೂಪಿಸಿದರು. ರಾಜಶೇಖರ ಮಳ್ಳಿ ವಂದಿಸಿದರು.



ಚಿಟಗುಪ್ಪ ತಾಲೂಕಿನ ಚಾಂಗಲೇರಾ ಗ್ರಾಮದ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ನಡೆದ ಧರ್ಮಸಭೆಯಲ್ಲಿ ರಾಜೇಶ್ವರ ಶಿವಾಚಾರ್ಯರು ಮಾತನಾಡಿದರು. ಶಾಸಕ ಬಂಡೆಪ್ಪ ಕಾಶೆಂಪುರ, ಸಂತೋಷ ರಾಸೂರ ಸೇರಿ ಅನೇಕರಿದ್ದರು.

ಸಂಭ್ರಮದ ರಥೋತ್ಸವ

ತಾಲೂಕಿನ ಚಾಂಗಲೇರಾ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಬುಧವಾರ ರಾತ್ರಿ ಭವ್ಯ ರಥೋತ್ಸವವು ಸಂಭ್ರಮದಿಂದ ಜರುಗಿತು. ವೀರಭದ್ರೇಶ್ವರ ಮಹಾರಾಜ ಕೀ ಜಯ ಎಂಬ ಜಯ ಘೋಷಗಳ ನಡುವೆ ಪುಷ್ಪಾಲಂಕೃತ ಭವ್ಯ ರಥವನ್ನು ಭಕ್ತಾದಿಗಳು ಎಳೆದು ಪುನಿತರಾದರು. ಶಾಸಕ ಬಂಡೆಪ್ಪ ಕಾಶೆಂಪುರ ರಥಕ್ಕೆ ವಿಶೇಷ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ಜಾತ್ರೋತ್ಸವ ನಿಮಿತ್ತ ಪ್ರತಿದಿನ ವಿಶೇಷ ರುದ್ರಾಭಿಷೇಕ ಪೂಜೆ, ಮಹಾಮಂಗಳಾರತಿ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ರಥೋತ್ಸವದಲ್ಲಿ ಪುರವಂತರ ಸೇವೆ ವೀರಗಾಸಿ ಕುಣಿತ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ವಿಜಯ ಕರ್ನಾಟಕ ಶುಕ್ರವಾರ,15 ನವೆಂಬರ್ 2019

Scanned with OKEN Scanner

'ಮನೆ ಮನಗಳಲ್ಲಿ ಸದ್ಭಾವ ಚಿಂತನ' ಮಾಸಿಕ ಹುಣ್ಣಿಮೆ ಕಾರ್ಯಕ್ರಮ

ಕರ್ನಾಟಕ ಸಂಧ್ಯಾಕಾಲ

ಬಸವಕಲ್ಯಾಣ : ಸದಾ ಸದ್ಗುರುವಿನ ದರ್ಶನ, ಸಾಮಿಪ್ಯ, ಸಜ್ಜನರ ಸಹವಾಸದಿಂದ ಜೀವನ ಸಾರ್ಥಕ ಮಾಡಿಕೊಳ್ಳಬಹುದು ಎಂದು ನಗರದ ಸಂಸ್ಥಾನ ಗವಿಮಠದ ಪೂಜ್ಯಶ್ರೀ ಷ. ಬ್ರ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಪ್ರತಿ ತಿಂಗಳಿನಂತೆ ನ. ೧೧ ರಂದು ನಗರದ ಎನ್. ಜಿ. ಓ. ಕಾಲೋನಿಯ ನಿವಾಸಿ ಹುಮನಾಬಾದನ ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಬಸವರಾಜ ಮರಪತಿ ಗೋರ್ಟಾ ಅವರ ಮನೆಯಲ್ಲಿ ಸಾಯಂಕಾಲ ನಡೆದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಅವರು ಪ್ರತಿಯೊಬ್ಬರು ಜೀವನದಲ್ಲಿ ಗುರುಗಳ, ಸಜ್ಜನರ ಸಹವಾಸ, ಭಗವಂತನನ್ನು ಭಜಿಸುತ್ತ, ಎಲ್ಲರನ್ನು ದಯೆ, ಕರುಣೆ, ಪ್ರೀತಿಯಿಂದ ಕಾಣುತ್ತ, ಧರ್ಮ ಪರಿಪಾಲನೆ ಮಾಡುತ್ತ, ಎಲ್ಲರಿಗೂ ಉಪಕಾರ ಮಾಡುತ್ತ ಬದುಕಿದಾಗ ಶಾಂತಿ ನೆಮ್ಮದಿ ಸದಾ ದೊರೆಯುವವು ಎಂದು ಬೋಧಿಸಿದರು.

ಮುಖ್ಯ ಅತಿಥಿಯಾಗಿದ್ದ ನಗರದ ಪುಣ್ಯಕೋಟಿ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಸೂರ್ಯಕಾಂತ ಶೀಲವಂತ ಅವರು ಮಾತನಾಡುತ್ತ ಭಕ್ತರು ಸದಾ ಧರ್ಮ ಚಿಂತನೆಯಲ್ಲಿ ತೊಡಗುವುದು ಒಳ್ಳೆಯದು.

ಮನಸ್ಸುಗಳು ಒಡೆಯಲು ಒತ್ತಡದ ಬದುಕೂ ಕಾರಣ. ಆ ಒಡೆದ ಮನಸ್ಸುಗಳನ್ನು ಒಂದು ಗೂಡಿಸೋದೂ ಈ ಸದ್ಭಾವ ಚಿಂತನ ಕಾರ್ಯಕ್ರಮದ ಉದ್ದೇಶ. ಇಂಥಾ ಮಹಾ ಕಾರ್ಯವನ್ನು ಪ್ರತಿ ●●6ನೇ ಪುಟಕ್ಕೆ



ಕರ್ನಾಟಕ ಸಂಧ್ಯಾಕಾಲ ಬುಧವಾರ, ನವೆಂಬರ್ 13, 2019

ಕಲಾವಿದರಿಂದ ನಾಡಿನ ಕೀರ್ತಿ ಹೆಚ್ಚಳ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಭೀಮಸಿಂಗ ರಾಠೋಡ್ ಕೇವಲ ಹೊಟ್ಟೆ ಪಾಡಿಗಾಗಿ ನೌಕರಿ ಮಾಡದೇ ಸಂಗೀತ, ಗಾಯನ, ಭಜನೆ, ನಾಟಕ ಗೀತ ರಚನೆಗಾಗಿ ತಮ್ಮ ಬದುಕನ್ನೇ ಮೀಸಲಿಟ್ಟವರು. ತಮ್ಮನ್ನು ತಾವು ಕಲಾ ಸೇವೆಗೆ ಸಮರ್ಪಿಸಿಕೊಂಡ ಸಾಧಕರು ಎಂದು ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಶರಣರ ನಾಡು ಪದವಿ ಮಹಾವಿದ್ಯಾಲಯ ಹಾಗೂ ತಾಲೂಕು ಉಪನ್ಯಾಸಕರ ಸಂಘ ವತಿಯಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದ ಭೀಮ ಸಿಂಗ್ ಎಸ್. ರಾಠೋಡ್ ಹಾಮುನಗರ ಅವರಿಗೆ ಹಮ್ಮಿ ಕೊಂಡಿದ್ದ ಸನ್ಮಾನ ಹಾಗೂ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

ಮುಖಂಡ ಅರ್ಜುನ ಕನಕ ಮಾತನಾಡಿ, ಭೀಮಸಿಂಗ ರಾಠೋಡ್ ಅಪ್ಪಟ ಗ್ರಾಮೀಣ ಪ್ರತಿಭೆ. ಎಲೆ ಮರೆಯ ಕಾಯಿಯಂತೆ ಅವರು ಸಲ್ಲಿದ ಸೇವೆ ಪರಿಗಣಿಸಿ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ಇವರ ಸರಳ ಸ್ವಭಾವ ಮತ್ತು ಸೇವಾ ಮನೋಭಾವ ಮೆಚ್ಚುವಂತಹದ್ದು ಎಂದು ಹೇಳಿದರು.

ಪ್ರಾಧ್ಯಾಪಕ ನರಸಿಂಗರೆಡ್ಡಿ ಗದಲೆಗಾಂವ ಮಾತನಾಡಿ, ನಮ್ಮ ಭಾಗದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪಡೆದ ಭೀಮಸಿಂಗ್ ರಾಠೋಡ್ ಅವರು ನ ಮಗಳ್ಳು ಸ್ಫೂರ್ತಿಯಾಗಿದ್ದಾರೆ ಎಂದರು. ಸಾಕ್ಷರತಾ ಸಂಯೋಜಕ ಚನ್ನವೀರ ಎಸ್. ಜಮಾದಾರ ಮಾತನಾಡಿ, ಈ ಸಲ ನಮ್ಮ ಜಿಲ್ಲೆಗೆ 2 ರಾಜ್ಯೋತ್ಸವ ಪ್ರಶಸ್ತಿಗಳು ಬಂದಿವೆ. ಆದರಲ್ಲಿಯೂ ಎರಡೂ ಪ್ರಶಸ್ತಿಗಳು ನಮ್ಮ ತಾಲೂಕಿಗೆ ಬಂದಿರುವದು ನಮಗೆ ಹೆಮ್ಮೆ ತಂದಿದೆ ಎಂದರು. ಉಪ ನ್ಯಾಸಕ ವಿಜಯಕುಮಾರ ಜಾಧವ, ಮನೋಹರ ಮೈಸೆ, ಧನಸಿಂಗ ರಾಠೋಡ್, ಭೀಮಸಿಂಗ ರಾಠೋಡ್ ಮಾತನಾಡಿದರು.



ಬಸವಕಲ್ಯಾಣದ ನಗರದ ಶರಣರ ನಾಡು ಪದವಿ ಮಹಾವಿದ್ಯಾಲಯ ಹಾಗೂ ತಾಲೂಕು ಉಪನ್ಯಾಸಕರ ಸಂಘ ವತಿಯಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದ ಭೀಮಸಿಂಗ್ ಎಸ್. ರಾಠೋಡ್ ಅವರಿಗೆ ಸನ್ಮಾನಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮತ್ತಿತರರು ಇದ್ದರು.

ಸುರೇಶ ಅಕ್ಕಣ್ಣ ಮನೋಹರ ಮೈಸೆ, ಧನಸಿಂಗ ರಾಠೋಡ್, ಅನಿಲ ಕುಮಾರ್ ರಂಜೇರೆ, ಚಂದ್ರಕಾಂತ ಕಿ ವಡೆ, ನರಸಿಂಗರೆಡ್ಡಿ ಗದಲೇಗಾಂವ್, ಅಶೋ ಕರೆಡ್ಡಿ ಮಾನ ವಾದಸ ರಾಠೋಡ್, ಆ ನಂದ ಬಾಬು ಹೊನ ನ್ನಾಯಕ, ವಿಜಯಕುಮಾರ ಜಾಧವ, ವಿನೋದ ರಾಠೋಡ್, ಗೋಲಾ ರಾಠೋಡ್, ರಾಮ ಸಿಂಗ್, ಸುಧಾಕರ್ ಮಹೇಂದ್ರಕರ್, ಶರಣಪ್ಪಕೆ ಜಿ ಸೇರಿ ಅನೇಕರಿದ್ದರು. ಚನ್ನವೀರ ಜಮಾದಾರ ನಿರೂಪಿಸಿದರು. ಅಶೋಕರೆಡ್ಡಿ ಸ್ವಾಗತಿಸಿ,ವಂದಿಸಿದರು.

ವಿಜಯ ಕರ್ನಾಟಕ ಸೋಮವಾರ,11 ನವೆಂಬರ್ 2019

Scanned with OKEN Scanner

ವಿಜಯ ಕರ್ನಾಟಕ
ಬುಧವಾರ,25 ಡಿಸೆಂಬರ್ 2019

ನೀಲಾಂಬಿಕಾ ಪಿಯು ಕಾಲೇಜಿನಲ್ಲಿ ಜನಪದ ವೈದ್ಯ ಪದ್ಧತಿ ಕಾರ್ಯಗಾರ

ಭಾರತೀಯ ವೈದ್ಯ ಪದ್ಧತಿ ಜಗತ್ತಿನಲ್ಲಿಯೇ ಶ್ರೇಷ್ಠ

ಬಸವಕಲ್ಯಾಣ: ಭಾರತೀಯ ವೈದ್ಯ ಪದ್ಧತಿ ಜಗತಿನಲ್ಲೇ ಅತ್ಯಂತ ಶ್ರೇಷ್ಠವಾ ದದ್ದು, ನಾಟಿ ವೈದ್ಯ ಪದ್ಧತಿ ಉಳಿಸುವ ಜವಾಬ್ದಾರಿ ಪ್ರತಿಯೊಬ್ಬ ಭಾರತೀಯನ ಮೇಲಿದೆ ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತಾಲೂಕು ಜಾನಪದ ಪರಿಷತ್ತು, ನವದೆಹಲಿಯ ಸಂಸ್ಕೃತಿ ಮಂತ್ರಾಲಯ, ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ತು ಸಹಯೋಗದಲ್ಲಿ ನಗರದ ನೀಲಾಂಬಿಕಾ ಸರಕಾರಿ ಪಿಯು ಕಾಲೇಜಿನಲ್ಲಿ ಹಮ್ಮಿಕೊಂಡ ಜನಪದ ವೈದ್ಯ ಪದ್ಧತಿ ಕಾರ್ಯಗಾರದ ಸಾನಿಧ್ಯ ವಹಿಸಿ ಮಾತನಾಡಿದರು.

ಆಧುನಿಕ ಕಾಲದ ಜೀವನ ಶೈಲಿ ಆಹಾರ, ವಿಹಾರ ಮನುಷ್ಯನ ರೋಗಕ್ಕೆ ಕಾರಣವಾಗಿದೆ. ಪಾರಂಪರಿಕ ವೈದ್ಯ ಪದ್ಧತಿ, ಆಹಾರ ಪದ್ಧತಿಗಳು ಆರೋಗ್ಯ ಕಾಪಾಡುತ್ತಿದ್ದವು. ನಾಟಿ ವೈದ್ಯ ಪದ್ಧತಿ ಸಂರಕ್ಷಿಸುವ ಬೆಳೆಸುವ ಜವಬ್ದಾರಿ ಪಿಳಿಗೆಯ ಮೇಲಿದೆ. ಆಯುರ್ವೆದ ವೈದ್ಯ ಪದ್ಧತಿಯಿಂದ ಯಾವುದೇ ಅಡ್ಡ ಪರಿಣಾಮಗಳಿಲ್ಲ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಸುರೇಶ ಅಕ್ಕಣ್ಣಾ ಮಾತನಾಡಿ, ಇಂದಿನ ಕಾಲದಲ್ಲಿ ನಾಟಿ ವೈದ್ಯ ಪದ್ಧತಿಯ ಅರಿವು ವಿದ್ಯಾರ್ಥಿಗಳಿಗೆ ಅಗತ್ಯವಿದೆ. ಮನೆ ಮದ್ದಿನ ಬಗ್ಗೆ ಪ್ರಜ್ಞೆ ಇರಬೇಕಾದ ಅನಿವಾರ್ಯತೆಯೂ ಇದೆ. ಸರಳ ಜೀವನ ಶೈಲಿ ಅಳವಡಿಸಿಕೊಂಡು ಔಷಧಿವಿರುವ ಆಹಾರ ಸ್ವಿಕರಿಸಿ ಎಂದು ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರ ಪದವಿ ಪೂರ್ವ ಕಾಲೇಜು ಉಪನ್ಯಾಸರಕ ಸಂಘದ ರಾಜ್ಯ ಕಾರ್ಯದರ್ಶಿ ನರಸಿಂಗರೆಡ್ಡಿ ಗದಲೆಗಾಂವ ಮಾತನಾಡಿ, ನಿಸರ್ಗ ನಮಗೆ ಅನೇಕ ಆರೋಗ್ಯಕರ ಪರಿಸರ ಆಹಾರ ಒದಗಿಸಿದೆ. ಆಧುನಿಕ ಜೀವನ ಶೈಲಿಯಿಂದ ಮನುಷ್ಯನ ಆರೋಗ್ಯ ಅಪಾಯಕ್ಕೆ ಸಿಲುಕಿದೆ. ಜನಪದ ವೈದ್ಯ ಪದ್ಧತಿಯ ಅರಿವು ಇಂದಿನ ಅಗತ್ಯ ಎಂದರು.

ಜಾನಪದ ಪರಿಷತ್ ತಾಲೂಕು ಘಟಕದ ಅಧ್ಯಕ್ಷ ಡಾ.ಬಸವರಾಜ ಸ್ವಾಮಿ ಪ್ರಾಸ್ತಾವಿಕ ಮಾತನಾಡಿದರು. ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ ಕಾರ್ಯದರ್ಶಿ ಡಾ. ರಾಜಕುಮಾರ ಹೆಬ್ಬಾಳೆ ಸ್ವಾಗತಿಸಿದರು. ಕರುಣಾ ಬಡುರೆ ನಿರೂಪಿಸಿದರು. ಮನಿಶಾ ವಂದಿಸಿದರು.

ಪ್ರಕಾಶ ಕನ್ನಾಳೆ, ಎಸ್.ಜಿ. ಹುಡೇದ್, ಲಕ್ಷ್ಮೀಬಾಯಿ ಪಾಟೀಲ್, ಡಾ. ಶಿವಲಿಲಾ ಮಠಪತಿ, ಕೆ.ಜಿ.ಶರಣಪ್ಪಾ, ಶಿವಪೂತ್ರ ಸಂಗನಬಸವ, ಧನರಾಜ ರಾಜೋಳೆ ಇದ್ದರು.



ಬಸವಕಲ್ಯಾಣ ತಾಲೂಕು ಜಾನಪದ ಪರಿಷತ್ತು, ನವದೆಹಲಿಯ ಸಂಸ್ಕೃತಿ ಮಂತ್ರಾಲಯ, ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ತು ಸಹಯೋಗದಲ್ಲಿ ಜನಪದ ವೈದ್ಯ ಪದ್ಧತಿ ಕಾರ್ಯಗಾರದಲ್ಲಿ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ವಿಜಯ ಕರ್ನಾಟಕ
ಬುಧವಾರ,4 ಮಾರ್ಚ್ 2020

ಕನ್ನಡ ಭಾಷೆ ಉಸಿರಾಗಲಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಕನ್ನಡ ಭಾಷೆ ನಮ್ಮ ಉಸಿರಾಗಬೇಕು, ಕನ್ನಡ ನಮ್ಮ ತಾಯಿ ಭಾಷೆಯಾಗಿದೆ.ಹೀಗಾಗಿ ಕನ್ನಡ ನೆಲದಲ್ಲಿ ವಾಸಿಸುವ ಪ್ರತಿಯೊಬ್ಬರು ಮೊದಲು ಕನ್ನಡ ಭಾಷೆಗೆ ಆದ್ಯತೆ ನೀಡುವ ಮೂಲಕ ಕನ್ನಡಕ್ಕೆ ಮಹತ್ವ ನೀಡಬೇಕು ಎಂದು ತಹಸೀಲ್ದಾರ ಸಾವಿತ್ರಿ ಶರಣು ಸಲಗರ ಹೇಳಿದರು.

ಕಲ್ಯಾಣ ಕರ್ನಾಟಕ ಶಿಕ್ಷಣ ಸಂಸ್ಥೆ ವ್ಯಾಪ್ತಿಯ ನಗರದ ವಿದ್ಯಾಚೇತನ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಕರಿ ಬಸವೇಶ್ವರ ಗುಂಪಾ ಮಠ ಶಾಲೆಯ 9ನೇ ವಾರ್ಷಿಕ ಸ್ನೇಹ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಮಕ್ಕಳನ್ನು ಪಾಲಕರು ಕಲಾಳಜಿಪಹಿಸಿ ಅವರ ಮೇಲೆ ನಿಗಾ ಇಡಬೇಕು.ಜತೆಗೆ ಮಗುವಿಗೆ ಬೇಕು-ಬೇಡವಾದದ್ದು ಕೂಡಾ ಯೋಚಿಸಿ ಪಾಲಕರು ನಿರ್ಧರಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿ ತ್ರಿಪುರಾಂತನ ಗವಿ ಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಕಟ್ಟಡ ಬಿದ್ದು ಹೋಗುತ್ತದೆ. ಕೂಡಿಟ್ಟ ಹಣ ಕರಗಿ ಹೋಗುತ್ತದೆ ಆದರೆ ಎದೆಗೆ ಬಿದ್ದ ವಿದ್ಯೆ ಅಜರಾಮರವಾಗಿ ಇರುತ್ತದೆ ಕನ್ನಡ ಭಾಷೆಗೆ ಪ್ರಥಮ ಆದ್ಯತೆ ಕೊಟ್ಟು ಅನ್ಯ ಭಾಷೆಗಳನ್ನು ಕಲಿಯಬೇಕು ಎಂದು ಮನವಿ ಮಾಡಿದರು.ನಗರಸಭೆ ಪೌರಾಯುಕ್ತೆ ಮೀನಾಕುಮಾರಿ ಬೊರಾಳಕರ ಮಾತನಾಡಿ, ಮಾತೃಭಾಷೆಗೆ ಪ್ರಥಮ ಆದ್ಯತೆ ಕೊಟ್ಟು ನಂತರ ಅನ್ಯ ಭಾಷೆಯನ್ನು ಗೌರವಿಸಬೇಕೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಬಸವಲಿಂಗ ಸುಬೇದಾರ ಮಾತನಾಡಿದರು.

ಪ್ರತಿಭಾವಂತ ಮಕ್ಕಳಿಗೆ ಬಹು ಮಾನವನ್ನು ನೀಡಿ ಸನ್ಮಾನಿಸಲಾಯಿತು. ರಾಹುಲ್ ತುತಾರೆ ವಚನಗಾಯನ ನಡೆಸಿ ಕೊಟ್ಟರು. ನಂತರ ಶಾಲಾ ಮಕ್ಕಳು ನಡೆಸಿಕೊಂಡು ಸಾಂಸ್ಕೃತಿಕ ಕಾರ್ಯಕ್ರಮಗಳು ನರೆದ ಜನರ ಮನಸೂರಗೊಂಡವು.

ನಗರಸಭೆ ಸದಸ್ಯೆ ಜ್ಯೋತಿ ದೀಪಕ ಪುರವಂತ, ಸಂಸ್ಥೆಯ ಕಾರ್ಯದರ್ಶಿ ದತ್ತಾತ್ರಿ ಸಿ ಮೂಲಗೆ, ಉಪಾಧ್ಯಕ್ಷ ಸಂಜುರೆಡ್ಡಿ ಯರಬಾಗ, ಮೀನಾಕ್ಷಿ ಅಶೋಕ ಚನ್ನಕೊಟೆ, ಪಾರ್ವತಿ ಆರ್ ಬಿರಾದಾರ, ಸುಲೋಚನಾ ಎಸ್. ಮಾಮಾ, ರೇಖಾ ಪಿ ಕುಸುಮಕರ್, ರವೀಂದ್ರ ಜಿ ಭೂರಳೆ, ಆರತಿ ಎಸ್ ಕಠಾರೆ, ಧನರಾಜ ದೊಡ್ಡಮನಿ, ಕಾಶೀಬಾಯಿ ಗೌರಕರ, ಶಾಲೆ ಮುಖ್ಯಗುರುಗಳು ಹಾಗೂ ಶಿಕ್ಷಕ ವೃಂದದವರು, ಸರ್ವ ಸದಸ್ಯರು ಆಡಳಿತ ಮಂಡಳಿ, ಮಕ್ಕಳು ಉಪಸ್ಥಿತರಿದ್ದರು.



ಬಸವಕಲ್ಯಾಣ ನಗರದ ವಿದ್ಯಾಚೇತನ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಕರಿ ಬಸವೇಶ್ವರ ಗುಂಪಾ ಮಠ ಶಾಲೆಯ 9ನೇ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಪ್ರತಿಭಾವಂತ ಮಕ್ಕಳಿಗೆ ಬಹುಮಾನ ನೀಡಿ ಸನ್ಮಾನಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ತಹಸೀಲ್ದಾರ ಸಾವಿತ್ರಿ ಎಸ್ ಸಲಗರ, ನಗರಸಭೆ ಪೌರಾಯುಕ್ತೆ ಮೀನಾಕುಮಾರಿ ಬೊರಾಳಕರ, ಬಸವಲಿಂಗ ಸುಬೇದಾರ, ದತ್ತಾತ್ರಿ ಸಿ ಮೂಲಗೆ, ಪಾರ್ವತಿ ಆರ್ ಬಿರಾದಾರ ಇದ್ದರು.

ಸಂಯುಕ್ತ ಕರ್ನಾಟಕ
ಮಂಗಳವಾರ, 4, ಡಿಸೆಂಬರ್, 2018, ಕಲಬುರಗಿ



ಬಸವಕಲ್ಯಾಣ: ಕಾರ್ತಿಕ ದೀಪೋತ್ಸವ ಅಂಗವಾಗಿ ತ್ರಿಪುರಾಂತ್‌ನ ಗವಿಮಠದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ದೀಪೋತ್ಸವ ಕಾರ್ಯಕ್ರಮ ನಡೆಯಿತು. ಮಡಿವಾಳಪ್ಪಾ ಪಾಟೀಲ್, ಸೂರ್ಯಕಾಂತ ಬಿರಾದರ, ಪ್ರವೀಣಕುಮಾರ ಚಳಕಾಪುರೆ ಇದ್ದರು.

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಗುರುವಾರ 19 ಡಿಸೆಂಬರ್ 2019
19 DECEMBER 2019

ಶಿವಪುರ ಗ್ರಾಮದಲ್ಲಿ ಹಬ್ಬದ ವಾತಾವರಣ | ಶ್ರೀ ರುದ್ರಮಣಿ ಶಿವಾಚಾರ್ಯ ಸಾನ್ನಿಧ್ಯ

ಸಿದ್ಧಲಿಂಗೇಶ್ವರ ಮಹಾರಾಜರ ಅದ್ಧೂರಿ ಜಾತ್ರೆ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ತಾಲೂಕಿನ ಸುಕ್ಷೇತ್ರ ಶಿವಪುರ ಗ್ರಾಮದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಮಹಾರಾಜರ 51 ನೇ ಜಾತ್ರಾ ಮಹೋತ್ಸವ ಬುಧವಾರ ಶ್ರದ್ಧೆ, ಭಕ್ತಿಯೊಂದಿಗೆ ವಿಜೃಂಭಣೆಯಿಂದ ಜರುಗಿತು. ಜಾತ್ರಾ ಮಹೋತ್ಸವವು ಇಡೀ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಿಸಿತ್ತು.

ಬೆಳಗ್ಗೆ ಗ್ರಾಮದ ಮುಖಂಡರಿಂದ ಪಲ್ಲಕ್ಕಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೆವಣಿಗೆಯಲ್ಲಿ ಮಹಿಳೆಯರ ಚಕ್ರಿ ಭಜನೆ, ಕೋಲಾಟ ಗಮನ ಸೆಳೆಯಿತು. ಪುರವಂತರಾದ ವೆಂಕಟ ಪಂಚಾಳ, ಪ್ರಭುಲಿಂಗ ಸ್ವಾಮಿ ಅವರ ವೀರಭದ್ರ ಕುಣಿತ ನೋಡುಗರ ಹುಬ್ಬೇರಿಸುವಂತೆ ಮಾಡಿತು.

ಆಶೀರ್ವಚನ ನೀಡಿದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮಣಿ ಶಿವಾಚಾರ್ಯರು, ಉತ್ತಮ ಜೀವನ ನಡೆಸಲು ಎಲ್ಲರೂ ಸಂಸ್ಕಾರವಂತರಾಗಿ ನಡೆದುಕೊಳ್ಳಬೇಕು. ಆಸೆ ಇರುವುದು ಸ್ವಭಾವಿಕ. ಆದರೆ ಯಾರಲ್ಲೂ ದುರಾಸೆ ಇರಕೂಡದು. ಜಾತ್ರೆ, ಧಾರ್ಮಿಕ ಆಚರಣೆಗಳು ಸಮಾಜದಲ್ಲಿ ಐಕ್ಯತೆ, ಸಾಮರಸ್ಯ, ಸಹೋದರತ್ವ ಮೂಡಿಸುತ್ತವೆ ಎಂದರು.

ಬಸಮ್ಮ ತಾಯಿ ನೇತೃತ್ವ ವಹಿಸಿದ್ದರು. ಪ್ರಮುಖರಾದ ವಿಶ್ವನಾಥ ಮೂಲಗೆ, ರಾಜಪ್ಪ ಉಮ್ಮರ್ಗೆ, ವೀರಣ್ಣ ಶಂಭುಲಿಂಗ, ಅನೀಲ ಸ್ವಾಮಿ, ವಿದ್ಯಾಸಾಗರ ಮೂಲಗೆ, ಅನೀಲ ಉಮ್ಮರ್ಗೆ, ಕಾಶಣ್ಣ ಉಮ್ಮರ್ಗೆ, ಮಹೇಶ ಮೂಲಗೆ, ನಾಮದೇವ ಜಮಾದಾರ, ಉಮೇಶ ರಾಜೋಳೆ, ಪ್ರೇಮಸಾಗರ ಮೂಲಗೆ, ಶಿವಲಿಂಗ ಮೂಲಗೆ, ಜಗದೀಶ ಖಂಡಾಳೆ, ಆನಂದ ಉಮ್ಮರ್ಗೆ, ಮಹೇಶ ಉಮ್ಮರ್ಗೆ, ಸಿದ್ರಾಮ ಲಕಡೆ, ಕವಿರಾಜ ಕಿಣಗಿ, ಪ್ರಶಾಂತ ಉರ್ಕೆ ಇದ್ದರು. ಮಲ್ಲಪ್ಪ ಕೋಟೆ ಸಂಗೀತ ಸೇವೆ ನೀಡಿದರು. ರಮೇಶ ರಾಜೋಳೆ ನಿರೂಪಣೆ ಮಾಡಿದರು.



ಬಸವಕಲ್ಯಾಣ ತಾಲೂಕಿನ ಶಿವಪುರ ಗ್ರಾಮದಲ್ಲಿ ಬುಧವಾರ ಜರುಗಿದ ಶ್ರೀ ಸಿದ್ಧಲಿಂಗೇಶ್ವರ ಮಹಾರಾಜರ 51ನೇ ಜಾತ್ರಾ ಮಹೋತ್ಸವದಲ್ಲಿ ಶ್ರೀ ರುದ್ರಮಣಿ ಶಿವಾಚಾರ್ಯ ಮಾತನಾಡಿದರು.

ಕಲಬುರಗಿ ವಿಜಯವಾಣಿ
ಬುಧವಾರ, ಡಿಸೆಂಬರ್ 25, 2019

ಭಾರತೀಯ ವೈದ್ಯ ಪದ್ಧತಿ ಜಗತ್ತಿನಲ್ಲೇ ಶ್ರೇಷ್ಠ

ಬಸವಕಲ್ಯಾಣ: ಪರಂಪರೆಯಿಂದ ಬಂದಿರುವ ಭಾರತೀಯ ವೈದ್ಯ ಪದ್ಧತಿ ಜಗತ್ತಿನಲ್ಲೇ ಅತ್ಯಂತ ಶ್ರೇಷ್ಠವಾಗಿದೆ. ಹೀಗಾಗಿ ನಾಟಿ ವೈದ್ಯ ಪದ್ಧತಿ ಉಳಿಸುವ ಜವಾಬ್ದಾರಿ ಪ್ರತಿಯೊಬ್ಬ ಭಾರತೀಯರ ಮೇಲಿದೆ ಎಂದು ತ್ರಿಪುರಾಂತ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ನೀಲಾಂಬಿಕಾ ಸರ್ಕಾರಿ ಪಿಯು ಕಾಲೇಜಿನಲ್ಲಿ ತಾಲೂಕು ಜಾನಪದ ಪರಿಷತ್ತು, ದೆಹಲಿ ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ತು ಸಂಯುಕ್ತಾಶ್ರಯದಲ್ಲಿ ನಡೆದ ಜನಪದ ವೈದ್ಯ ಪದ್ಧತಿ ಕಾರ್ಯಗಾರದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಆಧುನಿಕ ಕಾಲದ ಜೀವನ ಶೈಲಿ ಆಹಾರ-ವಿಹಾರ ಮನುಷ್ಯನ ರೋಗಕ್ಕೆ ಕಾರಣವಾಗಿದೆ ಎಂದು ನುಡಿದರು.

ಪಾರಂಪರಿಕ ವೈದ್ಯ ಪದ್ಧತಿ, ಆಹಾರ ಪದ್ಧತಿಗಳು ಆರೋಗ್ಯ ಕಾಪಾಡುತ್ತಿದ್ದವು. ನಾಟಿ ವೈದ್ಯ ಪದ್ಧತಿ ಸಂರಕ್ಷಿಸುವ ಬೆಳೆಸುವ ಜವಾಬ್ದಾರಿ ಮುಂದಿನ ಪೀಳಿಗೆಯ ಮೇಲಿದೆ. ಆಯುರ್ವೇದ ವೈದ್ಯ ಪದ್ಧತಿಯಿಂದ ಯಾವುದೇ ಅಡ್ಡ ಪರಿಣಾಮಗಳಿಲ್ಲ ಎಂದರು.

ಕಾಲೇಜು ಪ್ರಾಚಾರ್ಯ ಸುರೇಶ ಅಕ್ಕಣ್ಣಾ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನಕಾಲದಲ್ಲಿವಿದ್ಯಾರ್ಥಿಗಳಿಗೆನಾಟಿ ವೈದ್ಯ ಪದ್ಧತಿಯ ಅರಿವು ಅಗತ್ಯವಿದೆ. ಮನೆ ಮದ್ದಿನ ಬಗ್ಗೆ ಪ್ರಜ್ಞೆ ಇರಬೇಕಾದ ಅನಿವಾರ್ಯತೆಯೂ ಇದೆ. ಸರಳ ಜೀವನ ಶೈಲಿ ಅಳವಡಿಸಿಕೊಂಡು ಔಷಧವಿರುವ ಆಹಾರ ಸ್ವೀಕರಿಸಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಸಂಘದ ರಾಜ್ಯ ಕಾರ್ಯದರ್ಶಿ ನರಸಿಂಗರೆಡ್ಡಿ ಗದಲೆಗಾಂವ ಮಾತನಾಡಿ, ನಿಸರ್ಗ ನಮಗೆ ಅನೇಕ ಆರೋಗ್ಯಕರ ಪರಿಸರ ಆಹಾರ ಒದಗಿಸಿದೆ. ಆಧುನಿಕ ಜೀವನ ಶೈಲಿ ಮನುಷ್ಯನ ಆರೋಗ್ಯವನ್ನು ಅಪಾಯಕ್ಕೆ ಸಿಲುಕಿಸಿದೆ. ಈ ಹಿನ್ನೆಲೆಯಲ್ಲಿ ಜನಪದ ವೈದ್ಯ ಪದ್ಧತಿಯ ಅರಿವು ಇಂದಿನ ಅಗತ್ಯ ಎಂದರು. ಜಾನಪದ ಪರಿಷತ್ ತಾಲೂಕು ಘಟಕದ ಅಧ್ಯಕ್ಷ ಡಾ। ಬಸವರಾಜ ಸ್ವಾಮಿ ಪ್ರಸ್ತಾವಿಕವಾಗಿ ಮಾತನಾಡಿದರು.

ಪ್ರಕಾಶ ಕನ್ನಾಳೆ, ಎಸ್.ಜಿ. ಹುಡೇದ್, ಲಕ್ಷ್ಮೀಬಾಯಿ ಪಾಟೀಲ, ಡಾ। ಶಿವಲಿಲಾ ಮಠಪತಿ, ಕೆ.ಜಿ.ಶರಣಪ್ಪಾ ಶಿವಪೂತ್ರ ಸಂಗನಬಸವ, ಧನರಾಜ ರಾಜೋಳೆ ಸೇರಿದಂತೆ ಮತ್ತಿತರರು ಇದ್ದರು. ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ ಕಾರ್ಯದರ್ಶಿ ಡಾ। ರಾಜಕುಮಾರ ಹೆಬ್ಬಾಳೆ ಸ್ವಾಗತಿಸಿದರು. ಕರುಣಾ ಬಡುರೆ ನಿರೂಪಿಸಿದರು. ಮನಿಶಾ ವಂದಿಸಿದರು.



ಬಸವಕಲ್ಯಾಣ: ನೀಲಾಂಬಿಕಾ ಸರ್ಕಾರಿ ಪಿಯು ಕಾಲೇಜಿನಲ್ಲಿ ನಡೆದ ಜನಪದ ವೈದ್ಯ ಪದ್ಧತಿ ಕಾರ್ಯಾಗಾರದಲ್ಲಿ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

Scanned with OKEN Scanner

VIJAYAVANI » KALABURAGI
ಸುದ್ದಿಜಾಲ
ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
ಗುರುವಾರ 19 ಡಿಸೆಂಬರ್ 2019
19 DECEMBER 2019

ಶಿವಪೂರ ಗ್ರಾಮದಲ್ಲಿ ಹಬ್ಬದ ವಾತಾವರಣ | ಶ್ರೀ ರುದ್ರಮಣಿ ಶಿವಾಚಾರ್ಯ ಸಾನ್ನಿಧ್ಯ

ಸಿದ್ಧಲಿಂಗೇಶ್ವರ ಮಹಾರಾಜರ ಅದ್ದೂರಿ ಜಾತ್ರೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ತಾಲೂಕಿನ ಸುಕ್ಷೇತ್ರ ಶಿವಪುರ ಗ್ರಾಮದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಮಹಾರಾಜರ 51 ನೇ ಜಾತ್ರಾ ಮಹೋತ್ಸವ ಬುಧವಾರ ಶ್ರದ್ಧೆ, ಭಕ್ತಿಯೊಂದಿಗೆ ವಿಜೃಂಭಣೆಯಿಂದ ಜರುಗಿತು. ಜಾತ್ರಾ ಮಹೋತ್ಸವವು ಇಡೀ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಿಸಿತ್ತು.

ಬೆಳಗ್ಗೆ ಗ್ರಾಮದ ಮುಖಂಡರಿಂದ ಪಲ್ಲಕ್ಕಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೆವಣಿಗೆಯಲ್ಲಿ ಮಹಿಳೆಯರ ಚಕ್ರಿ ಭಜನೆ, ಕೋಲಾಟ ಗಮನ ಸೆಳೆಯಿತು. ಪುರವಂತರಾದ ವೆಂಕಟ ಪಂಚಾಳ, ಪ್ರಭುಲಿಂಗ ಸ್ವಾಮಿ ಅವರ ವೀರಭದ್ರ ಕುಣಿತ ನೋಡುಗರ ಹುಬ್ಬೇರಿಸುವಂತೆ ಮಾಡಿತು.

ಆಶೀರ್ವಚನ ನೀಡಿದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮಣಿ ಶಿವಾಚಾರ್ಯರು, ಉತ್ತಮ ಜೀವನ ನಡೆಸಲು ಎಲ್ಲರೂ ಸಂಸ್ಕಾರವಂತರಾಗಿ ನಡೆದುಕೊಳ್ಳಬೇಕು. ಆಸೆ ಇರುವುದು ಸ್ವಭಾವಿಕ. ಆದರೆ ಯಾರಲ್ಲೂ ದುರಾಸೆ ಇರಕೂಡದು. ಜಾತ್ರೆ, ಧಾರ್ಮಿಕ ಆಚರಣೆಗಳು ಸಮಾಜದಲ್ಲಿ ಐಕ್ಯತೆ, ಸಾಮರಸ್ಯ, ಸಹೋದರತ್ವ ಮೂಡಿಸುತ್ತವೆ ಎಂದರು.

ಬಸಮ್ಮ ತಾಯಿ ನೇತೃತ್ವ ವಹಿಸಿದ್ದರು.



ಬಸವಕಲ್ಯಾಣ ತಾಲೂಕಿನ ಶಿವಪುರ ಗ್ರಾಮದಲ್ಲಿ ಬುಧವಾರ ಜರುಗಿದ ಶ್ರೀ ಸಿದ್ಧಲಿಂಗೇಶ್ವರ ಮಹಾರಾಜರ 51ನೇ ಜಾತ್ರಾ ಮಹೋತ್ಸವದಲ್ಲಿ ಶ್ರೀ ರುದ್ರಮಣಿ ಶಿವಾಚಾರ್ಯ ಮಾತನಾಡಿದರು.

ಪ್ರಮುಖರಾದ ವಿಶ್ವನಾಥ ಮೂಲಗೆ, ರಾಜಪ್ಪ ಉಮ್ಮರ್ಗೆ, ವೀರಣ್ಣ ಶಂಭುಲಿಂಗ, ಅನೀಲ ಸ್ವಾಮಿ, ವಿದ್ಯಾಸಾಗರ ಮೂಲಗೆ, ಅನೀಲ ಉಮ್ಮರ್ಗೆ, ಕಾಶಣ್ಣ ಉಮ್ಮರ್ಗೆ, ಮಹೇಶ ಮೂಲಗೆ, ನಾಮದೇವ ಜಮಾದಾರ, ಉಮೇಶ ರಾಜೋಳಿ, ಪ್ರೇಮಸಾಗರ ಮೂಲಗೆ, ಶಿವಲಿಂಗ ಮೂಲಗೆ, ಜಗದೀಶ ಖಂಡಾಳೆ, ಆನಂದ ಉಮ್ಮರ್ಗೆ, ಮಹೇಶ ಉಮ್ಮರ್ಗೆ, ಸಿದ್ರಾಮ ಲಕಡೆ, ಕವಿರಾಜ ಕಿಣಗಿ, ಪ್ರಶಾಂತ ಉರ್ಕೆ ಇದ್ದರು. ಮಲ್ಲಪ್ಪ ಕೋಟೆ ಸಂಗೀತ ಸೇವೆ ನೀಡಿದರು. ರಮೇಶ ರಾಜೋಳಿ ನಿರೂಪಣೆ ಮಾಡಿದರು.

ಕಲಬುರಗಿ ಉದಯವಾಣಿ
ಬುಧವಾರ, ಡಿಸೆಂಬರ್ 25, 2019

ಭಾರತೀಯ ವೈದ್ಯ ಪದ್ಧತಿ ಜಗತ್ತಿನಲ್ಲೇ ಶ್ರೇಷ್ಠ

ಬಸವಕಲ್ಯಾಣ: ಪರಂಪರೆಯಿಂದ ಬಂದಿರುವ ಭಾರತೀಯ ವೈದ್ಯ ಪದ್ಧತಿ ಜಗತಿನಲ್ಲೇ ಅತ್ಯಂತ ಶ್ರೇಷ್ಠವಾಗಿದೆ. ಹೀಗಾಗಿ ನಾಟಿ ವೈದ್ಯ ಪದ್ಧತಿ ಉಳಿಸುವ ಜವಾಬ್ದಾರಿ ಪ್ರತಿಯೊಬ್ಬ ಭಾರತೀಯರ ಮೇಲಿದೆ ಎಂದು ತ್ರಿಪುರಾಂತ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ನೀಲಾಂಬಿಕಾ ಸರ್ಕಾರಿ ಪಿಯು ಕಾಲೇಜಿನಲ್ಲಿ ತಾಲೂಕು ಜಾನಪದ ಪರಿಷತ್ತು, ದೆಹಲಿ ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ತು ಸಂಯುಕ್ತಾಶ್ರಯದಲ್ಲಿ ನಡೆದ ಜನಪದ ವೈದ್ಯ ಪದ್ಧತಿ ಕಾರ್ಯಗಾರದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಆಧುನಿಕ ಕಾಲದ ಜೀವನ ಶೈಲಿ ಆಹಾರ-ವಿಹಾರ ಮನುಷ್ಯನ ರೋಗಕ್ಕೆ ಕಾರಣವಾಗಿದೆ ಎಂದು ನುಡಿದರು.

ಪಾರಂಪರಿಕ ವೈದ್ಯ ಪದ್ಧತಿ, ಆಹಾರ ಪದ್ಧತಿಗಳು ಆರೋಗ್ಯ ಕಾಪಾಡುತ್ತಿದ್ದವು. ನಾಟಿ ವೈದ್ಯ ಪದ್ಧತಿ ಸಂರಕ್ಷಿಸುವ ಬೆಳೆಸುವ ಜವಾಬ್ದಾರಿ ಮುಂದಿನ ಪೀಳಿಗೆಯ ಮೇಲಿದೆ. ಆಯುರ್ವೇದ ವೈದ್ಯ ಪದ್ಧತಿಯಿಂದ ಯಾವುದೇ ಅಡ್ಡ ಪರಿಣಾಮಗಳಿಲ್ಲ ಎಂದರು.

ಕಾಲೇಜು ಪ್ರಾಚಾರ್ಯ ಸುರೇಶ ಅಕ್ಕಣ್ಣಾ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನಕಾಲದಲ್ಲಿವಿದ್ಯಾರ್ಥಿಗಳಿಗೆನಾಟಿ ವೈದ್ಯ ಪದ್ಧತಿಯ ಅರಿವು ಅಗತ್ಯವಿದೆ. ಮನೆ ಮದ್ದಿನ ಬಗ್ಗೆ ಪ್ರಜ್ಞೆ ಇರಬೇಕಾದ ಅನಿವಾರ್ಯತೆಯೂ ಇದೆ. ಸರಳ ಜೀವನ ಶೈಲಿ ಅಳವಡಿಸಿಕೊಂಡು ಔಷಧವಿರುವ ಆಹಾರ ಸ್ವೀಕರಿಸಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಸಂಘದ ರಾಜ್ಯ ಕಾರ್ಯದರ್ಶಿ ನರಸಿಂಗರೆಡ್ಡಿ ಗದಲೆಗಾಂವ ಮಾತನಾಡಿ, ನಿಸರ್ಗ ನಮಗೆ ಅನೇಕ ಆರೋಗ್ಯಕರ ಪರಿಸರ ಆಹಾರ ಒದಗಿಸಿದೆ. ಆಧುನಿಕ ಜೀವನ ಶೈಲಿ ಮನುಷ್ಯನ ಆರೋಗ್ಯವನ್ನು ಅಪಾಯಕ್ಕೆ ಸಿಲುಕಿಸಿದೆ. ಈ ಹಿನ್ನೆಲೆಯಲ್ಲಿ ಜನಪದ ವೈದ್ಯ ಪದ್ಧತಿಯ ಅರಿವು ಇಂದಿನ ಅಗತ್ಯ ಎಂದರು. ಜಾನಪದ ಪರಿಷತ್ ತಾಲೂಕು ಘಟಕದ ಅಧ್ಯಕ್ಷ ಡಾ। ಬಸವರಾಜ ಸ್ವಾಮಿ ಪ್ರಸ್ತಾವಿಕವಾಗಿ ಮಾತನಾಡಿದರು.

ಪ್ರಕಾಶ ಕನ್ನಾಳೆ, ಎಸ್.ಜಿ. ಹುಡೇದ್, ಲಕ್ಷ್ಮೀಬಾಯಿ ಪಾಟೀಲ, ಡಾ। ಶಿವಲಿಲಾ ಮಠಪತಿ, ಕೆ.ಜಿ.ಶರಣಪ್ಪಾ ಶಿವಮೂರ್ತ ಸಂಗನಬಸವ, ಧನರಾಜ ರಾಜೋಳೆ ಸೇರಿದಂತೆ ಮತ್ತಿತರರು ಇದ್ದರು. ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ ಕಾರ್ಯದರ್ಶಿ ಡಾ। ರಾಜಕುಮಾರ ಹೆಬ್ಬಾಳೆ ಸ್ವಾಗತಿಸಿದರು. ಕರುಣಾ ಬಡುರೆ ನಿರೂಪಿಸಿದರು. ಮನಿಶಾ ವಂದಿಸಿದರು.



ಬಸವಕಲ್ಯಾಣ: ನೀಲಾಂಬಿಕಾ ಸರ್ಕಾರಿ ಪಿಯು ಕಾಲೇಜಿನಲ್ಲಿ ನಡೆದ ಜನಪದ ವೈದ್ಯ ಪದ್ಧತಿ ಕಾರ್ಯಾಗಾರದಲ್ಲಿ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

Scanned with OKEN Scanner

ಗವಿಮಠದಲ್ಲಿ ಕಾರ್ತಿಕ ದೀಪೋತ್ಸವ



ಬಸವಕಲ್ಯಾಣ : ಸಾಯಂಕಾಲ ನ 'ಗರದ ಐತಿಹಾಸಿಕ ಶ್ರೀ ಜಗದ್ಗುರು ಘನ ಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಪ್ರತಿ ವರ್ಷದಂತೆ ಕಾರ್ತಿಕ ಮಾಸದ ನಿಮಿತ್ತ ಪೂಜ್ಯ ಶ್ರೀ ಷ.ಬ್ರ ಲಿಂಗ ಘನಲಿಂಗ ರುದ್ರಮುನಿ ಶಿವಾಚಾರ್ಯರ ದಿವ್ಯ ಸಾನಿಧ್ಯದಲ್ಲಿ ಭಕ್ತರು ದೀಪಗಳನ್ನು ಬೆಳಗುವುದರ ಮೂಲಕ ಕಾರ್ತಿಕ ದೀಪೋತ್ಸವ ಆಚರಿಸಿದರು. ಈ ಸಂಧರ್ಭದಲ್ಲಿ ನಿಶಾ ಶಿವಪ್ರಕಾಶ ಹಿರೇಮಠ, ಶೀಲಾದೇವಿ ಕಲ್ಯಾಣಿ, ರೇಣುಕಾ ಕಲ್ಯಾಣಿ, ಸುದರ್ಶನಾ ಗೌಡಗಾವೆ, ವೀರಣ್ಣ ಶೀಲವಂತ, ಪ್ರೊ ಸೂರ್ಯಕಾಂತ ಶೀಲವಂತ, ಮಡಿವಾಳಪ್ಪ ಕಲ್ಯಾಣಿ, ಪ್ರಭುರಾಜ ಬಿರಾದಾರ ಮೊದಲಾದವರು ಉಪಸ್ಥಿತರಿದ್ದರು.

ಬುಧವಾರ, ನವೆಂಬರ್ 13, 2019 ಕರ್ನಾಟಕ ಸುದ್ದಿಕಾಲ

ರಿಪೋಸ್ ಹೋಸ ಶೋರುಮ್ ಇಂದಿನಿಂದ ಪ್ರಾರಂಭ



ಬಸವಕಲ್ಯಾಣ: ನಗರದ ಮುಖ್ಯರಸ್ತೆ ಬದಿಯಲ್ಲಿರುವ ಶ್ರೀ ಮೌನೇಶ್ವರ ಎಂಟರ್ ಪ್ರೈಸಸ್ ಮತ್ತು ಫರನೀಚರ ರಿಪೋಸನ ಹೋಸ ಮಳಿಗೆ ಮಂಗಳವಾರ ಉದ್ಘಾಟಿಸಲಾಯಿತು. ಮಾಲಿಕರಾದ ಸೂರ್ಯ ಕಾಂತ ಪಂಚಾಳ ಅವರು ಗುರು ಭಕ್ತಿ ಸಪನ್ನರಾಗಿ ದ್ದಾರೆ ಅವರಿಗೆ ವ್ಯವಹಾರದಲ್ಲಿ ಉತ್ತ ರೂತ್ತರವಾಗಿ ಉತ್ತುಂಗಕ್ಕೆರಲಿ ಎಂದು ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾ ಚಾರ್ಯರು ಆಶಿರ್ವಾದ ಮಾಡಿ ಶುಭಕೋರಿದರು. ಹುಮನಾಬಾದನ ಏಕ ದಂಡಗಿ ಮಠದ ಶ್ರೀ ಕುಮಾರ ಸ್ವಾಮಿ ಗುರುಜಿ, ಮಾತನಾಡಿ ಹೋಸವ್ಯೆಪಾರ ಪ್ರಾರಂಬಿಸುವಾಗ ಜಾಗರು ಕತೆಯಿಂದ ಪ್ರಾರಂಭಿಸಬೇಕು ಇದರಲ್ಲಿ ಸೂರ್ಯ ಕಾಂತವರು ಪ್ರವೀಣ ರಾಗಿದ್ದಾರೆ ಹಿಂದೆ ಗುರು, ಮುಂದೆ ಗುರಿ ಹೊಂದಿದ ವರಾಗಿದ್ದು ವ್ಯೆವಾ ಹರದಲ್ಲಿ ಹೆಚ್ಚಿನ ಅಭಿವೃದ್ಧಿ ಕಾಣಲೆಂದು ಶುಭ ಹಾರೈಸಿದರು. ಈ ಸಂಧರ್ಭದಲ್ಲಿ ಶಾಸಕರಾದ ಬಿ.ನಾರಾಯಣರಾವ ರವರು ಆಗಮಿಸಿ ಶೋರೋಮ್ ಒಳಗಡೆ ತಿರುಗಾಡಿ ಸಂತೋಷ ವ್ಯಕ್ತ ಪಡಿಸಿ ಶುಭ ಹಾರೈಸಿದರು. ನಗರ ಸಭೆಯ ಮಾಜಿ ಅಧ್ಯಕ್ಷ ಮೀರ ಅಜರ ಅಲಿ ನವರಂಗ, ಮನೋಹರ ವಿಶ್ವಕರ್ಮ, ಮಹೇಶ,ರಮೇಶ ಉಮೇಶ,ಪ್ರಶಾಂತ ನಾಗರಾಜ,ರಾಜೇಶ, ನರೇಂದ್ರ ,ರಘುನಾಥ ಪಂಚಾಳ,ಹರಿಶ್ಚಂದ್ರ ಪಂಚಾಳ, ರವಿ ಭೂರಾಳೆ, ನಗರ ಸಭೆಯ ಸದಸ್ಯ ರಾಮ ಜಾಧವ, ಎಮ್.ಡಿ. ರಮಾ ನಾಥ ಭಟ್ಟ, ವೆಂಕಟೇಶ ಜಿ.ಎಮ್, ಬಸವಂತಪ್ಪಾ ಲವಾರೆ, ಮಲ್ಲಿಕಾರ್ಜುನ ನಂದಿ,ಜಗನ್ನಾಥ ಪತಂಗೆ ,ದತ್ತು ಭೆಂಡೆ,ಹಿರಿಯ ಪತ್ರ ಕರ್ತ ರಾದ ಗುರುನಾಥ ಗಡ್ಡೆ ,ವೀರಶೆಟ್ಟಿ ಮಲಶೆಟ್ಟೆ,ಪ್ರಭು ಲಿಂಗಯ್ಯಾ ಟಂಕ ಸಾಲಿಮಠ ಸೇರಿದಂತೆ ಇತರರು ಇದ್ದರು.

ಸಾಹಿತ್ಯ ಶ್ರೀಮಂತಗೊಳಿಸಿದ ವಾಲ್ಮೀಕಿ



ಕೋಹಿನೂರದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಯುವ ಮುಖಂಡ ಶರಣು ಸಲಗರ ಉದ್ಘಾಟಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ನಂದಕುಮಾರ ಮಾಲಿಪಾಟೀಲ್ ಇತರರಿದ್ದರು.

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ರಾಮಾಯಣ ಮಹಾಕಾವ್ಯ ರಚಿಸಿ ಭಾರತದ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕೀರ್ತಿ ಶ್ರೀ ಮಹರ್ಷಿ ವಾಲ್ಮೀಕಿ ಅವರಿಗೆ ಸಲ್ಲುತ್ತದೆ ಎಂದು ಬಿಜೆಪಿ ಮುಖಂಡ ಶರಣು ಸಲಗರ ಹೇಳಿದರು.

ಕೋಹಿನೂರ ಗ್ರಾಮದಲ್ಲಿ ಬುಧವಾರ ಆಯೋಜಿಸಿದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿದ ಅವರು, ವಾಲ್ಮೀಕಿ ಸಮುದಾಯ ರಾಜ್ಯದಲ್ಲೇ ದೊಡ್ಡ ಹಾಗೂ ಪ್ರಭಾವಿ ಸಮುದಾಯವಾಗಿದೆ ಎಂದರು. ಸಾನ್ನಿಧ್ಯ ವಹಿಸಿದ ತ್ರಿಪುರಾಂತ ಗವಿಮಠದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರರು ಮಾತನಾಡಿದರು. ರಂಗನಾಥ್ ದೊರೆ ವಿಶೇಷ ಉಪನ್ಯಾಸ ನೀಡಿದರು. ಮಾನಪ್ಪ ನಾಯಕ ಹಾಗೂ ರತಿಕಾಂತ್ ಕೋಹಿನೂರ ಮಾತನಾಡಿದರು. ನಂದಕುಮಾರ ಮಾಲಿಪಾಟೀಲ್, ಶಿವಶರಣಪ್ಪ ಸಚಿತಾಜಿ, ರಾಜಕುಮಾರ ಸಿರಗಾಪೂರ, ಸಂಜು ಸುಗೂರೆ, ಶಿವಾಜಿ ಸಿತಾಳಗೇರೆ, ಚಂದ್ರಕಾಂತ್ ಕಲಕೋರಾ, ಡಾ. ಅಮರನಾಥ ಜಮಾದಾರ, ಅಂಬಾರಾಯ ಉಗಾಜಿ ಉಪಸ್ಥಿತರಿದ್ದರು. ಹರೀಶ್ ನಿರೂಪಣೆ ಮಾಡಿದರು.

ಶುಕ್ರವಾರ 1 ನವೆಂಬರ್ 2019
1 NOVEMBER 2019

ಸೋಮವಾರ, ನವೆಂಬರ್ 18, 2019 ವಿಜಯವಾಣಿ ಸುದ್ದಿಜಾಲ

ಗವಿ ಮಠದಲ್ಲಿ ಕಾರ್ತಿಕ ದೀಪೋತ್ಸವ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಇಲ್ಲಿಯ ತ್ರಿಪುರಾಂತನ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಂಸ್ಥಾನ ಗವಿ ಮಠದಲ್ಲಿ ಕಾರ್ತಿಕ ನಿಮಿತ್ತ ಭಕ್ತರು ದೀಪಗಳು ಬೆಳಗಿಸುವ ಮೂಲಕ ದೀಪೋತ್ಸವ ಆಚರಿಸಿದರು.

ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಕಾರ್ತಿಕ ದೀಪೋತ್ಸವ ಜರುಗಿತು. ನಾನಾ ಕಡೆಯಿಂದ ಭಕ್ತರು ಆಗಮಿಸಿ ಜ್ಯೋತಿ ಬೆಳಗಿ ಸಂಭ್ರಮಿಸಿದರು. ನಿಶಾ ಶಿವಪ್ರಕಾಶ ಹಿರೇಮಠ, ಶೀಲಾದೇವಿ ಕಲ್ಯಾಣಿ, ರೇಣುಕಾ ಕಲ್ಯಾಣಿ, ಸುದರ್ಶನಾ ಗೌಡಗಾವೆ, ವೀರಣ್ಣ ಶೀಲವಂತ, ಪ್ರೊ.ಸೂರ್ಯಕಾಂತ ಶೀಲವಂತ, ಮಡಿವಾಳಪ್ಪ ಕಲ್ಯಾಣಿ, ಪ್ರಭುರಾಜ ಬಿರಾದಾರ ಅನೇಕ ಭಕ್ತರು ಉಪಸ್ಥಿತರಿದ್ದರು.



ಬಸವಕಲ್ಯಾಣ ತ್ರಿಪುರಾಂತನ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಂಸ್ಥಾನ ಗವಿ ಮಠದಲ್ಲಿ ಭಕ್ತರು ಕಾರ್ತಿಕ ದೀಪ ಬೆಳಗಿಸಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು.

ಸೋಮವಾರ, 16 ನವೆಂಬರ್ 2019 ವಿಜಯವಾಣಿ ಪತ್ರಿಕೆ



ಬಸವಕಲ್ಯಾಣ ನಗರದ ಶರಣರ ನಾಡು ಪದವಿ

ಮಹಾವಿದ್ಯಾಲಯದಲ್ಲಿ ತಾಲೂಕು ಉಪನ್ಯಾಸಕರ ಸಂಘದಿಂದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಾನಪದ ಕಲಾವಿದ ಭೀಮಸಿಂಗ್ ರಾಠೋಡ ಅವರನ್ನು ಸನ್ಮಾನಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಚಾರ್ಯರು, ಪ್ರಮುಖರಾದ ಆರ್ಜುನ ಕನಕ, ಮನೋಹರ ಮೈಸೆ, ನರಸಿಂಗರೆಡ್ಡಿ ಗದಲೇಗಾಂವ, ಚನ್ನವೀರ ಜಮಾದಾರ, ಸುರೇಶ ಅಕ್ಕಣ್ಣ ಇತರರಿದ್ದರು.

Scanned with OKEN Scanner

ಸಿದ್ದೇಶ್ವರ ದೇವಸ್ಥಾನದಲ್ಲಿ ದೀಪೋತ್ಸವ ಕಾರ್ಯಕ್ರಮ

ಇನ್ನೊಬ್ಬರ ಬದುಕಿಗೆ ಬೆಳಕಾಗುವ ಕೆಲಸ ಮಾಡಿ: ಶ್ರೀ

ಬಸವಕಲ್ಯಾಣ: ನಾವು ದೀಪ ಹಚ್ಚುವಾಗ ಯಾವರೀತಿ ಇನ್ನೊಂದು ದೀಪಕ್ಕೆ ಬೆಳಕು ಕೊಡುತ್ತೆವೊ ಅದೇರೀತಿ ಜೀವನದಲ್ಲಿ ಇನ್ನೊಬ್ಬರಿಗೆ ಬೆಳಕಾಗುವಂತಹ ಕೆಲಸ ಮಾಡಬೇಕು ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಶಿವಪೂರ ರಸ್ತೆಯಲ್ಲಿನ ಶ್ರೀ ಸಿದ್ದೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಅಂಗವಾಗಿ ನಡೆದ ದೀಪೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆಶೀರ್ವಚನ ನೀಡಿದ ಅವರು, ಬಡವರನ್ನು ಮೇಲೆತ್ತುವ ಕೆಲಸವೇ ದೀಪೋತ್ಸವ ಮೂಲ ಉದ್ದೇಶವಾಗಿದೆ ಎಂದರು.

ಮಹಾರಾಷ್ಟ್ರದ ಸೋಲ್ಲಾಪುರ ಶ್ರೀ ಸಿದ್ಧೇಶ್ವರ ದೇವಸ್ಥಾನದಲ್ಲಿ ನಡೆದಂತೆ ಈ ದೀಪೋತ್ಸವ ಕಾಣುತ್ತಿದೆ. ಅಷ್ಟೊಂದು ಅದ್ಭುತವಾಗಿ ಜರುಗಿದೆ. 'ದೀಪದಿಂದ ದೀಪವ ಹಚ್ಚಬೇಕು ಮಾನವ' 'ದೀಪವು ನೀನ್ನದೆ ಗಾಳಿಯೂ ನೀನ್ನದೆ' ಎಂಬ ಕವಿ ವಾಕ್ಯದಂತೆ ಜೀವನದಲ್ಲಿ ಎಷ್ಟೇ ದುಃಖಗಳು ಬಂದರೂ ಅವುಗಳನ್ನು ಅತ್ಯಂತ ಧೈರ್ಯ ಹಾಗೂ ಸಮಚಿತ್ತದಿಂದ ಎದುರಿಸಬೇಕು ಎಂದು ಸಲಹೆ ನೀಡಿದರು.



ಬಸವಕಲ್ಯಾಣ: ಶಿವಪೂರ ಗ್ರಾಮದ ಶ್ರೀ ಸಿದ್ಧೇಶ್ವರ ದೇವಸ್ಥಾನದಲ್ಲಿ ನಡೆದ ದೀಪೋತ್ಸವ ಕಾರ್ಯಕ್ರಮಕ್ಕೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು.

ನಂತರ ಮಾಜಿ ಶಾಸಕ ಮಾರುತಿರಾವ್ ಮೂಳೆ ಹಾಗೂ ಬಿಜೆಪಿ ಯುವ ಮುಖಂಡ ಶರಣು ಸಲಗರ ಮಾತನಾಡಿ, ಮನಸ್ಸಿನಲ್ಲಿರುವ ಕತ್ತಲೆ-ಕೆಟ್ಟ ವಿಚಾರಗಳನ್ನು ಹಾಗೂ ದೇಹಕ್ಕಿರುವ ದುಶ್ಚಟಗಳನ್ನು ನಾವಿಂದು ಜ್ಯೋತಿ ಬೆಳಗಿಸುವುದರ ಮೂಲಕ ಹೋಗಲಾಡಿಸುವ ಸಂಕಲ್ಪ ಮಾಡಬೇಕು. ಮಹಿಳೆಯರು ತಮ್ಮ ಮನದ ದೀಪದಿಂದ ಕುಟುಂಬವನ್ನು ಬೆಳೆಗಿಸಬೇಕು ಎಂದು ನುಡಿದರು.

ಭಕ್ತಾದಿಗಳು ದೇವಸ್ಥಾನದ ಆವರಣದಲ್ಲಿ ಸಾಲು-ಸಾಲು ದೀಪಗಳನ್ನು ಬೆಳಗಿಸಿದರು. ಈ ಸಂದರ್ಭದಲ್ಲಿ ಪ್ರದೀಪ್ ಗಡವಂತೆ, ಅರ್ಜುನ್‌ಸಿಂಗ್ ಠಾಕೂರ್, ಸುಭಾಶ್ ರೇಕುಳಗೆ, ಸಂಜು ಮೂಲಗೆ, ಶಿವರಾಜ ಬಾಲಿಕೀಲೆ, ಅನಿಲ್ ಸ್ವಾಮಿ ನಾರಾಯಣಪೂರ, ಅನಿಲ್ ಮಠಪತಿ, ನವನಾಥ್ ಪೊದ್ದಾರ್, ಧೋಂಡಿಬಾ ಪೂಜಾರಿ, ನಾಗೇಶ್ ಉಮರ್ಗೆ, ಅನಿಲ್ ಉಮರ್ಗೆ ಸೇರಿದಂತೆ ಮತ್ತಿತರರು ಇದ್ದರು. ಎಂ.ಜಿ.ರಾಜೋಳೆ ನಿರೂಪಿಸಿ, ವಂದಿಸಿದರು.

ಉದಯವಾಣಿ ಕಲಬುರಗಿ
ಮಂಗಳವಾರ, ನವೆಂಬರ್ 19, 2019



ಬಸವಕಲ್ಯಾಣ : ನಗರದ ಎನ್‌ಜಿಓ ಕಾಲೋನಿಯಲ್ಲಿ ನಡೆದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮವನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಪ್ರಾಚಾರ್ಯ ಪ್ರೊ. ಸೂರ್ಯಕಾಂತ ಶೀಲವಂತ, ನಿವೃತ್ತ ಬಿಇಓ ಬಸವರಾಜ ಮಠಪತಿ, ಬಸವಕಾಂತ ಗೋಣಿ ಉಪಸ್ಥಿತರಿದ್ದರು.

ಮನೆ ಮನಗಳಲ್ಲಿ ಸದ್ಭಾವ ಚಿಂತನ....

'ಭಗವಂತನ ಧ್ಯಾನದಿಂದ ಬದುಕಿಗೆ ನೆಮ್ಮದಿ'

ಸಂ.ಕ.ಸಮಾಚಾರ ಬಸವಕಲ್ಯಾಣ

ಜೀವನದಲ್ಲಿ ಸಜ್ಜನರ ಸಹವಾಸ, ಭಗವಂತ ಧ್ಯಾನ, ಧರ್ಮ ಪರಿಪಾಲನೆ, ಸತ್ಕಾರ್ಯ ಅವಶ್ಯಕ. ಇವು ಬದುಕಿನಲ್ಲಿ ನೆಮ್ಮದಿ ತಂದು ಕೊಡುತ್ತವೆ ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಎನ್‌ಜಿಓ ಕಾಲೋನಿಯ ನಿವಾಸಿ ಬಸವರಾಜ ಮಠಪತಿ ಗೋರ್ಟಾ ಅವರ ಮನೆಯಲ್ಲಿ ಇತ್ತೀಚೆಗೆ ನಡೆದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಮಾತನಾಡಿ ಸದ್ಗುರುವಿನ ದರ್ಶನ, ಸಜ್ಜನರ ಸಹವಾಸದಿಂದ ಜೀವನ ಸಾರ್ಥಕ ಮಾಡಿಕೊಳ್ಳಬಹುದು ಎಂದರು. ಪುಣ್ಯಕೋಟಿ ಕಾಲೇಜು ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಮಾತನಾಡಿ ಭಕ್ತರು ಸದಾ ಧರ್ಮ ಚಿಂತನೆಯಲ್ಲಿ ತೊಡಗುವುದು ಒಳ್ಳೆಯದು. ಮನಸ್ಸುಗಳು ಒಡೆಯಲು ಒತ್ತಡದ ಬದುಕು ಕಾರಣ. ಒಡೆದ ಮನಸ್ಸುಗಳನ್ನು ಒಂದುಗೂಡಿಸೋದೂ ಈ ಸದ್ಭಾವ ಚಿಂತನ ಕಾರ್ಯಕ್ರಮದ ಆಶಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಬಿಇಓ ಬಸವರಾಜ ಮಠಪತಿ ಗೋರ್ಟಾ ಮಾತನಾಡಿದರು. ಶಿಕ್ಷಕ ಬಸವಕಾಂತ ಗೋಣಿ, ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ದಯಾನಂದ ಶೀಲವಂತ, ಗುರುಲಿಂಗಯ್ಯ ಕಟಗಿಮಠ, ಗುರುಲಿಂಗಯ್ಯ ಮಠಪತಿ, ಮಲ್ಲಿಕಾರ್ಜುನ ನಂದಿ, ರೇವಣಸಿದ್ಧಯ್ಯ ಮಠಪತಿ, ಡಾ. ಬಸವರಾಜ ಸ್ವಾಮಿ, ಸುಭಾಷ ಕುಂಬಾರ ಸೇರಿದಂತೆ ಪ್ರಮುಖರು ಭಾಗವಹಿಸಿದ್ದರು. ರುದ್ರೇಶ್ವರ ಸ್ವಾಮಿ ಸ್ವಾಗತಿಸಿದರು. ಅಭಿಷೇಕ ರಾಮಣ್ಣನವರ್ ಕಾರ್ಯಕ್ರಮನಿರೂಪಿಸಿದರು. ಕಲಾವಿದರಾದ ನಾಗಣ್ಣ ಭೂಶೆಟ್ಟಿ ಹಾಗೂ ಮಲ್ಲಿಕಾರ್ಜುನ ಶೀಲವಂತ ಧನ್ನೂರಕರ್ ಭಕ್ತಿಸಂಗೀತ ನಡೆಸಿಕೊಟ್ಟರು. ವೀರಣ್ಣ ಶೀಲವಂತ ಪ್ರಾರ್ಥನಾಗೀತೆ ಹಾಡಿದರು.

ಸಂಯುಕ್ತ ಕರ್ನಾಟಕ
ಮಂಗಳವಾರ, 19, ನವೆಂಬರ್, 2019, ಕಲಬುರಗಿ

ಸಂಯುಕ್ತ ಕರ್ನಾಟಕ 19.11.2019

Scanned with OKEN Scanner

ಸಂಯುಕ್ತ ಕರ್ನಾಟಕ
ಮಂಗಳವಾರ, 19, ನವೆಂಬರ್, 2019

ಸಿದ್ಧೇಶ್ವರ ದೇವಾಲಯ: ಗಮನ ಸೆಳೆದ ದೀಪೋತ್ಸವ

ಸಂ.ಕ.ಸಮಾಚಾರ

ಬಸವಕಲ್ಯಾಣ ನಗರಕ್ಕೆ ಹೊಂದಿಕೊಂಡಿರುವ ಶಿವಪುರ್ ಐತಿಹಾಸಿಕ ಶ್ರೀ ಸಿದ್ಧೇಶ್ವರ ದೇವಾಲಯದ ಪರಿಸರದಲ್ಲಿ ಕಾರ್ತಿಕ ಮಾಸದ ನಿಮಿತ್ತ ಭಾನುವಾರ ಸಂಜೆ 5ಕ್ಕೆ ಭಕ್ತರಿಂದ ದೀಪೋತ್ಸವ ಕಾರ್ಯಕ್ರಮ ಜರುಗಿತು.

ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ನಂತರ ಆವರಣ ಹಾಗೂ ಪುಷ್ಕರಣಿಯ ಮೆಟ್ಟಿಲುಗಳ ಮೇಲೆ ಸಾಲು-ಸಾಲು ದೀಪಗಳನ್ನು ಬೆಳಗಿಸಲಾಯಿತು. ದೀಪಗಳ ಬೆಳಕಿನಿಂದಾಗಿ ಪುಷ್ಕರಣಿಯಲ್ಲಿ ನೀರಿನಲ್ಲಿ ಕಂಡ ದೃಶ್ಯ ಕಣ್ಮನ ಸೆಳೆಯುವಂತಿತ್ತು.

ಬಸವಕಲ್ಯಾಣ: ಇಲ್ಲಿಯ ಶಿವಪುರ ಶ್ರೀ ಸಿದ್ಧೇಶ್ವರ ದೇವಾಲಯದಲ್ಲಿ ಕಾರ್ತಿಕ ಮಾಸದ ನಿಮಿತ್ತ ನಡೆದ ದೀಪೋತ್ಸವ ಕಾರ್ಯಕ್ರಮಕ್ಕೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು. ಮಾಜಿ ಶಾಸಕ ಎಂ.ಜಿ.ಮುಳೆ, ಶರಣು ಸಲಗರ್, ಅನೀಲ ಸ್ವಾಮಿ ಉಪಸ್ಥಿತರಿದ್ದರು.

ದೇವಾಲಯದಲ್ಲಿ ಭಕ್ತರಿಂದ ಭಕ್ತ-ಶ್ರೇಷ್ಠಯಿಂದ ಪ್ರತಿ ವರ್ಷ ದೀಪೋತ್ಸವ ಆಚರಿಸಿಕೊಂಡು ಬರುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಾಜಿ ಶಾಸಕ ಎಂ.ಜಿ.ಮುಳೆ, ಬಿಜೆಪಿ ಮುಖಂಡ ಶರಣು ಸಲಗರ್ ಸಹ ಮಾತನಾಡಿದರು. ಎಂ.ಜಿ.ರಾಜೋಳೆ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಪ್ರಮುಖರಾದ ಶಿವರಾಜ ಬಾಲಿಕಿಲೆ, ಸುಭಾಷ ರೇಕುಳಗೆ, ಸಮಿತಿ ಪ್ರಮುಖರಾದ ಶ್ರೀ ಅನೀಲ ಸ್ವಾಮಿ, ಅನೀಲ ಮಠಪತಿ, ನವನಾಥ ಪೊದ್ದಾರ, ಧೋಂಡಿಬಾ ಪೂಜಾರಿ, ಮಹೇಶ ಉಮರ್ಗೆ, ಅನೀಲ ಉಮರ್ಗೆ ಉಪಸ್ಥಿತರಿದ್ದರು. ಬಸವಕಲ್ಯಾಣ ನಗರ, ಶಿವಪುರ ಗ್ರಾಮದ ದೀಪೋತ್ಸವಕ್ಕೆ ವಿವಿಧೆಡೆಯಿಂದ ಆಗಮಿಸಿದ ಭಕ್ತರು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ವಿಶೇಷವಾಗಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಮಾತನಾಡಿ ಐತಿಹಾಸಿಕ ಶ್ರೀ ಸಿದ್ಧೇಶ್ವರ ಭಾಗವಹಿಸಿದ್ದರು.

ಸಿದ್ಧೇಶ್ವರ ದೇವಾಲಯದಲ್ಲಿ ದೀಪೋತ್ಸವ

ವಿಜಯವಾಣಿ ಚಿತ್ರ

ಬಸವಕಲ್ಯಾಣ: ಇಲ್ಲಿಯ ಶಿವಪುರನ ಶ್ರೀ ಸಿದ್ಧೇಶ್ವರ ದೇವಾಲಯದ ಪರಿಸರದಲ್ಲಿ ಕಾರ್ತಿಕ ಮಾಸದ ನಿಮಿತ್ತ ಭಾನುವಾರ ಸಂಜೆ 5ಕ್ಕೆ ಭಕ್ತರಿಂದ ದೀಪೋತ್ಸವ ಕಾರ್ಯಕ್ರಮ ಜರುಗಿತು.

ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ನಂತರ ಆವರಣ ಹಾಗೂ ಪುಷ್ಕರಣಿಯ ಮೆಟ್ಟಿಲುಗಳ ಮೇಲೆ ಸಾಲು-ಸಾಲು ದೀಪಗಳನ್ನು ಬೆಳಗಿಸಲಾಯಿತು. ದೀಪಗಳ ಬೆಳಕಿನಿಂದಾಗಿ ಪುಷ್ಕರಣಿಯಲ್ಲಿ ನೀರಿನಲ್ಲಿ ಕಂಡ ದೃಶ್ಯ ಕಣ್ಮನ ಸೆಳೆಯುವಂತಿತ್ತು.

ಬಸವಕಲ್ಯಾಣದ ಶಿವಪುರ ಶ್ರೀ ಸಿದ್ಧೇಶ್ವರ ದೇವಾಲಯದಲ್ಲಿ ಕಾರ್ತಿಕ ಮಾಸ ನಿಮಿತ್ತ ಭಾನುವಾರ ಜರುಗಿದ ದೀಪೋತ್ಸವ ಕಾರ್ಯಕ್ರಮಕ್ಕೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು. ಮಾಜಿ ಶಾಸಕ ಎಂ.ಜಿ.ಮುಳೆ, ಶರಣು ಸಲಗರ್, ಅನೀಲ ಸ್ವಾಮಿ ಇತರರಿದ್ದರು.

ಪೂಜೆ ಸಲ್ಲಿಸುವ ಮೂಲಕ ದೀಪೋತ್ಸವಕ್ಕೆ ಚಾಲನೆ ನೀಡಿದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಮಾಜಿ ಶಾಸಕ ಎಂ.ಜಿ.ಮುಳೆ, ಬಿಜೆಪಿ ಮುಖಂಡ ಶರಣು ಸಲಗರ್ ಮಾತನಾಡಿದರು. ಎಂ.ಜಿ.ರಾಜೋಳೆ ಸ್ವಾಗತಿಸಿ ನಿರೂಪಣೆ ಮಾಡಿದರು. ಪ್ರಮುಖರಾದ ಶಿವರಾಜ ಬಾಲಿಕಿಲೆ, ಸುಭಾಷ ರೇಕುಳಗೆ, ಸಮಿತಿ ಪ್ರಮುಖರಾದ ಶ್ರೀ ಅನೀಲ ಸ್ವಾಮಿ, ಅನೀಲ ಮಠಪತಿ, ನವನಾಥ ಪೊದ್ದಾರ, ಧೋಂಡಿಬಾ ಪ್ರಜಾರಿ, ಮಹೇಶ ಉಮರ್ಗೆ, ಅನೀಲ ಉಮರ್ಗೆ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 18 ನವೆಂಬರ್ 2019
18 NOVEMBER 2019

Scanned with OKEN Scanner

VIJAYAVANI » KALABURAGI
ಶುಕ್ರವಾರ 22 ನವೆಂಬರ್ 2019
22 NOVEMBER 2019
ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ

ಪಿಯು ಉಪನ್ಯಾಸಕರ ಸಂಘದ ರಾಜ್ಯ ಕಾರ್ಯದರ್ಶಿ ನರಸಿಂಗರೆಡ್ಡಿಗೆ ಸನ್ಮಾನ

ಉಪನ್ಯಾಸಕರ ಸಮಸ್ಯೆಗೆ ಸ್ಪಂದಿಸಲು ಪ್ರಯತ್ನ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಪಿಯು ಉಪನ್ಯಾಸಕರ ಹಾಗೂ ಪ್ರೌಢ ಶಾಲೆ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ಪದವಿ ಪೂರ್ವ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ತಿಮ್ಮಯ್ಯ ಪುರ್ಲೆ ಹೇಳಿದರು.

ಸರ್ಕಾರಿ ನೀಲಾಂಬಿಕಾ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಸಂಘದ ರಾಜ್ಯ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ನರಸಿಂಗ ರಡ್ಡಿ ಗದಲೆಗಾಂವ ಅವರ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿದ ಅವರು, ಉಪನ್ಯಾಸ ಮತ್ತು ಶಿಕ್ಷಕರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಪ್ರಯತ್ನಿಸಲಾಗುತ್ತಿದೆ. ಹೆಚ್ಚುವರಿ ಬಡ್ತಿ ನೇರದಂತೆ ಇತರ ಸಮಸ್ಯೆಗಳ ಕುರಿತು ಶಿಕ್ಷಣ ಸಚಿವರೊಂದಿಗೆ ಶುಕ್ರವಾರ ಚರ್ಚಿಸಲಾಗುವುದು ಎಂದರು.

ಸನ್ಮಾನ ಸ್ವೀಕರಿಸಿದ ನರಸಿಂಗ್ ರಡ್ಡಿ ಮಾತನಾಡಿ, ಶಿಕ್ಷಕರ ಮತ್ತು ಉಪನ್ಯಾಸಕರ ಯಾವುದೇ ಸಮಸ್ಯೆಗಳಿದ್ದರೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಸಂಘದ ಪದಾಧಿಕಾರಿಗಳ ಸಹಕಾರದೊಂದಿಗೆ ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು.

ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಪ್ರಾಚಾರ್ಯ ಸುರೇಶ ಅಕ್ಕಣ್ಣ ಅಧ್ಯಕ್ಷತೆ ವಹಿಸಿದ್ದರು. ಸಿದ್ದಣ್ಣ ಮರಪಳ್ಳಿ, ಮೋಹನದಾಸ ರಾಠೋಡ, ಬಸವರಾಜ ಹಿರೇಮಠ, ಜಗದೀಶ ಶುಕ್ಲಾ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ದೀಪಕ ಸಾಗಾವೆ, ರೋಹಿದಾಸ ರಾಠೋಡ, ಸುಧಾಕರ ಮಹಿಂದ್ರಕರ್ ಉಪಸ್ಥಿತರಿದ್ದರು.

ರಾಜಕುಮಾರ ಹೂಗಾರ ಸ್ವಾಗತಿಸಿದರು. ಬಸವರಾಜ ಹಿರೇಮಠ ವಂದಿಸಿದರು. ಅಶೋಕರೆಡ್ಡಿ ನಿಂಗಾವರೆ ನಿರೂಪಣೆ ಮಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ನೀಲಾಂಬಿಕಾ ಕಾಲೇಜಿನಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಪದವಿ ಪೂರ್ವ ಉಪನ್ಯಾಸಕರ ಸಂಘದ ರಾಜ್ಯ ಕಾರ್ಯದರ್ಶಿ ನರಸಿಂಗ ರಡ್ಡಿ ಗದಲೆಗಾಂವ ಅವರನ್ನು ಸನ್ಮಾನಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸಂಘದ ರಾಜ್ಯಾಧ್ಯಕ್ಷ ತಿಮ್ಮಯ್ಯ ಪುರ್ಲೆ, ಪ್ರಾಚಾರ್ಯ ಸುರೇಶ ಅಕ್ಕಣ್ಣ ಇತರರಿದ್ದರು.

ಪ್ರಜಾವಾಣಿ ಗುರುವಾರ, 29 ನವೆಂಬರ್ 2018 17

'ಸಂಘಟನೆಯಿಂದ ಸಮಸ್ಯೆಗೆ ಪರಿಹಾರ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಸಂಘಟನೆ ಬಲಗೊಂಡರೆ ಯಾವುದೇ ಸಮಸ್ಯೆ ಬಗೆಹರಿಸಲು ಹೋರಾಟ ನಡೆಸುವುದು ಸುಲಭ ಆಗುತ್ತದೆ' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿ ತಾಲ್ಲೂಕು ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದಿಂದ ಗುರುವಾರ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂಘದ ರಾಜ್ಯ ಘಟಕದ ಅಧ್ಯಕ್ಷ ತಿಮ್ಮಯ್ಯ ಪುರ್ಲೆ ಮಾತನಾಡಿ, 'ಉಪನ್ಯಾಸಕರಿಗೆ ನಾನಾ ಸಮಸ್ಯೆಗಳಿಗೆ ಅವುಗಳನ್ನು ಬಗೆಹರಿಸಲು ಸತತವಾಗಿ ಪ್ರಯತ್ನಿಸುತ್ತೇನೆ' ಎಂದರು.

ಸಂಘದ ರಾಜ್ಯ ಘಟಕದ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ನರಸಿಂಗರೆಡ್ಡಿ ಗದ್ಲೇಗಾಂವ ಅವರನ್ನು ಸನ್ಮಾನಿಸಲಾಯಿತು. ಪ್ರಾಚಾರ್ಯ ಸುರೇಶ ಅಕ್ಕಣ್ಣ, ಸಿದ್ದಣ್ಣ ಮರ್ಪಳ್ಳಿ, ಬಸವರಾಜ ಹಿರೇಮಠ, ಮೋಹನದಾಸ ರಾಠೋಡ, ಜಗದೀಶ ಶುಕ್ಲಾ, ಚನ್ನವೀರ ಜಮಾದಾರ, ಸುಧಾಕರ ಮಹೇಂದ್ರಕರ್, ಅಶೋಕರೆಡ್ಡಿ, ರಾಜಕುಮಾರ ಹೂಗಾರ, ಬಸವರಾಜ ಹಿರೇಮಠ, ದಿಲೀಪ ಸಾಗಾವೆ, ರೋಹಿದಾಸ ರಾಠೋಡ ಪಾಲ್ಗೊಂಡಿದ್ದರು.



ಬಸವಕಲ್ಯಾಣದಲ್ಲಿ ಗುರುವಾರ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಕಾರ್ಯದರ್ಶಿ ನರಸಿಂಗರೆಡ್ಡಿ ಗದ್ಲೇಗಾಂವ ಅವರನ್ನು ಸನ್ಮಾನಿಸಲಾಯಿತು

ವಿಜಯ ಕರ್ನಾಟಕ
ಮಂಗಳವಾರ,10 ಡಿಸೆಂಬರ್ 2019

ವೀರಶೈವ ಲಿಂಗಾಯತ ಸಂಘಟನೆ ಕೇಂದ್ರ ಸ್ಥಾನಕ್ಕೆ ಬೇಡಿಕೆ

■ ವಿಕ ಸುದ್ದಿಲೋಕ ಬಸವಕಲ್ಯಾಣ

ನಗರದ ಹೊಸಹಳ್ಳಿ ಪಾರ್ಕ್ ಬಳಿಯ ಕಟ್ಟೆಯಲ್ಲಿ ವೀರಶೈವ ಲಿಂಗಾಯತ ಸಂಘಟನೆಯ ಕಲ್ಯಾಣ ಕರ್ನಾಟಕ ಪ್ರದೇಶ ಕೇಂದ್ರ ಕಚೇರಿಯನ್ನು ಉದ್ಘಾಟಿಸಲಾಯಿತು.

ತ್ರಿಪುರಾಂತ ಗುಮಾಸ್ತ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮತ್ತು ಬೇಳಗಿಯ ವಿರಕ್ತ ಮಠದ ವಿಮಲಿಂಗ ಸ್ವಾಮಿಗಳು ಉದ್ಘಾಟಿಸಿದರು.

ಬಸವ ಕಲ್ಯಾಣ ಬಸವಣ್ಣನವರ ಕರ್ಮಭೂಮಿ. ಇಲ್ಲಿ ಬಸವಣ್ಣನವರ ಸಂಘಟನೆಯ ಕೇಂದ್ರ ಕಚೇರಿ ಆರಂಭಿಸಿರುವುದು ಸಂತಸದ ವಿಷಯ. ಸಮಾಜದ ಸಂಘಟನೆಗೆ ಎಲ್ಲರೂ ಒಗ್ಗೂಡಬೇಕು ಎಂದು ಹೇಳಿದರು.

ಬಸವಕಲ್ಯಾಣ ಸಂಘಟನೆಯ ಕೇಂದ್ರ ಸ್ಥಾನವಾಗಲು ಎಲ್ಲ ರೀತಿಯಿಂದಲೂ ಅರ್ಹವಾಗಿದೆ. ಇಲ್ಲಿ ಕೇಂದ್ರ ಕಚೇರಿ ಆರಂಭಿಸಿರುವುದು ಸಂತಸ ತಂದಿದೆ ಎಂದು ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಪ್ರದೀಪ್ ಕಂಕಣವಾಡಿ, ಹಿರಿಯ ನಟ ಮುಂಗಾರು ಮಳೆ ಖ್ಯಾತಿಯ ಜಗ್ಗೇಶ್, ಮಿಸ್ ಇಂಡಿಯಾ ವಿಜೇತ ಸುಂದರ್, ಬೆಲಕಿಪ್ಪರ ನಟ ನಿಶಾ ಕಾಳಂಪಳ್ಳಿ, ಜಿಪಂ ಸದಸ್ಯ ಗುಂಡುರೆಡ್ಡಿ ಜಗದೀಶ್, ಸಚಿನ್ ಸೂರ್ಯವಂಶಿ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಪಾಲ್ಗೊಂಡಿದ್ದರು.



ಬಸವಕಲ್ಯಾಣದಲ್ಲಿ ವೀರಶೈವ ಲಿಂಗಾಯತ ಸಂಘಟನೆ ಕೇಂದ್ರ ಕಚೇರಿ ಉದ್ಘಾಟನೆಯಲ್ಲಿ ಪಾಲ್ಗೊಂಡ ಪದಾಧಿಕಾರಿಗಳಿಗೆ ಪ್ರಮಾಣ ಪತ್ರ ವಿತರಿಸಿದರು. ಪಾಸಕ ಬಿ.ನಾರಾಯಣರಾವ್, ಪ್ರದೀಪ್ ಕಂಕಣವಾಡಿ, ಪರಣ ಸಲಗರ ಅನೇಕರಿದ್ದರು.

Scanned with OKEN Scanner

ಉದಯವಾಣಿ ಕಲಬುರಗಿ
ಶುಕ್ರವಾರ, ನವೆಂಬರ್ 29, 2019

ಸಂಘಜೀವಿಯಾಗಿ ಸಜ್ಜನರ ಜತೆ ಬಾಳಿ

ಬಸವಕಲ್ಯಾಣ: ಸಮಾಜದಲ್ಲಿ ಪ್ರತಿಯೊಬ್ಬರು ಸಂಘ ಜೀವಿಗಳಾಗಿ ಸಜ್ಜನರ ಜೊತೆ ಬದುಕಬೇಕು. ಆಗ ಉತ್ತಮ ಸಮಾಜ ನಿರ್ಮಾಣವಾಗಲು ಸಾಧ್ಯ ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಶ್ರೀ ಗವಿಮಠದಲ್ಲಿ ನಡೆದ ಶಿವಾನುಭವ ಚಿಂತನ ಮಾಸಿಕ ಅಮವಾಸ್ಯೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿ, ಸಜ್ಜನರ ಜೊತೆ ಸಹವಾಸ ಮಾಡುತ್ತ ಧರ್ಮ ಮಾರ್ಗದಲ್ಲಿ ಮುನ್ನಡೆದರೆ ಬದುಕು ಸಾರ್ಥಕವಾಗುತ್ತದೆ ಎಂದರು. ಸಾಮಾಜಿಕ ಕಾರ್ಯಕರ್ತ ಸಂಜಯಕುಮಾರ ಜಾಧವ ಮಾತನಾಡಿ, ಗವಿಮಠದ ಗುರುವಿನಲ್ಲಿ ಅಪಾರ ಶಕ್ತಿ ಇದೆ. ನಿರಂತರ ಶ್ರೇದ್ಧೆ ಭಕ್ತಿಯಿಂದ ನಡೆದುಕೊಳ್ಳುವರಿಗೆ ಬೇಡಿದ್ದನ್ನು ಕರುಣಿಸುವ ಶಕ್ತಿ ಮಠಕ್ಕಿದೆ. ಅಂಥ ಇಷ್ಟಾರ್ಥ ಸಿದ್ಧಿ ನನಗೂ ಆಗಿದೆ ಎಂದು ನುಡಿದರು.

ಪ್ರೊ। ಸೂರ್ಯಕಾಂತ ಶೀಲವಂತ ಪ್ರಾಸ್ತಾವಿಕ ಮಾತನಾಡಿದರು. ಶಿವಕುಮಾರ ಮಠ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ನಂದಿ, ಅನಿಲ ಪಾಟೀಲ, ಸುನೀಲ ಚಪಾತೆ, ರಾಚಣ್ಣ ವಸ್ತ್ರದ, ವೀರಶೆಟ್ಟಿ ಎಂ. ಪಾಟೀಲ, ಚಂದ್ರಶೇಖರ ಸ್ವಾಮಿ, ಬಸವರಾಜ ಹಿರೇಮಠ, ಪ್ರಕಾಶ ಬಿರಾದಾರ, ಬಸವರಾಜ ದಿಂಡೆ, ರುದ್ರೇಶ್ವರ ಸ್ವಾಮಿ, ಸುಭದ್ರಾಬಾಯಿ ಸ್ವಾಮಿ, ಸವಿತಾ ಸ್ವಾಮಿ, ಸರಸ್ವತಿ ಬೆಂಬಳಿ, ರೇಣುಕಾ ಮಠಪತಿ, ಶೀಲಾದೇವಿ ಲವಾರೆ, ಸುನಂದಾ ನಂದಿ, ಪಾರ್ವತಿ ರೋಜಾ, ಶೀಲಾ ಕಲ್ಯಾಣಿ ಇದ್ದರು. ಕುಮಾರ ಹಿರೇಮಠ ನಿರೂಪಿಸಿದರು. ಅಭಿಷೇಕ ರಾಮಣ್ಣನವರ ವಂದಿಸಿದರು.



ಬಸವಲ್ಯಾಣ: ಗವಿಮಠದಲ್ಲಿ ನಡೆದ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಸಾಹಿತಿ ವಿರೂಪಾಕ್ಷಯ್ಯ ಮಠಪತಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಜ್ಜನರ ಸಂಘದಿಂದ ಬದುಕು ಸಾರ್ಥಕ



ಬಸವಕಲ್ಯಾಣ ಗವಿಮಠ ಸಂಸ್ಥಾನದಲ್ಲಿ ನಡೆದ ಶಿವಾನುಭವ ಚಿಂತನ ಮಾಸಿಕ ಕಾರ್ಯಕ್ರಮದಲ್ಲಿ ಸಂಗೀತ ಗಾರ ಗೋರ್ಟಾ ಗ್ರಾಮದ ವಿರೂಪಾಕ್ಷಯ್ಯ ಮಠಪತಿ ಅವರನ್ನು ಗೌರವಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇತರರಿದ್ದರು.

ವಿಕ ಸುದ್ದಿಲೋಕ ಬಸವಕಲ್ಯಾಣ

ಪ್ರತಿಯೊಬ್ಬರೂ ಸಂಘ ಜೀವಿಗಳಾಗಿ ಸಜ್ಜನರ ಜೊತೆ ಬದುಕಬೇಕು ಎಂದು ಇಲ್ಲಿ ತ್ರೀಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಐತಿಹಾಸಿಕ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಸಂಸ್ಥಾನದಲ್ಲಿ ನಡೆದ ಶಿವಾನುಭವ ಚಿಂತನ ಮಾಸಿಕ ಅಮಾವಾಸ್ಯೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಪ್ರತಿಯೊಬ್ಬರೂ ಧರ್ಮ ಮಾರ್ಗದಲ್ಲಿ ಮುನ್ನಡೆದರೆ ಬದುಕು ಸಾರ್ಥಕ. ಈ ಕುರಿತು ತಿಳಿದುಕೊಳ್ಳುವುದೆ ಶಿವಾನುಭವ ಚಿಂತನ ಎಂದು ತಿಳಿಸಿದರು.

ಸಂಜಯಕುಮಾರ ಜಾಧವ ಮಾತನಾಡಿ, ಗವಿಮಠದ ಗುರುವಿನಲ್ಲಿ ಅಪಾರ ಶಕ್ತಿ ಇದೆ. ನಿರಂತರ ಶ್ರದ್ಧೆ ಭಕ್ತಿಯಿಂದ ನಡೆದುಕೊಳ್ಳುವವರಿಗೆ ಇಲ್ಲಿ ಶಾಂತಿ ಸಿಗುತ್ತದೆ ಎಂದರು.

ಜಿಲ್ಲಾಡಳಿತದ ವತಿಯಿಂದ ರಾಜ್ಯೋತ್ಸವ ಪ್ರಶಸ್ತಿ ಪಡೆದ ಹಿರಿಯ ಸಂಗೀತಗಾರ, ಸಾಹಿತಿ ತಾಲೂಕಿನ ಗೋರ್ಟಾ ಗ್ರಾಮದ ವಿರೂಪಾಕ್ಷಯ್ಯ ಶಿವಲಿಂಗಯ್ಯ ಮಠಪತಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಲಾವಿದರಾದ ನಾಗಣ್ಣ ಭೂಶೆಟ್ಟೆ, ಮಲ್ಲಿಕಾರ್ಜುನ ಶೀಲವಂತ ಧನ್ನೂರಕರ್ ಭಕ್ತಿ ಸಂಗೀತ ಸೇವೆ ಮಾಡಿದರು.

ಶಿವಕುಮಾರ ಮಠ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ನಂದಿ, ಅನಿಲ ಪಾಟೀಲ, ಸುನೀಲ ಚಪಾತೆ, ರಾಚಣ್ಣ ವಸ್ತ್ರದ, ವೀರಶೆಟ್ಟಿ ಪಾಟೀಲ, ಚಂದ್ರಶೇಖರ ಸ್ವಾಮಿ, ಬಸವರಾಜ ಹಿರೇಮಠ, ಪ್ರಕಾಶ ಬಿರಾದಾರ, ಬಸವರಾಜ ದಿಂಡೆ, ರುದ್ರೇಶ್ವರ ಸ್ವಾಮಿ, ಸುಭದ್ರಾಬಾಯಿ ಸ್ವಾಮಿ, ಸವಿತಾ ಸ್ವಾಮಿ, ಸರಸ್ವತಿ ಬೆಂಬಳಿ, ರೇಣುಕಾ ಮಠಪತಿ, ಶೀಲಾದೇವಿ ಲವಾರೆ, ಸುನಂದಾ ನಂದಿ, ಪಾರ್ವತಿ ರೋಜಾ, ಶೀಲಾ ಕಲ್ಯಾಣಿ ಇತರರಿದ್ದರು.

ಪ್ರೊ.ಸೂರ್ಯಕಾಂತ ಶೀಲವಂತ ಸ್ವಾಗತಿಸಿದರು. ಕುಮಾರ ಹಿರೇಮಠ ನಿರೂಪಿಸಿದರು. ಅಭಿಷೇಕ ರಾಮಣ್ಣನವರ ವಂದಿಸಿದರು.

ವಿಜಯ ಕರ್ನಾಟಕ
ಶುಕ್ರವಾರ,29 ನವೆಂಬರ್ 2019

ವಿಜಯ ಕರ್ನಾಟಕ ಶುಕ್ರವಾರ,29 ನವೆಂಬರ್ 2019

ಉಪನ್ಯಾಸಕರ ಸಂಘದ ಕಾರ್ಯದರ್ಶಿ ಗದಲೆಗಾಂವ

ವಿಕ ಸುದ್ದಿಲೋಕ ಬಸವಕಲ್ಯಾಣ

ಪದವಿ ಪೂರ್ವ ಉಪನ್ಯಾಸಕರ ಸಂಘದ ರಾಜ್ಯ ಕಾರ್ಯದರ್ಶಿಯಾಗಿ ಇಲ್ಲಿಯ ನರಸಿಂಗ ರೆಡ್ಡಿ ಗದಲೆಗಾಂವ ಆವರನ್ನು ನೇಮಕ ಮಾಡಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ತಿಮ್ಮಯ್ಯ ಘುರ್ಲೆ ಘೋಷಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ನಗರದ ನೀಲಾಂಬಿಕಾ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಗದಲೆಗಾಂವ ಆವರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಯಿತು.

ಸಾನ್ನಿಧ್ಯ ವಹಿಸಿದ್ದ ತ್ರಿಪುರಾಂತದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಇಂದು ಸಂಘಟನೆ ಇಲ್ಲದೆ ಯಾವುದೇ ಬೇಡಿಕೆಗಳು ಈಡೇರಲು ಸಾಧ್ಯವಿಲ್ಲ, ಸಂಘಟನೆ ಅತಿ ಅವಶ್ಯಕ ಎಂದರು.

ಸನ್ಮಾನ ಸ್ವೀಕರಿಸಿದ ನರಸಿಂಗ್ ರೆಡ್ಡಿ ಗದಲೆಗಾಂವ ಮಾತನಾಡಿ, ಶಿಕ್ಷಕರ ಮತ್ತು ಉಪನ್ಯಾಸಕರ ಯಾವುದೇ ಸಮಸ್ಯೆಗಳಿದ್ದರೆ ಬಗೆಹರಿಸಲು ಸಹಕರಿಸುವುದಾಗಿ ತಿಳಿಸಿದರು.

ಪ್ರಾಚಾರ್ಯ ಸುರೇಶ ಆಕ್ಕಣ್ಣ ಅಧ್ಯಕ್ಷತೆ ವಹಿಸಿದ್ದರು. ಸಿದ್ದಣ್ಣ ಮರಪಳ್ಳೆ ಮೋಹನದಾಸ ರಾಠೋಡ, ಬಸವರಾಜ ಹಿರೇಮಠ, ಜಗದೀಶ ಶುಕ್ಲಾ, ದೀಲಿಪ ಸಾಗಾವೆ, ರೋಹಿದಾಸ ರಾಠೋಡ, ಸುಧಾಕರ ಮಹಿಂದ್ರಕರ್ ಉಪಸ್ಥಿತರಿದ್ದರು. ರಾಜಕುಮಾರ ಹೂಗಾರ ಸ್ವಾಗತಿಸಿದರು, ಆಶೋಕರೆಡ್ಡಿ ನಿಂಗಾವರೆ ನಿರೂಪಿಸಿದರು. ಬಸವರಾಜ ಹಿರೇಮಠ ವಂದಿಸಿದರು.



ಬಸವಕಲ್ಯಾಣ ಪದವಿ ಪೂರ್ವ ಉಪನ್ಯಾಸಕರ ಸಂಘಕ್ಕೆ ರಾಜ್ಯ ಕಾರ್ಯದರ್ಶಿಯಾಗಿ ನೇಮಕರಾದ ನರಸಿಂಗ ರೆಡ್ಡಿ ಗದಲೆಗಾಂವ ಆವರನ್ನು ನೀಲಾಂಬಿಕಾ ಸರಕಾರಿ ಕಾಲೇಜಿನಲ್ಲಿ ಅಭಿನಂದಿಸಲಾಯಿತು. ಸಂಘದ ರಾಜ್ಯಾಧ್ಯಕ್ಷ ತಿಮ್ಮಯ್ಯ ಘುರ್ಲೆ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು.

Scanned with OKEN Scanner

ಶಿವಪೂರದಲ್ಲಿ ಕಾರ್ತಿಕ ದೀಪೋತ್ಸವ ಸಂಭ್ರಮ

ವಿಕ ಸುದ್ದಿಲೋಕ ಬಸವಕಲ್ಯಾಣ

ಕಾರ್ತಿಕ ಮಾಸದ ಅಂಗವಾಗಿ ತಾಲೂಕಿನ ಶಿವಪೂರ ಗ್ರಾಮದ ಸಿದ್ಧೇಶ್ವರ ದೇವಸ್ಥಾನದಲ್ಲಿ ಭಾನುವಾರ ರಾತ್ರಿ ದೀಪೋತ್ಸವ ಜರುಗಿತು.

ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ದೀಪೋತ್ಸವಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿ, ಶಿವಪೂರದಲ್ಲಿ ಜರುಗಿದ ದೀಪೋತ್ಸವ ಸೋಲ್ಲಾಪುರದ ಸಿದ್ಧೇಶ್ವರ ದೇವಸ್ಥಾನದಲ್ಲಿ ನಡೆದಂತೆ ಭಾಸವಾಗುತ್ತಿದೆ. ದೀಪದಿಂದ ದೀಪ ಹಚ್ಚಬೇಕು ಎಂಬಂತೆ ಜೀವನದಲ್ಲಿ ಎಷ್ಟೇ ದುಃಖಗಳು ಬಂದರೂ ಅವುಗಳನ್ನು ಅತ್ಯಂತ ಧೈರ್ಯ ಹಾಗೂ ಸಮಚಿತ್ತದಿಂದ ಎದುರಿಸಬೇಕು ಎಂದರು.

ಮಾಜಿ ಶಾಸಕ ಎಂ.ಜಿ. ಮುಳೆ ಮಾತನಾಡಿ, ದೇವಸ್ಥಾನಗಳ ಅಭಿವೃದ್ಧಿಗೆ ಸರಕಾರದಿಂದ ಅನುದಾನ ದೊರೆತರೂ, ಅದರ ಸದ್ಬಳಕೆ ಆಗುವುದಿಲ್ಲ, ಮಧ್ಯವರ್ತಿ ಹಾಗೂ ಅಧಿಕಾರಿಗಳ ಹಾವಳಿಯಿಂದ ಬಹುತೇಕ ನುಂಗಣ್ಣರ ಪಾಲಾಗುತ್ತದೆ. ಆದರೆ, ಶಿವಪೂರದ ದೇವಸ್ಥಾನಕ್ಕೆ ಸರಕಾರದ ಅನುದಾನ ಇಲ್ಲದೆಯೂ ಭಕ್ತರ ಹಾಗೂ ಗ್ರಾಮಸ್ಥರ ಇಚ್ಛಾಶಕ್ತಿ ಯಿಂದ ಅಭಿವೃದ್ಧಿ ಕಂಡಿರುವುದು ಸಂತೋಷದ ವಿಷಯ ಎಂದರು. ಬಿಜೆಪಿ ಯುವ ಮುಖಂಡ ಶರಣು ಸಲಗರ ಮಾತನಾಡಿ, ಮನಸ್ಸಿನ ಕೆಟ್ಟ ವಿಚಾರಗಳನ್ನು ಹಾಗೂ ದುಶ್ಚಟಗಳನ್ನು ಜ್ಯೋತಿ ಬೆಳಗಿಸುವ ಮೂಲಕ ಹೋಗಲಾಡಿಸುವ ಸಂಕಲ್ಪ ಮಾಡಬೇಕು ಎಂದರು. ಪೂಜೆ ಬಳಿಕ ದೇವಸ್ಥಾನದ ಆವರಣದಲ್ಲಿ ಸಾಲು-ಸಾಲು ದೀಪ ಗಳನ್ನು ಬೆಳಗಿಸಲಾಯಿತು. ಪ್ರದೀಪ್ ಗಡವಂತೆ, ಅರ್ಜುನ್ ಸಿಂಗ್ ಠಾಕೂರ್, ಸುಭಾಶ್ ರೇಕುಳಗೆ, ಸಂಜು ಮೂಲಗೆ, ಶಿವರಾಜ ಬಾಲಿಕೀಲೆ, ಅನಿಲ್ ಸ್ವಾಮಿ, ಅನಿಲ್ ಮಠಪತಿ, ನವನಾಥ್ ಪೊದ್ದಾರ್, ಧೋಂಡಿಬಾ ಪೂಜಾರಿ, ನಾಗೇಶ್ ಉಮರ್ಗೆ, ಅನಿಲ್ ಉಮರ್ಗೆ ಪಾಲ್ಗೊಂಡಿದ್ದರು. ಎಂ.ಜಿ. ರಾಜೋಳೆ ನಿರೂಪಿಸಿದರು.



ಬಸವಕಲ್ಯಾಣ ತಾಲೂಕಿನ ಶಿವಪೂರ ಸಿದ್ಧೇಶ್ವರ ದೇವಸ್ಥಾನದಲ್ಲಿ ಭಾನುವಾರ ರಾತ್ರಿ ದೀಪೋತ್ಸವ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ವಿಜಯ ಕರ್ನಾಟಕ
ಮಂಗಳವಾರ,19 ನವೆಂಬರ್ 2019



ಬಸವಕಲ್ಯಾಣದಲ್ಲಿ ಈಚೆಗೆ ನಡೆದ ಶಿವಾನುಭವ ಚಿಂತನಗೋಷ್ಠಿಯಲ್ಲಿ ಹಿರಿಯ ಸಂಗೀತಗಾರ ವಿರೂಪಾಕ್ಷಯ್ಯ ಗೋರಟಾ ಅವರನ್ನು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು

ಮಾಸಿಕ ಚಿಂತನ ಶಿವಾನುಭವ ಗೋಷ್ಠಿ

ಸಜ್ಜನರ ಸಂಗ ಮಾಡಿ: ಅಭಿನವ ಶ್ರೀ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಸಜ್ಜನರ ಸಂಗದಿಂದ ಬದುಕು ಸುಂದರಗೊಳ್ಳುತ್ತದೆ. ಅದ್ದರಿಂದ ಜಾತಿ, ಧರ್ಮ ಎಣಿಸದೆ ಉತ್ತಮ ವ್ಯಕ್ತಿಗಳೊಂದಿಗೆ ಸ್ನೇಹ ಮಾಡಬೇಕು' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿನ ತ್ರಿಪುರಾಂತ ಗವಿಮಠದಲ್ಲಿ ಈಚೆಗೆ ಆಯೋಜಿಸಿದ್ದ ಮಾಸಿಕ ಚಿಂತನ ಶಿವಾನುಭವ ಗೋಷ್ಠಿ ಹಾಗೂ ವಿಶೇಷ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅಧುನಿಕ ಸೌಲಭ್ಯಗಳು ಹೆಚ್ಚಿದಂತೆಲ್ಲ ನೈತಿಕ ಮೌಲ್ಯಗಳು ಕುಸಿಯುತ್ತಿವೆ. ಅದ್ದರಿಂದ ಧರ್ಮ ಮಾರ್ಗದಲ್ಲಿ ನಡೆದು ಸುಖಿ, ಸಂತೃಪ್ತಿಯ ಜೀವನ ಸಾಗಿಸಬೇಕು' ಎಂದು ಅವರು ದರು.

ಹರಳಯ್ಯ ಸಮಾಜದ ಮುಖಂಡ ಸಂಜೀವ ಜಾಧವ ಮಾತನಾಡಿ, 'ತ್ರಿಪುರಾಂತ ಗವಿಮಠ ಸರ್ವರ ಮಠವಾಗಿದೆ. ಅಪಾರ ಭಕ್ತರ ಭಕ್ತಿ, ಶ್ರದ್ಧೆಯ ಕೇಂದ್ರವಾಗಿದೆ. ಇದಕ್ಕೆ ಅನೇಕ ವರ್ಷಗಳ ಇತಿಹಾಸವಿದ್ದರೂ ಈಗಿನ ಪೀಠಾಧಿಪತಿಗಳು ಇದರ ಅಭಿವೃದ್ಧಿ ಕೈಗೊಂಡಿದ್ದಾರೆ' ಎಂದರು. ಪ್ರೊ. ಸೂರ್ಯಕಾಂತ ಶೀಲವಂತ, ಕುಮಾರ ಹಿರೇಮಠ, ಅಭಿಷೇಕ ರಾಮಣ್ಣ ಮಾತನಾಡಿದರು.

ರಾಜ್ಯ ಸರ್ಕಾರದ ಕಲಾಶ್ರೀ ಪ್ರಶಸ್ತಿಗೆ ಭಾಜನರಾಗಿರುವ ಹಿರಿಯ ಸಂಗೀತಗಾರ ವಿರೂಪಾಕ್ಷಯ್ಯ ಗೋರಟಾ ಅವರನ್ನು ಸನ್ಮಾನಿಸಲಾಯಿತು.

ನಾಗಣ್ಣ ಭೂಶೆಟ್ಟೆ, ಮಲ್ಲಿಕಾರ್ಜುನ ಶೀಲವಂತ ಸಂಗೀತ ಪ್ರಸ್ತುತಪಡಿಸಿದರು. ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಶಿವಕುಮಾರ ಮಠ, ಪ್ರೊ. ರುದ್ರೇಶ್ವರ ಗೋರಟಾ, ಮಲ್ಲಿಕಾರ್ಜುನ ನಂದಿ, ಅನಿಲ ಪಾಟೀಲ, ಸುನಿಲ ಚಪಾತೆ, ರಾಚಣ್ಣ ವಸ್ತ್ರದ್, ವೀರಶೆಟ್ಟಿ ಪಾಟೀಲ, ಪ್ರಕಾಶ ಬಿರಾದಾರ, ಚಂದ್ರಶೇಖರ ಸ್ವಾಮಿ, ಬಸವರಾಜ ದಿಂಡೆ ಪಾಲ್ಗೊಂಡಿದ್ದರು.

ಪ್ರಜಾವಾಣಿ
ಶುಕ್ರವಾರ • ನವೆಂಬರ್ 29, 2019



ವಿಜಯವಾಣಿ ಚಿತ್ರ

ಬಸವಕಲ್ಯಾಣದ ವೀರಶೈವ ಲಿಂಗಾಯತ ಸಂಘಟನಾ ವೇದಿಕೆಯ ಕಲ್ಯಾಣ ಕರ್ನಾಟಕ ಕೇಂದ್ರ ಕಚೇರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಿಸ್ ಇಂಡಿಯಾ ವಿಜೇತೆ ನಿಶಾ ತಾಳಂಪಳ್ಳಿ ಅವರನ್ನು ಸನ್ಮಾನಿಸಲಾಯಿತು. ಗವಿಮಠದ ಅಭಿನವ ಶ್ರೀಗಳು ಮತ್ತು ಖೇಳಗಿ ಶ್ರೀಗಳು, ವೇದಿಕೆ ತಾಲೂಕು ಅಧ್ಯಕ್ಷ ಅನೀಲ ಪಾಟೀಲ್, ಸುನೀಲ ಚಪಾತೆ, ಬಸವರಾಜ ಅಲಶೆಟ್ಟೆ ಉಪಸ್ಥಿತರಿದ್ದರು



ಪೇಜಾವರ ಶ್ರೀ ವಿಶ್ವೇಶತೀರ್ಥ ಶ್ರೀಗಳು ಸರ್ವ ಧರ್ಮಿಯರ ಆಶಾಕಿರಣ, ವಿಶ್ವಸಂತ. ರಾಮ ಜನ್ಮಭೂಮಿಗಾಗಿ ಹೋರಾಡಿದ್ದ ಪೇಜಾವರ ಶ್ರೀಗಳು, ಸೌಹಾರ್ದತೆಗೆ ಒತ್ತು ಕೊಟ್ಟಿದ್ದವರು. ಸಮಾಜ ಸೇವೆ ಉಸಿರಾಗಿಸಿ ಕೊಂಡಿದ್ದ ಶ್ರೀಗಳು, ಸಾಮಾಜಿಕ ಸೇವಾ ಕಳಕಳಿಯ ಸಾಕಾರ ಮೂರ್ತಿ. ದೇಶ ಕಂಡ ಅಪರೂಪದ ಶ್ರೀಗಳು, ಆಸ್ಪತ್ರೆ ಸೇರುವ ಎರಡು ದಿನ ಹಿಂದೆಯೂ ಪ್ರವಾಸ ಮಾಡಿದ್ದರು. ಮಹಾನ ಪೂಜ್ಯರನ್ನು ಕಳೆದುಕೊಂಡ ದೇಶ ಬಡವಾಗಿದೆ.

| ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು
ಗವಿಮಠ ಬಸವಕಲ್ಯಾಣ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 30 ಡಿಸೆಂಬರ್ 2019
30 DECEMBER 2019

Scanned with OKEN Scanner

ಶಿವಪೂರದಲ್ಲಿ ಕಾರ್ತಿಕ ದೀಪೋತ್ಸವ ಸಂಭ್ರಮ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಕಾರ್ತಿಕ ಮಾಸದ ಅಂಗವಾಗಿ ತಾಲೂಕಿನ ಶಿವಪೂರ ಗ್ರಾಮದ ಸಿದ್ಧೇಶ್ವರ ದೇವಸ್ಥಾನದಲ್ಲಿ ಭಾನುವಾರ ರಾತ್ರಿ ದೀಪೋತ್ಸವ ಜರುಗಿತು.

ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ದೀಪೋತ್ಸವಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿ, ಶಿವಪೂರದಲ್ಲಿ ಜರುಗಿದ ದೀಪೋತ್ಸವ ಸೋಲ್ಲಾಪುರದ ಸಿದ್ಧೇಶ್ವರ ದೇವಸ್ಥಾನದಲ್ಲಿ ನಡೆದಂತೆ ಭಾಸವಾಗುತ್ತಿದೆ. ದೀಪದಿಂದ ದೀಪ ಹಚ್ಚಬೇಕು ಎಂಬಂತೆ ಜೀವನದಲ್ಲಿ ಎಷ್ಟೇ ದುಃಖಗಳು ಬಂದರೂ ಅವುಗಳನ್ನು ಅತ್ಯಂತ ಧೈರ್ಯ ಹಾಗೂ ಸಮಚಿತ್ತದಿಂದ ಎದುರಿಸಬೇಕು ಎಂದರು.

ಮಾಜಿ ಶಾಸಕ ಎಂ.ಜಿ. ಮುಳೆ ಮಾತನಾಡಿ, ದೇವಸ್ಥಾನಗಳ ಅಭಿವೃದ್ಧಿಗೆ ಸರಕಾರದಿಂದ ಅನುದಾನ ದೊರೆತರೂ, ಅದರ ಸದ್ಬಳಕೆ ಆಗುವುದಿಲ್ಲ ಮಧ್ಯವರ್ತಿ ಹಾಗೂ ಅಧಿಕಾರಿಗಳ ಹಾವಳಿಯಿಂದ ಬಹುತೇಕ ನುಂಗಣ್ಣರ ಪಾಲಾಗುತ್ತದೆ. ಆದರೆ, ಶಿವಪೂರದ ದೇವಸ್ಥಾನಕ್ಕೆ ಸರಕಾರದ ಅನುದಾನ ಇಲ್ಲದೆಯೂ ಭಕ್ತರ ಹಾಗೂ ಗ್ರಾಮಸ್ಥರ ಇಚ್ಛಾಶಕ್ತಿ ಯಿಂದ ಅಭಿವೃದ್ಧಿ ಕಂಡಿರುವುದು ಸಂತೋಷದ ವಿಷಯ ಎಂದರು. ಬಿಜೆಪಿ ಯುವ ಮುಖಂಡ ಶರಣು ಸಲಗರ ಮಾತನಾಡಿ, ಮನಸ್ಸಿನ ಕೆಟ್ಟ ವಿಚಾರಗಳನ್ನು ಹಾಗೂ ದುಶ್ಚಟಗಳನ್ನು ಜ್ಯೋತಿ ಬೆಳಗಿಸುವ ಮೂಲಕ ಹೋಗಲಾಡಿಸುವ ಸಂಕಲ್ಪ ಮಾಡಬೇಕು ಎಂದರು. ಪೂಜೆ ಬಳಿಕ ದೇವಸ್ಥಾನದ ಆವರಣದಲ್ಲಿ ಸಾಲು-ಸಾಲು ದೀಪ ಗಳನ್ನು ಬೆಳಗಿಸಲಾಯಿತು. ಪ್ರದೀಪ್ ಗಡವಂತೆ, ಅರ್ಜುನ್ ಸಿಂಗ್ ಠಾಕೂರ್, ಸುಭಾಶ್ ರೇಕುಳಗೆ, ಸಂಜು ಮೂಲಗೆ, ಶಿವರಾಜ ಬಾಲಿಕೀಲೆ, ಅನಿಲ್ ಸ್ವಾಮಿ, ಆನಿಲ್ ಮಠಪತಿ, ನವನಾಥ್ ಮೊದ್ದಾರ್, ಧೋಂಡಿಬಾ ಪೂಜಾರಿ, ನಾಗೇಶ್ ಉಮರ್ಗೆ, ಆನಿಲ್ ಉಮರ್ಗೆ ಪಾಲ್ಗೊಂ ಡಿದ್ದರು. ಎಂ.ಜಿ. ರಾಜೋಳೆ ನಿರೂಪಿಸಿದರು.



ಬಸವಕಲ್ಯಾಣ ತಾಲೂಕಿನ ಶಿವಪೂರ ಸಿದ್ಧೇಶ್ವರ ದೇವಸ್ಥಾನದಲ್ಲಿ ಭಾನುವಾರ ರಾತ್ರಿ ದೀಪೋತ್ಸವ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ವಿಜಯ ಕರ್ನಾಟಕ
ಸಂಗಮೇಶ್ವರ, 19 ನವೆಂಬರ್ 2019

ಸ್ವಚ್ಛ ನಗರ ನಿರ್ಮಾಣಕ್ಕೆ ಸಾರ್ವಜನಿಕ ಚಿಂತನ ಶಿಬಿರ ಸಹಕಾರಿ: ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಸ್ವಚ್ಛ ನಗರ ನಿರ್ಮಾಣಕ್ಕೆ ಸಾರ್ವಜನಿಕ ಚಿಂತನ ಶಿಬಿರ ಸಹಕಾರಿ ಎಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿನ ಶ್ರಿಪುರಾಂತ ಗವಿಮಠದಲ್ಲಿ ಈಚೆಗೆ ಆಯೋಜಿಸಿದ್ದ ಸಾರ್ವಜನಿಕ ಚಿಂತನ ಶಿಬಿರಾನುಭವ ಗೋಷ್ಠಿ ಹಾಗೂ ವಿಶೇಷ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಅಧುನಿಕ ಸೌಲಭ್ಯಗಳು ಹೆಚ್ಚಿದಂತೆಲ್ಲ ನೈತಿಕ ಮೌಲ್ಯಗಳು ಕುಸಿಯುತ್ತಿವೆ. ಅದರಿಂದ ಧರ್ಮ ನಾಗರಿಕರಲ್ಲಿ ನಡೆಸಬೇಕು. ಸಂಸ್ಕೃತಿಯ ಜೀವನ ಸಾಗಿಸಬೇಕು' ಎಂದು ಅವರು ತಿಳಿಸಿದರು.

ಹಿರಿಯ ಸಾಹಿತಿ ಪ್ರೊ. ಚಂದ್ರಶೇಖರ ಸ್ವಾಮಿ, ಬಸವರಾಜ ಬಿರಾದಾರ, ವೀರಣ್ಣ ಬಿರಾದಾರ, ಪ್ರೊ. ಶಿವಪುತ್ರ ಗೋರೂ, ಸುಲೇಪೇಟೆ ಬಸವರಾಜ ಪಾಟೀಲ, ಪ್ರಕಾಶ ಪಾಟೀಲ, ಸಂಗಮೇಶ ಪಾಟೀಲ ಮುಖಂಡರು. ಹರಳಯ್ಯ ಸಮೂಹದ ಮುಖಂಡ ಸಂಜೀವ ಬಾಧವ ಮಾತನಾಡಿ, ತ್ರಿಪುರಾಂತ ಗವಿಮಠ ಸರ್ವ ಜನರಾಗಿದ. ಅವಾರ ಭಕ್ತರ ಬಳಕ್ಕೆ ಮಾರಕವಾಗಿದ. ಇದಕ್ಕೆ ಅನೇಕ ಶ್ರೀಮಠದ ಕೇಂದ್ರವಾಗಿದ. ಇದಕ್ಕೆ ಈಗಿನ ಪೂರ್ವಜಗಳ ಇತಿಹಾಸವಿದ್ದರೂ ಅಭಿವೃದ್ಧಿ ಪೀಠಾಧಿಪತಿಗಳು ಇದರ ಕೈಗೊಂಡಿದ್ದಾರೆ' ಎಂದರು. ಪ್ರೊ. ಸೂರ್ಯಕಾಂತ ಶಿಲವಂತ, ಕುಮಾರ ಹಿರೇಮಠ, ಅಭಿಷೇಕ ಹಿರೇಮಠ, ರಾಮಣ್ಣ ಮಹಾರಾಜ ಸೇರಿದಂತೆ ಅನೇಕರು ಸನ್ಮಾನಿಸಿದರು.



ಬಸವಕಲ್ಯಾಣದಲ್ಲಿ ಈಚೆಗೆ ನಡೆದ ಶಿವಾನುಭವ ಚಿಂತನಗೋಷ್ಠಿಯಲ್ಲಿ ಹಿರಿಯ ಸಂಗೀತಗಾರ ವಿರೂಪಾಕ್ಷಯ್ಯ ಗೋರೂ ಅವರನ್ನು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು

ಪ್ರಜಾವಾಣಿ
ಬುಧವಾರ • ನವೆಂಬರ್ 29, 2019

ಸ್ವಚ್ಛ ನಗರ ನಿರ್ಮಾಣಕ್ಕೆ ಸಾರ್ವಜನಿಕ ಚಿಂತನ ಶಿಬಿರ ಸಹಕಾರಿ: ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಸ್ವಚ್ಛ ನಗರ ನಿರ್ಮಾಣಕ್ಕೆ ಸಾರ್ವಜನಿಕ ಚಿಂತನ ಶಿಬಿರ ಸಹಕಾರಿ ಎಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿನ ಶ್ರಿಪುರಾಂತ ಗವಿಮಠದಲ್ಲಿ ಈಚೆಗೆ ಆಯೋಜಿಸಿದ್ದ ಸಾರ್ವಜನಿಕ ಚಿಂತನ ಶಿಬಿರಾನುಭವ ಗೋಷ್ಠಿ ಹಾಗೂ ವಿಶೇಷ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಅಧುನಿಕ ಸೌಲಭ್ಯಗಳು ಹೆಚ್ಚಿದಂತೆಲ್ಲ ನೈತಿಕ ಮೌಲ್ಯಗಳು ಕುಸಿಯುತ್ತಿವೆ. ಅದರಿಂದ ಧರ್ಮ ನಾಗರಿಕರಲ್ಲಿ ನಡೆಸಬೇಕು. ಸಂಸ್ಕೃತಿಯ ಜೀವನ ಸಾಗಿಸಬೇಕು' ಎಂದು ಅವರು ತಿಳಿಸಿದರು.

ಹಿರಿಯ ಸಾಹಿತಿ ಪ್ರೊ. ಚಂದ್ರಶೇಖರ ಸ್ವಾಮಿ, ಬಸವರಾಜ ಬಿರಾದಾರ, ವೀರಣ್ಣ ಬಿರಾದಾರ, ಪ್ರೊ. ಶಿವಪುತ್ರ ಗೋರೂ, ಸುಲೇಪೇಟೆ ಬಸವರಾಜ ಪಾಟೀಲ, ಪ್ರಕಾಶ ಪಾಟೀಲ, ಸಂಗಮೇಶ ಪಾಟೀಲ ಮುಖಂಡರು. ಹರಳಯ್ಯ ಸಮೂಹದ ಮುಖಂಡ ಸಂಜೀವ ಬಾಧವ ಮಾತನಾಡಿ, ತ್ರಿಪುರಾಂತ ಗವಿಮಠ ಸರ್ವ ಜನರಾಗಿದ. ಅವಾರ ಭಕ್ತರ ಬಳಕ್ಕೆ ಮಾರಕವಾಗಿದ. ಇದಕ್ಕೆ ಅನೇಕ ಶ್ರೀಮಠದ ಕೇಂದ್ರವಾಗಿದ. ಇದಕ್ಕೆ ಈಗಿನ ಪೂರ್ವಜಗಳ ಇತಿಹಾಸವಿದ್ದರೂ ಅಭಿವೃದ್ಧಿ ಪೀಠಾಧಿಪತಿಗಳು ಇದರ ಕೈಗೊಂಡಿದ್ದಾರೆ' ಎಂದರು. ಪ್ರೊ. ಸೂರ್ಯಕಾಂತ ಶಿಲವಂತ, ಕುಮಾರ ಹಿರೇಮಠ, ಅಭಿಷೇಕ ಹಿರೇಮಠ, ರಾಮಣ್ಣ ಮಹಾರಾಜ ಸೇರಿದಂತೆ ಅನೇಕರು ಸನ್ಮಾನಿಸಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ವೀರಶೈವ ಲಿಂಗಾಯತ ಸಂಘಟನಾ ವೇದಿಕೆಯ ಕಲ್ಯಾಣ ಕರ್ನಾಟಕ ಕೇಂದ್ರ ಕಚೇರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಿಸ್ ಇಂಡಿಯಾ ವಿಜೇತೆ ನಿಶಾ ತಾಳಂಪಳ್ಳಿ ಅವರನ್ನು ಸನ್ಮಾನಿಸಲಾಯಿತು. ಗವಿಮಠದ ಅಭಿನವ ಶ್ರೀಗಳು ಮತ್ತು ಖೇಳಗಿ ಶ್ರೀಗಳು, ವೇದಿಕೆ ತಾಲೂಕು ಅಧ್ಯಕ್ಷ ಅನೀಲ ಪಾಟೀಲ್, ಸುನೀಲ ಚಪಾತೆ, ಬಸವರಾಜ ಅಲಶೆಟ್ಟಿ ಉಪಸ್ಥಿತರಿದ್ದರು

ಪೇಜಾವರ ಶ್ರೀ ವಿಶ್ವೇಶತೀರ್ಥ ಶ್ರೀಗಳು ಸರ್ವ ಧರ್ಮಿಯರ ಆಶಾಕಿರಣ, ವಿಶ್ವಸಂತ. ರಾಮ ಜನ್ಮಭೂಮಿಗಾಗಿ ಹೋರಾಡಿದ್ದ ಪೇಜಾವರ ಶ್ರೀಗಳು, ಸೌಹಾರ್ದತೆಗೆ ಒತ್ತು ಕೊಟ್ಟಿದ್ದವರು. ಸಮಾಜ ಸೇವೆ ಉಸಿರಾಗಿಸಿ ಕೊಂಡಿದ್ದ ಶ್ರೀಗಳು, ಸಾಮಾಜಿಕ ಸೇವಾ ಕಳಕಳಿಯ ಸಾಕಾರ ಮೂರ್ತಿ. ದೇಶ ಕಂಡ ಅಪರೂಪದ ಶ್ರೀಗಳು, ಆಸ್ಪತ್ರೆ ಸೇರುವ ಎರಡು ದಿನ ಹಿಂದೆಯೂ ಪ್ರವಾಸ ಮಾಡಿದ್ದರು. ಮಹಾನ ಪೂಜ್ಯರನ್ನು ಕಳೆದುಕೊಂಡ ದೇಶ ಬಡವಾಗಿದೆ.



ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು
ಗವಿಮಠ ಬಸವಕಲ್ಯಾಣ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 30 ಡಿಸೆಂಬರ್ 2019
30 DECEMBER 2019

Scanned with OKEN Scanner

VIJAYAVANI » KALABURAGI
ಮಂಗಳವಾರ 10 ಡಿಸೆಂಬರ್ 2019
10 DECEMBER 2019
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಬಸವಕಲ್ಯಾಣದಲ್ಲಿ ಆರಂಭ | ಗವಿಮಠ ಶ್ರೀ, ಖೇಳಗಿ ಶ್ರೀಗಳ ಸಾನ್ನಿಧ್ಯ
ವೀರಶೈವ ಲಿಂಗಾಯತ ವೇದಿಕೆ ಕಚೇರಿ ಉದ್ಘಾಟನೆ



ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ನಗರದ ಮಿನಿ ವಿಧಾನಸೌಧದ ಎದುರಿರುವ ಕಟ್ಟಡ ಸಂಕೀರ್ಣದಲ್ಲಿ ಸೋಮವಾರ ವೀರಶೈವ ಲಿಂಗಾಯತ ಸಂಘಟನಾ ವೇದಿಕೆಯ ಕಲ್ಯಾಣ ಕರ್ನಾಟಕ ಕೇಂದ್ರ ಕಚೇರಿ ಆರಂಭಿಸಲಾಯಿತು.

ಗವಿಮಠದ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು ಮತ್ತು ಖೇಳಗಿಯ ಶ್ರೀ ಶಿವಲಿಂಗ ಸ್ವಾಮೀಜಿ ನೂತನ ಕಚೇರಿ ಉದ್ಘಾಟಿಸಿದರು. ಶಾಸಕ ಬಿ.ನಾರಾಯಣರಾವ್, ವೀರಶೈವ ಲಿಂಗಾಯತ ಸಂಘಟನಾ ವೇದಿಕೆಯ ರಾಷ್ಟ್ರೀಯ ಅಧ್ಯಕ್ಷ ಪ್ರದೀಪ ಕಂಕಣವಾಡಿ, ನಟ ಮೂಗೂರು ಸುಂದರ್, ಮಿಸ್ ಇಂಡಿಯಾ ವಿಜೇತೆ ನಿಶಾ ತಾಳಂಪಳ್ಳಿ, ನಟ ಜಗದೀಶ್, ಜಿಪಂ ಸದಸ್ಯ ಗುಂಡುರೆಡ್ಡಿ, ಬಿಜೆಪಿ ಮುಖಂಡ ಶರಣು ಸಲಗರ, ವೇದಿಕೆ ಜಿಲ್ಲಾಧ್ಯಕ್ಷ ಸುನೀಲ್ ಪತ್ರಿ, ತಾಲೂಕಾಧ್ಯಕ್ಷ ಅನೀಲ್ ಪಾಟೀಲ್, ಉಪಾಧ್ಯಕ್ಷ ಸುನೀಲ್ ಚಪಾತೆ, ಪ್ರಧಾನ ಕಾರ್ಯದರ್ಶಿ ಮಹಾಂತಯ್ಯ ಮಠಪತಿ, ನಗರಾಧ್ಯಕ್ಷ ಬಸವರಾಜ ಮೂಲಗೆ, ಬಸವರಾಜ ಹಲಶೆಟ್ಟಿ, ಪ್ರಶಾಂತ್ ಲಕ್ಕಾಜಿ, ಶಿವಕುಮಾರ ಹೊಳ್ಳೆ, ರಾಮು ಬಿರಾದಾರ, ಅಮರ ಮೆಂಡೋಳೆ, ಮಲ್ಲು ಸ್ವಾಮಿ ಇತರರಿದ್ದರು.

ಜಿಲ್ಲೆಯ ಆಯಾ ತಾಲೂಕುಗಳಿಂದ ಆಗಮಿಸಿದ ಸಂಘಟನಾ ವೇದಿಕೆ ಪದಾಧಿಕಾರಿಗಳಿಗೆ ಶಾಸಕ ಬಿ.ನಾರಾಯಯಣರಾವ ಹಾಗೂ ರಾಷ್ಟ್ರೀಯ ಅಧ್ಯಕ್ಷ ಕಂಕಣವಾಡಿ ಅವರು ಪ್ರಮಾಣ ಪತ್ರ ವಿತರಿಸಿದರು.

ಬಸವಕಲ್ಯಾಣದಲ್ಲಿ ವೀರಶೈವ ಲಿಂಗಾಯತ ಸಂಘಟನಾ ವೇದಿಕೆಯ ಕಲ್ಯಾಣ ಕರ್ನಾಟಕ ಕೇಂದ್ರ ಕಚೇರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಪದಾಧಿಕಾರಿಗಳಿಗೆ ಪ್ರಮಾಣ ಪತ್ರ ವಿತರಿಸಿದರು. ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮತ್ತು ಖೇಳಗಿಯ ಶ್ರೀ ಶಿವಲಿಂಗ ಸ್ವಾಮೀಜಿ, ಶಾಸಕ ಬಿ.ನಾರಾಯಣರಾವ, ಪ್ರದೀಪ್ ಕಂಕಣವಾಡಿ, ಶರಣು ಸಲಗರ ಇತರರಿದ್ದರು.

ಸದ್ಭಾವ ಚಿಂತನ ■ ಮಾಸಿಕ ಹುಣ್ಣಿಮೆ ಕಾರ್ಯಕ್ರಮ

ಉದಯವಾಣಿ
ಶುಕ್ರವಾರ, ಡಿಸೆಂಬರ್ 13, 2019

ನಿಸ್ವಾರ್ಥ ಸೇವೆಯಿಂದ ಫಲ: ಅಭಿನವ ಶ್ರೀ



ಬಸವಕಲ್ಯಾಣ: ಭಕ್ತಿಯಿಂದ ಮಾಡುವ ಸೇವೆಗೆ ಮಾತ್ರ ದೇವರು ಫಲ-ಸಿಗುವಂತೆ ಮಾಡುತ್ತಾನೆ ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಶಹಾಪೂರ ಬಡಾವಣೆಯಲ್ಲಿ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆಯಿಂದ ನಡೆದ ಮನೆ-ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಭಕ್ತಿಯಲ್ಲಿ ಸಕಾಮ ಭಕ್ತಿ ಹಾಗೂ ನಿಷ್ಕಾಮ ಭಕ್ತಿಗಳಿವೆ. ನಿಷ್ಕಾಮ ಭಕ್ತಿ ಮಾಡಿದಾಗ ಮಾತ್ರ ಫಲ ದೊರೆಯುತ್ತದೆ ಎಂದು ನುಡಿದರು.

ಪ್ರೊ.ಉದಯಾನಂದ ಶೀಲವಂತ ಮಾತನಾಡಿ, ಚಿಕ್ಕ ವಯಸ್ಸಿನಲ್ಲಿ ಶ್ರೀ ಅಭಿನವ ಶ್ರೀಗಳು ಗವಿಮಠದ ಗುರುಗಳಾಗಿ ಪಟ್ಟಾಧಿಕಾರ ಪಡೆದು ನಿರಂತರ ಇಷ್ಟಲಿಂಗ ಪೂಜೆ, ಅನುಷ್ಠಾನ, ಧ್ಯಾನ ದಿಂದ ಗುರು ಶಕ್ತಿಯನ್ನು ಸಂಪಾದಿಸಿ ಇಂದು ನಮ್ಮೆಲ್ಲರಿಗೆ ನಿರಂತರ ಧರ್ಮಮಾರ್ಗ ತೋರುತ್ತ ಗವಿಮಠದ ಅಭಿವೃದ್ಧಿ ಮಾಡುತ್ತಿರುವುದು ಸಂತಸದ ಸಂಗತಿಯಾಗಿದೆ ಎಂದರು.

ಆದೇ ರೀತಿ ಮುಂಬರುವ ದಿನಗಳಲ್ಲಿ ಆದಷ್ಟು ಬೇಗನೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಸಂದರ್ಭದಲ್ಲಿ ಗವಿಮಠದಲ್ಲಿ ರಥೋತ್ಸವ, ಪಲ್ಲಕ್ಕಿ ಸೇರಿದಂತೆ ಧಾರ್ಮಿಕ ಆಚರಣೆಗಳನ್ನು ಆರಂಭಿಸುವ ಸಂಕಲ್ಪವನ್ನು ಶ್ರೀಗಳು ಮಾಡಬೇಕು. ಅದಕ್ಕೆ ಬೇಕಾದ ಸಹಕಾರವನ್ನು ಭಕ್ತರು ನಾವೆಲ್ಲ ಮಾಡುತ್ತೇವೆ ಎಂದು ಹೇಳಿದರು.

ರಮೇಶ ಸ್ವಾಮಿ ಆಧ್ಯಕ್ಷತೆ ವಹಿಸಿದ್ದರು. ಗವಿಮಠ ಟ್ರಸ್ಟ್ ಕಾರ್ಯಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ನಂದಿ ಪ್ರೊ। ಸೂರ್ಯಕಾಂತ ಶೀಲವಂತ, ಶಿವಕುಮಾರ ಮಠ, ರೇವಣಸಿದ್ಧಯ್ಯ ಮಠಪತಿ, ರಮೇಶ ರಾಜೋಳೆ, ಕೇದಾರನಾಥ ಪಾಟೀಲ, ಡಾ। ಎಸ್.ಕೆ. ಪಟವಾದಿ, ಡಾ। ಬಸವರಾಜ ಸ್ವಾಮಿ, ಶಾಂತವೀರ ಸ್ವಾಮಿ, ಜೆ.ಎ. ಕೋಶೆಟ್ಟಿ ರಾಜಶೇಖರ ವಸ್ತ್ರದ, ನಾಗರಾಜ ಸ್ವಾಮಿ ಸೇರಿದಂತೆ ಮತ್ತಿತರರು ಇದ್ದರು. ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷೆ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಮಯೂರಿ ರಮೇಶ ಸ್ವಾಮಿ ವಂದಿಸಿದರು.

ಬಸವಕಲ್ಯಾಣ: ನಗರದ ಶಹಾಪೂರ ಬಡಾವಣೆಯಲ್ಲಿ ನಡೆದ ಮನೆ-ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

Scanned with OKEN Scanner

ಧ್ಯಾನ, ಯೋಗದಿಂದ ಆರೋಗ್ಯ

ಶ್ರೀ ಪ್ರಣವಾನಂದ ಸ್ವಾಮೀಜಿ ಆಶೀರ್ವಚನ | ಸಸ್ತಾಪುರದಲ್ಲಿ ಶ್ರೀ ಶಿವಲಿಂಗೇಶ್ವರರ ಜಾತ್ರೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಧ್ಯಾನ, ಯೋಗ, ವ್ಯಾಯಾಮ ಜೀವನದಲ್ಲಿ ರೂಢಿಸಿಕೊಂಡರೆ ರೋಗಮುಕ್ತವಾದ ಆರೋಗ್ಯಪೂರ್ಣ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ಮುಚಳಂಬ ಶ್ರೀ ಪ್ರಣವಾನಂದ ಸ್ವಾಮೀಜಿ ಹೇಳಿದರು.

ಸಸ್ತಾಪುರದಲ್ಲಿ ಶ್ರೀ ಸಿದ್ಧಲಿಂಗ ಯತಿರಾಜರ ಪುಣ್ಯ ಸ್ಮರಣೋತ್ಸವ ಹಾಗೂ ಶ್ರೀಸದ್ಗುರು ಶರಣ ಶಿವಲಿಂಗೇಶ್ವರರ ಜಾತ್ರೆಯಲ್ಲಿ ಶನಿವಾರ ಸಂಜೆ ಆಯೋಜಿಸಿದ್ದ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೆಡಿಷನ್ ಮುಕ್ತವಾದ ಜೀವನಕ್ಕೆ ಮೆಡಿಟೇಷನ್ ಅವಶ್ಯ ಎಂದರು.

» ಜೀವನದಲ್ಲಿ ಎಲ್ಲಕ್ಕಿಂತಲೂ ಮುಖ್ಯ ಶಾಂತಿ ಮತ್ತು ಸಮಾಧಾನ

ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಜಾತ್ರೆಗಳು ನಮ್ಮ ದೇಶದ ಸಂಸ್ಕೃತಿ ಬಿಂಬಿಸುವ ಜತೆಗೆ ಗ್ರಾಮದಲ್ಲಿ ಸೌಹಾರ್ದತೆ ಗಟ್ಟಿಗೊಳಿಸಲು ಸಹಕಾರಿಯಾಗುತ್ತದೆ ಎಂದರು.

ಶ್ರೀ ಡಾ.ಈಶ್ವರನಾನಂದ ಸ್ವಾಮೀಜಿ ಮಾತನಾಡಿ, ಜೀವನದಲ್ಲಿ ಎಲ್ಲಕ್ಕಿಂತಲೂ ಮುಖ್ಯ ಶಾಂತಿ ಮತ್ತು ಸಮಾಧಾನ. ಇದು ಧರ್ಮ ಮತ್ತು ಆಧ್ಯಾತ್ಮಿಕ ಮಾರ್ಗದಲ್ಲಿ ಮಾತ್ರ ಕಂಡುಕೊಳ್ಳಲು ಸಾಧ್ಯ. ಈ ಮಾರ್ಗದಲ್ಲಿ ನಡೆಯಲು ಗುರು ಮಾರ್ಗದರ್ಶನ ಅವಶ್ಯಕ ಎಂದರು.

ಶ್ರೀ ಸದಾನಂದ ಅಪ್ಪಗಳು ಆಶೀರ್ವಚನ ನೀಡಿದರು. ಪೂಜ್ಯ ಪ್ರಭಾವತಿ ತಾಯಿ, ಶ್ರೀ ವಿಶ್ವಂಬರ್ ಸ್ವಾಮೀಜಿ, ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಶ್ರೀ ಸದಾನಂದ ಅಪ್ಪಗಳ ತುಲಾಭಾರ ಮಾಡಲಾಯಿತು.

ಗ್ರಾಪಂ ಅಧ್ಯಕ್ಷ ಬ್ರಹ್ಮಾರೆಡ್ಡಿ ಕೊಂತಾಮೆ, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ರಮಪ್ಪ ಗುದಗೆ, ಜಾತ್ರಾ ಮಹೋತ್ಸವ ಕಮಿಟಿ ಅಧ್ಯಕ್ಷ ಪ್ರಭು ಪಾಟೀಲ್ ಸೇರಿ ಕಮಿಟಿ ಸದಸ್ಯರು-ಪ್ರಮುಖರು ಭಾಗವಹಿಸಿದ್ದರು. ಶಿಕ್ಷಕ ಅಂಬಾರಾಯ ಸೈದಾಪುರೆ ಹಾಗೂ ಜಯಕುಮಾರ ರಡಕೆ ನಿರೂಪಣೆ ಮಾಡಿದರು.



ಸಸ್ತಾಪುರದಲ್ಲಿ ಶ್ರೀ ಶಿವಲಿಂಗೇಶ್ವರರ ಜಾತ್ರೆ ನಿಮಿತ್ತ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಶ್ರೀ ಪ್ರಣವಾನಂದ ಸ್ವಾಮೀಜಿ ಮಾತನಾಡಿದರು. ಶ್ರೀ ಸದಾನಂದ ಅಪ್ಪ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 2ಡಿಸೆಂಬರ್ 2019
2 DECEMBER 2019

ಸಂಯುಕ್ತ ಕರ್ನಾಟಕ
ಶನಿವಾರ, 30, ನವೆಂಬರ್, 2019, ಕಲಬುರಗಿ

'ಪ್ರತಿಯೊಬ್ಬರು ಸಂಘ ಜೀವಿಗಳಾಗಿ ಸಜ್ಜನರ ಜತೆ ಬದುಕಬೇಕು'

ಸಂ.ಕ.ಸಮಾಚಾರ ಬಸವಕಲ್ಯಾಣ

ಪ್ರತಿಯೊಬ್ಬರೂ ಸಂಘ ಜೀವಿಗಳಾಗಿ ಸಜ್ಜನರ ಜತೆ ಬದುಕಬೇಕು ಎಂದು ತ್ರಿಪುರಾಂತ್ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತ್ರಿಪುರಾಂತ್ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠದಲ್ಲಿ ನಡೆದ ಶಿವಾನುಭವ ಚಿಂತನ, ಮಾಸಿಕ ಅಮವಾಸೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು, ಪ್ರತಿಯೊಬ್ಬರೂ ಸಜ್ಜನರ ಜತೆ ಸಹವಾಸ ಮಾಡುತ್ತ ಧರ್ಮ ಮಾರ್ಗದಲ್ಲಿ ಮುನ್ನಡೆದರೆ ಬದುಕು ಸಾರ್ಥಕವಾಗುತ್ತದೆ. ತಮ್ಮ ಕುರಿತು ತಿಳಿದುಕೊಳ್ಳುವುದೇ ಶಿವಾನುಭವ ಚಿಂತನ ಎಂದರು. ಮುಖಂಡ ಸಂಜಯಕುಮಾರ ಶರಧವ ಮಾತನಾಡಿ ಗವಿಮಠದ ಶ್ರೀಗಳಿಗೆ ಅಪಾರ ಶಕ್ತಿ ಇದೆ. ನಿರಂತರ ಶುದ್ಧ ಭಕ್ತಿಯಿಂದ ನಡೆದುಕೊಳ್ಳುವವರಿಗೆ ಬೇಡಿದನ್ನು ಕರುಣಿಸುವ ಶಕ್ತಿ ಇದೆ. ಅಂಥ ಇಷ್ಟಾರ್ಥ ಸಿದ್ಧಿ ನನಗೂ ಆಗಿದೆ. ಜತೆಗೆ ಗವಿಮಠದ ಶ್ರೀ ಅಭಿನವ ಶ್ರೀಗಳು ಸಮಾನತೆ ತತ್ವವನ್ನು ಅನುಸರಿಸುತ್ತಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಪ್ರಮುಖರಾದ ಶಿವಕುಮಾರ ಮಠ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ನಂದಿ, ಅನೀಲ ಪಾಟೀಲ್, ಸುನೀಲ ಚಪಾತೆ, ರಾಚಣ್ಣ ವಸ್ತದ, ವೀರಶೆಟ್ಟಿ ಪಾಟೀಲ್, ಚಂದ್ರಶೇಖರ ಸ್ವಾಮಿ, ಬಸವರಾಜ ಹಿರೇಮಠ, ಪ್ರಕಾಶ ಬಿರಾದಾರ, ಬಸವರಾಜ ದಿ ರುದ್ರೇಶ್ವರ ಸ್ವಾಮಿ, ಸುಭದ್ರಾಬಾ ಸ್ವಾಮಿ, ಸವಿತಾ ಸ್ವಾಮಿ, ಸರ ಬೆಂಬಳಿ, ರೇಣುಕಾ ಮಠ ಶೀಲಾದೇವಿ ಲವಾರೆ, ಸುನಂ ನಂದಿ, ಪಾರ್ವತಿ ರೋ ಶೀಲಾ ಕಲ್ಯಾಣಿ ಪಾಲ್ಗೊಂಡಿದ್ದ ಸೂರ್ಯಕಾಂತ ಶೀಲವ ಸ್ವಾಗತಿಸಿ ಪ್ರಾಸ್ತಾ ಮಾತನಾಡಿದರು. ಕುಮ ಹಿರೇಮಠ ಕಾರ್ಯಕ್ರ ನಿರೂಪಿಸಿದರು. ಅಭಿಷ ರಾಮಣ್ಣನವರ ವಂದಿಸಿದ ಕಲಾವಿದರಾದ ನಾಗಣ್ಣ ಭೂಶೆ ಮಲ್ಲಿಕಾರ್ಜುನ ಶೀಲವ ಧನ್ನೂರಕರ್ ಭಕ್ತಿ ಸಂಗೀತ ಸೇ ಮಾಡಿದರು.

ಜಿಲ್ಲಾಮಟ್ಟದ ರಾಜ್ಯೋತ್ಸ ಪ್ರಶಸ್ತಿ ಪುರಸ್ಕೃತ ತಾಲ್ಲೂಕಿ ಗೋರ್ಟಾ ಗ್ರಾಮದ ಹಿರಿಂ ಸಂಗೀತಗಾರ ವಿರೂಪಾಕ್ಷಯ್ ಶಿವಲಿಂಗಯ್ಯ ಮಠಪತಿ ಅವರನ ಸನ್ಮಾನಿಸಲಾಯಿತು.



ಬಸವಕಲ್ಯಾಣ : ನಗರದ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠದಲ್ಲಿ ನಡೆದ ಶಿವಾನುಭವ ಚಿಂತನ, ಮಾಸಿಕ ಅಮವಾಸೆ ಕಾರ್ಯಕ್ರಮದಲ್ಲಿ ಜಿಲ್ಲಾಮಟ್ಟದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಗೋರ್ಟಾದ ಹಿರಿಯ ಸಂಗೀತಗಾರ ವಿರೂಪಾಕ್ಷಯ್ಯ ಮಠಪತಿ ಅವರನ್ನು ಸನ್ಮಾನಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸೇರಿದಂತೆ ಪ್ರಮುಖರು ಇದ್ದರು.

Scanned with OKEN Scanner

ನಿಷ್ಕಾಮ ಭಕ್ತಿ ನಿಜವಾದ ಭಕ್ತಿ: ರುದ್ರಮುನಿ ಶ್ರೀಗಳು

ಕನ್ನಡಪ್ರಭ
ಶುಕ್ರವಾರ 13.12.2019

• ಕನ್ನಡಪ್ರಭ ವಾರ್ತೆ ಬಸವಕಲ್ಯಾಣ

ಭಕ್ತಿಯಲ್ಲಿ ಸಕಾಮ ಭಕ್ತಿ ಹಾಗೂ ನಿಷ್ಕಾಮ ಭಕ್ತಿಗಳಿದ್ದು ನಿಷ್ಕಾಮ ಭಕ್ತಿ ಮಾಡಿದಾಗ ಮಾತ್ರ ಫಲ ದೊರೆಯಬಲ್ಲದು ಎಂದು ಗವಿಮಠದ ಅಭಿನವಘನಲಿಂಗರುದ್ರಮುನಿಶಿವಾಚಾರ್ಯರು ತಿಳಿಸಿದರು.

ನಗರದ ಶಹಾಪುರ ಬಡಾವಣೆಯಲ್ಲಿರುವ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ ಅವರ ನಿವಾಸದಲ್ಲಿ ಬುಧವಾರ ಸಂಜೆ ನಡೆದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಮಾತನಾಡಿ, ನಿಷ್ಕಾಮ ಭಕ್ತಿ ನಿಜವಾದ ಭಕ್ತಿಯಾಗಿದ್ದು, ಭಕ್ತ ಆ ಭಕ್ತಿಯಿಂದ ಮಾಡುವ ಸೇವೆಗೆ ಮಾತ್ರ ಫಲ ದೊರೆಯುತ್ತದೆ ನುಡಿದರು.

ಪ್ರೊ. ದಯಾನಂದ ಶೀಲವಂತ ಮಾತನಾಡಿ, ಈ ಹಿಂದೆ ಚಿಕ್ಕ ವಯಸ್ಸಿನಲ್ಲಿಯೇ ಅಭಿನವ ಶ್ರೀಗಳು ಗವಿಮಠದ ಗುರುಗಳಾಗಿ ಪಟ್ಟಾಧಿಕಾರ ಪಡೆದು ನಿರಂತರ ಇಷ್ಟಲಿಂಗ ಪೂಜೆ, ಅನುಷ್ಠಾನ, ಧ್ಯಾನದಿಂದ ಗುರು ಶಕ್ತಿಯನ್ನು ಸಂಪಾದಿಸಿ ಇಂದು ನಮ್ಮೆಲ್ಲರಿಗೆ ನಿರಂತರ ಧರ್ಮ ಮಾರ್ಗ ತೋರುತ್ತ



ಬಸವಕಲ್ಯಾಣ ನಗರದ ಶಹಾಪುರ ಬಡಾವಣೆಯಲ್ಲಿರುವ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಅವರ ನಿವಾಸದಲ್ಲಿ ಬುಧವಾರ ಸಂಜೆ ನಡೆದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಗವಿಮಠದ ಅಭಿವೃದ್ಧಿ ಮಡುತ್ತಿರುವದು ಸಂತಸದ ಸಂಗತಿಯಾಗಿದೆ. ಅದೇ ರೀತಿ ಮುಂಬರುವ ದಿನಗಳಲ್ಲಿ ಆದಷ್ಟು ಬೇಗನೆ ಜಗದ್ಗುರು ರೇಣುಕಚಾರ್ಯರ ಜಯಂತಿ ಸಂದರ್ಭದಲ್ಲಿ ಗವಿಮಠದಲ್ಲಿ ರಥೋತ್ಸವ, ಪಲ್ಲಕ್ಕಿ ಮೊದಲಾದ ಧಾರ್ಮಿಕ ಆಚರಣೆಗಳು ಆರಂಭಿಸುವ ಸಂಕಲ್ಪವನ್ನು ಗುರುಗಳು ಮಾಡಬೇಕೆಂದು ಆಗ್ರಹಿಸಿ ಇವುಗಳ ಸಿದ್ಧತೆಗೆ ಭಕ್ತರು ಸದಾ ಸಜ್ಜಾಗಿದ್ದೇವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಮೇಶ ಸ್ವಾಮಿ ವಹಿಸಿದ್ದರು. ಶ್ರೀಮದ್ವೀರಶೈವಸದ್ಭೋಧನ ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷ ಬಸವಂತಪ್ಪ ಲವಾರೆ ಕಲಾವಿದರಾದ ನಾಗಣ್ಣ ಭೂಶೆಟ್ಟೆ ಹಾಗೂ ಮಲ್ಲಿಕಾರ್ಜುನ ಶೀಲವಂತ ಧನ್ನೂರಕರ್ ಸಂಗೀತ ಸೇವೆ ಮಾಡಿದರು. ಕು. ಮಯೂರಿ ರಮೇಶ ಸ್ವಾಮಿ ವಂದಿಸಿದರು.

ಈ ವೇಳೆ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ನಂದಿ, ಪ್ರೊ. ಸೂರ್ಯಕಾಂತ ಶೀಲವಂತ, ಶಿವಕುಮಾರ ಮಠ, ರೇವಣಸಿದ್ಧಯ್ಯ ಮಠಪತಿ, ರಮೇಶ ರಾಜೋಳೆ, ಕೇದಾರನಾಥ ಪಾಟೀಲ್, ಡಾ. ಎಸ್.ಕೆ. ಪಟವಾದಿ, ಡಾ. ಬಸವರಾಜ ಸ್ವಾಮಿ, ಶಾಂತವೀರ ಸ್ವಾಮಿ, ಜಿ.ಎ ಕೋಶೆಟ್ಟಿ, ರಾಜಶೇಖರ ವಸ್ತ್ರದ, ನಾಗರಾಜ ಸ್ವಾಮಿ, ವೀರೇಂದ್ರ ಪರೀಟ, ಶಿವಕುಮಾರ ಅಲ್ಲಾಪುರೆ, ಶಿವಶಂಕರ ರಾಮಣ್ಣನವರ, ಸಿದ್ರಾಮಯ್ಯ ಸ್ವಾಮಿ, ಪ್ರೊ.ರುದ್ರೇಶ್ವರ ಸ್ವಾಮಿ ಇದ್ದರು.

ಕನ್ನಡಪ್ರಭ
ಶುಕ್ರವಾರ 3.1.2020



ಬಸವಕಲ್ಯಾಣದ ತ್ರಿಪುರಾಂತನ ಗವಿಮಠದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 2020ನೇ ಸಾಲಿನ ಕ್ಯಾಲೆಂಡರ ಬಿಡುಗಡೆ ಮಾಡಲಾಯಿತು.

Scanned with OKEN Scanner

ಜೈಘೋಷ ಮಧ್ಯೆ ಮೂರ್ತಿ ಪ್ರತಿಷ್ಠಾಪನೆ

ಬಸವಕಲ್ಯಾಣದ ಚೌಡೇಶ್ವರಿ ದೇವಸ್ಥಾನದಲ್ಲಿ ಬೆಳಗ್ಗೆ ಮಂತ್ರ ಪಠಣ | ನೆರವೇರಿದ ಕಳಸಾರೋಹಣ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಶ್ರೀ ರಾಮಲಿಂಗ ಚೌಡೇಶ್ವರಿ, ಶ್ರೀ ವೀರಭದ್ರೇಶ್ವರ ಹಾಗೂ ಶ್ರೀ ಬನಶಂಕರಿ ದೇವಿ ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಭಕ್ತರ ಜೈಘೋಷಗಳ ಮಧ್ಯೆ ಮಂಗಳವಾರ ಬಸವಕಲ್ಯಾಣದಲ್ಲಿ ನೆರವೇರಿತು.

ಸುಭಾಷ ಚೌಕ್ ಸಮೀಪದ ದೇವಸ್ಥಾನದಲ್ಲಿ ಮಂಗಳವಾರ ಬೆಳಗಿನ ಜಾವ ಮಂತ್ರಪಠಣಗಳ ಮಧ್ಯೆ ಮೂರ್ತಿಗಳ ಪ್ರಾಣಪ್ರತಿಷ್ಠಾಪನೆ ಜರುಗಿದ್ದು, ಕೊರೆಯುವ ಚಳಿ ಮಧ್ಯೆ ಭಕ್ತಿ-ಶ್ರದ್ಧೆಯಿಂದ ಆಗಮಿಸಿದ ಭಕ್ತಸ್ತೋಮ ಈ ಅಪೂರ್ವ ಘಳಿಗೆಗೆ ಸಾಕ್ಷಿಯಾಯಿತು.

ಮೈಂದರ್ಗಿ ಶ್ರೀ ಅಭಿನವ ರೇವಣಸಿದ್ದ ಪಟ್ಟದ್ದೇವರು, ಮಾದನ ಹಿಪ್ಪರಗಾದ ವೇದಮೂರ್ತಿ ಶ್ರೀ ಸಿದ್ದಯ್ಯ ಸ್ವಾಮಿ ನೇತೃತ್ವದಲ್ಲಿ ಕಾರ್ಯಕ್ರಮ ಜರುಗಿತು. ನಂತರ ನಡೆದ ಕಳಸಾರೋಹಣ ಕಾರ್ಯಮದಲ್ಲಿ ಗವಿಮಠದ ಅಭಿನವ ಶ್ರೀಗಳು ನೇತೃತ್ವ ವಹಿಸಿದ್ದರು.

ಉದ್ಘಾಟನೆ ನೆರವೇರಿಸಿದ ಸಸ್ತಾಪುರದ ಶ್ರೀ ಸದಾನಂದ ಅಪ್ಪನವರು ಆಶೀರ್ವಚನ ನೀಡಿ, ಶಿಲ್ಪಿಯಿಂದ ಕೆತ್ತಲ್ಪಟ್ಟ ಕಲ್ಲಿನ ದೇವಮೂರ್ತಿಗೆ ಮಠಾಧೀಶರ-ಸ್ವಾಮೀಜಿಗಳ ಹಸ್ತದಿಂದ ಪೂಜೆ ಸಲ್ಲಿಸಿದ ಬಳಿಕವೇ ಅದರಲ್ಲಿ ಪ್ರಾಣ ಪ್ರತಿಷ್ಠಾಪನೆ ಆಗುತ್ತದೆ. ಮೂರ್ತಿ ನಿಜವಾದ ದೇವ ರೂಪ ಪಡೆದುಕೊಳ್ಳುತ್ತದೆ ಎಂದರು.

ಶ್ರೀ ಅಭಿನವ ರೇವಣಸಿದ್ಧ ಪಟ್ಟದೇವರು ಆಶೀರ್ವಚನ ನೀಡಿ, ಹೆಬ್ಬುತ್ತಿರುವ ಮೊಬೈಲ್ ಬಳಕೆ ನಮ್ಮ ದೇಶದ ಸಂಸ್ಕೃತಿಗೆ ಮಾರಕವಾಗುವ ಜತೆಗೆ ಮಕ್ಕಳ ಭವಿಷ್ಯದ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದರು.

ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಬಿಜೆಪಿ ಮುಖಂಡ ಶರಣ ಸಲಗರ ಮಾತನಾಡಿ, ಮೂರ್ತಿಯೊಂದು ಶ್ರೀಗಳ ಪೂಜೆಯಿಂದ ದೇವಮೂರ್ತಿ ಆಗುವ ಹಾಗೆ ಮನುಷ್ಯನಲ್ಲಿ ಉತ್ತಮ ಸಂಸ್ಕಾರಗಳು ಬೆರೆತರೆ ಮಾತ್ರ ಆತ ಮಾನವನಾಗುತ್ತಾನೆ ಎಂದರು.

ಅಧ್ಯಕ್ಷತೆ ವಹಿಸಿದ ಹಟಗಾರ ಸಮಾಜದ ಅಧ್ಯಕ್ಷ ಡಾ.ಜಿ.ಎಸ್.ಭುರಳೆ ಮಾತನಾಡಿದರು. ಶ್ರೀ ವಿಶ್ವಂಬರ್ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಬಿಡಿಪಿಸಿ ಅಧ್ಯಕ್ಷ ಅನೀಲಕುಮಾರ ರಗಟೆ, ಎಇ ಚಂದ್ರಶೇಖರ್ ದುಬೆ, ದೀಪಕ ಗುಡ್ಡಾ, ರೇಖಾಬಾಯಿ ಮೇತ್ರಸಕರ್, ಶಾಲಿನಿ ಸಂಜಯ ವಾಡೀಕರ್, ನೈಮೋದ್ದಿನ್ ಜಾಗೀರದಾರ, ಭಾವಸಾರ ಸಮಾಜದ ಅಧ್ಯಕ್ಷ ವೆಂಕಟರಾವ ಗುರ್ಜರ, ದೇವಸ್ಥಾನ ಸಮಿತಿ ಅಧ್ಯಕ್ಷ ಶಿವಶಂಕರ ಗಂಜೆ, ಗೌರವಾಧ್ಯಕ್ಷ ರಾಮಚಂದ್ರ ಹುಡಗೆ, ಮಹೇಶ ಸುಂಟನೂರೆ, ಬಾಬು ಹೆಗ್ಗೆ, ಮಾಹಾದೇವ ಹುಡಗೆ, ದಯಾನಂದ ಸ್ವಾಮಿ, ಬಸವರಾಜ ಕವಡೆ, ಗಂಗಾಧರ ಅಂಬಲಗೆ, ನಾಗರಾಜ ತೂಗಾವೆ, ದಿಲೀಪ ರುಮ್ಮಾ, ಅನೀಲಕುಮಾರ ಕುಂಬಾರ, ಕೃಷ್ಣಕಾಂತ ದಂಡೋತೆ, ಕಾಳಪ್ಪ ಧನ್ನೂರೆ, ಬಸವಂತಪ್ಪ ಭುರಳೆ, ಬಸವರಾಜ ಬಂದಗೆ, ಚನ್ನಪ್ಪ ಹಾರಕೂಡೆ, ರಾಜಕುಮಾರ ಚಿಂಚೋಳೆ, ಸಂತೋಷ ಕುಮಾರ ತೂಗಾವೆ, ಪ್ರಕಾಶ ತುಗಾಂವೆ, ಯುವರಾಜ ಜಾಧವ, ಬಾಬುರಾವ ಹಿಂಸೆ, ಮುರಘಯ್ಯ ಸ್ವಾಮಿ, ಅಣ್ಣಪ್ಪ ಅಪ್ಪಣ್ಣ ಇತರರಿದ್ದರು.

ಸರ್ಕಾರಿ ನೌಕರರ ಸಂಘದ ತಾಲೂಕು ಖಜಾಂಚಿ ಸುರೇಶ ಅಡಕೆ ನಿರೂಪಣೆ ಮಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ನಗರದ ಶ್ರೀ ರಾಮಲಿಂಗ ಚೌಡೇಶ್ವರಿ ದೇವಸ್ಥಾನದಲ್ಲಿ ಮಂಗಳವಾರ ಆಯೋಜಿಸಿದ್ದ ಧರ್ಮಸಭೆಯಲ್ಲಿ ಶ್ರೀ ಸದಾನಂದ ಅಪ್ಪನವರು ಮಾತನಾಡಿದರು. ಶ್ರೀ ಅಭಿನವ ರೇವಣಸಿದ್ಧ ಪಟ್ಟದ್ದೇವರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ವಿಶ್ವಂಭರ ಸ್ವಾಮೀಜಿ, ಡಾ. ಜಿ.ಎಸ್.ಭುರಳೆ, ಬಿಜೆಪಿ ಮುಖಂಡ ಶರಣು ಸಲಗರ, ದೀಪಕ್ ಗುಡ್ಡ ಇತರರಿದ್ದರು.

ನಗರದ ಶ್ರೀ ರಾಮಲಿಂಗ ಚೌಡೇಶ್ವರಿ ದೇವಸ್ಥಾನದ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದಿಂದ ಆಗುತ್ತಿರುವ ಅನುದಾನ ಕಲ್ಪಿಸಲಾಗುವುದು. ತಕ್ಷಣಕ್ಕೆ 5 ಲಕ್ಷ ರೂ. ಅನುದಾನ ಕೆಕೆಆರ್‌ಡಬಿಯಿಂದ ಒದಗಿಸಲಾಗುವುದು.

| ಬಿ.ನಾರಾಯಣರಾವ ಶಾ

ಕಾಯಕ ಸಿದ್ಧಾಂತದಲ್ಲಿ ವ್ಯಕ್ತಿ ಮತ್ತು ಸಮಾಜದ ಪ್ರಗತಿ ಅಡಗಿದೆ. ಹೀಗಾಗಿ ಪ್ರತಿಯೊಬ್ಬರೂ ಕಾಯಕದ ಜತೆಗೆ ಸಮಾಜದ ಅಭಿವೃದ್ಧಿಗಾಗಿ ಸಂಘಟಿತರಾಗಿ ಕೆಲಸ ಮಾಡಬೇಕಿದೆ. ನೆಮ್ಮದಿಯ ಜೀವನಕ್ಕೆ ಕಾಯಕದ ಜತೆಗೆ ದೇವರ ಸ್ಮರಣೆ, ಧರ್ಮದ ಮಾರ್ಗ, ಗುರುಗಳ ಮಾರ್ಗದರ್ಶನ ಅವಶ್ಯಕ.

| ಡಾ.ಜಿ.ಎಸ್.ಭುರಳೆ


ವಿಜಯವಾಣಿ ಚಿತ್ರ

ಬಸವಕಲ್ಯಾಣದ ಶ್ರೀ ರಾಮಲಿಂಗ ಚೌಡೇಶ್ವರಿ ದೇವಸ್ಥಾನಕ್ಕೆ ಭೇಡಿ ನೀಡಿದ ದರ್ಶನ ಪಡೆದ ಶಾಸಕ ಬಿ.ನಾರಾಯಣರಾವ ಅವರನ್ನು ಸನ್ಮಾನಿಸಲಾಯಿತು. ಪ್ರಮುಖರಾದ ಡಾ. ಜಿ.ಎಸ್. ಭುರಳೆ, ಶಿವಶಂಕರ ಗಂಜೆ , ಮಹೇಶ ಸುಂಟನೂರೆ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 11 ಡಿಸೆಂಬರ್ 2019
11 DECEMBER 2019

ಭಕ್ತಿ ಮಾರ್ಗದಲ್ಲಿ ಬದುಕಿನ ಸಾರ್ಥಕತೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಭಕ್ತಿ ಮಾರ್ಗದಿಂದ ಬದುಕಿನಲ್ಲಿ ಸಂತೃಪ್ತಿ ಮತ್ತು ಸಾರ್ಥಕತೆ ಕಾಣಲು ಸಾಧ್ಯವಾಗುತ್ತದೆ ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಶಹಾಪುರ ಓಣಿಯಲ್ಲಿ ಜರುಗಿದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಸ್ವಾರ್ಥವಿಲ್ಲದ ನಿಷ್ಕಾಮ ಭಕ್ತಿ ನಿಜವಾದ ಭಕ್ತಿಯಾಗಿದ್ದು, ಭಕ್ತಿಯಿಂದ ಮಾಡುವ ಸೇವೆಗೆ ಮಾತ್ರ ಫಲ ಸಿಗುತ್ತದೆ ಎಂದರು.

ನಿವೃತ್ತ ಪ್ರಾಚಾರ್ಯ ಪ್ರೊ. ದಯಾನಂದ ಶೀಲವಂತ ಮಾತನಾಡಿದರು. ರಮೇಶ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಕಲಾವಿದರಾದ ನಾಗಣ್ಣ ಭೂಶೆಟ್ಟಿ ಹಾಗೂ ಮಲ್ಲಿಕಾರ್ಜುನ ಶಿಲವಂತ ಧನ್ನೂರಕರ್ ಸಂಗೀತ ಸೇವೆ ಮಾಡಿದರು. ಮಯೂರಿ ರಮೇಶ ಸ್ವಾಮಿ ವಂದಿಸಿದರು.

ಗವಿಮಠ ಟ್ರಸ್ಟ್ ಕಾರ್ಯಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ನಂದಿ ಪ್ರೊ. ಸೂರ್ಯಕಾಂತ ಶೀಲವಂತ, ಶಿವಕುಮಾರ ಮಠ, ರೇವಣಸಿದ್ಧಯ್ಯ ಮಠಪತಿ, ರಮೇಶ ರಾಜೋಳೆ, ಕೇದರನಾಥ ಪಾಟೀಲ್, ಡಾ.ಎಸ್.ಕೆ ಪಟವಾದಿ, ಡಾ.ಬಸವರಾಜ ಸ್ವಾಮಿ, ಶಾಂತವೀರ ಸ್ವಾಮಿ, ಪ್ರೊ.ರುದ್ರೇಶ್ವರ ಸ್ವಾಮಿ ಮತ್ತಿತರರು ಭಾಗವಹಿಸಿದ್ದರು.


ವಿಜಯವಾಣಿ ಚಿತ್ರ

ಬಸವಕಲ್ಯಾಣದ ಶಹಾಪುರ ಓಣಿಯಲ್ಲಿ ನಡೆದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಪ್ರೊ. ದಯಾನಂದ ಶೀಲವಂತ, ರಮೇಶ ಸ್ವಾಮಿ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶುಕ್ರವಾರ 13 ಡಿಸೆಂಬರ್ 2019
13 DECEMBER 2019

Scanned with OKEN Scanner

'ಧರ್ಮಮಾರ್ಗದಲ್ಲಿ ಸಾಗಿದರೆ ಶಾಂತಿ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಬರೀ ಭೌತಿಕ ಉನ್ನತಿಯಿಂದ ಏನೂ ಸಾಧ್ಯವಿಲ್ಲ. ಧರ್ಮ ಮಾರ್ಗದಲ್ಲಿ ಸಾಗಿದರೆ ಮಾತ್ರ ಮಾನಸಿಕ ಶಾಂತಿ ಲಭಿಸುತ್ತದೆ' ಎಂದು ನಿವೃತ್ತ ಪ್ರಾಚಾರ್ಯ ದಯಾನಂದ ಶೀಲವಂತ ಹೇಳಿದ್ದಾರೆ.

ಶ್ರೀಮದ್ವೀರಶೈವ ಸದ್ಯೋಧನಾ ಸಂಸ್ಥೆ ಹಾಗೂ ತ್ರಿಪುರಾಂತ ಗವಿಮಠದಿಂದ ಇಲ್ಲಿನ ಶಹಾಪುರ ಓಣಿಯ ಸವಿತಾ ರಮೇಶಸ್ವಾಮಿ ಅವರ ನಿವಾಸದಲ್ಲಿ ಬುಧವಾರ ಆಯೋಜಿಸಿದ್ದ ಮನೆ ಮನಗಳಲ್ಲಿ ಸದ್ಭಾವ ಚಿಂತನಗೋಷ್ಠಿಯಲ್ಲಿ ಅವರು ಮಾತನಾಡಿದರು.

'ತ್ರಿಪುರಾಂತ ಗವಿಮಠವು ಪುಣ್ಯಕ್ಷೇತ್ರವಾಗಿ ಬೆಳೆಯುತ್ತಿದೆ. ಇಷ್ಟಲಿಂಗಪೂಜೆ, ಧ್ಯಾನಾದಿಗಳು ಅಲ್ಲಿ ನಿರಂತರವಾಗಿ ನಡೆಯುತ್ತಿವೆ. ಜತೆಯಲ್ಲಿ ರೇಣುಕಾಚಾರ್ಯರ ಜಯಂತಿ ಅದ್ಧೂರಿಯಾಗಿ ಆಯೋಜಿಸಿ ಪಲ್ಲಕ್ಕಿ ಮೆರವಣಿಗೆ, ರಥೋತ್ಸವ ಹಮ್ಮಿಕೊಳ್ಳುವ ಅಗತ್ಯವಿದ್ದು ಇದಕ್ಕಾಗಿ ಭಕ್ತರು ಎಲ್ಲ ರೀತಿಯಿಂದಲೂ ಸಹಕಾರ ನೀಡಬೇಕು' ಎಂದರು.



ಬಸವಕಲ್ಯಾಣದಲ್ಲಿ ಬುಧವಾರ ಆಯೋಜಿಸಿದ್ದ ಸದ್ಭಾವ ಚಿಂತನಗೋಷ್ಠಿಯಲ್ಲಿ ನಿವೃತ್ತ ಪ್ರಾಚಾರ್ಯ ದಯಾನಂದ ಶೀಲವಂತ ಮಾತನಾಡಿದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಭಕ್ತಿಯಲ್ಲಿ ಸಕಾಮ ಭಕ್ತಿ ಹಾಗೂ ನಿಷ್ಕಾಮ ಭಕ್ತಿ ಎಂದಿವೆ. ನಿಷ್ಕಾಮ ಭಕ್ತಿಯಿಂದ ಮಾತ್ರ ಉತ್ತಮ ಫಲ ದೊರಕುತ್ತದೆ. ಸಾಧನೆಗೆ ಗುರುವಿನ ಮಾರ್ಗದರ್ಶನ ಅಗತ್ಯ' ಎಂದರು.

'ಎಲ್ಲರೂ ಮಕ್ಕಳಿಗೆ ಶಿಕ್ಷಣ ನೀಡಬೇಕು. ಅಕ್ಷರಕ್ಕಿಂತ ಸಂಸ್ಕಾರ ನೀಡುವುದು ಮುಖ್ಯ. ಯುವಜನತೆ ದುಶ್ಚಟ, ದುರ್ಗುಣಗಳನ್ನು ಬಿಟ್ಟು ಸನ್ನಡತೆ ಅಳವಡಿಸಿಕೊಳ್ಳುವುದು ಅತ್ಯವಶ್ಯಕವಾಗಿದೆ' ಎಂದು ಹೇಳಿದರು.

ರಮೇಶಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಶ್ರೀಮದ್ವೀರಶೈವ ಸದ್ಯೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಮಯೂರಿ ರಮೇಶ ಮಾತನಾಡಿದರು. ನಾಗಣ್ಣ ಭೂಶೆಟ್ಟಿ, ಮಲ್ಲಿಕಾರ್ಜುನ ಶೀಲವಂತ ಸಂಗೀತ ಪ್ರಸ್ತುತಪಡಿಸಿದರು. ಗವಿಮಠ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಸೂರ್ಯಕಾಂತ ಶೀಲವಂತ, ಮಲ್ಲಿಕಾರ್ಜುನ ನಂದಿ, ರೇವಣಸಿದ್ಧಯ್ಯ ಮಠಪತಿ, ಪ್ರೊ.ರುದ್ರೇಶ್ವರ ಗೋರಟಾ, ಡಾ.ಬಸವರಾಜಸ್ವಾಮಿ, ರಮೇಶ ರಾಜೋಳೆ ಪಾಲ್ಗೊಂಡಿದ್ದರು.

ಪ್ರಜಾವಾಣಿ ಶನಿವಾರ • ಡಿಸೆಂಬರ್ 14, 2019



ಖಟಕ್ ಚಿಂಚೋಳಿ ಗ್ರಾಮದ ಎಳಗುತ್ತಿ ಆಶ್ರಮದಲ್ಲಿ ನಡೆದ ದತ್ತಾತ್ರೇಯ ದೇವರ ತೊಟ್ಟಿಲು ಹಾಗೂ ಸತ್ಸಂಗ ಕಾರ್ಯಕ್ರಮದಲ್ಲಿ ಕಲ್ಲೂರು ಹಿರೇಮಠದ ಮೃತ್ಯುಂಜಯ ಶಿವಾಚಾರ್ಯರು ಮಾತನಾಡಿದರು.

ಜ್ಞಾನದೊಂದಿಗೆ ಸದ್ಭಾವ ಮೇಳೈಸಲಿ

■ ವಿಕ ಸುದ್ದಿಲೋಕ ಭಾಲ್ಕಿ

ಗುರುಕೃಪೆ, ಸೇವೆ ಮಾಡುವುದರ ಜತೆಗೆ ಭಕ್ತಿ, ಜ್ಞಾನ, ವೈರಾಗ್ಯ ಅಳವಡಿಸಿಕೊಂಡರೆ ಮುಕ್ತಿ ಹೊಂದಲು ಸಾಧ್ಯ ಎಂದು ಕಲ್ಲೂರು ಹಿರೇಮಠದ ಮೃತ್ಯುಂಜಯ ಶಿವಾಚಾರ್ಯರು ಹೇಳಿದರು.

ತಾಲೂಕಿನ ಖಟಕ್ ಚಿಂಚೋಳಿ ಗ್ರಾಮದ ಎಳಗುತ್ತಿ ಆಶ್ರಮದಲ್ಲಿ ದತ್ತ ಜಯಂತಿ ನಿಮಿತ್ತ ನಡೆದ ತೊಟ್ಟಿಲು ಹಾಗೂ ಸತ್ಸಂಗ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ, ಶಾರೀರಿಕ, ಮಾನಸಿಕ ಸ್ವಾಸ್ಥ್ಯ ಕಿತ್ತುಕೊಳ್ಳುತ್ತಿರುವ ದುಶ್ಚಟ ತ್ಯಜಿಸಿ ಸುಖಮಯ ಜೀವನ ನಡೆಸುವಂತೆ ಸಲಹೆ ನೀಡಿದರು.

ಬಸವಕಲ್ಯಾಣದ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಜಾತ್ರೆ, ಸತ್ಸಂಗದಂತಹ ಕಾರ್ಯಕ್ರಮದಲ್ಲಿ ಭಾಗಿಯಾಗುವುದರಿಂದ ಮನಸ್ಸಿಗೆ ಶಾಂತಿ, ನೆಮ್ಮದಿ ಲಭಿಸುತ್ತಿದೆ. ಪ್ರತಿಯೊಬ್ಬರೂ ಕೈಲಾದಷ್ಟು ದಾನ ಮಾಡುವ ಮನೋಧರ್ಮ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಮುಲ್ಲಾಮುರಿ ಮಠದ ಬಾಲತಪಸ್ವಿ ಶಂಕರಲಿಂಗ ಮಹಾರಾಜರು ಮಾತನಾಡಿದರು. ಎಳಗುತ್ತಿ ಆಶ್ರಮದ ಮಾತೋಶ್ರೀ ಗೋದಾವರಿ ತಾಯಿ ನೇತೃತ್ವವಹಿಸಿದ್ದರು.

ರೇವಣಸಿದ್ದಯ್ಯ ಶಾಸ್ತ್ರಿ ಚನ್ನಬಸಪ್ಪ ಅಪ್ಪಾಜಿ, ಮಾತೋಶ್ರೀ ಸುಶೀಲಾಬಾಯಿ ತಾಯಿ, ಮಾತೋಶ್ರೀ ಜಗದೇವಿ ತಾಯಿ, ಮಾತೋಶ್ರೀ ಶಾರದಬಾಯಿ ತಾಯಿ, ರೇವಣಸಿದ್ದಪ್ಪ ಎಳಗುತ್ತಿ, ತಾಪಂ ಸದಸ್ಯ ವಿಜಯಕುಮಾರ ಕಡಗಂಚಿ, ಗ್ರಾಪಂ ಅಧ್ಯಕ್ಷೆ ಸಿದ್ದಮ್ಮ ಬಸಯ್ಯ ಮಠ, ಕಪಿಲದೇವ ರಾಗ, ಎಪಿಎಂಸಿ ಸದಸ್ಯ ಲತಾ ಶರಣಪ್ಪ ಕಡಗಂಚಿ, ಜ್ಯೋತಿ ಶಂಕರ ಬಾರ್ಸಿ, ರಾಧಿಕಾ ಬಾಲಾಜಿ, ತೇಲಂಗ್, ಮಲ್ಲಿಕಾರ್ಜುನ ಪಾಟೀಲ್ ಮುಗನೂರ್, ಕಲಾವತಿ ಶಿವರಾಜ ಕಾಳಗಪೂರೆ, ಭೂಮರೆಡ್ಡಿ ಕೊತ್ತೂರ್, ಗುಂಡಪ್ಪ ಬುರ್ಕೆ, ಜಗನ್ನಾಥ ಬಾದಲಗಾಂವ, ಕೈಲಾಸ ಧನ್ನೂರೆ, ರಮೇಶ ಅಲಶೆಟ್ಟಿ, ಧನರಾಜ ಜ್ಯಾಂತೆ, ಚಿದಾನಂದ, ವಿಠಲ, ಬಸಯ್ಯ ಸ್ವಾಮಿ ಇದ್ದರು. ಮಂಜುನಾಥ ಸ್ವಾಗತಿಸಿದರು. ಗುರು ಪಂಡರಗೆ ನಿರೂಪಿಸಿದರು. ಸಂಗಮೇಶ ಹೊನ್ನಾಳೆ ವಂದಿಸಿದರು.

ವಿಜಯ ಕರ್ನಾಟಕ ಭಾನುವಾರ,15 ಡಿಸೆಂಬರ್ 2019



ಬಸವಕಲ್ಯಾಣದ ರುದ್ರಮುನಿ ಶಿವಾಚಾರ್ಯರ ಸಂಸ್ಥಾನ ಗವಿಮಠದಲ್ಲಿ ನಡೆದ ಶಿವಾನುಭವ ಚಿಂತನ ಮಾಸಿಕ ಅಮವಾಸೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಕನ್ನಡಪ್ರಭ ಶನಿವಾರ 28.12.2019

Scanned with OKEN Scanner

ಉದಯವಾಣಿ ಕಲಬುರಗಿ
ಸೋಮವಾರ, ಡಿಸೆಂಬರ್ 16, 2019

ಸತ್ಸಂಗ ಜ್ಞಾನಸಾಗರವಾಗಲಿ: ರುದ್ರಮುನಿ ಶ್ರೀ

ಭಾಲ್ಕಿ: ಸತ್ಸಂಗ ಸಮ್ಮೇಳನವು ಬರೀ ಪ್ರಸಾದ ಸೇವನೆಗೆ ಸೀಮಿತವಾಗಿರದೇ ಜ್ಞಾನವನ್ನು ಸಾಗರೋಪಾದಿಯಲ್ಲಿ ಬಿತ್ತರಿಸುವಂತಿರಬೇಕು ಎಂದು ಬಸವಕಲ್ಯಾಣ ತ್ರಿಪುರಾಂತ ಗವಿಸಿದ್ದೇಶ್ವರ ಸಂಸ್ಥಾನ ಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಖಟಕ ಚಿಂಬೋಳಿ ಗ್ರಾಮದ ಜೈ ಭವಾನಿ, ಶ್ರೀ ದತ್ತಾತ್ರೇಯ ಆಶ್ರಮ ಎಳಗುತ್ತಿಯಲ್ಲಿ ಶ್ರೀ ದತ್ತಾತ್ರೇಯ 23ನೇ ಹೊಟ್ಟಿಲು ಹಾಗೂ ಜಯಂತ್ಯುತ್ಸವ ಕಾರ್ಯಕ್ರಮ ನಿಮಿತ್ತ ಆಯೋಜಿಸಿದ್ದ ಸತ್ಸಂಗ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಸತ್ಸಂಗ ಎನ್ನುವುದು ಕೇವಲ ಹುಗ್ಗಿ ಸೇವನೆಗೆ ಸೀಮಿತವಾಗದೆ ಅದು ಜ್ಞಾನದ ಹುಗ್ಗಿಯಾಗಿ ಪರಿವರ್ತನೆಯಾಗಬೇಕು. ಜೀವನದಲ್ಲಿ ತನ್ನ ಕೈಲಾದಷ್ಟು ದಾನ, ಧರ್ಮ, ಪುಣ್ಯದ ಕಾರ್ಯ ಮಾಡಬೇಕು ಎಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಕಲ್ಲೂರ ಹಿರೇಮಠ ಸಂಸ್ಥಾನದ ಪೀಠಾಧ್ಯಕ್ಷ ಶ್ರೀ ಮೃತ್ಯುಂಜಯ ಶಿವಾಚಾರ್ಯರು ಮಾತನಾಡಿ, ಭಕ್ತಿ, ಜ್ಞಾನ, ವೈರಾಗ್ಯ ದೊರೆಯುವ ಕೇಂದ್ರವೇ ಜಾತ್ರೆಯಾಗಿದೆ. ಇಂತಹ ಸಮ್ಮೇಳನದಲ್ಲಿ ಭಾಗವಹಿಸಿ, ವೈರಾಗ್ಯವಂತ ಜೀವನ ನಡೆಸಿ ಪಾವನರಾಗಬೇಕು ಎಂದು ಹೇಳಿದರು.



ಭಾಲ್ಕಿ: ಖಟಕಚಿಂಬೋಳಿ ಗ್ರಾಮದ ಎಳಗುತ್ತಿ ಆಶ್ರಮದಲ್ಲಿ ದತ್ತ ಜಯಂತಿ ನಿಮಿತ್ತ ನಡೆದ ಸತ್ಸಂಗ ಸಮ್ಮೇಳನವನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು.

ಮುಲ್ಕಮುರಿ ಮಠ ಸೊಂತದ ಬಾಲತಪಸ್ವಿ ಶಂಕರಲಿಂಗ ಮಹಾರಾಜರು ದತ್ತಾತ್ರಿಯ ನಿಜ ಸ್ವರೂಪ ಕುರಿತು ಮಾತನಾಡಿದರು. ಆಶ್ರಮದ ಮಾತೆ ಗೋದಾವರಿತಾಯಿ ನೇತೃತ್ವ ವಹಿಸಿ ಮಾತನಾಡಿದರು. ಶ್ರೀ ರೇವಣಸಿದಯ್ಯಾ ಶಾಸ್ತ್ರಿ ಪಂಡರಗೆ ಪುರಾಣಿಕರು ಶ್ರೀಗುರು ದತ್ತಾತ್ರೇಯ ಕೀರ್ತನೆ ನಡೆಸಿಕೊಟ್ಟರು.

ಚನ್ನಬಸಪ್ಪಾ ಅಪ್ಪಾಜಿ ಹೈದ್ರಾಬಾದ, ಸುಶೀಲಬಾಯಿ ತಾಯಿ, ಜಗದೇವಿ ತಾಯಿ, ಶಾರದಬಾಯಿ ತಾಯಿ, ರೇವಣಸಿದ್ದಪ್ಪಾ ಎಳಗುತ್ತಿ, ವಿಜಕುಮಾರ ಕಡಗಂಚಿ, ಗ್ರಾಮ ಪಂಚಾಯತ ಅಧ್ಯ ಸಿದ್ದಮ್ಮಾ ಬಸಯ್ಯಾ ಮಠ, ಕಪಿಲದೇ ರಾಗ, ಲತಾ ಶರಣಪ್ಪಾ ಕಡಗಂಚ ಜ್ಯೋತಿ ಶಂಕರ ಬಾರ್ಸಿ, ರಾಧಿ ಬಾಲಾಜಿ ತೇಲಂಗ, ಮಲ್ಲಿಕಾರ್ಜು ಪಾಟೀಲ ಮುಗನೂರ, ಕಲಾವ ಶಿವರಾಜ ಕಾಳಗಪೂರೆ, ಭೂಮರ ಕೊತ್ತುರ, ಗುಂಡಪ್ಪಾ ಬೂಕೆ ಶಾಂತಪ್ಪ ಕುಂಬಾರ, ಗುರು ಪಂಡರ ನಂದು ಭದ್ರಶೆಟ್ಟಿ ಮಹೇಶ ಎಳಗು ಶಿವಕೂಮಾರ ಅಜ್ಜಾ ನುರಂದ ಭದ್ರಪೆ, ಸತೀಷ ಸಂಗೂಳಗೆ, ಸಾ ಸಂಗಳೂಗೆ, ರಾಜಕುಮಾರ ಭೂಯಾ ಬಸವರಾಜ ಪಂಡರಗೆ, ಸಂಗಮೆ ಹೋನ್ನಾಳೆ, ನಿಲಕಂಠ ಹಚ್ಚೆ ಜಗನ ಬಾದಲಗಾಂವೆ, ಕೈಲಾಸ ದನೂ ರಮೇಶ ಅಲಶೆಟ್ಟಿ ಧನರಾಜ ಜಾ ಚಿದಾನಂದ, ವಿಠಲ, ಬಸಯ್ಯಸ್ವಾ ಉಪಸ್ಥಿತರಿದ್ದರು. ಮಂಜುನ ಸ್ವಾಗತಿಸಿದರು. ಗುರು ಪಂಡ ನಿರೂಪಿಸಿದರು. ಸಂಗಮೇಶ ಹೊನ ವಂದಿಸಿದರು.

ಗವಿಮಠದಲ್ಲಿ ಶಿವಾನುಭವ ಚಿಂತನ ಅಮವಾಸ್ಯೆ ಕಾರ್ಯಕ್ರಮದಲ್ಲಿ ಸ್ವಾಮೀಜಿ ಅಭಿಪ್ರಾಯ

ಸಿದ್ಧಾಂತ ಶಿಖಾಮಣಿ, ವಚನ ಸಾಹಿತ್ಯವೇ ಶ್ರೇಷ್ಠ

■ ವಿಕ ಸುದ್ದಿಲೋಕ ಬಸವಕಲ್ಯಾಣ

ದೇವರಲ್ಲಿ ಹಾಗೂ ಗುರುವಿನಲ್ಲಿ ನಂಬಿಕೆಯಿಟ್ಟು ಶ್ರದ್ಧಾ-ಭಕ್ತಿಯಿಂದ ನಡೆದಾಗ ಮಾತ್ರ ಮಾನವ ಮಹಾದೇವನಾಗಬಲ್ಲ ಎಂದು ನಗರದ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಹೇಳಿದರು.

ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಂಸ್ಥಾನ ಗವಿಮಠದಲ್ಲಿ ಗವಿಮಠದ ಟ್ರಸ್ಟ್ ಹಾಗೂ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ನಡೆದ ಶಿವಾನುಭವ ಚಿಂತನ ಅಮವಾಸ್ಯೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.

ಅಮಾವಾಸ್ಯೆ ದಿನ ಮನೆದೇವರ ಹಾಗೂ ಗುರುವಿನ ದರ್ಶನ ಮಾಡಿ ಆಶೀರ್ವಾದ ಪಡೆಯುವುದು ಪರಂಪರೆಯಾಗಿದೆ. ಸಿದ್ಧಾಂತ ಶಿಖಾಮಣಿ ಹಾಗೂ ಬಸವಾದಿ ಶಿವಶರಣರು ನುಡಿದ ವಚನ ಸಾಹಿತ್ಯ ಧರ್ಮ ಮಾರ್ಗ ತೋರುವ ಶ್ರೇಷ್ಠ ಸಾಹಿತ್ಯಗಳಾಗಿದ್ದು ಇವುಗಳಲ್ಲಿ ನಂಬಿಕೆ ಇಟ್ಟು ಬದುಕಬೇಕು ಎಂದರು.



ಬಸವಕಲ್ಯಾಣದ ಗವಿಮಠದಲ್ಲಿ ನಡೆದ ಶಿವಾನುಭವ ಚಿಂತನ ಅಮವಾಸ್ಯೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಮಾತನಾಡಿದರು. ಶರಣಯ್ಯ ಸ್ವಾಮಿ, ಸಿದ್ಧಣ್ಣ ಭತ್ರಪ್ಪ ಶೀಲವಂತ ಇದ್ದರು.

ಅಧ್ಯಕ್ಷತೆ ವಹಿಸಿದ್ದ ಶರಣಯ್ಯ ಸ್ವಾಮಿ ಮಾತನಾಡಿ, ಧರ್ಮ ಮಾರ್ಗದಲ್ಲಿ ನಡೆಯಲು ಗುರು ಆಗತ್ಯ. ಗವಿಮಠದ ಗುರುಗಳು ನಿರಂತರವಾಗಿ ಧರ್ಮಮಾರ್ಗ ತೋರುತ್ತ ಉದ್ಧರಿಸುತ್ತಿರುವುದು ನಮ್ಮಭಾಗ್ಯ ಎಂದು ನುಡಿದರು.

ಅಕ್ಕಸಾಲಿಗ ಸಮಾಜದ ವಿಶ್ವಸ್ಥ ಮಂಡಳಿಯ ಅಧ್ಯಕ್ಷ ಸಿದ್ಧಣ್ಣ ಭತ್ರಪ್ಪ ಶೀಲವಂತ, ಕಸಾಪ ನಿಕಟ ಪೂರ್ವ ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ಸಿದ್ರಾಮಪ್ಪ ಪಾಟೀಲ, ಬಾಬುರಾವ ಉಳ್ಳೆ, ರೇವಣ್ಣಸಿದ್ಧಯ್ಯ ಮಠಪತಿ, ಶಿವಕುಮಾರ ಮಠ, ಮಹಾದೇವ ಕಾಮಶೆಟ್ಟಿ, ಶಿವಶಂಕರ ರಾಮಣ್ಣನವರ್, ರೇವಣ್ಣಸಿದ್ಧಯ್ಯ ವಸ್ತ್ರದ, ಪ್ರೊ. ರುದ್ರೇಶ್ವರ ಸ್ವಾಮಿ, ರಾಮಲಿಂಗ ಶಿವಪೂರ, ಸಾಗರ ವಸ್ತ್ರದ, ಸುನೀಲ ವಸ್ತ್ರದ ಇದ್ದರು.

ಸಂಸ್ಥೆಯ ನಿಕಟಪೂರ್ವ ಅಧ್ಯಕ್ಷ ವೀರಣ್ಣ ಶೀಲವಂತ ಪ್ರಾರ್ಥಿಸಿದರು. ಮುಖ್ಯಗುರು ರಮೇಶ ರಾಜೋಳೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಭಿಷೇಕ ರಾಮಣ್ಣನವರ್ ನಿರೂಪಿಸಿದರು. ಪುಣ್ಯಕೋಟಿ ಪಿಯು ಕಾಲೇಜಿನ ಪ್ರಾಚಾರ್ಯ ಪ್ರೊ.ಸೂರ್ಯಕಾಂತ ಶೀಲವಂತ ವಂದಿಸಿದರು.

ವಿಜಯ ಕರ್ನಾಟಕ ಶನಿವಾರ,28 ಡಿಸೆಂಬರ್ 2019



ಬಸವಕಲ್ಯಾಣದ ತ್ರಿಪುರಾಂತನ ಗವಿಮಠದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 2020ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಮದ್ವೀರಶೈವ ಸದ್ಭೋಧನ ಸಂಸ್ಥೆಯ ಅಧ್ಯಕ್ಷ ಬಸವಂತಪ್ಪಾ ಲವಾರೆ ,ರಮೇಶ್ ಸ್ವಾಮಿ, ಎ.ಜಿ.ಪಾಟೀಲ್, ವಿಜಯ.ಎ.ದಾಡಗೆ,ಶ್ರೀನಿವಾಸ, , ಶಶಿ ಬಳಸುಕರ್,ಅನಿಲ್ ಡೊಂಗೆ, ಸೂರ್ಯಕಾಂತ ಪಂಚಾಳ, ರುದ್ರೇಶ್ವರ ಗೋರ್ಟಾ ಸೇರಿ ಅನೇಕರಿದ್ದರು.

ವಿಜಯ ಕರ್ನಾಟಕ ಶುಕ್ರವಾರ,3 ಜನವರಿ 2020

Scanned with OKEN Scanner

ಭಾರತೀಯ ವೈದ್ಯಪದ್ಧತಿ ಜಗತ್ತಿನಲ್ಲೇ ಶ್ರೇಷ್ಠ

ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನುಡಿ | ಜನಪದ ವೈದ್ಯ ಪದ್ಧತಿ ಕಾರ್ಯಾಗಾರ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಭಾರತೀಯ ವೈದ್ಯ ಪದ್ಧತಿ ಜಗತಿನಲ್ಲೇ ಶ್ರೇಷ್ಠವಾದದ್ದು. ನಾಟಿ ವೈದ್ಯ ಪದ್ಧತಿ ಉಳಿಸುವ ಜವಾಬ್ದಾರಿ ಪ್ರತಿ ಭಾರತೀಯರದ್ದು ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ದೆಹಲಿಯ ಸಂಸ್ಕೃತಿ ಮಂತ್ರಾಲಯ, ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ ಹಾಗೂ ತಾಲೂಕು ಜಾನಪದ ಪರಿಷತ್ ಸಹಯೋಗದಲ್ಲಿ ನಗರದ ನೀಲಾಂಬಿಕಾ ಸರ್ಕಾರಿ ಪಿಯು ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ ಜನಪದ ವೈದ್ಯ ಪದ್ಧತಿ ಕಾರ್ಯಾಗಾರದ ಸಾನ್ನಿಧ್ಯ ವಹಿಸಿದ್ದ ಅವರು, ಆಧುನಿಕ ಕಾಲದ ಜೀವನ ಶೈಲಿ ಆಹಾರ ವಿಹಾರ ಮನುಷ್ಯನ ಅನಾರೋಗಕ್ಕೆ ಕಾರಣ ಎಂದರು.

ಪಾರಂಪರಿಕ ವೈದ್ಯ ಪದ್ಧತಿ, ಆಹಾರ ಪದ್ಧತಿಗಳು ಆರೋಗ್ಯ ಕಾಪಾಡುತ್ತಿದ್ದವು. ನಾಟಿ ವೈದ್ಯ ಪದ್ಧತಿ ಸಂರಕ್ಷಿಸುವ ಬೆಳೆಸುವ ಜವಾಬ್ದಾರಿ ಮುಂದಿನ ಪೀಳಿಗೆಯ ಮೇಲಿದೆ. ಆಯುರ್ವೇದ ವೈದ್ಯ ಪದ್ಧತಿಯಿಂದ ಯಾವುದೇ ಅಡ್ಡ ಪರಿಣಾಮಗಳಿಲ್ಲ ಎಂದರು.

ಪ್ರಾಚಾರ್ಯ ಸುರೇಶ ಅಕ್ಕಣ್ಣ ಮಾತನಾಡಿ, ನಾಟಿ ವೈದ್ಯ ಪದ್ಧತಿಯ ಅರಿವು ವಿದ್ಯಾರ್ಥಿಗಳಿಗೆ ಅಗತ್ಯವಿದೆ. ಮನೆ ಮದ್ದಿನ ಬಗ್ಗೆ ಪ್ರಜ್ಞೆ ಇರಬೇಕಾದ ಅನಿವಾರ್ಯತೆಯೂ ಇದೆ. ಸರಳ ಜೀವನ ಶೈಲಿ ಅಳವಡಿಸಿಕೊಂಡು ಔಷಧಿವಿರುವ ಆಹಾರ ಸ್ವೀಕರಿಸಬೇಕು ಎಂದು ಸಲಹೆ ನೀಡಿದರು.

ರಾಜ್ಯ ಸರ್ಕಾರ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಸಂಘದ ರಾಜ್ಯ ಕಾರ್ಯದರ್ಶಿ ನರಸಿಂಗರೆಡ್ಡಿ ಗದಲೆಗಾಂವ ಮಾತನಾಡಿದರು. ಜಾನಪದ ಪರಿಷತ್ ತಾಲೂಕು ಅಧ್ಯಕ್ಷ ಡಾ.ಬಸವರಾಜ ಸ್ವಾಮಿ ಪ್ರಾಸ್ತಾವಿಕ ಮಾತನಾಡಿದರು. ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ ಕಾರ್ಯದರ್ಶಿ ಡಾ.ರಾಜಕುಮಾರ ಹೆಬ್ಬಾಳೆ ಸ್ವಾಗತಿಸಿದರು. ಮನಿಶಾ ವಂದಿಸಿದರು. ಕರುಣಾ ಬಡುರೆ ನಿರೂಪಣೆ ಮಾಡಿದರು. ಪ್ರಕಾಶ ಕನ್ನಾಳೆ, ಎಸ್.ಜಿ. ಹುಡೇದ್, ಲಕ್ಷ್ಮೀಬಾಯಿ ಪಾಟೀಲ್, ಡಾ.ಶಿವಲೀಲಾ ಮಠಪತಿ, ಕೆ.ಜಿ.ಶರಣಪ್ಪ, ಶಿವಪುತ್ರ ಸಂಗನಬಸವ, ಧನರಾಜ ರಾಜೋಳೆ ಇತರರಿದ್ದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಆಯೋಜಿಸಿದ್ದ ಜನಪದ ವೈದ್ಯ ಪದ್ಧತಿ ಕಾರ್ಯಾಗಾರವನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಉದ್ಘಾಟಿಸಿದರು. ಸುರೇಶ ಅಕ್ಕಣ್ಣ, ಡಾ.ಬಸವರಾಜ ಸ್ವಾಮಿ, ನರಸಿಂಗರೆಡ್ಡಿ ಗದಲೆಗಾಂವ, ಡಾ.ರಾಜಕುಮಾರ ಹೆಬ್ಬಾಳೆ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಗುರುವಾರ 2 ಜನವರಿ 2020
2 JANUARY 2020

VIJAYAVANI » KALABURAGI
ಭಾನುವಾರ 29 ಡಿಸೆಂಬರ್ 2019
29 DECEMBER 2019
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಧರ್ಮದಿಂದ ಸಿಗಲಿದೆ ನೆಮ್ಮದಿ

ಶ್ರೀ ರಂಭಾಪುರಿ ಜಗದ್ಗುರುಗಳ ಅಭಿಮತ | ಗವಿಮಠದಲ್ಲಿ ಜನಜಾಗೃತಿ ಧರ್ಮ ಸಭೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮಾನವ ಜೀವನದ ಉನ್ನತಿಗೆ ಧರ್ಮ ಮೂಲ. ಸಂಸ್ಕಾರ-ಸದ್ವಿಚಾರಗಳಿಂದ ಜೀವನ ಉತ್ಕರ್ಷತೆಯಾಗಲು ಸಾಧ್ಯ. ಸತ್ಯ ಶುದ್ಧ ಧರ್ಮ ಪಾಲನೆಯಿಂದ ಸುಖ, ಶಾಂತಿ ಪ್ರಾಪ್ತವಾಗುತ್ತದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರು ನುಡಿದರು.

» ಶ್ರೀರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯ

ತ್ರಿಪುರಾಂತ ಗವಿಮಠದಲ್ಲಿ ಮಂಗಳವಾರ ಆಯೋಜಿಸಿದ್ದ ಜನಜಾಗೃತಿ ಧರ್ಮ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಬದುಕಿನಲ್ಲಿ ಎಲ್ಲರೂ ಸುಖ, ಶಾಂತಿ ಬಯಸುತ್ತಾರೆ. ಆದರೆ ಆ ದಾರಿಯಲ್ಲಿ ನಡೆಯುವವರ ಸಂಖ್ಯೆ ವಿರಳ. ಭೇವು ಬಿತ್ತಿ ಮಾವು ಪಡೆಯಲಾಗದು. ಅವರಿವರು ಪರಿಪಾಲಿಸಿಕೊಂಡು ಬಂದ ಆದರ್ಶ ಮೌಲ್ಯಗಳಿಂದ ಬದುಕು ಸಮೃದ್ಧಗೊಳ್ಳಲು ಸಾಧ್ಯ ಎಂದರು.

ಮಾನವೀಯ ಆದರ್ಶ ಮೌಲ್ಯ ಪ್ರತಿಪಾದಿಸಿದ ವೀರಶೈವ ಧರ್ಮ ಸಕಲರಿಗೂ ಹಿತ ಬಯಸಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಮಾಡಿದ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಎಲ್ಲ ಕ್ರಾಂತಿಗಳ ಮೂಲ ತಿಳಿಯಬೇಕಿದೆ. ಘನಲಿಂಗ ರುದ್ರಮುನಿ ಶಿವಾಚಾರ್ಯರು ಲೋಕಕಲ್ಯಾಣ, ಜನ ಹಿತಕ್ಕಾಗಿ ಕೊಟ್ಟ ಸಂದೇಶ ಎಂದೆಂದಿಗೂ ಬದುಕಿ ಬಾಳುವ ಜನಾಂಗಕ್ಕೆ ದಾರಿ ದೀಪ ಎಂದರು.

ಗವಿಮಠದ ಪಟ್ಟಾಧ್ಯಕ್ಷ ಅಭಿನವ ಶ್ರೀಗಳು ಕ್ರಿಯಾಶೀಲರಾಗಿ ಮಠದ ಅಭಿವೃದ್ಧಿ ಮಾಡುತ್ತಿರುವುದು ಭಕ್ತ ಸಂಕುಲಕ್ಕೆ ಹರುಷತಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪ್ರಾಸ್ತಾವಿಕ ಮಾತನಾಡಿದರು. ರಮೇಶ ರಾಜೋಳೆ ಸ್ವಾಗತಿಸಿ, ನಿರೂಪಣೆ ಮಾಡಿದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದ್ಯೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಸೂರ್ಯಕಾಂತ ಶೀಲವಂತ, ನಿವೃತ್ತ ಪ್ರಾಚಾರ್ಯ ದಯಾನಂದ ಶೀಲವಂತ, ರುದ್ರೇಶ್ವರ ಸ್ವಾಮಿ ಗೋರ್ಟಾ, ಬಬ್ರುರಾವ ಉಳ್ಳಿ, ಶಿವಕುಮಾರ ಮಠ, ಶಿವಕುಮಾರ ಪಾಟೀಲ್, ರೇವಣಸಿದ್ದಯ್ಯ ಮಠಪತಿ, ಅನೀಲ ಪಾಟೀಲ್, ಸುನೀಲ ಚಪಾತೆ ಇತರರಿದ್ದರು.



ವಿಜಯವಾಣಿ ಚಿತ್ರ

ತ್ರಿಪುರಾಂತ ಗವಿಮಠದಲ್ಲಿ ನಡೆಯುತ್ತಿರುವ ಜೀರ್ಣೋದ್ಧಾರ ಕಾರ್ಯವನ್ನು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರ ಸೋಮೇಶ್ವರ ಜಗದ್ಗುರುಗಳು ಪರಿಶೀಲಿಸಿದರು. ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು.

ಸದ್ಗುಣ ಬರಲು ಗುರು ಮಾರ್ಗ ಬೇಕು

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮಕ್ಕಳಲ್ಲಿ ಸದ್ಗುಣ ಬರಬೇಕಾದರೆ ತಂದೆ- ತಾಯಿಗಳ ಸಂಸ್ಕಾರ ಹಾಗೂ ಗುರುವಿನ ಧರ್ಮ ಮಾರ್ಗ ಅವಶ್ಯ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಜಗದ್ಗುರು ಡಾ.ವೀರಸೋಮೇಶ್ವರ ಶಿವಾಚಾರ್ಯರು ನುಡಿದರು.

ತ್ರಿಪುರಾಂತನಲ್ಲಿ ಹಮ್ಮಿಕೊಂಡ ಜನಜಾಗೃತಿ ಧರ್ಮ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಆಧುನಿಕತೆಯ ಹೆಸರಿನಲ್ಲಿ ಧರ್ಮ ಹಾಗೂ ಪರಂಪರೆ ಮರೆಯುತ್ತಿರುವುದು ದುರದೃಷ್ಟಕರ ಎಂದರು.

ಶರಣರಪ್ಪ ಬಿರಾದಾರ ಅವರದ್ದು ಸಮೃದ್ಧ ಬದುಕಾಗಿದೆ. ಗುರು ಪರಂಪರೆಯಲ್ಲಿ ಅಪಾರ ಶ್ರದ್ಧೆ ಭಕ್ತಿ ಹೊಂದಿದ್ದಾರೆ ಎಂದರು.

ಗವಿಮಠ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ ಹಾಗೂ ಸುಶೀಲಾಬಾಯಿ ಬಿರಾದಾರ ದಂಪತಿಯ ವಿವಾಹ ಸುವರ್ಣ ಮಹೋತ್ಸವ ಹಾಗೂ ಶರಣಪ್ಪ ಬಿರಾದಾರ ಅವರ ಅಮೃತ ಮಹೋತ್ಸವ ನಿಮಿತ್ತ ಶ್ರೀಗಳು ದಂಪತಿಯನ್ನು ಸನ್ಮಾನಿಸಿ, ಆಶೀರ್ವದಿಸಿದರು. ತಡೋಳಾದ ಶ್ರೀ ರಾಚೀಶ್ವರ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಸಿದ್ಧಲಿಂಗ ಶಿವಾಚಾರ್ಯರು ಮಾತನಾಡಿದರು.

ಶ್ರೀ ಹೊನ್ನಲಿಂಗ ಸ್ವಾಮೀಜಿ, ಶ್ರೀ ಡಾ.ಈಶ್ವರನಾನಂದ ಸ್ವಾಮೀಜಿ, ಚಂದನಕೇರಾದ ಶ್ರೀ, ಶ್ರೀಮದ್ವೀರಶೈವ ಸದ್ಯೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಪ್ರಮುಖರಾದ ಶಾಂತವೀರ ಮೇತ್ರೆ, ಶಿವರಾಜ ಪಾಟೀಲ್, ಬಾಬುರಾವ ಗುಣತೂರೆ, ಮಾಣಿಕಪ್ಪ ಬಿರಾದಾರ, ವೀರುಪಾಕ್ಷಯ್ಯ ಗೋರ್ಟಾ, ಬಸವರಾಜ ಮಠಪತಿ, ಕೇಶಪ್ಪ ಬಿರಾದಾರ, ನೀಲಕಂಠ ತಲವಾಡೆ, ಎಸ್.ಜಿ.ಕಲ್ಯಾಣೆ, ವಿವೇಕ ಬಿರಾದಾರ, ಲಿಂಗರಾಜ ಬಿರಾದಾರ, ಪ್ರಭುರಾಜ ಬಿರಾದಾರ, ನಟರಾಜ ಬಿರಾದಾರ, ಗುಂಡಪ್ಪ ಬಿರಾದಾರ, ಕಾರ್ತಿಕ ಬಿರಾದಾರ, ಮರೆಪ್ಪ ಇತರರಿದ್ದರು. ಶರಣಪ್ಪ ಬಿರಾದಾರ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಣೆ ಮಾಡಿದರು. ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ಪ್ರಾರ್ಥನಾ ಗೀತೆ ಹಾಡಿದರು.



ತ್ರಿಪುರಾಂತನಲ್ಲಿ ಜರುಗಿದ ಜನಜಾಗೃತಿ ಧರ್ಮ ಸಮಾರಂಭದಲ್ಲಿ ಶರಣಪ್ಪ ಬಿರಾದಾರ ದಂಪತಿಯನ್ನು ಶ್ರೀ ರಂಭಾಪುರಿ ಜಗದ್ಗುರು ಆಶೀರ್ವದಿಸಿದರು.

Scanned with OKEN Scanner

ಬಸವಕಲ್ಯಾಣದ ಗವಿ ಮಠದಲ್ಲಿ ಜನಜಾಗೃತಿ ಧರ್ಮ ಸಮಾರಂಭದಲ್ಲಿ ರಂಭಾಪುರಿ ಶ್ರೀ ಹೇಳಿಕೆ

ಧರ್ಮ ಪಾಲನೆಯಿಂದ ನೆಮ್ಮದಿ ಬದುಕು



ಬಸವಕಲ್ಯಾಣ ನಗರದ ಗವಿ ಮಠದಲ್ಲಿ ಬುಧವಾರ ನಡೆದ ಜನಜಾಗೃತಿ ಧರ್ಮ ಸಮಾರಂಭದಲ್ಲಿ ಬಾಳೆಹೊನ್ನೂರಿನ ರಂಭಾಪುರಿ ಪೀಠದ ವೀರಸೋಮೇಶ್ವರ ಜಗದ್ಗುರುಗಳು ಆಶೀರ್ವಚನ ನೀಡಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸೇರಿ ಅನೇಕರಿದ್ದರು.

■ ವಿಕ ಸುದ್ದಿಲೋಕ ಬಸವಕಲ್ಯಾಣ

ಮಾನವನ ಜೀವನದ ಉನ್ನತಿಗೆ ಧರ್ಮ ಮೂಲ ಸಂಸ್ಕಾರಗಳಿಂದ ಜೀವನ ಉತ್ಕೃಷ್ಟರಾಗಲು ಸಾಧ್ಯ. ಸತ್ಯವಾದ ಧರ್ಮ ಪಾಲನೆಯಿಂದ ಜೀವನದಲ್ಲಿ ಸುಖ ಮತ್ತು ಶಾಂತಿ ಪ್ರಾಪ್ತಿಯಾಗುತ್ತದೆ ಎಂದು ಬಾಳೆಹೊನ್ನೂರಿನ ರಂಭಾಪುರಿ ಪೀಠದ ಜಗದ್ಗುರು ವೀರಸೋಮೇಶ್ವರ ಶಿವಾಚಾರ್ಯರು ಹೇಳಿದರು.

ನಗರದ ಗವಿ ಮಠದಲ್ಲಿ ಬುಧವಾರ ನಡೆದ ಜನಜಾಗೃತಿ ಧರ್ಮ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಬದುಕಿನಲ್ಲಿ ಎಲ್ಲರೂ ಸುಖ-ಶಾಂತಿ, ಸಮೃದ್ಧಿ ಬಯಸುತ್ತಾರೆ. ಆದರೆ, ಅದೇ ಹಾದಿಯಲ್ಲಿ ನಡೆಯುವವರ ಸಂಖ್ಯೆ ತುಂಬಾ ವಿರಳ ಎಂದರು.

ಜೀವನದಲ್ಲಿ ಶಾಂತಿ ಮತ್ತು ವಿಶಾಲ ಬದುಕು ಸದೃಢಗೊಳಿಸಲು ಸಾಧ್ಯ. ಮಾನವನ ಆದರ್ಶ ಮೌಲ್ಯಗಳನ್ನು ಪ್ರತಿಪಾದಿಸಿದ ವೀರಶೈವ ಧರ್ಮ ಸಕಲರಿಗೂ ಹಿತವನ್ನೇ ಬಯಸಿದೆ ಜಗದ್ಗುರು ರೇಣುಕಾಚಾರ್ಯರು ಮಾಡಿದ ಧಾರ್ಮಿಕ ಮತ್ತು ಸಾಮಾಜಿಕ ಸಂಸ್ಕೃತಿ ಕ್ರಾಂತಿಗಳ ಮೂಲ ಸ್ಥಿತಿಗತಿ ಹೇಗಿದೆ ಎಂಬುದು ಎಲ್ಲರೂ ಅರ್ಥೈಸಿಕೊಳ್ಳಬೇಕು ಎಂದು ತಿಳಿಸಿದರು. ರುದ್ರಮುನಿ ಶಿವಾಚಾರ್ಯರು ಲೋಕಕಲ್ಯಾಣಕ್ಕಾಗಿ ಜನಹಿತಕ್ಕಾಗಿ ಕೊಟ್ಟ ಸಂದೇಶವು ಎಂದೆಂದಿಗೂ ಜನರಿಗೆ ದಾರಿದೀಪ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಕೊಡಾ ಕ್ರಿಯಾಶೀಲರಾಗಿ ಶ್ರೀಮಠದ ಅಭಿವೃದ್ಧಿ ಮಾಡುತ್ತಿರುವುದು ಭಕ್ತ ಸಂಕುಲಕ್ಕೆ ಹರುಷ ತಂದಿದೆ ಎಂದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಶರಣಪ್ಪ ಬಿರಾದಾರ, ಪ್ರೊ. ದಯಾನಂದ ಶೀಲವಂತ, ಬಸವಂತಪ್ಪ ಲವಾರೆ ಸೇರಿ ಅನೇಕರಿದ್ದರು.

ವಿಜಯ ಕರ್ನಾಟಕ ಗುರುವಾರ,2 ಜನವರಿ 2020

ಸಂಸ್ಕಾರ-ಸದ್ವಿಚಾರಗಳಿಂದ ಜೀವನ ಉನ್ನತಿ: ಸ್ವಾಮೀಜಿ



ಬಸವಕಲ್ಯಾಣ: ತ್ರಿಪುರಾಂತ ಶ್ರೀ ಗವಿಮಠದಲ್ಲಿ ನಡೆದ ಜನಜಾಗೃತಿ ಧರ್ಮ ಕಾರ್ಯಕ್ರಮದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಬಸವಕಲ್ಯಾಣ: ಧರ್ಮ ಮೂಲ ಸಂಸ್ಕಾರ-ಸದ್ವಿಚಾರಗಳಿಂದ ಮಾನವನ ಜೀವನದ ಉನ್ನತಿಗೆ ಸಾಧ್ಯ ಎಂದು ಜಗದ್ಗುರು ಶ್ರೀ ರಂಭಾಪುರಿ ಸ್ವಾಮೀಜಿ ಹೇಳಿದರು.

ನಗರದ ತ್ರಿಪುರಾಂತ ಶ್ರೀ ಗವಿಮಠದಲ್ಲಿ ನಡೆದ ಜನಜಾಗೃತಿ ಧರ್ಮ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಅವರು, ಜೀವನದಲ್ಲಿ ಪ್ರತಿಯೊಬ್ಬರು ಸುಖ, ಶಾಂತಿ ಬಯಸುತ್ತಾರೆ. ಆದರೆ ಆ ಮಾರ್ಗದಲ್ಲಿ ನಡೆಯುವವರ ಸಂಖ್ಯೆ ಬಹಳ ಕಡಿಮೆ. ಮಾನವೀಯ ಆದರ್ಶ ಮೌಲ್ಯ ಪ್ರತಿಪಾಸಿದ ವೀರಶೈವ ಧರ್ಮ ಸಕಲರಿಗೂ ಹಿತ ಬಯಸಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಮಾಡಿದ ಧಾರ್ಮಿಕ ಸಾಮಾಜಿಕ ಮತ್ತು ಸಾಂಸ್ಕೃತಿಕಗಳ ಬಗ್ಗೆ ತಿಳಿಯಕೊಳ್ಳಬೇಕಾಗಿದೆ ಎಂದರು.

ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಿಕ್ಕವಯಸ್ಸಿನಲ್ಲಿಯೇ ಸನ್ಯಾತ್ವ ಪಡೆದುಕೊಂಡು ಕ್ರಿಯಾಶೀಲರಾಗಿ ಮಠದ ಅಭಿವೃದ್ಧಿ ಮಾಡುತ್ತಿರುವುದು ಭಕ್ತಾದಿಗಳ ಮನಸ್ಸಿನಲ್ಲಿ ಸಂತೋಷ ನೆಲೆಸುವಂತೆ ಮಾಡಿದೆ ಎಂದು ಬಣ್ಣಿಸಿದರು.

ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪ್ರಾಸ್ತಾವಿಕವಾಗಿ ಮಾತನಾಡಿದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀ ಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪಾ ಲವಾರೆ, ಸೂರ್ಯಕಾಂತ ಶೀಲವಂತ, ರುದ್ರೇಶ್ವರ ಸ್ವಾಮಿ ಗೋರ್ಟಾ ಇದ್ದರು. ರಮೇಶ ರಾಜೋಳೆ ಸ್ವಾಗತಿಸಿ, ನಿರೂಪಿಸಿದರು.

ಉದಯವಾಣಿ
ಶುಕ್ರವಾರ, ಜನವರಿ 3, 2020



ಬಸವಕಲ್ಯಾಣ: ನಗರದಲ್ಲಿ ಶೀಲವಂತ ಅಕ್ಕಸಾಲಿಗ ಸಮಾಜ ಸಂಘದಿಂದ ಹಮ್ಮಿಕೊಂಡಿದ್ದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಭೂಮಿಪೂಜೆಯನ್ನು ಶ್ರೀ ರಂಭಾಪುರಿ ಜಗದ್ಗುರುಗಳು ನೆರವೇರಿಸಿದರು. ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು.

ಉದಯವಾಣಿ ಕಲಬುರಗಿ
ಶನಿವಾರ, ಜನವರಿ 4, 2020

Scanned with OKEN Scanner



ಬಸವಕಲ್ಯಾಣ: ಗವಿಮಠದಲ್ಲಿ ಸೋಮವಾರದಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ರಮೇಶ ಸ್ವಾಮಿ, ಎ.ಜಿ.ಪಾಟೀಲ ಇದ್ದರು.

ಕಲಬುರಗಿ ಉದಯವಾಣಿ
ಶನಿವಾರ, ಜನವರಿ 4, 2020

ಗುರುವಾರ, 2, ಜನವರಿ, 2020, ಕಲಬುರಗಿ
ಸಂಯುಕ್ತ ಕರ್ನಾಟಕ

ಜನಜಾಗೃತಿ ಧರ್ಮ ಸಮಾರಂಭ

'ಧರ್ಮ ಪರಿಪಾಲನೆಯಿಂದ ಸುಖ, ಶಾಂತಿ ಪ್ರಾಪ್ತಿ'

ಸಂ.ಕ.ಸಮಾಚಾರ ಬಸವಕಲ್ಯಾಣ

ಜೀವನದಲ್ಲಿ ಸತ್ಯ, ಶುದ್ಧವಾದ ಧರ್ಮ ಪಾಲನೆ ಮಾಡಿದಲ್ಲಿ ಮಾತ್ರ ಸುಖ, ಶಾಂತಿ ಪ್ರಾಪ್ತವಾಗುತ್ತದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಜಗದ್ಗುರು ಡಾ.ವೀರಸೋಮೇಶ್ವರ ಶಿವಾಚಾರ್ಯರು ಅಭಿಪ್ರಾಯಪಟ್ಟರು.

ತ್ರಿಪುರಾಂತ ಗವಿಮಠದಲ್ಲಿ ಜರುಗಿದ ಜನಜಾಗೃತಿ ಧರ್ಮ ಸಮಾರಂಭದಲ್ಲಿ ಆಶೀರ್ವಚನ ನೀಡಿದಶ್ರೀಗಳು,ಮಾನವಜೀವನದ ಉನ್ನತಿಗೆ ಧರ್ಮ ಮೂಲ. ಸಂಸ್ಕಾರ-ಸದ್ವಿಚಾರಗಳಿಂದ ಜೀವನ ಉತ್ಕರ್ಷತೆಯಾಗಲು ಸಾಧ್ಯ. ಬದುಕಿನಲ್ಲಿ ಎಲ್ಲರೂ ಸುಖ, ಶಾಂತಿ ಬಯಸುತ್ತಾರೆ.



ಬಸವಕಲ್ಯಾಣ : ತ್ರಿಪುರಾಂತ ಗವಿಮಠಕ್ಕೆ ಭೇಟಿ ನೀಡಿದ ಶ್ರೀ ರಂಭಾಪುರಿ ಜಗದ್ಗುರು ಡಾ.ವೀರಸೋಮೇಶ್ವರ ಶಿವಾಚಾರ್ಯರು ಮಠದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕೆಲಸ ಕಾರ್ಯವನ್ನು ಪರಿಶೀಲಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉಪಸ್ಥಿತರಿದ್ದರು.

ಆದರೆ ಅ ದ್ದಾರಿಯಲ್ಲಿ ನಡೆಯುವವರಸಂಖ್ಯೆವಿರಳ.ಬೇವು ಬಿತ್ತಿ ಮಾವು ಪಡೆಯಲಾಗದು. ಅವರವರು ಪರಿಪಾಲಿಸಿಕೊಂಡು ಬಂದ ಆದರ್ಶ ಮೌಲ್ಯಗಳಿಂದ ಬದುಕು ಸಮೃದ್ಧಗೊಳ್ಳಲು ಸಾಧ್ಯ. ಮಾನವೀಯ ಆದರ್ಶ ಮೌಲ್ಯಗಳನ್ನು ಪ್ರತಿಪಾದಿಸಿದ ವೀರಶೈವ ಧರ್ಮ ಸಕಲರಿಗೂ ಹಿತವನ್ನೇ ಬಯಸಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಮಾಡಿದ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಎಲ್ಲ ಕ್ರಾಂತಿಗಳ ಮೂಲ ತಿಳಿಯಬೇಕಾಗಿದೆ. ಎಂದರು.

ಘನಲಿಂಗ ರುದ್ರಮುನಿ ಶಿವಾಚಾರ್ಯರು ಲೋಕಕಲ್ಯಾಣ, ಜನ ಹಿತಕ್ಕಾಗಿ ಕೊಟ್ಟ ಸಂದೇಶ ಎಂದೆಂದಿಗೂ ಬದುಕಿ ಬಾಳುವ ಧರ್ಮ, ಆಧ್ಯಾತ್ಮದ ಕ್ಷೇತ್ರದಲ್ಲಿ ಜನಾಂಗಕ್ಕೆ ದಾರಿ ದೀಪವಾಗಿದೆ ಎಂದರು.

ಗವಿಮಠದ ಇಂದಿನ ಪಟ್ಟಾಧ್ಯಕ್ಷ ಅಭಿನವ ಶ್ರೀಗಳು ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಕ್ರೀಯಾಶೀಲರಾಗಿ ಕೆಲಸ ಮಾಡುವ ಜತೆಗೆ ಶ್ರೀಮಠದ ಅಭಿವೃದ್ಧಿ ಮಾಡುತ್ತಿರುವದು ಭಕ್ತ ಸಂಕುಲಕ್ಕೆ ಹರುಷ ತಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪ್ರಾಸ್ತಾವಿಕ ಮಾತನಾಡಿದರು.

ರಮೇಶರಾಜೋಳೆಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀ ಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಪ್ರೊ. ಸೂರ್ಯಕಾಂತ ಶೀಲವಂತ, ನಿವೃತ್ತ ಪ್ರಾಚಾರ್ಯ ದಯಾನಂದ ಶೀಲವಂತ, ರುದ್ರೇಶ್ವರ ಸ್ವಾಮಿ ಗೋರ್ಟಾ, ಬಬುರಾವ ಉಳ್ಳೆ, ಶಿವಕುಮಾರ ಮಠ, ಶಿವಕುಮಾರ ಪಾಟೀಲ್, ರೇವಣಸಿದ್ಧಯ್ಯ ಮಠಪತಿ, ಅನೀಲ ಪಾಟೀಲ್, ಸುನೀಲ ಚಪಾತೆ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » KALABURAGI
ಭಾನುವಾರ 5 ಜನವರಿ 2020
5 JANUARY 2020



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಗವಿಮಠದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ 2020ರ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ರಮೇಶ ಸ್ವಾಮಿ, ಎ.ಜಿ. ಪಾಟೀಲ್, ವಿಜಯ ದಾಡಗೆ, ಶ್ರೀನಿವಾಸ, ಶಶಿ ಬಾಳುಸಕರ್, ಅನೀಲ ಡೊಂಗೆ, ಸೂರ್ಯಕಾಂತ ಪಂಚಾಳ, ರುದ್ರೇಶ ಗೋರ್ಟಾ ಇತರರಿದ್ದರು.

Scanned with OKEN Scanner

ದೇಶಿ ಸಂಸ್ಕೃತಿ ಅರಿವು ಮೂಡಿಸುವ ಸಾಹಿತ್ಯ

ಸಾವಿತ್ರಿ ಸಲಗರ ಅನಿಸಿಕೆ | ಮೂರನೇ ಮಹಾಯುದ್ಧ ಕವನ ಸಂಕಲನ ಬಿಡುಗಡೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಾಹಿತ್ಯದ ಕುರಿತು ಆಸಕ್ತಿ ಮತ್ತು ಸಂಸ್ಕೃತಿ ಕುರಿತು ಮಕ್ಕಳಲ್ಲಿ ಅರಿವು ಮೂಡಿಸುವಲ್ಲಿ ಸಾಹಿತ್ಯಿಕ ಕಾರ್ಯಕ್ರಮಗಳು ಸಹಕಾರಿ ಎಂದು ತಹಸೀಲ್ದಾರ್ ಸಾವಿತ್ರಿ ಸಲಗರ ಹೇಳಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹಾಗೂ ಪ್ರತಿಮಾ ಪ್ರಕಾಶನದಿಂದ ಆಯೋಜಿಸಿದ್ದ ಕವಿ ವೀರಶೆಟ್ಟಿ ಪಾಟೀಲರ ಮೂರನೇ ಮಹಾ ಯುದ್ಧ ಕವನ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಹಿತ್ಯ ಪರಿಷತ್ತಿನ ಎಲ್ಲ ಕಾರ್ಯಚಟುವಟಿಕೆಗಳಿಗೆ ಸಹಕಾರದ ನೀಡುವ ಜತೆಗೆ ನಗರದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ಸಹಕಾರ ನೀಡಲಾಗುವುದು ಎಂದು ಆಶ್ವಾಸನೆ ನೀಡಿದರು.

ಜಿಲ್ಲಾ ಕಸಾಪ ಕಾರ್ಯದರ್ಶಿ ಡಾ.ಬಸವರಾಜ ಬಲ್ಲೂರ ಮಾತನಾಡಿ, ಸಾಹಿತ್ಯದಿಂದ ಮನುಷ್ಯನ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ಮನುಷ್ಯನ ವ್ಯಕ್ತಿತ್ವ ಬದಲಿಸುವ ಸಾಮರ್ಥ್ಯ ಸಾಹಿತ್ಯದಲ್ಲಿದೆ ಎಂದರು.

ಕಸಾಪ ತಾಲೂಕು ಅಧ್ಯಕ್ಷ ಡಾ.ರುದ್ರಮಣಿ ಮಠಪತಿ ಮಾತನಾಡಿ, ಕಾರ್ಯಕ್ರಮದಲ್ಲಿ ಬಂದ ಅತಿಥಿಗಳಿಗೆ ಹೂವಿನ ಹಾರದ ಬದಲಾಗಿ ಮೆಂತೆ ಸೊಪ್ಪಿನ ಸೂಡು ನೀಡಿ ದೇಶಿ ಸಂಸ್ಕೃತಿ ಅಳವಡಿಸಿಕೊಂಡ ಮೊದಲ ಕಾರ್ಯಕ್ರಮ ಇದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ವಿಜಯವಾಣಿ ಚಿತ್ರ

ಕವಿ ವೀರಶೆಟ್ಟಿ ಪಾಟೀಲರ ಮೂರನೇ ಮಹಾ ಯುದ್ಧ ಕವನ ಸಂಕಲನ ಬಿಡುಗಡೆ ಕಾರ್ಯಕ್ರಮವನ್ನು ತಹಸೀಲ್ದಾರ್ ಸಾವಿತ್ರಿ ಸಲಗರ ಉದ್ಘಾಟಿಸಿದರು. ಅಭಿನವ ಘನಲಿಂಗ ರುದ್ರಮುನಿ ಶ್ರೀ ಇತರರಿದ್ದರು.

ಸಾನ್ನಿಧ್ಯ ವಹಿಸಿದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಸಾಹಿತಿ ವೀರಶೆಟ್ಟಿ ಪಾಟೀಲ್ ಹಾಗೂ ಶಿವಾನಂದ ಮೇತ್ರೆ ಮಾತನಾಡಿದರು. ಜಿಲ್ಲಾ ಡಿಡಿಪಿಯು ರಮೇಶ ಬೆಜಗಂ ಹಾಗೂ ಡಯಟ್‌ನ ನಿವೃತ್ತ ಉಪನ್ಯಾಸಕರಾದ ತುಳಸಿರಾಮ ಕುಂಬಾರೆ ಮತ್ತು ಕೆಎಎಸ್‌ನಲ್ಲಿ ಪಾಸಾಗಿ ಎಸಿ ಹುದ್ದೆಗೆ ಆಯ್ಕೆಯಾಗಿರುವ ಸಾವಿತ್ರಿ ಬಿರಾದಾರ ಅವರನ್ನು ಸನ್ಮಾನಿಸಲಾಯಿತು.

ಕವಿಗೋಷ್ಠಿಯಲ್ಲಿ ಶ್ರೀ ಪಂಚಾಕ್ಷರಿ ಹಿರೇಮಠ, ನಾಗೇಂದ್ರ ಬಿರಾದಾರ, ಚಿತ್ರಶೇಖರ ಚಿರಳ್ಳಿ, ಡಾ.ಗೌತಮ್ ಬಕ್ಕಪ್ಪ, ದಿವ್ಯಾರಾಣಿ, ಮಲ್ಲಿಕಾರ್ಜುನ ಕಾಡಾದಿ, ಹಣಮಂತರಾಯ ವಿಸಾಜಿ, ವೀರಶೆಟ್ಟಿ ಪಾಟೀಲ ಕವನ ವಾಚಿಸಿದರು.

ಪ್ರತಿಮಾ ಪಾಟೀಲ್, ರಾಜಕುಮಾರ ಪಾಲಪೂರೆ, ಸಂತೋಷ ಆಕ್ಕಣ್ಣ, ತಿಪ್ಪಣ್ಣ, ಚಿಂತಾಲೆ, ಶಿವಕುಮಾರ ಮಠಪತಿ, ಮಹಾದೇವ ಬಿರಾದಾರ ಭಾಗವಗಹಿಸ್ದಿರು. ದೇವೆಂದ್ರ ಬರಗಾಲೆ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಚನ್ನಬಸಪ್ಪ ಶೆಟ್ಟಿಪ್ಪ ವಂದಿಸಿದರು. ಅಂಬರೀಷ್ ಭೀಮಾಣೆ ನಿರೂಪಣೆ ಮಾಡಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 4 ಜನವರಿ 2020
4 JANUARY 2020

ಕವನ ಸಂಕಲನ ಬಿಡುಗಡೆ: ಸಾಹಿತಿ ಬಲ್ಲೂರ ಸಲಹೆ

ಕಾವ್ಯದಲ್ಲಿ ಸಾರ್ವತ್ರಿಕ ಹಿತ ಅಡಗಿರಲಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಕಾವ್ಯ ಬರೀ ಶಬ್ದಗಳ ಭಂಡಾರ ಹಾಗೂ ಪಾಂಡಿತ್ಯದ ಪ್ರದರ್ಶನವಾಗದೆ ಅದರಲ್ಲಿ ಸಾರ್ವತ್ರಿಕ ಹಿತ ಅಡಗಿರಬೇಕು' ಎಂದು ಸಾಹಿತಿ ಡಾ.ಬಸವರಾಜ ಬಲ್ಲೂರ ಹೇಳಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಪ್ರತಿಮಾ ಪ್ರಕಾಶನದಿಂದ ಸಾಹಿತಿಕ ವಿ.ಘಾಟೀಲನ 2 ನೇ ಹುಟ್ಟುಹಬ್ಬದ ನಿಮಿತ್ತ ಗುರುವಾರ ಇಲ್ಲಿ ಆಯೋಜಿಸಿದ್ದ ವೀರಶೆಟ್ಟಿ ಪಾಟೀಲ ಅವರ 'ಮೂರನೇ ಮಹಾಯುದ್ಧ' ಕವನ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಾಹಿತ್ಯ ಒತ್ತಡದಿಂದ ಹೊರಹೊಮ್ಮದೆ ಅಂತರಾತ್ಮದಿಂದ ಮೂಡಿಬರಬೇಕು. ಮೂರನೇ ಮಹಾಯುದ್ಧ ಸಂಕಲನವ ಸಾಮಾಜಿಕ ಕಳಕಳಿ ಅಭಿವ್ಯಕ್ತಪಡಿಸಿದೆ' ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಡಾ.ರುದ್ರಮಣಿ ಮಠಪತಿ ಮಾತನಾಡಿ, 'ಕಲಬೆರಕೆ ಆಹಾರದಿಂದ ನಾನಾ ರೋಗಗಳು ಬಂದು ಸಾಮಾಜಿಕ ಸ್ವಾಸ್ಥ್ಯ ಕೆಡುತ್ತಿದೆ. ಇದನ್ನೇ ವೀರಶೆಟ್ಟಿಯವರು ಯುದ್ಧವಾಗಿದೆ ಎಂಬುದನ್ನು ಕಲ್ಪಿಸಿ ಕಾವ್ಯ ಬರೆದಿದ್ದಾರೆ' ಎಂದರು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ತಹಶೀಲ್ದಾರ್ ಸಾವಿತ್ರಿ ಶರಣು ಸಲಗರ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಶಿವಾನಂದ ಮೇತ್ರೆ, ದೇವೇಂದ್ರ ಬರಗಾಲೆ, ಉಪನ್ಯಾಸಕ ಅಂಬರೀಶ ಭೀಮಾಣೆ, ಚನ್ನಬಸಪ್ಪ ಶೆಟ್ಟಿಪ್ಪ, ರಾಜಕುಮಾರ ಪಾಲಾಪುರೆ ಮಾತನಾಡಿದರು.

ಮಲ್ಲಿಕಾರ್ಜುನ ಕಾಡಾದಿ, ಡಾ.ಚಿತ್ರಶೇಖರ ಚಿರಳ್ಳಿ, ಪಂಚಾಕ್ಷರಿ ಹಿರೇಮಠ, ನಾಗೇಂದ್ರ ಬಿರಾದಾರ, ವೀರಶೆಟ್ಟಿ ಎಂ.ಪಾಟೀಲ, ಹಣಮಂತರಾವ್ ವಿಸಾಜಿ, ಗೌತಮ ಬಕ್ಕಪ್ಪ ಹಾಗೂ ದಿವ್ಯಾರಾಣಿ ಕವನ ವಾಚಿಸಿದರು.



ಬಸವಕಲ್ಯಾಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಗುರುವಾರ ನಡೆದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪುಟ್ಟಮಗು ಸಾತ್ವಿಕ ಪಾಟೀಲ ದೀಪ ಬೆಳಗಿಸಿತು

ಉಪ ವಿಭಾಗಾಧಿಕಾರಿಯಾಗಿ ಆಯ್ಕೆಗೊಂಡಿರುವ ಸಾವಿತ್ರಿ ಬಿರಾದಾರ, ಡಿಡಿಪಿಯು ರಮೇಶ ಬೆಜಗಂ, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ತುಳಸಿರಾಮ ಕುಂಬಾರೆ ಅವರನ್ನು ಸನ್ಮಾನಿಸಲಾಯಿತು.

ತಿಪ್ಪಣ್ಣ ಚಿಂತಾಲೆ, ಪ್ರತಿಮಾ ಪಾಟೀಲ, ಚನ್ನವೀರ ಜಮಾದಾರ, ನರಸಿಂಗರೆಡ್ಡಿ ಗದ್ದೇಗಾಂವ, ಕ್ಷೇಮಲಿಂಗ ಬೆಳಮಗಿ, ಶಿವಕುಮಾರ ಮಠಪತಿ, ಚಂದ್ರಶೇಖರ ಸ್ವಾಮಿ, ಮಹಾದೇವ ಬಿರಾದಾರ ಪಾಲ್ಗೊಂಡಿದ್ದರು. ಅತಿಥಿಗಳಿಗೆ ಪುಷ್ಪಮಾಲೆಯ ಬದಲಾಗಿ ಮೆಂತೆಸೊಪ್ಪನ್ನು ನೀಡಿ ಸತ್ಕರಿಸಿರುವುದು ವಿಶೇಷವಾಗಿತ್ತು.

ಪ್ರಜಾವಾಣಿ ಶನಿವಾರ • ಜನವರಿ 4, 2020

ಶ್ರೀ ಮಡಿವಾಳ ಮಾಚಿದೇವರ ಜಾತ್ರಾ ನಾಳೆಯಿಂದ ಆರಂಭ

ಬಸವಕಲ್ಯಾಣ: ನಗರದ ತ್ರಿಪುರಾಂತನಲ್ಲಿರುವ ಶ್ರೀಮಡಿವಾಳ ಮಾಚಿದೇವರ ಜಾತ್ರಾ ಮಹೋತ್ಸವ ಜ.14ರಿಂದ 16ರ ವರೆಗೆ ಜರುಗಲಿದೆ. 14 ರಂದು ರಾತ್ರಿ 8ಕ್ಕೆ ಪಲ್ಲಕ್ಕಿ ಮೆರವಣಿಗೆ ಹಾಗೂ ಶಲ್ಯ ಸುಡುವುದು.15 ರಂದು ಸಾಮಾಜಿಕ ಕಾರ್ಯಕ್ರಮ ಹಾಗೂ ನಾಟಕ ಪ್ರದರ್ಶನ.ಜ.16 ರ ಸಂಜೆ 4 ಗಂಟೆಗೆ ಪಲ್ಲಕ್ಕಿ ಮೆರವಣಿಗೆ ಹಾಗೂ ಅಗ್ನಿಪೂಜೆ ಮತ್ತು ಅಗ್ನಿ ಪ್ರವೇಶ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಗವಿಮಠದ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದ್ದಾರೆ.



Scanned with OKEN Scanner

ಜನ್ಮ ದಿನ

■ ಕನ್ನಡ ಭವನ ನಿರ್ಮಾಣಕ್ಕೆ ಸಹಕಾರ ನೀಡುವೆ: ಸಾವಿತ್ರಿ ಸಲಗರ

'ಮೂರನೇ ಮಹಾಯುದ್ಧ' ಕವನ ಸಂಕಲನ ಬಿಡುಗಡೆ

ಉದಯವಾಣಿ ಕಲಬುರಗಿ
ಭಾನುವಾರ, ಜನವರಿ 5, 2020

ಬಸವಕಲ್ಯಾಣ: ನಮ್ಮ ಸಂಸ್ಕೃತಿ ಮರೆತು ಪಾಶ್ಚಾತ್ಯ ಸಂಸ್ಕೃತಿಯಂತೆ ದೀಪ ಆರಿಸಿ ಕೇಕ್ ಕತ್ತರಿಸುವ ಮೂಲಕ ಜನ್ಮದಿನ ಆಚರಿಸಿಕೊಳ್ಳುವುದನ್ನ ಬಿಟ್ಟು ಮಗುವಿನ ಕೈಯಿಂದ ದೀಪ ಬೆಳಗಿಸಿ ಜ್ಞಾನ ನೀಡುವ ಪುಸ್ತಕ ಬಿಡುಗಡೆ ಮಾಡುವ ಈ ಕಾರ್ಯಕ್ರಮ ಇತರರಿಗೆ ಮಾದರಿಯಾಗಿದೆ ಎಂದು ತಹಶೀಲ್ದಾರ್ ಸಾವಿತ್ರಿ ಶರಣು ಸಲಗರ ಹೇಳಿದರು.

ನಗರದ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಕಚೇರಿ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹಾಗೂ ಪ್ರತಿಮಾ ಪ್ರಕಾಶನ ಹಮ್ಮಿಕೊಂಡಿದ್ದವೀರಶೆಟ್ಟಿಪಾಟೀಲರ'ಮೂರನೇ ಮಹಾಯುದ್ಧ' ಕವನ ಸಂಕಲನ ಬಿಡುಗಡೆ ಹಾಗೂ ಸಾತ್ವಿಕ ಪಾಟೀಲ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಚಟುವಟಿಕೆಗಳಿಗೆ ನನ್ನ ಸಹಕಾರವಿದೆ. ಕನ್ನಡ ಭವನ ನಿರ್ಮಾಣಕ್ಕೆ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದು ಹೇಳಿದರು.



ಬಸವಕಲ್ಯಾಣ: ನಗರದಲ್ಲಿ ನಡೆದ ಸಮಾರಂಭದಲ್ಲಿ ವೀರಶೆಟ್ಟಿ ಪಾಟೀಲರ 'ಮೂರನೇ ಮಹಾಯುದ್ಧ' ಕವನ ಸಂಕಲನ ಮತ್ತು ಕನ್ನಡ ದಿನದರ್ಶಿಕೆಯನ್ನು ಶ್ರೀ ಘನಲಿಂಗ ರುದ್ರಮನಿ ಶಿವಾಚಾರ್ಯರು ಬಿಡುಗಡೆ ಮಾಡಿದರು.

ಕಸಾಪ ಜಿಲ್ಲಾಕಾರ್ಯದರ್ಶಿ ಡಾ।ಬಸವರಾಜ ಬಲ್ಲೂರ ಮಾತನಾಡಿ, ಸಾಹಿತ್ಯದಿಂದ ಮನುಷ್ಯನ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ಮನುಷ್ಯನ ವ್ಯಕ್ತಿತ್ವ ಬದಲಿಸುವ ಸಾಮರ್ಥ್ಯ ಸಾಹಿತ್ಯದಲ್ಲಿದೆ. ಕವಿ, ಕಲಾವಿದ, ಛಾಯಾಗ್ರಾಹಕರಾದ ವೀರಶೆಟ್ಟಿ ಪಾಟೀಲರು ಇದುವರೆಗೆ ಐದು ಪುಸ್ತಕಗಳನ್ನು ಬರೆದಿದ್ದು ನಮ್ಮ ಭಾಗದ ಒಳ್ಳೆಯ ಬರಹಗಾರರಾಗಿದ್ದಾರೆ ಎಂದು ಬಣ್ಣಿಸಿದರು.

ನಂತರ ಕಸಾಪ ಅಧ್ಯಕ್ಷ ಡಾ। ರುದ್ರಮಣಿ ಮಠಪತಿ, ಸ.ನೌ. ಸಂಘದ ತಾಲೂಕು ಅಧ್ಯಕ್ಷ ಶಿವಾನಂದ ಮೇತ್ರೆ, ವೀರಶೆಟ್ಟಿ ಪಾಟೀಲ ಮಾತನಾಡಿದರು. ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು.

ನಂತರ ನಡೆದ ಕವಿಗೋಷ್ಠಿಯಲ್ಲಿ ಪಂಚಾಕ್ಷರಿ ಹಿರೇಮಠ್, ನಾಗೇಂದ್ರ ಬಿರಾದಾರ, ಡಾ। ಚಿತ್ರಲೇಖಿರ ಚರಳ್ಳಿ, ಡಾ।ಗೌತಮ್ ಬಕ್ಕಪ್ಪ ಮಲ್ಲಿಕಾರ್ಜುನ ಕಡಾದಿ, ಹಣಮಂತರಾಯ ವಿಸಾಜಿ, ವೀರಶೆಟ್ಟಿ ಪಾಟೀಲ ಕವನ ವಾಚನ ಮಾಡಿದರು. ರಾಜಕುಮಾರ ಪಾಲಪೂರೆ, ಸಂತೋಷ ಆಕ್ಕಣ್ಣ ತಿಪ್ಪಣ್ಣಾ ಚಿಂತಾಲೆ, ಶಿವಕುಮಾರ ಮಠಪತಿ, ವೀರಶೆಟ್ಟಿ ಮಲಶೆಟ್ಟಿ ಪ್ರಭುಲಿಂಗಯ್ಯಾ ಟಂಕಸಾಲಿಮಠ, ಗುರುನಾಥ ಗಡ್ಡೆ ಮಹಾದೇವ ಬಿರಾದಾರ, ಚನ್ನವೀರ ಜಮಾದಾರ, ನರಸಿಂಗರೆಡ್ಡಿ ಗದ್ದೆಗಾಂವ ಸೇರಿದಂತೆ ಮತ್ತಿತರರು ಇದ್ದರು. ದೇವೆಂದ್ರ ಬರಗಾಲೆ ಸ್ವಾಗತಿಸಿದರು. ಅಂಬರೀಶ ಭೀಮಾಣೆ ನಿರೂಪಿಸಿದರು. ಚನ್ನಬಸಪ್ಪಾ ಕೆಟ್ಟೆಪ್ಪಾ ವಂದಿಸಿದರು. ಇದೇ ವೇಳೆ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ರಮೇಶ ಬೆಜಗಂ, ಡೈಟ್‌ನ ನಿವೃತ್ತ ಉಪನ್ಯಾಸಕ ತುಳಸಿರಾಮ ಕುಂಬಾರೆ ಮತ್ತು ಸಹಾಯಕ ಆಯುಕ್ತೆಯಾಗಿ ನೇಮಕಗೊಂಡ ಸಾವಿತ್ರಿ ಬಿರಾದಾರ ಅವರನ್ನು ಸನ್ಮಾನಿಸಲಾಯಿತು.



ಕನ್ನಡಪ್ರಭ
ಸೋಮವಾರ 13.1.2020

ಬಸವಕಲ್ಯಾಣ ನಗರದ ರಾಮಶೆಟ್ಟಿ ಬಿರಾದಾರ (ಗೋರ್ಟಾ) ಅವರ ನಿವಾಸದಲ್ಲಿ ಜರುಗಿದ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ನಿವೃತ್ತ ಶಿಕ್ಷಕ ಬಾಬುರಾವ ಉಳ್ಳೆ, ರಾಮಶೆಟ್ಟಿ ಬಿರಾದಾರ ಗೋರ್ಟಾ ಇದ್ದರು.





ವಿಜಯ ಕರ್ನಾಟಕ
ಶುಕ್ರವಾರ, 17 ಜನವರಿ 2020

ಬಸವಕಲ್ಯಾಣ ಜಿಲ್ಲೆಯ ತ್ರಿಪುರಾಂತದಲ್ಲಿ ಬುಧವಾರ ರಾತ್ರಿ ನಡೆದ ಮಂಡಿವಾಳ ಮಾಚೇಶ್ವರ ಜಾತ್ರಾ ಮಹೋತ್ಸವದಲ್ಲಿ ಬೆಂಗಳೂರಿನ ಮಾಚಿದೇವ ಸಮಿತಿ (ರಿ) ಹಳೆಯ ಬಡಾವಣೆ ಕ್ರಿಕೆಟರ್ಸ್ ಗ್ರೂಪ್ ಬಡಾವಣೆಗಳ ಮಾಚಿದೇವ ಸಮಿತಿ (ರಿ) ಶರಣು ಸಲಗರ ಸೇರಿ ಏಳೆಂಟು ತಂಡಗಳು ಭಾಗವಹಿಸಿದ್ದವು. ವಿಜಯಪುರದ ಮಲ್ಲಿಕಾರ್ಜುನ, ಅಥಣಿಯ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣು ಸಲಗರ ಸೇರಿ ಅನೇಕರಿದ್ದರು.

ಬಸವಕಲ್ಯಾಣ ಜಿಲ್ಲೆಯ ತ್ರಿಪುರಾಂತದಲ್ಲಿ ಬುಧವಾರ ರಾತ್ರಿ ಮಂಡಿವಾಳ ಮಾಚೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ನಡೆದ ಕ್ರಿಕೆಟ್ ಟೂರ್ನಾಮೆಂಟ್‌ನಲ್ಲಿ ಪ್ರಥಮ ಸ್ಥಾನಗಳಿಸಿದ ತ್ರಿಪುರಾಂತ ಜೂನಿಯರ್ ಪ್ಲೇಬಾಯ್ಸ್ ತಂಡಕ್ಕೆ 11,000 ರೂ. ನಗದು ಬಹುಮಾನ ವಿತರಿಸಲಾಯಿತು. ಮಹಾಲಿಂಗಪುರ, ರಾಜಸ್ಥಳಿಯ ಮುಖಂಡರು ಇದ್ದರು.

Scanned with OKEN Scanner

ತಾಂಬೋಲನ ಶ್ರೀ ನುಡಿ | ತ್ರಿಪುರಾಂತ ಶ್ರೀ ಮಡಿವಾಳ ಮಾಚೇಶ್ವರ ಜಾತ್ರೋತ್ಸವ

ಕಾಯಕವೇ ಕೈಲಾಸ ತತ್ವ ಪಾಲಿಸಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ವಿಶ್ವಗುರು ಬಸವಣ್ಣನವರ ಕಾಯಕವೇ ಕೈಲಾಸ ತತ್ವವನ್ನು ಪಾಲಿಸಿದರೆ ಜೀವನದಲ್ಲಿ ಸಾರ್ಥಕತೆ ಕಾಣಲು ಸಾಧ್ಯವಾಗುತ್ತದೆ ಎಂದು ತಾಂಬೋಲನ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ ನುಡಿದರು.

ತ್ರಿಪುರಾಂತನಲ್ಲಿ ಶ್ರೀ ಮಡಿವಾಳ ಮಾಚೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ನಡೆದ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದ ಶ್ರೀಗಳು, ಮನುಷ್ಯನಿಗೆ ಹಣದ ಬೆಲೆ ಗೊತ್ತಾಗುವುದು ಪರಿಶ್ರಮದಿಂದ ಬಂದಂತಹ ಗಳಿಕೆಯಿಂದ ಮಾತ್ರ. ಆದ್ದರಿಂದ, ಎಲ್ಲರೂ ಹಣದ ಮಹತ್ವವನ್ನರಿತು ಕಾಯಕದಲ್ಲಿ ತೊಡಗಬೇಕು. ನಮ್ಮ ಪ್ರಾಮಾಣಿಕ ಕಾಯಕದಲ್ಲೇ ಕೈಲಾಸ ಅಡಗಿದೆ ಎಂದರು.

ಬಿಜೆಪಿ ಮುಖಂಡ ಶರಣು ಸಲಗರ ಮಾತನಾಡಿ, ಭಾರತದ ಮಣ್ಣಿಗಾಗಿ ದುಡಿದ ವೀರ ಪುರುಷರ, ಮಾತೆಯರ ಇತಿಹಾಸವನ್ನೊಳಗೊಂಡ ನಾಟಕಗಳು ಹೆಚ್ಚು ಹೆಚ್ಚು ಪ್ರದರ್ಶನಗೊಳ್ಳುವುದು ಇಂದಿನ ದಿನಗಳಲ್ಲಿ ಅಗತ್ಯವಾಗಿದೆ ಎಂದರು.

ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು ನೇತೃತ್ವ ವಹಿಸಿದ್ದರು. ಜಾತ್ರಾ ಸಮಿತಿಯ ಅಧ್ಯಕ್ಷ ಬಾಬು ಬಿರಾದಾರ, ಬಸವಲಿಂಗಪ್ಪ ರಾಜೋಳೆ, ಸಾಯಬಣ್ಣ, ರಾಜಕುಮಾರ ಸುಗುರೆ, ಗುಂಡಪ್ಪ ಬಿರಾದಾರ, ಹಣಮಂತಪ್ಪ ಬೊಕ್ಕೆ, ನಗರಸಭೆ ಸದಸ್ಯರಾದ ಎಂ.ಡಿ. ಸಫೀರುದ್ದಿನ ಅಹ್ಮದ, ಲಲಿತಾಬಾಯಿ ಡಾಂಗೆ, ಮಲ್ಲಿಕಾರ್ಜುನ್ ಬೊಕ್ಕೆ ಇತರರಿದ್ದರು.

ಬಕ್ಕಯ್ಯ ಸ್ವಾಮಿ ನಿರೂಪಣೆ ಮಾಡಿ, ವಂದಿಸಿದರು. ಬೆಂಗಳೂರಿನ ಮಾಚಿದೇವ ಸಮಿತಿ (ರಿ) ಪ್ರಕಟಿಸಿದ ಕ್ಯಾಲೆಂಡರ್‌ನ್ನು ಬಿಡುಗಡೆಗೊಳಿಸಲಾಯಿತು. ಜಾತ್ರೆ ನಿಮಿತ್ತ ಹಮ್ಮಿಕೊಂಡಿದ್ದ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಪ್ರಥಮ ಸ್ಥಾನಗಳಿಸಿದ ತ್ರಿಪುರಾಂತನ ಜ್ಯೂನಿಯರ್ ವಾಲ್ಮೀಕಿ ತಂಡದವರಿಗೆ 11,000 ರೂ. ನಗದು ಬಹುಮಾನ ವಿತರಿಸಲಾಯಿತು. ಆನಂತರ ಕಲಾವಿದರಿಂದ ಸಾಮಾಜಿಕ ನಾಟಕ ಪ್ರದರ್ಶನಗೊಂಡಿತ್ತು.



ಬಸವಕಲ್ಯಾಣದ ತ್ರಿಪ್ಮರಾಂತನಲ್ಲಿ ಶ್ರೀ ಮಡಿವಾಳ ಮಾಚೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ನಡೆದ ಕಾರ್ಯಕ್ರಮವನ್ನು ಶ್ರೀ ವಿಜಯಕುಮಾರ ಸ್ವಾಮೀಜಿ ಉದ್ಘಾಟಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು, ಬಿಜೆಪಿ ಮುಖಂಡ ಶರಣು ಸಲಗರ, ಬಾಬು ಎಂ. ಬಿರಾದಾರ, ಲಲಿತಾಬಾಯಿ ಡಾಂಗೆ, ಮಲ್ಲಿಕಾರ್ಜುನ್ ಬೊಕ್ಕೆ, ಬಸವಲಿಂಗಪ್ಪ ರಾಜೋಳೆ, ಸಾಯಬಣ್ಣ ಇತರರಿದ್ದರು.

ಶ್ರೀ ಮಡಿವಾಳ ಮಾಚೇಶ್ವರ ಅದ್ದೂರಿ ಜಾತ್ರೆ

ತ್ರಿಪುರಾಂತನಲ್ಲಿ ಶ್ರೀ ಮಡಿವಾಳ ಮಾಚೇಶ್ವರ ಜಾತ್ರಾ ಮಹೋತ್ಸವದ ಗುರುವಾರ ತ್ರಿಪುರಾಂತ ಕೆರೆ ಪರಿಸರದಲ್ಲಿ ಅಗ್ನಿಪೂಜೆ ಹಾಗೂ ಅಗ್ನಿ ಪ್ರವೇಶ ಕಾರ್ಯಕ್ರಮ ಜರುಗಿತು. ತ್ರಿಪುರಾಂತ, ನಗರ ಸೇರಿ ಎಲ್ಲೆಡೆಯಿಂದ ಆಗಮಿಸಿದ ಅಪಾರ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು.

ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಗ್ನಿ ಪೂಜೆ ನೆರವೇರಿಸಿದರು. ನಂತರ ಭಕ್ತರು ಭಕ್ತಿ-ಶ್ರದ್ಧೆಯಿಂದ ಅಗ್ನಿ ಪ್ರವೇಶ ಮಾಡಿದರು. ಬಿಜೆಪಿ ಮುಖಂಡ ಶರಣು ಸಲಗರ್ ಪಲ್ಲಕ್ಕಿ ಪೂಜೆ ನೆರವೇರಿಸಿದರು. ಜಾತ್ರಾ ಮಹೋತ್ಸವದ ನಿಮಿತ್ತ ಮೂರು ದಿನಗಳ ಕಾಲ ವಿವಿಧ ಕಾರ್ಯಮಗಳು ಆಯೋಜಿಸಲಾಗಿತ್ತು. ಪಲ್ಲಕಿ ಮೆರವಣಿಗೆ, ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ನಾಟಕ ಪ್ರದರ್ಶನ ನೇರಿದಂತೆ ವಿವಿಧ ಕಾರ್ಯಕ್ರಮಗಳು ಜರುಗಿದವು. ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ಬಾಬುರಾವ ಬಿರಾದಾರ, ಬಸವರಾಜ ಮಾಲಿಪಾಟೀಲ್, ಗುಂಡಪ್ಪ ಬಿರಾದಾರ, ಮರೆಪ್ಪ ಪೊಲೀಸ್‌ಪಾಟೀಲ್, ಅಶೋಕ ರಾಜೋಳೆ, ಲಿಂಗರಾಜ ಬಿರಾದಾರ, ರಾಜು ಪಾಟೀಲ್ ತ್ರಿಪುರಾಂತ, ದೀಪಕ ಮಾಲಗಾರ, ಮಲ್ಲಿಕಾರ್ಜುನ ಚನ್ನಮಲ್ಲಿ, ಡಾ.ಬಸವರಾಜ ಸ್ವಾಮಿ, ಸಂಜು ಬಿರಾದಾರ, ಮಡಿವಾಳಪ್ಪ ಕಲ್ಯಾಣಿ, ಮಲ್ಲಿಕಾರ್ಜುನ ರಾಜೋಳೆ,ಸಂಗಮೇಶ ಮುಚಳಂಬೆ, ಕಾರ್ತಿಕ ಬಿರಾದಾರ, ನಾಗರಾಜ ಸ್ವಾಮಿ ಇತರರಿದ್ದರು.



ಬಸವಕಲ್ಯಾಣದ ತ್ರಿಪುರಾಂತನಲ್ಲಿ ಶ್ರೀ ಮಡಿವಾಳ ಮಾಚೇಶ್ವರ ಜಾತ್ರಾಮಹೋತ್ಸವ ನಿಮಿತ್ತ ಪಲ್ಲಕಿ ಮೆರವಣಿಗೆ ನಡೆದ ನಂತರ ಅಗ್ನಿ ಪೂಜೆ ಮತ್ತು ಅಗ್ನಿ ಪ್ರವೇಶದ ವೇಳೆ ಸೇರಿರುವ ಭಕ್ತರ ಸಮೂಹ.



ಬಸವಕಲ್ಯಾಣ: ನಗರದ ಮಾತಾ ಮಹಾದೇವಿ ಕಲ್ಯಾಣ ಮಂಟಪದಲ್ಲಿ ರವಿವಾರ ನಡೆದ ತತ್ವಜ್ಞಾನಿ ಶ್ರೀ ಮಹಾಯೋಗಿ ವೇಮನರ 608ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು.

VIJAYAVANI » KALABURAGI
ಭಾನುವಾರ 17 ಜನವರಿ 2020
17 JANUARY 2020
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

Scanned with OKEN Scanner

ತ್ರಿಪುರಾಂತ ಮಡಿವಾಳ ಮಾಚೇಶ್ವರ ಜಾತ್ರಾ ಮಹೋತ್ಸವ

ಕಾಯಕವೇ ಕೈಲಾಸ ತತ್ವ ಪಾಲಿಸಿ

ವಿಕ ಸುದ್ದಿಲೋಕ ಬಸವಕಲ್ಯಾಣ

ಕಾಯಕವೇ ಕೈಲಾಸ ತತ್ವ ಪಾಲಿಸಿದರೆ ಜೀವನುದ್ಧಾರ. ವಿಶ್ವಗುರು ಬಸವಣ್ಣನವರ ಕಾಯಕವೇ ಕೈಲಾಸ ತತ್ವವನ್ನು ಪಾಲಿಸಿದರೆ ಜೀವನ ಸಾರ್ಥಕತೆ ಪಡೆದುಕೊಳ್ಳುತ್ತದೆ ಎಂದು ತಾಂಬೋಳನ ಷಣ್ಮುಖ ಶಿವಯೋಗಿ ಮಠದ ವಿಜಯಕುಮಾರ ಮಹಾಸ್ವಾಮೀಜಿ ಹೇಳಿದರು.

ಬುಧವಾರ ರಾತ್ರಿ ತ್ರಿಪುರಾಂತನ ಮಡಿವಾಳ ಮಾಚೇಶ್ವರ ಜಾತ್ರಾ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದ ಶ್ರೀಗಳು, ಮನುಷ್ಯನಿಗೆ ಹಣದ ಬೆಲೆ ಗೊತ್ತಾಗುವುದು ಪರಿಶ್ರಮದಿಂದ ಬಂದಂತಹ ಗಳಿಕೆಯಿಂದ ಮಾತ್ರ. ಆದ್ದರಿಂದ, ಎಲ್ಲರೂ ಹಣದ ಮಹತ್ವ ಅರಿತು ಕಾಯಕದಲ್ಲಿ ತೊಡಗಬೇಕು. ವಾಮಮಾರ್ಗ ಹಿಡಿಯಬಾರದು. ನಮ್ಮ ಪ್ರಾಮಾಣಿಕ ಕಾಯಕದಲ್ಲೇ ಕೈಲಾಸ ಅಡಗಿದೆ. ಅನುಭವ ಮಂಟಪ ಹೊಂದಿರುವ ತ್ರಿಪುರಾಂತ ಕ್ಷೇತ್ರ ಪುಣ್ಯಭೂಮಿ ಆಗಿದೆ ಎಂದರು.

ಮುಖಂಡ ಶರಣು ಸಲಗರ ಮಾತನಾಡಿ, ಭಾರತದ ಮಣ್ಣಿಗಾಗಿ ದುಡಿದ ವೀರ ಪುರುಷರ, ಮಾತೆಯರ ಇತಿಹಾಸವನ್ನೊಳಗೊಂಡ ನಾಟಕಗಳು ಹೆಚ್ಚು ಹೆಚ್ಚು ಪ್ರದರ್ಶನಗೊಳ್ಳುವುದು ಇಂದಿನ ದಿನಗಳಲ್ಲಿ ಅಗತ್ಯವಾಗಿದೆ.

ಇಂಥ ನಾಟಗಳು ನಿಮ್ಮ ಮಕ್ಕಳ ಬೆಳವಣಿ ಗೆಗೆ ಸ್ಫೂರ್ತಿ ನೀಡುತ್ತವೆ. ಯುವಕರು ದುಶ್ಚಟಗಳ ದಾಸರಾಗದೆ ಧನಾತ್ಮಕ ಗುರಿ ಕುರಿತು ಚಿಂತಿಸಿ. ಅದನ್ನು ಮುಟ್ಟಲು ಪ್ರಯತ್ನಿಸಿ ಎಂದು ಸಲಹೆ ನೀಡಿದರು.

ಇದೇ ವೇಳೆ ಬೆಂಗಳೂರಿನ ಮಾಚಿದೇವ ಸಮಿತಿ (ರಿ) ಪ್ರಕಟಿಸಿದ ಕ್ಯಾಲೆಂಡರ್‌ನ್ನು ಗಣ್ಯರು ಬಿಡುಗಡೆಗೊಳಿಸಿದರು. ಜಾತ್ರೆ ನಿಮಿತ್ತ ಹಮ್ಮಿಕೊಂಡಿದ್ದ ಕ್ರಿಕೆಟ್ ಟೊರ್ನಾಮೆಂಟ್‌ನಲ್ಲಿ ಪ್ರಥಮ ಸ್ಥಾನಗಳಿಸಿದ ತ್ರಿಪುರಾಂತನ ಜೂನಿಯರ್ ವಾಲ್ಮೀಕಿ ತಂಡದವರಿಗೆ 11,000 ರೂ. ನಗದು ಬಹುಮಾನ ವಿತರಿಸಲಾಯಿತು. ಆನಂತರ ಕಲಾವಿದರಿಂದ ಸಾಮಾಜಿಕ ನಾಟಕ ಪ್ರದರ್ಶಿಸಲಾಯಿತು. ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು ನೇತೃತ್ವ ವಹಿಸಿದ್ದರು.

ಮಡಿವಾಳ ಮಾಚೇಶ್ವರ ಜಾತ್ರಾ ಸಮಿತಿಯ ಅಧ್ಯಕ್ಷ ಬಾಬು ಎಂ. ಬಿರಾದಾರ, ಬಸವಲಿಂಗಪ್ಪ ರಾಜೋಳೆ, ಸಾಯಬಣ್ಣ ರಾಜಕುಮಾರ ಸುಗುರೆ, ಗುಂಡಪ್ಪ ಬಿರಾದಾರ, ಹಣಮಂತಪ್ಪ ಬೊಕ್ಕೆ, ನಗರಸಭೆ ಸದಸ್ಯರಾದ ಎಂ.ಡಿ. ಸಫೀರುದ್ದಿನ ಅಹ್ಮದ, ಲಲಿತಾಬಾಯಿ ಡಾಂಗೆ, ಮಲ್ಲಿಕಾರ್ಜುನ್ ಬೊಕ್ಕೆ ಮತ್ತಿತರರು ವೇದಿಕೆ ಮೇಲಿದ್ದರು. ಬಕ್ಕಯ್ಯ ಸ್ವಾಮಿ ನಿರೂಪಿಸಿ, ವಂದಿಸಿದರು.



ಬಸವಕಲ್ಯಾಣದ ತ್ರಿಪುರಾಂತನಲ್ಲಿ ಬುಧವಾರ ರಾತ್ರಿ ನಡೆದ ಮಡಿವಾಳ ಮಾಚೇಶ್ವರ ಜಾತ್ರಾ ಮಹೋತ್ಸವ ಕಾರ್ಯಕ್ರಮವನ್ನು ತಾಂಬೋಳನ ಷಣ್ಮುಖ ಶಿವಯೋಗಿ ಮಠದ ವಿಜಯಕುಮಾರ ಮಹಾಸ್ವಾಮೀಜಿ ಉದ್ಘಾಟಿಸಿದರು. ತ್ರಿಪುರಾಂತನ ಗವಿ ಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು, ಮುಖಂಡ ಶರಣು ಸಲಗರ ಸೇರಿ ಅನೇಕರಿದ್ದರು.

ವಿಜಯ ಕರ್ನಾಟಕ ಶುಕ್ರವಾರ, 17 ಜನವರಿ 2020

ಪ್ರಜಾವಾಣಿ ಶುಕ್ರವಾರ • ಫೆಬ್ರವರಿ 21, 2020

ಬಸವಕಲ್ಯಾಣ: ಪ್ರೊ.ರುದ್ರೇಶ್ವರ ಗೋರಟಾ ಅಭಿಮತ

'ಗವಿಮಠ ಚಂಗಲಗಣ ಮಂಟಪದ ಪ್ರಣ್ಯನೆಲ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ತ್ರಿಪುರಾಂತ ಗವಿಮಠದಲ್ಲಿ 12ನೇ ಶತಮಾನಕ್ಕೂ ಪೂರ್ವದಲ್ಲಿ ಚಂಗಲಗಣ ಮಂಟಪ ಇತ್ತು ಎಂಬುವುದರ ಬಗ್ಗೆ ದಾಖಲೆಗಳು ದೊರೆತಿರುವ ಕಾರಣ ಇದು ಮಹತ್ವದ ಸ್ಥಾನವಾಗಿದೆ' ಎಂದು ಪ್ರೊ.ರುದ್ರೇಶ್ವರ ಗೋರಟಾ ಹೇಳಿದರು..

ಇಲ್ಲಿನ ತ್ರಿಪುರಾಂತ ಗವಿಮಠದಲ್ಲಿ ಗುರುವಾರ ಆಯೋಜಿಸಿದ್ದ ಅಭಿನವಶ್ರೀ ಪ್ರಕಾಶನದ ಉದ್ಘಾಟನೆ ಮತ್ತು ವೀರಶೆಟ್ಟಿ ಪಾಟೀಲ ರಚಿತ 'ವೃಸನಮುಕ್ತ ಸಮಾಜಕ್ಕಾಗಿ ಅಭಿನವ ಘನಲಿಂಗ ಜೋಳಿಗೆ' ಪುಸ್ತಕದ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

'ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಬಸವಕಲ್ಯಾಣದ ಗವಿಮಠದಲ್ಲಿ ಗುರುವಾರ 'ವೃಸನಮುಕ್ತ ಸಮಾಜಕ್ಕಾಗಿ ಅಭಿನವ ಘನಲಿಂಗ ಜೋಳಿಗೆ' ಪುಸ್ತಕ ಬಿಡುಗಡೆ ಮಾಡಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಪ್ರೊ.ರುದ್ರೇಶ್ವರ ಗೋರಟಾ ಇದ್ದರು



ಭಗವತ್ತಾದರು ಈ ಸ್ಥಳವನ್ನು ಶಿವಾಚಾರ್ಯರು ಈಚೆಗೆ ಇಲ್ಲಿ ಶಿವಶರಣರ ದೀಕ್ಷಾ ಸ್ಥಳ ಎಂದು ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಗುರುತಿಸಿದ್ದಾರೆ. ಪೀಠಾಧಿಪತಿಗಳಾದ ಕೈಗೊಂಡಿದ್ದು, ಗ್ರಂಥ ಪ್ರಕಾಶನ ಅಭಿನವ ಘನಲಿಂಗ ರುದ್ರಮುನಿ ಆರಂಭಿಸಿರುವುದು ಉತ್ತಮ ಕಾರ್ಯ' ಎಂದು ಶ್ಲಾಘಿಸಿದರು.

ಉಪನ್ಯಾಸಕ ರೇವಣಸಿದ್ದಪ್ಪ ದೊರೆಗಳ್ ಮಾತನಾಡಿ, 'ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ದುಶ್ಚಟ ಬಿಡಿಸುವುದಕ್ಕಾಗಿ ಜೋಳಿಗೆ ಯಾತ್ರೆ ಅಭಿಯಾನ ಆಯೋಜಿಸಿರುವುದು ಮಹತ್ವದ ಕಾರ್ಯ' ಎಂದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಕಲಬುರ್ಗಿಯ ಪ್ರೊ. ವೆಂಕಣ್ಣದೊಣ್ಣೆಗೌಡ ಮಾತನಾಡಿದರು.

ಕಲ್ಲೂರ ಮೃತ್ಯುಂಜಯ ಶಿವಾಚಾರ್ಯರು, ಶ್ರೀಮದ್ವೀರಶೈವ ಸದ್ಗೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಸಾಹಿತಿಗಳಾದ ವೀರಶೆಟ್ಟಿ ಪಾಟೀಲ, ನಾಗೇಂದ್ರ ಬಿರಾದಾರ, ಪ್ರಿಯಾ ಮಹೇಶ ಕರಸಂಗಾ, ಗಂಗಾಧರ ಸಾಲಿಮಠ, ನಾಗಣ್ಣ ಭೂಶೆಟ್ಟಿ ಇದ್ದರು.

Scanned with OKEN Scanner

ಸಂಯುಕ್ತ ಕರ್ನಾಟಕ
ಸಂಗಳವಾರ, 14 ಜನವರಿ 2020

ಬಸವಕಲ್ಯಾಣದಲ್ಲಿ ಸದ್ಭಾವ ಚಿಂತನ, ಮಾಸಿಕ ಹುಣ್ಣಿಮೆ ಕಾರ್ಯಕ್ರಮ

ಪ್ರತಿಯೊಬ್ಬರಿಗೂ ಆಧ್ಯಾತ್ಮಿಕ ಬೆಳಕು ಅಗತ್ಯ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಆಧ್ಯಾತ್ಮಿಕದ ಬೆಳಕು ಪಂಚ ತತ್ವಗಳಲ್ಲಿ ಅಡಗಿದೆ. ಜೀವರಾಶಿಯಲ್ಲಿ ಮನುಷ್ಯನು ಒಬ್ಬರಾಗಿದ್ದಾರೆ. ಶ್ರಮವಹಿಸಿ ದುಡಿದು ಜೀವನ ಸಾಗಿಸುವ ವ್ಯಕ್ತಿಗೆ ಆಧ್ಯಾತ್ಮಿಕ ಬೆಳಕು ಅಗತ್ಯ ಎಂದು ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಶಿಕ್ಷಕ ರಾಮಶೆಟ್ಟಿ ಬಿರಾದಾರ (ಗೋರ್ಟಾ) ಅವರ ನಿವಾಸದಲ್ಲಿ ನಡೆದ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ನಮ್ಮ ಪಯಣ ಆಧ್ಯಾತ್ಮಿಕ ಕಡೆ ಸಾಗಲಿ. ಪ್ರಕೃತಿಯ ಮಡಿಲಿನಲ್ಲಿ ಕೂಸಾಗಿರುವ ವ್ಯಕ್ತಿ ಬದುಕಿನ ಎಲ್ಲಾ ಕ್ಷೇತ್ರಗಳಿ ಮಾರ್ಗದರ್ಶನ ಮಾಡುವ ಶಕ್ತಿ ಆಧ್ಯಾತ್ಮಿಕ ಚಿಂತನೆಗೆ ಇದೆ ಎಂದರು.



ಬಸವಕಲ್ಯಾಣ ನಗರದ ಶಿಕ್ಷಕ ರಾಮಶೆಟ್ಟಿ ಬಿರಾದಾರ (ಗೋರ್ಟಾ) ಅವರ ನಿವಾಸದಲ್ಲಿ ನಡೆದ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ನಿವೃತ ಶಿಕ್ಷಕ ಬಾಬುರಾವ ಉಳ್ಳೆ, ರಾಮಶೆಟ್ಟಿ ಬಿರಾದಾರ ಗೋರ್ಟಾ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ನಿವೃತ ಶಿಕ್ಷಕ ಬಾಬುರಾವ ಉಳ್ಳೆ ಅವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ರಾಮಶೆಟ್ಟಿ ಬಿರಾದಾರ ಗೋರ್ಟಾ ಅವರು ಅಧ್ಯಕ್ಷತೆ ವಹಿಸಿದ್ದರು. ಮಧ್ವೀರಶೈವ ಸದ್ಭೋಧನ ಸಂಸ್ಥೆಯ ಅಧ್ಯಕ್ಷ ಬಸ ವಂತಪ್ಪಾ ಲವಾರೆ, ಪ್ರೊ. ದಯಾನಂದ ಶೀಲವಂತ, ಪ್ರೊ.ಸೂರ್ಯಕಾಂತ ಶೀಲವಂತ ,ಶ್ರೀಶೈಲ ವಾತಡೆ ,ಶಿವಕುಮಾರ ಮರಪಳ್ಳಿ,ನಾಗಮ್ಮಾ, ಗೌರಮ್ಮ ರಾಮಶೆಟ್ಟಿ,ಕಲ್ಪನಾ ದಯಾನಂದ ಶೀಲವಂತ, ಸುಭಾಷ, ವಿಠ್ಠಲ್.ಎಸ್.ರಾಜೋಳೆ, ಬಸವಕಾಂತ, ಸದಾನಂದ, ಜೀತಕುಮಾರ ಸೇರಿ ಅನೇಕರಿದ್ದರು. ಹಿರಿಯ ಸಂಗೀತ ಕಲಾವಿದರಾದ ನಾಗಣ್ಣಾ ಭೂಶೆಟ್ಟಿ ಹಾಗೂ ಮಲ್ಲಿಕಾರ್ಜುನ ಶೀಲವಂತ ಧನ್ನೂರಕರ್,ಭಕ್ತಿ ಸಂಗೀತ ಸೇವೆ ಮಾಡಿದರು.ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ಸ್ವಾಗತಿಸಿದರು.ಅಭಿಷೇಕ ರಾಮಣ್ಣನವರು ನಿರೂಪಿಸಿದರು. ಸಂಗಮೇಶ ಸ್ವಾಮಿ ವಂದಿಸಿದರು.

ಕರ್ನಾಟಕ ಸಂಧ್ಯಾಕಾಲ
ಮಂಗಳವಾರ, ಫೆಬ್ರವರಿ 21, 2020

ಗವಿಮಠದಲ್ಲಿ ಅಭಿನವ ಶ್ರೀ ಪ್ರಕಾಶನ ಉದ್ಘಾಟನೆ

ವ್ಯಸನಮುಕ್ತ ಸಮಾಜಕ್ಕಾಗಿ ಅಭಿನವ ಘನಲಿಂಗ ಜೋಳಿಗೆ ಪುಸ್ತಕ ಬಿಡುಗಡೆ

ಕರ್ನಾಟಕ ಸಂಧ್ಯಾಕಾಲ

ಬಸವಕಲ್ಯಾಣ : ಐತಿಹಾಸಿಕ ಸ್ಥಳವಾದ ತ್ರಿಪುರಾಂತದ ಗವಿಮಠದಲ್ಲಿ ಅಭಿನವ ಶ್ರೀ ಪ್ರಕಾಶನ ಅದ್ದೂರಿಯಾಗಿ ಕಲ್ಲೂರಿನ ಶ್ರೀ ಮೃತ್ಯುಂಜಯ ಶಿವಾಚಾರ್ಯರಿಂದ ಉದ್ಘಾಟಿಸಲಾಯಿತು.

ನಗರದ ಶ್ರೀ ಗವಿಮಠದಲ್ಲಿ ಗುರುವಾರ ಆಯೋಜಿಸಲಾಗಿದ್ದ ಅಭಿನವ ಶ್ರೀ ಪ್ರಕಾಶನ ಉದ್ಘಾಟನೆ ಮತ್ತು ವ್ಯಸನಮುಕ್ತ ಸಮಾಜಕ್ಕಾಗಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜೋಳಿಗೆ ಲೇಖಿನ ಸಂಗ್ರಹ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಉದ್ಘಾಟಿಸಿ ಮಾತನಾಡಿದರು.

ಅಭಿನವ ಶ್ರೀಗಳು ಸಮಾಜಕ್ಕಾಗಿ ಹಾಗೂ ಯುವಕರ ಒಳಿತಿಗಾಗಿ ಕೈಗೊಂಡಿರುವ ಜೋಳಿಗೆ ಪಾದಯಾತ್ರೆ ಅತ್ಯಂತ ಮಹತ್ವದ ಕಾರ್ಯವಾಗಿದೆ, ಯುವಕರು ದುಶ್ಚಟದಿಂದ ದೂರವಾಗಿ ಸದೃಢ ಆರೋಗ್ಯವಂತರಾಗಿ ಹಾಗೂ ಧರ್ಮವಂತರಾಗಿ ನೆಮ್ಮದಿಯಿಂದ ಬಾಳಿ ಬದುಕು ಬೇಕೆಂಬುದು ಅಭಿನವ ಶ್ರೀಗಳ ಸಂಕಲ್ಪವಾಗಿದೆ ಎಂದರು.



ನೇತೃತ್ವ ವಹಿಸಿದ ಪೂಜ್ಯ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ವ್ಯಸನಮುಕ್ತ ಸಮಾಜಕ್ಕಾಗಿ ಕೈಗೊಂಡಿರುವ ಜೋಳಿಗೆ ಪಾದಯಾತ್ರೆ ಮಠದಿಂದ ಕೇವಲ ಪಟ್ಟಣಕ್ಕೆ ಸೀಮಿತವಾಗದೆ ಗ್ರಾಮೀಣ ಭಾಗದಲ್ಲಿರುವ ಪ್ರತಿಯೊಂದು ಗ್ರಾಮಕ್ಕೂ, ಪ್ರತಿಯೊಬ್ಬ ಭಕ್ತರ ಮನೆ ಮನಕ್ಕೂ ಮುಟ್ಟುವಂತೆ ಹಮ್ಮಿಕೊಳ್ಳುವ ಮೂಲಕ ವ್ಯಸನಮುಕ್ತ ಸಮಾಜವನ್ನಾಗಿ ಮಾಡುವುದೇ

6ನೇ ಪುಟಕ್ಕೆ



ಬಸವಕಲ್ಯಾಣ: ಶಿವರಾತ್ರಿ ಅಂಗವಾಗಿ ನಗರದ ಶ್ರೀ ಜಗದ್ಗುರು ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸಾನ್ನಿಧ್ಯದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ , ನಡೆಯಿತು. ಶಿವಕುಮಾರ ಸ್ವಾಮಿ ಗೋರ್ಟಾ, ಪ್ರೊ। ರುದ್ರೇಶ್ವರ ಸ್ವಾಮಿ ಗೋರ್ಟಾ, ಈರಣ್ಣಾ ಶೀಲವಂತ, ಸದಾನಂದ ಕಣಜೆ, ಮಡಿವಾಳಪ್ಪಾ ಕಲ್ಯಾಣೆ, ಮಾಣಿಕಬಾಯಿ ಬಿರಾದಾರ ಇದ್ದರು.

ಕಲಬುರಗಿ ಉದಯವಾಣಿ
ಭಾನುವಾರ, ಫೆಬ್ರವರಿ 23, 2020

Scanned with OKEN Scanner

ರಾಜರತನ್ ಅಂಬೇಡ್ಕರ್ ಸಲಹೆ | ಬೆಲ್ಲಾಳ ಶರಣರ ಅಭಿನಂದನಾ ಗ್ರಂಥ ಲೋಕಾರ್ಪಣೆ

ಮನುಕುಲದ ಒಳಿತಿಗೆ ಎಲ್ಲರೂ ಶ್ರಮಿಸಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮನುಕುಲದ ಒಳಿತಿಗಾಗಿ ಮಹಾತ್ಮರು, ಮಹಾಪುರುಷರು ಜೀವನ ಸವೆಸಿದ್ದಾರೆ. ಅವರನ್ನು ಒಂದು ಜಾತಿ, ಧರ್ಮಕ್ಕೆ ಸೀಮಿತಗೊಳಿಸದೇ ಅವರ ತತ್ವ ಸಂದೇಶ ಅರ್ಥ ಮಾಡಿಕೊಳ್ಳಬೇಕಿದೆ. ಅವರು ತೋರಿಸಿದ ಮಾರ್ಗದಲ್ಲಿ ನಡೆಯಬೇಕಿದೆ ಎಂದು ಡಾ. ಅಂಬೇಡ್ಕರ್ ವಂಶಸ್ಥ ರಾಜರತನ್ ಅಂಬೇಡ್ಕರ್ ಹೇಳಿದರು.

ಬಸವ ಮಹಾಮನೆ ಸಂಸ್ಥೆಯಲ್ಲಿ ಶುಕ್ರವಾರ ಬಸವಶ್ರೀ ಸಿದ್ದರಾಮ ಬೆಲ್ಲಾಳ ಶರಣರ 71ನೇ ವರ್ಷದ ಅಭಿನಂದನಾ ಗ್ರಂಥ ಬಸವ ಬೆಳಗು ಲೋಕಾರ್ಪಣೆ ನಿಮಿತ್ತ ಆಯೋಜಿಸಿದ್ದ ಸಮಾನತಾ ಏಕತಾ ಸಮಾವೇಶದಲ್ಲಿ ಮಾತನಾಡಿದ ಅವರು, ಬುದ್ಧ, ಬಸವಣ್ಣವರು ಹಾಗೂ ಮಹಾಪುರುಷರು ಸಾರಿರುವ ವಿಚಾರಧಾರೆ ಡಾ.ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಜಾರಿಗೆ ತಂದಿದ್ದಾರೆ ಎಂದರು.

ಗುರು ಬಸವಣ್ಣನವರ ವಂಶಸ್ಥರಾದ ಆರವಿಂದ ಕುಲಕರ್ಣಿ ಮಾತನಾಡಿ, ವಿಶ್ವಕ್ಕೆ ಮೊದಲಿಗೆ ಪ್ರಜಾಧರ್ಮ ಕೊಟ್ಟವರು ವಿಶ್ವಗುರು ಬಸವಣ್ಣನವರು. ಜಾತಿ-ಹೋಗಲಾಡಿಸಲು ಕೈಯಲ್ಲಿ ಇಷ್ಟಲಿಂಗ ನೀಡುವ ಮೂಲಕ ಮನ ಪರಿವರ್ತನೆಗಾಗಿ ಶ್ರಮಿಸಿದ್ದಾರೆ. ಲಿಂಗಾಯತ ಒಂದು ಜಾತಿ ಅಲ್ಲ ಅದು ಒಂದು ಧರ್ಮ ಎಂದರು.

ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದೇವರು ಮಾತನಾಡಿ, ಬೆಲ್ಲಾಳ ಶ್ರೀಗಳು ಸಾಧನೆ ಮಹತ್ವದ್ದು, ವಚನ ವ್ಯಾಖ್ಯಾನ, ಸರಳ ವಿಶ್ಲೇಷಣೆ ಮಾಡುವ ಆಗಾಧ ಶಕ್ತಿ ಅವರಲ್ಲಿದೆ ಎಂದರು.

ಅಣದೂರ ಪೂಜ್ಯ ಭಂತೆ ವರಜ್ಯೋತಿ, ಬೀದರ್ ಗುರುನಾನಕನ ಶ್ರೀ ಗ್ಯಾನಿ ದರ್ಬಾರಸಿಂಗಜಿ, ಬೆಂಗಳೂರಿನ ಶ್ರೀ ಶಿವರುದ್ರ ಸ್ವಾಮೀಜಿ, ಶ್ರೀ ಸಿದ್ದರಾಮ ಬೆಲ್ಲಾಳ ಶರಣರು ಆಶೀರ್ವಚನ ನೀಡಿದರು. ಮುಖಂಡ ಬಸವಕಲ್ಯಾಣದ ಬಸವ ಮಹಾಮನೆ ಪರಿಸರದಲ್ಲಿ ಶ್ರೀ ಸಿದ್ದರಾಮ ಬೆಲ್ಲಾಳ ಶರಣರ 71ನೇ ವರ್ಷದ ಅಭಿನಂದನಾ ಗ್ರಂಥ ಲೋಕಾರ್ಪಣೆ ನಿಮಿತ್ತ ಏರ್ಪಡಿಸಿದ್ದ ಸಮಾನತಾ ಏಕತಾ ಸಮಾವೇಶದಲ್ಲಿ ಗುರು ಬಸವೇಶ್ವರರ ವಂಶಸ್ಥ ಆರವಿಂದ ಕುಲಕರ್ಣಿ ಹಾಗೂ ಡಾ.ಅಂಬೇಡ್ಕರ್ ವಂಶಸ್ಥ ರಾಜರತನ್ ಅಂಬೇಡ್ಕರ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.



ವಿಜಯವಾಣಿ ಚಿತ್ರ

ಬಸವರಾಜ ಬುಳ್ಳಾ, ಆರ್.ಕೆ ಗಾಯಕವಾಡ ಮಾತನಾಡಿದರು.

ಶ್ರೀ ಜಗದ್ಗುರು ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ನಂಜುಂಡ ಸ್ವಾಮೀಜಿ, ಶ್ರೀ ಬಸವಪ್ರಿಯ ಅನ್ನದಾನಿ ಆಪ್ಪಣ್ಣ ಸ್ವಾಮೀಜಿ, ಶಾಸಕ ಬಿ.ನಾರಾಯಣರಾವ, ಮಾಜಿ ಸಚಿವ ಎ.ಬಿ ಮಾಲಕರೆಡ್ಡಿ, ಮಾಜಿ ಎಂಎಲ್ಸಿ ಮಾರುತಿರಾವ ಡಿ.ಮಾಲೆ, ಸಿಪಿಐ ಮಲ್ಲಿಕಾರ್ಜುನ ಯಾತನೂರ, ಮುಂಬೈನ ಗೀತಾ ಜಾವಡೇಕರ, ಮಂಗಳಾ ಭಾಗವತ್ಕರ್, ಆನಂದ ದೇವಪ್ಪ, ಶ್ರೀಕಾಂತ ಸ್ವಾಮಿ, ದಿಲೀಪ ಸಿಂಧೆ, ರವೀಚಿದ್ರ ಬೋರಾಳೆ, ದೀಪಕ ಗಾಯಕವಾಡ, ದಾವುದ ಮಂಠಾಳ, ಶ್ರೀಕಾಂತ ಕಾಂಬಳೆ ಇತರರಿದ್ದರು.

ಗಾಂಧೀಜಿ ಸಿ ಮೊಳಕರೆ ಪ್ರಾಸ್ತಾವಿಕ ಮಾತನಾಡಿದರು. ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ಧನರಾಜ ತಾಳಂಪಳ್ಳಿ ಸ್ವಾಗತಿಸಿದರು. ಸಾಹಿತಿ ಶ್ರೀದೇವಿ ಹೂಗಾರ ನಿರೂಪಣೆ ಮಾಡಿದರು.

ಅಂಬೇಡ್ಕರ ಹಾಗೂ ಬಸವಣ್ಣನವರ ವಂಶಸ್ಥರಿಗೆ ಕರೆಯಿಸಿ ಸನ್ಮಾನಿಸುತ್ತಿರುವುದರಿಂದ ಸಮಾನತಾ ಏಕತಾ ಸಮಾವೇಶಕ್ಕೆ ಅರ್ಥ ಮತ್ತು ಮೆರಗು ಬಂದಿದೆ.

| ಶ್ರೀ ಸಿದ್ದರಾಮ ಬೆಲ್ಲಾಳ ಶರಣರು.

ಸನ್ಮಾರ್ಗದಲ್ಲಿ ಜೀವನ ಸಾಗಿಸುವಾಗ ಸಮಸ್ಯೆ ಸವಾಲುಗಳು ಬರುತ್ತವೆ. ಬಸವ ತತ್ವದ ಬಗ್ಗೆ ಅಳವಾದ ಅಧ್ಯಯನ, ಪ್ರಚಾರ, ಪ್ರಸಾರ ಮಾಡುತ್ತಿರುವ ಬೆಲ್ಲಾಳ ಶ್ರೀಗಳ ಕಾರ್ಯ ಶ್ಲಾಘನಾರ್ಹ.

| ಶ್ರೀ ಶಿವರುದ್ರ ಸ್ವಾಮೀಜಿ ಬೇಲಿ ಮಠ ಬೆಂಗಳೂರ

ಗುರು ಬಸವಣ್ಣನವರ ವಂಶಸ್ಥರಾದ ಆರವಿಂದ ಕುಲಕರ್ಣಿ ಹಾಗೂ ಮುಂಬೈನ ಡಾ.ಅಂಬೇಡ್ಕರ ವಂಶಸ್ಥರಾದ ರಾಜರತನ ಅಂಬೇಡ್ಕರ್ ಮತ್ತು ಮಾಜಿ ಸಚಿವ ಎ.ಬಿ ಮಾಲಕರೆಡ್ಡಿ ಅವರನ್ನು ಸತ್ಕರಿಸಲಾಯಿತು. ಬಸವ ಬೆಳಗು ಅಭಿನಂದನಾ ಗ್ರಂಥ ಲೋಕಾರ್ಪಣೆಗೊಳಿಸಲಾಯಿತು. ವಿವಿಧ ಕ್ಷೇತ್ರದ 71 ಮಹನೀಯರನ್ನು ಸತ್ಕರಿಸಲಾಯಿತು.

ಶನಿವಾರ 25 ಜನವರಿ 2020
25 JANUARY 2020

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI

ಸ್ವಾಮಿ ವಿವೇಕಾನಂದರ ಜಯಂತ್ಯುತ್ಸವ ರಾಷ್ಟ್ರೀಯ ಯುವ ಸಪ್ತಾಹದ ಸಮಾರೋಪ

ಯುವಕರ ಶಕ್ತಿ ಜಾಗೃತಿಗೊಳ್ಳಲಿ



ಬಸವಕಲ್ಯಾಣ ನಗರದ ಎಸ್‌ಎಸ್‌ಕೆಬಿ ಕಾಲೇಜಿನಲ್ಲಿ ಗುರುವಾರ ನಡೆದ ಸ್ವಾಮಿ ವಿವೇಕಾನಂದ ಅವರ ಜಯಂತ್ಯುತ್ಸವ ರಾಷ್ಟ್ರೀಯ ಯುವ ಸಪ್ತಾಹದ ಸಮಾರೋಪ ಹಾಗೂ ನೇತಾಜಿ ಸುಭಾಷಚಂದ್ರ ಬೋಸ್ ಜಯಂತಿ ಕಾರ್ಯಕ್ರಮದಲ್ಲಿ ತಹಸಿಲ್ದಾರ ಸಾವಿತ್ರಿ ಶರಣು ಸಲಗರ ಮಾತನಾಡಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸೇರಿದಂತೆ ಮತ್ತಿತರು ಇದ್ದರು.

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ನವ ಭಾರತದ ಕನಸು ಸಾಕಾರಗೊಳಿಸಲು ಇಂದಿನ ಯುವ ಶಕ್ತಿ ಜಾಗೃತವಾಗಬೇಕು ಎಂದು ತಹಸೀಲ್ದಾರ ಸಾವಿತ್ರಿ ಶರಣು ಸಲಗರ ಹೇಳಿದರು.

ನಗರದ ಎಸ್‌ಎಸ್‌ಕೆಬಿ ಕಾಲೇಜಿನಲ್ಲಿ ಗುರುವಾರ ಭಾರತ ಸರಕಾರದ ನೆಹರು ಯುವ ಕೇಂದ್ರ, ಸ್ಥಳಿಯ ಎಸ್.ಎಸ್.ಕೆ ಬಸವೇಶ್ವರ ಪದವಿ ಹಾಗೂ ಸ್ನಾತಕೋತ್ತರ ಮಹಾ ವಿದ್ಯಾಲಯ, ಸ್ವಾಮಿ ವಿವೇಕಾನಂದ ಯುವ ಶಕ್ತಿ ಕೇಂದ್ರ ಕಾಳಸರತುಗಾಂವ ಹಾಗೂ ಭಾರತ ಯುತ್ ವೆಲಫೇರ್ ಏಜ್ಯುಕೇಷನ್ ಆ್ಯಂಡ್ ರೂರಲ್ ಡೆವಲಪ ಮೆಂಟ್ ಸೂಸೈಟಿಗಳ ಸಹಯೋಗದಲ್ಲಿ ಸ್ವಾಮಿ ವಿವೇಕಾನಂದ ಅವರ 157ನೇ ಜಯಂತ್ಯುತ್ಸವ ನಿಮಿತ್ತ ರಾಷ್ಟ್ರೀಯ ಯುವ ಸಪ್ತಾಹದ ಸಮಾರೋಪ ಹಾಗೂ ನೇತಾಜಿ ಸುಭಾಷಚಂದ್ರ ಬೋಸ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬ್ರಹ್ಮಾಕುಮಾರಿ ಕೇಂದ್ರದ ಪ್ರವರ್ತಕಿ ಬಿ.ಕೆ ರೇಣುಕಾ ಬೆಹನ್ ನೇತೃತ್ವ ವಹಿಸಿ ಮಾತನಾಡಿದರು ಕರ್ನಾಟಕ ಜಾನಪದ ಪರಿಷತ್ ತಾಲೂಕು ಅಧ್ಯಕ್ಷ ಡಾ.ಬಸವರಾಜ ಸ್ವಾಮಿ, ಕಾಲೇಜಿನ ಪ್ರಾಧ್ಯಾಪಕ ಕೆ.ಎಸ್ ಬಿರಾದಾರ ಮಾತನಾಡಿದರು.

ಬಿ.ಕೆ ಬೀರುಭಾಯಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಉದ್ದೇಶ ಮತ್ತು ಗುರಿ ಬಗ್ಗೆ ವಿವರಿಸಿದರು. ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಶಿವಕುಮಾರ ಸ್ವಾಮಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು.

ಕಾಲೇಜಿನ ಪ್ರಾಚಾರ್ಯ ಡಾ.ಎ.ಡಿ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು.

ಇದೇ ವೇಳೆ ಯುವ ಸಪ್ತಾಹ ನಿಮಿತ್ತ ಜಿಲ್ಲೆಯಾದ್ಯಂತ ಒಂದು ವಾರದ ಪರ್ಯಂತ ನಡೆದ ವಿವಿಧ ಸ್ಪರ್ಧೆಗಳಲ್ಲಿ ವಿಜೇತ ಯುವಜನರಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರ ವಿತರಿಸಲಾಯಿತು.

ಯುವ ಸ್ಪಂದನ ಕೇಂದ್ರದ ಪಿ. ಆರ್.ಒ ಜಯಶ್ರೀ ಮೇತ್ರೆ, ಜಿಲ್ಲೆಯ ಇತರೆ ಕಡೆಗಳಿಂದ ಆಗಮಿಸಿದ ಯುವಜನರು, ಕಾಲೇಜಿನ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕಾಲೇಜಿನ ವಿದ್ಯಾರ್ಥಿನಿ ರಶ್ಮಿ ಪ್ರಾರ್ಥನೆ ಗೀತೆ ಹಾಡಿದರು.ಪ್ರಾಧ್ಯಾಪಕಿ ಡಾ.ಲೀಲಾ ಸನಕಳ್ಳಿ ನಿರೂಪಿಸಿದರು.ಪ್ರೊ. ಬಸವರಾಜ ಬೀಳಗಿ ವಂದಿಸಿದರು.

ಮನುಷ್ಯ ಮನುಷ್ಯರಾಗಿ ಬದುಕಲು ವಿವೇಕಾನಂದರ ತ್ಯಾಗ ಅನುಕರಿಸಬೇಕು, ತಮ್ಮ ಪುಸ್ತಕಗಳ ಕವರ್ ಮೇಲೆ ಹಾಗೂ ಬಳಸುವ ಮೊಬೈಲ್‌ನ ಪ್ರೊಫೈಲ್‌ನಲ್ಲಿ ವಿವೇಕಾನಂದರಂಥ ಮಹಾತ್ಮರ ಭಾವಚಿತ್ರ ಅಳವಡಿಸಿಕೊಳ್ಳಬೇಕು. ಆಕಳು ತಾಯಿ ರೂಪದಲ್ಲಿ ಕಾಣಬೇಕು. ಹಣದಿಂದ ಖರೀದಿಸಲಾಗದ ಜ್ಞಾನ, ಆರೋಗ್ಯ, ಸೌಂದರ್ಯ ಹಾಗೂ ವ್ಯಕ್ತಿತ್ವ ನಿರ್ಮಾಣ ಮಾಡಿಕೊಂಡು ಶ್ರೇಷ್ಠ ಬದುಕು ಕಟ್ಟಿಕೊಳ್ಳಬೇಕು.

- ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು

ತ್ರಿಪುರಾಂತ ಗವಿಮಠ, ಬಸವಕಲ್ಯಾಣ

ವಿಜಯಕರ್ನಾಟಕ ಶುಕ್ರವಾರ,24 ಜನವರಿ 2020

Scanned with OKEN Scanner

ಬಸವಕಲ್ಯಾಣದಲ್ಲಿ ತತ್ವಜ್ಞಾನಿ ಮಹಾಯೋಗಿ ವೇಮನರ 608 ನೇ ಜಯಂತ್ಯುತ್ಸವ ಸಂಭ್ರಮ

ಮಲ್ಲಮ್ಮ, ವೇಮನ ರೆಡ್ಡಿ ಸಮಾಜದ ಎರಡು ಕಣ್ಣು



ಬಸವಕಲ್ಯಾಣದ ಬಸವ ಮಹಾಮನೆಯಲ್ಲಿ ಭಾನುವಾರ ಜೈ ಭಾರತ ಮಾತಾ ಸೇವಾ ಸಮಿತಿ ಹಾಗೂ ಹೇಮ ವೇಮ ರೆಡ್ಡಿ ಜನ ಸಂಘದ ವತಿಯಿಂದ ನಡೆದ ತತ್ವಜ್ಞಾನಿ ಮಹಾಯೋಗಿ ವೇಮನ ಅವರ 608ನೇ ಜಯಂತಿ ಕಾರ್ಯಕ್ರಮವನ್ನು ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಉದ್ಘಾಟಿಸಿದರು.



ಬಸವಕಲ್ಯಾಣ ನಗರದಲ್ಲಿ ಭಾನುವಾರ ಮಹಾಯೋಗಿ ವೇಮನ ಅವರ ಭಾವಚಿತ್ರದ ಮೆರವಣಿಗೆ ಅದ್ದೂರಿಯಾಗಿ ಸಾಗಿತು.

ವಿಜಯ ಸುದ್ದಿಲೋಕ ಬಸವಕಲ್ಯಾಣ

ತಾಯಿ ಹೇಮರೆಡ್ಡಿ ಮಲ್ಲಮ್ಮ ಹಾಗೂ ತತ್ವಜ್ಞಾನಿ ಮಹಾಯೋಗಿ ವೇಮನ ಅವರು ರೆಡ್ಡಿ ಸಮಾಜದ ಎರಡು ಕಣ್ಣುಗಳಾಗಿದ್ದಾರೆ. ಈ ಮಹಾತ್ಮರ ಜೀವನ ಚರಿತ್ರೆ ಅಧ್ಯಯನ ಮಾಡುವ ಮೂಲಕ ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೆಡಗಿ ಮದ್ರಿಯ ಶಾಂತ ಮಲ್ಲಿಕಾರ್ಜುನ ಪಂಡಿತಾರಾಧ್ಯ ಶಿವಾಚಾರ್ಯರು ಕರೆ ನೀಡಿದರು.

ನಗರದ ಬಸವ ಮಹಾಮನೆಯಲ್ಲಿ ಭಾನುವಾರ ಜೈ ಭಾರತ ಮಾತಾ ಸೇವಾ ಸಮಿತಿ ಹಾಗೂ ಹೇಮ-ವೇಮ ರೆಡ್ಡಿ ಜನ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ತತ್ವಜ್ಞಾನಿ ಮಹಾಯೋಗಿ ವೇಮನ ಅವರ 608ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೆಲವೇ ಅಗ್ರಗಣ್ಯ ಪಂಡಿತರಲ್ಲಿ ತಾಯಿ ಹೇಮರೆಡ್ಡಿ ಮಲ್ಲಮ್ಮ ಹಾಗೂ ತತ್ವಜ್ಞಾನಿ ಮಹಾಯೋಗಿ ವೇಮನ ಪ್ರಮುಖರು. ಇವರ ತತ್ವಗಳು ಬರೀ ರೆಡ್ಡಿ ಸಮಾಜಕ್ಕೆ ಸೀಮಿತವಾಗದೆ ಇಡೀ ಜಗತ್ತಿಗೆ ಮಾರ್ಗದರ್ಶಿಯಾಗಿವೆ. ಇಂದು ವಿಜ್ಞಾನ ತಂತ್ರಜ್ಞಾನ ಹಾಗೂ ಮಾರುಕಟ್ಟೆ ಬಹಳ ವೇಗವಾಗಿ ಬೆಳೆಯುತ್ತಿದೆ. ಆದರೆ, ನಾವು ಹೇಮರೆಡ್ಡಿ ಮಲ್ಲಮ್ಮ ಹಾಗೂ ವೇಮನ ಅವರನ್ನು ವಿಶ್ವಕ್ಕೆ ಮುಟ್ಟಿಸುವಲ್ಲಿ ರೆಡ್ಡಿ ವಿಫಲರಾಗಿದ್ದೇವೆ ಎಂದು ಕಳವಳ ವ್ಯಕ್ತಪಡಿಸಿದರು.

ರೆಡ್ಡಿ ಸಮಾಜದ ಸಂಘಟನೆ ಇನ್ನೂ ಬಲಿಷ್ಠವಾಗಬೇಕು. ಸರಕಾರದ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಕಷ್ಟದಲ್ಲಿರುವವರನ್ನು ಮೇಲೆತ್ತುವ ಕಾಯಕದಲ್ಲಿ ಸಮಾಜದ ಜನರು ತೊಡಗಬೇಕು ಎಂದು ಸಲಹೆ ನೀಡಿದರು.

ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ವೇಮನರು ಮಹಾ ತಪಸ್ವಿಯಾಗಿದ್ದರು.ಜತೆಗೆ ಸಾಹಿತಿಗಳಾಗಿ ಸಮಾಜ ಸುಧಾರಕರಾಗಿ ಕೆಲಸ ಮಾಡಿದ್ದು, ಅವರ ಬದುಕು ಅನುಕರಣೀಯವಾಗಿದೆ ಎಂದರು.

ನಿರಗುಡಿಯ ಹವಾ ಮಲ್ಲಿನಾಥ ಮುತ್ಯಾ, ರೇಕುಳಗಿಯ ಎನ್.ಬಿ ರೆಡ್ಡಿ ಗುರೂಜಿ, ಜೈ ಭಾರತ ಮಾತಾ ಸೇವಾ ಸಮಿತಿ ಹಾಗೂ ಕಲ್ಯಾಣ ಕರ್ನಾಟಕ ಹೇಮ ವೇಮ ರೆಡ್ಡಿ ಜನ ಸಂಘದ ಅಧ್ಯಕ್ಷರು ಮತ್ತು ಜಿಪಂ ಸದಸ್ಯ ಗುಂಡುರೆಡ್ಡಿ ಕಮಲಾಪುರೆ, ಹೇಮ ವೇಮ ರೆಡ್ಡಿ ಜನ ಸಂಘದ ಕಾರ್ಯಾಧ್ಯಕ್ಷ ಲಲ್ಲೇಶ ರೆಡ್ಡಿ, ಜಿಪಂ ಸದಸ್ಯ ನಿರ್ಮಲಾ ಮಾನೆಗೋಪಾಳೆ, ಮುಖಂಡ ಅರ್ಜುನ ಕನಕ, ಸಾವಿತ್ರಿ ಕರಬಸಪ್ಪ ಬಿರಾದಾರ,ಸಿದ್ರಾಮಪ್ಪಾ ಗುದಗೆ, ನಗರ ಸಭೆ ಸದಸ್ಯ ದೀಪಕ ಗುಡ್ಡಾ ನರಸಿಂಗ ರೆಡ್ಡಿ ಗದಲೇಗಾಂವ, ಶ್ರೀನಿವಾಸ ರೆಡ್ಡಿ ಇದ್ದರು.

ಅದ್ದೂರಿ ಮೆರವಣಿಗೆ

ಕಾರ್ಯಕ್ರಮಕ್ಕೂ ಮುನ್ನ ನಗರದ ರಥ ಮೈದಾನದ ಮುಂಭಾಗದಲ್ಲಿ ಜೈ ಭಾರತ ಮಾತಾ ಸೇವಾ ಸಮಿತಿ ಹಾಗೂ ಹೇಮ ವೇಮ ರೆಡ್ಡಿ ಜನ ಸಂಘದ ವತಿಯಿಂದ ನಡೆದ ತತ್ವಜ್ಞಾನಿ ಮಹಾಯೋಗಿ ವೇಮನ ಅವರ 608ನೇ ಜಯಂತಿ ನಿಮಿತ್ತ ಹೇಮ ವೇಮ ಅವರ ಭಾವಚಿತ್ರಕ್ಕೆ ಮಾಜಿ ಸಚಿವ ಗಾಲಿ ಜನಾರ್ಧನ ರೆಡ್ಡಿ ಅವರು ಹಾರ ನೀಡಿದರು.

ಸಮಾಜದ ಸಂಘಟನೆಯಲ್ಲಿ ಶಕ್ತಿ ಹಾಗೂ ಪ್ರಗತಿ ಅಡಗಿದೆ. ಸಂಘಟನೆ ಆದಾಗ ಮಾತ್ರ ಸಮಾಜ ಇನ್ನಷ್ಟು ಎತ್ತರಕ್ಕೆ ಬೆಳೆಯಲು ಸಾಧ್ಯ. ಹೀಗಾಗಿ ಸಂಘಟನೆಗೆ ಎಲ್ಲರೂ ಕೂಡಾ ಒಕ್ಕೂರಿಲಿನಿಂದ ಕೈಜೋಡಿಸಬೇಕು. ತಾಯಿ ಹೇಮರೆಡ್ಡಿ ಮಲ್ಲಮ್ಮ ಮತ್ತು ವೇಮನ ಅವರ ಜೀವನ ಚರಿತ್ರೆ ಅಳವಡಿಸಿಕೊಳ್ಳುವ ಮೂಲಕ ಅವರ ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಾವೆಲ್ಲರೂ ಸಾಗಬೇಕು.

- ಗುಂಡುರೆಡ್ಡಿ ಕಮಲಾಪುರೆ, ಜಿಪಂ ಸದಸ್ಯ

ವಿಜಯ ಕರ್ನಾಟಕ ಸೋಮವಾರ,20 ಜನವರಿ 2020



ಬಸವಕಲ್ಯಾಣ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ,ಹಾಗೂ ಜಿಪಂ ಸದಸ್ಯ ಗುಂಡುರೆಡ್ಡಿ ಅವರು ಕುಶಲೋಪರಿಯಲ್ಲಿತೊಡಗಿರುವುದು.

Scanned with OKEN Scanner

ವಿವೇಕ ತತ್ವ ಜ್ಞಾನ ಭಂಡಾರ ವೃದ್ಧಿಸುವ ಸಾಧನ



ಬಸವಕಲ್ಯಾಣ: ಹುಲಸೂರ ಪಟ್ಟಣದಲ್ಲಿ ನಡೆದ ರಾಷ್ಟ್ರೀಯ ಯುವ ಸಪ್ತಾಹ ಮತ್ತು ಯುವ ಶಾಂತಿ ದಿನಾಚರಣೆ ಕಾರ್ಯಕ್ರಮದಲ್ಲಿ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಬಸವಕಲ್ಯಾಣ: ವಿವೇಕಾನಂದರ ತತ್ವಗಳು ನಮಗೆ ದಾರಿ ತೋರುವುದರೊಂದಿಗೆ ಜ್ಞಾನ ಭಂಡಾರ ಹೆಚ್ಚಿಸುವ ಸಾಧನಗಳಾಗಿವೆ. ಜ್ಞಾನವಿಲ್ಲದ ಮನುಷ್ಯ ಪಶುವಿಗೆ ಸಮಾನ ಎಂದು ತ್ರಿಪುರಾಂತ ಗವಿಮಠದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಹುಲಸೂರ ಪಟ್ಟಣದ ಎಂಕೆಕೆಪಿ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಸ್ವಾಮಿ ವಿವೇಕಾನಂದರ 157ನೇ ಜಯಂತ್ಯುತ್ಸವ ನಿಮಿತ್ತ ನಡೆದ ರಾಷ್ಟ್ರೀಯ ಯುವ ಸಪ್ತಾಹ ಮತ್ತು ಯುವ ಶಾಂತಿ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಗತ್ತಿನ ಮುಕ್ಕಾಲು ಭಾಗ ಕೈಗಾರು ಹಾಗೂ ಮುಸಲ್ಮಾನರು ಇರುವ ಅಂಥ ಕಾಲ ಘಟ್ಟದಲ್ಲಿ ಏಕೈಕ ಹಿಂದೂ ರಾಷ್ಟ್ರವಾದ ಭಾರತದ ಶಕ್ತಿಯನ್ನು ತಮ್ಮ ಎರಡು ನುಡಿ ಮುತ್ತುಗಳಿಂದ ಜಗತ್ತಿಗೆ ಪರಿಚಯಿಸಿದವರು ವಿವೇಕಾನಂದರು. ಎಲ್ಲ ದೇಶಗಳು ಭಾರತದ ಕಡೆ ಮುಖಮಾಡಿ ನೋಡುವಂಥ, ಇಲ್ಲಿಯ ಸಂಸ್ಕೃತಿ, ಸಂಸ್ಕಾರ ಅರ್ಥ ಮಾಡಿಕೊಳ್ಳುವಂಥ ಜೀಜ್ಞಾಸೆಯನ್ನು ಪರಕಿಯರಲ್ಲಿ ಹುಟ್ಟು ಹಾಕಿದರು. ಆದರೆ ಇಂದು ನಮ್ಮ ಯುವ ಜನತೆ ಮೊಬೈಲ್‌ಗಳ ದಾಸರಾಗಿ ವಿದೇಶಿ ವಸ್ತುಗಳು, ಆಹಾರ ಪದಾರ್ಥಗಳು, ಬಟ್ಟೆ ಮತ್ತು ಜೀವನ ಶೈಲಿ ಎಲ್ಲವೂ ವಿದೇಶಿಮಯ ಮಾಡಿಕೊಂಡಿರುವುದು ದುರ್ದೈವದ ಸಂಗತಿ ಎಂದು ಕಳವಳ ವ್ಯಕ್ತ ಪಡಿಸಿದರು.

ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತ ಓಂಪ್ರಕಾಶ ರೊಟ್ಟಿ ಮಾತನಾಡಿ, ಯುವಜನರು ಚರಂಡಿ ಪಕ್ಕದಲ್ಲಿರುವ ಪಾನಿಪುರಿ, ಬೇಕರಿ, ಧಾಬಾ ಪದಾರ್ಥಗಳು ಹಾಗೂ ಮದ್ಯ, ನಶೆ ಪದಾರ್ಥಗಳನ್ನು ಸೇವಿಸಿ ಬದುಕನ್ನು ಬೀದಿಗೆ ತಂದುಕೊಂಡಿದ್ದಾರೆ. ನಾವು ವಿವೇಕಾನಂದರ ವಾರಸುದಾರರೆಂಬುದನ್ನು ಮರೆತು ಬೆಲೆಯಿಲ್ಲದ ಬದುಕು ಕಟ್ಟಿಕೊಳ್ಳುತ್ತಿದ್ದೇವೆ. ಇದು ಮುಂದುವರೆದರೆ ಮತ್ತೆ ವಿದೇಶಿಯರು ನಮ್ಮ ಮೇಲೆ ಸವಾರಿ ಮಾಡುವ ಕಾಲ ದೂರವಿಲ್ಲ ಎಂದರು. ಕಾಲೇಜಿನ ಪ್ರಾಚಾರ್ಯ ಪ್ರೊ.ಬಸವರಾಜ ಮೈನಾರೆ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಶಿವಕುಮಾರ ಸ್ವಾಮಿ ಪ್ರಾಸ್ತಾವಿಕ ಮಾತನಾಡಿದರು.

ಕರ್ನಾಟಕ ಜಾನಪದ ಪರಿಷತ್ತಿನ ಬೀದರ್ ನಗರ ಘಟಕದ ಕಾರ್ಯದರ್ಶಿ ಶ್ರೀಕಾಂತ ಪಾಟೀಲ ಸೇರಿದಂತೆ ಮತ್ತಿತರರು ಇದ್ದರು. ಉಪನ್ಯಾಸಕ ರಘು ಪ್ರಸಾದ ಸ್ವಾಗತಿಸಿದರು. ಸಿದ್ರಾಮಪ್ಪ ಬಣಕಾರ ನಿರೂಪಿಸಿದರು. ಕುಪೇಂದ್ರ ರಾಠೋಡ ವಂದಿಸಿದರು.

ಕೇಂದ್ರ ಸರ್ಕಾರದ ನೆಹರು ಯುವ ಕೇಂದ್ರ, ಬೀದರ್ ಭಾರತ ಯೂತ್ ವೆಲ್ಫೇರ್ ಎಜ್ಯುಕೇಷನ್ ಆ್ಯಂಡ್ ರೂರಲ್ ಡೆವಲಪಮೆಂಟ್ ಸೊಸೈಟಿ, ಸ್ವಾಮಿ ವಿವೇಕಾನಂದ ಯುವಶಕ್ತಿ ಕೇಂದ್ರ ಕಾಳಸರತುಗಾಂವ ಹಾಗೂ ಎಂಕೆಕೆಪಿ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯಗಳ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಲಬುರಗಿ **ಉದಯವಾಣಿ**
ರವಿವಾರ, ಜನವರಿ 19, 2020

ಕರೋನಾ ನಿಯಂತ್ರಣಕ್ಕೆ ಸ್ವಾರ್ಥಿ, ಬಸವಕಲ್ಯಾಣದ ಗವಿಮಠದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಲಿಂಗಸ್ಥೂಜೆ ನಡೆಸಿದರು. ಸಕಲ ಜೀವಾತ್ಮರಿಗೆ ಲೇಸಾಗಲೆಂದು ಪರಮಾತ್ಮನನ್ನು ಪ್ರಾರ್ಥಿಸಿಕೊಳ್ಳಲಾಗಿದೆ. ನಮ್ಮೆಲ್ಲರ ಮನೋಬಲವನ್ನು ಹೆಚ್ಚಿಸಿಕೊಂಡು, ಮಾರಕ ಕಾಯಿಲೆಯನ್ನು ಕೊನೆಗಾಣಿಸಲು ಸಪ್ತಗಿರಿ ಸಂಕಲ್ಪ ಮಾಡೋಣ ಎಂದು ತಿಳಿಸಿದ್ದಾರೆ.



ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 15 ಏಪ್ರಿಲ್ 2020
15 APRIL 2020



ಬಸವಕಲ್ಯಾಣ ನಗರದ ಹಿರೇಮಠ ಕಾಲೋನಿಯಲ್ಲಿ ಶನಿವಾರ ರಾತ್ರಿ ಜರುಗಿದ ಸಪ್ತಗಿರಿ ಸಹಕಾರ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಸಕಾರಾತ್ಮಕ ಕಾರ್ಯದಲ್ಲಿ ತೊಡಗಿ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಮನುಷ್ಯನದ್ದು ಸಾಮಾನ್ಯ ಜೀವನ. ಆದರೆ, ಆತ ಸಾಧಕ ಎನಿಸಿಕೊಂಡಾಗ ಸಮಾಜಕ್ಕೆ ಮಾದರಿ. ಜೀವನ ಇರುವವರೆಗೆ ಸಮಾಜ ಗುರುತಿಸುವಂತಹ ಸಕಾರಾತ್ಮಕ ಕೆಲಸ ಮಾಡಬೇಕು ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಹಿರೇಮಠ ಕಾಲೋನಿಯಲ್ಲಿ ಶನಿವಾರ ರಾತ್ರಿ ಆಯೋಜಿಸಿದ್ದ ಸಪ್ತಗಿರಿ ನಿರಂತರ ನಿಧಿಯ 9ನೇ ವಾರ್ಷಿಕೋತ್ಸವ ಹಾಗೂ ಸಪ್ತಗಿರಿ ಸಹಕಾರ ಸಂಘದ ಉದ್ಘಾಟನಾ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದರು.

ಹನಿ, ಹನಿ ಕೂಡಿದರೆ ಹಳ್ಳ, ಮನಸ್ಸು ಮನಸ್ಸುಗಳು ಕೂಡಿದರೆ ಒಗ್ಗಟ್ಟು ಏಕತೆಯಿದ್ದರೆ ಮಾತ್ರ ಇಂತಹ ಸಂಘ, ಸಂಸ್ಥೆಗಳು ಹುಟ್ಟುತ್ತವೆ. ಜೊತೆಗೆ ಅಭಿವೃದ್ಧಿಯೂ ಕಾಣುತ್ತವೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಬಿಜೆಪಿ ಯುವ ಮುಖಂಡ ಶರಣು ಸಲಗರ ಮಾತನಾಡಿ, ಉತ್ತಮ ಸಮಾಜ ನಿರ್ಮಾಣವಾಗಬೇಕಾದರೆ ಸ್ತ್ರೀಯರಿಗೆ ಶಿಕ್ಷಣ ಅತ್ಯಗತ್ಯ. ಸಮಾಜದಲ್ಲಿ ಪರಿವರ್ತನೆಯಾಗಬೇಕಾದದ್ದು ಮೊದಲು ಹೆಣ್ಣು ಎಂದು ಸ್ತ್ರೀ ಶಿಕ್ಷಣದ ಮಹತ್ವ ಕುರಿತು ಹೇಳಿದರು.

ಇತ್ತೀಚೆಗೆ ಉಪ ವಿಭಾಗಾಧಿಕಾರಿಯಾಗಿ ಆಯ್ಕೆಗೊಂಡ ಸಾವಿತ್ರಿ ಕೆ.ಬಿರಾದಾರ ಅವರನ್ನು ಪೂಜ್ಯರು ಸನ್ಮಾನಿಸಿದರು.

ಸಾವಿತ್ರಿ ಮಾತನಾಡಿ, ಸಾಧಿಸಲು ಅಸಾಧ್ಯವೆಂಬುವುದು ಯಾವುದು ಇಲ್ಲ, ಶ್ರದ್ಧೆ-ಶ್ರಮ ಬೇಕಷ್ಟೆ ಸಾಧನೆಗೆ ಬಡತನ ಅಡ್ಡಿಯಾಗದು. ಛೀ ಅನಿಸಿಕೊಂಡು ನೂರು ದಿನ ಬದುಕುವುದಕ್ಕಿಂತ ಲೇಸೇನಿಸಿಕೊಂಡು ಒಂದು ದಿನ ಬದುಕುವುದೇ ಶ್ರೇಷ್ಠ ಬದುಕು. ಆದ್ದರಿಂದ, ಜೀವನದಲ್ಲಿ ಗುರಿ ಇಟ್ಟುಕೊಂಡು ಬದುಕಬೇಕು. ಅದನ್ನು ಪಡೆಯಲು ನಿರಂತರ ಪ್ರಯತ್ನಿಸಬೇಕು ಎಂದರು.

ಸುಲೋಚನಾ ಕಾಳನೂರೆ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶ್ರೀದೇವಿ ಚಿರಡೆ ಪ್ರಸ್ತಾವಿಕವಾಗಿ ಮಾತನಾಡಿದರು.

ಬಸವರಾಜ ರಾಜೋಳೆ, ಸಂಜು ಕುಮಾರ ಮುಲಗೆ, ದಯಾನಂದ ಶೀಲವಂತ, ಇಂದುಮತಿ ಗಾಯಕವಾಡ, ಕವಿತಾ ಪಾಂಚಾಳ, ಮಡಿವಾಳಪ್ಪ ಮಹಾಶೆಟ್ಟಿ, ಅಂಜನ್ ಡಿ. ಮೂಲಗೆ ಇದ್ದರು. ಕಲ್ಪನಾ ಶೀಲವಂತ ಸ್ವಾಗತಿಸಿದರು. ಪ್ರಭುಲೀಲಾ ಸ್ವಾಮಿ ವಂದಿಸಿದರು.

ವಿಜಯ ಕರ್ನಾಟಕ ಮಂಗಳವಾರ,21 ಜನವರಿ 2020

Scanned with OKEN Scanner

ಸಾಹಿತಿ ಡಾ.ಸತೀಶಕುಮಾರ ಹೊಸಮನಿ ಒತ್ತಾಸೆ | ಸಸ್ತಾಪುರ ಮಠದಲ್ಲಿ ಆಧುನಿಕ ವಚನ ಸಾಹಿತ್ಯ ಸಮ್ಮೇಳನ

ಬಸವ ನಾಡಿನಲ್ಲಿ ವಚನ ವಿವಿ ಸ್ಥಾಪಿಸಿ

ಮಾರ್ಥಂಡ ಜೋಶಿ ಬಸವಕಲ್ಯಾಣ

12ನೇ ಶತಮಾನದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಕಲ್ಪಿಸಿದ ಹಾಗೂ ಸಮಾನತೆ ತತ್ವ ಸಾರಿದ ಶರಣರ ಕರ್ಮಭೂಮಿ ಬಸವಕಲ್ಯಾಣದಲ್ಲಿ ವಚನ ವಿಶ್ವವಿದ್ಯಾಲಯ ಸ್ಥಾಪನೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ 8ನೇ ಆಧುನಿಕ ವಚನ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷರಾದ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ನಿರ್ದೇಶಕ, ಸಾಹಿತಿ ಡಾ.ಸತೀಶಕುಮಾರ ಹೊಸಮನಿ ಒತ್ತಾಯಿಸಿದರು.

ಸಸ್ತಾಪುರದ ಶ್ರೀ ಯಲ್ಲಾಲಿಂಗೇಶ್ವರ ಮಠದಲ್ಲಿ ಮಂಗಳವಾರ ಆಯೋಜಿಸಿದ್ದ ಜಿಲ್ಲಾ 8ನೇ ಆಧುನಿಕ ವಚನ ಸಾಹಿತ್ಯ ಸಮ್ಮೇಳನದಲ್ಲಿ ಸರ್ವಾಧ್ಯಕ್ಷೀಯ ಭಾಷಣ ಮಾಡಿದ ಅವರು, ಕಲ್ಯಾಣದಲ್ಲಿ ವಚನ ವಿಶ್ವವಿದ್ಯಾಲಯ ಸ್ಥಾಪಿಸುವಂತೆ ಮಠಾಧೀಶರು, ವಿವಿಧ ಸಂಘಟನೆಗಳು ನಿರಂತರ ಹಕ್ಕೊತ್ತಾಯ ಮಂಡಿಸುತ್ತಿದ್ದರೂ ಸರ್ಕಾರ ಕಡೆಗಣಿಸಿರುವುದು ಸರಿಯಲ್ಲ. ಶರಣರ ಮೌಲಿಕ ವಿಚಾರಗಳು ಹೊಂದಿರುವ ವಚನಗಳು ಉತ್ತಮ, ಸಮೃದ್ಧ, ಸಶಕ್ತ ಸಮಾಜಕ್ಕೆ ಮಾರ್ಗದರ್ಶಿಯಾಗಿವೆ. ಹೀಗಾಗಿ ಸರ್ಕಾರ ವಚನ ವಿವಿ ಸ್ಥಾಪನೆಗೆ ಆದ್ಯತೆ ನೀಡುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

» ವಚನಗಳು ಉತ್ತಮ, ಸಮೃದ್ಧ ಹಾಗೂ ಸಶಕ್ತ ಸಮಾಜ ನಿರ್ಮಿಸುವ ಪ್ರೇರಕ ಶಕ್ತಿಯಾಗಿವೆ

ವಿಶ್ವ ಸಾಹಿತ್ಯ ಲೋಕದಲ್ಲಿ ವಚನ ಸಾಹಿತ್ಯವು ವಿಶಿಷ್ಟ ಸ್ಥಾನಮಾನ ಪಡೆದಿದೆ. ವಚನಪೂರ್ವದ ಸಾಹಿತ್ಯವು ಪಂಡಿತ-ಪುರೋಹಿತರ ಆರಮನೆ ಸ್ವತ್ತಾಗಿತ್ತು. ರಾಜ-ಮಹಾರಾಜರನ್ನು ವೈಭವೀಕರಿಸುವಲ್ಲಿ ಇದು ಮಗ್ನವಾಗಿತ್ತು. ಅಂತಹ ಸಂದಿಗ್ಧತೆ ಸ್ಥಿತಿಯಲ್ಲಿದ್ದ ಸಾಹಿತ್ಯ ಸರಸ್ವತಿಯನ್ನು ಮುಕ್ತಗೊಳಿಸಿ ಜನಸಾಮಾನ್ಯರ ಬೆಳಕಿಗೆ ತಂದವರು ಬಸವಾದಿ ಶರಣರು. ಜನರ ಆಡು ಭಾಷೆಗೇ ದೇವಭಾಷೆಯನ್ನಾಗಿ ಮಾಡಿದ ಕೀರ್ತಿಯೂ ಶರಣರಿಗೆ ಸಲ್ಲುತ್ತದೆ ಎಂದರು.

ಇತ್ತ ಗದ್ಯವೂ ಅಲ್ಲದ, ಅತ್ತ ಪದ್ಯವೂ ಅಲ್ಲದ ವಚನಗಳು ಸಮನ್ವಯ ಸಿದ್ಧಾಂತದ ಚೌಕಟ್ಟುಗಳಾಗಿವೆ. ಮಾನವೀಯತೆ ಬೆಳಗಿಸುವ ಪ್ರೇರಕ ಶಕ್ತಿಗಳಾಗಿವೆ. ವಚನ ಸಾಹಿತ್ಯವನ್ನು ನಾಲ್ಕು ಘಟ್ಟಗಳಾಗಿ ವಿದ್ವಾಂಸರು ವಿಂಗಡಿಸಿದ್ದಾರೆ. ಬಸವಪೂರ್ವ ಯುಗ, ಬಸವಯುಗ, ಬಸವೋತ್ತರ ಯುಗದ ವಚನ ಸಾಹಿತ್ಯ ಹಾಗೂ ಆಧುನಿಕ ವಚನ ಸಾಹಿತ್ಯ ಇದರಲ್ಲಿ ಸೇರಿವೆ. ಇವೆಲ್ಲ ಘಟ್ಟ ಬೇರೆ ಬೇರೆ ಎನಿಸಿದರೂ ಸಾರ ಮಾತ್ರ ಒಂದೇ ಎಂದು ವ್ಯಾಖ್ಯಾನಿಸಿದರು.

ಹಿರಿಯ ಸಾಹಿತಿ ಕುಂ.ವೀರಭದ್ರಪ್ಪ ಉದ್ಘಾಟಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯ ಸಾನ್ನಿಧ್ಯ, ಶಿವಶರಣೆ ಮಹಾದೇವಿ ತಾಯಿ ನೇತೃತ್ವ, ಶ್ರೀ ರತ್ನಕಾಂತ ಶಿವಯೋಗಿ, ಶ್ರೀ ಡಾ.ಈಶ್ವರಾನಂದ ಸ್ವಾಮೀಜಿ, ಶ್ರೀ ಸದಾನಂದ ಅಪ್ಪ ಸಮ್ಮುಖ ವಹಿಸಿದ್ದರು. ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಮಾಣಿಕರಾವ ಬಿರಾದಾರ ಮಾತನಾಡಿದರು. ಪ್ರಮುಖರಾದ ಶರಣು ಸಲಗರ, ಬ್ರಹ್ಮಾರೆಡ್ಡಿ, ನಿರ್ಮಲಾ ಮಾನೆಗೋಪಾಲೆ, ಡಾ.ವಜ್ರಾ ಪಾಟೀಲ್, ಜಗದೇವಿ ದುಬಲಗುಂಡೆ, ಸತ್ಯಭಾಮ ಹೊಸಮನಿ, ಶಂಭುಲಿಂಗ, ಬಾಬುರೆಡ್ಡಿ ಚಾಮಾಲೆ, ನಾಗನಾಥ ಚಾಮಾಲೆ, ಸಿದ್ರಾಮಪ್ಪ ಗುದಗೆ, ಪ್ರೊ.ನಾಗೇಂದ್ರ ಢೋಲೆ, ಬಾಬುರಾವ ಹಿಂಸೆ, ಅಜಯಕುಮಾರ, ಹಣಮಂತ ಬಿರಾದಾರ ಇತರರಿದ್ದರು. ಡಾ.ಗವಿಸಿದ್ಧಪ್ಪ ಪಾಟೀಲ್ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು.

ಈವರೆಗಿನ ಸಮ್ಮೇಳನಾಧ್ಯಕ್ಷರನ್ನು ಗೌರವಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ನಡೆದ ಧ್ವಜಾರೋಹಣ ಸಂದರ್ಭದಲ್ಲಿ ಶ್ರೀ ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಬಿ.ನಾರಾಯಣರಾವ ಪಾಲ್ಗೊಂಡಿದ್ದರು.



ವಿಜಯವಾಣಿ ಚಿತ್ರಗಳು

ಬಸವಕಲ್ಯಾಣದ ಸಸ್ತಾಪುರನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಬೀದರ್ ಜಿಲ್ಲಾ 8ನೇ ಆಧುನಿಕ ವಚನ ಸಾಹಿತ್ಯ ಸಮ್ಮೇಳನವನ್ನು ಹಿರಿಯ ಸಾಹಿತಿ ಕುಂ. ವೀರಭದ್ರಪ್ಪ ಉದ್ಘಾಟಿಸಿದರು. ಶಿವಶರಣಿ ಮಹಾದೇವಿ ತಾಯಿ, ಶ್ರೀ ಅಭಿನವ ಘನಲಿಂಗ ಶಿವಾಚಾರ್ಯ, ಸಮ್ಮೇಳನ ಸರ್ವಾಧ್ಯಕ್ಷ ಡಾ.ಸತೀಶಕುಮಾರ ಹೊಸಮನಿ, ಮುಖಂಡ ಶರಣು ಸಲಗರ್, ಡಾ.ಗವಿಸಿದ್ದಪ್ಪ ಪಾಟೀಲ್, ನಿರ್ಮಲಾ ಮಾನೆಗೋಪಾಲೆ ಇತರರಿದ್ದರು.

ಪರಿವರ್ತನೆ ಸಂಕೇತ ವಚನ

ವಚನಗಳು ಸ್ವಾನುಭಾವದ ನುಡಿಯೇ ಹೊರತು, ಪಾಂಡಿತ್ಯ ಪ್ರದರ್ಶನಕ್ಕೆ ಬರೆದ ಆಡಂಬರದ ನುಡಿಗಳಲ್ಲ. ವಚನಗಳು ಸಾಮಾಜಿಕ ಪರಿವರ್ತನೆ ಸಂಕೇತ ಎಂದು ಡಾ.ಸತೀಶಕುಮಾರ ಹೊಸಮನಿ ಹೇಳಿದರು. ವ್ಯಕ್ತಿ, ಸಮಾಜ, ರಾಷ್ಟ್ರ ಕಲ್ಯಾಣ ಹಾಗೂ ವಿಶ್ವ ಕಲ್ಯಾಣವೇ ವಚನಗಳ ಗುರಿ. ಜಾತಿ, ಮತ, ಪ್ರದೇಶ, ಮೇಲು-ಕೀಳು, ಹೆಣ್ಣು-ಗಂಡು ತಾರತಮ್ಯ ಅಳಿಸುವ, ಪ್ರೀತಿ, ದಯೆ, ಕರುಣೆ, ಅನುಕಂಪ, ಭಕ್ತಿ, ಶ್ರದ್ಧೆಗಳನ್ನು ಉಕ್ಕಿಸುವ ವಿಶ್ವ ಮಾನವೀಯ ಮೌಲ್ಯಗಳ ಖಣಿ ವಚನಗಳು. ಬೊಗೆದಷ್ಟು ಮುಗಿಯದ ಅನುಭಾವ ನಿಧಿ ವಚನಗಳಾಗಿವೆ ಎಂದು ವ್ಯಾಖ್ಯಾನಿಸಿದರು. ವಚನವು ಕನ್ನಡಿಗರ ನರ, ನಾಡಿಯಲ್ಲಿ ವಿಶೇಷ ಸಂಚಲನವುಂಟು ಮಾಡುವ ಪದ. ಇದು ಪರಮ ಪಥ. ವಚನ ಎಂದರೆ ಸಾಕು, 12ನೇ ಶತಮಾನದ ಕಲ್ಯಾಣ ನಾಡಿನ ವೈಭವ ಅನಾವರಣಗೊಳ್ಳುತ್ತದೆ. ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಅಕ್ಕಮಹಾದೇವಿ, ಅಕ್ಕನಾಗಮ್ಮ ಮುಂತಾದ ಶರಣ ಸಂಕುಲ, ಕಾಯಕ-ದಾಸೋಹ, ಸರ್ವ ಸಮಾನತೆ, ಸತ್ಯ, ಶಾಂತಿ, ಸಮೃದ್ಧಿ ಮುಂತಾದ ಚಿತ್ರಣ ಮೂಡುತ್ತವೆ ಎಂದರು.

ವಚನ ಸಾಹಿತ್ಯದಿಂದ ಕನ್ನಡಕ್ಕೆ ಹೊಸ ದಿಕ್ಕು

» ಜಿಲ್ಲಾ ಆಧುನಿಕ ವಚನ ಸಾಹಿತ್ಯ ಸಮ್ಮೇಳನಕ್ಕೆ ಕುಂ. ವೀರಭದ್ರಪ್ಪ ಚಾಲನೆ

ಕನ್ನಡ ಸಾಹಿತ್ಯಕ್ಕೆ ಹೊಸ ದಿಕ್ಕು ತೋರಿಸಿದ್ದೇ ವಚನ ಸಾಹಿತ್ಯದ ರೂವಾರಿ ಬಸವಣ್ಣ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಕುಂ.ವೀರಭದ್ರಪ್ಪ ವಿಶ್ಲೇಷಿಸಿದರು. ಸಸ್ತಾಪುರ ಶ್ರೀ ಯಲ್ಲಾಲಿಂಗೇಶ್ವರ ಮಠದಲ್ಲಿ ಶ್ರೀ ಸದ್ಗುರು ಯಲ್ಲಾಲಿಂಗೇಶ್ವರ ಪ್ರಭುಗಳ 34ನೇ ಪುಣ್ಯ ಸ್ಮರಣೋತ್ಸವ, ಶಿವಶರಣಿ ಮಹಾದೇವಿ ತಾಯಿ 55ನೇ ಜನ್ಮ ದಿನಾಚರಣೆ ನಿಮಿತ್ತ ಹಮ್ಮಿಕೊಂಡ ಜಿಲ್ಲಾ 8ನೇ ಆಧುನಿಕ ವಚನ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡಿ, ಕನ್ನಡ ಸಾಹಿತ್ಯ ಶ್ರೀಮಂತಗೊಳಿಸಿರುವ ವಚನ ಸಾಹಿತ್ಯದಲ್ಲಿ ಸುಭಿಕ್ಷೆ, ವೈಚಾರಿಕತೆ ಸಮೃದ್ಧವಾಗಿದೆ ಎಂದರು. ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಮುಖ್ಯ ದೌರ್ಬಲ್ಯವೇ ಜಾತಿ ವ್ಯವಸ್ಥೆ. ಜಾತಿ ವ್ಯವಸ್ಥೆ, ಮೂಢನಂಬಿಕೆಗಳ ವಿರುದ್ಧ ವಚನ ಚಳವಳಿ ನಡೆದಿದೆ. ಧ್ವನಿ ಇಲ್ಲದವರಿಗೆ ಗಟ್ಟಿ ಧ್ವನಿಯಾದದ್ದು ವಚನ ಸಾಹಿತ್ಯ. ಶೇ.4 ಜನರಿಗಷ್ಟೇ ಸಾಹಿತ್ಯ ಸೀಮಿತವಾಗಿದ್ದ ಕಾಲಘಟ್ಟದಲ್ಲಿ ಜನಮುಖಿ, ಸಮಾಜಮುಖಿಯಾದ ವಚನ ಸಾಹಿತ್ಯ ರಚಿಸಿದವರು ಶರಣರು. ಸರಳ ಸಾಹಿತ್ಯಕ್ಕೆ ಭದ್ರ ಬುನಾದಿ ವಚನ ಸಾಹಿತ್ಯ ಎಂದು ಪ್ರತಿಪಾದಿಸಿದರು.

ಸರ್ವಾಧ್ಯಕ್ಷರ ಹಕ್ಕೊತ್ತಾಯ...

- ಆಧುನಿಕ ವಚನ ಸಾಹಿತ್ಯ ಅಕಾಡೆಮಿ ಸ್ಥಾಪಿಸಿ
- ಅನುಭವ ಮಂಟಪ ಆಧುನೀಕರಣಗೊಳಿಸಿ ಶರಣ ಸಾಹಿತ್ಯದ ವಿಚಾರ ಗ್ರಾಮೀಣ ಜನರಿಗೆ ತಲುಪಿಸಬೇಕು
- ಕಸಾಪ ಹಾಗೂ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಮೂಲಕ ಆಧುನಿಕ ವಚನ ಸಾಹಿತ್ಯದ ಕಾರ್ಯಕ್ರಮ ಏರ್ಪಡಿಸಬೇಕು
- ಬಸವಕಲ್ಯಾಣವನ್ನು ಜಿಲ್ಲಾ ಕೇಂದ್ರವಾಗಿ ಪರಿವರ್ತಿಸಬೇಕು
- ದೇಶ-ವಿದೇಶದ ನಾನಾ ವಿವಿಗಳಲ್ಲಿ ವಚನ ಅಧ್ಯಯನ ಹಾಗೂ ಸಂಶೋಧನಾ ಕೇಂದ್ರ ಸ್ಥಾಪಿಸಬೇಕು
- ಆಧುನಿಕ ವಚನ ಸಾಹಿತ್ಯ ಸಂಗ್ರಹಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಕಟಿಸಬೇಕು
- ಸಸ್ತಾಪುರದ ಶ್ರೀ ಯಲ್ಲಾಲಿಂಗೇಶ್ವರ ಮಠದ ಅಭಿವೃದ್ಧಿಗೆ ಮುಂದಾಗಬೇಕು
- 12ನೇ ಶತಮಾನದಿಂದ ಈವರೆಗಿನ ಇಡೀ ವಚನ ಸಾಹಿತ್ಯವನ್ನು ಸಮಗ್ರ ಸಂಪುಟಗಳ ರೂಪದಲ್ಲಿ ಪ್ರಕಟಿಸಬೇಕು
- ವಚನಗಳನ್ನು ಎಲ್ಲ ಅನ್ಯ ಭಾಷೆಗಳಿಗೆ ತರ್ಜುಮೆ ಮಾಡಬೇಕು
- ಆಧುನಿಕ ವಚನಕಾರರಿಗೆ ಸೂಕ್ತ ತರಬೇತಿ ನೀಡಬೇಕು

ಬಸವಕಲ್ಯಾಣದಲ್ಲಿ ವಚನ ವಿವಿ ಸ್ಥಾಪನೆ ಜತೆಗೆ ಉಳವಿ, ವಿಜಯಪುರ, ಮಹಾರಾಷ್ಟ್ರದ ಸೊಲ್ಲಾಪುರ ಹಾಗೂ ತೆಲಂಗಾಣದ ಹೈದರಾಬಾದ್‌ನಲ್ಲಿ ಶಾಖೆಗಳನ್ನು ತೆರೆಯಬೇಕು. ಕಲ್ಯಾಣ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ವಚನಗಳ ಅಧ್ಯಯನ ಪೀಠ ಸ್ಥಾಪಿಸಬೇಕು.

ಡಾ.ಸತೀಶಕುಮಾರ ಹೊಸಮನಿ
ಆಧುನಿಕ ವಚನ ಸಾಹಿತ್ಯ ಸಮ್ಮೇಳನಾಧ್ಯಕ್ಷ

ಧಾರ್ಮಿಕ ಮತ್ತು ಆಧ್ಯಾತ್ಮಿಕ ಕೇಂದ್ರಗಳಲ್ಲಿ ಸಾಹಿತ್ಯಿಕ ಕಾರ್ಯಕ್ರಮ ಆಯೋಜಿಸುವುದು ಇಂದಿನ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಪೂಜ್ಯ ಮಹಾದೇವಿ ತಾಯಿ ನೇತೃತ್ವದಲ್ಲಿ ಏಂಟು ವರ್ಷಗಳಿಂದ ಆಧುನಿಕ ವಚನ ಸಾಹಿತ್ಯ ಸಮ್ಮೇಳನ ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯ.

ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯ
ಬಸವಕಲ್ಯಾಣ ಗವಿ ಮಠ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 22 ಜನವರಿ 2020
22 JANUARY 2020

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಭಾನುವಾರ 26 ಜನವರಿ 2020
26 JANUARY 2020

ವಿಜಯವಾಣಿ ಸುದ್ದಿ ಸಂಗಾತಿ
ಸೋಮವಾರ • ಫೆಬ್ರುವರಿ 3, 2020

'ಅಣಕಲ್ ಕಥೆಗಳಲ್ಲಿ ಬಂಡಾಯದ ಧ್ವನಿ'

ಬಸವಕಲ್ಯಾಣ: 'ಮುಚೇಂದ್ರ ಅಣಕಲ್ ಅವರು ಕೋಮಿನ ಸಾಗರದಲ್ಲಿ ಜನಿಸಿ ಬದುಕಿನದ ನೋವು ಅನುಭವಿಸಿದ್ದರಿಂದ ಸಹಜವಾಗಿಯೇ ಅವರ ಕಥೆಗಳಲ್ಲಿ ಬಂಡಾಯದ ಧ್ವನಿ ಮೊಳಗಿದೆ' ಎಂದು ಸಾಹಿತಿ ಡಾ.ಸೂರ್ಯಕಾಂತ ಸುಜಾತಾ ಹೇಳಿದರು.

ಇಲ್ಲಿನ ಫುಲ್ಲಾಕೋಟೆ ಕಾಲೇಜಿನಲ್ಲಿ ಭಾನುವಾರ ನಡೆದ ಮುಚೇಂದ್ರ ಅಣಕಲ್ ಅವರ 'ಹಗಲುಗಳ್ಳರು' ಕಥಾ ಸಂಕಲನದ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮುಚೇಂದ್ರ 2 ಕವನ ಸಂಕಲನ, 3 ಕಥಾ ಸಂಕಲನ ಪ್ರಕಟಿಸಿದ್ದು, ಹಗಲುಗಳ್ಳರು ಕಥಾ ಸಂಕಲನದಲ್ಲಿ 12 ವೈವಿಧ್ಯಮಯ ಪಸ್ತುಗಳಿರುವ ಕಥೆಗಳಿದ್ದು, ಎರಡು ಕಥೆಗಳಲ್ಲಿ ಮಾತ್ರ ಯುವಸ್ಥೆಯ ವಿಡಂಬನೆಯಿದೆ' ಎಂದರು.

ಪದವಿಪೂರ್ವ ಶಿಕ್ಷಣ ಜಿಲ್ಲಾ ಉಪ ನಿರ್ದೇಶಕ ರಮೇಶ ಪಿಜಗಂ ಮಾತನಾಡಿ, 'ಸಾಹಿತ್ಯ ಕ್ಷೇತ್ರ ಬಡವಾಗಿರುವ ಈ ಭಾಗದಲ್ಲಿ ಮುಚೇಂದ್ರ ಅವರು ಪುಟ್ಟ ಕತೆಗಾರರಾಗಿ ಬೆಳೆದಿದ್ದಾರೆ' ಎಂದರು.

ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಮಾತನಾಡಿದರು.

ತಿಪ್ಪಾರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಮುಚೇಂದ್ರ ಅಣಕಲ್, ಎಸ್.ಜಿ.ಪೂರಕ, ಸಕಲ ಮಹಾಂತೇಶ ಮಂಡೇವಾಲ್, ಆಪ್ತಾ ಪಂಕಜೇಶ ಮಾತನಾಡಿದರು.

ಸುಭಾಶ್ಚಂದ್ರ ಪಾಟೀಲ, ಸಿದ್ದಪ್ಪ ಉಪಾಸೆ ಇದ್ದರು. ಕಿಶೋರ ಕುಲಕರ್ಣಿ ಸ್ವಾಗತಿಸಿದರು. ಕಲ್ಪನಾ ಬಿರಾದಾರ ನಿರೂಪಿಸಿದರು. ಅಶೋಕ ಪೂಜೆ ವಂದಿಸಿದರು.

ಅಭಿವೃದ್ಧಿ ಕಾರ್ಯಗಳಿಗೆ ಅನುದಾನ

ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಜಗದ್ಗುರು ಶ್ರೀ ಮೌನೇಶ್ವರರ 10ನೇ ವರ್ಷದ ಜಾತ್ರಾ ಮಹೋತ್ಸವ ನಿಮಿತ್ತ ನಡೆದ ಧರ್ಮ ಸಭೆಯಲ್ಲಿ ಶಾಸಕ ಬಿ.ನಾರಾಯಣರಾವ ಮಾತನಾಡಿದರು. ಶ್ರೀ ಕುಮಾರ ಸ್ವಾಮೀಜಿ, ಗವಿಮಠದ ಶ್ರೀಗಳು, ಶ್ರೀ ಸದಾನಂದ ಅಪ್ಪಗಳು ಉಪಸ್ಥಿತರಿದ್ದರು.

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ವಿಶ್ವಕರ್ಮ ಸಮಾಜದ ಜನ ಕಾಯಕಕ್ಕೆ ಮಹತ್ವ ನೀಡಿದ ಕಾಯಕ ಜೀವಿಗಳು. ದೇಶದ ಕಲೆ ಮತ್ತು ಸಂಸ್ಕೃತಿ ಉಳಿಸಿ ಬೆಳೆಸುವಲ್ಲಿ ಸಮಾಜದ ಕೊಡುಗೆ ದೊಡ್ಡದು ಎಂದು ಶಾಸಕ ಬಿ.ನಾರಾಯಣರಾವ ಹೇಳಿದರು.

ನಗರದ ಶ್ರೀ ಮೌನೇಶ್ವರ ದೇವಸ್ಥಾನದದಲ್ಲಿ ಜಗದ್ಗುರು ಶ್ರೀ ಮೌನೇಶ್ವರರ 10ನೇ ವರ್ಷದ ಜಾತ್ರಾ ಮಹೋತ್ಸವ ನಿಮಿತ್ತ ನಡೆದ ಧರ್ಮ ಸಭೆಯಲ್ಲಿ ಅವರು, ಇಲ್ಲಿಯ ಮಹಾದ್ವಾರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ದೇವಸ್ಥಾನದ ಪರಿಸರದಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ 10ಲಕ್ಷ ರೂ. ಅನುದಾನ ಮಂಜೂರಿಗೆ ಕ್ರಮ ಕೈಗೊಳ್ಳಲಾಗುವುದು ಎಂದರು. ಸಾನ್ನಿಧ್ಯ ವಹಿಸಿದ ವಿಶ್ವಕರ್ಮ ಏಕ ದಂಡಗಿ ಮಠದ ಶ್ರೀ ಕುಮಾರಸ್ವಾಮೀಜಿ ಆಶೀರ್ವಚನ ನೀಡಿ, ಭಕ್ತಿಯಲ್ಲಿ ಶಕ್ತಿ ಇದೆ. ಭಕ್ತಿ-ಶ್ರದ್ಧೆಯಿಂದ ಜಗದ್ಗುರು ಮೌನೇಶ್ವರರ ಸ್ಮರಣೆ ಮಾಡಿದರೆ ಜೀವನದಲ್ಲಿ ಸಮೃದ್ಧಿ ಮತ್ತು ಸಾರ್ಥಕತೆ ಕಾಣಲು ಸಾಧ್ಯವಿದೆ. ಪ್ರವಚನದ ಮೂಲಕ ಜ್ಞಾನ ದಾಸೋಹ ಮತ್ತು ನಿತ್ಯ ಅನ್ನ ದಾಸೋಹದ ವ್ಯವಸ್ಥೆ ಮಾಡುವ ಮೂಲಕ ಜಾತ್ರಾ ಮಹೋತ್ಸವ ಅರ್ಥಪೂರ್ಣವಾಗಿ ಆಚರಿಸಲಾಗಿದೆ ಎಂದರು.

» ಶಾಸಕ ನಾರಾಯಣರಾವ ಭರವಸೆ

» ಶ್ರೀ ಮೌನೇಶ್ವರ ಜಾತ್ರಾ ಮಹೋತ್ಸವ

ಬಿಜೆಪಿ ಮುಖಂಡ ಶರಣು ಸಲಗರ್ ಮಾತನಾಡಿದರು. ಸಸ್ತಾಪುರನ ಶ್ರೀ ಸದಾನಂದ ಅಪ್ಪಗಳು, ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು.

ತಾಪಂ ಸದಸ್ಯೆ ಶಾಂತಮ್ಮ ಪಂಚಾಳ, ನಗರಸಭೆ ಸದಸ್ಯೆ ನಿರ್ಮಲಾ ಶಿವಣಕರ್, ಪ್ರಮುಖರಾದ ಬಾಳಾಸಾಹೇಬ ಕುಲ್ಕರ್ಣಿ, ಚನ್ನಪ್ಪ ರಾಜಾಪೂರೆ, ವೀರಣ್ಣ ಪಂಚಾಳ, ವಿಶ್ವಕರ್ಮ ಸಮಾಜದ ಅಧ್ಯಕ್ಷ ತಿಪ್ಪಣ್ಣ ಪಂಚಾಳ, ಉಪಾಧ್ಯಕ್ಷ ಹರಿಶ್ಚಂದ್ರ ಪಂಚಾಳ, ಕಾಶಿನಾಥ ಪಂಚಾಳ, ಜಗನ್ನಾಥ ಪಂಚಾಳ, ಗಿರಿ ಪಂಚಾಳ, ವೀರಭದ್ರ ಪಂಚಾಳ, ವಿರೇಶ ಪಂಚಾಳ, ಆನಂದ ಪಂಚಾಳ ಉಪಸ್ಥಿತರಿದ್ದರು.

ಕಾರ್ಯದರ್ಶಿ ವಿಜಯಕುಮಾರ ಪಂಚಾಳ ಸ್ವಾಗತಿಸಿ, ವೈಜಿನಾಥ ಪಂಚಾಳ ನಿರೂಪಣೆ ಮಾಡಿದರು. ಇದಕ್ಕೂ ಮುನ್ನ ಶ್ರೀ ಮೌನೇಶ್ವರರ ಉತ್ಸವ ಮೂರ್ತಿಯ ಪಲ್ಲಕ್ಕಿ ಮೆರವಣಿಗೆ ನಗರದ ಪ್ರಮುಖ ರಸ್ತೆ ಮೂಲಕ ಸಂಸ್ಕೃತಿಕ ವೈಭವದೊಂದಿಗೆ ಜರುಗಿತು.

ಬಸವಕಲ್ಯಾಣದ ಬಸವ ಮಹಾಮನೆ ಪರಿಸರದಲ್ಲಿ ಆಯೋಜಿಸಿದ್ದ ಮಹಾಯೋಗಿ ವೇಮನ ಅವರ ರಾಜ್ಯಮಟ್ಟದ 608ನೇ ಜಯಂತ್ಯುತ್ಸವದಲ್ಲಿ ಭಾಗವಹಿಸಿದ ಜನಸ್ತೋಮ.

ಸಂಘಟನೆಯಲ್ಲೇ ಸಮಾಜದ ಪ್ರಗತಿ ಅಡಗಿದೆ. ಸಮಾಜದ ಕಾರ್ಯಚಟುವಟಿಕೆಯಲ್ಲಿ ಸ್ಪರ್ಧೆಯ ತೊಡಗಬೇಕು. ಮಹಾ ಶಿವಶರಣ ಹಡಪದ ಅಪ್ಪಣ್ಣ ಮತ್ತು ಮಹಾಯೋಗಿ ವೇಮನ ಅವರ ತತ್ವಾದರ್ಶಗಳನ್ನು ಅರಿತು ಜೀವನದಲ್ಲಿ ಅಳವಡಿಕೊಳ್ಳಲು ಪ್ರಯತ್ನಿಸಬೇಕು.

| ಸುಂಡುರಡ್ಡಿ ಜಿಪಂ ಸದಸ್ಯ

**ಹಿಂದಿನ ವಿಧಾನಸಭೆ ಚುನಾವಣೆ ವೇಳೆ ಸುಂಡುರಡ್ಡಿಗೆ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ನೀಡುವಂತೆ ಹನುಮನಾಬಾದ್ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ನೀಡುವಂತೆ ಹಠಕ್ಕೆ ಬಿದ್ದಿದ್ದರ

ರಡ್ಡಿ ಸಮಾಜದ ಏಳಿಗೆಗೆ ಯೋಜನೆ

ಮಾಜಿ ಸಚಿವ ಜನಾರ್ದನರಡ್ಡಿ ಭರವಸೆ | ಬಸವಕಲ್ಯಾಣದಲ್ಲಿ ಮಹಾಯೋಗಿ ವೇಮನ ಜಯಂತ್ಯುತ್ಸವ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ರಡ್ಡಿ ಸಮಾಜದ ಪ್ರಗತಿಗಾಗಿ ಮಹತ್ವದ ಯೋಜನೆ ಕಾರ್ಯರೂಪಕ್ಕೆ ತರಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜತೆ ಚರ್ಚಿಸುವುದಾಗಿ ಮಾಜಿ ಸಚಿವ ಗಾಲಿ ಜನಾರ್ದನರಡ್ಡಿ ಭರವಸೆ ನೀಡಿದರು.

ಬಸವ ಮಹಾಮನೆ ಪರಿಸರದಲ್ಲಿ ಜೈ ಭಾರತಮಾತಾ ಸೇವಾ ಸಮಿತಿ ಹಾಗೂ ಬೆಂಗಳೂರಿನ ಹೇಮವೇಮ ರಡ್ಡಿ ಜನ ಸಂಘದ ಸಹಯೋಗದಡಿ ಭಾನುವಾರ ಆಯೋಜಿಸಿದ್ದ ತತ್ವಜ್ಞಾನಿ ಶ್ರೀ ಮಹಾಯೋಗಿ ವೇಮನ ಅವರ ರಾಜ್ಯಮಟ್ಟದ 608ನೇ ಜಯಂತ್ಯುತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷ್ಣಾ ತೀರದ ಸೂಕ್ತ ಸ್ಥಳದಲ್ಲಿ 300 ಎಕರೆ ಜಮೀನಿನಲ್ಲಿ 111 ಅಡಿ ಎತ್ತರದ ಶಿವಲಿಂಗ, 50 ಅಡಿ ಮಹಾ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಹಾಗೂ 50 ಅಡಿ ಮಹಾಯೋಗಿ ವೇಮನ ಪ್ರತಿಮೆ ಸ್ಥಾಪನೆ ಜತೆಗೆ ನಗರದಲ್ಲಿ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕಲ್ಪಿಸಿ ಭವಿಷ್ಯ ರೂಪಿಸುವ ಯೋಜನೆ ಇದೆ ಎಂದು ತಿಳಿಸಿದರು.

» ಮಹಾಯೋಗಿ ವೇಮನ ಅವರಲ್ಲಿ ಅಧ್ಯಾತ್ಮದ ಶಕ್ತಿ

ಸಮ್ಮುಖ ವಹಿಸಿದ್ದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಆಶೀರ್ವಚನ ನೀಡಿ, ಸಮಾಜದ ಶ್ರೀಮಂತಿಕೆಗಾಗಿ ದೇವರಲ್ಲಿ ವರ ಕೇಳಿದ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಮಹಾಸಾಧ್ವಿ ಆಗಿದ್ದರು. ಮಹಾಯೋಗಿ ವೇಮನ ಅವರಲ್ಲಿ ಅಧ್ಯಾತ್ಮದ ಶಕ್ತಿ ಇತ್ತು. ಅವರ ಜಯಂತಿ ಕಾರ್ಯಕ್ರಮವನ್ನು ಐತಿಹಾಸಿಕವಾಗಿ ಆಚರಿಸಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹೆಡಗಿಮುದ್ರಾ ಶ್ರೀ ಶಾಂತಮಲ್ಲಿಕಾರ್ಜುನ ಪಂಡಿತಾರಾಧ್ಯ ಶಿವಾಚಾರ್ಯ ಆಶೀರ್ವಚನ ನೀಡಿ, ವಿಶ್ವದ ಕೆಲವೇ ಅಗ್ರಗಣ್ಯ ತತ್ವ ಜ್ಞಾನಿಗಳಲ್ಲಿ ವೇಮನ ಒಬ್ಬರು. ಲೌಕಿಕ ಮತ್ತು ಅಲೌಕಿಕ ವಿಚಾರಗಳನ್ನು ಸೂಕ್ಷ್ಮವಾಗಿ ಗ್ರಹಿಸುವ ಶಕ್ತಿ ಅವರಲ್ಲಿತ್ತು. ಮನುಕುಲದ ಕಲ್ಯಾಣಕ್ಕಾಗಿ ಅವರು ನೀಡಿದ ತತ್ವಾದರ್ಶಗಳನ್ನು ಅರಿತು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜೈ ಭಾರತ ಮಾತಾ ಸೇವಾ ಸಮಿತಿ ಹಾಗೂ ಜನ ಸಂಘದ ಕಲ್ಯಾಣ ಕರ್ನಾಟಕ ಘಟಕದ ಅಧ್ಯಕ್ಷ ಗುಂಡುರಡ್ಡಿ ಮಾತನಾಡಿದರು. ಜೈ ಭಾರತ ಮಾತಾ ಸೇವಾ ಸಮಿತಿ ಸಂಸ್ಥಾಪಕ ಅಧ್ಯಕ್ಷ ಶ್ರೀ ಹವಾ ಮಲ್ಲಿನಾಥ ಮುತ್ಯಾ ನಿರಗುಡಿ, ರೇಕುಳಗಿ ಶ್ರೀ ಎನ್.ಬಿ. ರೆಡ್ಡಿ ಗುರೂಜಿ ಸಾನ್ನಿಧ್ಯ ವಹಿಸಿದ್ದರು. ಬೆಂಗಳೂರಿನ ಹೇಮವೇಮ ಜನ ಸಂಘದ ಕಾರ್ಯಾಧ್ಯಕ್ಷ ಲಲ್ಲೇಶರಡ್ಡಿ, ನಿವೃತ್ತ ಉಪನ್ಯಾಸಕ ಎಚ್. ಕಾಶೀನಾಥರಡ್ಡಿ, ಶಿಕ್ಷಕ ಅಮೃತರಡ್ಡಿ, ಜಯಶ್ರೀರಡ್ಡಿ ನಿರ್ಣಾ, ನ್ಯಾಯವಾದಿ ವಿಜಯರಡ್ಡಿ ವಿಶೇಷ ಉಪನ್ಯಾಸ ನೀಡಿದರು.

ಜಿಪಂ ಸದಸ್ಯರಾದ ನಿರ್ಮಲಾ ಮಾನೆಗೋಪಾಲ, ನರಸಿಂಗ ಸಗರ್, ರವೀಂದ್ರರಡ್ಡಿ, ನಗರಸಭೆ ಸದಸ್ಯ ದೀಪಕ ಗುಡ್ಡಾ, ಎಸಿ ಪ್ರಭುರಡ್ಡಿ, ಡಿಸಿಪಿ ಗೋಪಾಲರಡ್ಡಿ, ಪ್ರಮುಖರಾದ ಜಯಸಿಂಗ ರಾಠೋಡ್, ವಿಜಯಕುಮಾರ ರಡ್ಡಿ, ಅರ್ಜುನ ಕನಕ, ಸಿದ್ರಾಮಪ್ಪ ಗುದಗೆ, ಶ್ರೀನಿವಾಸರಡ್ಡಿ, ಸಂಜುರಡ್ಡಿ ಯರಬಾಗ, ವೀರಾರಡ್ಡಿ ಇತರರಿದ್ದರು. ಕೆಎಎಸ್‌ನಲ್ಲಿ ಪಾಸಾಗಿ ವಿವಿಧ ಹುದ್ದೆಗಳಿಗೆ ನೇಮಕವಾದವರು ಹಾಗೂ ವಿವಿಧ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದವರು ಮತ್ತು ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಉಪನ್ಯಾಸಕ ನರಸಿಂಗರಡ್ಡಿ ಗದಲೇಗಾಂವ ನಿರೂಪಿಸಿದರು.



ವಿಜಯವಾಣಿ ಚಿತ್ರಗಳು

ಬಸವಕಲ್ಯಾಣದ ಬಸವ ಮಹಾಮನೆ ಪರಿಸರದಲ್ಲಿ ಆಯೋಜಿಸಿದ್ದ ಮಹಾಯೋಗಿ ವೇಮನ ಅವರ ರಾಜ್ಯಮಟ್ಟದ 608ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ಮಾಜಿ ಸಚಿವ ಗಾಲಿ ಜನಾರ್ಧನ ರಡ್ಡಿ ಉದ್ಘಾಟಿಸಿದರು. ಶ್ರೀ ಹವಾ ಮಲ್ಲಿನಾಥ ಮುತ್ಯಾ, ಶ್ರೀ ಎನ್.ಬಿ.ರೆಡ್ಡಿ ಗುರೂಜಿ, ಗವಿಮಠದ ಅಭಿನವ ಶ್ರೀ, ಹೆಡಗಿಮದ್ರಾ ಶ್ರೀ, ಜಿಪಂ ಸದಸ್ಯ ಗುಂಡುರಡ್ಡಿ, ಲಲ್ಲೇಶರಡ್ಡಿ, ನಿರ್ಮಲಾ ಮಾನೆಗೋಪಾಲ, ನರಸಿಂಗರಡ್ಡಿ ಗದಲೇಗಾಂವ, ರವಿಂದ್ರ ರಡ್ಡಿ ಹಾಗೂ ಉಪಸ್ಥಿತರಿದ್ದರು

ಧನ್ಯತಾಭಾವ ವ್ಯಕ್ತಪಡಿಸಿದ ರಡ್ಡಿ

ಗುರು ಬಸವಣ್ಣನವರ ಕಾರ್ಯಕ್ಷೇತ್ರ ಬಸವಕಲ್ಯಾಣದಲ್ಲಿ 108 ಅಡಿ ಎತ್ತರದ ಪ್ರತಿಮೆ ಸಮ್ಮುಖದಲ್ಲಿ ನಡೆದ ತತ್ವಜ್ಞಾನಿ ವೇಮನ ಜಯಂತ್ಯುತ್ಸವದಲ್ಲಿ ಭಾಗವಹಿಸಿರುವುದು ನನ್ನ ಪುಣ್ಯ ಎಂದು ಮಾಜಿ ಸಚಿವ ಜನಾರ್ದನರಡ್ಡಿ ಧನ್ಯತಾಭಾವ ವ್ಯಕ್ತಪಡಿಸಿದರು. ನಾಲ್ಕು ವರ್ಷದ ಹಿಂದೆ ಬೆಂಗಳೂರಿನಲ್ಲಿ ಸಮಾಜ ಆಯೋಜಿಸಿದ್ದ ಬೃಹತ್ ಕಾರ್ಯಕ್ರಮದ ಫಲವಾಗಿ ಇಂದು ರಾಜ್ಯ ಸರ್ಕಾರದಿಂದಲೇ ವೇಮನ ಜಯಂತಿ ಆಚರಿಸಲಾಗುತ್ತಿದೆ ಎಂದರು. ದೇವರ ಸ್ಮರಣೆಯಿಂದ ಜೀವನದಲ್ಲಿ ಧನ್ಯತೆ ಕಾಣಲು ಸಾಧ್ಯ. ಉಳ್ಳವರು ಶಿವಾಲಯವ ಮಾಡುವರಯ್ಯ. ವಚನ ಪ್ರಸ್ತಾಪಿಸಿದ ಅವರು, ಆತ್ಮ ಶುದ್ಧಿಯಿಂದ ಕುಳಿತಲ್ಲೇ ಭಗವಂತನನ್ನು ಕಾಣಬಹುದು ಎಂಬುದನ್ನು ಮಹಾಯೋಗಿ ವೇಮನ ಸಾರಿದ್ದಾರೆ ಎಂದರು.

ಸಾರ್ವಜನಿಕ ಸೇವೆಗೆ ಮತ್ತೆ ಸಕ್ರಿಯ

ಬದಲಾದ ಪರಿಸ್ಥಿತಿ, ಏಳು-ಬೀಳುಗಳಿಂದಾಗಿ ಸಾರ್ವಜನಿಕ ಕ್ಷೇತ್ರದಿಂದ ಅಂತರ ಕಾಯ್ದುಕೊಂಡಿರುವ ಮಾಜಿ ಸಚಿವ ಜನಾರ್ದನ ರಡ್ಡಿ ಮತ್ತೆ ಸಾರ್ವಜನಿಕ ಕ್ಷೇತ್ರದಲ್ಲಿ ಸಕ್ರಿಯರಾಗುವ ಸುಳಿವು ನೀಡಿದ್ದಾರೆ. ಬಸವ ಮಹಾಮನೆ ಪರಿಸರದಲ್ಲಿ ಜೈ ಭಾರತ ಮಾತಾ ಸೇವಾ ಸಮಿತಿ ಹಾಗೂ ಬೆಂಗಳೂರಿನ ಹೇಮವೇಮ ರಡ್ಡಿ ಜನ ಸಂಘ ಭಾನುವಾರ ಆಯೋಜಿಸಿದ್ದ ತತ್ವಜ್ಞಾನಿ ವೇಮನ ಜಯಂತ್ಯುತ್ಸವ ಉದ್ಘಾಟಿಸಿದ ಅವರು, ಸಾರ್ವಜನಿಕ ಕ್ಷೇತ್ರಕ್ಕೆ ಬರುವ ಸಂದರ್ಭ ಕೂಡಿ ಬಂದಿದೆ ಎಂದರು. ಬಸವಣ್ಣನವರು ಮತ್ತು ಹೇಮರಡ್ಡಿ ಮಲ್ಲಮ್ಮ ಆಶೀರ್ವಾದದಿಂದ 2020ರಲ್ಲಿ ಹೊಸ ಇತಿಹಾಸ ಸೃಷ್ಟಿಸುವ ಕಾರ್ಯಕ್ರಮ ರೂಪಿಸುವ ಯೋಜನೆ ಇದೆ. ಇದು ಕಲ್ಯಾಣದಲ್ಲೂ ಆಗಬಹುದು ಎಂದರು.

ಕಲ್ಯಾಣದಲ್ಲಿ ಭವ್ಯ ಮೆರವಣಿಗೆ

ಬಸವಕಲ್ಯಾಣ: ಜಯಂತ್ಯುತ್ಸವ ನಿಮಿತ್ತ ನಗರದಲ್ಲಿ ವೇಮನ ಭಾವಚಿತ್ರ ಹಾಗೂ ಪೂಜ್ಯರ್ರು ಮಾಜಿ ಸಚಿವ ಗಾಲಿ ಜನಾರ್ದನರಡ್ಡಿ ಅವರ ಭವ್ಯ ಮೆರವಣಿಗೆ ಸಾಂಸ್ಕೃತಿಕ ವೈಭವದೊಂದಿಗೆ ಜರುಗಿತು. ನಗರದ ಬಸವೇಶ್ವರ ವೃತ್ತದಿಂದ ಬಸವ ಮಹಾಮನೆವರೆಗೆ ಮುಖ್ಯ ರಸ್ತೆ ಮಾರ್ಗವಾಗಿ ತಾಳ, ಮೇಳ, ವಾದ್ಯ, ಡೊಳ್ಳು ಕಲಾ ತಂಡದ ಪ್ರದರ್ಶನದೊಂದಿಗೆ ನಡೆದ ಮೆರವಣಿಗೆಯಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು. ವೇಮನ ಅವರ ಭಾವಚಿತ್ರದ ಜತೆಗೆ ಅಲಂಕೃತ ರಥದಲ್ಲಿ ಶ್ರೀ ಹವಾ ಮಲ್ಲಿನಾಥ ಮುತ್ಯಾ ನಿರಗುಡಿ, ರೇಕುಳಗಿಯ ಶ್ರೀ ಎನ್. ಬಿ.ರೆಡ್ಡಿ ಗುರೂಜಿ ಹಾಗೂ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಮೆರವಣಿಗೆ ಜರುಗಿತು. ಇನ್ನೊಂದು ಅಲಂಕೃತ ರಥದಲ್ಲಿ ಮಾಜಿ ಸಚಿವ ಜನಾರ್ದನರಡ್ಡಿ ಅವರ ಮೆರವಣಿಗೆ ನಡೆಯಿತು. ಮೆರವಣಿಗೆಯುದ್ದಕ್ಕೂ ರೆಡ್ಡಿ ಅವರು ಜನರತ್ತ

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಸೋಮವಾರ 20 ಜನವರಿ 2020
20 JANUARY 2020

Scanned with OKEN Scanner

'ಜೋಳಿಗೆ ಪಾದಯಾತ್ರೆ'

ರುದ್ರಮುನಿ ಶ್ರೀ ಕಾರ್ಯ ಮಾದರಿ

■ ಅಭಿನವಶ್ರೀ ಪ್ರಕಾಶನ ಉದ್ಘಾಟನೆ-'ಜೋಳಿಗೆ' ಪುಸ್ತಕ ಬಿಡುಗಡೆ

ಬಸವಕಲ್ಯಾಣ: ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರು ಒಬ್ಬ ಗುರುವಾಗಿ ಹಾಗೂ ವೈದ್ಯರಾಗಿ ಸಮಾಜದ ಒಳಿತಿಗಾಗಿ ಶ್ರಮಿಸಿದನ್ನು ಕೇಳಿದ್ದೇವೆ. ಅದೇ ಮಾದರಿಯಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ವ್ಯಸನ ಮುಕ್ತ ಸಮಾಜಕ್ಕಾಗಿ ಶ್ರಮಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಕಲ್ಲೂರ ಹಿರೇಮಠ ಸಂಸ್ಥಾನದ ಶ್ರೀ ಮೃತ್ಯುಂಜಯ ಶಿವಾಚಾರ್ಯರು ಹೇಳಿದರು.

ನಗರದ ಗವಿಮಠದಲ್ಲಿ ಗುರುವಾರ ನಡೆದ ಅಭಿನವಶ್ರೀ ಪ್ರಕಾಶನ ಉದ್ಘಾಟನೆ ಮತ್ತು ವ್ಯಸನಮುಕ್ತ ಸಮಾಜಕ್ಕಾಗಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜೋಳಿಗೆ ಲೇಖನ ಸಂಗ್ರಹ ಪುಸ್ತಕ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಅಭಿನವ ಶ್ರೀಗಳು ಯುವಕರನ್ನು ದುಶ್ಚಟಗಳಿಂದ ಮುಕ್ತಿಗೊಳಿಸಲು 'ನಿಮ್ಮ ಚಟಕಗಳನ್ನು ನನ್ನ ಜೋಳಿಗೆಯಲ್ಲಿ ಹಾಕಿ' ಎಂಬ ಸಂಕಲ್ಪದಿಂದ ಪಟ್ಟಣ ಹಾಗೂ ಗ್ರಾಮೀಣ ಭಾಗಗಳಲ್ಲಿ ನಡೆಸುತ್ತಿರುವ ಜೋಳಿಗೆ ಪಾದಯಾತ್ರೆ ಇತರರಿಗೆ ಮಾದರಿ ಕಾರ್ಯವಾಗಿದೆ ಎಂದು ಬಣ್ಣಿಸಿದರು.

ನೇತೃತ್ವ ವಹಿಸಿದ್ದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಕಾವಿ ಬಟ್ಟೆ ತೊಟ್ಟಿರುವುದು ಬರಿ ಮಠ ಉದ್ಧಾರ ಮಾಡುವುದಕ್ಕೆ ಮಾತ್ರವಲ್ಲ ಜೊತೆಗೆ ಸಮಾಜದ ಉದ್ಧಾರಕ್ಕಾಗಿ. ಹೀಗಾಗಿ ವ್ಯಸನ ಮುಕ್ತ ಸಮಾಜಕ್ಕಾಗಿ ಕೈಗೊಂಡಿರುವ ಜೋಳಿಗೆ ಪಾದಯಾತ್ರೆ ಕೇವಲ ನಗರಕ್ಕೆ ಸಿಮೀತವಾಗಿರದೆ, ಬರುವ ದಿನಗಳಲ್ಲಿ ತಾಲೂಕಿನ ಪ್ರತಿಯೊಂದು ಗ್ರಾಮಗಳಲ್ಲೂ ಹಮ್ಮಿಕೊಳ್ಳುವ ಮೂಲಕ ವ್ಯಸನ ಮುಕ್ತ ಸಮಾಜವನ್ನಾಗಿ ಮಾಡುವುದೇ ಇದರ ಉದ್ದೇಶವಾಗಿದೆ. ಸಾಹಿತ್ಯ ಮರಣವಿಲ್ಲದ ಜೀವ. ಅಂತಹ ಸಾಹಿತ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅಭಿನವಶ್ರೀ ಪ್ರಕಾಶನ ಆರಂಭಿಸಲಾಗಿದೆ ಎಂದರು.

ರೇವಣಸಿದ್ಧಪ್ಪಾ ದೊರೆಗಳ್ ಮಾತನಾಡಿ, ನಾನು ಕಂಡಿರುವ ಹಾಗೆ ಅಭಿನವ ಶ್ರೀಗಳದು ಬಹಳ ಸಜ್ಜನಿಕೆ ಮತ್ತು ಸರಳ ಜೀವನವಾಗಿದೆ. ಇದು ಎಲ್ಲರಿಂದ ಸಾಧ್ಯವಿಲ್ಲ ಬಹಳ ಚಿಕ್ಕ ವಯಸ್ಸಿನಲ್ಲಿ ಸನ್ಯಾಸ ಸ್ವೀಕರಿಸಿ, ಕೇವಲ ಭಕ್ತಾದಿಗಳ ಸಹಾಯದಿಂದ ಮಠವನ್ನು ಎಲ್ಲರು ನೋಡುವಂತೆ ಅಭಿವೃದ್ಧಿಗೊಳಿಸಿರುವ ಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ ಎಂದು ಹೇಳಿದರು.



ಬಸವಕಲ್ಯಾಣ: ನಗರದ ಗವಿಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ವೀರಶೆಟ್ಟಿ ಪಾಟೀಲ ರಚಿಸಿದ 'ಜೋಳಿಗೆ' ಲೇಖನ ಸಂಗ್ರಹ ಪುಸ್ತಕವನ್ನು ಶಿಕ್ಷಕ ರೇವಣಸಿದ್ಧಪ್ಪಾ ದೊರೆಗಳ್ ಬಿಡುಗಡೆ ಮಾಡಿದರು.

ಶ್ರೀಗಳು ಉದಯೋನ್ಮುಖ ಲೇಖಕರಿಗಾಗಿ ಅಭಿನವ ಪ್ರಕಾಶನ ಉದ್ಘಾಟಿಸಿರುವುದು ಬಹಳ ಸಂತೋಷವಾಗಿದೆ. ವೀರಶೆಟ್ಟಿ ಎಂ. ಪಾಟೀಲ ಬರೆದಿರುವ ಪುಸ್ತಕ ಚಿಕ್ಕದಾಗಿದ್ದರೂ ಅದರಲ್ಲಿರುವ ಲೇಖನಗಳು ಬಹಳ ಪ್ರಮುಖವಾಗಿವೆ ಎಂದರು.

ಪ್ರೊ। ವೆಂಕಣ್ಣ ಡೊಣ್ಣೆಗೌಡ್ರು ಪುಸ್ತಕ ಕುರಿತು ಮಾತನಾಡಿ, ಗವಿಮಠಕ್ಕೆ 30 ವರ್ಷಗಳ ಹಿಂದೆ ಭೇಟಿ ನೀಡಿದಾಗ ಯಾವುದೋ ಅರಣ್ಯ ಪ್ರದೇಶಕ್ಕೆ ಬಂದಂತೆ ಭಾಸವಾಗುತ್ತಿತ್ತು. ಆದರೆ ಶ್ರೀಗಳು ಉತ್ತರಾಧಿಕಾರಿಯಾದ ನಂತರ ಕ್ರಮೇಣವಾಗಿ ಬೆಳೆಯುತ್ತ ಬಂತು. ಇಗ ಉಪನ್ಯಾಸದೊಂದಿಗೆ ದಾಸೋಹ ನಡೆಸುತ್ತಿರುವುದು ವಿಶೇಷವಾಗಿದೆ.

ರಾಜಕಾರಣಿಗಳು ಮತ್ತು ಅಧಿಕಾರಿಗಳು ದೊಡ್ಡದೊಡ್ಡ ಭಾಷಣ ಹೊಡೆದು ಹೋಗುತ್ತಾರೆ ವಿನಃ ಯುವಶಕ್ತಿ ಬಗ್ಗೆ ಕಳಕಳಿ ವ್ಯಕ್ತಪಡಿಸುವುದು ಬಹಳ ಕಡಿಮೆಯಾಗಿದೆ. ಆದರೆ ಅಭಿನವ ಶ್ರೀಗಳು ಕುಟುಂಬ ಮತ್ತು ಆರೋಗ್ಯ ಚನ್ನಾಗಿರಲಿ ಎಂಬ ಉದ್ದೇಶದಿಂದ ಕೈಗೊಂಡಿರುವ ಜೋಳಿಗೆ ಪಾದಯಾತ್ರೆಯನ್ನು ನಾವು ಮರೆಯುವಂತಿಲ್ಲ ಪುಸ್ತಕಗಳು ಸಾತ್ವಿಕರನ್ನಾಗಿ ಮಾಡುತ್ತವೆ. ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಮಾಹಿತಿಯನ್ನು ನೀಡುವ ಕೆಲಸ ಮಾಡುತ್ತವೆ ಎಂದರು.

ನಾಗೇಂದ್ರ ಬಿರಾದಾರ್ ಮಾತನಾಡಿದರು. ಪ್ರೊ।ರುದ್ರೇಶ್ವರಸ್ವಾಮಿ ಗೋರ್ಟಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಸವಂತಪ್ಪಾ ಲವಾರೆ ಅಧ್ಯಕ್ಷತೆ ವಹಿಸಿದ್ದರು. ಲೇಖಕ ವೀರಶೆಟ್ಟಿ ಎಂ.ಪಾಟೀಲ, ಮಂಜುನಾಥರೆಡ್ಡಿ ಕಿಟ್ಟಾ, ಬಸವರಾಜ ಮಠಪತಿ, ಮಲ್ಲಯ್ಯಾ ಹಿರೇಮಠ, ಮಲ್ಲಿಕಾರ್ಜುನ ಹಿರೇಮಠ, ಬಾಬುರಾವ್ ಉಳ್ಳೆ ಸೇರಿದಂತೆ ಮತ್ತಿತರರು ಇದ್ದರು. ಗಂಗಾಂಧರ ಸಾಲಿಮಠ ಸ್ವಾಗತಿಸಿದರು. ಪ್ರಿಯಾ ಕರಸಂಗೆ ನಿರೂಪಿಸಿದರು.

ಉದಯವಾಣಿ ಕಲಬುರಗಿ
ಶುಕ್ರವಾರ, ಫೆಬ್ರವರಿ 21, 2020

ವಿಜಯ ಕರ್ನಾಟಕ ಶನಿವಾರ,25 ಜನವರಿ 2020

ಬಸವ ಬೆಳಗು ಅಭಿನಂದನಾ ಗ್ರಂಥ ಲೋಕಾರ್ಪಣೆ, ಅಂಬೇಡ್ಕರ, ಬಸವಣ್ಣನವರ ವಂಶಸ್ಥರಿಗೆ ಸನ್ಮಾನ

ಇಷ್ಟಲಿಂಗಕ್ಕೆ ಜಾತಿಯ ಬಣ್ಣ ಬೇಡ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಅನೇಕ ಶರಣರು ವಚನಗಳ ಮೂಲಕ ಸಮಾಜದಲ್ಲಿನ ಜಾತಿ ಹೋಗಲಾಡಿಸಲು ಶ್ರಮಿಸಿ, ಕೈಯಲ್ಲಿ ಇಷ್ಟಲಿಂಗ ನೀಡುವ ಮೂಲಕ ಮನುಷ್ಯನ ಮನ ಪರಿವರ್ತನೆಗಾಗಿ ಶ್ರಮಿಸಿದ್ದಾರೆ. ಆದರೆ, ಇಂದು ಆ ಇಷ್ಟಲಿಂಗಕ್ಕೇ ಜಾತಿ ಕಟ್ಟಿ ಕೆಲವರು ಬೇಳೆ ಬೇಯಿಸಿ ಕೊಳ್ಳುತ್ತಿದ್ದಾರೆ ಎಂದು ಇಂಗಳೇಶ್ವರದ ಮಹಾಗುರು ಬಸವ ವಂಶಸ್ಥ ಅರವಿಂದ ಕುಲಕರ್ಣಿ ಹೇಳಿದರು.

ಇಲ್ಲಿ ಬಸವ ಮಹಾಮನೆ ಸಂಸ್ಥೆಯ ಆವರಣದಲ್ಲಿ ಶುಕ್ರವಾರ ಜರುಗಿದ ಬಸವಶ್ರೀ ಸಿದ್ದರಾಮ ಬೆಲ್ದಾಳ ಶರಣರ 71ನೇ ವರ್ಷದ ಅಭಿನಂದನ ಗ್ರಂಥ ಲೋಕಾರ್ಪಣೆ ನಿಮಿತ್ತ ಸಮಾನತಾ ಏಕತಾ ಸಮಾವೇಶದ ಎರಡನೇ ದಿನ ವಾದ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಲಿಂಗಾಯತ ಒಂದು ಜಾತಿ ಅಲ್ಲ ಅದು



ಬಸವಕಲ್ಯಾಣದ ಬಸವ ಮಹಾಮನೆ ಸಂಸ್ಥೆಯ ಆವರಣದಲ್ಲಿ ಬಸವಶ್ರೀ ಸಿದ್ದರಾಮ ಬೆಲ್ದಾಳ ಶರಣರ 71ನೇ ವರ್ಷದ ಅಭಿನಂದನ ಗ್ರಂಥ ಲೋಕಾರ್ಪಣೆ ನಿಮಿತ್ತ ಸಮಾನತಾ ಏಕತಾ ಸಮಾವೇಶದ ಎರಡನೇ ದಿನವಾದ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಇಂಗಳೇಶ್ವರದ ಮಹಾಗುರು ಬಸವ ವಂಶಸ್ಥರಾದ ಅರವಿಂದ ಕುಲಕರ್ಣಿ ಹಾಗೂ ಮುಂಬೈನ ಡಾ.ಅಂಬೇಡ್ಕರ ವಂಶಸ್ಥರಾದ ಆಯು ರಾಜರತನ ಅಂಬೇಡ್ಕರ ಅವರಿಗೆ ಸನ್ಮಾನಿಸಲಾಯಿತು. ಡಾ.ಬಸವಲಿಂಗಪಟ್ಟದ್ದೇವರು, ಆನಂದ ದೇವಪ್ಪ, ಅಣದೂರಿನ ಬೌದ್ಧ ವಿಹಾರದ ಭಂತೆ ವರಜ್ಯೋತಿ ಸೇರಿ ಅನೇಕರಿದ್ದರು.

Scanned with OKEN Scanner

ಉದಯವಾಣಿ ಕಲಬುರಗಿ
ಸೋಮವಾರ, ಫೆಬ್ರವರಿ 10, 2020

ದುಶ್ಚಟಕ್ಕೆ ಮುಕ್ತಿ ■ 'ನಿಮ್ಮ ದುಶ್ಚಟಗಳನ್ನು ನನ್ನ ಜೋಳಿಗೆಗೆ ಹಾಕಿ' ಧ್ಯೇಯ

ಶಿವಪುರ ಗ್ರಾಮದಲ್ಲಿ ಶ್ರೀಗಳ ಜೋಳಿಗೆ ಪಾದಯಾತ್ರೆ

ಬಸವಕಲ್ಯಾಣ: ಆರೋಗ್ಯಪೂರ್ಣ ಸ್ವಸ್ಥ ಸಮಾಜ ನಿರ್ಮಾಣ ಮತ್ತು ಶಾಂತಿಯುತ ಬದುಕಿಗಾಗಿ ದುಶ್ಚಟಗಳಿಂದ ದೂರವಿರಬೇಕು ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಶಿವಪುರ ಗ್ರಾಮದಲ್ಲಿ ರವಿವಾರ 'ನಿಮ್ಮ ದುಶ್ಚಟಗಳನ್ನು ನನ್ನ ಜೋಳಿಗೆಗೆ ಹಾಕಿ' ಎಂಬ ವಾಕ್ಯದೊಂದಿಗೆ ಶ್ರೀಗಳು ಹಮ್ಮಿಕೊಂಡ ಜೋಳಿಗೆ ಪಾದಯಾತ್ರೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯುವಕರ, ದುಶ್ಚಟಕ್ಕೊಳಗಾದ ವ್ಯಕ್ತಿಗಳ ಸಂಸಾರದ ಭಾಗ್ಯದ ಬಾಗಿಲು ತೆರೆಯಲು ದುಶ್ಚಟದಿಂದ ಮುಕ್ತರಾಗಬೇಕು. ಆ ಮೂಲಕ ಉತ್ತಮ ಸಮಾಜ ನಿರ್ಮಾಣ ವಾಗಬೇಕು ಎಂಬುದು ಜೋಳಿಗೆ ಪಾದಯಾತ್ರೆಯ ಉದ್ದೇಶ ವಾಗಿದೆ ಎಂದರು.

ಬಿಜೆಪಿ ಯುವ ಮುಖಂಡ ಶರಣು ಸಲಗರ, ಮಾಜಿ ಶಾಸಕ ಮಾರುತಿರಾವ್ ಮೂಳೆ ಅವರು, ಇಂದಿನ ಯುವಕರು ದುಶ್ಚಟಗಳಿಗೆ ಬಲಿಯಾಗಿ ಸಂಸಾರ ಹಾಳು ಮಾಡಿಕೊಳ್ಳದೆ ವ್ಯಸನ ಮುಕ್ತ ಗ್ರಾಮಕ್ಕಾಗಿ ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.



ಬಸವಕಲ್ಯಾಣ: ಶಿವಪುರ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಜೋಳಿಗೆ ಪಾದಯಾತ್ರೆ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು.

ಬಸವರಾಜ ಪಾಟೀಲ ಅಧ್ಯಕ್ಷತೆ ವಹಿಸಿದರು. ಜಗನ್ನಾಥ ರಜೋಳೆ, ಭೀಮರೆಡ್ಡಿ ಬುಚಲೆ, ವೀರಣ್ಣಾರಾಜೋಳೆ, ಬಾಬು ಪೊಲೀಸ್ ಪಾಟೀಲ, ರಾಜಪ್ಪ ಉಮ್ಮರ್ಗೆ, ಬಾಬು ಮೊಳಕೆರೆ, ಮಲ್ಲಿಕಾರ್ಜುನ್ ಮೆತ್ರೆ, ಶಿವಕುಮಾರ್ ಮೆತ್ರೆ, ಅನಿಲ್ ಸ್ವಾಮಿ, ಅನಿಲ್ ಉಮ್ಮಾರ್ಗೆ, ಕಾಶಿನಾಥ ರಾಜೋಳೆ ಶಿವಲಿಂಗ ಮೂಲಗೆ, ಶಿವಕುಮಾರ್ ಕುಂಬಾರ, ಉಮಾಕಾಂತ ಬಿರಾದರ್, ಸೂರ್ಯಕಾಂತ ರಾಜೊಳೆ, ಪ್ರೇಮಸಾಗರ್ ಮೂಲಗೆ, ಸಚಿನ್ ಪೆದ್ದೆ ಆನಂದ್ ಸಂಗನ ಬಸವ ವಿಜಯಕುಮಾರ ಪಾಟೀಲ, ವಿಠಲ್‌ರೆಡ್ಡಿ ಬುಚಲೆ, ಮಹದೇವ ಲೆದ್ದೆ ವಿನೋದ್ ಮೂಲಿ ಮತ್ತಿತರರು ಇದ್ದರು. ರಮೇಶ ರಾಜೊಳೆ ನಿರೂಪಿಸಿ, ವಂದಿಸಿದರು.

ನಂತರ ಗ್ರಾಮದ ಶ್ರೀ ಸಿದ್ಧಲಿಂಗೇಶ್ವರ ಕಮರಿ ಮಠದಿಂದ ಪ್ರತಿಯೊಂದು ಬಡಾವಣೆಗಳಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಜೋಳಿಗೆ ಪಾದಯಾತ್ರೆ ನಡೆಸಿದರು. ಪಾದಯಾತ್ರೆಯಲ್ಲಿ ಗ್ರಾಮಸ್ಥರು ಹಾಗೂ ವೃದ್ಧರು ತಂಬಾಕು, ಸಿಗರೇಟ್, ಗುಟಖಾ ಸೇರಿದಂತೆ ನಶೆಯ ವಸ್ತುಗಳನ್ನು ಶ್ರೀಗಳ ಜೋಳಿಗೆಯಲ್ಲಿ ಹಾಕಿ, ಜೀವನದಲ್ಲಿ ಮತ್ತೆ ದುಶ್ಚಟಗಳಿಗೆ ಅಂಟಿಕೊಳ್ಳುವುದಿಲ್ಲ ಎಂದು ಪ್ರಮಾಣ ಮಾಡಿದರು.

15ರಂದು ಯುವ ಸಂಸತ್ತು: ಪ್ರಚಾರ ರಥಕ್ಕೆ ಚಾಲನೆ

ಬಸವಕಲ್ಯಾಣ: ನೇಡಂನ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯ ವಿಕಾಸ ಅಕಾಡೆಮಿಯಿಂದ ಫೆ.15ರಂದು ನಗರದ ತೇರು ಮೈದಾನದಲ್ಲಿ 'ಕಲ್ಯಾಣ ಕರ್ನಾಟಕದ ಯುವ ಸಂಸತ್ತು ಹಾಗೂ ಯುವಕರ ಬೃಹತ್ ಸಮಾವೇಶ' ಹಮ್ಮಿಕೊಂಡಿದ್ದು ಇದರ ಪ್ರಚಾರ ರಥಕ್ಕೆ ಶನಿವಾರ ಶಾಸಕ ಬಿ.ನಾರಾಯಣರಾವ್ ಚಾಲನೆ ನೀಡಿದರು.

ನಗರದ ಶ್ರೀ ಬಸವೇಶ್ವರ ದೇವಸ್ಥಾನದಿಂದ ಎರಡು ಪ್ರಚಾರ ರಥಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸಂಸತ್ತು ಹಾಗೂ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಈಡೀ ವಿಶ್ವಕ್ಕೆ ಪರಿಚಯಿಸಿದ ಶರಣರ ನಾಡು ಬಸವಕಲ್ಯಾಣದಲ್ಲಿ ಮೊದಲ ಬಾರಿಗೆ ಯುವ ಸಂಸತ್ತು ಕಾರ್ಯಕ್ರಮ ನಡೆಯುತ್ತಿರುವುದು ಹೆಮ್ಮೆಯ ಸಂಗತಿ. ನಾಡಿನ ಅತಿ ದೊಡ್ಡ ಕಾರ್ಯಕ್ರಮ ಇದಾಗಿದ್ದು ಇದನ್ನು ಯಶಸ್ವಿಗೊಳಿಸಲು ಎಲ್ಲರೂ ಸಹಕರಿಸಬೇಕು ಎಂದರು.

ತಾಲೂಕಿನ ಸುತ್ತ ಹಳ್ಳಿಗಳಿಗೆ ಈ ಪ್ರಚಾರ ರಥಗಳು ಸಂಚರಿಸಿ ಕಾರ್ಯಕ್ರಮ ಕುರಿತು ಮಾಹಿತಿ ನೀಡಲಿವೆ. ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಕೊಪ್ಪಳದ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮಿ, ಭಾರತೀಯ ಸೇನೆಯ ನಿವೃತ್ತ ಉಪ ದಂಡನಾಯಕ ಲೆಫ್ಟಿನೆಂಟ್ ಜನರಲ್ ರಮೇಶ್ ಹಲಗಲಿ, ಯುವ ಚಿಂತಕರಾದ ಚಕ್ರವರ್ತಿ ಸೂಲಿಬೆಲೆ, ವಿಜಯಪುರದ ಚಾಣಕ್ಯ ಕರಿಯರ್ ಅಕಾಡೆಮಿಯ ಎನ್.ಎಂ. ಬಿರಾದಾರ ಸೇರಿದಂತೆ ಹೆಸರಾಂತ ವ್ಯಕ್ತಿಗಳು ಪಾಲ್ಗೊಳ್ಳಲಿದ್ದಾರೆ ಎಂದರು. ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದರು.

ಮಾಜಿ ಶಾಸಕ ಎಂ.ಜಿ. ಮುಳೆ, ಜಿಪಂ ಸದಸ್ಯ ಸುಧೀರ ಕಾಡಾದಿ, ಸ್ವಾಗತ ಸಮಿತಿ ಅಧ್ಯಕ್ಷ ಧನರಾಜ ತಾಳಂಪಳ್ಳಿ, ಕಾರ್ಯಾಧ್ಯಕ್ಷರಾದ ಸೂರ್ಯಕಾಂತ ನಾಗಮಾರಪಳ್ಳಿ, ಶರಣು ಸಲಗರ, ಅನಿಲ್‌ಕುಮಾರ ರಗಟೆ, ಅಕಾಡೆಮಿ ಜಿಲ್ಲಾ ಸಂಚಾಲಕ ರೇವಣಸಿದಪ್ಪ ಜಲಾದೆ, ಶಿವಕುಮಾರ ಬಿರಾದಾರ, ಶರಣಪ್ಪ ಬಿರಾದಾರ, ಬಸವರಾಜ ಕೋರ್ಕೆ, ಸಂಜು ಕಾಳೆಕರ್, ಬಸವರಾಜ ಬಾಲಿಕೀಲೆ, ಶಿವಕುಮಾರ ಶೆಟಗಾರ್, ಚಂದ್ರಕಾಂತ್ ಸ್ವಾಮಿ, ದೇವಿಂದ್ರ ಆದೇಪ್ಪ ಡಿ.ಕೆ. ದಾವೂದ್, ಶಿವಶರಣಪ್ಪ ಪಾಟೀಲ ಇದ್ದರು.



ಬಸವಕಲ್ಯಾಣ: ನಗರದಲ್ಲಿ ನಡೆಯಲಿರುವ 'ಕಲ್ಯಾಣ ಕರ್ನಾಟಕ ಭಾಗದ ಯುವ ಸಂಸತ್ತು ಹಾಗೂ ಯುವಕರ ಬೃಹತ್ ಸಮಾವೇಶ'ದ ಅಂಗವಾಗಿ ಪ್ರಚಾರ ರಥಕ್ಕೆ ಶಾಸಕ ಬಿ. ನಾರಾಯಣರಾವ್ ಚಾಲನೆ ನೀಡಿದರು.

ಉದಯವಾಣಿ ಕಲಬುರಗಿ
ಸೋಮವಾರ, ಫೆಬ್ರವರಿ 9, 2020

Scanned with OKEN Scanner

ಗವಿಮಠದಲ್ಲಿ ಮಾಸಿಕ ಅಮಾವಾಸ್ಯೆ ಶಿವಾನುಭವ ಚಿಂತನಾ ಕಾರ್ಯಕ್ರಮ

ಗುರಿ ಸಾಧನೆಗೆ ನಿರಂತರ ಅಧ್ಯಯನ ಅವಶ್ಯ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಮನುಷ್ಯನಲ್ಲಿ ಸಾಧಿಸುವ ಛಲ ಇದ್ದರೆ ಸಾಧಿಸಲಾಗದು ಯಾವುದೂ ಇಲ್ಲ.ಏಕಾಗ್ರತೆಯಿಂದ ಅಭ್ಯಾಸ ಮಾಡುವ ಮೂಲಕ ಕಂಡ ಕನಸು ಈಡೇರಿಸಿಕೊಳ್ಳಲು ಸಾಧ್ಯ ಎಂದು ಡಾ.ಮಹೇಶ ಪಾಟೀಲ್ ಹೇಳಿದರು.

ನಗರದ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿ ಮಠದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ನಡೆದ ಮಾಸಿಕ ಅಮಾವಾಸ್ಯೆ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಜೀವನದಲ್ಲಿ ದೊಡ್ಡ ಗುರಿ ಹೊಂದಬೇಕು. ಗುರಿ ಈಡೇರಿಸಿಕೊಳ್ಳಲು ಕಷ್ಟ ಪಡಬೇಕು ಆಂದಾಗ ಮಾತ್ರ ಕಂಡ ಕನಸು ಕಾಣಲು ಸಾಧ್ಯ ಎಂದ ಅವರು, ನಾನೂ ಸತತ ಪ್ರಯತ್ನ ಪಟ್ಟಿದ್ದರಿಂದ ಇಂದು ಕೆಎಎಸ್ ಪಾಸಾಗಿದ್ದೇನೆ ಎಂದರು.

ಸ್ಪರ್ಧಾತ್ಮಕ ಪರೀಕ್ಷೆ ಪಾಸಾಗಿ ಅಧಿಕಾರಿಯಾಗಿ ಜನಸೇವೆ ಸಲ್ಲಿಸಬೇಕೆಂಬ ಮಹದಾಸೆ ಇತ್ತು. ಅದನ್ನು ಸಾಧಿಸಲು ವೃತ್ತಿಯಲ್ಲಿ ಜತೆಗೆ ಸದಾ ಅಧ್ಯಯನ ಸತತ ಪ್ರಯತ್ನದಿಂದ ಕೆಎಎಸ್ ಪರೀಕ್ಷೆ ಪಾಸಾದ ತೃಪ್ತಿ ಮೂರೆಯಿತು ಎಂದರು.



ಬಸವಕಲ್ಯಾಣ ನಗರದ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿ ಮಠದಲ್ಲಿ ನಡೆದ ಮಾಸಿಕ ಅಮವಾಸೆ ಶಿವಾನುಭವ ಚಿಂತನಾ ಕಾರ್ಯಕ್ರಮದಲ್ಲಿ ಕೆಎಎಸ್ ಪರೀಕ್ಷೆಯಲ್ಲಿ ಪಾಸಾದ ಡಾ.ಮಹೇಶ ಪಾಟೀಲ್ ಹಾಗೂ ಸಾವಿತ್ರಿ ಬಿರಾದಾರ ಅವರನ್ನು ಸತ್ಕರಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸೇರಿದಂತೆ ಅನೇಕರಿದ್ದರು.

ಕೆಎಎಸ್ ಪಾಸಾದ ಅಭ್ಯರ್ಥಿ ಸಾವಿತ್ರಿ ಕರಬಸಪ್ಪ ಬಿರಾದಾರ ಮಾತನಾಡಿ, ನಾನು ಶಿಕ್ಷಕಿಯಾಗಿದ್ದರೂ ಸಹ ದೊಡ್ಡ ಹುದ್ದೆಯ ಕನಸು ಕಂಡು ಸತತ ಅಧ್ಯಯನ ಮಾಡಿದೆ. ಆದರ ಫಲವಾಗಿ ಇಂದು ಕೆಎಎಸ್ ಪಾಸಾದೆ. ಇದಕ್ಕೆ ಧೃಡ ಸಂಕಲ್ಪ ಮುಖ್ಯ. ನಿರಂತರ ಅಧ್ಯಯನ ಅಗತ್ಯ.ಆದಕ್ಕಾಗಿ ಸಮಯ ಮೀಸಲಿಡಬೇಕು. ನಮ್ಮ ಭಾಗ ಹಿಂದುಳಿದುದ್ದಲ್ಲ, ನಮ್ಮಲ್ಲಿಯೂ ಪ್ರತಿಭೆ ಇದೆ. ಅದನ್ನು ಉಪಯೋಗಿಸಿ ಸಾಧಿಸಿ ತೋರಿಸಬೇಕು ಎಂದರು.ಸಾನ್ನಿಧ್ಯವಹಿಸಿದ್ದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶಿರ್ವಚನ ನೀಡಿದರು. ಶ್ರೀಮದ್ವೀರ ಶೈವ ಸದ್ಬೋಧನ ಸಂಸ್ಥೆ ತಾಲೂಕು ಅಧ್ಯಕ್ಷ, ನಿವೃತ್ತ ಅಧಿಕಾರಿ ಬಸವಂತಪ್ಪ ಲವಾರೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಕೆಎಎಸ್ ಪರೀಕ್ಷೆಯಲ್ಲಿ ಪಾಸಾದ ಡಾ.ಮಹೇಶ ಪಾಟೀಲ್ ಹಾಗೂ ಸಾವಿತ್ರಿ ಬಿರಾದಾರ ಅವರನ್ನು ಸತ್ಕರಿಸಲಾಯಿತು. ಪ್ರೊ.ರುದ್ರೇಶ್ವರ ಗೋರ್ಟಾ ಪ್ರಾರ್ಥನಾ ಗೀತೆ ಹಾಡಿದರು. ಮುಖ್ಯಗುರು ರಮೇಶ ರಾಜೋಳೆ ಸ್ವಾಗತಿಸಿದರು. ಅಭಿಷೇಕ ರಾಮಣ್ಣನವರ ನಿರೂಪಿಸಿದರು. ಪ್ರೊ. ಸೂರ್ಯಕಾಂತ ಶೀಲವಂತ ವಂದಿಸಿದರು. ಬಾಬುರಾವ ಉಳ್ಳೆ, ಶಿವಕುಮಾರ ಮಠ, ರೇವಣಸಿದ್ಧಯ್ಯ ಮಠಪತಿ,ನೀಲಕಂಠಯ್ಯ ಮಂಠಾಳ, ರೇವಣಸಿದ್ಧ ಶಿವಶಂಕರ ರಾಮಣ್ಣನವರ,ಶಿವಶರಣ ಮುಚಳಂಬೆ, ರೇಣುಕಾ ರಾಮಣ್ಣನವರ ಸೇರಿ ಅನೇಕರಿದ್ದರು.

ವಿಜಯ ಕರ್ನಾಟಕ ಬುಧವಾರ,26 ಫೆಬ್ರವರಿ 2020

ರುದ್ರಮುನಿ ಶಿವಾಚಾರ್ಯರ ಸಲಹೆ | ಜೆಎಸ್‌ಎಸ್ ಶಾಲೆಯ ವಾರ್ಷಿಕೋತ್ಸವ

ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಶಿಕ್ಷಕರಿಂದ ಪ್ರಾಯೋಗಿಕ ಮತ್ತು ಗುಣಮಟ್ಟದ ಶಿಕ್ಷಣ ನೀಡಿದಾಗ ವಿದ್ಯಾರ್ಥಿಗಳು ತಮ್ಮ ಉತ್ತಮ ಭವಿಷ್ಯ ರೂಪಿಸಿಕೊಳ್ಳುತ್ತಾರೆ ಎಂದು ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಪುಣ್ಯಕೋಟಿ ಶಿಕ್ಷಣ ಸಂಸ್ಥೆಯ ಜಗದ್ಗುರು ಸೋಮೇಶ್ವರ ಶಿವಾಚಾರ್ಯ ಆಂಗ್ಲ ಮಾಧ್ಯಮ ಶಾಲೆಯ 4ನೇ ವಾರ್ಷಿಕ ಸ್ನೇಹ ಸಮ್ಮೇಳನದ ಸಾನ್ನಿಧ್ಯ ವಹಿಸಿದ್ದ ಅವರು, ಮಕ್ಕಳಿಗಾಗಿ ಆಸ್ತಿ ಮಾಡದೆ ಮಕ್ಕಳನ್ನೇ ಆಸ್ತಿಯಾಗಿ ರೂಪಿಸುವಲ್ಲಿ ಪಾಲಕರು ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು.ಬಿಜೆಪಿ ಮುಖಂಡ ಶರಣು ಸಲಗರ, ಸಿಪಿಐ ಮಲ್ಲಿಕಾರ್ಜುನ ಯಾತನೂರ ಮಾತನಾಡಿದರು. ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಪ್ರೊ. ಸೂರ್ಯಕಾಂತ ಶೀಲವಂತ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಸುಭಾಷ್ಚಂದ್ರ ಪಾಟೀಲ್, ಕಾರ್ಯ ದರ್ಶಿ ಉಮೇಶ ಶೀಲವಂತ, ಕೋಶಾಧ್ಯಕ್ಷ ಶಶಿಕಾಂತ, ನಿರ್ದೇಶಕರಾದ ಚಂದ್ರಕಾಂತ, ಪ್ರೊ. ಸುರೇಖಾ, ಕಾವೇರಿ, ಉಪನ್ಯಾಸಕ ಕಿಶೋರ ಕುಲಕರ್ಣಿ ಉಪಸ್ಥಿತರಿದ್ದರು.



ಬಸವಕಲ್ಯಾಣದ ಜಗದ್ಗುರು ಸೋಮೇಶ್ವರ ಶಿವಾಚಾರ್ಯ ಆಂಗ್ಲ ಮಾಧ್ಯಮ ಶಾಲೆ 4ನೇ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಸಿಪಿಐ ಮಲ್ಲಿಕಾರ್ಜುನ ಯಾತನೂರ, ಬಿಜೆಪಿ ಮುಖಂಡ ಶರಣು ಸಲಗರ್, ಪ್ರೊ.ಸೂರ್ಯಕಾಂತ ಶೀಲವಂತ ಇತರರಿದ್ದರು.

ಇಂದಿನ ಮಕ್ಕಳಿಗೆ ಪ್ರಾಯೋಗಿಕ-ಬೋಧನಾ ಶಿಕ್ಷಣ ಅಗತ್ಯ. ಸದಾ ಕ್ರಿಯಾಶೀಲ ಹಾಗೂ ಚಟುವಟಿಕೆಯಿಂದಿರಲು ಪಾಲಕರು ಮಕ್ಕಳನ್ನು ಕ್ರೀಡೆಗಳಲ್ಲಿ ತೊಡಗಿಸಬೇಕು.
| ಶರಣು ಸಲಗರ ಬಿಜೆಪಿ ಮುಖಂಡ

ಪೂಜಾ ಶೇವಾಳೆ ಸ್ವಾಗತಿಸಿದರು. ಅಂಬಿಕಾ ಸಜ್ಜನಶಾಲಾ ವರದಿ ವಾಚಿಸಿದರು. ಅಂಬಿಕಾ ವಂದಿಸಿದರು. ಮುಖ್ಯಗುರು ಮಂಜುಳಾ ರಾಠೋಡ ನಿರೂಪಣೆ ಮಾಡಿದರು. ಭಾಗ್ಯಶ್ರೀ ಪ್ರಾರ್ಥನೆ ಗೀತೆ ಹಾಡಿದರು. ಪಿಕೆಪಿಎಸ್ ಅಧ್ಯಕ್ಷ ಸೋಮನಾಥ ಹಾಗೂ ಧನೂರಾ (ಕೆ) ಪಿಕೆಪಿಎಸ್ ಅಧ್ಯಕ್ಷ ಗುರುನಾಥ ಹಿಂಡೋಳೆ, ದ್ವಿತೀಯ ಪಿಯುಸಿಯಲ್ಲಿ ಜಿಲ್ಲೆಗೆ ಟಾಪರ್ ಆಗಿದ್ದ ಪುಣ್ಯಕೋಟಿ ಕಾಲೇಜಿನ ವಿದ್ಯಾರ್ಥಿ ವಿಕಾಸ ಅವರನ್ನು ಅಭಿನಂದಿಸಲಾಯಿತು. ಗಣಿತ ಪ್ರತಿಭಾನ್ವೇಷಣೆ ಪರೀಕ್ಷೆಯಲ್ಲಿ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಉತ್ತೀರ್ಣರಾದ ಮಕ್ಕಳಿಗೆ ಮೇಡಲ್ ನೀಡಿ ಪ್ರೋತ್ಸಾಹಿಸಲಾಯಿತು.

ವಿಜಯವಾಣಿ ನಿನ್ನೆ ಇಂದು ನಾಳೆಗಾಗಿ
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 24 ಫೆಬ್ರವರಿ 2020
24 FEBRUARY 2020



ಬಸವಕಲ್ಯಾಣ ನಗರದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠದಲ್ಲಿ ಮಹಾಶಿವರಾತ್ರಿ ನಿಮಿತ್ತ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನಿಧ್ಯದಲ್ಲಿ ಸಾಮೂಹಿಕ ಇಷ್ಟಲಿಂಗ ಮಹಾ ಪೂಜೆ ಜರುಗಿತು. ಶಿವಕುಮಾರ ಸ್ವಾಮಿ ಗೋರ್ಟಾ,ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ, ಈರಣ್ಣಾ ಶೀಲವಂತ,ಸದಾನಂದ ಕಣಜೆ, ಮಡಿವಾಳಪ್ಪ ಕಲ್ಯಾಣ, ಮಾಣಿಕಬಾಯಿ ಬಿರಾದಾರ, ಸೋಮೆಶ್ವರಿ ಮಜಗೆ , ಶೋಭಾ ವಿರಣ್ಣಾ ಚೋಕೆ ಸೇರಿ ಅನೇಕರಿದ್ದರು.

Scanned with OKEN Scanner

ಸಮಾಜದ ಅನಿಷ್ಟಗಳ ಅನಾವರಣ

ಹಗಲುಗಳ್ಳರು ಕಥಾ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಉಪನ್ಯಾಸಕ ಡಾ.ಸೂರ್ಯಕಾಂತ ಸೂಜಾತ ಹೇಳಿಕೆ



ಬಸವಕಲ್ಯಾಣ ನಗರದ ಪುಣ್ಯಕೋಟಿ ಕಾಲೇಜಿನಲ್ಲಿ ಭಾನುವಾರ ಹಮ್ಮಿಕೊಂಡ ಸಾಹಿತಿ ಮಚೇಂದ್ರ ಪಿ.ಅಣಕಲ ಅವರ ಹಗಲುಗಳ್ಳರು ಕಥಾ ಸಂಕಲನ ಬಿಡುಗಡೆ ಕಾರ್ಯಕ್ರಮ ಜರುಗಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಸೂರ್ಯಕಾಂತ ಸೂಜಾತ, ರಮೇಶ ಬೆಜಗಂ, ಎಸ್.ಜಿ.ಭಾರತಿ, ಆಚಾರ್ಯ ವೆಂಕಟೇಶ, ಪ್ರೋ.ಸೂರ್ಯಕಾಂತ ಶೀಲವಂತ, ಮಹಾಂತೇಶ ಮಂದೆವಾಲ, ಮಚೇಂದ್ರ ಅಣಕಲ ಇದ್ದರು.

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಬಡತನ, ಶೋಷಣೆ, ದಲಿತರ ನೋವು, ಜಾತೀಯತೆ, ಮೂಢ ನಂಬಿಕೆ, ಹಸಿವು, ಮಠಾಧೀಶರ ಆಸೆಬುರುಕುತನ ಹಾಗೂ ಆವರ ರಾಜಕೀಯ ಕುತಂತ್ರ ಮೊದಲಾದ ಅಂಶಗಳನ್ನು ಮಚೇಂದ್ರ ಪಿ.ಅಣಕಲ ಅವರ ಹಗಲುಗಳ್ಳರು ಕಥಾ ಸಂಕಲನದಲ್ಲಿ ಬಿಚ್ಚಿಟ್ಟಿದ್ದಾರೆ ಎಂದು ಕಲಬುರಗಿಯ ನೂತನ ಪದವಿ ಕಾಲೇಜಿನ ಉಪನ್ಯಾಸಕ ಡಾ.ಸೂರ್ಯ ಕಾಂತ ಸೂಜಾತ ಹೇಳಿದರು.

ನಗರದ ಪುಣ್ಯಕೋಟಿ ಕಾಲೇಜಿನಲ್ಲಿ ಭಾನುವಾರ ಹಮ್ಮಿಕೊಂಡ ಸಾಹಿತಿ ಮಚೇಂದ್ರ ಪಿ.ಅಣಕಲ ಅವರ ಹಗಲುಗಳ್ಳರು ಕಥಾ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಈ ಕಥಾ ಸಂಕಲನದಲ್ಲಿ ಲೇಖಕರು ತಮ್ಮ ಜೀವನದಲ್ಲಿ ಎದುರಾದ ಸಮಸ್ಯೆಗಳನ್ನೆ ಕಥಾ ವಸ್ತುವಾಗಿಟ್ಟು ಕೊಂಡು ಪುಸ್ತಕ ಹೊರ ತಂದಿದ್ದಾರೆ. ಬಸವಣ್ಣನವರ ನಾಡಿನವರಾದ ಲೇಖಕರಿಗೆ ಇಲ್ಲಿಯ ಸೂಕ್ಷ್ಮ ವಿಷಯಗಳು ದಲಿತ ಸಾಹಿತ್ಯದ ಗಟ್ಟಿತನದಿಂದ ಈ ಪುಸ್ತಕ ಹೊರಬಂದಿದೆ ಎಂದರು.

ಶ್ರೀಮರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಆಣಕಲ ಆವರ ಕಥಾ ಪುಸ್ತಕ ವೊಂದನ್ನು 10 ವರ್ಷದ ಹಿಂದೆ ಬಿಡುಗಡೆ ಮಾಡಲಾಗಿತ್ತು. ಪುನಃ ಹಗಲುಗಳ್ಳರು ಎಂಬ ಪುಸ್ತಕ ಕೂಡ ಬಿಡುಗಡೆ ಮಾಡುತ್ತಿರುವುದು ಸಂತಸ ತಂದಿದೆ. ಮುಂದಿನ ದಿನಗಳಲ್ಲಿ ಕಲ್ಯಾಣದಲ್ಲಿ ಇನ್ನಷ್ಟು ಸಾಹಿತಿಗಳ ಬಳಗ ಹೆಚ್ಚಾಗಲಿ ಎಂದು ಹಾರೈಸಿದರು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ರಮೇಶ ಬೆಜಗಂ ಮಾತನಾಡಿ, ಆಣಕಲ ಆವರ ಕಥೆ 2010ರಲ್ಲಿ ನಡೆದ ಆಮೆರಿಕದ ಆಕ್ಕ ಕಥಾ ಸ್ಪರ್ಧೆಯಲ್ಲಿ ಆಯ್ಕೆಯಾಗಿತ್ತು. ಉತ್ತಮ ಬರಹಗಾರರ ಲಕ್ಷಣ ಹೊಂದಿ ರುವ ಆಣಕಲ ಆವರು ಇನ್ನೂ ಹೆಚ್ಚಿನ ಸಾಹಿತ್ಯ ಹೊರ ತರಬೇಕು ಎಂದರು.

ಕಲಬುರಗಿಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಎಸ್.ಜಿ.ಭಾರತಿ ಮಾತನಾಡಿ, ಸಾಹಿತ್ಯದ ಮೂಲಕ ದಲಿತರ ಅಭಿವ್ಯದ್ದಿ ಯಾಗಬೇಕು. ದಲಿತರಿಗೆ ಮೂಢ ನಂಬಿಕೆ, ಅನಕ್ಷರತೆ ಸೇರಿದಂತೆ ಮೊದಲಾದ ಸಾಮಾಜಿಕ ಸಮಸ್ಯೆಗಳಿಂದ ಮುಕ್ತಿ ದೊರಕಿಸುವ ಸಾಹಿತ್ಯ ಪ್ರಕಟವಾಗುವ ಆವಶ್ಯಕತೆ ಯಿದೆ ಎಂದು ತಿಳಿಸಿದರು.

ಮಂಗಲಗಿಯ ಸರಕಾರಿ ಶಾಲೆಯ ಮುಖ್ಯಗುರು ಆಚಾರ್ಯ ವೆಂಕಟೇಶ, ಕಾಲೇಜಿನ ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ವಕೀಲ ಮಹಾಂತೇಶ ಮಂದೆವಾಲ ಹಾಗೂ ಲೇಖಕ ಮಚೇಂದ್ರ ಆಣಕಲ ಮಾತನಾಡಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಎಸ್.ಜಿ.ಭಾರತಿ ಆವರನ್ನು ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಚಂದ್ರಕಲಾ ಪಾಟೀಲ, ಉಮೇಶ ಶೀಲವಂತ, ಶಶಿಕಾಂತ ಶೀಲವಂತ, ಚಂದ್ರಕಾಂತ ಶೀಲವಂತ, ಪ್ರೋ. ಸುರೇಖಾ ಎಸ್.ಶೀಲವಂತ, ಕಾವೇರಿ ಸಿ.ಶೀಲವಂತ ಉಪಸ್ಥಿತರಿದ್ದರು. ಕಿಶೋರ ಕುಲಕರ್ಣಿ ಸ್ವಾಗತಿಸಿದರು. ಕಲ್ಪನಾ ಬಿರಾ ದಾರ ನಿರೂಪಿಸಿದರು. ಅಶೋಕ ಪೋತೆ ವಂದಿಸಿದರು.

ವಿಜಯ ಕರ್ನಾಟಕ ಬುಧವಾರ,5 ಫೆಬ್ರವರಿ 2020

ಅಭಿನವ ಘನಲಿಂಗ ಜೋಳಿಗೆ ಪಾದಯಾತ್ರೆ

ಕರ್ನಾಟಕ ಸಂಧ್ಯಾಕಾಲ

ಬಸವಕಲ್ಯಾಣ : ಶರಣರ ನಾಡಿನ ಐತಿಹಾಸಿಕ ಕ್ಷೇತ್ರವಾದ ಶಿವಪುರ ಗ್ರಾಮದ ಶ್ರೀ ಸ್ಥಲಿಂಗೇಶ್ವರ ಕಮರಿ ಮಠದಲ್ಲಿ ರವಿವಾರ ಬೇಳಗ್ಗೆ ಶ್ರೀಪುರಾಂತ ಗ್ರಾ ಮದ ಪೂಜ್ಯ ಶ್ರೀ ಷ.ಬ್ರ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಂದ ಅಭಿನವ ಘನಲಿಂಗ ಜೋಳಿಗೆ ಪಾದಯಾತ್ರೆ ಚಾಲನ ನೀಡುವರು.



ಶಿವ ಶರಣರ ದೀಕ್ಷಾ ಸ್ಥಳ ಹಾಗೂ ಶ್ರೀ ವಿಶ್ವಗುರು ಎಂಬ ಪ್ರಶಸ್ತಿ ಪಡೆದ ಸರ್ವಧರ್ಮ ಸಮಾನತೆ ಸಂದೇಶ ಸಾರುತ್ತಿ ರುವ ಎಲ್ಲರನ್ನು ಒಳಗೊಳ್ಳುವಿಕೆಯ ಹಗಲು-ಇರುಳು ಮಾನವ ಕುಲ ಕೋಟಿಗೆ ಕಲ್ಯಾಣವಾಗಲೆಂದು ದುಡಿಯುತ್ತಿರುವ ಅಭಿನವ ಘನ ಲಿಂಗ ಜೋಳಿಗೆ ರೂವಾರಿಗಳಾದ ಶ್ರೀಗಳು ಯುವಕರನ್ನು ದುಶ್ಚಟಗಳಿಂದ ಮುಕ್ತರನ್ನಾಗಿಸುವ ಸದುದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಬೆಳಗ್ಗೆ ೧೦ ಗಂಟೆಗೆ ಶ್ರೀ ಸ್ಥಲಿಂಗೇಶ್ವರ ಕಮರಿ ಮಠದಿಂದ ಹಮ್ಮಿಕೊಂಡಿರುವ ಈ ಜೋಳಿಗೆ ಪಾದಯಾತ್ರೆ ಬಸವಕಲ್ಯಾಣದ ಮುಖ್ಯ ಬೀದಿಗಳಲ್ಲಿ ಸಂಚರಿಸಿ ಮಧ್ಯಾಹ್ನ ೩ ಗಂಟೆಗೆ ಶ್ರೀ ಜೋಳಿಗೆಯಲ್ಲಿ ದುಶ್ಚಟಗಳನ್ನು ತ್ಯಜಿಸಿದವರು ಈ ಆರೋಗ್ಯವಂತರಾಗಿ ಧರ್ಮವಂತರಾಗಿ ಆರೋಗ್ಯ (ಪೂರ್ಣ ಸಮಾಜ ನಿರ್ಮಿಸಲು ಜೋಳಿಗೆ ಎಂದು ತಮ್ಮಲ್ಲಿಗೆ ಬರುತ್ತಿದ್ದಾರೆ. ಆದರಿಂದ ಬಸವಕಲ್ಯಾಣ ನಗರದಿ ಸಮಸ್ತ ಭಕ್ತ-ಭಾಂದವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ತಿಳಿಸಿದರು

ಕರ್ನಾಟಕ ಸಂಧ್ಯಾಕಾಲ ಶನಿವಾರ, ಫೆಬ್ರವರಿ 08, 2020

ಸರ್ಕಾರದ ಆದೇಶ ಪಾಲಿಸಿ



ಬಸವಕಲ್ಯಾಣ: ಕರೊನಾ ತಡೆಗಟ್ಟಲು ಎಲ್ಲರೂ ಸರ್ಕಾರದ ಆದೇಶವನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮನವಿ ಮಾಡಿದ್ದಾರೆ. ಕರೊನಾ ಹರಡುವುದನ್ನು ತಡೆಗಟ್ಟಲು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹಾಗೂ ಮುಖ್ಯಮಂತ್ರಿ ಯಡಿಯೂರಪ್ಪ ಅನೇಕ ಕ್ರಮ ಕೈಗೊಂಡಿದ್ದಾರೆ. ಅದಕ್ಕೆ ಎಲ್ಲರೂ ಸಹಕಾರ ಆಗತ್ಯ. ಭಾನುವಾರ ರಾತ್ರಿ 9ಗಂಟೆಗೆ 9 ನಿಮಿಷ ಮನೆಗಳ ಮುಂದೆ ದೀಪ ಹಚ್ಚಿ ಕರೊನಾ ವಿರುದ್ಧ ಹೋರಾಟಕ್ಕೆ ಕೈ ಜೋಡಿಸಬೇಕು ಎಂದು ಮನವಿ ಮಾಡಿದ್ದಾರೆ.

ಸಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » KALABURAGI
ಭಾನುವಾರ 5 ಏಪ್ರಿಲ್ 2020
5 APRIL 2020



ಬಸವಕಲ್ಯಾಣದ ಗವಿಮಠದಲ್ಲಿ ಬಸವ ಜಯಂತಿ ನಿಮಿತ್ತ ಬಸವಣ್ಣನವರ ಭಾವಚಿತ್ರಕ್ಕೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪೂಜೆ ಸಲ್ಲಿಸಿದರು. ರಾಕೇಶ ಪುರವಂತ, ಶಾಂತವೀರ ಪೂಜಾರಿ, ಬೂದಯ್ಯ ಸ್ವಾಮಿ ಇದ್ದರು.

Scanned with OKEN Scanner

ಯುವ ಸಂಸತ್ತು-2020 ಯಶಸ್ವಿಗೊಳಿಸಿ

» ನಾರಾಯಣರಾವ ಮನವಿ

» ಪ್ರಚಾರ ರಥಕ್ಕೆ ಶಾಸಕರಿಂದ ಚಾಲನೆ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಂಸತ್ತು ಹಾಗೂ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ವಿಶ್ವಕ್ಕೆ ಪರಿಚಯಿಸಿದ ಶರಣರ ನಾಡು ಕಲ್ಯಾಣದಲ್ಲಿ ಮೊದಲ ಬಾರಿಗೆ ಯುವ ಸಂಸತ್ತು ನಡೆಯುತ್ತಿರುವುದು ಹೆಮ್ಮೆಯ ಸಂಗತಿ. ನಾಡಿನ ಅತಿ ದೊಡ್ಡ ಕಾರ್ಯಕ್ರಮ ಇದಾಗಿದ್ದು, ಯಶಸ್ವಿಗೆ ಎಲ್ಲರೂ ಶ್ರಮಿಸಬೇಕು ಎಂದು ಶಾಸಕ ಬಿ.ನಾರಾಯಣರಾವ ಮನವಿ ಮಾಡಿದರು.

ನೇಡಂನ ಶ್ರೀ ಕೊತ್ತಲಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯ ವಿಕಾಸ ಅಕಾಡೆಮಿ 15ರಂದು ನಗರದ ಥೀರ್ ಮೈದಾನದಲ್ಲಿ ಹಮ್ಮಿಕೊಂಡಿರುವ ಕಲ್ಯಾಣ ಕರ್ನಾಟಕದ ಯುವ ಸಂಸತ್ತು-2020 ಹಾಗೂ ಯುವಕರ ಬೃಹತ್ ಸಮಾವೇಶದ ಪ್ರಚಾರ ರಥಕ್ಕೆ ಶನಿವಾರ ಚಾಲನೆ ನೀಡಿ ಮಾತನಾಡಿದರು.

ಬಸವಕಲ್ಯಾಣ ಹಾಗೂ ತಾಲೂಕಿನ ಸುತ್ತಲಿನ ಹಳ್ಳಿಗಳಿಗೆ ಪ್ರಚಾರ ರಥಗಳು ಸಂಚರಿಸಿ, ಕಾರ್ಯಕ್ರಮ ಕುರಿತು ಮಾಹಿತಿ ನೀಡಲಿವೆ. ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಕೊಪ್ಪಳದ ಶ್ರೀ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಭಾರತೀಯ ಸೇನೆಯ ನಿವೃತ್ತ ಉಪ ದಂಡನಾಯಕ ಲೆಫ್ಟಿನೆಂಟ್ ಜನರಲ್ ರಮೇಶ್ ಹಲಗಲಿ, ಯುವ ಚಿಂತಕ ಚಕ್ರವರ್ತಿ ಸೂಲಿಬೆಲೆ, ವಿಜಯಪುರದ ಚಾಣಕ್ಯ ಕರಿಯರ್ ಆಕಾಡೆಮಿಯ ಎನ್.ಎಂ. ಬಿರಾದಾರ ಸೇರಿ ಸ್ಥಳೀಯ ಗಣ್ಯರು, ಮಠಾಧೀಶರು ಭಾಗವಹಿಸಲಿದ್ದಾರೆ. ಯುವಕರು ಇದರ ಲಾಭ ಪಡೆಯಬೇಕು ಎಂದರು.

ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಮಾಜಿ ಶಾಸಕ ಎಂ.ಜಿ. ಮುಳೆ, ಜಿಪಂ ಸದಸ್ಯ ಸುಧೀರ ಕಾಡಾದಿ, ಸ್ವಾಗತ ಸಮಿತಿ ಅಧ್ಯಕ್ಷ ಧನರಾಜ ತಾಳಂಪಳ್ಳಿ, ಕಾರ್ಯಾಧ್ಯಕ್ಷ ಸೂರ್ಯಕಾಂತ ನಾಗಮಾರಪಳ್ಳಿ, ಶರಣು ಸಲಗರ, ಅನಿಲ್‌ಕುಮಾರ ರಗಟೆ, ಅಕಾಡೆಮಿ ಜಿಲ್ಲಾ ಸಂಚಾಲಕ ರೇವಣಸಿದಪ್ಪ ಜಲಾದೆ, ಶಿವಕುಮಾರ ಬಿರಾದಾರ, ಶರಣಪ್ಪ ಬಿರಾದಾರ, ಬಸವರಾಜ ಕೋರ್ಕೆ, ಸಂಜು ಕಾಳೆಕರ್, ಬಸವರಾಜ ಬಾಲಿಕೀಲೆ, ಶಿವಕುಮಾರ ಶೆಟಗಾರ್, ಚಂದ್ರಕಾಂತ ಸ್ವಾಮಿ, ದೇವಿಂದ್ರ ಆದೇಪ್ಪ, ಡಿ.ಕೆ. ದಾವೂದ್, ಶಿವಶರಣಪ್ಪ ಪಾಟೀಲ್ ಇತರರಿದ್ದರು.



ಬಸವಕಲ್ಯಾಣದ ಥೀರ್ ಮೈದಾನದಲ್ಲಿ 15ರಿಂದ ನಡೆಯುವ ಕಲ್ಯಾ ಬಿ.ನಾರಾಯಣರಾವ ಚಾಲನೆ ನಿಡಿದರು. ತ್ರಿಪುರಾಂತನ ಶ್ರೀ ಅಭಿನ ತಾಳಂಪಳ್ಳಿ, ಸೂರ್ಯಕಾಂತ ನಾಗಮಾರಪಳ್ಳಿ, ಶರಣು ಸಲಗರ, ಇ

ಮೇರೆಗೆ ಇ-ಪ್ರೋಕ್ಯೂರ್‌ಮೆಂಟ್ ಮುಖಾ
ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಫಾರಂ
ಮೂಲಕ ಭರ್ತಿ ಮಾಡುವ ಗುತ್ತಿಗೆದಾರರು

ಕ್ರ. ಸಂ.	ಕೆಲಸದ ಹೆಸ
1	ಸಾಗರ ತಾ. ಹಿರೇಮನೆ ಹಾಸ್ಟೆಲ್ನಿಂದ ಸಂಪರ್ಕ ರಸ್ತೆ ಅಭಿವೃದ್ಧಿ. Indent No
2	ಸೊರಬ ತಾ. ಜಡೆ ಗ್ರಾ.ಪಂ ಜಡೆ ಕಾಲ್ಕೇರಿ ಹೋಗುವ ರಸ್ತೆ ಅಭಿವೃದ್ಧಿ. (CALL-2)
3	ಸೊರಬ ತಾ. ಜಡೆ ಸೊರಬ ಮುಖ್ಯ ರ ಊರೊಳಗಿನ ಚಗಟೂರು ಶಿಥಾರದವರೆ (ಡಾಂಬರ್) Indent No: 74838
	ಸೊರಬ ತಾ. ಜಡೆ ಸೊರಬ ಮುಖ್ಯ ರ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಭಾನುವಾರ 9 ಫೆಬ್ರವರಿ 2020
9 FEBRUARY 2020

ಕಲಬುರಗಿ ಉದಯವಾಣಿ
ಬುಧವಾರ, ಫೆಬ್ರವರಿ 26, 2020

ಛಲವಿದ್ದರೆ ಐಎಎಸ್ ತೇರ್ಗಡೆ ಸರಳ: ಡಾ। ಪಾಟೀಲ

ಬಸವಕಲ್ಯಾಣ: ಜೀವನದಲ್ಲಿ ಗುರಿ ಹಾಗೂ ಸಾಧಿಸುವ ಛಲ ಇದ್ದರೆ ಐಎಎಸ್ ಹಾಗೂ ಕೆಎಎಸ್ ಪರೀಕ್ಷೆಯನ್ನು ಸುಲಭವಾಗಿ ಎದುರಿಸಬಹುದು ಎಂದು ಡಾ। ಮಹೇಶ ಪಾಟೀಲ ಹೇಳಿದರು.

ನಗರದ ಗವಿಮಠದಲ್ಲಿ ನಡೆದ ಮಾಸಿಕ ಅಮಾವಾಸ್ಯೆ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಈಗಾಗಲೇ ನಾನು ಕಲಬುರಗಿಯ ಕೃಷಿ ವಿಜ್ಞಾನ ಸಂಸ್ಥೆಯಲ್ಲಿ ಯುಜಿಸಿ ಸಂಬಳ ಪಡೆಯುತಿದ್ದರೂ ಜನಸೇವೆ ಸಲ್ಲಿಸಬೇಕೆಂಬ ಆಸೆಯಿಂದ ಅದನ್ನು ಸಾಧಿಸಲು ವೃತ್ತಿ ಜೊತೆಗೆ ಸತತ ಅಧ್ಯಯನದಿಂದ ಕೆಎಎಸ್ ಪರೀಕ್ಷೆ ಪಾಸಾದ ತೃಪ್ತಿ ನನಗೆ ದೊರೆತಿದೆ. ಇದಕ್ಕೆಲ್ಲ ಗುರುಗಳ, ಹಿರಿಯರ ಆಶೀರ್ವಾದ ಮತ್ತು ಗವಿಮಠದ ಗುರುಗಳ ಆಶೀರ್ವಾದ ಕಾರಣ ಎಂದರು.

ಕೆಎಎಸ್ ಪರೀಕ್ಷೆಯಲ್ಲಿ ಪಾಸಾದ ಅಭ್ಯರ್ಥಿ ಸಾವಿತ್ರಿ ಬಿರಾದಾರ್ ಮಾತನಾಡಿ, ಕೆಎಎಸ್ ಪರೀಕ್ಷೆ ಪಾಸಾಗೋದು ಕಷ್ಟವಲ್ಲ ಕಾರಣ ನಾನು ಶಿಕ್ಷಕಿಯಾಗಿ ವೃತ್ತಿ ಮಾಡುತ್ತ ಜೊತೆಗೆ ಕುಟುಂಬ ಜವಾಬ್ದಾರಿ ನಿಭಾಯಿಸುತ್ತಲೇ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಾಸಾಗಿದ್ದೇನೆ. ಇದಕ್ಕೆ ದೃಢ ಸಂಕಲ್ಪ, ನಿರಂತರ ಅಧ್ಯಯನ ಅಗತ್ಯ. ಅದಕ್ಕಾಗಿ ಸಮಯ ಮೀಸಲಿಡಬೇಕು ಅಷ್ಟೆ ಎಂದು ಸಲಹೆ ನೀಡಿದರು.

ಸಾನ್ನಿಧ್ಯ ವಹಿಸಿದ್ದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಡಾ। ಮಹೇಶ ಪಾಟೀಲ ಹಾಗೂ ಸಾವಿತ್ರಿ ಬಿರಾದಾರ ಅವರು ಕೆಎಎಸ್ ಪರೀಕ್ಷೆ ಪಾಸಾಗುವುದರ ಮೂಲಕ ಸಹಾಯಕ ಆಯುಕ್ತರಾಗಿ ಆಯ್ಕೆಯಾಗಿರುವುದು ನಮ್ಮ ಜಿಲ್ಲೆ ಮತ್ತು ತಾಲೂಕಿಗೆ ಕೀರ್ತಿ ತರುವಂತಹ ಕೆಲಸವಾಗಿದೆ. ಇವರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯವಾಗಿದ್ದಾರೆ ಎಂದರು. ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಅಧ್ಯಕ್ಷತೆ ವಹಿಸಿದ್ದರು.

ಬಾಬುರಾವ್ ಉಳ್ಳೆ, ಶಿವಕುಮಾರ ಮಠ, ರೇವಣಸಿದ್ಧಯ್ಯ ಮಠಪತಿ, ನೀಲಕಂಠಯ್ಯ ಮಂಠಾಳ, ರೇವಣಸಿದ್ಧ ಶಿವಶಂಕರ ರಾಮಣ್ಣ ನವರ, ಶಿವಶರಣ ಮುಚಳಂಬೆ, ರೇಣುಕಾ ರಾಮಣ್ಣನವರ, ಪ್ರೊ। ರುದ್ರೇಶ್ವರ ಗೋರ್ಟಾ ಸೇರಿದಂತೆ ಮತ್ತಿತರರು ಇದ್ದರು. ಮುಖ್ಯಗುರು ರಮೇಶ ರಾಜೋಳೆ ಸ್ವಾಗತಿಸಿದರು. ಪ್ರೊ। ಸೂರ್ಯಕಾಂತ ಶೀಲವಂತ ವಂದಿಸಿದರು. ಅಭಿಷೇಕ ರಾಮಣ್ಣ ನಿರೂಪಿಸಿದರು.



ಬಸವಕಲ್ಯಾಣ: ನಗರದ ಗವಿಮಠದಲ್ಲಿ ನಡೆದ ಮಾಸಿಕ ಅಮಾವಾಸ್ಯೆ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಕೆಎಎಸ್ ಪಾಸಾದ ಅಭ್ಯರ್ಥಿಗಳನ್ನು ಸನ್ಮಾನಿಸಲಾಯಿತು.

Scanned with OKEN Scanner



ಬಸವಕಲ್ಯಾಣದ ಗವಿಮಠದಲ್ಲಿ ಗುರು ಪೂರ್ಣಿಮೆ ನಿಮಿತ್ತ ಗುರು ಪೂಜೆ ಕಾರ್ಯಕ್ರಮದಲ್ಲಿ ಭಕ್ತರಿಂದ ಗೌರವ ಸ್ವೀಕರಿಸಿದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು.



ಶರಣು ಸಲಗರ ಸಾವಿರಾರು ಬಡವರಿಗೆ ದಿನಸಿ ಕಿಟ್ ನೀಡುವ ಮೂಲಕ ಬಸವಣ್ಣನವರ ದಾಸೋಹ ತತ್ವವನ್ನು ಪ್ರಾಮಾಣಿಕವಾಗಿ ಪಾಲಿಸುತ್ತಿದ್ದಾರೆ. ಇದರಿಂದ ಬಸವ ನಾಡಿನ ದಾಸೋಹ ಪರಿಕಲ್ಪನೆ ಮರಳಿ ಬಂದಂತಾಗಿದೆ. ಕಾಯಕವೇ ಕೈಲಾಸ ಅನ್ನುವುದನ್ನು ಕಾರ್ಯರೂಪಕ್ಕೆ ತಂದಿದ್ದಾರೆ.

| ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ
ಗವಿ ಮಠ ಬಸವಕಲ್ಯಾಣ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಭಾನುವಾರ 9 ಫೆಬ್ರವರಿ 2020
9 FEBRUARY 2020

ಬ್ರಹ್ಮಕುಮಾರಿಸ್ ಸಂತೋಷ ದಿದೀಜೀ ನುಡಿ ಕಲ್ಯಾಣದಲ್ಲಿ ಭವನ ಉದ್ಘಾಟನೆ

ಜೀವನ ಮುಕ್ತಿ ಮಾಡಿಸುವ ಪ್ರಭು ಪಸಂದ



ಬಸವಕಲ್ಯಾಣದಲ್ಲಿ ಬ್ರಹ್ಮಕುಮಾರಿಸನ ಪ್ರಭು ಪಸಂದ ಭವನ ಉದ್ಘಾಟನೆ ಕಾರ್ಯಕ್ರಮಕ್ಕೆ ಬ್ರಹ್ಮಕುಮಾರಿಸ್ ಉಸ್ತುವಾರಿ ರಾಜಯೋಗಿನಿ ಸಂತೋಷ ದಿದೀಜೀ ಚಾಲನೆ ನೀಡಿದರು.

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಪ್ರಭು ಪಸಂದ ಭವನವು ಜೀವನಮುಕ್ತಿಯ ಅನುಭವ ಮಾಡಿಸುವಂತಹ ಬೆಳಕಿನ ಭವನವಾಗಿದೆ. ಈ ಅಧ್ಯಾತ್ಮಿಕ ಶರಣರ ಭೂಮಿಯಾದ ಬಸವಕಲ್ಯಾಣದಲ್ಲಿ ಆತ್ಮಗಳ ಕಲ್ಯಾಣ ಆಗಲಿದೆ ಎಂದು ರಾಜಯೋಗಿನಿ ಬ್ರಹ್ಮಕುಮಾರಿ ಸಂತೋಷ ದಿದೀಜೀ ಹೇಳಿದರು.

ನಗರದಲ್ಲಿ ಬ್ರಹ್ಮಕುಮಾರಿಸ್ ವಿವಿಯ ಪ್ರಭು ಪಸಂದ ಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಿತ್ಯ ಮನುಷ್ಯರ ಸ್ಥಿತಿ ಹದಗೆಡುತ್ತಿದೆ. ಎಲ್ಲ ಸಮಸ್ಯೆ ಎದುರಿಸಲು ಅಧ್ಯಾತ್ಮಿಕ ಶಕ್ತಿ ಬೇಕಾಗಿದೆ. ಮನುಷ್ಯರಿಗೆ ಸ್ವ-ಪರಿಚಯ ಮತ್ತು ಪರಮಾತ್ಮನ ಪರಿಚಯವೂ ಇಲ್ಲ. ಕೇಳಿದ್ದು, ನೋಡಿದ್ದು ಮರೆಯಬಹುದು. ಆದರೆ ಅನುಭವದ ಮಾತು ಮರೆಯಲು ಆಗಲ್ಲ. ರಾಜಯೋಗದಿಂದ ಸರ್ವಶಕ್ತ ಪರಮಾತ್ಮನ ಶಕ್ತಿ ಪಡೆದು, ದುಃಖ ಅಶಾಂತಿಯಿಂದ ದೂರಾಗಬೇಕು ಎಂದರು.

ವಾರಂಗಲದ ಬ್ರಹ್ಮಕುಮಾರಿ ಸವೀತಾ ಬಹೆನಜೀ ಮಾತನಾಡಿ, ಈ ಭವನ ಸಮಸ್ತ ಕಲ್ಯಾಣ ನಾಡಿನ ಜನರಿಗೆ ಪರಮಾತ್ಮನ ಸಂದೇಶ ನೀಡುವ ಬೆಳಕಿನ ಮನೆಯಾಗಿದೆ ಎಂದರು.

ಬೀದರ್‌ನ ಬ್ರಹ್ಮಕುಮಾರಿ ಪ್ರತೀಮಾ ಬಹೆನಜೀ ಮಾತನಾಡಿ, ಮಹಾತ್ಮ ಬಸವೇಶ್ವರ ಕರ್ಮ ಭೂಮಿ ಶರಣರ ನಾಡಿನಲ್ಲಿರುವ ಪ್ರಭು ಪಸಂದ ಭವನವೂ ಹಲವು ಶರಣ ಆತ್ಮಗಳಿಗೆ ಸತ್ಯ ಪರಮಾತ್ಮನ ಪರಿಚಯ ನೀಡುವ ಹಾಗೂ ರಾಜಯೋಗದ ಅಭ್ಯಾಸ ಮಾಡಿಸುವ ಕೇಂದ್ರವಾಗಿದೆ ಎಂದರು.

ಭೂಮನ ಸಕು ಬಹೆನಜೀ, ಶ್ರೀ ಅಭಿನವ ಘನಲಿಂಗ ಸ್ವಾಮೀಜಿ, ಬೀದರ್‌ನ ಸುಮಂಗಲ ಬಹೆನಜೀ ಮಾತನಾಡಿದರು. ಹಾರಕೂಡ ಶ್ರೀಚೆನ್ನವೀರ ಶಿವಾಚಾರ್ಯರು, ಪ್ರಭಾಕರ ಭಾಯಿಜೀ, ಕಲ್ಯಾಣರಾಯ ಶಿವಣಕರ, ಸಂಜೀವ ವಾಡೆಕರ್, ಆರ್‌ಟಿಒ ಸೊಲ್ಲಾಪುರ, ಬಸವರಾಜ ವರವಟೆ, ತಹಸೀಲ್ದಾರ್ ಸಾವಿತ್ರಿ ಸಲಗರ, ಬಿಜೆಪಿ ಮುಖಂಡ ಶರಣು ಸಲಗರ, ಪ್ರಮುಖರಾದ ದೀಪಕ ಗುಡ್ಡಾ, ಉಮೇಶ ಇಂಜಿನಿಯರ್, ನತೀಶ ಚಂದರಗಿ ಇತರರಿದ್ದರು. ಸಂಚಾಲಕಿ ಸರಸ್ವತಿ ಬಹೆನಜೀ ಸ್ವಾಗತಿಸಿದರು. ಸುನಂದಾ ಬಹೆನಜೀ ನಿರೂಪಣೆ ಮಾಡಿದರು. ಭೀರಪ್ಪ ಬಾಯಿ ವಂದಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 10 ಫೆಬ್ರವರಿ 2020
10 FEBRUARY 2020

ನೆಮ್ಮದಿ ಬದುಕಿಗೆ ದುಶ್ಚಟ ಬಿಡಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ನೆಮ್ಮದಿಯ ಬದುಕು ಮತ್ತು ಆರೋಗ್ಯಪೂರ್ಣ ಸಮಾಜಕ್ಕಾಗಿ ದುಶ್ಚಟಗಳಿಂದ ದೂರವಿರಬೇಕು ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯರು ನುಡಿದರು.

ಶಿವಪುರದಲ್ಲಿ ಭಾನುವಾರ ವ್ಯಸನ ಮುಕ್ತ ಜೀವನಕ್ಕಾಗಿ ನಿಮ್ಮ ದುಶ್ಚಟಗಳು ನನ್ನ ಜೋಳಿಗೆಗೆ ಹಾಕಿ ಆರೋಗ್ಯವಂತರಾಗಿ ಎಂಬ ಘೋಷವಾಕ್ಯದೊಂದಿಗೆ ಹಮ್ಮಿಕೊಂಡ ಜೋಳಿಗೆ ಪಾದಯಾತ್ರೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದುಶ್ಚಟಕ್ಕೊಳಗಾದ ವ್ಯಕ್ತಿಗಳು ಸಂಸಾರದ ಭಾಗ್ಯದ ಬಾಗಿಲು ತೆರೆಯಲು ದುಶ್ಚಟ ಮುಕ್ತರಾಗಬೇಕು. ದುಶ್ಚಟ ಮುಕ್ತ ಸುಖಿ ಸಂಸಾರ, ಗ್ರಾಮ ಸುಖಿ ಗ್ರಾಮ ಆಗಬೇಕು ಎಂದರು.

» ಅಭಿನವ ಘನಲಿಂಗ ರುದ್ರಮನಿ ಶ್ರೀ ನುಡಿ

» ಶಿವಪುರದಲ್ಲಿ ಜಾಗೃತಿಗಾಗಿ ಜೋಳಿಗೆ ಪಾದಯಾತ್ರೆ

ಮಾಜಿ ಶಾಸಕ ಎಂ.ಜಿ.ಮುಳೆ ಮಾತನಾಡಿ, ಯುವಕರು ಗುಟಕಾ, ಸಿಗರೇಟ್ ಸೇರಿ ಇತರ ದುಶ್ಚಟಗಳಿಗೆ ಆಕರ್ಷಿತರಾಗಿ, ಆರೋಗ್ಯ ಹಾಳು ಮಾಡಿಕೊಳ್ಳಬಾರದು. ಶ್ರೀಗಳ ಅಭಿಯಾನಕ್ಕೆ ಕೈಜೋಡಿಸಬೇಕು ಎಂದರು.

ಬಿಜೆಪಿ ಮುಖಂಡರಾದ ಶರಣು ಸಲಗರ್ ಮಾತನಾಡಿ, ಸಾಧನೆಗೆ ಉತ್ತಮ ಆರೋಗ್ಯ ಅವಶ್ಯಕ. ಉತ್ತಮ ಆರೋಗ್ಯದಿಂದ ಸಾಧನೆ ಸಾಧ್ಯ ಎಂದರು.ಮುಖಂಡ ಬಸವರಾಜ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಗ್ರಾಪಂ ಸದಸ್ಯ ವೀರಣ್ಣ ರಾಜೋಳೆ, ಶರಣಯ್ಯ ಸ್ವಾಮಿ, ಶ್ರೀಮದ್ವೀರಸೈವ ಸದ್ಬೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ರಮೇಶ ರಾಜೋಳೆ ನಿರೂಪಣೆ ಮಾಡಿದರು.

ಜೋಳಿಗೆಯೊಂದಿಗೆ ಪಾದಯಾತ್ರೆ: ಶ್ರೀಸಿದ್ಧಲಿಂಗೇಶ್ವರ ಕಮರಿ ಮಠದಿಂದ ಪ್ರಮುಖ ರಸ್ತೆಗಳಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯರು ಜೋಳಿಗೆ ಹಿಡಿದು ಪಾದಯಾತ್ರೆ ನಡೆಸಿದರು. ಹಲವರು ಜೋಳಿಗೆಗೆ ಗುಟಕಾ ಪಾಕೇಟ್, ತಂಬಾಕು ಇತರ ವಸ್ತು ಹಾಕಿ ಚಟ ಬಿಡುವ ಸಂಕಲ್ಪ ಮಾಡಿದರು.

ಜಗನ್ನಾಥ ರಾಜೋಳೆ, ಭೀಮರೆಡ್ಡಿ ಬುಚಲೆ, ವೀರಣ್ಣ ರಾಜೊಳೆ, ಬಾಬು ಪೊಲೀಸ್ ಪಾಟೀಲ್, ರಾಜಪ್ಪ ಉಮ್ಮರ್ಗೆ, ಜಗನ್ನಾಥ ಮೂಲಗೆ, ಬಾಬು ಮೊಳಕೆರೆ, ಮಲ್ಲಿಕಾರ್ಜುನ್ ಮೇತ್ರೆ, ಶಿವಕುಮಾರ ಮೇತ್ರೆ, ಅನೀಲ ಸ್ವಾಮಿ, ಅನೀಲ ಉಮ್ಯಾರ್ಗೆ, ಕಾಶೀನಾಥ ರಾಜೋಳೆ, ಶಿವಲಿಂಗ ಮೂಲಗೆ, ಶಿವ ಕುಮಾರ್ ಕುಂಬಾರ, ಮಹೇಶ್ ಉಮ್ಮರಗೆ, ಉಮಾಕಾಂತ ಬಿರಾದಾರ, ಸೂರ್ಯಕಾಂತ ರಾಜೋಳೆ ಇತರರಿದ್ದರು.



ವಿಜಯವಾಣಿ ಚಿತ್ರ

ಶಿವಪುರದಲ್ಲಿ ಭಾನುವಾರ ದುಶ್ಚಟಗಳು ವಿರುದ್ಧ ಜಾಗೃತಿಗಾಗಿ ಶ್ರೀ ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯರು ಜೋಳಿಗೆ ಹಿಡಿದು ಪಾದಯಾತ್ರೆ ನಡೆಸಿದರು. ಮಾಜಿ ಶಾಸಕ ಎಂ.ಜಿ.ಮುಳೆ ಇತರರಿದ್ದರು.

Scanned with OKEN Scanner

ನಾಗಮಾರಪಳ್ಳಿಯಿಂದ ಉದ್ಯೋಗ ಮೇಳ

■ ವಿಕಸುದ್ದಿಲೋಕ ಬೀದರ್

ಬಸವಕಲ್ಯಾಣದ ಥೇರ ಮೈದಾನದಲ್ಲಿ ಫೆ. 15ರಂದು ವಿಕಾಸ ಅಕಾಡೆಮಿ ಬಸವಕಲ್ಯಾಣ ಆಯೋಜಿಸಿರುವ ಕಲ್ಯಾಣ ಕರ್ನಾಟಕ ಯುವ ಸಂಸತ್ತು 2020 (ಯುವಕರ ಬೃಹತ್ ಸಮಾವೇಶ) ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸೂರ್ಯಕಾಂತ ನಾಗಮಾರಪಳ್ಳಿ ಅವರು ಉದ್ಯೋಗ ಮೇಳವನ್ನು ಆಯೋಜಿಸಿದ್ದಾರೆ.

ಯುವಕರ ಬೃಹತ್ ಸಮಾವೇಶ

ನಿರುದ್ಯೋಗಿಗಳಿಗೆ ಇದೊಂದು ಸುವರ್ಣ ಅವಕಾಶ ಎದ್ದು ಇದರ ಲಾಭ ಪಡೆಯಬೇಕಾಗಿ ಎಲ್ಲಾ ವಿದ್ಯಾರ್ಥಿಗಳಿಗೆ, ಯುವಕರಿಗೆ ನಾಗಮಾರಪಳ್ಳಿ ಏನಂತಿಸಿದ್ದಾರೆ.

ಉದ್ಯೋಗ ಮೇಳದಲ್ಲಿ ಮೆಟ್ರೊ ಮೇಡಿ ಫಾರ್ಮಾ, ಸುಮಸ್ಥಾ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್, ಫ್ಯೂಚರ್ ಇಂಡಿಯಾ, ಸ್ವತಂತ್ರ ಮೈಕ್ರೊ ಫೈನಾನ್ಸ್ ಲಿಮಿಟೆಡ್, ಐ ಪ್ರೋಸೆಸ್ ಸರ್ವಿಸ್ ಇಂಡಿಯಾ ಪ್ರೈವೆಟ್ ಲಿಮಿಟೆಡ್, ಹಯಾನಾ ಡಿವೈಟ್ ಎಂಜಿನೀಯರ್ ಪ್ರೈವೆಟ್ ಲಿಮಿಟೆಡ್, ನೋವೇಲ್ ಗ್ರೂಪ್, ಓಮ್ ಇನ್ನೋವೇಶನ್ ಪ್ರೈವೆಟ್ ಲಿಮಿಟೆಡ್, ರಿಲಾಯನ್ಸ್ ಮಾರ್ಕೆಟ್ ಗಳಂತಹ ಪ್ರಸಿದ್ಧ ಕಂಪೆನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಲಿದ್ದು, ಸುಮಾರು 2500 ಜನರಿಗೆ ಉದ್ಯೋಗವನ್ನು ನೀಡಲಿದ್ದಾರೆ.

ಉದ್ಯೋಗವನ್ನು ಪಡೆಯುವಂತಹ ಯುವಕ- ಯುವತಿಯರು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಸಂದರ್ಶನಕ್ಕೆ ಆಗಮಿಸಬೇಕು ಎಂದು ಸೂರ್ಯಕಾಂತ ನಾಗಮಾರಪಳ್ಳಿ ತಿಳಿಸಿದ್ದಾರೆ.



ಬಸವಕಲ್ಯಾಣದಲ್ಲಿ ಫೆ. 15 ರಂದು ನಡೆಯಲಿರುವ ಯುವಕರ ಬೃಹತ್ ಸಮಾವೇಶ ಯುವ ಸಂಸತ್ತಿನ ಹಿನ್ನೆಲೆಯಲ್ಲಿ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸೂರ್ಯಕಾಂತ ನಾಗಮಾರಪಳ್ಳಿ ಆಯೋಜಿಸಿರುವ ಉದ್ಯೋಗ ಮೇಳದ ಸಿದ್ಧತೆಯನ್ನು ಪರಿಶೀಲಿಸಿದರು.

ವಿಜಯ ಕರ್ನಾಟಕ

ಶುಕ್ರವಾರ,14 ಫೆಬ್ರುವರಿ 2020

'ಸದ್ಭಾವದಿಂದ ಸುಖ ಶಾಂತಿ ಸಾಧ್ಯ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಸದ್ಭಾವದಿಂದ ಬಾಳಿದರೆ ಮಾತ್ರ ಕುಟುಂಬದಲ್ಲಿ ಸುಖ, ಶಾಂತಿ ನೆಲೆಸಲು ಸಾಧ್ಯ' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿನ ಶಹಾಪುರ ಓಣಿಯ ಮುಖ್ಯಶಿಕ್ಷಕಿ ಕಲ್ಪನಾ ದಯಾನಂದ ಶೀಲವಂತ ನಿವಾಸದಲ್ಲಿ ಈಚೆಗೆ ಆಯೋಜಿಸಿದ್ದ 'ಮನೆ ಮನಗಳಲ್ಲಿ ಸದ್ಭಾವ ಚಿಂತನಾ ಗೋಷ್ಠಿಯಲ್ಲಿ ಅವರು ಮಾತನಾಡಿದರು.

'ನಿಸ್ವಾರ್ಥ ಭಾವನೆಯಿಂದ ಪೂಜೆ, ಧ್ಯಾನ, ತಪಸ್ಸಿನ ಫಲವು ಉತ್ತಮವಾಗಿರುತ್ತದೆ. ಸದ್ಭಾವವಿದ್ದರೆ ಮಾತ್ರ ಪರಮಾತ್ಮನು ಒಲಿಯುತ್ತಾನೆ' ಎಂದು ಹೇಳಿದರು.

ಹುಲಸೂರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಡಾ.ಶಿವಲೀಲಾ ಮಠಪತಿ ಮಾತನಾಡಿ, 'ಮನುಷ್ಯ ಭೋಗ ಜೀವನ ತೊರೆದರೆ ಮಾತ್ರ ಆಧ್ಯಾತ್ಮದಲ್ಲಿ ಸಾಧನೆಗೈದು ಯೋಗಿ ಆಗಬಹುದು. ಇದಕ್ಕೆಲ್ಲ ಗುರುವಿನ ಮಾರ್ಗದರ್ಶನ ಅಗತ್ಯವಾಗಿದೆ. ಯಾರೂ ಆಲಸಿಗಳಾಗಿ, ವ್ಯರ್ಥವಾಗಿ ಜೀವನ ಕಳೆಯದೇ ಕಾಯಕ ಜೀವಿಗಳಾಗಬೇಕು' ಎಂದರು.

ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಬಸವರಾಜ ಸ್ವಾಮಿ, ಸವಿತಾ ರಮೇಶ ಸ್ವಾಮಿ, ಶರಣಪ್ಪ ಬಿರಾದಾರ, ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಸೂರ್ಯಕಾಂತ ಶೀಲವಂತ, ಪ್ರೊ. ರುದ್ರೇಶ್ವರ ಸ್ವಾಮಿ ಗೋರಟಾ, ಶ್ರೀದೇವಿ ಚಿರಡೆ, ಸರಸ್ವತಿ ಬೆಂಬಳಗೆ, ಜಗದೇವಿಸ್ವಾಮಿ, ಕಲಾವತಿ, ಇಂದುಮತಿ ಮೆಟಗೆ ಇದ್ದರು. ನಾಗಣ್ಣ ಭೂಶೆಟ್ಟಿ, ಮಲ್ಲಿಕಾರ್ಜುನ ಶೀಲವಂತ ಸಂಗೀತ ಪ್ರಸ್ತುತ ಪಡಿಸಿದರು.



ಬಸವಕಲ್ಯಾಣದಲ್ಲಿ ಈಚೆಗೆ ಆಯೋಜಿಸಿದ್ದ ಮನೆ ಮನಗಳಲ್ಲಿ ಸದ್ಭಾವ ಚಿಂತನಾಗೋಷ್ಠಿಯಲ್ಲಿ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಡಾ.ಶಿವಲೀಲಾ ಮಠಪತಿ ಪಾಲ್ಗೊಂಡಿದ್ದರು

ಪ್ರಜಾವಾಣಿ ಸೋಮವಾರ • ಫೆಬ್ರುವರಿ 17, 2020

ಸಮಾಜ ಕಟ್ಟುವುದು ದೊಡ್ಡ ಕೆಲಸ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಗವಿಮಠದ ಅಭಿನವ ಶ್ರೀಗಳು ತಮ್ಮ ಜನ್ಮ ದಿನವನ್ನು ವ್ಯಸನಮುಕ್ತ ಸಮಾಜ ನಿರ್ಮಾಣಕ್ಕಾಗಿ ಸಂಕಲ್ಪಮಾಡಿ ಅಭಿನವ ಘನಲಿಂಗ ಜೋಳಿಗೆ ಪಾದಯಾತ್ರೆ ಮಾಡುತ್ತಿರುವುದು ಶ್ರೇಷ್ಠ ಸಮಾಜ ಸೇವೆ ಎಂದು ಕಲಬುರಗಿಯ ಶರಣಬಸವೇಶ್ವರ ಕಾಲೇಜಿನ ಪ್ರೊ. ವೆಂಕಣ್ಣ ಡೊಣ್ಣೆಗೌಡರು ಹೇಳಿದರು.

ನಗರದ (ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಶುಕ್ರವಾರ ಜರುಗಿದ ಅಭಿನವಶ್ರೀ ಪ್ರಕಾಶನ ಉದ್ಘಾಟನೆ ಹಾಗೂ 'ವ್ಯಸನಮುಕ್ತ ಸಮಾಜಕ್ಕಾಗಿ ಅಭಿನವ ಘನಲಿಂಗ ಜೋಳಿಗೆ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು, ಕಟ್ಟಡ ಕಟ್ಟುವುದಕ್ಕಿಂತ ಸಮಾಜ ಕಟ್ಟುವುದು ದೊಡ್ಡ ಕೆಲಸ. ಅನೇಕರು ವಿವಿಧ ದುಶ್ಚಟಗಳಿಗೆ ಆಕರ್ಷಿತರಾಗಿ ಸಮಾಜ ತಮ್ಮ ಆರೋಗ್ಯದ ಜತೆಗೆ ಹಾಳಾಗುತ್ತಿರುವುದನ್ನು ಕಂಡ ಶ್ರೀಗಳು ದುಶ್ಚಟಗಳನ್ನು ನನ್ನ ಜೋಳಿಗೆಯಲ್ಲಿ ಹಾಕಿ ಎಂಬ ಅಭಿಯಾನ ಸಚಿತ್ರಿಸುತ್ತಿದ್ದಾರೆ ಎಂದರು.

» ಅಭಿನವ ಘನಲಿಂಗ ಜೋಳಿಗೆ ಕೃತಿ ಬಿಡುಗಡೆ

ಉಪನ್ಯಾಸಕ ರೇವಣಸಿದ್ದಪ್ಪ ಮೊರಗಿಳ್ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಅವರು, ನಾನು ಕಂಡಿರುವುದಂತೆ ಅಭಿನವ ಶ್ರೀಗಳು ಸರಳ, ಸಜ್ಜನಿಕೆ, ಪ್ರೀತಿ ಮಾತಿನ ಪೂಜ್ಯರಾಗಿದ್ದಾರೆ. ಅವ್ವಂದೇ ಯಾವುದೇ ಭೇದ ಭಾವವಿಲ್ಲದೇ ಎಲ್ಲರನ್ನು ಭಕ್ತರೆಂದು ಕಾಣುವ ಸಮಭಾವ ಉಳ್ಳವರು ಎಂದರು.

» ಪ್ರೊ. ವೆಂಕಣ್ಣ ಡೊಣ್ಣೆಗೌಡರು ಅಭಿಪ್ರಾಯ

ನೇತೃತ್ವ ವಹಿಸಿದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಸಾಹಿತ್ಯ ಕ್ಷೇತ್ರದಲ್ಲಿಯು ನೆಲೆಸುವ ಉದ್ದೇಶಕ್ಕಾಗಿ ಗವಿಮಠದಿಂದ ಅಭಿನವಶ್ರೀ ಪ್ರಕಾಶನ ಉದ್ಘಾಟನೆಗೊಂಡು ಈ ಮೊದಲು ಕೃತಿ ಪ್ರಕಟಗೊಳಿಸುವುದರ ಮೂಲಕ ಸಾಹಿತ್ಯ ಸೇವೆ ಆರಂಭಗೊಂಡಿದೆ ಎಂದರು.

ಶಿಕ್ಷಕ ನಾಗೇಂದ್ರ ಬಿರಾದಾರ ಅವರು ಅಭಿನವ ಜೋಳಿಗೆ ಕವನ ವಾಚನ ಮಾಡಿದರು. ಕಲ್ಯಾಣ ಸಂಸ್ಥಾನ ಹಿರೇಮಠದ ಶ್ರೀ ವೃಷಭೇಂದ್ರ ಶಿವಾಚಾರ್ಯರು ಆಶೀರ್ವಚನ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ, ಬಸವರಾಜ ಮಠಪತಿ, ಬಾಬುರಾವ ಉಳ್ಳಿ ದೇವಣಸಿದ್ಧಯ್ಯ ಸ್ವಾಮಿ, ಸವಿತಾ ರಮೇಶ ಸ್ವಾಮಿ, ಶಿವಕುಮಾರ ಮಠ, ರಾಜಕುಮಾರ ಹೂಗಾರ, ಸಂಜು ರೋಣಿಲೆ, ಚಂದ್ರಕಾಂತ ಪತ್ರಕರ್ತರ ಸಂಘದ ವೀರಶೆಟ್ಟಿ ಮಲ್ಕಶೆಟ್ಟಿ ಇತರರಿದ್ದರು. ಗಂಗಾಧರ ಸ್ವಾಮಿಮಠ ಸ್ವಾಗತಿಸಿದರು. ಶಿಕ್ಷಕಿ ಜಿಯಾ ಮಹೇಜ್ ಕರಸಂಗಾ ನಿರೂಪಣೆ ಮಾಡಿದರು.

ವಿಜಯವಾಣಿ ಚಿತ್ರ



ನಂ. 1 ಕನ್ನಡ ದಿನಪತ್ರಿಕೆ

ವಿಜಯವಾಣಿ

• VIJAYAVANI » KALABURAGI

ಶನಿವಾರ 22 ಫೆಬ್ರವರಿ 2020

22 FEBRUARY 2020

Scanned with OKEN Scanner

ಸಮಾಜ ಕಟ್ಟುವುದೇ ದೊಡ್ಡ ಕೆಲಸ : ಪ್ರೊ. ವೆಂಕಣ್ಣ

ಕರ್ನಾಟಕ ಸಂಧ್ಯಾಕಾಲ



ಬಸವಕಲ್ಯಾಣ : ಕಟ್ಟಡ ಕಟ್ಟುವುದಕ್ಕಿಂತ ಸಮಾಜ ಕಟ್ಟುವುದು ದೊಡ್ಡ ಕೆಲಸ. ಇಲ್ಲಿಯ ಗವಿಮಠದ ಅಭಿನವಶ್ರೀಗಳು ತಮ್ಮ ಹುಟ್ಟು ಹಬ್ಬವನ್ನು ವ್ಯಸನಮುಕ್ತ ಸಮಾಜ ನಿರ್ಮಾಣಕ್ಕಾಗಿ ಸಂಕಲ್ಪಮಾಡಿ ಅಭಿನವ ಘನಲಿಂಗ ಜೋಳಿಗೆ ಪಾದಯಾತ್ರೆ ಮಾಡುತ್ತಿರುವುದು ಶ್ರೇಷ್ಠ ಸಮಾಜ ಸೇವೆ ಎಂದು ಕಲಬುರಗಿಯ ಶರಣಬಸವೇಶ್ವರ ಕಾಲೇಜಿನ ಪ್ರೊ. ವೆಂಕಣ್ಣ ಡೊಣ್ಣೇಗೌಡರು ಹೇಳಿದರು.

ನಗರದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಗುರುವಾರ ರಂದು ನಡೆದ ಅಭಿನವ ಶ್ರೀ ಪ್ರಕಾಶನ ಉದ್ಘಾಟನೆ ಹಾಗೂ ವ್ಯಸನಮುಕ್ತ ಸಮಾಜಕ್ಕಾಗಿ ಅಭಿನವ ಘನಲಿಂಗ ಜೋಳಿಗೆ ಕೃತಿ ಬಿಡುಗಡೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಕೃತಿ ಪರಿಚಯಿಸಿ ಮಾತನಾಡುತ್ತ ಅಭಿನವ ಶ್ರೀಗಳಿಗೆ ಸಮಾಜದ ಬಗ್ಗೆ ಅಪಾರ ಕಾಳಜಿ ಇದ್ದು, ಅನೇಕರು ವಿವಿಧ ದುಶ್ಚಟಗಳಿಗೆ ಬಲಿಯಾಗಿ ಸಮಾಜ ಹಾಳಾಗುತ್ತಿರುವುದನ್ನು ಕಂಡ ಪೂಜ್ಯರು ವ್ಯಸನಮುಕ್ತ ಸಮ್ಮಾಜ ನಿರ್ಮಾಣಕ್ಕಾಗಿ ನಿಮ್ಮ ದುಶ್ಚಟಗಳನ್ನು ನನ್ನ ಜೋಳಿಗೆಯಲ್ಲಿ ಹಾಕಿ ಎಂಬ ದಿವ್ಯ ಸಂದೇಶದೊಂದಿಗೆ ಬಸವಕಲ್ಯಾಣ, ಶಿವಪೂರಗಳಲ್ಲಿ ಹೀಗೇ ಮುಂದುವರಿಸಿರುವ ಇವರು ಅಪರೂಪದ ಪೂಜ್ಯರು. ಪೂಜ್ಯರ ಈ ಮಹಾ ಕಾರ್ಯವನ್ನು ಆತ್ಮೀಯ ಗೆಳೆಯರಾದ ಹವ್ಯಾಸಿ ಚಿತ್ರಕಲಾವಿದ, ಛಾಯಾಗ್ರಾಹಕ ವೀರಶೆಟ್ಟಿ ಎಂ.ಪಾಟೀಲ ಅವರು ಕೃತಿ ರೂಪದಲ್ಲಿ ಹೊರ ತಂದು ನಮಗೂ ಹಾಗೂ ಮುಂದಿನ ಪೀಳಿಗೇಗೂ ಶಾಶ್ವತವಾಗಿ ಪರಿಚಯಿಸಿದ ಮಹಾ ಕಾರ್ಯವನ್ನು ಶ್ಲಾಘಿಸಿದರು. ಜೊತೆಗೆ ಪೂಜ್ಯರು ತಮ್ಮ ಗವಿಮಠದಲ್ಲಿ ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಉಪನ್ಯಾಸಮಾಲ್ಯಗ ಳನ್ನು ಏರ್ಪಡಿಸುತ್ತ ಜ್ಞಾನದಾಸೋಹ

6ನೇ ಪುಟಕ್ಕೆ

ಶನಿವಾರ, ಜನವರಿ 11, 2020
ಕರ್ನಾಟಕ ಸಂಧ್ಯಾಕಾಲ

ಪ್ರತಿಯೊಬ್ಬರಿಗೂ ಗುರುವಿನ ಮಾರ್ಗದರ್ಶನ ಅವಶ್ಯ

ವಿಜಯ ಕರ್ನಾಟಕ
ಶುಕ್ರವಾರ,13 ಮಾರ್ಚ್ 2020

■ ವಿಜಯ ಸುದ್ದಿಲೋಕ ಬಸವಕಲ್ಯಾಣ

ಜೀವನದಲ್ಲಿನ ಅಂಧಃಕಾರ ಹೋಗಬೇಕಾದರೆ ಜ್ಞಾನದ ಬೆಳಕನ್ನು ಅರಿತು ಗುರುವಿನ ಅನುಗ್ರಹ ಪಡೆದು ಕರ್ಮ ಮತ್ತು ಜ್ಞಾನವನ್ನು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು ಎಂದು ಇಲ್ಲಿಯ ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಖೂಬಾ ಕಾಲೋನಿಯ ಮಹಾನಂದಾ ರಮೇಶ ಬಿರನಾಳೆ ಅವರ ನಿವಾಸದಲ್ಲಿ ನಡೆದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಶ್ರೀಗಳು ಮಾತನಾಡಿ, ಯಾವುದೇ ಒಬ್ಬವ್ಯಕ್ತಿ ತಾನೇ ಓದಿ ಪಂಡಿತನಾಗುತ್ತಾನೆ ಎಂದು ತಿಳಿದುಕೊಂಡರು ಅದು ಪರಿಪೂರ್ಣವಾಗಲಾರದು ಅದಕ್ಕೆ ಗುರುವಿನ ಮಾರ್ಗದರ್ಶನ ಅತ್ಯವಶ್ಯ. ಜಗತ್ತಿನಲ್ಲಿ ಗುರು ಇಲ್ಲದಿದ್ದರೆ ಸನಾತನ ಧರ್ಮದ ಕುರಿತು ತಿಳಿವಳಿಕೆ ಇರುತ್ತಿರಲಿಲ್ಲ ಜನರಲ್ಲಿ ಶ್ರದ್ಧೆ ಇರುತ್ತಿರಲಿಲ್ಲ ಪರಸ್ಪರದಲ್ಲಿ ಸಂಘರ್ಷ ಉಂಟಾಗತಿತ್ತು. ದೇಶದ ರಕ್ಷಣೆಯಲ್ಲಿ ಯುವಕರ ಪಾತ್ರ ಬಹಳದೊಡ್ಡದು ಎಂದು ಹೇಳಿದರು.



ಬಸವಕಲ್ಯಾಣ ನಗರದ ಖೂಬಾ ಕಾಲೋನಿಯ ಮಹಾನಂದಾ ರಮೇಶ ಬಿರನಾಳೆ ಅವರ ನಿವಾಸದಲ್ಲಿ ನಡೆದಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಶಿವಕುಮಾರ ಜಡಗೆ, ರಾಜಶೇಖರ ವಿಜಾಪುರೆ ಉಪಸ್ಥಿತರಿದ್ದರು.

ತಾಲೂಕು ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಶಿವಕುಮಾರ ಜಡಗೆ ಮಾತನಾಡಿ, ಧರ್ಮದ ತತ್ವವನ್ನು ಯಾರು ಉಪದೇಶ ಮಾಡುತ್ತಾರೋ ಅವರಿಗೆ ಮಾತ್ರ ಜಗತ್ತೇ ಗುರು ಎಂದು ಒಪ್ಪಿಕೊಳ್ಳುತ್ತದೆ. ಶಿವನ ಪ್ರೀತಿಗೆ ಪಾತ್ರರಾಗಬೇಕಾದರೆ ಗುರುವಿನ ಮಾತನ್ನು ಶಿಷ್ಯ ಅನುಸರಿಸಬೇಕಾಗುತ್ತದೆ. ಇಂತಹ ಶಿವಜ್ಞಾನವನ್ನು ಲೋಕದ ಜನರು ತಿಳಿದಿಕೊಳ್ಳಬೇಕು ಎಂದರು.

ರಾಜಶೇಖರ ವಿಜಾಪುರೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಲಾವಿದರಾದ ಗಜಾನನ ಸ್ವಾಮಿ ಬೇಲೂರ, ರಾಮಯ್ಯ ಸ್ವಾಮಿ ಹಾಗೂ ಮಲ್ಲಿಕಾರ್ಜುನ ಶೀಲವಂತ ಧನ್ನೂರಕರ್ ಭಕ್ತಿ ಸಂಗೀತ ಸೇವೆ ನಡೆಸಿಕೊಟ್ಟರು. ಸುಮಿತ್ರಾ ರಾಜಕುಮಾರ ಡಾವನಗಾಂವ ಸ್ವಾಗತಿಸಿದರು. ರಾಮಶೆಟ್ಟಿ ಬಿರಾದರ ನಿರೂಪಿಸಿದರು. ಈ ಸಂದರ್ಭದಲ್ಲಿ ಶಿವಕುಮಾರ ಮಠ, ಸುಮಿತಕುಮಾರ ಆಗ್ರೆ, ಸಂತೋಷ ಬಿರನಾಳೆ,ಮಲ್ಲಿಕಾರ್ಜುನ,ಸವಿತಾ ಮುರಗೆಪ್ಪಾ ರಗಟೆ,ಶ್ರೀದೇವಿ ಕಾಕನಾಳೆ, ಆಶಾದೇವಿ ಶ್ರೀಕಾಂತ ಪಾಟೀಲ್ ,ಶಕುಂತಲಾ, ಸಂಗೀತಾ ಪಂಚಾಳ, ನಾಗಮ್ಮ ಬಿರಾದಾರಸೇರಿ ಅನೇಕರಿದ್ದರು.

ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮ

ವಿಜಯ ಕರ್ನಾಟಕ

ಕರ್ತವ್ಯ-ಜ್ಞಾನ ತಿಳಿಸಿದ ಗುರು



ಬಸವಕಲ್ಯಾಣ: ನಗರದ ಖೂಬಾ ಬಡಾವಣೆಯಲ್ಲಿ ನಡೆದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಬಸವಕಲ್ಯಾಣ: ನಮ್ಮಜವಲ್ಲಿನ ಮಾತನಾಡಿ, ಧರ್ಮದ ತತ್ವವನ್ನು ಅಂಧಕಾರ ಹೋಗಬೇಕಾದರೆ ಯಾರು ಉಪದೇಶ ಮಾಡುತ್ತಾರೋ ಜ್ಞಾನದ ಬೆಳಕು ಅರಿತು ಗುರುವಿನ ಅವರಿಗೆ ಮಾತ್ರ ಜಗತ್ತೇ ಅನುಗ್ರಹ ಪಡೆದು ಕರ್ಮ ಮತ್ತು ಎಂದು ಒಪ್ಪಿಕೊಳ್ಳುತ್ತದೆ. ಶಿವನ ಜ್ಞಾನವನ್ನು ಪ್ರತಿಯೊಬ್ಬರೂ ಪ್ರೀತಿಗೆ ಪಾತ್ರರಾಗಬೇಕಾದರೆ ತಿಳಿದುಕೊಳ್ಳಬೇಕು ಎಂದು ಗುರುವಿನ ಮಾತನ್ನು ಶಿಷ್ಯರು ಶ್ರೀ ಅಭಿನವ ಘನಲಿಂಗ ರುದ್ರಮುನಿ ಅನುಸರಿಸಬೇಕಾಗುತ್ತದೆ. ಶಿವಾಚಾರ್ಯರು ಹೇಳಿದರು. ಇಂತಹ ಶಿವಜ್ಞಾನವನ್ನು ಲೋಕದ ಜನರು ನಗರದ ಖೂಬಾ ಬಡಾವಣೆಯ ತಿಳಿದುಕೊಳ್ಳಬೇಕೆಂದು ಮಹಾನಂದಾ ರಮೇಶ ಬಿರನಾಳೆ ಅವರ ನೀಡಿದರು. ರಾಜಶೇಖರ ವಿಜಾಪುರೆ ಅಧ್ಯಕ್ಷತೆ ಮನೆಯಲ್ಲಿ ಆಯೋಜಿಸಿದ್ದ ವಹಿಸಿ ಮಾತನಾಡಿದರು. ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಸಂದರ್ಭದಲ್ಲಿ ಶಿವಕುಮಾರ ಆಗ್ರೆ, ಸಂತೋಷ ಹುಣ್ಣಿಮೆ ಕಾರ್ಯಕ್ರಮದ ಸಾನಿಧ್ಯ ಸುಮಿತಕುಮಾರ ಬಿರನಾಳೆ, ಮಲ್ಲಿಕಾರ್ಜುನ, ಸವಿತಾ ವಹಿಸಿ ಅವರು ಮಾತನಾಡಿದರು. ಮುರಗೆಪ್ಪಾ ರಗಟೆ,ಶ್ರೀದೇವಿ ಕಾಕನಾಳೆ, ಯಾವುದೇ ಒಬ್ಬ ವ್ಯಕ್ತಿ ತಾನೇ ಓದಿ ಆಶಾದೇವಿ ಶ್ರೀಕಾಂತ ಪಾಟೀಲ, ಪಂಡಿತ ನಾಗುತ್ತಾನೆ ಎಂದು ತಿಳಿದು ಶಕುಂತಲಾ, ಸಂಗೀತಾ ಪಂಚಾಳ, ಕೊಂಡರೂ ಪರಿಪೂರ್ಣವಾಗಲಾರದು. ನಾಗಮ್ಮ ಬಿರಾದಾರ ಇದ್ದರು. ಸುಮಿತ್ರಾ ಅದಕ್ಕೆ ಗುರುವಿನ ಮಾರ್ಗದರ್ಶನ ರಾಜಕುಮಾರ ಡಾವನಗಾಂವ ಸ್ವಾಗತಿಸಿದರು. ಅತ್ಯವಶ್ಯ. ಜಗತ್ತಿನಲ್ಲಿ ಗುರು ಇಲ್ಲದಿದ್ದರೆ ರಾಮಶೆಟ್ಟಿ ಬಿರಾದಾರ ನಿರೂಪಿಸಿದರು. ಸನಾತನ ಧರ್ಮದ ಕುರಿತು ತಿಳಿವಳಿಕೆ ಕಲಾವಿದರಾದ ಗಜಾನನ ಸ್ವಾಮಿ, ಇರುತ್ತಿರಲಿಲ್ಲ ಜನರಲ್ಲಿ ಶ್ರದ್ಧೆ ಹಾಗೂ ಪರಸ್ಪರದಲ್ಲಿ ಸಂಘರ್ಷ ಬದಲಾಗಿ ರಾಮಯ್ಯಾ ಸ್ವಾಮಿ, ಮಲ್ಲಿಕಾರ್ಜುನ ಉಂಟಾಗುತ್ತಿತ್ತು ಎಂದರು. ಶೀಲವಂತ ಸಂಗೀತ ನಡೆಸಿಕೊಟ್ಟರು.

ದೈಹಿಕ ಶಿಕ್ಷಕ ಶಿವಕುಮಾರ ಜಡಗೆ

ಕಲಬುರಗಿ ಉದಯವಾಣಿ
ಶುಕ್ರವಾರ, ಮಾರ್ಚ್ 13, 2020

Scanned with OKEN Scanner

ದುಶ್ಚಟಗಳಿಂದ ದೂರವಿದ್ದರೆ ಸ್ವಸ್ಥ ಬದುಕು

ವಿಕ ಸುದ್ದಿಲೋಕ ಬಸವಕಲ್ಯಾಣ

ಆರೋಗ್ಯ ಪೂರ್ಣ ಸ್ವಸ್ಥ ಸಮಾಜ ನಿರ್ಮಾಣ ಮತ್ತು ಶಾಂತಿಯುತ ಬದುಕಿಗೆ, ದುಶ್ಚಟಗಳಿಂದ ದೂರ ಇರಬೇಕು ಎಂದು ಇಲ್ಲಿಯ ಗವಿ ಮಠದ ಶ್ರೀ ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯರು ಹೇಳಿದರು.

ತಾಲೂಕಿನ ಶಿವಪುರ ಗ್ರಾಮದಲ್ಲಿ ಭಾನುವಾರ ಶ್ರೀ ಸಿದ್ಧಲಿಂಗೇಶ್ವರ ಕಮರಿ ಮಠದಿಂದ ವ್ಯಸನ ಮುಕ್ತ ಜೀವನಕ್ಕಾಗಿ ನಿಮ್ಮ ದುಶ್ಚಟಗಳು ನನ್ನ ಜೋಳಿಗೆಗೆ ಹಾಕಿ ಆರೋಗ್ಯವಂತರಾಗಿ ಬದುಕಿ ಎಂಬ ವಾಕ್ಯದೊಂದಿಗೆ ಗ್ರಾಮದ ಪ್ರತಿ ಬಡಾವಣೆಗಳಲ್ಲಿ ಜೋಳಿಗೆ ಪಾದಯಾತ್ರೆ ಕೈಗೊಂಡರು.

ಯುವಕರು ದುಶ್ಚಟಗಳಿಂದ ದೂರವಾಗಿ ಸಂಸಾರದ ಭಾಗ್ಯದ ಬಾಗಿಲು ತೆರೆಯಲು ದುಶ್ಚಟ ಮುಕ್ತ ಗ್ರಾಮ,ದುಶ್ಚಟ ಮುಕ್ತ ಸಂಸಾರ.ಸುಖಿ ಗ್ರಾಮ, ಸುಖಿ ಸಂಸಾರ ಆಗಬೇಕೆಂದು ಜನರಲ್ಲಿ ಜಾಗೃತಿ ಮೂಡಿಸಿದರು.



ಬಸವಕಲ್ಯಾಣ ತಾಲೂಕಿನ ಶಿವಪುರ ಗ್ರಾಮದಲ್ಲಿ ಭಾನುವಾರ ದುಶ್ಚಟಗಳು ನನ್ನ ಜೋಳಿಗೆ ಹಾಕಿ ಎಂಬ ವಾಕ್ಯದೊಂದಿಗೆ ಗ್ರಾಮದಲ್ಲಿ ಪಾದಯಾತ್ರೆ ನಡೆಸಿದರು. ಮಾಜಿ ಶಾಸಕ ಮಾರುತಿರಾವ ಮುಳೆ, ಮುಖಂಡ ಶರಣು ಸಲಗರ ಸೇರಿ ಅನೇಕರಿದ್ದರು.

ಯುವ ಮುಖಂಡ ಶರಣು ಸಲಗರ ಮಾತನಾಡಿ,ಇಂದಿನ ಯುವಕರು ದುಶ್ಚಟಗಳಿಗೆ ಬಲಿಯಾಗಬೇಡಿ, ಬಲಿಯಾಗಿ ಬದುಕು ಹಾಳು ಮಾಡಿಕೊಳ್ಳಬೇಡಿ ಎಂದು ಹೇಳಿದರು. ಮಾಜಿ ಶಾಸಕ ಮಾರುತಿರಾವ ಮುಳೆ ಮಾತನಾಡಿ, ಶಿವಪುರ ಗ್ರಾಮ ವ್ಯಸನ ಮುಕ್ತ ಗ್ರಾಮ ಆಗಬೇಕು ಎಂದು ಆಶಿಸಿದರು.

ಮುಖಂಡ ಬಸವರಾಜ್ ಪಾಟೀಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪಾದಯಾತ್ರೆ ವೇಳೆಯಲ್ಲಿ,ಜಗನ್ನಾಥ್ ರಾಜೋಳೆ,ಭೀಮರೆಡ್ಡಿ ಬುಚಲೆ ,ವೀರಣ್ಣ ರಾಜೊಳೆ, ಬಾಬು ಪೊಲೀಸ್ ಪಾಟೀಲ್ ,ರಾಜಪ್ಪ ಉಮ್ಮರ್ಗೆ ಜಗನ್ನಾಥ್ ಮೂಲಗೆ, ಬಾಬು ಮೊಳಕೆರೆ, ಮಲ್ಲಿಕಾರ್ಜುನ್ ಮೆತ್ರೆ, ಶಿವಕುಮಾರ್ ಮೇತ್ರೆ ಸೇರಿ ಅನೇಕರಿದ್ದರು.

ಇದೇ ವೇಳೆ ಯುವಕರು ದುಶ್ಚಟಗಳನ್ನು ಶ್ರೀಗಳ ಜೋಳಿಗೆಗೆ ಹಾಕಿದರು. ಗ್ರಾಮದ ಯುವಕರಾದ ಅನಿಲ್ ಸ್ವಾಮಿ, ಅನಿಲ್ ಉಮ್ಮರ್ಗೆ, ಕಾಶಿನಾಥ್ ರಾಜೋಳೆ, ಶಿವಲಿಂಗ ಮೂಲಗೆ, ಶಿವಕುಮಾರ ಕುಂಬಾರ, ಮಹೇಶ್ ಉಮ್ಮರಗೆ, ಉಮಾ ಕಾಂತ ಬಿರಾದಾರ ಸೂರ್ಯಕಾಂತ ರಾಜೋಳೆ, ಪ್ರೇಮಸಾಗರ್ ಮೂಲಗೆ, ಸಚಿನ್ ಪೆದ್ದೆ ಆನಂದ್ ಸಂಗನಬಸವ, ವಿಜಯಕುಮಾರ್ ಪಾಟೀಲ್ ,ವಿಠಲ್ ರೆಡ್ಡಿ ಬುಚಲೆ, ಮಹದೇವ್ ಲದ್ದೆ, ವಿನೋದ್ ಮೂಲಿ, ಕಾಶಪ್ಪ ಉಮ್ಮೆರಗೆ, ಪ್ರಶಾಂತ ಆಕ್ಕೋನಿ ಉಪಸ್ಥಿತರಿದ್ದರು. ರಮೇಶ್ ರಾಜೊಳೆ ನಿರೂಪಿಸಿ. ವಂದಿಸಿದರು. ಜೋಳಿಗೆ ಪಾದಯಾತ್ರೆಯಲ್ಲಿ ಗ್ರಾಮದ ನೂರಾರು ಮಹಿಳೆಯರು, ಮುಖಂಡರು ಪಾಲ್ಗೊಂಡಿದ್ದರು.

ವಿಜಯಕರ್ನಾಟಕ ಮಂಗಳವಾರ,11 ಫೆಬ್ರವರಿ 2020

ಡಾ.ಸೂರ್ಯಕಾಂತ ಸುಜ್ಯಾತ್ ಅಭಿಮತ | ಹಗಲುಗಳ್ಳರು ಕಥಾ ಸಂಕಲನ ಬಿಡುಗಡೆ

ಅಣಕಲ್ ಕವನದಲ್ಲಿ ಜೀವನ ಅನಾವರಣ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಬಡತನ, ಶೋಷಣೆ, ನೋವು, ಮೂಢ ನಂಬಿಕೆಗಳಂತಹ ಅಂಶಗಳನ್ನು ಮಚೇಂದ್ರ ಅಣಕಲ್ ಅವರು ಕಥಾ ಸಂಕಲನದಲ್ಲಿ ಅನಾವರಣಗೊಳಿಸಿದ್ದಾರೆ ಎಂದು ಕಲಬುರಗಿಯ ನೂತನ ಪದವಿ ಕಾಲೇಜಿನ ಉಪನ್ಯಾಸಕ ಡಾ.ಸೂರ್ಯಕಾಂತ ಸುಜ್ಯಾತ್ ಅಭಿಪ್ರಾಯಪಟ್ಟರು.

ನಗರದ ಪುಣ್ಯಕೋಟಿ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಸಾಹಿತಿ ಮಚೇಂದ್ರ ಪಿ.ಅಣಕಲ್ ಅವರ ಹಗಲುಗಳ್ಳರು ಕಥಾ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಕಥಾ ಸಂಕಲನದಲ್ಲಿ ಲೇಖಕರು ತಮ್ಮ ಜೀವನದಲ್ಲಿ ಎದುರಾದ ಸಮಸ್ಯೆಗಳನ್ನೇ ಕಥಾ ವಸ್ತುಗಳಾಗಿ ಇಟ್ಟುಕೊಂಡು ಪುಸ್ತಕ ರೂಪದಲ್ಲಿ ಹೊರ ತಂದಿದ್ದಾರೆ ಎಂದರು.

ಡಿಡಿಪಿಯು ರಮೇಶ ಬೆಜಗಂ ಮಾತನಾಡಿ, ಅಣಕಲ ಅವರ ಕಥೆ 2010ರಲ್ಲಿ ಅಮೆರಿಕದ ಅಕ್ಕ ಕಥಾ ಸ್ಪರ್ಧೆಯಲ್ಲಿ ಆಯ್ಕೆಯಾಗಿದ್ದು, ಅವರ ಪ್ರತಿಭೆಗೆ ಸಾಕ್ಷಿಯಗಿದೆ. ಲೇಖಕರು ಹೆಚ್ಚು ಸಾಹಿತ್ಯ ಕೃಷಿಯಲ್ಲಿ ತೊಡಗಬೇಕು ಎಂದು ಸಲಹೆ ನೀಡಿದರು.

ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಮಚೇಂದ್ರ ಅಣಕಲ ಅವರ ಕಥಾ ಪುಸ್ತಕ 10 ವರ್ಷದ ಹಿಂದೆ ಬಿಡುಗಡೆ ಮಾಡಿದ್ದೆ. ಈಗ 2ನೇ ಕೃತಿ ಬಿಡಗಡೆ ಕಾರ್ಯಕ್ರಮದಲ್ಲಿಯೂ ಭಾಗವಹಿಸಿರುವುದು ಸಂತಸ ತಂದಿದೆ. ಕಲ್ಯಾಣದಲ್ಲಿ ಸಾಹಿತಿಗಳ ಬಳಗ ಹೆಚ್ಚಾಗಲಿ ಎಂದು ಹಾರೈಸಿದರು.



ಬಸವಕಲ್ಯಾಣದಲ್ಲಿ ಸಾಹಿತಿ ಮಚೇಂದ್ರ ಪಿ.ಅಣಕಲ್ ಅವರ ಹಗಲುಗಳ್ಳರು ಕಥಾ ಸಂಕಲನ ಬಿಡುಗಡೆ ಮಾಡಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಸೂರ್ಯಕಾಂತ ಸುಜ್ಯಾತ್, ರಮೇಶ ಬೆಜಗಂ, ಎಸ್.ಜಿ ಭಾರತಿ, ಆಚಾರ್ಯ.ವೆಂಕಟೇಶ, ಸೂರ್ಯಕಾಂತ ಶೀಲವಂತ, ಮಹಾಂತೇಶ ಮಂದೇವಾಲ, ಮಚೇಂದ್ರ ಅಣಕಲ್, ಚಂದ್ರಕಲಾ ಪಾಟೀಲ್, ಉಮೇಶ ಶೀಲವಂತ, ಶಶಿಕಾಂತ ಇತರರಿದ್ದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಎಸ್.ಜಿ ಭಾರತಿ, ಮಂಗಲಗಿಯ ಸರ್ಕಾರಿ ಶಾಲೆ ಮುಖ್ಯಗುರು ಆಚಾರ್ಯ ವೆಂಕಟೇಶ, ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ನ್ಯಾಯವಾದಿ ಮಹಾಂತೇಶ ಮಂದೇವಾಲ ಹಾಗೂ ಲೇಖಕ ಮಚೇಂದ್ರ ಅಣಕಲ್ ಮಾತನಾಡಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಎಸ್.ಜಿ ಭಾರತಿ ಅವರನ್ನು ಸನ್ಮಾನಿಸಲಾಯಿತು. ಚಂದ್ರಕಲಾ ಪಾಟೀಲ್, ಉಮೇಶ ಶೀಲವಂತ, ಶಶಿಕಾಂತ ಶೀಲವಂತ, ಚಂದ್ರಕಾಂತ ಶೀಲವಂತ, ಪ್ರೊ.ಸುರೇಖಾ ಶೀಲವಂತ, ಕಾವೇರಿ ಶೀಲವಂತ ಇತರರಿದ್ದರು. ಕಿಶೋರ ಕುಲ್ಕರ್ಣಿ. ಸ್ವಾಗತಿಸಿದರು. ಅಶೋಕ ಪೋತೆ ವಂದಿಸಿದರು. ಕಲ್ಪನಾ ಬಿರಾದಾರ ನಿರೂಪಣೆ ಮಾಡಿದರು. ಭಾಗ್ಯಶ್ರೀ ಎಂ ಪ್ರಾರ್ಥನೆ ಗೀತೆ ಹಾಡಿದರು.

VIJAYAVANI » KALABURAGI
ಶನಿವಾರ 8 ಫೆಬ್ರವರಿ 2020
8 FEBRUARY 2020
ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ



ಬಸವಕಲ್ಯಾಣ: ಜಗದ್ಗುರು ರುದ್ರಮುನಿ ಶಿವಾಚಾರ್ಯರ ಸಂಸ್ಥಾನ ಮಠದಲ್ಲಿ ದಸರಾ ನಿಮಿತ್ತ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬನ್ನಿ ಮರಕ್ಕೆ ಪೂಜೆ ಸಲ್ಲಿಸಿ, ಭಕ್ತರಿಗೆ ಆಶೀರ್ವದಿಸಿದರು.

Scanned with OKEN Scanner

ಶ್ರೀ ಅಭಿನವ ಘನಲಿಂಗ ರುದ್ರಮುನಿ ಪ್ರತಿಪಾದನೆ | ಮನೆ ಮನಗಳಲ್ಲಿ ಸದ್ಭಾವ ಚಿಂತನ

ಬದುಕಿನ ಪರಿಪೂರ್ಣತೆಗೆ ಬೇಕು ಜ್ಞಾನ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಬದುಕಿನ ಪರಿಪೂರ್ಣತೆಗೆ ಜ್ಞಾನದ ಬೆಳಕು ಅವಶ್ಯಕ ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಖೂಬಾ ಕಾಲನಿಯ ಮಹಾನಂದಾ ಬಿರನಾಳೆ ತಾಡಮುಗಳಿ ಮನೆಯಲ್ಲಿ ಏರ್ಪಡಿಸಿದ್ದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿದ್ದ ಶ್ರೀಗಳು, ಜ್ಞಾನದ ಬೆಳಕು ಪಡೆಯಬೇಕಾದರೆ ಗುರುವಿನ ಮಾರ್ಗದರ್ಶನ ಬೇಕೇಬೇಕು. ಜಗತ್ತಿನಲ್ಲಿ ಗುರು ಇಲ್ಲದಿದ್ದರೆ ಸನಾತನ ಧರ್ಮದ ತಿಳವಳಿಕೆಯೇ ಇರುತ್ತಿರಲಿಲ್ಲ ಎಂದರು.

ಶಿಕ್ಷಕ ಶಿವಕುಮಾರ ಜಡಗೆ ಮಾತನಾಡಿ, ಧರ್ಮದ ತತ್ವವನ್ನು ಯಾರು ಉಪದೇಶ

» ಶಿವಜ್ಞಾನವನ್ನು ಲೋಕದ ಜನರು ತಿಳಿದಿಕೊಳ್ಳಿ

ಮಾಡುತ್ತಾರೊ ಅವರನ್ನು ಜಗತ್ತೇ ಗುರು ಎಂದು ಒಪ್ಪಿಕೊಳ್ಳುತ್ತದೆ. ಶಿವನ ಪ್ರೀತಿಗೆ ಪಾತ್ರರಾಗಬೇಕಾದರೆ ಗುರುವಿನ ಮಾತನ್ನು ಶಿಷ್ಯ ಅನುಸರಿಸಬೇಕಾಗುತ್ತದೆ. ಇಂತಹ ಶಿವಜ್ಞಾನವನ್ನು ಲೋಕದ ಜನರು ತಿಳಿದಿಕೊಳ್ಳಬೇಕು ಎಂದು ತಿಳಿಹೇಳಿದರು. ರಾಜಶೇಖರ ವಿಜಾಪುರೆ ಅಧ್ಯಕ್ಷತೆ ವಹಿಸಿದ್ದರು. ಶಿವಕುಮಾರ ಮಠ, ಸುಮಿತಕುಮಾರ ಆಗ್ರೆ, ಸಂತೋಷ ಬಿರನಾಳೆ, ಮಲ್ಲಿಕಾರ್ಜುನ, ಸವಿತಾ ಮುರಗೆಪ್ಪ ರಗಟೆ, ಶ್ರೀದೇವಿ ಕಾಕನಾಳೆ, ಆಶಾದೇವಿ ಶ್ರೀಕಾಂತ ಪಾಟೀಲ್, ಶಕುಂತಲಾ, ಸಂಗೀತಾ ಪಂಚಾಳ, ನಾಗಮ್ಮ ಬಿರಾದಾರ ಉಪಸ್ಥಿತರಿದ್ದರು.

ಸುಮಿತ್ರಾ ಡಾವರಗಾಂವ ಸ್ವಾಗತಿಸಿದರು. ರಾಮಶೆಟ್ಟಿ ಬಿರಾದಾರ ನಿರೂಪಣೆ ಮಾಡಿದರು. ಕಲಾವಿದರಾದ ಗಜಾನನ ಸ್ವಾಮಿ ಬೇಲೂರ, ರಾಮಯ್ಯ ಸ್ವಾಮಿ, ಮಲ್ಲಿಕಾರ್ಜುನ ಶೀಲವಂತ ಧನ್ನೂರಕರ್ ಭಕ್ತಿ ಸಂಗೀತ ಸೇವೆ ನಡೆಸಿಕೊಟ್ಟರು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ಖೂಬಾ ಕಾಲನಿಯಲ್ಲಿ ಏರ್ಪಡಿಸಿದ್ದ ಮನೆ ಮನಗಳಲ್ಲಿ ಸದ್ಭಾವ ಚಿಂತನ, ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ವಿಜಯವಾಣಿ ನಂ. 1 ಕನ್ನಡ ದಿನಪತ್ರಿಕೆ
• VIJAYAVANI » KALABURAGI
ಶುಕ್ರವಾರ 13 ಮಾರ್ಚ್ 2020
13 MARCH 2020

ಛಾಯಾಚಿತ್ರ ಅದ್ಭುತ ಕಲೆ

ಮಾಜಿ ಶಾಸಕ ಖೂಬಾ ಅಭಿಮತ | ವಿಶ್ವ ಛಾಯಾಗ್ರಹಣ ದಿನಾಚರಣೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಫೋಟೋಗ್ರಫಿ ಒಂದು ಅದ್ಭುತ ಕಲೆ. ಚಾರಿತ್ರಿಕ ಘಟನೆ ನೆನಪಿಸುವ ಜತೆಗೆ ಜೀವನದ ಅತ್ಯಮೂಲ್ಯ ಕ್ಷಣ ಸೆರೆ ಹಿಡಿಯುವ ಶಕ್ತಿ ಕ್ಯಾಮೆರಾಕ್ಕಿದೆ. ಹಳೆಯ ನೆನಪುಗಳನ್ನು ನೆನಪಿಸುವ ಜತೆಗೆ ಜೀವನದಲ್ಲಿ ಪರಿವರ್ತನೆಗೆ ಫೋಟೋಗ್ರಫಿ ಪ್ರೇರಣೆ ಎಂದು ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಹೇಳಿದರು.

ತಾಲೂಕು ಫೋಟೋಗ್ರಾಫರ್ ಮತ್ತು ವಿಡಿಯೋಗ್ರಾಫರ್ ಅಸೋಸಿಯೇಷನ್‌ನಿಂದ ನಗರದ ಯಾತ್ರಿ ನಿವಾಸದಲ್ಲಿ ಆಯೋಜಿಸಿದ ವಿಶ್ವ ಛಾಯಾಗ್ರಹಣ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಫೋಟೋಗ್ರಫಿ ಕುರಿತು ಮಾಹಿತಿ ನೀಡುವ ಕಾರ್ಯಾಗಾರ ನಡೆಯಬೇಕು ಎಂದರು.

ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಸಾವಿರಾರು ಪದಗಳಲ್ಲಿ ಹೇಳಲಾಗದ್ದನ್ನು ಒಂದು ಚಿತ್ರದಲ್ಲಿ ಕಾಣಬಹುದು. ಐತಿಹಾಸಿಕ ಘಟನೆ ನೆನಪಿಸುವ, ಮನಸ್ಸು ಆರಳಿಸುವ ಶಕ್ತಿ ಚಿತ್ರಕ್ಕಿದೆ. ಶ್ರಮ, ತಾಳ್ಮೆ, ಸಹನೆ ಮತ್ತು ಸಂಯಮ ಪ್ರಜ್ಞೆಯೊಂದಿಗೆ ಕೆಲಸ ಮಾಡುವ ಛಾಯಾಗ್ರಾಹಕರ ಕಾರ್ಯ ಪ್ರಶಂಸನಾರ್ಹ ಎಂದರು,

ಬಿಜೆಪಿ ಮುಖಂಡ ವಿಜಯಕುಮಾರ ಮಂಠಾಳಿ ಮಂಠಾಳಿ ಮಾತನಾಡಿ, ವ್ಯಕ್ತಿ ಮತ್ತು ಸಮಾಜ ನಿರ್ಮಾಣದಲ್ಲಿ ಛಾಯಾಚಿತ್ರಗಾರರ ಕಾರ್ಯ ಮಹತ್ವದ್ದು. ಸಮಯ ನಿಲ್ಲಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಅಮೂಲ್ಯ ಕ್ಷಣ, ಸುಂದರ ನೆನಪು ಸೆರೆ ಹಿಡಿಯಲು ಫೋಟೋಗ್ರಾಫರ್‌ನಿಂದ ಮಾತ್ರ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ತಾಪಂ ಅಧ್ಯಕ್ಷ ಯಶೋಧಾ ರಾಠೋಡ, ತಹಸೀಲ್ದಾರ್ ಸಾವಿತ್ರಿ ಸಲಗರ್, ನಗರಸಭೆ ಪೌರಾಯುಕ್ತ ಗೌತಮ ಕಾಂಬಳೆ, ಸಿಪಿಐ ಜೆ.ಎಸ್.ನ್ಯಾಮಗೌಡರ್, ಅಸೋಸಿಯೇಷನ್ ತಾಲೂಕು ಅಧ್ಯಕ್ಷ ದಿನೇಶ ಗೊಂಟಲ್ ಉಪಸ್ಥಿತರಿದ್ದರು. ಡಾ.ಭೀಮಾಶಂಕರ ಬಿರಾದಾರ ಉಪನ್ಯಾಸ ನೀಡಿದರು. ಉಪಾಧ್ಯಕ್ಷ ವಿನೋದ ಜಾಧವ್, ಕಾರ್ಯದರ್ಶಿ ಧನರಾಜ ಸ್ವಾಮಿ, ಸಹ ಕಾರ್ಯದರ್ಶಿ ಮಹ್ಮದ್ ಅಸ್ಲಂ ಖಾದಿವಾಲೆ, ಖಜಾಂಚಿ ಅನೀಲಕುಮಾರ ಜೋತೆಪ್ಪ, ರಾಜಕುಮಾರ ದೇಗಾಂವ, ಸೋಮನಾಥ ಪೀರಜಿ, ಸೈಯದ್ ಅಕ್ಬರ್ ಗುರುಲಿಂಗಯ್ಯ ಸ್ವಾಮಿ, ನಾಗೇಶ ಕುಲ್ಕರ್ಣಿ, ಶಿವಕುಮಾರ ಗುಂಗೆ, ರೂಪೇಶ ಗೊಂಟಲ್, ವೀರೇಶ, ಅಂಜನ ಹುಲಸೂರ, ಅಶೋಕ ಸಾಯಬನೆ, ನಬಿಸಾಬ್ ಭೋಸಗಾ, ಸತೀಶ ಸೂರೆ, ದತ್ತಾ ಗೌಳಿ, ವಿಕಾಸ ಕಾಂಬಳೆ ಇತರರಿದ್ದರು. ರಾಮಲಿಂಗ ಪಾಟೀಲ್ ಸ್ವಾಗತಿಸಿದರು. ವೀರಶೆಟ್ಟಿ ಪಾಟೀಲ್ ಪ್ರಾಸ್ತಾವಿಕ ಮಾತನಾಡಿದರು. ಅಬ್ರೀಷ ಭೀಮಣ್ಣೆ ನಿರೂಪಣೆ ಮಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ವಿಶ್ವ ಛಾಯಾಗ್ರಹಣ ದಿನದ ಕಾರ್ಯಕ್ರವನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ತಾಪಂ ಅಧ್ಯಕ್ಷೆ ಯಶೋಧಾ ರಾಠೋಡ, ತಹಸೀಲ್ದಾರ್ ಸಾವಿತ್ರಿ ಸಲಗರ್, ಪೌರಾಯುಕ್ತ ಗೌತಮ ಕಾಂಬಳೆ, ಬಿಜೆಪಿ ಮುಖಂಡ ವಿಜಯಕುಮಾರ ಮಂಠಾಳಿ, ದಿನೇಶ ಗೊಂಟಲ್ ಇತರರಿದ್ದರು.

ವಿಜಯವಾಣಿ ನಂ. 1 ಕನ್ನಡ ದಿನಪತ್ರಿಕೆ ಗುರುವಾರ 20 ಆಗಸ್ಟ್ 2020
20 AUGUST 2020

Scanned with OKEN Scanner

ಹಿಂದೂ ಸಂಸ್ಕೃತಿ ಇಲ್ಲದೆ ನಾವುಗಳು ಬದುಕಲು ಸಾಧ್ಯವಿಲ್ಲ

ಕಲಬುರಗಿ
www.udayakala.news
ಭಾನುವಾರ, ಸೆಪ್ಟೆಂಬರ್ 27, 2020

ಉದಯಕಾಲ ನ್ಯೂಸ್

ಹುಮನಾಬಾದ: ಅನೇಕ ಸಂಸ್ಕೃತಿಗಳನ್ನು ಒಳ ಗೊಂಡ ಸನಾತನ ಹಿಂದೂ ಸಂಸ್ಕೃತಿಯ ಇಲ್ಲದೆ ನಾವುಗಳು ಬದುಕಲು ಸಾಧ್ಯವಿಲ್ಲ ಎಂದು ಬಸವಕಲ್ಯಾಣದ ಗವಿಮಠ ಸಂಸ್ಥಾನದ ಪೀಠಾಧಿಪತಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಹೇಳಿದರು.

ಪಟ್ಟಣದ ಶ್ರೀ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದಲ್ಲಿ ಪೂರುಷೋರ್ತಮ ಮಸಾಚಾರಣೆ ನಿಮಿತ್ಯ ಒಂದು ತಿಂಗಳ ನಡೆಯಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರನ ಬ್ರಹ್ಮತೋತ್ಸೋವ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ. ಹಿಂದು ಧರ್ಮದಲ್ಲಿ ಅದ್ಭುತ ಸಂಪತ್ತಿದೆ. ಆದರೆ ಮಹತ್ವ ತಿಳಿಯದೆ ವಿದೇಶಿ ಸಂಸ್ಕೃತಿ ಬೇಡುವ ಸ್ಥಿತಿ ಬಂದಿದೆ. ಅಶಾಂತಿ ನಿವಾರಿಸುವ ಸನಾತನ ಹಿಂದು ಧರ್ಮ ಪ್ರಪಂಚಕ್ಕೆ ವಿಸ್ತರಿಸಬೇಕಾದರೆ ದೇಶದಲ್ಲಿ ಈ ಧರ್ಮ ಭದ್ರವಾಗಿಸಬೇಕು. ಅದಕ್ಕಾಗಿ ಧರ್ಮವನ್ನು ಮತ್ತು ನಮ್ಮ ಸಂಸ್ಕಾರ



ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯ ನಡೆಯಬೇಕು. ಸೌಹಾರ್ದದ ಬದುಕು ನಿರ್ಮಾಣಗೊಳ್ಳಲು ಪ್ರತಿಯೊಂದು ಮಠ ಮಂದಿರಗಳಲ್ಲಿ ಭನೆ, ಹರಿನಾಮ, ಸಕೀರ್ತನೆ ನಿರಂತರ ನಡೆಯಬೇಕು. ಎಂದರು.

ಪ್ರತಿಯೊಬ್ಬರೂ ಧಾರ್ಮಿಕ ಪ್ರಜ್ಞೆಯೊಂದಿಗೆ ತಮ್ಮ ಮಾನಸಿಕ, ಬೌದ್ಧಿಕ, ಆತ್ಮಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಆಧ್ಯಾತ್ಮಿಕ ಆಚರಣೆಗಳ ಮೂಲಕ ಧಾರ್ಮಿಕ ಸಂಸ್ಕೃತಿ ಆಚರಣೆಗಳ ಪರಂಪರೆಯ ಕುರಿತು ಏಳೆ ವಯಸ್ಸಿನ ಮಕ್ಕಳಲ್ಲಿ ಇದರ ಕುರಿತು ಬೀಜ ಬಿತ್ತಿದಾಗ ಮಾತ್ರ ಸಂಮೃದ್ಧ ಹಾಗೂ ಉಜ್ವಲ ಭಾರತ ನಿರ್ಮಿಸಲು ಸಾಧ್ಯವಾಗುತ್ತದೆ. ಇದಕ್ಕೆ ಹಿರಿಯರ ಮಾರ್ಗದರ್ಶನ ಅಗತ್ಯ ಎಂದರು.

ಕೋವಿಡ-19: ಇದೀಗ ಮಹಾಮಾರಿ ಕೊರೋನಾ ಸೋಂಕು ಎಲ್ಲಡೆ ಹರಡುತ್ತಿದ್ದು. ಆರೋಗ್ಯದ ಕುರಿತು ಸ್ವಲ್ಪ ನಿರ್ಲಕ್ಷದಿಂದ ಅನೇಕ ಜನರು ಸಾವು ನೂವು ಅನುಭವಿಸುತ್ತಿದ್ದಾರೆ. ಆದ್ದರಿಂದ ಜ್ವರ, ನೆಗಡಿ, ಕೆಮ್ಮು ಬಂದಲ್ಲಿ ತಕ್ಷಣ ವೈದ್ಯರನ್ನು ಭೇಟಿ ಮಾಡಿ. ಜೊತೆಗೆ ತಾವುಗಳು ಕಡ್ಡಾಯವಾಗಿ ಮಾಸ್ಕ ಧರಿಸಿ, ದೈಹಿಕ ಅಂತರ ಕಾಪಾಡಬೇಕು ಜೊತೆಗೆ ಕೈಗಳನ್ನು ಸೆನಿಟೈಜರ್ ಮಾಡಿಕೊಂಡು ತೊಳೆದುಕೊಳ್ಳಿ, ಬೆಳಿಗ್ಗೆ ಬಿಸಿ ನೀರು ಸೇವನೆ, ಖಾಡಾ ಸೇರಿದಂತೆ ಬಿಸಿಯಾದ ಮನೆಯ ಊಟವನ್ನು ಮಾಡಿಕೊಂಡು ಆರೋಗ್ಯ ಸುಧಾರಿಸಿಕೊಳ್ಳಬೇಕು. ಜೊತೆಗೆ ಮನೆಯ ಅಕ್ಕ ಪಕ್ಕದವರಿಗೂ ಇದರ ಕುರಿತು ಜಾಗೃತಿ ಮೂಡಿಸಬೇಕು. ಆಗಮಾತ್ರ ಮಾನ ಜನ್ಮ ಸಾರ್ಥಕವಾಗುತ್ತದೆ ಎಂದರು.

ದೇವಸ್ಥಾನದ ಕಾರ್ಯದರ್ಶಿ ಶಿವಶಂಕರ ತರನಳ್ಳಿ ಮಾತನಾಡಿ. ದೇವಾಲಯಗಳು ಧಾರ್ಮಿಕ ಪ್ರಜ್ಞೆ ಮೂಡಿಸುವ ಮೂಲಕ ಜನರಲ್ಲಿ ಪರಸ್ಪರ ಪ್ರೀತಿ ವಿಶ್ವಾಸ ಬೆಳೆಸುವಲ್ಲಿ ನೆರವಾಗಿವೆ. ಪ್ರತಿಯೊಬ್ಬರೂ ತಮಗಾಗಿ ಮಾತ್ರ ಬದುಕದೇ ಸಮಾಜ ಹಿತವೂ ತಮ್ಮ ಕರ್ತವ್ಯ ಎಂದು ಭಾವಿಸಬೇಕು ಎಂದರು.

ದೇವಸ್ಥಾನ ಅರ್ಚಕ ಶಶಿಕಾಂತ ಕುಲ್ಕರ್ಣಿ, ಸಿದ್ದಣ್ಣಾ ಚಕಪಳ್ಳಿ, ಸದಾನಂದ ಖಿಮಿತ್ಕರ್, ಗೋವಿಂದಸಿಂಗ್ ತಿವಾರಿ, ರವಿಕುಮಾರ ಆರ್ಯ, ರಾಜಕುಮಾರ ಸಾಯಗಾಂವಕರ್, ದಿಗಂಬರ ಖಿಮಿತ್ಕರ್, ಶರಣಪ್ಪ ಗುಡ್ಡಾ, ದತ್ತು ಬಾಗವಾಲೆ, ಸುಧಾಕರ್ ಕುಲ್ಕರ್ಣಿ, ಗುರುದತ್ತ ಖಿಮಿತ್ಕರ್, ಚಂದ್ರಶೇಖರ ಸ್ವಾಮಿ (ತಮ್ಯಾ), ಕಾಲಿಕಾ ಮಾತಾ ಭಜನ ಮಂಡಳಿಯ ಕಲಾವತಿಬಾಯಿ, ಪ್ರಭಾವತಿ, ವಿದ್ಯಾವತಿ, ಮಮತಾ, ವಿಮಲಾಬಾಯಿ, ಉಮಾಬಾಯಿ, ಶಕುಂತಲಾ, ರತ್ನಾಬಾಯಿ, ಶಿಲ್ಪಾ, ಪಾರ್ವತಿಯಿ ಇದ್ದರು.

---

ykarnataka.com
ykarnataka.com

ವಿಜಯ ಕರ್ನಾಟಕ VK
ಗುರುವಾರ,8 ಅಕ್ಟೋಬರ್ 2020
ಕಲಬುರಗಿ

ವಿಕ - ಚಿತ್ರ ಸುದ್ದಿ



ಕಲಬುರಗಿ-ಮುಂಬೈ ಮಧ್ಯೆ ಸಂಚರಿಸಲಿರುವ ಬಸ್‌ಗೆ ಬಸವಕಲ್ಯಾಣ ನಗರದ ಹೊರವಲಯದಲ್ಲಿರುವ ಗವಿ ಮಠದಲ್ಲಿ ಮಂಗಳವಾರ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪೂಜೆ ಸಲ್ಲಿಸಿದರು. ಮಾಜಿ ಶಾಸಕ ಮಲ್ಲಿಕಾರ್ಜುನ ಎಸ್.ಖೂಬಾ ಚಾಲನೆ ನೀಡಿದರು. ಜೆಡಿಎಸ್ ಯುವ ಮುಖಂಡ ಸುನೀಲ ಎಂ.ಪಾಟೀಲ, ಶಶಿಕಾಂತ ದುರ್ಗೆ, ಚಂದ್ರಕಾಂತ ಸ್ವಾಮಿ ಇದ್ದರು.



ವಿಜಯವಾಣಿ ಸುದ್ದಿ

ಬಿಜೆಪಿ ಯುವ ಮೋರ್ಚಾದಿಂದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನೇತೃತ್ವದಲ್ಲಿ ಬಸವಕಲ್ಯಾಣದಲ್ಲಿ ಸ್ವಚ್ಛತಾ ಅಭಿಯಾನ ಮತ್ತು ಸಸಿ ನೆಡುವ ಕಾರ್ಯಕ್ರಮ ಜರುಗಿತು. ಆಕಾಶ ಕೊರಳೆ, ಜ್ಞಾನೇಶ್ವರ ಅತ್ಲಾಪುರ, ವಿಕಾಸ ಮಾರಪಳ್ಳಿ, ನವೀನ್ ಗುಂಗೆ, ವೀರಶೆಟ್ಟಿ ಮಡಿವಾಳ, ಸಂದೀಪರೆಡ್ಡಿ, ಆದರ್ಶ ಹಾರಕೂಡೆ, ಲಿಂಗರಾಜ ಖನಗೆ, ಸಾಗರ ಮುತ್ತೆ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 6 ಅಕ್ಟೋಬರ್ 2020
6 OCTOBER 2020

Scanned with OKEN Scanner

ಶ್ರೀಗಳ ಹುಟ್ಟುಹಬ್ಬ ನಿಮಿತ್ತ ಮಾಸ್ಕ್ ಸ್ಯಾನಿಟೈಸರ್ ವಿತರಣೆ

ಉದಯಕಾಲ ನ್ಯೂಸ್

ಬಸವಕಲ್ಯಾಣ: ತಾಲೂಕಿನ ಗುಂಡೂರ ಗ್ರಾಮದಲ್ಲಿ ಶನಿವಾರ ತಿಪ್ರಾಂತನ ಗವಿಮಠದ ಪೀಠಾಧಿಪತಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಹುಟ್ಟು ಹಬ್ಬ ಮತ್ತು ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ಯ ಕರೋನಾ ಕುರಿತು ಜಾಗೃತಿ ಕಾರ್ಯಕ್ರಮ ಹಾಗೂ ಮಾಸ್ಕ್ ಮತ್ತು ಸ್ಯಾನಿಟೈಸರ್ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿ ವಿತರಣೆ ಮಾಡಲಾಯಿತು.

ನಂತರ ಮಾತನಾಡಿ ಕರೋನಾ ಮಹಾಮಾರಿ ಸೊಂಕು ಜನರ ಜೀವ ಹಿಂಡುವಂತ್ತಾಗಿದೆ, ಆದಕ್ಕಾಗಿ ಜಗತ್ತಿಗೆ ಒಂದು ದೋಡ್ಡ ಸವಾಲಾಗಿ ಪರಿಣಮಿಸಿದೆ. ಈ ಸೋಂಕಿನಿಂದ ಮೃತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಸಾರ್ವಜನಿಕರು ಬಹಳ ಎಚ್ಚರಿಕೆಯಿಂದ ಇರಬೇಕೆಂದು ಹೇಳಿದರು.

ಕೋವಿಡ್-19 ತಡೆಗಟ್ಟಬೇಕಾದರೆ ಪ್ರತಿಯೋಬ್ಬರು ಕಡ್ಡಾಯವಾಗಿ ಸಾಮಾಜಿಕ ಅಂತರ ಕಾಪಾಡಬೇಕು, ಹೊರಗಡೆ ಓಡಾಡಬೇಕಾದ ಸಂದರ್ಬದಲ್ಲಿ ಮಾಸ್ಕ ಧರಿಸಬೇಕು ಎಂದು ತಿಳಿಸಿದರು. ಹೊರಗಿನಿಂದ ಮನೆಗೆ ಬಂದ ನಂತರ ತಪ್ಪದೆ ಸ್ಯಾನಿಟೈಜರ ಅಥವಾ ಸಾಬೂನಿನಿಂದ ಕೈ ತೊಳೆಯಬೇಕು ಮತ್ತು ಆಗಾಗ ಗೋಮೂತ್ರ ಸೇವಿಸಬೇಕು ಎಂದು ಸಲಹೆ ನೀಡಿದರು.



ಪ್ರೊ.ಸೂರ್ಯಕಾಂತ ಶೀಲವಂತ ಮಾತನಾಡಿ ಅಭಿನವ ಶ್ರೀಗಳು ತಮ್ಮ ಹುಟ್ಟು ಹಬ್ಬವನ್ನು ಅತ್ಯಂತ ಸರಳವಾಗಿ ಇಂದು ಜ್ವಲಂತ ಸಮಸ್ಯೆ ಇಡಿ ಪ್ರಪಂಚಕ್ಕೆ ಕಾಡುತ್ತಿರುವ ಕರೋನಾ ಮಹಾಮಾರಿ ಯಾವ ರೀತಿಯಾಗಿ ಹರಡುತ್ತಿದೆ. ಈ ಸೋಂಕು ತಡೆಗೆ ಭಕ್ತರು ಹೇಗೆ ಎಚ್ಚರ ವಹಿಸಬೇಕೆಂದು ತಿಳಿಸಿದರು. ಹೀಗಾಗಿ ಜನರಲ್ಲಿ ಜಾಗೃತಿ ಮೂಡಿಸಿ ಮಾಸ್ಕ ಹಾಗೂ ಸ್ಯಾನಿಟೈಜರ ವಿತರಿಸುವುದು ಶ್ಲಾಘನೀಯವಾಗಿದೆ ಎಂದರು. ಈ ವೇಳೆ ಲೋಕೇಶ ಜೋಕಾರೆ, ವಿರಶೆಟ್ಟಿ ಪಾಟೀಲ, ಶಿವಕುಮಾರ ಮಠಪತಿ, ಲೋಕೇಶ ಮೋಳಕೆರೆ, ಶಿವಕುಮಾರ ಗಿಲ್ಕೆ, ವಿಜಯಕುಮಾರ ಸ್ವಾಮಿ, ರಾಜಕುಮಾರ ಬಿರಾದಾರ, ಲಖ್ಖನ ರೆಡ್ಡಿ, ಆದೀಶ ಮಾಚನಾಳೆ ಮತ್ತಿತರರು ಉಪಸ್ಥಿತರಿದ್ದರು.

www.udayakala.news
ಭಾನುವಾರ, ಸೆಪ್ಟೆಂಬರ್ 27, 2020

ಲಕ್ಷ್ಮೀ ವೆಂಕಟೇಶ್ವರ ಬ್ರಹ್ಮೋತ್ಸವಕ್ಕೆ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಚಾಲನೆ

ಬದುಕಿಗೆ ಧರ್ಮ ಅಗತ್ಯ

■ ವಿಕ ಸುದ್ದಿಲೋಕ ಹುಮನಾಬಾದ್

ಧರ್ಮಗಳ ಉಳಿವಿಗೆ ಧರ್ಮಾಭಿಮಾನಿಗಳ ಶ್ರಮ ಅಗತ್ಯವಾಗಿದೆ. ಸನಾತನ ಸಂಸ್ಕೃತಿ, ಹಿಂದೂ ಸಂಸ್ಕೃತಿ ಇಲ್ಲದೆ ಬದುಕಲು ಸಾಧ್ಯವಿಲ್ಲ ಎಂದು ಬಸವಕಲ್ಯಾಣದ ಗವಿಮಠ ಸಂಸ್ಥಾನದ ಪೀಠಾಧಿಪತಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಹೇಳಿದರು.

ಪಟ್ಟಣದ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದಲ್ಲಿ ಒಂದು ತಿಂಗಳ ನಡೆಯಲಿರುವ ಲಕ್ಷ್ಮೀ ವೆಂಕಟೇಶ್ವರ ಬ್ರಹ್ಮೋತ್ಸವ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಹಿಂದೂ ಧರ್ಮದ ಮಹತ್ವ ಅರಿತುಕೊಳ್ಳದೆ ವಿದೇಶಿ ಸಂಸ್ಕೃತಿ ಮಹತ್ವ ನೀಡಲಾಗುತ್ತಿದ್ದು, ಅಶಾಂತಿ ನಿವಾರಿಸುವ ಸನಾತನವಾದ ಹಿಂದೂ ಧರ್ಮ ಪ್ರಪಂಚಕ್ಕೆ ವಿಸ್ತರಿಸಲು ದೇಶದಲ್ಲಿ ಧರ್ಮವನ್ನು ಭದ್ರವಾಗಿಸ ಬೇಕು. ಆದಕ್ಕಾಗಿ ಧರ್ಮ, ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯ ನಡೆಯಬೇಕು ಎಂದರು.

ಸೌಹಾರ್ದದ ಬದುಕು ನಿರ್ಮಾಣಗೊಳ್ಳಲು ಪ್ರತಿಯೊಂದು ಮಠ, ಮಂದಿರಗಳಲ್ಲಿ ಭಜನೆ, ಹರಿನಾಮ ಕೀರ್ತನೆ ನಿರಂತರ ನಡೆಯಬೇಕು. ಪ್ರತಿಯೊಬ್ಬರೂ ಧಾರ್ಮಿಕ ಪ್ರಜ್ಞೆಯೊಂದಿಗೆ ಮಾನಸಿಕ, ಬೌದ್ಧಿಕ, ಆತ್ಮಶಕ್ತಿ ಹೆಚ್ಚಿಸಿಕೊಳ್ಳಬೇಕು. ಆಧ್ಯಾತ್ಮಿಕ ಆಚರಣೆಗಳ ಮೂಲಕ ಧಾರ್ಮಿಕ ಆಚರಣೆಗಳ ಪರಂಪರೆಯನ್ನು ಮಕ್ಕಳಲ್ಲಿ ಬೆಳೆಸಿದಾಗ ಸಮೃದ್ಧ ಹಾಗೂ ಉಜ್ವಲ ಭಾರತ ನಿರ್ಮಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದರು.



ಹುಮನಾಬಾದ್ ಪಟ್ಟಣದ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದಲ್ಲಿ ಒಂದು ತಿಂಗಳ ನಡೆಯಲಿರುವ ಬ್ರಹ್ಮೋತ್ಸವ ಕಾರ್ಯಕ್ರಮಕ್ಕೆ ಬಸವಕಲ್ಯಾಣದ ಗವಿಮಠ ಸಂಸ್ಥಾನದ ಪೀಠಾಧಿಪತಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಚಾಲನೆ ನೀಡಿದರು.

ದೇವಸ್ಥಾನದ ಕಾರ್ಯದರ್ಶಿ ಶಿವಶಂಕರ ತರನಳ್ಳಿ, ದೇವಸ್ಥಾನ ಅರ್ಚಕ ಶಶಿಕಾಂತ ಕುಲ್ಕರ್ಣಿ, ಸಿದ್ದಣ್ಣಾ ಚಕಪಳ್ಳಿ, ಸದಾನಂದ ಖಿಮಿತ್ಕರ್, ಗೋವಿಂದಸಿಂಗ್ ತಿವಾರಿ, ರವಿಕುಮಾರ ಆರ್ಯ, ರಾಜಕುಮಾರ ಸಾಯಗಾಂವಕರ್, ದಿಗಂಬರ ಖಿಮಿತ್ಕರ್, ಶರಣಪ್ಪ ಗುಡ್ಡಾ ದತ್ತು ಬಾಗವಾಲೆ, ಸುಧಾಕರ್ ಕುಲ್ಕರ್ಣಿ, ಗುರುದತ್ತ ಖಿಮಿತ್ಕರ್, ಚಂದ್ರಶೇಖರ ಸ್ವಾಮಿ (ತಮ್ಮಾ), ಕಾಲಿಕಾ ಮಾತಾ ಭಜನ ಮಂಡಳಿಯ ಕಲಾವತಿಬಾಯಿ, ಪ್ರಭಾವತಿ, ವಿದ್ಯಾವತಿ, ಮಮತಾ, ವಿಮಲಾಬಾಯಿ, ಉಮಾಬಾಯಿ, ಶಕುಂತಲಾ, ರತ್ನಾಬಾಯಿ, ಶಿಲ್ಪಾ, ಪಾರ್ವತಿಯಿ ಇದ್ದರು.

ಕೋವಿಡ್-19 ಸೋಂಕು ಎಲ್ಲಡೆ ಹರಡುತ್ತಿದ್ದು ಆರೋಗ್ಯದ ನಿರ್ಲಕ್ಷದಿಂದ ಅನೇಕ ಜನರು ಮೃತರಾಗಿದ್ದಾರೆ. ಆದ್ದರಿಂದ ಜ್ವರ, ನೆಗಡಿ, ಕೆಮ್ಮು ಬಂದಲ್ಲಿ ತಕ್ಷಣ ಚಿಕಿತ್ಸೆ ಪಡೆಯಬೇಕು. ಕಡ್ಡಾಯವಾಗಿ ಮಾಸ್ಕ್ ಧರಿಸಿ ಸಾಮಾಜಿ ಅಂತರ ಕಾಪಾಡಬೇಕು. ಸ್ಯಾನಿಟೈಸರ್‌ನಿಂದ ಕೈಗಳನ್ನು ತೊಳೆದುಕೊಳ್ಳಬೇಕು. ಜೊತೆಗೆ ಅಕ್ಕ ಪಕ್ಕದವರಿಗೂ ಜಾಗೃತಿ ಮೂಡಿಸಬೇಕು.

- ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಬಸವಕಲ್ಯಾಣ ಗವಿಮಠ ಸಂಸ್ಥಾನ ಪೀಠಾಧಿಪತಿ

ವಿಜಯ ಕರ್ನಾಟಕ VK ಭಾನುವಾರ, 27 ಸೆಪ್ಟೆಂಬರ್ 2020
ಕಲಬುರಗಿ

Scanned with OKEN Scanner

ಭಕ್ತರಿಗೆ ಮಾಸ್ಕ್, ಸ್ಯಾನಿಟೈಸರ್ ವಿತರಣೆ, ಕರೊನಾ ಜಾಗೃತಿ

ರುದ್ರಮುನಿ ಶ್ರೀ ವರ್ಧಂತಿ ಮಹೋತ್ಸವ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಗವಿಮಠ ಟ್ರಸ್ಟ್, ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಮತ್ತು ಇತರ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಗವಿಮಠದ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವನ್ನು ಗವಿಮಠದಲ್ಲಿ ಆಚರಿಸಲಾಯಿತು. ಅಭಿನವ ಶ್ರೀಗಳು ಎಲ್ಲ ಭಕ್ತರಿಗೆ ಮಾಸ್ಕ್ ಹಾಗೂ ಸ್ಯಾನಿಟೈಜರ್ ವಿತರಿಸಿ, ಕರೊನಾ ಜಾಗೃತಿ ಮೂಡಿಸಿದರು.

ನಗರದ ಶ್ರೀ ಬನಶಂಕರಿ ಮೆಡಿಕಲ್‌ನ ಶಾಂತವೀರ ಪೂಜಾರಿ ಅವರು ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಹಾಗೂ ಇತರ ಕಾಯಿಲೆಗಳಿಗೆ ಔಷಧದ ಜ್ಯೂಸ್ ವಿತರಿಸಿದರು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿದರು. ಪ್ರೊ.ರುದ್ರೇಶ್ವರ ಗೋರ್ಟಾ ಸ್ವಾಗತಿಸಿದರು. ಎ.ಜಿ.ಪಾಟೀಲ್, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ಅಲಶೆಟ್ಟಿ, ಬಾಬುರಾವ ಚಳಕಾಪುರೆ, ಮಲ್ಲಿಕಾರ್ಜುನ ನಂದಿ, ದಯಾನಂದ ಶೀಲವಂತ, ಸೂರ್ಯಕಾಂತ ಶೀಲವಂತ, ರಮೇಶ ಸ್ವಾಮಿ, ಶಾಂತವೀರ ಪೂಜಾರಿ, ಸದಾನಂದ ಕಣಜೆ, ರಾಕೇಶ ಪುರವಂತ, ಬಸವರಾಜ ಪಾರಾ, ಅಮರ ಬಡದಾಳೆ ಇತರರಿದ್ದರು.



ಬಸವಕಲ್ಯಾಣದ ಗವಿಮಠದಲ್ಲಿ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವನ್ನು ಜರುಗಿತು. ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ರುದ್ರೇಶ್ವರ ಗೋರ್ಟಾ, ಎ.ಜಿ.ಪಾಟೀಲ್, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ಅಲಶೆಟ್ಟಿ, ಬಾಬುರಾವ ಚಳಕಾಪುರೆ ಇತರರಿದ್ದರು.

ವಿಜಯವಾಣಿ
ನಂ. 1 ಕನ್ನಡ ದಿನಪತ್ರಿಕೆ
VIJAYAVANI » KALABURAGI
ಗುರುವಾರ 1 ಅಕ್ಟೋಬರ್ 2020
1 OCTOBER 2020

ಗುಂಡೂರ : ಕೊರೊನಾ ಜಾಗೃತಿ ಕಾರ್ಯಕ್ರಮ

ಸಂ.ಕ.ಸಮಾಚಾರ ಬಸವಕಲ್ಯಾಣ

ತಾಲ್ಲೂಕಿನ ಗುಂಡೂರದಲ್ಲಿ ತ್ರಿಪುರಾಂತ ಗವಿಮಠದ ಪಟ್ಟಾಧ್ಯಕ್ಷ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನೋತ್ಸವ, ಪಟ್ಟಾಧಿಕಾರವರ್ಧಂತಿಮಹೋತ್ಸವ ನಿಮಿತ್ತ ಕೊರೊನಾ ಕುರಿತು ಜಾಗೃತಿ ಕಾರ್ಯಕ್ರಮ ಜರುಗಿತು.

ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಮಹಾಮಾರಿ ಕೊರೊನಾ ಇಂದು ಜಗತ್ತಿನ ದೊಡ್ಡ ಸವಾಲಾಗಿ ಕಾಡುತ್ತಿದೆ. ಮಾರಕ ಸೋಂಕಿನಿಂದ ಮೃತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಕೋವಿಡ್-19 ತಡೆಗಟ್ಟಬೇಕಾದರೆ ಪ್ರತಿಯೊಬ್ಬರು ಕಡ್ಡಾಯವಾಗಿ ಸಾಮಾಜಿಕ ಅಂತರ ಕಾಪಾಡಬೇಕು, ಮುಖಕ್ಕೆ ಮಾಸ್ಕ್ ಧರಿಸಬೇಕು, ಮೇಲಿಂದ ಮೇಲೆ ಸ್ಯಾನಿಟೈಸರ ಅಥವಾ ಸಾಬೂನಿನಿಂದ ಕೈ ತೊಳೆದುಕೊಳ್ಳಬೇಕು. ಮತ್ತು ರೋಗ ನಿರೋಧಕ ಶಕ್ತಿ ವೃದ್ಧಿಗಾಗಿ ಆಗಾಗ ಗೋಮೂತ್ರ ಸೇವಿಸಬೇಕು ಎಂದು ಸಲಹೆ ನೀಡಿದರು.

ಪ್ರಾಚಾರ್ಯ ಪ್ರೊ. ಸೂರ್ಯಕಾಂತ ಶೀಲವಂತ ಮಾತನಾಡಿ ಅಭಿನವ ಶ್ರೀಗಳು ತಮ್ಮ ಜನ್ಮದಿನವನ್ನು ಅತ್ಯಂತ ಸರಳವಾಗಿ ಇಂದು ಸಮಾಜಕ್ಕೆ ಜ್ವಲಂತ ಸಮಸ್ಯೆಯಾಗಿ ಕಾಡುತ್ತಿರುವ ಕೊರೊನಾ ಮಹಾಮಾರಿ ಯಾವ ರೀತಿಯಾಗಿ ಹರಡುತ್ತಿದೆ, ಈ ಸೋಂಕು ತಡೆಗೆ ಭಕ್ತರು ಹೇಗೆ ಎಚ್ಚರ ವಹಿಸಬೇಕೆಂದು ತಿಳಿಸುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿ ಮಾಸ್ಕ್ ಹಾಗೂ ಸ್ಯಾನಿಟೈಸರ ವಿತರಿಸುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರಮುಖರಾದ ಲೋಕೇಶ ಜೋಕಾರೆ, ವಿರಶೆಟ್ಟಿ ಪಾಟೀಲ್, ಶಿವಕುಮಾರ ಮಠಪತಿ, ಲೋಕೇಶ ಮೋಳಕೆರೆ, ಶಿವಕುಮಾರ ಗಿಲ್ಕೆ, ವಿಜಯಕುಮಾರ ಸ್ವಾಮಿ, ರಾಜಕುಮಾರ ಬಿರಾದಾರ, ಲಖನ ರೆಡ್ಡಿ, ಆದೀಶ ಮಾಚನಾಳೆ ಇದ್ದರು. ಇದೇ ವೇಳೆ ಸಾರ್ವಜನಿಕರಿಗೆ ಮಾಸ್ಕ್ ಹಾಗೂ ಸ್ಯಾನಿಟೈಸರ ವಿತರಿಸಲಾಯಿತು.



ಬಸವಕಲ್ಯಾಣತಾಲ್ಲೂಕಿನಗುಂಡೂರದಲ್ಲಿತ್ರಿಪುರಾಂತಗವಿಮಠದಪಟ್ಟಾಧ್ಯಕ್ಷ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನೋತ್ಸವ ನಿಮಿತ್ತ ಕೊರೊನಾ ಕುರಿತು ಜಾಗೃತಿ ಕಾರ್ಯಕ್ರಮ ಜರುಗಿತು.

ಸಂಯುಕ್ತ ಕರ್ನಾಟಕ
ಭಾನುವಾರ, 27, ಸೆಪ್ಟೆಂಬರ್, 2020, ಕಲಬುರಗಿ

ಅಭಿನವ ಶ್ರೀಗಳ ಜನ್ಮ ದಿನ: ಕೊರೋನಾ ಜಾಗೃತಿ



ಬಸವಕಲ್ಯಾಣ: ತಾಲೂಕಿನ ಗುಂಡೂರ ಗ್ರಾಮದಲ್ಲಿ ಶನಿವಾರ ತ್ರಿಪುರಾಂತನ ಗವಿ ಮಠದ ರುದ್ರಮುನಿ ಶಿವಾಚಾರ್ಯರ ಹುಟ್ಟು ಹಬ್ಬ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಜನರಲ್ಲಿ ಕೊರೋನಾ ಕುರಿತು ಜಾಗೃತಿ ಮೂಡಿಸಲಾಯಿತು.ಈ ವೇಳೆ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಕೊರೋನಾ ಮಹಾಮಾರಿ ಇಂದು ಜಗತ್ತಿಗೆ ದೊಡ್ಡ ಸವಾಲಾಗಿದೆ. ಈ ಸೋಂಕಿನಿಂದ ಮೃತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಕೋವಿಡ್ -19 ತಡೆಗಟ್ಟಬೇಕಾದರೆ ಪ್ರತಿಯೋಬ್ಬರು ಕಡ್ಡಾಯವಾಗಿ ಸಾಮಾಜಿಕ ಅಂತರ ಕಾಪಾಡಬೇಕು, ಮಾಸ್ಕ್ ಧರಿಸಬೇಕು, ಆಗಾಗ ಸ್ಯಾನಿಟೈಸರ್ ಅಥವಾ ಸಾಬೂನಿನಿಂದ ಕೈ ತೋಳೆಯಬೇಕು ಮತ್ತು ಆಗಾಗ ಗೋಮೂತ್ರ ಸೇವಿಸಬೇಕೆಂದರು.ಮುಖ್ಯ ಅತಿಥಿಯಾಗಿದ್ದ ಪ್ರೊ. ಸೂರ್ಯಕಾಂತ ಶೀಲವಂತ ಮಾತನಾಡಿ, ಅಭಿನವ ಶ್ರೀಗಳು ತಮ್ಮ ಹುಟ್ಟು ಹಬ್ಬವನ್ನು ಅತ್ಯಂತ ಸರಳವಾಗಿ ಇಂದು ಜ್ವಲಂತ ಸಮಸ್ಯೆ ಇಡೀ ಪ್ರಪಂಚಕ್ಕೆ ಕಾಡುತ್ತಿರುವ ಕೊರೋನಾ ಮಹಾಮಾರಿ ಯಾವ ರೀತಿಯಾಗಿ ಹರಡುತ್ತಿದೆ. ಈ ಸೋಂಕು ತಡೆಗೆ ಭಕ್ತರು ಹೇಗೆ ಎಚ್ಚರ ವಹಿಸಬೇಕೆಂದು ತಿಳಿಸುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿ ಮಾಸ್ಕ್ ಹಾಗೂ ಸ್ಯಾನಿಟೈಸರ್ ವಿತರಿಸಿದ್ದು ಶ್ಲಾಘನೀಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಲೋಕೇಶ ಜೋಕಾರೆ, ವಿರಶೆಟ್ಟಿ ಪಾಟೀಲ, ಶಿವಕುಮಾರ ಮಠಪತಿ, ಲೋಕೇಶ ಮೋಳಕೆರೆ, ಶಿವಕುಮಾರ ಗಿಲ್ಕೆ, ವಿಜಯಕುಮಾರ ಸ್ವಾಮಿ, ರಾಜಕುಮಾರ ಬರಾದಾರ, ಲಖನ ರೆಡ್ಡಿ, ಆದೀಶ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕನ್ನಡಪ್ರಭ
ಭಾನುವಾರ 27.9.2020

Scanned with OKEN Scanner

'ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ'

ಸಂ.ಕ.ಸಮಾಚಾರ ಬಸವಕಲ್ಯಾಣ

ತ್ರಿಪುರಾಂತ್‌ನ ಗವಿಮಠದ ಪೀಠಾಧಿಪತಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನೋತ್ಸವ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ವೀರಶೈವ ಲಿಂಗಾಯತ ಸಂಘಟನಾ ವೇದಿಕೆಯಿಂದ ಗವಿಮಠ ಪರಿಸರದಲ್ಲಿ ಸಸಿ ನೆಡುವ ಕಾರ್ಯಕ್ರಮ ಜರುಗಿತು.

ಇದೆ ವೇಳೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಗಿಡ, ಮರಗಳ ನಾಶದಿಂದ ವಾತಾವರಣದಲ್ಲಿ ಕಲುಷಿತ ಹೆಚ್ಚಾಗುತ್ತಿದೆ. ಅರಣ್ಯ ಸಂಪತ್ತು ನಾಶ, ವನ್ಯ ಜೀವಿಗಳು ಕಣ್ಮರೆಯಾಗುತ್ತಿರುವುದು ನೋವಿನ ಸಂಗತಿ. ಜೀವ ಸಂಕುಲಕ್ಕೆ ಮುಖ್ಯವಾಗಿ ಉಸಿರಾಡಲು ಆಮ್ಲಜನಕ ಬೇಕು. ಇದನ್ನು ಪಡೆಯಲು ಅರಣ್ಯ ಉಳಿಯಬೇಕು. ಉತ್ತಮ ಪರಿಸರಕ್ಕಾಗಿ ಪ್ರತಿಯೊಬ್ಬರು ಮನೆಯ ಮುಂದೆ ಸಸಿ ನೆಡುವುದು ಹವ್ಯಾಸವಾಗಬೇಕು ಎಂದು ಸಲಹೆ ನೀಡಿದರು.

ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ಜಿಲ್ಲಾ ಪ್ರ. ಕಾರ್ಯದರ್ಶಿ ಲೋಕೇಶ್ ಜೋಕಾರೆ, ವಿದ್ಯಾರ್ಥಿ ಘಟಕದ ಜಿಲ್ಲಾಧ್ಯಕ್ಷ ಸಚಿನ ಬಿರಾದಾರ, ತಾಲ್ಲೂಕಾಧ್ಯಕ್ಷ ಚನ್ನವೀರ ಸ್ವಾಮಿ, ಉಪಾಧ್ಯಕ್ಷ ಪ್ರದೀಪ ಜೋಜನ್, ಪ್ರಮುಖರಾದ ಲಿಂಗರಾಜ, ಉಮೇಶ್, ರಾಕೇಶ್ ಪುರವಂತ, ವೀರಶೆಟ್ಟಿ ಪಾಟೀಲ್, ನಾಗಪ್ಪಾ ಅಂತರಡ್ಡಿ ಇದ್ದರು.



ಬಸವಕಲ್ಯಾಣ : ತ್ರಿಪುರಾಂತ್‌ನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನೋತ್ಸವ ನಿಮಿತ್ತ ಗವಿಮಠ ಪರಿಸರದಲ್ಲಿ ಸಸಿ ನೆಡುವ ಕಾರ್ಯಕ್ರಮ ಜರುಗಿತು.

ಸಂಯುಕ್ತ ಕರ್ನಾಟಕ
ಸೋಮವಾರ, 28, ಸೆಪ್ಟೆಂಬರ್, 2020, ಕಲಬುರಗಿ



ಬಸವಕಲ್ಯಾಣ : ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಆಚರಿಸಲಾಯಿತು.

ತ್ರಿಪುರಾಂತ ಶ್ರೀಗಳ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ

ಸಂ.ಕ.ಸಮಾಚಾರ ಬಸವಕಲ್ಯಾಣ

ಗವಿಮಠ ಟ್ರಸ್ಟ್, ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ಮತ್ತು ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಗವಿಮಠದಲ್ಲಿ ಆಚರಿಸಲಾಯಿತು.

ಇದೇ ವೇಳೆ ಅಭಿನವ ಶ್ರೀಗಳು ಎಲ್ಲ ಭಕ್ತರಿಗೆ ಮಾಸ್ಕ್ ಹಾಗೂ ಸ್ಯಾನಿಟೈಸರ್ ವಿತರಿಸಿ ಆಶೀರ್ವಚನ ನೀಡುತ್ತ ಮಾರಕ ಕೊರೊನಾ ನಿಯಂತ್ರಣಕ್ಕಾಗಿ ಜಾಗೃತಿ ಮೂಡಿಸಿದರು. ನಗರದ ಶ್ರೀ ಬನಶಂಕರಿ ಮೆಡಿಕಲ್‌ನ ಶಾಂತವೀರ ಪೂಜಾರಿ ಕೊರೊನಾ ವಿರುದ್ಧ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಹಾಗೂ ಇತರ ಕಾಯಿಲೆಗಳಿಗೆ ದಿವ್ಯ ಔಷಧಿ ಸಿಯಾ ಭಕ್ತೂನ್ ಎಂಬ ಜ್ಯೂಸ್ ವಿತರಿಸಿದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಸಹ ಮಾತನಾಡಿದರು. ರುದ್ರೇಶ್ವರ ಗೋರ್ಟಾ ಸ್ವಾಗತಿಸಿದರು. ಎ.ಜಿ. ಪಾಟೀಲ್, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ಅಲಶೆಟ್ಟಿ, ಬಾಬುರಾವ ಚಳಕಾಪುರೆ, ಮಲ್ಲಿಕಾರ್ಜುನ ನಂದಿ, ದಯಾನಂದ ಶೀಲವಂತ, ಸೂರ್ಯಕಾಂತ ಶೀಲವಂತ, ರಮೇಶ್ ಸ್ವಾಮಿ, ಸದಾನಂದ ಕಣಜೆ, ರಾಕೇಶ್ ಪುರವಂತ, ಬಸವರಾಜ ಪಾರಾ, ಅಮರ ಬಡದಾಳೆ ಇದ್ದರು.

ಸಂಯುಕ್ತ ಕರ್ನಾಟಕ
ಬುಧವಾರ, ೩೦, ಸೆಪ್ಟೆಂಬರ್, 2020, ಕಲಬುರಗಿ



ಬಸವಕಲ್ಯಾಣ ತಾಲೂಕಿನ ಗುಂಡೂರ ಗ್ರಾಮದಲ್ಲಿ ತ್ರಿಪುರಾಂತನ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ, ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಕೋವಿಡ್-19 ಜಾಗೃತಿ ಮೂಡಿಸಲಾಯಿತು.

ಶ್ರೀಗಳ ಜನ್ಮದಿನದಲ್ಲಿ ಕೊರೊನಾ ಜಾಗೃತಿ

ಬಸವಕಲ್ಯಾಣ: ತಾಲೂಕಿನ ಗುಂಡೂರ ಗ್ರಾಮದಲ್ಲಿ ಶನಿವಾರ ತ್ರಿಪುರಾಂತನ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ, ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಜನರಲ್ಲಿ ಕೋವಿಡ್-19 ಜಾಗೃತಿ ಮೂಡಿಸಲಾಯಿತು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಮಾತನಾಡಿ, ಕೊರೊನಾ ಜಗತ್ತಿಗೆ ದೊಡ್ಡ ಸವಾಲಾಗಿದೆ. ಕಡ್ಡಾಯವಾಗಿ ಸಾಮಾಜಿಕ ಅಂತರ ಪಾಲಿಸಿ, ಮಾಸ್ಕ್ ಧರಿಸಿ, ಆಗಾಗ ಸ್ಯಾನಿಟೈಸರ್ ಅಥವಾ ಸಾಬೂನಿನಿಂದ ಕೈ ತೊಳೆದುಕೊಂಡು ಮತ್ತು ಆಗಾಗ ಗೋಮೂತ್ರ ಸೇವಿಸುವ ಮೂಲಕ ಕೊರೊನಾ ತಡೆಗಟ್ಟಬೇಕು ಎಂದರು.

ಪ್ರೊ.ಸೂರ್ಯಕಾಂತ ಶೀಲವಂತ ಮಾತನಾಡಿ, ಶ್ರೀಗಳು ಜನ್ಮದಿನವನ್ನು ಭಕ್ತರಲ್ಲಿ ಕೊರೊನಾ ಜಾಗೃತಿ ಮೂಡಿಸಿ ಆಚರಿಸಿರುವುದು ಶ್ಲಾಘನೀಯ ಎಂದರು.

ಲೋಕೇಶ ಜೋಕಾರೆ, ವಿರಶೆಟ್ಟಿ ಪಾಟೀಲ, ಶಿವಕುಮಾರ ಮಠಪತಿ, ಲೋಕೇಶ ಮೋಳಕೆರೆ, ಶಿವಕುಮಾರ ಗಿಲ್ಕೆ, ವಿಜಯಕುಮಾರ ಸ್ವಾಮಿ, ರಾಜಕುಮಾರ ಬಿರಾದಾರ, ಲಖನ ರೆಡ್ಡಿ, ಆದೀಶ ಮಾಚನಾಳೆ ಇದ್ದರು.

ವಿಜಯ ಕರ್ನಾಟಕ
ಭಾನುವಾರ,27 ಸೆಪ್ಟೆಂಬರ್ 2020
ಕಲಬುರಗಿ

Scanned with OKEN Scanner

ಶದಲ್ಲಿ ಗುರುವಂದನೆ



ಬಸವಕಲ್ಯಾಣದ ಗವಿ ಮಠದಲ್ಲಿ ಭಾನುವಾರ ಭಕ್ತಾದಿಗಳು ಮಠದ ಪೀಠಾಧಿಪತಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಾದ ಪೂಜೆ ಮಾಡುವ ಮೂಲಕ ಗುರು ಪೂರ್ಣಿಮೆ ಆಚರಿಸಿದರು.

ಗವಿಮಠದಲ್ಲಿ ಭಕ್ತರಿಂದ ಗುರು ನಮನ

ಬಸವಕಲ್ಯಾಣ : ಗವಿ ಮಠದಲ್ಲಿ ಭಾನುವಾರ ಭಕ್ತಾದಿಗಳು ಮಠದ ಪೀಠಾಧಿಪತಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಗುರುವಿನ ಪೂಜೆ ಮಾಡುವುದರ ಮೂಲಕ ಗುರು ಪೂರ್ಣಿಮೆ ಆಚರಿಸಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಭವ್ಯ ಭಾರತದ ಸಂಸ್ಕೃತಿಯಲ್ಲಿ ಗುರುವಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಗುರು ಪೂರ್ಣಿಮೆಗೆ ಧಾರ್ಮಿಕ ಪ್ರಾಮುಖ್ಯತೆಯ ಜತೆಗೆ ಶೈಕ್ಷಣಿಕ ಮಹತ್ವವೂ ಇದೆ. ಗುರು ಶಿಷ್ಯರ ಸಂಬಂಧವನ್ನು ಜಗತ್ತಿಗೆ ಸಾರುವ ಹಬ್ಬವೇ ಈ ಗುರು ಪೌರ್ಣಿಮೆ ಎಂದು ತಿಳಿಸಿದರು.ರೇವಣ್ಣಸಿದ್ದಯ್ಯ ವಸ್ತ್ರದ, ಚಂದ್ರಶೇಖರ ಸ್ವಾಮಿ, ಮಡಿವಾಳಪ್ಪ ಕಲ್ಯಾಣಿ, ಸಾಗರ ವಿ.ಬುಕ್ಕಿಗಾರ, ಪ್ರವೀಣ ಟೊಂಪೆ ಇದ್ದರು.

ವಿಜಯ ಕರ್ನಾಟಕ VK

ಸೋಮವಾರ,6 ಜುಲೈ 2020, ಕಲಬುರಗಿ



ಬಸವಕಲ್ಯಾಣ: ಬಿಜೆಪಿ ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷರಾಗಿ ನೇಮಕವಾದ ಯುವ ಮುಖಂಡ ಅಮರ ಬಡದಾಳೆರನ್ನು ತ್ರಿಪುರಾಂತ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು. ರಾಜೇಶ ಶೀಲವಂತ, ಆಕಾಶ ಲಾಡೆ, ಅಮರ ಕಾಳಗೆ, ಆಕಾಶ ಮುತ್ತೆ, ಸುರೇಶ ಜಮ್ಮು, ಮೇಘರಾಜ ಚವ್ಹಾಣ್, ಸುನಿಲ ಇದ್ದರು.

ಸಂಯುಕ್ತ ಕರ್ನಾಟಕ

ಮಂಗಳವಾರ, 29, ಸೆಪ್ಟೆಂಬರ್, 2020,



ಸಬಸವಕಲ್ಯಾಣ: ದಸರಾ ಹಬ್ಬದ ನಿಮಿತ್ತ ಗವಿಮಠದಲ್ಲಿ ಬನ್ನಿ ಗಿಡಕ್ಕೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪೂಜೆ ಸಲ್ಲಿಸಿದರು. ಗವಿಮಠ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಎ. ಜಿ. ಪಾಟೀಲ್, ರುದ್ರಮುನಿ ಹಿರೇಮಠ, ಸೂರ್ಯಕಾಂತ ಶೀಲವಂತ, ನಟರಾಜ ಬಿರಾದಾರ, ರೇವಣಸಿದ್ಧಯ್ಯ ಮಠಪತಿ, ಶಾಂತವೀರ ಪೂಜಾರಿ, ರುದ್ರೇಶ್ವರ ಗೋರ್ಟಾ ಇದ್ದರು.

ಸಂಯುಕ್ತ ಕರ್ನಾಟಕ

ಬುಧವಾರ, 28, ಅಕ್ಟೋಬರ್, 2020, ಕಲಬುರಗಿ

ಅಭಿನವ ರುದ್ರಮುನಿ ಶ್ರೀ ನುಡಿ | ಜನ್ಮದಿನೋತ್ಸವ ನಿಮಿತ್ತ ಜಾಗೃತಿ ಕರೊನಾ ಜಾಗೃತಿ ವಹಿಸುವುದು ಅಗತ್ಯ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಕರೊನಾ ಜಗತ್ತಿಗೆ ದೊಡ್ಡ ಸವಾಲಾಗಿದೆ. ಸೋಂಕಿನಿಂದ ಮೃತರ ಸಂಖ್ಯೆ ದಿನೇ ದಿನೆ ಹೆಚ್ಚುತ್ತಿದೆ. ಕೋವಿಡ್-19 ತಡೆಗಟ್ಟಬೇಕಾದರೆ ಪ್ರತಿಯೊಬ್ಬರು ಕಡ್ಡಾಯವಾಗಿ ಪರಸ್ಪರ ಅಂತರ ಕಾಪಾಡಬೇಕು, ಮಾಸ್ಕ್ ಧರಿಸಬೇಕು, ಸ್ಯಾನಿಟೈಸರ್ ಬಳಸಬೇಕು, ಸಾಬೂನಿನಿಂದ ಕೈ ತೊಳೆಯಬೇಕು, ಆಗಾಗ ಗೋಮೂತ್ರ ಸೇವಿಸಬೇಕು ಎಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು ಸಲಹೆ ನೀಡಿದರು.

ಗುಂಡೂರದಲ್ಲಿ ಯುವಕರು ಹಾಗೂ ಭಕ್ತರಿಂದ ಆಯೋಜಿಸಿದ್ದ ತ್ರಿಪುರಾಂತ ಗವಿಮಠದ ಪಟ್ಟಾಧ್ಯಕ್ಷ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನೋತ್ಸವ, ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಕರೊನಾ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರೊ.ಸೂರ್ಯಕಾಂತ ಶೀಲವಂತ ಮಾತನಾಡಿ, ಅಭಿನವ ಶ್ರೀಗಳು ತಮ್ಮ ಜನ್ಮದಿನವನ್ನು ಅತ್ಯಂತ ಸರಳವಾಗಿ ಜ್ವಲಂತ ಸಮಸ್ಯೆಯಾಗಿ ಕಾಡುತ್ತಿರುವ ಕರೊನಾ ಮಹಾಮಾರಿ ಬಗ್ಗೆ ಜಾಗೃತಿ ಮೂಡಿಸುತ್ತಿರುವುದು ಶ್ಲಾಘನೀಯ ಎಂದರು.

ಸಾರ್ವಜನಿಕರಿಗೆ ಮಾಸ್ಕ್ ಹಾಗೂ ಸ್ಯಾನಿಟೈಸರ್ ವಿತರಿಸಲಾಯಿತು. ಲೋಕೇಶ ಜೋಕಾರ, ವೀರಶೆಟ್ಟಿ ಪಾಟೀಲ್, ಶಿವಕುಮಾರ ಮಠಪತಿ, ಲೋಕೇಶ ಮೋಳಕೆರೆ, ಶಿವಕುಮಾರ ಗಿಲ್ಕೆ, ವಿಜಯಕುಮಾರ ಸ್ವಾಮಿ, ರಾಜಕುಮಾರ ಬಿರಾದಾರ, ಲಖ್ಖನ್ ರೆಡ್ಡಿ, ಆದೀಶ ಮಾಚನಾಳೆ ಇತರರಿದ್ದರು.



ಗುಂಡೂರದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನೋತ್ಸವ ನಿಮಿತ್ತ ಏರ್ಪಡಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಶ್ರೀಗಳು ಸಾರ್ವಜನಿಕರಿಗೆ ಮಾಸ್ಕ್, ಸ್ಯಾನಿಟೈಸರ್ ವಿತರಿಸಿದರು.

ನಂ. 1 ಕನ್ನಡ ದಿನಪತ್ರಿಕೆ

ವಿಜಯವಾಣಿ

VIJAYAVANI » KALABURAGI

ಭಾನುವಾರ 27 ಸೆಪ್ಟೆಂಬರ್ 2020
27 SEPTEMBER 2020

Scanned with OKEN Scanner

ವಿಜಯ ಕರ್ನಾಟಕ VK
ಶುಕ್ರವಾರ,16 ಅಕ್ಟೋಬರ್ 2020
ಕಲಬುರಗಿ

ಈ ಭಾಗದ ಮಠಾಧೀಶರಿಗೆ ಸಂದ ಗೌರವ



ಗೌರವ ಡಾಕ್ಟರೇಟ್ ಪದವಿ ಪಡೆದ ಡಾ.ಶಾಂತವೀರ ಶಿವಾಚಾರ್ಯರಿಗೆ ಸನ್ಮಾನ

ಬಸವಕಲ್ಯಾಣದ ಗವಿ ಮಠದಲ್ಲಿ ಗಡಿ ಗೌಂಡಗಾಂವ ಹಾವಲಿಂಗೇಶ್ವರ ಸಂಸ್ಥಾನ ಹಿರೇಮಠದ ಡಾ.ಶಾಂತವೀರ ಶಿವಾಚಾರ್ಯರು ಗೌರವ ಡಾಕ್ಟರೇಟ್ ಪದವಿ ಪಡೆದ ಪ್ರಯುಕ್ತ ಸನ್ಮಾನಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು.

ವಿಕ ಸುದ್ದಿಲೋಕ ಬಸವಕಲ್ಯಾಣ

ನಾನೇನು ದೊಡ್ಡ ಸಾಧಕನಲ್ಲ, ಕೈಲಾದ ಮಟ್ಟಿಗೆ ಧಾರ್ಮಿಕ, ಸಾಮಾಜಿಕ ಜಾಗೃತಿ ಕಾರ್ಯ ಮಾಡುತ್ತಿರುವೆ. ಈ ಕಾರ್ಯ ಸಾಧನೆ ಗುರುತಿಸಿ ಬೆಂಗಳೂರಿನ ಮದರ್ ಥೇರೆಸಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿರುವುದು ಈ ಭಾಗದ ಎಲ್ಲ ಮಠಾಧೀಶರಿಗೆ ಸಂದ ಗೌರವ ಎಂದು ಗಡಿ ಗೌಂಡಗಾಂವ ಹಾವಲಿಂಗೇಶ್ವರ ಸಂಸ್ಥಾನ ಹಿರೇಮಠದ ಡಾ.ಶಾಂತವೀರ ಶಿವಾಚಾರ್ಯರು ಹೇಳಿದರು.

ಇಲ್ಲಿನ ಗವಿ ಮಠದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನಿಧ್ಯದಲ್ಲಿ ಗವಿಮಠ ಟ್ರಸ್ಟ್ ಶ್ರೀಮದ್ವೀರ ಶೈವ ಸದ್ಭೋಧನ ಸಂಸ್ಥೆ ತಾಲೂಕಾ ಘಟಕ ಮತ್ತು ಸಮಸ್ತ ಸದ್ಭಕ್ತರ ಸಹಯೋಗದಲ್ಲಿ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಸಾಧನೆಯಿಂದ ಅನೇಕ ಶರಣರು ಪ್ರಸಿದ್ಧರಾಗಿದ್ದಾರೆ. ಧಾರ್ಮಿಕ ಸಾಮಾಜಿಕ ಜಾಗೃತಿ ಮೂಡಿಸುವ ಗುರಿ ಗುರುಗಳು ಹೊಂದಿರಬೇಕು. ಹಿಂದೆ ಗುರುವಿನ ಕೃಪೆಯೂ ಇರಬೇಕು. ಈ ಗೌರವ ಪ್ರಶಸ್ತಿ ಬಂದದ್ದು ನನ್ನ ಜವಾಬ್ದಾರಿ ಮತ್ತಷ್ಟು ಹೆಚ್ಚಿಸಿದೆ ಎಂದರು.

ಗವಿಮಠದೊಂದಿಗೆ ಅವಿನಾಭಾವ ಸಂಭಂದವಿದೆ. ಜಿಲ್ಲೆಯ ಮಠಗಳಲ್ಲಿಯೇ ಬಸವಕಲ್ಯಾಣದ ಈ ಗವಿಮಠ ದೊಡ್ಡ ಇತಿಹಾಸ ಹೊಂದಿದ ಮಠವಾಗಿದೆ. ಭಕ್ತರ ಸಹಕಾರದೊಂದಿಗೆ ಇಷ್ಟೊಂದು ಅಭಿವೃದ್ಧಿ ಮಾಡಿರುವುದು ದೊಡ್ಡ ಸಾಧನೆಯಾಗಿದೆ ಎಂದು ತಿಳಿಸಿದರು.

ಗವಿಮಠ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ವೀರಣ್ಣ ಶೀಲವಂತ, ಪ್ರೊ.ಸೂರ್ಯಕಾಂತ ಶೀಲವಂತ, ರೇವಣಸಿದ್ಧಯ್ಯ ಮಠಪತಿ, ಮಲ್ಲಿಕಾರ್ಜುನ ನಂದಿ, ಮರೆಪ್ಪ ಪೊಲೀಸ್ ಪಾಟೀಲ, ಬಸವರಾಜ ಮಾಲಿ ಪಾಟೀಲ, ಡಾ.ಶಿವಾನಂದ ಪಟವಾಡಿ, ಚನ್ನಪ್ಪ ಅಳ್ಳಿಕಟ್ಟಿ, ಶಿವಶರಣಪ್ಪ ಬಟಗೇರಾ ಇದ್ದರು.

ಘನತೆ ಹೆಚ್ಚಿಸಿಕೊಂಡ ವಿವಿ

ಗಡಿ ಗೌಂಡಗಾಂವನ ಪೂಜ್ಯರು ಸದಾ ಕ್ರಿಯಾಶೀಲರು, ಅದ್ಭುತ ಪ್ರವಚನಕಾರರು. ನಿರಂತರವಾಗಿ ಅನೇಕ ಕಡೆ ಸಂಚಾರ ಮಾಡುತ್ತಲೇ ಭಕ್ತರಿಗೆ ಧಾರ್ಮಿಕ ಸಂಸ್ಕಾರ ನೀಡುತ್ತಿದ್ದಾರೆ ಎಂದು ಸಾನಿಧ್ಯ ವಹಿಸಿದ್ದ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಶ್ಲಾಘಿಸಿದರು.

ಅದ್ಭುತ ಪುರಾಣ, ಪ್ರವಚನ ಕಲೆಯ ಮೂಲಕ ಭಕ್ತರಿಗೆ ಧಾರ್ಮಿಕ, ಸಾಮಾಜಿಕ ಜಾಗೃತಿ ಮೂಡಿಸುವ ಮಹಾನ ಕಾರ್ಯದಲ್ಲಿ ತೊಡಗಿದ್ದಾರೆ. ಈ ಸಾಧನೆಯನ್ನು ಗುರುತಿಸಿ ಗೌರವ ಡಾಕ್ಟರೇಟ್ ಪದವಿ ನೀಡಿದ ವಿಶ್ವವಿದ್ಯಾಲಯ ಘನತೆ ಹೆಚ್ಚಿಸಿಕೊಂಡಿದೆ. ಪೂಜ್ಯರ ಸಾಧನೆ ಇನ್ನು ಹೆಚ್ಚಾಗಲಿ. ಪೂಜ್ಯರಿಗೆ ಇನ್ನು ಹೆಚ್ಚು ಪ್ರಶಸ್ತಿಗಳು ಬರಲಿ ಎಂದು ಹಾರೈಸಿದರು.

ನಂ.1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 31 ಅಕ್ಟೋಬರ್ 2020
31 OCTOBER 2020

ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನುಡಿ | ಬೇಲೂರದಲ್ಲಿ ದೇವಿ ಪುರಾಣ

ಭಕ್ತಿ ನಿಷ್ಠೆ ಇದ್ದರೆ ಸಮಾಜದಲ್ಲಿ ಏಳಿಗೆ ಸಾಧ್ಯ

ವಿಜಯವಾಣಿ ಸುದ್ದಿಜಾಲ ಹುಲಸೂರು

ಯಾವುದೇ ಕೆಲಸ ಮಾಡಬೇಕಾದರೆ ನಮ್ಮಲ್ಲಿ ಭಕ್ತಿ ಮತ್ತು ನಿಷ್ಠೆ ಇರಬೇಕು. ಆಗ ಮಾತ್ರ ಸಮಾಜದಲ್ಲಿ ಮುಂದುವರಿಯಲು ಸಾಧ್ಯ ಎಂದು ತ್ರಿಪುರಾಂತ ಗವಿಮಠದ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಬೇಲೂರದ ಅಂಬಾ ಭವಾನಿ ಮಂದಿರದ ದೇವಿ ಪುರಾಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೇಲೂರದಲ್ಲಿ ಎಲ್ಲರು ಭಕ್ತಿಯಿಂದ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿ ಮಾಡುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ದೇವಿ ಪುರಾಣ ಪ್ರವಚನ ಆಲಿಸುವ ಮೂಲಕ ನಮ್ಮಲ್ಲಿಯ ಅಜ್ಞಾನ ತೊಲಗಿ ಜ್ಞಾನದ ಬೆಳಕು ಬೆಳಗಾಗುತ್ತದೆ. ಸತ್ಸಂಗದಲ್ಲಿ ಭಾಗವಹಿದರೆ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಪ್ರತಿಯೊಬ್ಬರು ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಎಂದರು.

ಕಲ್ಯಾಣ ಕಟ್ಟಿಮನಿ ಹಿರೇತನ ಮಠದ ಭಾವಿ ಉತ್ತರಾಧಿಕಾರಿ ಶ್ರೀ ಪ್ರಭುಕುಮಾರ ಸ್ವಾಮೀಜಿ ಮಾತನಾಡಿ, ದೇವಿ ಮಹಿಮೆ ಕುರಿತು ಒಂಬತ್ತು ದಿನದ ನವರಾತ್ರಿ ಮಹಿಮೆಯನ್ನು ಹಾಗೂ ಭಕ್ತಿಯ ಬಗ್ಗೆ, ದಾನದ ಬಗ್ಗೆ ಸ್ವವಿಸ್ತಾರವಾಗಿ ಭಕ್ತರಿಗೆ ಮನ ಮುಟ್ಟುವಂತೆ ಉಪದೇಶಿಸಲಾಗಿದೆ ಎಂದು ಹೇಳಿದರು.



ವಿಜಯವಾಣಿ ಚಿತ್ರ

ಬೇಲೂರದಲ್ಲಿ ಆಯೋಜಿಸಿದ್ದ ದೇವಿ ಪುರಾಣದಲ್ಲಿ ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಶ್ರೀ ಪ್ರಭು ಕುಮಾರ ಸ್ವಾಮೀಜಿ ಇದ್ದರು.

ವೇದಮೂರ್ತಿ ಕಾಶಯ್ಯ ಸ್ವಾಮಿ, ಸಮಿತಿ ಮುಖಂಡರಾದ ಅಶೋಕ ವಕಾರೆ, ಶರಣಪ್ಪ ಝುಳ್ಪೆ, ರಾಮಣ್ಣ ಹುಲಸೂರೆ, ಶಿವರಾಜ ಮಹಾಲಿಂಗ, ಕಾಮಣ್ಣ ಭಾಗ, ಸಂತೋಷ ಶೆಡೋಳೆ, ಗುರುನಾಥ ಪಂಬಾಳ, ಹುಲಿಪ್ಪ ವಗ್ಗೆ, ಭೀಮಣ್ಣ ತೊಗಲೂರೆ, ಬಸವರಾಜ ಕೋಟಮಾಳೆ, ಗುರಪ್ಪ ತಾಂಬೋಳೆ, ದಯಾನಂದ ಸ್ವಾಮಿ, ಭೋಸಬ ಶೆಟಗಾರ ಇತರರಿದ್ದರು.

ಪಲ್ಲಕ್ಕಿ ಉತ್ಸವ: ಜೈ ಭವಾನಿ ದೇವಸ್ಥಾನ ಪಂಚ ಕಮೀಟಿಯಿಂದ ಕರೊನಾ ಹಿನ್ನೆಲೆಯಲ್ಲಿ ಪ್ರತಿ ವರ್ಷ ಸಂಜೆ ನಡೆಯುತ್ತಿದ್ದ ದೇವಿ ಪಲ್ಲಕ್ಕಿ ಮೆರವಣಿಗೆಯನ್ನು ಕೈಬಿಡಲಾಗಿದೆ. ಅದರ ಬದಲು ಶನಿವಾರ ಬೆಳಗ್ಗೆ 7ಕ್ಕೆ ಪಲ್ಲಕ್ಕಿ ಉತ್ಸವ ಜರುಗಲಿದೆ ಎಂದು ಮುಖಂಡರು ತಿಳಿಸಿದ್ದಾರೆ.



ವಿಜಯವಾಣಿ ಚಿತ್ರ

ದಸರಾ ನಿಮಿತ್ತ ಬಸವಕಲ್ಯಾಣ ಗವಿ ಮಠದಲ್ಲಿ ಬನ್ನಿ ಗಿಡಕ್ಕೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಪೂಜೆ ಸಲ್ಲಿಸಿದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಎ.ಜಿ. ಪಾಟೀಲ್, ರುದ್ರಮುನಿ ಹಿರೇಮಠ, ಪ್ರೊ.ಸೂರ್ಯಕಾಂತ ಶೀಲವಂತ, ನಟರಾಜ ಬಿರಾದಾರ, ರೇವಣಸಿದ್ಧಯ್ಯ ಮಠಪತಿ, ಶಾಂತವೀರ ಪೂಜಾರಿ, ಪ್ರೊ.ರುದ್ರೇಶ್ವರ ಗೋರ್ಟಾ ಇತರರಿದ್ದರು.

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 2 ನವೆಂಬರ್ 2020
2 NOVEMBER 2020

ತಹಸೀಲ್ದಾರ್ ಸಾವಿತ್ರಿ ಸಲಗರ ಭರವಸೆ | ಕನ್ನಡ ಕಚೇರಿ ನಿರ್ಮಾಣಕ್ಕೆ ಭೂಮಿ ಪೂಜೆ

ಕಲ್ಯಾಣದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ನಿವೇಶನ ಶೀಘ್ರ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ನಗರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಕನ್ನಡ ಭವನ ನಿರ್ಮಾಣಕ್ಕಾಗಿ ನಿವೇಶವನ್ನು ತಿಂಗಳಾಂತ್ಯದವರೆಗೆ ಮಂಜೂರಿಗಾಗಿ ಪ್ರಯತ್ನಿಸುವುದಾಗಿ ತಹಸೀಲ್ದಾರ್ ಸಾವಿತ್ರಿ ಶರಣು ಸಲಗರ ಹೇಳಿದರು.

ಸಾಹಿತ್ಯ ಪರಿಷತ್ ತಾಲೂಕು ಘಟಕದಿಂದ ಏರ್ಪಡಿಸಿದ್ದ ಪ್ರೊ. ವಿರುಪಾಕ್ಷಪ್ಪ ರಾಂಪೂರೆ ಕನ್ನಡ ಕಚೇರಿ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಗರದಲ್ಲಿ ಕವಿ ಉಕ್ತಿಗಳು ಮತ್ತು ವಚನಗಳು ಬರೆಸಿರುವ ಫಲಕಗಳನ್ನು ಅಳವಡಿಸುವ ಮೂಲಕ ಕಲ್ಯಾಣವನ್ನು ಕನ್ನಡಮಯ ಮಾಡುವ ಬಗ್ಗೆ ಎಲ್ಲ ಇಲಾಖೆಗಳ ಅಧಿಕಾರಿಗಳಿಗೆ ಸುತ್ತೋಲೆ ಕಳಿಸಲಾಗಿದೆ ಎಂದು ಹೇಳಿದರು.

ವಿದ್ಯೆ ಕಲಿಸಿದ ಗುರುಗಳಾದ ಪ್ರೊ.ವಿರುಪಾಕ್ಷಪ್ಪ ರಾಂಪೂರೆ ಅವರ ಸ್ಮರಣಾರ್ಥ ಮಲ್ಲಿಕಾರ್ಜುನ ಕುರಕೋಟೆ ಅವರು ಕಸಾಪ ಕಚೇರಿಗೆ ನಿವೇಶನವನ್ನು ದಾನವಾಗಿ ನೀಡಿರುವುದು ಸ್ವಾಗತಾರ್ಹ. ಕಚೇರಿ ನಿರ್ಮಾಣಕ್ಕೆ ತಿಂಗಳ ವೇತನ ನೀಡುವುದಾಗಿ ಪ್ರಕಟಿಸಿದರು.

ಕಸಾಪ ಜಿಲ್ಲಾ ಅಧ್ಯಕ್ಷ ಸುರೇಶ ಚನ್ನಶೆಟ್ಟಿ ಮಾತನಾಡಿ, ಕಳೆದ ಐದು ವರ್ಷದ ಅವಧಿಯಲ್ಲಿ ಕನ್ನಡ ಭವನ ಮತ್ತು ನಿವೇಶನಗಳನ್ನು ಪರಿಷತ್‌ಗೆ ಒದಗಿಸುವುದಾಗಿ ತಿಳಿಸಿದೆ. ಇದೀಗ ಕನ್ನಡ ಕಚೇರಿಗೆ ಸ್ಥಳಾವಕಾಶ ದಾನದ ರೂಪದಲ್ಲಿ ಸಿಕ್ಕಿದ್ದು, ಸಂತಸ ತಂದಿದೆ ಎಂದರು.



ಬಸವಕಲ್ಯಾಣದ ಸಾಹಿತ್ಯ ಪರಿಷತ್ ತಾಲೂಕು ಘಟಕದ ಕಚೇರಿಗಾಗಿ ನಿವೇಶನ ದಾನವಾಗಿ ನೀಡಿದ ಮಲ್ಲಿಕಾರ್ಜುನ ಕುರಕೋಟೆ ಅವರನ್ನು ಸನ್ಮಾನಿಸಲಾಯಿತು. ಅಭಿನವ ಶ್ರೀಗಳು, ತಹಸೀಲ್ದಾರ್ ಸಾವಿತ್ರಿ ಸಲಗರ, ಕಸಾಪ ಜಿಲ್ಲಾ ಅಧ್ಯಕ್ಷ ಸುರೇಶ ಚನ್ನಶೆಟ್ಟಿ, ಡಾ.ರುದ್ರಮಣಿ ಮಠಪತಿ ಇತರರಿದ್ದರು.

ಕಸಾಪ ತಾಲೂಕು ಅಧ್ಯಕ್ಷ ಡಾ.ರುದ್ರಮಣಿ ಮಠಪತಿ ಮಾತನಾಡಿ, ಕಚೇರಿಗೆ ನಿವೇಶನ ಕಲ್ಪಿಸಿರುವ ಮಲ್ಲಿಕಾರ್ಜುನ ಕುರಕೋಟೆ ಅರ ಕಾರ್ಯ ಶ್ಲಾಘನೀಯ. ಸ್ಥಳೀಯರು ದೇಣಿಗೆ ನೀಡಿ, ಸಹಕರಿಸಬೇಕು ಎಂದರು.

ವಿದ್ಯೆ ಕಲಿಸಿದ ಗುರುಗಳಾದ ಪ್ರೊ.ವಿರುಪಾಕ್ಷಪ್ಪ ರಾಂಪೂರೆ ಕನ್ನಡದ ಪ್ರಾಧ್ಯಾಪಕರು. ವಿಜಯಪುರದಿಂದ ಕಲ್ಯಾಣಕ್ಕೆ ಬಂದು ಮನೆಮನೆಗೆ ಹೋಗಿ ಕನ್ನಡ ಕಲಿಸಿ, ಕನ್ನಡ ವಾತಾವರಣ ನಿರ್ಮಿಸಿದ್ದಾರೆ. ಅವರ ನೆನಪಿಗಾಗಿ ಕಸಾಪ ಕಚೇರಿಗೆ ನಿವೇಶನ ನೀಡಿದ್ದೇನೆ. ಮುಂದಿನ ವರ್ಷ ಕನ್ನಡ ರಾಜ್ಯೋತ್ಸವ ನೂತನ ಕಚೇರಿ ಕಟ್ಟಡದಲ್ಲಿಯೇ ನಡೆಯಲಿ ಎನ್ನುವುದು ನನ್ನ ಆಶಯ.

| ಮಲ್ಲಿಕಾರ್ಜುನ ಕುರಕೋಟೆ ನಿವೇಶನ ದಾನಿ

ಗವಿಮಠದ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿ ಆಶೀರ್ವಚನ ನೀಡಿದರು. ಅಧ್ಯಕ್ಷತೆ ವಹಿಸಿದ ಬಿಡಿಪಿಸಿ ಅಧ್ಯಕ್ಷ ಆನೀಲಕುಮಾರ ರಗಟೆ ಮಾತನಾಡಿದರು. ಡಾ.ದೀಪಕ ಧಾರವಾರ, ಬಿಡಿಪಿಸಿ ಕಾರ್ಯದರ್ಶಿ ರೇವಣಪ್ಪ ರಾಯವಾಡೆ, ಸಹ ಕಾರ್ಯದರ್ಶಿ ಬಸವರಾಜ ಬಾಲಿಕಿಲೆ, ನಿರ್ದೇಶಕ ಜಗನ್ನಾಥ ಖೂಬಾ, ಬಸವರಾಜ ತೊಂಡಾರೆ, ಕಸಾಪ ಕಾರ್ಯದರ್ಶಿ ರಾಜಕುಮಾರ ಪಾಲಾಪುರ, ಡಾ.ಶಿವಲೀಲಾ ಮಠಪತಿ, ಚಂದ್ರಕಾಂರ ಸ್ವಾಮಿ, ಪ್ರಭುಲಿಂಗಯ್ಯ ಟಂಕಸಾಲಿಮಠ, ಧನರಾಜ ರಾಜೋಳೆ ಇತರರಿದ್ದರು. ಬಸವಣ್ಣಪ್ಪ ನೆಲ್ಲೊಗಿ ಸ್ವಾಗತಿಸಿದರು. ಶಾಲಿವಾನ ಕಾಕನಾಳೆ ವಂದಿಸಿದರು. ರಮೇಶ ಉಮ್ಮಾಪುರೆ ನಿರೂಪಣೆ ಮಾಡಿದರು.

ಬೀದಿ ದೀಪ ನಿರ್ವಹಣೆಗಾರರಿಗೆ ಸನ್ಮಾನ

ಗವಿಮಠ, ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆಯಿಂದ ಕಾರ್ಯಕ್ರಮ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 22 ಡಿಸೆಂಬರ್ 2020
22 DECEMBER 2020

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಕರೊನಾ ಭಯದ ವೇಳೆಯಲ್ಲಿಯೂ ಕರ್ತವ್ಯ ನಿರ್ವಹಿಸಿದ ನಗರಸಭೆಯ ಪೌರ ಕಾರ್ಮಿಕರು ಮತ್ತು ಬೀದಿ ದೀಪ ನಿರ್ವಹಣಾ ಸಿಬ್ಬಂದಿ ಕಾರ್ಯ ಶ್ಲಾಘನೀಯ ಎಂದು ಗವಿಮಠದ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು. ಗವಿಮಠದಲ್ಲಿ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಆಶ್ರಯದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನಗರಸಭೆಯ ಬೀದಿ ದೀಪ ನಿರ್ವಹಣೆ ಮಾಡುವ ಆರು ಸಿಬ್ಬಂದಿಯನ್ನು ಸನ್ಮಾನಿಸಿ ಮಾತನಾಡಿ, ಬೀದಿ ದೀಪ ನಿರ್ವಹಣೆ ಮೂಲಕ ಬೆಳಕು ನೀಡುವ ಕಾರ್ಯ ಮಹತ್ವದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸನ್ಮಾನ ಸ್ವೀಕರಿಸಿದ ನಾಗನಾಥ ಗಾಜರೆ ಮಾತನಾಡಿ, ನನ್ನ ವೃತ್ತಿ ಜೀವನದಲ್ಲಿ ಇದುವರೆಗೆ ಯಾರೂ ನಮ್ಮನ್ನು ಗುರುತಿಸಿ ಸನ್ಮಾನಿಸಿಲ್ಲ. ಮೊದಲ ಸಲ ಗವಿಮಠದ ಗುರುಗಳು ನಮ್ಮ ಸೇವೆಯನ್ನು ಗುರುತಿಸಿ ಸನ್ಮಾನಿಸಿದ್ದಾರೆ ಎಂದು ಧನ್ಯತಾಭಾವ ವ್ಯಕ್ತಪಡಿಸಿದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ಅಲಶೆಟ್ಟಿ, ರೇವಣಸಿದ್ಧಯ್ಯ ಮಠಪತಿ, ಬಾಬುರಾವ ಉಳ್ಳಿ, ಮಲ್ಲಿಕಾರ್ಜುನ ನಂದಿ, ಬಾಬುರಾವ ಚಳಕಾಪುರೆ, ಶರಣು, ಶಾಂತವೀರ ಪೂಜಾರಿ, ಮಂಜು ಸೊನ್ನಗಿ ಉಪಸ್ಥಿತರಿದ್ದರು. ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಪ್ರಾಸ್ತಾವಿಕ ಮಾತನಾಡಿದರು. ರುದ್ರೇಶ್ವರ ಗೋರ್ಟಾ ನಿರೂಪಣೆ ಮಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ನಗರಸಭೆ ಬೀದಿ ದೀಪ ನಿರ್ವಹಣೆಯ ಆರು ನೌಕರರನ್ನು ಸನ್ಮಾನಿಸಲಾಯಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ಪ್ರೊ.ರುದ್ರೇಶ್ವರ ಗೋರ್ಟಾ, ಮಲ್ಲಿಕಾರ್ಜುನ ನಂದಿ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ಅಲಶೆಟ್ಟಿ, ರೇವಣಸಿದ್ಧಯ್ಯ ಮಠಪತಿ, ಬಾಬುರಾವ ಉಳ್ಳಿ ಇತರರಿದ್ದರು.



ಬಸವಕಲ್ಯಾಣ: ನಗರದ ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು.

ಉದಯವಾಣಿ ಕಲಬುರಗಿ
ರವಿವಾರ, ಡಿಸೆಂಬರ್ 15, 2020

Scanned with OKEN Scanner

ಶರಣ ತತ್ವ ಪ್ರಚಾರದಿಂದ ತೃಪ್ತಿ

ಮುರುಘಾ ಶ್ರೀ ಪ್ರಶಸ್ತಿ ಪುರಸ್ಕೃತ ಹುಲಸೂರ ಶ್ರೀಗೆ ಸತ್ಕಾರ



ಬಸವಕಲ್ಯಾಣ ನಗರದ ಹೊರವಲಯದಲ್ಲಿರುವ ತ್ರೀಪುರಾಂತನ ಗವಿ ಮಠದಲ್ಲಿ ಹುಲಸೂರನ ಡಾ.ಶಿವಾನಂದ ಸ್ವಾಮೀಜಿಗೆ ಚಿತ್ರದುರ್ಗದ ಮುರಘಾ ಶ್ರೀ ಪ್ರಶಸ್ತಿ ಸಂದ ಪ್ರಯುಕ್ತ ಸತ್ಕರಿಸಿ ಗೌರವಿಸಲಾಯಿತು.

ವಿಕ ಸುದ್ದಿಲೋಕ ಬಸವಕಲ್ಯಾಣ

ನಗರದ ಹೊರವಲಯದಲ್ಲಿರುವ ತ್ರೀಪುರಾಂತನ ಗವಿ ಮಠದಲ್ಲಿ ಹುಲಸೂರನ ಡಾ.ಶಿವಾನಂದ ಸ್ವಾಮೀಜಿಗೆ ಚಿತ್ರದುರ್ಗದ ಮುರಘಾ ಶ್ರೀ ಪ್ರಶಸ್ತಿ ಸಂದ ಪ್ರಯುಕ್ತ ಗವಿಮಠ ಟ್ರಸ್ಟ್, ಮದ್ದೀರಶೈವ ಸದ್ಭೋಧನ ಸಂಸ್ಥೆ ತಾಲೂಕಾ ಘಟಕ ಮತ್ತು ಸಮಸ್ತ ಮಠದ ಸದ್ಭಕ್ತರ ವತಿಯಿಂದ ಸತ್ಕರಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಹುಲಸೂರ ಶ್ರೀ, ಗವಿಮಠದ ಜಗದ್ಗುರು ಪುಣ್ಯ ಪುರುಷರು, ತಪಸ್ವಿಗಳು, ಮಹಾ ಶರಣರಾಗಿದ್ದು, ಈ ಮಠದಲ್ಲಿ ಸತ್ಕಾರ ದೊರೆತಿರುವುದು ಸೌಭಾಗ್ಯವಾಗಿದೆ ಎಂದರು.

ಶರಣ ತತ್ವ ಪ್ರಚಾರದ ಉದ್ದೇಶದಿಂದ ಭಾರತದಾದ್ಯಂತ ಎರಡು ಸಲ 22 ಸಾವಿರ ಕಿ.ಮೀ. ಪಾದಯಾತ್ರೆ ಮಾಡಿ ಕನ್ನಡ, ಮರಾಠಿ, ಹಿಂದಿ, ಇಂಗ್ಲಿಷ್ ನಲ್ಲಿ ಶರಣ ಸಾಹಿತ್ಯ ಹಾಗೂ ತತ್ವ ಪ್ರಚಾರ ಮಾಡಿದ್ದು ತೃಪ್ತಿ ತಂದಿದೆ. ಜೀವನ ಸಾರ್ಥಕವೆನಿಸಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಶರಣ ತತ್ವ ಪ್ರಚಾರ ಮಾಡಲು ಎರಡು ಸಲ ಒಟ್ಟು 22 ಸಾವಿರ ಕಿ.ಮೀ. ಪಾದಯಾತ್ರೆಯ ಮೂಲಕ ಡಾ.ಶಿವಾನಂದ ಸ್ವಾಮಿ ದೊಡ್ಡ ಸಾಧನೆ ಮಾಡಿದ್ದಾರೆ. ಇದು ಸಾಹಸದ ಯಾತ್ರೆ. ಅವರ ಸತ್ಯ ಸಂಕಲ್ಪ, ಶರಣರ ಕೃಪೆ ಈ ಸಾಧನೆಗೆ ದಾರಿದೀಪ ಎಂದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಎ.ಜಿ.ಪಾಟೀಲ, ಬಾಬುರಾವ ಉಳ್ಳೆ, ಮಲ್ಲಿಕಾರ್ಜುನ ನಂದಿ, ರೇವಣಸಿದ್ದಯ್ಯ ಮಠಪತಿ, ಬಾಬುರಾವ ಚಳಕಾಪುರೆ, ಮರೆಪ್ಪ ಪೊಲೀಸ್ ಪಾಟೀಲ, ಬಸವರಾಜ ಬಿರಾದಾರ, ಪ್ರದೀಪ ಕುಂಬಾರ, ಶಾಂತವೀರ ಪೂಜಾರಿ, ಪ್ರೊ.ಬಸವರಾಜ, ಶಿವಕುಮಾರ ಸ್ವಾಮಿ ಇದ್ದರು. ಬಸವಂತಪ್ಪ ಲವಾರೆ ಸ್ವಾಗತಿಸಿದರು. ಪ್ರೊ.ರುದ್ರೇಶ್ವರ ಗೋರ್ಟಾ ನಿರೂಪಿಸಿದರು.

ಘನಲಿಂಗರ ಶಕ್ತಿ

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಿಕ್ಕ ವಯಸ್ಸಿನವರಾಗಿದ್ದರೂ ಸದಾ ಕ್ರಿಯಾಶೀಲರು. ಭಕ್ತರ ಸಹಕಾರದಿಂದ ಗವಿಮಠವನ್ನು ಅಭಿವೃದ್ಧಿ ಪಡಿಸಿದ್ದು ದೊಡ್ಡ ಸಾಧನೆ. ಅಭಿನವ ಶ್ರೀಗಳ ರೂಪದಲ್ಲಿ ಜಗದ್ಗುರು ಘನಲಿಂಗರ ಶಕ್ತಿ ಅಡಗಿದೆ. ಆ ಶಕ್ತಿಯೇ ಈ ಅಭಿವೃದ್ಧಿಗೆ ಕಾರಣ ಎಂದು ಹುಲಸೂರನ ಡಾ.ಶಿವಾನಂದ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಏತ ನೀರಾವರಿಗೆ ಅನುಮೋದನೆ ನೀಡಿ

ವಿಜಯವಾಣಿ ಸುದ್ದಿಜಾಲ ಹುಲಸೂರು

ಬಸವಕಲ್ಯಾಣ ತಾಲೂಕಿನ ಏತ ನೀರಾವರಿ ಯೋಜನೆಗೆ ಆಡಳಿತ್ಮಾಕ ಅನುಮೋದನೆ ನೀಡಬೇಕು ಎಂದು ಒತ್ತಾಯಿಸಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಬಸವಕಲ್ಯಾಣ ತಾಲೂಕಿನ ವಿವಿಧ ಮಠಾಧೀಶರು ಮತ್ತು ಬಿಜೆಪಿ ಮಾಜಿ ತಾಲೂಕು ಅಧ್ಯಕ್ಷ ಸೂರ್ಯಕಾಂತ ಚಿಲ್ಲಾಬಟ್ಟೆ ನೇತೃತ್ವದ ನಿಯೋಗದಿಂದ ಮನವಿ ಸಲ್ಲಿಸಲಾಯಿತು.

» ವಿವಿಧ ಮಠಾಧೀಶರು ಮತ್ತು ಸೂರ್ಯಕಾಂತ ಚಿಲ್ಲಾಬಟ್ಟೆಯಿಂದ ಸಿಎಂಗೆ ಮನವಿ

ಬೀದರ್ ಜಿಲ್ಲೆಯ ಮಾಂಜ್ರಾ ನದಿಯಿಂದ 2ಟಿಎಂಸಿ ನೀರನ್ನು ಎತ್ತಿ ಬಸವಕಲ್ಯಾಣ ಹಾಗೂ ಹುಲಸೂರಿನ 27ಹಳ್ಳಿಗಳ ಒಟ್ಟಾರೆ 25 ಸಾವಿರ ಎಕರೆ ಜಮೀನಿಗೆ ನೀರಾವರಿ ಕಲ್ಪಿಸುವ ಯೋಜನೆಗೆ ಇತ್ತೀಚೆಗೆ ಜರುಗಿದ ನಿಗಮದ 88ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಲಾಗಿದ್ದು, 27 ಹಳ್ಳಿಗಳಿಗೆ ಏತ ನೀರಾವರಿ ಯೋಜನೆ ಮೊದಲನೇ ಹಂತ 391 ಕೋಟಿ ರೂ. ಎರಡನೇ ಹಂತ 257 ಕೋಟಿ ರೂ. ಒಟ್ಟು 648 ಕೋಟಿ ರೂಪಾಯಿಗಳ ಯೋಜನೆ ಇದಾಗಿದ್ದು, ಇದರಿಂದ 1.42 ಲಕ್ಷ ರೈತರಿಗೆ ನೀರಾವರಿ ಯೋಜನೆಯ ಲಾಭವಾಗುತ್ತದೆ ಎಂದು ತಿಳಿಸಿದರು. ಮುಚಳಂಬದ ಶ್ರೀ ಪ್ರಣವಾನಂದ ಸ್ವಾಮೀಜಿ, ಗಡಿಗೌಡಗಾಂವದ ಶ್ರೀ ಶಾಂತವೀರ ಶಿವಾಚಾರ್ಯರು, ಶ್ರೀ ಘನಲಿಂಗರುದ್ರಮುನಿ ಶಿವಾಚಾರ್ಯರು, ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ಅಭಿನವ ಘನಲಿಂಗ ಶಿವಾಚಾರ್ಯರು, ಶ್ರೀ ಹಾವಗಿಲಿಂಗ ಶಿವಾಚಾರ್ಯರು, ಶ್ರೀ ಚನ್ನಮಲ್ಲ ದೇವರು, ಸೂರ್ಯಕಾಂತ ಚಿಲ್ಲಾಬಟ್ಟೆ, ಶಂಕರ ನಾಗದೆ ಸೇರಿ ಇತರರಿದ್ದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ತಾಲೂಕಿನ ಏತ ನೀರಾವರಿ ಯೋಜನೆಗೆ ಆಡಳಿತ್ಮಾಕ ಅನುಮೋದನೆ ನೀಡಬೇಕು ಎಂದು ಒತ್ತಾಯಿಸಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಮುಚಳಂಬದ ಶ್ರೀ ಪ್ರಣವಾನಂದ ಸ್ವಾಮೀಜಿ, ಗಡಿಗೌಡಗಾಂವ ಶ್ರೀ ಶಾಂತವೀರ ಶಿವಾಚಾರ್ಯರು, ಶ್ರೀ ಘನಲಿಂಗರುದ್ರಮುನಿ ಶಿವಾಚಾರ್ಯರು, ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ಅಭಿನವ ಘನಲಿಂಗ ಶಿವಾಚಾರ್ಯರು, ಶ್ರೀ ಹಾವಗಿಲಿಂಗ ಶಿವಾಚಾರ್ಯರು, ಶ್ರೀ ಚನ್ನಮಲ್ಲ ದೇವರು, ಬಿಜೆಪಿ ಮಾಜಿ ತಾಲೂಕು ಅಧ್ಯಕ್ಷ ಸೂರ್ಯಕಾಂತ ಚಿಲ್ಲಾಬಟ್ಟೆ ಮನವಿ ಸಲ್ಲಿಸಿದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಶುಕ್ರವಾರ 27 ನವೆಂಬರ್ 2020
27 NOVEMBER 2020

ಶರಣ ವಚನದಿಂದ ಸಾರ್ಥಕ ಜೀವನ

ಬಸವಕಲ್ಯಾಣ: ವಚನ ಸಾಹಿತ್ಯದಲ್ಲಿ ಆದರ್ಶ ಬದುಕಿನ ಮೌಲ್ಯ ಅಡಗಿವೆ. ಶರಣರ ವಚನಗಳನ್ನು ಓದುವ ಜತೆಗೆ ಜೀವನದಲ್ಲಿ ಅಳವಡಿಕೊಳ್ಳಲು ಪ್ರಯತ್ನಿಸಿದರೆ ಜೀವನದಲ್ಲಿ ಸಾರ್ಥಕತೆ ಕಾಣಲು ಸಾಧ್ಯ ಎಂದು ಹಾರಕೂಡದ ಶ್ರೀ ಡಾ.ಚನ್ನವೀರ ಶಿವಾಚಾರ್ಯರು ಹೇಳಿದರು. ನಗರದ ಯಾತ್ರಿ ನಿವಾಸದಲ್ಲಿ ಬಸಮ್ಮ ಮತ್ತು ಸಸಾನಂದ ಕಾಳಗೆ ಅವರ ಷಷ್ಟ್ಯಬ್ಧಿ ಪೂರ್ತಿ ಕಾರ್ಯಕ್ರಮದ ನಿಮಿತ್ತ ಬಸವಾನಂದ ಗ್ರಂಥ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ನಿಸ್ವಾರ್ಥ ಸೇವೆಯಿಂದ ಬದುಕಿನಲ್ಲಿ ಸಂತೃಪ್ತಿ ಕಾಣಲು ಸಾಧ್ಯ. ಕಾಳಗೆ ದಂಪತಿ 36 ವರ್ಷ ಶಿಕ್ಷಕರಾಗಿ ಸೇವೆ ಸಲ್ಲಿಸಿ ಸಾರ್ಥಕ ಜೀವನ ನಡೆಸಿದ್ದಾರೆ ಎಂದರು. ನೇತೃತ್ವ ವಹಿಸಿದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಜೀನವದಲ್ಲಿ ಹಣ, ಆಸ್ತಿ, ಐಶ್ವರ್ಯ ಶಾಶ್ವತವಲ್ಲ. ಜೀವನದಲ್ಲಿ ಮಾಡಿದ ಸತ್ಕಾರ್ಯಗಳೇ ಶಾಶ್ವತ. ಗುರು ಬಸವಣ್ಣನವರ ವಚನಗಳು ಅಮೂಲ್ಯ ಸಂಪತ್ತು ಇದ್ದಂತೆ ಎಂದರು. ಡಾ.ಗಂಗಾಂಬಿಕಾ ಅಕ್ಕ ಸಮ್ಮುಖ ವಹಿಸಿದ್ದರು. ಶರಣಪ್ಪ ಗಾರಂಪಳ್ಳಿ ಅಧ್ಯಕ್ಷತೆ ವಹಿಸಿದರು. ತಹಸೀಲ್ದಾರ್ ಸಾವಿತ್ರಿ ಸಲಗರ, ನಿವೃತ್ತ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸುಶೀಲಾಬಾಯಿ ಹೋಳಕುಂದೆ, ನಿವೃತ್ತ ಬಿಇಒ ಗುಂಡಪ್ಪ ಮಡಕೆ, ಕಲಬುರಗಿ ನಗರ ಯೋಜನಾ ಆಯುಕ್ತ ಸಂಗಮೇಶ ಗಾರಂಪಳ್ಳಿ, ಪ್ರಮುಖರಾದ ಪರಮೇಶ್ವರ ಬಿರಾದಾರ, ಸಂಜಯ ಕಾಳಗೆ, ವಿನಯ ಕಾಳಗೆ, ಪ್ರಕಾಶ ಮೆಂಡೋಳೆ, ಅಶೋಕ ವಕಾರೆ, ಪ್ರದೀಪ ವಾತಡೆ, ದೀಪಕ ಗುಡ್ಡಾ, ಸೂರ್ಯಕಾಂತ ಶೀಲವಂತ, ಚಂದ್ರಕಾಂತ ಸ್ವಾಮಿ, ಶಿಖರೇಶ್ವರ ಕೊಟಗಿ, ಗದಿಗೇಶ ಗುದುಗೆ, ಸಿದ್ದು ರಾಯವಾಡೆ, ಲೇಖಕರಾದ ವಿದ್ಯಾರಾಣಿ ಪ್ರಕಾಶ ಬಿರಾದಾರ ಸಂಗಮೇಶ ಕಾಳಗೆ ಇತರರಿದ್ದರು. ವೀಣಾ ಕಾಳಗೆ ಸ್ವಾಗತಿಸಿದರು. ಸ್ನೇಹಾ ಕಾಳಗೆ ವಂದಿಸಿದರು, ಪ್ರಕಾಶ ಬಿರಾದಾರ ನಿರೂಪಣೆ ಮಾಡಿದರು. ರಂಜನಾ ಭೂಶೆಟ್ಟೆ ಸಂಗೀತ ಪ್ರಸ್ತುತ ಪಡಿಸಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಬಸವಾನಂದ ಗ್ರಂಥವನ್ನು ಹಾರಕೂಡದ ಶ್ರೀ ಡಾ.ಚನ್ನವೀರ ಶಿವಾಚಾರ್ಯರು ಲೋಕಾರ್ಪಣೆ ಮಾಡಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಡಾ.ಗಂಗಾಂಬಿಕಾ ಅಕ್ಕ, ನಿವೃತ್ತ ಡಿಎಚ್ಓ ಡಾ.ಸುಶೀಲಾಬಾಯಿ ಹೋಳಕುಂದೆ, ನಿವೃತ್ತ ಬಿಇಒ ಗುಂಡಪ್ಪ ಮಡಕೆ, ಶರಣಪ್ಪ ಗಾರಂಪಳ್ಳಿ, ಸದಾನಂದ ಕಾಳಗೆ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 15 ಡಿಸೆಂಬರ್ 2020
15 DECEMBER 2020

Scanned with OKEN Scanner

ಸಂಯುಕ್ತ ಕರ್ನಾಟಕ
ಶುಕ್ರವಾರ, 8, ಜನವರಿ, 2021, ಕಲಬುರಗಿ

ಸಾಹಿತ್ಯದ ಜತೆಗೆ ಸಂಸ್ಕೃತಿ ಬೆಳೆಯಲಿ: ಅಭಿನವಶ್ರೀ

ಸಂ.ಕ.ಸಮಾಚಾರ ಬಸವಕಲ್ಯಾಣ

ಸಾಹಿತ್ಯದ ಜತೆಗೆ ಉತ್ತಮ ಸಂಸ್ಕೃತಿಯನ್ನು ಬೆಳಸುವುದು ಇಂದಿನ ಅವಶ್ಯಕತೆಯಾಗಿದೆ ಎಂದು ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಭಿಪ್ರಾಯಪಟ್ಟರು.

ನಗರದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಕ.ಸಾ.ಪ ದಿಂದ ಜಿಲ್ಲಾ ಕಸಾಪ ಸುವರ್ಣ ಸಂಭ್ರಮ ವರ್ಷಾಚರಣೆ ನಿಮಿತ್ತ ಪ್ರತಿಮಾ ಪ್ರಕಾಶನ ಸಹಯೋಗದಲ್ಲಿ ಪ್ರತಿಮಾ ವೀರಶೆಟ್ಟಿ ದಂಪತಿಯ ಪುತ್ರ ಸಾತ್ವಿಕನ ಜನ್ಮದಿನ, 50 ಜನ ಸಾಧಕರಿಗೆ ಸನ್ಮಾನ ಹಾಗೂ ವೀರಶೆಟ್ಟಿ ಎಂ.ಪಾಟೀಲ್ ಬರೆದ ವೈರಾಣು ಹೈರಾಣು ವಿಶ್ವ ಮಹಾಯುದ್ಧ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿ ಜನ್ಮದಿನ ನಿಮಿತ್ತ ಪಾಶ್ಚಾತ್ಯ ಸಂಸ್ಕೃತಿಯಾದ ದೀಪ ಆರಿಸಿ ಕೇಕ್ ಕತ್ತರಿಸುವ ಪದ್ಧತಿಯ ಬದಲಾಗಿ ದೀಪ ಬೆಳಗುವ ಸಂಸ್ಕೃತಿ ಬೆಳಸಿ, ದೇಶಿಯ ಸಂಸ್ಕೃತಿ ಬೆಳಸುವ ಪ್ರಯತ್ನ ಇದಾಗಿದೆ ಎಂದರು.

ಪುಸ್ತಕ ಬಿಡುಗಡೆಗೊಳಿಸಿದ ಪ್ರಾಚಾರ್ಯ ಡಾ. ಬಸವರಾಜ ಬಲ್ಲೂರ ಮಾತನಾಡಿ ಭೌತಿಕ ಸಂಪತ್ತು ಮಹತ್ವದ್ದಲ್ಲ, ಆದರೆ ಬೌದ್ಧಿಕ ಸಂಪತ್ತು ತುಂಬಾ ಮಹತ್ವದ್ದು ಎಂದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕ ಡಾ.ಚಿತ್ರಶೇಖರ ಚಿರಳ್ಳಿ ಸಹ ಮಾತನಾಡಿ ಪುಸ್ತಕ ಪರಿಚಯ ಮಾಡಿಕೊಟ್ಟರು. ಅಧ್ಯಕ್ಷತೆವಹಿಸಿದಕಸಾಪಜಿಲ್ಲಾಧ್ಯಕ್ಷ ಸುರೇಶ ಚನ್ನಶೆಟ್ಟಿ, ಶಿಕ್ಷಕರ ಸಂಘ ತಾಲ್ಲೂಕು ಅಧ್ಯಕ್ಷ ಜಗನಾಥ ಪತಂಗೆ ಸಹ ಮಾತನಾಡಿದರು. ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರವೀಂದ್ರ ರೆಡ್ಡಿ ಮಾಲಿಪಾಟೀಲ್, ಪ್ರ.ಕಾರ್ಯದರ್ಶಿ ಪ್ರಭುಲಿಂಗ ತೂಗಾವೆ, ಪ್ರಾಚಾರ್ಯ ನಾಗೇಂದ್ರ ಢೋಲೆ, ಕಸಾಪ ತಾಲ್ಲೂಕಾಧ್ಯಕ್ಷ ಡಾ. ರುದ್ರಮಣಿ ಮಠಪತಿ, ಪ್ರತಿಮಾ ಪ್ರಕಾಶನದ ಅಧ್ಯಕ್ಷ ವೀರಶೆಟ್ಟಿ ಪಾಟೀಲ್, ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾಚಾರ್ಯ ಅನೀಲ ಕಾಂಬಳೆ ಇದ್ದರು. ರಮೇಶ ಉಮಾಪುರೆ ಸ್ವಾಗತಿಸಿದರು. ನಾಗೇಂದ್ರ ಬಿರಾದಾರ ನಿರೂಪಿಸಿದರು.



ಬಸವಕಲ್ಯಾಣ: ವೀರಶೆಟ್ಟಿ ಪಾಟೀಲ್ ಬರೆದ ವೈರಾಣು ಹೈರಾಣು ವಿಶ್ವ ಮಹಾಯುದ್ಧ ಪುಸ್ತಕ ಡಾ. ಬಸವರಾಜ ಬಲ್ಲೂರ ಬಿಡುಗಡೆಗೊಳಿದರು.

ಸನ್ಮಾನ

ಶಿವಾಜಿ ಕಾಳೆ, ಶಾಕುಂತಲಾ, ವಿಜಯಕುಮಾರ ಕನಕಟ್ಟೆ, ನಾಗಪ್ಪ ನಿಣ್ಣೆ, ಸಂಗಮೇಶ ಗೌರೆ, ಓಂಕಾರ ಪಾಟೀಲ್, ಚಂದ್ರಕಾತ ಪತಂಗೆ, ಚಂದ್ರಕಾಂತ ರಾಜೇಶ್ವರೆ, ಮಹೇಶ ಪಟ್ಟಿ, ಶಿವಕುಮಾರ ಪಟ್ಟಿ, ರಮೇಶ ಪತಂಗೆ, ಶಿವರಾಜ ಪೊಲೀಸ್ ಪಾಟೀಲ್, ಬಸವರಾಜ ಪೊಲೀಸ್ ಪಾಟೀಲ್, ಬಸವರಾಜ ಗುಂಗೆ, ಚನ್ನಬಸಪ್ಪಾ ಶಟ್ಟಿಪ್ಪಾ, ಲೋಕೇಶ, ಅನೀಲಕುಮಾರ ಅಕ್ಕಣ್ಣಾ, ರಾಜಕುಮಾರ ಪಾಲಾಪೂರೆ, ಶಿವರಾಜ ಮಾಶೆಟ್ಟಿ, ವಸಂತ ಮಾನೆ, ಶಿವಶಂಕರ ಗೌರೆ, ಶಾಲಿವಾನ ಕಾಕನಾಳೆ, ಮಾಣಿಕ ಸಂಗನಬಟ್ಟೆ, ಶರಣು ಬಿರಾದಾರ, ಸೂರ್ಯಕಾಂತ ಬೇಲೂರೆ, ಸಂತೋಷ ಹುಲಸೂರೆ, ಶಿವಪುತ್ರ ಮಿರಾಸದಾರ, ಶಿವಕುಮಾರ ಮಠಪತಿ, ಶಿವಕುಮಾರ ವಕಾರೆ, ಗಂಗಾಧರ ಸಾಲಿಮಠ, ಪ್ರಶಾಂತ ಬುಡಗೆ, ಚನ್ನವೀರ ಜಮಾದಾರ, ಬಸವರಾಜ ಭಾಲ್ಕೆ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.

ಸಾಹಿತ್ಯ ಜತೆಗೆ ಸಂಸ್ಕೃತಿ ಬೆಳೆಯಲಿ

ಶ್ರೀ ರುದ್ರಮುನಿ ಶಿವಾಚಾರ್ಯರ ಅಭಿಪ್ರಾಯ | ವೈರಾಣು ಹೈರಾಣು ಪುಸ್ತಕ ಬಿಡುಗಡೆ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಾಹಿತ್ಯ ಜತೆಗೆ ಉತ್ತಮ ಸಂಸ್ಕೃತಿ ಬೆಳಸುವುದು ಇಂದಿನ ಆಗತ್ಯವಿದೆ ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಅಭಿಪ್ರಾಯಪಟ್ಟರು.

ಜಿಲ್ಲಾ ಕಸಾಪ ಸುವರ್ಣ ಸಂಭ್ರಮ ವರ್ಷಾಚರಣೆ ನಿಮಿತ್ತ ಬಿಕೆಡಿಬಿ ಸಭಾಂಗಣದಲ್ಲಿ ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್, ಪ್ರತಿಮಾ ಪ್ರಕಾಶನ ಸಹಯೋಗದಡಿ ಏರ್ಪಡಿಸಿದ್ದ 50 ಸಾಧಕರ ಸನ್ಮಾನ ಹಾಗೂ ವೀರಶೆಟ್ಟಿ ಎಂ.ಪಾಟೀಲ್ ಬರೆದ ವೈರಾಣು ಹೈರಾಣು ವಿಶ್ವ ಮಹಾಯುದ್ಧ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಹಿತ್ಯ ಪರಿಷತ್ ಇಂತಹ ಉತ್ತಮ ಸಂಸ್ಕೃತಿ ಬೆಳವಣಿಗೆಗೆ ಶ್ರಮಿಸುತ್ತಿದೆ ಎಂದು ಶ್ಲಾಘಿಸಿದರು.

ಪುಸ್ತಕ ಬಿಡುಗಡೆಗೊಳಿಸಿದ ಪ್ರಾಚಾರ್ಯ ಡಾ.ಬಸವರಾಜ ಬಲ್ಲೂರ ಮಾತನಾಡಿ, ಭೌತಿಕಕ್ಕಿಂತ ಬೌದ್ಧಿಕ ಸಂಪತ್ತು ಮಹತ್ವದ್ದು. ರನ್ನ, ಪಂಪ, ಹರಿಹರ, ಜನ್ನ, ರಾಘವಾಂಕ ಕವಿಗಳು ಭೌತಿಕ ಬದಲು ಬೌದ್ಧಿಕ ಸಂಪತ್ತಿಗೆ ಮಹತ್ವ ನೀಡಿದ್ದರಿಂದ ಕನ್ನಡ ಸಾಹಿತ್ಯದ ಧ್ರುವತಾರೆಗಳು ಎನಿಸಿದ್ದಾರೆ ಎಂದರು.

ಉಪನ್ಯಾಸಕ ಡಾ.ಚಿತ್ರಶೇಖರ ಚಿರಳ್ಳಿ ಮಾತನಾಡಿದರು. ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರವೀಂದ್ರರೆಡ್ಡಿ ಮಾಲಿಪಾಟೀಲ್, ಪ್ರಧಾನ ಕಾರ್ಯದರ್ಶಿ ಪ್ರಭುಲಿಂಗ ತೂಗಾವೆ, ಪ್ರಾಚಾರ್ಯ ನಾಗೇಂದ್ರ ಢೋಲೆ, ಕಸಾಪ ತಾಲೂಕು ಅಧ್ಯಕ್ಷ ಡಾ.ರುದ್ರಮಣಿ ಮಠಪತಿ, ಪ್ರತಿಮಾ ಪ್ರಕಾಶನ ಅಧ್ಯಕ್ಷ ವೀರಶೆಟ್ಟಿ ಪಾಟೀಲ್, ಮುರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾಚಾರ್ಯ ಅನೀಲ ಕಾಂಬಳೆ ಉಪಸ್ಥಿತರಿದ್ದರು. ರಮೇಶ ಉಮಾಪುರೆ ಸ್ವಾಗತಿಸಿದರು. ನಾಗೇಂದ್ರ ಬಿರಾದಾರ ನಿರೂಪಣೆ ಮಾಡಿದರು.

ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ

ಶಿವಾಜಿ ಕಾಳೆ, ಶಕುಂತಲಾ, ವಿಜಯಕುಮಾರ ಕನಕಟ್ಟೆ, ನಾಗಪ್ಪ ನಿಣ್ಣೆ, ಸಂಗಮೇಶ ಗೌರೆ, ಓಂಕಾರ ಪಾಟೀಲ್, ಚಂದ್ರಕಾತ ಪತಂಗೆ, ಚಂದ್ರಕಾಂತ ರಾಜೇಶ್ವರೆ, ಮಹೇಶ ಪಟ್ಟಿ, ಶಿವಕುಮಾರ ಪಟ್ಟಿ, ರಮೇಶ ಪತಂಗೆ, ಶಿವರಾಜ ಪೊಲೀಸ ಪಾಟೀಲ್, ಬಸವರಾಜ ಪೊಲೀಸ್ ಪಾಟೀಲ್, ಬಸವರಾಜ ಗುಂಗೆ, ಚನ್ನಬಸಪ್ಪ ಶಟ್ಟಿಪ್ಪ, ಲೋಕೇಶ ಪಟ್ಟಿ, ಅನೀಲಕುಮಾರ ಅಕ್ಕಣ್ಣ, ರಾಜಕುಮಾರ ಪಾಲಾಪುರೆ, ಶಿವರಾಜ ಮಾಶೆಟ್ಟಿ, ವಸಂತ ಮಾನೆ, ಶಿವಶಂಕರ ಗೌರೆ, ಶಾಲಿವಾನ ಕಾಕನಾಳೆ, ಮಾಣಿಕ ಸಂಗನಬಟ್ಟೆ, ಶರಣು ಬಿರಾದಾರ, ಸೂರ್ಯಕಾಂತ ಬೇಲೂರೆ, ಸಂತೋಷ ಹುಲಸೂರೆ, ಶಿವಪುತ್ರ ಮಿರಾಸದಾರ, ಶಿವಕುಮಾರ ಮಠಪತಿ, ಶಿವಕುಮಾರ ವಕಾರೆ, ಗಂಗಾಧರ ಸಾಲಿಮಠ, ಪ್ರಶಾಂತ ಬುಡಗೆ, ಚನ್ನವೀರ ಜಮಾದಾರ, ಬಸವರಾಜ ಭಾಲ್ಕೆ, ಮಹೇಶ ಮುಳೆ, ಶಿವಪುತ್ರ ಓಕಳೆ, ವೀರೇಂದ್ರ ರೆಡ್ಡಿ, ಉಲ್ಲಾಸ ಇಂದುಕಾಂದೆ, ಲಕ್ಷ್ಮಣ ಹೆಂಬಾಡೆ, ಸಂತೋಷ ಅಕ್ಕಣ್ಣಿ, ಅರುಣಬಾಯಿ ಸ್ವಾಮಿ, ಜಾಧವ ಮೀನಾಕ್ಷಿ, ರಾಜಮತಿ ಕೊರಾಳೆ, ಚಂದ್ರಕಲಾ ಭಾಂಗೆ, ಮೀನಾಕುಮಾರಿ ಸೂರ್ಯವಂಶಿ, ಮೊಹಮ್ಮದಿ ಬೇಗಂ, ರೇವಣಸಿದ್ದ ಡೋಂಗ್ರೆ, ವಿಠ್ಠಲ್ ಜಾಧವ್, ಮನೋಹರ ಟಿಕೊರೆ, ವಿಶ್ವಾನಾಥ ಬನ್ನೂಡೆ, ಶಾಂತಲಿಂಗ ಮಠಪತಿ, ರಾಜಕುಮಾರ ಹೂಗಾರ, ತುಳಸಿರಾಮ ಕುಂಬಾರೆ, ಗಣೇಶ ಪಾಟೀಲ, ಅಬ್ದುಲ್ ಸತ್ತಾರ, ಧರ್ಮೇಂದ್ರ ಜ್ಯೋತಿಕರ್ ಅವರನ್ನು ಸನ್ಮಾನಿಸಲಾಯಿತು.



ಬಸವಕಲ್ಯಾಣದಲ್ಲಿ ವೀರಶೆಟ್ಟಿ ಪಾಟೀಲ್ ಬರೆದ ವೈರಾಣು ಹೈರಾಣು ವಿಶ್ವ ಮಹಾಯುದ್ಧ ಪುಸ್ತಕವನ್ನು ಡಾ.ಬಸವರಾಜ ಬಲ್ಲೂರ ಬಿಡುಗಡೆಗೊಳಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಡಾ.ರುದ್ರಮಣಿ ಮಠಪತಿ, ಡಾ.ಚಿತ್ರಶೇಖರ ಚಿರಳ್ಳಿ, ರಮೇಶ ಉಮಾಪುರೆ, ಜಗನ್ನಾಥ ಪತಂಗೆ, ಪ್ರತಿಮಾ ಪಾಟೀಲ್, ಸುರೇಶ ಚೆನ್ನಶೆಟ್ಟಿ, ನಾಗೇಂದ್ರ ಢೋಲೆ, ವೀರಶೆಟ್ಟಿ ಪಾಟೀಲ್, ರವೀಂದ್ರರೆಡ್ಡಿ ಮಾಲಿಪಾಟೀಲ್, ಪ್ರಭುಲಿಂಗ ತೂಗಾವೆ ಇತರರಿದ್ದರು.

ಶುಕ್ರವಾರ 8 ಜನವರಿ 2021 • 8 JANUARY 2021 • VIJAYAVANI » KALABURAGI

Scanned with OKEN Scanner

ಸಂಯುಕ್ತ ಕರ್ನಾಟಕ ಶುಕ್ರವಾರ, 1, ಜನವರಿ, 2021, ಕಲಬುರಗಿ

ಗವಿಮಠದಲ್ಲಿ ಜಿಪಂ ಅಧ್ಯಕ್ಷರಿಗೆ ಸನ್ಮಾನ

ಮಡಿವಾಳ ಮಾಚಿದೇವರ ಧ್ವನಿ ಸುರುಳಿ ಬಿಡುಗಡೆ

ಸಂ.ಕ.ಸಮಾಚಾರ ಬಸವಕಲ್ಯಾಣ

ಸಾಹಿತ್ಯ ಜನಮನಕ್ಕೆ ತಲುಪಿಸಲು ಗಾಯನ ಸಹಕಾರಿಯಾಗಿದೆ ಎಂದು ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದರು. ಗವಿಮಠದಲ್ಲಿ ಶ್ರೀ ಮಡಿವಾಳ ಮಾಚಿದೇವರ ಕುರಿತ ಧ್ವನಿ ಸುರುಳಿ ಬಿಡುಗಡೆ ಮಾಡಿ ಮಾತನಾಡಿ ಕವನ, ಭಕ್ತಿಗೀತೆಗಳಿಗೆ ಜೀವ ತುಂಬಬೇಕಾದರೆ ಗಾಯಕರು ಸಹ ಅವಶ್ಯಕ. ಕನ್ನಡ, ಗಜಲ್, ಭಕ್ತಿಗೀತೆಗಳು ಹಾಡುವ ಗಾಯಕರ ಕೊರತೆ ಕಾಣುತ್ತಿದೆ. ಇದನ್ನು ನೀಗಿಸಲು ಗಾಯಕರು ಆಸಕ್ತಿ ವಹಿಸಿ ಮುಂದೆ ಬರಬೇಕು ಎಂದರು.

ಸನ್ಮಾನ ಸ್ವೀಕರಿಸಿದ ಜಿಪಂ ನೂತನ ಅಧ್ಯಕ್ಷರಾದ ನಿರ್ಮಲಾ ಮಾನೆಗೋಪಾಳೆ ಮಾತನಾಡಿ ಶ್ರೀಗಳಿಂದ ಸನ್ಮಾನ ಮತ್ತು ಆಶೀರ್ವಾದ ಸಿಕ್ಕಿರುವುದು ಸಂತಸ ತಂದಿದೆ ಎಂದರು. ಶ್ರೀಮದ್ವೀರಶೈವ ಸದ್ಭೋದನಾ ಸಂಸ್ಥೆ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂದಿ, ರೇವಣಸಿದ್ದಯ್ಯ ಸ್ವಾಮಿ, ಬಸವಂತಪ್ಪ ಮಾಲಿಪಾಟೀಲ್, ಬಲವಂತ ಚಾಕೂರೆ, ವಿಜಯಕುಮಾರ್ ತಿಂದ್ರೆ, ಭೋಜಪ್ಪ ಜ್ಯಾಂತೆ, ಮುತ್ತುರಾಜ್, ಚಂದ್ರಶೇಖರ ಸ್ವಾಮಿ ಇದ್ದರು. ಮಲ್ಲಿಕಾರ್ಜುನ ಅಲಗೂಡೆ ಪ್ರಾಸ್ತಾವಿಕ ಮಾತನಾಡಿದರು. ಶಿವಕುಮಾರ್ ಮಠಪತಿ ನಿರೂಪಿಸಿದರು.



ಬಸವಕಲ್ಯಾಣ : ಗವಿಮಠದಲ್ಲಿ ಶ್ರೀ ಮಡಿವಾಳ ಮಾಚಿದೇವರ ಕುರಿತ ಧ್ವನಿ ಸುರುಳಿ ಬಿಡುಗಡೆ ಕಾರ್ಯಕ್ರಮದಲ್ಲಿ ಜಿಪಂ ನೂತನ ಅಧ್ಯಕ್ಷರಾದ ನಿರ್ಮಲಾ ಮಾನೆಗೋಪಾಳೆ ಅವರನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು.

ಹಾರಕೂಡದ ಡಾ.ಚನ್ನವೀರ ಶಿವಾಚಾರ್ಯರ ನುಡಿ

ವಚನಗಳು ಉತ್ತಮ ಬದುಕಿಗೆ ದಾರಿದೀಪ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಬಸವಣ್ಣನವರ ವಚನಗಳು ಉತ್ತಮ ಬದುಕಿಗೆ ದಾರಿ ದೀಪ ಆಗಿವೆ' ಎಂದು ಹಾರಕೂಡ ಡಾ.ಚನ್ನವೀರ ಶಿವಾಚಾರ್ಯರು ಹೇಳಿದರು.

ಇಲ್ಲಿ ಭಾನುವಾರ ನಡೆದ ನಿವೃತ್ತ ಶಿಕ್ಷಕಿ ಬಸಮ್ಮ ಹಾಗೂ ಸದಾನಂದ ಕಾಳಗೆ ಅವರ ಷಷ್ಟ್ಯಬ್ದಿಪೂರ್ತಿ ಕಾರ್ಯಕ್ರಮದಲ್ಲಿ ವಿದ್ಯಾರಾಣಿ ಪ್ರಕಾಶ ಬಿರಾದಾರ ಬರೆದ 'ಬಸವಾನಂದ' ಅಭಿನಂದನಾ ಗ್ರಂಥ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ದೇವರನ್ನು ಹುಡುಕಿ ಎಲ್ಲಿಗೂ ಹೋಗುವ ಅಗತ್ಯವಿಲ್ಲ. ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಚ್ಚಾರಿತ್ರ್ಯವಂತರಾಗಿ ನಡೆದರೆ ಅದೇ ಕಾಶಿ ದರ್ಶನವಾದಂತೆ. ಷಷ್ಟ್ಯಬ್ದಿಪೂರ್ತಿ ಕಾರ್ಯಕ್ರಮಕ್ಕೆ ಅಭಿನಂದನಾ ಗ್ರಂಥ ಅರ್ಪಿಸುತ್ತಿರುವುದು ಉತ್ತಮ ಕಾರ್ಯ. ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಸಾಹಿತ್ಯದ ಬೆಳವಣಿಗೆಗೆ ಸಹಕಾರಿ ಆಗುವ ಇಂಥ ಕಾರ್ಯಗಳು ಹೆಚ್ಚಾಗಲಿ' ಎಂದರು.



ಬಸವಕಲ್ಯಾಣದಲ್ಲಿ ಭಾನುವಾರ ಹಾರಕೂಡ ಚನ್ನವೀರ ಶಿವಾಚಾರ್ಯರು 'ಬಸವಾನಂದ' ಅಭಿನಂದನಾ ಗ್ರಂಥ ಬಿಡುಗಡೆ ಮಾಡಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಗಂಗಾಂಬಿಕಾ ಅಕ್ಕ ಪಾಲ್ಗೊಂಡಿದ್ದರು

ಲಿಂಗವಂತ ಹರಳಯ್ಯ ಪೀಠಾಧ್ಯಕ್ಷೆ ಡಾ.ಗಂಗಾಂಬಿಕಾ ಅಕ್ಕ ಮಾತನಾಡಿ, 'ಮಕ್ಕಳು ಸಂಸ್ಕಾರವಂತರಾಗಬೇಕು. ತಂದೆ- ತಾಯಿ, ಗುರು ಹಿರಿಯರನ್ನು ಗೌರವಿಸಬೇಕು' ಎಂದರು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಜೀವನದಲ್ಲಿ ಜನ ಸೇವೆ ಬಿಟ್ಟರೆ ಯಾವುದೂ ಶಾಶ್ವತವಲ್ಲ. ಸದಾನಂದ ಹಾಗೂ ಬಸಮ್ಮ ದಂಪತಿಗಳಿಬ್ಬರೂ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ್ದಾರೆ' ಎಂದರು.

ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಗುಂಡಪ್ಪ ಮಡಕೆ, ನಿವೃತ್ತ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸುಶೀಲಾಬಾಯಿ ಹೊಳಕುಂದೆ, ಶರಣಪ್ಪ ಗಾರಂಪಳ್ಳಿ, ಪ್ರಕಾಶ ಬಿರಾದಾರ, ವಿದ್ಯಾರಾಣಿ ಮಾತನಾಡಿದರು.

ಮುಖ್ಯಾಂಶಗಳು

- 'ಬಸವಾನಂದ' ಅಭಿನಂದನಾ ಗ್ರಂಥ ಬಿಡುಗಡೆ
- ಮಕ್ಕಳಿಗೆ ಸಂಸ್ಕಾರ ಹೇಳಿಕೊಡಲು ಸಲಹೆ
- ಸಚ್ಚಾರಿತ್ರ್ಯವಂತರಾಗಿ ನಡೆದರೆ ಕಾಶಿ ದರ್ಶನ

ಕಲಬುರ್ಗಿ ನಗರ ಯೋಜನಾ ಪ್ರಾಧಿಕಾರದ ಆಯುಕ್ತ ಸಂಗಮೇಶ ಗಾರಂಪಳ್ಳಿ, ಪರಮೇಶ್ವರ ಬಿರಾದಾರ, ಶಿಲ್ಪಾ ಸಂಜಯ ಕಾಳಗೆ, ವಿನಯ ಕಾಳಗೆ, ಎಪಿಎಂಸಿ ಮಾಜಿ ಅಧ್ಯಕ್ಷ ಪ್ರಕಾಶ ಮಂಡೋಳೆ, ಗುರುಪ್ರಕಾಶ ಮುಗಳಿ, ಮುಖಂಡ ಪ್ರದೀಪ ವಾತಡೆ, ಸೂರ್ಯಕಾಂತ ಶೀಲವಂತ, ಚಂದ್ರಕಾಂತ ಸ್ವಾಮಿ ನಾರಾಯಣಪುರ, ದೀಪಕ ಗುಡ್ಡಾ, ಶೇಖರೇಶ್ವರ ಕೊಡಗಿ, ಬಡಿಗೇಶ ಗುದಗೆ ಉಪಸ್ಥಿತರಿದ್ದರು. ವೀಣಾ ಕಾಳಗೆ ಸ್ವಾಗತಿಸಿದರು. ಸ್ನೇಹಾ ವಂದಿಸಿದರು. ರಂಜನಾ ಭೂಶೆಟ್ಟಿ ಸಂಗೀತ ಪ್ರಸ್ತುತಪಡಿಸಿದರು.

ಸೋಮವಾರ • ಡಿಸೆಂಬರ್ 14, 2020 ಪ್ರಜಾವಾಣಿ

Scanned with OKEN Scanner

ಉಪನ್ಯಾಸಕ ಡಾ. ಚಿತ್ರಶೇಖರ ಚಿರಳ್ಳಿ ಅಭಿಮತ

ಚುಟುಕುಗಳಿಂದ ಸಮಾಜಕ್ಕೆ ಉತ್ತಮ ಸಂದೇಶ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಚುಟುಕುಗಳು ನಿಜಾಂಶ ಹೇಳುವ ಜತೆಗೆ ಜನತೆಯನ್ನು ಆರೋಗ್ಯ ಕಾಪಾಡಿಕೊಳ್ಳಲು ಎಚ್ಚರಿಸುತ್ತವೆ. ಸಮಾಜಕ್ಕೆ ಉತ್ತಮ ಸಂದೇಶ ಕೂಡ ನೀಡುತ್ತವೆ' ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಡಾ.ಚಿತ್ರಶೇಖರ ಚಿರಳ್ಳಿ ಹೇಳಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಪ್ರತಿಮಾ ಪ್ರಕಾಶನದಿಂದ ಈಚೆಗೆ ವೀರಶೆಟ್ಟಿ ಪಾಟೀಲ ಅವರ ಮಗ ಸಾತ್ವಿಕನ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ವೀರಶೆಟ್ಟಿ ಪಾಟೀಲ ಬರೆದ 'ವೈರಾಣು ಹೈರಾಣು ವಿಶ್ವ ಮಹಾಯುದ್ಧ' ಚುಟುಕು ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವೈರಾಣು ಹೈರಾಣು ವಿಶ್ವ ಮಹಾಯುದ್ಧ ಎಂಬ ಚುಟುಕು ಸಂಕಲನದಲ್ಲಿ ಕೊರೊನಾ ವೈರಾಣು ಜಗತ್ತಿನಲ್ಲಿ ಸೃಷ್ಟಿಸಿದ ಸಂಕಟದ ಸಮಗ್ರ ಚಿತ್ರಣವಿದೆ' ಎಂದರು.



ಬಸವಕಲ್ಯಾಣದಲ್ಲಿ ಈಚೆಗೆ ನಡೆದ 'ವೈರಾಣು ಹೈರಾಣು ವಿಶ್ವ ಮಹಾಯುದ್ಧ' ಕವನ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಡಾ.ಚಿತ್ರಶೇಖರ ಚಿರಳ್ಳಿ ಮಾತನಾಡಿದರು

ಸಾನಿಧ್ಯ ವಹಿಸಿದ್ದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಜನ್ಮದಿನದಂದು ಕೇಕ್ ಕತ್ತರಿಸಿ ದೀಪ ನಂದಿಸಿ ಕತ್ತಲು ಮಾಡುವುದು ಪಾಶ್ಚಿಮಾತ್ಯ ಪದ್ಧತಿಯಾದರೆ ದೀಪ ಬೆಳಗಿಸಿ ಬೆಳಕಾಗಿಸುವುದು ಭಾರತೀಯ ಸಂಸ್ಕೃತಿ. ಇಂಥ ಪರಂಪರೆ ಮುಂದುವರೆಸಬೇಕು. ವೀರಶೆಟ್ಟಿಯವರು ತಮ್ಮ ಮಗನ ಜನ್ಮದಿನಕ್ಕೆ ಪುಸ್ತಕ ಬಿಡುಗಡೆ ಮಾಡುತ್ತಿರುವುದು ಮಾದರಿ ಕಾರ್ಯವಾಗಿದೆ' ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಗೌರವ ಕಾರ್ಯದರ್ಶಿ ಡಾ.ಬಸವರಾಜ ಬಲ್ಲೂರ ಮಾತನಾಡಿ, 'ಭೌತಿಕಗಿಂತ ಬೌದ್ಧಿಕ ಸಂಪತ್ತು ಮಹತ್ವದ್ದು. ಬಸವಾದಿ ಶರಣರು ವಚನ ಸಾಹಿತ್ಯ ನೀಡಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಈ ಪುಣ್ಯ ನೆಲದಲ್ಲಿ ಈಗಲೂ ಇನ್ನಷ್ಟು, ಮತ್ತಷ್ಟು ಸಾಹಿತ್ಯ ಸೃಷ್ಟಿ ಆಗಬೇಕಾಗಿದೆ' ಎಂದರು.

ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಚೆನ್ನಶೆಟ್ಟಿ ಮಾತನಾಡಿ, 'ಉತ್ತಮ ಸಾಹಿತ್ಯ ರಚನೆಗೆ ಒಳ್ಳೆಯ ಪರಿಸರವೂ ಕಾರಣವಾಗುತ್ತದೆ' ಎಂದರು.

ತಾಲ್ಲೂಕು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಜಗನ್ನಾಥ ಪತಂಗೆ ಮಾತನಾಡಿದರು. ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ರವೀಂದ್ರರೆಡ್ಡಿ, ಪ್ರಭುಲಿಂಗ ತೂಗಾವೆ, ಪ್ರಾಚಾರ್ಯ ನಾಗೇಂದ್ರ ಢೋಲೆ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಡಾ.ರುದ್ರಮಣಿ ಮಠಪತಿ, ಪ್ರತಿಮಾ ಪಾಟೀಲ, ಅನಿಲ ಕಾಂಬಳೆ ಉಪಸ್ಥಿತರಿದ್ದರು.

ರಮೇಶ ಉಮಾಪುರೆ ಸ್ವಾಗತಿಸಿದರು. ನಾಗೇಂದ್ರ ಬಿರಾದಾರ ನಿರೂಪಿಸಿದರು. ವಿವಿಧ ಕ್ಷೇತ್ರದ 50 ಸಾಧಕರನ್ನು ಸನ್ಮಾನಿಸಲಾಯಿತು.

ಶುಕ್ರವಾರ • ಜನವರಿ 8, 2021 ಪ್ರಜಾವಾಣಿ

ವಚನ ಸಾಹಿತ್ಯದಲ್ಲಿ ಬದುಕಿನ ಆದರ್ಶ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

12ನೇ ಶತಮಾನದ ವಚನ ಸಾಹಿತ್ಯದಲ್ಲಿ ಆದರ್ಶ ಬದುಕಿನ ಮೌಲ್ಯಗಳು ಅಡಗಿವೆ. ಶರಣರ ವಚನಗಳನ್ನು ಓದುವ ಜತೆಗೆ ಜೀವನದಲ್ಲಿ ಅಳವಡಿ ಕೊಳ್ಳಲು ಪ್ರಯತ್ನಿಸಿದರೆ ಜೀವನದಲ್ಲಿ ಸಾರ್ಥಕತೆ ಕಾಣಲು ಸಾಧ್ಯವಾಗುತ್ತದೆ ಎಂದು ಹಾರಕೂಡ ಶ್ರೀ ಡಾ.ಚನ್ನವೀರ ಶಿವಾಚಾರ್ಯರು ಹೇಳಿದರು.

ಇಲ್ಲಿಯ ಯಾತ್ರಿ ನಿವಾಸದಲ್ಲಿ ಬಸಮ್ಮಾ ಮತ್ತು ಸಸಾನಂದ ಕಾಳಗೆ ಅವರ ಷಷ್ಯಬ್ದಿಪೂರ್ತಿ ಕಾರ್ಯಕ್ರಮ ಹಾಗೂ ಅವರ ಮೊಮ್ಮಕ್ಕಳ ಶಾಲು ಕಾರ್ಯಕ್ರಮ ನಿಮಿತ್ತ ಬಸವಾನಂದ ಗ್ರಂಥ ಲೋಕಾರ್ಪಣೆಗೊಳಿಸಿ ಮಾತನಾಡಿದ ಶ್ರೀಗಳು, ನಿಸ್ವಾರ್ಥ ಸೇವೆಯಿಂದ ಬದುಕಿನಲ್ಲಿಸಂತೃಪ್ತಿ ಕಾಣಲು ಸಾಧ್ಯವಿದೆ. ಕಾಳಗೆ ದಂಪತಿ 36 ವರ್ಷಗಳ ಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿ ಸಾರ್ಥಕ ಜೀವನ ನಡೆಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನೇತೃತ್ವ ವಹಿಸಿದ್ದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಜೀನವದಲ್ಲಿ ಹಣ, ಆಸ್ತಿ, ಐಶ್ವರ್ಯ ಯಾವವೂ ಶಾಶ್ವತವಲ್ಲ. ಜೀವನದಲ್ಲಿ ಮಾಡಿದ ಸತ್ಕಾರ್ಯಗಳೇ ಶಾಶ್ವತವಾಗಿ ಉಳಿಯುತ್ತವೆ. ಗುರು ಬಸವಣ್ಣನವರ ವಚನಗಳು ನಮಗೆ ಅಮೂಲ್ಯ ಸಂಪತ್ತು ಇದ್ದಂತೆ. ಶರಣರ ವಚನಗಳಂತೆ ನಡೆದರೆ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದರು.ಪೂಜ್ಯ ಡಾ.ಗಂಗಾಂಬಿಕಾ ಅಕ್ಕ ಸಮ್ಮುಖ ವಹಿಸಿದರು. ಕಲಬುರಗಿಯ ಶರಣಪ್ಪಗಾರಂಪಳ್ಳಿ ಅಧ್ಯಕ್ಷತೆ ವಹಿಸಿದರು.



ಬಸವಾನಂದ ಗ್ರಂಥ ಲೋಕರ್ಪಣೆಗೊಳಿಸಿದ ಹಾರಕೂಡ ಶ್ರೀ

ಬಸವಕಲ್ಯಾಣದ ಯಾತ್ರಿ ನಿವಾಸದಲ್ಲಿ ಕಾಳಗೆ ದಂಪತಿಯ ಷಷ್ಯಬ್ದಿಪೂರ್ತಿ ಕಾರ್ಯಕ್ರಮದಲ್ಲಿ ಬಸವಾನಂದ ಗ್ರಂಥವನ್ನು ಹಾರಕೂಡ ಶ್ರೀ ಡಾ.ಚನ್ನವೀರ ಶಿವಾಚಾರ್ಯರು ಲೋಕಾರ್ಪಣೆಗೊಳಿಸಿದರು.

ವರುಣ, ಕ್ರಿಶಿವ ಶಾಲು ಕಾರ್ಯಕ್ರಮ ಜರುಗಿತು.

ತಹಸೀಲ್ದಾರ ಸಾವಿತ್ರಿ ಶರಣು ಸಲಗರ್, ನಿವೃತ್ತ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸುಶೀಲಾಬಾಯಿ ಹೋಳಕುಂದೆ, ನಿವೃತ್ತ ಬಿಇಒ ಗುಂಡಪ್ಪ ಮಡಕೆ, ಕಲಬುರಗಿಯ ನಗರ ಯೋಜನಾ ಆಯುಕ್ತ ಸಂಗಮೇಶ ಗಾರಂಪಳ್ಳಿ, ಪರಮೇಶ್ವರ ಬಿರಾದಾರ, ಸಂಜಯ ಕಾಳಗೆ, ವಿನಯ ಕಾಳಗೆ, ಪ್ರಕಾಶ ಮೆಂಡೋಳೆ, ಅಶೋಕ ವಕಾರೆ, ಪ್ರದೀಪ ವಾತಡೆ, ದೀಪಕ ಗುಡ್ಡಾ ಸೂರ್ಯಕಾಂತ ಶೀಲವಂತ, ಚಂದ್ರಕಾಂತ ಸ್ವಾಮಿ, ಶಿವಿರೇಶ್ವರ ಕೊಟಗಿ, ಗದಿಗೇಶ ಗುದುಗೆ, ಸಿದ್ದು ರಾಯವಾಡೆ, ಲೇಖಕರಾದ ವಿದ್ಯಾರಾಣಿ ಪ್ರಕಾಶ ಬಿರಾದಾರ, ಸಂಗಮೇಶ ಕಾಳಗೆ, ರಮೇಶ ಧಬಾಲೆ, ಪ್ರದೀಪ ಗಡವಂತೆ ಇದ್ದರು.

ವೀಣಾ ಕಾಳಗೆ ಸ್ವಾಗತಿಸಿದರು. ಪ್ರಕಾಶ ಬಿರಾದಾರ ನಿರೂಪಿಸಿದರು. ಸ್ನೇಹಾ ಕಾಳಗೆ ವಂದಿಸಿದರು. ರಂಜನಾ ಭೂಶೆಟ್ಟಿ ಸಂಗೀತ ಪ್ರಸ್ತುತ ಪಡಿಸಿದರು.

ವಿಜಯ ಕರ್ನಾಟಕ VK ಮಂಗಳವಾರ,15 ಡಿಸೆಂಬರ್ 2020 ಕಲಬುರಗಿ

Scanned with OKEN Scanner

ಕೊರೊನಾದಲ್ಲೂ ಶ್ಲಾಘನೀಯ ಕಾರ್ಯ



ಬಸವಕಲ್ಯಾಣದ ಗವಿ ಮಠದಲ್ಲಿ ನಗರಸಭೆಯ ಬೀದಿದೀಪ ನಿರ್ವಹಣೆ ಮಾಡುವ ಆರು ಜನ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು.

■ ವಿಕ ಸುದ್ದಿಲೋಕ ಬಸವಕಲ್ಯಾಣ

ಗವಿಮಠದಲ್ಲಿ ನಗರಸಭೆಯ ಕಾರ್ಮಿಕರಿಗೆ ಸನ್ಮಾನ

ಶರಣರು ತೋರಿದ ಮಾರ್ಗದಲ್ಲಿ ಜೀವನ ಸಾಗಿಸಿ ಕಾಯಕಕ್ಕೆ ಮಹತ್ವ ನೀಡಿ, ಕಾಯಕ ಮಾಡುವ ವೃತ್ತಿ ಸಣ್ಣದಿದ್ದರೂ ಅವರನ್ನು ಗುರುತಿಸಿ ಸನ್ಮಾನಿಸುವುದೇ ಗವಿ ಮಠ ಎಂದು ಶ್ರೀಮರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿಯ ಗವಿ ಮಠದಲ್ಲಿ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ಹಾಗೂ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕಾ ಘಟಕದ ಸಂಯುಕ್ತ ಆಶ್ರಯದಲ್ಲಿ ನಡೆದ ನಗರಸಭೆಯ ಬೀದಿ ದೀಪ ನಿರ್ವಹಣೆ ಮಾಡುವ ಆರು ಜನ ಸಿಬ್ಬಂದಿಯನ್ನು ಸನ್ಮಾನಿಸಿ ಆಶೀರ್ವದಿಸಿದರು.

ಕೊರೊನಾ ಭಯದಲ್ಲೂ ಕರ್ತವ್ಯ ನಿರ್ವಹಿಸಿದ ಕಾರ್ಮಿಕರು ರಾತ್ರಿ ವೇಳೆ ಬೀದಿದೀಪ ಹಚ್ಚಿ ಜನತೆಗೆ ಬೆಳಕನ್ನು ಕೊಡುವ ಕಾರ್ಯ ಶ್ಲಾಘನೀಯವಾಗಿದ್ದು, ಸದ್ದಿಲ್ಲದೇ ನಿರಂತರ ನಡೆಯುವ ಮಹತ್ವದ ಕಾರ್ಯವಾಗಿದೆ. ಇವರೆಲ್ಲರೂ ಗವಿಮಠ ಹಾಗೂ ನಮ್ಮ ಮೇಲೆ ಅಪಾರ ಭಕ್ತಿ ಹೊಂದಿದ್ದು ಇವರಿಗೂ ಇವರ ಪರಿವಾರ ದವರಿಗೂ ಒಳ್ಳೆಯದಾಗಲಿ ಎಂದು ಹಾರೈಸಿದರು. ಸನ್ಮಾನ ಸ್ವೀಕರಿಸಿದ ನಗರಸಭೆಯ ಸಿಬ್ಬಂದಿ ನಾಗನಾಥ ಗಜರೆ ಮಾತನಾಡಿ, ನನ್ನ ವೃತ್ತಿ ಜೀವನದಲ್ಲಿ ಇಲ್ಲಿಯವರೆಗೂ ಯಾರೂ ನಮ್ಮನ್ನು ಗುರುತಿಸಿ ಸನ್ಮಾನಿಸಿಲ್ಲ ಮೊದಲಸಲ ಗವಿಮಠದ ಗುರುಗಳು ನಮ್ಮಸೇವೆಯನ್ನು ಗುರುತಿಸಿ ನಮಗೆ ಸನ್ಮಾನ ಮಾಡಿದ್ದು ನಮ್ಮ ಭಾಗ್ಯ. ನಾನು ವೃತ್ತಿಯಲ್ಲಿ ಇರುವವರೆಗೂ ಗುರುಗಳ ಸೇವೆ ಮಾಡುವೆ ಎಂದು ತಿಳಿಸಿದರು. ಗವಿಮಠ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ಅಲಶೆಟ್ಟಿ ರೇವಣಸಿದ್ದಯ್ಯ ಮಠಪತಿ, ಬಾಬುರಾವ ಉಳ್ಳೆ, ಮಲ್ಲಿಕಾರ್ಜುನ ನಂದಿ, ಬಾಬುರಾವ ಚಳಕಾಪುರೆ, ಶರಣು, ಶಾಂತವೀರ ಪೂಜಾರಿ, ಮಂಜು ಸೊನ್ನಗಿ ಇದ್ದರು. ಬಸವಂತಪ್ಪ ಲವಾರೆ ಪ್ರಾಸ್ತಾವಿಕ ಮಾತನಾಡಿದರು. ಪ್ರೊ. ರುದ್ರೇಶ್ವರ ಗೋರ್ಟಾ ನಿರೂಪಿಸಿದರು.

ವಿಜಯ ಕರ್ನಾಟಕ VK
ಮಂಗಳವಾರ, 15 ಡಿಸೆಂಬರ್ 2020, ಕಲಬುರಗಿ

'ಸತ್ಸಂಗದಿಂದ ಉತ್ತಮ ಜೀವನ'



ಬಸವಕಲ್ಯಾಣ: 'ಸತ್ಸಂಗ, ಧ್ಯಾನ, ಯೋಗದಿಂದ ಜೀವನವನ್ನು ಉತ್ತಮಪಡಿಸಿಕೊಳ್ಳಬಹುದು' ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದ್ದಾರೆ.

ಇಲ್ಲಿನ ತ್ರಿಪುರಾಂತ ಗವಿಮಠದಲ್ಲಿ ಈಚೆಗೆ ಆಯೋಜಿಸಿದ್ದ ಶಿವಾನುಭವ ಚಿಂತನಗೋಷ್ಠಿ ಹಾಗೂ ವಿವಿಧ ಕ್ಷೇತ್ರದ ಸಾಧಕರ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಚಂಚಲಚಿತ್ತ ಮನಸ್ಸು ಏಕಾಗ್ರವಾಗಲು ಕೂಡ ಧ್ಯಾನ ಬೇಕು. ಉತ್ತಮ ವಿಚಾರಗಳನ್ನು ಕೇಳಿದರೆ ವೈಚಾರಿಕ ಪ್ರಜ್ಞೆ ಬೆಳೆಯುತ್ತದೆ' ಎಂದರು.

ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಜಗನ್ನಾಥ ಪತಂಗೆ ಮಾತನಾಡಿ, 'ಜೀವನದಲ್ಲಿ ಗುರಿ ತಲುಪುವುದಕ್ಕೆ ಗುರುವಿನ ಮಾರ್ಗದರ್ಶನ ಬೇಕೆ ಬೇಕು' ಎಂದು ಹೇಳಿದರು.

ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, 'ಶಿವಾನುಭವ ಚಿಂತನದಿಂದ ಬದುಕು ಹಸನಾಗುತ್ತದೆ' ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷೆ ಅರುಣಾ ಚಂದ್ರಕಾಂತ ಸ್ವಾಮಿ, ಮಾಹಿತಿ ಹಕ್ಕು ಕಾರ್ಯಕರ್ತ ಧನರಾಜ ರಾಜೋಳೆ, ಜಗನ್ನಾಥ ಪತಂಗೆ ಅವರನ್ನು ಸನ್ಮಾನಿಸಲಾಯಿತು. ವೀರಣ್ಣ ಶೀಲವಂತ, ಎ.ಜಿ. ಪಾಟೀಲ, ರೇವಣಸಿದ್ದಯ್ಯ ಮಠಪತಿ, ಚಂದ್ರಕಾಂತ ಜೋಕಾರೆ, ವಿಜಯಕುಮಾರ ಚಿದ್ರಿ, ಬಾಬುರಾವ್ ಚಳಕಾಪುರೆ, ಚಂದ್ರಕಾಂತ ಸ್ವಾಮಿ ನಾರಾಯಣಪುರ, ಶಾಂತವೀರ ಸ್ವಾಮಿ ಉಪಸ್ಥಿತರಿದ್ದರು.

ಪ್ರಜಾವಾಣಿ ಭಾನುವಾರ • ಜನವರಿ 17, 2021

ರಸ್ತೆ ದೀಪ ನಿರ್ವಹಣೆ ಕಾರ್ಮಿಕರಿಗೆ ಸನ್ಮಾನ



ಬಸವಕಲ್ಯಾಣ: ಗವಿಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಸ್ತೆ ದೀಪ ನಿರ್ವಹಣೆ ಮಾಡುವ ನಗರಸಭೆ ಕಾರ್ಮಿಕರನ್ನು ಸನ್ಮಾನಿಸಿದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಬಸವಕಲ್ಯಾಣ: ಶ್ರೀಮಂತರಿಗೆ ಗೌರವಿಸಿ, ಸನ್ಮಾನಿಸುವುದು ಮುಖ್ಯವಲ್ಲ ಸಮಾಜದ ಏಳ್ಗೆಗಾಗಿ ಮತ್ತು ಸಾರ್ವಜನಿಕರಿಗಾಗಿ ದುಡಿಯುವ ಶ್ರಮ ಜೀವಿಗಳಿಗೆ ಸನ್ಮಾನಿಸುವುದು ಮುಖ್ಯವಾಗಿದೆ ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಗವಿಮಠದಲ್ಲಿ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರು ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ಆಶ್ರಯದಲ್ಲಿ ನಗರಸಭೆ ರಸ್ತೆ ದೀಪ ನಿರ್ವಹಣೆ ಮಾಡುವ ಕಾರ್ಮಿಕರಿಗೆ ಹಮ್ಮಿಕೊಂಡ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಕೊರೊನಾ ಮಹಾಮಾರಿ ಭಯದಲ್ಲೂ ಸದಾ ಕರ್ತವ್ಯದಲ್ಲಿ ಇರುವ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ನಾಗನಾಥ ಗಜರೆ ಮಾತನಾಡಿ, ನಮ್ಮ ವೃತ್ತಿ ಜೀವನದಲ್ಲಿ ಈವರೆಗೂ ನಮ್ಮನ್ನು ಗುರುತಿಸಿ ಸನ್ಮಾನಿಸಿಲ್ಲ ಮೊದಲ ಬಾರಿಗೆ ಗವಿಮಠದ ಶ್ರೀಗಳು ನಮ್ಮಸೇವೆಯನ್ನು ಗುರುತಿಸಿ ನಮಗೆ ಸನ್ಮಾನ ಮಾಡಿದ್ದು ನಮ್ಮ ಪುಣ್ಯವಾಗಿದ್ದು ಇದು ಎಂದಿಗೂ ಮರೆಯುವಂತಿಲ್ಲ ಎಂದರು. ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿದರು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ಅಲಶೆಟ್ಟಿ, ರೇವಣಸಿದ್ದಯ್ಯ ಮಠಪತಿ, ಬಾಬುರಾವ ಉಳ್ಳೆ, ಮಲ್ಲಿಕಾರ್ಜುನ ನಂದಿ, ಬಾಬುರಾವ ಚಳಕಾಪುರೆ, ಶರಣು, ಶಾಂತವೀರ ಪೂಜಾರಿ, ಮಂಜು ಸೊನ್ನಗಿ ಇದ್ದರು. ಪ್ರೊ. ರುದ್ರೇಶ್ವರಸ್ವಾಮಿ ಗೋರ್ಟಾ ನಿರೂಪಿಸಿದರು.

ಕಲಬುರಗಿ ಉದಯವಾಣಿ
ಬುಧವಾರ, ಡಿಸೆಂಬರ್ 16, 2020

Scanned with OKEN Scanner

ಜನಕ್ಕೆ ಸಾಹಿತ್ಯ ತಲುಪಿಸಲು ಗಾಯನ ಸಹಕಾರಿ

» ಗವಿಮಠ ಶ್ರೀ ಅಭಿಮತ

» ಶ್ರೀ ಮಡಿವಾಳ ಮಾಚಿದೇವರ ಧ್ವನಿ ಸುರುಳಿ ಬಿಡುಗಡೆ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ ಸಾಹಿತ್ಯ ಜನಮನಕ್ಕೆ ತಲುಪಿಸಲು ಸಹಕಾರಿಯಾಗಿದೆ ಎಂದು ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಗವಿಮಠದಲ್ಲಿ ಶ್ರೀ ಮಡಿವಾಳ ಮಾಚಿದೇವರ ಕುರಿತ ಧ್ವನಿ ಸುರುಳಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಕವನ, ಭಕ್ತಿ ಗೀತೆಗಳಿಗೆ ಜೀವ ತುಂಬಬೇಕಾದರೆ ಗಾಯಕರು ಸಹ ಅವಶ್ಯಕ. ಕನ್ನಡ, ಗಜಲ್, ಭಕ್ತಿಗೀತೆಗಳು ಹಾಡುವ ಗಾಯಕರ ಕೊರತೆ ಕಾಣುತ್ತಿದ್ದು, ಗಾಯಕರು ಆಸಕ್ತಿ ವಹಿಸಿ ಮುಂದೆ ಬರಬೇಕು ಎಂದರು.

ಸನ್ಮಾನ ಸ್ವೀಕರಿಸಿದ ಜಿಪಂ ನೂತನ ಅಧ್ಯಕ್ಷೆ ಗಾಯನ ನಿರ್ಮಲಾ ಮಾನೆಗೋಪಾಳೆ ಮಾತನಾಡಿದರು. ಶ್ರೀಮದ್ವೀರಶೈವ ಸದ್ಭೋದನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂದಿ, ರೇವಣಸಿದ್ದಯ್ಯ ಸ್ವಾಮಿ, ಬಸವಂತಪ್ಪ ಮಾಲಿಪಾಟೀಲ್, ಬಲವಂತ ಚಾಕೂರೆ, ವಿಜಯಕುಮಾರ್ ತಿಂದ್ರೆ, ಭೋಜಪ್ಪ ಜ್ಯಾಂತೆ, ಮುತ್ತುರಾಜ್, ಚಂದ್ರಶೇಖರ ಸ್ವಾಮಿ ಉಪಸ್ಥಿತರಿದ್ದರು. ಮಲ್ಲಿಕಾರ್ಜುನ ಅಲಗೂಡೆ ಪ್ರಾಸ್ತಾವಿಕ ಮಾತನಾಡಿದರು. ಶಿವಕುಮಾರ್ ಮಠಪತಿ ನಿರೂಪಣೆ ಮಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ಗವಿಮಠದಲ್ಲಿ ಶ್ರೀ ಮಡಿವಾಳ ಮಾಚಿದೇವರ ಕುರಿತ ಧ್ವನಿ ಸುರುಳಿ ಬಿಡುಗಡೆ ಕಾರ್ಯಕ್ರಮದಲ್ಲಿ ಜಿಪಂ ನೂತನ ಅಧ್ಯಕ್ಷೆ ನಿರ್ಮಲಾ ಮಾನೆಗೋಪಾಳೆ ಅವರನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವದಿಸಿದರು. ವೈಜಿನಾಥ ಮಾನೆಗೋಪಾಳೆ, ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂದಿ, ರೇವಣಸಿದ್ದಯ್ಯ ಸ್ವಾಮಿ, ಬಲವಂತ ಚಾಕೂರೆ ಇತರರಿದ್ದರು.

ಶುಕ್ರವಾರ 1 ಜನವರಿ 2021 • 1 JANUARY 2021
• VIJAYAVANI » KALABURAGI

ಸಾಮಾಜಿಕ ಸಾಮರಸ್ಯ ಅವಶ್ಯ

ಬಸವಕಲ್ಯಾಣ: ಸಾಮರಸ್ಯಕ್ಕೆ ಮೌಲ್ಯ ಅಳವಡಿಕೊಳ್ಳ ಬೇಕು ಎಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು. ಗವಿಮಠದಲ್ಲಿ ಏರ್ಪಡಿಸಿದ್ದ ಹುಣ್ಣಿಮೆ ನಿಮಿತ್ತ ಮನೆ ಮನೆಗಳಲ್ಲಿ ಸದ್ಭಾವ ಚಿಂತನ ಚಾಲನೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು. ನಗರ ಸಭೆ ಪೌರಾಯುಕ್ತ ಗೌತಮ್ ಕಾಂಬಳೆ ಮಾತನಾಡಿದರು. ಅಪರ ಸರ್ಕಾರಿ ವಕೀಲ ಪ್ರಕಾಶ ಮಹಾಲಿಂಗ, ವೈದ್ಯಕೀಯ ಸೀಟು ಪಡೆದು ಪ್ರತಿಭಾನ್ವಿತ ವಿದ್ಯಾರ್ಥಿ ಸೋಮೇಶ್ವರ ಶೀಲವಂತ ಅವರನ್ನು ಸನ್ಮಾನಿಸಲಾಯಿತು. ಶ್ರೀಮದ್ವೀರಶೈವ ಸದ್ಭೋದನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿದರು. ವೀರಶೆಟ್ಟಿ ಪಾಟೀಲ್ ವಂದಿಸಿದರು. ಶ್ರೀ ಗಣೇಶ ನಿರೂಪಣೆ ಮಾಡಿದರು. ವಿಜಯಕುಮಾರ ಚಿದ್ರಿ, ವಿಜಯಕುಮಾರ್ ಪಾಟೀಲ್, ಪ್ರದೀಪ ಕುಂಬಾರ, ಸೂರ್ಯಕಾಂತ ಶೀಲವಂತ, ನಾಗಪ್ಪ ಅಂತರೆಡ್ಡಿ, ಸುರೇಖಾ ಶೀಲವಂತ, ರೇಣುಕಾ ಶೀಲವಂತ, ವೈಷ್ಣವಿ, ಸುನಿತಾ ಮಹಾಲಿಂಗ, ಪಪ್ಪು ಜಮಾದಾರ, ಅಮನ ಸಕ್ಕರ್ಗೆ, ಶುಭಂ, ಅಭಿಷೇಕ ಉಪಸ್ಥಿತರಿದ್ದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪೌರಾಯುಕ್ತ ಗೌತಮ್ ಕಾಂಬಳೆ, ಅಪರ ಸರ್ಕಾರಿ ವಕೀಲ ಪ್ರಕಾಶ ಮಹಾಲಿಂಗ ಅವರನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು.

ಸೋಮವಾರ 4 ಜನವರಿ 2021 • 4 JANUARY 2021
• VIJAYAVANI » KALABURAGI

ರಾಷ್ಟ್ರ ಪುನರ್ ನಿರ್ಮಾಣದ ಹೊಣೆ ವಿದ್ಯಾರ್ಥಿಗಳ ಮೇಲಿದೆ: ರುದ್ರಮುನಿ ಶ್ರೀ



ಬಸವಕಲ್ಯಾಣ: ರಾಷ್ಟ್ರದ ಗೌರವ ದೇಶದ ಯುವಕರ ಮೇಲೆ ನಿಂತಿದ್ದು, ಅಂತಹ ಆದರ್ಶ ಯುವಕರನ್ನು ಇವತ್ತು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ತಯಾರು ಮಾಡುತ್ತಿದೆ ಎಂದು ತ್ರಿಪುರಾಂತ ಗವಿಮಠದ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಸದಾನಂದ ಸ್ವಾಮಿ ಮಠದಲ್ಲಿ ಭಾನುವಾರ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನಗರ ಅಭ್ಯಾಸ ವರ್ಗ ಉದ್ಘಾಟಿಸಿ ಮಾತನಾಡಿ, ಪರಿಷತ್ ಸದಾ ವಿದ್ಯಾರ್ಥಿಗಳಿಗೆ ಬೆಂಬಲವಾಗಿ ನಿಲ್ಲುವಂತಹ ದೇಶಭಕ್ತ ಸಂಘಟನೆ, ನಾನೂ ಕೂಡ ವಿದ್ಯಾರ್ಥಿಯಾಗಿದ್ದಾಗ ಎಬಿವಿಪಿ ಕಾರ್ಯಕರ್ತನಾಗಿದ್ದೆ ಎಂದು ತಿಳಿಸಿದರು. ಜಿಲ್ಲಾ ಕಾರ್ಯವಾಹರಾದ ಭಾರ್ಗವಾಚಾರಿ ಮಾತನಾಡಿದರು. ಎಬಿವಿಪಿ ಜಿಲ್ಲಾ ಪ್ರಮು ಖ ಯೋಗೇಶ್ ಎಂಬಿ, ಕರ್ನಾಟಕ ರಾಜ್ಯ ಸಹಕಾರ್ಯದರ್ಶಿ ನಾಗರಾಜ ಬಟಗೇರಾ, ಕಲಬುರಗಿ ವಿಭಾಗ ಸಂಘಟನಾ ಕಾರ್ಯದರ್ಶಿ ಧನಂಜಯ, ಜಿಲ್ಲಾ ಸಂಚಾಲಕಿ ಭಾಗ್ಯಶ್ರೀ ಇದ್ದರು.

ಸಂಘಟನಾ ಜವಾಬ್ದಾರಿ: ತಾಲೂಕು ಪ್ರಮುಖರಾಗಿ ಡಾ. ಬಸವರಾಜ ಖಂಡಾಳೆ, ತಾಲೂಕು ಸಂಚಾಲಕರಾಗಿ ಸುನೀಲ್, ನಗರ ಅಧ್ಯಕ್ಷರಾಗಿ ದತ್ತಾತ್ರೇಯ ಪಾಟೀಲ್, ನಗರ ಕಾರ್ಯದರ್ಶಿಯಾಗಿ ವೈಷ್ಣವಿ ಅವರನ್ನು ಆಯ್ಕೆ ಮಾಡಲಾಯಿತು.

ಕನ್ನಡಪ್ರಭ
ಸೋಮವಾರ 11.1.2021

Scanned with OKEN Scanner

ಸಾಮರಸ್ಯ ಸಾರುವ ಗವಿಮಠ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಇಂದಿನ ದಿನಗಳಲ್ಲಿ ಸಾಮಾಜಿಕ ಸಾಮರಸ್ಯ ಅಗತ್ಯವಿದೆ. ಪರಸ್ಪರ ತಿಳುವಳಿಕೆ, ಸಮಯ ಪ್ರಜ್ಞೆ, ಪರಸ್ಪರ ಗೌರವದಂತಹ ಸಾಮಾಜಿಕ ಮೌಲ್ಯಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಂಡು ಆಚರಣೆಗೆ ತರಬೇಕು ಎಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಸದ್ಭಾವ ಚಿಂತನ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಆಶೀರ್ವಚನ



ಬಸವಕಲ್ಯಾಣ ನಗರದ ಹೊರವಲಯದಲ್ಲಿರುವ ಗವಿ ಮಠದಲ್ಲಿ ಹಮ್ಮಿಕೊಂಡ ಸದ್ಭಾವ ಚಿಂತನ ಕಾರ್ಯಕ್ರಮದಲ್ಲಿ ಪೌರಾಯುಕ್ತ ಗೌತಮ್ ಕಾಂಬಳೆ, ಸರಕಾರಿ ವಕೀಲ ಪ್ರಕಾಶ ಮಹಾಲಿಂಗ, ಸೋಮೇಶ್ವರ ಪ್ರಸಾದ್ ಶೀಲವಂತ ಅವರನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸತ್ಕರಿಸಿದರು.

ನಗರದ ಹೊರವಲಯದಲ್ಲಿರುವ ಗವಿ ಮಠದಲ್ಲಿ ಹಮ್ಮಿಕೊಂಡ ಸದ್ಭಾವ ಚಿಂತನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.

ಸಾಮಾಜಿಕ, ಶೈಕ್ಷಣಿಕ, ವ್ಯವಸಾಯ, ಸಾಹಿತ್ಯ ಮುಂತಾದ ರಂಗಗಳಲ್ಲಿ ವಿಶೇಷ ಸಾಧನೆ ಮಾಡಿರುವ ಸಾಧಕರಿಗೆ ಸದ್ಭೋಧನಾ ಸಂಸ್ಥೆ ಪರವಾಗಿ ಗೌರವಿಸುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಇದರಿಂದ ಸೇವೆ ಸಲ್ಲಿಸಿದವರಿಗೆ ಸಾರ್ಥಕ ಭಾವ ಬರುತ್ತದೆ. ಇತರರಿಗೆ ಮಾದರಿ ಆಗುತ್ತದೆ ಎಂದು ಆಶೀರ್ವಚನ ನೀಡಿದರು.

ಸನ್ಮಾನ ಸ್ವೀಕರಿಸಿದ ಪೌರಾಯುಕ್ತ ಗೌತಮ್ ಕಾಂಬಳೆ ಮಾತನಾಡಿ, ಪೂಜ್ಯರ ಬಯಕೆಯಂತೆ ಶ್ರೀಮಠಕ್ಕೆ ಅಗತ್ಯವಿರುವ ಮೂಲ ಸೌಲಭ್ಯಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿದರು.

ಸರಕಾರಿ ವಕೀಲ ಪ್ರಕಾಶ ಮಹಾಲಿಂಗ, ಸರಕಾರಿ ವೈದ್ಯ ಸೀಟು ಪಡೆದುಕೊಂಡ ಸೋಮೇಶ್ವರ ಪ್ರಸಾದ್ ಶೀಲವಂತ ಮಾತನಾಡಿದರು. ಶ್ರೀ ಮದ್ವೀರಶೈವ ಸದ್ಭೋದನಾ ಸಂಸ್ಥೆಯ ಅಧ್ಯಕ್ಷ ಬಸವಂತಪ್ಪಾ ಲವಾರೆ ಪ್ರಾಸ್ತಾವಿಕ ಮಾತನಾಡಿದರು.

ವಿಜಯಕುಮಾರ್ ಚಿದ್ರಿ, ವಿಜಯ್ ಕುಮಾರ್ ಪಾಟೀಲ್, ಪ್ರದೀಪ್ ಕುಂಬಾರ, ಪ್ರೊ.ಸೂರ್ಯಕಾಂತ ಶೀಲವಂತ, ನಾಗಪ್ಪಾ ಅಂತರೆಡ್ಡಿ, ಪ್ರೊ. ಸುರೇಖಾ ಶೀಲವಂತ, ರೇಣುಕಾ ಶೀಲವಂತ, ಸುನಿತಾ ಮಹಾಲಿಂಗ, ಪಪ್ಪು ಜಮಾದಾರ, ಅಮನ ಸಕ್ಕರ್ಗೆ, ಶುಭಂ ಇದ್ದರು. ವೀರಶೆಟ್ಟಿ ಪಾಟೀಲ್ ವಂದಿಸಿದರು. ಗಣೇಶ ನಿರೂಪಿಸಿದರು.

ವಿಜಯ ಕರ್ನಾಟಕ VK ಭಾನುವಾರ,3 ಜನವರಿ 2021, ಕಲಬುರಗಿ

ಬಾಬು ಪತ್ತಾರ ಭರವಸೆ | ಬಸವಕಲ್ಯಾಣದಲ್ಲಿ ಜಗದ್ಗುರು ಶ್ರೀ ಮೌನೇಶ್ವರ ಜಾತ್ರೋತ್ಸವ

ವಿಶ್ವಕರ್ಮ ಸಮಾಜದ ಪ್ರಗತಿಗೆ ಪ್ರಯತ್ನ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ವಿಶ್ವಕರ್ಮ ಸಮಾಜದವರು ಕಾಯಕಕ್ಕೆ ಮಹತ್ವ ನೀಡಿದ ಶ್ರಮಜೀವಿಗಳು. ಆಗತ್ಯ ಸೌಲಭ್ಯ ಕಲ್ಪಿಸುವುದರ ಜತೆಗೆ ಸಮಾಜ ಪ್ರಗತಿಗೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ಅಧ್ಯಕ್ಷ ಬಾಬು ಪತ್ತಾರ ಭರವಸೆ ನೀಡಿದರು.

» ಸಮುದಾಯ ಭವನ ನಿರ್ಮಿಸಲು ಅನುದಾನ

ಶ್ರೀ ಮೌನೇಶ್ವರ ದೇವಸ್ಥಾನದಲ್ಲಿ ಜಗದ್ಗುರು ಶ್ರೀ ಮೌನೇಶ್ವರರ 11ನೇ ವರ್ಷದ ಜಾತ್ರೋತ್ಸವ ನಿಮಿತ್ತ ಏರ್ಪಡಿಸಿದ್ದ ಧರ್ಮ ಸಭೆಯಲ್ಲಿ ಮಾತನಾಡಿದ ಅವರು, ನಿಗಮದಿಂದ ಸಮಾಜದ ಜನರಿಗೆ ಅಗತ್ಯ ಸೌಲಭ್ಯ ಕಲ್ಪಿಸುವುದಾಗಿ ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ವಿಜಯಸಿಂಗ್ ಮಾತನಾಡಿ, ದೇಶದ ಕಲೆ ಮತ್ತು ಸಂಸ್ಕೃತಿ ಉಳಿಸುವಲ್ಲಿ ವಿಶ್ವಕರ್ಮ ಸಮಾಜದ ಕೊಡುಗೆ ದೊಡ್ಡದು. ಸಮಾಜದಿಂದ ಸಲ್ಲಿಸಿರುವ ಬೇಡಿಕೆಗಳಿಗೆ ಸ್ಪಂದಿಸಲು ಪ್ರಯತ್ನಿಸಲಾಗುವುದು. ಸ್ಥಳ ಗುರುತಿಸಿದರೆ ಸಮುದಾಯ ಭವನ ನಿರ್ಮಿಸಲು ಅನುದಾನ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಮಾತನಾಡಿ, ಸಮಾಜದ ಯುವಕರಿಗೆ ಕೌಶಲ ಅಭಿವೃದ್ಧಿಗಾಗಿ ವೃತ್ತಿ ತರಬೇತಿ ಅಗತ್ಯವಿದೆ. ಈ ನಿಟ್ಟಿನಲ್ಲಿ ನಗರದಲ್ಲಿ ಪಂಚ ಕಸುಬುಗಳ ತರಬೇತಿ ಕೇಂದ್ರ ಸ್ಥಾಪನೆ ಸಂಬಂಧ ಮುಖ್ಯಮಂತ್ರಿ ಗಮನಕ್ಕೆ ತರುವುದಾಗಿ ಹೇಳಿದರು.



ಜಗದ್ಗುರು ಶ್ರೀ ಮೌನೇಶ್ವರ ಜಾತ್ರೆ ನಿಮಿತ್ತ ಬಸವಕಲ್ಯಾಣದಲ್ಲಿ ಏರ್ಪಡಿಸಿದ್ದ ಧರ್ಮ ಸಭೆಯಲ್ಲಿ ಎಂಎಲ್ಸಿ ವಿಜಯಸಿಂಗ್ ಮಾತನಾಡಿದರು. ಶ್ರೀ ಕುಮಾರ ಸ್ವಾಮೀಜಿ, ಶ್ರೀ ಸದಾನಂದ ಅಪ್ಪಗಳು, ಶ್ರೀ ಜಯಶಾಂತಲಿಂಗೇಶ್ವರ ಸ್ವಾಮೀಜಿ, ಶ್ರೀ ಶಿವಲಿಂಗೇಶ್ವರ ಸ್ವಾಮೀಜಿ, ಗವಿಮಠದ ಶ್ರೀ ಅಭಿನವ ಸ್ವಾಮೀಜಿ, ವಿಶ್ವಕರ್ಮ ಅಭಿವೃದ್ಧಿ ನಿಗಮ ಅಧ್ಯಕ್ಷ ಬಾಬು ಪತ್ತಾರ, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಇದ್ದರು.

ಯಾದಗಿರಿ- ಕಲಬುರಗಿ ವಿಶ್ವಕರ್ಮ ಏಕದಂಡಗಿ ಮಠದ ಶ್ರೀ ಕುಮಾರ ಸ್ವಾಮೀಜಿ, ಸಸ್ತಾಪುರದ ಶ್ರೀ ಸದಾನಂದ ಅಪ್ಪಗಳು, ಹಿರನಾಗಾಂವದ ಶ್ರೀ ಜಯಶಾಂತ ಲಿಂಗೇಶ್ವರ ಸ್ವಾಮೀಜಿ, ಖೇಳಗಿಯ ಶ್ರೀ ಶಿವಲಿಂಗೇಶ್ವರ ಸ್ವಾಮೀಜಿ, ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಆಶೀರ್ವಚನ ನೀಡಿದರು.

ಜಿಪಂ ಅಧ್ಯಕ್ಷೆ ನಿರ್ಮಲಾ ಮಾನೆಗೋಪಾಳೆ, ಬಿಜೆಪಿ ಮುಖಂಡ ಪ್ರದೀಪ ವಾತಡೆ, ಕಾಂಗ್ರೆಸ್ ಮುಖಂಡ ಗೌತಮ ಬಿ.ನಾರಾಯಣರಾವ ಮಾತನಾಡಿದರು.

ತಾಪಂ ಉಪಾಧ್ಯಕ್ಷ ಶಾಂತಮ್ಮ ಪಂಚಾಳ, ಪ್ರಮುಖರಾದ ಬಸವರಾಜ ಪಂಚಾಳ, ನೀಲಕಂಠ ರಾಠೋಡ್, ಮಲ್ಲಮ್ಮ ನಾರಾಯಣರಾವ, ವಿಜೇಂದ್ರ ಇನಾಮದಾರ, ತಿಪ್ಪಣ್ಣ ಪಂಚಾಳ, ಹರಿಶ್ಚಂದ್ರ ಪಂಚಾಳ, ಕಾಶೀನಾಥ ಪಂಚಾಳ, ಜಗನ್ನಾಥ ಪಂಚಾಳ, ವೀರೇಶ ಪಂಚಾಳ, ಮಹಾದೇವ ಪೋದ್ದಾರ, ವಿದ್ಯಾಧರ ಪಂಚಾಳ, ನಾಗೇಶ ಪಂಚಾಳ, ಕ್ರಾಂತಿಕುಮಾರ ಪಂಚಾಳ ಇತರರಿದ್ದರು.

ಈರಣ್ಣ ಪಂಚಾಳ ಪ್ರಾಸ್ತಾವಿಕ ಮಾತನಾಡಿದರು. ವೈಜಿನಾಥ ಪಂಚಾಳ ಸ್ವಾಗತಿಸಿದರು. ಸಮಾಜದ ಕಾರ್ಯದರ್ಶಿ ವಿಜಯಕುಮಾರ ಪಂಚಾಳ ನಿರೂಪಣೆ ಮಾಡಿದರು.

Scanned with OKEN Scanner

ವಿಜಯವಾಣಿ ಚಿತ್ರ



ಕಲಬುರಗಿಯಲ್ಲಿ ಕುಂಬಾರರ ಯುವ ಸೈನ್ಯ, ಕುಂಬಾರ ಸಮಾಜ ಸಹಯೋಗದೊಂದಿಗೆ ಜಿಲ್ಲಾ ಕುಂಬಾರ ಸಮಾಜದ ಅಧ್ಯಕ್ಷ ಶಿವಶರಣಪ್ಪ ಕುಂಬಾರ ಸುಲೇಪೇಟರ ಜನ್ಮದಿನದ ನಿಮಿತ್ತ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಸರಡಗಿ ಮಹಾಲಕ್ಷ್ಮಿ ಶಕ್ತಿ ಪೀಠದ ಡಾ.ಅಪ್ಪಾರಾವ್‌ದೇವಿ ಮುತ್ಯಾ, ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಶರಣಪ್ಪ ತಳವಾರ, ಡಾ. ಕೃಷ್ಣಾಜಿ ಕುಲಕರ್ಣಿ, ಅರುಣಕುಮಾರ ಎಂ.ವೈ.ಪಾಟೀಲ್, ಯುವ ಸೈನ್ಯ ಅಧ್ಯಕ್ಷ ಶಂಕರ ಶೆಟ್ಟಿ ಕುಂಬಾರ, ಶರಣು ಶಂಕಾ, ವಿಜಯಕುಮಾರ ತೇಗಲತಿಪ್ಪಿ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಗುರುವಾರ 18 ಮಾರ್ಚ್ 2021
18 MARCH 2021

ಅಭಿನವ ಶ್ರೀಗಳ ಬಣ್ಣನೆ | ಬಸವಕಲ್ಯಾಣದಲ್ಲಿ ನಗರ ಅಭ್ಯಾಸ ವರ್ಗ

ಆದರ್ಶ ವಿದ್ಯಾರ್ಥಿಗಳ ಸಂಘಟನೆ ಎಬಿವಿಪಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಎಬಿವಿಪಿ ವಿದ್ಯಾರ್ಥಿಗಳಿಗೆ ಬೆಂಬಲ ನೀಡುವ ಜತೆಗೆ ಮೌಲ್ಯ ಬೆಳೆಸುವ ಕಾರ್ಯ ಮಾಡುತ್ತಿದೆ ಎಂದು ಗವಿಮಠದ ಶ್ರೀಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯರು ಹೇಳಿದರು.

ಪಟ್ಟಣದ ಶ್ರೀ ಸದ್ಗುರು ಸದಾನಂದ ಸ್ವಾಮಿ ಮಠದ ಪರಿಸರದಲ್ಲಿ ಶನಿವಾರ ಏರ್ಪಡಿಸಿದ್ದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ನಗರ ಅಭ್ಯಾಸ ವರ್ಗವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಬಿವಿಪಿ ದೇಶಭಕ್ತ ಸಂಘಟನೆ. ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದ ಜತೆಗೆ ಆದರ್ಶ ಯುವಕರನ್ನು ತಯಾರು ಮಾಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆರ್‌ಎಸ್‌ಎಸ್ ಜಿಲ್ಲಾ ಕಾರ್ಯವಾಹ ಭಾರ್ಗವಾಚಾರಿ ಮಾತನಾಡಿ, ರಾಷ್ಟ್ರವನ್ನು ಪರಮವೈಭವ ಸ್ಥಿತಿಗೆ ತರಲು ವಿದ್ಯಾರ್ಥಿ ಪರಿಷತ್ ಮಾಡುತ್ತಿದೆ. ಶ್ರೀರಾಮಚಂದ್ರನನ್ನು ಆದರ್ಶವಾಗಿಟ್ಟುಕೊಂಡು ನಾವೆಲ್ಲ ಮುಂದುವರಿಯಬೇಕು. ರಾಷ್ಟ್ರದ ಪುನರ್ ನಿರ್ಮಾಣದ ಹೊಣೆ ತಮ್ಮೇಲ್ಲರ ಮೇಲಿದೆ ಎಂದು ಹೇಳಿದರು.

ಎಬಿವಿಪಿ ಜಿಲ್ಲಾ ಪ್ರಮುಖ ಯೋಗೇಶ್ ಎಂ.ಬಿ ಮಾತನಾಡಿ, ಎಬಿವಿಪಿ ರಾಷ್ಟ್ರ ಪುನರ್ ನಿರ್ಮಾಣದ ಸಂಕಲ್ಪ ಹೊತ್ತು ವಿದ್ಯಾರ್ಥಿಗಳ ಮಧ್ಯೆ ಕೆಲಸ ಮಾಡುವ ಸಂಘಟನೆಯಾಗಿದೆ. ವಿದ್ಯಾರ್ಥಿಗಳಿಗಾಗಿ ಅನೇಕ ಶಿಬಿರ ಮಾಡಿ ಅವರ ವ್ಯಕ್ತಿತ್ವ ವಿಕಸನಕ್ಕೆ ಶ್ರಮಿಸುತ್ತಿದೆ. ವಿದ್ಯಾರ್ಥಿಗಳಿಗೆ ಸಮಸ್ಯೆ ಎದುರಾದಾಗ ತಕ್ಷಣ ಸ್ಪಂದಿಸಲು ಬರುವ ಏಕೈಕ ಸಂಘಟನೆ ಎಂದರು.

ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಭೂಮಿಕೆ, ಶಾಖೆ ಮತ್ತು ಸಂಚಾಲನೆ ಕುರಿತು ಯೋಗೇಶ್ ಎಂ.ಬಿ. ಹಾಗೂ ರೇವಣಸಿದ್ದ ಜಾಡರ್ ಮಾತನಾಡಿದರು. ರಾಜ್ಯ ಸಹ ಕಾರ್ಯದರ್ಶಿ ನಾಗರಾಜ ಬಟಗೇರಾ ಉಪಸ್ಥಿತರಿದ್ದರು.

ಸಮಾರೋಪ: ಸಂಜೆ ಕಲಬುರಗಿ ವಿಭಾಗ ಸಂಘಟನಾ ಕಾರ್ಯದರ್ಶಿ ಧನಂಜಯ ಸಮಾರೋಪ ಭಾಷಣ ಮಾಡಿದರು. ಸಂಘಟನೆ ಪ್ರಮುಖ ಜವಾಬ್ದಾರಿಗಳನ್ನು ರಾಜ್ಯ ಸಹ ಕಾರ್ಯದರ್ಶಿ ನಾಗರಾಜ ಬಟಗೇರಾ ಪ್ರಕಟಿಸಿದರು. ಜಿಲ್ಲಾ ಸಂಚಾಲಕಿ ಭಾಗ್ಯಶ್ರೀ ಬೆಳ್ಳಿ ಉಪಸ್ಥಿತರಿದ್ದರು.

ಪದಾಧಿಕಾರಿಗಳು: ಡಾ.ಬಸವರಾಜ ಖಂಡಾಳೆ (ತಾಲೂಕು ಪ್ರಮುಖ), ಸುನೀಲ (ತಾಲೂಕು ಸಂಚಾಲಕ), ದತ್ತಾತ್ರೇಯ ಪಾಟೀಲ್ (ನಗರ ಅಧ್ಯಕ್ಷ), ಕುಮಾರಿ ವೈಷ್ಣವಿ (ನಗರ ಕಾರ್ಯದರ್ಶಿ), ಸಹ ಕಾರ್ಯದರ್ಶಿಯಾಗಿ ಅರುಣಕುಮಾರ ಹಾಗೂ ಗೌರಿ ಶಂಕರ ಆಯ್ಕೆ ಮಾಡಲಾಗಿದೆ.

ವಿಜಯವಾಣಿ ಚಿತ್ರ



ಬಸವಕಲ್ಯಾಣದಲ್ಲಿ ಏರ್ಪಡಿಸಿದ್ದ ಎಬಿವಿಪಿ ನಗರ ಅಭ್ಯಾಸ ವರ್ಗದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯ ಮಾತನಾಡಿದರು. ಭಾರ್ಗವಾಚಾರಿ, ಯೋಗೇಶ್ ಎಂ.ಬಿ, ರೇವಣಸಿದ್ದ ಜಾಡರ್ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 11 ಜನವರಿ 2021
11 JANUARY 2021

ವಿಜಯವಾಣಿ ಚಿತ್ರ



ಬಸವಕಲ್ಯಾಣದಲ್ಲಿ ಆಯೋಧ್ಯೆ ಶ್ರೀರಾಮ ಮಂದಿರ ನಿರ್ಮಾಣಕ್ಕೆ ನಿಧಿ ಸಮರ್ಪಣಾ ಅಭಿಯಾನಕ್ಕೆ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು. ಆರ್‌ಎಸ್‌ಎಸ್ ತಾಲೂಕು ಸಂಘಚಾಲಕ ಎಂ.ಜಿ.ಮಹಾಜನ್, ಜಿಲ್ಲಾ ಕಾರ್ಯವಾಹ ಭಾರ್ಗವಚಾರಿ, ಡಾ.ಮಹೇಶ ಪಾಟೀಲ್ ಉಪಸ್ಥಿತರಿದ್ದರು.

ನಿಧಿ ಸಮರ್ಪಣ ಅಭಿಯಾನಕ್ಕೆ ಚಾಲನೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಆಯೋಧ್ಯೆಯಲ್ಲಿ ಭವ್ಯ ಶ್ರೀರಾಮ ಮಂದಿರ ನಿರ್ಮಾಣಕ್ಕೆ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಹಾಗೂ ವಿಶ್ವ ಹಿಂದು ಪರಿಷತ್‌ನಿಂದ ಹಮ್ಮಿಕೊಂಡಿರುವ ನಿಧಿ ಸಮರ್ಪಣಾ ಮಹಾ ಅಭಿಯಾನಕ್ಕೆ ನಗರದಲ್ಲಿ ಚಾಲನೆ ನೀಡಲಾಯಿತು.

ನಗರದ ಶ್ರೀ ಸದ್ಗುರು ಸದಾನಂದ ಸ್ವಾಮಿ ಮಠದ ಪರಿಸರದಲ್ಲಿ ಶುಕ್ರವಾರ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿ ಮಾತನಾಡಿ, ಗವಿ ಮಠದಿಂದ 5 ಸಾವಿರ ರೂ. ಸಮರ್ಪಿಸಿದರು. ಜೀವನದಲ್ಲಿ ಯಾವುದು ಶಾಶ್ವತವಲ್ಲ. ಸತ್ಕಾರ್ಯಗಳೇ ಶಾಶ್ವತವಾಗಿ ಉಳಿಯುತ್ತವೆ. ಸೇವಾಭಾವದಿಂದ ಸತ್ಕಾರ್ಯಗಳನ್ನು ಮಾಡಬೇಕಿದೆ ಎಂದರು.

» ಶ್ರೀ ಅಭಿನವ ಘನಲಿಂಗ ರುದ್ರಮುನಿ ಶ್ರೀ ಭಾಗಿ

ಆರ್‌ಎಸ್‌ಎಸ್ ತಾಲೂಕು ಸಂಘಚಾಲಕ, ಹಿರಿಯ ನ್ಯಾಯವಾದಿ ಎಂ.ಜಿ.ಮಹಾಜನ್ ಮಾತನಾಡಿ, ಶ್ರೀರಾಮ ಮಂದಿರ ರಾಷ್ಟ್ರ ಮಂದಿರ. ಮಂದಿರ ನಿರ್ಮಾಣದಲ್ಲಿ ರಾಷ್ಟ್ರ ನಿರ್ಮಾದ ಆಶಯ ಅಡಗಿದೆ. ಈ ಪವಿತ್ರ ಕಾರ್ಯಕ್ಕೆ ಸಮರ್ಪಣಾ ಮನೋಭಾವದಿಂದ ಕೈಜೋಡಿಸಬೇಕು ಎಂದು ಕೋರಿದರು.

ನಾವು ಬದುಕಬೇಕು. ಬೇರೆಯವರು ಬದುಕಬೇಕು ಎನ್ನುವ ವಿಶಾಲ ಸಂಸ್ಕೃತಿ ಭಾರತದ್ದು. ಶ್ರೀರಾಮ ಮಂದಿರ ನಿರ್ಮಾಣ ಕಾರ್ಯ ದೇಶದಲ್ಲಿ ಎಲ್ಲರನ್ನು ಒಗ್ಗೂಡಿಸುವ ಜತೆಗೆ ಸದೃಢ ಭಾರತ ನಿರ್ಮಾಣಕ್ಕೆ ಬುನಾದಿ ಹಾಕಲಿದೆ. ನಾವೆಲ್ಲ ಒಂದೇ ಎಂಬ ಸಂದೇಶ ಸಾರಲಿದೆ ಎಂದರು.

ಆರ್‌ಎಸ್‌ಎಸ್ ಜಿಲ್ಲಾ ಕಾರ್ಯವಾಹ ಭಾರ್ಗವಚಾರಿ, ಅಭಿಯಾನದ ನಗರ ಪ್ರಮುಖ ಡಾ.ಮಹೇಶ ಪಾಟೀಲ್, ಬಿಡಿಪಿಸಿ ಕೋಶಾಧ್ಯಕ್ಷ ಸುಭಾಷ ಹೊಳಕುಂದೆ, ಸರಾಫ್ ಮತ್ತು ಸುವರ್ಣಕಾರರ ಸಂಘದ ಉಪಾಧ್ಯಕ್ಷ ಚನ್ನಪ್ಪ ರಾಜಪುರೆ, ಬಾಬುರಾವ ಮುಸ್ತಾಪುರೆ, ಶಿವಕುಮಾರ ಖರವಣೆ, ಮಹೇಶ ಸುಂಟನೂರೆ, ಶ್ರೀಕಾಂತ ಬಡದಾಳೆ, ಸತೀಶ ಪೆದ್ದಪುಲಿ ಇತರರಿದ್ದರು. ಬಾಲಾಜಿ ಖಂಡಾಳೆ ಸ್ವಾಗತಿಸಿ, ನಿರೂಪಣೆ ಮಾಡಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 16 ಜನವರಿ 2021
16 JANUARY 2021

Scanned with OKEN Scanner

ಸಂಯುಕ್ತ ಕರ್ನಾಟಕ
ಬುಧವಾರ, 13, ಜನವರಿ, 2021, ಕಲಬುರಗಿ



ಬಸವಕಲ್ಯಾಣ: ಗವಿಮಠ ಸಂಸ್ಥಾನದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನಿಧ್ಯದಲ್ಲಿ 2021ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಎ.ಜಿ ಪಾಟೀಲ್, ಲಕ್ಷ್ಮಣ ಸಿಂಗಾರೆ, ವೀರಣ್ಣ ಶೀಲವಂತ, ಪ್ರೊ. ಸೂರ್ಯಕಾಂತ ಶೀಲವಂತ, ರೇವಣಸಿದ್ಧಯ್ಯ ಮಠಪತಿ, ರಾಕೇಶ್ ಪುರವಂತ, ಶಾಂತವೀರ ಪೂಜಾರಿ, ಚಂದ್ರಶೇಖರ ಸ್ವಾಮಿ ಇದ್ದರು.

ರಾಮ ಮಂದಿರ ನಿಧಿ ಸಮರ್ಪಣಾ ಅಭಿಯಾನ

₹50 ಸಾವಿರ ದೇಣಿಗೆ ನೀಡಿದ ಹಾರಕೂಡಶ್ರೀ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣ ತಾಲ್ಲೂಕಿನ ಹಾರಕೂಡದಲ್ಲಿ ಶನಿವಾರ ಮಠಾಧಿಪತಿ ಚನ್ನವೀರ ಶಿವಾಚಾರ್ಯರು ಶ್ರೀರಾಮ ಮಂದಿರಕ್ಕಾಗಿ ₹50 ಸಾವಿರ ದೇಣಿಗೆ ಸಲ್ಲಿಸಿದರು

ಮನುಷ್ಯನ ಜೀವನದಲ್ಲಿ ಯಾವುದೂ ಶಾಶ್ವತ ಅಲ್ಲ. ಪರರಿಗೆ ಮಾಡಿದ ಉಪಕಾರ ಹಾಗೂ ಸೇವಾ ಕಾರ್ಯವೇ ಎಲ್ಲರ ನೆನಪಿನಲ್ಲಿ ಉಳಿಯುತ್ತದೆ
ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಬಸವಕಲ್ಯಾಣ

ಬಸವಕಲ್ಯಾಣ: ತಾಲ್ಲೂಕಿನ ಹಾರಕೂಡದಲ್ಲಿ ಶನಿವಾರ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಹಾಗೂ ವಿಶ್ವ ಹಿಂದು ಪರಿಷತ್ ಆಶ್ರಯದಲ್ಲಿ ನಡೆಯುತ್ತಿರುವ ಅಯೋಧ್ಯೆಯ ಶ್ರೀರಾಮ ಮಂದಿರ ಕಟ್ಟಡಕ್ಕೆ ನಿಧಿ ಸಮರ್ಪಿಸುವ ಅಭಿಯಾನ ಆರಂಭಿಸಲಾಯಿತು.

ಮಠಾಧಿಪತಿ ಚನ್ನವೀರ ಶಿವಾಚಾರ್ಯರು ₹50,000 ದೇಣಿಗೆ ನೀಡಿ ಚಾಲನೆ ನೀಡಿದರು. ಅಭಿಯಾನದ ಪ್ರಮುಖರಾದ ಬಲವಂತ ವರವಟ್ಟೆ, ಬಿಜೆಪಿ ತಾಲ್ಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಹಣಮಂತ ಧನಶೆಟ್ಟಿ, ಬಸವರಾಜ ಕುಂಬಾರ, ಲೋಕೇಶ ಶೆಟಗಾರ, ರಾಜೀವ ಜಿಲೇಬಿ, ಗುರು ದೇಗಾಂವ, ಚಂದ್ರಕಾಂತ ಸಾಮದೆ, ಸುದರ್ಶನರೆಡ್ಡಿ, ರಶೀದ್ ಕುರೇಶಿ, ಸುನಿಲ ನಾಗರಾಳೆ, ಸಿದ್ರಾಮ ಹೆಗಡೆ ಪಾಲ್ಗೊಂಡಿದ್ದರು.

ನಗರದಲ್ಲಿ: ಬಸವಕಲ್ಯಾಣ ನಗರದ ಸದ್ಗುರು ಸದಾನಂದ ಸ್ವಾಮಿ ಮಠದಲ್ಲಿ ಶುಕ್ರವಾರ ಆಯೋಜಿಸಿದ ಅಯೋಧ್ಯೆಯ ಶ್ರೀರಾಮ ಮಂದಿರ ಕಟ್ಟಡಕ್ಕೆ ನಿಧಿ ಸಮರ್ಪಣಾ ಕಾರ್ಯಕ್ಕೆ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ₹5000 ದೇಣಿಗೆ ಸಮರ್ಪಿಸಿ ಚಾಲನೆ ನೀಡಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ತಾಲ್ಲೂಕು ಘಟಕದ ಸಂಚಾಲಕ ಎಂ.ಜಿ. ಮಹಾಜನ ಮಾತನಾಡಿ, 'ಶ್ರೀರಾಮ ಮಂದಿರ ನಿರ್ಮಾಣ ಕಾರ್ಯದಲ್ಲಿ ರಾಷ್ಟ್ರ ಕಟ್ಟುವ ಆಶಯ ಅಡಗಿದೆ. ಈ ಪವಿತ್ರ ಕಾರ್ಯಕ್ಕೆ ಎಲ್ಲರೂ ಉದಾರವಾಗಿ ದೇಣಿಗೆ ನೀಡಬೇಕು' ಎಂದು ಕೇಳಿಕೊಂಡರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಜಿಲ್ಲಾ ಕಾರ್ಯವಾಹ ಭಾರ್ಗವಾಚಾರಿ, ಅಭಿಯಾನದ ನಗರ ಪ್ರಮುಖ ಮಹೇಶ ಪಾಟೀಲ, ಸುಭಾಷ ಹೊಳಕುಂದೆ, ಚನ್ನಪ್ಪ ರಾಜಾಪುರೆ, ಬಾಬುರಾವ್ ಮುಸ್ತಾಪುರೆ, ಮಹೇಶ ಸುಂಟನೂರೆ, ಶಿವಕುಮಾರ ಖರೋಣೆ, ಶ್ರೀಕಾಂತ ಬಡದಾಳೆ, ಸತೀಶ, ಬಾಲಾಜಿ ಇದ್ದರು.

ಬೇಲೂರ: ಬೇಲೂರನಲ್ಲಿ ಆಯೋಜಿಸಿದ್ದ ಶ್ರೀರಾಮ ಮಂದಿರ ಕಟ್ಟಡಕ್ಕೆ ನಿಧಿ ಸಮರ್ಪಿಸುವ ಕಾರ್ಯದಲ್ಲಿ, 'ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣವಾಗುವುದು ಭಾರತೀಯರ ಬಹುದಿನದ ಕನಸಾಗಿತ್ತು. ಅದು ನನಸಾಗುತ್ತಿದೆ' ಎಂದು ಬೇಲೂರ ಕಲ್ಯಾಣ ಕಟ್ಟಿಮನಿ ಸಂಸ್ಥಾನದ ಚಿದ್ಘನಲಿಂಗ ಸ್ವಾಮೀಜಿ ಹೇಳಿದರು.

ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಸಿದ್ರಾಮ ಕಾಮಣ್ಣ, ಮುಖಂಡ ಸೂರ್ಯಕಾಂತ ಚಿಲ್ಲಾಬಟ್ಟೆ, ಬಸವರಾಜ ಪಾಲ್ಗೊಂಡಿದ್ದರು.

ಪ್ರಜಾವಾಣಿ ಕನ್ನಡ ದಿನಪತ್ರಿಕೆ
ಕಲಬುರಗಿ • ಜನವರಿ 17, 2021

ಜೀವನಕ್ಕೆ ಸ್ಫೂರ್ತಿ ಯೋಗ ಅಗತ್ಯ

ಬಸವಕಲ್ಯಾಣ: ಮನಸ್ಸಿನ ನಿಯಂತ್ರಣಕ್ಕೆ ಶಿವಾನುಭವ ಚಿಂತನ ಅವಶ್ಯ. ಆರೋಗ್ಯಪೂರ್ಣ ಉತ್ತಮ ಜೀವನಕ್ಕೆ ಪ್ರತಿಯೊಬ್ಬರು ಸ್ಫೂರ್ತಿ, ಧ್ಯಾನ, ಯೋಗ ಅಳವಡಿಸಿಕೊಳ್ಳುವುದು ಅವಶ್ಯ ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

» ಅಭಿನವ ಘನಲಿಂಗ ರುದ್ರಮುನಿ ಶ್ರೀ

ಗವಿಮಠದಲ್ಲಿ ಆಯೋಜಿಸಿದ್ದ ಮಾಸಿಕ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀಗಳು, ಶ್ರೀಗುರು ಮಾರ್ಗದರ್ಶನದಿಂದ ಜೀವನದಲ್ಲಿ ಸಾರ್ಥಕತೆ ಕಾಣಲು ಸಾಧ್ಯ ಎಂದರು.

ಸ್ವಾಮಿ ವಿವೇಕಾನಂದ ಪ್ರೌಢಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಜಗನ್ನಾಥ ಪತಂಗೆ ಮಾತನಾಡಿ, ಆದರ್ಶ ಬದುಕಿಗೆ ಗುರು ಮಾರ್ಗದರ್ಶನ ಅವಶ್ಯ. ಅಗಾಧವಾಗಿ ಕಲಿದು ಶಿಷ್ಯರಾಗಬೇಕು ಬರಬೇಕಾದರೆ ಗುರುವಿನ ಪಾತ್ರ ದೊಡ್ಡದು ಎಂದರು. ಸಂಘದ ಉಪಾಧ್ಯಕ್ಷೆ ಉರುಣಾ ಸ್ವಾಮಿ, ಧನರಾಜ್ ರಾಮೋಳೆ ಅವರನ್ನು ಶ್ರೀಗಳು ಸನ್ಮಾನಿಸಿ ಆಶೀರ್ವದಿಸಿದರು. ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಪ್ರಾಸ್ತಾವಿಕ ಮಾತನಾಡಿದರು. ವೀರಣ್ಣ ಶೀಲವಂತ, ಚಂದ್ರಕಾಂತ ಜೋಕಾರ, ಎ.ಜಿ ಪಾಟೀಲ್, ವಿಜಯಕುಮಾರ ಪಬ್ಲಿ, ರೇವಣಸಿದ್ಧಯ್ಯ ಮಠಪತಿ, ಬಾಬುರಾವ ಬಳಕಾಪುರೆ, ಚಂದ್ರಕಾಂತ ಸ್ವಾಮಿ, ಶಾಂತವೀರ ಸ್ವಾಮಿ, ಪಪ್ಪು ಜಮಾದಾರ ಇತರರಿದ್ದರು.



ಬಸವಕಲ್ಯಾಣದಲ್ಲಿ ಆಯೋಜಿಸಿದ್ದ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಜಗನ್ನಾಥ ಪತಂಗೆ, ಉಪಾಧ್ಯಕ್ಷೆ ಉರುಣಾ ಸ್ವಾಮಿ ಹಾಗೂ ಮುಖಂಡ ಧನರಾಜ್ ರಾಮೋಳೆ ಅವರನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು. ಬಸವಂತಪ್ಪ ಲವಾರ, ವೀರಣ್ಣ ಶೀಲವಂತ, ಚಂದ್ರಕಾಂತ ಜೋಕಾರ ಇತರರಿದ್ದರು.

ನಂ.1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 20 ಜನವರಿ 2021
20 JANUARY 2021

Scanned with OKEN Scanner

ಜ್ಞಾನಗಂಗೆ ಹರಿಸಿದ ಸ್ವಾಮೀಜಿ

ಶಿವಕುಮಾರ ಸ್ವಾಮೀಜಿ ಸ್ಮರಣೋತ್ಸವದಲ್ಲಿ ಮಲ್ಲಿಕಾರ್ಜುನ ಖೂಬಾ ಹೇಳಿಕೆ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದ ತ್ರಿಪುರಾಂತದಲ್ಲಿ ಗುರುವಾರ ನಡೆದ ಶಿವಕುಮಾರ ಸ್ವಾಮೀಜಿ ಸ್ಮರಣೋತ್ಸವದಲ್ಲಿ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಭಾವಚಿತ್ರದ ಪೂಜೆ ಮಾಡಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು

ಬಸವಕಲ್ಯಾಣ: 'ತುಮಕೂರಿನ ಸಿದ್ಧಗಂಗಾ ಮಠದ ಲಿಂ.ಶಿವಕುಮಾರ ಸ್ವಾಮೀಜಿಯವರು ಮಠದಲ್ಲಿ ನಿರಂತರ ದಾಸೋಹ ಕೈಗೊಳ್ಳುವುದಲ್ಲದೆ ನೂರಾರು ಶಿಕ್ಷಣ ಕೇಂದ್ರಗಳನ್ನು ಆರಂಭಿಸಿ ಜ್ಞಾನದ ಗಂಗೆ ಹರಿಸಿದರು' ಎಂದು ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಹೇಳಿದರು.

ಇಲ್ಲಿನ ತ್ರಿಪುರಾಂತದ ಶರಣ ಮಡಿವಾಳ ಮಾಚಿದೇವರ ವೃತ್ತದಲ್ಲಿ ಗುರುವಾರ ನಡೆದ ಶಿವಕುಮಾರ ಸ್ವಾಮೀಜಿ ಅವರ 2ನೇ ಪುಣ್ಯಸ್ಮರಣೋತ್ಸವದಲ್ಲಿ ಅವರು ಮಾತನಾಡಿದರು.

'ದುಬಾರಿ ಶುಲ್ಕದ ಕಾರಣ ಅನೇಕರಿಗೆ ಶಿಕ್ಷಣ ಕೈಗೆಟಕುತ್ತಿಲ್ಲ. ಸ್ವಾಮೀಜಿ ಬಡವರಿಗೆ ಹಾಗೂ ನಿರ್ಗತಿಕರಿಗೆ ಉಚಿತವಾಗಿ ಶಿಕ್ಷಣ ನೀಡಿ ಬಸವಣ್ಣನವರ ಕಾಯಕ, ದಾಸೋದ ತತ್ವದ ಪಾಲನೆಗೈದರು' ಎಂದರು.

ನೇತೃತ್ವ ವಹಿಸಿದ್ದ ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಹಣ, ಆಸ್ತಿ ಗಳಿಸಿದರೆ ಯಾರೂ ಶ್ರೇಷ್ಠ ಆಗುವುದಿಲ್ಲ. ಸಮಾಜ ಸೇವೆಯಿಂದ ಮಾತ್ರ ಜನಮನ್ನಣೆ ಗಳಿಸಬಹುದು' ಎಂದರು.

ಬಿಜೆಪಿ ರಾಜ್ಯ ಸಮಿತಿ ಸದಸ್ಯ ದೀಪಕ ಗಾಯಕವಾಡ, ಕಾಳಿದಾಸ ಜಾಧವ, ಸಂಜೀವ ಗಾಯಕವಾಡ, ರವಿಸ್ವಾಮಿ ನಾರಾಯಣಪುರ, ರಾಜೀವ ಪಾಟೀಲ, ಬಸವರಾಜ ಸ್ವಾಮಿ, ಸಂಗಮೇಶ ಹುಣಸಗೇರೆ, ಬಸವರಾಜ ಪಾಟೀಲ, ಮರೆಪ್ಪ ಪಾಟೀಲ, ಸುಭಾಷ ಗಜರೆ ಪಾಲ್ಗೊಂಡಿದ್ದರು.

ಹಣ್ಣು ವಿತರಣೆ: ಇಲ್ಲಿನ ಬಸವೇಶ್ವರ ವೃತ್ತದಲ್ಲಿ ಬಸವೇಶ್ವರ ದೇವಸ್ಥಾನ ಸಮಿತಿ ಹಾಗೂ ನಂದಿಧ್ವಜ ಸೇವಾ ಸಮಿತಿಯಿಂದ ಶಿವಕುಮಾರ ಸ್ವಾಮೀಜಿ ಅವರ ಪುಣ್ಯಸ್ಮರಣೆ ಅಂಗವಾಗಿ ದಾಸೋಹ ದಿನವನ್ನು ಆಚರಿಸಿ ಭಕ್ತರಿಗೆ ಹಣ್ಣು ವಿತರಿಸಲಾಯಿತು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ತಹಶೀಲ್ದಾರ್ ಸಾವಿತ್ರಿ ಸಲಗರ, ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಅನಿಲಕುಮಾರ ರಗಟೆ, ಮಲ್ಲಿಕಾರ್ಜುನ ವಾಂಜರಖೇಡೆ ಪಾಲ್ಗೊಂಡಿದ್ದರು.

ಮನಸ್ಸಿಗೆ ನೆಮ್ಮದಿ ನೀಡುವ ಧರ್ಮ

ವಾತಡೆ ಅಭಿಮತ | ಬನಶಂಕರಿ ದೇವಿ ಜಾತ್ರೆ | ಪ್ರವಚನಕ್ಕೆ ಚಾಲನೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಧಾರ್ಮಿಕ ಸಭೆ, ಸಮಾರಂಭಗಳು ಮನಸ್ಸಿಗೆ ನೆಮ್ಮದಿ ನೀಡುತ್ತವೆ. ಸಮಾಜದಲ್ಲಿ ಶಾಂತಿ-ಸೌಹಾರ್ಧತೆ ಗಟ್ಟಿಗೊಳಿಸಲು ಜಾತ್ರೆಗಳು ಸಹಕಾರಿ ಎಂದು ಬಿಜೆಪಿ ಮುಖಂಡ ಪ್ರದೀಪ ವಾತಡೆ ಹೇಳಿದರು.

ನಗರದ ಬನಶಂಕರಿ ಓಣಿಯಲ್ಲಿ ಶ್ರೀ ಬನಶಂಕರಿ ದೇವಿಯ 41ನೇ ಜಾತ್ರೆ ನಿಮಿತ್ತ ಪ್ರವಚನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲರು ಸೇರಿ ಭಕ್ತಿ ಶ್ರದ್ಧೆಯಿಂದ ಜಾತ್ರೆ ಮಹೋತ್ಸವದ ನಿಮಿತ್ತ ವಿವಿಧ ಕಾರ್ಯಕ್ರಮ ಆಯೋಜಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಪಂಚ ಕಮಿಟಿ ಮತ್ತು ಹಟಗಾರ ಸಮಾಜದ ಅಧ್ಯಕ್ಷ ಡಾ.ಜಿ.ಎನ್.ಭುರಳೆ ಮಾತನಾಡಿ, ಕರೊನಾ ಮಾರ್ಗಸೂಚಿಯಯನ್ನು ಅನುಸರಿಸಿ ಭಕ್ತಿ-ಶ್ರದ್ಧೆಯಿಂದ ಜಾತ್ರೆ ನಿಮಿತ್ತ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಬೇಕಿದೆ. ಪ್ರತಿ ಹಂತದಲ್ಲಿಯೂ ಎಲ್ಲರೂ ಮುಂಜಾಗ್ರತೆ ವಹಿಸಬೇಕು. ಮಾಸ್ಕ್ ಧರಿಸಬೇಕು. ಸ್ಯಾನಿಟೈಜರ್ ಬಳಸಬೇಕು. ಪರಸ್ಪರ ಅಂತರವನ್ನು ಕಾಯ್ದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಗಡಿಗೌಂಡಗಾಂವದ ಶ್ರೀ ಶಾಂತವೀರ ಶಿವಾಚಾರ್ಯರು ಪ್ರವಚನ ನಡೆಸಿಕೊಟ್ಟರು. ಬಿಡಿಪಿಸಿ ಅಧ್ಯಕ್ಷ ಅನೀಲಕುಮಾರ ರಗಟೆ, ಉಪಾಧ್ಯಕ್ಷ ಶರಣಪ್ಪ ಮೆಂಗದೆ, ಕಾರ್ಯದರ್ಶಿ ದಿಲೀಪ ರುಮ್ಮ, ಖಜಾಂಚಿ ಮಹೇಶ ಸುಂಟನೂರೆ, ಸಹ ಕಾರ್ಯದರ್ಶಿ ಬಸವಂತಪ್ಪಭುರಳೆ, ಸದಸ್ಯರಾದ ಬಾಬು ಹೆಗ್ಗೆ, ಕಾಶಪ್ಪ ಕಡಗಂಚೆ, ಬಸವರಾಜ ಬಂದಗೆ, ಚಂದ್ರಕಾಂತ ಹಲಗುಂಡೆ, ಅಶೋಳಕ ಹಿಪ್ಪರಗೆ, ಸೊಮನಾಥ ಮತಗುಂಡೆ, ಶಂಕರ ಹೋಳಗೆ, ಶಾಂತು ಮೆಂಗದೆ, ಮಲ್ಲಪ್ಪ ಕಡಗಂಚೆ, ಶಂಕರ ಮ್ಯಾಕಾ, ಗೋವಿಂದ ಕನಕಾ, ಸೂರ್ಯಕಾಂತ ಭುರಳೆ, ಮಹಾದೇವ ಹುಡಗೆ, ಸಚಿನ ಹುಡಗೆ, ಸುಶಿಲಾಬಾಯಿ ಧನ್ನೂರೆ ಇತರರಿದ್ದರು. ಉಪನ್ಯಾಸಕ ಸುರೇಶ ಅಡಕೆ ಸ್ವಾಗತಿಸಿ, ನಿರೂಪಣೆ ಮಾಡಿದರು.



ಬಸವಕಲ್ಯಾಣದಲ್ಲಿ ಶ್ರೀ ಬನಶಂಕರಿ ದೇವಿ ಜಾತ್ರೆ ನಿಮಿತ್ತ ಪ್ರವಚನ ಕಾರ್ಯಕ್ರಮವನ್ನು ಬಿಜೆಪಿ ಮುಖಂಡ ಪ್ರದೀಪ ವಾತಡೆ ಉದ್ಘಾಟಿಸಿದರು. ಶ್ರೀ ಶಾಂತವೀರ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಜಿ.ಎನ್.ಭುರಳೆ, ಬಿಡಿಪಿಸಿ ಅಧ್ಯಕ್ಷ ಅನೀಲಕುಮಾರ ರಗಟೆ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI • KALABURAGI
ಭಾನುವಾರ 24 ಜನವರಿ 2021
24 JANUARY 2021

Scanned with OKEN Scanner

ಸಿದ್ಧಗಂಗಾ ಶ್ರೀಗೆ ಭಾರತ ರತ್ನ ಕೊಡಿ

ಬಸವಕಲ್ಯಾಣದಲ್ಲಿ ಶ್ರೀ ಡಾ.ಶಿವಕುಮಾರ ಸ್ವಾಮೀಜಿ ಸ್ಮರಣೋತ್ಸವ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಶ್ರೀ ಬಸವೇಶ್ವರ ನಂದಿ ಧ್ವಜ ತರಬೇತಿ ಸೇವಾ ಸಮಿತಿಯಿಂದ ಗುರುವಾರ ಬಸವೇಶ್ವರ ವೃತ್ತದ ಬಳಿ ಸಿದ್ಧಗಂಗಾ ಮಠದ ತ್ರಿವಿಧ ದಾಸೋಹಿ ಶ್ರೀ ಡಾ.ಶಿವಕುಮಾರ ಸ್ವಾಮೀಜಿ ಅವರ ದ್ವಿತೀಯ ವರ್ಷದ ಸ್ಮರಣೋತ್ಸವ ಜರುಗಿತು.

ಸಾನ್ನಿಧ್ಯ ವಹಿಸಿದ್ದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಮಾತನಾಡಿ, ಗುರು ಬಸವಣ್ಣನವರ ಕಾಯಕ, ದಾಸೋಹ ಪರಂಪರೆಯನ್ನು ಶ್ರದ್ಧೆ ಭಕ್ತಿಯಿಂದ ಮುಂದುವರಿಸಿದ್ದವರು ಶ್ರೀ ಶಿವಕುಮಾರ ಸ್ವಾಮೀಜಿ ನಾಡಿಗೆ ನೀಡಿದ ಕೊಡುಗೆ ದೊಡ್ಡದು. ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಬೇಕು ಎಂದರು.

ತಹಸೀಲ್ದಾರ್ ಸಾವಿತ್ರಿ ಶರಣು ಸಲಗರ್ ಮಾತನಾಡಿದರು. ಬಿಡಿಪಿಸಿ ಅಧ್ಯಕ್ಷ ಅನೀಲಕುಮಾರ ರಗಟೆ, ಮಲ್ಲಿಕಾರ್ಜುನ ವಾಂಜರಖೇಡೆ, ಗುರುಪಾದಪ್ಪ ಖರೋಣೆ, ಸುಭಾಷ ಬಾವುಗೆ, ಶಿವರಾಜ ಬಾಲಿಕಿಲೆ ಇತರರಿದ್ದರು.

ಸಮಿತಿಯಿಂದ ಬಸವೇಶ್ವರ ವೃತ್ತದಲ್ಲಿ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ನಂತರ ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಮತ್ತು ಅನಾಥಾಶ್ರಮದಲ್ಲಿ ಮಕ್ಕಳಿಗೆ ಹಣ್ಣು-ಹಂಪಲ ವಿತರಿಸಲಾಯಿತು.

ವಿಜಯವಾಣಿ ಚಿತ್ರಗಳು



ಬಸವಕಲ್ಯಾಣದಲ್ಲಿ ಶ್ರೀ ಬಸವೇಶ್ವರ ನಂದಿ ಧ್ವಜ ತರಬೇತಿ ಸೇವಾ ಸಮಿತಿಯಿಂದ ಗುರುವಾರ ಬಸವೇಶ್ವರ ವೃತ್ತದ ಬಳಿ ಸಿದ್ಧಗಂಗಾ ಮಠದ ಶ್ರೀ ಡಾ.ಶಿವಕುಮಾರ ಸ್ವಾಮೀಜಿ ಅವರ ದ್ವಿತೀಯ ಸ್ಮರಣೋತ್ಸವ ಜರುಗಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ತಹಸೀಲ್ದಾರ್ ಸಾವಿತ್ರಿ ಶರಣು ಸಲಗರ್, ಬಿಡಿಪಿಸಿ ಅಧ್ಯಕ್ಷ ಅನೀಲಕುಮಾರ ರಗಟೆ, ಮಲ್ಲಿಕಾರ್ಜುನ ವಾಂಜರಖೇಡೆ, ಸಚಿನ ಹುಗ್ಗೆ ಇತರರಿದ್ದರು.



ಬಸವಕಲ್ಯಾಣದಲ್ಲಿ ಎಸ್‌ಎಂಪಿ ಯುವಕ ಮಂಡಳಿಯಿಂದ ಡಾ.ಶಿವಕುಮಾರ ಶ್ರೀಗಳ ದ್ವಿತೀಯ ಪುಣ್ಯ ಸ್ಮರಣೋತ್ಸವ ಜರುಗಿತು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ದೀಪಕ ಗಾಯಕವಾಡ, ಬಸವರಾಜ ಸ್ವಾಮಿ, ಸಂಗಮೇಶ ಹುಣಚಗೇರೆ, ಬಸವರಾಜ ಪಾಟೀಲ್, ರಾಜು ಪಾಟೀಲ್ ಇತರರಿದ್ದರು.

ಶ್ರೀಗಳ ಕೊಡುಗೆ ಅನನ್ಯ

ಬಸವಕಲ್ಯಾಣ: ತ್ರಿಪುರಾಂತದ ಮಡಿವಾಳ ಚೌಕ್ ಬಳಿ ಎಸ್‌ಎಂಪಿ ಯುವಕ ಮಂಡಳಿಯಿಂದ ಸಿದ್ಧಗಂಗಾ ಮಠದ ಶ್ರೀ ಡಾ.ಶಿವಕುಮಾರ ಸ್ವಾಮೀಜಿಯವರ ದ್ವಿತೀಯ ಸ್ಮರಣೋತ್ಸವ ನಡೆಯಿತು. ಪೂಜೆ ಸಲ್ಲಿಸಿದ ನಂತರ ಹಣ್ಣು ಹಂಪಲ ವಿತರಿಸಲಾಯಿತು. ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಮಾತನಾಡಿ, ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಸ್ವಾಮಿಗಳು ಸಾಮಾಜಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅನನ್ಯ. ದಾಸೋಹದ ಜತೆಗೆ ಬಡ ಮಕ್ಕಳಿಗೆ ಶಿಕ್ಷಣ ನೀಡಿ ಜ್ಞಾನದ ಬೆಳಕು ತೋರಿದ ಪೂಜ್ಯರು ಶೈಕ್ಷಣಿಕ ಕ್ಷೇತ್ರದಲ್ಲಿ ಮಾಡಿದ ಕ್ರಾಂತಿ ಅಮೂಲ್ಯವಾದದ್ದು ಎಂದು ಬಣ್ಣಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನೇತೃತ್ವ ವಹಿಸಿದ್ದರು. ಬಸವರಾಜ ಸ್ವಾಮಿ, ಸಂಗಮೇಶ ಹುಣಚಗೇರೆ, ಬಸವರಾಜ ಪಾಟೀಲ್, ರಾಜು ಪಾಟೀಲ್, ಮರೆಪ್ಪ ಪಾಟೀಲ್, ದೀಪಕ ಗಾಯಕವಾಡ, ಕಾಳಿದಾಸ ಜಾಧವ್, ಸಂಜು ಗಾಯಕವಾಡ, ಸುಭಾಷ ಗಾಜರಿ, ಮಾಧವ ಹಸೂರೆ, ಸಿಕಿಂದರ್ ಮಹಾಶಕ್ತಿ ಇತರರಿದ್ದರು.

» ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಅನಿಸಿಕೆ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶುಕ್ರವಾರ 22 ಜನವರಿ 2021
22 JANUARY 2021

'ಹುತಾತ್ಮ ಸ್ಮಾರಕ, ಪಟೇಲ್‌ರ ಮೂರ್ತಿ ಕಾಮಗಾರಿ ಮುಗಿಸಿ'

ಬಸವಕಲ್ಯಾಣ: ತಾಲೂಕಿನ ಗೋರ್ಟಾ(ಬಿ)ದಲ್ಲಿ ಬಿಜೆಪಿ ಯುವ ಮೋರ್ಚಾದಿಂದ ಹುತಾತ್ಮ ಸ್ಮಾರಕ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲ್‌ರ ಮೂರ್ತಿ ಪೂರ್ಣಗೊಳಿಸಲು ಒತ್ತಾಯಿಸಿ ಬಿಜೆಪಿ ಕಚೇರಿ ಎದುರುಗಡೆ ವಿವಿಧ ಬಸವಪರ ಸಂಘಟನೆಯಿಂದ ಪ್ರತಿಭಟನೆ ನಡೆಸಲಾಯಿತು.

ತ್ರಿಪುರಾಂತನ ಗವಿಮಠದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹಾಗೂ ಬಿಡಿಪಿಸಿ ಕೋಶಾಧ್ಯಕ್ಷ ಸುಭಾಷ ಹೊಳಕುಂದೆ ಅವರು ಬಸವಣ್ಣನವರ ಹಾಗೂ ಸರ್ದಾರ್ ವಲ್ಲಭಭಾಯ್ ಪಟೇಲ್‌ರ ಭಾವಚಿತ್ರಗಳಿಗೆ ಪೂಜೆ ನೆರವೇರಿಸಿ ಚಾಲನೆ ನೀಡಿದರು. ತ್ರಿಪುರಾಂತ್‌ನ ಶ್ರೀ ಮಾತನಾಡಿ ಏಳು ವರ್ಷ ಗತಿಸಿದರು ಕೂಡ ಗೋರ್ಟಾದಲ್ಲಿ ಸ್ಮಾರಕ ಕಾಮಗಾರಿ ಪೂರ್ಣಗೊಳ್ಳದಿರುವುದು ಬೇಸರ ತರಿಸಿದೆ. ಕಾಮಗಾರಿ ಪೂರ್ಣಗೊಳಿಸುವಂತೆ ಒತ್ತಾಯಿಸಿ ಹೋರಾಟ ಮುಂದುವರೆದಿದ್ದು, ಮುಂಬರುವ ದಿನಗಳಲ್ಲಿ ಸಂಬಂಧಪಟ್ಟವರು ನೆನೆಗುದಿಗೆ ಬಿದ್ದಿರುವ ಕಾಮಗಾರಿ ಪೂರ್ಣಗೊಳಿಸದೆ ಇದ್ದಲ್ಲಿ ಕಾವಿಯ ಪ್ರತಿನಿಧಿಯಾಗಿ ಮುಂದ ನೂರಾರು ಮಠಾಧೀಶರು ಸೇರಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಯುವ ಮುಖಂಡ ಶಿವಕುಮಾರ್ ಬಿರಾದಾರ ಮಾತನಾಡಿ ಅರ್ಧಕ್ಕೆ ನಿಂತಿರುವ ಗೋರ್ಟಾ ಸ್ಮಾರಕ ಕಾಮಗಾರಿ ಸಂಬಂಧಪಟ್ಟವರು ಪೂರ್ಣಗೋಸಬೇಕು ಇಲ್ಲವಾದಲ್ಲಿ ಮುಂಬರುವ ದಿನಗಳಲ್ಲಿ ಅಮರಣ ಉಪವಾಸ ಸತ್ಯಾಗ್ರಹ ಮಾಡಲಾಗುವುದು ಎಂದರು. ಮಹೇಶಸುಂಟನೂರೆ, ಬಸವರಾಜಪಾಟೀಲ್‌ಗೋರ್ಟಾ, ರವಿ ಕೊಳಕುರ, ಸಂಜು ಮೇಟಗೆ, ವಿವೇಕ ಚಳಕಾಪುರೆ, ಸಂತೋಷ ಸಣ್ಣೂರೆ, ಶಿವು ಕನಕಟ್ಟೆ, ನಾಗರಾಜ ಮಂಗಾ, ನಿಲೇಶ ಖೂಬಾ, ವಿರೇಶ ಬೋರಗೆ, ಸಾಗರ ಶಾಶಟ್ಟೆ, ಪ್ರೇಮ, ಶಿವು ಅಗ್ರೆ, ಪ್ರವೀಣ ಮಹಾಜನ, ಸಿದ್ದು ಹಲಶಟ್ಟೆ, ಅನೀಲ ಸಕ್ಕರಭಾವಿ, ಲಕ್ಷ್ಮೀಕಾಂತ ಜಾಂತೆ, ಸಿದ್ದು ಬೋರಗೆ, ದತ್ತಾ ರೆಡ್ಡಿ ಇದ್ದರು.



ಬಸವಕಲ್ಯಾಣ : ಹುತ್ಮಾತ್ಮ ಸ್ಮಾರಕ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲ್‌ರ ಮೂರ್ತಿ ಪೂರ್ಣಗೊಳಿಸಲು ಒತ್ತಾಯಿಸಿ ಬಿಜೆಪಿ ಕಚೇರಿ ಎದುರುಗಡೆ ಪ್ರತಿಭಟನೆ ನಡೆಸಲಾಯಿತು.

ಸಂಯುಕ್ತ ಕರ್ನಾಟಕ
08 ಫೆಬ್ರ್ 2021
ಸೋಮವಾರ
ಕಲಬುರಗಿ

Scanned with OKEN Scanner

ಪ್ರಜಾವಾಣಿ ವಾರ್ತೆ
ಬುಧವಾರ • ಜನವರಿ 27, 2021

ಪ್ರವಚನಕ್ಕೆ ಚಾಲನೆ ನೀಡಿದ ಪ್ರದೀಪ ವಾತಡೆ ಅಭಿಮತ

ಧರ್ಮಕಾರ್ಯದಿಂದ ನೆಮ್ಮದಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಧರ್ಮಕಾರ್ಯಗಳಿಂದ ಮಾನಸಿಕ ನೆಮ್ಮದಿ ಪ್ರಾಪ್ತವಾಗುತ್ತದೆ. ದೈವಭಕ್ತಿ ಇದ್ದವರು ಸನ್ಮಾರ್ಗದಲ್ಲಿ ಸಾಗುತ್ತಾರೆ' ಎಂದು ಬಿಜೆಪಿ ಮುಖಂಡ ಪ್ರದೀಪ ವಾತಡೆ ಹೇಳಿದ್ದಾರೆ.

ಇಲ್ಲಿನ ಬನಶಂಕರಿ ದೇವಿ ದೇವಸ್ಥಾನದಲ್ಲಿ ಜಾತ್ರೆ ಅಂಗವಾಗಿ ಗುರುವಾರ ನಡೆದ ಪ್ರವಚನ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಭಾರತದ ಸಂಸ್ಕೃತಿ, ಪರಂಪರೆ ವಿಶ್ವದಲ್ಲಿಯೇ ಶ್ರೇಷ್ಠವಾಗಿದೆ. ಆದ್ದರಿಂದ ನಮ್ಮ ಸಂಪ್ರದಾಯವನ್ನು ಪಾಲಿಸಿಕೊಂಡು ಹೋಗುವುದು ಅತ್ಯವಶ್ಯಕವಾಗಿದೆ' ಎಂದರು.

ತಾಲ್ಲೂಕು ಹಟಕಾರ ಸಮಾಜ ಸಂಘದ ಅಧ್ಯಕ್ಷ ಡಾ.ಜಿ.ಎಸ್. ಭುರಳೆ ಮಾತನಾಡಿ, 'ಬನಶಂಕರಿ ದೇವಿ ಮಹಿಮೆ ದೊಡ್ಡದಾಗಿದೆ. ದೇವಸ್ಥಾನ ಸಮಿತಿಯಿಂದ ವಿವಿಧ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ' ಎಂದರು.

ಗಡಿಗೌಡಗಾಂವ ಶಾಂತವೀರ ಶಿವಾಚಾರ್ಯರು ಪ್ರವಚನ ನಡೆಸಿಕೊಟ್ಟರು. ಸುರೇಶ ಅಡಕೆ ಮಾತನಾಡಿದರು.

ಮುಖ್ಯಾಂಶಗಳು

- ಬನಶಂಕರಿ ಮಹಿಮೆ ದೊಡ್ಡದು
- ಸಂಪ್ರದಾಯ ಪಾಲನೆ ಅಗತ್ಯ
- ಮೂರು ದಿನಗಳವರೆಗೂ ಅನ್ನ ದಾಸೋಹ

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಸದಾನಂದ ಅಪ್ಪ, ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಅನಿಲಕುಮಾರ ರಗಟೆ, ಬಸವರಾಜ ಸ್ಥಾವರಮಠ, ರಾಮಚಂದ್ರ ಕಲ್ಲಹಿಪ್ಪರ್ಗಿ, ಶರಣಪ್ಪ ಮೆಂಗದೆ, ದಿಲೀಪ ರುಮ್ಮಾ, ಮಹೇಶ ಸುಂಟನೂರೆ, ಬಸವಂತಪ್ಪ ಭುರಳೆ, ಬಾಬು ಹೆಗ್ಗೆ, ಕಾಶಪ್ಪ ಕಡಗಂಚಿ, ಬಸವರಾಜ ಬಂದಗೆ, ಚಂದ್ರಪ್ಪ ಹಲಗುಂಡೆ, ಅಶೋಕ ಹಿಪ್ಪರ್ಗೆ, ಸೋಮನಾಥ ಮತಗುಂಡೆ, ಶಂಕರ ಹೋಳಗೆ, ಶಾಂತಪ್ಪ ಮೆಂಗದೆ, ಮಲ್ಲಪ್ಪ ಕಡಗಂಚಿ, ಶಂಕರ ಮ್ಯಾಕಾ, ಗೋವಿಂದ ಕನಕಾ, ಸೂರ್ಯಕಾಂತ ಭುರಳೆ, ಮಹಾದೇವ ಹುಡಗೆ, ಸಚಿನ ಹುಡಗೆ ಹಾಗೂ ಸುಶೀಲಾಬಾಯಿ ಧನ್ನೂರೆ ಪಾಲ್ಗೊಂಡಿದ್ದರು.

ಜಾತ್ರೆ: ಬನಶಂಕರಿ ದೇವಸ್ಥಾನದ ಜಾತ್ರೆ ನಿಮಿತ್ತ ಜನವರಿ 26 ಕ್ಕೆ ದೇವಿಯ ಕುಂಕುಮಾರ್ಚನೆ ಹಾಗೂ ಪ್ರವಚನದ ಸಮಾರೋಪ ನಡೆಯುವುದು. ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಕ್ಷೇತ್ರ ಶಿಕ್ಷಣಾಧಿಕಾರಿ ಚನ್ನಬಸಪ್ಪ ಹಳ್ಳದ್ ಪಾಲ್ಗೊಳ್ಳುವರು. 27 ರಂದು ಬೆಳಿಗ್ಗೆ 9 ಗಂಟೆಗೆ ಕುರಭಗಳ ಮೆರವಣಿಗೆ ನಡೆಯುವುದು. ಸಂಜೆ 6 ಗಂಟೆಗೆ ತೊಟ್ಟಿಲು ಕಾರ್ಯಕ್ರಮ ಹಾಗೂ ದೀಪೋತ್ಸವ ಜರುಗಲಿದೆ. ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ನಿರ್ಮಲಾ ಮಾನೆಗೋಪಾಳೆ, ತಹಶೀಲ್ದಾರ್ ಸಾವಿತ್ರಿ ಸಲಗರ, ನಗರಸಭೆ ಸದಸ್ಯೆ ರೇಖಾಬಾಯಿ ಮೈತ್ರಸಕರ್ ಪಾಲ್ಗೊಳ್ಳುವರು.

ಜನವರಿ 28 ರಂದು ಮಧ್ಯಾಹ್ನ 1 ಗಂಟೆಗೆ ಪಲ್ಲಕ್ಕಿ ಮೆರವಣಿಗೆ ನಡೆಯಲಿದ್ದು ಬಿಜೆಪಿ ಮುಖಂಡ ಶರಣು ಸಲಗರ ಚಾಲನೆ ನೀಡುವರು.

ಸಂಜೆ 6 ಗಂಟೆಗೆ ರಥೋತ್ಸವ ಜರುಗಲಿದ್ದು ವಿಧಾನಪರಿಷತ್ ಸದಸ್ಯ ವಿಜಯಸಿಂಗ್ ಚಾಲನೆ ನೀಡಲಿದ್ದಾರೆ. ನಂತರ ಮದ್ದು ಸುಡಲಾಗುತ್ತದೆ. ಮೂರು ದಿನಗಳವರೆಗೆ ದೇವಸ್ಥಾನದಲ್ಲಿ ಅನ್ನ ದಾಸೋಹವಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.



ಬಸವಕಲ್ಯಾಣದ ಬನಶಂಕರಿದೇವಿ ದೇವಸ್ಥಾನದಲ್ಲಿ ನಡೆದ ಪ್ರವಚನ ಉದ್ಘಾಟನೆಯಲ್ಲಿ ಮುಖಂಡ ಪ್ರದೀಪ ವಾತಡೆ ದೀಪ ಬೆಳಗಿಸಿದರು

ಹುಲಸೂರು ಶ್ರೀಗಳಿಂದ ಇತಿಹಾಸ ನಿರ್ಮಾಣ

ಭಾತಂಬ್ರಾ ಶ್ರೀ ಬಣ್ಣನೆ | ಡಾ.ಶಿವಾನಂದ ಸ್ವಾಮೀಜಿ ಅಭಿನಂದನಾ ಸಮಾರಂಭ ಸಮಾರೋಪ

ವಿಜಯವಾಣಿ ಸುದ್ದಿಜಾಲ ಹುಲಸೂರು

ಹುಲಸೂರಿನ ಶ್ರೀ ಡಾ.ಶಿವಾನಂದ ಸ್ವಾಮೀಜಿ ದೇಶಾದ್ಯಂತ 22 ಸಾವಿರ ಕಿಲೋಮೀಟರ ಸಂಚರಿಸಿ ಬಸವತತ್ವ ಪ್ರಚಾರ ಮಾಡುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ ಎಂದು ಭಾತಂಬ್ರಾ ಶ್ರೀ ಶಿವಯೋಗೀಶ್ವರ ಸ್ವಾಮೀಜಿ ಬಣ್ಣಿಸಿದರು.

ಗುರುಬಸವೇಶ್ವರ ಪ್ರೌಢಶಾಲೆ ಆವರಣದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ಐದು ದಶಕದ ಹಿಂದೆ ಹುಲಸೂರು ಮಠ ಬರೀ ಘಟವಾಗಿತ್ತು. ಆದರೆ ಶಿವಾನಂದ ಸ್ವಾಮೀಜಿ ಬಂದ ಮೇಲೆ ಈ ಮಠ ಎತ್ತರೋತ್ತರವಾಗಿ ಬೆಳೆಯುವುದರ ಜತೆಗೆ ಶ್ರೀಗಳು ಸಮಾಜೋಧಾರ್ಮಿಕ ಕಾರ್ಯಗಳ ಮೂಲಕ ರಾಜ್ಯ ಅಷ್ಟೇ ಅಲ್ಲ, ದೇಶಾದ್ಯಂತ ಹೆಸರು ಮಾಡಿದ್ದಾರೆ ಎಂದು ಮೆಚ್ಚುಗೆ ಪಡಿಸಿದರು.

ಶ್ರೀ ಡಾ.ಶಿವಾನಂದ ಸ್ವಾಮೀಜಿ ಮಾತನಾಡಿ, ನಾನು ನನಗಾಗಿ ಏನೂ ಮಾಡಿಕೊಂಡವನಲ್ಲ, ಇದೆಲ್ಲ ಭಕ್ತರ ಆಸ್ತಿ. ಭಕ್ತಾದಿಗಳು ಏನೇ ಕೊಟ್ಟರೂ ಮಠದ ಆಸ್ತಿ ಆಗಿರುತ್ತದೆ. ನಿಮ್ಮೆಲ್ಲರ ಆಶೀರ್ವಾದದಿಂದ ಯಾವುದೇ ತೊಂದರೆ ಇಲ್ಲದೆ 22 ಸಾವಿರ ಕಿಮೀ ಪಾದಯಾತ್ರೆ ಮೂಲಕ ಬಸವತತ್ವ ಪ್ರಸಾರ ಮಾಡಿ ಬಂದಿದ್ದೇನೆ ಎಂದರು.

ಶಾಸಕ ಈಶ್ವರ ಖಂಡ್ರೆ ಮಾತನಾಡಿ, 12ನೇ ಶತಮಾನದ ಶರಣರು ಸಮಾನತೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದರೆ ಯಾವುದೇ ತೊಂದರೆ ಬರುವುದಿಲ್ಲ ಎಂದರು.

ಹಿರನಾಗಾಂವ ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಗಡಿಗೌಂಡಗಾವದ ಶ್ರೀ ಶಾಂತವಿರ ಶಿವಾಚಾರ್ಯ, ಶ್ರೀ ಚನ್ನಮಲ್ಲ ದೇವರು, ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯ, ಶ್ರೀ ಮುರುಘೇಂದ್ರ ಸ್ವಾಮೀಜಿ, ಸಿ.ಇ. ಹಳೆದ ಮಾತನಾಡಿದರು.

ಸಾಯಗಾಂವದ ಶ್ರೀ ಶಿವಾನಂದ ಸ್ವಾಮೀಜಿ, ಜಿಪಂ ಸದಸ್ಯ ಸುಧೀರ ಕಾಡಾದಿ, ಲತಾ ಹಾರಕೂಡೆ, ಎಐಸಿಸಿ ಸದಸ್ಯ ಆನಂದ ದೇವಪ್ಪ, ಶಿವರಾಜ ನರಶೆಟ್ಟಿ ಉಪಸ್ಥಿತರಿದ್ದರು. ಕಲಬುರಗಿಯ ಪ್ರೀತಿ ಪಾಟೀಲ್ ಭರತನಾಟ್ಯ ಗಮನ ಸೆಳೆಯಿತು.



ಹುಲಸೂರದಲ್ಲಿ ಸೋಮವಾರ ರಾತ್ರಿ ಏರ್ಪಡಿಸಿದ್ದ ಶರಣ ಸಂಸ್ಕೃತಿ ಉತ್ಸವ, ಶ್ರೀ ಬಸವಕುಮಾರ ಶಿವಯೋಗಿಗಳ ಸ್ಮರಣೋತ್ಸವ ಸಮಾರೋಪದಲ್ಲಿ ಜಿಲ್ಲಾ ಮಠಾಧೀಶರ ಒಕ್ಕೂಟದಿಂದ ಶ್ರೀ ಡಾ.ಶಿವಾನಂದ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು. ಶ್ರೀ ಶಾಂತವೀರ ಶಿವಾಚಾರ್ಯ, ಶ್ರೀ ಶಿವಯೋಗೀಶ್ವರ ಸ್ವಾಮೀಜಿ, ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ಶಿವಾನಂದ ಸ್ವಾಮೀಜಿ, ಜಿಪಂ ಸದಸ್ಯ ಸುಧೀರ ಕಾಡಾದಿ, ಲತಾ ಹಾರಕೂಡೆ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 27 ಜನವರಿ 2021
27 JANUARY 2021

Scanned with OKEN Scanner

ಕಲ್ಯಾಣದಿಂದ ಗೋರ್ಟಾವರೆಗೆ ಬಸವಪರ ಸಂಘಟನೆಗಳಿಂದ ಪಾದಯಾತ್ರೆ

ಗೋರ್ಟಾ ಸ್ಮಾರಕ ಪೂರ್ಣ ಮಾಡಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಐತಿಹಾಸಿಕ ಗೋರ್ಟಾ(ಬಿ) ಗ್ರಾಮದಲ್ಲಿನ ಹುತಾತ್ಮ ಸ್ಮಾರಕ ಕಾಮಗಾರಿ ಪೂರ್ಣಗೊಳಿಸುವಂತೆ ಒತ್ತಾಯಿಸಿ ಬಸವಕಲ್ಯಾಣದಿಂದ ಗೋರ್ಟಾ ಗ್ರಾಮದ ಸ್ಮಾರಕ ಸ್ಥಳದವರೆಗೆ ಭಾನುವಾರ ಬಸವಪರ ಸಂಘಟನೆಗಳಿಂದ ಪಾದಯಾತ್ರೆ ನಡೆಸಲಾಯಿತು.

ಹೈದರಾಬಾದ್ ಕರ್ನಾಟಕ ವಿಮೋಚನೆಗಾಗಿ ಹೋರಾಡಿ ತ್ಯಾಗ, ಬಲಿದಾನ ಗೈದ ವೀರರಿಗೆ ಗೌರ ಸಲ್ಲಿಸಲು ಸ್ಮಾರಕ ಹಾಗೂ ಸರ್ದಾರ್ ವಲ್ಲಾಭಾಯಿ ಪಟೇಲರ್ ಕಂಚಿನ ಪ್ರತಿಮೆ ಸ್ಥಾಪನೆಗೆ ಆರು ವರ್ಷದ ಹಿಂದೆ ಅಂದಿನ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ ಅಡಿಗಲ್ಲು ನೆರವೇರಿಸಿದ್ದರು. ಆದರೆ ಇದುವರೆಗೆ ಪೂರ್ಣಗೊಳಿಸದೆ ಮಾತು ತಪ್ಪಲಾಗಿದೆ ಎಂದು ಪಾದಯಾತ್ರಿಗಳು ಆಕ್ರೋಶ ವ್ಯಕ್ತಪಡಿಸಿದರು.

ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಭಾನುವಾರ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹಾಗೂ ಬಿಡಿಪಿಸಿ ಅಧ್ಯಕ್ಷ ಅನೀಲ ರಗಟೆ ಪಾದಯಾತ್ರೆಗೆ ಚಾಲನೆ ನೀಡಿದರು. ಶ್ರೀಗಳು ಮಾತನಾಡಿ, ಹುತಾತ್ಮರ ಸ್ಮರಣಾರ್ಥ ಬಿಜೆಪಿ ಯುವ ಮೋರ್ಚಾದಿಂದ ಗೋರ್ಟಾದಲ್ಲಿ ಆರಂಭಿಸಿರುವ ಸ್ಮಾರಕ ನಿರ್ಮಾಣ ಕೆಲಸ ಶೀಘ್ರದಲ್ಲಿ ಪೂರ್ಣಗೊಳಿಸಬೇಕು ಎಂದರು.

ಹುತಾತ್ಮರಿಗೆ ಸ್ಮಾರಕ ಕಟ್ಟುತ್ತೇನೆ ಎಂದು ಹೇಳಿ ಕೈ ಬಿಡುವುದು ಅವರಿಗೆ ಮಾಡುವ ಅವಮಾನವೇ ಸರಿ. ಆದ್ದರಿಂದ ಈ ಭಾಗದ ಸಂಘಟನೆಗಳ ಮನವಿಗೆ ಶೀಘ್ರ ಸ್ಪಂದಿಸಬೇಕು ಎಂದರು.

ಯುವ ಮುಖಂಡ ಶಿವಕುಮಾರ ಬಿರಾದಾರ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಷಾ ಅವರು ಯಾವುದೇ ಕಾಮಗಾರಿ ತೆಗೆದುಕೊಂಡರೂ ಪೂರ್ಣಗೊಳಿಸದೆ ಬಿಡುವುದಿಲ್ಲ. ಆದರೆ ಗೋರ್ಟಾ ಸ್ಮಾರಕ ಅವರು ಶೀಘ್ರ ಪೂರ್ಣಗೊಳಿಸುವ ವಿಶ್ವಾಸ ನಮ್ಮಲ್ಲಿದೆ ಎಂದು ಹೇಳಿದರು.



ಹುತಾತ್ಮ ಸ್ಮಾರಕ ಕಾಮಗಾರಿ ಪೂರ್ಣಗೊಳಿಸುವಂತೆ ಒತ್ತಾಯಿಸಿ ಬಸವಕಲ್ಯಾಣದಿಂದ ಗೋರ್ಟಾವರೆಗೆ ಹಮ್ಮಿಕೊಂಡ ಪಾದಯಾತ್ರೆಗೆ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹಾಗೂ ಬಿಡಿಪಿಸಿ ಅಧ್ಯಕ್ಷ ಅನಿಲ ರಗಟೆ ಚಾಲನೆ ನೀಡಿದರು. ಸುಭಾಷ ಹೊಳಕುಂದೆ, ಡಾ.ಜಿ.ಎಸ್.ಭುರಳೆ, ಡಾ.ಪೃಥ್ವಿರಾಜ ಬಿರಾದಾರ, ಶಿವಕುಮಾರ ಬಿರಾದಾರ, ಬಸ್ಸು ಕೋರಕೆ, ರವಿ ಕೋಳಕೂರ, ಸಂಗಮೇಶ ಔಸೆ, ತುಕಾರಾಮ ಕಾಳೇಕರ, ಸಂಜು ಮೆಟಗೆ, ಪ್ರದೀಪ ಪಾಟೀಲ್, ನೀಲೇಶ ಖೂಬಾ ಇತರರಿದ್ದರು.

ನಿವೃತ್ತ ಟಿಎಚ್‌ಒ ಡಾ.ಜಿ.ಎಸ್.ಭೂರಳೆ, ವೈದ್ಯ ಡಾ.ಪೃಥ್ವಿರಾಜ ಬಿರಾದಾರ ಮಾತನಾಡಿದರು. ಬಿಡಿಪಿಸಿ ಉಪಾಧ್ಯಕ್ಷ ಅಶೋಕ ನಾಗರಾಳೆ, ಕಾರ್ಯದರ್ಶಿ ರೇವಣಪ್ಪ ಕೋಶಾಧ್ಯಕ್ಷ ಸುಭಾಷ ಹೊಳಕುಂದೆ, ನಿರ್ದೇಶಕ ಜಗನ್ನಾಥ ಖೂಬಾ, ಸೋಮಶೇಖರ ವಸ್ತದ, ಯುವ ಮುಖಂಡರಾದ ಶಿವಕುಮಾರ ಬಿರಾದಾರ, ಬಸ್ಸು ಕೋರಕೆ, ಪ್ರಮುಖರಾದ ರವಿ ಕೋಳಕೂರ, ಸಂಗಮೇಶ ಔಸೆ, ಸಂಜು ಮೆಟಗೆ, ಪ್ರದೀಪ ಪಾಟೀಲ್, ನಿಲೇಶ ಖೂಬಾ, ತುಕಾರಾಮ ಕಾಳೇಕರ, ಶಿವಕುಮಾರ ಅಗ್ರೆ, ಸಂಗಮೇಶ ಪಾಟೀಲ್, ಪ್ರವೀಣ ಮಹಾಜನ, ಜಗದೀಶ ಪಾಟೀಲ್, ಸಂಗಮೇಶ ಸಜ್ಜನಶೆಟ್ಟಿ, ಸಂತೋಷ ತಣುರೆ, ಅನೀಲ ಸಕ್ಕರಭಾವಿ, ವೀರೇಶ ಬೋರ್ಗೆ, ಸಂಜು ಶಾಶೆಟ್ಟಿ, ಶಿವ ಕುದರೆ, ಲಿಂಗರಾಜ ಪಾಟೀಲ್, ಕಾರ್ತಿಕ ಬಿರಾದಾರ, ವೀರೇಶ ಮಡಿವಾಳ ಇತರರಿದ್ದರು.

ನಗರದ ಪ್ರಮುಖ ರಸ್ತೆ ಮಾರ್ಗವಾಗಿ ನಡೆದ ಪಾದಯಾತ್ರೆಗೆ ಹೊರವಲಯದ ಬಸವನಗರ, ತಾಲೂಕಿನ ಯಾದಲಾಪುರ, ಧನ್ನೂರ ಸೇರಿ ವಿವಿಧ ಗ್ರಾಮಸ್ಥರು ಸ್ವಾಗತಿಸಿದರು.

ಯುವಕರಲ್ಲಿ ಸಂಘಟನೆ ಇರುತ್ತದೆ. ಯುವ ಶಕ್ತಿ ಒಂದಾಗಿ ಮುಂದೆ ಬಂದರೆ ಯಾವುದೇ ಕೆಲಸ ಆಗುತ್ತವೆ. ಅಭಿವೃದ್ಧಿಗೆ ಸದಾ ನಮ್ಮ ಬೆಂಬಲ ನೀಡುತ್ತೇವೆ. ಗೋರ್ಟಾದಲ್ಲಿ ಅಪೂರ್ಣ ಕಾಮಗಾರಿ ಪೂರ್ಣಗೊಳಿಸಲು ಸಂಬಂಧಿತರು ಮುಂದಾಗಬೇಕು.

| ಡಾ.ಜಿ.ಎಸ್ ಭುರಳೆ ಮಕ್ಕಳ ತಜ್ಞ

ಜೀವನದಲ್ಲಿ ಉತ್ತಮ ಆರೋಗ್ಯ ಮುಖ್ಯ

ಅಭಿನವ ಘನಲಿಂಗ ಶ್ರೀ ನುಡಿ | ಉಚಿತ ಅಕ್ಯುಪ್ರೆಶರ್, ವೈಬ್ರೇಶನ್ ಥೆರಪಿ ಶಿಬಿರ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಂಪೂರ್ಣ ದೈಹಿಕ ಮಾನಸಿಕ ಮತ್ತು ಸಾಮಾಜಿಕ ಸುಸ್ಥಿತಿಗೆ ಆರೋಗ್ಯ ಅವಶ್ಯಕ ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಅಲ್ಲಮಪ್ರಭು ದೇವರ ಗದ್ದುಗೆ ಮಠದಲ್ಲಿ 1ರಿಂದ 7ರ ವರೆಗೆ ನಡೆಯಲಿರುವ ಉಚಿತ ಅಕ್ಯುಪ್ರೆಶರ್, ವೈಬ್ರೇಶನ್ ಥೆರಪಿ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಸುಖಿ ಜೀವನಕ್ಕೆ ಆರೋಗ್ಯವೇ ಮುಖ್ಯ. ಆರೋಗ್ಯ ನಮಗೆ ಸದಾ ಸಂತೋಷ, ಭೌತಿಕ, ಮಾನಸಿಕ, ಸಾಮಾಜಿಕ ನೆಮ್ಮದಿ ನೀಡುತ್ತದೆ. ಸಮತೋಲನ ಆಹಾರ, ದೈನಂದಿನ ವ್ಯಾಯಾಮ, ಸ್ವಚ್ಛ ನೀರು ಸೇವನೆ, ನಿದ್ರೆ, ವಿಶ್ರಾಂತಿ ಆರೋಗ್ಯದ ಗುಟ್ಟು ಎಂದರು.

ಜೋತಪುರದ ಡಾ.ಸುರೇಶ ವೈಷ್ಣವ ಮಾತನಾಡಿ, ಅಕ್ಯುಪ್ರೆಶರ್, ವೈಬ್ರೇಶನ್ ಥೆರಪಿ ಚಿಕಿತ್ಸೆ ಕುರಿತು ಮಾಹಿತಿ ನೀಡಿದರು. ಅಧ್ಯಕ್ಷತೆ ವಹಿಸಿದ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಕೋಶಾಧ್ಯಕ್ಷ ಸುಭಾಷ ಹೊಳಕುಂದೆ ಅವರು ಶ್ರೀಗಳಿಗೆ ಸನ್ಮಾನಿಸಿದರು.



ಬಸವಕಲ್ಯಾಣದಲ್ಲಿ ಹಮ್ಮಿಕೊಂಡ ಉಚಿತ ಆರೋಗ್ಯ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಬಿಡಿಪಿಸಿ ಕೋಶಾಧ್ಯಕ್ಷ ಸುಭಾಷ ಹೊಳಕುಂದೆ ಸನ್ಮಾನಿಸಿದರು. ಡಾ.ಸುರೇಶ ವೈಷ್ಣವ, ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂದಿ, ರೇವಣಸಿದ್ದಯ್ಯ ಮಠಪತಿ, ಡಾ.ಬಿ.ವಿ.ರೆಡ್ಡಿ, ವಿಜಯಕುಮಾರ ಕನಾಡೆ, ಎ.ಜಿ ಪಾಟೀಲ್ ಇತರರಿದ್ದರು.

ಮಲ್ಲಿಕಾರ್ಜುನ ಕುರುಕೋಟೆ ಅವರಿಂದ ಡಾ ಸುರೇಶ ಅವರನ್ನು ಸನ್ಮಾನಿಸಲಾಯಿತು. ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂದಿ, ರೇವಣಸಿದ್ದಯ್ಯ ಮಠಪತಿ, ವಿಜಯಕುಮಾರ ಕನಾಡೆ, ಎ.ಜಿ ಪಾಟೀಲ್, ಡಾ.ಬಿ.ವಿ.ರೆಡ್ಡಿ ಇತರರಿದ್ದರು.

ಸದುಪಯೋಗ ಪಡೆಯಿರಿ: ಬಿಡಿಪಿಸಿ ಕೋಶಾಧ್ಯಕ್ಷ ಸುಭಾಷ ಹೊಳಕುಂದೆ, ಸಹಕಾರ್ಯದರ್ಶಿ ಬಸವರಾಜ ಬಾಲಿಕಿಲೆ, ರೇವಣಸಿದ್ದಯ್ಯ ಮಠಪತಿ ಹಾಗೂ ಬಸವಂತಪ್ಪ ಲವಾರೆ ಅವರಿಂದ ಉಚಿತ ಆರೋಗ್ಯ ಶಿಬಿರ ಆಯೋಜಿಸಿದ್ದು, ಶಿಬಿರದಲ್ಲಿ ಒಂದು ವಾರ ಉಚಿತ ಆಕ್ಯುಪ್ರೆಶರ್ ಮ್ಯಾಗ್ನೆಟಿಕ್ ಮತ್ತು ವೈಬ್ರೇಶನ್ ಥೆರಪಿ ಚಿಕಿತ್ಸೆ ನೀಡಲಾಗುತ್ತಿದೆ. ಸಾರ್ವಜನಿಕರು ಶಿಬಿರದ ಲಾಭ ಪಡೆಯಬೇಕು ಎಂದು ಆಯೋಜಕರು ಕೋರಿದ್ದಾರೆ.

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಗುರುವಾರ 28 ಜನವರಿ 2021
28 JANUARY 2021

ಅರಿವು ಆಚಾರ ಸಂಕಲ್ಪ ಪಾದಯಾತ್ರೆ ಆರಂಭ

ಬಸವಕಲ್ಯಾಣದ ಅರಿವಿನ ಮನೆಯಿಂದ ಚಾಲನೆ | ಶ್ರೀ ಬಸವಪ್ರಭು ಸ್ವಾಮೀಜಿ ನೇತೃತ್ವ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಭ್ರಷ್ಟಾಚಾರ ಮುಕ್ತ ಸ್ವಸ್ಥಸಮಾಜ ನಿರ್ಮಾಣಕ್ಕಾಗಿ ಜನ ಜಾಗೃತಿ ಮೂಡಿಸುವ ಆಶಯದೊಂದಿಗೆ ಶ್ರೀ ಬಸವಪ್ರಭು ಸ್ವಾಮೀಜಿ ಅವರಿಂದ ತಾಲೂಕಿನಲ್ಲಿ ನಡೆಯಲಿರುವ ಅರಿವು ಆಚಾರ ಸಂಕಲ್ಪ ಪಾದಯಾತ್ರೆಗೆ ಬುಧವಾರ ಚಾಲನೆ ನೀಡಲಾಯಿತು.

ದುಶ್ಚಟಗಳ ಭಿಕ್ಷೆ ಸದ್ಗುಣಗಳ ದೀಕ್ಷೆ ಎನ್ನುವ ಘೋಷ್ಯ ವಾಕ್ಯದೊಂದಿಗೆ ನಡೆಯಲಿರುವ ಪಾದಯಾತ್ರೆ ವೇಳೆ ತಾಲೂಕಿನ ಪ್ರತಿ ಹಳ್ಳಿಗಳಿಗೂ ಒಂದು ದಿನದಂತೆ ಸಂಚರಿಸಿ ಗ್ರಾಮದಲ್ಲಿ ಸಭೆ, ಚರ್ಚೆ, ಸಂವಾದಗಳ ಮೂಲಕ ಜನರಲ್ಲಿ ಅರಿವು ಮೂಡಿಸುವ ಕಾರ್ಯ ನಡೆಯಲಿದೆ.

ಅರಿವಿನ ಮನೆ ಪರಿಸರದಲ್ಲಿ ಗುರುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿದ ಬಸವ ಮಹಾಮನೆ ಸಂಸ್ಥೆ ಅಧ್ಯಕ್ಷ ಶ್ರೀ ಸಿದ್ಧರಾಮ ಶರಣರು ಬೆಲ್ದಾಳ ಮಾತನಾಡಿ, ಮನುಷ್ಯನಿಗೆ ಜೀವನದಲ್ಲಿ ಅಂತರಂಗದಲ್ಲಿ ಅರಿವು ಜತೆಗೆ ಆಚಾರ ವಿಚಾರ ಅವಶ್ಯ. ಈ ಕುರಿತು ಅರಿವು ಮೂಡಿಸಲು ಶ್ರೀ ಬಸವಪ್ರಭು ಸ್ವಾಮೀಜಿ ಪಾದಯಾತ್ರೆ ಹಮ್ಮಿಕೊಂಡಿರುವುದು ಸ್ವಾಗತಾರ್ಹ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ವಿಜಯವಾಣಿ ಚಿತ್ರ

ಶ್ರೀ ಬಸವಪ್ರಭು ಸ್ವಾಮೀಜಿ ಅವರಿಂದ ಹಮ್ಮಿಕೊಂಡಿರುವ ಅರಿವು ಆಚಾರ ಸಂಕಲ್ಪ ಪಾದಯಾತ್ರೆಗೆ ಬಸವಕಲ್ಯಾಣದಲ್ಲಿ ಬುಧವಾರ ಚಾಲನೆ ನೀಡಲಾಯಿತು. ಶ್ರೀ ಸಿದ್ಧರಾಮ ಶರಣರು ಬೆಲ್ದಾಳ, ಶ್ರೀ ಅಭಿನವ ಶ್ರೀ, ಶ್ರೀ ಪಂಚಾಕ್ಷರಿ ಸ್ವಾಮೀಜಿ, ಶ್ರೀ ಶಿವಲಿಂಗ ಸ್ವಾಮಿ ಇತರರಿದ್ದರು.

ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಅತ್ಯಂತ ಪವಿತ್ರ ಸ್ಥಳವಾದ ಅರಿವಿನ ಮನೆ ಮೂಲಕವೇ ಯಾತ್ರೆ ಆರಂಭಿಸುತ್ತಿದ್ದು, ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ಪಾದಯಾತ್ರೆ ಉದ್ದೇಶ ತಿಳಿಸಿದರು. ಸಂಯೋಜಕ ಗಣೇಶ ಪಾಟೀಲ್ ಪ್ರಾಸ್ತಾವಿಕ ಮಾತನಾಡಿದರು. ಬೇಲೂರಿನ ಶ್ರೀಪಂಚಾಕ್ಷರಿ ಸ್ವಾಮೀಜಿ, ಶಿವಲಿಂಗ ಸ್ವಾಮಿ, ಅನಿಮಿಷಾನಂದ ಸ್ವಾಮಿ, ಸುಜ್ಞಾನಿದೇವಿ, ಪೂಜ್ಯ ಚಿತ್ರಮ್ಮ ತಾಯಿ, ಕಾಂತ ಸ್ವಾಮಿ, ಬಂಡೆಪ್ಪ ಹಜನಾಳ, ಹಿರಿಯ ನ್ಯಾಯವಾದಿ ಗಂಗಶೆಟ್ಟಿ ಪಾಟೀಲ್, ಸಂಜು ಗಾಯಕವಾಡ, ಶ್ರೀದೇವಿ ಉಜಳಂಬೆ, ಸುಮಿತ್ರಾ ಆರ್.ದಾವಣಗಾವೆ, ಗುರುದೇವಿ ಆನಿಮಠ, ಬಸವರಾಜ ಹೊನ್ನಾ ಇತರರಿದ್ದರು. ಆಶಾರಾಣಿ ವಂದಿಸಿದರು. ಗುರುಪ್ರಸಾದ ಪಂಡಿತ ನಿರೂಪಣೆ ಮಾಡಿದರು.

ದಿನದ ದಿನಚರಿ

ಬೆಳಗ್ಗೆ ಶಾಲೆಗೆ ಭೇಟಿ, ವಿದ್ಯಾರ್ಥಿಗಳೊಂದಿಗೆ ಸಂವಾದ, 11ಕ್ಕೆ ಮಠಕ್ಕೆ ಭೇಟಿ, 12ಕ್ಕೆ ಗ್ರಾಪಂಗೆ ಭೇಟಿ, 1ಕ್ಕೆ ಊರಿನ ಪ್ರಮುಖರ ಭೇಟಿ ಮತ್ತು ಕಾರ್ಯಕ್ರಮ ಆಯೋಜನೆ, 2ಕ್ಕೆ ಪ್ರಸಾದ, 3ಕ್ಕೆ ಸಾರ್ವಜನಿಕ ಸ್ಥಳ ಸ್ವಚ್ಛತೆ, 4ಕ್ಕೆ ಹಳ್ಳಿ ಕಟ್ಟಿ ಊರಿನ ಹಿರಿಯರ ಜತೆ ಮಾತುಕತೆ, 5ಕ್ಕೆ ಪ್ರಭಾತ ಪೇರಿ, 6ಕ್ಕೆ ಕಾರ್ಯಕ್ರಮ, 9ಕ್ಕೆ ಲಘು ಉಪಹಾರ, 9:30 ವಿಶ್ರಾಂತಿ

ಸ್ವಾರ್ಥಕ್ಕಾಗಿ ಪಾದಯಾತ್ರೆ ಹಮ್ಮಿಕೊಂಡಿಲ್ಲ. ಧರ್ಮಕಾರಣದಿಂದ ಸಮಾಜಕಾರಣಕ್ಕೆ ನನ್ನನ್ನು ನಾನು ಪರಿವರ್ತನೆ ಮಾಡಿಕೊಂಡಿದ್ದು, ಸ್ವಾಸ್ಥ್ಯ ಮತ್ತು ಸಮೃದ್ಧ ಸಮಾಜ ನಿರ್ಮಾಣ ಸಂಬಂಧ ಜಾಗೃತಿ ಮೂಡಿಸುವದೇ ಪಾದಯಾತ್ರೆಯ ಆಶಯ.

ಶ್ರೀ ಬಸವಪ್ರಭು ಸ್ವಾಮೀಜಿ

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 9 ಫೆಬ್ರವರಿ 2021
9 FEBRUARY 2021

ಸತ್ಯದ ತಳಹದಿಯೇ ಸಾಹಿತ್ಯಕ್ಕೆ ಭದ್ರ ಬುನಾದಿ

ಡಾ.ಟಿ.ಎಂ.ಭಾಸ್ಕರ್ ವಿಶ್ಲೇಷಣೆ | ಸಸ್ತಾಪುರದಲ್ಲಿ ಬೀದರ್ ಜಿಲ್ಲಾ ಪ್ರಥಮ ಕವಿ ಸಮ್ಮೇಳನ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸತ್ಯ ಮತ್ತು ಸತ್ವದ ಆಧಾರದಲ್ಲಿ ರಚನೆಯಾಗುವ ಸಾಹಿತ್ಯ ಶಾಶ್ವತವಾಗಿ ಉಳಿಯುತ್ತದೆ. ಗಟ್ಟಿ ಸಾಹಿತ್ಯಕ್ಕೆ ಸತ್ಯವೇ ಭದ್ರ ಬುನಾದಿ ಎಂದು ಧಾರವಾಡದ ಕರ್ನಾಟಕ ವಿವಿ ಪ್ರಾಧ್ಯಾಪಕ ಡಾ.ಟಿ.ಎಂ. ಭಾಸ್ಕರ್ ವಿಶ್ಲೇಷಿಸಿದರು.

ಸಸ್ತಾಪುರದಲ್ಲಿ ಶ್ರೀ ಸದ್ಗುರು ಯಲ್ಲಾಲಿಂಗೇಶ್ವರ ಪ್ರಭುಗಳ 35ನೇ ಪುಣ್ಯಸ್ಮರಣೆ, ಪೂಜ್ಯ ಶಿವಶರಣೆ ಮಹಾದೇವಿ ತಾಯಿ 56ನೇ ಜನ್ಮದಿನ ಹಾಗೂ ಬೀದರ್ ಜಿಲ್ಲಾ ಪ್ರಥಮ ಕವಿ ಸಮ್ಮೇಳನ ಉದ್ಘಾಟಿಸಿದ ಅವರು, ಸಾಹಿತಿಗಳು, ಕವಿಗಳು, ಬರಹಗಾರರು ಸತ್ಯದ ಆಧಾರದ ಮೇಲೆ ಜನರ ಬದುಕಿಗೆ ಬೆಳಕಾಗುವ ನಿಟ್ಟಿನಲ್ಲಿ ಸಾಹಿತ್ಯ, ಕಾವ್ಯ ರಚನೆಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.

» ಸಸ್ತಾಪುರದಲ್ಲಿ ಯಲ್ಲಾಲಿಂಗೇಶ್ವರರ ಪುಣ್ಯಸ್ಮರಣೆ, ಶಿವಶರಣೆ ಮಹಾದೇವಿ ತಾಯಿ ಜನ್ಮದಿನ

ಮನಸ್ಸಿನ ಮೈಲಿಗೆ ತೊಳೆಯುವ ವೈಶಿಷ್ಟ್ಯ ಸಾಹಿತ್ಯಕ್ಕಿದೆ. ಮನಸ್ಸು ಮತ್ತು ಸಮಾಜ ಸ್ವಚ್ಛಗೊಳಿಸುವ ಶಕ್ತಿ ಸಾಹಿತ್ಯಕ್ಕಿದೆ. ಶ್ರೀ ಯಲ್ಲಾಲಿಂಗ ಪ್ರಭುಗಳ ಪುಣ್ಯಸ್ಮರಣೆ ನಿಮಿತ್ತ ಪ್ರತಿವರ್ಷ ಸಮ್ಮೇಳನ ಆಯೋಜಿಸಿ, ಈ ಭಾಗದ ಜನರಲ್ಲಿ ಸಾಹಿತ್ಯಾಸಕ್ತಿ ಮೂಡಿಸುವ ಜತೆಗೆ ಸಾಹಿತಿಗಳು, ಬರಹಗಾರರಿಗೆ ಪ್ರೋತ್ಸಾಹಿಸುವ ಕಾರ್ಯ ಶ್ಲಾಘಿಸಿದರು.

ಸಮ್ಮೇಳನಾಧ್ಯಕ್ಷ ಸಾಹಿತಿ ಎಂ.ಜಿ. ಗಂಗನಪಳ್ಳಿ ಮಾತನಾಡಿ, ಸಂಸ್ಕೃತಕ್ಕೆ ವಾಲ್ಮೀಕಿ, ಹಳೆಗನ್ನಡಕ್ಕೆ ಪಂಪ, ಹೊಸಗನ್ನಡಕ್ಕೆ ಕುವೆಂಪು ಗುರು ಕವಿಗಳಾದರೆ, ಬೇಂದ್ರೆ ಜನಪದ ಗಾರುಡಿಗ ಕವಿ. ಕಾವ್ಯ ನವೋದಯ ಕಾಲಘಟ್ಟದಿಂದ ಬಂಡಾಯದ ಕಾಲ ಘಟ್ಟದವರಿಗೂ ಹರಿದು ವಿಸ್ತರಿಸಿದೆ. ಚುಟುಕು ಕಾವ್ಯ ವಿಶಿಷ್ಟವಾಗಿ ಮೂಡಿಬಂದಿದೆ. ಗದ್ಯ ಸಾಹಿತ್ಯಕ್ಕಿಂತ ಪದ್ಯ ಸಾಹಿತ್ಯ ನಮ್ಮಲ್ಲಿ ವಿಪುಲವಾಗಿ ಬೆಳೆದು ಬರುತ್ತಿದೆ ಎಂದರು.

ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಬೇಲೂರಿನ ಶ್ರೀ ಪಂಚಾಕ್ಷರಿ ಸ್ವಾಮೀಜಿ ಆಶೀರ್ವಚನ ನೀಡಿದರು. ಸಸ್ತಾಪುರದ ಶ್ರೀ ಶಿವಶರಣೆ ಮಹಾದೇವಿ ತಾಯಿ ನೇತೃತ್ವ, ಶ್ರೀ ರತ್ನಾಕರ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ತಾಪಂ ಸದಸ್ಯ ಬಾಲಾಜಿ ರೆಡ್ಡಿ, ಗ್ರಾಪಂ ಅಧ್ಯಕ್ಷೆ ವಿಜಯಲಕ್ಷ್ಮೀ ಪ್ರಕಾಶ, ಸಾಹಿತಿಗಳಾದ ಹನುಮಂತರಾವ ದೊಡ್ಡಮನಿ, ಡಾ.ಜಯದೇವಿ ಗಾಯಕವಾಡ, ಪ್ರಮುಖರಾದ ನಾಗನಾಥ ಚಾಮಾಲೆ, ಬಾಬುರೆಡ್ಡಿ ಚಾಮಾಲೆ, ಪ್ರಾಚಾರ್ಯ ನಾಗೇಂದ್ರ ಢೋಲೆ, ಶಿಕ್ಷಕ ಶರಣಪ್ಪ ಗದಲೇಗಾಂವ, ನಾಗಪ್ಪ ನಿಣ್ಣೆ ಇತರರಿದ್ದರು.

ಸಮ್ಮೇಳನ ಸಂಯೋಜಕ ಡಾ.ಗವಿಸಿದ್ಧಪ್ಪ ಪಾಟೀಲ್ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು, ಜೈಭೀಮ ಹೊಳಿಕೇರಿ ನಿರೂಪಣೆ ಮಾಡಿದರು. ಅವಿನಾಶ ದೇವನೂರ ವಂದಿಸಿದರು.

ಸಮ್ಮೇಳನಾಧ್ಯಕ್ಷರ ಬದುಕು ಬರಹ ಉಪನ್ಯಾಸ: ನಂತರ ಸಮ್ಮೇಳನಾಧ್ಯಕ್ಷರ ಬದುಕು ಬರಹ ಮತ್ತು ಜಿಲ್ಲಾ ಕಾವ್ಯ ಪರಂಪರೆ ಕುರಿತು ವಿಶೇಷ ಉಪನ್ಯಾಸ ಜರುಗಿತು. ಸರ್ವಾಧ್ಯಕ್ಷರ ಬದುಕು ಬರಹ ಕುರಿತು ಚಿಂತಕಿ ಡಾ.ಜಯದೇವಿ ಗಾಯಕವಾಡ ಮಾತನಾಡಿ, ಸಾಹಿತಿ ಎಂ.ಜಿ.ಗಂಗನಪಳ್ಳಿ ಜಿಲ್ಲೆಯ ಹಿರಿಯ ಕವಿ, ಸಾಹಿತಿ, ಕವಿಯಾಗಿದ್ದಾರೆ. ಅವರು ಹೊಸ ಹೊಸ ಕಾವ್ಯ ಪ್ರಯೋಗಶೀಲ ಕವಿ. ಸೃಜನಶೀಲ, ಸಂವೇದನಾ ಶೀಲ ಬರಹಗಾರರು. ಬದುಕಿದಂತೆ ಬರೆದ ಕವಿ ಎಂದು ಗುಣಗಾನ ಮಾಡಿದರು.



ಸಸ್ತಾಪುರದಲ್ಲಿ ಶ್ರೀ ಯಲ್ಲಾಲಿಂಗೇಶ್ವರ ಪ್ರಭುಗಳ ಪುಣ್ಯಸ್ಮರಣೆ, ಪೂಜ್ಯ ಶಿವಶರಣೆ ಮಹಾದೇವಿ ತಾಯಿ ಜನ್ಮದಿನ ಹಾಗೂ ಬೀದರ್ ಜಿಲ್ಲಾ ಪ್ರಥಮ ಕವಿ ಸಮ್ಮೇಳನವನ್ನು ಧಾರವಾಡದ ಕರ್ನಾಟಕ ವಿವಿ ಪ್ರಾಧ್ಯಾಪಕ ಡಾ.ಟಿ.ಎಂ. ಭಾಸ್ಕರ್ ಉದ್ಘಾಟಿಸಿದರು. ಸಾಹಿತಿ ಎಂಜಿ.ಗಂಗನಪಳ್ಳಿ, ಅಭಿನವ ಘನಲಿಂಗ ಶ್ರೀ ಇತರರಿದ್ದರು.

> **ಭಾಷೆ ನಮ್ಮ ಸಂಸ್ಕೃತಿ ಪೋಷಣೆಗೆ ನೆರವಾಗುತ್ತದೆ. ತಾಯಿ ತಂದೆಯನ್ನು ಪ್ರೀತಿಸದ, ಗೌರವಿಸದ ಮಗ ಯಾವತ್ತೂ ದೊಡ್ಡವನಾಗಲಾರ. ವೃದ್ಧಾಶ್ರಮಗಳು ಹುಟ್ಟುತ್ತಿರುವುದು ನಮ್ಮ ಸಂಸ್ಕೃತಿಯ ದಿವಾಳಿತನದ ಪ್ರತೀಕ. ಆಳವಾದ ಬೇರಿಲ್ಲದೆ ಮರ ಬೆಳೆಯಲಾರದು. ಭಾಷೆ ಮೊದಲು, ನಂತರ ಶಾಸ್ತ್ರ. ಜಗತ್ತನ್ನು ಪ್ರೀತಿಸಬಲ್ಲವ ಕವಿಯಾಗಬಲ್ಲ**
>
> **| ಎಂ.ಜಿ.ಗಂಗನಪಳ್ಳಿ**
> **ಬೀದರ್ ಜಿಲ್ಲಾ ಪ್ರಥಮ ಕವಿ ಸಮ್ಮೇಳನಾಧ್ಯಕ್ಷ**

ಅದ್ದೂರಿ ಮೆರವಣಿಗೆ: ಸಸ್ತಾಪುರದಲ್ಲಿ ಶ್ರೀ ಸದ್ಗುರು ಯಲ್ಲಾಲಿಂಗ ಪ್ರಭುಗಳ ಭಾವಚಿತ್ರದ ಮೆರವಣಿಗೆ ಅದ್ದೂರಿಯಾಗಿ ಜರುಗಿತು. ಡೊಳ್ಳಿನ ತಂಡದವರು ಮತ್ತು ಜನಪದ ಕಲಾವಿದರ ಪ್ರದರ್ಶನ ಮೆರವಣಿಗೆಗೆ ಮೆರಗು ನೀಡಿತು. ಪೂಜ್ಯ ಮಹಾದೇವಿ ತಾಯಿ, ಪ್ರಮುಖರಾದ ಬಾಬುರೆಡ್ಡಿ ಚಾಮಾಲೆ, ಪ್ರಕಾಶ ಪಾಟೀಲ್, ಬಾಬು ಮಾಲಿ ಪಾಟೀಲ್, ಸಿದ್ರಾಮೇಶ್ವರ, ಕೃಷ್ಣಪ್ಪ ಮಿರ್ಜಾಪುರ, ವಿಠ್ಠಲ್ ಮಿರ್ಜಾಪುರ, ಕಾಶಪ್ಪ, ಕಲ್ಲಪ್ಪ, ಮಹಾದೇವರೆಡ್ಡಿ, ಪಾಂಡುರಂಗ ಮೂಳೆ, ಸಮ್ಮೇಳನ ಸಂಯೋಜಕ ಡಾ.ಗವಿಸಿದ್ಧಪ್ಪ ಪಾಟೀಲ್, ಪ್ರಾಚಾರ್ಯ ನಾಗೇಂದ್ರ ಢೋಲೆ, ಶರಣಪ್ಪ ಗದಲೇಗಾಂವ ಇತರರು ಪಾಲ್ಗೊಂಡಿದ್ದರು. ಬಾನರಡ್ಡಿ ಟಿಕಾಲಿ ಪಟಸ್ಥಲ ದ್ವಜಾರೋಹಣ ನೆರವೇರಿಸಿದರು.

ಕನ್ನಡ ಕಡೆಗಣಿಸಿದರೆ ನಾಡಿನ ಉನ್ನತಿ ಅಸಾಧ್ಯ

ಕನ್ನಡವನ್ನು ಕಡೆಗಣಿಸಿ ಉನ್ನತಿ ಸಾಧಿಸಲಾಗದು. ಕನ್ನಡ ಹೆಚ್ಚೆಚ್ಚು ಕಲಿತು ನಾಡು ನುಡಿ ಋಣ ತೀರಿಸುವತ್ತ ಹೆಜ್ಜೆ ಹಾಕಿರಿ ಎಂದು ಹಿರಿಯ ಸಾಹಿತಿ, ಬೀದರ್ ಜಿಲ್ಲಾ ಪ್ರಥಮ ಕವಿ ಸಮ್ಮೇಳಾನಧ್ಯಕ್ಷ ಎಂ.ಜಿ. ಗಂಗನಪಳ್ಳಿ ಒತ್ತಾಸೆ ವ್ಯಕ್ತಪಡಿಸಿದರು.

ನಾನು 50 ವರ್ಷದ ಹಿಂದೆ ಕಾವ್ಯ ಬರೆಯಲು ತೊಡಗಿಸಿಕೊಂಡಿದ್ದೇನೆ. ಹಿಂದೆ ಕುವೆಂಪು ನನಗೆ ಕವಿ ಗುರು. ಅವರ ಕಾವ್ಯ ನನ್ನ ಮೇಲೆ ಪ್ರಭಾವ ಬೀರಿದೆ. ನೀವು ಕವಿಗಳಾಗಲು ಅಡ್ಡಿ ಇಲ್ಲ. ಕನ್ನಡ ಅನುಷ್ಠಾನ ಎಲ್ಲರ ಹೊಣೆ. ಗೋಕಾಕ್, ಮಹಾಜನ್, ಸರೋಜನಿ ಮಹಿಷಿ ವರದಿ ಯಥಾವತ್ ಜಾರಿಗೆ ಬರಲಿ, ಕರ್ನಾಟಕ ಬೆಳಗಲಿ. ನಾವು ನೀವು ಕವಿಗಳಾಗಿ ಬೆಳೆಯೋಣ ಎಂದರು.

ಜಂಜಡಗಳನ್ನು ಮೆಟ್ಟಬಲ್ಲ ಶಕ್ತಿ ಕವಿಗೆ ಇರಬೇಕು. ಭವದ ಬಂಧನ ತುಂಡರಿಸುವ ಶಕ್ತಿ ಅಧ್ಯಾತ್ಮ ಕವಿಗಳಿಗಿದೆ. ಕಾವ್ಯಕ್ಕೆ ನೆಲೆ ಅದು ಅಂತರಂಗದ ನೆಲೆ. ಕಾವ್ಯ ಬಾಹ್ಯ ತಡಕಾಟವಲ್ಲ. ಶಬ್ದದಾಚೆ ಧ್ವನಿ ಕಾವ್ಯದ ಇಂಗಿತ. ಕಾವ್ಯದ ಪ್ರಕಾರಗಳು ವೈವಿಧ್ಯಮಯವಾಗಿವೆ. ಭಾವ ಪ್ರವಾಹ ಸುಲಲಿತ ಆಗಬೇಕಾದರೆ, ಶಬ್ದಾರ್ಥ ಕೋಶದಲ್ಲಿ ಕವಿ ವಿವರಿಸಲೇಬೇಕು. ಭಾವಕ್ಕೆ ತಕ್ಕ ಕುಣಿತ ಭಣಿತಗಳಿಲ್ಲದೆ ಅದೆಂತೂ ಕಾವ್ಯ, ನವ್ಯ ಕಾವ್ಯಕ್ಕೂ ಸೂಕ್ಷ್ಮ ಗತ್ತು ಗೊತ್ತಿರಬೇಕು ಎಂದು ಅಭಿಪ್ರಾಯಪಟ್ಟರು.

ನಿರಂತರ ಅಭ್ಯಾಸ ಬರವಣಿಗೆಯ ಕ್ರಿಯಾಶೀಲತೆ ಕವಿಗಿರಬೇಕು. ನಾವು ಒಂದು ಪುಸ್ತಕವನ್ನು ಹತ್ತಾರು ಬಾರಿ ಓದಿದಾಗ ಹೆಚ್ಚು ಅರ್ಥವಾಗುತ್ತದೆ. ಕಲ್ಯಾಣ ಕರ್ನಾಟಕದ ಕವಿಗಳಿಗೆ ಅಭ್ಯಾಸದ ಕೊರತೆ ಇದೆ. ನಮ್ಮ ಭಾಗದಲ್ಲಿ ಪುಸ್ತಕ ಕೊಂಡು ಓದುವವರ ಸಂಖ್ಯೆ ಕಡಿಮೆ ಇದೆ. ಸಾಹಿತ್ಯ ರೆಡಿಮೇಡ್ ಫುಡ್ ಅಲ್ಲ. ಕವಿ ಮಾತು ಭಾವಗಮ್ಯವಾಗಿರಬೇಕು. ಕನ್ನಡ ಅಧ್ಯಯನದಿಂದ ಪೀಳಿಗೆ ಬೇರೆಡೆಗೆ ವಾಲುತ್ತಿರುವುದು ವಿಷಾದನೀಯ ಎಂದರು.

Scanned with OKEN Scanner

ಅಭಿನವ ಘನಲಿಂಗ ರುದ್ರಮುನಿ ಶ್ರೀ ನುಡಿ

ಮಾನಸಿಕ ಹುಟ್ಟುಹಬ್ಬ ಕಾರ್ಯಕ್ರಮ

ಸದ್ಭಾವನಾ ಚಿಂತನ ಸಭೆಯಲ್ಲಿ ಭಾಗಿ

ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸದ್ಭಾವನಾ ಚಿಂತನ ಸಭೆಯಲ್ಲಿ ಭಾಗವಹಿಸಿದ್ದರು.

- ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಭಗವಂತನ ಕುರಿತು ಚಿಂತನೆ ಮಾಡುವುದೇ ಸದ್ಭಾವ ಚಿಂತನ ಎಂದು ಗವಿಮಠ ಸಂಸ್ಥಾನದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ರಂಜಿ ಕಾಲನಿಯ ಶಿಕ್ಷಕರ ಸಂಘದ ತಾಲೂಕು ಉಪಾಧ್ಯಕ್ಷೆ ಅರುಣಾ ಚಂದ್ರಕಾಂತ ಸ್ವಾಮಿ ಅವರ ಮನೆಯಲ್ಲಿ ಹಮ್ಮಿಕೊಂಡ ಮನೆ-ಮನೆಯಲ್ಲಿ ಸದ್ಭಾವನಾ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕರೋನಾ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕಾರ್ಯಕ್ರಮ ಮೊಟಕುಗೊಳಿಸಲಾಗಿತ್ತು. ಇಂದಿಗ ಪುನಃ ಆರಂಭಿಸಲಾಗಿದೆ ಎಂದರು.

ತಹಸೀಲ್ದಾರ್ ಸಾವಿತ್ರಿ ಶರಣು ಸಲಗರ ಮಾತನಾಡಿ, ಆಧುನಿಕ ಜೀವನ ಪದ್ಧತಿಯಲ್ಲಿ ಮನುಷ್ಯನ ಮನಸ್ಸು ಪರಿವರ್ತನೆಯಾಗುತ್ತಿದೆ. ಮನಸ್ಸಿನ ಸಹಕಾರಿಯಾಗುತ್ತಿದೆ. ಕಾರ್ಯಕ್ರಮಗಳು ಅಭಿನವ ಶ್ರೀಗಳ ಸಾನ್ನಿಧ್ಯದಲ್ಲಿ ಪ್ರತಿ ತಿಂಗಳು ಪೂರ್ಣಿಮೆ ದಿನದಂದು ಸದ್ಭಾವನಾ ಚಿಂತನ ಸಭೆಯಲ್ಲಿ ಹಮ್ಮಿಕೊಂಡ ಮನೆ-ಮನೆಯಲ್ಲಿ ಸದ್ಭಾವನಾ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಶಿಕ್ಷಕರ ಸಂಘದ ತಾಲೂಕು ಉಪಾಧ್ಯಕ್ಷೆ ಅರುಣಾ ಚಂದ್ರಕಾಂತ ಸ್ವಾಮಿ, ತಹಸೀಲ್ದಾರ್ ಸಾವಿತ್ರಿ ಸಲಗರ, ಚಂದ್ರಕಾಂತ ಸ್ವಾಮಿ, ಪ್ರೊ.ಸೂರ್ಯಕಾಂತ ಶೀಲವಂತ ಇತರರಿದ್ದರು.

ಮನೆ-ಮನೆಯಲ್ಲಿ ಸದ್ಭಾವನಾ ಚಿಂತನ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿರುವುದಕ್ಕೆ ಸಂಘದ ತಾಲೂಕು ಅಧ್ಯಕ್ಷ ಜಗನ್ನಾಥ ಪತೆಂಗೆ, ಕಸಾಪ ಮಾಜಿ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಮಾತನಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳೆಪ್ಪ, ಚಂದ್ರಕಾಂತ ಜೋಕಾರೆ ಸ್ವಾಗತಿಸಿದರು. ಪ್ರಾಚಾರ್ಯ ಪ್ರಭಾಕರ ಕೋಟೆ ಪಿಯು ಕಾಲೇಜು ಶೀಮುಲ್ಲೆರವೆ

ಮನಶುದ್ಧಿ ಇದ್ದರೆ ನೆಮ್ಮದಿ ಸಾಧ್ಯ

ಬಸವಕಲ್ಯಾಣ: ಕಾಲ ಕೆಟ್ಟಿಲ್ಲ, ಕೆಟ್ಟಿರುವುದು ಮನುಷ್ಯನ ಮನಸ್ಸು, ಮನಸನ್ನು ಶುದ್ಧವಾಗಿಟ್ಟುಕೊಂಡಾಗ ಜೀವನದಲ್ಲಿ ಶಾಂತಿ, ನೆಮ್ಮದಿ ಕಾಣಲು ಸಾಧ್ಯ ಎಂದು ಗವಿಮಠ ಸಂಸ್ಥಾನದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

» ಅಭಿನವ ಘನಲಿಂಗ ಶ್ರೀ ನುಡಿ

» ಗವಿಮಠದಲ್ಲಿ ಸಾಧಕರಿಗೆ ಸನ್ಮಾನ

ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ಆಶ್ರಯದಲ್ಲಿ ಆಯೋಜಿಸಿದ್ದ ಶಿವಾನುಭವ ಚಿಂತನ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತಾಡಿದ ಅವರು, ಧರ್ಮ ಮಾರ್ಗದಲ್ಲಿ ನಡೆದಾಗ ಜೀವನದಲ್ಲಿ ಸಾರ್ಥಕತೆ ಕಾಣಲು ಸಾಧ್ಯ ಎಂದರು.

ನಿವೃತ್ತ ಮುಖ್ಯಗುರು ಕಲ್ಪನಾ ದಯಾನಂದ ಶೀಲವಂತ, ಪತ್ರಕರ್ತರಾದ ಬೀರಪ್ಪ ಕಿಣ್ಣಿಕರ್ ಹಾಗೂ ಶಿವು ಮಠಪತಿ ಅವರನ್ನು ಸನ್ಮಾನಿಸಲಾಯಿತು. ಶಿವಕುಮಾರ ಮಠ ಪ್ರೊ.ದಯಾನಂದ ಶೀಲವಂತ, ವಿಶ್ವನಾಥ ಪೊಲೀಸ್ ಪಾಟೀಲ್, ಪ್ರೊ.ರುದ್ರೇಶ್ವರ ಗೋರ್ಟಾ, ಮಲ್ಲಿಕಾರ್ಜುನ ಅಲಗೂಡ, ಶರಣಬಸಪ್ಪ ಅಲಗೂಡ ಉಪಸ್ಥಿತರಿದ್ದರು.



ವಿಜಯವಾಣಿ ಚಿತ್ರ

ಬಸವಕಲ್ಯಾದಲ್ಲಿ ಹಮ್ಮಿಕೊಂಡ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ನಿವೃತ್ತ ಮುಖ್ಯಗುರು ಕಲ್ಪನಾ ದಯಾನಂದ ಶೀಲವಂತ, ಪತ್ರಕರ್ತ ಬೀರಪ್ಪ ಕಿಣ್ಣಿಕರ್ ಹಾಗೂ ಶಿವು ಮಠಪತಿ ಅವರನ್ನು ಸನ್ಮಾನಿಸಲಾಯಿತು. ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಿವಕುಮಾರ ಮಠ, ದಯಾನಂದ ಇತರರಿದ್ದರು.

ಶನಿವಾರ 13 ಫೆಬ್ರವರಿ 2021 • 13 FEBRUARY 2021
• VIJAYAVANI » KALABURAGI

ಸ್ವದೇಶಿ ಸಂಸ್ಕೃತಿ ಉಳಿವು ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಸಾವಿತ್ರಿ ಸಲಗರ ಅಭಿಪ್ರಾಯ

ಸೈನಿಕರ ಪ್ರಾಣತ್ಯಾಗ ಎಲ್ಲದಕ್ಕೂ ಮಿಗಿಲು

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಪ್ರಾಣತ್ಯಾಗ ಎಲ್ಲ ತ್ಯಾಗಗಳಿಗೂ ಮಿಗಿಲಾದುದು. ಸೈನಿಕರು ದೇಶದ ಸಂರಕ್ಷಣೆಗಾಗಿ ಜೀವ ಕೊಡುವುದಕ್ಕೂ ಹಿಂದೆ ಮುಂದೆ ನೋಡುವುದಿಲ್ಲ' ಎಂದು ತಹಶೀಲ್ದಾರ್ ಸಾವಿತ್ರಿ ಸಲಗರ ಹೇಳಿದ್ದಾರೆ.

ಇಲ್ಲಿನ ಸಂಕಲ್ಪ ಪದವಿಪೂರ್ವ ಕಾಲೇಜಿನಲ್ಲಿ ಭಾನುವಾರ ಪುಲ್ವಾಮಾ ದಾಳಿ ವರ್ಷಾಚರಣೆ ಅಂಗವಾಗಿ ಆಯೋಜಿಸಿದ್ದ ಸ್ವದೇಶಿ ಸಂಸ್ಕೃತಿ ಉಳಿವು ಹಾಗೂ ವೀರಯೋಧರಿಗೆ ನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಜನ್ಮಭೂಮಿಯು ನಮಗೆ ಸ್ವರ್ಗಕ್ಕಿಂತಲೂ ಮಿಗಿಲಾದುದು. ಆದ್ದರಿಂದ ರಾಷ್ಟ್ರ ಸೇವೆಗೆ ಎಲ್ಲರೂ ಸಿದ್ಧರಾಗಿರಬೇಕು. ದೇಶದ ಗಡಿ ಕಾಯುವ ಸೈನಿಕರು ನಿಜವಾದ ತ್ಯಾಗಿಯಾದ ರಕ್ಷಕರು. ಮಳೆ, ಗಾಳಿ ಹಾಗೂ ಇತರೆ ಯಾವುದೇ ವಿಪತ್ತಿಗೆ ಹೆದರದೆ ಹಾಗೂ ವಿರೋಧಿ ರಾಷ್ಟ್ರಗಳ ಎಂಥ ಕೃತ್ಯಕ್ಕೂ ಧೃತಿಗೆಡದೆ ಮುನ್ನುಗ್ಗಿ ಯುದ್ಧ ಮಾಡುತ್ತಾರೆ. ಪ್ರಾಣದ ಪರಿವೆ ಇಲ್ಲದೆಯೇ ಅವರು ದೇಶ ರಕ್ಷಣೆ ಮಾಡುವುದರಿಂದ ಅವರ ಬಗೆಗೆ ಎಲ್ಲರಲ್ಲೂ ಗೌರವ ಇರಬೇಕು' ಎಂದರು.

ಮುಖ್ಯಾಂಶಗಳು

- ಪುಲ್ವಾಮಾ ದಾಳಿಯಲ್ಲಿ ಹುತಾತ್ಮ ಯೋಧರಿಗೆ ನಮನ
- ರಾಷ್ಟ್ರಸೇವೆಗೆ ಎಲ್ಲರೂ ಸಿದ್ಧರಾಗಲು ಸಲಹೆ
- ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು

ಎಲ್ಲರೂ ಸೈನಿಕರಾಗಿ ದೇಶ ಸಂರಕ್ಷಣೆ ಮಾಡಬೇಕೆಂದೆನಿಲ್ಲ. ಸಮಾಜ ಹಿತಕ್ಕಾಗಿ ದುಡಿದು ಸ್ವದೇಶಿ ವಸ್ತುಗಳ ಬಳಕೆ ಮಾಡಿದರೂ ರಾಷ್ಟ್ರ ಸೇವೆಯೇ ಆಗುತ್ತದೆ.
ವೇದಪ್ರಕಾಶ
ಪ್ರಾಚಾರ್ಯ, ಸಂಕಲ್ಪ ಕಾಲೇಜು

ಆದಾಯ ತೆರಿಗೆ ಇಲಾಖೆ ಸಹಾಯಕ ಆಯುಕ್ತ ಡಾ.ಮಹೇಶ ಪಾಟೀಲ ಮಾತನಾಡಿ, 'ಆಧುನಿಕತೆಯ ಮೋಹಕ್ಕೆ ಬಲಿ ಆಗಬಾರದು. ಪಾಶ್ಚಿಮಾತ್ಯ ಸಂಸ್ಕೃತಿಯೇ ಸರ್ವಶ್ರೇಷ್ಠ ಎನ್ನದೆ ವಿಶ್ವಕ್ಕೆ ಮಾದರಿಯಾದ ಭಾರತೀಯ ಸಂಸ್ಕೃತಿ, ಪರಂಪರೆಯ ಉಳಿವಿಗೆ ಪ್ರಯತ್ನಿಸಬೇಕು. ಶಾಲೆಗಳು ಬರೀ ಶಿಕ್ಷಣ ನೀಡದೆ ಯುವಕರಿಗೆ ಸಂಸ್ಕಾರ ನೀಡುವ ಕೇಂದ್ರಗಳಾಗಬೇಕು. ನೈತಿಕ ಮೌಲ್ಯಗಳ ಸಂರಕ್ಷಣೆಯಿಂದ ಮಾತ್ರ ದೇಶದ ಉದ್ಧಾರ ಸಾಧ್ಯ' ಎಂದರು.

ನೇತೃತ್ವ ವಹಿಸಿದ್ದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಯುವಕರು ರಚನಾತ್ಮಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಸಮಾಜದ ಸುಧಾರಣೆಗೈಯಬೇಕು. ದೇಶ ಪ್ರೇಮ, ದೇಶಾಭಿಮಾನ ಬೆಳೆಸಿಕೊಳ್ಳಬೇಕು. ಸ್ವಾರ್ಥ ಸಾಧನೆಯೇ ಮುಖ್ಯವಾಗದೆ ಬಡವರ, ದುಃಖಿತರ ಸೇವೆಗೆ ಸದಾ ಟೊಂಕ ಕಟ್ಟಿ ನಿಲ್ಲಬೇಕು' ಎಂದರು.

ಪ್ರಾಚಾರ್ಯ ವೇದಪ್ರಕಾಶ ಮಾತನಾಡಿ, 'ಯುವಕರ ಕೈಯಲ್ಲಿ ದೇಶದ ಭವಿಷ್ಯ ರೂಪಿಸುವ ಶಕ್ತಿಯಿದೆ. ಆದ್ದರಿಂದ ರಾಷ್ಟ್ರಹಿತದ ಚಿಂತನೆಗೈಯಬೇಕು' ಎಂದರು.

ಉಪನ್ಯಾಸಕ ಬಸವರಾಜ ಶೇರಿ ಮಾತನಾಡಿ, 'ದೇಹಕ್ಕೆ ಅನ್ನ ಎಷ್ಟು ಮುಖ್ಯವೋ ದೇಶಕ್ಕೆ ಸೈನಿಕರ ಅವಶ್ಯಕತೆಯೂ ಅಷ್ಟೇಯಿದೆ. ಪುಲ್ವಾಮಾ ದಾಳಿಯಲ್ಲಿ 40 ವೀರ ಯೋಧರು ಹುತಾತ್ಮರಾದರು. ಅವರ ಬಲಿದಾನ ಸ್ಮರಿಸಿಕೊಳ್ಳಬೇಕು' ಎಂದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ತಾಲ್ಲೂಕು ಸೇವಾ ಪ್ರಮುಖ ಬಲವಂತ ವರ್ಮಟ್ಟೆ, ತಾಲ್ಲೂಕು ವಿದ್ಯಾರ್ಥಿ ಪ್ರಮುಖ ರೇವಣ ಚಿಲ್ಲಾಬಟ್ಟೆ ಉಪಸ್ಥಿತರಿದ್ದರು. ವೀರಶೆಟ್ಟಿ ನಿರೂಪಿಸಿದರು. ಕಲ್ಪನಾ ವಂದಿಸಿದರು.



ಬಸವಕಲ್ಯಾಣದ ಸಂಕಲ್ಪ ಕಾಲೇಜಿನಲ್ಲಿ ಭಾನುವಾರ ನಡೆದ ಸ್ವದೇಶಿ ಸಂಸ್ಕೃತಿ ಉಳಿವು ಹಾಗೂ ವೀರಯೋಧರಿಗೆ ನಮನ ಕಾರ್ಯಕ್ರಮದಲ್ಲಿ ಉಪನ್ಯಾಸಕ ಬಸವರಾಜ ಶೇರಿ ಮಾತನಾಡಿದರು

ಪ್ರಜಾವಾಣಿ ಸೋಮವಾರ • ಫೆಬ್ರುವರಿ 15, 2021

ಇಷ್ಟಲಿಂಗ ಪೂಜೆ ಇಂದು

ಬಸವಕಲ್ಯಾಣ: ಗವಿಮಠದಲ್ಲಿ ಗುರುವಾರ ಸಂಜೆ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಇಷ್ಟಲಿಂಗ ದೀಕ್ಷೆ ಹಾಗೂ ಸಾಮೂಹಿಕ ಇಷ್ಟಲಿಂಗ ಪೂಜೆ ಆಯೋಜಿಸಲಾಗಿದೆ. ಸದ್ಭಕ್ತರು ಪಾಲ್ಗೊಳ್ಳಬೇಕು ತಿಳಿಸಿದ್ದಾರೆ.

Scanned with OKEN Scanner

ಅಭಿನವ ಘನಲಿಂಗ ರುದ್ರಮುನಿ ಶ್ರೀ ನುಡಿ | ಸದ್ಭಾವ ಚಿಂತನ ಕಾರ್ಯಕ್ರಮ

ಸಮಯವಿಲ್ಲ ಎಂಬುದು ಆಲಸ್ಯತನ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಪ್ರಸ್ತುತ ಜನರು ಪೂಜೆ, ಭಜನೆ, ಜಪ, ಧ್ಯಾನ ಮಾಡಲು ಸಮವಿಲ್ಲ ಎನ್ನುವುದು ಶುದ್ಧ ಸುಳ್ಳು. ಇದು ಆಲಸಿಗಳ ಜಾಣತನದ ಮಾದು ಎಂದು ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ರಂಜೇರೆ ಕಾಲನಿಯ ಡಾ.ಚಂದ್ರಕಾಂತ ಮುಚಳಂಬ ಅವರ ಮನೆಯಲ್ಲಿ ಹಮ್ಮಿಕೊಂಡ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ, ಸದಾ ಒಂದಿಲ್ಲೊಂದು ಕೆಲಸ ಕಾರ್ಯದಲ್ಲಿ ತೊಡಗಿ ನಾಲ್ಕು ಜನರೆದುರಿಗೆ ಆದರ್ಶವಾಗಿ ಬದುಕೋಣ. ಸಮಾಜಕ್ಕೆ ನಮ್ಮ ಕೈಲಾದಷ್ಟು ಸಹಕಾರ ನೀಡಿ, ಆರೋಗ್ಯವಂತರಾಗಿ ಬದುಕೋಣ ಎಂದರು.

ಶಿಕ್ಷಕಿ ನಾಗರತ್ನ ಹಿರೇಮಠ ಮಾತನಾಡಿ, ಗುರು ಎಂದರೆ ಕತ್ತಲೆ ಕಳೆಯುವಂತಹ ಮಹಾನ್ ಬೆಳಕು ಎಂದರು.

ಬಸವರಾಜ ಅಲಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಸಾಪ ಮಾಜಿ ಅಧ್ಯಕ್ಷರಾದ ಚಂದ್ರಕಾಂತ ಸ್ವಾಮಿ ನಾರಾಯಣಪುರ ಸ್ವಾಗತಿಸಿದರು. ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ವಂದಿಸಿದರು.

ನಾಗಣ್ಣ ಭೂಶೆಟ್ಟಿ, ಮಲ್ಲಿಕಾರ್ಜುನ ಶೀಲವಂತ, ಡಾ.ರೇವಣಸಿದ್ದಯ್ಯ ಶಂಕರಮಠ ಭಕ್ತಿಯ ಸಂಗೀತ ಸೇವೆ ನಡೆಸಿಕೊಟ್ಟರು. ಎ.ಜಿ. ಪಾಟೀಲ್, ವೀರಣ್ಣ ಶೀಲವಂತ, ಚಂದ್ರಕಾಂತ ಅಲಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಎ.ಜಿ. ಪಾಟೀಲ, ವೀರಣ್ಣ ಶೀಲವಂತ, ಬಾಬುರಾವ ಚಳಕಾಪುರೆ, ಸಾಗರ ಪಾಟೀಲ್, ರವಿಶಂಕರ ಬಿರಾದಾರ, ಡಾ. ಚಂದ್ರಕಾಂತ ಅಲಶೆಟ್ಟಿ, ಮಲ್ಲಿಕಾರ್ಜುನ ಚಿದಂಬರ, ಸುನಿಲ ಚಪಾತೆ, ಮಹಾಂತಯ್ಯ ಮಠಪತಿ, ರಮೇಶ ರಾಜೋಳೆ, ವೈಷ್ಣವಿ ಬಸವರಾಜ ಅಲಶೆಟ್ಟಿ, ಸಂಜನಾ ಚಂದ್ರಕಾಂತ ಅಲಶೆಟ್ಟಿ ಸೇರಿದಂತೆ ಇತರರಿದ್ದರು. ಕಸಾಪ ಮಾಜಿ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಸ್ವಾಗತಿಸಿದರು. ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರ ವಂದಿಸಿದರು. ನಾಗಣ್ಣ ಭೂಶೆಟ್ಟಿ, ಮಲ್ಲಿಕಾರ್ಜುನ ಶೀಲವಂತ, ಡಾ. ರೇವಣಸಿದ್ಧಯ್ಯ ಶಂಕರಮಠ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಹಮ್ಮಿಕೊಂಡ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಮಾತನಾಡಿದರು. ಶಿಕ್ಷಕಿ ನಾಗರತ್ನ ಹಿರೇಮಠ, ಬಸವರಾಜ ಅಲಶೆಟ್ಟಿ, ಚಂದ್ರಕಾಂತ ಸ್ವಾಮಿ ನಾರಾಯಣಪುರ ಇದ್ದರು.



ಬಾಬುರಾವ ಚಳಕಾಪುರೆ, ಸಾಗರ ಪಾಟೀಲ್, ರವಿಶಂಕರ ಬಿರಾದಾರ, ಡಾ.ಚಂದ್ರಕಾಂತ ಅಲಶೆಟ್ಟಿ, ಮಲ್ಲಿಕಾರ್ಜುನ ಚಿದಂಬರ, ಸುನೀಲ ಚಪಾತೆ, ಮಹಾಂತಯ್ಯ ಮಠಪತಿ, ರಮೇಶ ರಾಜೋಳೆ, ವೈಷ್ಣವಿ ಅಲಶೆಟ್ಟಿ, ಸಂಜನಾ ಅಲಶೆಟ್ಟಿ, ಮಹೇಶ ಟೊಣ್ಣೆ, ಶೋಭಾ ಖಂಡಾಳೆ, ಮೇಘಾ ಮೂಳೆ, ವಿದ್ಯಾರೆಡ್ಡಿ, ರಾಣಿ ರಂಜೇರೆ ಇತರರಿದ್ದರು.

'ಸಹಾಯ ಮನೋಭಾವ ಬೆಳೆಸಿಕೊಳ್ಳಿ'



ಬಸವಕಲ್ಯಾಣದಲ್ಲಿ ಆಯೋಜಿಸಿದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಸಂ.ಕ.ಸಮಾಚಾರ ಬಸವಕಲ್ಯಾಣ

ಸದಾ ಒಂದಿಲ್ಲೊಂದು ಕೆಲಸ ಕಾರ್ಯದಲ್ಲಿ ತೊಡಗಿ ನಾಲ್ಕು ಜನರೆದುರಿಗೆ ಆದರ್ಶವಾಗಿ ಬದುಕುವುದು ರೂಢಿಸಿಕೊಳ್ಳಬೇಕು. ಸಮಾಜಕ್ಕೆ ನಮ್ಮ ಕೈಲಾದಷ್ಟು ಸಹಾಯ ಮಾಡುವ ಗುಣ ಬೆಳೆಸಿಕೊಳ್ಳಬೇಕು ಎಂದು ತ್ರಿಪುರಾಂತ್ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ರಂಜೇರೆ ಕಾಲೋನಿಯ ಡಾ. ಚಂದ್ರಕಾಂತ ಅಲಶೆಟ್ಟಿ ಮುಚಳಂಬ ಅವರ ಮನೆಯಲ್ಲಿ ಆಯೋಜಿಸಿದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಶಿಕ್ಷಕಿ ನಾಗರತ್ನ ಹಿರೇಮಠ, ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಸಹ ಮಾತನಾಡಿದರು. ಬಸವರಾಜ ಚಂದ್ರಕಾಂತ ಅಲಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಎ.ಜಿ. ಪಾಟೀಲ, ವೀರಣ್ಣ ಶೀಲವಂತ, ಬಾಬುರಾವ ಚಳಕಾಪುರೆ, ಸಾಗರ ಪಾಟೀಲ್, ರವಿಶಂಕರ ಬಿರಾದಾರ, ಡಾ. ಚಂದ್ರಕಾಂತ ಅಲಶೆಟ್ಟಿ, ಮಲ್ಲಿಕಾರ್ಜುನ ಚಿದಂಬರ, ಸುನಿಲ ಚಪಾತೆ, ಮಹಾಂತಯ್ಯ ಮಠಪತಿ, ರಮೇಶ ರಾಜೋಳೆ, ವೈಷ್ಣವಿ ಬಸವರಾಜ ಅಲಶೆಟ್ಟಿ, ಸಂಜನಾ ಚಂದ್ರಕಾಂತ ಅಲಶೆಟ್ಟಿ ಸೇರಿದಂತೆ ಇತರರಿದ್ದರು. ಕಸಾಪ ಮಾಜಿ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ಸ್ವಾಗತಿಸಿದರು. ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರ ವಂದಿಸಿದರು. ನಾಗಣ್ಣ ಭೂಶೆಟ್ಟಿ, ಮಲ್ಲಿಕಾರ್ಜುನ ಶೀಲವಂತ, ಡಾ. ರೇವಣಸಿದ್ಧಯ್ಯ ಶಂಕರಮಠ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಸಂಯುಕ್ತ ಕರ್ನಾಟಕ

04 ಮಾರ್ಚ್ 2021
ಗುರುವಾರ
ಕಲಬುರಗಿ

Scanned with OKEN Scanner

ಪ್ರಜಾವಾಣಿ ಸೋಮವಾರ • ಮಾರ್ಚ್ 8, 2021

ಗೋರಟಾ(ಬಿ) ಸ್ಮಾರಕ; 7 ವರ್ಷಗಳಿಂದ ವಿಳಂಬ

ಹುತಾತ್ಮರ ಸ್ಮಾರಕ ಪೂರ್ಣಕ್ಕಾಗಿ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಇಲ್ಲಿಗೆ ಸಮೀಪದ ಹುಲಸೂರ ತಾಲ್ಲೂಕಿನ ಗೋರಟಾ(ಬಿ) ದಲ್ಲಿನ ಹೈದರಾಬಾದ್ ಕರ್ನಾಟಕ ವಿಮೋಚನಾ ಚಳವಳಿಯಲ್ಲಿನ ಹುತಾತ್ಮರ ಸ್ಮಾರಕದ ಕಾಮಗಾರಿ ಪೂರ್ಣಕ್ಕೆ ಆಗ್ರಹಿಸಿ ಬಸವಪರ ಸಂಘಟನೆಗಳಿಂದ ಭಾನುವಾರ ನಗರದ ಬಿಜೆಪಿ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಯಿತು.

ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಭಾವಚಿತ್ರದ ಪೂಜೆ ನೆರವೇರಿಸಿ ಚಾಲನೆ ನೀಡಿ ಮಾತನಾಡಿ, 'ಈ ಭಾಗದ ಸ್ವಾತಂತ್ರ್ಯಕ್ಕಾಗಿ ಗೋರಟಾದ ಅನೇಕರು ಪ್ರಾಣಾರ್ಪಣೆ ಮಾಡಿದ್ದಾರೆ. ಅವರ ಸ್ಮರಣಾರ್ಥ ನಿರ್ಮಿಸುತ್ತಿರುವ ಸ್ಮಾರಕದ ಕೆಲಸ ಶೀಘ್ರ ಪೂರ್ಣಗೊಳ್ಳದಿದ್ದರೆ ನೂರಾರು ಮಠಾಧೀಶರ ಜತೆ ಸತ್ಯಾಗ್ರಹ ಕೈಗೊಳ್ಳಲು ಸಿದ್ಧನಿದ್ದೇನೆ' ಎಂದರು.

ಬಸವಪರ ಸಂಘಟನೆಗಳ ಒಕ್ಕೂಟದ ಸಂಚಾಲಕ ಶಿವಕುಮಾರ ಬಿರಾದಾರ ಮಾತನಾಡಿ, 'ಗೋರಟಾ(ಬಿ)ದಲ್ಲಿ ನಡೆದ ವಿಮೋಚನಾ ಚಳವಳಿಗಾರರ ಹತ್ಯೆಯ ಘಟನೆ ದಕ್ಷಿಣ ಭಾರತದ ಜಲಿಯನವಾಲಾ ಬಾಗ್ ಹತ್ಯಾಕಾಂಡ ಎಂದು ಇತಿಹಾಸದಲ್ಲಿ ನಮೂದಾಗಿದೆ. 7 ವರ್ಷಗಳ ಹಿಂದೆ ಸ್ಮಾರಕಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರೂ ಕೆಲಸ ಅರ್ಧಕ್ಕೆ ನಿಂತಿದೆ' ಎಂದರು.

'ಭೂಮಿಪೂಜೆ ನಡೆದ ನಂತರ ವರ್ಷದಲ್ಲೇ ಪ್ರಧಾನಮಂತ್ರಿ ಅವರಿಂದ ಉದ್ಘಾಟನೆ ನೆರವೇರಿಸಲಾಗುತ್ತದೆ ಎಂದು ಭರವಸೆ ನೀಡಲಾಗಿತ್ತು. ಆದರೆ, ಧ್ವಜ ಸ್ತಂಭ, ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆಯ ಕಟ್ಟೆ ನಿರ್ಮಿಸಲಾಗಿದೆ. ಪ್ರತಿಮೆ ಪ್ರತಿಷ್ಠಾಪಿಸಿಲ್ಲ. ಆವರಣಗೋಡೆ, ಉದ್ಯಾನ ನಿರ್ಮಾಣ ಒಳಗೊಂಡು ಬಹಳಷ್ಟು ಕೆಲಸ ಇನ್ನು ಬಾಕಿಯಿದೆ' ಎಂದು ದೂರಿದರು.

ಬಸವೇಶ್ವರ ದೇವಸ್ಥಾನ ಸಮಿತಿ ನಿರ್ದೇಶಕ ಸುಭಾಷ ಹೊಳಕುಂದೆ, ನಗರಸಭೆ ಮಾಜಿ ಸದಸ್ಯ ರವಿ ಕೊಳಕೂರ, ಪ್ರಮುಖರಾದ ಮಹೇಶ ಸುಂಟನೂರೆ, ಬಸವರಾಜ ಪಾಟೀಲ ಗೋರಟಾ, ಸಂಜೀವ ಮೆಟಗೆ, ವಿವೇಕ ಚಳಕಾಪುರೆ, ಸಂತೋಷ ಸಣ್ಣೂರೆ, ಶಿವಕುಮಾರ ಕನಕಟ್ಟೆ, ನಾಗರಾಜ ಮಂಗಾ, ನೀಲೇಶ ಖೂಬಾ, ವೀರೇಶ ಬೋರಗೆ, ಸಾಗರ ಶಾಶೆಟ್ಟೆ, ಪ್ರೇಮಕುಮಾರ, ಶಿವು ಆಗ್ರೆ, ಪ್ರವೀಣ ಮಹಾಜನ, ಸಿದ್ದು ಹಲಶೆಟ್ಟೆ, ಅನಿಲ ಸಕ್ಕರಬಾವಿ, ಅಜೇಯಸ್ವಾಮಿ, ಬಸವರಾಜ ಮುರುಡ, ಮಹೇಶ ಅಂಬುಲಗೆ, ಚೆನ್ನವೀರಸ್ವಾಮಿ, ಸಂಗಮೇಶ ಸಜ್ಜನಶೆಟ್ಟಿ ಪಾಲ್ಗೊಂಡಿದ್ದರು.



ಬಸವಕಲ್ಯಾಣದಲ್ಲಿ ಗೋರಟಾ(ಬಿ)ದಲ್ಲಿನ ಹುತಾತ್ಮ ಸ್ಮಾರಕ ಕಾಮಗಾರಿ ಪೂರ್ಣಕ್ಕೆ ಆಗ್ರಹಿಸಿ ಬಸವಪರ ಸಂಘಟನೆಗಳು ನಡೆಸಿದ ಸತ್ಯಾಗ್ರಹದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಿವಕುಮಾರ ಬಿರಾದಾರ ಪಾಲ್ಗೊಂಡಿದ್ದರು

ಉಪ ಮುಖ್ಯಮಂತ್ರಿಗೆ ಮನವಿಪತ್ರ ಸಲ್ಲಿಕೆ

ಬಿಜೆಪಿ ಕಾರ್ಯಕರತರ ಸಮಾವೇಶಕ್ಕೆ ಆಗಮಿಸಿದ್ದ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಹಾಗೂ ಬಿಜೆಪಿ ರಾಜ್ಯ ಘಟಕದ ನಳಿನ್‌ಕುಮಾರ ಕಟೀಲ್ ಅವರ ಮೆರವಣಿಗೆ ಧರಣಿ ಕುಳಿತ ಸ್ಥಳದಲ್ಲಿಂದ ಹಾದುಬಂತು. ಈ ಸಂದರ್ಭದಲ್ಲಿ ಧರಣಿನಿರತರು ಅವರಿಗೆ ಮನವಿಪತ್ರ ಸಲ್ಲಿಸಿದರು.

VIJAYAVANI » KALABURAGI ಗುರುವಾರ 11 ಮಾರ್ಚ್ 2021 11 MARCH 2021

ಗುಣಾತ್ಮಕ ಶಿಕ್ಷಣವೇ ಮಂತ್ರವಾಗಲಿ

ಶ್ರೀ ಅಭಿನವ ಘನಲಿಂಗ ಶ್ರೀ ನುಡಿ | ಪುಣ್ಯಕೋಟಿ ಕಾಲೇಜಿನಲ್ಲಿ ಸನ್ಮಾನ ಸಮಾರಂಭ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ವ್ಯಕ್ತಿಯ ಬಹುಮುಖ ವ್ಯಕ್ತಿತ್ವಕ್ಕೆ ಗುಣಾತ್ಮಕ ಶಿಕ್ಷಣವೊಂದೆ ತಾರಕ ಮಂತ್ರ ಎಂದು ಗವಿಮಠದ ಶ್ರೀಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಪುಣ್ಯಕೋಟಿ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರಥಮ ಪಿಯು ವಿದ್ಯಾರ್ಥಿಗಳಿಗೆ ಸ್ವಾಗತ ಮತ್ತು ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ವ್ಯಕ್ತಿಯ ಬಹುಮುಖ ಬೆಳವಣಿಗೆಯಲ್ಲಿ ಸಮಾಜದ ಬೆಳವಣಿಗೆ ಅಡಗಿದೆ ಎಂದರು.

ವಿದ್ಯಾರ್ಥಿಗಳು ಪ್ರಬುದ್ಧವಾಗಿ ಬೆಳೆಯಬೇಕಾದರೆ ಅಡ್ಡಿ ಆತಂಕಗಳು ಬರುವುದು ಸಹಜ. ಎಲ್ಲವನ್ನು ಧೈರ್ಯದಿಂದ ಎದುರಿಸಿ ಜಯ ಗಳಿಸುವ ಆತ್ಮವಿಶ್ವಾಸವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸದ ಹೊರತು ರಾಷ್ಟ್ರ ಸರ್ವತೋಮುಖವಾಗಿ ಬೆಳೆಯಲಾರದು. ಜೀವನಕ್ಕೆ ಹೊಸ ಚೈತನ್ಯವನ್ನು ತುಂಬುವಲ್ಲಿ ಶಿಕ್ಷಣ ಸೀಡುವ ಶಾಲೆ-ಕಾಲೇಜುಗಳ ಪಾತ್ರ ಮುಖ್ಯ ಎಂದು ಹೇಳಿದರು.

ಸಂಸ್ಥೆ ಕಾರ್ಯದರ್ಶಿ ಉಮೇಶ ಶೀಲವಂತ, ಕೋಶ್ಯಾಧ್ಯಕ್ಷ ಶಶಿಕಾಂತ ಶೀಲವಂತ ಮಾತನಾಡಿದರು. ಉಪಾಧ್ಯಕ್ಷೆ ಚಂದ್ರಕಲಾ ಪಾಟೀಲ್, ನಿರ್ದೇಶಕರಾದ ಚಂದ್ರಕಾಂತ ಶೀಲವಂತ, ಕಾವೇರಿ ಶೀಲವಂತ, ಉಪನ್ಯಾಸಕರಾದ ನಾಮದೇವ ಲಾತೂರೆ, ಕಲ್ಪನಾ ಬಿರಾದಾರ, ಸುರೇಶ ರಾಜೋಳಿ, ಅಶೋಕ ಪೋತೆ, ಮಹಾದೇವಿ ದಾಸೂರೆ, ಕಿಶೋರ ಕುಮಾರ ಕುಲಕರ್ಣಿ, ಸಂಗಮೇಶ ಗೌರಣ್ಣ ಇತರರಿದ್ದರು. ಪ್ರವೀಣ ಸ್ವಾಗತಿಸಿದರು. ಆರತಿ ನಿರೂಪಣೆ ಮಾಡಿದರು. ಸಂಗೀತಾ ವಂದಿಸಿದರು. ಸೋನಬಾಯಿ ಪ್ರಾರ್ಥನಾ ಗೀತೆ ಹಾಡಿದರು.

ಬೆಳ್ಳಿ ಪದಕ: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಕಲಾ ವಿಭಾಗದ ಭಾಗ್ಯಶ್ರೀ ಕಾಶೀನಾಥ, ವಾಣಿಜ್ಯ ವಿಭಾಗದ ನಂದಿನಿ ಶರಣಬಸವ ಹಾಗೂ ಕಾಲೇಜಿನ ಹೆಚ್ಚು 10ವಿದ್ಯಾರ್ಥಿಗಳಿಗೆ ಬೆಳ್ಳಿ ಪದಕ ನೀಡಿ ಗೌರವಿಸಿ, ಸನ್ಮಾನಿಸಲಾಯಿತು.



ಬಸವಕಲ್ಯಾಣದ ಪುಣ್ಯಕೋಟಿ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಪ್ರೊ.ಸೂರ್ಯಕಾಂತ ಶೀಲವಂತ, ಉಮೇಶ ಶೀಲವಂತ, ಶಶಿಕಾಂತ ಶೀಲವಂತ, ಚಂದ್ರಕಲಾ ಪಾಟೀಲ್, ಚಂದ್ರಕಾಂತ ಶೀಲವಂತ, ಕಾವೇರಿ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ

Scanned with OKEN Scanner

14 ಮಾರ್ಚ್ 2021
ಭಾನುವಾರ
ಕಲಬುರಗಿ

ಡಾ. ಅಭಿನವ ಶ್ರೀಗಳಿಗೆ ನಾಗರಿಕ ಸನ್ಮಾನ

ಗೌರವ ಡಾಕ್ಟರೇಟ್ ಪದವಿ ಜವಾಬ್ದಾರಿ ಹೆಚ್ಚಿಸಿದೆ : ಅಭಿನವ ಶ್ರೀ

ಸಂ.ಕ.ಸಮಾಚಾರ ಬಸವಕಲ್ಯಾಣ

ನಮ್ಮ ಸಾಮಾಜಿಕ ಕಾರ್ಯಗಳು ಗುರುತಿಸಿ ಬಯಸದೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದ್ದು ನನಗಲ್ಲ, ಸದಾ ನಮ್ಮ ಕಾರ್ಯಗಳಲ್ಲಿ ಜತೆಯಾಗಿ ಸೇವೆ ಸಲ್ಲಿಸುತ್ತಿರುವ ಭಕ್ತರಿಗೆ ಸಲ್ಲುತ್ತದೆ. ಗೌರವ ಪದವಿ ನಮ್ಮ ಜವಾಬ್ದಾರಿ ಮತ್ತಷ್ಟು ಹೆಚ್ಚಿಸಿದೆ ಎಂದು ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಬೆಂಗಳೂರಿನ ಆಧ್ಯಾತ್ಮಿಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರಾಗಿದ್ದಕ್ಕೆ ತ್ರಿಪುರಾಂತ ಗವಿ ಮಠದಲ್ಲಿ ಹಮ್ಮಿಕೊಂಡ ನಾಗರಿಕ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ ಗುರುತಿಸಿ ಬೆಂಗಳೂರಿನ ಆಧ್ಯಾತ್ಮಿಕ ವಿವಿಯಿಂದ ಗೌರವ ಡಾಕ್ಟರೇಟ್ ಪದವಿ ನೀಡಿದ್ದು ಸಂತಸ ತಂದಿದೆ ಎಂದರು. ತಹಶೀಲ್ದಾರ ಸಾವಿತ್ರಿ ಸಲಗರ ಮಾತನಾಡಿ ಸಾಮಾಜಿಕ ಕ್ಷೇತ್ರದಲ್ಲಿ ಸಕ್ರಿಯವಾಗಿ ಸದಾ ಒಂದಿಲ್ಲೊಂದು ಕಾರ್ಯ ಚಟುವಟಿಕೆಗಳು ಹಮ್ಮಿಕೊಳ್ಳುತ್ತ ಸಮಾಜದಲ್ಲಿ ಧರ್ಮ, ಆಧ್ಯಾತ್ಮದ ಬೆಳಕು ಚೆಲ್ಲುತ್ತಿರುವ ಶ್ರೀ ಅಭಿನವ ಶ್ರೀಗಳಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿ ಗೌರವಿಸಿ ವಿಶ್ವವಿದ್ಯಾಲಯ ತನ್ನ ಗೌರವ ಹೆಚ್ಚಿಸಿಕೊಂಡಿದೆ ಎಂದರು.



ಬಸವಕಲ್ಯಾಣ: ಗವಿ ಮಠದಲ್ಲಿ ಆಯೋಜಿಸಿದ ನಾಗರಿಕ ಗೌರವ ಸನ್ಮಾನ ಸಮಾರಂಭದಲ್ಲಿ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಶ್ರೀಗಳು, ಗಣ್ಯರು ಸನ್ಮಾನಿಸಿದರು.

ಶರಣಪ್ಪ ಬಿರಾದಾರ ಮಾತನಾಡಿ ಈ ಭಾಗದಲ್ಲಿ ಧರ್ಮ ಉಳಿಯಬೇಕಾದರೆ ಹಾರಕೂಡ ಶ್ರೀಮಠ ಹಾಗೂ ಮೇಹಕರ ಹಿರೇಮಠಗಳ ಪಾತ್ರ ಮಹತ್ವದ್ದಾಗಿದೆ. ಅದೇ ಮಾರ್ಗದಲ್ಲಿ ಇಂದು ನಮ್ಮ ಗವಿಮಠದ ಶ್ರೀಗಳು ಧರ್ಮಕಾರ್ಯ ಮಾಡುತ್ತ ಸಾಗಿರುವುದು ನಮ್ಮ ಭಾಗ್ಯ ಎಂದು ನುಡಿದರು. ಹಾರಕೂಡ ಹಿರೇಮಠದ ಪೀಠಾಧಿಪತಿ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ಸಾನಿಧ್ಯ ವಹಿಸಿದರು. ಪ್ರೊ. ಸೂರ್ಯಕಾಂತ ಶೀಲವಂತ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಸ್ಥಾನ ಗವಿಮಠದ ಇತಿಹಾಸ-ಪರಂಪರೆ ಮತ್ತು ಅಭಿನವ ಶ್ರೀಗಳ ಸಾಧನೆ ಪರಿಚಯಿಸಿದರು.

ವೀರಣ್ಣ ಶೀಲವಂತ ಪ್ರಾರ್ಥನೆ ಗೀತೆ ಹಾಡಿದರು. ಬಸವಂತಪ್ಪ ಲವಾರೆ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ಚಂದ್ರಕಾಂತ ಸ್ವಾಮಿ ನಾರಾಯಣಪೂರ ವಂದಿಸಿದರು. ನಾಗಣ್ಣ ಭೂಶೆಟ್ಟಿ, ಮಲ್ಲಿಕಾರ್ಜುನ ಶೀಲವಂತ ಹಾಗೂ ರಂಜನಾ ಭೂಶೆಟ್ಟಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಪ್ರಮುಖರಾದ ಮಲ್ಲಯ್ಯ ಹಿರೇಮಠ, ಡಾ. ವಿ.ವಿ.ಮಂಡಿ, ಡಾ. ಬಸವರಾಜ ಸ್ವಾಮಿ, ಶ್ರೀನಿವಾಸ ರೆಡ್ಡಿ, ಬಸವರಾಜ ಸ್ವಾಮಿ, ಸೋಮಶೇಖರ ವಸ್ತ್ರದ, ಬಿಜೆಪಿ ಯುವ ಮುಖಂಡ ಪ್ರದೀಪ ವಾತಡೆ, ರಮೇಶ ಸ್ವಾಮಿ, ಗುರುಲಿಂಗಯ್ಯ ಸ್ವಾಮಿ ಕಟಗಿಮಠ, ಅರ್ಜುನ ಕನಕ, ವಿರಶೆಟ್ಟಿ ಪಾಟೀಲ್, ಬಸವರಾಜ ಪಾರಾ, ಗುರು ದೇಗಾಂವ, ಜಗನಾಥ ಸ್ವಾಮಿ, ಕೃಷ್ಣಕುಮಾರ ರೆಡ್ಡಿ, ರಾಜು ಪಾಟೀಲ್, ಮರೆಪ್ಪ ಪಾಟೀಲ್, ಕಾರ್ತಿಕ ಬಿರಾದಾರ, ಚನ್ನಪ್ಪ ರಾಜಾಪುರೆ, ನಾಗರಾಜ ರೋಜೆ, ಸವಿತಾ ಸ್ವಾಮಿ, ಪಾರ್ವತಿ ಸ್ವಾಮಿ, ವಿಮಲಾಬಾಯಿ ಬಿರಾದಾರ, ಸರಸ್ವತಿ ಬೆಂಬಳಗೆ, ರೇಣುಕಾ ಮಠಪತಿ, ಶಿವಲೀಲಾ ಲವಾರೆ, ಸುರ್ವಣಾ ನಂದಿ, ಸುರೇಖಾ ಶೀಲವಂತ ಸೇರಿದಂತೆ ಇತರರಿದ್ದರು.

ಸಂಯುಕ್ತ ಕರ್ನಾಟಕ



ಬಸವಕಲ್ಯಾಣದಲ್ಲಿ ಆಯೋಜಿಸಿದ್ದ ನಾಗರಿಕ ಗೌರವ ಸನ್ಮಾನ ಸಮಾರಂಭದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಪೂಜ್ಯರು, ಗಣ್ಯರು ಸನ್ಮಾನಿಸಿ ಗೌರವಿಸಿದರು. ಹಾರಕೂಡದ ಶ್ರೀ ಡಾ.ಚನ್ನವೀರ ಶಿವಾಚಾರ್ಯರು, ತಹಸೀಲ್ದಾರ್ ಸಾವಿತ್ರಿ ಸಲಗರ ಇತರರಿದ್ದರು.

ವಿಜಯವಾಣಿ ಚಿತ್ರ

ಸದಾ ಜತೆಯಾಗಿ ನಿಲ್ಲುವ ಭ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ ಗುರುತಿಸಿ ಬೆಂಗಳೂರಿನ ಆಧ್ಯಾತ್ಮಿಕ ವಿವಿಯಿಂದ ಗೌರವ ಡಾಕ್ಟರೇಟ್ ಪದವಿ ನೀಡಿದ್ದು ಸಂತಸ ತಂದಿದೆ. ಸಾಮಾಜಿಕ ಕಾರ್ಯಗಳನ್ನು ಗುರುತಿಸಿ ಬಂದಿರುವ ಈ ಗೌರವ ನಮ್ಮ ಕಾರ್ಯಗಳಲ್ಲಿ ಸದಾ ಜತೆಯಾಗಿ ನಿಲ್ಲುವ ಭಕ್ತರಿಗೆ ಸಲ್ಲುತ್ತದೆ ಎಂದು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಬೆಂಗಳೂರಿನ ಆಧ್ಯಾತ್ಮಿಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್‌ಗೆ ಪುರಸ್ಕೃತರಾಗಿದ್ದಕ್ಕೆ ಭಕ್ತರಿಂದ ನಗರದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಗೌರವ ಸನ್ಮಾನ ಸ್ವೀಕರಿಸಿ, ಆಶೀರ್ವಚನ ನೀಡಿದರು.

ತಹಸೀಲ್ದಾರ್ ಸಾವಿತ್ರಿ ಸಲಗರ ಮಾತನಾಡಿ, ಸಾಮಾಜಿಕ ಕ್ಷೇತ್ರದಲ್ಲಿ ಸಕ್ರಿಯವಾಗಿ ಸದಾ ಒಂದಿಲ್ಲ ಒಂದು ಕಾರ್ಯ ಚಟುವಟಿಕೆ ನಡೆಸುತ್ತ ಧರ್ಮ, ಆಧ್ಯಾತ್ಮದ ಬೆಳಕು ಚೆಲ್ಲುತ್ತಿರುವ ಶ್ರೀ ಅಭಿನವ ಶ್ರೀಗಳಿಗೆ ಗೌರವ ಡಾಕ್ಟರೇಟ್ ನೀಡಿ ವಿಶ್ವವಿದ್ಯಾಲಯ ತನ್ನ ಗೌರವ ಹೆಚ್ಚಿಸಿಕೊಂಡಿದೆ ಎಂದರು.

» ಡಾ.ಅಭಿನವ ಘನಲಿಂಗ ಶ್ರೀ ನುಡಿ

» ಡಾಕ್ಟರೇಟ್‌ಗೆ ಭಾಜನರಾಗಿದಕ್ಕೆ ಅಭಿನಂದನೆ

ಅಧ್ಯಕ್ಷತೆ ವಹಿಸಿದ ಶರಣಪ್ಪ ಬಿರಾದಾರ ಮಾತನಾಡಿ, ಈ ಭಾಗದಲ್ಲಿ ಧರ್ಮ ಉಳಿಯಬೇಕಾದರೆ ಹಾರಕೂಡ ಶ್ರೀಮಠ ಹಾಗೂ ಮೇಹಕರ ಹಿರೇಮಠಗಳ ಪಾತ್ರ ಮಹತ್ವದ್ದಾಗಿದೆ. ಅದೇ ಮಾರ್ಗದಲ್ಲಿ ನಮ್ಮ ಗವಿಮಠದ ಶ್ರೀಗಳು ಧರ್ಮಕಾರ್ಯ ಮಾಡುತ್ತ ಸಾಗಿರುವುದು ನಮ್ಮ ಭಾಗ್ಯ ಎಂದು ನುಡಿದರು.

ತ್ರಿಪುರಾಂತ ವ
ಸನ್ಮಾನ ಕಾರ್ಯ
ಗಣ್ಯರು, ಪ್ರಮುಖ
ಪದಾ
ಗೌರವ
ಹ
ಶಿವಾ
ಪ್ರೊ.ಸ
ಮಾತ
ಪ್ರಾಥ
ಲವಾರ
ರಾಜೋಳೆ ನಿರೂ
ಸ್ವಾಮಿ ನಾರಾಯ
ಭೂಶೆಟ್ಟಿ, ಮಲ್ಲಿಕಾಜ

ಡಿದ್ದ ಕಾಲೇಜಿನಲ್ಲಿ ಹಳೆವಿದ್ಯಾರ್ಥಿಗಳ ಸಂಘದ ರಚನೆ ಹಾಗೂ ಪದಾಧಿಕಾರಿಗಳ ಆಯ್ಕೆಗಾಗಿ 23ರಂದು ಬೆಳಗ್ಗೆ 11ಕ್ಕೆ ಸಭೆ ಹಮ್ಮಿಕೊಳ್ಳಲಾಗಿದ್ದು, 2009-10 ಶೈಕ್ಷಣಿಕ ಸಾಲಿನಿಂದ ಸದ್ಯದವರೆಗೆ ಬಿಎ, ಬಿಕಾಂ, ಬಿಬಿಎಂನಲ್ಲಿ ಉತ್ತೀರ್ಣಗೊಂಡ ಎಲ್ಲ ವಿದ್ಯಾರ್ಥಿಗಳು ಹಾಜರಾಗಬೇಕು ಎಂದು ಹಳೆಯ ವಿದ್ಯಾರ್ಥಿಗಳ ಸಂಘದ ಸಲಹೆಗಾರ ಹಾಗೂ ಪ್ರಾಧ್ಯಾಪಕ ಸಂಗಪ್ಪ ಮಾಮನಶೆಟ್ಟಿ ಕೋರಿದ್ದಾರೆ.

ನಿಧನ

ಗಂಗಮ್ಮ ಹರವಾಳ



ಜೀವರ್ಗಿ : ತಾಲೂಕಿನ ಹರವಾಳ ಗ್ರಾಮದ ಗಂಗಮ್ಮ

VIJAYAVANI » KALABURAGI
ಭಾನುವಾರ 14 ಮಾರ್ಚ್ 2021
14 MARCH 2021
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

Scanned with OKEN Scanner

ಡಾ. ಅಭಿನವಶ್ರೀಗಳಿಗೆ ನಾಗರಿಕ ಗೌರವ ಸನ್ಮಾನ

• ಪ್ರಜಾವಾಹಿನಿ-ಬಸವಕಲ್ಯಾಣ



ನಮ್ಮ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳನ್ನು ಗುರುತಿಸಿ ಬೆಂಗಳೂರಿನ ಆಧ್ಯಾತ್ಮ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿ ಗೌರವಿಸಿದ್ದು ನನಗಲ್ಲ. ಸದಾ ನಮ್ಮ ಕಾರ್ಯಗಳಲ್ಲಿ ಜೊತೆಯಾಗಿ ಸೇವೆ ಸಲ್ಲಿಸುತ್ತಿರುವ ಭಕ್ತರಿಗೆ ಸಲ್ಲುತ್ತದೆ ಎಂದು ಗವಿಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಸಂಸ್ಥಾನ ಗವಿಮಠದಲ್ಲಿ ಶುಕ್ರವಾರ ತ್ರಿಪುರಾಂತ-ಬಸವಕಲ್ಯಾಣದ ಸದ್ಭಕ್ತರು ಏರ್ಪಡಿಸಿದ ಸಮಾರಂಭದಲ್ಲಿ "ನಾಗರಿಕ ಗೌರವ ಸನ್ಮಾನ " ಸ್ವೀಕರಿಸಿ ಮಾತನಾಡಿದರು.

ನಾವು ಕೈಕೊಂಡ ಮಹತ್ವದ ಸಾಮಾಜಿಕ ಸುಧಾರಣೆಯಾದ ವ್ಯಸನ ಮುಕ್ತ ಸಮಾಜ ನಿರ್ಮಾಣ ಸಂಕಲ್ಪ ಮಾಡಿ ನಿಮ್ಮ ದುಶ್ಚಟಗಳನ್ನು ನನ್ನ ಜೋಳಿಗೆಗೆ ಹಾಕಿ ಎಂದು ನಗರದ ಮುಖ್ಯರಸ್ತೆಯಲ್ಲಿ ನಡೆಸಿದ ಅಭಿನವ ಜೋಳಿಗೆ ಪಾದಯಾತ್ರೆ, ಹಾಗೆಯೇ ಸಸಿ ನೆಡುವ, ನಗರ ಸ್ವಚ್ಛ ಗೊಳಿಸುವ ಇಂಥಾ ಹತ್ತು ಹಲವು ಕಾರ್ಯಗಳನ್ನು ಕೈಲಾದ ಮಟ್ಟಿಗೆ ಮಾಡುತ್ತ ಸಾಗಿದ್ದೇವೆ. ಇದಕ್ಕೆ ಎಲ್ಲ ಭಕ್ತರ ಭಕ್ತಿ ಮತ್ತು ಸಹಕಾರ ಮುಖ್ಯ ಎಂದರು.

ಇದು ನನಗೆ ಬಯಸದೆ ಬಂದ ಭಾಗ್ಯ ಅದು ನಮ್ಮ ನಾಡಿನ ನಡೆದಾಡುವ ದೇವರಾದ ಸುಕ್ಷೇತ್ರ ಹಾರಕೂಡದ ಸಂಸ್ಥಾನ ಹಿರೇಮಠದ ಡಾ. ಚೆನ್ನವೀರ ಶಿವಾಚಾರ್ಯರ ದಿವ್ಯಸಾನಿಧ್ಯದಲ್ಲಿ ಈ ನಾಗರಿಕ ಗೌರವ ಸನ್ಮಾನ ಮಾಡಿದ್ದು ನಮ್ಮ ಭಾಗ್ಯ. ಈ ಗೌರವ ಡಾಕ್ಟರೇಟ್ ನಮ್ಮ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ. ಇದು ಒಂದು ಅರ್ಥಪೂರ್ಣ ಸಮಾರಂಭ ಎಂದು ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಲ್ಲಯ್ಯ ಹಿರೇಮಠ, ಡಾ. ಪ್ಹಿ.ಪ್ಹಿ. ಮಂಡಿ, ಡಾ. ಬಸವರಾಜ ಸ್ವಾಮಿ ತ್ರಿಪುರಾಂತ, ಶ್ರೀನಿವಾಸ ರೆಡ್ಡಿ ಹಣಮಂತವಾಡಿ, ಬಸವರಾಜ ಸ್ವಾಮಿ ನಿವೃತ ಸಿಂಡಿಕೇಟ ಬ್ಯಾಂಕ ಮ್ಯಾನೇಜರ, ಸೋಮಶೇಖರ ವಸ್ತದ, ಬಿಜೆಪಿ ಮುಖಂಡರು ಪ್ರದೀಪ ವಾತಡೆ, ರಮೇಶ ಸ್ವಾಮಿ, ಗುರುಲಿಂಗಯ್ಯ ಸ್ವಾಮಿ ಕಟಗಿಮಠ, ಕಾಗ್ರೇಸ ಮುಖಂಡ ಅರ್ಜುನ ಕನಕ, ವಿರಶೆಟ್ಟ ಪಾಟೀಲ, ಬಸವರಾಜ ಪಾರಾ, ಗುರು ದೇಗಾವ, ಜಗನ್ನಾಥ ಸ್ವಾಮಿ, ಕೃಷ್ಣಕುಮಾರ ರೆಡ್ಡಿ, ರಾಜು ಪಾಟೀಲ ತ್ರಿಪೂರಾಂತ, ಮರೆಪ್ಪ ಪಾಟೀಲ, ಕಾರ್ತಿಕ ಬಿರಾದಾರ, ಚನ್ನಪ್ಪ ರಾಜಾಪುರೆ, ನಾಗರಾಜ ರೋಜೆ, ಶ್ರೀಮದ್ವೀರಶೈವ ಸದ್ಭಬ್ಬೋಧನಾ ಸಂಸ್ಥೆ ಮಹಿಳಾ ಘಟಕದ ತಾಲೂಕಾ ಅಧ್ಯಕ್ಷ ಸವಿತಾ ರಮೇಶ ಸ್ವಾಮಿ, ಪಾರ್ವತಿ ವೀರಯ್ಯ ಸ್ವಾಮಿ, ವಿಮಲಾಬಾಯಿ ಮಾಣಿಕಪ್ಪ ಬಿರಾದಾರ, ಸರಸ್ವತಿ ಬೆಂಬಳ್ಳಿ, ರೇಣುಕಾ ಮಠಪತಿ, ಶಿವಲೀಲಾ ಲವಾರೆ, ಸೂರ್ವಣಾ ನಂದಿ, ಸುರೇಖಾ ಶೀಲವಂತ ಮುಂತಾದವರು ಉಪಸ್ಥಿತರಿದ್ದರು.

ಪ್ರಜಾವಾಹಿನಿ
ನಿತ್ಯ ನಿರಂತರ

ಬಸವ ಕಲ್ಯಾಣದ ಗವಿ ಮಠದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸನ್ಮಾನ

ಜವಾಬ್ದಾರಿ ಹೆಚ್ಚಿಸಿದ ಗೌಡಾ ಪದವಿ

■ ವಿಕ ಸುದ್ದಿಲೋಕ ಬಸವಕಲ್ಯಾಣ



ಬಸವಕಲ್ಯಾಣದ ಗವಿ ಮಠದಲ್ಲಿ ಏರ್ಪಡಿಸಿದ ಸಮಾರಂಭದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಸನ್ಮಾನಿಸಲಾಯಿತು.

ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳನ್ನು ಗುರುತಿಸಿ ಬೆಂಗಳೂರಿನ ಆಧ್ಯಾತ್ಮ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿ ಗೌರವಿಸಿದ್ದು ನಮ್ಮ ಕಾರ್ಯಗಳಲ್ಲಿ ಜೊತೆಯಾಗಿ ಸೇವೆ ಸಲ್ಲಿಸುತ್ತಿರುವ ಭಕ್ತರಿಗೆ ಸಲ್ಲುತ್ತದೆ ಎಂದು ತ್ರಿಪುರಾಂತನ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತ್ರಿಪುರಾಂತನ ಗವಿ ಮಠದಲ್ಲಿ ಸದ್ಭಕ್ತರು ಏರ್ಪಡಿಸಿದ ಸಮಾರಂಭದಲ್ಲಿ ನಾಗರಿಕ ಗೌರವದ ಸನ್ಮಾನ ಸ್ವೀಕರಿಸಿ ಮಾತನಾಡಿ, ಈ ಪ್ರಶಸ್ತಿ ಬಯಸದೆ ಬಂದ ಭಾಗ್ಯ. ನಾಡಿನ ನಡೆದಾಡುವ ದೇವರಾದ ಹಾರಕೂಡದ ಸಂಸ್ಥಾನ ಹಿರೇಮಠದ ಡಾ.ಚೆನ್ನವೀರ ಶಿವಾಚಾರ್ಯರ ಸಾನಿಧ್ಯದಲ್ಲಿ ಈ ಸನ್ಮಾನ ಮಾಡಿದ್ದು ನಮ್ಮ ಭಾಗ್ಯ. ಗೌರವ ಡಾಕ್ಟರೇಟ್ ಜವಾಬ್ದಾರಿ ಮತ್ತಷ್ಟು ಹೆಚ್ಚಿಸಿದೆ ಎಂದರು.ಹಾರಕೂಡ ಮಠದ ಪೀಠಾಧಿಪತಿ ಡಾ.ಚನ್ನವೀರ ಶಿವಾಚಾರ್ಯರು ಸಾನ್ನಿಧ್ಯವಹಿಸಿದ್ದರು. ತಹಶೀಲ್ದಾರ್ ಸಾವಿತ್ರಿ ಶರಣು ಸಲಗರ ಮಾತನಾಡಿ, ಭಾರತ ಆಧ್ಯಾತ್ಮವನ್ನು ಜಗತ್ತಿಗೆ ಕೊಡುಗೆಯಾಗಿ ನೀಡಿದೆ. ಬೆಂಗಳೂರಿನ ಆಧ್ಯಾತ್ಮ ವಿಶ್ವವಿದ್ಯಾಲಯವು ಬಸವಕಲ್ಯಾಣದ ಆಧ್ಯಾತ್ಮ ಮೂರ್ತಿಯಾದ ಅಭಿನವ ಶ್ರೀಗಳಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿ ವಿಶ್ವವಿದ್ಯಾಲಯ ತನ್ನ ಗೌರವ ಹೆಚ್ಚಿಸಿಕೊಂಡಿದೆ ಎಂದು ತಿಳಿಸಿದರು.ಅಧ್ಯಕ್ಷತೆ ವಹಿಸಿದ್ದ ಸ್ವಾಗತ ಸಮಿತಿಯ ಅಧ್ಯಕ್ಷ ಶರಣಪ್ಪ ಬಿರಾದಾರ ಮಾತನಾಡಿದರು. ಪ್ರೊ.ಸೂರ್ಯಕಾಂತ ಶೀಲವಂತ ಪ್ರಾಸ್ತಾವಿಕ ಮಾತನಾಡಿದರು.

ಮಲ್ಲಯ್ಯ ಹಿರೇಮಠ, ಡಾ.ಪಿ.ಪಿ.ಮಂಡಿ, ಡಾ.ಬಸವರಾಜ ಸ್ವಾಮಿ ತ್ರಿಪುರಾಂತ, ಶ್ರೀನಿವಾಸ ರೆಡ್ಡಿ ಹಣಮಂತವಾಡಿ, ಬಸವರಾಜ ಸ್ವಾಮಿ, ಸೋಮಶೇಖರ, ಬಿಜೆಪಿ ಮುಖಂಡ ಪ್ರದೀಪ ವಾತಡೆ, ರಮೇಶ ಸ್ವಾಮಿ, ಗುರುಲಿಂಗಯ್ಯ ಸ್ವಾಮಿ ಕಟಗಿಮಠ, ಅರ್ಜುನ ಕನಕ, ವಿರಶೆಟ್ಟ ಪಾಟೀಲ, ಬಸವರಾಜ ಪಾರಾ, ಗುರು ದೇಗಾವ, ಜಗನ್ನಾಥ ಸ್ವಾಮಿ, ಕೃಷ್ಣಕುಮಾರ ರೆಡ್ಡಿ, ರಾಜು ಪಾಟೀಲ ತ್ರಿಪೂರಾಂತ, ಮರೆಪ್ಪ ಪಾಟೀಲ, ಕಾರ್ತಿಕ ಬಿರಾದಾರ, ಚನ್ನಪ್ಪ ರಾಜಾಪುರೆ, ನಾಗರಾಜ ರೋಜೆ, ಸವಿತಾ ರಮೇಶ ಸ್ವಾಮಿ, ಪಾರ್ವತಿ ವೀರಯ್ಯ ಸ್ವಾಮಿ, ವಿಮಲಾಬಾಯಿ ಮಾಣಿಕಪ್ಪ ಬಿರಾದಾರ, ಸರಸ್ವತಿ ಬೆಂಬಳ್ಳಿ ರೇಣುಕಾ ಮಠಪತಿ, ಶಿವಲೀಲಾ ಲವಾರೆ, ಸುರ್ವಣಾ ನಂದಿ, ಸುರೇಖಾ ಶೀಲವಂತ ಇದ್ದರು.ವೀರಣ್ಣ ಶೀಲವಂತ ಪ್ರಾರ್ಥನೆ ಗೀತೆ ಹಾಡಿದರು. ಬಸವಂತಪ್ಪ ಲವಾರೆ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ಭಕ್ತಿ ಸಂಗೀತ ಸೇವೆಯನ್ನು ನಾಗಣ್ಣ ಭೂಶೆಟ್ಟಿ, ಮಲ್ಲಿಕಾರ್ಜುನ ಶೀಲವಂತ ಹಾಗೂ ರಂಜನಾ ಭೂಶೆಟ್ಟಿ ನಡೆಸಿಕೊಟ್ಟರು. ಚಂದ್ರಕಾಂತ ಸ್ವಾಮಿ ನಾರಾಯಣಪೂರ ವಂದಿಸಿದರು.

> **ವ್ಯಸನಮುಕ್ತ ಸಮಾಜ ನಿರ್ಮಾಣ ಸಂಕಲ್ಪಮಾಡಿ ನಿಮ್ಮ ದುಶ್ಚಟಗಳನ್ನು ನನ್ನ ಜೋಳಿಗೆಗೆ ಹಾಕಿ ಎಂದು ನಗರದ ಮುಖ್ಯರಸ್ತೆಯಲ್ಲಿ ನಡೆಸಿದ ಅಭಿನವ ಜೋಳಿಗೆ ಪಾದಯಾತ್ರೆ, ಹಾಗೆಯೇ ಸಸಿ ನೆಡುವ, ನಗರ ಸ್ವಚ್ಛ ಗೊಳಿಸುವ ಕಾರ್ಯಗಳಿಗೆ ಸಹಕಾರ ಅಗತ್ಯ.**
>
> **- ಅಭಿನವ ಘನ ಲಿಂಗ ರುದ್ರಮುನಿ ಶಿವಾಚಾರ್ಯರು,**
> ತ್ರಿಪುರಾಂತ,ಬಸವಕಲ್ಯಾಣ

ವಿಜಯ ಕರ್ನಾಟಕ tw
ಸೋಮವಾರ,15 ಮಾರ್ಚ್ 2021, ಕಲಬುರಗಿ

Scanned with OKEN Scanner

ಡಾಕ್ಟರೇಟ್ ಪದವಿ ಜವಾಬ್ದಾರಿ ಹೆಚ್ಚಿಸಿದೆ: ಘನಲಿಂಗ ಶ್ರೀ

ಉದಯಕಾಲ ನ್ಯೂಸ್

ಬಸವಕಲ್ಯಾಣ: ನಾವು ಮಾಡುತ್ತಿರುವ ಸಾಮಾಜಿಕ ಕಾರ್ಯಗಳು ಅಲ್ಲದೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಗಳನ್ನು ಗುರುತಿಸಿ, ಬೆಂಗಳೂರಿನ ಆಧ್ಯಾತ್ಮ ವಿಶ್ವವಿದ್ಯಾಲಯವು ನಮಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನಮಾಡಿ ಗೌರವಿಸಿದ್ದು ನನಗಲ್ಲ, ಎಲ್ಲಾ ಭಕ್ತರಿಗೆ ಶ್ರೇಯಸ್ಸು ಸಲ್ಲಿತ್ತದೆ ಎಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿ ಹೇಳಿದರು.

ತ್ರಿಪುರಾಂತ ಗವಿಮಠದಲ್ಲಿ ಹಮ್ಮಿಕೊಂಡ ನಾಗರಿಕ ಗೌರವ ಸನ್ಮಾನದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಇದಕ್ಕೆ ಕಾರಣ ನಾವು ಕೈಕೊಂಡ ಮಹತ್ವದ ಸಾಮಾಜಿಕ ಸುಧಾರಣೆಯಾದ, ವ್ಯಸನಮುಕ್ತ ಸಮಾಜ ನಿರ್ಮಾಣ ಸಂಕಲ್ಪಮಾಡಿ ನಿಮ್ಮ ದುಶ್ಚಟಗಳನ್ನು ನನ್ನ ಜೋಳಿಗೆಗೆ ಹಾಕಿ ಎಂದು ನಗರದ ಮುಖ್ಯರಸ್ತೆಯಲ್ಲಿ ನಡೆಸಿದ ಅಭಿನವ ಜೋಳಿಗೆ ಪಾದಯಾತ್ರೆ, ಹಾಗೆಯೇ ಸಶಿ ನೆಡುವದು, ನಗರ ಸ್ವಚ್ಛ ಗೊಳಿಸುವ ಇಂಥಾ ಹಲವಾರು ಕಾರ್ಯಗಳನ್ನು ಕೈಲಾದ ಮಟ್ಟಿಗೆ ಮಾಡುತ್ತ ಸಾಗಿದ್ದೇವೆ ಎಂದು ಹೇಳಿದರು. ಇದಕ್ಕೆ



ಎಲ್ಲ ಭಕ್ತರ ಭಕ್ತಿ ಮತ್ತು ಸಹಕಾರ ವಿದ್ದಾಗ ಮಾತ್ರ ಒಳ್ಳೆಯ ಕೀರ್ತಿ ಪಡೆಯಲು ಸಾಧ್ಯವಾಗುತ್ತದೆ ಎಂದರು.

ಇದು ನನಗೆ ಬಯಸದೆ ಬಂದ ಭಾಗ್ಯ. ನಮ್ಮ ನಾಡಿನ ನಡೆದಾಡುವ ದೇವರಾದ ಸುಕ್ಷೇತ್ರ ಹಾರಕೂಡ ಸಂಸ್ಥಾನ ಹಿರೇಮಠದ ಶ್ರೀ ಡಾ. ಚೆನ್ನವೀರ ಶಿವಾಚಾರ್ಯರ ದಿವ್ಯ ಸಾನಿಧ್ಯದಲ್ಲಿ, ಈ ನಾಗರಿಕ ಗೌರವ ಸನ್ಮಾನ ಮಾಡಿದ್ದು ನಮ್ಮ ಭಾಗ್ಯ. ಈ ಗೌರವ ಡಾಕ್ಟರೇಟ್ ನಮ್ಮ ಜವಾಬ್ದಾರಿಯನ್ನು ಸಾಮಾಜಿಕ ಕಾರ್ಯಗಳು ಮಾಡಲು ಹೆಚ್ಚಿನ ಕಾಲಜಿ ವಹಿಸಿದಂತಾಗಿದೆ ಎಂದು ಸಂತಸ ವ್ಯೆಕ್ತಪಡಿಸಿದರು.

ಡಾ. ಚೆನ್ನವೀರ ಶಿವಾ ಚಾರ್ಯರು ಶ್ರೀ ಅಭಿನವ ಘನಲಿಂಗ ಶ್ರೀಗಳಿಗೆ ಚಿನ್ನದ ಉಂಗರ ತೊಡಿಸಿದ ಅಭಿನಂದಿಸಿದರು.

ಮುಖ್ಯ ಆತಿಥಿಗಳಾಗಿ ತಹಶೀಲ್ದಾರ ಸಾವಿತ್ರಿ ಶರಣು ಸಲಗರ ಅವರು ಮಾತನಾಡಿ, ಭಾರತ ಆಧ್ಯಾತ್ಮ ವಿಷಯವನ್ನು ಜಗತ್ತಿಗೆ ಕೊಡುಗೆಯಾಗಿ ನೀಡಿದ ಮಹಾನ್ ದೇಶ. ಬೆಂಗಳೂರಿನ ಆಧ್ಯಾತ್ಮ ವಿಶ್ವವಿದ್ಯಾಲಯವು ಬಸವಕಲ್ಯಾಣದ ಆಧ್ಯಾತ್ಮ ಮೂರ್ತಿಗಳಾದ, ಅಭಿನವ ಶ್ರೀಗಳಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿ ಗೌರವಿಸಿ ವಿಶ್ವವಿದ್ಯಾಲಯ ತನ್ನ ಗೌರವ ಹೆಚ್ಚಿಸಿಕೊಂಡಿದೆ ಎಂದರು.

ಈ ನಾಗರಿಕ ಗೌರವ ಸನ್ಮಾನ ಸ್ವಾಗತ ಸಮಿತಿಯ ಅಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರೊ. ಸೂರ್ಯಕಾಂತ ಶೀಲವಂತ ಪ್ರಾಸ್ತಾವಿಕ ಮಾತನಾಡಿ, ಸಂಸ್ಥಾನ ಗವಿಮಠದ ಇತಿಹಾಸ ಪರಂಪರೆ ಮತ್ತು ಅಭಿನವ ಶ್ರೀಗಳ ಸಾಧನೆಯನ್ನು ಪರಿಚಯಿಸಿದರು. ಉಪಾಧ್ಯಕ್ಷ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಸದಸ್ಯರಾದ ವೀರಣ್ಣ ಶೀಲವಂತ ಪ್ರಾರ್ಥನೆ ಗೀತೆ ಹಾಡಿದರು. ರಮೇಶ ರಾಜೋಳೆ ನಿರೂಪಿಸಿದರು. ಭಕ್ತಿ ಸಂಗೀತ ಸೇವೆ ನಾಗಣ್ಣ ಭೂಶೆಟ್ಟಿ ಮಲ್ಲಿಕಾರ್ಜುನ ಶೀಲವಂತ ಹಾಗೂ ರಂಜನಾ ಭೂಶೆಟ್ಟಿ ನೆರವೇರಿಸಿದರು.

ಕಾರ್ಯಾಧ್ಯಕ್ಷ ಚಂದ್ರಕಾಂತ ಸ್ವಾಮಿ ನಾರಾಯಣಪೂರ ವಂದಿಸಿದರು.

ಈದೆ ವೇಳೆ ಮಲ್ಲಯ್ಯ ಹಿರೇಮಠ, ಡಾ. ವ್ಹಿ.ವ್ಹಿ.ಮಂಡಿ, ಡಾ. ಬಸವರಾಜ ಸ್ವಾಮಿ ತ್ರಿಪೂರಾಂತ, ಶ್ರೀನಿವಾಸ ರೆಡ್ಡಿ ಹನಮಂತವಾಡಿ, ಬಸವರಾಜ ಸ್ವಾಮಿ, ಸೋಮಶೇಖರ ವಸ್ತದ, ಬಿಜೆಪಿ ಮುಖಂಡ ಪ್ರದೀಪ ಪಾತಡೆ, ರಮೇಶ ಸ್ವಾಮಿ, ಗುರುಲಿಂಗಯ್ಯ ಸ್ವಾಮಿ ಕಟಗಿಮಠ, ಅರ್ಜುನ ಕನಕ, ವಿರಶೆಟ್ಟಿ ಪಾಟೀಲ, ಬಸವರಾಜ ಪಾರಾ, ಗುರು ದೇಗಾವ, ಜಗನ್ನಾಥ ಸ್ವಾಮಿ, ಕ್ರಿಷ್ಣಕುಮಾರ ರೆಡ್ಡಿ, ರಾಜು ಪಾಟೀಲ ತ್ರಿಪೂರಾಂತ, ಮರೇಪ್ಪ ಪಾಟೀಲ, ಕಾರ್ತಿಕ ಬಿರಾದಾರ, ಚನ್ನಪ್ಪ ರಾಜಾಪುರೆ, ನಾಗರಾಜ ರೋಜೆ, ಶ್ರೀಮದ್ವೀರಶೈವ ಸದ್ಭಬ್ಬೋಧನಾ ಸಂಸ್ಥೆ ಮಹಿಳಾ ಘಟಕದ ತಾಲೂಕಾ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ, ಪಾರ್ವತಿ ವೀರಯ್ಯ ಸ್ವಾಮಿ, ವಿಮಲಾಬಾಯಿ ಮಾಣಿಕಪ್ಪ ಬಿರಾದಾರ, ಸರಸ್ವತಿ ಬೆಂಬಳ್ಳಿ, ರೇಣುಕಾ ಮಠಪತಿ, ಶಿವಲೀಲಾ ಲವಾರೆ, ಸೂರ್ವಣಾ ನಂದಿ, ಸುರೇಖಾ ಶೀಲವಂತ ಮುಂತಾದವರು ಉಪಸ್ಥಿತರಿದ್ದರು.



ಸುಲ್ತಾನಬಾದ್ ವಾಡಿ ಗ್ರಾಮದಲ್ಲಿ ಹಮ್ಮಿಕೊಂಡ ಮಹರ್ಷಿ ವಾಲ್ಮೀಕಿ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಮೂರ್ತಿ ಅನಾವರಣ, ಕಳಸರೋಹಣ ಕಾರ್ಯಕ್ರಮವನ್ನು ಶಾಸಕ ರಾಜಶೇಖರ ಪಾಟೀಲ್ ಉದ್ಘಾಟಿಸಿದರು.

ವಿಜಯವಾಣಿ
VIJAYAVANI » KALABURAGI
ಸೋಮವಾರ 17 ಮೇ 2021
17 MAY 2021



ಬಸವಕಲ್ಯಾಣ ಸಂಸ್ಥಾನ ಗವಿಮಠದಲ್ಲಿ ಬಸವ ಜಯಂತಿ ಆಚರಿಸಲಾಯಿತು. ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮರೆಪ್ಪ ಪೊಲೀಸ್ ಪಾಟೀಲ್, ಸಾಗರ ವಿಶ್ವನಾಥ ಬುಕ್ಕಿಗಾರ ಇತರರಿದ್ದರು.

ವಿಜಯವಾಣಿ
ನಂ. 1 ಕನ್ನಡ ದಿನಪತ್ರಿಕೆ

Scanned with OKEN Scanner

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಹೇಳಿಕೆ

ಧರ್ಮ ಮಾರ್ಗದಿಂದ ಆಧ್ಯಾತ್ಮದ ಅರಿವು

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಧರ್ಮಮಾರ್ಗದ ಮೂಲಕ ಆಧ್ಯಾತ್ಮದ ಅರಿವಾಗುತ್ತದೆ' ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದ್ದಾರೆ.

ಇಲ್ಲಿನ ತ್ರಿಪುರಾಂತ ಗವಿಮಠದಲ್ಲಿ ಈಚೆಗೆ ಆಯೋಜಿಸಿದ್ದ ಶಿವಾನುಭವ ಚಿಂತನ ಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಆಧ್ಯಾತ್ಮವೆಂದರೆ ಬರೀ ದೈವಭಕ್ತಿ ಅಲ್ಲ. ಜ್ಞಾನದ ಸಹಜ ಅನುಭಾವವಾಗಿದೆ. ಇದನ್ನು ಸಾಧಿಸುವುದು ಕಠಿಣವಾಗಿದ್ದರೂ ಸಂತೃಪ್ತ ಜೀವನಕ್ಕೆ ಇದು ಸುಲಭದ ಮಾರ್ಗ' ಎಂದರು.

ಹುಲಸೂರ ತಹಶೀಲ್ದಾರ್ ಆಗಿ ಬಡ್ತಿ ಪಡೆದ ಶಿವಾನಂದ ಮೇತ್ರೆ ಮಾತನಾಡಿ, 'ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಣ್ಣ ವಯಸ್ಸಿನಲ್ಲಿಯೇ ಉತ್ತಮ ಸಾಧನೆಗೈದು ಗೌರವ ಡಾಕ್ಟರೇಟ್‌ಗೆ ಭಾಜನರಾಗಿದ್ದಾರೆ. ಗುರುವಾಗಿ ಅನೇಕರಿಗೆ ಉತ್ತಮ ಮಾರ್ಗದರ್ಶನ ಗೈದಿದ್ದಾರೆ' ಎಂದು ಹೇಳಿದರು.

ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿ, 'ಗವಿಮಠವು ಐತಿಹಾಸಿಕ ಹಾಗೂ ಧಾರ್ಮಿಕವಾಗಿ ಮಹತ್ವ ಪಡೆದಿದ್ದು, ಸುಂದರ ತಾಣವಾಗಿದೆ. ದೈವಿ ಸಂಕಲ್ಪ ಈಡೇರುವ ಸುಕ್ಷೇತ್ರವಾಗಿದೆ. ಪೀಠಾಧಿಪತಿ ಅಭಿನವಶ್ರೀಗಳಿಂದ ಮಠ ಬೆಳೆದಿದೆ' ಎಂದರು.

ವೀರಣ್ಣ ಶೀಲವಂತ, ಪ್ರೊ. ರುದ್ರೇಶ್ವರ ಗೋರಟಾ, ಕ್ಷೇಮಲಿಂಗ ಬೆಳಮಗಿ, ರುದ್ರಮುನಿ ಹಿರೇಮಠ, ಚನ್ನವೀರ ಜಮಾದಾರ, ರವಿ ಮೇತ್ರೆ, ವೀರಶೆಟ್ಟಿ ಪಾಟೀಲ, ಪುಂಡಲೀಕ್ ಬೊಕ್ಕೆ ಹಾಗೂ ಮಹೇಶ ರಾಗಿ ಇದ್ದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಈಚೆಗೆ ನಡೆದ ಶಿವಾನುಭವ ಚಿಂತನ ಗೋಷ್ಠಿಯಲ್ಲಿ ತಹಶೀಲ್ದಾರ್ ಆಗಿ ಬಡ್ತಿ ಪಡೆದ ಶಿವಾನಂದ ಮೇತ್ರೆ ಅವರನ್ನು ಸನ್ಮಾನಿಸಲಾಯಿತು

ಪ್ರಜಾವಾಣಿ ಸೋಮವಾರ • ಮಾರ್ಚ್ 15, 2021

'ಆಧ್ಯಾತ್ಮ ಜ್ಞಾನದ ಸಹಜ ಅನುಭಾವ'

ಸಂ.ಕ.ಸಮಾಚಾರ ಬಸವಕಲ್ಯಾಣ

ಆಧ್ಯಾತ್ಮ ಕೇವಲ ದೈವ ಭಕ್ತಿ ಅಲ್ಲ, ಅದೊಂದು ಜ್ಞಾನದ ಸಹಜ ಅನುಭಾವ ಎಂದು ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು. ತ್ರಿಪುರಾಂತ್‌ನ ಗವಿಮಠದಲ್ಲಿ ಆಯೋಜಿಸಿದ ಮಾಸಿಕ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಮಾತಾನಾಡಿ ಆಧ್ಯಾತ್ಮ ಎಂಬುದು ಅತ್ಯಂತ ಕಠಿಣವಾದ ಚಿಂತನ. ಧರ್ಮ ಮಾರ್ಗದ ಮೂಲಕ ಆಧ್ಯಾತ್ಮದ ಜ್ಞಾನ ಅರಿತು ಭಕ್ತರು ಸಂತೃಪ್ತ ಜೀವನ ನಡೆಸಲು ಸಾಧ್ಯ ಎಂದರು. ಸನ್ಮಾನ ಸ್ವೀಕರಿಸಿದ ಹುಲಸೂರು ತಹಶೀಲ್ದಾರ್ ಶಿವಾನಂದ ಮೇತ್ರೆ ಮಾತನಾಡಿ ನಿರಂತರ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಗವಿಮಠದ ಶ್ರೀಗಳಿಗೆ ಬೆಂಗಳೂರಿನ ಆಧ್ಯಾತ್ಮಿಕ ವಿವಿಯಿಂದ ಗೌರವ ಡಾಕ್ಟರೇಕ್ ಪದವಿ ನೀಡಿದ್ದು ಸಂತಸ ತಂದಿದೆ ಎಂದರು. ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಸಹ ಮಾತನಾಡಿದರು.

ವೀರಣ್ಣ ಶೀಲವಂತ, ರುದ್ರಮುನಿ ಹಿರೇಮಠ, ಸರ್ಕಾರಿ ನೌಕರರ ಸಂಘದ ಗೌರವ ಸಲಹೆಗಾರ ಚನ್ನವೀರ ಜಮಾದಾರ, ಸಂಘದ ನಿರ್ದೇಶಕ ರವೀಂದ್ರ, ವೀರಶೆಟ್ಟಿ ಪಾಟೀಲ್, ಪುಂಡಲೀಕ ಬೊಕ್ಕೆ, ಮಹೇಶ ರಾಗಿ, ಕ್ಷೇಮಲಿಂಗ ಬೆಳಮಗಿ, ಪ್ರೊ. ರುದ್ರೇಶ್ವರ ಗೋರ್ಟಾ ಸೇರಿದಂತೆ ಇತರರಿದ್ದರು. ಇದೇ ವೇಳೆ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಸರ್ಕಾರಿ ನೌಕರರ ಸಂಘದಿಂದ ಸನ್ಮಾನಿಸಿ, ಅಭಿನಂದಿಸಲಾಯಿತು.



ಬಸವಕಲ್ಯಾಣ : ತ್ರಿಪುರಾಂತ್‌ನ ಗವಿಮಠದಲ್ಲಿ ಆಯೋಜಿಸಿದ ಮಾಸಿಕ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಹುಲಸೂರ ತಹಶೀಲ್ದಾರ ಶಿವಾನಂದ ಮೇತ್ರೆ ಅವರನ್ನು ಸನ್ಮಾನಿಸಲಾಯಿತು.

ಸಂಯುಕ್ತ ಕರ್ನಾಟಕ
15 ಮಾರ್ಚ್ 2021
ಸೋಮವಾರ
ಕಲಬುರಗಿ

Scanned with OKEN Scanner

ಭಕ್ತಾದಿಗಳಿಂದ ಶ್ರೀಗಳಿಗೆ ಸನ್ಮಾನ



ಬಸವಕಲ್ಯಾಣ: ಗೌರವ ಡಾಕ್ಟರೇಟ್ ಪದವಿ ಪಡೆದ ಶ್ರೀ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಗವಿಮಠದಲ್ಲಿ ಭಕ್ತಾದಿಗಳು ಗೌರವಿಸಿದರು.



ಬಸವಕಲ್ಯಾಣ: ಎಂಎಲ್‌ಸಿ ವಿಜಯಸಿಂಗ್ ಶ್ರೀಗಳಿಗೆ ಭೇಟಿ ನೀಡಿ ಸನ್ಮಾನಿಸಿದರು.

ಬಸವಕಲ್ಯಾಣ: ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳನ್ನು ಗುರುತಿಸಿ ಬೆಂಗಳೂರಿನ ಅಧ್ಯಾತ್ಮ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿ ಗೌರವಿಸಿದ್ದು ನನಗಲ್ಲ ಸದಾ ನಮ್ಮ ಕಾರ್ಯಗಳಲ್ಲಿ ಜೊತೆಯಾಗಿ ಸೇವೆ ಸಲ್ಲಿಸುತ್ತಿರುವ ಭಕ್ತರಿಗೆ ಸಲ್ಲುತ್ತದೆ ಎಂದು ಗವಿಮಠದ ಶ್ರೀ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಶ್ರೀಗಳಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದ್ದ ಹಿನ್ನೆಲೆಯಲ್ಲಿ ನಗರದ ಗವಿಮಠದ ಸಂಸ್ಥಾನ ಮಠದಲ್ಲಿ ತ್ರಿಪುರಾಂತ-ಬಸವಕಲ್ಯಾಣ ಸದ್ಭಕರು ಹಮ್ಮಿಕೊಂಡ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನಸ್ವೀಕರಿಸಿ ಅವರು ಮಾತನಾಡಿದರು. ತಹಶೀಲ್ದಾರ್ ಸಾವಿತ್ರಿ ಶರಣು ಸಲಗರ ಮಾತನಾಡಿದರು. ನಾಗರಿಕ ಗೌರವ ಸನ್ಮಾನ ಸ್ವಾಗತ ಸಮಿತಿ ಅಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಪ್ರೊ। ಸೂರ್ಯಕಾಂತ ಶೀಲವಂತ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಲ್ಲಯ್ಯ ಹಿರೇಮಠ, ಡಾ। ವಿ.ವಿ. ಮಂಡಿ, ಡಾ। ಬಸವರಾಜ ಸ್ವಾಮಿ ತ್ರಿಪುರಾಂತ, ಶ್ರೀನಿವಾಸ ರೆಡ್ಡಿ ಹನಮಂತವಾಡಿ, ಬಸವರಾಜ ಸ್ವಾಮಿ, ಬಿಜೆಪಿ ಮುಖಂಡ ಪ್ರದೀಪ ವಾತಡೆ, ರಮೇಶ ಸ್ವಾಮಿ, ಗುರುಲಿಂಗಯ್ಯ ಸ್ವಾಮಿ, ಅರ್ಜುನ ಕನಕ, ವಿರಶೆಟ್ಟ ಪಾಟೀಲ, ಬಸವರಾಜ ಪಾರಾ, ಗುರು ದೇಗಾವ, ಜಗನ್ನಾಥ ಸ್ವಾಮಿ, ಪ್ರೊ। ರುದ್ರೇಶ್ವರ ಗೋರ್ಟಾ, ರೇವನಸಿದ್ಧಯ್ಯ ಮಠಪತಿ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ನಂದಿ ಮತ್ತಿತರರು ಇದ್ದರು. ಉಪಾಧ್ಯಕ್ಷ ಬಸವಂತಪ್ಪ ಲವಾರೆ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ಕಾರ್ಯಾಧ್ಯಕ್ಷ ಚಂದ್ರಕಾಂತ ಸ್ವಾಮಿ ನಾರಾಯಣಪುರ ವಂದಿಸಿದರು.

ಉದಯವಾಣಿ ಕಲಬುರಗಿ
ಭಾನುವಾರ, ಮಾರ್ಚ್ 14, 2021

ಅಧ್ಯಾತ್ಮ ಜ್ಞಾನದ ಅನುಭಾವ



ಬಸವಕಲ್ಯಾಣದ ತ್ರಿಪುರಾಂತನ ಗವಿಮಠದಲ್ಲಿ ಆಯೋಜಿಸಿದ ಮಾಸಿಕ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಹುಲಸೂರ ತಹಸೀಲ್ದಾರ್ ಶಿವಾನಂದ ಮೇತ್ರೆ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇತರರಿದ್ದರು.

ಬಸವಕಲ್ಯಾಣ: ಅಧ್ಯಾತ್ಮ ದೈವ ಭಕ್ತಿ ಅಲ್ಲ, ಅದೊಂದು ಜ್ಞಾನದ ಸಹಜ ಅನುಭಾವ ಎಂದು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ತ್ರಿಪುರಾಂತನ ಗವಿಮಠದಲ್ಲಿ ಆಯೋಜಿಸಿದ್ದ ಮಾಸಿಕ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಮಾತನಾಡಿ, ಅಧ್ಯಾತ್ಮ ಎಂಬುದು ಕಠಿಣ ಚಿಂತನ. ಧರ್ಮ ಮಾರ್ಗದ ಮೂಲಕ ಅಧ್ಯಾತ್ಮದ ಜ್ಞಾನ ಅರಿತರೆ ಸಂತೃಪ್ತ ಜೀವನ ನಡೆಸಲು ಸಾಧ್ಯ ಎಂದರು.

ಹುಲಸೂರು ತಹಸೀಲ್ದಾರ್ ಶಿವಾನಂದ ಮೇತ್ರೆ ಮಾತನಾಡಿ, ನಿರಂತರ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಗವಿಮಠದ ಶ್ರೀಗಳಿಗೆ ಬೆಂಗಳೂರಿನ ಆಧ್ಯಾತ್ಮಿಕ ವಿವಿಯಿಂದ ಗೌರವ ಡಾಕ್ಟರೇಕ್ ಪದವಿ ದೊರೆತ್ತಿದ್ದು, ಸಂತಸ ತಂದಿದೆ ಎಂದರು.

ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿದರು. ಪ್ರಮುಖರಾದ ವೀರಣ್ಣ ಶೀಲವಂತ, ರುದ್ರಮುನಿ ಹಿರೇಮಠ, ಸರ್ಕಾರಿ ನೌಕರರ ಸಂಘದ ಗೌರವ ಸಲಹೆಗಾರ ಚನ್ನವೀರ ಜಮಾದಾರ, ಸಂಘದ ನಿರ್ದೇಶಕ ರವೀಂದ್ರ, ವೀರಶೆಟ್ಟಿ ಪಾಟೀಲ್, ಪುಂಡಲೀಕ ಬೊಕ್ಕೆ, ಮಹೇಶ ರಾಗಿ, ಕ್ಷೇಮಲಿಂಗ ಬೆಳಮಗಿ, ಪ್ರೊ.ರುದ್ರೇಶ್ವರ ಗೋರ್ಟಾ ಇತರರಿದ್ದರು.

ಗೌರವ ಡಾಕ್ಟರೇಟ್ ಪದವಿ ಪುರಸ್ಕೃತ ಗವಿ ಮಠದ ಪೀಠಾಧಿಪತಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಸರ್ಕಾರಿ ನೌಕರರ ಸಂಘದ ತಾಲೂಕು ಘಟಕದಿಂದ ಸನ್ಮಾನಿಸಿ, ಅಭಿನಂದಿಸಲಾಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 15 ಮಾರ್ಚ್ 2021
15 MARCH 2021

ಘನಲಿಂಗ ಶ್ರೀಗಳಿಗೆ ಎಂಎಲ್‌ಸಿ ವಿಜಯಸಿಂಗ್ ಸನ್ಮಾನ



ಬಸವಕಲ್ಯಾಣ: ಬೆಂಗಳೂರಿನ ಅಧ್ಯಾತ್ಮ ವಿಶ್ವವಿದ್ಯಾಲಯವು ಇಲ್ಲಿನ ತ್ರಿಪುರಾಂತನ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಈಚೆಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದ ಹಿನ್ನಿಲೆಯಲ್ಲಿ, ವಿಧಾನ ಪರಿಷತ್ ಸದಸ್ಯ ವಿಜಯಸಿಂಗ್ ಅವರು ಮಠಕ್ಕೆ ಭೇಟಿ ನೀಡಿ, ಶ್ರೀ ಅಭಿನವ ಘನಲಿಂಗ ಶ್ರೀಗಳಿಗೆ ಸನ್ಮಾನಿಸಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಹಾಗೂ ಜಿಲ್ಲಾ ಕಾಂಗ್ರೆಸ್ ಕಮಿಟಿ ಉಪಾಧ್ಯಕ್ಷ ರವಿಂದ್ರಕುಮಾರ ಬೋರಾಳೆ, ನಗರಸಭೆ ಸದಸ್ಯ ರಾಮ ಜಾಧವ, ಮುಖಂಡರಾದ ಶರಣು ಅಲಗೂಡ, ಸೋನು ಹಜಾರಿ, ರಂಜಿತ ಗಾಯಕವಾಡ, ಸಂತೋಷ ಗುತ್ತೆದಾರ ದೇವನಾಳ ಮತ್ತಿತರರು ಉಪಸ್ಥಿತರಿದ್ದರು.

UDAYAKALA
Monday, March 15, 2021

Scanned with OKEN Scanner

ಸಂತೃಪ್ತ ಜೀವನ ನಡೆಸಲು ಅಧ್ಯಾತ್ಮದ ಜ್ಞಾನ ಅವಶ್ಯ

ವಿಕಸುದ್ದಿಲೋಕ ಬಸವಕಲ್ಯಾಣ

ಅಧ್ಯಾತ್ಮ ಕೇವಲ ದೈವ ಭಕ್ತಿ ಅಲ್ಲ, ಅದೊಂದು ಜ್ಞಾನದ ಸಹಜ ಅನುಭಾವ ಎಂದು ನಗರದ ಸಂಸ್ಥಾನ ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ತ್ರಿಪುರಾಂತನ ಗವಿಮಠದಲ್ಲಿ ನಡೆದ ಮಾಸಿಕ ಶಿವಾನುಭವ ಚಿಂತನ ಕಾರ್ಯಕ್ರಮ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಅಧ್ಯಾತ್ಮ ಎಂಬುದು ಅತ್ಯಂತ ಕಠಿಣವಾದ ಚಿಂತನ. ಧರ್ಮ ಮಾರ್ಗದ ಮೂಲಕ ಅಧ್ಯಾತ್ಮದ ಜ್ಞಾನ ಅರಿತು ಭಕ್ತರು ಸಂತೃಪ್ತ ಜೀವನ ನಡೆಸಲು ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿದ ಹುಲಸೂರು ತಹಸೀಲ್ದಾರ್ ಶಿವಾನಂದ ಮೇತ್ರೆ ಮಾತನಾಡಿ,ನಿರಂತರ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಗವಿಮಠದ ಶ್ರೀಗಳಿಗೆ ಬೆಂಗಳೂರಿನ ಆಧ್ಯಾತ್ಮಿಕ ವಿವಿಯಿಂದ ಗೌರವ ಡಾಕ್ಟರೇಕ್ ಪದವಿ ನೀಡಿದ್ದು ಸಂತಸ ತಂದಿದೆ ಎಂದರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿದರು. ಪ್ರಮುಖರಾದ ವೀರಣ್ಣ ಶೀಲವಂತ, ರುದ್ರಮುನಿ ಹಿರೇಮಠ, ಸರ್ಕಾರಿ ನೌಕರರ ಸಂಘದ ಗೌರವ ಸಲಹಗಾರ ಚನ್ನವೀರ ಜಮಾದಾರ, ಸಂಘದ ನಿರ್ದೇಶಕ ರವೀಂದ್ರ, ವೀರಶೆಟ್ಟಿ ಪಾಟೀಲ, ಪುಂಡಲೀಕ ಬೊಕ್ಕೆ ಮಹೇಶ ರಾಗಿ, ಕ್ಷೇಮಲಿಂಗ ಬೆಳಮಗಿ, ಪ್ರೊ.ರುದ್ರೇಶ್ವರ ಗೋರ್ಟಾ ಸೇರಿ ಅನೇಕರಿದ್ದರು. ಇದೇ ವೇಳೆ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತ ಗವಿ ಮಠದ ಪೀಠಾಧಿಪತಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಸರಕಾರಿ ನೌಕರರ ಸಂಘದ ತಾಲೂಕು ಘಟಕದಿಂದ ಸನ್ಮಾನಿಸಿ, ಅಭಿನಂದಿಸಲಾಯಿತು. ಹುಲಸೂರು ತಾಲೂಕಿನ ತಹಸೀಲ್ದಾರ್ ಸೇವೆ ಸಲ್ಲಿಸುತ್ತಿರುವ ಶಿವಾನಂದ ಮೇತ್ರೆ ಅವರಿಗೆ ತ್ರಿಪುರಾಂತ ಗವಿಮಠದಿಂದ ಸನ್ಮಾನಿಸಲಾಯಿತು.



ಬಸವಕಲ್ಯಾಣಥತ್ರಿಪುರಾಂತನ ಗವಿಮಠದಲ್ಲಿ ಹುಲಸೂರ ತಹಶೀಲ್ದಾರ ಶಿವಾನಂದ ಮೇತ್ರೆ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸೇರಿ ಅನೇಕರಿದ್ದರು.

ವಿಜಯಕರ್ನಾಟಕ ಸೋಮವಾರ,15 ಮಾರ್ಚ್ 2021,ಕಲಬುರಗಿ

'ಪ್ರಶಸ್ತಿಗಳಿಂದ ಜವಾಬ್ದಾರಿ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಪ್ರಶಸ್ತಿ, ಸನ್ಮಾನಗಳು ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸುತ್ತವೆ' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತ್ರಿಪುರಾಂತ ಗವಿಮಠದಲ್ಲಿ ಶುಕ್ರವಾರ ಆಯೋಜಿಸಿದ್ದ ನಾಗರಿಕ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ, ಅವರು ಮಾತನಾಡಿದರು.

'ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಜೋಳಿಗೆ ಹಾಕಿ ಪಾದಯಾತ್ರೆ ನಡೆಸಿದ್ದೇನೆ. ವಿವಿಧ ಧಾರ್ಮಿಕ, ಸಾಮಾಜಿಕ ಕಾರ್ಯ ಕೈಗೊಂಡಿರುವ ಕಾರಣ ಬೆಂಗಳೂರಿನ ಅಧ್ಯಾತ್ಮ ವಿಶ್ವವಿದ್ಯಾಲಯವು ನನಗೆ ಗೌರವ ಡಾಕ್ಟರೇಟ್ ನೀಡಿದೆ' ಎಂದರು.

ತಹಶೀಲ್ದಾರ್ ಸಾವಿತ್ರಿ ಸಲಗರ ಮಾತನಾಡಿ, 'ಭಾರತವು ಅಧ್ಯಾತ್ಮ ಕ್ಷೇತ್ರದಲ್ಲಿ ಮಹೋನ್ನತ ಸಾಧನೆಗೈದಿದೆ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಜನಕಲ್ಯಾಣ ಕಾರ್ಯ ಕೈಗೊಂಡಿದ್ದಾರೆ' ಎಂದು ಶ್ಲಾಘಿಸಿದರು.

ಹಾರಕೂಡ ಚನ್ನವೀರ ಶಿವಾಚಾರ್ಯರು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಬಂಗಾರದ ಉಂಗುರ ತೊಡಿಸಿ ಸನ್ಮಾನಿಸಿದರು.

ಶರಣಪ್ಪ ಬಿರಾದಾರ, ಪ್ರೊ. ಸೂರ್ಯಕಾಂತ ಶೀಲವಂತ, ಚಂದ್ರಕಾಂತ ಸ್ವಾಮಿ ನಾರಾಯಣಪುರ, ಬಸವಂತಪ್ಪ ಲವಾರೆ, ವೀರಣ್ಣ ಶೀಲವಂತ, ರಮೇಶ ರಾಜೋಳೆ ಮಾತನಾಡಿದರು.

ಮಲ್ಲಯ್ಯ ಹಿರೇಮಠ, ಡಾ.ವಿ. ವಿ.ಮಂಡಿ, ಡಾ.ಬಸವರಾಜ ಸ್ವಾಮಿ ತ್ರಿಪುರಾಂತ, ಪ್ರದೀಪ ವಾತಡೆ, ಅರ್ಜುನ ಕನಕ, ರುದ್ರೇಶ್ವರ ಗೋರಟಾ, ರಮೇಶ ಸ್ವಾಮಿ ಪಾಲ್ಗೊಂಡಿದ್ದರು. ನಾಗಣ್ಣ ಭೂಶೆಟ್ಟಿ, ಮಲ್ಲಿಕಾರ್ಜುನ ಶೀಲವಂತ, ರಂಜನಾ ಭೂಶೆಟ್ಟಿ ಸಂಗೀತ ಪ್ರಸ್ತುತಪಡಿಸಿದರು.



ಬಸವಕಲ್ಯಾಣದಲ್ಲಿ ಶುಕ್ರವಾರ ಗೌರವ ಡಾಕ್ಟರೇಟ್ ಪದವಿ ಪಡೆದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಸನ್ಮಾನಿಸಲಾಯಿತು. ಹಾರಕೂಡ ಚನ್ನವೀರ ಶಿವಾಚಾರ್ಯರು ಪಾಲ್ಗೊಂಡಿದ್ದರು

ಪ್ರಜಾವಾಣಿ ಭಾನುವಾರ • ಮಾರ್ಚ್ 14, 2021

Scanned with OKEN Scanner

ಗವಿಮಠದಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗ ಮಾನೋತ್ಸವ | ಪ್ರಶಸ್ತಿ ಪ್ರದಾನ

ಮಾನವ ಧರ್ಮ ಬೋಧಿಸಿದ ರೇಣುಕಾಚಾರ್ಯರು

ವಿಜಯ ಕರ್ನಾಟಕ VK

ಸೋಮವಾರ, 29 ಮಾರ್ಚ್ 2021
ಕಲಬುರಗಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಜಗದ ಆದಿ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿಯ ಮೂಲಕ ಶಿವ ಭಕ್ತರಿಗೆ ಮಾನವ ಧರ್ಮ ಬೋಧನೆ ಮಾಡಿದ ಶಿವ ಸ್ವರೂಪಿಗಳು ಎಂದು ಹಿರನಾಗಾಂವ ಜಯಶಾಂತಲಿಂಗ ಸ್ವಾಮೀಜಿ ಹೇಳಿದರು.

ಇಲ್ಲಿಯ ಗವಿ ಮಠದಲ್ಲಿ ಆಯೋಜಿಸಿದ್ದ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗ ಮಾನೋತ್ಸವ ಹಾಗೂ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದರು.

ಭಕ್ತರೇ ಮಠದ ನಿಜವಾದ ಆಸ್ತಿಯಾಗಿದ್ದು, ಈ ಆಸ್ತಿ ಸಂಪಾದಿಸಿದವರೇ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು. ಭಕ್ತರು ಸದಾ ಗವಿಮಠ ಹಾಗೂ ಗುರುಗಳಲ್ಲಿ ಭಕ್ತಿಯಿಂದ ನಡೆದುಕೊಂಡು ಆತ್ಮಶುದ್ಧಿ ಮಾಡಿಕೊಳ್ಳಬೇಕೆಂದರು.

ಸಾನಿಧ್ಯ ವಹಿಸಿದ್ದ ಮೆಹಕರ ತಡೋಳಾ ಸಂಸ್ಥಾನದ ರಾಜೇಶ್ವರ ಶಿವಾಚಾರ್ಯರು ಮಾತನಾಡಿ, ಶಿವನ ಆಪ್ತಕೆಯಂತೆ ಭೂಲೋಕದಲ್ಲಿ ಭಕ್ತರಿಗೆ ಶಿವಲಿಂಗ ಧಾರಣೆ ಮಾಡಿ ಉಪದೇಶಿಸಿ ಶಿವಭಕ್ತರನ್ನು ಉದ್ಧರಿಸಲು ಆದಿ ಜಗದ್ಗುರು ರೇಣುಕಾಚಾರ್ಯರು ಅವತರಿಸಿದರು. ಅವರು ಕೊಲ್ಲಿಪಾಕಿಯ ಸೋಮೇಶ್ವರ ಎಂಬ ಶಿವನ ಲಿಂಗದಿಂದ ಉದಯಿಸಿ ಜಗತ್ತಿಗೆ ವೀರಶೈವ ಧರ್ಮ ಬೋಧಿಸಿದ ಮೊದಲಿಗರು ಎಂದರು.



ಬಸವಕಲ್ಯಾಣದ ಗವಿ ಮಠದಲ್ಲಿ ಆಯೋಜಿಸಿದ್ದ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗ ಮಾನೋತ್ಸವ ಹಾಗೂ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸವಿತಾ ರಮೇಶ ಸ್ವಾಮಿ ಅವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ರೇಣುಕಾಚಾರ್ಯರ ಅಗಾಧ ಶಕ್ತಿಯ ಕುರಿತು ಅಕ್ಕಮಹಾದೇವಿ ಬಣ್ಣಿಸಿದ್ದು ಸಾಕ್ಷಿ ಇದೆ. ವೈಚಾರಿಕತೆ ಚಿಂತನೆಯ ಹೆಸರಿನಲ್ಲಿ ಧರ್ಮ, ದೇವರು, ಗುರುಗಳನ್ನು ಪ್ರಶ್ನಿಸುವ ದುಃಸ್ಥಿತಿ ಉಂಟಾಗಿದೆ. ಇದಕ್ಕೆ ಧರ್ಮ ಮಾರ್ಗ, ಗುರು ಬೋಧೆ ಮರೆತದ್ದು ಕಾರಣವಾಗಿದೆ. ಹೀಗಾಗಿಯೇ ಪ್ರಕೃತಿ ಪಾಠ ಕಲಿಸುತ್ತಿದೆ ಎಂದರು.

ನೇತೃತ್ವ ವಹಿಸಿದ್ದ ಗವಿಮಠದ ಡಾ.ಅಭಿನವ ಘನಲಿಂಗ ಶಿವಾಚಾರ್ಯರು ಮಾತನಾಡಿ, ಸಿದ್ಧಾಂತ ಶಿಖಾಮಣಿಯ ಮೂಲಕ ಬದುಕಿನ ಸೂತ್ರಗಳನ್ನು ಬೋಧಿಸಿದರು ಎಂದರು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಕಾಶಿನಾಥ ಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷ ಬಸವಂತಪ್ಪ ಲವಾರೆ, ಎಸ್.ಜಿ.ಕಲ್ಯಾಣ, ಬಸವರಾಜ ಸ್ವಾಮಿ, ಗುರುಲಿಂಗಯ್ಯ ಕಟಗಿಮಠ, ಮಲ್ಲಿಕಾರ್ಜುನ ಆಲಶೆಟ್ಟಿ ಮಲ್ಲಿಕಾರ್ಜುನ ಕಾಡಾದಿ, ಪಂಚಾಕ್ಷರಿ ಹಿರೇಮಠ, ಗುರುಲಿಂಗಯ್ಯ ಮಠಪತಿ, ಮಲ್ಲಿಕಾರ್ಜುನ ಆಲಗೂಡೆ, ನಟರಾಜ ಬಿರಾದಾರ, ಬಸವಂತಪ್ಪ ಮಾಲಿಪಾಟೀಲ, ಲಿಂಗರಾಜ ಬಿರಾದಾರ, ಮರೆಪ್ಪ ಪೊಲೀಸ್ ಪಾಟೀಲ್, ಬಸವರಾಜ ಬಿರಾದಾರ, ಕಾರ್ತಿಕ ಬಿರಾದಾರ, ಮಲ್ಲಿಕಾರ್ಜುನ ನಂದಿ, ರಮೇಶ ಸ್ವಾಮಿ, ರೇವಣಸಿದ್ದಯ್ಯ ಮಠಪತಿ, ನಾಗರಾಜ ರೋಜಾ, ಗೌರಿಶಂಕರ ಕಳ್ಳಿಮಠ, ಪಂಚಯ್ಯ ಹಿರೇಮಠ, ಬಸವರಾಜ ಹಿರೇಮಠ, ಬಾಬುರಾವ ಉಳ್ಳೆ ಡಾ.ವಿ.ಎಸ್. ರಾಜೋಳೆ, ಡಾ.ಚಿತ್ರಶೇಖರ ಚಿರಳ್ಳಿ, ರಾಕೇಶ ಪುರವಂತ, ಶಾಂತವೀರ ಪೂಜಾರಿ, ಸದಾನಂದ ಕಣಜೆ, ಸುಭದ್ರಾಬಾಯಿ ಸ್ವಾಮಿ, ವಿಮಲಾಬಾಯಿ ಬಿರಾದಾರ, ಶಿಲಾದೇವಿ ಲವಾರೆ, ರೇಣುಕಾ ಮಠಪತಿ, ಸುನಂದಾ ನಂದಿ ಇದ್ದರು. ರಾಹುಲ ತೂತಾರೆ ಪ್ರಾರ್ಥನೆ ಹಾಡಿದರು. ವಿನಯಕುಮಾರ ಜಿ ಮಠ ಭಕ್ತಿ ಸಂಗೀತ ಸೇವೆ ಮಾಡಿದರು. ವೀರಣ್ಣ ಶೀಲವಂತ ಸ್ವಾಗತಿಸಿದರು.

ಸವಿತಾ ರಮೇಶಗೆ ಪ್ರಶಸ್ತಿ ಪ್ರದಾನ

ಪ್ರಸಕ್ತ ಸಾಲಿನ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಸ್ವೀಕರಿಸಿದ ಸವಿತಾ ರಮೇಶ ಸ್ವಾಮಿ ಮಾತನಾಡಿ, ಮೊದಲಿನಿಂದಲೂ ಗುರುವಿನ ಮೇಲೆ ಅಪಾರ ಭಕ್ತಿಯಿಂದ ಸದಾ ಗವಿಮಠದ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕೈಲಾದಷ್ಟು ಸೇವೆ ಸಲ್ಲಿಸುತ್ತಿರುವುದು ತೃಪ್ತಿ ತಂದಿದೆ. ಸದಾ ಗುರುವಿನ ಕೃಪಾಶೀರ್ವಾದ ನಮ್ಮ ಕುಟುಂಬದ ಮೇಲೆ ಇರಲೆಂದು ಪ್ರಾರ್ಥಿಸಿದರು.

ಪುಣ್ಯಭೂಮಿ ಭಾರತ

ಬುಧವಾರ, ಮೇ 5, 2021



ಬಸವಕಲ್ಯಾಣ: ತ್ರಿಪುರಾಂತ ಗವಿಮಠಕ್ಕೆ ಶಾಸಕ ಶರಣು ಸಲಗರ ಭೇಟಿ ನೀಡಿ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಂದ ಆಶೀರ್ವಾದ ಪಡೆದರು. ಸದ್ಬೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ನಂದಿ, ರೇವಣಸಿದ್ಧಯ್ಯಾ ಮಠಪತಿ, ಪೊ। ರುದ್ರೇಶ್ವರ ಗೋರ್ಟಾ ಇತರರಿದ್ದರು.



ಬಸವಕಲ್ಯಾಣ ಗವಿಮಠಕ್ಕೆ ನೂತನ ಶಾಸಕ ಶರಣು ಸಲಗರ್ ಭೇಟಿ ನೀಡಿ ಪೀಠಾಧಿಪತಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಆಶೀರ್ವಾದ ಪಡೆದರು. ಸದ್ಬೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ನಂದಿ, ರೇವಣಸಿದ್ದಯ್ಯ ಮಠಪತಿ, ರುದ್ರೇಶ್ವರ ಗೋರ್ಟಾ, ಕಾರ್ತಿಕ ಬಿರಾದಾರ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

VIJAYAVANI » KALABURAGI
ಶನಿವಾರ 8 ಮೇ 2021
8 MAY 2021

Scanned with OKEN Scanner

ರೇಣುಕಾಚಾರ್ಯರು ಶಿವ ಸ್ವರೂಪಿಗಳು

• ಪ್ರಜಾವಾಹಿನಿ-ಬಸವಕಲ್ಯಾಣ

ಜಗದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿಯ ಮೂಲಕ ಶಿವ ಭಕ್ತರಿಗೆ ಮಾನವ ಧರ್ಮ ಬೋಧನೆ ಮಾಡಿದ ಶಿವ ಸ್ವರೂಪಿಗಳು ಎಂದು ಸುಕ್ಷೇತ್ರ ಹಿರನಾಗಾವದ ಪೂಜ್ಯಶ್ರೀ ಜಯಶಾಂತಲಿಂಗ ಸ್ವಾಮೀಜಿ ತಿಳಿಸಿದರು.

ಬಸವಕಲ್ಯಾಣದ ಸಂಸ್ಥಾನ ಗವಿಮಠದಲ್ಲಿ ಆಯೋಜಿಸಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ" ಅಭಿನವ ಘನಲಿಂಗ ಶ್ರೀ" ಪ್ರಶಸ್ತಿ ಪ್ರದಾನ ಧರ್ಮ ಸಮಾರಂಭದಲ್ಲಿ ಮಾತನಾಡಿ, ಭಕ್ತರೇ ಮಠದ ನಿಜವಾದ ಆಸ್ತಿ. ಅಂತಃ ಆಸ್ತಿಯನ್ನು ಇಂದು ಸಂಪಾದಿಸಿದವರೇ ಬಸವಕಲ್ಯಾಣದ ಸಂಸ್ಥಾನ ಗವಿಮಠದ ಪೂಜ್ಯಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು. ಭಕ್ತರು ಸದಾ ಗವಿಮಠ ಹಾಗೂ ಗುರುಗಳಲ್ಲಿ ಭಕ್ತಿಯಿಂದ ನಡೆದುಕೊಂಡು ಆತ್ಮಶುದ್ಧಿ ಮಾಡಿಕೊಳ್ಳಬೇಕೆಂದು ನುಡಿದರು.

ಮೆಹಕರ ತಡೋಳಾ ಸಂಸ್ಥಾನದ ಪೂಜ್ಯಶ್ರೀ ರಾಜೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿ, ಶಿವನ ಅಪ್ಪಣೆಯಂತೆ ಭೂಲೋಕದಲ್ಲಿ ಭಕ್ತರಿಗೆ ಶಿವಲಿಂಗ ಧಾರಣೆ ಮಾಡಿ ಉಪದೇಶಿಸಿ ಶಿವಭಕ್ತರನ್ನು ಉದ್ಧರಿಸಲು ಭೂಲೋಕದಲ್ಲಿ ಅವತರಿಸಿದವರೆ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು. ಅವರು ಕೊಲ್ಲಿಪಾಕಿಯ ಸೋಮೇಶ್ವರ ಎಂಬ ಶಿವನ ಲಿಂಗದಿಂದ ಉದಯಿಸಿ ಜಗತ್ತಿಗೆ ವೀರಶೈವ ಧರ್ಮ ಬೋಧಿಸಿದ ಮೊದಲಿಗರು. ಆದರೆ ಇವರು ಲಿಂಗದಿಂದ ಉದಯಿಸಿದ್ದು ಹೇಗೆ ಎಂದು ಕೆಲವರು ಪ್ರಶ್ನಿಸುವವರು ಇದ್ದಾರೆ ಎಂದರು.



• ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ

ನಿರಂತರ ಸೇವೆಗೈಯುತ್ತ ಸಾಧನೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪಡೆದ ಸವಿತಾ ರಮೇಶ ಸ್ವಾಮಿ ಅವರಿಗೆ ಅಭಿನಂದಿಸಿ ಆಶೀರ್ವದಿಸಿದರು.

ಸಂಸ್ಥಾನ ಗವಿಮಠದ ಪೂಜ್ಯ ಡಾ ಅಭಿನವ ಘನಲಿಂಗ ಶಿವಾಚಾರ್ಯರು ಮಾತನಾಡಿ, ಯುಗ ಯುಗಗಳಲ್ಲಿ ವಿವಿಧ ನಾಮಗಳಿಂದ ಅವತರಿಸಿದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಕಲಿಯುಗದಲ್ಲಿ ಕೊಲ್ಲಿಪಾಕಿ ಸೋಮೇಶ್ವರ ಲಿಂಗದಿಂದ ಉದಯಿಸಿ, ಸತ್ಯ, ದಯಾ, ಕ್ಷಮಾ ಮೊದಲಾದ ದಶಧರ್ಮ ಸೂತ್ರಗಳನ್ನು ಮೂಲಕ ಜಗತ್ತಿಗೆ ವೀರಶೈವ ಧರ್ಮ ಬೋಧಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸವಿತಾ ರಮೇಶ ಸ್ವಾಮಿ ಅವರು, ಮೊದಲಿನಿಂದಲೂ ಗುರುವಿನ ಮೇಲೆ ಅಪಾರ ಭಕ್ತಿ ಹೊಂದಿ ಸದಾ ಗವಿಮಠದ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕೈಲಾದಷ್ಟು ಸೇವೆ ಸಲ್ಲಿಸುತ್ತಿರುವುದು ತೃಪ್ತಿ ತಂದಿದೆ. ಹಾಗೆಯೇ ಕೈಲಾದಷ್ಟು ಮಟ್ಟಿಗೆ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ಇದಕ್ಕೆಲ್ಲ ಗುರುಗಳ ಆಶೀರ್ವಾದ ಕಾರಣ. ಹೀಗೆಯೇ ಸದಾ ಗುರುವಿನ ಕೃಪಾಶಿರ್ವಾದ ನಮ್ಮ ಕುಟುಂಬದ ಮೇಲೆ ಇರಲೆಂದು ಪ್ರಾರ್ಥಿಸಿದರು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷ ಬಸವಂತಪ್ಪ ಲವಾರೆ, ರಾಹುಲ ತೂತಾರೆ, ವಿನಯಕುಮಾರ ಜಿ.ಮಠ, ವೀರಣ್ಣ ಶೀಲವಂತ, ಕಾಶಿನಾಥ ಸ್ವಾಮಿ, ಎಸ್.ಜಿ. ಕಲ್ಯಾಣಿ, ಬಸವರಾಜ ಸ್ವಾಮಿ, ಗುರುಲಿಂಗಯ್ಯ ಕಟಗಿಮಠ, ಮಲ್ಲಿಕಾರ್ಜುನ ಅಲಶೆಟ್ಟಿ, ಮಲ್ಲಿಕಾರ್ಜುನ ಕಾಡಾದಿ, ಪಂಚಾಕ್ಷರಿ ಹಿರೇಮಠ, ಗುರುಲಿಂಗಯ್ಯ ಮಠಪತಿ, ಮಲ್ಲಿಕಾರ್ಜುನ ಅಲಗೂಡೆ, ನಟರಾಜ ಬಿರಾದಾರ, ಬಸವಂತಪ್ಪ ಮಾಲಿಪಾಟೀಲ, ಲಿಂಗರಾಜ ಬಿರಾದಾರ, ಮರೆಪ್ಪ ಪೊಲೀಸ್ ಪಾಟೀಲ್, ಬಸವರಾಜ ಬಿರಾದಾರ, ಕಾರ್ತೀಕ ಬಿರಾದಾರ, ಮಲ್ಲಿಕಾರ್ಜುನ ನಂದಿ, ರಮೇಶ ಸ್ವಾಮಿ, ದನಯ್ಯಾ ಸ್ವಾಮಿ, ರೇವಣಸಿದ್ಧಯ್ಯ ಮಠಪತಿ, ನಾಗರಾಜ ರೋಜಾ, ಗೌರಿಶಂಕರ ಕಳ್ಳಿಮಠ, ಪಂಚಯ್ಯ ಹಿರೇಮಠ, ಬಸವರಾಜ ಹಿರೇಮಠ, ಬಾಬುರಾವ ಉಳ್ಳೆ, ಡಾ.ವಿ ಎಸ್ ರಾಜೋಳೆ, ಡಾ ಚಿತ್ರಶೇಖರ ಚಿರಳ್ಳಿ, ರಾಕೇಶ ಪುರವಂತ, ಶಾಂತವೀರ ಪೂಜಾರಿ, ಸದಾನಂದ ಕಣಜೆ, ಸುಭದ್ರಾಬಾಯಿ ಸ್ವಾಮಿ, ವಿಮಲಾಬಾಯಿ ಬಿರಾದಾರ, ಶಿಲಾದೇವಿ ಲವಾರೆ, ರೇಣುಕಾ ಮಠಪತಿ, ಸುನಂದಾ ನಂದಿ ಇತರರಿದ್ದರು.

ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಾಳೆ



ಸಂ.ಕ.ಸಮಾಚಾರ ಬಸವಕಲ್ಯಾಣ

ತ್ರಿಪುರಾಂತ ಸಂಸ್ಥಾನ ಗವಿಮಠದ ಪೀಠಾಧಿಪತಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನಾಚರಣೆ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದ ನಿಮಿತ್ತ ಸಾಮಾಜಿಕ ಸಾಮರಸ್ಯ ಕಾರ್ಯಕ್ರಮ ತ್ರಿಪುರಾಂತ ಗವಿಮಠದಲ್ಲಿ ಮಂಗಳವಾರ ಬೆಳಿಗ್ಗೆ 11ಕ್ಕೆ ಜರುಗಲಿದೆ. ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಸಾನಿಧ್ಯ, ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವವಹಿಸುವರು. ಶಾಸಕ ಶರಣು ಸಲಗರ ಕಾರ್ಯಕ್ರಮ ಉದ್ಘಾಟಿಸಲಿದ್ದು, ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸುವರು. ನಗರಸಭೆ ಪೌರಾಯುಕ್ತ ಶಿವಕುಮಾರ, ಮುಖಂಡರಾದ ಶಿವಶರಣ ಬಿರಾದಾರ, ಆನಂದ ದೇವಪ್ಪ, ಶ್ರೀ ಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಆತಿಥಿಗಳಾಗಿ ಭಾಗವಹಿಸುವರು.

ಕಲ್ಯಾಣ ಕರ್ನಾಟಕ
ಪ್ರಜಾವಾಹಿನಿ
ಭಾನುವಾರ
28.03.2021

Scanned with OKEN Scanner

ರೇಣುಕಾಚಾರ್ಯರು ಶಿವ ಸ್ವರೂಪಿ

ಬಸವಕಲ್ಯಾಣ: ಜಗದ್ಗುರು ಶ್ರೀ ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಗ್ರಂಥ ಮೂಲಕ ಶಿವ ಭಕ್ತರಿಗೆ ಮಾನವ ಧರ್ಮ ಬೋಧನೆ ಮಾಡಿದ ಶಿವ ಸ್ವರೂಪಿಗಳು ಎಂದು ಹಿರನಾಗಾಂವದ ಶ್ರೀ ಜಯಶಾಂತಲಿಂಗ ಸ್ವಾಮೀಜಿ ನುಡಿದರು.

ನಗರದ ಸಂಸ್ಥಾನ ಗವಿಮಠದಲ್ಲಿ ಶುಕ್ರವಾರ ಆಯೋಜಿಸಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, ಇಂದಿನ ಆಧುನಿಕ ಜೀವನದ ಜಂಜಾಟದಲ್ಲಿ ಬಹಳಷ್ಟು ಜನರಿಗೆ ಸಮಯ ಇಲ್ಲದಂತಾಗಿದೆ. ಆದರೆ ನಿತ್ಯವೂ ಆಧ್ಯಾತ್ಮಕ್ಕೆ ಒಂದಿಷ್ಟು ಸಮಯ ಮೀಸಲಿಟ್ಟು ಬದುಕು ಸಾರ್ಥಕ ಮಾಡಿಕೊಳ್ಳಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ಮೇಹಕರ್-ತಡೋಳಾ ಸಂಸ್ಥಾನದ ಶ್ರೀ ರಾಜೇಶ್ವರ ಶಿವಾಚಾರ್ಯ ಮಾತನಾಡಿ, ಶಿವನ ಅಪ್ಪಣೆಯಂತೆ ಭೂ ಲೋಕದಲ್ಲಿ ಭಕ್ತರಿಗೆ ಶಿವಲಿಂಗ ಧಾರಣೆ ಮಾಡಿ, ಶಿವಭಕ್ತರನ್ನು ಉದ್ಧರಿಸಲು ರೇಣುಕಾಚಾರ್ಯರು ಅವತರಿಸಿದರು. ಕೊಲ್ಲಿಪಾಕಿಯ ಸೋಮೇಶ್ವರ ಎಂಬ ಶಿವನ ಲಿಂಗದಿಂದ ಉದಯಿಸಿ ವಿಶ್ವಕ್ಕೆ ವೀರಶೈವ ಧರ್ಮ ಬೋಧಿಸಿದ ಮೊದಲಿಗರು. ಆದರೆ ಇವರು ಲಿಂಗದಿಂದ ಉದಯಿಸಿದ್ದು ಹೇಗೆ ಎಂದು ಇಂದು ಕೆಲವರು ಪ್ರಶ್ನಿಸುತ್ತಿರುವುದಕ್ಕೆ ಬೇಸರ ವ್ಯಕ್ತಪಡಿಸಿದರು.

ನೇತೃತ್ವ ವಹಿಸಿದ್ದ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ಶಿವಾಚಾರ್ಯ ಮಾತನಾಡಿದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಪ್ರಮುಖರಾದ ರಾಹುಲ್ ತೂತಾರೆ, ವಿನಯಕುಮಾರ ಮಠ, ಎಸ್.ಜಿ. ಕಲ್ಯಾಣಿ, ಬಸವರಾಜ ಸ್ವಾಮಿ ಇತರರಿದ್ದರು.

ಕಾಶೀನಾಥ ಸ್ವಾಮಿ ಪ್ರಾಸ್ತಾವಿಕ ಮಾತನಾಡಿದರು. ವೀರಣ್ಣ ಶೀಲವಂತ ಸ್ವಾಗತಿಸಿದರು. 2021ನೇ ಸಾಲಿನ ಅಭಿನವ ಘನಲಿಂಗ ಶ್ರೀ ಪ್ರಶಸ್ತಿಯನ್ನು ಸವಿತಾ ರಮೇಶ ಸ್ವಾಮಿ ಅವರಿಗೆ ಪ್ರದಾನ ಮಾಡಿ ಸತ್ಕರಿಸಲಾಯಿತು.

ವಿಜಯವಾಣಿ ಚಿತ್ರ



ಬಸವಕಲ್ಯಾಣ ಗವಿಮಠದಲ್ಲಿ ಶುಕ್ರವಾರ ಆಯೋಜಿಸಿದ್ದ ಶ್ರೀ ರೇಣುಕಾಚಾರ್ಯರ ಜಯಂತ್ಯುತ್ಸವದಲ್ಲಿ 2021ನೇ ಸಾಲಿನ ಅಭಿನವ ಘನಲಿಂಗ ಶ್ರೀ ಪ್ರಶಸ್ತಿಯನ್ನು ಸವಿತಾ ರಮೇಶ ಸ್ವಾಮಿ ಅವರಿಗೆ ಪ್ರದಾನ ಮಾಡಲಾಯಿತು. ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ರಾಜೇಶ್ವರ ಶಿವಾಚಾರ್ಯ, ಶ್ರೀ ಡಾ.ಅಭಿನವ ಘನಲಿಂಗ ಶಿವಾಚಾರ್ಯ ಇದ್ದರು.



ಬಸವಕಲ್ಯಾಣದಲ್ಲಿ ಶುಕ್ರವಾರ ನಡೆದ ಜಗದ್ಗುರು ರೇಣುಕಾಚಾರ್ಯರ ಜಯಂತಿಯಲ್ಲಿ ಸವಿತಾ ರಮೇಶಸ್ವಾಮಿ ಅವರಿಗೆ ಅಭಿನ ಘನಲಿಂಗಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು

'ಸಿದ್ಧಾಂತ ಶಿಖಾಮಣಿಯಲ್ಲಿ ಮಾನವಧರ್ಮ ಬೋಧನೆ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಗ್ರಂಥದ ಮೂಲಕ ಮಾನವ ಧರ್ಮವನ್ನು ಬೋಧಿಸಿದ್ದಾರೆ' ಎಂದು ಹಿರೇನಾಗಾಂವ ಜಯಶಾಂತಲಿಂಗ ಸ್ವಾಮೀಜಿ ಹೇಳಿದ್ದಾರೆ.

ಇಲ್ಲಿನ ತ್ರಿಪುರಾಂತ ಗವಿಮಠದಲ್ಲಿ ಶುಕ್ರವಾರ ಆಯೋಜಿಸಿದ್ದ ಜಗದ್ಗುರು ರೇಣುಕಾಚಾರ್ಯರ ಜಯಂತಿ ಹಾಗೂ ಯುಗಮಾನೋತ್ಸವದಲ್ಲಿ ಅವರು ಮಾತನಾಡಿದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಭಕ್ತರು ಗುರುಗಳಲ್ಲಿ ಭಕ್ತಿ ತೋರಿ ಆತ್ಮಶುದ್ಧಿ ಮಾಡಿಕೊಳ್ಳಬೇಕು' ಎಂದರು.

ತಡೋಳಾ ರಾಜೇಶ್ವರ ಶಿವಾಚಾರ್ಯರ ಅವರು ಮಾತನಾಡಿ, 'ರೇಣುಕಾಚಾರ್ಯರು ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಿಂದ ಉದಯಿಸಿ ಜಗತ್ತಿಗೆ ವೀರಶೈವ ಧರ್ಮ ಬೋಧಿಸಿದ ಮೊದಲಿಗರು' ಎಂದರು.

ಸವಿತಾ ರಮೇಶಸ್ವಾಮಿ ಅವರಿಗೆ ಅಭಿನವ 'ಘನಲಿಂಗಶ್ರೀ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದಬೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ವೀರಣ್ಣ ಶೀಲವಂತ, ಕಾಶಿನಾಥಸ್ವಾಮಿ ಹಾಗೂ ರಾಹುಲ್ ತೂತಾರೆ ಮಾತನಾಡಿದರು.

ಪ್ರಜಾವಾಣಿ ಶನಿವಾರ • ಮಾರ್ಚ್ 27, 2021

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » KALABURAGI
ಮಂಗಳವಾರ 30 ಮಾರ್ಚ್ 2021
30 MARCH 2021

ಪ್ರಾಮಾಣಿಕರಿಗೆ ಬಿಜೆಪಿಯಲ್ಲಿಲ್ಲ ಬೆಲೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಬಿಜೆಪಿಯಲ್ಲಿ ಪ್ರಾಮಾಣಿಕತೆಯಿಂದ ದುಡಿಯುವವರಿಗೆ ಅದೃಷ್ಟ ಇಲ್ಲ. ನನಗೆ ತಂಬ ನೋವು ತಂದಿದೆ. ಈ ಅನ್ಯಾಯದ ಕಣ್ಣೀರಿಗೆ ಕ್ಷೇತ್ರದ ಜನತೆ ನೀಡಬೇಕು ಎಂದು ಮಾಜಿ ಶಾಸಕ, ಬಿಜೆಪಿ ಬಂಡಾಯ(ಪಕ್ಷೇತರ) ಅಭ್ಯರ್ಥಿ ಮಲ್ಲಿಕಾರ್ಜುನ ಖೂಬಾ ಹೇಳಿದರು.

ಗುರುವಾರ ತ್ರಿಪುರಾಂತ ಗವಿಮಠಕ್ಕೆ ಭೇಟಿ ನೀಡಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಆಶೀರ್ವಾದ ಪಡೆದ ನಂತರ ಮಾತನಾಡಿ, ನನಗೆ ಟಿಕೆಟ್ ನೀಡದೆ ಬಿಜೆಪಿ ಪಾಮಾಣಿಕತೆಯಿಂದ ಅನ್ಯಾಯ ಮಾಡಿದೆ. ಹೀಗಾಗಿ ಬಂಡಾಯ ಅಭ್ಯರ್ಥಿಯಾಗಿ ಅಖಾಡಕ್ಕಿಳಿದಿದ್ದೇನೆ. ಸ್ಥಳೀಯರಿಗೆ ಬಂಡಾಯ ಅನ್ಯಾಯ ಮಾಡಿದ ಬಿಜೆಪಿಗೆ ಪಜ್ಞಾವಂತ ಮತದಾರರು ತಕ್ಕ ಪಾಠ ಕಲಿಸಿ ನನಗೆ ಆಶೀರ್ವದಿಸುವ ವಿಶ್ವಾಸವಿದೆ ಎಂದರು.

ಬಿಜೆಪಿ ಮೇಲೆ ಇಟ್ಟ ನಂಬಿಕೆಯೇ ಇಂದು ನನಗೆ ತಂದಿದೆ. ನಾನು ಯಾರ ಬಗೆಯೂ ಟೀಕೆ, ಟಿಪ್ಪಣಿ ಮಾಡುವುದಿಲ್ಲ. ಬಸವಕಲ್ಯಾಣ ನಾಭಿಮಾನಿ ಬಳಗ ಒಮ್ಮತದಿಂದ ಉಪ ಮುನಾವಣೆಗೆ ನಿಲ್ಲಿಸಿದೆ. ಸ್ಥಳೀಯನಾಗಿರುವ ನನ್ನನ್ನು ಬೆಂಬಲಿಸಿ ಬಾರಿ ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.



ಬಸವಕಲ್ಯಾಣ ಗವಿಮಠಕ್ಕೆ ಗುರುವಾರ ಭೇಟಿ ನೀಡಿದ ಪಕ್ಷೇತರ ಅಭ್ಯರ್ಥಿ ಮಲ್ಲಿಕಾರ್ಜುನ ಖೂಬಾ ಅವರಿಗೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವದಿಸಿದರು.

ಕೃಪೃಷ್ಣ ಭಾಜಪಾಧ್ಯಾಕ್ಷ

ಬೀದರ್ ಲೋಕಲ್ ಎಕ್ಸ್‌ಪ್ರೆಸ್
ಶುಕ್ರವಾರ 2 ಏಪ್ರಿಲ್ 2021 » 2 APRIL 2021
• VIJAYAVANI » KALABURAGI

Scanned with OKEN Scanner

ರೇಣುಕಾಚಾರ್ಯರು ಶಿವ ಸ್ವರೂಪಿ

ಬಸವಕಲ್ಯಾಣ: ಜಗದ್ಗುರು ಶ್ರೀ ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಗ್ರಂಥ ಮೂಲಕ ಶಿವ ಭಕ್ತರಿಗೆ ಮಾನವ ಧರ್ಮ ಬೋಧನೆ ಮಾಡಿದ ಶಿವ ಸ್ವರೂಪಿಗಳು ಎಂದು ಹಿರನಾಗಾಂವದ ಶ್ರೀ ಜಯಶಾಂತಲಿಂಗ ಸ್ವಾಮೀಜಿ ನುಡಿದರು.

ನಗರದ ಸಂಸ್ಥಾನ ಗವಿಮಠದಲ್ಲಿ ಶುಕ್ರವಾರ ಆಯೋಜಿಸಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, ಇಂದಿನ ಆಧುನಿಕ ಜೀವನದ ಜಂಜಾಟದಲ್ಲಿ ಬಹಳಷ್ಟು ಜನರಿಗೆ ಸಮಯ ಇಲ್ಲದಂತಾಗಿದೆ. ಆದರೆ ನಿತ್ಯವೂ ಅಧ್ಯಾತ್ಮಕ್ಕೆ ಒಂದಿಷ್ಟು ಸಮಯ ಮೀಸಲಿಟ್ಟು ಬದುಕು ಸಾರ್ಥಕ ಮಾಡಿಕೊಳ್ಳಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ಮೇಹಕರ್-ತಡೋಳಾ ಸಂಸ್ಥಾನದ ಶ್ರೀ ರಾಜೇಶ್ವರ ಶಿವಾಚಾರ್ಯ ಮಾತನಾಡಿ, ಶಿವನ ಅಪ್ಪಣೆಯಂತೆ ಭೂ ಲೋಕದಲ್ಲಿ ಭಕ್ತರಿಗೆ ಶಿವಲಿಂಗ ಧಾರಣೆ ಮಾಡಿ, ಶಿವಭಕ್ತರನ್ನು ಉದ್ಧರಿಸಲು ರೇಣುಕಾಚಾರ್ಯರು ಅವತರಿಸಿದರು. ಕೊಲ್ಲಿಪಾಕಿಯ ಸೋಮೇಶ್ವರ ಎಂಬ ಶಿವನ ಲಿಂಗದಿಂದ ಉದಯಿಸಿ ವಿಶ್ವಕ್ಕೆ ವೀರಶೈವ ಧರ್ಮ ಬೋಧಿಸಿದ ಮೊದಲಿಗರು. ಆದರೆ ಇವರು ಲಿಂಗದಿಂದ ಉದಯಿಸಿದ್ದು ಹೇಗೆ ಎಂದು ಇಂದು ಕೆಲವರು ಪ್ರಶ್ನಿಸುತ್ತಿರುವುದಕ್ಕೆ ಬೇಸರ ವ್ಯಕ್ತಪಡಿಸಿದರು.

ನೇತೃತ್ವ ವಹಿಸಿದ್ದ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ಶಿವಾಚಾರ್ಯ ಮಾತನಾಡಿದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಪ್ರಮುಖರಾದ ರಾಹುಲ್ ತೂತಾರೆ, ವಿನಯಕುಮಾರ ಮಠ, ಎಸ್.ಜಿ. ಕಲ್ಯಾಣಿ, ಬಸವರಾಜ ಸ್ವಾಮಿ ಇತರರಿದ್ದರು.

ಕಾಶೀನಾಥ ಸ್ವಾಮಿ ಪ್ರಾಸ್ತಾವಿಕ ಮಾತನಾಡಿದರು. ವೀರಣ್ಣ ಶೀಲವಂತ ಸ್ವಾಗತಿಸಿದರು. 2021ನೇ ಸಾಲಿನ ಅಭಿನವ ಘನಲಿಂಗ ಶ್ರೀ ಪ್ರಶಸ್ತಿಯನ್ನು ಸವಿತಾ ರಮೇಶ ಸ್ವಾಮಿ ಅವರಿಗೆ ಪ್ರದಾನ ಮಾಡಿ ಸತ್ಕರಿಸಲಾಯಿತು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ಗವಿಮಠದಲ್ಲಿ ಶುಕ್ರವಾರ ಆಯೋಜಿಸಿದ್ದ ಶ್ರೀ ರೇಣುಕಾಚಾರ್ಯರ ಜಯಂತ್ಯುತ್ಸವದಲ್ಲಿ 2021ನೇ ಸಾಲಿನ ಅಭಿನವ ಘನಲಿಂಗ ಶ್ರೀ ಪ್ರಶಸ್ತಿಯನ್ನು ಸವಿತಾ ರಮೇಶ ಸ್ವಾಮಿ ಅವರಿಗೆ ಪ್ರದಾನ ಮಾಡಲಾಯಿತು. ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ರಾಜೇಶ್ವರ ಶಿವಾಚಾರ್ಯ, ಶ್ರೀ ಡಾ.ಅಭಿನವ ಘನಲಿಂಗ ಶಿವಾಚಾರ್ಯ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

VIJAYAVANI » KALABURAGI
ಮಂಗಳವಾರ 30 ಮಾರ್ಚ್ 2021
30 MARCH 2021



ಬಸವಕಲ್ಯಾಣದಲ್ಲಿ ಶುಕ್ರವಾರ ನಡೆದ ಜಗದ್ಗುರು ರೇಣುಕಾಚಾರ್ಯರ ಜಯಂತಿಯಲ್ಲಿ ಸವಿತಾ ರಮೇಶಸ್ವಾಮಿ ಅವರಿಗೆ ಅಭಿನ ಘನಲಿಂಗಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು

'ಸಿದ್ಧಾಂತ ಶಿಖಾಮಣಿಯಲ್ಲಿ ಮಾನವಧರ್ಮ ಬೋಧನೆ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಗ್ರಂಥದ ಮೂಲಕ ಮಾನವ ಧರ್ಮವನ್ನು ಬೋಧಿಸಿದ್ದಾರೆ' ಎಂದು ಹಿರೇನಾಗಾಂವ ಜಯಶಾಂತಲಿಂಗ ಸ್ವಾಮೀಜಿ ಹೇಳಿದ್ದಾರೆ.

ಇಲ್ಲಿನ ತ್ರಿಪುರಾಂತ ಗವಿಮಠದಲ್ಲಿ ಶುಕ್ರವಾರ ಆಯೋಜಿಸಿದ್ದ ಜಗದ್ಗುರು ರೇಣುಕಾಚಾರ್ಯರ ಜಯಂತಿ ಹಾಗೂ ಯುಗಮಾನೋತ್ಸವದಲ್ಲಿ ಅವರು ಮಾತನಾಡಿದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಭಕ್ತರು ಗುರುಗಳಲ್ಲಿ ಭಕ್ತಿ ತೋರಿ ಆತ್ಮಶುದ್ಧಿ ಮಾಡಿಕೊಳ್ಳಬೇಕು' ಎಂದರು.

ತಡೋಳಾ ರಾಜೇಶ್ವರ ಶಿವಾಚಾರ್ಯರ ಅವರು ಮಾತನಾಡಿ, 'ರೇಣುಕಾಚಾರ್ಯರು ಕೊಲ್ಲಿಪಾಕಿಯ ಸೋಮೇಶ್ವರ ಲಿಂಗದಿಂದ ಉದಯಿಸಿ ಜಗತ್ತಿಗೆ ವೀರಶೈವ ಧರ್ಮ ಬೋಧಿಸಿದ ಮೊದಲಿಗರು' ಎಂದರು.

ಸವಿತಾ ರಮೇಶಸ್ವಾಮಿ ಅವರಿಗೆ ಅಭಿನವ 'ಘನಲಿಂಗಶ್ರೀ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದಬೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ವೀರಣ್ಣ ಶೀಲವಂತ, ಕಾಶಿನಾಥಸ್ವಾಮಿ ಹಾಗೂ ರಾಹುಲ್ ತೂತಾರೆ ಮಾತನಾಡಿದರು.

ಪ್ರಜಾವಾಣಿ ಶನಿವಾರ • ಮಾರ್ಚ್ 27, 2021

ಪ್ರಾಮಾಣಿಕರಿಗೆ ಬಿಜೆಪಿಯಲ್ಲಿಲ್ಲ ಬೆಲೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ ಬಿಜೆಪಿಯಲ್ಲಿ ಪ್ರಾಮಾಣಿಕತೆಯಿಂದ ದುಡಿಯುವವರಿಗೆ ಬೆಲೆಯಿಲ್ಲ. ಒಳ್ಳೆಯವರಿಗೆ ಅದೃತೆ ಇಲ್ಲ. ಈ ಬೆಳವಣಿಗೆ ನನಗೆ ತುಂಬ ನೋವು ತಂದಿದೆ. ಈ ಅನ್ಯಾಯದ ವಿರುದ್ಧವೇ ಕಣಕ್ಕಿಳಿದಿರುವೆ. ಚುನಾವಣೆಯಲ್ಲಿ ಕ್ಷೇತ್ರದ ಜನತೆ ಯೋಚಿಸಿ ಮತ ನೀಡಬೇಕು ಎಂದು ಮಾಜಿ ಶಾಸಕ, ಬಿಜೆಪಿ ಬಂಡಾಯ(ಪಕ್ಷೇತರ) ಅಭ್ಯರ್ಥಿ ಮಲ್ಲಿಕಾರ್ಜುನ ಖೂಬಾ ಹೇಳಿದರು.

ಗುರುವಾರ ತ್ರಿಪುರಾಂತ ಗವಿಮಠಕ್ಕೆ ಭೇಟಿ ನೀಡಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಆಶೀರ್ವಾದ ಪಡೆದ ನಂತರ ಮಾತನಾಡಿ, ನನಗೆ ಟಿಕೆಟ್ ನೀಡದೆ ಬಿಜೆಪಿ ಅನ್ಯಾಯ ಮಾಡಿದೆ. ಹೀಗಾಗಿ ಬಂಡಾಯ ಅಭ್ಯರ್ಥಿಯಾಗಿ ಅಖಾಡಕ್ಕಿಳಿದಿದ್ದೇನೆ. ಸ್ಥಳೀಯರಿಗೆ ಅನ್ಯಾಯ ಮಾಡಿದ ಬಿಜೆಪಿಗೆ ಪ್ರಜ್ಞಾವಂತ ಮತದಾರರು ತಕ್ಕ ಪಾಠ ಕಲಿಸಿ ನನಗೆ ಆಶೀರ್ವದಿಸುವ ವಿಶ್ವಾಸವಿದೆ ಎಂದರು.

» ಬಂಡಾಯ ಅಭ್ಯರ್ಥಿ ಖೂಬಾ ಆಕ್ರೋಶ

ಬಿಜೆಪಿ ಮೇಲೆ ಇಟ್ಟ ನಂಬಿಕೆಯೇ ಇದೀಗ ಸಂಕಷ್ಟ ತಂದಿದೆ. ನಾನು ಯಾರ ಬಗ್ಗೆಯೂ ಟೀಕೆ, ಟಿಪ್ಪಣಿ ಮಾಡುವುದಿಲ್ಲ. ಬಸವಕಲ್ಯಾಣ ಸ್ವಾಭಿಮಾನಿ ಬಳಗ ಒಮ್ಮತದಿಂದ ಉಪ ಚುನಾವಣೆಗೆ ನಿಲ್ಲಿಸಿದೆ. ಸ್ಥಳೀಯನಾಗಿರುವ ನನ್ನನ್ನು ಬೆಂಬಲಿಸಿ ಭಾರಿ ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

» ತ್ರಿಪುರಾಂತ ಗವಿಮಠಕ್ಕೆ ಭೇಟಿ



ಬಸವಕಲ್ಯಾಣ ಗವಿಮಠಕ್ಕೆ ಗುರುವಾರ ಭೇಟಿ ನೀಡಿದ ಪಕ್ಷೇತರ ಅಭ್ಯರ್ಥಿ ಮಲ್ಲಿಕಾರ್ಜುನ ಖೂಬಾ ಅವರಿಗೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವದಿಸಿದರು.

ಬೀದರ್ ಲೋಕಲ್ ಎಕ್ಸ್‌ಪ್ರೆಸ್
ಶುಕ್ರವಾರ 2 ಏಪ್ರಿಲ್ 2021 » 2 APRIL 2021
VIJAYAVANI » KALABURAGI

Scanned with OKEN Scanner

ಬಿರಾದಾರಗೆ ಭಾವಪೂರ್ಣ ಶ್ರದ್ಧಾಂಜಲಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಇಲ್ಲಿಯ ತ್ರೀಪುರಾಂತನ ಗವಿ ಮಠದಲ್ಲಿ ಗವಿ ಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋದನಾ ಸಂಸ್ಥೆಯ ಸಹಯೋಗದಲ್ಲಿ ಶುಕ್ರವಾರದಂದು ಅಖಿಲ ಭಾರತ ವೀರಶೈವ ಮಹಾಸಭಾದ ಭಾಲ್ಕಿ ತಾಲೂಕು ಘಟಕದ ಅಧ್ಯಕ್ಷರಾಗಿದ್ದ ಬಾಬುರಾವ ಬಿರಾದಾರ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಾನಿಧ್ಯ ವಹಿಸಿದ್ದ ಮಠದ ಪೀಠಾಧಿಪತಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಬಾಬುರಾವ ಬಿರಾದಾರ ಅವರು ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಭಾಲ್ಕಿಯ ಭೀಮಣ್ಣ ಖಂಡ್ರೆ ಎಂಜಿನಿಯರಿಂಗ್ ಕಾಲೇಜಿನ ಆಡಳಿತ ಅಧಿಕಾರಿಯಾಗಿ ಮಹತ್ವದ ಸೇವೆ ಸಲ್ಲಿಸಿದ್ದಾರೆ. ರಂಭಾಪುರಿ ಪೀಠದ ಪರಮ ಭಕ್ತರಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಅವಿರ್ಭವಿಸಿದ ತೆಲಂಗಾಣ ರಾಜ್ಯದ ಕೋಲನುಪಾಕ ಕ್ಷೇತ್ರಭಿವೃದ್ಧಿ ಟ್ರಸ್ಟಿನ ಕೋಶಾಧಿಕಾರಿಗಳಾಗಿ ಸಲ್ಲಿಸುತಿದ್ದ ಸೇವೆ ಅವಿಸ್ಮರಣೀಯವಾಗಿದೆ. ಅವರ ಅಗಲಿಕೆಯಿಂದ ಸಮಾಜದ ಒಬ್ಬ ಕ್ರಿಯಾಶೀಲ ಹಾಗೂ ಶಿಸ್ತಿನ ಧರ್ಮಾಭಿಮಾನಿಯನ್ನು ಕಳೆದುಕೊಂಡಂತಾಗಿದೆ ಎಂದು ಸಂತಾಪ ಸೂಚಿಸಿದರು.

ಗವಿಮಠ ಟ್ರಸ್ಟ್‌ನ ಕಾರ್ಯಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆಯ ಅಧ್ಯಕ್ಷ ಬಸವಂತಪ್ಪ ಲವಾರೆ, ವೀರಣ್ಣ ಶೀಲವಂತ, ಪ್ರೊ. ಸೂರ್ಯಕಾಂತ ಶೀಲವಂತ, ನಾಗೇಂದ್ರ ಪಿರ್ದೆ, ರಾಜಕುಮಾರ ದೇಗಾಂವ್, ರಮೇಶ ರಾಜೋಳೆ, ಪ್ರೊ.ರುದ್ರೇಶ್ವರ ಗೋರ್ಟಾ, ಶಾಂತವೀರ ಪೂಜಾರಿ, ರಾಕೇಶ ಪುರವಂತ, ಪವನ ಕುಮಾರ ಉಮರ್ಗೆ ಇದ್ದರು.



ಬಸವಕಲ್ಯಾಣದ ತ್ರೀಪುರಾಂತನ ಗವಿ ಮಠದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಭಾಲ್ಕಿ ತಾಲೂಕು ಘಟಕದ ಅಧ್ಯಕ್ಷರಾಗಿದ್ದ ಬಾಬುರಾವ ಬಿರಾದಾರ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ವಿಜಯಕರ್ನಾಟಕ VK ಶನಿವಾರ,26 ಜೂನ್ 2021, ಕಲಬುರಗಿ

ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನುಡಿ

ಸಂಸ್ಕೃತಿ ಉಳಿಸಲು ಕೌಶಲ ತರಬೇತಿ ಅವಶ್ಯ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮಹಿಳೆಯರ ಸಬಲೀಕರಣಕ್ಕಾಗಿ ಈ ಭಾಗದಲ್ಲಿ ಕೌಶಲ ಹಾಗೂ ಪ್ರಗತಿ ಕೇಂದ್ರ ತೆರೆದಿರುವ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಕಾರ್ಯವನ್ನು ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಶ್ಲಾಘಿಸಿದರು.

ಪ್ರವರ್ಧ ಚಾರಿಟೇಬಲ್ ಟ್ರಸ್ಟ್ ಸಹಯೋಗದೊಂದಿಗೆ ನಗರದ ಶ್ರೀ ಸದ್ಗುರು ಸದಾನಂದ ಮಠದ ಪರಿಸರದಲ್ಲಿ ಶನಿವಾರ ಏರ್ಪಡಿಸಿದ್ದ ಪ್ರಗತಿ ಹಾಗೂ ಕೌಶಲ ಸಂಪನ್ಮೂಲ ವ್ಯಕ್ತಿಗಳ ತರಬೇತಿ ಕಾರ್ಯಾಗಾರದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿ, ಭಾರತೀಯ ಸಂಸ್ಕೃತಿ ಉಳಿಸುವಲ್ಲಿ ಈ ತರಬೇತಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ತಹಸೀಲ್ದಾರ್ ಸಾವಿತ್ರಿ ಸಲಗರ್ ಮಾತನಾಡಿ, ಸಮಾಜದ ಬದಲಾವಣೆಯಲ್ಲಿ ಮತ್ತು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಾರೆ. ಇದನ್ನು ಗುರುತಿಸಿರುವ ಬಸವರಾಜ ಪಾಟೀಲ್ ಸೇಡಂಜೀ ಅವರು ಅನೇಕ ಯೋಜನ ರೂಪಿಸಿ ಕಾರ್ಯರೂಪಕ್ಕೆ ತರುತ್ತಿರುವುದು ಶ್ಲಾಘನೀಯ ಎಂದರು.

ಕಲ್ಯಾಣ ಕರ್ನಾಟಕ ಸಂಘದ ಜಿಲ್ಲಾ ಪ್ರಮುಖರಾದ ರೇವಣಸಿದ್ದ ಜಾಡರ್ ಮಾತನಾಡಿ, ಕಲ್ಯಾಣ ಕರ್ನಾಟಕ ಸಂಘದ ವತಿಯಿಂದ ಮೂರು ವರ್ಷದಿಂದ ಹತ್ತು ವರ್ಷದೊಳಗಿನ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವ ನಿಟ್ಟಿನಲ್ಲಿ ತಾಲೂಕಿನ 145 ಗ್ರಾಮಗಳಲ್ಲಿ ಹಾಗೂ ಕೌಶಲ್ಯ ಕೇಂದ್ರ ಎಲ್ಲ ಪಂಚಾಯತ್ ಹಾಗೂ ನಗರ ಸೇರಿ 44 ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ ಎಂದರು.

ಶಾಸಕ ಶರಣು ಸಲಗರ್ ಕಾರ್ಯಾಗಾರ ಉದ್ಘಾಟಿಸಿದರು. ವಿಕಾಸ ಅಕಾಡೆಮಿಯ ವೀರಶೆಟ್ಟಿ ಹಾರಕೂಡೆ, ಕಲ್ಪನಾ ದಾಡೆ, ಲೋಕೇಶ ಮೋಳಕೆರೆ, ಪವನ್ ಡಿಗ್ಗಿಕರ್, ಅಮರ, ಗುರು ಗದಲಿಗಾಂವ್, ಶರಣ ಗದಲಿಗಾಂವ್, ಸುಹಾಸಿನಿ, ರೇವಣ ಚಿಲ್ಲಾಬಟ್ಟೆ, ರೇಣುಕಾ ಇತರರಿದ್ದರು.



ವಿಜಯವಾಣಿ

ಸವಕಲ್ಯಾಣದ ಶ್ರೀ ಸದ್ಗುರು ಸದಾನಂದ ಮಠದ ಪರಿಸರದಲ್ಲಿ ಶನಿವಾರ ಜರುಗಿದ ಕೌಶಲ ಸಂಪನ್ಮೂಲ ವ್ಯಕ್ತಿಗಳ ಕಾರ್ಯಾಗಾರವನ್ನು ಶಾಸಕ ಶರಣು ಸಲಗರ್ ಉದ್ಘಾಟಿಸಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶ್ರೀ, ತಹಸೀಲ್ದಾರ್ ಸಾವಿತ್ರಿ ಸಲಗರ್, ರೇವಣಸಿದ್ದ ಜಾಡರ್ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಭಾನುವಾರ 18 ಜುಲೈ 2021
18 JULY 2021



ಬಸವಕಲ್ಯಾಣದ ಗವಿಮಠದಿಂದ 2022ನೇ ಅಭಿನವ ಘನಲಿಂಗಶ್ರೀ ಪ್ರಶಸ್ತಿಗೆ ಆಯ್ಕೆಯಾದ ಸದ್ಭೋದನಾ ಸಂಸ್ಥೆಯ ಅಧ್ಯಕ್ಷ ಬಸವಂತಪ್ಪಾ ಲವಾರೆ ಅವರನ್ನು ಸನ್ಮಾನಿಸಲಾಯಿತು.

Scanned with OKEN Scanner

Scanned with OKEN Scanner

ಅಭಿನವ ಘನಲಿಂಗ ರುದ್ರಮುನಿ ಸ್ವಾಮೀಜಿ ಹೇಳಿಕೆ

ಸ್ವಾವಲಂಬಿ ಜೀವನಕ್ಕೆ ಶ್ರಮ ಅಡಿಪಾಯ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ನಡೆದ ಶಿವಾನುಭವ ಚಿಂತನಗೋಷ್ಠಿಯಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು

ಬಸವಕಲ್ಯಾಣ: 'ಶ್ರಮವೇ ಸ್ವಾವಲಂಬಿ ಜೀವನಕ್ಕೆ ಅಡಿಪಾಯವಾಗಿದೆ. ಉತ್ತಮ ವ್ಯಕ್ತಿತ್ವವನ್ನು ರೂಪಿಸುತ್ತದೆ' ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಈಚೆಗೆ ಆಯೋಜಿಸಿದ್ದ ಶಿವಾನುಭವ ಚಿಂತನಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಮನುಷ್ಯನು ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವಿಕಾಸದ ದಾರಿಯಲ್ಲಿ ಸಾಗುವಂತಾಗಲು ಕಾಯಕ ಮಾಡಬೇಕಾಗುತ್ತದೆ. ಕಷ್ಟಪಟ್ಟರೆ ಅದರ ಉತ್ತಮ ಪ್ರತಿಫಲ ದೊರಕುವುದು ನಿಶ್ಚಿತವಾಗಿದೆ' ಎಂದರು.

ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘದ ಯೋಜನಾಧಿಕಾರಿ ಸೋಮಲಿಂಗ ಕಳಸೂರ ಮಾತನಾಡಿ, 'ವಿವಿಧ ಸಂಘ- ಸಂಸ್ಥೆಗಳು ಮಹಿಳೆ ಹಾಗೂ ಹಿಂದುಳಿದವರ ಆರ್ಥಿಕ ಪ್ರಗತಿಗೆ ಪ್ರಯತ್ನಿಸುತ್ತಿವೆ. ಧರ್ಮಸ್ಥಳ ಸಂಘದಿಂದಲೂ ಸ್ವಸಹಾಯ ಗುಂಪುಗಳ ಮೂಲಕ ಉದ್ಯಮ ಕೈಗೊಳ್ಳಲು ನೆರವು ನೀಡುತ್ತಿದೆ. ಕೌಶಲ ತರಬೇತಿಯೂ ನೀಡಿ ಸ್ವಯಂ ಉದ್ಯೋಗಕ್ಕಾಗಿ ಪ್ರತಿಯೊಬ್ಬರನ್ನು ಸಜ್ಜುಗೊಳಿಸಲಾಗುತ್ತದೆ' ಎಂದು ಹೇಳಿದರು.

ಸಬ್ ಇನ್‌ಸ್ಪೆಕ್ಟರ್ ಘನಶಾಮ ಶರ್ಮಾ ಮಾತನಾಡಿ, 'ಯೋಗ, ಧ್ಯಾನದಿಂದ ಬದುಕಿನಲ್ಲಿನ ಒತ್ತಡವನ್ನು ಕಡಿಮೆಗೊಳಿಸಬಹುದು' ಎಂದರು.

ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲ್ಲೂಕು ಘಟಕದ ಅಧ್ಯಕ್ಷ ಬಸವಂತಪ್ಪ ಲವಾರೆ, ಪುಣ್ಯಕೋಟಿ ಕಾಲೇಜಿನ ಪ್ರಾಚಾರ್ಯ ಪ್ರೊ. ಸೂರ್ಯಕಾಂತ ಶೀಲವಂತ, ಶಾಂತವೀರ ಮಠಪತಿ, ರಾಜಣ್ಣ ಮಾತನಾಡಿದರು.

ಹಿರಿಯ ಮುಖಂಡ ಎ.ಜಿ.ಪಾಟೀಲ, ಗಿರಿಯಪ್ಪ ಸ್ವಾಮಿ, ಸೂರಜ್ ಪಾಟೀಲ, ರುದ್ರಮುನಿ ಹಿರೇಮಠ, ಬಾಬುರಾವ್ ಚಳಕಾಪುರೆ, ರಾಮಶೆಟ್ಟಿ ಬಿರಾದಾರ, ಲಕ್ಷ್ಮಣ ಸಿಂಗ್ ಸೆಣಗಾರ, ವಿಶ್ವನಾಥ ಬಿರಾದಾರ ಉಪಸ್ಥಿತರಿದ್ದರು.

ಸೋಮಲಿಂಗ ಕಳಸೂರ, ರಾಜಣ್ಣ ಹಾಗೂ ಘನಶಾಮ ಶರ್ಮಾ ಅವರನ್ನು ಶಾಲು ಹೊದಿಸಿ ಸನ್ಮಾನಿಸಲಾಯಿತು.

ಪ್ರಜಾವಾಣಿ ಮಂಗಳವಾರ • ಜುಲೈ 13, 2021

ಕೌಶಲ್ಯ, ಪ್ರಗತಿ ಕೇಂದ್ರ ಸಂಘದ ಕಾರ್ಯ ಶ್ಲಾಘನೀಯ: ಶ್ರೀಗಳು



ಬಸವಕಲ್ಯಾಣ ನಗರದ ಸದಾನಂದ ಮಠದ ಆವರಣದಲ್ಲಿ ಪ್ರಗತಿ, ಹಾಗೂ ಕೌಶಲ್ಯ ಸಂಪನ್ಮೂಲ ವ್ಯಕ್ತಿಗಳ ಒಂದು ದಿನದ ಕಾರ್ಯಾಗಾರಕ್ಕೆ ಶಾಸಕ ಶರಣು ಸಲಗರ ಚಾಲನೆ ನೀಡಿದರು.

ಬಸವಕಲ್ಯಾಣ: ಮಹಿಳೆಯರ ಸಬಲೀಕರಣಕ್ಕಾಗಿ ಈ ಭಾಗದಲ್ಲಿ ಕೌಶಲ್ಯ ಹಾಗೂ ಪ್ರಗತಿ ಕೇಂದ್ರ ತೆರೆದಿರುವ ಸಂಘದ ಕಾರ್ಯ ಶ್ಲಾಘನೀಯವಾಗಿದ್ದು ಇದರಿಂದ ಮಕ್ಕಳಿಗೆ ಸಂಸ್ಕಾರ ಕೊಡುವುದರಿಂದ ಭಾರತೀಯ ಸಂಸ್ಕೃತಿ ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ತ್ರಿಪುರಾಂತ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಸದಾನಂದ ಮಠದ ಆವರಣದಲ್ಲಿ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಹಾಗೂ ಪ್ರವರ್ಧ ಚಾರಿಟೆಬಲ್ ಟ್ರಸ್ಟ್ ಸಹಯೋಗದಲ್ಲಿ ಪ್ರಗತಿ, ಹಾಗೂ ಕೌಶಲ್ಯ ಸಂಪನ್ಮೂಲ ವ್ಯಕ್ತಿಗಳ ಒಂದು ದಿವಸದ ಕಾರ್ಯಾಗಾರ ಉದ್ಘಾಟಿಸಿದರು. ತಹಸೀಲ್ದಾರ ಸಾವಿತ್ರಿ ಸಲಗರ ಮಾತನಾಡಿ, ಹೆಣ್ಣು ಶಕ್ತಿಯ ರೂಪವಾಗಿದ್ದು, ಸಮಾಜದ ಬದಲಾವಣೆಯಲ್ಲಿ ಮತ್ತು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ. ಅದನ್ನು ಗುರುತಿಸಿ ಬಸವರಾಜ ಪಾಟೀಲ ಸೇಡಂ ಅನೇಕ ಯೋಜನೆ ರೂಪಿಸಿ ಕಾರ್ಯಕೈಗೊಂಡಿದ್ದು ಶ್ಲಾಘನೀಯವಾಗಿದೆ ಎಂದರು.

ಕಲ್ಯಾಣ ಕರ್ನಾಟಕ ಸಂಘದ ಜಿಲ್ಲಾ ಪ್ರಮುಖ ರೇವಣಸಿದ್ದ ಜಾಡರ್ ಮಾತನಾಡಿ, ಕಲ್ಯಾಣ ಕರ್ನಾಟಕ ಸಂಘದಿಂದ 3 ರಿಂದ 10 ವರ್ಷದೊಳಗಿನ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವ ನಿಟ್ಟಿನಲ್ಲಿ ತಾಲೂಕಿನ 145 ಗ್ರಾಮಗಳಲ್ಲಿ ಹಾಗೂ ಕೌಶಲ್ಯ (ಟೇಲರಿಂಗ್) ಕೇಂದ್ರ ಎಲ್ಲಾ ಪಂಚಾಯತ ಹಾಗೂ ನಗರ ಸೇರಿದಂತೆ 44 ತರಬೇತಿ ಕೇಂದ್ರಗಳನ್ನು ಅಧಿಕೃತವಾಗಿ ಪ್ರಾರಂಭಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿ ಮಹೇಶ ಪಾಟೀಲ, ಸಹಾಯಕ ನಿರ್ದೇಶಕ ಸೂರ್ಯಕಾಂತ ಪಾಟೀಲ, ವಿಕಾಸ ಅಕಾಡೆಮಿಯ ಸಂಚಾಲಕ ಶರಣು ಬಿರಾದಾರ, ವಿರಕೇಟ್ಟಿ ಹಾರಕೂಡೆ, ಕಲ್ಪನಾ ದಾಡೆ, ಲೋಕೇಶ ಮೂಳಕೆರೆ, ಪವನ್ ಡಿಗ್ಗಿಕರ್, ಅಮರ, ಗುರು ಗದಲೆಗಾಂವ, ಶರಣ ಗದಲೆಗಾಂವ್, ಸುಹಾಸಿನಿ, ರೇವಣ ಚಿಲ್ಲಾಬಟ್ಟೆ, ರೇಣುಕಾ, ಶಿವರಾಜ ವಿಪಲೇ, ಶಿವರಾಜ ಚಕೊತೆ, ಶ್ರೀಮಂತ ಗೌಡನೂರ್, ರಾಮ ಉಪಸ್ಥಿತರಿದ್ದರು: ಸಂಪನ್ಮೂಲ ವ್ಯಕ್ತಿಗಳಾದ ಪ್ರತಿಭಾ ಗೊರಾಟ, ಕಲ್ಪನಾ ಮೇತ್ರೆ, ಬಸಮ್ಮ ಮಠಪತಿ, ಶ್ರೀದೇವಿ ಶೇರಿಕಾರ ತರಬೇತಿ ನಡೆಸಿಕೊಟ್ಟರು.

ಕನ್ನಡಪ್ರಭ ಸೋಮವಾರ 18.7.2021

ವಿಜಯ ಕರ್ನಾಟಕ ಮಂಗಳವಾರ,13 ಜುಲೈ 2021

ಗವಿಮಠದಲ್ಲಿ ಅಮಾವಾಸ್ಯೆ ನಿಮಿತ್ತ ಶಿವಾನುಭವ ಚಿಂತನ ಕಾರ್ಯಕ್ರಮ

ಮಾನವ ಸಮೃದ್ಧಿಗೆ ಕೆಲಸದಲ್ಲಿ ಆಸಕ್ತಿಯಿರಲಿ



ಬಸವಕಲ್ಯಾಣದಲ್ಲಿಯ ಗವಿ ಮಠದಲ್ಲಿ ಅಮಾವಾಸ್ಯೆ ನಿಮಿತ್ತ ಹಮ್ಮಿಕೊಂಡ ಶಿವಾನುಭಾವ ಚಿಂತನ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.
ವಿಕ ಸುದ್ದಿಲೋಕ ಬಸವಕಲ್ಯಾಣ

ಆರ್ಥಿಕ ಹಾಗೂ ಸಾಂಸ್ಕೃತಿಕವಾಗಿ ಮಾನವ ಸಮೃದ್ಧಿ ಹೊಂದಲು ಯಾವುದೆ ಕೆಲಸವಿರಲಿ ಆಸಕ್ತಿಯಿಂದ ಮಾಡಬೇಕು ಎಂದು ತ್ರೀಪುರಾಂತನ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಗವಿ ಮಠದಲ್ಲಿ ಅಮಾವಾಸ್ಯೆ ನಿಮಿತ್ತ ಹಮ್ಮಿಕೊಂಡ ಶಿವಾನುಭಾವ ಚಿಂತನ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಮನುಷ್ಯ ತ್ಞಾನು ದುಡಿಯಬೇಕು ಇನ್ನೊಬ್ಬರನ್ನು ದುಡಿಯಲು ಬಿಡಬೇಕು. ದುಡಿಮೆಯೇ ದುಡ್ಡಿನ ತಾಯಿ ಎಂಬಂತೆ ಪ್ರಾಮಾಣಿಕವಾಗಿ ಪ್ರೀತಿಯಿಂದ ಕಷ್ಟಪಟ್ಟು ದುಡಿದಿದ್ದಕ್ಕೆ ಖಂಡಿತವಾಗಿ ಪ್ರತಿಫಲ ಪಡೆಯುವುದರಲ್ಲಿ ಯಾವ ಸಂದೇಹವೂ ಇಲ್ಲ, ಸ್ವಾವಲಂಬಿ ಜೀವನಕ್ಕೆ ಇದು ಅಡಿಪಾಯ ಎಂದರು.

ನಗರ ಠಾಣೆಯ ಅಪರಾಧ ವಿಭಾಗದ ಪಿಎಸ್‌ಐ ಘನಶ್ಯಾಮ ಶರ್ಮಾ ಮಾತನಾಡಿ, ನಾವೆಲ್ಲರೂ ಒತ್ತಡದ ಬದುಕಿನಲ್ಲಿ ಇದ್ದೇವೆ. ಒತ್ತಡದಿಂದ ಮುಕ್ತ ಪಡೆದು ನೆಮ್ಮದಿಯಿಂದ ಜೀವಿಸಲು ಒಂದಿಷ್ಟು ಸಮಯ ಯೋಗ, ಧ್ಯಾನ, ಓರಿಯರ ಸೇವೆ ಮಾಡಬೇಕೆಂದು ಹೇಳಿದರು.ಧರ್ಮಸ್ಥಳದ ಗ್ರಾಮೀಣ ಅಭಿವೃದ್ಧಿ ಅಧಿಕಾರಿ ಸೋಮಲಿಂಗ ಮಾತನಾಡಿ, ಆರ್ಥಿಕವಾಗಿ ಸಾಂಸ್ಕೃತಿಕವಾಗಿ ಸಮೃದ್ಧಿ ಹೊಂದಲು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಅನುದಾನ ಹಾಗೂ ತರಬೇತಿ ನೀಡಲಾಗುವುದೆಂದು ತಿಳಿಸಿದರು.

ನಗರ ಠಾಣೆಯ ಎಎಸ್‌ಐ ರಾಜಣ್ಣ ಮಾತನಾಡಿ, ಟಿವಿ, ಮೊಬೈಲ್ ಹೆಚ್ಚು ಬಳಸುತ್ತಿರುವುದರಿಂದ ಇಂದಿನ ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕೃತದ ಜ್ಞಾನ, ಪುಸ್ತಕ, ಪತ್ರಿಕೆ ಓದುವ ಹವ್ಯಾಸ ಕಡಿಮೆಯಾಗಿದೆ. ಓದಿ ತಿಳಿದುಕೊಳ್ಳದೆ ಕೇವಲ ನೋಡಿ ತಿಳಿದುಕೊಳ್ಳುವ ಪ್ರವೃತಿ ಹೆಚ್ಚಾಗಿದೆ. ಇದರಿಂದ ತಾಳ್ಮೆ ಕಳೆದುಕೊಳ್ಳುತ್ತಿದ್ದಾರೆ. ಸಾಧು-ಸಂತರ, ದೇಶ ಭಕ್ತರ ಜೀವನ ಚರಿತ್ರೆ ತಿಳಿದುಕೊಳ್ಳುವುದರಿಂದ ಸಹನೆ, ಧೈರ್ಯ ಬರಲು ಸಾಧ್ಯ ಎಂದು ಹೇಳಿದರು.ಸೂರಜ ಪಾಟೀಲ, ಗಿರಿಯಪ್ಪಾ ಸ್ವಾಮಿ, ರುದ್ರಮುನಿ ಹಿರೇಮಠ, ಎ.ಜಿ.ಪಾಟೀಲ್, ಬಾಬುರಾವ ಚಳಕಾಪೂರೆ, ವಿಶ್ವನಾಥ ಬಿರಾದಾರ, ಲಕ್ಷ್ಮಣ ಸಿಂಗ, ಜಗನ್ನಾಥ, ರಾಮಶೆಟ್ಟಿ ಬಿರಾದಾರ ಇದ್ದರು. ಶಾಂತವೀರ ಮಠಪತಿ ಸ್ವಾಗತಿಸಿದರು. ಪ್ರೊ.ಸೂರ್ಯಕಾಂತ ಶೀಲವಂತ್ ನಿರೂಪಿಸಿದರು, ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ವಂದಿಸಿದರು.



ವಿಜಯವಾಣಿ ಚಿತ್ರಗಳು

ಬಸವಕಲ್ಯಾಣದ ಬುನಕರ್ ಕಾಲನಿಯಲ್ಲಿ ಆಯೋಜಿಸಲಾಗಿದ್ದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ನಿವೃತ್ತ ಟಿಎಚ್‌ಒ ಡಾ.ಜಿ.ಎಸ್.ಭುರಳೆ ಮಾತನಾಡಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಬಸವಂತಪ್ಪ ಲವಾರೆ, ಬಸವರಾಜ ಬಂದ್ಗೆ ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಗುರುವಾರ 23 ಸೆಪ್ಟೆಂಬರ್ 2021
23 SEPTEMBER 2021

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 24 ಜುಲೈ 2021
24 JULY 2021
3

ಬೀದರ್ ಲೋಕಲ್ ಎಕ್ಸ್‌ಪ್ರೆಸ್

ಸುದ್ದಿ ಕಾರ್ನರ್

ಭಾರತದಲ್ಲಿ ಗುರುವಿಗೆ ಶ್ರೇಷ್ಠ ಸ್ಥಾನ

- ಶ್ರೀ ಡಾ.ಅಭಿನವ ಘನಲಿಂಗ ಶ್ರೀ ನುಡಿ
- ಗುರು ಪೂರ್ಣಿಮೆ ನಿಮಿತ್ತ ಶ್ರೀಗಳ ಪಾದಪೂಜೆ

ಬಸವಕಲ್ಯಾಣ: ಭಾರತೀಯ ಸನಾತನ ಪರಂಪರೆಯಲ್ಲಿ ಗುರುವಿಗೆ ಅತ್ಯಂತ ಶ್ರೇಷ್ಠ ಸ್ಥಾನಮಾನವಿದೆ. ಗುರುವಿಲ್ಲದ ಯಾವ ವ್ಯಕ್ತಿಯೂ ಪ್ರಪಂಚದಲ್ಲಿ ಪ್ರಾಪ್ತನಾಗಲ್ಲ. ಪ್ರಾಪ್ತನಾದರೂ ಸಾರ್ಥಕನಾಗಲು ಸಾಧ್ಯವಿಲ್ಲ ಎಂದು ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಭಿಪ್ರಾಯಪಟ್ಟರು. ಗುರುಪೂರ್ಣಿಮೆ ನಿಮಿತ್ತ ಗವಿ ಮಠದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ವಿಶ್ವಕ್ಕೆ ಭಾರತ ನೀಡಿದ ದೊಡ್ಡ ಕೊಡುಗೆ ಗುರು ಪರಂಪರೆ. ಸೂರ್ಯ ಚಂದ್ರರಿಂದಲೂ ಹೃದಯದ ಒಳಗಿನ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸುವುದು ಸಾಧ್ಯವಿಲ್ಲ. ಇದನ್ನು ಕೇವಲ ಗುರುವಿನ ಅನುಗ್ರಹದಿಂದ ಮಾತ್ರ ಹೋಗಲಾಡಿಸಲು ಸಾಧ್ಯ ಎಂದರು. ಗುರುವಿನ ಗೌರವಕ್ಕಾಗಿ ಆಷಾಡ ಮಾಸದ ಶುಕ್ಲಪಕ್ಷದಲ್ಲಿ ಬರುವ ಹುಣ್ಣಿಮೆಗೆ ಗುರುಪೂರ್ಣಿಮ ಎನ್ನುತ್ತಾರೆ. ಗುರು ತನ್ನ ಶಿಷ್ಯರಿಗೆ ತಪ್ಪುದಾರಿಗೆ ಹೋಗುವುದನ್ನು ತಪ್ಪಿಸುತ್ತಾರೆ. ಜತೆಗೆ ಸರಿಯಾದ ದಾರಿಯಲ್ಲಿ ನಡೆಯಲು ಪ್ರೇರೇಪಿಸುತ್ತಾರೆ. ಗುರು ಮಾರ್ಗದರ್ಶನದಲ್ಲಿ ಧರ್ಮದ ದಾರಿಯಲ್ಲಿ ನಡೆದಾಗ ಜೀವನದಲ್ಲಿ ಸಂತೃಪ್ತಿ ಮತ್ತು ಸಾರ್ಥಕತೆ ಕಾಣಲು ಸಾಧ್ಯ ಎಂದರು. ಪ್ರೊ. ರುದ್ರೇಶ್ವರ ಗೋರ್ಟಾ ಅವರು ಶ್ರೀಗಳ ಪಾದ ಪೂಜೆ ನೆರವೇರಿಸಿದರು. ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಅಧ್ಯಕ್ಷರ ಬಸವಂತಪ್ಪ ಲವಾರೆ, ರಮೇಶ ವೀರಯ್ಯ ಸ್ವಾಮಿ, ಮರೇಪ್ಪ ಪಾಟೀಲ್, ಬಸವಂತಪ್ಪ ಮಾಲಿ ಪಾಟೀಲ್, ನಾಗರಾಜ ರೋಜೆ, ಎ.ಜಿ ಪಾಟೀಲ್, ರಾಜು ಪಾಟೀಲ್, ಮಲ್ಲಿಕಾರ್ಜುನ ನಂದಿ, ವೀರಣ್ಣ ಶೀಲವಂತ, ಸೂರ್ಯಕಾಂತ ಶೀಲವಂತ, ಶಂಕರ ಬಿರಾದಾರ, ಸವಿತಾ ರಮೇಶ ಸ್ವಾಮಿ, ಕಲಾವತಿ ಗಡೇದಾರ, ಶೀಲಾ ಮಡಿವಾಳಪ್ಪ ಕಲ್ಯಾಣಿ, ಸರಸ್ವತಿ ಬೆಂಬಲ್ಗೆ ಇತರರಿದ್ದರು.



ವಿಜಯವಾಣಿ ಚಿತ್ರ

ಗುರುಪೂರ್ಣಿಮೆ ನಿಮಿತ್ತ ಬಸವಕಲ್ಯಾಣದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಸನ್ಮಾನಿಸಲಾಯಿತು. ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂದಿ, ಎ.ಜಿ. ಪಾಟೀಲ್, ರುದ್ರೇಶ್ವರ ಗೋರ್ಟಾ, ಸೂರ್ಯಕಾಂತ ಶೀಲವಂತ, ರಮೇಶ ಸ್ವಾಮಿ, ಮರೇಪ್ಪ ಪಾಟೀಲ್, ಬಸವಂತಪ್ಪ ಮಾಲಿ ಪಾಟೀಲ್, ನಾಗರಾಜ್ ರೋಜೆ, ರಾಜು ಪಾಟೀಲ್, ವೀರಣ್ಣ ಶೀಲವಂತ, ಶಂಕರ ಬಿರಾದಾರ, ಸವಿತಾ ಸ್ವಾಮಿ, ಕಲಾವತಿ ಗಡೇದಾರ ಇತರರಿದ್ದರು.

Scanned with OKEN Scanner

ಸನಾತನ ಪರಂಪರೆಯಲ್ಲಿ ಗುರುವಿಗೆ ಶ್ರೇಷ್ಠ ಸ್ಥಾನ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಭಾರತೀಯ ಸನಾತನ ಪರಂಪರೆಯಲ್ಲಿ ಗುರುವಿಗೆ ಅತ್ಯಂತ ಶ್ರೇಷ್ಠವಾದ ಸ್ಥಾನ ಮಾನವಿದೆ. ಗುರುವಿಲ್ಲದ ಯಾವ ವ್ಯಕ್ತಿಯೂ ಪ್ರಪಂಚದಲ್ಲಿ ಪ್ರಾಪ್ತನಾಗಲ್ಲ, ಪ್ರಾಪ್ತನಾದರೂ ಸಾರ್ಥಕನಾಗಲು ಸಾಧ್ಯವಿಲ್ಲ. ಭಾರತೀಯ ಪರಂಪರೆ ಹೇಳುತ್ತಿದೆ ಎಂದು ಇಲ್ಲಿಯ ತ್ರಿಪುರಾಂತನ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತ್ರೀಪುರಾಂತನ ಗವಿ ಮಠದಲ್ಲಿ ಶುಕ್ರವಾರ ಗುರು ಪೂರ್ಣಿಮೆಯ ನಿಮಿತ್ತ ಹಮ್ಮಿಕೊಂಡ ಗುರುವಿಗೆ ಪಾದಪೂಜೆ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಗುರು ತನ್ನ ಶಿಷ್ಯರಿಗೆ ತಪ್ಪುದಾರಿಗೆ ಹೋಗುವುದನ್ನು ತಪ್ಪಿಸುತ್ತಾರೆ. ಸರಿಯಾದ ದಾರಿ ಮೇಲೆ ನಡೆಯಲು ಪ್ರೇರೇಪಿಸುತ್ತಾರೆ. ಮಾಸದ ಶುಕ್ಲ ಪಕ್ಷದಲ್ಲಿ ಬರುವ ಹುಣ್ಣಿಮೆಗೆ ಹೀಗಾಗಿ ಗುರುವಿನ ಗೌರವಕ್ಕಾಗಿ ಆಷಾಢ ಗುರುಪೂರ್ಣಿಮ ಎನ್ನುತ್ತಾರೆ ಎಂದರು.



ಬಸವಕಲ್ಯಾಣದ ತ್ರಿಪುರಾಂತನ ಗವಿ ಮಠದಲ್ಲಿ ಗುರು ಪೂರ್ಣಿಮೆಯ ನಿಮಿತ್ತ ಶುಕ್ರವಾರ ಮಠದ ಪೀಠಾಧಿಪತಿ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಪ್ರೊ. ರುದ್ರೇಶ್ವರ ಗೋರ್ಟಾ (ಬಿ) ಅವರಿಂದ ಪಾದಪೂಜೆ ನಡೆಯಿತು.

ಗುರು ಪೂರ್ಣಿಮೆ ನಿಮಿತ್ತ ಶ್ರೀಗಳ ಪಾದ ಪೂಜೆ

ಪ್ರೊ ರುದ್ರೇಶ್ವರ ಗೋರ್ಟಾ (ಬಿ) ಅವರು ಶ್ರೀಗಳ ಪಾದ ಪೂಜೆ ನೆರವೇರಿಸಿದರು. ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ರಮೇಶ್ ವೀರಯ್ಯಾ ಸ್ವಾಮಿ, ಮರೆಪ್ಪಾ ಪಾಟೀಲ್, ಬಸವಂತಪ್ಪಾ ಮಾಲಿ ಪಾಟೀಲ್, ನಾಗರಾಜ ರೊಜೆ, ಎ.ಜಿ ಪಾಟೀಲ್, ರಾಜು ಪಾಟೀಲ್, ಮಲ್ಲಿಕ್ಕಾರ್ಜುನ ನಂದಿ, ವೀರಣ್ಣಾ ಶೀಲವಂತ, ಪ್ರೊ.ಸೂರ್ಯಕಾಂತ ಶೀಲವಂತ, ಶಂಕರ ಬಿರಾದಾರ, ಸವಿತಾ ರಮೇಶ ಸ್ವಾಮಿ, ಶೀಲಾ ಮಡಿವಾಳಪ್ಪಾ ಕಲ್ಯಾಣಿ, ಸರಸ್ವತಿ ಬೆಂಬಳಗೆ ಸೇರಿ ಅನೇಕರಿದ್ದರು.

ವಿಜಯ ಕರ್ನಾಟಕ VK ಶನಿವಾರ,24 ಜುಲೈ 2021, ಕಲಬುರಗಿ

ಗುರಿ ತಲುಪಲು ಗುರು ಕೃಪೆ ಅಗತ್ಯ: ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಗುರು ಕೃಪೆ ಇದ್ದರೆ ಮಾತ್ರ ಜೀವನದ ಗುರಿ ತಲುಪಬಹುದು. ನೆಮ್ಮದಿಯ ಬಾಳ್ವೆ ನಡೆಸಬಹುದು' ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಶುಕ್ರವಾರ ಗುರುಪೂರ್ಣಿಮೆ ಅಂಗವಾಗಿ ಆಯೋಜಿಸಿದ್ದ ವಿಶೇಷ ಪೂಜೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಭಾರತೀಯ ಸನಾತನ ಪರಂಪರೆಯಲ್ಲಿ ಗುರುವಿಗೆ ಶ್ರೇಷ್ಠ ಸ್ಥಾನವಿದೆ. ಗುರುವಿನ ಮಾರ್ಗದರ್ಶನ ಇಲ್ಲದೆ ಜೀವನ ಸಫಲ ಆಗಲಾರದು. ಶಿಷ್ಯನು ತಪ್ಪು ದಾರಿಗೆ ಹೋಗುವುದನ್ನು ತಪ್ಪಿಸಿ ಸರಿದಾರಿಗೆ ತರುವುದು ಗುರುವಿನ ಕೆಲಸ. ಗುರುಪೂರ್ಣಿಮೆ ಆಚರಣೆ ಹಿಂದಿನಿಂದಲೂ ಬಂದಂಥ ಸಂಪ್ರದಾಯವಾಗಿದೆ' ಎಂದರು.

ಪ್ರೊ.ರುದ್ರೇಶ್ವರ ಗೋರಟಾ ದಂಪತಿ ಪಾದಪೂಜೆ ನೆರವೇರಿಸಿದರು. ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ವೀರಣ್ಣ ಶೀಲವಂತ, ಎ.ಜಿ.ಪಾಟೀಲ, ರಮೇಶ ಸ್ವಾಮಿ, ಶರಣಪ್ಪ ಬಿರಾದಾರ, ಎಂ.ಕೆ. ನಂದಿ, ಮರೆಪ್ಪ ಪಾಟೀಲ, ಸವಿತಾ ಸ್ವಾಮಿ, ಶೀಲಾ ಕಲ್ಯಾಣಿ, ಸರಸ್ವತಿ ಬೆಂಬಳಗೆ, ಶಂಕರ ಬಿರಾದಾರ ಇದ್ದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಭಕ್ತರು ಗುರುಪೂರ್ಣಿಗೆ ಅಂಗವಾಗಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಾದಪೂಜೆ ನೆರವೇರಿಸಿದರು

ಪ್ರಜಾವಾಣಿ ಭಾನುವಾರ • ಜುಲೈ 25, 2021

ಜಯಂತಿ ಆಚರಣೆ ಐತಿಹಾಸಿಕ ನಿರ್ಣಯ

ಬಸವಕಲ್ಯಾಣ: ಆದಿ ಜಗದ್ಗುರು, ಮನುಕುಲದ ಉದ್ಧಾರಕ ಜಗದ್ಗುರು ರೇಣುಕಾಚಾರ್ಯ ಜಯಂತಿ ಆಚರಣೆಯನ್ನು ರಾಜ್ಯ ಸರಕಾರದ ವತಿಯಿಂದ ಆಚರಿಸಲು ತೀರ್ಮಾನಿಸಿ ಆದೇಶ ಹೊರಡಿಸಿದ್ದು ತುಂಬಾ ಸಂತೋಷದ ಸಂಗತಿಯಾಗಿದೆ ಎಂದು ಇಲ್ಲಿಯ ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು ತಿಳಿಸಿದ್ದಾರೆ. ಭಕ್ತರ ಬಹು ದಿನದ ಸಂಕಲ್ಪ ಈಡೇರಿದಂತಾಗಿದೆ. ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿಯ ಮೂಲಕ ಮಾನವ ಧರ್ಮ ಬೋಧಿಸಿ ಮನುಕುಲದ ಉದ್ಧಾರಗೈದ ಪರಮಾಚಾರ್ಯರಾಗಿದ್ದಾರೆ. ಹೀಗಾಗಿ ರಾಜ್ಯ ಸರಕಾರ ಭಕ್ತರ ಸಂಕಲ್ಪವನ್ನು ಸಾಕಾರಗೊಳಿಸಿ ಜಗದ್ಗುರು ರೇಣುಕಾಚಾರ್ಯರ ಕೃಪೆಗೆ ಪಾತ್ರವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಅಭಿನಂದನೆ ತಿಳಿಸಿದ್ದಾರೆ.





ವಿಜಯವಾಣಿ ಚಿತ್ರ

ಬಸವಕಲ್ಯಾಣದ ತ್ರಿಪುರಾಂತ ಸಂಸ್ಥಾನ ಗವಿಮಠದಲ್ಲಿ ದಸರಾ ಹಬ್ಬದ ನಿಮಿತ್ತ ಬನ್ನಿ ಗಿಡಕ್ಕೆ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪೂಜೆ ಸಲ್ಲಿಸಿದರು. ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ಶಿವಾನಂದ ಪಟವಾರಿ, ಬಸವರಾಜ ಸ್ವಾಮಿ, ವೀರಣ್ಣ ಶೀಲವಂತ, ಪ್ರೊ.ಸೂರ್ಯಕಾಂತ ಶೀಲವಂತ, ರೇವಣಸಿದ್ದಯ್ಯ ಮಠಪತಿ, ಮಲ್ಲಿಕಾರ್ಜುನ ನಂದಿ, ರೇವಣಸಿದ್ದಯ್ಯ ವಸ್ತ್ರದ ಇತರರಿದ್ದರು.

VIJAYAVANI • KALABURAGI

ಭಾನುವಾರ 17 ಅಕ್ಟೋಬರ್ 2021 • 17 OCTOBER 2021

Scanned with OKEN Scanner

ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಉಪನ್ಯಾಸ ಮಾಲೆ ಕಾರ್ಯಕ್ರಮ

ವಚನ ಸಾಹಿತ್ಯ ಬದುಕಿಗೆ ಮಾರ್ಗದರ್ಶಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಜಗದ ಆದಿ ಜಗದ್ಗುರು ರೇಣು ಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ಬಸವಾದಿ ಶಿವಶರಣರು ರಚಿಸಿದ ವಚನ ಸಾಹಿತ್ಯ ಮಾನವನ ಬದುಕಿಗೆ ಮಾರ್ಗ ದರ್ಶಿಗಳಾಗಿವೆ ಎಂದು ಶ್ರೀಪುರಾಂತನ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕದ ಸಹಯೋಗದಲ್ಲಿ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಉಪನ್ಯಾಸ ಮಾಲೆಯ ಕಾರ್ಯಕ್ರಮದಲ್ಲಿ ಆಶಿರ್ವಚನ ನೀಡಿದ ಶ್ರೀಗಳು, ಈ ಪವಿತ್ರ ಶ್ರಾವಣ ಮಾಸದಲ್ಲಿ ಆದರೂ ಪವಿತ್ರ ಸಾಹಿತ್ಯಗಳಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯವನ್ನು ಪಠಣ ಹಾಗೂ ಶ್ರವಣ ಮಾಡುವ ಮೂಲಕ ಅರಿತು ನಡೆದರೆ ಬದುಕು ಸಾರ್ಥಕವಾಗಲಿದೆ ಎಂದರು.

ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿ, ಪ್ರತಿವರ್ಷ ಪವಿತ್ರ ಶ್ರಾವಣ ಮಾಸದಲ್ಲಿ ಶ್ರೀಗಳ ಸಾನಿಧ್ಯದಲ್ಲಿ ಗವಿಮಠದಲ್ಲಿ ಅನೇಕ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಿರುವುದು ನಮ್ಮ ಭಾಗ್ಯ. ಪುಣ್ಯ ಸಂಪಾದನೆಗೆ ಕಾರಣಗಳಾಗಿವೆ ಎಂದರು.

ಕು.ಶರಣಬಸಪ್ಪಾ ಅಲಗೂಡೆ ಪ್ರಾರ್ಥನೆ ಗೀತೆ ಹಾಡಿದರು. ಪ್ರೊ. ರುದ್ರೇಶ್ವರ ಸ್ವಾಮಿ ಗೋರ್ಟಾ ಭಕ್ತಿ ಗೀತೆ ನಡೆಸಿಕೊಟ್ಟರು, ಪ್ರೊ.ಸೂರ್ಯಕಾಂತ ಶೀಲವಂತ ಸ್ವಾಗತಿಸಿದರು, ರಮೇಶ್ ರಾಜೋಳೆ ನಿರೂಪಿಸಿದರು. ಈ ವೇಳೆ ಲಕ್ಷ್ಮಣ ಸಿಂಗ್, ಮಲ್ಲಿಕಾರ್ಜುನ ನಂದಿ, ಮಲ್ಲಿಕಾರ್ಜುನ ಅಲಗೂಡ,ಡಾ. ಬಸವರಾಜ ಸ್ವಾಮಿ, ಶಿವಶಂಕರ್ ರಾಮಣ್ಣನವರ, ಚನ್ನಪ್ಪಾ ಅಳ್ಳಿಕಟ್ಟಿ, ಗುರುಲಿಂಗಯ್ಯ ಖಿಟಗಿಮಠ, ರಾಚಯ್ಯ ಮಠಪತಿ, ವೀರಪ್ಪಾ ಶಾಣಮೆ,ಶಾಂತವೀರ ಸ್ವಾಮಿ, ಬಸವಣ್ಣಪ್ಪಾನೆಲೋಗಿ, ಮಲ್ಲಿಕಾರ್ಜುನ ಬಗದುರೆ, ಸವಿತಾ ರಮೇಶ್ ಸ್ವಾಮಿ, ಸರಸ್ವತಿ ಬೆಂಬಳಿ, ಪಾರ್ವತಿ ರೋಜೆ, ಶೀಲಾದೇವಿ ಬಸವಂತಪ್ಪಾ ಲವಾರೆ, ಸುರೇಖಾ ಸೂರ್ಯಕಾಂತ ಶೀಲವಂತ ಸೇರಿ ಅನೇಕರಿದ್ದರು.



ಬಸವಕಲ್ಯಾಣದ ಗವಿಮಠದಲ್ಲಿ ನಡೆದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಉಪನ್ಯಾಸ ಮಾಲೆಯ ಕಾರ್ಯಕ್ರಮದಲ್ಲಿ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ. ಬಾಲಕೃಷ್ಣ ರಾಠೋಡ್, ಬಸವಂತಪ್ಪ ಲವಾರೆ, ಸವಿತಾ ಆರ್ ಸ್ವಾಮಿ, ಸುರೇಖಾ ಎಸ್ ಶೀಲವಂತ ಸೇರಿ ಅನೇಕರಿದ್ದರು.

> ಇಂದು ಜಗತ್ತಿಗೆ ಕೊರೊನಾ ಎಂಬ ಮಹಾಮಾರಿ ಭಯ ಹುಟ್ಟಿದೆ. ಆದರೆ, ಭಯಪಡುವ ಅಗತ್ಯವಿಲ್ಲ, ಆದರಿಂದ ನಾವು ಪರಾಗಲು ನಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳಬೇಕು. ಹೊರಗಡೆ ಹೋದಾಗ ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾದುಕೊಳ್ಳುವುದು ಅವಶ್ಯ.
> -ಡಾ. ಬಾಲಕೃಷ್ಣ ರಾಠೋಡ್
> ,ಅಧ್ಯಕ್ಷ, ತಾಲೂಕು ರೋಟರಿ ಕ್ಲಬ್.

ವಿಜಯವಾಣಿ ಸುದ್ದಿ ಜಾಲ ಬುಧವಾರ,11 ಆಗಸ್ಟ್ 2021 80

ಸಾಕು ಎನ್ನುವವನೆ ಶ್ರೀಮಂತ

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಅಭಿಮತ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ದಾನ ಒಂದು ಮಹತ್ವದ ಕರ್ತವ್ಯ. ದಾನದಿಂದ ಮನುಷ್ಯನ ಮನಸ್ಸು ಹಗುರವಾಗುತ್ತದೆ. ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿಯ ಮೂಲಕ ಹಸ್ತಕ್ಕೆ ದಾನವೇ ಭೂಷಣ ಎಂದು ಉಪದೇಶಿಸಿದ್ದಾರೆ ಎಂದು ನಗರದ ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಸಂಸ್ಥಾನ ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕದ ಆಶ್ರಯದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ಗುರುವಾರ ಆಯೋಜಿಸಿದ 2ನೇ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ದಾನ ಶ್ರೇಷ್ಠವಾದದ್ದು. ದಾನ ಮಾಡುವ ಮನುಷ್ಯ ಶ್ರೀಮಂತ ಇದ್ದಂತೆ. ಸಾಕು ಎನ್ನುವವನೆ ಶ್ರೀಮಂತ, ಬೇಕು ಎನ್ನುವವನೆ ಬಡವ ಎಂದರು.

ಅಧ್ಯಕ್ಷತೆ ವಹಿಸಿದ್ದ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಮಾತನಾಡಿ, ಕಲಿಯುಗದ ಶ್ರೀ ಜಗದ್ಗುರು ರೇವಣಸಿದ್ಧರು ಪವಾಡ ಪುರುಷರು ಹಾಗೂ ಸಿದ್ಧಿ ಪುರುಷರು ಮತ್ತು ಆಯುರ್ವೇದ ವೈದ್ಯರೂ ಆಗಿದ್ದರು. ಅವರು ಬಾಲುಕ್ಯ ಅರಸನ ವಿನಂತಿಯ ಮೇರೆಗೆ ಗವಿಮಠದ ಮುಂಭಾಗದ ಈ ಕೆರೆಯನ್ನು ನಿರ್ಮಿಸಿ ಜೀವಿಗಳ ದಾಹ ನೀಗಿಸಿದ್ದರು ಎಂದರು.

ಅತಿಥಿಗಳಾಗಿ ಪಾಲ್ಗೊಂಡಿದ್ದ ಸಂಸ್ಥೆ ಮಾಜಿ ಅಧ್ಯಕ್ಷ ವೀರಣ್ಣ ಶೀಲವಂತ ಮಾತನಾಡಿದರು. ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪಾ ಲವಾರೆ ಸ್ವಾಗತಿಸಿದರು. ರೇವಣಸಿದ್ಧಯ್ಯ ಮಠಪತಿ ವಂದಿಸಿದರು, ರಮೇಶ್ ರಾಜೋಳೆ ನಿರೂಪಣೆ ಮಾಡಿದರು. ಕು.ಶರಣಬಸಪ್ಪಾ ಅಲಗೂಡೆ ಪ್ರಾರ್ಥನೆ ಗೀತೆ ಹಾಡಿದರು. ಪ್ರಮುಖರು, ಭಕ್ತರು ಭಾಗವಹಿಸಿದ್ದರು.



ವಿಜಯವಾಣಿ

ಬಸವಕಲ್ಯಾಣದಲ್ಲಿ ಹಮ್ಮಿಕೊಂಡ ಉಪನ್ಯಾಸದಲ್ಲಿ ವೀರಣ್ಣ ಶೀಲವಂತ ಮಾತನಾಡಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣಪ್ಪ ಬಿರಾದಾರ ಇದ್ದರು.

ನಂ1 ವಿಜಯವಾಣಿ VIJAYAVANI » KALABURAGI
ಭಾನುವಾರ 15 ಆಗಸ್ಟ್ 2021
15 AUGUST 2021

Scanned with OKEN Scanner

ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು 3ನೇ ಉಪನ್ಯಾಸ ಮಾಲೆ

ಪರಿಸರ ರಕ್ಷಣೆ ಕಾಳಜಿಗೆ ಶ್ಲಾಘನೆ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಮಹಾ ಸಾಧಕಿ ಸಾಲು ಮರದ ತಿಮ್ಮಕ್ಕನ ಕನಸನ್ನು ಕಲ್ಯಾಣ ಕರ್ನಾಟಕದಲ್ಲಿ ನನಸು ಮಾಡುತ್ತಿರುವ ಏಕೈಕ ವ್ಯಕ್ತಿ ಎಂದರೆ ಖ್ಯಾತ ಪರಿಸರ ಪ್ರೇಮಿ, ಪರಿಸರ ರಕ್ಷಕ ಶೈಲೇಂದ್ರ ಕಾವಡಿ ಎಂದು ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು 3ನೇ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು. ನಮ್ಮ ಜಿಲ್ಲೆಯವರೇ ಆದ ಶೈಲೇಂದ್ರ ಕಾವಡಿ ಆವರು ಕಲ್ಯಾಣ ಕರ್ನಾಟಕದ ವಿಶಾಲ ಪ್ರದೇಶದಲ್ಲಿ ಇಲ್ಲಿಯವರೆಗೆ ಲಕ್ಷಾಂತರ ವೃಕ್ಷಗಳನ್ನು, ಔಷಧ ಸಸಿಗಳನ್ನು ನೆಡುವುದರ ಮೂಲಕ ನಮಗೋಸ್ಕರ ಸ್ವಚ್ಛ ಪರಿಸರ ನಿರ್ಮಿಸುತ್ತಿರುವುದು ಹೆಮ್ಮೆಯ ಸಂಗತಿ. ಹಾಗೆಯೇ ಆಕ್ಸಿಜನ್ ಅರಳಿ ಮರ, ಔಷಧ ಗುಣ ಹೊಂದಿರುವ ಬಿಲ್ವಪತ್ರಿ, ತುಳಸಿ, ಲಿಂಬು, ಕರಿಬೇವು ಮೊದಲಾದವುಗಳ ಮಹತ್ವ ಕುರಿತು ಮಾಹಿತಿ ನೀಡಿದ್ದಾರೆ ಎಂದರು.



ಬಸವಕಲ್ಯಾಣದ ಗವಿಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು 3ನೇ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಚಿಟಗುಪ್ಪಾದ ಸಮಾಜ ಸೇವಕ ಅಸ್ಲಾಮಿಯಾ ಮಾತನಾಡಿದರು.

ಚಿಟಗುಪ್ಪ ಸಮಾಜ ಸೇವಕ ಅಸ್ಲಾಮಿಯಾ ಮಾತನಾಡಿ, ಬಸವಕಲ್ಯಾಣದ ಈ ಸಂಸ್ಥಾನ ಗವಿಮಠ ಕಲ್ಯಾಣ ನಾಡಿನ ನಿಜವಾದ ಭಾವೈಕ್ಯತೆಯ ಮಠ ಆಗಿದೆ ಎಂದರು. ಆಚ್ಚರಿಗೊಳಿಸಿದರು. ನಿವೃತ್ತ ಜಾಲಾನಯನ ಅಧಿಕಾರಿ ಮಲ್ಲಿಕಾರ್ಜುನ ನಂದಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅಲಗೂಡ ಸರಕಾರಿ ಪ್ರೌಢ ಶಾಲೆ ಮುಖ್ಯಗುರು ರಮೇಶ ರಾಜೋಳೆ ಅವರು ಪ್ರಾಸ್ತಾವಿಕ ಮಾತನಾಡಿದರು. ಶರಣಬಸಪ್ಪ ಅಲಗೂಡೆ ಪ್ರಾರ್ಥನೆ ಗೀತೆ ಹಾಡಿದರು. ರೇಣುಕಾ ರಾಮಣ್ಣನವರ ವಚನ ಗಾಯನ ಮಾಡಿದರು. ಶಿಕ್ಷಕ ಮಲ್ಲಿಕಾರ್ಜುನ ಅಲಗೂಡೆ ಸ್ವಾಗತಿಸಿದರು. ಪ್ರೊ. ರುದ್ರೇಶ್ವರ ಗೋರ್ಟಾ ನಿರೂಪಿಸಿದರು.

ಈ ವೇಳೆ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ತಾಲೂಕಾ ಅಧ್ಯಕ್ಷ ಬಸವಂತಪ್ಪ ಲವಾರೆ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ಸ್ವಾಮಿ, ವೀರಣ್ಣ ಶೀಲವಂತ, ಪ್ರೊ. ಸೂರ್ಯಕಾಂತ ಶೀಲವಂತ, ಶೆಶಿಕಾಂತ ಮಂಠಾಳೆ, ರೇವಣಸಿದ್ದಪ್ಪ, ಬಸವರಾಜ ಬಿರಾದಾರ, ಸುಭದ್ರಾಬಾಯಿ ಸ್ವಾಮಿ, ಶಿಕ್ಷಕಿ ಸ್ವರಸ್ವತಿ ಬೆಂಬಳಿ, ಈರಮ್ಮ ಬೆಂಬಳಿ, ಸುನಂದಾ ನಂದಿ, ಪಾರ್ವತಿ ರೋಜೆ, ರೇಣುಕಾ ಮಠಪತಿ ಸೇರಿ ಅನೇಕರಿದ್ದರು.

> ಇಂದು ನಾವು ಕೊರೊನಾ ಎಂಬ ಮಹಾ ಮಾರಿಯಿಂದ ಆರೋಗ್ಯವಾಗಿ ಬದುಕಬೇಕಾದರೆ ಸ್ವಚ್ಛ ಪರಿಸರ ರೂಪಿಸುವುದು ಹಾಗೂ ಅದನ್ನು ರಕ್ಷಿಸುವುದು ಅವಶ್ಯಕವಾಗಿದೆ. ಅಂಥಾ ಪರಿಸರವನ್ನು ಬಸವಕಲ್ಯಾಣ ಈ ಸಂಸ್ಥಾನ ಗವಿಮಠದಲ್ಲಿ ಮಾತ್ರ ಕಾಣಬಹುದು.
> -ಶೈಲೇಂದ್ರ ಕಾವಡಿ, ಪರಿಸರ ಪ್ರೇಮಿ

ವಿಜಯಕರ್ನಾಟಕ ನಮ್ಮ ಬೀದರ್ ಬುಧವಾರ, 18 ಆಗಸ್ಟ್ 2021

ದೇವರು ಸದಾಚಾರ ಪ್ರೀಯ: ಅಭಿನವ ಶ್ರೀ



ಬಸವಕಲ್ಯಾಣ: ಶ್ರಾವಣ ಮಾಸ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ನಡೆದ ಉಪನ್ಯಾಸ ಮಾಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ನಿಂಗರಾಜ ಅರಸ್ ಮಾತನಾಡಿದರು.

ಸಂ.ಕ.ಸಮಾಚಾರ ಬಸವಕಲ್ಯಾಣ

ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ತಮ್ಮ ಸಿದ್ಧಾಂತ ಶಿಖಾಮಣಿಯಲ್ಲಿ ದೇವರು ಸದಾಚಾರ ಪ್ರೀಯನಾಗಿದ್ದಾನೆ ಎಂದು ಬೋಧಿಸಿದ್ದಾರೆ ಎಂದು ಸಂಸ್ಥಾನ ಗವಿಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣ ಮಾಸ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ಉಪನ್ಯಾಸಮಾಲೆಕಾರ್ಯಕ್ರಮದಲ್ಲಿ ಮಾತನಾಡಿ ಸದಾ ಒಳ್ಳೆಯ ವಿಚಾರ, ಒಳ್ಳೆಯ ಆಚರಣೆಗಳನ್ನು ಮಾಡಬೇಕು. ಆಂದಾಗ ಮಾತ್ರ ಸದಾಚಾರಿಗಳಾಗಿ ಪರಮಾತ್ಮನಿಗೆ ಪ್ರೀಯರಾಗಲು ಸಾಧ್ಯ ಎಂದರು. ಸನ್ಮಾನ ಸ್ವೀಕರಿಸಿದ ಸಮಾಜ ಕಲ್ಯಾಣ ಇಲಾಖೆ ಇಲ್ಲಿಯ ಹಿರಿಯ ಸಹಾಯಕ ನಿರ್ದೇಶಕ ನಿಂಗರಾಜ ಅರಸ್ ಮಾತನಾಡಿ ಗವಿಮಠ ಮನಸ್ಸಿಗೆ ನೆಮ್ಮದಿ ಕಲ್ಪಿಸುವ ತಾಣವಾಗಿದೆ ಎಂದರು.

ಸನ್ಮಾನ ಸ್ವೀಕರಿಸಿದ ಸರ್ಕಾರಿ ಪದವಿ ಕಾಲೇಜಿನ ನಿವೃತ್ತ ಪ್ರಾಚಾರ್ಯ ಪ್ರೊ. ನಾಗೇಂದ್ರ ಢೋಲೆ, ಲಕ್ಷ್ಮಣಸಿಂಗ್ ಠಾಕೂರ್ ಸಹ ಮಾತನಾಡಿದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಸವಿತಾ ಸ್ವಾಮಿ, ವೀರಣ್ಣ ಶೀಲವಂತ, ಎ.ಜೆ ಪಾಟೀಲ್, ಪ್ರೊ. ಸೂರ್ಯಕಾಂತ ಶೀಲವಂತ, ಬಸವರಾಜ ಶೇರಿ, ಶಿವಕುಮಾರ್ ಬಿರಾದಾರ, ಗೌತಮ್, ಮಹಾದೇವಿ ಅಂಬುಲಗೆ, ಮೀನಾಕ್ಷಿ ಪಾಟೀಲ್ ಸೇರಿದಂತೆ ಇತರರಿದ್ದರು.

ಸಂಯುಕ್ತ ಕರ್ನಾಟಕ 23 ಆಗಸ್ಟ್ 2021 ಸೋಮವಾರ ಕಲಬುರಗಿ

ಇನ್ನಷ್ಟು ಸ್ಥಳೀಯ ಸುದ್ದಿಗಳು ▶▶ ಪುಟ 4

ಶ್ರಾವಣ ಸಂದೇಶ



ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು
ಗವಿಮಠ, ಬಸವಕಲ್ಯಾಣ, ಬೀದರ್ ಜಿಲ್ಲೆ

ಶರಣರ ಕಾಯಕ ತತ್ವ ಪಾಲಿಸಿ

ವ್ಯಕ್ತಿತ್ವ ಬೆಳಗಬೇಕಾದರೆ ಸದಾಚಾರ, ಸದ್ಗುಣ ಹೊಂದಿರುವುದು ಅಗತ್ಯ. ಸಿದ್ಧಾಂತ ಶಿಖಾಮಣಿ ಧರ್ಮಗ್ರಂಥ ಮತ್ತು ಬಸವಾದಿ ಶರಣರ ವಚನಗಳಲ್ಲಿ ಸತ್ಯ, ಶುದ್ಧ ಕಾಯಕ ಕೈಗೊಳ್ಳುವುದಲ್ಲದೆ, ಉತ್ತಮ ನಡೆ ನುಡಿ ಹೊಂದಿರಬೇಕು ಎಂದು ಬೋಧಿಸಲಾಗಿದೆ. ಈ ಕಾರಣ ಸಂತರ, ಶರಣರ ಮತ್ತು ಸತ್ಪುರುಷರ ತತ್ವಗಳ ಪಾಲನೆ ಅವಶ್ಯಕವಾಗಿದೆ.

ಜೀವನದಲ್ಲಿ ಶಾಂತಿ, ನೆಮ್ಮದಿ ಇರಬೇಕಾದರೆ, ಸಂತೃಪ್ತಿ ದೊರಕಲು ಉತ್ತಮ ಕಾರ್ಯಗಳನ್ನು ಕೈಗೊಳ್ಳಬೇಕು. ಗುರುವಿನ ಮಾರ್ಗದರ್ಶನ ಪಡೆದುಕೊಳ್ಳಬೇಕು. ಸತ್ಸಂಗ, ಅನುಭಾವ ಚಿಂತನೆ, ಪ್ರವಚನ, ಉಪನ್ಯಾಸದಲ್ಲಿ ಪಾಲ್ಗೊಳ್ಳಬೇಕು. ವರ್ಷದ 11 ತಿಂಗಳು ಸಂಸಾರದ ಜಂಜಾಟದಲ್ಲಿ ಸಿಲುಕಿದ್ದರೂ ಶ್ರಾವಣ ಮಾಸದಲ್ಲಿ ದೇವರ ಧ್ಯಾನ ಮಾಡಬೇಕು. ಉಪವಾಸ ವ್ರತಾಚರಣೆ ಕೈಗೊಳ್ಳಬೇಕು. ವಚನಗಳ ಮತ್ತು ಶ್ಲೋಕಗಳ ಪಾರಾಯಣ ನಡೆಸಬೇಕು.

ಅನ್ಯರಿಗೆ ಉಪಕಾರಿಯಾಗಿ ಬದುಕಬೇಕು. ನಮ್ಮ ನಡತೆಯಿಂದ ಯಾರಿಗೂ ಹಾನಿ ಆಗಬಾರದು. ನೋವು, ಕಷ್ಟ ಕೊಡುವುದರಿಂದ ಏನೂ ಪ್ರಯೋಜನವಿಲ್ಲ. ಅಂಥವರು ಎಲ್ಲಿಯೂ ಸಲ್ಲುವುದಿಲ್ಲ. ಅವರ ಬದುಕು ವ್ಯರ್ಥ. ಅನ್ಯರ ಕಷ್ಟ ಸುಖಗಳಲ್ಲಿ ಭಾಗಿಯಾಗಿ ಸ್ನೇಹ, ಸೌಹಾರ್ದತೆಯಿಂದ ಬದುಕಬೇಕು. ಅದುವೇ ನಿಜವಾದ ಜೀವನವಾಗಿದೆ.

Scanned with OKEN Scanner

ಕನ್ನಡಪ್ರಭ
ಬುಧವಾರ 18.8.2021

ಬಾಗಲಕೋಟೆ

ಸಾಲು ಮರದ ತಿಮ್ಮಕ್ಕನ ಕನಸು ನನಸಾಗಿಸುವಲ್ಲಿ ಕಾಡು ಪ್ರಾಣಿಗಳ ಪಾತ್ರ ಮಹತ್ವದ್ದು

ಉಪನ್ಯಾಸಮಾಲೆಯಲ್ಲಿ ಬಸವಕಲ್ಯಾಣ ಗವಿಮಠದ ಡಾ. ರುದ್ರಮುನಿ ಶಿವಾಚಾರ್ಯರ ಮೆಚ್ಚುಗೆ

• ಕನ್ನಡಪ್ರಭ ವಾರ್ತೆ ಬಸವಕಲ್ಯಾಣ

ಸಾಲು ಮರದ ತಿಮ್ಮಕ್ಕನ ಕನಸನ್ನು ಕಲ್ಯಾಣ ಕರ್ನಾಟಕದಲ್ಲಿ ನನಸು ಮಾಡುತ್ತಿರುವ ಏಕೈಕ ವ್ಯಕ್ತಿ ಎಂದರೆ ಖ್ಯಾತ ಪರಿಸರ ಪ್ರೇಮಿ, ಪರಿಸರ ರಕ್ಷಕ ಪ್ರೊ. ಸಿದ್ರಾಮ ಕಾಡೆ ಎಂದು ಗವಿಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶಾವಣಮಾಸ ನಿಮಿತ್ತ ನಗರದ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ ೨ನೇ ಉಪನ್ಯಾಸಮಾಲೆಯ ಸಾನಿಧ್ಯ ವಹಿಸಿ ಮಾತನಾಡಿ, ನಮ್ಮ ಜಲ್ಲೆಯವರೇ ಆದ ಪ್ರೊ.ಸಿದ್ರಾಮ ಕಾಡೆ ಅವರು ಕಲ್ಯಾಣ ಕರ್ನಾಟಕದ ವಿಶಾಲ ಪ್ರದೇಶದಲ್ಲಿ ಚಿಚುಗುಪ್ಪಾದ ಸಮಾಜ ಸೇವಕ ಎಸ್ಸಾಂಬಿಯಾ, ಎಲಗೂಡ ಸರಕಾರಿ ಪ್ರೌಢ ಶಾಲೆಯ ಮುಖ್ಯ ಗುರು ರಮೇಶ ರಾಜೋಳೆ, ಶರಣಬಸಪ್ಪ ಎಲಗೂಡೆ, ಮಲ್ಲಿಕಾರ್ಜುನ ಎಲಗೂಡೆ, ಪ್ರೊ. ರುದ್ರಪ್ಪ ನೋರ್ಟೂ, ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಕಾರ್ಯದರ್ಶಿ ಅಧ್ಯಕ್ಷ ಬಸವಂತಪ್ಪ ಲಾವರೆ, ಸಂಸ್ಥೆ ಸದಸ್ಯೆ ಸವಿತಾ ಸ್ವಾಮಿ, ವೀರಣ್ಣ ಶೀಲವಂತ, ಪ್ರೊ. ಸೂರ್ಯಕಾಂತ ಶೀಲವಂತ, ಶಿಕ್ಷಕಿ ಮಂಜಾಳೆ, ರೇವಣಸಿದ್ದಪ್ಪ ಬಸವರಾಜ ಬಿರಾದಾರ, ಸುಭದ್ರಾಬಾಯಿ ಸ್ವಾಮಿ, ಶಿಕ್ಷಕಿ ಸರ್ವಮಂಗಳಾ ಬೆಂಬಳಿ, ಈರಮ್ಮ ಬೆಂಬಳಿ, ಸುನಂದಾ ನಂದಿ, ಪಾರ್ವತಿ ರೋಜೆ, ರೇಣುಕಾ ಮಠಪತಿ ಉಪಸ್ಥಿತರಿದ್ದರು.

ಬಸವಕಲ್ಯಾಣದ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಉಪನ್ಯಾಸ ಮಾಲೆಯಲ್ಲಿ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಇಲ್ಲಿಯವರೆಗೆ ಲಕ್ಷಗಟ್ಟಲೆ ವೃಕ್ಷಗಳನ್ನು, ವಿಶೇಷ ಸಸ್ಯ ಪರಿಸರ ನಮಗೋಸ್ಕರ ನಿರ್ಮಿಸಿರುವುದು ಹೆಮ್ಮೆಯ ಸಂಗತಿ. ಇಂಥ ಮೂಲಕ ಸೇವೆಯಲ್ಲಿ ತೊಡಗಿದವರ ಸನ್ಮಾನ ಕಾರ್ಯಕ್ರಮ ಆಯೋಜಿಸಿರುವುದು ಸಂತೋಷ ಉಂಟುಮಾಡಿದೆ ಎಂದು ಹೇಳಿದರು.

ಪ್ರೊ.ಸಿದ್ರಾಮ ಕಾಡೆ ಮಾತನಾಡಿ, ಹುಟ್ಟಿದಾಗಿನಿಂದ ಆರೋಗ್ಯವಾಗಿ ಬದುಕಬೇಕಾದರೆ ಸ್ವಚ್ಛ ಪರಿಸರ ಅವಶ್ಯವಾಗಿದೆ. ಹಾಗೂ ಅದನ್ನು ರಕ್ಷಿಸುವುದು ಅವಶ್ಯಕವಾಗಿದೆ. ಇಂಥ ಪರಿಸರವನ್ನು ಬಸವಕಲ್ಯಾಣದ ಈ ಸಂಸ್ಥಾನ ಗವಿಮಠದಲ್ಲಿ ಮಾತ್ರ ಕಾಣಬಹುದು ಎಂದು ತಿಳಿಸಿದರು.

ಉಪನ್ಯಾಸ ಮಾಲೆಯಲ್ಲಿ ಪ್ರವಚನಕಾರ ಶಿವಶರಣೆ ಅಕ್ಕಮಹಾದೇವಿ ಕುರಿತು ಉಪನ್ಯಾಸ ನೀಡಿದ ಅವರು, ಅಕ್ಕಮಹಾದೇವಿ ಅವರು ನಮಗೆ ತಿಳಿಸಿ ಹೇಳಿದ್ದಾರೆ. ಜೊತೆಗೆ ಕಾಡಿನ ಅವರು ಅಪರೂಪದ ನಾಗಲಿಂಗ ಪುಷ್ಪದ ಹಾಗೂ ಬಿಲ್ವಪತ್ರೆಯ ೨ ಕ್ಷದ ಸಸಿಗಳನ್ನು ವಿತರಿಸಿದ್ದು ಸಂತೋಷ ಉಂಟುಮಾಡಿದೆ ಎಂದು ಹೇಳಿದರು.

ಪ್ರೊ.ಸಿದ್ರಾಮ ಕಾಡೆ ಮಾತನಾಡಿ, ಹುಟ್ಟಿದಾಗಿನಿಂದ ಆರೋಗ್ಯವಾಗಿ ಬದುಕಬೇಕಾದರೆ ಸ್ವಚ್ಛ ಪರಿಸರ ಅವಶ್ಯವಾಗಿದೆ. ಹಾಗೂ ಅದನ್ನು ರಕ್ಷಿಸುವುದು ಅವಶ್ಯಕವಾಗಿದೆ. ಇಂಥ ಪರಿಸರವನ್ನು ಬಸವಕಲ್ಯಾಣದ ಈ ಸಂಸ್ಥಾನ ಗವಿಮಠದಲ್ಲಿ ಮಾತ್ರ ಕಾಣಬಹುದು ಎಂದು ತಿಳಿಸಿದರು.

ದೇವರು ಸದಾಚಾರ ಪ್ರಿಯ

ಬಸವಕಲ್ಯಾಣದ ಗವಿಮಠದಲ್ಲಿ ಹಮ್ಮಿಕೊಂಡ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ನಿಂಗರಾಜ ಅರಸ್ ಮಾತನಾಡಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪ್ರೊ.ನಾಗೇಂದ್ರ ಡೋಲೆ, ಲಕ್ಷ್ಮಣಸಿಂಗ್ ಠಾಕೂರ್ ಉಪಸ್ಥಿತರಿದ್ದರು.

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಆದಿ ಜಗದ್ಗುರು ಶ್ರೀರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿಯಲ್ಲಿ ದೇವರು ಸದಾಚಾರ ಪ್ರಿಯನಾಗಿದ್ದಾನೆ ಎಂದು ಬೋಧಿಸಿದ್ದಾರೆ ಎಂದು ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

» ಅಭಿನವಶ್ರೀ ಅಭಿಮತ

» ಗವಿಮಠದಲ್ಲಿ ಶ್ರಾವಣ ಉಪನ್ಯಾಸ ಮಾಲೆ

ಶ್ರಾವಣ ಮಾಸ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಉಪನ್ಯಾಸ ಮಾಲೆಯಲ್ಲಿ ಆಶೀರ್ವಚನ ನೀಡಿ, ಸದಾ ಒಳ್ಳೆಯ ವಿಚಾರ, ಒಳ್ಳೆಯ ಆಚರಣೆ ಮಾಡಬೇಕು. ಆಗ ಮಾತ್ರ ಸದಾಚಾರಿಗಳಾಗಿ ಪರಮಾತ್ಮನಿಗೆ ಪ್ರಿಯರಾಗಲು ಸಾಧ್ಯ ಎಂದರು.

ಸಮಾಜ ಕಲ್ಯಾಣ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ನಿಂಗರಾಜ ಅರಸ್ ಮಾತನಾಡಿ, ಗವಿಮಠ ಮನಸ್ಸಿಗೆ ನೆಮ್ಮದಿ ಕಲ್ಪಿಸುವ ತಾಣವಾಗಿದೆ. ಗುರುಗಳಲ್ಲಿ, ದೇವರಲ್ಲಿ ಮಹತ್ವದ ಶಕ್ತಿ ಇದೆ. ಪವಿತ್ರ ಶ್ರಾವಣಮಾಸದಲ್ಲಿ ಪ್ರವಚನ ಕೇಳಿದರೆ ಜೀವನ ಸಾರ್ಥಕವಾಗುತ್ತದೆ ಎಂದರು.

ಸರ್ಕಾರಿ ಪದವಿ ಕಾಲೇಜಿನ ನಿವೃತ್ತ ಪ್ರಾಚಾರ್ಯ ಪ್ರೊ.ನಾಗೇಂದ್ರ ಡೋಲೆ ಮಾತನಾಡಿ, ವೃತ್ತಿ ಜೀವನದ ತೃಪ್ತಿ ತಂದಿದೆ. ಗುರು ಕೃಪಾಶೀರ್ವಾದದಿಂದ ಜೀವನದಲ್ಲಿ ನೆಮ್ಮದಿ ಮತ್ತು ಸಾರ್ಥಕತೆ ಕಾಣಲು ಸಾಧ್ಯ ಎಂದರು.

ಬಾಲಾಜಿ ಮೆಡಿಕಲ್‌ನ ಮಾಲೀಕ ಲಕ್ಷ್ಮಣಸಿಂಗ್ ಠಾಕೂರ್ ಮಾತನಾಡಿ, ಗವಿಮಠದ ಕಾರ್ಯಚಟುವಟಿಕೆ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಸವಿತಾ ಸ್ವಾಮಿ, ವೀರಣ್ಣ ಶೀಲವಂತ, ಎ.ಜಿ ಪಾಟೀಲ್, ಪ್ರೋ.ಸೂರ್ಯಕಾಂತ ಶೀಲವಂತ, ಬಸವರಾಜ ಶೇರಿ, ಶಿವಕುಮಾರ ಬಿರಾದಾರ, ಗೌತಮ, ಮಹಾದೇವಿ ಅಂಬಲಗೆ, ಮೀನಾಕ್ಷಿ ಪಾಟೀಲ್, ಪಾರ್ವತಿ ರೋಜೆ, ಶರಣಕುಮಾರ, ಐಶ್ವರ್ಯ ಮಠಪತಿ ಉಪಸ್ಥಿತರಿದ್ದರು. ಅಭಿಷೇಕ ರಾಮಣ್ಣನವರ್ ಸ್ವಾಗತಿಸಿದರು. ಅಕ್ಷತಾ ಮಠಪತಿ ನಿರೂಪಣೆ ಮಾಡಿದರು. ರುದ್ರೇಶ ಸ್ವಾಮಿ ಪ್ರಾರ್ಥನಾ ಗೀತೆ ಹಾಡಿದರು. ವಿಶ್ವ ಛಾಯಾಗ್ರಹಣ ದಿನದ ನಿಮಿತ್ತ ಯುವ ಛಾಯಾಗ್ರಾಹಕ ಜ್ಞಾನೇಶ್ವರ ರಾಚಪ್ಪನೋರ ಅವರನ್ನು ಸನ್ಮಾನಿಸಲಾಯಿತು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
ಭಾನುವಾರ 22 ಆಗಸ್ಟ್ 2021 • 22 AUGUST 2021
• VIJAYAVANI » KALABURAGI

Scanned with OKEN Scanner

ವಚನ ಸಾಹಿತ್ಯ ಬದುಕಿಗೆ ಮಾರ್ಗದರ್ಶಿ



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಸಂಸ್ಥಾನ ಗವಿಮಠದಲ್ಲಿ ಶ್ರಾವಣಮಾಸ ನಿಮಿತ್ತ ಹಮ್ಮಿಕೊಂಡ ಕಾರ್ಯಕ್ರಮವನ್ನು ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಡಾ. ಬಾಲಕೃಷ್ಣ ರಾಠೋಡ್, ಬಸವಂತಪ್ಪ ಲವಾರೆ, ರಮೇಶ ರಾಜೋಳೆ ಇತರರಿದ್ದರು.

ಬಸವಕಲ್ಯಾಣ: ಜಗದ ಆದಿ ಜಗದ್ಗುರು ರೇಣುಕಾಚಾರ್ಯರುಬೋಧಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ಬಸವಾದಿ ಶಿವಶರಣರು ರಚಿಸಿದ ವಚನ ಸಾಹಿತ್ಯ ಮಾನವನ ಬದುಕಿಗೆ ಮಾರ್ಗದರ್ಶಿಗಳಾಗಿವೆ ಎಂದು ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

» ಗವಿಮಠದ ಸ್ವಾಮೀಜಿ ಆಶಯ

ಶ್ರಾವಣಮಾಸ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಉಪನ್ಯಾಸ ಮಾಲೆಯ ಉದ್ಘಾಟನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಈ ಪವಿತ್ರ ಶ್ರಾವಣ ಮಾಸದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯವನ್ನು ಪಠಣ ಹಾಗೂ ಶ್ರವಣ ಮಾಡುವುದರ ಮೂಲಕ ಅರಿತು ನಡೆದರೆ ಬದುಕು ಸಾರ್ಥಕವಾಗುವುದು ಎಂದರು. ತಾಲೂಕಾ ರೋಟರಿ ಕ್ಲಬ್‌ನ ಅಧ್ಯಕ್ಷ ಡಾ. ಬಾಲಕೃಷ್ಣ ರಾಠೋಡ್, ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿದರು. ಲಕ್ಷ್ಮಣಸಿಂಗ್ ಸಿಂಗಾರ, ಮಲ್ಲಿಕಾರ್ಜುನ ನಂದಿ, ಮಲ್ಲಿಕಾರ್ಜುನ ಅಲಗೂಡ, ಡಾ.ಬಸವರಾಜ ಸ್ವಾಮಿ, ಶಿವಶಂಕರ್ ರಾಮಣ್ಣನವರ, ಚನ್ನಪ್ಪ ಅಳ್ಳಿಕಟ್ಟಿ ಗುರುಲಿಂಗಯ್ಯ ಐಟಗಿಮಠ, ರಾಚಯ್ಯ ಮಠಪತಿ, ವೀರಪ್ಪ, ಶಾಣಮೆ, ಶಾಂತವೀರ ಸ್ವಾಮಿ, ಬಸವಣ್ಣಪ್ಪ ನೆಲೋಗಿ, ಮಲ್ಲಿಕಾರ್ಜುನ ಬಗದುರೆ, ಸವಿತಾ ಸ್ವಾಮಿ, ಸರಸ್ವತಿ ಬೆಂಬಳೆ, ಪಾರ್ವತಿ ರೋಜೆ, ಶೀಲಾದೇವಿ ಲವಾರೆ, ಸುರೇಖಾ ಶೀಲವಂತ ಇನ್ನಿತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶುಕ್ರವಾರ 13 ಆಗಸ್ಟ್ 2021
13 AUGUST 2021

ಇಷ್ಟಲಿಂಗ ಆತ್ಮದ ಪ್ರತೀಕ: ಅಭಿನವ ಶ್ರೀ

ಸಂ.ಕ.ಸಮಾಚಾರ ಬಸವಕಲ್ಯಾಣ

ಇಷ್ಟಲಿಂಗವು ಕೇವಲ ಲಿಂಗವಲ್ಲ ಆದು ತನ್ನದೆ ಆದ ಆತ್ಮದ ಪ್ರತೀಕವೆಂಬ ಅರಿವು ಮೂಡಬೇಕಿದೆ ಎಂದು ಗವಿಮಠ ಸಂಸ್ಥಾನದ ಶ್ರೀ ಡಾ. ಅಭಿನವ ಘಗಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣ ಮಾಸ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ಉಪನ್ಯಾಸ ಮಾಲೆಯಲ್ಲಿ ಆಶೀರ್ವಚನ ನೀಡಿದರು. ಜಿಪಂ ಮಾಜಿ ಉಪಾಧ್ಯಕ್ಷರಾದ ಲತಾ ಹಾರಕೂಡೆ ಮಾತನಾಡಿ ಧಾರ್ಮಿಕ ಕಾರ್ಯಕ್ರಮಗಳ ಜತೆಗೆ ಶ್ರಾವಣ ಮಾಸದ ನಿಮಿತ್ತ ಉಪನ್ಯಾಸ ಮಾಲೆ ಆಯೋಜಿಸಿರುವ ಗವಿಮಠದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ಮಠದ ಕಾರ್ಯಕ್ಕೆ ಸಹಕರಿಸುವುದಾಗಿ ಭರವಸೆ ನೀಡಿದರು.

ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲ್ಲೂಕು ಮಹಿಳಾ ಘಟಕದ ಅಧ್ಯಕ್ಷರಾದ ಸವಿತಾ ಸ್ವಾಮಿ, ಇಂಡಿಯನ್ ಆ್ಯಂಬಿಯನ್ಸ್ ವಿನಿಯಾರ್ಡ್ ಕಂಪನಿಯ ಅಧ್ಯಕ್ಷರಾದ ಶಾಲಿನಿ ಸಂಜುಕುಮಾರ ವಾಡೆಕರ್ ಸಹ ಮಾತನಾಡಿದರು. ಸಂಸ್ಥೆ ತಾಲ್ಲೂಕಾಧ್ಯಕ್ಷ ಬಸವಂತಪ್ಪ ಲವಾರೆ, ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ, ಬಾಬುರಾವ್ ಉಳ್ಳೆ, ಪ್ರೊ.ರುದ್ರೇಶ್ವರ ಗೋರ್ಟಾ, ಶಾಂತವೀರ ಸ್ವಾಮಿ, ಬಾಬುರಾವ ಚಳಕಾಪೂರೆ, ಮಹಾದೇವಿ ಅಂಬುಲಗೆ, ಸುನಂದಾ ನಂದಿ, ಕಲಾವತಿ ಮಠಪತಿ ಇತರರು ಉಪಸ್ಥಿತರಿದ್ದರು.



ಬಸವಕಲ್ಯಾಣ : ಸಂಸ್ಥಾನ ಗವಿಮಠದಲ್ಲಿ ಶ್ರಾವಣ ಮಾಸ ನಿಮಿತ್ತ ಆಯೋಜಿಸಿದ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಶ್ರೀ ಡಾ. ಅಭಿನವ ಘಗಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಮಂತ್ರ ದೀಕ್ಷೆ ಪಡೆಯಲು ಸಲಹೆ

ಬಸವಕಲ್ಯಾಣ: ಶಿವಭಕ್ತರೆಲ್ಲರೂ ಲಿಂಗ, ಜಾತಿ, ಧರ್ಮ ಭೇದ ಮರೆತು ವೀರಶೈವ ಲಿಂಗಾಯತ ಪದ್ಧತಿಯಂತೆ ಸಮರ್ಥ ಗುರುವಿನಿಂದ ಮಂತ್ರ ದೀಕ್ಷೆ ಪಡೆಯಬೇಕು ಎಂದು ಗವಿಮಠ ಸಂಸ್ಥಾನದ ಡಾ.ಅಭಿನವ ಘಗಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕಾ ಘಟಕ ಸಹಯೋಗದಲ್ಲಿ ಶ್ರಾವಣ ಮಾಸ ನಿಮಿತ್ತ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಲತಾ ಹಾರಕೂಡೆ ಮಾತನಾಡಿ, ಮಕ್ಕಳನ್ನು ಮೊಬೈಲ್ ಸಂಸ್ಕೃತಿಯಿಂದ ದೂರ ಇರಿಸಬೇಕು. ಎಲ್ಲ ತಾಯಂದಿರು ದಿನಾಲು ಭಸ್ಮಧಾರಿಗಳಾಗಿರಬೇಕು. ಮಕ್ಕಳಿಗೆ ಉತ್ತಮ ಸಂಸ್ಕಾರ ಕೊಡಬೇಕು. ಕೋವಿಡ್ ಲಸಿಕೆ ಹಾಕಿಸಿಕೊಳ್ಳಬೇಕು ಎಂದರು.

ಬಸವಕಲ್ಯಾಣ ವೀರಶೈವ ಸದ್ಭೋಧನಾ ಸಂಸ್ಥೆ ಮಹಿಳಾ ಅಧ್ಯಕ್ಷೆ ಸವಿತಾ ಸ್ವಾಮಿ ಮಾತನಾಡಿ, ದೀಕ್ಷಾ ಸಂಸ್ಕಾರದಿಂದ ಸಮಾಜ ಪರಿವರ್ತನೆಯಾಗುತ್ತದೆ. ಲಿಂಗದಾರಿ ಸದಾ ಸುಖಿ. ಲಿಂಗ ಬಿಟ್ಟು ವೀರಶೈವರು ಇರಬಾರದೆಂದು ಲಿಂಗದೀಕ್ಷೆಯ ಮಹತ್ವ ವಿವರಿಸಿದರು.

ಇಂಡಿಯನ್ ಆ್ಯಂಬಿಯನ್ಸ್ ವಿನಿಯಾರ್ಡ್ ಕಂಪನಿಯ

ಗವಿಮಠದಲ್ಲಿ ಉಪನ್ಯಾಸ ಮಾಲೆ



ಬಸವಕಲ್ಯಾಣದ ಸಂಸ್ಥಾನ ಗವಿಮಠದಲ್ಲಿ ಶ್ರಾವಣ ಮಾಸ ನಿಮಿತ್ತ ಆಯೋಜಿಸಿದ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಡಾ.ಅಭಿನವ ಘಗಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಅಧ್ಯಕ್ಷೆ ಶಾಲಿನಿ ಸಂಜುಕುಮಾರ ವಾಡೆಕರ್ ಮಾತನಾಡಿದರು.

ಸಂಸ್ಥೆ ತಾಲೂಕಾ ಅಧ್ಯಕ್ಷ ಬಸವಂತಪ್ಪ ಲವಾರೆ, ಶರಣಪ್ಪ ಬಿರಾದಾರ, ವೀರಣ್ಣಶೀಲವಂತ, ಬಾಬುರಾವ್ ಉಳ್ಳೆ, ಪ್ರೊ. ರುದ್ರೇಶ್ವರ ಗೋರ್ಟಾ, ಶಾಂತವೀರ ಸ್ವಾಮಿ, ಬಾಬುರಾವ ಚಳಕಾಪೂರೆ, ಮಹಾದೇವಿ ಅಂಬುಲಗೆ, ಸುನಂದಾ ನಂದಿ, ಕಲಾವತಿ ಮಠಪತಿ ಇದ್ದರು. ಡಾ.ಬಸವಜ್ಯೋತಿ ಸ್ವಾಮಿ ಸ್ವಾಗತಿಸಿದರು. ಅಕ್ಷತಾ ಸ್ವಾಮಿ ನಿರೂಪಿಸಿದರು. ಶಕುಂತಲಾ ಮಠಪತಿ ಪ್ರಾರ್ಥಿಸಿದರು. ಶ್ವೇತಾ ಮತ್ತು ವಚನಶ್ರೀ ವಚನ ನೃತ್ಯ ಮಾಡಿದರು.

ವಿಜಯ ಕರ್ನಾಟಕ ನಮ್ಮ ಬೀದರ್ ಭಾನುವಾರ,29 ಆಗಸ್ಟ್ 2021

Scanned with OKEN Scanner

ಶ್ರೀ ಅಭಿಮತ ಸಿದ್ಧಾಂತ ಶಿಖಾಮಣಿ, ವಚನ ಸಾಹಿತ್ಯ ವಿಶೇಷ ಉಪನ್ಯಾಸದಲ್ಲಿ ಹಿರನಾಗಾಂವನ ಜಯಶಾಂತಲಿಂಗ ಸ್ವಾಮೀಜಿ

ಗವಿ ಮಠದ ಏಳಿಗೆಗೆ ಭಕ್ತರ ಸಹಕಾರ ಅಗತ್ಯ

• **ಕನ್ನಡಪ್ರಭ ವಾರ್ತೆ** ಬಸವಕಲ್ಯಾಣ

ಗವಿಮಠದಏಳಿಗೆಗೆಭಕ್ತರಸಹಾಯ,ಸಹಕಾರ ಅವಶ್ಯಕವಾಗಿದೆ ಎಂದು ಹಿರನಾಗಾಂವನ ಜಯಶಾಂತಲಿಂಗ ಸ್ವಾಮೀಜಿ ಹೇಳಿದರು.

ಶ್ರಾವಣ ಮಾಸದ ನಿಮಿತ್ತ ಇಲ್ಲಿಯ ಗವಿ ಮಠದಲ್ಲಿಹಮ್ಮಿಕೊಂಡಸಿದ್ಧಾಂತಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿ, ಭಕ್ತರಲ್ಲಿ ಸೇವಾ ಮನೋಭಾವ ಬೆಳೆಯಲಿ ಆಂದಾಗ ಮಾತ್ರ ಮಠ ಮಾನ್ಯಗಳು ಮುಂದೆ ಬರಲು ಸಾಧ್ಯ ಎಂದರು.

ಶರಣ ಸಾಹಿತ್ಯ ಹಾಗೂ ವಚನ ಸಾಹಿತ್ಯವು ಆಧ್ಯಾತ್ಮದ ಎರಡು ಕಣ್ಣುಗಳಿದ್ದಂತೆ ಜೊತೆಗೆ ಇಲ್ಲಿಯ ಗವಿ ಮಠವು ಭಕ್ತರ ಆಧ್ಯಾತ್ಮದ ತವರೂರಾಗಿದೆ.ಸರ್ಕಾರಬಸವಕಲ್ಯಾಣದಲ್ಲಿ ನೂತನ ಅನುಭವ ಮಂಟಪ ನಿರ್ಮಿಸಲು ಮುಂದಾಗಿದೆ.ಆದರೆಗವಿಮಠದಪ್ರದೇಶದಕ್ಕೆ



ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆಯ ಸಮಾರೋಪವನ್ನು ಹಿರನಾಗಾಂವನ ಜಯಶಾಂತಲಿಂಗ ಸ್ವಾಮೀಜಿ ಉದ್ಘಾಟಿಸಿದರು. ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಾಸಕ ಶರಣು ಸಲಗರ ಮೊದಲಾದವರಿದ್ದರು.

ಯಾವುದೇ ಧಕ್ಕೆ ಆಗದಂತೆ ಸರ್ಕಾರ ಮುಂಜಾಗ್ರತೆ ವಹಿಸಬೇಕು. ಅನುಭವ ಮಂಟಪ ನಿರ್ಮಾಣದಿಂದ ಯಾರಿಗೂ ನೋವು ಕೊಡುವ ಕೆಲಸ ಆಗಬಾರದು ಎಂದು ಶ್ರೀಗಳು ಸಲಹೆ ನೀಡಿದರು.

ತ್ರೀಪುರಾಂತನಗವಿಮಠದಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಕಳೆದಕೆಲವೇವರ್ಷಗಳಲ್ಲಿಭಕ್ತರ ಸಹಾಯ ಸಹಕಾರದೊಂದಿಗೆ ಅನೇಕ ಅಭಿವೃದ್ಧಿ ಕಾರ್ಯಗಳು ಆಗಿದ್ದು ಇನ್ನು ಮಠದ ಪರಿಸರದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿದೆ ಎಂದರು.

ಶಾಸಕ ಶರಣು ಸಲಗರ ಮಾತನಾಡಿ, ಬದಲಾಗುತ್ತಿರುವ ಸಮಾಜದಲ್ಲಿ ಒಳ್ಳೆಯ ವಾತಾವರಣ ನಿರ್ಮಾಣ ಮಾಡಿ ಭಕ್ತರನ್ನು ಒಳ್ಳೆಯಸನ್ಮಾರ್ಗದತ್ತಕೊಂಡೊಯ್ಯುತ್ತಿರುವ ಗವಿಮಠದಕಾರ್ಯಶ್ಲಾಘನೀಯವಾಗಿದೆ. ನಿರಂತರವಾಗಿ ಪ್ರವಚನ, ಧಾರ್ಮಿಕ ಕಾರ್ಯಕ್ರಮಗಳು ನಡೆದಾಗ ಮಾತ್ರ ಮನುಷ್ಯನು ಒಳ್ಳೆಯ ದಾರಿಯಲ್ಲಿ ಸಾಗಲು ಸಾಧ್ಯ ಎಂದು ತಿಳಿಸಿದರು.

ಬಸವಂತಪ್ಪ ಲವಾರೆ, ಪ್ರೊ ಸೂರ್ಯಕಾಂತ ಶೀಲವಂತ, ಶರಣಪ್ಪ ಬಿರಾದಾರ, ಪ್ರೊ ಸೂರ್ಯಕಾಂತ ಶೀಲವಂತ, ರಮೇಶ ರಾಜೋಳೆ ಉಪಸ್ಥಿತರಿದ್ದರು.

ಕನ್ನಡಪ್ರಭ
ಬುಧವಾರ 8.9.2021

ಗವಿ ಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಉಪನ್ಯಾಸ

ಶ್ರೀಗಳ ಕಾರ್ಯ ಶ್ಲಾಘನೀಯ

▪ **ವಿಕ ಸುದ್ದಿಲೋಕ** ಬಸವಕಲ್ಯಾಣ

ಜಗದ್ಗುರು ಶ್ರೀ ರೇಣುಕಾಚಾರ್ಯರು ಆಚಾರ ಪರಮೋ ಧರ್ಮ ಅಂದರೆ ಆಚಾರವು ಶ್ರೇಷ್ಠ ಧರ್ಮ ಎಂದು ತಮ್ಮ ಸಿದ್ಧಾಂತ ಶಿಖಾಮಣಿಯ ಮೂಲಕ ಮನುಕುಲಕ್ಕೆ ಉಪದೇಶಿಸಿದ್ದಾರೆ. ಅದೇ ರೀತಿ ಬಸವಣ್ಣನವರು ಆಚಾರವೇ ಸ್ವರ್ಗ ಅನಾಚಾರವೇ ನರಕ ಎಂದು ತಮ್ಮ ವಚನದ ಮೂಲಕ ತಿಳಿಸಿದ್ದಾರೆ ಎಂದು ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿಯ ಜಗದ್ಗುರು ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಉಪನ್ಯಾಸ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಆಶಿರ್ವಚನ ನೀಡಿದ ಶ್ರೀಗಳು, ನಾವು ಆಚರವಂತರಾಗಬೇಕು ಅಂದಾಗ ಮಾತ್ರ ಜೀವನದಲ್ಲಿ ಒಳ್ಳೆಯದು ಲಭಿಸಲು ಸಾಧ್ಯ ಎಂದರು. ಸನ್ಯಾನ ಸ್ವೀಕರಿಸಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ್ ಮಾತನಾಡಿ, ಬಸವಣ್ಣನವರ ವಚನದಂತೆ ಮಾಡಿ



ಬಸವಕಲ್ಯಾಣದ ಗವಿಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಉಪನ್ಯಾಸ ಕಾರ್ಯಕ್ರಮದಲ್ಲಿ ಎಂಎಲ್‌ಸಿ ವಿಜಯಸಿಂಗ್ ಅವರನ್ನು ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿ ಆಶಿರ್ವದಿಸಿದರು. ಶರಣು ಪವಾಡಶೆಟ್ಟಿ ಬಾಬುರಾವ ಚಳಕಾಪುರೆ, ಶರಣು ಅಲಗೂಡ, ಬಸವಂತಪ್ಪ ಲವಾರೆ, ವೀರಣ್ಣ ಶೀಲವಂತ ಉಪಸ್ಥಿತರಿದ್ದರು.

ಹಿಂದೆ ಗುರು ಇರಬೇಕು ಮುಂದೆ ಗುರಿ ಇರಬೇಕು. ಆಗ ಮಾತ್ರ ಮಾಡುವ ಕೆಲಸಕ್ಕೆ ಯಶಸ್ಸು ದೊರೆಯುತ್ತದೆ. ಗುರು,ತಂದೆ, ತಾಯಿ ಈ ಮೂವರು ಜೀವಂತ ದೇವರು. ಇವರ ಸೇವೆ ಮಾಡಿದರೆ ದೇವರ ಸೇವೆ ಮಾಡಿದಂತೆ. ಜೊತೆಗೆ ಸದಾ ಪೂಜ್ಯ ಹಾರಕೂಡ ಶ್ರೀಗಳ ಹಾಗೂ ಗವಿಮಠದ ಶ್ರೀಗಳ ಆಶೀರ್ವಾದ ನನ್ನ ಮೇಲೆ ಇರುವುದು ನನ್ನ ಪೂರ್ವ ಜನ್ಮದ ಪುಣ್ಯ.

-ಶರಣು ಪವಾಡಶೆಟ್ಟಿಕಂದಾಯ ನಿರೀಕ್ಷಕ.

ರಬೇಕು.ಆದರೆ, ಮಾಡದಂತಿರಬೇಕು. ಮಾಡಿದ ಮಾತಟಡೋಳಗೆ ತಾನಿದ್ದು ಇಲ್ಲದಂತಿ ರಬೇಕು. ಇಂದು ಸಾಮಾನ್ಯವಾಗಿ ಮಾಡದೇಯೂ ನಾನು ಮಾಡಿದೆ ಎಂದು ಹೇಳಿಕೊಳ್ಳುವವರೇ ಹೆಚ್ಚು ಆದರೆ,ಇಲ್ಲಿಯ ಪೂಜ್ಯರು ಡಾ. ಅಭಿನವ ಘನಲಿಂಗ ಶ್ರೀಗಳು ಚಿಕ್ಕವ ಯಸ್ಸಿನಲ್ಲಿಯೇ ನಿರಂತರವಾಗಿ ಅದ್ಭುತ ಕಾರ್ಯ ಗಳನ್ನು ಮಾಡುತ್ತಲೇ ಮಾಡ ದಂತೆ ಸುಮ್ಮನೆ ತಮ್ಮಷ್ಟಕ್ಕೆ ತಾವು ಶ್ರೇಷ್ಠ ಕಾರ್ಯ ಗಳನ್ನು ಮಾಡುತ್ತ ಸಾಗಿ ರುವುದು ಒಂದು ದೊಡ್ಡ ಸಾಧನೆ ಯಾಗಿದೆ ಎಂದರು.

ಎಸ್‌ಎಸ್‌ಕೆಬಿ ಕಾಲೇಜಿನ ನಿವೃತ್ತ ನೌಕರ ಬಾಬುರಾವ ಚಳಕಾಪುರೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಯುವ ಮುಖಂಡ ಶರಣು ಅಲಗೂಡ ವೇದಿಕೆ ಮೇಲಿದ್ದರು. ನಗರದ ಶ್ರೀಗುರು ಮಹಾಲಿಂಗೇಶ್ವರ ಶಾಲೆಯ ಮಕ್ಕಳಿಂದ ವಚನ ನೃತ್ಯ ಜರುಗಿತು. ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಪ್ರೊ. ಬಸವರಾಜ ಸೇರಿ ನಿರೂಪಿಸಿದರು. ವೀರಣ್ಣ ಶೀಲವಂತ ವಂದಿಸಿದರು.ಈ ವೇಳೆ ವಿಶ್ವನಾಥ ಬಿರಾದಾರ, ಗುರು ಲಿಂಗಯ್ಯ ಕಟಗಿಮಠ, ಮಲ್ಲಿಕಾರ್ಜುನ ಅಲಗೂಡ, ಸಂತೋಷ ಬಿರಾದಾರ, ಪ್ರಕಾಶ ಬಿರಾದಾರ, ಬಸವರಾಜ ಬಿರಾದಾರ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ಸ್ವಾಮಿ, ಸುಭದ್ರಾಬಾಯಿ ಸ್ವಾಮಿ, ಶೀಲಾದೇವಿ ಲವಾರೆ, ಈರಮ್ಮ ಬೆಂಬಳಿ, ರೇಣುಕಾ ಮಠಪತಿ, ಸುನಂದಾ ನಂದಿ, ಪಾರ್ವತಿ ರೋಜೆ ಅನೇಕರಿದ್ದರು.

ವಿಜಯ ಕರ್ನಾಟಕ | ನಮ್ಮ ಬೀದರ್ ಬುಧವಾರ,1 ಸೆಪ್ಟೆಂಬರ್ 2021

Scanned with OKEN Scanner

ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ಉಪನ್ಯಾಸ ಕಾರ್ಯಕ್ರಮ

ದಾನ ಮಾಡಿದಷ್ಟು ಮನುಷ್ಯನಿಗೆ ಪುಣ್ಯಪ್ರಾಪ್ತಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ದಾನ ಒಂದು ಮಹತ್ವದ ಕರ್ತವ್ಯ. ದಾನದಿಂದ ಮನುಷ್ಯನ ಮನಸ್ಸು ಹಗುರವಾಗುತ್ತದೆ. ಜಗದ ಆದಿಜಗದ್ಗುರು ರೇಣುಕಾಚಾರ್ಯರು ತಮ್ಮ ಸಿದ್ಧಾಂತ ಶಿಖಾಮಣಿಯ ಮೂಲಕ ಹಸ್ತಕ್ಕೆ ದಾನವೇ ಭೂಷಣ ಎಂದು ಉಪದೇಶಿಸಿದ್ದಾರೆ ಎಂದು ಇಲ್ಲಿಯ ಗವಿಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.



ಬಸವಕಲ್ಯಾಣ ಶ್ರಾವಣ ಮಾಸ ನಿಮಿತ್ತ ನಗರದ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ಆಯೋಜಿಸಿದ 2ನೇ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಶರಣಪ್ಪ ಬಿರಾದಾರ, ವೀರಣ್ಣ ಶೀಲವಂತ ಇದ್ದರು.

ಶ್ರಾವಣ ಮಾಸ ನಿಮಿತ್ತ ನಗರದ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಸಂಯುಕ್ತಾಶ್ರಯದಲ್ಲಿ ವೀರಶೈವ ಲಿಂಗಾಯತ ಧರ್ಮಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ಆಯೋಜಿಸಿದ 2ನೇ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದಾನ ಶ್ರೇಷ್ಠವಾದದ್ದು ದಾನ ಮಾಡಿದಷ್ಟು ಪುಣ್ಯ ಸಂಪಾದನೆ ಆಗುತ್ತದೆ.ದಾನ ಮಾಡುವ ಮನುಷ್ಯ ಶ್ರೀಮಂತ ಇದ್ದಂತೆ. ಸಾಕು ಎನ್ನುವವನೇ ಶ್ರೀಮಂತ, ಬೇಕು ಎನ್ನುವವನೇ ಬಡವ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗವಿಮಠ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಮಾತನಾಡಿ, ಕಲಿಯುಗದ ಜಗದ್ಗುರು ರೇವಣಸಿದ್ಧರು ಪವಾಡ ಪುರುಷರು ಹಾಗೂ ಸಿದ್ಧಿ ಪುರುಷರು ಮತ್ತು ಆಯುರ್ವೇದ ವೈದ್ಯರೂ ಆಗಿದ್ದರು. ಅವರು ಚಾಲುಕ್ಯ ಆರಸನ ಏನಂತಿಯ ಮೇರೆಗೆ ಗವಿಮಠದ ಮುಂಭಾಗದ ಈ ಕೆರೆಯನ್ನು ನಿರ್ಮಿಸಿ ಜೀವಿಗಳ ದಾಹ ನೀಗಿಸಿದರು. ಅವರು ವಾಯುಮಾರ್ಗದ ಮೂಲಕ ಕರ್ನಾಟಕ ಸೇರಿ ಮಹಾರಾಷ್ಟ್ರ ಆಂಧ್ರ, ತಮಿಳುನಾಡು ರಾಜ್ಯಗಳ ಹಲವು ಸ್ಥಳಗಳಲ್ಲಿ ಸಂಚರಿಸಿ ಭಕ್ತರಿಗೆ ಉಪದೇಶ ಮಾಡಿ ಧರ್ಮಮಾರ್ಗ ತೋರಿದರು. ಮುಂದೆ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ರಂಭಾಪುರಿ ಪೀಠದ ಜಗದ್ಗುರುಗಳನ್ನಾಗಿಸಿ ಧರ್ಮಕಾರ್ಯ ಮುಂದುವರೆಸುವಂತೆ ಸೂಚಿಸಿದರು ಎಂದರು.

ಈ ವೇಳೆ ಬಲವಂತ ಚಾಕೂರೆ, ಅಂಬರಾಯ ಮೇತ್ರೆ, ರಾಜಶೇಖರ ವಸ್ತ್ರದ, ಜಯರಾಮ ಪಾಟೀಲ್, ಮಲ್ಲಿಕಾರ್ಜುನ ನಂದಿ, ಮಲ್ಲಿಕಾರ್ಜುನ ಅಲಗೂಡೆ, ರಾಚಮ್ಮ ವೀರಣ್ಣಾ ಚಿಂಚೋಳೆ, ಈರಮ್ಮಾ ಬೆಂಬಳಿ, ಮಹಾದೇವ ಢೋಲೆ, ಶಕುಂತಲಾ ಗುರುಲಿಂಗಯ್ಯಾ ಸ್ವಾಮಿ,ಪ್ರೊ ರುದ್ರೇಶ್ವರ ಸ್ವಾಮಿ ಗೋರ್ಟಾ,ಚಂದ್ರಕಾಂತ ವೀರಪ್ಪಾ ಬುರುಜೆ ಸೇರಿ ಅನೇಕರಿದ್ದರು. ಶರಣಬಸಪ್ಪಾ ಅಲಗೂಡೆ ಪ್ರಾರ್ಥನೆ ಗೀತೆ ಹಾಡಿದರು. ಬಸವಂತಪ್ಪಾ ಲವಾರೆ ಅವರು ಸ್ವಾಗತಿಸಿದರು. ರಮೇಶ್ ರಾಜೋಳೆ ನಿರೂಪಿಸಿದರು. ರೇವಣಸಿದ್ದಯ್ಯ ಮಠಪತಿ ವಂದಿಸಿದರು.

> ಶಿವನ ಪ್ರತಿರೂಪವೇ ಗುರು. ಗುರು ದರ್ಶನ ಮಾಡಿದರೆ ಶಿವನ ದರ್ಶನ ಮಾಡಿದಂತೆ. ಹರ ಮುನಿದರೆ ಗುರು ಕಾಯುವನು. ಶ್ರೀಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿಯ ದಶಧರ್ಮ ಸೂತ್ರಗಳಲ್ಲಿ ಒಂದಾದ ದಾನ ಮನುಷ್ಯನ ಮಹತ್ವದ ಕರ್ತವ್ಯವಾಗಿದೆ.
>
> **- ವೀರಣ್ಣ ಶೀಲವಂತ,**
> ಸರಾಫ್ ವ್ಯಾಪಾರಿ,
> ಬಸವಕಲ್ಯಾಣ.

ಶನಿವಾರ,14 ಆಗಸ್ಟ್ 2021
ವಿಜಯವಾಣಿ ಕನ್ನಡ ದಿನಪತ್ರಿಕೆ

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ ಬುಧವಾರ 25 ಆಗಸ್ಟ್ 2021 • 25 AUGUST 2021 • VIJAYAVANI » KALABURAGI

ಅಭಿನವ ಘನಲಿಂಗ ಶ್ರೀ ನುಡಿ । ಗವಿಮಠದಲ್ಲಿ ವಿಶೇಷ ಉಪನ್ಯಾಸ ಮಾಲೆ

ಪರೋಪಕಾರ ಸಂಗ್ರಹದಿಂದ ಸುಖಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಜ್ಜನರ ಸಹವಾಸ, ದೇವರ ಭಜನೆ, ಪ್ರಾಣಿದಯೆ, ಧರ್ಮಾಚರಣೆ ಮತ್ತು ಪರೋಪಕಾರಗಳನ್ನು ಸಂಗ್ರಹಿಸಿಕೊಂಡವರು ಸಂಸಾರದಲ್ಲಿದ್ದೂ ಸುಖಿಗಳಾಗಿರುತ್ತಾರೆ ಎಂದು ಶ್ರೀಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಸಂಸ್ಥಾನ ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಸೋಮವಾರ ಸಂಜೆ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆಯಲ್ಲಿ ಆಶೀರ್ವಚನ ನೀಡಿ, ಜೀವನ ಮೌಲ್ಯ ಅರಿತು ಅಳವಡಿಸಿಕೊಳ್ಳಬೇಕಿದೆ ಎಂದರು.

ದೊಡ್ಡಪ್ಪ ಅಪ್ಪ ಬಿಇಡಿ ಕಾಲೇಜು ಪ್ರಾಚಾರ್ಯ ರಾಚಯ್ಯಸ್ವಾಮಿ ಮಠಪತಿ ಮಾತನಾಡಿ, ಧರ್ಮ ಮಾರ್ಗದಲ್ಲಿ ನಡೆದಾಗ ಜೀವನದಲ್ಲಿ ನೆಮ್ಮದಿ ಕಾಣಲು ಸಾಧ್ಯ. ಪುರಾಣ, ಪ್ರವಚನ ಸೇರಿ ಇಂತಹ ಕಾರ್ಯಕ್ರಮಗಳು ಮನಸ್ಸು ಶುದ್ಧಗೊಳಿಸುತ್ತವೆ ಎಂದರು.

ವಿಜಯಕುಮಾರ ಮುಚಳಂಬೆ ಅಧ್ಯಕ್ಷತೆ ವಹಿಸಿದ್ದರು. ಸೂರ್ಯಕಾಂತ ಶೀಲವಂತ, ಶಶಿಕಾಂತ ಶೀಲವಂತ, ಎ.ಜಿ ಪಾಟೀಲ್, ಬಾಬುರಾವ್ ಚಳಕಾಪುರೆ, ಶಶಿಕಾಂತ ಮಂಠಾಳೆ, ರೇವಣಸಿದ್ದಪ್ಪ, ಮಲ್ಲಿಕಾರ್ಜುನ ಅಲಗೂಡ, ರುದ್ರೇಶ್ವರ ಸ್ವಾಮಿ, ಪಾರ್ವತಿ ರೋಜಿ, ಸುಭದ್ರಬಾಯಿ ಸ್ವಾಮಿ, ಶಿಕ್ಷಕಿ ಸರಸ್ವತಿ ಬೆಂಬಳಿ, ಈರಮ್ಮ ಬೆಂಬಳಿ, ಸುರೇಖಾ ಶೀಲವಂತ ಇತರರಿದ್ದರು.

ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಮುಖ್ಯಗುರು ರಮೇಶ ರಾಜೋಳೆ ನಿರೂಪಣೆ ಮಾಡಿದರು. ಶಾಂತಿನಿಕೇತನ ಪ್ರೌಢಶಾಲೆ





ಬಸವಕಲ್ಯಾಣದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ವಿಜಯಕುಮಾರ ಮುಚಳಂಬೆ, ರಾಚಯ್ಯಸ್ವಾಮಿ ಇದ್ದರು.

ವಿದ್ಯಾರ್ಥಿನಿಯರಾದ ಅಪೂರ್ವ ಮತ್ತು ಅಕ್ಷತಾ ವಚನ ನೃತ್ಯ ನಡೆಸಿಕೊಟ್ಟರು. ಶಕುಂತಲಾ ಗುರುಲಿಂಗಯ್ಯ ಪ್ರಾರ್ಥನಾ ಗೀತೆ, ವೀರಣ್ಣ ಶೀಲವಂತ ಮಂಗಲಗೀತೆ ಹಾಡಿದರು. ಸದ್ಭೋಧನಾ ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ಸ್ವಾಮಿ, ಸುರೇಖಾ ಶೀಲವಂತ ಹಾಗೂ ಮಹಿಳೆಯರು ಪೂಜ್ಯರಿಗೆ ರಕ್ಷಾಬಂಧನ ಕಟ್ಟಿ ಗುರುಭಕ್ತಿ ಅರ್ಪಿಸಿದರು.

Scanned with OKEN Scanner

ನಿವೃತ್ತ ಪ್ರಾಚಾರ್ಯ ನಾಗೇಂದ್ರ ಢೋಲೆ ಅಭಿಮತ

'ಮಹಾತ್ಮರ ಆದರ್ಶ ಪಾಲಿಸಿ'

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದಲ್ಲಿ ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆಯಿಂದ ನಡೆದ ಶ್ರಾವಣ ಉಪನ್ಯಾಸದಲ್ಲಿ ನಿವೃತ್ತ ಪ್ರಾಚಾರ್ಯ ನಾಗೇಂದ್ರ ಢೋಲೆ ಅವರನ್ನು ಸನ್ಮಾನಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು

ಬಸವಕಲ್ಯಾಣ: 'ಸೇವಾನಿಷ್ಠೆಯಿಂದ ಬದುಕಿನಲ್ಲಿ ಸಂತೃಪ್ತಿ ದೊರಕುತ್ತದೆ. ತಮ್ಮ ಕಾರ್ಯ ಉತ್ತಮವಾಗಿ ಕೈಗೊಳ್ಳುವುದು ಎಲ್ಲರ ಕರ್ತವ್ಯವಾಗಿದೆ' ಎಂದು ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಸೇವಾನಿವೃತ್ತ ಪ್ರಾಚಾರ್ಯ ನಾಗೇಂದ್ರ ಢೋಲೆ ಹೇಳಿದ್ದಾರೆ.

ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಹಾಗೂ ತ್ರಿಪುರಾಂತ ಗವಿಮಠ ಟ್ರಸ್ಟ್‌ವತಿಯಿಂದ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದಲ್ಲಿ ಈಚೆಗೆ ಆಯೋಜಿಸಿದ್ದ ಶ್ರಾವಣ ಉಪನ್ಯಾಸದಲ್ಲಿ ಅವರು ಮಾತನಾಡಿದರು.

'ಗುರುಗಳ, ಶರಣರ, ಸತ್ಪುರುಷರ ದರ್ಶನದಿಂದ ಹಾಗೂ ಸತ್ಸಂಗದಲ್ಲಿ ಪಾಲ್ಗೊಳ್ಳುವುದರಿಂದ ಬದುಕು ಹಸನುಗೊಳ್ಳುತ್ತದೆ. ಜೀವನ ಸಾರ್ಥಕ ಆಗುತ್ತದೆ' ಎಂದರು.

ಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಶ್ರಾವಣದಲ್ಲಿನ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ಸುಖ, ಶಾಂತಿ ಸಿಗುತ್ತದೆ' ಎಂದರು.

ಸಮಾಜಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ನಿಂಗರಾಜ ಅರಸ್, ಲಕ್ಷ್ಮಣ ಶೆಂಗಾರ, ಪ್ರೊ. ರುದ್ರೇಶ್ವರ ಗೋರಟಾ, ಅಭಿಷೇಕ ರಾಮಣ್ಣನವರ್, ಅಕ್ಷತಾ ಮಠಪತಿ ಮಾತನಾಡಿದರು.

ನಿವೃತ್ತ ಪ್ರಾಚಾರ್ಯ ನಾಗೇಂದ್ರ ಢೋಲೆ, ಹಾಗೂ ಛಾಯಾಗ್ರಾಹಕ ಜ್ಞಾನೇಶ್ವರ ರಾಚಪ್ಪನೋರ್ ಅವರಿಗೆ ಸನ್ಮಾನಿಸಲಾಯಿತು. ಮುಖಂಡರಾದ ಬಸವಂತಪ್ಪ ಲವಾರೆ, ಶರಣಪ್ಪ , ಸೂರ್ಯಕಾಂತ ಶೀಲವಂತ, ಸವಿತಾ ಸ್ವಾಮಿ, ವೀರಣ್ಣ ಶೀಲವಂತ, ಬಸವರಾಜ ಶೇರಿ, ಶಿವಕುಮಾರ ಬಿರಾದಾರ, ಮಹಾದೇವಿ ಅಂಬಲಗೆ, ಮೀನಾಕ್ಷಿ ಪಾಟೀಲ, ಐಶ್ವರ್ಯ ಮಠಪತಿ, ಪಾರ್ವತಿ ರೋಜೆ, ಶರಣಕುಮಾರ ಪಾಲ್ಗೊಂಡಿದ್ದರು.

ಪ್ರಜಾವಾಣಿ ಬುಧವಾರ • ಆಗಸ್ಟ್ 25, 2021

ವಚನ ಸಾಹಿತ್ಯದಲ್ಲಿದೆ ಆದರ್ಶ ಬದುಕಿನ ಮೌಲ್ಯ

ಬಸವಕಲ್ಯಾಣ: ಆದಿ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ಬಸವಾದಿ ಶಿವಶರಣರ ವಚನ ಸಾಹಿತ್ಯದಲ್ಲಿ ಮಾನವನ ಆದರ್ಶ ಬದುಕಿನ ಮೌಲ್ಯಗಳಿವೆ ಎಂದು ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣಮಾಸದ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಸಹಯೋಗದಲ್ಲಿ ಸೋಮವಾರ ಸಂಜೆ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಉಪನ್ಯಾಸ ಮಾಲೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ, ಶ್ರಾವಣ ಮಾಸದಲ್ಲಿ ಉತ್ತಮ ವಿಚಾರಗಳು ಕೇಳುವುದರಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ ಎಂದರು.

» ಡಾ.ಅಭಿನವ ಘನಲಿಂಗ ಶ್ರೀ ನುಡಿ

ಆರೋಗ್ಯಪೂರ್ಣ ಬದುಕಿಗೆ ಉತ್ತಮ ಪರಿಸರ ಅವಶ್ಯ. ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ. ಜಿಲ್ಲೆಯಲ್ಲಿ ಸಸಿಗಳನ್ನು ವಿತರಿಸುವ, ನೆಡುವ ಜತೆಗೆ ಪರಿಸರದ ಬಗ್ಗೆ ಜಾಗೃತಿ ಮೂಡಿಸುತ್ತಿರುವ ಶೈಲೇಂದ್ರ ಕಾವಡಿ ಅವರ ಕಾರ್ಯ ಶ್ಲಾಘನೀಯ ಎಂದರು.

ಸನ್ಮಾನ ಸ್ವೀಕರಿಸಿದ ಬೀದರ್ ಪರಿಸರ ವಾಹಿನಿಯ ಶೈಲೇಂದ್ರ ಕಾವಡಿ ಮಾತನಾಡಿ, ಕರೊನಾದಿಂದ ರಕ್ಷಿಸಲು ಸ್ವಚ್ಛ ಪರಿಸರ ರೂಪಿಸಿ, ರಕ್ಷಿಸುವುದು ಅವಶ್ಯ. ಶ್ರೀಗಳ ಜನಪರ ಕಾಳಜಿ ಮತ್ತು ಪರಿಸರ ಪ್ರೇಮದಿಂದ ಸಂಸ್ಥಾನ ಗವಿಮಠದ ಸುತ್ತಲೂ ಉತ್ತಮ ಪರಿಸರವಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚಿಟಗುಪ್ಪದ ಅಸ್ಲಂಮಿಯಾ ಮಾತನಾಡಿದರು. ನಿವೃತ್ತ ಜಲಾನಯನ ಅಧಿಕಾರಿ ಮಲ್ಲಿಕಾರ್ಜುನ ನಂದಿ ಅಧ್ಯಕ್ಷತೆ ವಹಿಸಿದ್ದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಸವಿತಾ ಸ್ವಾಮಿ, ವೀರಣ್ಣ ಶೀಲವಂತ, ಪ್ರೊ.ಸೂರ್ಯಕಾಂತ ಶೀಲವಂತ, ಶಶಿಕಾಂತ ಮಂಠಾಳೆ, ರೇವಣಸಿದ್ದಪ್ಪ, ಬಸವರಾಜ ಬಿರಾದಾರ, ಸುಭದ್ರಾಬಾಯಿ ಸ್ವಾಮಿ, ಶಿಕ್ಷಕಿ ಸರಸ್ವತಿ ಬೆಂಬಳಿ, ಈರಮ್ಮ ಬೆಂಬಳಿ, ಸುನಂದಾ ನಂದಿ, ಪಾರ್ವತಿ ರೋಜೆ, ರೇಣುಕಾ ಮಠಪತಿ ಇತರರಿದ್ದರು.

ಮುಖ್ಯಗುರು ರಮೇಶ ರಾಜೋಳೆ ಪ್ರಾಸ್ತಾವಿಕ ಮಾತನಾಡಿದರು. ಶಿಕ್ಷಕ ಮಲ್ಲಿಕಾರ್ಜುನ ಅಲಗೂಡೆ ಸ್ವಾಗತಿಸಿದರು. ಪ್ರೊ.ರುದ್ರೇಶ್ವರ ಗೋರ್ಟಾ ಸಂಚಾಲನ ಮಾಡಿದರು. ಶರಣಬಸಪ್ಪ ಅಲಗೂಡೆ ಪ್ರಾರ್ಥನೆ ಹಾಗೂ ಮಂಗಳಾರುತಿ, ರೇಣುಕಾ ರಾಮಣ್ಣನವರ ವಚನ ಗಾಯನ ನಡೆಸಿಕೊಟ್ಟರು.



ಬಸವಕಲ್ಯಾಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಮಲ್ಲಿಕಾರ್ಜುನ ನಂದಿ, ಶೈಲೇಂದ್ರ ಕಾವಡಿ, ಚಿಟಗುಪ್ಪದ ಅಸ್ಲಂಮಿಯಾ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ

ಬುಧವಾರ 18 ಆಗಸ್ಟ್ 2021 • 18 AUGUST 2021 • VIJAYAVANI » KALABURAGI

ಉತ್ತಮ ವಿಚಾರಗಳಿಂದ ಮನಸ್ಸಿಗೆ ನೆಮ್ಮದಿ

ಸಂ.ಕ.ಸಮಾಚಾರ ಬಸವಕಲ್ಯಾಣ

ಶ್ರಾವಣ ಮಾಸದಲ್ಲಿ ಉತ್ತಮ ವಿಚಾರಗಳು ಆಲಿಸುವುದರಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ ಎಂದು ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣಮಾಸ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಆಯೋಜಿಸಲಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಉಪನ್ಯಾಸ ಮಾಲೆಯನ್ನುದ್ದೇಶಿಸಿ ಮಾತನಾಡಿ ಜಿಲ್ಲೆಯಲ್ಲಿ ಸಸಿಗಳನ್ನು ವಿತರಿಸುವ, ನೆಡುವ ಜತೆಗೆ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಪರಿಸರದ ಸಂರಕ್ಷಣೆಯಲ್ಲಿ ಶೈಲೇಂದ್ರ ಕಾವಡಿ ಅವರು ಮಹತ್ತರವಾದ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪರಿಸರವಾದಿ ಶೈಲೇಂದ್ರ ಕಾವಡಿ ಮಾತನಾಡಿ ಶ್ರೀಗಳ ಜನಪರ ಕಾಳಜಿ ಮತ್ತು ಪರಿಸರ ಪ್ರೇಮದಿಂದಾಗಿ ಗವಿಮಠದ ಸುತ್ತಲು ಉತ್ತಮ ಪರಿಸರ ನಿರ್ಮಾಣವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಚಿಟಗುಪ್ಪಾದ ಅಸ್ಲಂಮಿಯಾ ಮಾತನಾಡಿದರು. ನಿವೃತ್ತ ಜಲಾನಯನ ಅಧಿಕಾರಿ ಮಲ್ಲಿಕಾರ್ಜುನ ನಂದಿ ಅಧ್ಯಕ್ಷತೆ ವಹಿಸಿದ್ದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ತಾಲ್ಲೂಕಾಧ್ಯಕ್ಷ ಬಸವಂತಪ್ಪ ಲವಾರೆ, ಸವಿತಾ ಸ್ವಾಮಿ, ವೀರಣ್ಣ ಶೀಲವಂತ, ಸೂರ್ಯಕಾಂತ ಶೀಲವಂತ, ಶಶಿಕಾಂತ ಮಂಠಾಳೆ, ರೇವಣಸಿದ್ದಪ್ಪ, ಬಸವರಾಜ ಬಿರಾದಾರ, ಸುಭದ್ರಾಬಾಯಿ ಸ್ವಾಮಿ, ಶಿಕ್ಷಕಿ ಸ್ವರಸ್ವತಿ ಬೆಂಬಳಿ, ಈರಮ್ಮ ಬೆಂಬಳಿ, ಸುನಂದಾ ನಂದಿ, ಪಾರ್ವತಿ ರೋಜೆ, ರೇಣುಕಾ ಮಠಪತಿ ಇದ್ದರು.



ಬಸವಕಲ್ಯಾಣ: ಸಂಸ್ಥಾನ ಗವಿಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಉಪನ್ಯಾಸ ಮಾಲೆಯಲ್ಲಿ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

18 ಆಗಸ್ಟ್ 2021 ಬುಧವಾರ ಕಲಬುರಗಿ ಸಂಯುಕ್ತ ಕರ್ನಾಟಕ

Scanned with OKEN Scanner

ಸದಾಚಾರಿ ಮಾತ್ರ ದೇವರಿಗೆ ಪ್ರಿಯ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಆದಿ ಜಗದ್ಗುರು ಶ್ರೀ ರೇಣು ಕಾಚಾರ್ಯರು ಸಿದ್ಧಾಂತ ಶಿಖಾ ಮಣಿಯಲ್ಲಿ ಸದಾಚಾರ ಪ್ರಿಯ ಶಂಭೋ ಅಂದರೆ ದೇವರು ಸದಾಚಾರ ಪ್ರಿಯನಾಗಿದ್ದಾನೆ ಎಂಬುದನ್ನು ತಿಳಿಸಿದ್ದಾರೆ ಎಂದು ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆತಾಲೂಕಾ ಘಟಕ ಸಹಯೋಗದಲ್ಲಿ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಉಪನ್ಯಾಸ ಮಾಲೆಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಸದಾಚಾರಿ ಮಾತ್ರ ದೇವರಿಗೆ ಪ್ರಿಯನಾಗುತ್ತಾನೆ. ಹೀಗಾಗಿ ಮನುಷ್ಯ ಯಾವತ್ತೂ ಸದಾಚಾರಿಯಾಗಿರಬೇಕು. ಸದಾಚಾರಿಯಾದ ಆಸ್ತಿಕರಿಗೆ ಪರಮಾತ್ಮ ಒಲಿಯುತ್ತಾನೆ. ಅದಕ್ಕಾಗಿ ಸದಾ ಒಳ್ಳೆಯ ವಿಚಾರಗಳನ್ನು, ಆಚರಣೆಗಳನ್ನು ಮಾಡಬೇಕು. ಅಂದಾ ಪರಮಾತ್ಮನಿಗೆ ಪ್ರಿಯರಾಗಲು ಸಾಧ್ಯ ಎಂದರು.

ಸಮಾಜ ಕಲ್ಯಾಣ ಅಧಿಕಾರಿ ನಿಂಗರಾಜ ಅರಸ ಮಾತನಾಡಿ, ಗುರುಗಳಿಂದ ಪ್ರವಚನ ಕೇಳೋದು



ಬಸವಕಲ್ಯಾಣದ ಗವಿಮಠದಲ್ಲಿ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಉಪನ್ಯಾಸ ಮಾಲೆಯ ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಅಧಿಕಾರಿ ನಿಂಗರಾಜ ಅರಸ ಮಾತನಾಡಿದರು.

ಮನಸ್ಸಿಗೆ ಬಹಳ ಶಾಂತಿ ಕೊಡುತ್ತದೆ. ಇಂಥ ಪ್ರವಚನಗಳನ್ನು ಕೇಳಿ ಮನಸ್ಸನ್ನು ಸುಧಾರಿಸಿಕೊಳ್ಳಬಹುದು. ಈ ಪವಿತ್ರ ಶ್ರಾವಣಮಾಸದಲ್ಲಿ ಗುರುಗಳ ನಾಲ್ಕು ಹಿತನುಡಿಗಳನ್ನು ಕೇಳಿದರೆ ಜೀವನ ಸಾರ್ಥಕವಾಗುತ್ತದೆ. ಗುರುಗಳಲ್ಲಿ ದೇವರಲ್ಲಿ ಮಹತ್ವದ ಶಕ್ತಿ ಇದೆ ಎಂದರು.

ಸರಕಾರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಾಚಾರ್ಯ ಪ್ರೊ.ಎನ್. ವಿ. ಢೋಲೆ, ಅಧ್ಯಕ್ಷತೆ ವಹಿಸಿದ್ದ ಎಲ್. ಡಿ.ಸಿಂಗಾರ್ ಮಾತನಾಡಿದರು. ಇದೇ ಸಂದರ್ಭದಲ್ಲಿ ವಿಶ್ವ ಛಾಯಾ ಗ್ರಾಹಕರ ದಿನದ ನಿಮಿತ್ತ ಛಾಯಾಗ್ರಾಹಕ ಜ್ಞಾನೇಶ್ವರ ರಾಚಪ್ಪನೋರ ಅವರನ್ನು ಸನ್ಮಾನಿಸಲಾಯಿತು. ರುದ್ರೇಶ ಸ್ವಾಮಿ ಪ್ರಾರ್ಥಿ ಸಿದರು. ಅಭಿಷೇಕ ರಾಮಣ್ಣವರ ಸ್ವಾಗತಿಸಿದರು. ಅಕ್ಷತಾ ಬಿ. ಮಠಪತಿ ನಿರೂಪಿಸಿದರು.

ಕಾರ್ಯಾಧ್ಯಕ್ಷ ಶರಣಪ್ಪಾ ಬಿರಾದಾರ, ತಾಲೂಕಾ ಅಧ್ಯಕ್ಷ ಬಸವಂತಪ್ಪಾ ಮಹಿಳಾ ಅಧ್ಯಕ್ಷೆ ಸವಿತಾ ಸ್ವಾಮಿ, ವೀರಣ್ಣಾ ಶೀಲವಂತ, ಎ.ಜಿ.ಪಾಟೀಲ್, ಪ್ರೊ.ಸೂರ್ಯಕಾಂತ ಶೀಲವಂತ, ಬಸವ ರಾಜ ಶೇರಿ, ಶಿವಕುಮಾರ್ ಬಿರಾದಾರ, ಗೌತಮ, ಮಹಾದೇವಿ ಅಂಬುಲಗೆ, ಮೀನಾಕ್ಷಿ ಪಾಟೀಲ್, ಪಾರ್ವತಿ ರೋಜೆ, ಶರಣಕುಮಾರ, ಐಶ್ವರ್ಯ ಮಠಪತಿ ಇದ್ದರು.

ವಿಜಯಕರ್ನಾಟಕ ಭಾನುವಾರ,22 ಆಗಸ್ಟ್ 2021

ವಚನ ಸಾಹಿತ್ಯ ಬದುಕಿಗೆ ಮಾರ್ಗದರ್ಶಿ

ಸಂ.ಕ.ಸಮಾಚಾರ ಬಸವಕಲ್ಯಾಣ

ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ಬಸವಾದಿ ಶರಣರು ರಚಿಸಿದ ವಚನ ಸಾಹಿತ್ಯ ಮಾನವನ ಬದುಕಿಗೆ ಮಾರ್ಗದರ್ಶಿಗಳಾಗಿವೆ ಎಂದು ಸಂಸ್ಥಾನ ಗವಿಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣಮಾಸ ನಿಮಿತ್ಯ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆಯಿಂದ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಉಪನ್ಯಾಸ ಮಾಲೆಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಶ್ರೀಗಳು ಈ ಪವಿತ್ರ ಶ್ರಾವಣಮಾಸದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಪಠಣ ಹಾಗೂ ಶ್ರವಣ ಮಾಡುವುದರ ಮೂಲಕ ಅರಿತು ನಡೆದರೆ ಬದುಕು ಸಾರ್ಥಕವಾಗುವುದು. ಧರ್ಮ ಪರಿಪಾಲನೆ ಮಾಡಬೇಕು. ನುಡಿದಂತೆ ನಡೆಯಬೇಕು. ಪರರಿಗೆ



ಗವಿಮಠದಲಿ ನಡೆದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಉಪನ್ಯಾಸ ಮಾಲೆಯ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಯಾವತ್ತೂ ಉಪಕಾರ ಮಾಡಬೇಕು ಎಂದರು.

ತಾಲ್ಲೂಕು ರೋಟರಿ ಕ್ಲಬ್‌ನ ಅಧ್ಯಕ್ಷ ಡಾ. ಬಾಲಕೃಷ್ಣ ರಾಠೋಡ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿದರು. ಶರಣಬಸಪ್ಪಾ ಅಲಗೂಡ ಪ್ರಾರ್ಥಿಸಿದರು. ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ಭಕ್ತಿ ಗೀತೆ ನಡೆಸಿಕೊಟ್ಟರು. ಪ್ರೊ.ಸೂರ್ಯಕಾಂತ ಶೀಲವಂತ ಸ್ವಾಗತಿಸಿದರು. ರಮೇಶ್ ರಾಜೋಳೆ ನಿರೂಪಿಸಿದರು, ಲಕ್ಷ್ಮಣಸಿಂಗ ಸಿಂಗಾರ, ಮಲ್ಲಿಕಾರ್ಜುನ ನಂದಿ, ಮಲ್ಲಿಕಾರ್ಜುನ ಅಲಗೂಡ, ಡಾ.ಬಸವರಾಜ ಸ್ವಾಮಿ, ಶಿವಶಂಕರ್ ರಾಮಣ್ಣನವರ, ಚನ್ನಪ್ಪಾ ಅಳ್ಳಿಕಟ್ಟಿ, ಗುರುಲಿಂಗಯ್ಯ ಖಟಗಿಮಠ, ರಾಚಯ್ಯ ಮಠಪತಿ, ವೀರಪ್ಪಾ ಶಾಣಮೆ, ಶಾಂತವೀರ ಸ್ವಾಮಿ, ಬಸವಣ್ಣಪ್ಪಾ ನೆಲೋಗಿ, ಮಲ್ಲಿಕಾರ್ಜುನ ಬಗದುರೆ, ಸವಿತಾ ರಮೇಶ್ ಸ್ವಾಮಿ, ಸರಸ್ವತಿ ಬೆಂಬಳಿ, ಪಾರ್ವತಿ ರೋಜೆ, ಶೀಲಾದೇವಿ ಲವಾರೆ, ಸುರೇಖಾ ಶೀಲವಂತ ಸೇರಿದಂತೆ ಇತರರಿದ್ದರು.

ಸಂಯುಕ್ತ ಕರ್ನಾಟಕ 11 ಆಗಸ್ಟ್ 2021 ಬುಧವಾರ ಕಲಬುರಗಿ

ಕನ್ನಡಪ್ರಭ ಶುಕ್ರವಾರ 8.10.2021

ಸಣ್ ಸುದ್ದಿ

ರುದ್ರಮುನಿ ಗದ್ದುಗೆಯ ಮೂರ್ತಿ ಮೇಲೆ ಸೂರ್ಯನ ಕಿರಣ



ಬಸವಕಲ್ಯಾಣ: ನಗರದ ಐತಿಹಾಸಿ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ 12ನೇ ಶತಮಾನದ ರುದ್ರಮುನಿ ಗದ್ದುಗೆಯ ಮೂರ್ತಿ ಮೇಲೆ ಸೂರ್ಯನ ಕಿರಣಗಳು ಬೀಳುವ ಹೊನಲು ಬೆಳಕಿನ ಆರತಿ ಜರುಗಿದೆ. ಈ ವಿಸ್ಮಯಕಾರಿ ಅಪರೂಪದ ದೃಶ್ಯ ವರ್ಷದಲ್ಲಿ ಎರಡು ಸಲ ನವರಾತ್ರಿ ಮತ್ತು ಶಿವರಾತ್ರಿ ಸಂದರ್ಭದಲ್ಲಿ ಮಾತ್ರ ಕಾಣಿಸುತ್ತದೆ. ಇಂತಹ ಅದ್ಭುತ ದೃಶ್ಯ ಆ.7ರಂದು ಬೆಳಗ್ಗೆ ವೀರಶೆಟ್ಟಿ ಎಂ.ಪಾಟೀಲ ಅವರ ಕ್ಯಾಮರಾ ಕಣ್ಣಿಗೆ ಸಿಕ್ಕಿದೆ. ಭಕ್ತರು ಸೂರ್ಯ ಉದಯ ಆಗುವುದಕ್ಕೂ ಮುನ್ನ ಸತತವಾಗಿ ಮೂರು ದಿನ ಬೆಳಗ್ಗೆ ಈ ದೃಶ್ಯ ನೋಡಿ ಕಣ್ತುಂಬಿಸಿಕೊಂಡು ಘನಲಿಂಗ ರುದ್ರಮುನಿ ಶಿವಾಚಾರ್ಯರ ದರ್ಶನ ಪಡೆಯಬಹುದು ಎಂದು ವೀರಶೆಟ್ಟಿ ಎಂ.ಪಾಟೀಲ ತಿಳಿಸಿದ್ದಾರೆ.

Scanned with OKEN Scanner

ಸೌಹಾರ್ದತೆ ಬೆಳೆಸುವ ಧರ್ಮ

ಶಾಸಕ ರಾಜಶೇಖರ ಪಾಟೀಲ್ ಅಭಿಮತ | ತಡೋಳಾದಲ್ಲಿ ಮಂದಿರ ಕಳಸಾರೋಹಣ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮಠ, ಮಂದಿರಗಳು ಮನಸ್ಸಿಗೆ ನೆಮ್ಮದಿ ನೀಡುವ ಪವಿತ್ರ ಸ್ಥಳಗಳು. ಧಾರ್ಮಿಕ ಸಭೆ, ಸಮಾರಂಭಗಳು ಮನಸ್ಸು ಶುದ್ಧಗೊಳಿಸಲು ಹಾಗೂ ಸೌಹಾರ್ದತೆ ಗಟ್ಟಿಗೊಳಿಸಲು ಸಹಕಾರಿ ಎಂದು ಶಾಸಕ ರಾಜಶೇಖರ ಪಾಟೀಲ್ ಹೇಳಿದರು.

ತಡೋಳಾದಲ್ಲಿ ಶ್ರೀ ಹನುಮಾನ ಹಾಗೂ ಮಹಾಲಕ್ಷ್ಮೀ ಮಂದಿರದ ಕಳಸಾರೋಹಣ ಮತ್ತು ಶ್ರೀ ಹನುಮಾನ ದೇವರ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ನಿಮಿತ್ತ ಶುಕ್ರವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿ, ಹುಮನಾಬಾದ್ ಕ್ಷೇತ್ರದಲ್ಲಿ ರಸ್ತೆ, ನೀರು, ಚರಂಡಿ, ವಿದ್ಯುತ್ ಸೇರಿ ಮೂಲ ಸೌಕರ್ಯ ಕಲ್ಪಿಸಲಾಗಿದೆ. ಕ್ಷೇತ್ರದ ವ್ಯಾಪ್ತಿಯ ಬಸವಕಲ್ಯಾಣ ತಾಲೂಕಿನ ತಡೋಳಾ ಸೇರಿ ಒಂಬತ್ತು ಗ್ರಾಪಂ ವ್ಯಾಪ್ತಿಯಲ್ಲಿಯೂ ಅಭಿವೃದ್ಧಿ ಕಾರ್ಯಕ್ಕೆ ಆದ್ಯತೆ ನೀಡಲಾಗಿದೆ ಎಂದರು.

» ಶ್ರೀ ಹನುಮಾನ ಮೂರ್ತಿ ಪ್ರಾಣ ಪ್ರತಿಷ್ಠಾಪನೆ

ಶ್ರೀರಾಜೇಶ್ವರ ಶಿವಾಚಾರ್ಯರು, ಶ್ರೀಜಯಶಾಂತಲಿಂಗ ಶಿವಾಚಾರ್ಯರು ಆಶೀರ್ವಚನ ನೀಡಿದರು. ಹಾರಕೂಡದ ಶ್ರೀ ಡಾ.ಚನ್ನವೀರ ಶಿವಾಚಾರ್ಯರು, ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಮುಖಂಡ ಕೇಶಪ್ಪ ಬಿರಾದಾರ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು.

ಪೂರ್ಣ ಕುಂಭ-ಕಳಸ : ರಾಷ್ಟ್ರೀಯ ಹೆದ್ದಾರಿ 65ರಿಂದ ತಡೋಳಾದ ಲಕ್ಷ್ಮೀ ಮಂದಿರ, ಬೌಡಿಯಿಂದ ಗ್ರಾಮದ ಪ್ರಮುಖ ರಸ್ತೆ ಮೂಲಕ ಹನುಮಾನ ಮಂದಿರದ ವರೆಗೆ ಪೂರ್ಣ ಕುಂಭ-ಕಳಸ ಮೆರವಣಿಗೆ ಮೂಲಕ ಪೂಜ್ಯರು, ಗಣ್ಯರನ್ನು ಸ್ವಾಗತಿಸಲಾಯಿತು. ಕುಂಭ-ಕಳಶ ಹೊತ್ತ ಮಹಿಳೆಯರು ಭಕ್ತಿಯಿಂದ ಹೆಜ್ಜೆ ಹಾಕಿದರು. ವಿವಿಧ ಮಠಗಳ ಪೂಜ್ಯರು, ಪೀಠಾಧೀಶರು, ಜನಪ್ರತಿನಿಧಿಗಳು, ಭಕ್ತರಮಧ್ಯೆ ಮಂದಿರಕಳಸಾರೋಹಣಮತ್ತುಹನುಮಾನ ದೇವ ಪ್ರಾಣಪ್ರತಿಷ್ಠಾಪನೆ ಭಕ್ತರ ಜೈಘೋಷಣೆಗಳ ಮಧ್ಯೆ ನೆರವೇರಿತು.

ಜಿಪಂ ಮಾಜಿ ಸದಸ್ಯ ವೀರಣ್ಣ ಪಾಟೀಲ್, ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ ಭೂತಾಳೆ, ಉಪಾಧ್ಯಕ್ಷ ಕೃಷ್ಣಾರೆಡ್ಡಿ ಭುರಾಳೆ, ಪ್ರಮುಖರಾದ ಅಭಿಷೇಕ ಪಾಟೀಲ್, ಅಕ್ಷಯ ಪಾಟೀಲ್, ರೇವಣಸಿದ್ದಪ್ಪ ಪಾಟೀಲ್, ದಯಾನಂದ ನಂದಿ, ಕಾರ್ತಿಕಯ್ಯ ಹಿರೇಮಠ, ಶರಣಪ್ಪ ನಂದಿ, ಭೀಮಶಾ ಪಾಟೀಲ್, ಬಹಾದ್ದೂರ್‌ಸಿಂಗ್, ಬಸಪ್ಪ ಬಿರಾದಾರ, ಧೂಳಪ್ಪ ಬಿರಾದಾರ, ರಾಜಶೇಖರ ನಂದಿ, ಬಸಪ್ಪ ಯಲಪಿ, ಅಪ್ಪಣ್ಣ ಕೋಳಿ, ಬಾಬು ಬಿರಾದಾರ, ಕಾಶಪ್ಪ ಸೇರಿಕಾರ, ಉಸ್ಮಾನ್ ಕಾರಬಾರಿ, ಮಕ್ಬುಲ್ ಮಿಯಾ ಇತರರಿದ್ದರು.



ತಡೋಳಾದಲ್ಲಿ ಹನುಮಾನ, ಮಹಾಲಕ್ಷ್ಮೀ ಮಂದಿರದ ಕಳಸಾರೋಹಣ, ಪ್ರಾಣ ಪ್ರತಿಷ್ಠಾಪನೆ ನಿಮಿತ್ತ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಶಾಸಕ ರಾಜಶೇಖರ ಪಾಟೀಲ್ ಉದ್ಘಾಟಿಸಿದರು. ಶ್ರೀ ಡಾ.ಚನ್ನವೀರ ಶಿವಾಚಾರ್ಯರು, ರಾಜೇಶ್ವರ ಶ್ರೀ, ಜಯಶಾಂತಲಿಂಗ ಶ್ರೀ, ಘನಲಿಂಗ ರುದ್ರಮುನಿ ಶ್ರೀ, ಅಭಿನವ ಘನಲಿಂಗ ರುದ್ರಮುನಿ ಶ್ರೀ, ವೀರಣ್ಣ ಪಾಟೀಲ್, ಚಂದ್ರಮ್ಮ ಭೂತಾಳೆ, ಕೃಷ್ಣಾರೆಡ್ಡಿ ಇತರರಿದ್ದರು.

ಸಂಬಂಧ ಬೆಸೆಯುವ ಕಳಸಾರೋಹಣ

ಭಾವನೆಗಳನ್ನು ಜೋಡಿಸುವುದೇ ಕಳಸಾರೋಹಣದ ಮೂಲ ಉದ್ದೇಶ. ಗ್ರಾಮದ ಅಕ್ಕ-ತಂಗಿಯಂದಿರು ಮತ್ತು ತಾಯಂದಿರು ತವರೂರಿನ ದೇವತೆಗಳ ಮಂದಿರದ ಕಳಸಾರೋಹಣಕ್ಕೆ ನಿಧಿ ಕೊಡುವ ಸಂಸ್ಕೃತಿ ಇದೆ ಎಂದು ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಹೇಳಿದರು. ಕಳಸಾರೋಹಣ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ಸುವರ್ಣ ಕಳಸ ಹೊಳಿಯುವಂತೆ ಎಲ್ಲರ ಮನಸ್ಸು ಪವಿತ್ರವಾಗಿ ಬೆಳಗಲಿ. ಭಾವೈಕ್ಯತೆ ಬೆಳೆಯಲಿ ಎನ್ನುವ ಉದ್ದೇಶವೇ ತಾಯಂದಿರದ್ದು ಎಂದರು. ಎಲ್ಲ ಯುವಕರು ವ್ಯಸನ ಮುಕ್ತರಾಗಿ ಬದುಕಬೇಕು. ಕೃಷಿಗೆ ಆದ್ಯತೆ ನೀಡಬೇಕು. ಎಲ್ಲ ಸಮುದಾಯದವರು ಪ್ರೀತಿ ವಿಶ್ವಾಸದಿಂದ ಜೀವನ ಸಾಗಿಸಬೇಕು ಎಂದು ಹೇಳಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 28 ಆಗಸ್ಟ್ 2021
28 AUGUST 2021

ವಿಜಯ ಕರ್ನಾಟಕ twitter.com/vijaykarnataka

ಸಾಧನೆ ನಂದೆಲ್ಲ... ಸಾಧಕಿ ಮಾತ್ರ ಪ್ರಾಣಿ ಪಕ್ಷಿ

ಸರ್ಪದ 12 ಮಾಸಗಳಲ್ಲಿ ಶಾಪಗ್ರಸ್ತ ಮನು ಅಕ್ಕಂಕ ಕ್ಷತ್ರಿಯ ಮನು. ಇಡೀ ದೇಶದ ಎಲ್ಲಾ ಮಹಾ ಮಂದಿರಗಳಲ್ಲಿ ಪವಿತ್ರ ಪುರಾಣಗಳು ವರ್ಷಪೂರ್ತಿ ನಾಡಿನ ಭಕ್ತರಿಗೆ ಜ್ಞಾನ ದಾಸೋಹ ನೀಡುವುದು ಹಾಗೂ ಕೇಳುವುದು ಎಲ್ಲರ ಸೌಭಾಗ್ಯ ಆಗಿದೆ. ಶಾಪಗ್ರಸ್ತ ಮನುವಿನ ಮೂಲಕ ಜೀವನ ಮಾನವನಾಗಿ ಸಮಾಜದಲ್ಲಿ ಜಾಗೃತಿ ಮೂಡಿಸಲು ಶ್ರೀಕ್ಷೇತ್ರ ವಾರ್ಜನಕರು ಪಾಕಟ್ಟುಮಾರ್ಗದಲ್ಲಿ ನಡೆಯುತ್ತಾ ನಮ್ಮ ಜೀವನ, ಮನಸ್ಸನ್ನು ಶ್ರೀಗೋಮನ ಮೂಲಕ ಜೀವನ ಪಾವನಗೊಳಿಸಿಕೊಳ್ಳುವ ಮಾನವೀ ಶಾಪಗ್ರಸ್ತ ಮನು. ಶಾಪಗ್ರಸ್ತ ಮನು ಪಾಪ ಮಾಡಿಕೊಳ್ಳುವುದು ಮಾತ್ರವಿಂದಲೇ ಸ್ನೇಹಗಳನ್ನು ಪಾಪ್ತಿ ಮಾಡಿಕೊಳ್ಳುವುದು ಎಂದು ಧರ್ಮ ಪಾಸ್ತಗಳು ಹೇಳುತ್ತವೆ. ಶಾಪಗ್ರಸ್ತ ಕರ್ತನಾಗಿ ಶಾಪಗ್ರಸ್ತ ಭಗವಂತನ ಅರ್ಚನೆ, ಪೂಜೆ, ಜಪ, ತಪ ಕರ್ತನಾಗಿಂದ ಮಾತ್ರ ನಾವು ಈ ಶಾಪಗ್ರಸ್ತ ಮಾನವರಲ್ಲಿ ಕೋಟಿ ಕೋಟಿ ಜನ್ಮಗಳ ಪಾಪಗಳನ್ನು ತೊಳೆದು ಕೊಳ್ಳಬಹುದು. ಸರ್ವಸ್ತೋತ್ರಗಳ ಶ್ರವಣಕೇಂದ್ರೀಯಗಳಿಗೆ ಯೋಗ್ಯವಾದ ಪಾರಮಾರ್ಥ ಶ್ರೇಷ್ಠ ಧಾರಣವನ್ನು ಶ್ರವಣ ಮಾಡಿದಾಗ ಮಾನವ ಪಾಪಗಳನ್ನು ಶ್ರವಣ. ಶ್ರೇಷ್ಠ ಪದ ಲಕ್ಷಣಗಳನ್ನು ಕೇಳಿದಾಗ ಉಂಟಾಗುವ ಅಮರ ಬುದ್ಧಿಯು ಬಯಸುವ ಸಂತರ ಗುರುಮುಖದಿಂದ ಉಪನಿಷತ್ ವಾಕ್ಯಗಳನ್ನು ಆಲಿಸಿದಾಗ ಜೀವನ ಪಾವನ ಮಾಡುವುದರಿಂದ ಆವರೋಕ್ಷ ಜ್ಞಾನವಾಗುವುದು. ಜಾನ(ಆತ್ಮದ)ರ್ಶಿ ನಿಲ ಪರಮಾತ್ಮನೆಂಬ ಭಾವನೆ ಸುಸ್ಥಿರ

ಶಾಸಕ ಶರಣು ಸಲಗರ್ ಭರವಸೆ | ಬಸವಕಲ್ಯಾಣದಲ್ಲಿ ಉಪನ್ಯಾಸ ಮಾಲೆ ಸಮಾರೋಪ

ಸಂಸ್ಥಾನ ಗವಿಮಠ ಅಭಿವೃದ್ಧಿಗೆ ಪ್ರಯತ್ನ

ವಿಜಯವಾಣಿ ಸುದ್ದಿ ಜಾಲ ಬಸವಕಲ್ಯಾಣ

ತ್ರಿಪುರಾಂತ ಸಂಸ್ಥಾನ ಗವಿ ಮಠದ ಪರಿಸರದಲ್ಲಿ ಎರಡು ವಿಶ್ರಾಂತಿ ಕೋಣೆ ನಿರ್ಮಾಣದ ಜತೆಗೆ ಆಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸಿ ಮಠದ ಅಭಿವೃದ್ಧಿಗೆ ಪ್ರಯತ್ನಿಸುವುದಾಗಿ ಶಾಸಕ ಶರಣು ಸಲಗರ್ ಭರವಸೆ ನೀಡಿದರು.

ಗವಿ ಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನಾ ಸಂಸ್ಥೆ ಆಶ್ರಯದಲ್ಲಿ ಶ್ರಾವಣ ಮಾಸದ ನಿಮಿತ್ತ ಸೋಮವಾರ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಭಕ್ತರನ್ನು ಸನ್ಮಾರ್ಗ ತೋರುವ ಕಾರ್ಯ ಗವಿ ಮಠದಿಂದ ನಡೆಯುತ್ತಿದೆ. ಪುರಾಣ, ಪ್ರವಚನ, ಉಪನ್ಯಾಸ ಧಾರ್ಮಿಕ ಕಾರ್ಯಕ್ರಮಗಳು ನೆಮ್ಮದಿಯ ಬದುಕಿಗೆ ಸಹಾಯಕವಾಗುತ್ತವೆ ಎಂದರು.

ಹಿರನಾಗಾಂವನ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಸಮಾರಂಭ ಉದ್ಘಾಟಿಸಿ ಮಾತನಾಡಿ, ಸಿದ್ಧಾಂತ ಹಾಗೂ ವಚನ ಸಾಹಿತ್ಯವು ಅಧ್ಯಾತ್ಮದ ಎರಡು ಕಣ್ಣುಗಳಿದ್ದಂತೆ. ಗವಿ ಮಠವು ಭಕ್ತರ ಅಧ್ಯಾತ್ಮದ ತವರುರಾಗಿದೆ. ನೂತನ ಅನುಭವ ಮಂಟಪ ನಿರ್ಮಿಸಲು ಮುಂದಾಗಿರುವದು ಸ್ವಾಗತಾರ್ಹ. ಆದರೆ ಗವಿ ಮಠದ ಆಸ್ತಿಗೆ ಯಾವುದೇ ಧಕ್ಕೆ ಆಗದಂತೆ ನೋಡಿಕೊಳ್ಳಬೇಕೆಂದು ಸಲಹೆ ನೀಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ಗವಿ ಮಠದಲ್ಲಿ ಸೋಮವಾರ ಏರ್ಪಡಿಸಿದ್ದ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭವನ್ನು ಹಿರನಾಗಾಂವನ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಉದ್ಘಾಟಿಸಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಾಸಕ ಶರಣು ಸಲಗರ್, ಬಸವಂತಪ್ಪ ಲವಾರೆ, ಶರಣಪ್ಪ ಬಿರಾದಾರ, ಪ್ರೊ.ಸೂರ್ಯಕಾಂತ ಶೀಲವಂತ ಇತರರಿದ್ದರು.

ಸಂಸ್ಥಾನ ಗವಿ ಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿ ಮಾತನಾಡಿ, ಕಳೆದ ಕೆಲವೇ ವರ್ಷಗಳಲ್ಲಿ ಭಕ್ತರ ಸಹಾಯ- ಸಹಕಾರದೊಂದಿಗೆ ಅನೇಕ ಅಭಿವೃದ್ಧಿ ಕಾರ್ಯಗಳು ನಡೆದಿದೆ. ಶ್ರೀ ಮಠದಲ್ಲಿ ನಿರಂತರ ದಾಸೋಹ ವ್ಯವಸ್ಥೆಗೆ ಮುಂದಾಗಿದ್ದಾರೆ. ಪ್ರಸಾದ ಭವನ ನಿರ್ಮಾಣ ಮಾಡುವ ಸಂಕಲ್ಪ ಹೊಂದಲಾಗಿದ್ದು, ಶಾಸಕರ ಸಹಕಾರ ಅವಶ್ಯಕ ಎಂದರು.

ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿದರು. ಪ್ರೊ.ಸೂರ್ಯಕಾಂತ ಶೀಲವಂತ ಪ್ರಾಸ್ತಾವಿಕ ಮಾತನಾಡಿದರು. ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ ಇದ್ದರು. ರಮೇಶ ರಾಜೋಳಿ ನಿರೂಪಿಸಿ, ವಂದಿಸಿದರು.

> ಗವಿ ಮಠವು ಎಲ್ಲ ಸಮುದಾಯದ ಜನರ ಮಠವಾಗಿದೆ. ಎಲ್ಲರನ್ನು ಸಮಾನವಾಗಿ ನೋಡುವ ಮಠ ಇದಾಗಿದೆ. ಇಲ್ಲಿಯ ಯಾತ್ರಿ ನಿವಾಸದ ಕೆಲಸ ನನೆಗುದಿಗೆ ಬಿದ್ದಿದೆ. ಆದಷ್ಟು ಬೇಗ ಸರ್ಕಾರ ಅನುದಾನ ನೀಡುವ ಮೂಲಕ ಯಾತ್ರಿ ನಿವಾಸ ಕಾರ್ಯ ಪೂರ್ಣಗೊಳಿಸಲು ಶಾಸಕರು ಕ್ರಮಕೈಗೊಳ್ಳಬೇಕು.
> ಪ್ರೊ.ಸೂರ್ಯಕಾಂತ ಶೀಲವಂತ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 7 ಸೆಪ್ಟೆಂಬರ್ 2021
7 SEPTEMBER 2021



ಬಸವಕಲ್ಯಾಣ: ಶ್ರಾವಣ ಮಾಸದ ನಿಮಿತ್ಯ ಗವಿ ಮಠದಲ್ಲಿ ನಡೆದ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭ ಹಿರನಾಗಾಂವ್‌ನ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಉದ್ಘಾಟಿಸಿದರು.

'ಗವಿಮಠದ ಅಭಿವೃದ್ಧಿ ಕಾರ್ಯಗಳಿಗೆ ಪ್ರಯತ್ನ'

ಸಂ.ಕ.ಸಮಾಚಾರ ಬಸವಕಲ್ಯಾಣ

ತ್ರಿಪುರಾಂತ ಸಂಸ್ಥಾನ ಗವಿಮಠದ ಪರಿಸರದಲ್ಲಿ ಎರಡು ವಿಶ್ರಾಂತಿ ಕೋಣೆ ನಿರ್ಮಾಣ ಮಡಲಾಗುವದು. ಜತೆಗೆ ಇಲ್ಲಿ ಆಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸುವ ಜತೆಗೆ ಮಠದ ಅಭಿವೃದ್ಧಿ ಕಾರ್ಯಗಳಿಗೆ ಪ್ರಯತ್ನಿಸುವುದಾಗಿ ಶಾಸಕ ಶರಣು ಸಲಗರ ಭರವಸೆ ನೀಡಿದರು.

ಶ್ರಾವಣ ಮಾಸದ ನಿಮಿತ್ಯ ಇಲ್ಲಿಯ ಗವಿ ಮಠದಲ್ಲಿ ಆಯೋಜಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ಉದ್ಘಾಟನೆ ನೆರವೇರಿಸಿದ ಹಿರನಾಗಾಂವನ ಶ್ರೀ ಜಯಶಾಂತಲಿಂಗ ಮಹಾಸ್ವಾಮೀಜಿ ಮಾತನಾಡಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯವು ಅಧ್ಯಾತ್ಮದ ಎರಡು ಕಣ್ಣುಗಳಿದ್ದಂತೆ ಎಂದರು.

ಸಂಸ್ಥಾನ ಗವಿ ಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಶರಣು ಸಲಗರ ಅವರುಮುಂಬರುವದಿನಗಳಲ್ಲಿಸಚಿವರಾಗಲಿಎಂದುಸದಾಶಯ ವ್ಯಕ್ತಪಡಿಸಿದರು. ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಸಹ ಮಾತನಾಡಿದರು. ಪ್ರೊ. ಸೂರ್ಯಕಾಂತ ಶೀಲವಂತ ಪ್ರಾಸ್ತಾವಿಕವಾಗಿ ಮಾತನಾಡಿದರು. ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರಇದ್ದರು. ರಮೇಶರಾಜೋಳೆನಿರೂಪಿಸಿ,ವಂದಿಸಿದರು.

ಸಂಯುಕ್ತ ಕರ್ನಾಟಕ
08 ಸೆಪ್ಟೆಂಬರ್ 2021
ಬುಧವಾರ
ಕಲಬುರಗಿ



ಬಸವಕಲ್ಯಾಣ ಗವಿಮಠಕ್ಕೆ ಶನಿವಾರ ಭೇಟಿ ನೀಡಿದ ಕಸಾಪ ಅಧ್ಯಕ್ಷ ಡಾ.ಮಹೇಶ ಜೋಶಿ ಅವರನ್ನು ಪೀಠಾಧಿಪತಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು. ಸುರೇಶ ಚನ್ನಶೆಟ್ಟಿ, ಪ್ರೊ.ಓಂಪ್ರಕಾಶ ಲಡ್ಡೆ, ಬಾಬುರಾವ್ ದಾನಿ, ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂದಿ, ವೀರಣ್ಣ ಶೀಲವಂತ,ಪ್ರೊ.ರುದ್ರೇಶ್ವರ ಇತರರಿದ್ದರು.

ವರ್ಧಂತಿ ಮಹೋತ್ಸವ ನಾಳೆ

ಬಸವಕಲ್ಯಾಣ: ತ್ರಿಪುರಾಂತ ಸಂಸ್ಥಾನ ಗವಿಮಠದ ಪೀಠಾಧಿಪತಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನಾಚರಣೆ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಸಾಮಾಜಿಕ ಸಾಮರಸ್ಯ ಕಾರ್ಯಕ್ರಮ ಗವಿಮಠದಲ್ಲಿ ಮಂಗಳವಾರ ಬೆಳಗ್ಗೆ 11ಕ್ಕೆ ಜರುಗಲಿದೆ. ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಸಾನ್ನಿಧ್ಯ, ಶ್ರೀ ಡಾ.ಅಭಿನವ ಘನಲಿಮಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸವರು. ಶಾಸಕ ಶರಣು ಸಲಗರ್ ಉದ್ಘಾಟಿಸಲಿದ್ದಾರೆ. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸುವರು. ನಗರಸಭೆ ಪೌರಾಯುಕ್ತ ಶಿವಕುಮಾರ, ಮುಖಂಡರಾದ ಶಿವಶರಣ ಬಿರಾದಾರ, ಆನಂದ ದೇವಪ್ಪ, ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಅತಿಥಿಗಳಾಗಿ ಭಾಗವಹಿಸುವರು.



ಅಭಿನವ ಶ್ರೀ

Scanned with OKEN Scanner

ಸಿದ್ದಾಂತ ಶಿಖಾಮಣಿ, ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭ

ಶರಣ, ವಚನ ಸಾಹಿತ್ಯ ಅಧ್ಯಾತ್ಮದ ಎರಡು ಕಣ್ಣು

■ ವಿಕ ಸುದ್ದಿಲೋಕ ಬಸವಕಲ್ಯಾಣ

ಶರಣ ಸಾಹಿತ್ಯ ಹಾಗೂ ವಚನ ಸಾಹಿತ್ಯವು ಅಧ್ಯಾತ್ಮದ ಎರಡು ಕಣ್ಣುಗಳಿದ್ದಂತೆ .ಜತೆಗೆ ಇಲ್ಲಿಯ ಗವಿ ಮಠವು ಭಕ್ತರ ಅಧ್ಯಾತ್ಮದ ತವರುರಾಗಿದೆ. ಗವಿ ಮಠದ ಏಳ್ಗೆಗೆ ಭಕ್ತರ ಸಹಾಯ- ಸಹಕಾರ ಅವಶ್ಯಕವಾಗಿದೆ ಎಂದು ತಾಲೂಕಿನ ಹಿರನಾಗಾಂವನ ಜಯಶಾಂತಲಿಂಗ ಸ್ವಾಮೀಜಿ ಹೇಳಿದರು.

ಗವಿ ಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಸೋಮವಾರ ಹಮ್ಮಿಕೊಂಡ ಸಿದ್ದಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ತ್ರಿಪುರಾಂತ ಗವಿ ಮಠದ .ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಮಾತನಾಡಿ, ಕಳೆದ ಕೆಲವೇ ವರ್ಷಗಳಲ್ಲಿ ಭಕ್ತರ ಸಹಾಯ ಸಹಕಾರದೊಂದಿಗೆ ಅನೇಕ ಅಭಿವೃದ್ಧಿ ಕಾರ್ಯಗಳು ಆಗಿದ್ದು ಮಠದ ಪರಿಸರದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿದೆ. ಸಂಸ್ಥೆಯ ಮುಖ್ಯಸ್ಥರು ಹಾಗೂ ಭಕ್ತಾದಿಗಳು ಸೇರಿ ಶ್ರೀ ಮಠದಲ್ಲಿ ನಿರಂತರ ದಾಸೋಹ ವ್ಯವಸ್ಥೆಗೆ ಮುಂದಾಗಿದ್ದಾರೆ. ಜತೆಗೆ 40-60 ಪ್ರಸಾದ ಭವನ ನಿರ್ಮಾಣ ಮಾಡುವ ಸಂಕಲ್ಪ ಹೊಂದಲಾಗಿದೆ. ಇದಕ್ಕೆ ಶಾಸಕರ ಸಹಕಾರ ಬೇಕು ಎಂದರು.ಬಸವಂತಪ್ಪಲವಾರೆ ಮಾತನಾಡಿದರು. ಪ್ರೊಸೂರ್ಯಕಾಂತ ಶೀಲವಂತ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿಶರಣಪ್ಪ ಬಿರಾದಾರ ಇದ್ದರು. ರಮೇಶ ರಾಜೋಳೆ ನಿರೂಪಿಸಿದರು.



ಬಸವಕಲ್ಯಾಣ ಶ್ರಾವಣ ಮಾಸದ ನಿಮಿತ್ತ ಗವಿ ಮಠದಲ್ಲಿ ಸೋಮವಾರ ನಡೆದ ಸಿದ್ದಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭದ ಕಾರ್ಯಕ್ರಮವನ್ನು ಹಿರನಾಗಾಂವನ ಜಯಶಾಂತಲಿಂಗ ಸ್ವಾಮೀಜಿ ಉದ್ಘಾಟಿಸಿದರು. ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಾಸಕ ಶರಣು ಸಲಗರ, ಬಸವಂತಪ್ಪ ಲವಾರೆ, ಶರಣಪ್ಪ ಬಿರಾದಾರ,ಪ್ರೊ .ಸೂರ್ಯಕಾಂತ ಶೀಲವಂತ ಇದ್ದರು.

ಗವಿ ಮಠದ ಅಭಿವೃದ್ಧಿಗಾಗಿ ಭಕ್ತರಿಗಾಗಿ ಎರಡು ವಿಶ್ರಾಂತಿ ಕೋಣೆ ನಿರ್ಮಿಸಲಾಗುವದು. ಶ್ರೀಗಳು ಕೇಳುವುದಕ್ಕಿಂತ ಮುಂಚಿತವಾಗಿ ನಾನೇ ಮಠದ ಭಕ್ತನಾಗಿ ಶ್ರೀ ಮಠದ ಅಭಿವೃದ್ಧಿಗೆ ಮನಸೋ ಇಚ್ಛೆಯಾಗಿ ಕೆಲಸ ಮಾಡುವೆ.

- ಶರಣು ಸಲಗರ, ಬಸವಕಲ್ಯಾಣ ಶಾಸಕರು

ಗವಿ ಮಠದಲ್ಲಿ ಯಾತ್ರಿ ನಿವಾಸದ ಕೆಲಸ ನನಗುದಿಗೆ ಬಿದ್ದಿದೆ. ಆದಷ್ಟು ಬೇಗ ಸರಕಾರ ಅನುದಾನ ನೀಡುವ ಮೂಲಕ ಯಾತ್ರಿ ನಿವಾಸ ನಿರ್ಮಿಸಲು ಮುಂದಾಗಬೇಕು. ಇದಕ್ಕೆ ಕ್ಷೇತ್ರದ ಶಾಸಕರು ಸಹಕರಿಸಿ ಅನುದಾನ ತರಬೇಕು.

- ಪ್ರೊ ಸೂರ್ಯಕಾಂತ ಶೀಲವಂತ, ಬಸವಕಲ್ಯಾಣ.

ವಿಜಯ ಕರ್ನಾಟಕ ಕಲಬುರಗಿ,ಮಂಗಳವಾರ,7 ಸೆಪ್ಟೆಂಬರ್ 2021

ಅಭಿನವ ಶ್ರೀಗಳ 35ನೇ ಜನ್ಮ ದಿನ, 16ನೇ ಪಟ್ಟಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಸಾಮಾಜಿಕ ಸಾಮರಸ್ಯ

ಸಾಮರಸ್ಯ ಜೀವನದಿಂದ ಸದೃಢ ಸಮಾಜ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಸಮಾಜದಲ್ಲಿ ಸಾಮರಸ್ಯವಾಗಿ ಜೀವನ ಸಾಗಿಸಬೇಕು. ನಾನು ಮತ್ತು ಎಲ್ಲರೂ ನಮ್ಮವರು ಎಂಬ ವಿಶ್ವಾಸ ಎಲ್ಲರಲ್ಲಿಯೂ ಬಂದಾಗ ಮಾತ್ರ ಸದೃಢ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ತಡೋಳಾದ ರಾಜೇಶ್ವರ ಶಿವಾಚಾರ್ಯರು ಹೇಳಿದರು.

ನಗರದ ಗವಿ ಮಠದಲ್ಲಿ ಮಂಗಳವಾರ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 35ನೇ ಜನ್ಮ ದಿನೋತ್ಸವ ಹಾಗೂ 16ನೇ ಪಟ್ಟಧಿಕಾರ ವರ್ಧಂತಿ ಮಹೋತ್ಸವದ ನಿಮಿತ್ತ ನಡೆದ ಸಾಮಾಜಿಕ ಸಾಮರಸ್ಯ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಮನುಷ್ಯನಲ್ಲಿ ಜಾತಿ ಬರಬಾರದು.ಕೇವಲ ಬದುಕು ಎಂಬುದು ಮಾತ್ರ ಬರಬೇಕು ಅಂದಾಗ ಮಾತ್ರ ಮನುಷ್ಯನ ಜೀವನ ಸುಖಕರವಾಗಿರಲು ಸಾಧ್ಯ ಎಂದರು.

ರಾಜ್ಯ ಸರಕಾರದ ವತಿಯಿಂದ ನೂತನ ಅನುಭವ ಮಂಟಪ ನಿರ್ಮಿಸಲು ಮುಂದಾಗಿರುವದು ಸ್ವಾಗತಾರ್ಹ. ಅದಕ್ಕೆ ನಮ್ಮದೇನು ಅಭ್ಯಂತರ ಇಲ್ಲ ಆದರೆ, ಗವಿ ಮಠದ 25 ಎಕರೆಗೆ ಹಾನಿಯಾಗದಂತೆ ಸಂಬಂಧಿಸಿದವರು ಸೂಕ್ತ ಕ್ರಮ ಕೈಗೊಳ್ಳಲು ಮುಂದಾಗಬೇಕು ಎಂದ ಶ್ರೀಗಳು ನೂತನ ಅನುಭವ ಮಂಟಪದ ನಿರ್ಮಾಣದ ಕುರಿತು ಎಲ್ಲಾ ಶ್ರೀಗಳ ಸಲಹೆ ಪಡೆಯಲು ಸಭೆ ಕರೆಯಬೇಕು ಎಂದು ಒತ್ತಾಯಿಸಿದರು.

ಶಾಸಕ ಶರಣು ಸಲಗರ ಮಾತನಾಡಿ, ಶ್ರೀಮಠದ ಭಕ್ತನಾಗಿ ಕ್ಷೇತ್ರದ ಸೇವಕನಾಗಿ ಕೆಲಸ ಮಾಡುತ್ತಿದ್ದೇನೆ. ಉಪ ಚುನಾವಣೆಯ ಮುಂಚಿತವಾಗಿ ಪ್ರಚಾರಕ್ಕೆ ಆಗಮಿಸಿದ ರಾಜ್ಯ ಉಪಾಧ್ಯಕ್ಷ ವಿಜಯೇಂದ್ರ ಅವರಿಗೆ ಶರಣು ಸಲಗರ ಅವರಿಗೆ ಟಿಕೆಟ್ ನೀಡಿದರೆ ಗೆಲ್ಲುತ್ತಾರೆ ಎಂದು ರಾಜೇಶ್ವರ ಶಿವಾಚಾರ್ಯರ ಹಾಗೂ ಅಭಿನವ ಶ್ರೀಗಳು ಹೇಳಿದರು. ಆವರಿಬ್ಬರ ಆಶೀರ್ವಾದ ನನ್ನ ಮೇಲಿದೆ. ಜತೆಗೆ ಗವಿ ಮಠದಲ್ಲಿ ದಾಸೋಹಕ್ಕಾಗಿ ಸುಸಜ್ಜಿತ ಕಟ್ಟಡ ನಿರ್ಮಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದರು. ಮಾಜಿ ಮಲ್ಲಿಕಾರ್ಜುನ ಎಸ್ ಖೂಬಾ ಮಾತನಾಡಿ, ಭಕ್ತಾದಿಗಳಿಗೆ ಮಠಕ್ಕೆ ಆಗಮಿಸಲು ಕೆರೆಯಲ್ಲಿ ಬ್ರಿಡ್ ನಿರ್ಮಿಸಬೇಕು ಎಂದು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮತ್ತು ನನ್ನ ಅವಧಿಯಲ್ಲಿ 50 ಲಕ್ಷ ವೆಚ್ಚದಲ್ಲಿ ಮಠದಲ್ಲಿ ಯಾತ್ರಿಕ ನಿವಾಸ ನಿರ್ಮಿಸಿದ್ದೇವೆ. ಉಳಿದ ಕೆಲಸಗಳು ಶಾಸಕ ಶರಣು ಸಲಗರ ಮುತುರ್ವಜಿ ವಹಿಸಿ ಆದಷ್ಟು ಬೇಗ ಮುಗಿಸಲು ಮುಂದಾಗಬೇಕು ಎಂದರು. ಕಾಂಗ್ರೆಸ್ ಮುಖಂಡ ಶಿವಶರಣ ಬಿರಾದಾರ, ಜಿಪಂ ಮಾಜಿ ಸದಸ್ಯ ಆನಂದ ಪಾಟೀಲ್, ಶರಣಪ್ಪ ಬಿರಾದಾರ, ಶಬ್ಬೀರ ಪಾಶಾ ಮುಜಾವರ ಮಾತನಾಡಿದರು. ನಗರ ಸಭೆ ಪೌರಾಯುಕ್ತ ಶಿವಕುಮಾರ, ಮಾಲಾ ಬಿ.ನಾರಾಯಣರಾವ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಇದೇವೇಳೆ ಬಸವಂತಪ್ಪ ಲವಾರೆ ಅವರು ದಾಸೋಹ ನಿಧಿಗೆ 1ಲಕ್ಷ 11 ಸಾವಿರದ 11ನೂರಾ 11 ರೂ.ನೀಡಿದ ಹಿನ್ನೆಲೆ ದಂಪತಿಗಳಿಗೆ ಸನ್ಮಾನಿಸಲಾಯಿತು. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ತುಲಾಭಾರ ಜರುಗಿತು. ನವಲಿಂಗ ಪಾಟೀಲ್ ನಿರೂಪಿಸಿದರು.



ಬಸವಕಲ್ಯಾಣದ ಗವಿ ಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ತಡೋಳಾದ ರಾಜೇಶ್ವರ ಶಿವಾಚಾರ್ಯರು ಮಾತನಾಡಿದರು. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಾಸಕ ಶರಣು ಸಲಗರ, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ನಗರ ಸಭೆ ಪೌರಾಯುಕ್ತ ಶಿವಕುಮಾರ ಸೇರಿ ಅನೇಕರಿದ್ದರು.

ನನ್ನ ಹುಟ್ಟಿದ ದಿನದಂದೇ ನನ್ನ ಪಟ್ಟಾಧಿಕಾರ ಜರುಗಿದೆ. ಸಮಾಜದಲ್ಲಿನ ದುಶ್ಚಟಗಳೂ ನನ್ನ ಜೋಳಿಗೆಗೆ ಹಾಕುವಂತೆ ವ್ಯಸನ ಮುಕ್ತ ಸಮಾಜ ಸೇರಿ ಅನೇಕ ಸಾಮಾಜಿಕ ಕಾರ್ಯಗಳು ಮಾಡುತ್ತಿದ್ದೇನೆ. ಭಕ್ತಾದಿಗಳು ನನ್ನ ಜನ್ಮ ದಿನ ನಿಮಿತ್ತ ಪ್ರತಿ ವರ್ಷ ಒಂದೊಂದು ಕಾರ್ಯಕ್ರಮ ರೂಪಿಸುತ್ತಿರುವದು ಹೆಮ್ಮೆಯ ಸಂಗತಿ.

-ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು,ಗವಿ ಮಠ, ಬಸವಕಲ್ಯಾಣ.

ವಿಜಯ ಕರ್ನಾಟಕ ಕಲಬುರಗಿ, ಬುಧವಾರ,29 ಸೆಪ್ಟೆಂಬರ್ 2021

Scanned with OKEN Scanner

ಲಸಿಕೆ ಪಡೆದು ರೋಗದ ತೀವ್ರತೆ ಕಡಿಮೆ ಮಾಡಿ



ಬಸವಕಲ್ಯಾಣ ತಾಲೂಕಿನ ಕೋಟಮಾಳ ಗ್ರಾಮದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನದ ಅಂಗವಾಗಿ ಕೊರೊನಾ ಜಾಗೃತಿ ಹಾಗೂ ಕೋವಿಡ್ ಲಸಿಕೆ ಕುರಿತು ಕಾರ್ಯಕ್ರಮ ಆಯೋಜಿಸಲಾಯಿತು.

ಕೋಟಮಾಳ ಗ್ರಾಮದಲ್ಲಿ ಶ್ರೀಗಳ ಜನ್ಮದಿನ ನಿಮಿತ್ತ ಕೊರೊನಾ ಜಾಗೃತಿ

ಬಸವಕಲ್ಯಾಣ: ಕೊರೊನಾ ಲಸಿಕೆ ಪಡೆಯುವುದರಿಂದ ರೋಗದ ತೀವ್ರತೆಯನ್ನು ಕಡಿಮೆ ಮಾಡಲು ಮತ್ತು ಆಸ್ಪತ್ರೆಗೆ ದಾಖಲಾಗುವುದನ್ನು ತಡೆಯಲು ಸಹಾಯವಾಗಲಿದೆ ಎಂದು ಇಲ್ಲಿಯ ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತಾಲೂಕಿನ ಕೋಟಮಾಳ ಗ್ರಾಮದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನದ ಅಂಗವಾಗಿ ಕೊರೊನಾ ಜಾಗೃತಿ ಹಾಗೂ ಕೋವಿಡ್ ಲಸಿಕೆ ಕುರಿತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕೋವಿಡ್ ಲಸಿಕೆ ಪಡೆಯುವುದಕ್ಕೆ ಜನರಲ್ಲಿ ಹಿಂಜರಿಕೆ ಇರುವಂತೆ ಕಂಡುಬರುತ್ತಿದೆ. ಆದ್ದರಿಂದ ಲಸಿಕೆ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯ ಎಂದು ತಿಳಿಸಿದರು.

ಸಂದ್ಯೋಧನ ಸಂಸ್ಥೆಯ ಅಧ್ಯಕ್ಷ ಬಸವಂತಪ್ಪಾ ಲವಾರೆ ಮಾತನಾಡಿ, ಕೋವಿಡ್ ಲಸಿಕೆ ಪಡೆಯುವ ಪ್ರಾಮುಖ್ಯ ಮತ್ತು ಅದರ ಸುರಕ್ಷತೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ವಿಶೇಷ ಜಾಗೃತಿ ಅಭಿಯಾನವನ್ನು ಪೂಜ್ಯ ಶ್ರೀಗಳ ಜನ್ಮ ದಿನದ ಅಂಗವಾಗಿ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಅಧ್ಯಕ್ಷತೆ ವಹಿಸಿದ ಡಾ.ಮಹೇಶ ಪಾಟೀಲ್ ಮಾತನಾಡಿದರು.

ಮಾರುತಿ ಸಿಂಧೆ, ಭರತರಾವ್ ಖೆಳ್ಗೆ, ಮಹೇಶ ಪಾಟೀಲ, ಮಹಾದೇವ ಏವಳೆ, ದಿಗಂಬರ ಪಾಟೀಲ, ಗಣೇಶ ಘಂಟೆ, ಶಾಮ ಘಂಟೆ, ಗೊಂವಿದರಾವ್ ಪಾಟೀಲ್ ಇದ್ದರು.

ವಿಜಯ ಕರ್ನಾಟಕ
ಸೋಮವಾರ,27 ಸೆಪ್ಟೆಂಬರ್ 2021

ಶ್ರೀಗಳ ಜನ್ಮದಿನ: ಕೊರೋನಾ ಜಾಗೃತಿ



ಬಸವಕಲ್ಯಾಣ ತಾಲೂಕಿನ ಕೋಟಮಾಳ ಗ್ರಾಮದಲ್ಲಿ ತಮ್ಮ ಹುಟ್ಟು ಹಬ್ಬದ ಅಂಗವಾಗಿ ಕೊರೋನಾ ಜಾಗೃತಿ ಕುರಿತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪೂಜ್ಯ ರುದ್ರಮುನಿ ಸ್ವಾಮಿಗಳು ಮಾತನಾಡಿದರು.

ಬಸವಕಲ್ಯಾಣ: ಕೋವಿಡ್ ಲಸಿಕೆ ಪಡೆಯುವುದಕ್ಕೆ ಇನ್ನೂ ಹಲವಾರು ಜನ ಹಿಂಜರಿಕೆ ಕಂಡುಬರುತ್ತಿದೆ, ಲಸಿಕೆ ಬಗ್ಗೆ ಅನುಮಾನಗಳನ್ನು ಹೊಂದಿರುವವರಲ್ಲಿ ಕೊರೋನಾ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ ಎಂದು ಗವಿಮಠ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ತಾಲೂಕಿನ ಕೋಟಮಾಳ ಗ್ರಾಮದಲ್ಲಿ ತಮ್ಮ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ಕೋವಿಡ್-19 ಲಸಿಕೆ ಪಡೆಯುವುದು ಆಸ್ಪತ್ರೆಗೆ ದಾಖಲಾಗುವುದನ್ನು ತಡೆಯಲು ಮತ್ತು ರೋಗದ ತೀವ್ರತೆ ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದರು.

ಸದ್ಬೋಧನ ಸಂಸ್ಥೆಯ ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿ, ಕೋವಿಡ್ ಲಸಿಕೆ ಪಡೆಯುವ ಪ್ರಾಮುಖ್ಯ ಮತ್ತು ಅದರ ಸುರಕ್ಷತೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ವಿಶೇಷ ಜಾಗೃತಿ ಅಭಿಯಾನವನ್ನು ಪೂಜ್ಯ ಶ್ರೀಗಳ ಜನ್ಮದಿನದ ಅಂಗವಾಗಿ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಡಾ. ಮಹೇಶ ಪಾಟೀಲ್ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಪರಿಸರ ಸುತ್ತಮುತ್ತ ಕೆರೆಗಳನ್ನು ಯಾವುದೇ ಕಾರಣಕ್ಕೂ ಹಾಳು ಮಾಡದೆ ಅವುಗಳನ್ನು ಸಂರಕ್ಷಿಸಬೇಕು ಎಲ್ಲರು ತಮ್ಮ ಮೂಲಭೂತ ಕರ್ತವ್ಯಗಳನ್ನು ಪಾಲಿಸಿ ಸಾಂಪ್ರದಾಯಿಕ ಶುಚಿತ್ವ, ಆಚಾರ ವಿಚಾರ, ಆಹಾರ ವಿಹಾರಗಳನ್ನು ಮೈಗೂಡಿಸಿಕೊಂಡು ಕೊರೋನಾ ಮಹಾಮಾರಿಯನ್ನು ದೂರವಿಡಬಹುದೆಂದು ಜಾಗೃತಿ ಮೂಡಿಸಿದರು.

ಮಾರುತಿ ಸಿಂಧೆ, ಭರತರಾವ್ ಖೆಳ್ಗೆ, ಮಹೇಶ ಪಾಟೀಲ್, ಮಹಾದೇವ ಏವಳೆ, ದಿಗಂಬರ ಪಾಟೀಲ್, ಗಣೇಶ ಘಂಟೆ, ಶಾಮ ಘಂಟೆ, ಗೊಂವಿದರಾವ್ ಪಾಟೀಲ್ ಮುಂತಾದವರು ಉಪಸ್ಥಿತರಿದ್ದರು.

ಕನ್ನಡಪ್ರಭ
ಸೋಮವಾರ 27.9.2021



ಬಸವಕಲ್ಯಾಣದಲ್ಲಿ ಮಂಗಳವಾರ ನಡೆದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರದ ವರ್ಧಂತಿ ಮಹೋತ್ಸವದಲ್ಲಿ ಬಸವಂತಪ್ಪ ಲವಾರೆ ಅವರು ₹1,11,111 ಮೊತ್ತದ ಚೆಕ್ ಅನ್ನು ಸ್ವಾಮೀಜಿಗೆ ನೀಡಿದರು. ಶಾಸಕ ಶರಣು ಸಲಗರ, ತಡೋಳಾ ರಾಜೇಶ್ವರ ಶಿವಾಚಾರ್ಯರು, ಶಿವಶರಣ ಬಿರಾದಾರ, ಆನಂದ ಪಾಟೀಲ ಪಾಲ್ಗೊಂಡಿದ್ದರು

ಎಲ್ಲರೂ ನಮ್ಮವರೆಂಬ ಭಾವನೆ ಬೆಳೆಸಿಕೊಳ್ಳಲು ಸಲಹೆ

ಬಸವಕಲ್ಯಾಣ: 'ಎಲ್ಲರೂ ನಮ್ಮವರು ಎಂಬ ಭಾವನೆ ಎಲ್ಲರಲ್ಲೂ ಬೆಳೆದಾಗ ಸಮಾಜದಲ್ಲಿ ಸಾಮರಸ್ಯ ಇರಬಲ್ಲದು' ಎಂದು ತಡೋಳಾ ರಾಜೇಶ್ವರ ಶಿವಾಚಾರ್ಯರು ಹೇಳಿದ್ದಾರೆ.

ನಗರದ ತ್ರಿಪುರಾಂತ ಗವಿಮಠದಲ್ಲಿ ಮಂಗಳವಾರ ನಡೆದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರದ 16ನೇ ವರ್ಧಂತಿ ಮಹೋತ್ಸವದಲ್ಲಿ ಅವರು ಮಾತನಾಡಿದರು.

ಶಾಸಕ ಶರಣು ಸಲಗರ ಮಾತನಾಡಿ, ಮಠದಲ್ಲಿ ದಾಸೋಹದ ವ್ಯವಸ್ಥೆ ಕೈಗೊಳ್ಳಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದರು.

ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಮಾತನಾಡಿ, 'ನಾನು ಶಾಸಕನಿದ್ದಾಗ ಮಠದಲ್ಲಿ ₹50 ಲಕ್ಷದ ಯಾತ್ರಿ ನಿವಾಸ ನಿರ್ಮಿಸಲಾಗಿದೆ. ಈಗಿನ ಶಾಸಕರು ಇನ್ನೂ ಹೆಚ್ಚಿನ ವಿಕಾಸಕ್ಕೆ ಪ್ರಯತ್ನಿಸಬೇಕು ಎಂದರು.

ಕಾಂಗ್ರೆಸ್ ಮುಖಂಡ ಶಿವಶರಣ ಬಿರಾದಾರ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಆನಂದ ಪಾಟೀಲ, ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶಬ್ಬೀರಪಾಶಾ ಮುಜಾವರ್, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ನವಲಿಂಗಕುಮಾರ ಪಾಟೀಲ ಮಾತನಾಡಿದರು.

ಮಾಲಾ ಬಿ.ನಾರಾಯಣರಾವ್, ಪೌರಾಯುಕ್ತ ಶಿವಕುಮಾರ ಉಪಸ್ಥಿತರಿದ್ದರು.

ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಅವರು ಮಠದ ದಾಸೋಹ ನಿಧಿಗೆ ₹1,11,111 ಮೊತ್ತದ ಚೆಕ್ ನೀಡಿದರು.

ನಂತರ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ತುಲಾಭಾರ ಜರುಗಿತು. ಅನೇಕರು ಸ್ವಾಮೀಜಿ ಅವರನ್ನು ಸನ್ಮಾನಿಸಿದರು.

ಪ್ರಜಾವಾಣಿ ಗುರುವಾರ • ಸೆಪ್ಟೆಂಬರ್ 30, 2021

Scanned with OKEN Scanner

ಅಭಿಮತ ಬಸವಕಲ್ಯಾಣದಲ್ಲಿ ಸಿವಿಲ್ ಎಂಜಿನಿಯರ್ಸ್ ಸಂಘದ ಕಾರ್ಯಕ್ರಮದಲ್ಲಿ ಗವಿಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು

ಎಂಜಿನಿಯರ್ಸ್ ಜವಾಬ್ದಾರಿಯುತ ನಿರ್ಮಾಣ ಕಾರ್ಯ ಶ್ಲಾಘನೀಯ

• ಕನ್ನಡಪ್ರಭ ವಾರ್ತೆ ಬಸವಕಲ್ಯಾಣ

ಎಂಜಿನಿಯರ್ಸ್‌ಗಳು ತಮ್ಮ ಜವಾಬ್ದಾರಿ ಅರಿತು ಅರ್ಥಪೂರ್ಣವಾದ ಕಟ್ಟಗಳನ್ನು ಕಟ್ಟುತ್ತಾರೆ. ಅವರ ಕಾರ್ಯ ಶ್ಲಾಘನೀಯ ಎಂದು ಇಲ್ಲಿಯ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.

ಬಸವಕಲ್ಯಾಣ ಸಿವಿಲ್ ಎಂಜಿನಿಯರ್ಸ್ ಅಸೋಸಿಯೇಶನ್ ವತಿಯಿಂದ ಹಮ್ಮಿಕೊಂಡ ಸರ್ ಎಂ. ವಿಶ್ವೇಶ್ವರಯ್ಯನವರ ಜನ್ಮ ದಿನದ ಅಂಗವಾಗಿ ನಡೆದ 54ನೇ ಎಂಜಿನಿಯರ್ಸ್ ದಿನಾಚರಣೆಯಲ್ಲಿ ಆಶೀರ್ವಚನ ನೀಡಿ, ಎಂಜಿನಿಯರ್ಸ್‌ಗಳ ಜ್ಞಾನಕ್ಕೆ ಬೆಲೆಕಟ್ಟಲು ಸಾಧ್ಯವಿಲ್ಲ ಎಂದ ಶ್ರೀಗಳು ಅಂದಿನ ಬಸವಕಲ್ಯಾಣವೇ ಬೇರೆ ಇಂದಿನ ಬಸವಕಲ್ಯಾಣವೇ ಬೇರೆಯಾಗಿದೆ. ಈಗ ನಗರದಲ್ಲಿ ಬೃಹದಾಕಾರದ ಕಟ್ಟಡಗಳು ನಿರ್ಮಾಣಗೊಂಡು ಅಭಿವೃದ್ಧಿ ಹೊಂದಿದೆ ಎಂದು ತಿಳಿಸಿದರು.

ಮನೆಯ ಯಜಮಾನ ಹೇಳಿದ ರೀತಿಯಲ್ಲಿ ಕಟ್ಟಡಗಳನ್ನು ನಿರ್ಮಿಸಿ ಅದರಲ್ಲಿ ವಾಸ್ತು ಪ್ರಕಾರವೇ ನಿರ್ಮಿಸಿಕೊಡುವ ಎಂಜಿನಿಯರ್ಸ್‌ಗಳು ಕಟ್ಟಡ ಮಾಲೀಕರ ವಿಶ್ವಾಸ ಪಡೆದುಕೊಳ್ಳುತ್ತಿದ್ದಾರೆ. ಜೊತೆಗೆ ಜೀವನದಲ್ಲಿ ಪ್ರಾಮಾಣಿಕ ಕೆಲಸ ಮಾಡಿ ಜನರ ವಿಶ್ವಾಸಗಳಿಸುವ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಅವರು ಮಾಡುವ ಕಾರ್ಯ ಮರೆಯಲಾಗದು ಎಂದರು.

ನಗರ ಸಭೆ ಪೌರಾಯುಕ್ತ ಶಿವಕುಮಾರ ಮಾತನಾಡಿ, ಎಂಜಿನಿಯರ್ಸ್‌ಗಳು ತಮ್ಮ ಹೊಸ-ಹೊಸ ಪ್ರಯೋಗದ ಮೂಲಕ ಕಟ್ಟಡಗಳನ್ನು ನಿರ್ಮಿಸುತ್ತಾರೆ. ಆ ಕಟ್ಟಡಗಳ ಭದ್ರತೆ ಹಾಗೂ ಸುರಕ್ಷತೆಯ ಗುಣಮಟ್ಟ ಅವರಿಗೆ ಮಾತ್ರ ತಿಳಿಯುತ್ತದೆ. ಮುಂಬರುವ ದಿನಗಳಲ್ಲಿ ಎಂಜಿನಿಯರ್ಸ್‌ಗಳು ಉನ್ನತ ತಂತ್ರಜ್ಞಾನ ಬಳಸಿಕೊಂಡು ಕಟ್ಟಡಗಳು ನಿರ್ಮಿಸಬೇಕೆಂದರು.

ಸಂಘದ ಅಧ್ಯಕ್ಷ ಬಸವರಾಜ ಮುಸ್ತಾಪೂರೆ, ಅಲ್ತಾಫ್, ನಾಗರಾಜ ಪಾಟೀಲ್, ನವಲಿಂಗ ಪಾಟೀಲ್, ರಮಾಕಾಂತ ದುಬೆ ಪಾಲ್ಗೊಂಡಿದ್ದರು. ಎಂಜಿನಿಯರ್ಸ್‌ಗಳನ್ನು ಹಾಗೂ ಕಟ್ಟಡ ಕಾರ್ಮಿಕರನ್ನು ಇಲ್ಲಿಯ ಮುಕ್ತಾ ಟ್ರೇಡರ್ಸ್ ವತಿಯಿಂದ ಸನ್ಮಾನಿಸಲಾಯಿತು.



ಬಸವಕಲ್ಯಾಣದಲ್ಲಿ ಬುಧವಾರ ಬಸವಕಲ್ಯಾಣ ಸಿವಿಲ್ ಎಂಜಿನಿಯರ್ಸ್ ಸಂಘದಿಂದ ಹಮ್ಮಿಕೊಂಡ ಎಂಜಿನಿಯರ್ಸ್ ದಿನಾಚರಣೆಯನ್ನು ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು.

ಕನ್ನಡಪ್ರಭ
ಗುರುವಾರ 16.9.2021

ಭಾನುವಾರ 3 ಅಕ್ಟೋಬರ್ 2021 • 3 OCTOBER 2021
• VIJAYAVANI » KALABURAGI 5

ವಿಜಯವಾಣಿ



ಕಾಂಗ್ರೆಸ್ ಯುವ ಮುಖಂಡ ಬಸವರಾಜ ಮುರುಡ ಅವರ ಜನ್ಮ ದಿನದ ನಿಮಿತ್ತ ಬಸವಕಲ್ಯಾಣದ ಗವಿಮಠದ ಪರಿಸರದಲ್ಲಿ ಹಮ್ಮಿಕೊಂಡ ಸಸಿ ನೆಡುವ ಕಾರ್ಯಕ್ರಮಕ್ಕೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು. ಬಿಕೆಡಿಬಿ ಮಾಜಿ ಸದಸ್ಯ ಶಿವರಾಜ ನರಶೆಟ್ಟಿ, ನ್ಯೂ ವಿಶ್ವ ಡೆವಲಪರ್ಸ್ ನಿರ್ದೇಶಕ ಬಸವರಾಜ ಸ್ವಾಮಿ, ಬಸವರಾಜ ಮುರುಡ, ಕಿರಣ ಪಾಟೀಲ್, ಪ್ರವೀಣ ಮಹಾಜನ್, ಸುಮಿತ ಸ್ವಾಮಿ, ಚನ್ನುಸ್ವಾಮಿ ಇತರರಿದ್ದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಈಚೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಮಹೇಶ ಜೋಶಿ ಅವರನ್ನು ಸನ್ಮಾನಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪರಿಷತ್ತಿನ ಜಿಲ್ಲಾಧ್ಯಕ್ಷ ಸುರೇಶ ಚೆನ್ನಶೆಟ್ಟಿ, ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಪಾಲ್ಗೊಂಡಿದ್ದರು

ಪ್ರಜಾವಾಣಿ ಗುರುವಾರ • ಡಿಸೆಂಬರ್ 16, 2021



ಬಸವಕಲ್ಯಾಣ ಜಿಲ್ಲಾ ಕೇಂದ್ರ ,ಎಂ.ಬಿ.ಪ್ರಕಾಶ ಆಯೋಗದ ವರದಿ ಜಾರಿಗೆ ಆಗ್ರಹಿಸಿ, ಹುಲಸೂರ ತಾಲೂಕು, ಬಸವಕಲ್ಯಾಣ ಜಿಲ್ಲಾ ಕೇಂದ್ರಸ್ಥಾನ ರಚನೆ ಸಂಘರ್ಷ ಹೋರಾಟ ಸಮಿತಿಯ ವತಿಯಿಂದ ಸಿಎಂ ಬಸವರಾಜ ಬೊಮ್ಮಾಯಿ ಅವರಿಗೆ ಬರೆದ ಮನವಿ ಪತ್ರವನ್ನು ಸಹಾಯಕ ಆಯುಕ್ತರ ಕಚೇರಿಯ ಸಿಬ್ಬಂದಿಗೆ ನೀಡಲಾಯಿತು.

ವಿಜಯ ಕರ್ನಾಟಕ ಗುರುವಾರ,16 ಡಿಸೆಂಬರ್ 2021

Scanned with OKEN Scanner

'ಅಭಿವೃದ್ಧಿಗೆ ಇಂಜಿನಿಯರ್ಸ್ ಕೊಡುಗೆ ಅಪಾರ'



ಬಸವಕಲ್ಯಾಣದಲ್ಲಿ ಹಮ್ಮಿಕೊಂಡ 54ನೇ ಇಂಜಿನಿಯರ್ಸ್ ಡೇ ಕಾರ್ಯಕ್ರಮ ಗವಿಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು.

ಸಂ.ಕ.ಸಮಾಚಾರ ಬಸವಕಲ್ಯಾಣ

ದೇಶದ ಅಭಿವೃದ್ಧಿಗೆ ಇಂಜಿನಿಯರ್ಸ್‌ಗಳ ಕೊಡುಗೆ ಅಪಾರವಾಗಿದೆ. ಅವರ ಪ್ರಯತ್ನದಿಂದಾಗಿ ದೊಡ್ಡ ಕಟ್ಟಡಗಳು ತಲೆ ಎತ್ತುವ ಮೂಲಕ ವಿಶ್ವದಲ್ಲಿಯೇ ಭಾರತ ಅಭಿವೃದ್ಧಿ ಹೊಂದಿದ ದೇಶಗಳ ಸಾಲಿನಲ್ಲಿ ಸಾಗುತ್ತಿದೆ ಎಂದು ಇಲ್ಲಿಯ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದಲ್ಲಿ ಬುಧವಾರ ಸಿವಿಲ್ ಇಂಜಿನಿಯರ್ಸ್ ಅಸೋಸಿಯೇಷನ್‌ನಿಂದ ಸರ್.ಎಮ್ ವಿಶ್ವೇಶ್ವರಯ್ಯನವರ ಜನ್ಮದಿನದ ಅಂಗವಾಗಿ ನಡೆದ 54ನೇ ಇಂಜಿನಿಯರ್ಸ್ ಡೇ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶಿರ್ವಚನ ನೀಡಿದರು. ನಗರಸಭೆ ಪೌರಾಯುಕ್ತ ಶಿವಕುಮಾರ ಮಾತನಾಡಿ ಇಂಜಿನಿಯರ್ಸ್‌ಗಳು ತಮ್ಮ ಹೊಸ-ಹೊಸ ಪ್ರಯೋಗದ ಮೂಲಕ ಕಟ್ಟಡಗಳು ನಿರ್ಮಿಸುತ್ತಾರೆ. ಆ ಕಟ್ಟಡಗಳ ಭದ್ರತೆ ಹಾಗೂ ಸುರಕ್ಷತೆಯ ಗುಣಮಟ್ಟ ಅವರಿಗೆ ಮಾತ್ರ ತಿಳಿಯುತ್ತದೆ. ಮುಂಬರುವ ದಿನಗಳಲ್ಲಿ ಇಂಜಿನಿಯರ್ಸ್‌ಗಳು ಹೆಚ್ಚಿನ ತಂತ್ರಜ್ಞಾನ ಬಳಸಿಕೊಂಡು ಕಟ್ಟಡಗಳು ನಿರ್ಮಿಸಲಿ ಎಂದರು.

ಸಂಘದ ಅಧ್ಯಕ್ಷ ಬಸವರಾಜ ಮುಸ್ತಾಪೂರೆ, ಅಲ್ತಾಫ್ ಇದ್ದರು. ಸಂಘದ ಉಪಾಧ್ಯಕ್ಷ ನಾಗರಾಜ ಪಾಟೀಲ್ ಸ್ವಾಗತಿಸಿದರು. ನವಲಿಂಗ ಪಾಟೀಲ್ ನಿರೂಪಿಸಿದರು. ರಮಾಕಾಂತ ದುಬೆ ವಂದಿಸಿದರು. ಇದೆ ವೇಳೆ ಇಂಜಿನಿಯರ್ಸ್‌ಗಳನ್ನು ಹಾಗೂ ಕಟ್ಟಡ ಕಾರ್ಮಿಕರನ್ನು ಸನ್ಮಾನಿಸಲಾಯಿತು.

ಸಂಯುಕ್ತ ಕರ್ನಾಟಕ
16 ಸೆಪ್ಟೆಂಬರ್ 2021
ಗುರುವಾರ
ಕಲಬುರಗಿ

ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮ

ಸತ್ಯದ ದಾರಿಯಲ್ಲಿ ಸಾಗಲು ಸಲಹೆ



ಬಸವಕಲ್ಯಾಣ ನಗರದ ಬಸವರಾಜ ಬಂದ್ಗೆ ಅವರ ಮನೆಯಲ್ಲಿ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಡಾ.ಜಿ.ಎಸ್.ಭೂರಾಳೆ, ಬಸವಂತಪ್ಪಾ ಲವಾರೆ ಇದ್ದರು.

■ ವಿಕ ಸುದ್ದಿಲೋಕ ಬಸವಕಲ್ಯಾಣ

ಮನುಷ್ಯರ ಜೀವನದಲ್ಲಿ ಅಧರ್ಮವನ್ನು ಆಚರಿಸುವ ಪ್ರಸಂಗ ಬಂದರೂ ಅದನ್ನು ಎಂದಿಗೂ ಆಚರಿಸಕೂಡದು. ಸತ್ಯದ ದಾರಿಯಲ್ಲಿ ಮಾತ್ರ ಸಾಗಬೇಕು ಎಂದು ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಬಸವರಾಜ ಬಂದ್ಗೆ ಅವರ ಮನೆಯಲ್ಲಿ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಶ್ರೀಗಳು ಮಾತನಾಡಿ, ಹಿಂಸೆಯನ್ನು ಮಾಡುವ, ಸುಳ್ಳು ಹೇಳುವ ಮತ್ತು ಕಳ್ಳತನವನ್ನು ಮಾಡುವ ಸನ್ನಿವೇಶಗಳು ಬಂದರು ಸಹ ಸಹನೆಯಿಂದ ತಾಳಿ ಆ ಕೆಲಸ ಆಗದಂತೆ ಎಚ್ಚರಿಕೆ ವಹಿಸಬೇಕು. ಧರ್ಮದಿಂದಲೇ ಅರ್ಥವು, ಕಾಮವು ಮತ್ತು ಕೊನೆಯದಾಗಿ ಮೋಕ್ಷವು ಸಹ ಪ್ರಾಪ್ತವಾಗುತ್ತವೆ ಎಂದರು.

ಸಂದ್ಯೋಧನ ಸಂಸ್ಥೆಯ ಅಧ್ಯಕ್ಷ ಬಸವಂತಪ್ಪಾ ಲವಾರೆ ಮಾತನಾಡಿ, ಇಂದಿನ ದಿನಗಳಲ್ಲಿ ಸಾಮಾಜಿಕ ಸಾಮರಸ್ಯ ಬಹಳ ಅಗತ್ಯವಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಡಾ.ಜಿ.ಎಸ್.ಭೂರಾಳೆ ಮಾತನಾಡಿ, ಇಂದಿನ ಯುವ ಪೀಳಿಗೆಗೆ ಆಧ್ಯಾತ್ಮ, ಶರಣರ ವಚನಗಳ ಅವಶ್ಯಕತೆ ಇವೆ. ಜನರಿಗೆ ಸಮಾಧಾನ ಬೇಕಾದರೆ ಧರ್ಮದಿಂದ ಆಚರಣೆ ಧರ್ಮದ ಉಪದೇಶ ಪ್ರವಚನ ಕೇಳುತ್ತಾ ಇರಬೇಕು ಎಂದರು. ಬಸವರಾಜ ಬಂದ್ಗೆ ಆತಿಥಿಯಾಗಿ ಉಪಸ್ಥಿತರಿದ್ದರು. ನಾಗಣ್ಣಾ ಭೂಶೆಟ್ಟಿ, ಮಲ್ಲಿಕಾರ್ಜುನ ಶೀಲವಂತ ಸಂಗೀತ ಸೇವೆ ಸಲ್ಲಿಸಿದರು. ಸುರೇಶ ಅಡಕೆ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಶರಣಪ್ಪಾ ಮಾನಗಡೆ, ದಿಲೀಪ ರುಮ್ಮೆ, ನೀಲಕಂಠಪ್ಪಾ ಮುನ್ನಳ್ಳಿ, ಮಹೇಶ್ ಸುಂಠನೂರೆ, ಬಾಬು ಹೆಗ್ಗೆ, ಶಂಕರ ಮ್ಯಾಕೆ, ರಾಮು ಧನ್ನೂರೆ, ಬಸವಣಪ್ಪಾ ಧನ್ನೂರೆ, ಮಲ್ಲಿಕಾರ್ಜುನ ನಂದಿ, ಅರವಿಂದ್ ಖಿಸ್ಸೆ, ರೇವಣಸಿದ್ದಯ್ಯಾ ಸ್ವಾಮಿ, ಎ.ಜಿ.ಪಾಟೀಲ, ಶಂಕರ ಗಂಜೆ ಸೇರಿ ಅನೇಕರಿದ್ದರು.

ವಿಜಯ ಕರ್ನಾಟಕ
ಕಲಬುರಗಿ ,ಶನಿವಾರ,25 ಸೆಪ್ಟೆಂಬರ್ 2021

Scanned with OKEN Scanner

ಹಿತಾಸಕ್ತಿ ಬಿಟ್ಟು ಸೇವೆ ಮಾಡಿ

ಶ್ರೀ ರಾಜೇಶ್ವರ ಶಿವಾಚಾರ್ಯರ ನುಡಿ | ಅಭಿನವ ಶ್ರೀ ಜನ್ಮದಿನ, ವರ್ಧಂತ್ಯುತ್ಸವ

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಬುಧವಾರ 29 ಸೆಪ್ಟೆಂಬರ್ 2021
29 SEPTEMBER 2021

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಮಾಜದಲ್ಲಿ ಸಾಮರಸ್ಯ ಗಟ್ಟಿಯಾಗಬೇಕಿದೆ. ನಾನು ನನ್ನದು ಎನ್ನುವ ಹಿತಾಸಕ್ತಿ ಬದಿಗಿಟ್ಟು ಸಮಾಜಕ್ಕೆ ನನ್ನದಾದ ಸೇವೆ ನೀಡಬೇಕು, ಒಟ್ಟಾಗಿ ಜೀವನ ಸಾಗಿಸಬೇಕು ಎಂಬ ಭಾವ ಬರಬೇಕಿದೆ ಎಂದು ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ನುಡಿದರು.

ತ್ರಿಪುರಾಂತ ಸಂಸ್ಥಾನ ಗವಿಮಠದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 35ನೇ ಜನ್ಮ ದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಮಂಗಳವಾರ ಆಯೋಜಿಸಿದ್ದ ಸಾಮಾಜಿಕ ಸಾಮರಸ್ಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗವಿಮಠ ಧಾರ್ಮಿಕ, ಸಾಂಸ್ಕೃತಿಕ ಕೇಂದ್ರ, ತಪಸ್ವಿಗಳ ಪುಣ್ಯ ಭೂಮಿ ಎಂದರು.

ಅನುಭವ ಮಂಟಪ ಒಂದು ಭವ್ಯ ಕಟ್ಟಡವಾಗದೇ ಭಾವನಾತ್ಮಕ ಸಂಗಮದ ಕೇಂದ್ರವಾಗಬೇಕು. ವಿಶ್ವ ಮಾರುಕಟ್ಟೆಯ ಕೇಂದ್ರವಾಗಬೇಕು. ಸಂಸ್ಕೃತಿ, ಸಂಸ್ಕಾರಗಳ ಅನುಭವದ ಜೀವನಾಡಿ ಆಗಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಶಾಸಕ ಶರಣು ಸಲಗರ್ ಮಾತನಾಡಿ, ಗವಿ ಮಠದಲ್ಲಿ ದಾಸೋಹಕ್ಕಾಗಿ ಸುಸಜ್ಜಿತ ಕಟ್ಟಡ ನಿರ್ಮಿಸಲು ಹಾಗೂ ಅಗತ್ಯ ಸೌಲಭ್ಯ ಕಲ್ಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದರು.

ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಮಾತನಾಡಿ, ಮಠಕ್ಕೆ ಆಗಮಿಸಲು ಕೆರೆಯಲ್ಲಿ ಸೇತುವೆ ನಿರ್ಮಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಶಾಸಕನಾಗಿದ್ದಾಗ 50 ಲಕ್ಷ ರೂ. ವೆಚ್ಚದಲ್ಲಿ ಯಾತ್ರಿ ನಿವಾಸ ನಿರ್ಮಿಸಲಾಗಿತ್ತು. ಬಾಕಿ ಕೆಲಸಗಳನ್ನು ಶಾಸಕ ಶರಣು ಸಲಗರ್ ಶೀಘ್ರ ಮುಗಿಸಬೇಕು ಎಂದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 35ನೇ ಜನ್ಮ ದಿನ ಹಾಗೂ ಪಟ್ಟಾಧಿಕಾರ ವರ್ಧಂತ್ಯುತ್ಸವದಲ್ಲಿ ಶ್ರೀ ರಾಜೇಶ್ವರ ಶಿವಾಚಾರ್ಯರು ಮಾತನಾಡಿದರು. ಶಾಸಕ ಶರಣು ಸಲಗರ್, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಶಿವಶರಣ ಬಿರಾದಾರ, ಆನಂದ ಪಾಟೀಲ್, ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ ಇತರರಿದ್ದರು.

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಕಾಂಗ್ರೆಸ್ ಮುಖಂಡ ಶಿವಶರಣ ಬಿರಾದಾರ, ಜಿಪಂ ಮಾಜಿ ಸದಸ್ಯ ಆನಂದ ಪಾಟೀಲ್, ಶಬ್ಬೀರ್ ಪಾಶಾ ಮುಜಾವರ ಮಾತನಾಡಿದರು. ಕಾಂಗ್ರೆಸ್ ಮುಖಂಡರಾದ ಮಾಲಾ ನಾರಾಯಣರಾವ, ನಗರ ಸಭೆ ಪೌರಾಯುಕ್ತ ಶಿವಕುಮಾರ ಇತರರಿದ್ದರು.

ಬಸವಂತಪ್ಪ ಲವಾರೆ ಅವರು ದಾಸೋಹ ನಿಧಿಗೆ 1ಲಕ್ಷ 11 ಸಾವಿರದ 11ನೂರಾ 11 ರೂ. ನೀಡಿದ ಹಿನ್ನೆಲೆಯಲ್ಲಿ ದಂಪತಿಯನ್ನು ಸನ್ಮಾನಿಸಲಾಯಿತು. ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ತುಲಾಭಾರ ಜರುಗಿತು. ನವಲಿಂಗ ಪಾಟೀಲ್ ನಿರೂಪಣೆ ಮಾಡಿದರು.

ಜನ್ಮದಿನದಂದೇ ನನ್ನ ಪಟ್ಟಾಧಿಕಾರ ಜರುಗಿದೆ. ಸಮಾಜದಲ್ಲಿನ ದುಶ್ಚಟಗಳು ನನ್ನ ಜೋಳಿಗೆಗೆ ಹಾಕುವಂತೆ ವ್ಯಸನ ಮುಕ್ತ ಸಮಾಜಕ್ಕಾಗಿ ಜಾಗೃತಿಗಾಗಿ ಹಲವು ಸಾಮಾಜಿಕ ಕಾರ್ಯ ಭಕ್ತರ ಸಹಕಾರದೊಂದಿಗೆ ನಡೆಸಲಾಗುತ್ತಿದೆ. ಭಕ್ತರು ನನ್ನ ಜನ್ಮ ದಿನದ ನಿಮಿತ್ತ ಪ್ರತಿ ವರ್ಷ ಒಂದೊಂದು ಕಾರ್ಯಕ್ರಮ ರೂಪಿಸುತ್ತಿರುವುದು ಹೆಮ್ಮೆಯ ಸಂಗತಿ.

| ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಗವಿಮಠ

ಡಾ.ಅಭಿನವ ಘನಲಿಂಗ ಶ್ರೀ ನುಡಿ | ದೊಡ್ಡಪ್ಪ ಅಪ್ಪ ಕಾಲೇಜಿನಲ್ಲಿ ಬೀಳ್ಕೊಡುಗೆ

ಶಿಕ್ಷಣದ ಜತೆ ಆದರ್ಶ ಮೌಲ್ಯ ಬೆಳೆಸಿಕೊಳ್ಳಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಆದರ್ಶ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಓದುವುದು ಉದ್ಯೋಗಕ್ಕೆ ಸೀಮಿತವಾಗದೇ ಜ್ಞಾನ ಸಂಪಾದನೆಗೆ ಎನ್ನುವ ಭಾವನೆ ಬೆಳೆಯಬೇಕು ಎಂದು ಸಂಸ್ಥಾನ ಗವಿ ಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು. ನಗರದ ದೊಡ್ಡಪ್ಪ ಅಪ್ಪ ಬಿಸಿಎ ಮಹಾವಿದ್ಯಾಲಯದಲ್ಲಿ ಬಿಸಿಎ 6ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿ, ಸಾಧಿಸುವ ಛಲ, ಕಠಿಣ ಪರಿಶ್ರಮ ಮತ್ತು ಪ್ರಾಮಾಣಿಕತೆ, ಸಚ್ಚಾರಿತ್ರ್ಯ ಬೆಳೆಸಿಕೊಂಡಾಗ ಜೀವನದಲ್ಲಿ ಯಶಸ್ವಿಯಾಗಲು ಸಾಧ್ಯ ಎಂದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ದೊಡ್ಡಪ್ಪ ಅಪ್ಪ ಬಿಸಿಎ ಮಹಾವಿದ್ಯಾಲಯದಲ್ಲಿ ಬಿಸಿಎ 6ನೇ ಸೆಮಿಸ್ಟರ್ ಆಯೋಜಿಸಿದ್ದ ಬೀಳ್ಕೊಡುಗೆ ಕಾರ್ಯಕ್ರಮವನ್ನು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಡಾ.ಬಲರಾಮ ಹುಡೆ, ಸುಧಾಕರ ಬಿರಾದಾರ, ರಾಚಯ್ಯ ಮಠಪತಿ ಉಪಸ್ಥಿತರಿದ್ದರು.

ಪ್ರಾಚಾರ್ಯ ಡಾ.ಬಲರಾಮ ಹುಡೆ ಮಾತನಾಡಿ, ಪ್ರಮಾಣಪತ್ರಕ್ಕಾಗಿ ಮಾತ್ರ ಪದವಿ ಪಡೆಯದೆ ಪ್ರಾಯೋಗಿಕ ಜ್ಞಾನ ವೃದ್ಧಿಸಿಕೊಂಡು ಜೀವನದಲ್ಲಿ ಯಶಸ್ವಿಯಾಗಲು ಪ್ರಯತ್ನಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ ಬಿಸಿಎ ಕಾಲೇಜು ಪ್ರಾಚಾರ್ಯ ಸುಧಾಕರ ಬಿರಾದಾರ, ದೊಡ್ಡಪ್ಪ ಅಪ್ಪ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ರಾಚಯ್ಯ ಮಠಪತಿ ಮಾತನಾಡಿದರು. ಲೋಕೇಶ ಮನ್ನಾಳ್ಳಿ, ಅಂಜನಾ ಖಂಡಾಳೆ, ಶಾಂತಕುಮಾರ ಭೂರೆ, ಸುನೀಲರೆಡ್ಡಿ ಬಂಡೆ, ಮಹೇಶ ಅಷ್ಟಗೆ, ಶಿವಕುಮಾರ ಬೈನೂರ ಉಪಸ್ಥಿತರಿದ್ದರು. ಚಾಮುಂಡೇಶ್ವರಿ ಸ್ವಾಗತಿಸಿದರು. ಭಾಗ್ಯಶ್ರೀ ವಂದಿಸಿದರು. ಶೀತಲ್ ಹಾಗೂ ಜುನೈದ ಪಟೇಲ್ ನಿರೂಪಣೆ ಮಾಡಿದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಶನಿವಾರ 2 ಅಕ್ಟೋಬರ್ 2021
2 OCTOBER 2021

Scanned with OKEN Scanner

ಅಭಿಯಂತರ ಕೊಡುಗೆ ಅಪಾರ



ಬಸವಕಲ್ಯಾಣದಲ್ಲಿ ಹಮ್ಮಿಕೊಂಡ ಇಂಜಿನಿಯರ್ ದಿನ ಕಾರ್ಯಕ್ರಮವನ್ನು ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಶಿವಕುಮಾರ, ಅಲ್ತಾಫ್, ಬಸವರಾಜ ಮುಸ್ತಾಪೂರೆ, ನಾಗರಾಜ ಪಾಟೀಲ್, ಉಮೇಶ ಶೀಲವಂತ, ಶ್ರೀಶೈಲ ವಾತಡೆ ಇತರರಿದ್ದರು.

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ದೇಶದ ಪ್ರಗತಿಗೆ ಅಮೂಲ್ಯ ಕೊಡುಗೆ ನೀಡಿರುವ ಶ್ರೇಷ್ಠ ಇಂಜಿನಿಯರ್ ವಿಶ್ವೇಶ್ವರಯ್ಯನವರು. ಕನ್ನಂಬಾಡಿ ಅಣೆಕಟ್ಟು ಕಟ್ಟುವ ಮೂಲಕ ನೀರಿನ ದಾಹ ನೀಗಿಸಿದ ಮಹಾ ಚೇತನ ಎಂದು ಸಂಸ್ಥಾನ ಗವಿ ಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬಣ್ಣಿಸಿದರು.

ನಗರದ ಶುಭಮಂಗಲ ಕಲ್ಯಾಣ ಮಂಟಪದಲ್ಲಿ ಬುಧವಾರ ಅಸೋಸಿಯೇಷನ್ ಆಫ್ ಸಿವಿಲ್ ಇಂಜಿನಿಯರ್ಸ್(ಬಿಎಸಿಇ)ನಿಂದ ಸರ್.ಎಂ. ವಿಶ್ವೇಶ್ವರಯ್ಯನವರ ಜನ್ಮ ದಿನ ನಿಮಿತ್ತ ಆಯೋಜಿಸಿದ್ದ 54ನೇ ಇಂಜಿನಿಯರ್ಸ್ ಡೇ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ, ರಾಷ್ಟ್ರದ ಅಭಿವೃದ್ಧಿಗೆ ಇಂಜಿನಿಯರ್‌ಗಳ ಕೊಡುಗೆ ಅಪಾರ ಎಂದರು. ನಗರಸಭೆ ಪೌರಾಯುಕ್ತ ಶಿವಕುಮಾರ ಮಾತನಾಡಿದರು. ಸಂಘದ ಅಧ್ಯಕ್ಷ ಬಸವರಾಜ ಮುಸ್ತಾಪುರೆ ಅಧ್ಯಕ್ಷತೆ ವಹಿಸಿದ್ದರು. ಎಇ ಅಲ್ತಾಫ್, ಬಿಎಸಿಇ ಪ್ರಧಾನ ಕಾರ್ಯದರ್ಶಿ ಉಮೇಶ ಶೀಲವಂತ, ಖಜಾಂಚಿ ಶ್ರೀಶೈಲ ವಾತಡೆ, ಸದಸ್ಯರಾದ ನಾರಾಯಣ ಬುನ್ನಾ, ವಸಂತ ನಾಯಕ, ಸುಧಾಕರ ಬಿರಾದಾರ, ಧೊಂಡೇರಾವ ಕುಲ್ಕರ್ಣಿ, ಮನೋಜಗಿರಿ, ಚನ್ನಬಸವ ಪಾಟೀಲ್, ಮಹಾಂತೇಶ ಉಳ್ಳಿ, ಸಾಯಿ ಸ್ಟಿಲ್‌ನ ಮಾಲೀಕ ರತಿಕಾಂತ ಮುರುಡ ಉಪಸ್ಥಿತರಿದ್ದರು. ಉಪಾಧ್ಯಕ್ಷ ನಾಗರಾಜ ಪಾಟೀಲ್ ಸ್ವಾಗತಿಸಿದರು. ಸದಸ್ಯ ರಮಾಕಾಂತ ದುಬೆ ವಂದಿಸಿದರು. ನವಲಿಂಗ ಪಾಟೀಲ್ ನಿರೂಪಣೆ ಮಾಡಿದರು. ಎಲ್ಲ ಇಂಜಿನಿಯರ್‌ಗಳನ್ನು ಹಾಗೂ ಕಟ್ಟಡ ಕಾರ್ಮಿಕರನ್ನು ಮುಕ್ತಾ ಟ್ರೇಡರ್ಸ್‌ನಿಂದ ಸನ್ಮಾನಿಸಲಾಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಗುರುವಾರ 16 ಸೆಪ್ಟೆಂಬರ್ 2021
16 SEPTEMBER 2021

'18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರು ಲಸಿಕೆ ಪಡೆಯಿರಿ'

ಸಂ.ಕೆ.ಸಮಾಚಾರ ಬಸವಕಲ್ಯಾಣ

ಮಹಾಮಾರಿ ಕೊರೊನಾ ನಿಯಂತ್ರಣಕ್ಕಾಗಿ ಜಾರಿಗೆ ತರಲಾದ ಮಾರ್ಗಸೂಚಿ ಪ್ರತಿಯೊಬ್ಬರು ಪಾಲಿಸಬೇಕು. ಜತೆಗೆ 18 ವರ್ಷ ದಾಟಿದ ಪ್ರತಿಯೊಬ್ಬರು ಕೊರೊನಾ ಲಸಿಕೆ ಪಡೆಯಬೇಕು ಎಂದು ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತಾಲ್ಲೂಕಿನ ಕೋಟಮಾಳದಲ್ಲಿ ಅಭಿನವ ಶ್ರೀಗಳ ಜನ್ಮದಿನ ನಿಮಿತ್ತ ಆಯೋಜಿಸಿದ ಕೊರೊನಾ ಲಸಿಕೆ-ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿ ಸೋಂಕು ತಗುಲಿದರೂ ಸಹ ರೋಗದ ತೀವ್ರತೆ ತಡೆಯಲು ಲಸಿಕೆ ಸಹಕಾರಿಯಾಗುತ್ತದೆ. ಈ ಕುರಿತು ಜಾಗೃತಿ ಮೂಡಿಸುವದು ಆವಶ್ಯಕವಾಗಿದೆ ಎಂದರು. ದುಶ್ಚಟಗಳ ನಿರ್ಮೂಲನೆಗಾಗಿ ಅಭಿನವ ಜೋಳಿಗೆ ಮೂಲಕ ಯುವಕರ ದುಶ್ಚಟಗಳನ್ನು ಬಿಡಿಸುವ ಪ್ರಯತ್ನ ಮಾಡುವ ಜತೆಗೆ, ಸ್ವಚ್ಛತಾ ಅಭಿಯಾನ, ಸಸಿ ನೆಡುವ ಕಾರ್ಯಕ್ರಮ ಸೇರಿದಂತೆ ವಿವಿಧ ಕಾರ್ಯಚಟುವಟಿಕೆಗಳನ್ನು ನಡೆಸಲಾಗಿದ್ದು, ಈ ವರ್ಷದ ಜನ್ಮದಿನದ ನಿಮಿತ್ತ ಕೊರೊನಾ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.



ವಕಲ್ಯಾಣ ತಾಲ್ಲೂಕಿನ ಕೋಟಮಾಳದಲ್ಲಿ ಆಯೋಜಿಸಿದ ಕೊರೊನಾ ಲಸಿಕೆ ಜಾಗೃತಿ ಕಾರ್ಯಕ್ರಮದಲ್ಲಿ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು

ಸಂಯುಕ್ತ ಕರ್ನಾಟಕ
27 ಸೆಪ್ಟೆಂಬರ್ 2021
ಸೋಮವಾರ
ಕಲಬುರಗಿ

ರುದ್ರಮುನಿ ಗದ್ದುಗೆಗೆ ಸೂರ್ಯ ರಶ್ಮಿ ಸ್ಪರ್ಶ



ಬಸವಕಲ್ಯಾಣದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಮಠದಲ್ಲಿ ಗದ್ದುಗೆಗೆ ಸೂರ್ಯ ರಶ್ಮಿ ಸ್ಪರ್ಶದ ಅಪರೂಪದ ಕ್ಷಣ.

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ನಗರದ ಸಂಸ್ಥಾನ ಗವಿಮಠದಲ್ಲಿ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಗದ್ದುಗೆಯ ಮೂರ್ತಿ ಮೇಲೆ ಸೂರ್ಯನ ಕಿರಣಗಳು ಬೀಳುವ ದೃಶ್ಯ ಅಚ್ಚರಿ ಮೂಡಿಸಿತು.

ಸಂಸ್ಥಾನ ಗವಿ ಮಠದ ಮಂಟಪದ ಒಳ ಭಾಗದಲ್ಲಿ ಸುಮಾರು 50 ಅಡಿಯಷ್ಟಿರುವ ಗವಿಯಲ್ಲಿ ಗದ್ದುಗೆ ಮತ್ತು ಮೂರ್ತಿ ಇದ್ದು, ಇದರ ಮೇಲೆ ಪ್ರತಿ ವರ್ಷ ಎರಡು ಸಲ ಸೂರ್ಯ ಕಿರಣ ಬೀಳುತ್ತವೆ. ಈ ಅಪರೂಪದ ದೃಶ್ಯ ನೋಡಲು ಕೆಲ ಭಕ್ತರು ಎರಡು ಮೂರು ದಿನ ಬೆಳಿಗ್ಗೆ ಬರುತ್ತಾರೆ ಎಂದು ಸಂಸ್ಥಾನ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದ್ದಾರೆ.

ಗುರುವಾರ ಬೆಳಗ್ಗೆ ಈ ಅಪರೂಪದ ದೃಶ್ಯವನ್ನು ಕವಿ ಮತ್ತು ಛಾಯಾಗ್ರಾಹಕ ವೀರಶೆಟ್ಟಿ ಪಾಟೀಲ್ ತಮ್ಮ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾರೆ. ಹೊನಲು ಬೆಳಕಿನಾರತಿಯ ಅಪರೂಪದ ದೃಶ್ಯ ವರ್ಷದಲ್ಲಿ ನವರಾತ್ರಿ ಮತ್ತು ಶಿವರಾತ್ರಿ ವೇಳೆ ಮಾತ್ರ ಕಾಣಬಹುದು ಎಂದು ತಿಳಿಸಿದ್ದಾರೆ.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶುಕ್ರವಾರ 8 ಆಕ್ಟೋಬರ್ 2021
8 OCTOBER 2021

Scanned with OKEN Scanner

ದುಶ್ಚಟಗಳಿಗೆ ಆಕರ್ಷಿತರಾಗಬೇಡಿ: ಅಭಿನವ ಶ್ರೀ

ಚ

ಸಂ.ಕ.ಸಮಾಚಾರ ಬಸವಕಲ್ಯಾಣ ಉತ್ತಮ ಆರೋಗ್ಯದಿಂದ ಮಾತ್ರ ಉತ್ತಮ ಜೀವನ ನಡೆಸಲು ಸಾಧ್ಯವಿದ್ದು, ಯುವಕರು ಯಾವುದೇ ದುಶ್ಚಟಗಳಿಗೆ ಆಕರ್ಷಿತರಾಗದೇ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್, ಎಸ್‌ಎಸ್‌ಕೆ ಬಸವೇಶ್ವರ ಕಲಾ, ವಿಜ್ಞಾನ, ವಾಣಿಜ್ಯ ಸ್ನಾತಕ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯದ ಸಹಯೋಗದೊಂದಿಗೆ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾದ ಗಾಂಧಿ ಜಯಂತಿ ಸಂಭ್ರಮಾಚರಣೆಯ ನಿಮಿತ್ತ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಗಾಂಧಿ ಸ್ಮರಣೆ ಮತ್ತು ದುಶ್ಚಟಗಳ ವಿರುದ್ಧ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿ ದುಶ್ಚಟ ಮುಕ್ತವಾದ ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕಾಗಿ ಎಲ್ಲರೂ ಕೈಜೋಡಿಸಬೇಕು ಎಂದರು. ಸ್ತ್ರೀ ರೋಗ ತಜ್ಞೆ ಡಾ.ಸುಶೀಲಾ ಹೊಳಕುಂದೆ ಮಾತನಾಡಿ ಮದ್ಯಪಾನ, ಧೂಮಪಾನ, ಮತ್ತು ಇತರೆ ದುಶ್ಚಟಗಳಿಂದ ಆರೋಗ್ಯಕ್ಕೆ ಹಾನಿಕರವಾಗಿದ್ದು, ಇವುಗಳ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಲು ಇಂಥ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ ಎಂದರು. ಉದ್ಘಾಟನೆ ನೆರವೇರಿಸಿದ ಹುಲಸೂರು ತಹಶೀಲ್ದಾರ ಶಿವಾನಂದ ಮೇತ್ರೆ, ಆಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಚಾರ್ಯ ಡಾ. ಬಿ.ಜಿ.ಎವಳೆ, ಎಸ್‌ಕೆಡಿಆರ್‌ಡಿಪಿ ಜಿಲ್ಲಾ ನಿರ್ದೇಶಕ ಉಮರಬ್ಬ ಸಹ ಮಾತನಾಡಿದರು. ಸಿಪಿಐ ಗೋಪಾಲ ನಾಯಕ, ಡಾ. ಭೀಮಾಶಂಕರ ಬಿರಾದಾರ, ನ್ಯಾಯವಾದಿ ಪಂಡಿತ ನಾಗರಾಳೆ, ತಾಲ್ಲೂಕು ಯೋಜನಾಧಿಕಾರಿ ಸೋಮಲಿಂಗ.ಕೆ ಸೇರಿದಂತೆ ಇತರರಿದ್ದರು.



ಬಸವಕಲ್ಯಾಣ : ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್, ಎಸ್‌ಎಸ್‌ಕೆಬಿ ಕಾಲೇಜು ಸಹಯೋಗದೊಂದಿಗೆ ನಡೆದ ಗಾಂಧಿ ಸ್ಮರಣೆ ಮತ್ತು ದುಶ್ಚಟಗಳ ವಿರುದ್ಧ ಜಾಗೃತಿ ಕಾರ್ಯಕ್ರಮದಲ್ಲಿ ಸ್ತ್ರೀ ರೋಗ ತಜ್ಞೆ ಡಾ.ಸುಶಿಲಾ ಹೊಳಕುಂದೆ ಮಾತನಾಡಿದರು.

ಸಂಯುಕ್ತ ಕರ್ನಾಟಕ 06 ಅಕ್ಟೋಬರ್ 2021 ಬುಧವಾರ ಕಲಬುರಗಿ

ನಿವೃತ್ತ ಡಿಎಚ್‌ಓ ಸುಶೀಲಾ ಹೊಳಕುಂದೆ ಅಭಿಪ್ರಾಯ

ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಜನಜಾಗೃತಿ ಅಗತ್ಯ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಯುವ ಜನತೆ ದುಶ್ಚಟಗಳ ದಾಸರಾಗುತ್ತಿರುವ ಕಾರಣ ಸ್ವಸ್ಥ ಸಮಾಜಕ್ಕಾಗಿ ಜನಜಾಗೃತಿಯ ಕಾರ್ಯ ತೀವ್ರಗತಿಯಲ್ಲಿ ನಡೆಯಬೇಕಾಗಿದೆ' ಎಂದು ನಿವೃತ್ತ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸುಶೀಲಾ ಹೊಳಕುಂದೆ ಹೇಳಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ಸೋಮವಾರ ನಗರದ ಎಸ್.ಎಸ್.ಕೆ.ಬಸವೇಶ್ವರ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ 'ದುಶ್ಚಟಮುಕ್ತ ಸಮಾಜಕ್ಕಾಗಿ ಗಾಂಧಿ ಸ್ಮರಣೆ' ಗೋಷ್ಠಿಯಲ್ಲಿ ಮಾತನಾಡಿದರು.

'ಉತ್ತರ ಕರ್ನಾಟಕದಲ್ಲಿ ಧೂಮಪಾನ, ಮದ್ಯಪಾನ ಹಾಗೂ ತಂಬಾಕು ಸೇವನೆ ಅತಿಯಾಗಿದೆ. ಇದರಿಂದ ಪ್ರಾಣಹಾನಿ ಆಗುತ್ತಿದೆ. ಮನುಷ್ಯನ ದೇಹದ ಮೇಲೆ ನಾನಾ ರೀತಿಯ ದುಷ್ಪರಿಣಾಮಗಳು ಆಗುತ್ತಿರುವುದು ಕಂಡು ಬಂದಿದೆ. ದುಶ್ಚಟಗಳನ್ನು ಬಿಟ್ಟರೆ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಬಹುದು ಎಂಬುದನ್ನು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು' ಎಂದರು.

ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಶಿವಾನಂದ ಮೇತ್ರೆ ಮಾತನಾಡಿ, 'ಶ್ರೀಕ್ಷೇತ್ರ ಧರ್ಮಸ್ಥಳ ಸಂಸ್ಥೆಯು ಸಮಾಜ ಜಾಗೃತಿಯ ಕಾರ್ಯದಲ್ಲಿ ಮುಂದಿದೆ. ನಾನಾ ಯೋಜನೆಗಳನ್ನು ಜಾರಿಗೊಳಿಸಿ ಆರ್ಥಿಕವಾಗಿ ಸಬಲರಾಗಲು ಸಹಕಾರ ನೀಡುತ್ತಿದೆ' ಎಂದು ಶ್ಲಾಘಿಸಿದರು.

ನೇತೃತ್ವ ವಹಿಸಿದ್ದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಗಾಂಧೀಜಿಯವರ ರಾಮರಾಜ್ಯದ ಕನಸಿನೊಂದಿಗೆ ಗ್ರಾಮಸ್ವರಾಜ್ಯದ ಕನಸು ನನಸು ಮಾಡುವಲ್ಲಿ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರ ಪಾತ್ರ ಬಹಳಷ್ಟಿದೆ. ಸಂಘ ಸಂಸ್ಥೆಯವರು ರಚನಾತ್ಮಕ ಕಾರ್ಯದಲ್ಲಿ ತೊಡಗಿದರೆ ಮಾತ್ರ ಉತ್ತಮ ಸಮಾಜ ನಿರ್ಮಾಣದ ಕನಸು ನನಸಾಗುತ್ತದೆ' ಎಂದರು.

ಸಂಸ್ಥೆಯ ಜಿಲ್ಲಾ ನಿರ್ದೇಶಕ ಉಮರಬ್ಬ ಹಾಗೂ ತಾಲ್ಲೂಕು ಯೋಜನಾಧಿಕಾರಿ ಕೆ.ಸೋಮಲಿಂಗ ಮಾತನಾಡಿ ಶ್ರೀಕ್ಷೇತ್ರ ಧರ್ಮಸ್ಥಳ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ವಿವರಿಸಿದರು. ಪ್ರಾಂಶುಪಾಲ ಬಿ.ಜಿ. ಎವಳೆ, ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಗುರುನಾಥ ಗಡ್ಡೆ, ಉಪನ್ಯಾಸಕ ಭೀಮಾಶಂಕರ ಬಿರಾದಾರ, ವಕೀಲರ ಸಂಘದ ಮಾಜಿ ಅಧ್ಯಕ್ಷ ಪಂಡಿತ ನಾಗರಾಳೆ, ಸಿಪಿಐ ಗೋಪಾಲ ನಾಯಕ ಪಾಲ್ಗೊಂಡಿದ್ದರು.

ಇದಕ್ಕೂ ಮೊದಲು ನಗರದ ಮುಖ್ಯ ರಸ್ತೆಯಲ್ಲಿ ದುಶ್ಚಟಗಳ ದುಷ್ಪರಿಣಾಮ ಕುರಿತ ಜಾಗೃತಿಗಾಗಿ ಮೆರವಣಿಗೆ ನಡೆಯಿತು. ಕಾಲೇಜಿನ ಸಿಬ್ಬಂದಿ, ಸಂಸ್ಥೆಯ ಮೇಲ್ವಿಚಾರಕರು, ಸ್ವಸಹಾಯ ಸಂಘಗಳ ಸದಸ್ಯರು, ಸೇವಾ ಪ್ರತಿನಿಧಿಗಳು ಇದ್ದರು.



ಬಸವಕಲ್ಯಾಣದಲ್ಲಿ ಸೋಮವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆಯಿಂದ ನಡೆದ ದುಶ್ಚಟಮುಕ್ತ ಸಮಾಜಕ್ಕಾಗಿ ಗಾಂಧೀಜಿ ಸ್ಮರಣೆ ಕಾರ್ಯಕ್ರಮದಲ್ಲಿ ಸಂಸ್ಥೆ ಜಿಲ್ಲಾ ನಿರ್ದೇಶಕ ಉಮರಬ್ಬ ದೀಪ ಬೆಳಗಿಸಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಿವಾನಂದ ಮೇತ್ರೆ, ಕೆ.ಸೋಮಲಿಂಗ ಪಾಲ್ಗೊಂಡಿದ್ದರು

ಪ್ರಜಾವಾಣಿ ಬುಧವಾರ • ಅಕ್ಟೋಬರ್ 6, 2021

Scanned with OKEN Scanner

ವಿಜಯ ಕರ್ನಾಟಕ
ನಮ್ಮ ಬೀದರ್ ಕಲಬುರಗಿ,ಶುಕ್ರವಾರ,8 ಅಕ್ಟೋಬರ್ 2021

ಧರ್ಮಪಾಲನೆಯಿಂದ ನೆಮ್ಮದಿ ಬದುಕು



ಬಸವಕಲ್ಯಾಣ ನಗರದ ಐತಿಹಾಸಿಕ ಶ್ರೀಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿ ಮಠದಲ್ಲಿ ನಡೆದ ಶಿವಾನುಭವ ಚಿಂತನ ಮಾಸಿಕ ಅಮವಾಸ್ಯೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ವಕೀಲರ ಸಂಘದ ತಾಲೂಕು ಅಧ್ಯಕ್ಷ ಸಂಜು ಕುಮಾರ ರೆಡ್ಡಿ, ರೇವಣಸಿದ್ದಯ್ಯ ಮಠಪತಿ ಇದ್ದರು.

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಧರ್ಮ ಆಚರಣೆ ಹೊಂದಿದ ಮನುಷ್ಯನೇ ಒಂದು ವೇಳೆ ಧರ್ಮಾಚರಣೆಯನ್ನು ಮಾಡದೇ ಹೋದರೆ ಅವನು ಪಶುಗಳಿಗೆ ಸಮಾನನಾಗುತ್ತಾನೆ ಎಂದು ಇಲ್ಲಿಯ ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಐತಿಹಾಸಿಕ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿ ಮಠದಲ್ಲಿ ನಡೆದ'ಶಿವಾನುಭವ ಚಿಂತನ'ಮಾಸಿಕ ಅಮವಾಸ್ಯೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶಿರ್ವಚನ ನೀಡಿದ ಶ್ರೀಗಳು, ಧರ್ಮೇಣ ಹೀನ ಪಶುಭಿ ಸಮಾನ ಧರ್ಮಾಚರಣೆಯನ್ನು ಮಾಡದಿರುವ ಮನುಷ್ಯನು ಆಕಾರದಲ್ಲಿ ಮನುಷ್ಯನಂತೆ ತೋರುತ್ತಿದ್ದರು ಆತನನ್ನು ಪಶುವೆಂದೇ ಭಾವಿಸಬೇಕು ಅವನ ಜತೆಗೆ ಹೋಗುವಂತಹದ್ದು.ಅವನು ಸಂಪಾದಿಸಿದ ಧರ್ಮವೊಂದೆ ಎಂದು ತಿಳಿಸಿದರು.ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ವಕೀಲರ ಸಂಘದ ತಾಲೂಕು ಅಧ್ಯಕ್ಷ ಸಂಜುಕುಮಾರ ರೆಡ್ಡಿ ಮಾತನಾಡಿ, ಗವಿ ಮಠದ ಶ್ರೀಗಳು ಘಟದಿಂದ ಮಠಮಾಡಿ ತೋರಿಸಿದ್ದಾರೆ ಶ್ರೀಮಠ ನಮಗೆ ಗೌರವಿಸಿ ಆಶಿರ್ವದಿಸಿದೆ ನಾನು ಯಾವತ್ತು ಶ್ರೀಮಠದ ಶಿಷ್ಯನಾಗಿರುತ್ತೇನೆ.ಶ್ರೀಗಳು ಯಾವತ್ತು ನನ್ನನ್ನು ತಮ್ಮ ಭಕ್ತನೆಂದು ಆತ್ಮಿಯವಾಗಿ ಕಾಣುತ್ತಾರೆ ತಮ್ಮ ಶ್ರೀಮಠಕ್ಕೆ ಸೇವೆ ಮಾಡಲು ನಾನು ಸದಾಸಿದ್ದ ಎಂದರು.

ಅಧ್ಯಕ್ಷತೆವಹಿಸಿದ್ದ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆಯ ಸದಸ್ಯ ರೇವಣಸಿದ್ದಯ್ಯ ಮಠಪತಿ ಮಾತನಾಡಿ, ಪೂಜ್ಯರು ಪ್ರತಿ ತಿಂಗಳು ನಡೆಸುತ್ತಿರುವ ಶಿವಾನುಭವ ಚಿಂತನ ಹಾಗೂ ಸದ್ಭಾವ ಚಿಂತನ ಕಾರ್ಯಕ್ರಮ ಸದಾ ನಮಗೆ ಜ್ಞಾನದ ಅನುಭಾವ ನೀಡುತ್ತಿರುವುದು ನಮ್ಮ ಮನಸ್ಸಿಗೆ ನೆಮ್ಮದಿ ಶಾಂತಿ ತಂದಿದೆ ಎಂದು ಹರ್ಷ ವ್ಯಕ್ತ ಪಡಿಸಿದರು.

ಈ ವೇಳೆ ಸಂದ್ಬೋದನಾ ಸಂಸ್ಥೆಯ ಅಧ್ಯಕ್ಷ ಬಸವಂತಪ್ಪಾ ಲವಾರೆ, ವೀರಣ್ಣಾ ಶೀಲವಂತ, ಎ.ಜಿ ಪಾಟೀಲ್, ಬಾಬುರಾವ ಚಳಕಾಪುರೆ, ರುದ್ರಮುನಿ ಹಿರೇಮಠ, ಸಾಗರ ಮಾಲಗರ, ಸವಿತ್ರಾ ರಮೇಶ ಸ್ವಾಮಿ, ಸುಭದ್ರಾತಾಯಿ, ಶಕುಂತಲಾ, ಚಿತ್ರಾ ಎಕಲೂರ, ಶಿವಕುಮಾರ ಬಿರಾದಾರ,ಶ್ರೀಶೈಲ್ ಅಫಜಲಪೂರ, ಛಾಯಾ ಚಿತ್ರ ಕಲಾವಿದ ವೀರಶೆಟ್ಟಿ ಪಾಟೀಲ್, ಶಿವಕುಮಾರ ಮುನ್ನೋಳೆ ಸೇರಿ ಅನೇಕರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಭಾನುವಾರ 24 ಅಕ್ಟೋಬರ್ 2021
24 OCTOBER 2021

ಬಡಮಂಗಳಿಗೆ ಕಾಣಬೇಕು ಶಿವಾನುಭವ ಚಿಂತನ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಕೆಲಸ ಯಾವುದೇ ಇದ್ದರೂ ಶ್ರದ್ಧೆ-ಭಕ್ತಿಯಿಂದ ಮಾಡಬೇಕು. ದುಡಿಮೆಯಲ್ಲಿ ಭಗವಂತನನ್ನು ಕಾಣಬೇಕು ಎಂದು ಗವಿಮಠ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

» ಶೇಖರ ಭೂರಾಳೆ ಅವರ ನಿವಾಸದಲ್ಲಿ ಆಯೋಜಿಸಿದ್ದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಕಾರ್ಯಕ್ರಮ

ಹುಲಸೂರು ತಹಸೀಲ್ದಾರ್ ಶಿವಾನಂದ ಮೇತ್ರೆ ಮಾತನಾಡಿ, ಜೀವನಲ್ಲಿ ಶಾಂತಿ, ನೆಮ್ಮದಿ ಅತಿ ಮುಖ್ಯವಾಗಿದೆ. ಧಾರ್ಮಿಕ ಕಾರ್ಯಕ್ರಮಗಳು, ಸತ್ಸಂಗ, ಚಿಂತನ ಗೋಷ್ಠಿಗಳು ನೆಮ್ಮದಿಯ ಜೀವನಕ್ಕೆ ಸಹಕಾರಿ ಆಗುತ್ತವೆ ಎಂದರು.



ಬಸವಕಲ್ಯಾಣ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಕಾರ್ಯಕ್ರಮವನ್ನು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ತಹಸೀಲ್ದಾರ್ ಶಿವಾನಂದ ಮೇತ್ರೆ, ಸುಲ್ತಾನ್ ನಂದಿ ಇತರರಿದ್ದರು

ಫೋಟೊ ಕ್ಯಾಪ್ಷನ್

ಅಧ್ಯಕ್ಷತೆ ವಹಿಸಿದ್ದ ಶೇಖರ ಭೂರಾಳೆ ಮಹೇಶ್ ನುಂಕನೂರ, ಬಸವರಾಜ ಧನೂರ, ಮಾತನಾಡಿದರು. ಶ್ರೀಮದ್ವೀರಶೈವ ಸದ್ಬೋಧನಾ ಶರಣಯ್ಯ ಸ್ವಾಮಿ, ರೇವಣಸಿದ್ದಯ್ಯ ಮಠಪತಿ, ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಅನ್ನಪೂರ್ಣ ಭೂರಾಳೆ, ಜಗದೇವಿ ಪೂಜಾರಿ, ಶಶಿಕಾಂತ ಖೋನೆ, ಮಲ್ಲಿಕಾರ್ಜುನ ನಂದಿ, ಗುರುನಾಥ ನುಶಿಲಬಾಯಿ ಧನೂರ, ಸರಸ್ವತಿ ಕೋಳಿಪ್ಪೆ ಬಸವರಾಜ ಬಂದ್ಗೆ, ಶಾಂತವೀರ ಸ್ವಾಮಿ, ಮಠಪತಿ ಇತರರಿದ್ದರು. ಸುರೇಶ ಅಡಗೆ ನಿರೂಪಿಸಿದರು.

Scanned with OKEN Scanner

ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಗಾಂಧಿ ಸ್ಮರಣೆ ಮತ್ತು ದುಶ್ಚಟಗಳ ವಿರುದ್ಧ ಜಾಗೃತಿ

ದುಶ್ಚಟ ಮುಕ್ತ ಸಮಾಜಕ್ಕೆ ಕೈಜೋಡಿಸಿ

ವಿಕ ಸುದ್ದಿಲೋಕ ಬಸವಕಲ್ಯಾಣ

ಮನುಷ್ಯನ ಜೀವನಕ್ಕೆ ಧೂಮಪಾನ ಹಾಗೂ ಮದ್ಯಪಾನ ಹಾನಿಕರವಾಗಿದೆ. ಇಂತಹ ದುಶ್ಚಟಗಳಿಂದ ದೂರ ಉಳಿಯುವ ಮೂಲಕ ಸದೃಢವಾಗಿ ಬಲಿಷ್ಠಗೊಳ್ಳಬೇಕು ಎಂದು ಖ್ಯಾತ ವೈದ್ಯೆ ಡಾ. ಸುಶೀಲಾ ಹೋಳಕುಂದೆ ಹೇಳಿದರು.

ನಗರದ ಎಸ್.ಎಸ್.ಕೆ. ಬಸವೇಶ್ವರ ಕಾಲೇಜ್ ಸಭಾಂಗಣದಲ್ಲಿ ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರ 153 ನೇ ಜಯಂತ್ಯುತ್ಸವ ಸಂಭ್ರಮಾಚರಣೆ ಪ್ರಯುಕ್ತ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಹಮ್ಮಿಕೊಂಡ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಗಾಂಧಿ ಸ್ಮರಣೆ ಮತ್ತು ದುಶ್ಚಟಗಳ ವಿರುದ್ಧ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.



ಬಸವಕಲ್ಯಾಣ ನಗರದ ಎಸ್.ಎಸ್.ಕೆ ಬಸವೇಶ್ವರ ಕಾಲೇಜ್ ಸಭಾಂಗಣದಲ್ಲಿ ನಡೆದ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಗಾಂಧಿ ಸ್ಮರಣೆ ಮತ್ತು ದುಶ್ಚಟಗಳ ವಿರುದ್ಧ ಜಾಗೃತಿ ಕಾರ್ಯಕ್ರಮದಲ್ಲಿ ಡಾ. ಸುಶೀಲಾ ಹೋಳಕುಂದೆ ಮಾತನಾಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿಯ ಜಿಲ್ಲಾ ನಿರ್ದೇಶಕ ಉಮರಬ್ಬ ,ಹುಲಸೂರು ತಹಸೀಲ್ದಾರ ಶಿವಾನಂದ ಮೇತ್ರೆ ಮಾತನಾಡಿದರು.

ಈ ವೇಳೆ ಕಾಲೇಜಿನ ಪ್ರಾಂಶುಪಾಲ ಬಿ.ಜಿ.ಎವಲೆ, ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಗುರುನಾಥ ಗಡ್ಡೆ ಉಪನ್ಯಾಸಕ ಡಾ. ಭೀಮಾಶಂಕರ ಬಿರಾದಾರ, ನ್ಯಾಯವಾದಿ ಪಂಡಿತ ನಾಗರಾಳೆ, ಸಿಪಿಐ ಗೋಪಾಲ ನಾಯಕ, ತಾಲೂಕು ಯೋಜನಾಧಿಕಾರಿ ಸೋಮಲಿಂಗ.ಕೆ, ಜನ ಜಾಗೃತಿ ವೇದಿಕೆ ಯೋಜನಾಧಿಕಾರಿಗಳು, ತಾಲೂಕಿನ ಎಲ್ಲಾ ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು, ಸ್ವ ಸಹಾಯ ಸಂಘದ ಸದಸ್ಯರು. ಕಾಲೇಜು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

> ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ರಾಮರಾಜ್ಯದ ಕನಸಿನೊಂದಿಗೆ ಗ್ರಾಮ ಸ್ವರಾಜ್ಯದ ಕನಸು ಕಂಡಿದ್ದರು. ಗಾಂಧೀಜಿ ಅವರು ತೋರಿದ ದಾರಿಯಲ್ಲಿ ಧರ್ಮಸ್ಥಳದ ಡಾ. ವಿರೇಂದ್ರ ಹೆಗಡೆ ಅವರು ನಡೆದುಕೊಳ್ಳುವ ಮೂಲಕ ಆ ಕನಸನ್ನು ನನಸು ಮಾಡುತ್ತಿದ್ದಾರೆ.
> **ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು,**
> ಬಸವ ಕಲ್ಯಾಣ.

ವಿಜಯ ಕರ್ನಾಟಕ VK
ಬುಧವಾರ,6 ಅಕ್ಟೋಬರ್ 2021,
ಕಲಬುರಗಿ

ದುಡಿಮೆಯಲ್ಲಿ ಭಗವಂತನನ್ನು ಕಾಣಬೇಕು



ಬಸವಕಲ್ಯಾಣ ನಗರದ ಶೇಖರ ಭೂರಾಳೆ ಅವರ ನಿವಾಸದಲ್ಲಿ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಬಸವಕಲ್ಯಾಣ: ಮನುಷ್ಯ ದುಡಿಯದೇ ಯಾವುದನ್ನು ಸ್ವೀಕರಿಸಬಾರದು. ದುಡಿಮೆಯಲ್ಲಿ ಭಗವಂತನನ್ನು ಕಾಣಬೇಕೆಂದು ಇಲ್ಲಿಯ ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಶೇಖರ ಭೂರಾಳೆ ಅವರ ನಿವಾಸದಲ್ಲಿ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ನಾವು ಮಾಡುವ ಯಾವುದೇ ಕೆಲಸವನ್ನು ನಿಷ್ಠೆಯಿಂದ ಮಾಡಬೇಕು. ಶರಣರು, ಸಂತರು, ದಾರ್ಶನಿಕರ ವಚನಗಳನ್ನು ಶ್ರವಣ ಮಾಡುವುದರ ಮೂಲಕ ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು. ಮಾನವೀಯ ಮೌಲ್ಯಗಳು ಜೀವನಾಧಾರವಾಗಿದ್ದು ಮೌಲ್ಯಯುತ ಜೀವನ ಸಾಗಿಸಬೇಕು ಎಂದು ತಿಳಿಸಿದರು.

ಹುಲಸೂರ ತಹಸೀಲ್ದಾರ ಶಿವಾನಂದ ಮೇತ್ರೆ ಮಾತನಾಡಿ, ಇಂದಿನ ದಿನಗಳಲ್ಲಿ ಮನುಷ್ಯನಿಗೆ ಯಾವಾಗಲೂ ಮನಸ್ಸಿಗೆ ನೆಮ್ಮದಿ ಇರುವುದಿಲ್ಲ, ದುರಾಸೆಗಳ ಆಲೋಚನೆಯಲ್ಲಿ ಮುಳುಗಿರುತ್ತಾನೆ. ಅವುಗಳನ್ನು ದೂರ ಮಾಡಬೇಕಾದರೆ ಶ್ರೀಗಳು ಮಾಡುತ್ತಿರುವ ಇಂತಹ ಕಾರ್ಯಕ್ರಮಗಳು ಬಹಳ ಆವಶ್ಯಕತೆ ಇವೆ ಎಂದರು.

ಶೇಖರ ಭೂರಾಳೆ, ಶಶಿಕಾಂತ ಭೋಸ್ಲೆ, ಮಲ್ಲಿಕಾರ್ಜುನ ನಂದಿ, ಸುರೇಶ ಆಡಕೆ, ಬಸವಂತಪ್ಪಾ ಲವಾರೆ, ಗುರುನಾಥ್ ಕೋಶೆಟ್ಟಿ, ಬಸವರಾಜ ಬಂದ್ಗೆ, ಶಾಂತವೀರ ಸ್ವಾಮಿ ಉಪಸ್ಥಿತರಿದ್ದರು.

ಕನ್ನಡಪ್ರಭ
ಭಾನುವಾರ 24.10.2021
ಕಲಬುರಗಿ

Scanned with OKEN Scanner

ಹಾರಕೂಡ ಮಠದಲ್ಲಿ 19ನೇ ಜಿಲ್ಲಾ ಸಮ್ಮೇಳನ: ಡಾ। ಜೋಶಿ

ಬಸವಕಲ್ಯಾಣ: ಮಾರ್ಚ್ ತಿಂಗಳೊಳಗೆ ಹಾರಕೂಡ ಹಿರೇಮಠದಲ್ಲಿ 19ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗುವುದು ಎಂದು ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ನಾಡೋಜ ಡಾ। ಮಹೇಶ ಜೋಶಿ ಹೇಳಿದರು.

ಹಾರಕೂಡ ಹಿರೇಮಠದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಹಾರಕೂಡ ಮಠ ಯಾವುದೇ ಜಾತಿ, ಧರ್ಮಕ್ಕೆ ಸೀಮಿತವಾಗದೇ ಕಲೆ, ಸಂಸ್ಕೃತಿ, ಸಾಹಿತಿಗಳನ್ನು ಪೋಷಿಸುವ ಕೇಂದ್ರವಾಗಿದೆ. ಹೀಗಾಗಿ ಇಲ್ಲಿಗೆ ಮೊದಲ ಬಾರಿ ಭೇಟಿ ನೀಡಿದ್ದೇನೆ. ಪೀಠಾಧಿಪತಿ ಡಾ। ಚನ್ನವೀರ ಶಿವಾಚಾರ್ಯರ ಆಶಯದಂತೆ ಜಿಲ್ಲಾ ಸಮ್ಮೇಳನ ನಡೆಸುವ ನಿರ್ಣಯ ತೆಗೆದುಕೊಳ್ಳಲಾಗಿದೆ. ಪರಿಷತ್ತಿನಿಂದ ಕೋಟಿ ನವರತ್ನ ನೋಂದಣಿ ಹಾಗೂ ಇತರೆ ಯೋಜನೆ



ಬಸವಕಲ್ಯಾಣ: ಹಾರಕೂಡ ಮಠಕ್ಕೆ ಭೇಟಿ ನೀಡಿದ ಕಸಾಪ ರಾಜ್ಯಾಧ್ಯಕ್ಷ ನಾಡೋಜ ಡಾ। ಮಹೇಶ ಜೋಶಿ ಅವರನ್ನು ಶ್ರೀಗಳು ಸನ್ಮಾನಿಸಿದರು.

ಹಾಕಿಕೊಂಡಿದ್ದು ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದರು.

ವೈದ್ಯಕೀಯ ಶಿಕ್ಷಣ ಕನ್ನಡದಲ್ಲೇ ಮೊರಸುವುದಕ್ಕೆ ಪ್ರಯತ್ನ ನಡೆಯುತ್ತಿವೆ. ಈಚೆಗೆ ಬರದಂತೆಯೇ ಓದುವ, ಮಾತನಾಡಿದಂತೆಯೇ ಬರೆಯುವ ಭಾಷೆಗಳ ಬಗ್ಗೆ ವಿಶ್ವ ಮಟ್ಟದ ಸಮೀಕ್ಷೆ ನಡೆದಿದೆ. ಈ ಸಾಲಿಗೆ ಕನ್ನಡ, ಸಂಸ್ಕೃತ ಮತ್ತು ಫ್ರೆಂಚ್ ಭಾಷೆಗಳು ಮಾತ್ರ ಸೇರ್ಪಡೆಯಾಗಿವೆ ಎಂದರು.

ಡಾ। ಚನ್ನವೀರ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಮಾತನಾಡಿ, ಸಂತ ಶಿಶುನಾಳ ಶರೀಫರು ಸಮಾನತೆ ಬೋಧಿಸಿದ್ದರು. ಡಾ। ಮಹೇಶ ಜೋಶಿ ಕನ್ನಡ



ಬಸವಕಲ್ಯಾಣ: ಗವಿಮಠಕ್ಕೆ ಭೇಟಿ ನೀಡಿದ ಕಸಾಪ ರಾಜ್ಯಾಧ್ಯಕ್ಷ ನಾಡೋಜ ಡಾ। ಮಹೇಶ ಜೋಶಿ ಅವರನ್ನು ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು. ಕಸಾಪ ಜಿಲ್ಲಾಧ್ಯಕ್ಷ ಸುರೇಶ ಚನ್ನಶೆಟ್ಟಿ, ಪ್ರೊ। ಪ್ರಕಾಶ ಲಡ್ಡೆ, ಮಾಣಿಕ ಆರ್. ಭೂರೆ, ಶಿವಲೀಲಾ ಮಠಪತಿ ಇತರರಿದ್ದರು.

ಸಾಹಿತ್ಯ ಪರಿತ್ತಿನ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿದ್ದು ಉತ್ತಮ ಕಾರ್ಯ ಕೈಗೊಳ್ಳುತ್ತಾರೆಂಬ ನಂಬಿಕೆ ಇದೆ ಎಂದರು.

ಈ ವೇಳೆ ಕಸಾಪ ಜಿಲ್ಲಾಧ್ಯಕ್ಷ ಸುರೇಶ ಚನ್ನಶೆಟ್ಟಿ ಕಲಬುರಗಿ ಜಿಲ್ಲಾ ಘಟಕದ ಅಧ್ಯಕ್ಷ ವಿಜಯಕುಮಾರ ತೆಗಲತ್ತಿಪ್ಪಿ ಬಾಬುರಾವ್ ದಾನಿ, ಓಂಪ್ರಕಾಶ ದಡ್ಡೆ ಶಿವಶಂಕರ ಟೋಕರೆ, ರಮೇಶ ಬಿರಾದಾರ್, ರಾಜಕುಮಾರ ಶಿರಗಾಪೂರ, ಮಲ್ಲಿನಾಥ ಹಿರೇಮಠ ಇತರರಿದ್ದರು.

ಉದಯವಾಣಿ
ಸೋಮವಾರ, ಡಿಸೆಂಬರ್ 13, 2021
ಕಲಬುರಗಿ



ಬಸವಕಲ್ಯಾಣದ ತ್ರೀಪುರಾಂತನ ಗವಿ ಮಠದಲ್ಲಿ 2022ರ ಹೊಸ ವರ್ಷದ ಕ್ಯಾಲೆಂಡರ್ ಅನ್ನು ಮಠದ ಪೀಠಾಧಿಪತಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬಿಡುಗಡೆಗೊಳಿಸಿದರು.

ವಿಜಯ ಕರ್ನಾಟಕ
ಮಂಗಳವಾರ,4 ಜನವರಿ 2022, ಕಲಬುರಗಿ



ವಿಜಯವಾಣಿ ಚಿತ್ರ

ಬಸವಕಲ್ಯಾಣ ಗವಿಮಠದಲ್ಲಿ ಶನಿವಾರ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ 2022ರ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ರವಿ ಠಮಕೆ, ಅನೀಲ ಸ್ವಾಮಿ, ರಿತೇಶ ಪಿ, ಪ್ರೊ.ರುದ್ರೇಶ್ವರ ಗೋರ್ಟಾ, ಚಂದ್ರಶೇಖರ ಸ್ವಾಮಿ ಇತರರಿದ್ದರು.

ನಂ1 ವಿಜಯವಾಣಿ
VIJAYAVANI » KALABURAGI
ಭಾನುವಾರ 2 ಜನವರಿ 2022
2 JANUARY 2022



ವಿಜಯವಾಣಿ ಚಿತ್ರ

ಬಸವಕಲ್ಯಾಣ ಗವಿಮಠದಲ್ಲಿ ಶುಕ್ರವಾರ ವೀರಶೈವ ಲಿಂಗಾಯತ ಸಂಘಟನೆಯಿಂದ ಶ್ರೀ ಶಿವಕುಮಾರ ಸ್ವಾಮೀಜಿ ಪುಣ್ಯಸ್ಮರಣೆ ನಿಮಿತ್ತ ಆಯೋಜಿಸಿದ್ದ ದಾಸೋಹ ದಿನ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ಶಿವಾಚಾರ್ಯರು, ಗುರು ದೇಗಾಂವ, ಸಾಗರ ಸುಗುರೆ, ಬಸವರಾಜ ಪಾರಾ, ಪ್ರದೀಪ, ಪ್ರಶಾಂತ, ಜ್ಞಾನೇಶ್ವರ ಅತಲಾಪುರ, ರಾಮಲಿಂಗ ಸ್ವಾಮಿ, ಅನೀಲ್ ಸಕ್ಕಬಾವಿ ಇತರರಿದ್ದರು.

Scanned with OKEN Scanner



ಬಸವಕಲ್ಯಾಣ ನಗರದ ತ್ರಿಪುರಾಂತನ ಗವಿಮಠಕ್ಕೆ ಶನಿವಾರ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಭೇಟಿ ನೀಡಿ, ಶ್ರೀ ಮಠದ ಪೀಠಾಧಿಪತಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಅವರ ಆಶೀರ್ವಾದ ಪಡೆದರು.

ಗವಿಮಠಕ್ಕೆ ಡಾ.ಜೋಶಿ ಭೇಟಿ

ಬಸವಕಲ್ಯಾಣ: ನಗರದ ತ್ರಿಪುರಾಂತನ ಗವಿಮಠಕ್ಕೆ ಶನಿವಾರ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಅವರು ಭೇಟಿ ನೀಡಿ, ಶ್ರೀ ಮಠದ ಪೀಠಾಧಿಪತಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಅವರ ಆಶೀರ್ವಾದ ಪಡೆದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಸುರೇಶ ಚನಶೆಟ್ಟಿ, ಪ್ರೊ.ಓಂ ಪ್ರಕಾಶ್ ಲಡ್ಡೆ ಸಾಹಿತಿಗಳಾದ ಬಾಬುರಾವ್ ದಾನಿ ಬೀದರ್, ಬಸವಂತಪ್ಪಾ ಲವಾರೆ, ಮಲ್ಲಿಕಾರ್ಜುನ ನಂದಿ, ವೀರಣ್ಣ ಶೀಲವಂತ, ಪ್ರೋ.ರುದ್ರೇಶ್ವರ ಗೋರ್ಟಾ, ರುದ್ರಮುನಿ ಮಠಪತಿ, ಮಾಣಿಕ ಆರ್, ಭೂರೆ, ಬಸವಣ್ಣಪ್ಪಾ ನೆಲೋಗಿ, ಶಾಂತಲಿಂಗ ಮಠಪತಿ, ಶಿವಲೀಲಾ ಮಠಪತಿ, ಚಂದ್ರಕಾಂತ ಸ್ವಾಮಿ ನಾರಾಯಣಪೂರ, ಶಾಲಿವಾನ ಕಾಕನಾಳೆ, ಧನರಾಜ ರಾಜೋಳೆ, ಬಾಬುರಾವ ಚಳಕಾಪುರೆ ಇದ್ದರು.

ವಿಜಯ ಕರ್ನಾಟಕ VK ಸೋಮವಾರ,13 ಡಿಸೆಂಬರ್ 2021, ಕಲಬುರಗಿ

ಸಂಸ್ಕೃತಿ ಎತ್ತಿ ಹಿಡಿಯುತ್ತಿರುವ ಪ್ರಧಾನಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಪ್ರಧಾನಿ ನರೇಂದ್ರ ಮೋದಿ ಸರ್ಕಾರ ದೇಶದ ಸಂಸ್ಕೃತಿ ಎತ್ತಿ ಹಿಡಿಯುತ್ತಿದೆ ಎಂದು ತ್ರಿಪುರಾಂತ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು. ಕಾಶಿ ವಿಶ್ವನಾಥ ಕಾರಿಡಾರ್ ಉದ್ಘಾಟನೆ ನಿಮಿತ್ತ ಬಿಜೆಪಿ ನಗರ ಘಟಕದ ವತಿಯಿಂದ ನಗರದ ಆರ್ಯ ಸಮಾಜ ಭವನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ದಿವ್ಯ ಕಾಶಿ ಭವ್ಯ ಕಾಶಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

» ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನುಡಿ

ಶಾಸಕ ಶರಣು ಸಲಗರ ಮಾತನಾಡಿ, ನಗರದಲ್ಲಿ ಮಾಜಿ ಸೈನಿಕರ ಭವನ ನಿರ್ಮಾಣವಾಗಬೇಕು ಎಂಬ ಬಹುದಿನದ ಬೇಡಿಕೆಯಾಗಿದೆ. ಈ ಕುರಿತು ಮುಖ್ಯಮಂತ್ರಿ ಅವರಿಗೆ ಮನವಿ ಪತ್ರ ಸಲ್ಲಿಸಿ ಭವನ ನಿರ್ಮಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದರು.

ಹೋಮ ಹಾಗೂ ಭಜನೆ ಜತೆಗೆ ಸಾರ್ವಜನಿಕರಿಗಾಗಿ ನೇರ ವೀಕ್ಷಣೆ ಕಲ್ಪಿಸಿಕೊಡಲಾಗಿತ್ತು. ಮಾಜಿ ಸೈನಿಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪಕ್ಷದ ನಗರ ಘಟಕದ ಅಧ್ಯಕ್ಷ ಅರವಿಂದ ಮುತ್ತೆ, ರಾಜ್ಯ ಕಾರ್ಯಕಾರಣಿ ಸದಸ್ಯ ದೀಪಕ ಗಾಯಕವಾಡ, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಸಂಜು ಸುಗರೆ, ಶಿವಾಜಿ ಜಗತಾಪ, ದಿಗಂಬರ ಜಲ್ದೆ, ಶೋಭಾ ತೆಲಂಗ್, ಶಿವರಾಜ ಮೆಂಗದೆ, ಬಾಬುರಾವ, ರಾಜು ಭೋಸಲೆ, ಸಂಜು ಮೂಲಗೆ, ರಾಜು ಬೊಕ್ಕೆ, ಸಾಗರ ಸುಗ್ರೆ, ಕಿಶನ್‌ಸಿಂಗ್ ಹಜಾರೆ, ಗೋರೇಶ ಮುತ್ತಂಗೆ, ಪ್ರಮೀಳಾ ಡಾಂಗೆ, ರಾಜು ರಾಜೋಳೆ, ಮಾಲಾಶ್ರೀ, ಸುರೇಖಾ, ರಾಜಕುಮಾರ ಅಲಶಟ್ಟಿ, ರಮೇಶ್ ಕಾಂಬ್ಳೆ, ವಿಜಯಕುಮಾರ ವಕಾರೆ ಇತರರಿದ್ದರು. ಬಿಜೆಪಿ ನಗರ ಮಂಡಲ ಪ್ರಧಾನ ಕಾರ್ಯದರ್ಶಿ ಸಿದ್ದು ಬಿರಾದಾರ ನಿರೂಪಣೆ ಮಾಡಿದರು.



ಬಸವಕಲ್ಯಾಣದಲ್ಲಿ ಬಿಜೆಪಿ ನಗರ ಘಟಕದ ವತಿಯಿಂದ ಸೋಮವಾರ ಹಮ್ಮಿಕೊಂಡ ದಿವ್ಯ ಕಾಶಿ ಭವ್ಯ ಕಾಶಿ ಕಾರ್ಯಕ್ರಮದಲ್ಲಿ ಮಾಜಿ ಸೈನಿಕರನ್ನು ಸನ್ಮಾನಿಸಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಾಸಕ ಶರಣು ಸಲಗರ, ಅರವಿಂದ ಮುತ್ತೆ ಇತರರಿದ್ದರು.

ಜಿ.ಪಂ ಅಧ್ಯಕ್ಷೆ ನಿರ್ಮಲಾ ಮಾನೆಗೋಪಾಳೆ ಸಿಎಂಗೆ ಮನವಿ

ಬಸವಕಲ್ಯಾಣ ಜಿಲ್ಲಾ ಕೇಂದ್ರ ಘೋಷಿಸಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಈ ತಾಲ್ಲೂಕಿನ ಗ್ರಾಮಗಳು ಜಿಲ್ಲಾ ಕೇಂದ್ರದಿಂದ 130 ಕಿ.ಮೀ ದೂರದಲ್ಲಿರುವ ಕಾರಣ ಬಸವಕಲ್ಯಾಣವನ್ನು ಜಿಲ್ಲಾ ಕೇಂದ್ರವೆಂದು ಘೋಷಿಸಿ ಜನರಿಗೆ ಅನುಕೂಲ ಕಲ್ಪಿಸಬೇಕು ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ನಿರ್ಮಲಾ ಮಾನೆಗೋಪಾಳೆ ಬೆಂಗಳೂರಿನಲ್ಲಿ ಈಚೆಗೆ ಮನವಿಪತ್ರ ಸಲ್ಲಿಸಿದ್ದಾರೆ.

ಬಸವಕಲ್ಯಾಣ ಜಿಲ್ಲೆಯ ಎರಡನೇ ದೊಡ್ಡ ನಗರವಾಗಿದ್ದು, ಐತಿಹಾಸಿಕ ಹಾಗೂ ಧಾರ್ಮಿಕವಾಗಿ ಮಹತ್ವ ಪಡೆದಿದೆ. 12ನೇ ಶತಮಾನದಲ್ಲಿ ಇಲ್ಲಿದ್ದ ಅನುಭವ ಮಂಟಪದ ಪುನರ್ ನಿರ್ಮಾಣಕ್ಕೆ ಈಚೆಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಈ ಸ್ಥಳ ಅಂತರರಾಷ್ಟ್ರೀಯ ಪ್ರವಾಸಿ ತಾಣವಾಗಲಿದ್ದು, ಇದಕ್ಕೆ ಜಿಲ್ಲಾ ಕೇಂದ್ರದ ಮಾನ್ಯತೆ ನೀಡುವುದು ಅಗತ್ಯವಾಗಿದೆ. ಇಲ್ಲಿನ ಜನರ ಬಹುದಿನದ ಬೇಡಿಕೆಯಾಗಿದೆ ಎಂದಿದ್ದಾರೆ.



ಬಸವಕಲ್ಯಾಣ ಜಿಲ್ಲಾ ಕೇಂದ್ರ ಘೋಷಣೆಗೆ ಜಿಲ್ಲಾ ಪಂಚಾಯಿತಿ ಸದಸ್ಯೆ ನಿರ್ಮಲಾ ಮಾನೆಗೋಪಾಳೆ ಅವರು ಈಚೆಗೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿಪತ್ರ ಸಲ್ಲಿಸಿ ಪುಷ್ಪಗುಚ್ಛ ನೀಡಿ ಸನ್ಮಾನಿಸಿದರು

ಈ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವುದಕ್ಕೆ ₹5 ಕೋಟಿ ಅನುದಾನ ಮಂಜೂರು ಮಾಡಬೇಕು. ನಗರದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಗವಿಮಠದಲ್ಲಿನ ಅಪೂರ್ಣವಾದ ದಾಸೋಹ ಮಂಟಪದ ಕಟ್ಟಡ ಕಾರ್ಯಕ್ಕೆ ₹15 ಲಕ್ಷ ಒದಗಿಸಬೇಕು. ಜಿಲ್ಲೆಯ ಪ್ರಸಿದ್ಧ ಸುಕ್ಷೇತ್ರವಾದ ರೇಕುಳಗಿಯ ಶಂಭುಲಿಂಗೇಶ್ವರ ಹಾಗೂ ಬಸಮ್ಮ ತಾಯಿಯವರ ದೇವಸ್ಥಾನ ಕಟ್ಟಡ ಕಾಮಗಾರಿ ಪೂರ್ಣಕ್ಕೆ ₹25 ಲಕ್ಷ ವಿಶೇಷ ಅನುದಾನ ಮಂಜೂರು ಮಾಡಬೇಕು ಎಂದೂ ಒತ್ತಾಯಿಸಿದ್ದಾರೆ.

ಜಿಲ್ಲೆಯಲ್ಲಿನ ಗ್ರಾಮೀಣ ಭಾಗದ ರಸ್ತೆಗಳು ಸಾಕಷ್ಟು ಹದಗೆಟ್ಟಿವೆ. ಅವುಗಳ ಸುಧಾರಣೆಗೆ ₹12 ಕೋಟಿ ಅನುದಾನದ ಅಗತ್ಯವಿದ್ದು ಅದನ್ನು ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ ಯೋಜನೆ ಅಡಿಯಲ್ಲಿ ಜಿಲ್ಲಾ ಪಂಚಾಯಿತಿಗೆ ಬಿಡುಗಡೆಗೊಳಿಸಬೇಕು ಎಂದು ಕೂಡ ಕೇಳಿಕೊಂಡಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಪ್ರಭು ಚವಾಣ್, ಸಂಸದ ಭಗವಂತ ಖೂಬಾ ಹಾಗೂ ಜಿಲ್ಲೆಯ ಮುಖಂಡರು ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಬಸವಕಲ್ಯಾಣ ಜಿಲ್ಲೆಯ ಎರಡನೇ ದೊಡ್ಡ ನಗರ
- ತ್ರಿಪುರಾಂತ ಗವಿಮಠ ದಾಸೋಹ ಮಂಟಪ ಕಾರ್ಯಕ್ಕೆ ₹15 ಲಕ್ಷ ಒದಗಿಸಿ
- ಗ್ರಾಮೀಣ ಭಾಗದ ರಸ್ತೆಗಳ ಸುಧಾರಣೆಗೆ ₹12 ಕೋಟಿ ಅನುದಾನ ಅಗತ್ಯ

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI ಮಂಗಳವಾರ 14 ಡಿಸೆಂಬರ್ 2021
14 DECEMBER 2021

Scanned with OKEN Scanner

ಶಿವ ಶರಣೆ ಹೇಮರೆಡ್ಡಿ ಮಲ್ಲಮ್ಮ ಮೂರ್ತಿ ಪ್ರತಿಷ್ಠಾಪನೆ: ಕಳಸಾರೋಹಣ

ಗುರು, ಹಿರಿಯರನ್ನು ಪೂಜ್ಯನೀಯ ಭಾವದಿಂದ ಕಾಣಿ

ಹುಮನಾಬಾದ್: ಸಮಾಜದ ಜನ ಧರ್ಮದ ದಾರಿಯಲ್ಲಿ ನಡೆಯುವುದರ ಜತೆಗೆ ಗುರು, ಹಿರಿಯರನ್ನು ಪೂಜ್ಯನೀಯ ಭಾವ ದಿಂದ ಕಾಣಬೇಕು, ಎಂದು ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಸುಭಾಷ ಕಲ್ಲೂರು ಸಲಹೆ ನೀಡಿದರು.

ಬಸವಕಲ್ಯಾಣ ತಾಲ್ಲೂಕಿನ ಹಣಮಂತವಾಡಿ(ಆರ್) ಗ್ರಾಮ ದಲ್ಲಿ ಮಹಾಸಾದ್ವಿ ಶಿವ ಶರಣೆ ಹೇಮರೆಡ್ಡಿ ಮಲ್ಲಮ್ಮನವರ ಮೂರ್ತಿ ಪ್ರತಿಷ್ಠಾಪನಾ ಮತ್ತು ಕಳಸಾ ರೋಹಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಾದಾನಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರು ದಾನ ಧರ್ಮದ ದಾರಿಯಲ್ಲಿ ನಡೆಯುವಂತೆ ಸಮಾಜದ ಜನರನ್ನು ಪರಿವರ್ತನೆ ಮಾಡಿದಂತಹ ಮಹಾನ ಸಾಧಕಿಯಾಗಿದ್ದು, ಸಮಾಜ ಯುವ ಸಮುದಾಯ ಹೇಮರೆಡ್ಡಿ ಮಲ್ಲಮ್ಮನವರ ತತ್ವ ಆದರ್ಶಗಳನ್ನು ಜೀವನ ದಲ್ಲಿ ಅಳವಡಿಸಿಕೊಂಡು ಉತ್ತಮ ಬದುಕು ಕಟ್ಟಿಕೊಳ್ಳ ಬೇಕು, ಎಂದರು.

ಭಾರತೀಯ ಜನತಾ ಪಾರ್ಟಿ ರಾಜ್ಯ ಕಾರ್ಯಕಾರಣಿ ಸದಸ್ಯ ಸೋಮನಾಥ ಪಾಟೀಲ, ಮಾತನಾಡಿದರು. ಶಿವ ಶರಣೆ ಹೇಮರೆಡ್ಡಿ ಮಲ್ಲಮ್ಮನವರ ಜೀವನ ಮತ್ತು ಸಾಧನೆ ಕುರಿತು ವಿವರಿಸಿದರು.

ಸದಲಾಪುರ ಮಠದ ಸಿದ್ದಲಿಂಗ ಶಿವಾಚಾರ್ಯ, ತೃಪುರಾಂತ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಹೀರನಾಗಾಂವ ಜಯಶಾಂತಲಿಂಗ ಶಿವಾಚಾರ್ಯ, ರಾಜೇಶ್ವರ ಘನಲಿಂಗ ರುದ್ರಮೂನಿ ಶಿವಾಚಾರ್ಯ, ರಘುನಾಥ ಮಹಾರಾಜ, ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಟಿಎಪಿಸಿಎಮ್‌ಎಸ್ ಅಧ್ಯಕ್ಷ ಅಭಿಷೇಕ ಪಾಟೀಲ, ವಿನಾಯಕ ಮಂಡಾ. ರೆಡ್ಡಿ ಸಮಾಜದ ಮಾಜಿ ಜಿಲ್ಲಾ ಅಧ್ಯಕ್ಷ ಸಿ.ಎಲ್ ರೆಡ್ಡಿ, ಬಸವಕಲ್ಯಾಣ ತಾಲ್ಲೂಕು ಅಧ್ಯಕ್ಷ ವಿಜಯಕುಮಾರ ರೆಡ್ಡಿ, ನರೇಂದ್ರ ರೆಡ್ಡಿ, ಗ್ರಾಮ ಪಂಚಾ



ಯಿತಿ ಮಾಜಿ ಅಧ್ಯಕ್ಷ ಸಂತೋಷ ಗುರ್ಲಾ, ರಾಮಣ್ಣಾ ರೆಡ್ಡಿ ಕಮಲಾಪುರೆ, ಜಗನ್ನಾಥ ಐಯಣ್ಣೋರ್, ಗ್ರಾಮ ಪಂಚಾಯಿತಿ ಸದಸ್ಯ ಜೀವನರೆಡ್ಡಿ ಶಿಕಾರೆ, ಶ್ರೀನಿವಾಸ ರೆಡ್ಡಿ ಕಮಲಾಪುರೆ, ಉಮೇಶ ಸೀತಾಳಗೇರಾ, ಇದ್ದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಗುಂಡು ರಡ್ಡಿ ಕಮಲಾಪುರೆ ಸ್ವಾಗತಿಸಿದರು. ನಾಗೇಂದ್ರ ರೆಡ್ಡಿ ಉಪ್ಪಾರ ನಿರೂಪಿಸಿದರು. ವಿಜಯಕುಮಾರ ದೂಡ್ಡಮನಿ ವಂದಿಸಿದರು. ಅಕ್ಷತಾ, ಅಭಿಷೇಕ ಪ್ರಾರ್ಥಿಸಿದರು.

ಕರ್ನಾಟಕ ಸಂಧ್ಯಾಕಾಲ ಬುಧವಾರ, ಅಕ್ಟೋಬರ್ 27, 2021

ಹಣಮಂತವಾಡಿ(ಆರ್)ಯಲ್ಲಿ ಶಿವಶರಣೆ ದೇವಸ್ಥಾನದ ಕಳಸಾರೋಹಣ

ಹೇಮರಡ್ಡಿ ಮಲ್ಲಮ್ಮ ಮೂರ್ತಿ ಪ್ರತಿಷ್ಠಾಪನೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಮಾಜದ ಜನ ಧರ್ಮದ ಹಾದಿಯಲ್ಲಿ ನಡೆಯುವುದರ ಜತೆಗೆ ಗುರು, ಹಿರಿಯರನ್ನು ಪೂಜ್ಯನೀಯ ಭಾವದಿಂದ ಕಾಣಬೇಕು ಎಂದು ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಸುಭಾಷ ಕಲ್ಲೂರ ಸಲಹೆ ನೀಡಿದರು.

ಹಣಮಂತವಾಡಿ (ಆರ್)ಯಲ್ಲಿ ಮಂಗಳವಾರ ಶಿವಶರಣೆ ಹೇಮರಡ್ಡಿ ಮಲ್ಲಮ್ಮನವರ ಮೂರ್ತಿ ಪ್ರತಿಷ್ಠಾಪನಾ ಮತ್ತು ಕಳಸಾರೋಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಾಯಿ ಮಲ್ಲಮ್ಮನವರ ತತ್ವ ಆದರ್ಶಗಳನ್ನು ಯುವ ಸಮುದಾಯ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಬದುಕು ಕಟ್ಟಿಕೊಳ್ಳಬೇಕು ಎಂದರು.

ಬಿಜೆಪಿ ರಾಜ್ಯ ಕಾರ್ಯಕಾರಣಿ ಸದಸ್ಯ ಸೋಮನಾಥ ಪಾಟೀಲ ಮಾತನಾಡಿ, ಶಿವಶರಣರ ಆದರ್ಶ ಜೀವನ ಮತ್ತು ಸಾಧನೆಯನ್ನು ಅರಿತು ಜೀವನದಲ್ಲಿ ಸ್ಫೂರ್ತಿ ಪಡೆಯಬೇಕು ಎಂದರು.



ವಿಜಯವಾಣಿ

ಬಸವಕಲ್ಯಾಣ ತಾಲೂಕಿನ ಹಣಮಂತವಾಡಿ(ಆರ್) ಯಲ್ಲಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮನವರ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮ ಜರುಗಿತು. ಶ್ರೀ ಜಯಶಾಂತಲಿಂಗ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಗುಂಡುರೆಡ್ಡಿ ಇದ್ದರು.

ಸಾನ್ನಿಧ್ಯ ವಹಿಸಿದ್ದ ಸದಲಾಪುರ ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ, ಹಿರೇನಾಗಾಂವ ಶ್ರೀ ಜಯಶಾಂತಲಿಂಗ ಶಿವಾಚಾರ್ಯ, ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ರಾಜೇಶ್ವರ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ರಘುನಾಥ ಮಹಾರಾಜರು ಆಶೀರ್ವಚನ ನೀಡಿದರು.

ಅಭಿಷೇಕ ಪಾಟೀಲ, ವಿನಾಯಕ ಎಂ., ಜಿಲ್ಲಾ ರಡ್ಡಿ ಸಮಾಜದ ಮಾಜಿ ಅಧ್ಯಕ್ಷ ಸಿ.ಎಲ್.ರಡ್ಡಿ, ತಾಲೂಕು ಅಧ್ಯಕ್ಷ ವಿಜಯಕುಮಾರ ರಡ್ಡಿ, ನರೇಂದ್ರ ರಡ್ಡಿ, ರಾಮಣ್ಣಾ ರಡ್ಡಿ, ಜಗನ್ನಾಥ ಐಯಣ್ಣೋರ್, ಗ್ರಾಪಂ ಸದಸ್ಯ ಜೀವನರಡ್ಡಿ ಶಿಕಾರೆ, ಶ್ರೀನಿವಾಸ ರಡ್ಡಿ ಕಮಲಾಪುರೆ, ಉಮೇಶ ಸೀತಾಳಗೇರಾ, ಸಂತೋಷ ಗುರ್ಲಾ, ಅಕ್ಷತಾ, ಅಭಿಷೇಕ ಇದ್ದರು. ಜಿಪಂ ಮಾಜಿ ಸದಸ್ಯ ಗುಂಡುರಡ್ಡಿ ಕಮಲಾಪುರೆ ಸ್ವಾಗತಿಸಿದರು. ನಾಗೇಂದ್ರ ರಡ್ಡಿ ಉಪ್ಪಾರ ನಿರೂಪಣೆ ಮಾಡಿದರು. ವಿಜಯಕುಮಾರ ದೂಡ್ಡಮನಿ ವಂದಿಸಿದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಗುರುವಾರ 28 ಅಕ್ಟೋಬರ್ 2021
28 OCTOBER 2021

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಭಾನುವಾರ 30 ಆಕ್ಟೋಬರ್ 2021
30 OCTOBER 2021

ಡಾ.ಅಭಿನವ ಘನಲಿಂಗ ರುದ್ರಮುನಿ ಶ್ರೀ ಸಲಹೆ **ಎನ್‌ಎಸ್‌ಜಿ ನಿವೃತ್ತ ಕಮಾಂಡೋ ಪ್ರಕಾಶ ಜಮಾದಾರಗೆ ಸನ್ಮಾನ**

ಸೈನಿಕರನ್ನು ಗೌರವಿಸುವ ಮನೋಭಾವ ಬೆಳೆಯಲಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಗಡಿ ರಕ್ಷಣೆ ಮಾಡುವ ಸೈನಿಕರು, ಅನ್ನ ನೀಡುವ ರೈತರು ಹಾಗೂ ಅಕ್ಷರ ಕಲಿಸಿ ಭವಿಷ್ಯ ರೂಪಿಸುವ ಶಿಕ್ಷಕರು ದೇಶದ ಬೆನ್ನೆಲುಬು. ಇವರನ್ನು ಗೌರವಿಸುವ ಮನೋಭಾವ ಎಲ್ಲರಲ್ಲಿಯೂ ಬೆಳೆಯಬೇಕು ಎಂದು ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತಾಲೂಕು ಟೋಕರಿ ಕೋಲಿ ಸಮಾಜ ಸರ್ಕಾರಿ ನೌಕರರ ಸಂಘದಿಂದ ಗವಿಮಠದಲ್ಲಿ ಶುಕ್ರವಾರ ರಾಷ್ಟ್ರೀಯ ಭದ್ರತಾ ಪಡೆ (ಎನ್‌ಎಸ್‌ಜಿ) ನಿವೃತ್ತ ಕಮಾಂಡೋ ಪ್ರಕಾಶ ಎಸ್.ಜಮಾದಾರ ಅವರಿಗೆ ಆಯೋಜಿಸಿದ್ದ ಸನ್ಮಾನ ಹಾಗೂ ಅಭಿನಂದನಾ ಸಮಾರಂಭದ ನೇತೃತ್ವ ವಹಿಸಿ ಮಾತನಾಡಿದ ಶ್ರೀಗಳು, ಪ್ರಕಾಶ ಜಮಾದಾರ ಅವರು ಸಮರ್ಪಣಾ ಮನೋಭಾವದಿಂದ ಕರ್ತವ್ಯ ನಿರ್ವಹಿಸಿದ್ದಾರೆ. ಅವರ ಸೇವೆ ಶ್ಲಾಘನೀಯ. ಇಂಥ ಕಾರ್ಯಕ್ರಮಗಳು ದೇಶ ಸೇವೆಯಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆ ನೀಡುತ್ತವೆ ಎಂದರು.

» **ನಕ್ಸಲ್ ಪೀಡಿತ ಛತ್ತಿಸಗಢದಲ್ಲೂ ಜಮಾದಾರ ಕಾರ್ಯ**



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಶುಕ್ರವಾರ ತಾಲೂಕು ಟೋಕರಿ ಕೋಲಿ ಸಮಾಜ ಸರ್ಕಾರಿ ನೌಕರರ ಸಂಘದಿಂದ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಎನ್‌ಎಸ್‌ಜಿ ನಿವೃತ್ತ ಕಮಾಂಡೋ ಪ್ರಕಾಶ ಎಸ್.ಜಮಾದಾರ ಅವರನ್ನು ಸನ್ಮಾನಿಸಲಾಯಿತು. ಶ್ರೀ ಡಾ.ಚನ್ನವೀರ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಎಂಎಲ್ಸಿ ವಿಜಯಸಿಂಗ್, ಎಂ.ಜಿ.ಮುಳೆ, ಮಾಲಾ ನಾರಾಯಣರಾವ, ಸಾವಿತ್ರಿ ಸಲಗರ, ಶಿವಾನಂದ ಮೇತ್ರೆ, ಅರ್ಜುನ ಕನಕ ಇತರರಿದ್ದರು.

ಹಾರಕೂಡ ಸಂಸ್ಥಾನ ಹಿರೇಮಠದ ಶ್ರೀ ಡಾ.ಚನ್ನವೀರ ಶಿವಾಚಾರ್ಯರು ಸಮಾರಂಭವನ್ನು ಉದ್ಘಾಟಿಸಿದರು. ಎಂಎಲ್ಸಿ ವಿಜಯಸಿಂಗ್, ಮಾಜಿ ಶಾಸಕರಾದ ಎಂ.ಜಿ.ಮುಳೆ, ಮಲ್ಲಿಕಾರ್ಜುನ ಖೂಬಾ, ಕಾಂಗ್ರೆಸ್ ಮುಖಂಡರಾದ ಶಾಂತಪ್ಪ ಪಾಟೀಲ್, ಮಾಲಾ ಬಿ. ನಾರಾಯಣರಾವ, ಜಿಪಂ ಮಾಜಿ ಅಧ್ಯಕ್ಷರಾದ ನೀಲಕಂಠ ರಾಠೋಡ, ನಿರ್ಮಲಾ ಮಾನೆಗೋಪಾಳೆ, ಕಲಬುರಗಿ ಮಹಾನಗರ ಪಾಲಿಕೆ ವಲಯ ಆಯುಕ್ತೆ ಸಾವಿತ್ರಾ ಬಿರಾದಾರ, ತಹಸೀಲ್ದಾರ್ ಸಾವಿತ್ರಿ ಸಲಗರ, ಶಿವಾನಂದ ಮೇತ್ರೆ, ಬಿಇಒ ಸಿ.ಜಿ.ಹಳ್ಳದ, ಸಿಪಿಐ ಗೋಪಾಲ ನಾಯಕ, ಪ್ರಮುಖರಾದ ದಿಲೀಪ ಶಿಂಧೆ, ಅರ್ಜುನ ಕನಕ, ಮನೋಹರ ಮೈಸೆ, ಜಗನ್ನಾಥ ಜಮಾದಾರ, ಪೃಥ್ವಿರಾಜ ದೇಗಾಂವ, ಶಿವಶರಣಪ್ಪ ಜಮಾದಾರ, ಸ್ವಾಗತ ಸಮಿತಿ ಅಧ್ಯಕ್ಷ ವಾಲ್ಮೀಕ ಖನಕೂರೆ ಇತರರಿದ್ದರು. ಪಿಯು ಉಪನ್ಯಾಸಕ ಸಂಘದ ರಾಜ್ಯ ಕಾರ್ಯದರ್ಶಿ ನರಸಿಂಗ್‌ರೆಡ್ಡಿ ಪರಿಚಯ ಮಾಡಿಕೊಟ್ಟರು.

ಟೋಕರಿ ಕೋಲಿ ಸಮಾಜ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಚನ್ನವೀರ ಜಮಾದಾರ ಸ್ವಾಗತಿಸಿದರು. ತುಕಾರಾಮ ರೊಡ್ಡಿ, ಭುವನೇಶ್ವರಿ ಹಳ್ಳಿಖೇಡ ಮತ್ತು ಚಿದಂಬರ ಶೇಖರ್ ನಿರೂಪಣೆ ಮಾಡಿದರು.

ಸಾಧಕರಿಗೆ ಗೌರವ

21 ವರ್ಷಗಳ ಸಾರ್ಥಕ ಸೇವೆ ಸಲ್ಲಿಸಿದ 21 ಜನ ಮಾಜಿ ಸೈನಿಕರು ಮತ್ತು ಪೊಲೀಸ್ ಇಲಾಖೆಯ ನಿವೃತ್ತ ಅಧಿಕಾರಿಗಳು ಹಾಗೂ ವಿವಿಧ ಕ್ಷೇತ್ರಗಳ 21 ಸಾಧಕರನ್ನು ಕೂಡ ಸಮಾರಂಭದಲ್ಲಿ ಸನ್ಮಾನಿಸಲಾಯಿತು.



ಬಸವಕಲ್ಯಾಣ ಗವಿಮಠದಲ್ಲಿ ಪೂಜ್ಯ ಶ್ರೀ ಷ.ಬ್ರ ಡಾ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನಿಧ್ಯದಲ್ಲಿ 2023ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು ಶ್ರೀಮದ್ವಿರಶೈವ ಸದ್ಭೋಧನ ಸಂಸ್ಥೆ ತಾಲ್ಲೂಕಾ ಅಧ್ಯಕ್ಷ ಬಸವಂತಪ್ಪಾ ಲವಾರೆ, ಶಿವಲಿಂಗ ಸ್ವಾಮಿ,ಸಿದ್ದು ಉಳ್ಳೆ , .ಸೂರ್ಯಕಾಂತ ಪಂಚಾಳ,ಶಿವಕುಮಾರ ಖಿಟಗಿಮಠ,ಪ್ರಭು ಪೂಜಾರಿ, ಲಕ್ಷ್ಮಿ ಕಾಂತ ಜಾಂತೆ ಇದ್ದರು.

Scanned with OKEN Scanner

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಅಭಿಮತ

ಹೇಮರೆಡ್ಡಿ ಮಲ್ಲಮ್ಮ ಮಹಾ ಶಿವಶರಣೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಹೇಮರೆಡ್ಡಿ ಮಲ್ಲಮ್ಮ ಮಹಾ ಶಿವಶರಣೆ ಆಗಿದ್ದರು. ಸತತ ಸಾಧನೆಯ ಮೂಲಕ ದೊಡ್ಡ ಸ್ಥಾನಕ್ಕೇರಿದರು' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಭಿಪ್ರಾಯಪಟ್ಟರು.

ತಾಲ್ಲೂಕಿನ ಹಣಮಂತವಾಡಿ (ಆರ್) ಯಲ್ಲಿ ನಡೆದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮಕ್ಕಳಿಗೆ ಸಂಸ್ಕೃತಿ ಕಲಿಸಬೇಕು. ಸಂಸ್ಕಾರ ನೀಡಬೇಕು. ಧರ್ಮ ಮಾರ್ಗದಲ್ಲಿ ನಡೆದರೆ ಮಾತ್ರ ಜೀವನದಲ್ಲಿ ಸುಖ ಶಾಂತಿ ದೊರಕಲು ಸಾಧ್ಯ' ಎಂದು ಹೇಳಿದರು.

ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಸುಭಾಷ ಕಲ್ಲೂರ ಮಾತನಾಡಿ,'ತಂದೆ, ತಾಯಿ ಹಾಗೂ ಗುರು ಹಿರಿಯರನ್ನು ಗೌರವದಿಂದ ಕಾಣಬೇಕು. ಅವರ ಸೇವೆಗೈಯಬೇಕು. ಹೇಮರೆಡ್ಡಿ ಮಲ್ಲಮ್ಮ ಅವರು ಸಮಾಜದಲ್ಲಿ ಪರಿವರ್ತನೆ ತರುವಂಥ ಶಕ್ತಿಯುಳ್ಳವರಾಗಿದ್ದರು' ಎಂದರು.

ಬಿಜೆಪಿ ಮುಖಂಡ ಸೋಮನಾಥ ಪಾಟೀಲ ಮಾತನಾಡಿ,'ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ತತ್ವಾದರ್ಶದ ಪಾಲಿಸಬೇಕು' ಎಂದರು.

ಹಿರೇನಾಗಾಂವ ಜಯಶಾಂತಲಿಂಗ ಸ್ವಾಮೀಜಿ, ರಾಜೇಶ್ವರ ಘನಲಿಂಗ ರುದ್ರಮುನಿ ಶಿವಾಚಾರ್ಯ, ಸದ್ಗಾಪುರ ಸಿದ್ಧಲಿಂಗ ಶಿವಾಚಾರ್ಯ, ರಘುನಾಥ ಮಹಾರಾಜ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಗುಂಡುರೆಡ್ಡಿ ಕಮಲಾಪುರೆ, ನಾಗೇಂದ್ರರೆಡ್ಡಿ, ವಿಜಯಕುಮಾರ ದೊಡ್ಮನಿ ಮಾತನಾಡಿದರು.

ಮುಖಂಡರಾದ ವಿನಾಯಕ ಮಂಡಾ, ಮಲ್ಲಿಕಾರ್ಜುನ ಕುಂಬಾರ, ಅಭಿಷೇಕ ಪಾಟೀಲ, ಸಿ.ಎಲ್.ರೆಡ್ಡಿ, ರಾಮಣ್ಣ ರೆಡ್ಡಿ, ವಿಜಯಕುಮಾರ ರೆಡ್ಡಿ, ಶ್ರೀನಿವಾಸರೆಡ್ಡಿ ಕಮಲಾಪುರೆ, ನರೇಂದ್ರರೆಡ್ಡಿ, ಸಂತೋಷ ಗುರ್ಲಾ, ಗೋಪಾಲಕೃಷ್ಣ ಕಮ್ಮಾ, ಪ್ರಕಾಶ ಕಾಡಗೊಂಡ, ಜೀವನರೆಡ್ಡಿ ಶಿಕಾರಿ, ಉಮೇಶ ಸೀತಾಳಗೇರಾ, ಗುರು ಮುಗಳಿ ಮೊದಲಾದವರು ಪಾಲ್ಗೊಂಡಿದ್ದರು.

ಪ್ರವಚನ: ಕಳಸಾರೋಹಣಕ್ಕೂ ಮೊದಲ ದಿನ ರಾತ್ರಿ ನಡೆದ ಪ್ರವಚನ ಕಾರ್ಯಕ್ರಮದಲ್ಲಿ ಮಲ್ಲಯ್ಯಗಿರಿ ಬಸವಲಿಂಗ ಅವಧೂತರು ಮಾತನಾಡಿ,'ಹೇಮರೆಡ್ಡಿ ಮಲ್ಲಮ್ಮನವರು ಸಂಸಾರ ನಡೆಸುತ್ತಲೇ ಆಧ್ಯಾತ್ಮಿಕ ಸಾಧನೆಗೈದರು' ಎಂದರು. ಮಲ್ಲಮ್ಮನವರು ಶ್ರೀಶೈಲ ಮಲ್ಲಿಕಾರ್ಜುನನ ಆರಾಧಕ ಆಗಿದ್ದರು. ಧ್ಯಾನ, ಪೂಜೆ, ತಪಸ್ಸುಗೈದರು.

ಇಂಥ ಮಹಾತ್ಮರ ಸಾಧನೆ ಕುರಿತಾದ ಗ್ರಂಥಗಳನ್ನು ಓದಬೇಕು ಎಂದರು. ಸ್ವಾಮೀಜಿ ಅವರನ್ನು ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು. ಗ್ರಾಮದ ಮುಖಂಡರು ಪಾಲ್ಗೊಂಡಿದ್ದರು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದರು.



ಬಸವಕಲ್ಯಾಣ ತಾಲ್ಲೂಕಿನ ಹಣಮಂತವಾಡಿ (ಆರ್) ಗ್ರಾಮದಲ್ಲಿ ಮಂಗಳವಾರ ನಡೆದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಹಿರೇನಾಗಾಂವ ಜಯಶಾಂತಲಿಂಗೇಶ್ವರ ಸ್ವಾಮೀಜಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಗುಂಡುರೆಡ್ಡಿ ಪಾಲ್ಗೊಂಡಿದ್ದರು

ಮುಖ್ಯಾಂಶಗಳು

- ಹಣಮಂತವಾಡಿ(ಆರ್) ದಲ್ಲಿ ಕಾರ್ಯಕ್ರಮ
- ಹೇಮರೆಡ್ಡಿ ಮಲ್ಲಮ್ಮ ಮೂರ್ತಿ ಪ್ರತಿಷ್ಠಾಪನೆ
- ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಭಕ್ತರು

ಪ್ರಜಾವಾಣಿ ಗುರುವಾರ • ಅಕ್ಟೋಬರ್ 28, 2021

ದುಡಿಮೆಯಲಿ ದೇವರನು ಕಾಣಬೇಕು: ತ್ರಿಪುರಾಂತ ಶ್ರೀ

ಸಂ.ಕ.ಸಮಾಚಾರ ಬಸವಕಲ್ಯಾಣ

ಮಾಡುವ ಕೆಲಸ ಯಾವುದೇ ಇದ್ದರೂ, ಅದನ್ನು ಶ್ರದ್ಧ-ಭಕ್ತಿಯಿಂದ ಮಾಡಬೇಕು. ದುಡಿಮೆಯಲ್ಲಿ ಭಗವಂತನನ್ನು ಕಾಣಬೇಕು ಎಂದು ಗವಿಮಠ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಶೇಖರ ಭೂರಾಳೆ ಅವರ ನಿವಾಸದಲ್ಲಿ ಆಯೋಜಿಸಲಾದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶರಣರು, ಸಂತರು, ದಾರ್ಶನಿಕರ ವಚನಗಳನ್ನು, ಸಂದೇಶಗಳನ್ನು ಶ್ರವಣ ಮಾಡುವುದರ ಮೂಲಕ ಜೀವನ ಸಾರ್ಥಕ ಮಾಡಿಕೊಳ್ಳಬೇಕು ಎಂದರು.

ಹುಲಸೂರು ತಹಶೀಲ್ದಾರ ಶಿವಾನಂದ ಮೇತ್ರೆ ಮಾತನಾಡಿ ಜೀವನದಲ್ಲಿ ಶಾಂತಿ-ನೆಮ್ಮದಿ ಅತಿ ಮುಖ್ಯವಾಗಿದೆ. ಧಾರ್ಮಿಕ ಕಾರ್ಯಕ್ರಮಗಳು, ಸತ್ಸಂಗ, ಇಂತಹ ಚಿಂತನ ಗೋಷ್ಠಿಗಳು ಮನುಷ್ಯನ ನೆಮ್ಮದಿಯ ಜೀವನಕ್ಕೆ ಸಹಕಾರಿಯಾಗುತ್ತವೆ ಎಂದರು.

ಅಧ್ಯಕ್ಷತೆ ವಹಿಸಿದ ಶೇಖರ ಭೂರಾಳೆ ಸಹ ಮಾತನಾಡಿದರು. ಶ್ರೀ ಮದ್ವೀರಶೈವ ಸದ್ಭೋದನಾ ಸಂಸ್ಥೆ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಶ್ರೀಕಾಂತ ಭೋಸ್ಲೆ, ಮಲ್ಲಿಕಾರ್ಜುನ ನಂದಿ, ಗುರುನಾಥ ಕೋಶಟ್ಟೆ, ಬಸವರಾಜ ಬಂದ್ಗೆ, ಶಾಂತವೀರ ಸ್ವಾಮಿ, ಮಹೇಶ್ ಸುಂಠನೂರೆ, ಬಸವಣಪ್ಪ ಧನ್ನೂರೆ, ಶರಣಯ್ಯಾ ಸ್ವಾಮಿ, ರೇವಣಸಿದ್ದಯ್ಯ ಮಠಪತಿ, ಅನ್ನಪೂರ್ಣ ಭೂರಾಳೆ, ಜಗದೇವಿ ಪೂಜಾರಿ, ಸುಶೀಲಾಬಾಯಿ ಧನ್ನೂರೆ, ಸರಸ್ವತಿ ಮಠಪತಿ ಭಾಗವಹಿಸಿದ್ದರು. ಸುರೇಶ ಆಡಕೆ ನಿರೂಪಿಸಿದರು.



ಬಸವಕಲ್ಯಾಣ: ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು.

ಸಂಯುಕ್ತ ಕರ್ನಾಟಕ KALA 25 ಅಕ್ಟೋಬರ್ 2021 ಸೋಮವಾರ



ಬಸವಕಲ್ಯಾಣದ ವಿದ್ಯಾಚೇತನ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಮಕ್ಕಳ ದಿನಾಚರಣೆ ಮತ್ತು ನೂತನ ವರ್ಗ ಕೋಣೆಗಳ ಶಿಲಾನ್ಯಾಸ ಕಾರ್ಯಕ್ರಮ ಜರುಗಿತು. ಗವಿಮಠ ತ್ರಿಪುರಾಂತ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಬಸವಲಿಂಗ ಕೆ.ಸುಬೇದಾರ, ದತ್ತಾತ್ರೇ ಸಿ.ಮೂಲಗೆ ಸೇರಿ ಅನೇಕರಿದ್ದರು.

ಸಂಸ್ಕಾರಯುತ ಶಿಕ್ಷಣ ನೀಡಲು ಸಲಹೆ

■ ವಿಕಸುದ್ದಿಲೋಕ ಬಸವ ಕಲ್ಯಾಣ

ಇಂದಿನ ಮಕ್ಕಳು ನಾಳಿನ ದೇಶದ ಉತ್ತಮ ನಾಗರೀಕರಾಗಲು ಮಾತೃ ಭಾಷೆ ಕನ್ನಡ ಮತ್ತು ಉತ್ತಮ ಗುಣ ಮಟ್ಟದ ಸಂಸ್ಕಾರಯುತ ವಚನ ಸಾಹಿತ್ಯವನ್ನು ಚೆನ್ನಾಗಿ ಬೋಧನೆ ಮಾಡಿದಲ್ಲಿ ಈ ಶಾಲೆಯು ಶ್ರೇಷ್ಠ ಮಕ್ಕಳನ್ನು ನಿರ್ಮಾಣ ಮಾಡಲು ಶಿಕ್ಷರ ಪಾತ್ರ ಅತ್ಯಂತ ಮಹತ್ವದ್ದು ಎಂದು ಗವಿಮಠ ತ್ರಿಪುರಾಂತ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಕಲ್ಯಾಣಕರ್ನಾಟಕ ಶಿಕ್ಷಣ ಸಂಸ್ಥೆಯ ವಿದ್ಯಾಚೇತನ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಮಕ್ಕಳ ದಿನಾಚರಣೆ ಮತ್ತು ನೂತನ ವರ್ಗ ಕೋಣೆಗಳ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯವಹಿಸಿ ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷ ಬಸವಲಿಂಗ ಕೆ. ಸುಭೇದಾರ ಪ್ರಾಸ್ತಾವಿಕ ಮಾತನಾಡಿ, ನಮ್ಮ ವಿದ್ಯಾಚೇತನ ಶಾಲೆಯ ಮಕ್ಕಳು ಕನ್ನಡ ನಾಡು ನುಡಿ ಭಾಷೆಯನ್ನು ಉತ್ತಮ ರೀತಿಯಲ್ಲಿ ಅರಿತು ತಿಳುವಳಿಕೆ ಪಡೆಯುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ದತ್ತಾತ್ರಿ ಸಿ. ಮೂಲಗೆ ಸ್ವಾಗತಿಸಿದರು. ಸಂಸ್ಥೆಯ ಸದಸ್ಯರುಗಳಾದ ಪಾರ್ವತಿ ಆರ್ ಬಿರಾದಾರ,ರವೀಂದ್ರ ಜಿ. ಭೂರಾಳೆ, ಶ್ರೀನಿವಾಸ ಕಠಾರೆ,ರೇಖಾ ಪಿ. ಕುಸುಮಕಾರ ಇದ್ದರು.

ವಿಜಯ ಕರ್ನಾಟಕ VK
ಮಂಗಳವಾರ,16 ನವೆಂಬರ್ 2021, ಕಲಬುರಗಿ

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 23 ನವೆಂಬರ್ 2021
23 NOVEMBER 2021

ಮಕ್ಕಳಿಗೆ ಸಾಮಾನ್ಯ ಜ್ಞಾನ ಅವಶ್ಯಕ

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನುಡಿ



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಹುಣ್ಣಿಮೆ ಕಾರ್ಯಕ್ರಮದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಡಾ.ಜಿ.ಎಸ್.ಭುರಳೆ, ಬಸವಂತಪ್ಪ ಲವಾರೆ, ಬಾಬು ಹೆಗ್ಗೆ ಇತರರಿದ್ದರು.

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಭಾವಿ ಭವಿಷ್ಯ ರೂಪಿಸಿಕೊಳ್ಳುವ ಇಂದಿನ ಮಕ್ಕಳಿಗೆ ಪುಸ್ತಕ ಜ್ಞಾನದ ಜತೆಗೆ ಸಾಮಾನ್ಯ ಜ್ಞಾನ ಮತ್ತು ಉತ್ತಮ ಸಂಸ್ಕಾರ ಅವಶ್ಯಕ ಎಂದು ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಬಾಬು ಹೆಗ್ಗೆಯವರ ಮನೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಹುಣ್ಣಿಮೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಮಕ್ಕಳು ಮೊಬೈಲ್‌ನಿಂದ ದುಷ್ಟಟಗಳಿಗೆ ಆಕರ್ಷಿತರಾಗಿ ಸ್ವಾಸ್ಥ್ಯ ಕೆಡಿಸಿಕೊಳ್ಳುತ್ತಿದ್ದಾರೆ. ಅವರ ಮನಸ್ಸು ಸ್ವಚ್ಛಗೊಳಿಸಲು ಇಂತಹ ಕಾರ್ಯಕ್ರಮ ಪೂರಕ ಎಂದರು.

» ಮನೆ ಮನಗಳಲ್ಲಿ ಸದ್ಭಾವ ಚಿಂತನ ಕಾರ್ಯಕ್ರಮ

ಮಕ್ಕಳ ತಜ್ಞ ಡಾ.ಜಿ.ಎಸ್.ಭುರಳೆ ಮಾತನಾಡಿ, ಮಕ್ಕಳಿಗೆ 5 ವರ್ಷ ಪ್ರೀತಿಯಿಂದ ಬೆಳೆಸಬೇಕು. 12 ವರ್ಷ ಬೆದರಿಸಿ ತಿಳಿಸಬೇಕು. 15 ವರ್ಷದ ನಂತರ ಸ್ನೇಹಿತರಂತೆ ಕಾಣಬೇಕು. ಜತೆಗೆ ಉತ್ತಮ ಸಂಸ್ಕಾರ ಬೆಳೆಸುವಲ್ಲಿ ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು.

ಶ್ರೀಮದ್ವೀರಶೈವ ಸದ್ಭೋದನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿದರು. ಬಾಬು ಹೆಗ್ಗೆ ಅಧ್ಯಕ್ಷತೆ ವಹಿಸಿದ್ದರು. ರೇವಣಸಿದ್ದಯ್ಯ ಮಠಪತಿ, ಶರಣಪ್ಪ ಮೆಗದೆ, ಪ್ರಮುಖರಾದ ನೀಲಕಂಠಪ್ಪ ಮುನ್ನಳ್ಳಿ, ವೀರೇಶ ಹೆಗ್ಗೆ, ರಾಮಚಂದ್ರ ಹುಡುಗೆ, ಬಸವರಾಜ ಬಂದ್ಗೆ, ದಿಲೀಪ ರುಮ್ಮಾ, ಗುರುನಾಥ ಕನಕ, ಮಹೇಶ್ ಸುಂಠನೂರೆ, ಶಿವಶಂಕರ್ ಜಿ, ಬಸವಣಪ್ಪ ಧನ್ನೂರೆ ಇತರರಿದ್ದರು. ಸುರೇಶ ಆಡಕೆ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಣೆ ಮಾಡಿದರು. ವೀರಣ್ಣ ಶೀಲವಂತ ಮಂಗಳ ಗೀತೆ ಹಾಡಿದರು.



ಬಸವಕಲ್ಯಾಣ ನಗರದ ಬಾಬು ಹೆಗ್ಗೆ ಅವರ ನಿವಾಸದಲ್ಲಿ ಹಮ್ಮಿಕೊಂಡ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಗವಿಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಕಂಯುಕ್ತ ಕರ್ನಾಟಕ KALABURAGI
23 ನವೆಂಬರ್ 2021
ಮಂಗಳವಾರ
ಕಲಬುರಗಿ

'ಮಕ್ಕಳಿಗೆ ಸಾಮಾನ್ಯ ಜ್ಞಾನದ ಜತೆ ಸಂಸ್ಕಾರ ಬಹುಮುಖ್ಯ'

ಸಂ.ಕ.ಸಮಾಚಾರ ಬಸವಕಲ್ಯಾಣ

ಮಕ್ಕಳಿಗೆ ಪುಸ್ತಕದ ಜ್ಞಾನದ ಜತೆಗೆ ಸಾಮಾನ್ಯ ಜ್ಞಾನ ಮತ್ತು ತಂದೆ-ತಾಯಿ-ಗುರು-ಹಿರಿಯರನ್ನು ಗೌರವಿಸುವ ಸೇವಾ ಮನೋಭಾವದ ಸಂಸ್ಕಾರ ಕೋಡಬೇಕಾಗಿದೆ ಎಂದು ಇಲ್ಲಿಯ ತ್ರಿಪುರಾಂತನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಬಾಬು ಹೆಗ್ಗೆ ಅವರ ನಿವಾಸದಲ್ಲಿ ಹಮ್ಮಿಕೊಂಡ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ಇಂದಿನ ಮಕ್ಕಳ ಮನಸ್ಸು ಕಲುಷಿತಗೊಂಡಿದ್ದು, ಅನೇಕ ದುಶ್ಚಟಗಳು, ಮೊಬೈಲ್‌ಗಳಿಗೆ ಬಲಿಯಾಗಿ ಸಮಾಜದ ಸ್ವಾಸ್ಥ್ಯ ಕೆಡಿಸುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿ, ಮಕ್ಕಳ ಮನಸ್ಸು ಸ್ವಚ್ಛ ಮಾಡಲು ಒಂದೆ ಮಾರ್ಗ ಅದುವೇ ಮನೆ ಮನಗಳಲ್ಲಿ ಸದ್ಭಾವ ಚಿಂತನ ಕಾರ್ಯಕ್ರಮ ಎಂದರು. ನಿವೃತ್ತ ಟಿಎಚ್‌ಓ, ಮಕ್ಕಳ ತಜ್ಞ ಡಾ. ಜಿ.ಎಸ್.ಭುರಾಳೆ ಮಾತನಾಡಿ ಮಕ್ಕಳಿಗೆ ಪಾಲಕರು ಪಾಲಕರಾಗಿ, ಸ್ನೇಹಿತರಾಗಿ ಕಾಣುವ ಜತೆಗೆ ಸಾಮಾನ್ಯ ಜ್ಞಾನ, ಸಂಸ್ಕಾರಯುತ ಜೀವನ ನಡೆಸುವುದನ್ನು ರೂಢಿಸಿಕೊಳ್ಳಬೇಕು ಎಂದರು.

ಶ್ರೀ ಮದ್ವಿರಶೈವ ಸಂದ್ಭೋದನಾ ಸಂಸ್ಥೆಯ ಅಧ್ಯಕ್ಷ ಬಸವಂತಪ್ಪಾ ಲವಾರೆ ಪ್ರಾಸ್ತಾವಿಕ ಮಾತನಾಡಿದರು. ಬಾಬು ಹೆಗ್ಗೆ ಅಧ್ಯಕ್ಷತೆ ವಹಿಸಿದರು. ರೇವಣಸಿದ್ದಯ್ಯಾ ಮಠಪತಿ, ಶರಣಪ್ಪಾ ಮೆಗದೆ ಇದ್ದರು.

ನೀಲಕಂಠಪ್ಪಾ ಮುನ್ನಳ್ಳಿ, ವೀರೇಶ ಹೆಗ್ಗೆ, ರಾಮಚಂದ್ರ ಹುಡುಗೆ, ಬಸವರಾಜ ಬಂದ್ಗೆ, ದಿಲೀಪ ರುಮ್ಮಾ, ಗುರುನಾಥ ಕನಕಾ, ಮಹೇಶ ಸುಂಠನೂರೆ, ಶಿವಶಂಕರ ಗಂಜ್ಗೆ, ಬಸವಣಪ್ಪಾ ಧನ್ನೂರೆ ಸೇರಿದಂತೆ ಇತರರಿದ್ದರು. ಬನಶಂಕರಿ ಭಜನಾ ಸಂಘದ ಸದಸ್ಯರು ಪ್ರಾರ್ಥನೆ ನಡೆಸಿಕೊಟ್ಟರು. ಸುರೇಶ್ ಆಡಕೆ ಸ್ವಾಗತಿಸಿದರು, ರಮೇಶ ರಾಜೋಳೆ ನಿರೂಪಿಸಿದರು. ವೀರಣ್ಣಾ ಶೀಲವಂತ ವಂದಿಸಿದರು.

Scanned with OKEN Scanner

'ಸ್ವಾರ್ಥ ಭಾವನೆ ದೂರವಾಗಬೇಕು'

ಸಂ.ಕ.ಸಮಾಚಾರ ಬಸವಕಲ್ಯಾಣ

ಸಾಮಾಜಿಕ ಸಾಮರಸ್ಯ ಗಟ್ಟಿಗೊಳ್ಳಬೇಕಿದ್ದರೆ ನಾನು ನನ್ನದು ಎನ್ನುವ ವೈಯಕ್ತಿಕ ಸ್ವಾರ್ಥ ಭಾವನೆ ದೂರವಾಗಬೇಕು ಎಂದು ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ನುಡಿದರು.

ತ್ರಿಪುರಾಂತ ಸಂಸ್ಥಾನ ಗವಿಮಠದಲ್ಲಿ ಮಂಗಳವಾರ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 35ನೇ ಜನ್ಮದಿನೋತ್ಸವ ಹಾಗೂ 16ನೇ ಪಟ್ಟಧಿಕಾರ ವರ್ಧಂತಿ ಮಹೋತ್ಸವದ ನಿಮಿತ್ತ ಆಯೋಜಿಸಲಾದ ಸಾಮಾಜಿಕ ಸಾಮರಸ್ಯ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅನುಭವ ಮಂಟಪ ಎನ್ನುವದು ಒಂದು ಭವ್ಯ ಕಟ್ಟಡವಾಗದೇ ಭಾವನಾತ್ಮಕ ಸಂಗಮದ ಕೇಂದ್ರವಾಗಬೇಕು ಎಂದರು. ಶಾಸಕ ಶರಣು ಸಲಗರ ಉದ್ಘಾಟಿಸಿ ಮಾತನಾಡಿ ಗವಿಮಠದಲ್ಲಿದಾಸೋಹಕ್ಕಾಗಿ ಸುಸಜ್ಜಿತ ಕಟ್ಟಡ ನಿರ್ಮಿಸಲು ಹಾಗೂ ಅಗತ್ಯವಿರುವ ಸೌಲಭ್ಯ ಕಲ್ಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದರು.

ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಮುಖಂಡ ಶಿವಶರಣ ಬಿರಾದಾರ, ಜಿಪಂ ಮಾಜಿ ಸದಸ್ಯ ಆನಂದ ಪಾಟೀಲ್, ಶಬ್ಬೀರ ಪಾಶಾ ಮುಚಾವರ ಸಹ ಮಾತನಾಡಿದರು. ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಮುಖಂಡರಾದ ಮಾಲಾ ನಾರಾಯಣರಾವ, ನಗರಸಭೆ ಪೌರಾಯುಕ್ತ ಶಿವಕುಮಾರ ಇದ್ದರು. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ತುಲಾಭಾರ ಜರುಗಿತು.



ಬಸವಕಲ್ಯಾಣ: ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 35ನೇ ಜನ್ಮದಿನೋತ್ಸವ ಹಾಗೂ 16ನೇ ಪಟ್ಟಧಿಕಾರ ವರ್ಧಂತಿ ಮಹೋತ್ಸವದ ನಿಮಿತ್ತ ನಡೆದ ಸಾಮಾಜಿಕ ಸಾಮರಸ್ಯ ಕಾರ್ಯಕ್ರಮದಲ್ಲಿ ಶ್ರೀ ರಾಜೇಶ್ವರ ಶಿವಾಚಾರ್ಯರು ಮಾತನಾಡಿದರು.

'ಅಭಿವೃದ್ಧಿಗೆ ಸಹಕಾರ ಮುಖ್ಯ'



ಬಸವಕಲ್ಯಾಣ: ಪರಸ್ಪರ ಸಹಕಾರದಿಂದ ಮಾತ್ರ ಎಲ್ಲರ ಅಭಿವೃದ್ಧಿ ನಿಶ್ಚಿತ ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದ್ದಾರೆ.

ನಗರದಲ್ಲಿ ಈಚೆಗೆ ನಡೆದ ನಂದಿ ಬಸವೇಶ್ವರ ಸೌಹಾರ್ದ್ ಸಹಕಾರಿ ಬ್ಯಾಂಕ್ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಶಾಸಕ ಶರಣು ಮಾತನಾಡಿ, 'ಸಹಕಾರ ತತ್ವದ ಸಂಘ ಸಂಸ್ಥೆಗಳ ಬೆಳವಣಿಗೆ ಅಗತ್ಯವಾಗಿದೆ. ಇಂಥ ಸಂಸ್ಥೆಗಳಿಗೆ ಸಹಕಾರ ನೀಡುತ್ತೇನೆ' ಎಂದು ಭರವಸೆ ನೀಡಿದರು.

ಗುರುನಾಥ ಜ್ಯಾಂತಿಕರ್, ಮಹೇಶ ಪಾಟೀಲ, ಸೋಮಶೇಖರ ಮಠಪತಿ, ರಮೇಶ ರಾಜೋಳೆ ಮಾತನಾಡಿದರು.

ನಂದಿ ಬಸವೇಶ್ವರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಎಂ.ಕೆ.ನಂದಿ, ಬಸವಂತಪ್ಪ ಲವಾರೆ, ಎ.ಜಿ.ಪಾಟೀಲ, ರೇವಣಸಿದ್ದಯ್ಯ ಮಠಪತಿ, ಹಣಮಂತಪ್ಪ ಪಾಟೀಲ, ಮಲ್ಲಯ್ಯ ಸ್ವಾಮಿ, ರೇವಣಸಿದ್ದಪ್ಪ ಮಾನಕರ, ಶಿವಬಸಪ್ಪ ಚನ್ನಮಲ್ಲೆ, ಹಣಮಂತಪ್ಪ ಅಂಬುಲಗೆ, ಸಿದ್ದೇಶ್ವರ ಲವಾರೆ, ಲಕ್ಷ್ಮಣ ಶಿಂಗಾರೆ, ಪ್ರಕಾಶ ತೂಗಾವೆ, ಮಲ್ಲಪ್ಪ ರಾಜಾಪುರೆ, ವಿಶಾಲ ಶೇರಿಕಾರ, ಸುರೇಶ ಬುಕ್ಕಿಗಾರ, ನೀಲಾಂಬಿಕಾ ಸ್ವಾಮಿ, ರೂಪಾ ದೇಗಾಂವ, ಸೋಮಶೇಖರ ಪಾಲ್ಗೊಂಡಿದ್ದರು.

ಸಂಯುಕ್ತ ಕರ್ನಾಟಕ

ಸೋಮವಾರದ ಹವಾಮಾನ : ಗರಿಷ್ಠ 27° ಕನಿಷ್ಠ 14° ಪ್ರಜಾವಾಣಿ

ಪ್ರವಚನದಲ್ಲಿ ಮಂಗಳೂರಿನ ಮಹಮ್ಮದ್ ಕುಂಞ ಅಭಿಮತ

ಸೌಹಾರ್ದತೆಯ ಮಾರ್ಗ ತೋರಿದ ಪ್ರವಾದಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಜಗತ್ತಿನಲ್ಲಿ ಆಗಿಹೋಗಿರುವ ಎಲ್ಲ ಸತ್ಪುರುಷರು ಮತ್ತು ದಾರ್ಶನಿಕರು ಶಾಂತಿ ಮತ್ತು ನೆಮ್ಮದಿಯ ಬದುಕಿನ ಶೋಧದಲ್ಲೇ ತಮ್ಮ ಜೀವನ ಕಳೆದರು' ಎಂದು ಮಂಗಳೂರಿನ ಪ್ರವಚನಕಾರ ಮಹಮ್ಮದ್ ಕುಂಞ ಹೇಳಿದ್ದಾರೆ.

ಜಮಾತೆ ಇಸ್ಲಾಮಿ ಹಿಂದ್ ಸಂಘಟನೆಯಿಂದ ಮಂಗಳವಾರ ಇಲ್ಲಿನ ವರ್ಷಾ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರವಾದಿ ಮುಹಮ್ಮದ್ ವಚನ ಸಂದೇಶ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪ್ರವಾದಿ ಮುಹಮ್ಮದ್ ಅವರು ಉತ್ತಮ ವಿಚಾರಗಳ ಬೋಧನೆಯೊಂದಿಗೆ ನುಡಿದಂತೆ ನಡೆಯುವವರು ಕೂಡ ಆಗಿದ್ದರು. ಮನಸ್ಸು ಸ್ವಚ್ಛವಾಗಿರಬೇಕು. ಸದಾ ನಗುನಗುತ ಇರಬೇಕು. ಸಹೋದರರೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಳ್ಳಬೇಕು. ಆಗ ನೆಮ್ಮದಿ ಸಾಧ್ಯ ಎಂದಿದ್ದರು. ಅದರಂತೆ ಶಿಷ್ಯನೊಬ್ಬನ ಮಾಹಿತಿಯಂತೆ ಅವರು ಕೂಡ ಯಾವಾಗಲೂ ಮುಗುಳ್ನಗುತ್ತಲೇ ಇರುತ್ತಿದ್ದರು. ಶಾಂತಿ, ಸೌಹಾರ್ದತೆಯ ಮಾರ್ಗ ತೋರಿದರು' ಎಂದರು.

'ದೇವರು ಯಾವುದೇ ಗೆರೆಗಳನ್ನು ಹಾಕಿಕೊಂಡಿಲ್ಲ. ಆದರೆ, ಮನುಷ್ಯನು, ದೇಶ, ಜಾತಿ, ಧರ್ಮದ ಗೆರೆ ಹಾಕಿಕೊಂಡಿದ್ದಾನೆ. ಸ್ವಾಮಿ ವಿವೇಕಾನಂದರು ಷಿಕ್ಯಾಗೋದಲ್ಲಿ ಭಾಷಣ ಮಾಡುತ್ತ ಸಹೋದರರು ಮತ್ತು ಸಹೋದರಿಯರು ಎಂದು ಎಲ್ಲರನ್ನೂ ಸಂಬೋಧಿಸಿ ಇಂಥ ಗೆರೆಗಳನ್ನು ಅಳಿಸುವ ಪ್ರಯತ್ನ ಮಾಡಿದ್ದರು' ಎಂದರು.

'ಆಧುನಿಕ ತಂತ್ರಜ್ಞಾನ ಬೆಳೆದಂತೆ ಇಡೀ ಜಗತ್ತು ನಮ್ಮ ಅಂಗೈಯಲ್ಲಿ ಇರುತ್ತಿದೆ. ಸಂಪರ್ಕ ಮಾಧ್ಯಮಗಳು ಬೆಳೆದಂತೆ ನಾವೆಲ್ಲ ಭೇದಭಾವಗಳನ್ನು ಬಿಟ್ಟುಕೊಟ್ಟು ಇನ್ನೂ ಹತ್ತಿರಕ್ಕೆ ಬರಬೇಕಾಗಿತ್ತು. ಆದರೆ, ತಪ್ಪು ಕಲ್ಪನೆಗಳು ಬೆಳೆದು ಮೊದಲಿನಕಿಂತಲೂ ದೂರಕ್ಕೆ ಸಾಗುತ್ತಿದ್ದೇವೆ. ವಿದ್ಯಾವಂತರ ಸಂಖ್ಯೆ ಹೆಚ್ಚಿದಷ್ಟು ಅವರವರ ಕುಟುಂಬಗಳಾದರೂ ಸುಖವಾಗಿರಬೇಕಾಗಿತ್ತು. ಆದರೆ, ತಂದೆ ತಾಯಿಯನ್ನೂ ನೋಡದೆ ಅವರನ್ನು ವೃದ್ಧಾಶ್ರಮಗಳ ಪಾಲು ಮಾಡಲಾಗುತ್ತಿದೆ. ಶ್ರೀಮಂತಿಕೆ ಹೆಚ್ಚಿದಷ್ಟು ಹಸಿವಿನಿಂದ ಸಾಯುವವರ ಸಂಖ್ಯೆಯೂ ಅಧಿಕ ಆಗುತ್ತಿದೆ. ಆದ್ದರಿಂದ ದೇವರಲ್ಲಿ ನಂಬಿಕೆ ಇಡುವುದೇ ಇದಕ್ಕೆ ಪರಿಹಾರವಾಗಿದೆ' ಎಂದರು.



ಬಸವಕಲ್ಯಾಣದಲ್ಲಿ ಮಂಗಳವಾರ ನಡೆದ ಪ್ರವಾದಿ ಮುಹಮ್ಮದ್ ವಚನ ಸಂದೇಶ ಕಾರ್ಯಕ್ರಮದಲ್ಲಿ ಮಹಮ್ಮದ್ ಕುಂಞ ಮಾತನಾಡಿದರು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಡಾ.ಜೈಶೇನಪ್ರಸಾದ ಪಾಲ್ಗೊಂಡಿದ್ದರು

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಪ್ರಾಂಶುಪಾಲ ಡಾ.ಜೈಶೇನಪ್ರಸಾದ್, ಜಮಾತೆ ಇಸ್ಲಾಮಿ ಹಿಂದ್ ವಿಭಾಗೀಯ ಅಧ್ಯಕ್ಷ ನಜೀಮುದ್ದೀನ್ ಉಮರಿ ಕಲಬುರಗಿ, ತಾಲ್ಲೂಕು ಘಟಕದ ಅಧ್ಯಕ್ಷ ಕಲೀಮ್ ಅಬೆದ್ ಮನಸೂರಿ, ಫಾದರ್ ಭಾಪು ಕೌಡಿಯಾಳ್, ಇಜರುಲ್ ಹಕ್ ಹಾಸ್ಮಿ, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಪಾಶಾ ಕುರೇಶಿ, ವೈಜನಾಥ ಕಾಮಶೆಟ್ಟಿ, ಗುರುನಾಥ ಗಡ್ಡೆ, ನರಸಿಂಗರೆಡ್ಡಿ ಪಾಲ್ಗೊಂಡಿದ್ದರು.

ಪ್ರಜಾವಾಣಿ ಗುರುವಾರ • ಡಿಸೆಂಬರ್ 2, 2021

Scanned with OKEN Scanner

ಪ್ರವಚನಕಾರ ಮಹಮ್ಮದ್ ಕುಂಞ ಹೇಳಿಕೆ | ಪ್ರವಾದಿ ಮುಹಮ್ಮದ್(ಸ) ವಚನ ಸಂದೇಶ

ಮನಸ್ಸು ಸ್ವಚ್ಛವಿದ್ದರೆ ಜೀವನದಲ್ಲಿ ನೆಮ್ಮದಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಶಾಂತಿ, ನೆಮ್ಮದಿ, ಸಮಾಧಾನದ ಬದುಕಿಗೆ ಬೇಕಿರುವ ಮಾರ್ಗವನ್ನು ಪ್ರವಾದಿ ಮುಹಮ್ಮದ್ ಬೋಧಿಸಿದ್ದಾರೆ ಎಂದು ಮಂಗಳೂರಿನ ಖ್ಯಾತ ಪ್ರವಚನಕಾರ ಮಹಮ್ಮದ್ ಕುಂಞ ಹೇಳಿದರು.

» ಜಮಾತೆ ಇಸ್ಲಾಮಿ ಹಿಂದ್‌ನಿಂದ ಕಾರ್ಯಕ್ರಮ ಆಯೋಜನೆ

ಜಮಾತೆ ಇಸ್ಲಾಮಿ ಹಿಂದ್ ನಗರದ ವರ್ಷಾ ಪ್ಯಾಲೇಸ್ ಪಂಕ್ಷನ್ ಹಾಲ್‌ನಲ್ಲಿ ಮಂಗಳವಾರ ಪ್ರವಾದಿ ಮುಹಮ್ಮದ್(ಸ) ವಚನ ಸಂದೇಶ ಕುರಿತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನಸ್ಸು ಸ್ವಚ್ಛವಿದ್ದರೆ ಬದುಕು ನೆಮ್ಮದಿಯಿಂದ ಕೂಡಿರುತ್ತದೆ. ಮನಸ್ಸು ಸ್ವಚ್ಛಗೊಳಿಸುವ ಮಾರ್ಗವನ್ನು ಜಗತ್ತಿನ ಎಲ್ಲ ದಾರ್ಶನಿಕರು ತೋರಿಸಿಕೊಟ್ಟಿದ್ದಾರೆ. ಇದನ್ನು ಅರ್ಥ ಮಾಡಿಕೊಳ್ಳಬೇಕಿದೆ ಎಂದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಮಂಗಳವಾರ ಜಮಾತೆ ಇಸ್ಲಾಮಿ ಹಿಂದ್‌ನಿಂದ ಪ್ರವಾದಿ ಮುಹಮ್ಮದ್(ಸ) ವಚನ ಸಂದೇಶ ಕುರಿತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಂಗಳೂರಿನ ಖ್ಯಾತ ಪ್ರವಚನಕಾರ ಮಹಮ್ಮದ್ ಕುಂಞ ಮಾತನಾಡಿದರು. ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಜೈಶೇನ್ ಪ್ರಸಾದ, ಫಾದರ್ ಬಾಪು ಇತರರಿದ್ದರು.

ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಸಾಕಷ್ಟು ಪ್ರಗತಿ ಸಾಧಿಸಿದರೂ ಮನುಷ್ಯನ ಬದುಕಿನಲ್ಲಿ ನೆಮ್ಮದಿ ಇಲ್ಲವಾಗಿದೆ. ಶಾಂತಿ, ನೆಮ್ಮದಿಗೆ ಪ್ರವಚನಗಳನ್ನು ಕೇಳುತ್ತಿರಬೇಕು ಎಂದು ನುಡಿದರು.

ಪಿಯು ಕಾಲೇಜು ಪ್ರಾಚಾರ್ಯರ ಸಂಘದ ಅಧ್ಯಕ್ಷ ಡಾ.ಜೈಶೇನ್ ಪ್ರಸಾದ ಮಾತನಾಡಿದರು. ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಪ್ರಮುಖರಾದ ಶಾಂತಪ್ಪ ಜಿ.ಪಾಟೀಲ್, ವೈಜಿನಾಥ ಕಾಮಶೆಟ್ಟಿ, ಬಸವರಾಜ ಸ್ವಾಮಿ, ಶಿವರಾಜ ನರಶೆಟ್ಟಿ, ಫಾದರ್ ಬಾಪು, ನಜೀಮೋದ್ದೀನ್ ಹಸನ್ ಉಮರಿ, ಅಕ್ರಮ್ ಅಲಿ, ಜುಲ್ಫೇಕರ್ ಅಹ್ಮದ್, ಮುಜಾಹಿದ್ ಪಾಷಾ ಖುರೇಶಿ, ರಾಜು ಮಂಠಾಳಿ, ನರಸಿಂಗರೆಡ್ಡಿ, ಗುರುನಾಥ ಗಡ್ಡೆ ಇದ್ದರು. ಕಲೀಮ್ ಅಬೀದ್ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಝಬೀ ಜಾರಿಗರ್ ನಿರೂಪಣೆ ಮಾಡಿದರು.

> ಇಂದು ವಿಶ್ವವೇ ಕೈಯಲ್ಲಿದೆ. ಆದರೆ ತಂತ್ರಜ್ಞಾನ ಹೆಚ್ಚಾದಂತೆ ಸಂಬಂಧಗಳು ಸಡಿಲವಾಗುತ್ತಿವೆ. ಶ್ರೀಮಂತಿಕೆ ಬೆಳೆದಷ್ಟು ಬಡತನ ಹೆಚ್ಚುತ್ತಿದೆ. ವಿದ್ಯಾವಂತರು ಹೆಚ್ಚಿದಷ್ಟು ಸಮಾಜದಲ್ಲಿ ವೃದ್ಧಾಶ್ರಮಗಳು ಹುಟ್ಟಿಕೊಳ್ಳುತ್ತಿವೆ. ಹೀಗೇಕೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಹಿಂದಕ್ಕೆ ತಿರುಗಿ ನೋಡಿ ದಾರ್ಶನಿಕರನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕಿದೆ.
>
> **| ಮಹಮ್ಮದ್ ಕುಂಞ**
> ಖ್ಯಾತ ಪ್ರವಚನಕಾರ, ಮಂಗಳೂರು

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಶನಿವಾರ 4 ಡಿಸೆಂಬರ್ 2021
4 DECEMBER 2021

ಕಲ್ಯಾಣದಲ್ಲಿ ದಾಸೋಹ ದಿನ

ಬಸವಕಲ್ಯಾಣ: ತುಮಕೂರು ಸಿದ್ಧಗಂಗಾ ಮಠದ ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಸ್ವಾಮೀಜಿ ತೃತೀಯ ಪುಣ್ಯಸ್ಮರಣೆ ನಿಮಿತ್ತ ನಗರದ ಬಸವೇಶ್ವರ ವೃತ್ತದಲ್ಲಿ ಶುಕ್ರವಾರ ಶ್ರೀ ಬಸವೇಶ್ವರ ನಂದಿ ಧ್ವಜ ತರಬೇತಿ ಸಮಿತಿಯಿಂದ ದಾಸೋಹ ದಿನ ಆಚರಿಸಲಾಯಿತು. ಗವಿಮಠದ ಶ್ರೀ ಅಭಿನವ ಘನಲಿಂಗ ಶಿವಾಚಾರ್ಯರು ಶ್ರೀ ಶಿವಕುಮಾರ ಸ್ವಾಮೀಜಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ತಹಸೀಲ್ದಾರ್ ಸಾವಿತ್ರಿ ಸಲಗರ, ಬಿಡಿಪಿಸಿ ಕೋಶಾಧ್ಯಕ್ಷ ಸುಭಾಷ ಹೊಳಕುಂದೆ, ಗುರುಪಾದಪ್ಪ ಖರೋಣಿ, ಶಿವರಾಜ ಬಾಲಿಕಿಲೆ, ಸುಭಾಷ ಬಾವಗೆ, ರಾಜಪ್ಪ ಶೀಲವಂತ, ಕಲ್ಲಯ್ಯ ಸ್ವಾಮಿ, ನಾಗೇಶ ಉಡಚಣ, ಸಚಿನ್ ಹುಡಗೆ, ನರೇಶ ದೇಗಲೂರೆ ಇತರರಿದ್ದರು.



ಬಸವಕಲ್ಯಾಣದಲ್ಲಿ ಶುಕ್ರವಾರ ಶ್ರೀ ಬಸವೇಶ್ವರ ನಂದಿ ಧ್ವಜ ತರಬೇತಿ ಸಮಿತಿಯಿಂದ ಆಯೋಜಿಸಿದ್ದ ದಾಸೋಹ ದಿನ ಕಾರ್ಯಕ್ರಮಕ್ಕೆ ಗವಿಮಠದ ಶ್ರೀ ಅಭಿನವ ಘನಲಿಂಗ ಶಿವಾಚಾರ್ಯರು ಚಾಲನೆ ನೀಡಿದರು. ತಹಸೀಲ್ದಾರ್ ಸಾವಿತ್ರಿ ಸಲಗರ, ಗುರುಪಾದಪ್ಪ ಖರೋಣಿ, ಶಿವರಾಜ ಬಾಲಿಕಿಲೆ ಇದ್ದರು.



ಬಸವಕಲ್ಯಾಣದ ಸಂಸ್ಥಾನ ಗವಿಮಠದಲ್ಲಿ ಗುರುವಾರ ನಗರ ಯೋಜನಾ ಪ್ರಾಧಿಕಾರದ ನೂತನ ಅಧ್ಯಕ್ಷ ರಾಜಕುಮಾರ ಬಿರಾದಾರ ಸಿರಗಾಪುರ ಅವರನ್ನು ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು. ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ದೀಪಕ ಗಾಯಕವಾಡ, ಅರವಿಂದ ಮುತ್ತೆ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಶನಿವಾರ 22 ಜನವರಿ 2022
22 JANUARY 2022

Scanned with OKEN Scanner

॥ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಪ್ರಸನ್ನ ॥



ಪೂಜ್ಯ ಶ್ರೀ ಷ.ಬ್ರ ಡಾ.ಅಭಿನವ ಘನಲಿಂಗ
ರುದ್ರಮುನಿ ಶಿವಾಚಾರ್ಯರ



19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ

ಹಾಗೂ 38ನೇ ಜನ್ಮದಿನೋತ್ಸವ

ದಿನಾಂಕ 28 09 2024

ಶನಿವಾರ ಬೆಳ್ಳಗೆ 11:30 ಗಂಟೆಗೆ



ಶ್ರೀ ಜಯರಾಜ ಗೋಪಾಲಕ್ರಿಷ್ಣ ಕಮ್ಮಾ

ಅಭಿನವ ಶ್ರೀಗಳ ಮೋಬೈಲ್ ಜಾಗೃತಿ ಪಾದಯಾತ್ರೆ ಗ್ರಂಥ ಲೋಕಾರ್ಪಣೆ

ಸರ್ವರಿಗೂ ಭಕ್ತಿಯ ಸ್ವಾಗತ-ಸುಸ್ವಾಗತ

ಸ್ಥಳ : ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠ ತ್ರಿಪುರಾಂತ-ಬಸವಕಲ್ಯಾಣ

Scanned with OKEN Scanner

ಪ್ರವಚನಕಾರ ಮಹಮ್ಮದ್ ಕುಂಞ ಹೇಳಿಕೆ | ಪ್ರವಾದಿ ಮುಹಮ್ಮದ್(ಸ) ವಚನ ಸಂದೇಶ

ಮನಸ್ಸು ಸ್ವಚ್ಛವಿದ್ದರೆ ಜೀವನದಲ್ಲಿ ನೆಮ್ಮದಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಶಾಂತಿ, ನೆಮ್ಮದಿ, ಸಮಾಧಾನದ ಬದುಕಿಗೆ ಬೇಕಿರುವ ಮಾರ್ಗವನ್ನು ಪ್ರವಾದಿ ಮುಹಮ್ಮದ್ ಬೋಧಿಸಿದ್ದಾರೆ ಎಂದು ಮಂಗಳೂರಿನ ಖ್ಯಾತ ಪ್ರವಚನಕಾರ ಮಹಮ್ಮದ್ ಕುಂಞ ಹೇಳಿದರು.

» ಜಮಾತೆ ಇಸ್ಲಾಮಿ ಹಿಂದ್‌ನಿಂದ ಕಾರ್ಯಕ್ರಮ ಆಯೋಜನೆ

ಜಮಾತೆ ಇಸ್ಲಾಮಿ ಹಿಂದ್ ನಗರದ ವರ್ಷಾ ಪ್ಯಾಲೇಸ್ ಪಂಕ್ಷನ್ ಹಾಲ್‌ನಲ್ಲಿ ಮಂಗಳವಾರ ಪ್ರವಾದಿ ಮುಹಮ್ಮದ್(ಸ) ವಚನ ಸಂದೇಶ ಕುರಿತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನಸ್ಸು ಸ್ವಚ್ಛವಿದ್ದರೆ ಬದುಕು ನೆಮ್ಮದಿಯಿಂದ ಕೂಡಿರುತ್ತದೆ. ಮನಸ್ಸು ಸ್ವಚ್ಛಗೊಳಿಸುವ ಮಾರ್ಗವನ್ನು ಜಗತ್ತಿನ ಎಲ್ಲ ದಾರ್ಶನಿಕರು ತೋರಿಸಿಕೊಟ್ಟಿದ್ದಾರೆ. ಇದನ್ನು ಅರ್ಥ ಮಾಡಿಕೊಳ್ಳಬೇಕಿದೆ ಎಂದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಮಂಗಳವಾರ ಜಮಾತೆ ಇಸ್ಲಾಮಿ ಹಿಂದ್‌ನಿಂದ ಪ್ರವಾದಿ ಮುಹಮ್ಮದ್(ಸ) ವಚನ ಸಂದೇಶ ಕುರಿತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಂಗಳೂರಿನ ಖ್ಯಾತ ಪ್ರವಚನಕಾರ ಮಹಮ್ಮದ್ ಕುಂಞ ಮಾತನಾಡಿದರು. ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಜೈಶೀನ್ ಪ್ರಸಾದ, ಫಾದರ್ ಬಾಪು ಇತರರಿದ್ದರು.

ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಸಾಕಷ್ಟು ಪ್ರಗತಿ ಸಾಧಿಸಿದರೂ ಮನುಷ್ಯನ ಬದುಕಿನಲ್ಲಿ ನೆಮ್ಮದಿ ಇಲ್ಲವಾಗಿದೆ. ಶಾಂತಿ, ನೆಮ್ಮದಿಗೆ ಪ್ರವಚನಗಳನ್ನು ಕೇಳುತ್ತಿರಬೇಕು ಎಂದು ನುಡಿದರು.

ಪಿಯು ಕಾಲೇಜು ಪ್ರಾಚಾರ್ಯರ ಸಂಘದ ಅಧ್ಯಕ್ಷ ಡಾ.ಜೈಶೀನ್ ಪ್ರಸಾದ ಮಾತನಾಡಿದರು. ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಪ್ರಮುಖರಾದ ಶಾಂತಪ್ಪ ಜಿ.ಪಾಟೀಲ್, ವೈಜಿನಾಥ ಕಾಮಶೆಟ್ಟಿ, ಬಸವರಾಜ ಸ್ವಾಮಿ, ಶಿವರಾಜ ನರಶೆಟ್ಟಿ, ಫಾದರ್ ಬಾಪು, ನಜೀಮೋದ್ದೀನ್ ಹಸನ್ ಉಮರಿ, ಅಕ್ರಮ್ ಅಲಿ, ಜುಲ್ಫೇಕರ್ ಅಹ್ಮದ್, ಮುಜಾಹಿದ್ ಪಾಷಾ ಖುರೇಶಿ, ರಾಜು ಮಂಠಾಳಿ, ನರಸಿಂಗರೆಡ್ಡಿ, ಗುರುನಾಥ ಗಡ್ಡೆ ಇದ್ದರು. ಕಲೀಮ್ ಅಬೀದ್ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಝುಬೀ ಜಾರಿಗರ್ ನಿರೂಪಣೆ ಮಾಡಿದರು.

> ಇಂದು ವಿಶ್ವವೇ ಕೈಯಲ್ಲಿದೆ. ಆದರೆ ತಂತ್ರಜ್ಞಾನ ಹೆಚ್ಚಾದಂತೆ ಸಂಬಂಧಗಳು ಸಡಿಲವಾಗುತ್ತಿವೆ. ಶ್ರೀಮಂತಿಕೆ ಬೆಳೆದಷ್ಟು ಬಡತನ ಹೆಚ್ಚುತ್ತಿದೆ. ವಿದ್ಯಾವಂತರು ಹೆಚ್ಚಿದಷ್ಟು ಸಮಾಜದಲ್ಲಿ ವೃದ್ಧಾಶ್ರಮಗಳು ಹುಟ್ಟಿಕೊಳ್ಳುತ್ತಿವೆ. ಹೀಗೇಕೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಹಿಂದಕ್ಕೆ ತಿರುಗಿ ನೋಡಿ ದಾರ್ಶನಿಕರನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕಿದೆ.
>
> **| ಮಹಮ್ಮದ್ ಕುಂಞ**
> ಖ್ಯಾತ ಪ್ರವಚನಕಾರ, ಮಂಗಳೂರು

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಶನಿವಾರ 4 ಡಿಸೆಂಬರ್ 2021
4 DECEMBER 2021

ಕಲ್ಯಾಣದಲ್ಲಿ ದಾಸೋಹ ದಿನ

ಬಸವಕಲ್ಯಾಣ: ತುಮಕೂರು ಸಿದ್ಧಗಂಗಾ ಮಠದ ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಸ್ವಾಮೀಜಿ ತೃತೀಯ ಪುಣ್ಯಸ್ಮರಣೆ ನಿಮಿತ್ತ ನಗರದ ಬಸವೇಶ್ವರ ವೃತ್ತದಲ್ಲಿ ಶುಕ್ರವಾರ ಶ್ರೀ ಬಸವೇಶ್ವರ ನಂದಿ ಧ್ವಜ ತರಬೇತಿ ಸಮಿತಿಯಿಂದ ದಾಸೋಹ ದಿನ ಆಚರಿಸಲಾಯಿತು. ಗವಿಮಠದ ಶ್ರೀ ಅಭಿನವ ಘನಲಿಂಗ ಶಿವಾಚಾರ್ಯರು ಶ್ರೀ ಶಿವಕುಮಾರ ಸ್ವಾಮೀಜಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ತಹಸೀಲ್ದಾರ್ ಸಾವಿತ್ರಿ ಸಲಗರ, ಬಿಡಿಪಿಸಿ ಕೋಶಾಧ್ಯಕ್ಷ ಸುಭಾಷ ಹೊಳಕುಂದೆ, ಗುರುಪಾದಪ್ಪ ಖರೋಣಿ, ಶಿವರಾಜ ಬಾಲಿಕಿಲೆ, ಸುಭಾಷ ಬಾವಗೆ, ರಾಜಪ್ಪ ಶೀಲವಂತ, ಕಲ್ಲಯ್ಯ ಸ್ವಾಮಿ, ನಾಗೇಶ ಉಡಚಣ, ಸಚಿನ್ ಹುಡಗೆ, ನರೇಶ ದೇಗಲೂರೆ ಇತರರಿದ್ದರು.



ಬಸವಕಲ್ಯಾಣದಲ್ಲಿ ಶುಕ್ರವಾರ ಶ್ರೀ ಬಸವೇಶ್ವರ ನಂದಿ ಧ್ವಜ ತರಬೇತಿ ಸಮಿತಿಯಿಂದ ಆಯೋಜಿಸಿದ್ದ ದಾಸೋಹ ದಿನ ಕಾರ್ಯಕ್ರಮಕ್ಕೆ ಗವಿಮಠದ ಶ್ರೀ ಅಭಿನವ ಘನಲಿಂಗ ಶಿವಾಚಾರ್ಯರು ಚಾಲನೆ ನೀಡಿದರು. ತಹಸೀಲ್ದಾರ್ ಸಾವಿತ್ರಿ ಸಲಗರ, ಗುರುಪಾದಪ್ಪ ಖರೋಣಿ, ಶಿವರಾಜ ಬಾಲಿಕಿಲೆ ಇದ್ದರು.



ಬಸವಕಲ್ಯಾಣದ ಸಂಸ್ಥಾನ ಗವಿಮಠದಲ್ಲಿ ಗುರುವಾರ ನಗರ ಯೋಜನಾ ಪ್ರಾಧಿಕಾರದ ನೂತನ ಅಧ್ಯಕ್ಷ ರಾಜಕುಮಾರ ಬಿರಾದಾರ ಸಿರಗಾಪುರ ಅವರನ್ನು ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು. ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ದೀಪಕ ಗಾಯಕವಾಡ, ಅರವಿಂದ ಮುತ್ತೆ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಶನಿವಾರ 22 ಜನವರಿ 2022
22 JANUARY 2022

Scanned with OKEN Scanner

'ಭಗವದ್ಗೀತೆ ಪಠಣದಿಂದ ನವಚೈತನ್ಯ'

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದಲ್ಲಿ ಭಾನುವಾರ ನಡೆದ ಭಗವದ್ಗೀತೆ ಪ್ರಚಾರ ಅಭಿಯಾನದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು

ಬಸವಕಲ್ಯಾಣ: 'ಭಗವದ್ಗೀತೆಯ ಪಠಣದಿಂದ ನವಚೈತನ್ಯ ಪ್ರಾಪ್ತ ಆಗುತ್ತದೆ' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ರಾಮಕೃಷ್ಣ ಪ್ರಾಥಮಿಕ ಶಾಲೆಯಲ್ಲಿ ಭಾನುವಾರ ನಡೆದ ಭಗವದ್ಗೀತಾ ಪ್ರಚಾರ ಅಭಿಯಾನದಲ್ಲಿ ಅವರು ಮಾತನಾಡಿದರು.

'ಭಗವದ್ಗೀತೆ ಹಿಂದೂಗಳ ಧರ್ಮಗ್ರಂಥ. ಅದು ಎಲ್ಲರ ಮನೆಯಲ್ಲಿಯೂ ಇರಬೇಕು. ಮಾನಸಿಕ ಶಾಂತಿ, ನೆಮ್ಮದಿಗೆ ಧರ್ಮಗ್ರಂಥಗಳ ಅಧ್ಯಯನ ಅಗತ್ಯ' ಎಂದರು.

ಡಾ.ಸಂದೀಪ ಪಾಟೀಲ ಮಾತನಾಡಿ, 'ಭಗವದ್ಗೀತೆ ಗ್ರಂಥವು ಈಚೆಗೆ ನವೀನ ತಂತ್ರಜ್ಞಾನ ಅಳವಡಿಸಿಕೊಂಡು ಪ್ರಕಟವಾಗಿದೆ. ಪೆನ್ ಅನ್ನು ಶ್ಲೋಕದ ಮೇಲೆ ಅಥವಾ ಚಿತ್ರದ ಮೇಲೆ ಹಿಡಿದರೆ ಅದರ ಧ್ವನಿ ಪೆನ್ ಮೂಲಕ ಕೇಳಿಸುತ್ತದೆ. ಯಾವುದೇ ಭಾಷೆಯಲ್ಲಿ ಶ್ಲೋಕಗಳ ಅರ್ಥ ಕೂಡ ಕೇಳಿಸುತ್ತದೆ' ಎಂದರು.

ವಂದನಾ ರಂಜೋಳಕರ್ ಮಾತನಾಡಿ, 'ಗೀತೆ ಪಠಿಸಿ ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು ದೊರಕುತ್ತದೆ' ಎಂದರು.

ಪ್ರದೀಪಕುಮಾರ ರೇಖಿ, ಉಪನ್ಯಾಸಕ ನರಸಿಂಗರೆಡ್ಡಿ ಗದ್ದೇಗಾಂವ, ನಿವೃತ್ತ ಶಿಕ್ಷಕ ಬಸವರಾಜ ಹಿರೇಮಠ, ರಮೇಶ ರಾಜೋಳೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಜಗನ್ನಾಥ ಪತಂಗೆ, ವಿಲಾಸ ಮಾನೆ, ಚಂದ್ರಕಾಂತ ಹಳ್ಳೆ, ಶ್ರದ್ಧಾ ಪಾಟೀಲ, ವ್ಯವಸ್ಥಾಪಕ ಪ್ರಭಾಕರ ಕಳಮಸೆ, ಚನ್ನವೀರ ಜಮಾದಾರ, ಚಂದ್ರಕಾಂತ ಬಿರಾದಾರ ಮತ್ತು ಪ್ರಮುಖರು ಇದ್ದರು.

ಪ್ರಜಾವಾಣಿ ಸೋಮವಾರ • ಡಿಸೆಂಬರ್ 6, 2021

ನಂ.1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 22 ಡಿಸೆಂಬರ್ 2021
22 DECEMBER 2021

ಕಲ್ಯಾಣದ ಚಿಂತನೆ ಜಗತ್ತಿಗೆ ಪ್ರೇರಣೆ

ಖ್ಯಾತ ಚಿಂತಕ ಕೆ.ಎನ್.ಗೋವಿಂದಾಚಾರ್ಯ ಅಭಿಮತ | ಸಮಗ್ರ ಭಾರತ ಅಭಿವೃದ್ಧಿ ಚಿಂತನ ಸಭೆ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಬಸವಣ್ಣನವರ ಕಾಯಕ ಭೂಮಿ ಬಸವಕಲ್ಯಾಣಕ್ಕೆ ಬಂದಿರುವುದರಿಂದ ಆತ್ಮವಿಶ್ವಾಸ ಹೆಚ್ಚಾಗಿದೆ. ಭಾರತ ವಿಶ್ವದಲ್ಲಿ ತನ್ನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಲಿದೆ. ಇದರಲ್ಲಿ ಸಂದೇಹವಿಲ್ಲ ಎನ್ನುವ ವಿಶ್ವಾಸ ಹೆಚ್ಚಾಗಿದೆ ಎಂದು ಭಾರತ ವಿಕಾಸ ಸಂಗಮದ ಮುಖ್ಯ ಸಂಯೋಜಕ, ಖ್ಯಾತ ಚಿಂತಕ ಕೆ.ಎನ್. ಗೋವಿಂದಾಚಾರ್ಯ ಹೇಳಿದರು.

» ಬಸವಕಲ್ಯಾಣಕ್ಕೆ ಬಂದು ಆತ್ಮ ವಿಶ್ವಾಸ ಹೆಚ್ಚಿದೆ

ನೇಡಂನ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಸಂಚಾಲಿತ ವಿಕಾಸ ಅಕಾಡೆಮಿಯಿಂದ ನಗರದ ಶ್ರೀ ಸದ್ಗುರು ಸದಾನಂದ ಸ್ವಾಮಿ ಮಠದ ಪರಿಸರದಲ್ಲಿ ಆಯೋಜಿಸಿದ್ದ 'ಸಮಗ್ರ ಭಾರತ ಅಭಿವೃದ್ಧಿ ವಿಶೇಷ ಚಿಂತನ ಸಭೆ'ಯಲ್ಲಿ ಉಪನ್ಯಾಸ ನೀಡಿದ ಅವರು, ಕಲ್ಯಾಣದಲ್ಲಿ ಅನುಭವ ಮಂಟಪ ಮರು ಸ್ಥಾಪನೆಯಾಗಲಿದೆ. ಈ ಅಪೂರ್ವ ಕ್ಷಣಕ್ಕೆ ಸಾಕ್ಷಿಯಾಗುವ ಸೌಭಾಗ್ಯ ಇಲ್ಲಿಯ ಜನರಿಗೆ ಸಿಗಲಿದೆ. ಇಲ್ಲಿಯ ಜನರ ದರ್ಶನ ಪಡೆಯುವ ಸೌಭಾಗ್ಯ ನನಗೆ ಸಿಕ್ಕಿದೆ ಎಂದರು.

ಅನುಭವ ಮಂಟಪದ ಚಿಂತನೆಗಳು ಶ್ರೇಷ್ಠವಾಗಿವೆ. ಇದು ಜಗತ್ತಿಗೆ ಪ್ರೇರಣೆ ನೀಡುವ ಕೇಂದ್ರವಾಗಲಿದೆ. ಇಡೀ ಜಗತ್ತಿನಲ್ಲಿ ಈಗ ಕಾಡುತ್ತಿರುವ ಸಂಕಟಗಳಿಂದ ಮೇಲೆತ್ತಿ ಮುನ್ನಡೆಸುವ ಪ್ರಯತ್ನದಲ್ಲಿ ಭಾರತ ತನ್ನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಲಿದೆ ಎನ್ನುವ ವಿಶ್ವಾಸ ಹೆಚ್ಚಿಸಿದೆ ಎಂದು ಹೇಳಿದರು.

ವ್ಯಕ್ತಿ ವಿಕಾಸದಲ್ಲಿ ಸಮಾಜದ ವಿಕಾಸ, ಸಮಾಜದ ವಿಕಾಸದಲ್ಲಿ ದೇಶದ ವಿಕಾಸ ಅಡಗಿದೆ. ಅಭಿವೃದ್ಧಿಯಲ್ಲಿ ಎಲ್ಲರ ಸಹಭಾಗಿತ್ವ ಅವಶ್ಯಕ. ಒಗ್ಗಟ್ಟಿನಲ್ಲಿ ನಡೆದಾಗ ವಿಕಾಸದ ಮಾರ್ಗಗಳು ತೆರೆದುಕೊಳ್ಳುತ್ತವೆ. ಒಳ್ಳೆಯ ಕೆಲಸ ಮಾಡುವ ಜನ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ ಇದು ಪ್ರಚಾರವೇ ಆಗುವುದಿಲ್ಲ. ಒಳ್ಳೆಯವರನ್ನು, ಒಳ್ಳೆಯ ಕೆಲಸವನ್ನು ಗುರುತಿಸಿ, ಪರಿಚಯಿಸುವ ಕೆಲಸ ಅವಶ್ಯಕವಿದ್ದು, ಇದು ಬೇರೆಯವರಿಗೆ ಪ್ರೇರಣೆಯಾಗುತ್ತದೆ ಎಂದರು.

ಗವಿಮಠ ಸಂಸ್ಥಾನದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಡಾ.ಬಸವರಾಜ ಪಾಟೀಲ್ ಸೇಡಂ ಪ್ರಾಸ್ತಾವಿಕ ಮಾತನಾಡಿದರು. ನ್ಯಾಯವಾದಿ ಎಂ.ಜಿ.ಮಹಾಜನ್, ಬಿಕೆಡಿಬಿ ತಾಂತ್ರಿಕ ಸಲಹೆಗಾರ, ನಿವೃತ್ತ ಮುಖ್ಯ ಇಂಜಿನಿಯರ್ ಬಸವರಾಜ ಗದ್ವಾಲ ಇತರರಿದ್ದರು. ವಿಕಾಸ ಅಕಾಡೆಮಿ ಜಿಲ್ಲಾ ಸಂಚಾಲಕ ಶಿವಶಂಕರ ತರನಳ್ಳಿ ಸ್ವಾಗತಿಸಿದರು. ಗುರು ದೇಗಾಂವ ನಿರೂಪಣೆ ಮಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಸೋಮವಾರ ಆಯೋಜಿಸಿದ್ದ 'ಸಮಗ್ರ ಭಾರತ ಅಭಿವೃದ್ಧಿ ವಿಶೇಷ ಚಿಂತನ ಸಭೆ'ಯನ್ನು ಖ್ಯಾತ ಚಿಂತಕ ಕೆ.ಎನ್.ಗೋವಿಂದಾಚಾರ್ಯ ಉದ್ಘಾಟಿಸಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಬಸವರಾಜ ಪಾಟೀಲ್ ಸೇಡಂ, ಎಂ.ಜಿ.ಮಹಾಜನ್, ಬಸವರಾಜ ಗದ್ವಾಲ, ಶಿವಶಂಕರ ತರನಳ್ಳಿ ಇತರರಿದ್ದರು.

ಹಿಂದು ಸಾಂಸ್ಕೃತಿ ಯಾವುದೇ ಪುಸ್ತಕ, ವಸ್ತು ಅಲ್ಲ. ಹಿಂದು ಜೀದು ಜೀವನ ಜೀವಿಸುವದರಿಂದ ಆಗಲಿದೆ. ಈ ಜೀವನದಿಂದ ಸಂಸ್ಕೃತಿ, ಹಿಂದು ಸಮಾಜದ ಸಂರಕ್ಷಣೆ ಆಗಿತ್ತದೆ. 2025ರಲ್ಲಿ ನಡೆಯಲಿರುವ ಸಂಸ್ಕೃತಿ ಉತ್ಸವದ ಬಗ್ಗೆ ಯುವಕರಿಗೆ ಮತ್ತು ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಬೇಕು. ಉತ್ಸವದ ಸಂದೇಶ ಎಲ್ಲೆಡೆ ಪಸರಿಸಬೇಕಿದೆ.

| ಕೆ.ಎನ್.ಗೋವಿಂದಾಚಾರ್ಯ ಖ್ಯಾತ ಚಿಂತಕ

ಒಳ್ಳೆಯ ಕಾರ್ಯ ಗುರುತಿಸಿ ಸ್ಮರಿಸಬೇಕಿದೆ

ಭಾರತ ಪ್ರಾಚೀನ ದೇಶವಾಗಿದೆ. ಸಾವಿರಾರು ವರ್ಷಗಳ ಇತಿಹಾಸವಿದೆ. ದೇಶದ ಸ್ವಾಭಿಮಾನದ ಸ್ಥಳಗಳನ್ನು, ಚಾರಿತ್ರಿಕ, ಪಾರಂಪರಿಕ ಸ್ಥಳಗಳನ್ನು ಗುರುತಿಸಿ ಸಂರಕ್ಷಿಸಬೇಕಿದೆ ಎಂದು ಖ್ಯಾತ ಚಿಂತಕ ಕೆ.ಎನ್.ಗೋವಿಂದಾಚಾರ್ಯ ಹೇಳಿದರು. ಒಳ್ಳೆಯ ಕಾರ್ಯ ಮಾಡಿದವರನ್ನು, ಕಾರ್ಯವನ್ನು ಗುರುತಿಸಿ ಸ್ಮರಿಸುವ ಕೆಲಸ ನಡೆಯಬೇಕಿದೆ. ಸಾವಿರಾರು ವರ್ಷಗಳ ಪಾರಂಪರಿಕ ತಾಣಗಳ ಬಗ್ಗೆ ಡಾಕ್ಯುಮೆಂಟ್ರಿ ಮಾಡಬೇಕು. ಹಾಗೆ ಒಳ್ಳೆ ಕೆಲಸ ಮಾಡುವವರನ್ನು ಗುರುತಿಸಿ ಅವರ ಬಗ್ಗೆ ಡಾಕ್ಯುಮೆಂಟ್ರಿ ಮಾಡಬೇಕು. ಈ ಎರಡು ಕೆಲಸ ಅವಶ್ಯಕ. ಸವಾಂಗೀಣ ವಿಕಾಸವೇ ವಿಕಾಸ ಅಕಾಡೆಮಿಯ ಆಶಯವಾಗಿದೆ ಎಂದರು.

ಸಮಗ್ರ ವಿಕಾಸದ ಆಶಯ

ಸರ್ಕಾರದ ಯಾವುದೇ ಅನುದಾನವಿಲ್ಲದೆ ವಿಕಾಸ ಅಕಾಡೆಮಿಯಿಂದ ಸಾಕಷ್ಟು ಕೆಲಸ ಮಾಡಲಾಗಿದ್ದು, ಸಮಗ್ರ ವಿಕಾಸವೇ ಆಶಯವಾಗಿದೆ. 17 ವರ್ಷಗಳಲ್ಲಿ ಮಾಡಿದ ಕೆಲಸಗಳನ್ನು ಗುರುತಿಸಿ ಸರ್ಕಾರ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಮತ್ತು ಸಾಂಸ್ಕೃತಿಕ ಸಂಘ ಸ್ಥಾಪಿಸಿ, ಇದರ ಮೂಲಕ ಕೆಲಸ ಮಾಡಲು ಜವಾಬ್ದಾರಿ ವಹಿಸಿದೆ ಎಂದು ಸಂಘದ ಅಧ್ಯಕ್ಷ ಡಾ.ಬಸವರಾಜ ಪಾಟೀಲ್ ಸೇಡಂ ಹೇಳಿದರು. 2010ರಲ್ಲಿ ಕಲಬುರಗಿ ಕಂಪು, 2014ರಲ್ಲಿ ಕಲ್ಯಾಣ ಕರ್ನಾಟ ವಿಕಾಸ ಜಾತ್ರೆ ಮಾಡಿದ ನಂತರ ಈ ಭಾಗಕ್ಕೆ ಕಲ್ಯಾಣ ಕರ್ನಾಟಕ ಎಂದು ಸರ್ಕಾರ ಅಧಿಕೃತ ಘೋಷಣೆ ಮಾಡಿದೆ. 2025ರಲ್ಲಿ ಬೃಹತ್ ಪ್ರಮಾಣದಲ್ಲಿ 280 ಎಕರೆ ಪ್ರದೇಶದಲ್ಲಿ ಸಾಂಸ್ಕೃತಿಕ ಉತ್ಸವ ಆಚರಿಸುವ ಮೂಲಕ ಜಗತ್ತಿಗೆ ಒಳ್ಳೆಯ ಸಂದೇಶ ನೀಡುವ ಆಶಯವಿದೆ ಎಂದರು.

Scanned with OKEN Scanner



ಬಸವಕಲ್ಯಾಣದಲ್ಲಿ ಸೋಮವಾರ ನಿವೃತ್ತ ಸೈನಿಕರನ್ನು ಸನ್ಮಾನಿಸಲಾಯಿತು. ಶಾಸಕ ಶರಣು ಸಲಗರ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪಾಲ್ಗೊಂಡಿದ್ದರು

ದಿವ್ಯ ಕಾಶಿ ಭವ್ಯ ಕಾಶಿ ನೇರಪ್ರಸಾರ ವೀಕ್ಷಣೆ

ನಿವೃತ್ತ ಸೈನಿಕರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಕಾಶಿ ವಿಶ್ವನಾಥ ಕಾರಿಡಾರ್ ಉದ್ಘಾಟನೆ ಹಮ್ಮಿಕೊಂಡಿದ್ದರಿಂದ ಆ ಕಾರ್ಯಕ್ರಮದ ನೇರಪ್ರಸಾರ ವೀಕ್ಷಣೆಯ ವ್ಯವಸ್ಥೆ ಇಲ್ಲಿನ ಆರ್ಯ ಸಮಾಜ ಭವನದಲ್ಲಿ ಮಾಡಲಾಗಿತ್ತು. 25 ನಿವೃತ್ತ ಸೈನಿಕರನ್ನು ಸನ್ಮಾನಿಸಲಾಯಿತು.

ಶಾಸಕ ಶರಣು ಸಲಗರ ಮಾತನಾಡಿ, 'ಮೋದಿ ಅವರಿಂದಾಗಿ ದೇಶದ ಅಪಾರ ಭಕ್ತರ ಶ್ರದ್ಧಾ ಕೇಂದ್ರವಾದ ಕಾಶಿ ವಿಶ್ವನಾಥ ದೇವಸ್ಥಾನವು ಹೊಸ ರೂಪ ಪಡೆದಿದೆ. ಕಾರಿಡಾರ್ ರೂಪದಲ್ಲಿ ಅದನ್ನು ಅಭಿವೃದ್ಧಿಗೊಳಿಸಲಾಗಿದೆ. ಬಿಜೆಪಿ ಸರ್ಕಾರ ದೇಶದ ಸಂಸ್ಕೃತಿ, ಪರಂಪರೆ ಉಳಿಸುವ ನಿಟ್ಟಿನಲ್ಲಿ ಇಂಥ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ' ಎಂದರು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಅವರು ಮಾತನಾಡಿ, 'ಹಿಂದುಗಳ ಶ್ರದ್ಧಾ ಕೇಂದ್ರಗಳ ರಕ್ಷಣೆಗೈದು ಹಾಗೂ ಅಭಿವೃದ್ಧಿಗೈದು ದೇಶದ ಸಂಸ್ಕೃತಿ ಎತ್ತಿ ಹಿಡಿಯುತ್ತಿರುವ ಪ್ರಧಾನಿ ಮೋದಿಯವರ ಕಾರ್ಯ ಶ್ಲಾಘನೀಯವಾಗಿದೆ' ಎಂದರು.

ಬಿಜೆಪಿ ನಗರ ಘಟಕದ ಕಾರ್ಯದರ್ಶಿ ಸಿದ್ದು ಬಿರಾದಾರ ಮಾತನಾಡಿದರು.

ನಗರ ಘಟಕದ ಅಧ್ಯಕ್ಷ ಅರವಿಂದ ಮುತ್ತೆ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ದೀಪಕ ಗಾಯಕವಾಡ, ಸಂಜೀವಕುಮಾರ ಜಾಧವ, ಸಂಜೀವ ಸುಗೂರೆ, ದಿಗಂಬರ ಜಲ್ದೆ, ಶೋಭಾ ತೆಲಂಗ, ಶಿವಾಜಿ ಜಗತಾಪ, ಶಿವರಾಜ ಮೆಂಗದೆ, ಬಾಬುರಾವ್ ಹಿಂಶೆ, ರಾಜೀವ ಭೋಸ್ಲೆ, ಸಂಜೀವ ಮೂಲಗೆ, ವಿಜಯಕುಮಾರ ವಕಾರೆ, ರಾಜೀವ ಬೊಕ್ಕೆ, ಸಾಗರ ಸುಗೂರೆ, ಕಿಶನಸಿಂಗ್ ಹಜಾರಿ, ಗಿರೀಶ ಮುತ್ತಂಗೆ, ಪ್ರಮೀಳಾ ಡಾಂಗೆ, ರಾಜೀವ ರಾಜೋಳೆ, ಮಾಲಾಶ್ರೀ, ಸುರೇಖಾ, ರಾಜಕುಮಾರ ಅಲಶೆಟ್ಟಿ, ರಮೇಶ ಕಾಂಬಳೆ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಹೋಮ ಮತ್ತು ಭಜನೆ ಹಮ್ಮಿಕೊಳ್ಳಲಾಗಿತ್ತು.



ಗುರು ಚನ್ನಬಸವ ಪಟ್ಟದ್ದೇವರು ಸ್ಮರಣೋತ್ಸವ

ಬಸವಕಲ್ಯಾಣದಲ್ಲಿ ಸೋಮವಾರ ಆಯೋಜಿಸಿದ್ದ ಮನೆ ಮನಗಳಲ್ಲಿ ಸದ್ಭಾವನ ಹಚ್ಚೋಣ ಕಾರ್ಯಕ್ರಮದಲ್ಲಿ ಪೂ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣಪ್ಪ ಬುಕ್ಕಿಗಾರ, ಮಲ್ಲಿಕಾರ್ಜುನ ನಂದಿ ಇದ್ದರು.

ಬಸವಕಲ್ಯಾಣ: ಉತ್ತಮನಾದ ಶಿಷ್ಯನು ಗುರುವಿನಲ್ಲಿ ದೇವರನ್ನು ಮತ್ತು ದೇವರಲ್ಲಿ ಗುರುವನ್ನು ಕಾಣುತ್ತಿರುತ್ತಾನೆ ಎಂದು ಗವಿಮಠದ ಪೂ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಶ್ರೀಶಂಕರ ಕಾಲನಿಯಲ್ಲಿ ಸೋಮವಾರ ಆಯೋಜಿಸಿದ್ದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಹುಟ್ಟಿಸೋ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀಗಳು, ಮೂಯಾ ಶಕ್ತಿ ವಿಶಿಷ್ಟವಾದ ಶಿವನು ಯಾರಿಗೂ ಗೋಚರವಾಗುವುದಿಲ್ಲ. ಆದರೆ ಅವನೇ ತನ್ನ ಮಾಯಾ ಶಕ್ತಿಯನ್ನು ಬಿಟ್ಟು ಗುರುವಾಗಿ ಬಂದಾಗ ಸರ್ವರಿಗೂ ಕಾಣುತ್ತಾನೆ. ಅಂತೆಯೇ ಗುರು ಎಂದರೆ ಪ್ರತ್ಯಕ್ಷವಾಗಿ ತೋರುವ ದೇವರೆಂದೇ ಭಾವಿಸಬೇಕು ಎಂದರು.

ಶರಣಪ್ಪ ಬುಕ್ಕಿಗಾರ ಅಧ್ಯಕ್ಷತೆ ವಹಿಸಿದ್ದರು. ಶ್ರೀಮದ್ವಿರಕ್ತ ಸದ್ಭೋದನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲಾಖಾ ಪ್ರಾಸ್ತಾವಿಕ ಮಾತನಾಡಿದರು. ನಿವೃತ್ತ ಕೃಷಿ ಅಧಿಕಾರಿ ಮಲ್ಲಿಕಾರ್ಜುನ ನಂದಿ, ಸುರೇಶ ಬುಕ್ಕಿಗಾರ, ರೇವಣಸಿದ್ದಯ್ಯ ಮಠಪತಿ, ರಮೇಶ್ ಬುಕ್ಕಿಗಾರ, ರಾಜಕುಮಾರ, ಚಂದ್ರಕಾಂತ, ಬನಶೆಟ್ಟಿಯ್ಯ ಸ್ವಾಮಿ, ಶಿವಾನಂದ ಮುದಗಡೆ, ಎ.ಜಿ.ಪಾಟೀಲ್, ಫ್ರೊ.ಸೂರ್ಯಕಾಂತ ಶೀಲವಂತ, ಲಕ್ಷ್ಮಣಸಿಂಗ್ ಸಿಂಗಾರೆ, ಶಾಂತವೀರ ಸ್ವಾಮಿ, ಈರಮ್ಮ ಬಿರಡೆ, ಶೀಲಾವತಿ ಬಿರಡೆ, ವಿದ್ಯಾವತಿ ಕೋರೆ, ಮಿನಾಕ್ಷಿ ಬುಡುಗೆ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
• VIJAYAVANI » KALABURAGI
ಬುಧವಾರ 22 ಡಿಸೆಂಬರ್ 2021
22 DECEMBER 2021

Scanned with OKEN Scanner

ಮನೆಯಲ್ಲಿ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮ

ಗುರು, ದೇವರಲ್ಲಿ ಬೇಧ ಭಾವವಿಲ್ಲ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಉತ್ತಮನಾದ ಶಿಷ್ಯನು ಗುರು ಹಾಗೂ ದೇವರಲ್ಲಿ ಭೇದವನ್ನು ಮಾಡುವುದಿಲ್ಲ. ಅವನು ಗುರುವಿನಲ್ಲಿ ದೇವರನ್ನು ಮತ್ತು ದೇವರಲ್ಲಿ ಗುರುವನ್ನು ಕಾಣುತ್ತಿರುತ್ತಾನೆ ಎಂದು ಇಲ್ಲಿಯ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಜೈಶಂಕರ್ ಕಾಲೂನಿಯ ಶರಣಪ್ಪಾ ಬುಕ್ಕಿಗಾರ ಅವರ ಮನೆಯಲ್ಲಿ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮ ದಲ್ಲಿ ಸಾನಿಧ್ಯವಹಿಸಿ ಆಶೀರ್ವಚನ ನೀಡಿದ ಅವರು, ಮಾಯಾ ಶಕ್ತಿ ವಿಶಿಷ್ಟವಾದ ಶಿವನು ಯಾರಿಗೂ ಗೋಚರವಾ ಗುವುದಿಲ್ಲ ಆದರೆ, ಅವನೇ ತನ್ನ ಮಾಯಾ ಶಕ್ತಿಯನ್ನು ಬಿಟ್ಟು ಗುರುವಾಗಿ ಬಂದಾಗ ಸರ್ವರಿಗೂ ಪ್ರತ್ಯಕ್ಷವಾಗಿ ತೋರುತ್ತಾನೆ. ಅಂತೆಯೇ ಗುರು ಎಂದರೆ ಪ್ರತ್ಯಕ್ಷವಾಗಿ ತೋರುವ ದೇವರೆಂತಲೇ ಭಾವಿಸಬೇಕು ಎಂದರು.ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಮಲ್ಲಿಕಾರ್ಜುನ ನಂದಿ, ಶರಣಪ್ಪಾ ಬುಕ್ಕಿಗಾರ ಅಧ್ಯಕ್ಷತೆ ವಹಿಸಿದ್ದರು ಪ್ರಾಸ್ತಾವಿಕವಾಗಿ ಶ್ರೀಮದ್ವಿರಶೈವ ಸಂಭ್ಭೋದನಾ ಸಂಸ್ಥೆಯ ಅಧ್ಯಕ್ಷ ಬಸವಂತಪ್ಪಾ ಲವಾರೆ ಪ್ರಾಸ್ತಾವಿಕ ಮಾತನಾಡಿ, ಈ ಕಾರ್ಯಕ್ರಮದ ಉದ್ದೇಶಗಳನ್ನು ವಿವರಿಸಿದರು.

ಈ ಕಾರ್ಯಕ್ರಮದಲ್ಲಿ ಸುರೇಶ್ ಶರಣಪ್ಪಾ ಬುಕ್ಕಿಗಾರ, ರಮೇಶ್ ಶರಣಪ್ಪಾ ಬುಕ್ಕಿಗಾರ, ರಾಜಕು ಮಾರ,ಚಂದ್ರಕಾಂತ ಸಂಗ್ರಾಮಪ್ಪ, ಬಸತಿರ್ಥಯ್ಯ ಸ್ವಾಮಿ, ಶಿವಾನಂದ ಮುದಗಡೆ, ಸೂರ್ಯಕಾಂತ ಶೀಲವಂತ, ಲಕ್ಷ್ಮಣ ಸಿಂಗ ಸಿಂಗಾರೆ, ಎ.ಜಿ. ಪಾಟೀಲ್, ಶಾಂತವೀರ ಸ್ವಾಮಿ, ಈರಮ್ಮ ಚಿರಡೆ, ಶೀಲಾವತಿ ಚಿರಡೆ, ವಿದ್ಯಾವತಿ ಕೊರೆ, ಮಿನಾಕ್ಷೀ ಬುಡುಗೆ, ಸರಸ್ವತಿ ಬೆಂಬಳಿ, ಕವಿತಾ ಹರನಾಳೆ, ರೇಖಾದೇವಿ ಚಿರಡೆ, ಪುಷ್ಪಾ ದುಬಳಗುಂಡೆ ಸೇರಿ ಅನೇಕರಿದ್ದರು. ರೇವಣಸಿದ್ದಯ್ಯ ಮಠಪತಿ ಪ್ರಾರ್ಥನೆ ಗೀತೆ ಹಾಡಿದರು.



ಬಸವಕಲ್ಯಾಣ ನಗರದ ಜೈಶಂಕರ್ ಕಾಲೂನಿಯ ಶರಣಪ್ಪ ಬುಕ್ಕಿಗಾರ ಅವರ ಮನೆಯಲ್ಲಿ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಮಲ್ಲಿಕಾರ್ಜುನ ನಂದಿ, ಶರಣಪ್ಪಾ ಬುಕ್ಕಿಗಾರ ಇದ್ದರು.

ಸಮಾಜದ ವಿಕಾಸದಲ್ಲಿ ದೇಶದ ವಿಕಾಸ

■ ವಿಕ ಸುದ್ದಿಲೋಕ ಬಸವಕಲ್ಯಾಣ

ವ್ಯಕ್ತಿ ವಿಕಾಸದಲ್ಲಿ ಸಮಾಜದ ವಿಕಾಸ, ಸಮಾಜದ ವಿಕಾಸದಲ್ಲಿ ದೇಶದ ವಿಕಾಸ ಅಡಗಿದೆ ಎಂದು ಭಾರತ ವಿಕಾಸ ಸಂಗಮದ ಮುಖ್ಯ ಸಂಯೋಜಕ ಹಾಗೂ ಚಿಂತಕ ಕೆ.ಎನ್. ಗೋವಿಂದಾಚಾರ್ಯ ಹೇಳಿದರು.

ನೇಡಂನ ಶ್ರೀಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಸಂಚಾಲಿತ ವಿಕಾಸ ಅಕಾಡೆಮಿಯಿಂದ ನಗರದ ಶ್ರೀಸದ್ಗುರು ಸದಾನಂದ ಸ್ವಾಮಿ ಮಠದ ಪರಿಸರದಲ್ಲಿ ಆಯೋಜಿಸಲಾಗಿದ್ದ ಸಮಗ್ರ ಭಾರತ ಅಭಿವೃದ್ಧಿಯ ಕುರಿತ ವಿಶೇಷ ಚಿಂತನ ಸಭೆಯಲ್ಲಿ ಉಪನ್ಯಾಸ ನೀಡಿದ ಅವರು, ಬಸವಕಲ್ಯಾಣದಲ್ಲಿ ನಿರ್ಮಾಣವಾಗಲಿರುವ ಅನುಭವ ಮಂಟಪ ಜಗತ್ತಿಗೆ ಪ್ರೇರಣೆ ನೀಡುವ ಕೇಂದ್ರವಾಗಲಿದೆ. ಅನುಭವ ಮಂಟಪದ ಚಿಂತನೆಗಳು ಶ್ರೇಷ್ಠವಾಗಿವೆ ಎಂದರು.

ಸಾನ್ನಿಧ್ಯ ವಹಿಸಿದ ಇಲ್ಲಿಯ ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ನ್ಯಾಯವಾದಿ ಎಂ.ಜಿ.ಮಹಾಜನ್, ಬಿಕೆಡಿಬಿ ತಾಂತ್ರಿಕ ಸಲಹೆಗಾರರಾದ ನಿವೃತ್ತ ಮುಖ್ಯ ಅಭಿಯಂತರ ಬಸವರಾಜ ಗದ್ವಾಲ್ ಶಿವಶಂಕರ ತರನಳ್ಳಿ ಸ್ವಾಗತಿಸಿದರು. ಗುರು ಇದ್ದರು.ವಿಕಾಸ ಅಕಾಡೆಮಿ ಸಂಚಾಲಕ ದೇಗಾಂವ ನಿರೂಪಿಸಿದರು.



ಬಸವಕಲ್ಯಾಣದಲ್ಲಿ ಸಮಗ್ರ ಭಾರತ ಅಭಿವೃದ್ಧಿಯ ಕುರಿತ ವಿಶೇಷ ಚಿಂತನ ಸಭೆಯನ್ನು ಖ್ಯಾತ ಚಿಂತಕ ಕೆ.ಎನ್.ಗೋವಿಂದಾಚಾರ್ಯ ಉದ್ಘಾಟಿಸಿದರು. ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ. ಬಸವರಾಜ ಪಾಟೀಲ್ ನೇಡಂ ಸೇರಿ ಅನೇಕರಿದ್ದರು.

ಸೇಡಂನ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಸಂಚಾಲಿತ ವಿಕಾಸ ಅಕಾಡೆಮಿಯಿಂದ ಸರ್ಕಾರದ ಯಾವುದೇ ಅನುದಾನವಿಲ್ಲದೇ ಸಾಕಷ್ಟು ಕೆಲಸ ಮಾಡಲಾಗಿದೆ. ಸಮಗ್ರ ವಿಕಾಸವೇ ಆಶಯವಾಗಿದೆ.

ಬಸವರಾಜ ಪಾಟೀಲ್ ನೇಡಂ,
ಅಧ್ಯಕ್ಷರು,ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಮತ್ತು ಸಾಂಸ್ಕೃತಿಕ ಸಂಘ

Scanned with OKEN Scanner

ಧರ್ಮ ಮರೆತರೆ ಎಲ್ಲವೂ ನಶ್ವರ: ಅಭಿನವ ಶ್ರೀ

ಸಂ.ಕ.ಸಮಾಚಾರ ಬಸವಕಲ್ಯಾಣ

ಇವತ್ತು ನಾವು ಎಷ್ಟೇ ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟುತ್ತೇವೆ. ಎಷ್ಟೋ ಸಂಪತ್ತನ್ನು ಗಳಿಸುತ್ತೇವೆ. ಆದರೆ, ಧರ್ಮವನ್ನು ಮರೆತರೆ ಇವೆಲ್ಲವೂ ನಶ್ವರ ಎಂದು ತ್ರಿಪುರಾಂತ ಗವಿಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಇಲ್ಲಿಯ ಹಿರೇಮಠ ಕಾಲೋನಿಯಲ್ಲಿರುವ ಶ್ರೀ ಜಗದ್ಗುರು ರೇವಣಸಿದ್ದೇಶ್ವರ ದೇವಾಲಯದಲ್ಲಿ ರೇವಣಸಿದ್ದ ವಸ್ತ್ರದ ಪರಿವಾರದಿಂದ ಹಮ್ಮಿಕೊಂಡ ಮನೆ-ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆಯ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ಹಸಿದು ಬಂದವನಿಗೆ ಅನ್ನದಾನ ಮಾಡುವುದು, ಕಷ್ಟದಲ್ಲಿ ಇದ್ದವರಿಗೆ ಸಹಾಯ ಮಾಡುವುದು ಧರ್ಮ. ಎಲ್ಲಕ್ಕೂ ಶ್ರೇಷ್ಠ ಧರ್ಮ ಎಂದರೆ ಮಾನವ ಧರ್ಮ. ಅದಕ್ಕೆ ರಂಭಾಪುರಿ ಪೀಠದ ಲಿಂ. ಜಗದ್ಗುರು ಗಂಗಾಧರ ಭಗವತ್ಪಾದರು ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂದು ಸಾರಿದರು ಎಂದು ತಿಳಿಸಿದರು.

ಪುಣ್ಯಕೋಟಿ ಪಪೂ ಕಾಲೇಜಿನ ಪ್ರಾಚಾರ್ಯ ಪ್ರೊ. ಸೂರ್ಯಕಾಂತ ಶೀಲವಂತ ಪ್ರಾಸ್ತಾವಿಕ ಮಾತನಾಡಿ ಗುರುವಿನ ಧರ್ಮ ಬೋಧನೆಯ ಮೂಲಕ ಒಡೆದ ಮನಸ್ಸುಗಳನ್ನು ಒಂದುಗೂಡಿಸಿ ಕುಟುಂಬಗಳನ್ನು ಗಟ್ಟಿಗೊಳಿಸಿ ಸಂಘಟಿಸಿ ಆ ಮೂಲಕ ಸದೃಢ ಸಮಾಜ ಸದೃಢ ರಾಷ್ಟ್ರ ನಿರ್ಮಿಸುವುದೇ ಈ ಸದ್ಭಾವ ಚಿಂತನ ಕಾರ್ಯಕ್ರಮದ ಉದ್ದೇಶ ಎಂದು ತಿಳಿಸಿದರು. ಶ್ರೀ ಜಗದ್ಗುರು ರೇವಣಸಿದ್ದೇಶ್ವರ ದೇವಾಲಯ ಸಮಿತಿ ಅಧ್ಯಕ್ಷ ಸೂರ್ಯಕಾಂತ ಪಂಚಾಳ, ನಿವೃತ್ತ ಶಿಕ್ಷಕ ಗುರುನಾಥ ಕೊಶೆಟ್ಟಿ, ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಇದ್ದರು. ರೇವಣಸಿದ್ದಯ್ಯ ವಸ್ತ್ರದ ಅಧ್ಯಕ್ಷತೆ ವಹಿಸಿದ್ದರು. ಮಲ್ಲಯ್ಯ ಸ್ವಾಮಿ ಧನ್ನೂರ ಪ್ರಾರ್ಥನಾ ಗೀತೆ ಹಾಡಿದರು. ಶಿಕ್ಷಕ ಸುಭಾಷ ಪಾಟೀಲ ಸ್ವಾಗತಿಸಿದರು. ಪ್ರೊ. ರುದ್ರೇಶ್ವರ ಸ್ವಾಮಿ ಗೋರ್ಟಾ ನಿರೂಪಿಸಿದರು.



ಬಸವಕಲ್ಯಾಣದ ಹಿರೇಮಠ ಕಾಲೋನಿಯಲ್ಲಿರುವ ಶ್ರೀ ಜಗದ್ಗುರು ರೇವಣಸಿದ್ದೇಶ್ವರ ದೇವಾಲಯದಲ್ಲಿ ಆಯೋಜಿಸಿದ ಮನೆ-ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆಯ ಕಾರ್ಯಕ್ರಮದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು.

21 ಜನವರಿ 2022
ಶುಕ್ರವಾರ
ಕಲಬುರಗಿ

ಸಂಯುಕ್ತ ಕರ್ನಾಟಕ

ಮಾನವ ಧರ್ಮ ಶ್ರೇಷ್ಠ; ರುದ್ರಮುನಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಬದುಕಿನ ದೋಣಿಗೆ ಧರ್ಮದ ಹುಟ್ಟುಗೋಲು ಅಗತ್ಯ' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದ್ದಾರೆ.

ನಗರದ ರೇವಣ ಸಿದ್ದೇಶ್ವರ ದೇವಸ್ಥಾನದಲ್ಲಿ ಈಚೆಗೆ ಆಯೋಜಿಸಿದ್ದ ಸದ್ಭಾವ ಚಿಂತನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಎಲ್ಲದಕ್ಕೂ ಮಾನವ ಧರ್ಮ ಶ್ರೇಷ್ಠ ಎಂದು ತಿಳಿದ ಹಲವು ಶಿವಾಚಾರ್ಯರು ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಮಂತ್ರ ನೀಡಿದ್ದಾರೆ' ಎಂದರು.

'ಉಳ್ಳವರು ಕಷ್ಟದಲ್ಲಿ ಇದ್ದವರಿಗೆ ಸಹಾಯ ಮಾಡಬೇಕು. ಅನ್ನದಾನ ಮಾಡಬೇಕು. ಜಗತ್ತು ಎಷ್ಟೇ ವೇಗವಾಗಿ ಮುಂದುವರೆಯುತ್ತಿದ್ದರೂ ನೈತಿಕತೆ ಬಿಡಬಾರದು ಎಂದು ಹೇಳಿದರು.

ಪ್ರಾಂಶುಪಾಲ ಸೂರ್ಯಕಾಂತ ಶೀಲವಂತ ಮಾತನಾಡಿ, 'ಗುರುವಿನಲ್ಲಿ ಮನೆ ಹಾಗೂ ಮನಗಳನ್ನು ಒಗ್ಗೂಡಿಸುವ ಸಾಮರ್ಥ್ಯ ಇರುತ್ತದೆ. ರುದ್ರಮುನಿ ಶಿವಾಚಾರ್ಯರು ಸದ್ಭಾವ ಚಿಂತನೆ ಮೂಲಕ ಸನ್ಮಾರ್ಗ ತೋರುತ್ತಿದ್ದಾರೆ ಎಂದರು.

ಶಿಕ್ಷಕ ಸುಭಾಷ ಪಾಟೀಲ, ಪ್ರೊ. ರುದ್ರೇಶ್ವರ ಗೋರಟಾ ಮಾತನಾಡಿದರು. ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ರೇವಣಸಿದ್ದಯ್ಯ ವಸ್ತ್ರದ್, ಡಾ.ಬಸವರಾಜ ಸ್ವಾಮಿ, ಸರೋಜನಿ ಪಂಚಾಕ್ಷರಿ, ದೇವಸ್ಥಾನ ಸಮಿತಿ ಅಧ್ಯಕ್ಷ ಸೂರ್ಯಕಾಂತ ಪಂಚಾಳ, ಗುರುನಾಥ ಕೋಶೆಟ್ಟಿ, ಮಲ್ಲಯ್ಯ ಸ್ವಾಮಿ ಧನ್ನೂರ, ಚಂದ್ರಶೇಖರ ಭೂರಾಳೆ, ಶಾಂರವೀರ ಸ್ವಾಮಿ ಇದ್ದರು.



ಬಸವಕಲ್ಯಾಣದಲ್ಲಿ ಈಚೆಗೆ ನಡೆದ ಸದ್ಭಾವ ಚಿಂತನ ಕಾರ್ಯಕ್ರಮಕ್ಕೆ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು

ಪ್ರಜಾವಾಣಿ
ಶುಕ್ರವಾರ • ಜನವರಿ 21, 2022

Scanned with OKEN Scanner

॥ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಪ್ರಸನ್ನ ॥

ಪೂಜ್ಯ ಶ್ರೀ ಷ.ಬ್ರ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ

ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ ಜನ್ಮದಿನೋತ್ಸವ

PLASTIC BAG

PLASTIC BAG

ದಿನಾಂಕ 28 09 2024

ಶನಿವಾರ ಬೆಳ್ಳಗೆ 11:30 ಗಂಟೆಗೆ

ಪ್ಲಾಸ್ಟಿಕ್ ಮುಕ್ತ ಜನ ಜಾಗೃತಿ ಅಭಿಯಾನ





ಪ್ರಧಾನಮಂತ್ರಿ ವಿಶ್ವಕರ್ಮ ತರಬೇತಿ ಕೇಂದ್ರ ಹರಳಯ್ಯ ಚೌಕ್ ಹತ್ತಿರ
ಕೆವಿಜಿಬಿ ಕಾಲೋನಿ ಬಸವಕಲ್ಯಾಣ ಇವರ ವತಿಯಿಂದ

ಸರ್ವರಿಗೂ ಭಕ್ತಿಯ ಸುಸ್ವಾಗತ

ಸ್ಥಳ : ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ತ್ರಿಪುರಾಂತ-ಬಸವಕಲ್ಯಾಣ

Scanned with OKEN Scanner

ವಿಜಯ ಕರ್ನಾಟಕ VK

ಶುಕ್ರವಾರ,21 ಜನವರಿ 2022,
ಕಲಬುರಗಿ

ಬಸವ ಕಲ್ಯಾಣದಲ್ಲಿ ಮನೆ-ಮನಗಳಲ್ಲಿ ಸದ್ದಾಗಲಿ ಚಿಂತನ ಮಾಸಿಕ ಹುಣ್ಣಿಮೆಯ ಕಾರ್ಯಕ್ರಮ

ಶ್ರೀಮಠದಲ್ಲಿ ಧರ್ಮ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮ ಆರಂಭ

ಬಸವಕಲ್ಯಾಣ ನಗರದ ಹಿರೇಮಠ ಕಾಲೇಜಿನಲ್ಲಿರುವ ಜಗದ್ಗುರು ರೇಣುಕಾಚಾರ್ಯ ಶ್ರೀಮಠದಲ್ಲಿ ರೇಣುಕಾಚಾರ್ಯರ ಪಟ್ಟದ ಪರಿವಾರದ ಮತ್ತಿಯಂಡ ಮನೆ-ಮನಗಳಲ್ಲಿ ಸದ್ದಾಗಲಿ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದ ಪ್ರಾರಂಭೋತ್ಸವ ಜರುಗಿತು. ಶಿವಾಚಾರ್ಯರು ಉಪಸ್ಥಿತರಿದ್ದರು.

- ಸುರುವಸ ಧರ್ಮ ಚಿಂತನೆಯ ಮೂಲಕ ಒಡೆದ ಮನಸುಗಳನ್ನು ಒಂದುಗೂಡಿಸಿ ಕುಟುಂಬಗಳನ್ನು ಸಂಘಟಿಸಿ ಉ ಮೂಲಕ ಸದೃಢ ಸಮಾಜ ಸದೃಢ ರಾಷ್ಟ್ರ ನಿರ್ಮಾಣವಾಗುವುದೇ ಈ ಸದ್ದಾಗಲಿ ಚಿಂತನ ಕಾರ್ಯಕ್ರಮದ ಉದ್ದೇಶವಾಗಿದೆ.
- ಶ್ರೀ.ಸೂರ್ಯಕಾಂತ ಶೀಲವಂತ
ಪ್ರಾಚಾರ್ಯರು, ಪ್ರಭುಕೋಟಿ ಪಬಿ ಪೂರ್ವ ಕಾಲೇಜು, ಬಸವ ಕಲ್ಯಾಣ.

ವಿಕ ಸುದ್ದಿಲೋಕ ಬಸವಕಲ್ಯಾಣ

ಮನುಷ್ಯನಾಗಿ ಜನಿಸಿದ ಪ್ರತಿಯೊಬ್ಬರಿಗೂ ಕೂಡಾ ಜಾತಿ -ಧರ್ಮವಿರುವುದಿಲ್ಲ. ಆದರೆ ಪ್ರಸ್ತುತ ಸಂದರ್ಭದಲ್ಲಿ ಧರ್ಮದ ಬೇಲಿಯಿಂದ ಮನುಷ್ಯ ಮನುಷ್ಯರ ನಡುವೆ ಅಂತರ ಹೆಚ್ಚಾಗುತ್ತಿದೆ. ಇದು ಹೀಗೆಯೇ ಮುಂದುವರೆದರೆ ಸಮಾಜ ಸ್ವಾಸ್ಥ್ಯ ಹಾಳಾಗುವ ಸಾಧ್ಯತೆ ಇದೆ. ಆದ್ದರಿಂದ ಸಮಾಜದಲ್ಲಿ ಸೌಹಾರ್ದತೆ ಮೂಡಿಸಲು ಮತ್ತು ಸಮಾಜದಲ್ಲಿ ಶಾಂತಿ ನೆಲೆಸಲು ಪ್ರತಿಯೊಬ್ಬರ ಮನೆ-ಮನಗಳಲ್ಲಿ ಧರ್ಮ ಚಿಂತನೆ ಮಾಡುವುದು ಅವಶ್ಯಕವಾಗಿದೆ ಎಂದು ಶ್ರೀ ಜಗದ್ಗುರು ರೇಣುಕಾಚಾರ್ಯ ಶ್ರೀಮಠದ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ನಗರದ ಹಿರೇಮಠ ಕಾಲೇಜಿನಲ್ಲಿರುವ ಶ್ರೀ ಜಗದ್ಗುರು ರೇಣುಕಾಚಾರ್ಯರ ದೇವಾಲಯದಲ್ಲಿ ರೇಣುಕಾಚಾರ್ಯರ ಪಟ್ಟದ ಪರಿವಾರದ ಮತ್ತಿಯಂಡ ಮನೆ-ಮನಗಳಿಂದ ಪಟ್ಟದ ಪುರವಂತರು ಹಮ್ಮಿಕೊಂಡ ಮನೆ-ಮನಗಳಲ್ಲಿ ಸದ್ದಾಗಲಿ ಚಿಂತನ ಮಾಸಿಕ ಹುಣ್ಣಿಮೆಯ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಜೀವನದಲ್ಲಿ ನಾವು ಏಷ್ಟೇ ಹೇಗಾದಾಗಿ ಹೋಗುತ್ತಿದ್ದರೂ ಕೂಡಾ ನಮಗೆ ಧರ್ಮ ಎಂಬ ಕಟ್ಟಿಗೆಯ ಬೇಕೇ ಬೇಕು ಎಂದರು.

ಏಂತಾಗ ಕಟ್ಟಿಗೆಯು ಆಧಾರಸ್ತಂಭ ಭದುಕಿಗೆ ಧರ್ಮದ ಆಧಾರ. ಇವತ್ತು ನಾವು ಏಷ್ಟೇ ದೊಡ್ಡ ಬಂಗಲೆಗಳನ್ನು ಕಟ್ಟುತ್ತೇವೆ. ಏಷ್ಟೇ ದೊಡ್ಡ ಸಂಪತ್ತನ್ನು ಗಳಿಸುತ್ತೇವೆ. ಆದರೆ, ಧರ್ಮವನ್ನು ಮರೆತರೆ ಇವೆಲ್ಲವೂ ನಶ್ವರ. ಧರ್ಮ ಎಂಬುದು ಮೂಲದಲ್ಲಿ ದಾನ ಮೊದಲಾದ ಒಳ್ಳೆಯ ಕಾರ್ಯಗಳನ್ನು ಮಾಡುವುದು. ಹೆಸರು ಹನಿ ಗೂಡಿದರೆ ಹಣ್ಣು ಏನನ್ನು ಹಾಗೇ ನಗರದ ಹಿರೇಮಠ ಕಾಲೇಜಿನ ನಿವಾಸಿಯಾದ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಪಟ್ಟದ ಪುರವಂತರಿಗೆ ಸಮಾಜದಲ್ಲಿ ಧರ್ಮ ಜಾಗೃತಿ ಮಾಡುವುದೇ ಬಹುದೊಡ್ಡ ಕೆಲಸವಾಗಿದೆ. ಇದಕ್ಕಾಗಿ ಸದ್ದಾಗಲಿ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

ಬಂದವರಿಗೆ ಅನ್ನದಾನ ಮಾಡುವುದೇ ಧರ್ಮ. ಕಷ್ಟದಲ್ಲಿ ಇದ್ದವರಿಗೆ ಸಹಾಯ ಮಾಡುವುದೇ ಧರ್ಮ. ಎಲ್ಲಕ್ಕಿಂತ ಶ್ರೇಷ್ಠ ಧರ್ಮ ಎಂದರೆ ಮಾನವ ಧರ್ಮ. ಅಂಥ ಧರ್ಮವನ್ನು ಪಾಲಿಸಿ ಮುಂದೆ ಸಾಗಬೇಕು ಎಂದು ಶ್ರೀ ಜಗದ್ಗುರು ರೇಣುಕಾಚಾರ್ಯ ಶ್ರೀಮಠದ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಪಟ್ಟದ ಪುರವಂತರಾದ ಶ್ರೀ ಜಗದ್ಗುರು ರೇಣುಕಾಚಾರ್ಯ ಸಂಸ್ಥಾನ ಹಿರೇಮಠ ಸಂಸ್ಥಾನ ಪೀಠ ಕಾಶಿಯ ಶ್ರೀ ಜಗದ್ಗುರು ರೇಣುಕಾಚಾರ್ಯ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಸಮಾಜದಲ್ಲಿ ಧರ್ಮ ಜಾಗೃತಿ ಮಾಡುವುದೇ ದೊಡ್ಡ ಕೆಲಸವಾಗಿದೆ. ಇದಕ್ಕಾಗಿ ಸದ್ದಾಗಲಿ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

ಸಾನ್ನಿಧ್ಯ ವಹಿಸಿದ್ದ ಪಟ್ಟದ ಪುರವಂತರಾದ ಶ್ರೀ ಜಗದ್ಗುರು ರೇಣುಕಾಚಾರ್ಯ ಸಂಸ್ಥಾನ ಹಿರೇಮಠ ಸಂಸ್ಥಾನ ಪೀಠ ಕಾಶಿಯ ಶ್ರೀ ಜಗದ್ಗುರು ರೇಣುಕಾಚಾರ್ಯ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ಸಮಾಜದಲ್ಲಿ ಧರ್ಮ ಜಾಗೃತಿ ಮಾಡುವುದೇ ದೊಡ್ಡ ಕೆಲಸವಾಗಿದೆ. ಇದಕ್ಕಾಗಿ ಸದ್ದಾಗಲಿ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

ಶ್ರೀ ಜಗದ್ಗುರು ರೇಣುಕಾಚಾರ್ಯರ ದೇವಾಲಯ ಸನ್ನಿಧಿಯಲ್ಲಿ ಸದ್ದಾಗಲಿ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದ ಪ್ರಾರಂಭೋತ್ಸವ ಜರುಗಿತು. ಶಿವಾಚಾರ್ಯರು ಉಪಸ್ಥಿತರಿದ್ದರು.

ಡಾ. ಬಸವರಾಜ ಸ್ವಾಮಿ, ಚಂದ್ರಶೇಖರ ಪುರಾಣಿಕ, ಕಾಂತಮ್ಮ ಸ್ವಾಮಿ, ಸರೋಜಿನಿ ಪಂಕಾಕ್ಷಿ, ಹಿರೇಮಠ ಮಲ್ಲಯ್ಯ ಸ್ವಾಮಿ ಪುರಾಣಿಕ ಪಾರ್ಥನಾ ಗೀತೆ ಸಾದರಪಡಿಸಿದರು. ಶ್ರೀಕಾಂತ ಸ್ವಾಮಿ ಸ್ವಾಗತಿಸಿದರು. ಪ್ರೊ.ರುದ್ರಪ್ಪ ಸ್ವಾಮಿ ಗೋರ್ಟಾ ನಿರೂಪಿಸಿದರು.

ಪ್ರತಿಯೊಬ್ಬರಿಗೂ ಬೇಕು ಧರ್ಮದ ಬೋಧನೆ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಪ್ರತಿಯೊಬ್ಬ ಮನುಷ್ಯನಿಗೂ ಧರ್ಮದ ಬೋಧನೆ ಅವಶ್ಯಕವಾಗಿದೆ ಎಂದು ಇಲ್ಲಿಯ ಗವಿ ಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಹೇಳಿದರು.

ನಗರದ ಹಿರೇಮಠ ಕಾಲನಿಯಲ್ಲಿರುವ ಶ್ರೀ ಜಗದ್ಗುರು ರೇವಣಸಿದ್ದೇಶ್ವರ ದೇವಾಲಯದಲ್ಲಿ ಬುಧವಾರ ಹಮ್ಮಿಕೊಂಡ ಮನೆ-ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದಲ್ಲಿ ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ನಾವೆಲ್ಲ ವೇಗವಾಗಿ ಹೋಗುತ್ತಿದ್ದೇವೆ. ನಮ್ಮ ವೇಗವನ್ನು ನೋಡಿದರೆ ಧರ್ಮದ ಕಾರ್ಯಗಳಿಗೆ ಸಮಯ ಕೊಡುವುದು ಆಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹಸಿದು ಬಂದವನಿಗೆ ಅನ್ನದಾನ, ಕಷ್ಟದಲ್ಲಿ ಇದ್ದವರಿಗೆ ಸಹಾಯ ಮಾಡುವುದು ಧರ್ಮ. ಎಲ್ಲದಕ್ಕೂ ಶ್ರೇಷ್ಠ ವಾದದ್ದು ಮಾನವ ಧರ್ಮ ಎಂದು ಹೇಳಿದರು.

ಪುಣ್ಯಕೋಟಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಪ್ರೊ. ಸೂರ್ಯಕಾಂತ ಶೀಲವಂತ ಮಾತನಾಡಿ, ಗುರುವಿನ ಧರ್ಮ ಬೋಧನೆಯ ಮೂಲಕ ಒಡೆದ ಮನಸ್ಸುಗಳನ್ನು ಒಂದುಗೂಡಿಸಿ ಕುಟುಂಬಗಳನ್ನು ಗಟ್ಟಿಗೊಳಿಸಿ ಸಂಘಟಿಸಿಸುವ ಮೂಲಕ ಸದೃಢ ಸಮಾಜ ನಿರ್ಮಾಣ ಮಾಡುವುದು ಕಾರ್ಯಕ್ರಮದ ಉದ್ದೇಶ ಎಂದು ತಿಳಿಸಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಶ್ರೀ ಜಗದ್ಗುರು ರೇವಣಸಿದ್ದೇಶ್ವರ ದೇವಾಲಯದಲ್ಲಿ ಹಮ್ಮಿಕೊಂಡ ಹುಣ್ಣಿಮೆ ಮಾಸಿಕ ಕಾರ್ಯಕ್ರಮದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಮಾತನಾಡಿದರು. ರೇವಣಸಿದ್ಧಯ್ಯ ವಸ್ತದ, ಪ್ರೊ.ಸೂರ್ಯಕಾಂತ ಶೀಲವಂತ, ಗುರುನಾಥ ಕೊಶೆಟ್ಟಿ, ಸೂರ್ಯಕಾಂತ ಪಾಂಚಾಳ ಇದ್ದರು.

ರೇವಣಸಿದ್ಧಯ್ಯ ವಸ್ತದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಜಗದ್ಗುರು ರೇವಣಸಿದ್ದೇಶ್ವರ ದೇವಾಲಯ ಸಮಿತಿ ಅಧ್ಯಕ್ಷ ಸೂರ್ಯಕಾಂತ ಪಾಂಚಾಳ, ಗುರುನಾಥ ಕೊಶೆಟ್ಟಿ, ಬಸವಂತಪ್ಪ ಲವಾರೆ, ಡಾ.ಬಸವರಾಜ ಸ್ವಾಮಿ, ಚಂದ್ರಶೇಖರ ಭುರಾಳೆ, ಶಾಂತವೀರ ಸ್ವಾಮಿ, ಸರೋಜನಿ ಪಂಚಾಕ್ಷರಿ, ಮಲ್ಲಯ್ಯ ಸ್ವಾಮಿ ಇತರರಿದ್ದರು. ಶಿಕ್ಷಕ ಸುಭಾಷ ಪಾಟೀಲ್ ಸ್ವಾಗತಿಸಿದರು. ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ನಿರೂಪಣೆ ಮಾಡಿದರು.

ನಂ.1 ವಿಜಯವಾಣಿ
VIJAYAVANI » KALABURAGI
ಭಾನುವಾರ 23 ಜನವರಿ 2022
23 JANUARY 2022

2
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಭಾನುವಾರ 23 ಜನವರಿ 2022
23 JANUARY 2022

ಬೀದರ್ ಲೋಕಲ್ ಎಕ್ಸ್‌ಪ್ರೆಸ್



ವಿಜಯವಾಣಿ ಚಿತ್ರ

ಬಸವಕಲ್ಯಾಣ ತ್ರಿಪುರಾಂತ ಐಬಿ ಸಮೀಪ ಶುಕ್ರವಾರ ಮಡಿವಾಳ ಮಾಚಿದೇವ ಯೂತ್ ಕ್ಲಬ್‌ನಿಂದ ಶ್ರೀ ಶಿವಕುಮಾರ ಸ್ವಾಮೀಜಿ ತೃತೀಯ ಪುಣ್ಯಸ್ಮರಣೆ ನಿಮಿತ್ತ ಆಯೋಜಿಸಿದ್ದ ದಾಸೋಹ ದಿನ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ಶಿವಾಚಾರ್ಯರು, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಬಲರಾಮ ಪೂಜಾರಿ, ಬಸವರಾಜ ಸ್ವಾಮಿ, ಸಂಗಮೇಶ ಹುಣಚಗೇರೆ, ಅಮಿತ್ ಸ್ವಾಮಿ, ದೀಪಕ ಬಿರಾದಾರ ಇತರರಿದ್ದರು.

ಪುಣ್ಯಸ್ಮರಣೆ



ಬಸವಕಲ್ಯಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಾಗಿ ಪ್ರಪ್ರಥಮ ಬಾರಿಗೆ ಆಗಮಿಸಿದ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಅವರನ್ನು ಇಲ್ಲಿಯ ಗವಿ ಮಠಕ್ಕೆ ಭೇಟಿ ನೀಡಿದಾಗ ಮಠದ ಪೀಠಾಧಿಪತಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸತ್ಕರಿಸಿ ಆಶೀರ್ವದಿಸಿದರು.

ಕನ್ನಡಪ್ರಭ
ಭಾನುವಾರ 30:1,2022

Scanned with OKEN Scanner

ಸರ್ವಾಧ್ಯಕ್ಷ ಡಾ.ಉಮೇಶ ಬಾಬು ಹಕ್ಕೊತ್ತಾಯ | ಸಸ್ತಾಪುರದಲ್ಲಿ ಎರಡು ದಿನ ಸಮ್ಮೇಳನ

ಚುಟುಕು ಸಾಹಿತ್ಯ ಅಕಾಡೆಮಿ ಸ್ಥಾಪಿಸಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ರಾಜ್ಯಾದ್ಯಂತ ಚುಟುಕು ಸಾಹಿತ್ಯಕ್ಕೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರ ಚುಟುಕು ಸಾಹಿತ್ಯ ಅಕಾಡೆಮಿ ಸ್ಥಾಪಿಸಬೇಕು ಎಂದು ಸಮ್ಮೇಳನ ಸರ್ವಾಧ್ಯಕ್ಷ ಡಾ.ಉಮೇಶ ಬಾಬು ಮಠದ ಒತ್ತಾಯಿಸಿದರು.

ಶ್ರೀ ಯಲ್ಲಾಲಿಂಗೇಶ್ವರ ಪ್ರಭುಗಳ 36ನೇ ಪುಣ್ಯ ಸ್ಮರಣೋತ್ಸವ, ಶಿವಶರಣಿ ಮಹಾದೇವಿ ತಾಯಿ 57ನೇ ಜನ್ಮದಿನ ನಿಮಿತ್ತ ಸದ್ಗುರು ಶ್ರೀ ಯಲ್ಲಾಲಿಂಗೇಶ್ವರ ಟ್ರಸ್ಟ್ ಹಾಗೂ ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾ ಘಟಕದಿಂದ ಶನಿವಾರ ಸಸ್ತಾಪುರದಲ್ಲಿ ಹಮ್ಮಿಕೊಂಡಿರುವ ಜಿಲ್ಲಾ ಪ್ರಥಮ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಅವರು ಸರ್ವಾಧ್ಯಕ್ಷತೆ ಭಾಷಣ ಮಾಡಿದರು.

ಚುಟುಕುಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿ ಅಡಿ ಪಠ್ಯದಲ್ಲಿ ಸೇರಿಸಿ ಓದುವಂತೆ ಮಾಡಬೇಕು. ಶಾಲಾ-ಕಾಲೇಜು, ಸ್ನಾತಕೋತ್ತರ ವಿಭಾಗ, ವಿಶ್ವವಿದ್ಯಾಲಯದ ಪಠ್ಯದಲ್ಲಿ ಸಹ ಸೇರಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಪ್ರತಿ ತಾಲೂಕು, ಜಿಲ್ಲಾ, ವಿಭಾಗ ಹಾಗೂ ರಾಜ್ಯ ಮಟ್ಟದಲ್ಲಿ ಚುಟುಕು ಸಮ್ಮೇಳನ ಆಯೋಜಿಸಬೇಕು. ಗುಲ್ಬರ್ಗ ವಿಶ್ವವಿದ್ಯಾಲಯದ ಪ್ರಸಾರಂಗವು ರಾಜ್ಯೋತ್ಸವ ವೇಳೆ ಲೇಖಕರಿಗೆ ನೀಡುವ ಪ್ರಶಸ್ತಿಯನ್ನು ಚುಟುಕು ಸಂಕಲನಕ್ಕೆ ಪ್ರತ್ಯೇಕವಾಗಿ ಕೊಡಬೇಕು. ಸಾಹಿತ್ಯ ಅಕಾಡೆಮಿ, ಕನ್ನಡ ಪುಸ್ತಕ ಪ್ರಾಧಿಕಾರ ಇತರ ಪುಸ್ತಕ ಪ್ರಶಸ್ತಿ ವೇಳೆ ಕಾವ್ಯವೆಂದು ಒಂದೇ ಪ್ರಕಾರಕ್ಕೆ ಕೊಡುವ ಬದಲು ಚುಟುಕು ಸಂಕಲನಕ್ಕೆ ಪ್ರಶಸ್ತಿ ಮೀಸಲಿಡಬೇಕು. ಕನ್ನಡ ಸಾಹಿತ್ಯ ಪರಿಷತ್ ಪ್ರತ್ಯೇಕವಾಗಿ ಚುಟುಕು ಸಮ್ಮೇಳನ ಹಮ್ಮಿಕೊಳ್ಳಬೇಕು ಎಂದು ಒತ್ತಾಸೆ ವ್ಯಕ್ತಪಡಿಸಿದರು.

ವಿಶಾಲವಾದ ಅರ್ಥವನ್ನು ನಾಲ್ಕೇ ಸಾಲುಗಳಲ್ಲಿ ಹಿಡಿದಿಡುವ ಶಕ್ತಿ ಚುಟುಕು ಸಾಹಿತ್ಯಕ್ಕಿದೆ. ಈ ಪದ್ಯಗಳನ್ನು ಓದುಗರ ಮನ ಮುಟ್ಟುವಂತೆ ಮಿತವಾದ ಶಬ್ದಗಳಲ್ಲಿ ಸಂಯೋಜಿಸಬೇಕು. ಹೃದಯಕ್ಕೆ ಮುಟ್ಟುವಂತೆ ರಸವತ್ತಾಗಿ ನಿರೂಪಿಸಬೇಕು. ಸಂಕ್ಷಿಪ್ತತೆ ಅದರ ಮೂಲ ಲಕ್ಷಣವಾಗಿರಬೇಕು. ಚುಟುಕುಗಳಲ್ಲಿ ನಿಸರ್ಗ, ಸೌಂದರ್ಯ, ಪ್ರೀತಿ-ಪ್ರೇಮ, ಪ್ರಣಯ, ಹಾಸ್ಯ, ವಿಡಂಬನೆ, ಜೀವನಾದರ್ಶ, ನಾಡು-ನುಡಿಯ ಅಭಿಮಾನ ಕಾಣಬಹುದಾಗಿದೆ ಎಂದರು.



ಸಸ್ತಾಪುರದಲ್ಲಿ ಶ್ರೀ ಯಲ್ಲಾಲಿಂಗೇಶ್ವರ ಪ್ರಭುಗಳ 36ನೇ ಸ್ಮರಣೋತ್ಸವ, ಶಿವಶರಣಿ ಮಹಾದೇವಿ ತಾಯಿ 57ನೇ ಜನ್ಮದಿನ ನಿಮಿತ್ತ ಹಮ್ಮಿಕೊಂಡಿರುವ ಎರಡು ದಿನದ ಜಿಲ್ಲಾ ಪ್ರಥಮ ಚುಟುಕು ಸಾಹಿತ್ಯ ಸಮ್ಮೇಳನಕ್ಕೆ ಚಳ್ಳಕೇರಿ ಸಾಹಿತಿ ಮೋದುರು ತೇಜ ಶನಿವಾರ ಚಾಲನೆ ನೀಡಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಪೂಜ್ಯ ಶಿವಶರಣಿ ಮಹಾದೇವಿ ತಾಯಿ, ಸಮ್ಮೇಳನ ಸರ್ವಾಧ್ಯಕ್ಷ ಡಾ.ಉಮೇಶ ಬಾಬು ಮಠದ, ಸಂಗಮೇಶ ಜವಾದಿ, ಡಾ.ಗವಿಸಿದ್ದಪ್ಪ ಪಾಟೀಲ್, ಸಿದ್ರಾಮಪ್ಪ ಗುದಗೆ, ಪ್ರೊ.ನಾಗೇಂದ್ರ ಢೋಲೆ, ಡಾ.ಸಿದ್ರಾಮ ವಾಘಮಾರೆ ಇತರರಿದ್ದರು.

> ನಮ್ಮಲ್ಲಿ ಸಮಾನತೆ ಇದೆ. ಆದರೆ ಜಾತಿ-ಜಾತಿ, ಧರ್ಮ-ಧರ್ಮಗಳಲ್ಲಿ ಅಸಮಾನತೆ ಜಗಳ ಬಿದ್ದು ಮನುಷ್ಯತ್ವ ಮಾಯವಾಗುತ್ತಿದೆ. ಆದರೆ ಚುಟುಕು ಸಾಹಿತ್ಯ ಸಮಾನತೆ ನೆಲದಲ್ಲಿ ಸಾಮರಸ್ಯ ಮೂಡಿಸುತ್ತದೆ. ಪರಂಪರೆ ಹೊಂದಿದ ಇತಿಹಾಸ ಹೇಳಿ ಪ್ರಬುದ್ಧ ವಿಚಾರ ಅಭಿವ್ಯಕ್ತಿಯನ್ನು ಚುಟುಕು ಸಾಹಿತ್ಯ ನೀಡಿದೆ.
>
> | ಮೋದುರು ತೇಜ ಸಾಹಿತಿ

> ಯಾಂತ್ರಿಕ ಯುಗದ ಗಡಿಬಿಡಿ ಬದುಕಿನಲ್ಲಿ ಕಾವ್ಯ, ಕಾದಂಬರಿ ಓದುವ ಹವ್ಯಾಸ ಬಹುತೇಕರಲ್ಲಿ ಕಡಿಮೆಯಾಗಿದೆ. ಆದರೆ ಇತ್ತೀಚೆಗೆ ಚುಟುಕು ಪ್ರಕಾರದ ಸಾಹಿತ್ಯ ಎಲ್ಲೆಡೆ ಜನಪ್ರಿಯತೆ ಪಡೆದುಕೊಳ್ಳುತ್ತಿದೆ. ಈ ಸಾಹಿತ್ಯ ಆಕಾರದಲ್ಲಿ ಚಿಕ್ಕದಿದ್ದರೂ ವಿಶಾಲವಾದ ಅರ್ಥವನ್ನು ಒಳಗೊಂಡಿದೆ.
>
> | ಡಾ.ಉಮೇಶ ಬಾಬು ಮಠದ
> ಚುಟುಕು ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷ

ಚಳ್ಳಕೇರಿ ಸಾಹಿತಿ ಮೋದುರು ತೇಜ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು. ತ್ರಿಪುರಾಂತ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸಾನ್ನಿಧ್ಯ, ಪೂಜ್ಯ ಶಿವಶರಣಿ ಮಹಾದೇವಿ ತಾಯಿ ನೇತೃತ್ವ ವಹಿಸಿದ್ದರು. ರೈತ ಸಂಘದ ಸಿದ್ರಾಮಪ್ಪ ಗುದಗೆ, ನಿವೃತ್ತ ಪ್ರಾಚಾರ್ಯ ಪ್ರೊ.ನಾಗೇಂದ್ರ ಢೋಲೆ, ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ.ಸಿದ್ರಾಮ ವಾಘಮಾರೆ, ಪರಿಪೂರ್ಣ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷೆ ವಿಜಯಕುಮಾರಿ ಕೆ., ಬಾಲಾಜಿ ರೆಡ್ಡಿ, ಗೌಡಪ್ಪ ಪಾಟೀಲ್, ರವೀಂದ್ರ ಸೋಪಣ್ಣ ಇತರರಿದ್ದರು.

ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಸಂಗಮೇಶ ಜವಾದಿ ಸ್ವಾಗತಿಸಿದರು. ಸಮ್ಮೇಳನ ಸಂಯೋಜಕ ಸಾಹಿತಿ ಡಾ.ಗವಿಸಿದ್ದಪ್ಪ ಪಾಟೀಲ್ ಪ್ರಾಸ್ತಾವಿಕ ಮಾತನಾಡಿದರು. ಸಂಜುಕುಮಾರ ನಡುಕರ್ ನಿರೂಪಣೆ ಮಾಡಿದರು. ಅವಿನಾಶ ದೇವನೂರ ವಂದಿಸಿದರು. ಇದಕ್ಕೂ ಮುನ್ನ ಶ್ರೀ ಯಲ್ಲಾಲಿಂಗ ಭಾವಚಿತ್ರದ ಮೆರವಣಿಗೆ ಸರಳವಾಗಿ ನಡೆಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಭಾನುವಾರ 30 ಜನವರಿ 2022
30 JANUARY 2022

ಎಸಿಪಿ ಮಠಪತಿ ಹೇಳಿಕೆ | ಗವಿಮಠದಲ್ಲಿ ಶಿವಾನುಭವ ಚಿಂತನ

ಸೇವೆಯಲ್ಲಿ ಅಡಗಿದೆ ಜೀವನದ ತೃಪ್ತಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸೇವೆಯಲ್ಲಿ ತೃಪ್ತಿ ಅಡಗಿದೆ. ವೃತ್ತಿಯಲ್ಲಿ ನಿಷ್ಠೆ ಮತ್ತು ಸೇವಾ ಮನೋಭಾವದಿಂದ ಮಾಡುವ ಕೆಲಸದಿಂದ ಜೀವನದಲ್ಲಿ ಶಾಂತಿ, ನೆಮ್ಮದಿ ಕಾಣಲು ಸಾಧ್ಯವಾಗುತ್ತದೆ ಎಂದು ರಾಷ್ಟ್ರಪತಿ ಪೊಲೀಸ್ ಪದಕ ಪುರಸ್ಕೃತ ಕಲಬುರಗಿಯ ಸಹಾಯಕ ಪೊಲೀಸ್ ಕಮಿಷನರ್ ಬಿ.ಎಂ.ಗಂಗಾಧರ ಮಠಪತಿ ಹೇಳಿದರು.

ಗವಿಮಠದಲ್ಲಿ ಮಂಗಳವಾರ ಅಮಾವಾಸ್ಯೆ ನಿಮಿತ್ತ ಆಯೋಜಿಸಿದ್ದ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಜೀವನದಲ್ಲಿ ಎಷ್ಟೇ ಎತ್ತರಕ್ಕೆ ಹೋದರೂ ಮಾತೃಭಾಷೆ, ನಮ್ಮ ಸಂಸ್ಕೃತಿ ಹಾಗೂ ತಂದೆ-ತಾಯಿಯನ್ನು ಮರೆಯಬಾರದು ಎಂದರು.

ಸಾನ್ನಿಧ್ಯ ವಹಿಸಿದ್ದ ಗವಿಮಠದ ಪೀಠಾಧಿಪತಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಜೀವನದಲ್ಲಿ ಆದರ್ಶ ಮೌಲ್ಯಗಳನ್ನು ಉಳಿಸಿ ಬೆಳೆಸಿಕೊಂಡು ಬರುವುದರಲ್ಲಿ ಸರ್ವರ ಹಿತ ಅಡಗಿದೆ. ಮನುಷ್ಯರನ್ನು ಅರ್ಥೈಸಿಕೊಳ್ಳುವ ನಿಲುವು ಬೆಳೆಯಬೇಕಾಗಿದೆ ಎಂದರು.

ಡಾ.ಸಂಗಮೇಶ ತಾಂಬೋಳೆ ಮಾತನಾಡಿ, ಧಾರ್ಮಿಕ ಕಾರ್ಯಕ್ರಮ, ಉಪನ್ಯಾಸ ಮಾಲೆ, ಸದ್ಭಾವನಾ ಚಿಂತನ ಗೋಷ್ಠಿಯಂಥ ಕಾರ್ಯಕ್ರಮಗಳ ಮೂಲಕ ಭಕ್ತರಲ್ಲಿ ಧರ್ಮದ ಜಾಗೃತಿ ಮೂಡಿಸುವ ಮತ್ತರ ಕಾರ್ಯವನ್ನು ಗುರುಗಳು ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಗವಿಮಠದಲ್ಲಿ ಮಂಗಳವಾರ ಕಲಬುರಗಿಯ ಸಹಾಯಕ ಪೊಲೀಸ್ ಕಮಿಷನರ್ ಬಿ.ಎಂ.ಗಂಗಾಧರ ಮಠಪತಿ ಅವರನ್ನು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು.

ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ನಾಗಣ್ಣ ಭೂಶೆಟ್ಟಿ, ಶಿವಾನಂದ ಪಟವಾದಿ, ಬಾಬುರಾವ ಉಳ್ಳೆ, ರಾಜಶೇಖರ ವಸ್ತ್ರದ, ಘನಲಿಂಗ ಸ್ವಾಮಿ, ಮಲ್ಲಿಕಾರ್ಜುನ ಶೀವಂತ ಮಲ್ಲಯ್ಯ ಪಟವಾದಿ, ಬಸವಂತ ಬೋನೆ, ರಮೇಶ ಸ್ವಾಮಿ, ರವಿ ಬಿರಾದಾರ, ಗುರುಲಿಂಗಯ್ಯ ಹುಲಕಂತಿಮಠ, ಶಕುಂತಲಾ ಗುರುಲಿಂಗಯ್ಯ, ಸವಿತಾ ಸ್ವಾಮಿ, ಶೀಲಾ ದೇವಿ, ವೈಷ್ಣವಿ ಇನ್ನಿತರರಿದ್ದರು. ಷಣ್ಮುಖಯ್ಯ ಸ್ವಾಮಿ ಸ್ವಾಗತಿಸಿದರು. ಶಿವಕುಮಾರ ಮುನ್ನಳ್ಳಿ ನಿರೂಪಣೆ ಮಾಡಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಗುರುವಾರ 3 ಫೆಬ್ರವರಿ 2022
3 FEBRUARY 2022

Scanned with OKEN Scanner

ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನದ ಉದ್ಘಾಟನೆ

'ಚುಟುಕು ಸಾಮರಸ್ಯ ಬೆಸೆಯಲಿ'

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣ ತಾಲ್ಲೂಕಿನ ಸಸ್ತಾಪುರದಲ್ಲಿ ಶನಿವಾರ ನಡೆದ ಯಲ್ಲಾಲಿಂಗೇಶ್ವರ ಸ್ಮರಣೋತ್ಸವ ಹಾಗೂ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಮೋದೂರು ತೇಜ್ ದೀಪ ಬೆಳಗಿಸಿದರು. ಸರ್ವಾಧ್ಯಕ್ಷ ಉಮೇಶ ಬಾಬು ಮಠದ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಗವಿಸಿದ್ದಪ್ಪ ಪಾಟೀಲ ಇದ್ದರು

ಬಸವಕಲ್ಯಾಣ: 'ಚುಟುಕುಗಳು ಸಮಾಜದಲ್ಲಿ ಸಾಮರಸ್ಯ ತರಬೇಕು. ಜಾತಿ, ಧರ್ಮದ ಜಗಳ ಇಲ್ಲದಂತಾಗಿಸಬೇಕು' ಎಂದು ಸಾಹಿತಿ ಚಳ್ಳಕೆರೆಯ ಮೋದೂರು ತೇಜ್ ಹೇಳಿದ್ದಾರೆ.

ತಾಲ್ಲೂಕಿನ ಸಸ್ತಾಪುರದಲ್ಲಿ ಶನಿವಾರ ನಡೆದ ಯಲ್ಲಾಲಿಂಗೇಶ್ವರ ಸ್ಮರಣೋತ್ಸವ ಹಾಗೂ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ವಚನ ಸಾಹಿತ್ಯ ನೀಡಿದ ನಾಡಲ್ಲಿ ಚುಟುಕು ಕೃಷಿಯೂ ವಿಫುಲವಾಗಿ ನಡೆಯಲಿ. ಯುವ ಸಾಹಿತಿಗಳನ್ನು ಪ್ರೋತ್ಸಾಹಿಸಬೇಕು' ಎಂದರು.

ಸಮ್ಮೇಳನದ ಸರ್ವಾಧ್ಯಕ್ಷ ಉಮೇಶ ಬಾಬು ಮಠದ ಮಾತನಾಡಿ, ಚುಟುಕು ಪ್ರೀತಿ, ಪ್ರೇಮ ವ್ಯಕ್ತಪಡಿಸುವ ಜತೆಗೆ ವ್ಯಂಗ್ಯ, ವಿಡಂಬನೆ ಮೂಲಕ ಜನಪ್ರಿಯತೆ ಪಡೆದಿದೆ. ಯಲ್ಲಾಲಿಂಗೇಶ್ವರ ಮಠವು ಸಮ್ಮೇಳನಗಳನ್ನು ಆಯೋಜಿಸಿ ಸಾಹಿತ್ಯ ಮಾಡುತ್ತಿದೆ' ಎಂದರು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಮಹಾದೇವಿತಾಯಿ, ಸಿದ್ರಾಮಪ್ಪ ಗುದಗೆ, ಪ್ರೊ.ನಾಗೇಂದ್ರ ಢೋಲೆ, ಸಿದ್ರಾಮ ವಾಘಮಾರೆ, ವಿಜಯಕುಮಾರ ಉಪಸ್ಥಿತರಿದ್ದರು.

ಸಂಯೋಜಕ ಡಾ.ಗವಿಸಿದ್ದಪ್ಪ ಪಾಟೀಲ ಮಾತನಾಡಿದರು. ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಸಂಗಮೇಶ ಜವಾದಿ ಸ್ವಾಗತಿಸಿದರು. ಸಂಜೀವಕುಮಾರ ನಡುಕರ ನಿರೂಪಿಸಿದರು. ಅವಿನಾಶ ದೇವನೂರ ವಂದಿಸಿದರು.

ನಂತರ ನಡೆದ ಗೋಷ್ಠಿಯಲ್ಲಿ ಡಾ.ವಿಜಯಕುಮಾರ ಬೀಳಗಿ, ಸಂಗಪ್ಪ ತೌಡಿ, ಡಾ.ಜಯದೇವಿ ಗಾಯಕವಾಡ, ಡಾ.ರಾಜಕುಮಾರ ಹೆಬ್ಬಾಳೆ ಮಾತನಾಡಿದರು.

ಮಲ್ಲಿಕಾರ್ಜುನ ಸಂಗಮಕರ್, ಶಿವಶಂಕರ ತರನಳ್ಳಿ, ವೀರಾರೆಡ್ಡಿ, ಶರದಕುಮಾರ ನಾರಾಯಣಪೇಟಕರ್, ರಾಜಮತಿ ಕೋರಾಳೆ, ಸಿದ್ದಲಿಂಗ ಜಮಾದಾರ, ದಶವಂತ ಬಂಡೆ, ಅರವಿಂದ ಹುಡಗೀಕರ್ ಮೊದಲಾದವರು ಪಾಲ್ಗೊಂಡಿದ್ದರು.

ಪ್ರಜಾವಾಣಿ ಭಾನುವಾರ • ಜನವರಿ 30, 2022

ಮೌಲ್ಯಾಧಾರಿತ ಜೀವನದಿಂದ ಸುಖ

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಅಭಿಮತ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಮಂಗಳವಾರ ನಡೆದ ಶಿವಾನುಭವ ಚಿಂತನಗೋಷ್ಠಿಯಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು

ಬಸವಕಲ್ಯಾಣ: 'ನೈತಿಕ ಮೌಲ್ಯಗಳನ್ನು ಕಾಪಾಡಿಕೊಂಡು ಬದುಕಿದರೆ ಸುಖ, ಶಾಂತಿ ಲಭಿಸುತ್ತದೆ' ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಮಂಗಳವಾರ ಆಯೋಜಿಸಿದ್ದ ಶಿವಾನುಭವ ಚಿಂತನಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಧರ್ಮದ ಅರಿವಿದ್ದರೆ ಮನುಷ್ಯನಲ್ಲಿ ಒಳಿತಿನ ಗುಣಗಳು ಬೆಳೆಯುತ್ತವೆ. ದೇವರ ಧ್ಯಾನದಿಂದ ಜೀವನ್ಮುಕ್ತಿ ದೊರಕುತ್ತದೆ' ಎಂದರು.

ಡಾ.ಸಂಗಮೇಶ ತಾಂಬೋಳೆ ಮಾತನಾಡಿ,'ಧರ್ಮ ರಕ್ಷಣೆಗೈದರೆ ಮಾತ್ರ ಧರ್ಮವು ನಮ್ಮನ್ನು ಕಾಪಾಡುತ್ತದೆ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಧ್ಯಾತ್ಮಿಕತೆಯ ಮಹತ್ವದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ' ಎಂದರು.

ಪೊಲೀಸ್ ಅಧಿಕಾರಿ ಬಿ.ಎಂ. ಗಂಗಾಧರ ಮಾತನಾಡಿ,'ಚಿಕ್ಕನಿಂದಲೇ ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು. ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು. ಸಂಸ್ಕೃತಿ, ಪರಂಪರೆ ಸಂರಕ್ಷಿಸಬೇಕು' ಎಂದರು.

ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ನಾಗಣ್ಣ ಭೂಶೆಟ್ಟಿ, ಮಲ್ಲಿಕಾರ್ಜುನ ಶೀಲವಂತ, ಷಣ್ಮುಖಯ್ಯ ಸ್ವಾಮಿ, ಶಿವಕುಮಾರ ಮುನ್ನಳ್ಳಿ ಮಾತನಾಡಿದರು. ಶಿವಾನಂದ ಪಟವಾದಿ, ಬಾಬುರಾವ್ ಉಳ್ಳೆ, ರಾಜಶೇಖರ ವಸ್ತದ್, ಘನಲಿಂಗ ಸ್ವಾಮಿ, ಮಲ್ಲಯ್ಯ ಪಟವಾದಿ, ಬಸವಂತ ಬೋನೆ, ರಮೇಶಸ್ವಾಮಿ ಮೊದಲಾದವರು ಇದ್ದರು.

ಪ್ರಜಾವಾಣಿ ಬುಧವಾರ • ಫೆಬ್ರುವರಿ 3, 2022

Scanned with OKEN Scanner

'ಆದರ್ಶ ಮೌಲ್ಯ ಉಳಿಸಿ, ಬೆಳೆಸುವುದೆ ನಿಜವಾದ ಧರ್ಮ'

ಸಂ.ಕ.ಸಮಾಚಾರ ಬಸವಕಲ್ಯಾಣ : ವಿಶಾಲವಾದ ಬದುಕಿನಲ್ಲಿ ಮಾನವ ಸಮಯ ವ್ಯರ್ಥಗೊಳಿಸದೆ ಆದರ್ಶ ಮೌಲ್ಯಗಳನ್ನು ಉಳಿಸಿ ಬೆಳೆಸಿಕೊಂಡು ಬರುವುದರಲ್ಲಿ ಸರ್ವರಿಗೂ ಹಿತವಿದೆ ಎಂದು ಗವಿಮಠದ ಶ್ರೀ ಡಾ.ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಇಲ್ಲಿಯ ತ್ರಿಪುರಾಂತ ಗವಿಮಠದಲ್ಲಿ ಜರುಗಿದ ಮಾಸಿಕ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಮಾತನಾಡಿ ಮನುಷ್ಯರನ್ನು ಆರ್ಥೈಸಿಕೊಳ್ಳುವ ನಿಲುವು ಬೆಳೆಯಬೇಕಾಗಿದೆ. ಧರ್ಮದ ದೇವರ ನಿಜವಾದ ಕಲ್ಪನೆ ಆಗಲಿ, ಆರಾಧನೆ ಆಗಲಿ ಮಾಡುವುದರಲ್ಲಿ ಮನುಷ್ಯನ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಪ್ರತಿಯೊಬ್ಬ ಮನುಷ್ಯ ಒಳ್ಳೆಯವನಾಗಲು ಧರ್ಮದ ಅರಿವು ಅವನಲ್ಲಿ ಇರಬೇಕು ಎಂದರು

ಕಲಬುರಗಿ ಎಸಿಪಿ ಗಂಗಾಧರ ಮಠಪತಿ ಮಾತನಾಡಿ ಸ್ವಾರ್ಥ ಸಾಧನೆ ಬಿಟ್ಟು ಸಮಾಜಕ್ಕಾಗಿ ಏನಾದರು ಕೊಡುಗೆ ನೀಡಬೇಕು ಎನ್ನುವ ಮನೋಭಾವ ಎಲ್ಲರಲ್ಲಿ ಬೆಳೆಯಬೇಕು. ಆಂದಾಗ ಮಾತ್ರ ಸಮಾಜದಲ್ಲಿ ಎಲ್ಲರು ನೆಮ್ಮದಿಯಿಂದ ಬದುಕಲು ಸಾಧ್ಯವಾಗುತ್ತದೆ ಎಂದು ಹೇಳಿದರು.



ಬಸವಕಲ್ಯಾಣ: ತ್ರಿಪುರಾಂತ ಗವಿಮಠದಲ್ಲಿ ಜರುಗಿದ ಮಾಸಿಕ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಶ್ರೀ ಡಾ.ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಡಾ. ಸಂಗಮೇಶ ರಾಜೇಂದ್ರ ತಾಂಬೋಳೆ ಮಾತನಾಡಿದರು. ಶ್ರೀಮದ್ವಿರಶೈವ ಸದ್ಭೋದನಾ ಸಂಸ್ಥೆಯ ಅಧ್ಯಕ್ಷ ಬಸವಂತಪ್ಪಾ ಲವಾರೆ, ನಾಗಣ್ಣಾ ಭೂಶೆಟ್ಟಿ, ಶಿವಾನಂದ ಪಟವಾದಿ, ಬಾಬುರಾವ್ ಉಳ್ಳೆ, ರಾಜಶೇಖರ ವಸ್ತ್ರದ, ಫನಲಿಂಗ ಸ್ವಾಮಿ, ಮಲ್ಲಯ್ಯ ಪಟವಾದಿ, ಬಸವಂತ ಬೋನೆ, ರಮೇಶ್ ಸ್ವಾಮಿ, ರವಿ ಶಿವಲಿಂಗಪ್ಪಾ ಬಿರಾದಾರ, ಗುರುಲಿಂಗಯ್ಯಾ ಹುಲಕಂತಿಮಠ, ಶಕುಂತಲಾ ಗುರುಲಿಂಗಯ್ಯಾ, ಸವಿತಾ ರಮೇಶ್ ಸ್ವಾಮಿ, ಸೂಭದ್ರತಾಯಿ, ಮಹಾದೇವಿ ಮಲ್ಲಯ್ಯ ಪಟವಾದಿ, ಶೀಲಾ ದೇವಿ, ಕುಮಾರಿ ವೈಷ್ಣವಿ ಭಾಗವಹಿಸಿದ್ದರು. ಮಲ್ಲಿಕಾರ್ಜುನ ಶೀಲವಂತಪ್ರಾರ್ಥನೆಗೀತೆನಡೆಸಿಕೊಟ್ಟರು, ಷಣ್ಮುಖಯ್ಯಾ ಸ್ವಾಮಿ ಸ್ವಾಗತಿಸಿದರು. ಶಿವಕುಮಾರ ಮುನ್ನಳ್ಳಿ ನಿರೂಪಿಸಿದರು.

03 ಫೆಬ್ರವರಿ 2022
ಗುರುವಾರ
ಕಲಬುರಗಿ

ಸಂಯುಕ್ತ ಕರ್ನಾಟಕ KALABURAGI

ವಿಜಯ ಕರ್ನಾಟಕ ಭಾನುವಾರ,6 ಮಾರ್ಚ್ 2022, ಕಲಬುರಗಿ

ಅಲೌಕಿಕ ಜ್ಞಾನವೇ ಶ್ರೇಷ್ಠವಾದುದು

ಗವಿ ಮಠದಲ್ಲಿ ಜರುಗಿದ ಮಾಸಿಕ ಶಿವಾನುಭವ ಚಿಂತನ ಕಾರ್ಯಕ್ರಮ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಲೌಕಿಕ ಜ್ಞಾನಕ್ಕಿಂತ, ಅಲೌಕಿಕ ಜ್ಞಾನ ಶ್ರೇಷ್ಠವಾದುದು. ಲೌಕಿಕ ಜ್ಞಾನದಿಂದ ಆನಂದ ದೊರಕಿದರೆ, ಅಲೌಕಿಕ ಜ್ಞಾನದಿಂದ ಪರಮಾನಂದ ದೊರಕುತ್ತದೆ ಎಂದು ಇಲ್ಲಿಯ ಗವಿಮಠದ ಡಾ.ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಹೊರವಲಯದಲ್ಲಿರುವ ಗವಿ ಮಠದಲ್ಲಿ ಮಾಸಿಕ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಆಶಿರ್ವಚನ ನೀಡಿದರು.

ಕಾಡಿಗೆಗಿಂತ(ಕಾಜಲ್) ಕಪ್ಪು ಯಾವುದೆಂದರೆ, ಅಜ್ಞಾನ ಮತ್ತು ಕಳಂಕ. ಶರೀರದ ಮಲೀನವನ್ನು ಹೇಗೆ ನೀರಿನಿಂದ ಸ್ವಚ್ಛಗೊಳಿಸುತ್ತವೆ, ಹಾಗೆ ಮನಸ್ಸಿನ ಮಲೀನವನ್ನು ಅಧ್ಯಾತ್ಮದ ಜ್ಞಾನ ನೀರಿನಿಂದ ಕೊಳೆಯ ಬೇಕಾಗುತ್ತದೆ.

ಅಧ್ಯಾತ್ಮದ ಜ್ಞಾನ ಇಂತಹ ಶಿವಾನುಭವ ಗೋಷ್ಠಿಗಳಲ್ಲಿ ಸಿಗುತ್ತದೆ ಎಂದು ತಿಳಿಸಿದರು.

ಉದ್ಘಾಟಿಸಿದ ಬಸವಕಲ್ಯಾಣ ನಗರ ಯೋಜನಾ ಪ್ರಾಧಿಕಾರದ ನೂತನ ಅಧ್ಯಕ್ಷ ರಾಜಕುಮಾರ ಬಿರಾದಾರ ಸಿರಗಾಪೂರ ಮಾತನಾಡಿ, ಶಿವಾನುಭವ ಚಿಂತನೆಗಳಲ್ಲಿ ಭಾಗವಹಿಸುವದರಿಂದ ಮನಸ್ಸಿಗೆ ಸುಖ, ಶಾಂತಿ, ನೆಮ್ಮದಿ ಸಿಗುತ್ತದೆ. ಹೆಚ್ಚು ಹೆಚ್ಚು ಜನರು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎಂದು ಸಲಹೆ ನೀಡಿದರು.



ಬಸವಕಲ್ಯಾಣ ನಗರದ ಹೊರವಲಯದಲ್ಲಿರುವ ಗವಿ ಮಠದಲ್ಲಿ ಮಾಸಿಕ ಶಿವಾನುಭವ ಚಿಂತನ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಡಾ.ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಇದೇ ಸಂದರ್ಭದಲ್ಲಿ ರಾಜಕುಮಾರ ಬಿರಾದಾರ ಸಿರಗಾಪೂರ ಅವರಿಗೆ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ಸತ್ಕರಿಸಿದರು. ದೀಪಕ ಗಾಯಕವಾಡ, ಅರವಿಂದ ಮುತ್ತೆ, ಮಹೇಶ ಮಾಲಗರ, ಲೋಕೇಶ ಮನ್ನಳ್ಳಿ, ಶಿವಕುಮಾರ ಮುನ್ನಾಳೆ, ದೊಡ್ಡಪ್ಪಾ ಅಪ್ಪಾ ಕಾಲೇಜಿನ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಇದ್ದರು.

Scanned with OKEN Scanner

ಉದಯಕಾಲ

UDAYAKALA
Thursday, March 03, 2022

ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಪರಿಕರ ವಿತರಣೆ

ಹಳ್ಳಿಗಳ ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡುತ್ತಿರುವ ಎಸ್‌ಕೆಡಿಆರ್‌ಡಿಪಿ

ಉದಯಕಾಲ ನ್ಯೂಸ್

ಬಸವಕಲ್ಯಾಣ: ಶ್ರೀ ಕ್ಷೇ.ಧ.ಗಾ.ಯೋ.ಯು ಕರ್ನಾಟಕದಲ್ಲಿ ಎರಡನೇ ಸರಕಾರವಾಗಿದ್ದು, ಭಾರತ ಹಳ್ಳಿಗಳಿಂದ ಕೂಡಿದ್ದ ದೇಶವಾಗಿದ್ದು, ಹಳ್ಳಿಗಳ ಜನರು ಪರಾವಲಂಬಿಯಾಗದೇ ಸ್ವಾವಲಂಬಿಗಳಾಗಬೇಕು ಎಂಬ ಉದ್ದೇಶ ವನ್ನಿಟ್ಟುಕೊಂಡು ಸ್ಥಾಪಿತವಾದ ಸಂಸ್ಥೆಯೇ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಾಗಿದೆ ಎಂದು ಶಾಸಕ ಶರಣು ಸಲಗರ್ ತಿಳಿಸಿದರು.

ಇಲ್ಲಿನ ಎಸ್.ಎಸ್.ಕೆ ಬಸವೇಶ್ವರ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 22 ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಪರಿಕರಗಳ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತಾಲೂಕಿನಲ್ಲಿ ಈಗಾಗಲೇ 3408 ಸ್ವಸಹಾಯ ಸಂಘ ರಚಿಸಿ ಸುಮಾರು 32 ಸಾವಿರ ಸದಸ್ಯರನ್ನು ಒಳಗೊಂಡಿದ್ದು, ಎಲ್ಲಾ ಸದಸ್ಯರು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮುಂದೆ



ಬರಬೇಕು ಎಂಬ ಉದ್ದೇಶ ಇಟ್ಟುಕೊಂಡು ಸದಸ್ಯರುಗಳಿಗೆ ಪ್ರಗತಿ ನಿಧಿ ಸಾಲದ ಮುಖಾಂತರ ಬಡವರಿಗೆ ಆಶ್ರಯವಾಗಿದೆ ಎಂದರು.

ತಾಲೂಕಿನಲ್ಲಿ ಪ್ರಸ್ತುತವಾಗಿ 52 ಹಾಲೂ ಉತ್ಪಾದಕರ ಸಹಕಾರಿ ಸಂಘಗಳು ಚಾಲನೆಯಲ್ಲಿದ್ದು, ಇದರಲ್ಲಿ 22 ಹಾಲೂ ಉತ್ಪಾದಕರ ಸಂಘಗಳಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 42 ಹಾಲಿನ ಕ್ಯಾನ್, 6 ತೂಕದ ಯಂತ್ರ, ಮತ್ತು 6 ಹಾಲೂ ಅಳೆಯುವ ಯಂತ್ರಗಳನ್ನು ಸೇರಿ ಒಟ್ಟು 6 ಲಕ್ಷ 9 ಸಾವಿರ ರೂ. ಗಳ 54 ಪರಿಕರಗಳನ್ನು ಹಾಲೂ ಉತ್ಪಾದಕರ ಸಹಕಾರಿ ಸಂಘಗಳಿಗೆ ಹಸ್ತಾಂತರಿಸಿ ಮುಂದಿನ ದಿನಮಾನಗಳಲ್ಲಿ ಬೀದರ್, ಕಲಬುರಗಿ ಹಾಲು ಉತ್ಪಾದಕರ ಒಕ್ಕೂಟಗಳು ಹಾಲೂ ಉತ್ಪಾದನೆಯಲ್ಲಿ ಕರ್ನಾಟಕದಲ್ಲಿಯೇ ಪ್ರಥಮ ಸ್ಥಾನ ಬರಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಲಬುರಗಿ ಪ್ರಾದೇಶಿಕ ವಿಭಾಗದ ಪ್ರಾದೇಶಿಕ ನಿರ್ದೇಶಕ ಶಿವರಾಯ ಪ್ರಭು ಅವರು ಮಾತನಾಡಿ, ಬಸವಕಲ್ಯಾಣ ತಾಲೂಕಿನಲ್ಲಿ 150 ವಿದ್ಯಾರ್ಥಿಗಳಿಗೆ ಸುಜ್ಞಾನ ನಿಧಿ ಶಿಷ್ಯ ವೇತನ 5 ಶಾಲೆಗಳಿಗೆ ಉಚಿತ ಟ್ಯೂಷನ್ ಕ್ಲಾಸ್, 1 ಹಿಂದುರುದ್ರ ಭೂಮಿ, 6 ದೇವಸ್ಥಾನಗಳ ಕಟ್ಟಡ ರಚನೆಗೆ 20 ಶಾಲೆಗಳಿಗೆ ಬೆಂಚು ದೆಸ್ಕ್ ವಿತರಣೆ, 83 ನಿರ್ಗತಿಕರಿಗೆ ಮಾಶಾಸನ ಒದಗಣೆ, 17 ಜ್ಞಾನ ದೀಪ ಶಿಕ್ಷಕರ ಒದಗಣೆ ? ಸ್ವಸಹಾಯ ಸಂಘದ ಸದಸ್ಯರುಗಳಿಗೆ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ 2 ಲಕ್ಷ 90 ಸಾವಿರ ರೂ. ಅನುದಾನ ನೀಡಿದ್ದು, ಸಂಘದ ಸದಸ್ಯರುಗಳಿಗೆ ಆರೋಗ್ಯ ರಕ್ಷಾ ಕವಚ ಕಾರ್ಡ ಮತ್ತು ಸೇವಾ ಸಿಂಧು ಕೇಂದ್ರ ಮುಖಾಂತರ 9001 ಸದಸ್ಯರುಗಳಿಗೆ ಉಚಿತವಾಗಿ ಇ-ಶ್ರಮ್ ಕಾರ್ಡ ನೀಡಿದ್ದು, ಸಮಾಜದ ಅತ್ಯಂತ ಕಡುಬಡವರಿಗೆ 105 ವಾತ್ಸಲ್ಯ ಕಿಟ್ ಒದಗಿಸಲಾಗಿದೆ ಎಂದೂ ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಘನಲಿಂಗ ರುದ್ರಮುನಿ ಮಹಾಸ್ವಾಮಿಗಳು, ಬೀದರ ಜಿಲ್ಲಾ ನಿರ್ದೇಶಕ ಉಮರಬ್ಬ, ತಾಲೂಕಿನ ಪತ್ರಕರ್ತ ಸಂಘದ ಅಧ್ಯಕ್ಷ ಕಲ್ಯಾಣರಾವ ಮದರಗಾಂವ ಕರ್, ತಾಲೂಕಿನ ಹಾಲೂ ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ಕುಲಕರ್ಣಿ, ಹಿರಿಯ ಪತ್ರಕರ್ತ ಗುರುನಾಥ ಗಡ್ಡೆ, ತಾಲೂಕಿನ ಯೋಜನಾಧಿಕಾರಿ ಸೋಮಲಿಂಗ ಕೆ, ಬೀದರ್, ಕಲಬುರಗಿ, ಯಾದಗಿರಿ ಹಾಲೂ ಉತ್ಪಾದಕರ ಸಹಕಾರಿ ಒಕ್ಕೂಟದ ಸಹಾಯಕ ವ್ಯವಸ್ಥಾಪಕ ಶ್ರೀನಿವಾಸರಾವ್, ಹಾಲೂ ಉತ್ಪಾದಕರ ಸಹಕಾರಿ ಸಂಘದ ಮೇಲ್ವಿಚಾರಕ ಪ್ರವೀಣ, ಕೃಷಿ ಮೇಲ್ವಿಚಾರಕ ಮಹಾಂತೇಶ ಎಂ.ಡಿ, ಮೇಲ್ವಿಚಾರಕ ಮಂಜುನಾಥ, ಕೃಷ್ಣ ಚಂದ್ರಕಲಾ, ಸೇವಾ ಪ್ರತಿನಿಧಿಗಳು, ಮತ್ತು 22 ಹಾಲು ಉತ್ಪಾದಕರ ಸಹಕಾರಿ ಸಂಘದ ಸದಸ್ಯರು ಪಾಲ್ಗೊಂಡಿದ್ದರು.

105 ಕಡುಬಡವರಿಗೆ ವಾತ್ಸಲ್ಯ ಕಿಟ್ ವಿತರಣೆ

Scanned with OKEN Scanner

ಡಾ.ಮಹೇಶ ಪಾಟೀಲ್ ಹೇಳಿಕೆ | ಮಂಠಾಳದಲ್ಲಿ ಜಲಜಾಗೃತಿ, ಕಲಾ ಮೇಳ

ಜಾನಪದ ಕಲಾವಿದರನ್ನು ಗುರುತಿಸಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಜಾನಪದ ಕಲೆ, ಸಂಸ್ಕೃತಿಯಿಂದಾಗಿ ಭಾರತ ದೇಶಕ್ಕೆ ವಿಶ್ವದಲ್ಲಿ ಅತ್ಯಂತ ವಿಶಿಷ್ಟ ಹಾಗೂ ವಿಶೇಷವಾಗಿ ಗುರುತಿಸಲಾಗುತ್ತಿದೆ. ದೇಶದ ಕಲೆ, ಸಂಸ್ಕೃತಿ ಉಳಿಸಿ ಬೆಳಿಸುತ್ತಿರುವ ಕಲಾವಿದರನ್ನು ಪ್ರೋತ್ಸಾಹಿಸುವ ಕೆಲಸ ನಡೆಯಬೇಕು ಎಂದು ಕೆಎಎಸ್ ಅಧಿಕಾರಿ ಡಾ.ಮಹೇಶ ಪಾಟೀಲ್ ಹೇಳಿದರು.

ಮಂಠಾಳ ಗ್ರಾಮದ ಮೂಕಯ್ಯನ ಮಠದಲ್ಲಿ ಶುಕ್ರವಾರ ಸಂಜೆ ನೆಹರು ಯುವ ಕೇಂದ್ರ ಬೀದರ್, ಶ್ರೀ ಗುರುಲಿಂಗೇಶ್ವರ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಯುವಕ ಸಂಘ, ಅಕ್ಕಮಹಾದೇವಿ ಮಹಿಳಾ ಭಜನಾ ಸಂಘದ ಆಶ್ರಯದಲ್ಲಿ ಆಯೋಜಿಸಿದ್ದ ಜಲ ಜಾಗೃತಿ ಹಾಗೂ ಜಾನಪದ ಕಲಾ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಠಗಳ ಆಲಯ ಎಂದೇ ಕರೆಯುವ ಮಂಠಾಳದಲ್ಲಿನ ಪ್ರಾಚೀನ ಮಠಗಳನ್ನು ಸಂರಕ್ಷಣೆ ಮಾಡುವ ಮೂಲಕ ಯುವ ಪೀಳಿಗೆಗೆ ಇತಿಹಾಸ ಪರಿಚಯಿಸಬೇಕಿದೆ ಎಂದರು.

ನೀರು ಅತ್ಯಮೂಲ್ಯ ವಸ್ತು. ವ್ಯರ್ಥ ಮಾಡದೆ ಅಗತ್ಯವಿರುವಷ್ಟು ಮಾತ್ರ ಬಳಸಬೇಕು. ಗ್ರಾಮಗಳಲ್ಲಿರುವ ನೀರಿನ ಜಲ ಮೂಲಗಳನ್ನು ಸಂರಕ್ಷಣೆ ಮಾಡಲು ಎಲ್ಲರೂ ಕಾಳಜಿ ವಹಿಸಬೇಕು ಎಂದು ತಿಳಿಸಿದರು.

ಸಾನ್ನಿಧ್ಯ ವಹಿಸಿದ್ದ ತ್ರಿಪುರಾಂತ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಹನಿ ಹನಿ ಕೂಡಿದರೆ ಹಳ್ಳ, ತೆನೆ ತೆನೆ ಕೂಡಿದರೆ ರಾಶಿ ಎನ್ನುವ ಮಾತಿನ ಅರ್ಥ ತಿಳಿದುಕೊಂಡರೆ ನೀರಿನ ಮಹತ್ವ ಗೊತ್ತಾಗುತ್ತದೆ. ನೀರಿನ ಸದ್ಬಳಕೆ ಕುರಿತು ನಿರಂತರವಾಗಿ ಜನಜಾಗೃತಿ ಮಾಡಬೇಕು. ಗ್ರಾಮೀಣ ಭಾಗದ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಎಲ್ಲರಿಂದ ನಡೆಯಬೇಕು ಎಂದರು.



ವಿಜಯವಾಣಿ

ಬಸವಕಲ್ಯಾಣ ತಾಲೂಕಿನ ಮಂಠಾಳ ಗ್ರಾಮದಲ್ಲಿ ಶುಕ್ರವಾರ ಆಯೋಜಿಸಿದ್ದ ಜಲ ಜಾಗೃತಿ ಹಾಗೂ ಜಾನಪದ ಕಲಾಮೇಳದಲ್ಲಿ ಕಲಾವಿದರಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಮಹೇಶ ಪಾಟೀಲ್, ದತ್ತು ಚಿಟಂಪಲ್ಲೆ, ಪುಷ್ಪರಾಜ ಹಾರಕೂಡೆ, ಮಹಾದೇವಿ ಶೆಟಗಾರ ಇತರರಿದ್ದರು.

ಸಾಹಿತಿ ನಾಗೇಂದ್ರಪ್ಪ ಬಿರಾದಾರ ಮಾತನಾಡಿ, ವಿದೇಶಗಳಲ್ಲಿ ನೀರು ಖರೀದಿಸಿ ಬಳಕೆ ಮಾಡಲಾಗುತ್ತಿದೆ. ನಮ್ಮಲ್ಲಿಯೂ ಈ ವ್ಯವಸ್ಥೆ ಬರಬಾರದೆಂದರೆ ಹನಿಹನಿ ನೀರು ಸಹ ವ್ಯರ್ಥ ಮಾಡದೆ ಉಪಯೋಗಿಸಬೇಕು. ನೀರು ಸಂಗ್ರಹ ವ್ಯವಸ್ಥೆಗೆ ಪ್ರತಿಯೊಬ್ಬರೂ ಕಾಳಜಿ ವಹಿಸಬೇಕು ಎಂದು ಹೇಳಿದರು.

ಗ್ರಾಪಂ ಅಧ್ಯಕ್ಷ ದತ್ತು ಚಿಟಂಪಲ್ಲೆ ಅಧ್ಯಕ್ಷತೆ ವಹಿಸಿದ್ದರು. ಸದಸ್ಯ ಬಸವರಾಜ ಚಿತಕೋಟೆ, ಪ್ರಮುಖರಾದ ವಿಶ್ವನಾಥ ಹುಗ್ಗೆ ಪಾಟೀಲ್, ಪುಷ್ಪರಾಜ ಹಾರಕೂಡೆ, ಮಹಾದೇವಿ ಶೆಟಗಾರ, ಮಲ್ಲಿಕಾರ್ಜುನ ಸಂಗನಬಟ್ಟಿ, ಪತ್ರಕರ್ತ ಉದಯಕುಮಾರ ಮುಳೆ, ಮಲ್ಲಯ್ಯ ಸ್ವಾಮಿ, ರಾಜಪ್ಪ ಹಾರಕೂಡೆ, ಬಸವರಾಜ ಮಧುರಗೆ, ನೀಲಕಂಠಯ್ಯ ಸ್ವಾಮಿ, ಶಶಿಕಾಂತ, ಬಸವರಾಜ ದುಬಲಗುಂಡೆ ಇತರರಿದ್ದರು. ಬಂಡೆಪ್ಪ ಮಾಳಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ನಟರಾಜ ಚಿತಕೋಟೆ ನಿರೂಪಣೆ ಮಾಡಿದರು. ಜಾನಪದ ಕಲಾವಿದರಿಗೆ ಪ್ರಮಾಣ ಪತ್ರ ನೀಡಿ ಪ್ರೋತ್ಸಾಹಿಸಲಾಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಭಾನುವಾರ 13 ಫೆಬ್ರವರಿ 2022
13 FEBRUARY 2022

ಪರಿಕರ ವಿತರಣಾ ಕಾರ್ಯಕ್ರಮದಲ್ಲಿ ಶಾಸಕ ಶರಣು ಸಲಗರ ಹೇಳಿಕೆ

ಹಳ್ಳಿಯ ಜನರು ಸ್ವಾವಲಂಬಿಗಳಾಗಲಿ

ವಿಕ ಸುದ್ದಿಲೋಕ ಬಸವಕಲ್ಯಾಣ

ಭಾರತ ಹಳ್ಳಿಗಳಿಂದ ಕೂಡಿರುವ ದೇಶವಾಗಿದ್ದು, ಹಳ್ಳಿಗಳ ಜನರು ಸ್ವಾವಲಂಬಿಗಳಾಗಬೇಕು ಎಂಬ ಉದ್ದೇಶವನ್ನಿಟ್ಟುಕೊಂಡು ಸ್ಥಾಪಿತವಾದ ಸಂಸ್ಥೆಯೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಾಗಿದೆ ಎಂದು ಶಾಸಕ ಶರಣು ಸಲಗರ ಹೇಳಿದರು.

ನಗರದ ಎಸ್‌ಎಸ್‌ಕೆ ಬಸವೇಶ್ವರ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 22 ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಪರಿಕರಗಳ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತಾಲೂಕಿನಲ್ಲಿ ಈಗಾಗಲೇ 3408 ಸ್ವ ಸಹಾಯ ಸಂಘ ರಚಿಸಿ ಸುಮಾರು 32 ಸಾವಿರ ಸದಸ್ಯರನ್ನು ಒಳಗೊಂಡಿದ್ದು, ಎಲ್ಲಾ ಸದಸ್ಯರು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಮುಂದೆ ಬರಬೇಕು ಎಂಬ ಉದ್ದೇಶ ಇಟ್ಟುಕೊಂಡು ಸದಸ್ಯರುಗಳಿಗೆ ಪ್ರಗತಿನಿಧಿ ಸಾಲದ ಮುಖಾಂತರ ಬಡವರಿಗೆ ಆಶ್ರಯವಾಗಿದೆ ಎಂದು ತಿಳಿಸಿದರು.

ಬೀದರ್, ಕಲಬುರಗಿ ಹಾಲು ಉತ್ಪಾದಕರ ಒಕ್ಕೂಟಗಳು ಹಾಲು ಉತ್ಪಾದನೆಯಲ್ಲಿ ಕರ್ನಾಟಕದಲ್ಲಿಯೇ, ಪ್ರಥಮ ಸ್ಥಾನ ಬರಬೇಕೆಂದು ಸಲಹೆ ನೀಡಿದರು.



ಬಸವಕಲ್ಯಾಣದಲ್ಲಿ 22 ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಪರಿಕರಗಳು ವಿತರಿಸಲಾಯಿತು. ಶಾಸಕ ಶರಣು ಸಲಗರ, ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು, ಕಲಬುರಗಿ ಪ್ರಾದೇಶಿಕ ವಿಭಾಗದ ಪ್ರಾದೇಶಿಕ ನಿರ್ದೇಶಕ ಶಿವರಾಯ ಪ್ರಭು ಇತರರಿದ್ದರು.

ಕಲಬುರಗಿ ಪ್ರಾದೇಶಿಕ ವಿಭಾಗದ ಪ್ರಾದೇಶಿಕ ನಿರ್ದೇಶಕ ಶಿವರಾಯ ಪ್ರಭು ಮಾತನಾಡಿ, ಬಸವಕಲ್ಯಾಣ ತಾಲೂಕಿನಲ್ಲಿ 150 ವಿದ್ಯಾರ್ಥಿಗಳಿಗೆ ಸುಜ್ಞಾನ ನಿಧಿ ಶಿಷ್ಯ ವೇತನ, 5 ಶಾಲೆಗಳಿಗೆ ಉಚಿತ ಟ್ಯೂಷನ್ ಕ್ಲಾಸ್, 1 ಹಿಂದೂ ರುದ್ರಭೂಮಿ, 6 ದೇವಸ್ಥಾನಗಳ ಕಟ್ಟಡ ರಚನೆಗೆ, 20 ಶಾಲೆಗಳಿಗೆ ಬೆಂಚು ಡೆಸ್ಕ್ ಒದಗಿಸಲಾಗಿದೆ. 83 ನಿರ್ಗತಿಕರಿಗೆ ಮಾಶಾಸನ 17 ಜ್ಞಾನ ದೀಪ ಶಿಕ್ಷಕರು, ಸ್ವಸಹಾಯ ಸಂಘದ ಸದಸ್ಯರುಗಳಿಗೆ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ 2.90 ಲಕ್ಷ ಅನುದಾನ ನೀಡಿದ್ದು, ಸಂಘದ ಸದಸ್ಯರುಗಳಿಗೆ ಆರೋಗ್ಯ ರಕ್ಷಾ ಕವಚ ಕಾರ್ಡ ಮತ್ತು ಸೇವಾ ಸಿಂಧು ಕೇಂದ್ರ ಮುಖಾಂತರ 9001 ಸದಸ್ಯರುಗಳಿಗೆ ಉಚಿತವಾಗಿ ಇ-ಶ್ರಮ್ ಕಾರ್ಡ ನೀಡಿದ್ದು ಸಮಾಜದ ಅತ್ಯಂತ ಕಡು ಬಡವರಿಗೆ 105 ವಾತ್ಸಲ್ಯ ಕಿಟ್ ಒದಗಿಸಿಲಾಗಿದೆ ಎಂದರು.

ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಸ್ವಾಮೀಜಿ, ಜಿಲ್ಲಾ ನಿರ್ದೇಶಕ ಉಮರಬ್ಬ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಕಲ್ಯಾಣರಾವ ಮದರಗಾಂವಕರ, ತಾಲೂಕು ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ಕುಲಕರ್ಣಿ, ಹಿರಿಯ ಪತ್ರಕರ್ತ ಗುರುನಾಥ ಗಡ್ಡೆ, ತಾಲೂಕಿನ ಯೋಜನಾಧಿಕಾರಿ ಸೋಮಲಿಂಗ ಕೆ, ಬೀದರ್, ಕಲಬುರಗಿ, ಯಾದಗಿರಿ ಹಾಲು ಉತ್ಪಾದಕರ ಸಹಕಾರಿ ಒಕ್ಕೂಟದ ಸಹಾಯಕ ವ್ಯವಸ್ಥಾಪಕ ಶ್ರೀನಿವಾಸರಾವ, ಹಾಲು ಉತ್ಪಾದಕರ ಸಹಕಾರಿ ಸಂಘದ ಮೇಲ್ವಿಚಾರಕ ಪ್ರವೀಣ, ಕೃಷಿ ಮೇಲ್ವಿಚಾರಕ ಮಹಾಂತೇಶ ಎಂ.ಡಿ, ಮೇಲ್ವಿಚಾರಕರಾದ ಮಂಜುನಾಥ, ಕೃಷ್ಣ, ಚಂದ್ರಕ್ಕಲಾ, ಸೇವಾ ಪ್ರತಿನಿಧಿಗಳು ಮತ್ತು 22 ಸದಸ್ಯರು ಇದ್ದರು.

6.09 ಲಕ್ಷದ ಪರಿಕರ ಹಸ್ತಾಂತರ

ಬಸವಕಲ್ಯಾಣ ತಾಲೂಕಿನಲ್ಲಿ ಪ್ರಸ್ತುತ 52 ಹಾಲು ಉತ್ಪಾದಕರ ಸಹಕಾರಿ ಸಂಘಗಳು ಚಾಲನೆಯಲ್ಲಿದ್ದು, ಇದರಲ್ಲಿ 22 ಹಾಲು ಉತ್ಪಾದಕರ ಸಂಘಗಳಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 42 ಹಾಲಿನ ಕ್ಯಾನ್, 6 ತೂಕದಯಂತ್ರ ಮತ್ತು 6 ಹಾಲು ಅಳೆಯುವ ಯಂತ್ರ ಸೇರಿ ಒಟ್ಟು 6.09 ಲಕ್ಷದ 54 ಪರಿಕರಗಳನ್ನು ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಶಾಸಕರು ಹಸ್ತಾಂತರಿಸಿದರು.

ನಮ್ಮ ಬೀದರ್ ಗುರುವಾರ,3 ಮಾರ್ಚ್ 2022, ಕಲಬುರಗಿ

Scanned with OKEN Scanner

ಮಂಠಾಳ ಗ್ರಾಮದಲ್ಲಿ ಜಲ ಜಾಗೃತಿ, ಜಾನಪದ ಕಲಾ ಮೇಳದಲ್ಲಿ ಡಾ. ಮಹೇಶ ಪಾಟೀಲ್ ಹೇಳಿಕೆ

ಜಾನಪದ ಕಲಾವಿದರನ್ನು ಗುರುತಿಸಿ, ಪ್ರೋತ್ಸಾಹಿಸುವ ಕೆಲಸ ನಡೆಯಲಿ

ಸಂ.ಕ.ಸಮಾಚಾರ ಬಸವಕಲ್ಯಾಣ

ಜಾನಪದ ಕಲೆ, ಸಂಸ್ಕೃತಿಯಿಂದಾಗಿ ಭಾರತ ದೇಶಕ್ಕೆ ವಿಶ್ವದಲ್ಲಿ ಅತ್ಯಂತ ವಿಶಿಷ್ಟ ಹಾಗೂ ವಿಶೇಷವಾಗಿ ಗುರುತಿಸಲಾಗುತ್ತಿದೆ. ದೇಶದ ಕಲೆ, ಸಂಸ್ಕೃತಿ ಉಳಿಸಿ, ಬೆಳೆಸುತ್ತಿರುವ ಕಲಾವಿದರಿಗೆ ಪ್ರೋತ್ಸಾಹಿಸುವ ಕೆಲಸ ನಡೆಯಬೇಕು ಎಂದು ಕೆಎಎಸ್ ಅಧಿಕಾರಿ ಡಾ. ಮಹೇಶ ಪಾಟೀಲ್ ತಿಳಿಸಿದರು.

ತಾಲೂಕಿನ ಮಂಠಾಳ ಗ್ರಾಮದ ಮುಕಯ್ಯನ ಮಠದಲ್ಲಿ ಶ್ರೀ ಗುರುಲಿಂಗೇಶ್ವರ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಯುವಕ ಸಂಘ ಮಂಠಾಳ ಹಾಗೂ ಅಕ್ಕಮಹಾದೇವಿ ಮಹಿಳಾ ಸಂಘದ ಆಶ್ರಯದಲ್ಲಿ ಆಯೋಜಿಸಿದ ಜಲ ಜಾಗೃತಿ ಹಾಗೂ ಜಾನಪದ ಕಲಾ ಮೇಳಕ್ಕೆ ಚಾಲನೆ ನೀಡಿ ಮಾತನಾಡಿ, ಮಠಗಳನ್ನು ಸಂರಕ್ಷಣೆ ಮಾಡುವ ಮೂಲಕ ಯುವ ಪೀಳಿಗೆಗೆ ಇತಿಹಾಸ ಪರಿಚಯಿಸುವ ಕೆಲಸ ನಡೆಯಬೇಕು ಎಂದು ಸಲಹೆ ನೀಡಿದರು.

ಸಾಹಿತಿ ನಾಗೇಂದ್ರಪ್ಪ ಬಿರಾದಾರ ಮಾತನಾಡಿ, ವಿದೇಶಗಳಲ್ಲಿ ನೀರು ಖರೀದಿಸಿ ಜನ ಬಳಕೆ ಮಾಡುತ್ತಾರೆ. ನಮ್ಮಲ್ಲಿಯೂ ಈ ವ್ಯವಸ್ಥೆ ಬರಬಾರದು ಎಂದರೆ ಹನಿ, ಹನಿ ನೀರು ಸಹ ವ್ಯರ್ಥಮಾಡದೆ ಉಪಯೋಗ ಮಾಡಬೇಕು. ನೀರು ಸಂಗ್ರಹ ವ್ಯವಸ್ಥೆಗೆ ಪ್ರತಿಯೊಬ್ಬರು ಕಾಳಜಿ ವಹಿಸಬೇಕು ಎಂದರು.

ತ್ರಿಪುರಾಂತ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಹನಿ, ಹನಿ ಕೂಡಿದರೆ ಹಳ್ಳ, ತೆನೆ ತೆನೆ ಕೂಡಿದರೆ ರಾಶಿ ಎನ್ನುವ ಮಾತಿನ ಅರ್ಥ ತಿಳಿದುಕೊಂಡು ನೀರಿನ ಮಹತ್ವ ಅರಿತುಕೊಳ್ಳಬೇಕು. ನೀರಿನ ಸದ್ಬಳಕೆ ಕುರಿತು ಜನಜಾಗೃತಿ ಮೂಡಿಸುವ ಕೆಲಸ ನಿರಂತರವಾಗಿ ನಡೆಯಬೇಕು. ಗ್ರಾಮೀಣ ಭಾಗದ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಎಲ್ಲರಿಂದ ನಡೆಯಬೇಕು ಎಂದು ತಿಳಿಸಿದರು.



ಮಂಠಾಳ ಗ್ರಾಮದ ಮುಕಯ್ಯನ ಮಠದಲ್ಲಿ ಆಯೋಜಿಸಿದ ಜಲ ಜಾಗೃತಿ ಹಾಗೂ ಜಾನಪದ ಕಲಾ ಮೇಳದಲ್ಲಿ ಕಲಾವಿದರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಗ್ರಾಪಂ ಅಧ್ಯಕ್ಷ ದತ್ತು ಚಿಟಂಪಲ್ಲೆ ಅಧ್ಯಕ್ಷತೆ ವಹಿಸಿದ್ದರು. ಗ್ರಾಪಂ ಸದಸ್ಯ ಬಸವರಾಜ ಚಿಚಕೋಟೆ, ಪ್ರಮುಖರಾದ ವಿಶ್ವನಾಥ ಹುಗ್ಗೆ ಪಾಟೀಲ್, ಪುಷ್ಪರಾಜ ಹಾರಕೂಡೆ, ಮಹಾದೇವಿ ಶಟಗಾರ್, ಮಲ್ಲಿಕಾರ್ಜುನ ಸಂಗನಬಟ್ಟೆ, ಪತ್ರಕರ್ತ ಉದಯಕುಮಾರ ಮುಳೆ ಸೇರಿದಂತೆ ಇತರರಿದ್ದರು. ಬಂಡೆಪ್ಪ ಮಾಳಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ನಟರಾಜ ಚಿಚಕೋಟೆ ನಿರೂಪಿಸಿದರು. ಪ್ರಮುಖರಾದ ಮಲ್ಲಯ್ಯಸ್ವಾಮಿ, ರಾಜಪ್ಪ ಹಾರಕೂಡೆ, ಬಸವರಾಜ್ ಮಧುರಗೆ, ನೀಲಕಂಠಯ್ಯ ಸ್ವಾಮಿ, ಶಶಿಕಾಂತ್ ಝುಂಜಾ, ಬಸವರಾಜ್ ದುಬಗುಂಡೆ, ಬಂಡೆಪ್ಪ ಶಾಯಪ್ಪ, ನರೇಶ್ ಮಾಳಿ, ಪಮುಲ್ ಚಿತಕೋಟೆ, ಚೆನ್ನಪ್ಪ ಹಾರಕೂಡೆ, ಸಂಕೇತ ಝುಂಜಾನ್, ಕೇದರ್, ಬಸವರಾಜ್ ಸಂಗನಬಟ್ಟೆ, ಮಹಾದೇವ ಚುಚಕೋಟೆ, ಮಹಾಂತಯ್ಯ ಸ್ವಾಮಿ, ಪ್ರಶಾಂತ್ ಪಾಟೀಲ್, ಸಂತೋಷ ಪಾರಾ, ಅಕ್ಕಮಹಾದೇವಿ ಭಜನಾ ಮಂಡಳದ ಲಲಿತಾಬಾಯಿ ಮರಿದೇವರಮಟ್ಟ, ಭಾರತಬಾಯಿ ಮಡಕೆ, ಭಾಗಮ್ಮ ಕೊಕಟ್ಟೆ, ಸರಸ್ವತಿ ವಗಶಟ್ಟೆ ಸೇರಿದಂತೆ ಇತರರು ಹಾಜರಿದ್ದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಜಾನಪದ ಕಲಾವಿದರಿಗೆ ಪ್ರಮಾಣ ಪತ್ರ ನೀಡಿ ಪ್ರೋತ್ಸಾಹಿಸಲಾಯಿತು.

KALABURAGI ಸಂಯುಕ್ತ ಕರ್ನಾಟಕ

13 ಫೆಬ್ರವರಿ 2022 ಭಾನುವಾರ ಕಲಬುರಗಿ

ಜಲಕ್ಷಾಮವಾದರೆ ಮನುಕುಲ ನಾಶ

ಜಲ ಜಾಗೃತಿ ಕಾರ್ಯಾಗಾರ; ಕೆಎಎಸ್ ಅಧಿಕಾರಿ ಡಾ.ಮಹೇಶ ಪಾಟೀಲ ಹೇಳಿಕೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಜಲವಿಲ್ಲದ ಭೂಮಿ ಮೇಲೆ ಜೀವಿಗಳಿಗೆ ಉಳಿವಿಲ್ಲ. ಜಲ ಕ್ಷಾಮವಾದರೆ ಮನುಕುಲ ನಾಶ ಆಗಬಹುದು' ಎಂದು ಕೆಎಎಸ್ ಅಧಿಕಾರಿ ಡಾ.ಮಹೇಶ ಪಾಟೀಲ ಹೇಳಿದರು.

ತಾಲ್ಲೂಕಿನ ಮಂಠಾಳದಲ್ಲಿ ಗುರುಲಿಂಗೇಶ್ವರ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಯುವಕ ಸಂಘ, ಅಕ್ಕಮಹಾದೇವಿ ಮಹಿಳಾ ಸಂಘ ಹಾಗೂ ನೆಹರು ಯುವ ಕೇಂದ್ರದ ವತಿಯಿಂದ ಶನಿವಾರ ಆಯೋಜಿಸಿದ್ದ ಜಲ ಜಾಗೃತಿ ಕಾರ್ಯಾಗಾರ ಹಾಗೂ ಜಾನಪದ ಕಲಾ ಮೇಳಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಭೂಮಿ ಶೇ 97ರಷ್ಟು ನೀರಿನಿಂದ ಆವೃತ್ತವಾಗಿದೆ. ಉಳಿದ ಶೇ 3ರಷ್ಟು ಜಲದ ಪೈಕಿ ಕೆಲವು ಪ್ರಮಾಣದಷ್ಟು ಮಾತ್ರ ಸಿಹಿ ನೀರಿದೆ. ಹೀಗಾಗಿ, ನೀರನ್ನು ಮಿತವಾಗಿ ಬಳಸಬೇಕು. ನೈಸರ್ಗಿಕ ಸಂಪನ್ಮೂಲಗಳ ದುರ್ಬಳಕೆ ತಡೆಯುವುದು ಪ್ರತಿಯೊಬ್ಬರ ಕರ್ತವ್ಯ ಎಂದರು.



ಬಸವಕಲ್ಯಾಣದ ಮಂಠಾಳದಲ್ಲಿ ಶನಿವಾರ ನಡೆದ ಜಲಜಾಗೃತಿ ಹಾಗೂ ಜಾನಪದ ಕಲಾ ಮೇಳ ಕಾರ್ಯಕ್ರಮದಲ್ಲಿ ಡಾ.ಮಹೇಶ ಪಾಟೀಲ ಮಾತನಾಡಿದರು

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಹನಿ ಹನಿಗೂಡಿದರೆ ಹಳ್ಳ, ತೆನೆ ತೆನೆಗೂಡಿದರೆ ರಾಶಿ ಎಂಬಂತೆ ನೀರಿನ ರಕ್ಷಣೆಗೆ ಮುಂದಾಗಬೇಕು. ಗ್ರಾಮೀಣ ಭಾಗದ ಕವಿ, ಕಲಾವಿದರನ್ನು ಪ್ರೋತ್ಸಾಹಿಸಿ ಜಾನಪದ ಕಲೆ ಉಳಿಸಬೇಕು' ಎಂದರು.

ಸಾಹಿತಿ ನಾಗೇಂದ್ರ ಬಿರಾದಾರ ಮಾತನಾಡಿ, ನೀರು ಸಂಗ್ರಹಕ್ಕೆ ಎಲ್ಲರೂ ಪ್ರಯತ್ನಿಸಬೇಕು ಎಂದರು.

ಬಂಡೆಪ್ಪ ಮಾಳಿ ಮಾತನಾಡಿ, 'ಯುವಕರು ಜಲಜಾಗೃತಿ ಮತ್ತು ರಚನಾತ್ಮಕ ಕಾರ್ಯಗಳಲ್ಲಿ ಪಾಲ್ಗೊಳ್ಳಬೇಕು' ಎಂದು ಸಲಹೆ ನೀಡಿದರು. ನಾಗರಾಜ ಚಿತ್ತಕೋಟೆ ಮಾತನಾಡಿದರು.

ಮುಖಂಡ ಪುಷ್ಪರಾಜ ಹಾರಕೂಡೆ, ಗ್ರಾಮ ಪಂಚಾಯಿತಿ ಅಧ್ಯಕ್ಷ ದತ್ತು ಚಿಟ್ಟಂಪಲ್ಲೆ, ಬಸವರಾಜ ಚಿಚಕೋಟೆ, ವಿಶ್ವನಾಥ ಹುಗ್ಗೆಪಾಟೀಲ, ಮಲ್ಲಿಕಾರ್ಜುನ ಸಂಗನಬಟ್ಟೆ, ಪತ್ರಕರ್ತ ಉದಯಕುಮಾರ ಮುಳೆ, ಮಹಾದೇವಿ ಶೆಟಗಾರ, ಮಲ್ಲಯ್ಯಸ್ವಾಮಿ, ರಾಜಪ್ಪ ಹಾರಕೂಡೆ, ಬಸವರಾಜ ಮಧುರಗೆ, ಬಂಡೆಪ್ಪ ಶಾಯಪ್ಪ, ಸಂತೋಷ ಪಾರಾ, ಲಲಿತಾಬಾಯಿ, ಭಾರತಬಾಯಿ ಮಡಕೆ, ಭಾಗಮ್ಮ ಇದ್ದರು. ಜಾನಪದ ಕಲಾವಿದರಿಗೆ ಪ್ರಮಾಣಪತ್ರ ನೀಡಲಾಯಿತು.

ಪ್ರಜಾವಾಣಿ ಭಾನುವಾರ • ಫೆಬ್ರುವರಿ 13, 2022

Scanned with OKEN Scanner



ಬಸವಕಲ್ಯಾಣದಲ್ಲಿ ಈಚೆಗೆ ನಡೆದ ಸದ್ಭಾವ ಚಿಂತನಗೋಷ್ಠಿಯಲ್ಲಿ ಡಾ.ಬಸವರಾಜಸ್ವಾಮಿ ತ್ರಿಪುರಾಂತ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಚಂದ್ರಕಾಂತಸ್ವಾಮಿ ನಾರಾಯಣಪುರ ಇದ್ದರು

ಪ್ರಜಾವಾಣಿ ಶುಕ್ರವಾರ • ಫೆಬ್ರುವರಿ 18, 2022

ಸ್ವಧರ್ಮ ನಿಷ್ಠೆ, ಪರಧರ್ಮ ಸಹಿಷ್ಣುತೆ ಅಗತ್ಯ

ಬಸವಕಲ್ಯಾಣದಲ್ಲಿ ಸದ್ಭಾವ ಚಿಂತನಗೋಷ್ಠಿ; ಡಾ.ಬಸವರಾಜಸ್ವಾಮಿ ತ್ರಿಪುರಾಂತ ಅಭಿಮತ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಸ್ವಧರ್ಮ ನಿಷ್ಠೆ ಮತ್ತು ಪರಧರ್ಮ ಸಹಿಷ್ಣುತೆಯ ಭಾವ ಬೆಳೆಸಿಕೊಂಡು ಸದ್ಭಾವದಿಂದ ಇದ್ದರೆ ಸಮಾಜ ಮತ್ತು ದೇಶದ ಪ್ರಗತಿ ಸಾಧ್ಯ' ಎಂದು ಪತಂಜಲಿ ಯೋಗ ಸಮಿತಿ ಅಧ್ಯಕ್ಷ ಡಾ.ಬಸವರಾಜಸ್ವಾಮಿ ತ್ರಿಪುರಾಂತ ಹೇಳಿದರು.

ನಗರದ ರಂಜಾರೆ ಓಣಿ ನಿವಾಸಿ ಶರಣಯ್ಯಸ್ವಾಮಿ ನಿವಾಸದಲ್ಲಿ ತ್ರಿಪುರಾಂತ ಗವಿಮಠದಿಂದ ಈಚೆಗೆ ನಡೆದ ಸದ್ಭಾವ ಚಿಂತನಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಧರ್ಮದ ಸರಿಯಾದ ಪಾಲನೆ ಆಗುತ್ತಿಲ್ಲ. ಪ್ರೀತಿ ಮತ್ತು ಸ್ನೇಹ ಮರೆ ಮಾಚಿದೆ. ಸಮಾಜದ ಒಳಿತಿನ ವಿಚಾರ ಇಲ್ಲದಂತಾಗಿದೆ. ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳದೆ ಸಂಸ್ಕೃತಿ ಮತ್ತು ಸಂಸ್ಕಾರವನ್ನು ಮರೆಯುತ್ತಿದ್ದೇವೆ. ಹೀಗಾಗಿ, ತಂದೆ ತಾಯಿ ಬಗ್ಗೆ ಕಳಕಳಿ ಮತ್ತು ಗೌರವ ಇಲ್ಲದೆ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿವೆ ಎಂದರು.

ನೇತೃತ್ವ ವಹಿಸಿದ್ದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಮನಸ್ಸುಗಳು ಸಂಕುಚಿತಗೊಳ್ಳುತ್ತಿದ್ದು, ಸ್ವಾರ್ಥ ಸಾಧನೆ ಮುಖ್ಯವಾಗುತ್ತಿದೆ. ಕಲುಷಿತ ಮನಸ್ಸುಗಳನ್ನು ಶುದ್ಧಗೊಳಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದರು.

ನಗರಸಭೆ ಸದಸ್ಯ ಇಂದ್ರಸೇನ ಬಿರಾದಾರ ಮಾತನಾಡಿ, 'ಸಮಾಜ ಸುಧಾರಣೆಗಾಗಿ ನಾಡಿನ ಮಠ, ಪೀಠ ಗಳು ಪ್ರಯತ್ನಿಸುತ್ತಿರುವುದು ಶ್ಲಾಘನೀಯ ಕಾರ್ಯ. ಎಲ್ಲರೂ ಈ ಕಾರ್ಯಕ್ಕೆ ಕೈ ಜೋಡಿಸಬೇಕು' ಎಂದು ಕೋರಿದರು.

ಕಸಾಪ ಮಾಜಿ ಅಧ್ಯಕ್ಷ ಚಂದ್ರಕಾಂತಸ್ವಾಮಿ ನಾರಾಯಣಪುರ, ಮಧ್ವೀರಶೈವ ಸದ್ಭೋಧನಾ ಸಂಸ್ಥೆಯ ಅಧ್ಯಕ್ಷ ಬಸವಂತಪ್ಪ ಲವಾರೆ, ಮಾಜಿ ಅಧ್ಯಕ್ಷ ವೀರಣ್ಣ ಶೀಲವಂತ, ಪ್ರೊ. ರುದ್ರೇಶ್ವರ ಗೋರಟಾ, ಡಾ.ಚಿತ್ರಶೇಖರ ಚಿರಳ್ಳಿ, ಮಲ್ಲಯ್ಯ ಹಿರೇಮಠ, ಶಿವರಾಜ ಕಲ್ಲೂರ, ರೇವಣಸಿದ್ದಯ್ಯ ವಸ್ತ್ರದ್, ವಿಶ್ವನಾಥಪ್ಪ ದಳಪತಿ, ರಮೇಶ ರಾಜೋಳೆ, ಅನಿತಾಸ್ವಾಮಿ, ಸುಶೀಲಾಬಾಯಿ ಹೂಗಾರ ಇದ್ದರು.

UDAYAKALA
Friday, February 18, 2022

ಮಕ್ಕಳಿಗೆ ಧರ್ಮ ಸಂಸ್ಕಾರದಲ್ಲಿ ನಡೆಯುವಂತೆ ಪ್ರೇರಣೆ ನೀಡಿ

ಬಸವಕಲ್ಯಾಣ: ಈ ಸಾಮಾಜಿಕ ಬದುಕಿನಲ್ಲಿ ಸ್ವಾರ್ಥ ಸಾಧನೆಯಿಂದ ಜನರ ಮನಸ್ಸುಗಳು ಸಂಕುಚಿತವಾಗುತ್ತಿವೆ. ಹೀಗಾಗಿ ಜನರ ಮನೆಗೆ ಬಂದು ಸದ್ಭಾವ ಚಿಂತನೆಯ ಮೂಲಕ ಸಂಕುಚಿತ ಮನಸ್ಸುಗಳನ್ನು ಪರಿಶುದ್ಧಗೊಳಿಸಿ, ವಿಶಾಲ ಮನಸ್ಸುಗಳನ್ನಾಗಿ ಪರಿವರ್ತಿಸುವುದೇ ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ ಎಂದು ಗವಿಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು. ನಗರದ ನಾರಾಯಣಪುರ ರಸ್ತೆಯ ರಂಜೇರೆ ಕಾಲೋನಿಯ ಶರಣಯ್ಯ ಸ್ವಾಮಿ ಅವರ ಮನೆಯಲ್ಲಿ ಹಮ್ಮಿಕೊಂಡ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆಯ ಕಾರ್ಯಕ್ರಮದಲ್ಲಿ ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು.

ಬಹಳ ಜನ ಇಂದು ಮನೆ ದೇವರು, ಮನೆ ಗುರುಗಳನ್ನು ಮರೆಯುವಂತ್ತಾಗಿದೆ, ಇದು ಧರ್ಮವನ್ನು ಮರೆತಂತೆ. ಅಲ್ಲದೆ ಪಾಲಕರು ತಮ್ಮ ಮಕ್ಕಳಿಗೆ ಗುರು, ದೇವರು, ಧರ್ಮದಲ್ಲಿ ಭಕ್ತಿ ಮೂಡಿಸಿ, ಗುರುವಿನಿಂದ ಇಷ್ಟಲಿಂಗ ದೀಕ್ಷೆ ಕೊಡಿಸಿ, ಹಸ್ತ ಮಸ್ತಕ ಸಂಯೋಗ ಮೂಲಕ ದೇವರ ಕೃಪೆ ಪಡೆಯುವಂತೆ ಸಂಸ್ಕಾರ ನೀಡುವಂತ್ತಾಗಬೇಕು ಇಲ್ಲವಾದರೆ ಮಕ್ಕಳು ಸಮಾಜದಲ್ಲಿ ದಾರಿ ತಪ್ಪಬಹುದು ಆದ್ದರಿಂದ ಮಕ್ಕಳನ್ನು ಧರ್ಮ ಮಾರ್ಗದಲ್ಲಿ ನಡೆಯುವಂತ್ತೆ ಪೋಷಕರು ಪ್ರೇರಣೆ ನೀಡಬೇಕು ಎಂದು ಸಲಹೆ ನೀಡಿದರು.

ನಂತರ ಡಾ. ಬಸವರಾಜ ಸ್ವಾಮಿ ಮಾತನಾಡಿ, ಗುರುವಿನ ಕೃಪೆಯಿಂದ ಅಜ್ಞಾನ ನಾಶವಾಗಿ ಸುಜ್ಞಾನ ದೊರೆಯುತ್ತದೆ. ಸ್ವಧರ್ಮದಲ್ಲಿನಿಷ್ಟೆ ಪರಧರ್ಮದಲ್ಲಿ ಸಹಿಷ್ಣುತೆ ಹೊಂದಬೇಕು. ಡಾ. ಅಭಿನವ ಘನಲಿಂಗ ಶ್ರೀಗಳು ಸದ್ಭಾವ ಚಿಂತನ ಕಾರ್ಯಕ್ರಮದಿಂದ ಭಕ್ತರಿಗೆ ಉತ್ತಮ ಸಂಸ್ಕಾರ ನೀಡುತ್ತಿದ್ದಾರೆ ಎಲ್ಲರು ಸದುಪಯೋಗ ಪಡೆಯಬೇಕು ಎಂದರು. ನಗರ ಸಭೆಯ ನಾಮ ನಿರ್ದೇಶಿತ ಸದಸ್ಯ ಇಂದ್ರಸೇನ ಬಿರಾದಾರ ಮಾತನಾಡಿದರು. ಶರಣಯ್ಯ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕಸಾಪ ಮಾಜಿ ಅಧ್ಯಕ್ಷ ಚಂದ್ರಕಾಂತ ಸ್ವಾಮಿ ನಾರಾಯಣಪುರ ವೇದಿಕೆಯಲ್ಲಿದ್ದರು. ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕಾ ಅಧ್ಯಕ್ಷ ಬಸವಂತಪ್ಪ ಲವಾರೆ, ವೀರಣ್ಣ ಶೀಲವಂತ, ಮಲ್ಲಯ್ಯ ಹಿರೇಮಠ, ಶಿವರಾಜ ಕಲ್ಲೂರ, ಅನಿತಾ ಶರಣಯ್ಯ ಸ್ವಾಮಿ, ಸುಶೀಲಬಾಯಿ ಹೂಗಾರ ಪಾಲ್ಗೊಂಡಿದ್ದರು.



Scanned with OKEN Scanner

ನಂ.1 ವಿಜಯವಾಣಿ
VIJAYAVANI » KALABURAGI
ಶನಿವಾರ 19 ಫೆಬ್ರವರಿ 2022
19 FEBRUARY 2022
ಬೀದರ್ ಲೋಕಲ್ ಎಕ್ಸ್‌ಪ್ರೆಸ್

ಡಾ.ಅಭಿನವ ಘನಲಿಂಗ ರುದ್ರಮುನಿ ಶ್ರೀಗಳ ನುಡಿ | ಮನೆ ಮನಗಳಲ್ಲಿ ಮಾಸಿಕ ಹುಣ್ಣಿಮೆ ಕಾರ್ಯಕ್ರಮ

ಮನಸ್ಸು ಪರಿಶುದ್ಧಗೊಳಿಸಲು ಸದ್ಭಾವ ಚಿಂತನ ಅವಶ್ಯಕ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಂಕುಚಿತಗೊಳ್ಳುತ್ತಿರುವ ಮನಸ್ಸುಗಳನ್ನು ವಿಶಾಲ ಹಾಗೂ ಪರಿಶುದ್ಧಗೊಳಿಸಲು ಸದ್ಭಾವ ಚಿಂತನೆ ಅವಶ್ಯಕ ಎಂದು ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ರಂಜೇರೆ ಕಾಲನಿಯ ಶರಣಯ್ಯ ಸ್ವಾಮಿ ಅವರ ನಿವಾಸದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಹುಣ್ಣಿಮೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಬಹಳಷ್ಟು ಜನ ಮನೆ ದೇವರು, ಮನೆ ಗುರುಗಳನ್ನು ಮರೆಯುತ್ತಿದ್ದಾರೆ. ಇದು ಧರ್ಮವನ್ನು ಮರೆತಂತೆ ಎಂದು ಅಭಿಪ್ರಾಯಪಟ್ಟರು.

ಮಕ್ಕಳಿಗೆ ಉತ್ತಮ ಸಂಸ್ಕಾರ ಕೊಡುವಲ್ಲಿ ಪಾಲಕರು ಕಾಳಜಿ ವಹಿಸಬೇಕು. ಗುರು, ದೇವರು, ಧರ್ಮದಲ್ಲಿ ಭಕ್ತಿ ಮೂಡಿಸಿ, ಗುರುವಿನಿಂದ ಇಷ್ಟಲಿಂಗ ದೀಕ್ಷೆ ಕೊಡಿಸಿ ಹಸ್ತ ಮಸ್ತಕ ಸಂಯೋಗ ಮೂಲಕ ದೇವರ ಕೃಪೆ ಪಡೆಯುವಂತೆ ಸಂಸ್ಕಾರ ಕೊಡಿಸಬೇಕು ಎಂದು ಸಲಹೆ ನೀಡಿದರು,

ಡಾ.ಬಸವರಾಜ ಸ್ವಾಮಿ ಮಾತನಾಡಿ, ಗುರುವಿನ ಕೃಪೆಯಿಂದ ಅಜ್ಞಾನ ನಾಶವಾಗಿ ಸುಜ್ಞಾನ ದೊರೆಯುತ್ತದೆ. ಸ್ವ ಧರ್ಮದಲ್ಲಿ ನಿಷ್ಠೆ, ಪರಧರ್ಮದಲ್ಲಿ ಸಹಿಷ್ಣತೆ ಹೊಂದಬೇಕು ಎಂದರು. ನಗರಸಭೆ ನಾಮನಿರ್ದೇಶಿತ ಸದಸ್ಯ ಇಂದ್ರಸೇನ ಬಿರಾದಾರ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಶರಣಯ್ಯ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕಸಾಪ ಮಾಜಿ ತಾಲೂಕು ಅಧ್ಯಕ್ಷ ಚಂದ್ರಕಾಂತ ಸ್ವಾಮಿ, ಶ್ರೀಮದ್ವೀರಶೈವ ಸದ್ಯೋಧನ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ವೀರಣ್ಣ ಶೀಲವಂತ, ಮಲ್ಲಯ್ಯ ಹಿರೇಮಠ, ಶಿವರಾಜ ಕಲ್ಲೂರ, ರಮೇಶ ಬಿರಾದಾರ, ರೇವಣಸಿದ್ದಯ್ಯ ವಸ್ತ್ರದ, ಶಿವರುದ್ರಪ್ಪ ಖೇಳಗಿ, ವಿಶ್ವನಾಥಪ್ಪ ದಳಪತಿ, ರಮೇಶ ರಾಜೋಳೆ, ಡಾ.ಚಿತ್ರಶೇಖರ ಚಿರಳ್ಳಿ, ಪ್ರೊ.ರುದ್ರೇಶ್ವರ ಗೋರ್ಟಾ ಇತರರಿದ್ದರು.



ಬಸವಕಲ್ಯಾಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸದ್ಭಾವ ಚಿಂತನ ಕಾರ್ಯಕ್ರಮದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಡಾ.ಬಸವರಾಜ ಸ್ವಾಮಿ, ಇಂದ್ರಸೇನ ಬಿರಾದಾರ, ಶರಣಯ್ಯ ಸ್ವಾಮಿ, ಚಂದ್ರಕಾಂತ ಸ್ವಾಮಿ ಇದ್ದರು.

kannada matrimony
ವಧು ಅಥವಾ ವರರನ್ನು ಹುಡುಕಲು ಸಹಾಯ ಬೇಕೆ?
ನಮಗೆ ಕರೆ ಮಾಡಿ 70928 77888, ನೋಂದಣಿ ಉಚಿತ!
ಕನ್ನಡಿಗರ ನಂ.1 ಆಯ್ಕೆ, 21 ವರ್ಷಗಳಿಂದ

2
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 15 ಮಾರ್ಚ್ 2022
15 MARCH 2022
ಬೀದರ್ ಲೋಕಲ್ ಎಕ್ಸ್‌ಪ್ರೆಸ್



ಕವನ ಸಂಕಲನ ಬಿಡುಗಡೆ

ಬಸವಕಲ್ಯಾಣದಲ್ಲಿ ಶನಿವಾರ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕದ ಕಾರ್ಯಚಟುವಟಿಕೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಾಹಿತಿ ವೀರಶೆಟ್ಟಿ ಪಾಟೀಲ್ ಬರೆದ ಸಾತ್ವಿಕ್ ಸಾರ್ಥಕ್ ಹನಿಗವನ ಸಂಕಲನ ಮತ್ತು ನಾಗೇಂದ್ರ ಬಿರಾದಾರ ರಚಿತ ಜೀವನದ ಸಂಜೆಯಲ್ಲಿ ಕವನ ಸಂಕಲನವನ್ನು ತಹಸೀಲ್ದಾರ್ ಸಾವಿತ್ರಿ ಸಲಗರ ಬಿಡುಗಡೆಗೊಳಿಸಿದರು. ಶಾಸಕ ಶರಣು ಸಲಗರ, ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ, ಸುರೇಶ ಚನ್ನಶೆಟ್ಟಿ, ಶಾಂತಲಿಂಗ ಮಠಪತಿ, ಸಿ.ಜಿ. ಹಳ್ಳದ್, ಮಲ್ಲಿಕಾರ್ಜುನ ಮೇತ್ರೆ, ಜಗನ್ನಾಥ ಪತಂಗೆ, ರಮೇಶ ಉಮ್ಮಾಪುರೆ, ಯೋಗಿರಾಜ ಇದ್ದರು.

Scanned with OKEN Scanner

'ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯ ಮಾದರಿ'

ಸಂ.ಕ.ಸಮಾಚಾರ ಬಸವಕಲ್ಯಾಣ

ಗ್ರಾಮೀಣ ಭಾಗದ ಪ್ರಗತಿಗಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಾಡುತ್ತಿರುವ ಕೆಲಸ ದೇಶದಲ್ಲಿಯೇ ಮಾದರಿಯಾಗಿದೆ ಎಂದು ಶಾಸಕ ಶರಣು ಸಲಗರ ತಿಳಿಸಿದರು.

ನಗರದ ಎಸ್.ಎಸ್.ಕೆ ಬಸವೇಶ್ವರ ಕಾಲೇಜಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 22 ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಪರಿಕರಗಳ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ವೀರೇಂದ್ರ ಹೆಗಡೆ ಅವರು ದೇಶದ ಅತ್ಯುನ್ನತ ಹುದ್ದೆ ಅಲಂಕರಿಸುವ ಅವಕಾಶ ಬಂದರೂ ತಿರಸ್ಕರಿಸಿದ ಮಹಾನ್ ಪುರುಷರು ಎಂದರು. ಕಲಬುರಗಿ ವಿಭಾಗದ ಪ್ರಾದೇಶಿಕ ನಿರ್ದೇಶಕ ಶಿವರಾಯ ಪ್ರಭು ಮಾತನಾಡಿ ತಾಲ್ಲೂಕಿನಲ್ಲಿ 150 ವಿದ್ಯಾರ್ಥಿಗಳಿಗೆ ಸುಜ್ಞಾನ ನಿಧಿ ಶಿಷ್ಯ ವೇತನ, 5 ಶಾಲೆಗಳಿಗೆ ಉಚಿತ ಟ್ಯೂಷನ್ ಕ್ಲಾಸ್, 1 ಹಿಂದುರುದ್ರ ಭೂಮಿ, 6 ದೇವಸ್ಥಾನಗಳ ಕಟ್ಟಡ ನಿರ್ಮಾಣ, 20 ಶಾಲೆಗಳಿಗೆ ಬೆಂಚು ಡೆಸ್ಕ್, 83 ನಿರ್ಗತಿಕರಿಗೆ ಮಾಸಾಶನ ಸೇರಿ ಇತರ ಸೌಲಭ್ಯ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದರು.



ಬಸವಕಲ್ಯಾಣದ ಎಸ್.ಎಸ್.ಕೆ ಬಸವೇಶ್ವರ ಕಾಲೇಜಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 22 ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಪರಿಕರಗಳ ವಿತರಣಾ ಕಾರ್ಯಕ್ರಮಕ್ಕೆ ಶಾಸಕ ಶರಣು ಸಲಗರ್ ಚಾಲನೆ ನೀಡಿದರು.

ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಯೋಜನೆಯ ಜಿಲ್ಲಾ ನಿರ್ದೇಶಕ ಉಮರಬ್ಬ, ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ಬಂಡುರಾವ ಕುಲಕರ್ಣಿ, ಹಿರಿಯ ಪತ್ರಕರ್ತ ಗುರುನಾಥ ಗಡ್ಡೆ, ಯೋಜನಾಧಿಕಾರಿ ಸೋಮಲಿಂಗ ಕೆ, ಬೀದರ್, ಕಲಬುರಗಿ, ಯಾದಗಿರಿ ಹಾಲೂ ಉತ್ಪಾದಕರ ಸಹಕಾರಿ ಒಕ್ಕೂಟದ ಸಹಾಯಕ ವ್ಯವಸ್ಥಾಪಕ ಶ್ರೀನಿವಾಸರಾವ್, ಹಾಲು ಉತ್ಪಾದಕರ ಸಹಕಾರಿ ಸಂಘದ ಮೇಲ್ವಿಚಾರಕ ಪ್ರವೀಣ, ಕೃಷಿ ಮೇಲ್ವಿಚಾರಕ ಮಹಾಂತೇಶ ಎಂ.ಡಿ, ಮೇಲ್ವಿಚಾರಕ ಮಂಜುನಾಥ, ಕಲ್ಯಾಣರಾವ ಮದರಗಾಂವಕರ್, ಕೃಷ್ಣ, ಚಂದ್ರಕಲಾ ಸೇರಿದಂತೆ ಇತರರಿದ್ದರು.

ಸಂಯುಕ್ತ ಕರ್ನಾಟಕ KALABURAGI

03 ಮಾರ್ಚ್ 2022
ಗುರುವಾರ
ಕಲಬುರಗಿ



ಬಸವಕಲ್ಯಾಣದ ಗವಿಮಠದಲ್ಲಿ ನಡೆದ ಶಿವಾನುಭವ ಚಿಂತನಗೋಷ್ಠಿಯಲ್ಲಿ ರಾಜಕುಮಾರ ಶಿರಗಾಪುರ ಅವರನ್ನು ಸನ್ಮಾನಿಸಲಾಯಿತು

'ಶಿವಾನುಭವ ಚಿಂತನೆಯಿಂದ ನೆಮ್ಮದಿ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಶಿವಾನುಭವ ಚಿಂತನೆಯಿಂದ ನೆಮ್ಮದಿಯ ಬದುಕು ಕಂಡುಕೊಳ್ಳಬಹುದು ಎಂದು ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ರಾಜಕುಮಾರ ಶಿರಗಾಪುರ ಹೇಳಿದ್ದಾರೆ.

ನಗರದ ತ್ರಿಪುರಾಂತ ಗವಿಮಠದಲ್ಲಿ ಈಚೆಗೆ ಆಯೋಜಿಸಿದ್ದ ಶಿವಾನುಭವ ಚಿಂತನಗೋಷ್ಠಿಯಲ್ಲಿ ಅವರು ಮಾತನಾಡಿದರು.

ಧರ್ಮ ಮಾರ್ಗದಲ್ಲಿ ನಡೆಯಬೇಕು. ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಶರಣರ, ಸತ್ಪುರುಷರ ಸಂದೇಶದ ಪಾಲನೆ ಮಾಡಿದರೆ ಬದುಕು ಹಸನುಗೊಳ್ಳುತ್ತದೆ ಎಂದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಆಧ್ಯಾತ್ಮಿಕ ಜ್ಞಾನದಿಂದ ಮನಸ್ಸಿನ ಕೊಳೆಯನ್ನು ತೊಳೆದುಕೊಳ್ಳಬಹುದು. ಅಲೌಕಿಕ ಜ್ಞಾನ ಗಳಿಸಬಹುದು ಎಂದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿದ್ದಕ್ಕೆ ರಾಜಕುಮಾರ ಶಿರಗಾಪುರ ಅವರನ್ನು ಹಾಗೂ ಇತರರನ್ನು ಸನ್ಮಾನಿಸಲಾಯಿತು. ನಗರಸಭೆ ಸದಸ್ಯರಾದ ದೀಪಕ ಗಾಯಕವಾಡ, ಅರವಿಂದ ಮುತ್ತೆ, ಮಹೇಶ ಮಾಲಗಾರ, ಲೋಕೇಶ ಮುನ್ನಾಳೆ, ಶಿವಕುಮಾರ ಮುನ್ನಾಳೆ ಉಪಸ್ಥಿತರಿದ್ದರು.

ಪ್ರಜಾವಾಣಿ ಸೋಮವಾರ • ಮಾರ್ಚ್ 7, 2022

Scanned with OKEN Scanner

ಶಾಸಕ ಶರಣು ಸಲಗರ ಅಭಿಮತ | ಕಲ್ಯಾಣದಲ್ಲಿ ಕಸಾಪ ಕಾರ್ಯಚಟುವಟಿಕೆಗೆ ಚಾಲನೆ

ಸಾಹಿತ್ಯಕ್ಕಿದೆ ಸಮಾಜ ತಿದ್ದುವ ಶಕ್ತಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಬದುಕು ಬದಲಾಯಿಸುವ ಜತೆಗೆ ಸಮಾಜದಲ್ಲಿಯ ಓರೆ-ಕೋರೆಗಳನ್ನು ತಿದ್ದುವ ಮೂಲಕ ಸಮಾಜವನ್ನು ಒಳ್ಳೆಯ ದಾರಿಯಲ್ಲಿ ಮುನ್ನಡೆಸುವ ಶಕ್ತಿ ಸಾಹಿತ್ಯ ಕ್ಷೇತ್ರಕ್ಕೆ ಇದೆ ಎಂದು ಶಾಸಕ ಶರಣು ಸಲಗರ ಹೇಳಿದರು.

ನಗರದ ಪೂಜ್ಯ ದೊಡ್ಡಪ್ಪ ಅಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶನಿವಾರ ಆಯೋಜಿಸಿದ್ದ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಕಾರ್ಯ ಚಟುವಟಿಕೆಗೆ ಚಾಲನೆ, ಅಧಿಕಾರ ಹಸ್ತಾಂತರ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವಕ್ಕೆ ಕನ್ನಡದಲ್ಲಿ ವಚನ ಸಾಹಿತ್ಯ ನೀಡಿದ ಕಲ್ಯಾಣಕ್ಕೆ ವಿಶಿಷ್ಟ ಸ್ಥಾನವಿದೆ. ಇಲ್ಲಿ ಕನ್ನಡ ಸಾಹಿತ್ಯ ಹೆಚ್ಚಿನ ಮಟ್ಟದಲ್ಲಿ ಬೆಳೆಯಬೇಕು ಎಂದರು.

ಸಾಹಿತಿ ವೀರಶೆಟ್ಟಿ ಪಾಟೀಲ್ ಅವರು ಬರೆದ ಸಾತ್ವಿಕ್ ಸಾರ್ಥಕ್ ಹನಿಗವನ ಸಂಕಲನ ಹಾಗೂ ನಾಗೇಂದ್ರ ಬಿರಾದಾರ ಅವರು ಬರೆದ ಜೀವನದ ಸಂಜೆಯಲಿ ಕವನ ಸಂಕಲನವನ್ನು ಬಿಡುಗಡೆಗೊಳಿಸಿದ ತಹಸೀಲ್ದಾರ್ ಸಾವಿತ್ರಿ ಸಲಗರ ಮಾತನಾಡಿ, ಕನ್ನಡದ ಕಾರ್ಯಚಟುವಟಿಕೆಗಳಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ತಡೋಳಾ ಶ್ರೀ ರಾಜೇಶ್ವರ ಶಿವಾಚಾರ್ಯರು, ನೇತೃತ್ವ ವಹಿಸಿದ್ದ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಬಸವ ಮಹಾಮನೆಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾಧ್ಯಕ್ಷ ಸುರೇಶ ಚನ್ನಶೆಟ್ಟಿ, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ, ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ.ರುದ್ರಮಣಿ ಮಠಪತಿ ಮಾತನಾಡಿದರು. ಸಾಹಿತಿ ರೇವಣಸಿದ್ದ ದೊರೆ ಕವನ ಸಂಕಲನಗಳ ವಿಮರ್ಶಾತ್ಮಕ ಉಪನ್ಯಾಸ ನೀಡಿದರು.

ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ ಮೇತ್ರೆ, ಪ್ರೌಢ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಯೋಗಿರಾಜ ಕೆ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷೆ ಶ್ರೀದೇವಿ ಚಿರಡೆ, ಪ್ರಾಚಾರ್ಯ ರಾಚಯ್ಯ ಮಠಪತಿ, ಸಾಹಿತಿಗಳಾದ ವೀರಶೆಟ್ಟಿ ಎಂ.ಪಾಟೀಲ್, ನಾಗೇಂದ್ರ ಬಿರಾದಾರ, ಪರಿಷತ್ ಜಿಲ್ಲಾ ಗೌರವ ಕಾರ್ಯದರ್ಶಿ ಟಿ.ಎಂ.ಮಚ್ಚೆ, ವಿದ್ಯಾವತಿ ಬಲ್ಲೂರ, ರಮೇಶ ಬಿರಾದಾರ ಇದ್ದರು.

ಸೂರ್ಯಕಾಂತ ಪಾಟೀಲ್ ಸ್ವಾಗತಿಸಿದರು. ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ ಪ್ರಾಸ್ತಾವಿಕ ಮಾತನಾಡಿದರು. ರಮೇಶ ಉಮ್ಮಾಪುರೆ ವಂದಿಸಿದರು. ಬಸವೇಶ್ವರಿ ದೇಗಲೂರೆ ನಿರೂಪಣೆ ಮಾಡಿದರು. ಬೆಟಬಾಲಕುಂದಾ ಸಮೀಪ ಕನ್ನಡ ಭವನಕ್ಕಾಗಿ 20 ಗುಂಟೆ ಜಮೀನು ಮಂಜೂರಾತಿ ಪತ್ರವನ್ನು ಹಸ್ತಾಂತರಿಸಲಾಯಿತು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಶನಿವಾರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಚಟುವಟಿಕೆಗೆ ಚಾಲನೆ, ಅಧಿಕಾರ ಹಸ್ತಾಂತರ ಹಾಗೂ ಕವನ ಸಂಕಲನಗಳ ಬಿಡುಗಡೆ ಕಾರ್ಯಕ್ರಮವನ್ನು ಶಾಸಕ ಶರಣು ಸಲಗರ ಉದ್ಘಾಟಿಸಿದರು. ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ, ಸಾವಿತ್ರಿ ಸಲಗರ, ಸುರೇಶ ಚನ್ನಶೆಟ್ಟಿ, ಶಾಂತಲಿಂಗ ಮಠಪತಿ ಇತರರಿದ್ದರು.

ಕನ್ನಡದಿಂದ ಪರಿಪೂರ್ಣ ಜ್ಞಾನ

ಸಾಹಿತ್ಯ ಭಾವ ಪ್ರಚೋದನೆಯಾಗಿದೆ. ಭಾವನೆ ಆರಳಿದಾಗ ಮನಸ್ಸಿನಲ್ಲಿ ಆನಂತ ವಿಚಾರಗಳು ಸೃಷ್ಟಿಯಾಗುತ್ತವೆ. ವಾಕ್ಯವು ರಸವತ್ತಾಗಿರುವುದೇ ಕಾವ್ಯ. ಸಾಮಾಜಿಕ ಹಿತ ಸಾರುವ ಶಬ್ದ ವೈಖರಿಯೇ ಇದರ ಮೂಲ ಆಶಯ ಎಂದು ತಡೋಳಾ ಶ್ರೀ ರಾಜೇಶ್ವರ ಶಿವಾಚಾರ್ಯರು ವಿಶ್ಲೇಷಿಸಿದರು. ಮಾತೃ ಭಾಷೆಯಿಂದಲೇ ಪರಿಪೂರ್ಣ ಜ್ಞಾನ ಪಡೆಯಲು ಸಾಧ್ಯ. ಆಂಗ್ಲ ಮಾಧ್ಯಮ ಶಾಲೆಗಳು ಮಗುವಿನ ಬುದ್ಧಿ ವಿಕಾಸ ಕುಂಠಿತಗೊಳಿಸುತ್ತವೆ. ಜತೆಗೆ ಜ್ಞಾನ ಸಂಗ್ರಹ, ಭಾಷಾ ಪ್ರಭುತ್ವಕ್ಕೆ ತೊಡಕಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಸಾಹಿತ್ಯದ ಬಗ್ಗೆ ಇತ್ತೀಚಿನ ದಿನಗಳಲ್ಲಿ ಅಭಿರುಚಿ ಕಡಿಮೆಯಾಗುತ್ತಿದೆ. ಕನ್ನಡ ಸಾಹಿತ್ಯ ಬೆಳೆಸುವ ಕೆಲಸ ಎಲ್ಲರಿಂದಲೂ ನಡೆಯಬೇಕಿದೆ. ಸಾಹಿತ್ಯದ ಬಗ್ಗೆ ನನಗೂ ಆಸಕ್ತಿ ಇದೆ. ಕನ್ನಡ ಭವನಕ್ಕಾಗಿ ಈಗಾಗಲೇ ನಿವೇಶನ ಮಂಜೂರಾಗಿದೆ. ಭವನ ನಿರ್ಮಾಣ ಸೇರಿ ಪರಿಷತ್‌ಗೆ ಪ್ರತಿ ಹಂತದಲ್ಲಿಯೂ ಬೆನ್ನೆಲುಬಾಗಿ ನಿಂತು ಸಹಾಯ, ಸಹಕಾರ ನೀಡುತ್ತೇನೆ.

| ಶರಣು ಸಲಗರ ಶಾಸಕ

ನಗರದಲ್ಲಿ ಕನ್ನಡ ಭವನ ಮತ್ತು ಬಾಲಕುಂದಾದಲ್ಲಿ ಶ್ರೀ ಭುವನೇಶ್ವರಿ ಮಂದಿರ ನಿರ್ಮಿಸುವ ಯೋಜನೆ ಇದೆ. ಎಲ್ಲರ ವಿಶ್ವಾಸ ಮತ್ತು ಸಹಕಾರದೊಂದಿಗೆ ಕನ್ನಡ ಕಾರ್ಯಚಟುವಟಿಕೆ ನಡೆಸಲಾಗುವುದು. ಗಡಿ ಭಾಗದಲ್ಲಿ ಹೆಚ್ಚು ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕನ್ನಡದ ವಾತಾವರಣ ನಿರ್ಮಾಣಕ್ಕೆ ಪ್ರಯತ್ನಿಸಲಾಗುವುದು.

| ಶಾಂತಲಿಂಗ ಮಠಪತಿ ಕಸಾಪ ತಾಲೂಕು ಅಧ್ಯಕ್ಷ

ಒಳ್ಳೆ ಗುಣ ಬೆಳೆಸುವ ಎನ್ ಎಸ್ ಎಸ್

■ ವಿಕ ಸುದ್ದಿಲೋಕ ಬಸವಕಲ್ಯಾಣ

ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರದಲ್ಲಿ ಶಿಬಿರಾರ್ಥಿಗಳು ಪಾಲ್ಗೊಳ್ಳುವ ಮೂಲಕ ಒಳ್ಳೆಯ ಗುಣಗಳನ್ನು ಕಲಿಯಲು ಸಹಕಾರಿಯಾಗುತ್ತದೆ ಎಂದು ಇಲ್ಲಿಯ ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಶಿಬಿರದಲ್ಲಿ ಪಾಲ್ಗೊಳ್ಳುವುದರಿಂದ ವಿದ್ಯಾರ್ಥಿಗಳ ಜೀವನದಲ್ಲಿ ಶಿಸ್ತು, ಸಮಯ ಪ್ರಜ್ಞೆ, ನಾಯಕತ್ವದ ಗುಣ, ಮಾನವೀಯತೆ, ದೃಢ ನಿರ್ಧಾರ, ಧೈರ್ಯ ಬೆಳೆಯಲು ಸಾಧ್ಯ. ಒಳ್ಳೆಯ ಗುಣ ಗಳನ್ನು ಆಳವಡಿಸಿಕೊಂಡು ಜೀವ ನ ದಲ್ಲಿ ಸಾಧನೆ ಮಾಡಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಬಲಿರಾಮ ಹುಡೆ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆ ಶಿಬಿರದಿಂದ ಗ್ರಾಮೀಣ ಭಾಗದ ಸೊಗಸನ್ನು ಅರಿಯಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ರಾಷ್ಟ್ರಭಕ್ತಿ, ಸಹಬಾಳ್ವೆ, ಸಮ ನ್ವಯತೆ, ಗುರು ಹಿರಿಯರಿಗೆ ಗೌರವ ಸೇರಿ ಮುಂ ತಾದ ವಿಷಯಗಳನ್ನು ತಿಳಿದು ಕೊಳ್ಳಲು ಸಹಾಯವಾಗುತ್ತದೆ ಎಂದು ಹೇಳಿದರು.ಪರ್ತಾಪೂರ ಗ್ರಾಪಂ ಸದಸ್ಯೆ ಸೇವಂತಾ ಶ್ರೀನಿವಾಸ ಘಂಟೆ, ಪ್ರೊ.ದಶವಂತ ಮಾರುತಿ, ಪ್ರೊ.ಶೈಲಜಾ ಮಹಾದಪ್ಪಾ, ಪ್ರೊ.ಡಾ.ಮಲ್ಲಿಕಾರ್ಜುನ ಬಿರಾದರ, ಪ್ರೊ.ಸುನಂದಾ ತಾಯಪ್ಪಾ, ಪ್ರೊ.ಮೀನಾಕ್ಷಿ ಬಿರಾದರ, ದೀಪಕ ಕುಮಾರ ಗೌಡ, ಶರಣಬಸಪ್ಪಾ ಜನ್ನಾ ಬಸವರಾಜ ಬಿರಾದಾರ, ಮಂಗಲಾ ಇದ್ದರು.

ಡಾ.ಚಿತ್ರಶೇಖರ ಚಿರಳ್ಳಿ ನಿರೂಪಿಸಿದರು. ಎನ್‌ಎಸ್‌ಎಸ್ ಘಟಕದ ಅಧಿಕಾರಿ ಡಾ.ವೀರಶೆಟ್ಟಿ ಚಿಟಗುಪ್ಪಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಎನ್‌ಎಸ್‌ಎಸ್ ಘಟಕದ ಅಧಿಕಾರಿ ಪ್ರೊ.ಪುಷ್ಪಾಬಾಯಿ ಕೋರೆ ವಂದಿಸಿದರು. ಸುಜಾತಾ, ರೇಣುಕಾ, ಅಂಜಲಿ, ಲಕ್ಷ್ಮೀ ಸ್ವಾಗತಗೀತೆ ಹಾಡಿದರು. ಸಪ್ನಾ ಅಂಬಿಕಾ, ಪ್ರಿಯಾಂಜಲಿ ಎನ್‌ಎಸ್‌ಎಸ್ ಗೀತೆ ಹಾಡಿದರು.



ಬಸವಕಲ್ಯಾಣ ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು ಮಾತನಾಡಿದರು.

ನಮ್ಮ ಬೀದರ್ ಕಲಬುರಗಿ, ಶನಿವಾರ,19 ಮಾರ್ಚ್ 2022
ವಿಜಯ ಕರ್ನಾಟಕ

Scanned with OKEN Scanner

ಶಾಸಕ ಸಲಗರ ಭರವಸೆ | ವಿದ್ಯಾಚೇತನ ಸ್ಕೂಲ್ ಕಟ್ಟಡ ಉದ್ಘಾಟನೆ

ಕನ್ನಡ ಶಾಲೆಗಳ ಬೆಳವಣಿಗೆಗೆ ಸಹಕಾರ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಕನ್ನಡ ಮಾಧ್ಯಮ ಶಾಲೆಗಳ ಪ್ರಗತಿಗೆ ಅಗತ್ಯ ಸಹಾಯ ಸಹಕಾರ ನೀಡುವುದಾಗಿ ಶಾಸಕ ಶರಣು ಸಲಗರ ಭರವಸೆ ನೀಡಿದರು.

ನಗರದ ಕಲ್ಯಾಣ ಕರ್ನಾಟಕ ಶಿಕ್ಷಣ ಸಂಸ್ಥೆಯ ವಿದ್ಯಾಚೇತನ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ನೂತನ ಕಟ್ಟಡವನ್ನು ಭಾನುವಾರ ಉದ್ಘಾಟಿಸಿ ಮಾತನಾಡಿದ ಅವರು, ಎರಡು ವರ್ಷಗಳಿಂದ ಕೋವಿಡ್‌ನಿಂದಾಗಿ ಎದುರಾಗಿರುವ ಸಂಕಷ್ಟದ ಸಮಯದಲ್ಲಿ ಶಿಕ್ಷಣ ಸಂಸ್ಥೆ ನಡೆಸುವುದು, ಅದರಲ್ಲಿ ಕನ್ನಡ ಮಾಧ್ಯಮ ಶಾಲೆ ನಡೆಸುವುದು ಕಷ್ಟದ ಕೆಲಸ. ಸಂದಿಗ್ಧ ಸ್ಥಿತಿಯಲ್ಲಿ ನೂತನ ಕಟ್ಟ ನಿರ್ಮಿಸಿರುವುದು ಸಂತೋಷ ತಂದಿದೆ ಎಂದರು.

ನಿವೃತ್ತ ಟಿಎಚ್‌ಒ ಡಾ.ಜಿ.ಎಸ್. ಭುರಳೆ ಮಾತನಾಡಿ, ಮಾತೃಭಾಷೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕಲಿಸಿದಾಗ ಮಕ್ಕಳು ಭಾಷೆಯ ಪ್ರಭುತ್ವ, ವಿಷಯದ ಪರಿಪೂರ್ಣ ಜ್ಞಾನ ಪಡೆಯಲು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಸಾನ್ನಿಧ್ಯ ವಹಿಸಿದ್ದ ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಈ ಶಾಲೆಯಲ್ಲಿ ಶಿಕ್ಷಣ ಜತೆಗೆ ವಚನ ಸಾಹಿತ್ಯ, ಸಂಸ್ಕೃತಿಯನ್ನು ಮಕ್ಕಳಿಗೆ ತಿಳಿಸಿಕೊಡುವ ಮೂಲಕ ಉತ್ತಮ ಸಂಸ್ಕಾರ ಬೆಳೆಸುವಲ್ಲಿಯೂ ಕಾಳಜಿ ವಹಿಸಲಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಬಸವಲಿಂಗ ಸುಬೇದಾರ, ಉಪನ್ಯಾಸಕ ರೇವಣಸಿದ್ದಪ್ಪ ದೊರೆಗೊಳ ಮಾತನಾಡಿದರು. ನಗರಸಭೆ ಅಧ್ಯಕ್ಷೆ ಶಹಜಹಾನ್ ಬೇಗಂ, ಬಿಆರ್‌ಸಿ ಮಸ್ತಾನ್, ನಗರಸಭೆ ನಾಮನಿರ್ದೇಶಿತ ಸದಸ್ಯರಾದ ಸಿದ್ದು ಬಿರಾದಾರ, ರಾಮಚಂದ್ರ ಹುಡಗೆ, ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿ ಉಪಾಧ್ಯಕ್ಷ ಸಂಜೀವರೆಡ್ಡಿ ಯರಬಾಗ, ನಿರ್ದೇಶಕರಾದ ಸುಲೋಚನಾ, ರವೀಂದ್ರ ಭುರಳೆ, ಪಾರ್ವತಿ ಬಿರಾದಾರ, ಮೀನಾಕ್ಷಿ ಚೆನ್ನಕೋಟೆ, ರೇಖಾ ಕುಸುಮಕರ, ಪ್ರಮುಖರಾದ ಬಂಡೆಪ್ಪ ಮೇತ್ರೆ, ಕುತಬೊದ್ದೀನ್, ಭೀಮಾಶಂಕರ ಮಾಲಿಪಾಟೀಲ್ ಇದ್ದರು. ಸಂಸ್ಥೆ ಪ್ರಧಾನ ಕಾರ್ಯದರ್ಶಿ ದತ್ತಾತ್ರಿ ಮೂಲಗೆ ಸ್ವಾಗತಿಸಿದರು. ಮುಖ್ಯಗುರು ಅನಿತಾ ಚಂದನಕೆರೆ ನಿರೂಪಣೆ ಮಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಭಾನುವಾರ ಕಲ್ಯಾಣ ಕರ್ನಾಟಕ ಶಿಕ್ಷಣ ಸಂಸ್ಥೆಯ ವಿದ್ಯಾಚೇತನ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ನೂತನ ಕಟ್ಟಡವನ್ನು ಶಾಸಕ ಶರಣು ಸಲಗರ ಉದ್ಘಾಟಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ನಗರಸಭೆ ಅಧ್ಯಕ್ಷೆ ಶಹಜಹಾನ್ ಬೇಗಂ, ಡಾ.ಜಿ.ಎಸ್. ಭುರಳೆ, ರೇವಣಸಿದ್ದಪ್ಪ ದೊರೆಗೊಳ, ಬಸವಲಿಂಗ ಸುಬೇದಾರ, ಸಂಜೀವರೆಡ್ಡಿ ಯರಬಾಗ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 16 ಮಾರ್ಚ್ 2022
16 MARCH 2022

ಮುಳೆ ಮೆಚ್ಚುಗೆ | ಕಲ್ಯಾಣದಲ್ಲಿ ಅಭಿನವ ಶ್ರೀಗಳಿಂದ ಸನ್ಮಾನ

ಮಠಗಳಿಂದ ಸಮಾಜಮುಖಿ ಕಾರ್ಯ



ವಿಜಯವಾಣಿ ಚಿತ್ರ

ಬಸವಕಲ್ಯಾಣ ತ್ರಿಪುರಾಂತ ಗವಿಮಠದಲ್ಲಿ ಮರಾಠ ಅಭಿವೃದ್ಧಿ ನಿಗಮ ಅಧ್ಯಕ್ಷ ಎಂ.ಜಿ.ಮುಳೆ ಅವರನ್ನು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿ ಆಶೀರ್ವದಿಸಿದರು. ಎನ್.ವಿ.ಡೋಲೆ, ಮಲ್ಲಿಕಾರ್ಜುನ ನಂದಿ, ರಾಚಯ್ಯ ವಸ್ತ್ರದ, ಚಂದ್ರಕಾಂತ ಸ್ವಾಮಿ, ಸಂದೀಪ ಪಾಟೀಲ್, ಸದಾನಂದ ಇತರರಿದ್ದರು.

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಶಿಕ್ಷಣ ದಾಸೋಹ ಜತೆಗೆ ಸಮಾಜಮುಖಿ ಕಾರ್ಯದ ಮೂಲಕ ನಾಡಿನ ಪ್ರಗತಿಗೆ ಮಠಗಳು ನೀಡುತ್ತಿರುವ ಕೊಡುಗೆ ಅನನ್ಯ ಎಂದು ಕರ್ನಾಟಕ ಮರಾಠ ಅಭಿವೃದ್ಧಿ ನಿಮಮದ ಅಧ್ಯಕ್ಷ, ಮಾಜಿ ಶಾಸಕ ಎಂ.ಜಿ.ಮುಳೆ ಹೇಳಿದರು.

ಇಲ್ಲಿಯ ತ್ರಿಪುರಾಂತ ಗವಿಮಠದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸರಳ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಗವಿಮಠದಿಂದ ಧಾರ್ಮಿಕ ಜತೆಗೆ ಸಮಾಜಪರ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದ್ದು, ಸರ್ವ ಸಮುದಾಯದವರನ್ನು ಸಮಾನವಾಗಿ ಕಾಣುವ ಸಮನ್ವಯತೆಯ ಮಠ ಇದಾಗಿದೆ. ಶ್ರೀಮಠದ ಕಾರ್ಯಗಳಿಗೆ ಸದಾ ಸಹಕಾರ ಇರಲಿದೆ ಎಂದರು.

ಗವಿಮಠದ ಪೀಠಾಧಿಪತಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಎಂ.ಜಿ.ಮುಳೆ ಅವರು ಈ ಮಠದ ಕಾರ್ಯ ಚಟುವಟಿಕೆಗಳಿಗೆ ಸದಾ ಸಹಾಯ-ಸಹಕಾರ ನೀಡುತ್ತ ಬಂದಿದ್ದಾರೆ. ಇವರ ಸಹಕಾರದಿಂದಲೇ ಪ್ರತಿ ವರ್ಷ ಶ್ರೀ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಹೇಳಿದರು.

ಅಭಿವೃದ್ಧಿ ಪರ ಚಿಂತನೆ, ಎಲ್ಲ ಸಮುದಾಯದವರ ಬಗ್ಗೆ ಕಾಳಜಿ ಹೊಂದಿರುವ ಮುಳೆ ಅವರನ್ನು ಮರಾಠ ಅಭಿವೃದ್ಧಿ ನಿಗಮ ಅಧ್ಯಕ್ಷರಾಗಿ ಸರ್ಕಾರ ನೇಮಿಸಿರುವುದು ಸ್ವಾಗತಾರ್ಹ ಮತ್ತು ಸೂಕ್ತ ವ್ಯಕ್ತಿಗೆ ಸೂಕ್ತ ಅವಕಾಶ ಕಲ್ಪಿಸಲಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ರುದ್ರೇಶ್ವರ ಗೋರ್ಟಾ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ನಿವೃತ್ತ ಪ್ರಾಚಾರ್ಯ ಎನ್.ವಿ.ಡೋಲೆ, ನಿವೃತ್ತ ಕೃಷಿ ಅಧಿಕಾರಿ ಮಲ್ಲಿಕಾರ್ಜುನ ನಂದಿ, ರಾಚಯ್ಯ ವಸ್ತ್ರದ, ಚಂದ್ರಕಾಂತ ಸ್ವಾಮಿ, ಸಂದೀಪ ಪಾಟೀಲ್, ಸದಾನಂದ ಕಣಜಿ, ಬಾಬುಸ್ವಾಮಿ ಚನ್ನಳ್ಳಿ, ಶಿವಕುಮಾರ ರಾಯಪಳ್ಳಿ, ರಮೇಶ ರಾಜೋಳೆ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 16 ಮಾರ್ಚ್ 2022
16 MARCH 2022

Scanned with OKEN Scanner

VIJAYAVANI » KALABURAGI
ಗುರುವಾರ 17 ಮಾರ್ಚ್ 2022
17 MARCH 2022

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಏ.23ಕ್ಕೆ ಗವಿಮಠದಲ್ಲಿ ಕಾರ್ಯಕ್ರಮ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ನಗರದಲ್ಲಿ ಪ್ರತಿ ವರ್ಷದಂತೆ ಏಪ್ರಿಲ್ 23ರಂದು ಜಗದ್ಗುರು ಶ್ರೀ ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವವನ್ನು ಭಕ್ತರಿಂದ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಹೇಳಿದರು.

ನಗರದ ಸಂಸ್ಥಾನ ಗವಿಮಠದಲ್ಲಿ ಬುಧವಾರ ಹಮ್ಮಿಕೊಂಡ ಜಗದ್ಗುರು ಶ್ರೀ ರೇಣುಕಾಚಾರ್ಯ ಜಯಂತಿಯಲ್ಲಿ ಪಂಚಾಚಾರ್ಯರ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಪೂಜ್ಯ ಶ್ರೀಮದ್ ರಂಭಾಪುರಿ ಪೀಠದ ಜಗದ್ಗುರು ಶ್ರೀ ಡಾ.ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮೀಜಿಯವರು ಯುಗಮಾನೋತ್ಸವದ ದಿವ್ಯ ಸಾನ್ನಿಧ್ಯ ಹಾಗೂ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವವ ವಹಿಸುವರು. ಇಂದು ಸಾಂಕೇತಿಕವಾಗಿ ಜಯಂತಿ ಆಚರಿಸಲಾಗಿದೆ ಎಂದರು.



ಬಸವಕಲ್ಯಾಣ ಸಂಸ್ಥಾನ ಗವಿಮಠದ ಆವರಣದಲ್ಲಿ ಬುಧವಾರ ಹಮ್ಮಿಕೊಂಡ ಜಗದ್ಗುರು ಶ್ರೀ ರೇಣುಕಾಚಾರ್ಯ ಜಯಂತಿಯಲ್ಲಿ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಪಂಚಾಚಾರ್ಯರ ಧ್ವಜಾರೋಹಣ ನೆರವೇರಿಸಿದರು. ಬಸವಂತಪ್ಪ ಲವಾರೆ, ಎ.ಜಿ.ಪಾಟೀಲ್, ಮಲ್ಲಿಕಾರ್ಜುನ ನಂದಿ, ಬಾಬುರಾವ ಚಳಕಾಪುರೆ, ನಟರಾಜ ಬಿರಾದಾರ, ರಮೇಶ ಸ್ವಾಮಿ ಇತರರಿದ್ದರು.

ಧ್ವಜಾರೋಹಣಕ್ಕೂ ಮುನ್ನ ಶ್ರೀ ರೇಣುಕಾಚಾರ್ಯರ ಮೂರ್ತಿಗೆ ರುದ್ರಾಭಿಷೇಕ ನಡೆಯಿತು. ನಂತರ ಭಕ್ತರು ದರ್ಶನ, ಮಹಾಪ್ರಸಾದ ಪಡೆದು ಧನ್ಯರಾದರು. ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಪ್ರಾಚಾರ್ಯ ಎ.ಜಿ.ಪಾಟೀಲ್, ಮಲ್ಲಿಕಾರ್ಜುನ ನಂದಿ, ಬಾಬುರಾವ ಚಳಕಾಪುರೆ, ಮರೆಪ್ಪ ಪೊಲೀಸ್ ಪಾಟೀಲ್, ನಟರಾಜ ಬಿರಾದಾರ, ಕಾರ್ತಿಕ ಬಿರಾದಾರ, ರಮೇಶ ಸ್ವಾಮಿ, ಬಾಬುರಾವ ಉಳ್ಳೆ, ಶಿವಕುಮಾರ ಮಠ, ಮಲ್ಲಿಕಾರ್ಜುನ ಕಾಡಾದಿ, ನಾಗಯ್ಯ ಸ್ವಾಮಿ ಇತರರಿದ್ದರು.

ಮನೆ ಮನಗಳಲ್ಲಿ ಸದ್ಭಾವ ಚಿಂತನದಲ್ಲಿ ತ್ರಿಪುರಾಂತ ಸ್ವಾಮೀಜಿ ಅಭಿಪ್ರಾಯ

ರುದ್ರಪೂಜೆಗೆ ವಿರೂಪಾಕ್ಷಯ್ಯ ಮೆರುಗು

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದ ಸಂಗೀತಗಾರ ಲಿಂ. ವಿರೂಪಾಕ್ಷಯ್ಯ ಗೋರಟಾ ಅವರು ರುದ್ರಮಂತ್ರಗಳಿಗೆ ಸ್ವತಃ ಸಂಗೀತ ಅಳವಡಿಸಿ ಹಾಡಿ ಈ ಮೂಲಕ ರುದ್ರಪೂಜೆಗೆ ಹೊಸ ಮೆರುಗು ತಂದು ಕೊಟ್ಟಿದ್ದರು' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದ್ದಾರೆ.

. ನಗರದ ಸೀತಾ ಕಾಲೊನಿಯ ಪ್ರೊ.ರುದ್ರೇಶ್ವರ ಗೋರಟಾ ಅವರ ನಿವಾಸದಲ್ಲಿ ಗುರುವಾರ ಆಯೋಜಿಸಿದ್ದ 'ಮನೆ ಮನಗಳಲ್ಲಿ ಸದ್ಭಾವ ಚಿಂತನ' ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

'ವಿರೂಪಾಕ್ಷಯ್ಯನವರು ಶಾಸ್ತ್ರೀಯ ಸಂಗೀತವನ್ನು ಸುಶ್ರಾವ್ಯವಾಗಿ ಹಾಡಿ ಈ ಭಾಗದಲ್ಲಿ ಪ್ರಸಿದ್ಧಿ ಪಡೆದಿದ್ದರು. ಅವರ ಪುತ್ರ ಹಾಗೂ ರಾಚೋಟಿ ಶಿವಾಚಾರ್ಯರಿಂದ ಧರ್ಮಸಂಸ್ಕಾರ ಪಡೆದ ಪ್ರೊ.ರುದ್ರೇಶ್ವರ ಗೋರಟಾ ಕೂಡ ಸಂಗೀತಗಾರರು. ಸಮಾಜ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಾರೆ. ದಾನ ಧರ್ಮ ಮಾಡುತ್ತ ತಂದೆಯ ಮಾರ್ಗ ಅನುಸರಿಸುತ್ತಿರುವುದು ಸಂತಸ ತಂದಿದೆ' ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಶಾಂತಲಿಂಗ ಮಠಪತಿ ಮಾತನಾಡಿ, 'ಗವಿಮಠದಿಂದ ಸದ್ಭಾವ ಚಿಂತನ ಕಾರ್ಯಕ್ರಮ ಆಯೋಜಿಸಿ ಮನೆ ಮನಗಳಲ್ಲಿ ಸೌಹಾರ್ದತೆಯ ಭಾವನೆ ಮೂಡಿಸುತ್ತಿರುವುದು ಹಾಗೂ ಮನಸ್ಸುಗಳನ್ನು ಪರಿಶುದ್ಧಗೊಳಿಸುತ್ತಿರುವುದು ಉತ್ತಮ ಕಾರ್ಯವಾಗಿದೆ' ಎಂದರು.

ಮುಖ್ಯ ಶಿಕ್ಷಕ ರಮೇಶ ರಾಜೋಳೆ, ಕ್ಷೇಮಲಿಂಗ ಬೆಳಮಗಿ, ಪ್ರೊ.ರುದ್ರೇಶ್ವರ ಗೋರಟಾ ಮಾತನಾಡಿದರು. ಹಿರಿಯರಾದ ಶಿವಲಿಂಗಯ್ಯ ಕನಾಡೆ ಅಧ್ಯಕ್ಷತೆ ವಹಿಸಿದ್ದರು. ಶಾಂತಲಿಂಗಯ್ಯ ಮಠಪತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಹುಲಸೂರ ಘಟಕದ ಮಾಜಿ ಅಧ್ಯಕ್ಷೆ ಡಾ.ಶಿವಲೀಲಾ ಮಠಪತಿ ಅವರನ್ನು ಸನ್ಮಾನಿಸಲಾಯಿತು.

ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ದಿಲೀಪ ಪತಂಗೆ, ಬಸವರಾಜ ಶೇರಿ, ಶಿವಕುಮಾರ ಪಾಟೀಲ, ಸೂರ್ಯಕಾಂತ ಸ್ವಾಮಿ, ಪೂರ್ಣಿಮಾ ರುದ್ರೇಶ್ವರ, ಶರಣಯ್ಯ ಸ್ವಾಮಿ, ಸೂರ್ಯಕಾಂತ ಪಂಚಾಳ, ಮಲ್ಲಿಕಾರ್ಜುನ ನಂದಿ, ಬಾಬುರಾವ್ ಚಳಕಾಪುರೆ, ಲಕ್ಷ್ಮಿಬಾಯಿ ಪಾಟೀಲ ಉಪಸ್ಥಿತರಿದ್ದರು.



ಬಸವಕಲ್ಯಾಣದ ಸೀತಾ ಕಾಲೊನಿಯ ಪ್ರೊ.ರುದ್ರೇಶ್ವರ ಗೋರಟಾ ಅವರ ನಿವಾಸದಲ್ಲಿ ಗುರುವಾರ ನಡೆದ ಸದ್ಭಾವ ಚಿಂತನ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು

ಶನಿವಾರ • ಮಾರ್ಚ್ 26, 2022 ಪ್ರಜಾವಾಣಿ

Scanned with OKEN Scanner

ಕನ್ನಡಪ್ರಭ
ಶುಕ್ರವಾರ 25.3.2022
ಕಲಬುರಗಿ

ಯುಗಮಾನೋತ್ಸವ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಅರ್ಥಪೂರ್ಣ ಕಾರ್ಯಕ್ರಮ

ಏ.23ಕ್ಕೆ ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ

• ಕನ್ನಡಪ್ರಭ ವಾರ್ತೆ ಬಸವಕಲ್ಯಾಣ

ಇಲ್ಲಿಯ ಗವಿ ಮಠದಲ್ಲಿ ಏ.23ರಂದು ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ಆಚರಿಸಲು ನಿರ್ಧರಿಸಲಾಯಿತು. ರಂಭಾಪುರಿ ಪೀಠದ ಜಗದ್ಗುರು ಡಾ. ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ ಸಾನಿಧ್ಯದಲ್ಲಿ ಹಾಗೂ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ತೀರ್ಮಾನಿಸಲಾಯಿತು.

ಇಲ್ಲಿಯ ಗವಿ ಮಠದಲ್ಲಿ ಕಾರ್ಯಕ್ರಮದ ನಿಮಿತ್ತವಾಗಿ ನಡೆದ ಸಿದ್ಧತಾ ಸಭೆಯಲ್ಲಿ ಹಲವರು ಭಾಗವಹಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಿದರು. ಇದೇ ಸಂದರ್ಭದಲ್ಲಿ ಶಾಸಕ ಶರಣು ಸಲಗರ ಅವರನ್ನು ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು. ಶಾಸಕ ಶರಣು ಸಲಗರ ಮಾತನಾಡಿ, ಜಯಂತಿ ಯುಗಮಾನೋತ್ಸವ ವೈಭವದಿಂದ ಆಚರಿಸಲು ನಾನು ತನು ಮನ ಧನ ಸೇವೆಗೆ ಸದಾ ಸಿದ್ಧ. ನಾನು ಗವಿ ಮಠದ ಹಾಗೂ ರಂಭಾಪುರಿ ಪೀಠದ ಪರಮ ಭಕ್ತ, ಅಲ್ಲದೆ ರಂಭಾಪುರಿ ಜಗದ್ಗುರು ಮಹಾ ಸ್ವಾಮಿಯವರು ಬಸವಕಲ್ಯಾಣಕ್ಕೆ ಆಗಮಿಸುತ್ತಿರುವುದು ನಮ್ಮೆಲ್ಲರ ಭಾಗ್ಯ. ಹೀಗಾಗಿ ನಾವೆಲ್ಲರೂ ಸೇರಿ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಸಮಾರಂಭ ಏರ್ಪಡಿಸೋಣ ಎಂದರು.



ಬಸವಕಲ್ಯಾಣದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ನಿಮಿತ್ತ ಗವಿ ಮಠದಲ್ಲಿ ನಡೆದ ಸಿದ್ಧತಾ ಸಭೆಯಲ್ಲಿ ಶಾಸಕ ಶರಣು ಸಲಗರ ಮಾತನಾಡಿದರು.

ಗವಿ ಮಠದ ಡಾ ಅಭಿನವ ಘನಲಿಂಗ ಶಿವಾಚಾರ್ಯರು ಮಾತನಾಡಿ, ಜಯಂತಿ ಯುಗಮಾನೋತ್ಸವದ ಸಂಕಲ್ಪ ಹಾಗೂ ಸ್ವರೂಪ ತಿಳಿಸಿದ ಶ್ರೀಗಳು, ಶಾಸಕ ಶರಣು ಸಲಗರ ಅವರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಮುಂದಾಳತ್ವ ವಹಿಸಿಕೊಂಡು ಶ್ರೀಮದ್ ರಂಭಾಪುರಿ ಜಗದ್ಗುರು ಸಾನಿಧ್ಯದಲ್ಲಿ ಯುಗಮಾನೋತ್ಸವ ಹಾಗೂ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ಆಚರಿಸಲು ಒಪ್ಪಿಕೊಂಡದ್ದು ಸಂತೋಷದ ಸಂಗತಿ. ಅಲ್ಲದೆ ಭಕ್ತರ ಜೊತೆ ಎಲ್ಲ ಪಕ್ಷಗಳ ಮುಖಂಡರು ಭಕ್ತಿ ಸೇವೆಗೆ ಮುಂದಾಗಿದ್ದು ಖುಷಿ ತಂದಿದೆ ಎಂದರು.

ಈ ಸಭೆಯಲ್ಲಿ ಎಐಸಿಸಿ ಸದಸ್ಯ ಆನಂದ ದೇವಪ್ಪ, ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ದೀಪಕ ಮಾಲಗರ, ಅರ್ಜುನ ಕನಕ ಮಾತನಾಡಿ, ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವದ ಕಾರ್ಯಕ್ರಮಕ್ಕೆ ತನು,ಮನ, ಧನದಿಂದ ಸಹಾಯ ನೀಡುವುದಾಗಿ ತಿಳಿಸಿದರು. ಸಂದರ್ಭದಲ್ಲಿ ಗವಿಮಠ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಬಾಬುರಾವ ಉಳ್ಳೆ, ಶಿವಕುಮಾರ ಮಠ, ಪ್ರೊ ಸೂರ್ಯಕಾಂತ ಶೀಲವಂತ, ರಮೇಶ ರಾಜೋಳೆ, ಮರೆಪ್ಪ ಪೊಲೀಸ್ ಪಾಟೀಲ್, ಲಿಂಗರಾಜ್ ಬಿರಾದಾರ ಉಪಸ್ಥಿತರಿದ್ದರು.



ಸಾಹಿತ್ಯ ಸಮ್ಮೇಳನದಲ್ಲಿ ವಿಜಯವಾಣಿ ಸ್ಥಾನಿಕ ಸಂಪಾದಕ ಸದಾನಂದ ಜೋಶಿ ಅವರನ್ನು ಸನ್ಮಾನಿಸಲಾಯಿತು. ಡಾ.ಅಭಿನವ ಘನಲಿಂಗ ರುದ್ರಮುನಿ ಶ್ರೀ, ಡಾ.ಪೂರ್ಣಿಮಾ, ಎಸ್.ಎಂ. ಜನವಾಡಕರ್, ಸುರೇಶ ಚನ್ನಶೆಟ್ಟಿ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 22 ಮಾರ್ಚ್ 2022
22 MARCH 2022

Scanned with OKEN Scanner

ಬಸವ ಕಲ್ಯಾಣದಲ್ಲಿ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಕಾರ್ಯಕ್ರಮ

ಮನುಷ್ಯನಿಗೆ ಧರ್ಮದ ಸಂಸ್ಕಾರ ಅವಶ್ಯ

ವಿಜಯ ಸುದ್ದಿಲೋಕ ಬಸವಕಲ್ಯಾಣ

ಮನುಷ್ಯನಿಗೆ ಧರ್ಮದ ಸಂಸ್ಕಾರ ಬಹಳ ಮುಖ್ಯ. ಸಂಸ್ಕಾರ ಇಲ್ಲದವರು ಪಶುವಿಗೆ ಸಮಾನ ಎಂದು ಶಾಸ್ತ್ರ ಹೇಳಿದೆ. ಹೀಗಾಗಿ ಗುರುವಿನಿಂದ ಸಂಸ್ಕಾರ ಪಡೆದ ಮನುಷ್ಯ ಸದಾ ಧರ್ಮ ಮಾರ್ಗದಲ್ಲಿ ಮುನ್ನಡೆದು ಜೀವನ ಸಾರ್ಥಕ ಗೊಳಿಸಿಕೊಳ್ಳಲು ಸಾಧ್ಯ ಎಂದು ಇಲ್ಲಿಯ ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಸೀತಾ ಕಾಲೋನಿಯ ಪ್ರೊ. ರುದ್ರೇಶ್ವರ ವಿರೂಪಾಕ್ಷ ಸ್ವಾಮಿ ಅವರ ನಿವಾಸದಲ್ಲಿ ಹಮ್ಮಿಕೊಂಡ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಕಾರ್ಯಕ್ರಮದ ಸಾನಿಧ್ಯ ವಹಿಸಿ ಶ್ರೀಗಳು ಆಶಿರ್ವಚನ ನೀಡಿದರು.

ಪ್ರತಿಯೊಬ್ಬರೂ ಗುರುವಿನಿಂದ ಧರ್ಮ ಸಂಸ್ಕಾರ ಪಡೆದು ಜೀವನ ಸಾರ್ಥ ಗೊಳಿಸಿಕೊಳ್ಳಬೇಕು. ಜೊತೆಗೆ ಎಲ್ಲರೂ, ದೇವರು, ಧರ್ಮ, ಗುರು, ಹಿರಿಯರಿಗೆ ಶ್ರದ್ಧೆ ಭಕ್ತಿ, ಗೌರವದಿಂದ ನಡೆಮುಕೊಳ್ಳಬೇಕು. ಪ್ರೊ. ರುದ್ರೇಶ್ವರ ಅವರು ವಯಸ್ಸು ಚಿಕ್ಕವಾಗಿದ್ದರೂ ಕೂಡ ಮಾಡುವ ಧರ್ಮ ಕಾರ್ಯ ದೊಡ್ಡದು. ಅವರು ನಮ್ಮ ಮಠದ ಆಪ್ತ ಭಕ್ತರು. ಅವರಿಗೆ ಚಿಕ್ಕ ವಯಸ್ಸಿನಿಂದಲೇ ತಂದೆ ಲಿಂ.ಪೂಜ್ಯ ವಿರೂಪಾಕ್ಷಸ್ವಾಮಿ ಅವರ ಸಂಗೀತ ರುದ್ರದ ಮೂಲಕ ಹಾಗೂ ಮೆಹಕರದ ಲಿಂ.ಪೂಜ್ಯ ಶ್ರೀ ರಾಚೋಟಿ ಶಿವಾಚಾರ್ಯರಿಂದ ಧರ್ಮ ಸಂಸ್ಕಾರ ಪಡೆದು ಸದಾ ಗುರುವಿನ ಸೇವೆ ದಾನ ಧರ್ಮ ಮಾಡುತ್ತಿರುವುದು ನಮಗೆ ಸಂತೋಷದ ತಂದಿದೆ ಎಂದು ನುಡಿದರು.



ಬಸವಕಲ್ಯಾಣ ನಗರದ ಸೀತಾ ಕಾಲೋನಿಯ ಪ್ರೊ.ರುದ್ರೇಶ್ವರ ವಿರೂಪಾಕ್ಷ ಸ್ವಾಮಿ ಅವರ ನಿವಾಸದಲ್ಲಿ ಹಮ್ಮಿಕೊಂಡ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಕಾರ್ಯಕ್ರಮದ ಸಾನಿಧ್ಯ ವಹಿಸಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶಿರ್ವಚನ ನೀಡಿದರು.

ಸೀತಾ ಕಾಲೋನಿಯ ಹಿರಿಯರಾದ ಗುಂಡಯ್ಯ ಶಿವಲಿಂಗಯ್ಯ ಕನಾಡೆ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ರುದ್ರೇಶ್ವರ ವಿರೂಪಾಕ್ಷಸ್ವಾಮಿ ಸ್ವಾಗತಿಸಿದರು. ಶ್ರೇಯಾ ಶಾಂತಲಿಂಗ ಮಠಪತಿ ವಚನ ಗಾಯನ ಮಾಡಿದರು. ಸರ್ಕಾರಿ ಪ್ರೌಢ ಶಾಲೆ ಮುಖ್ಯಗುರು ರಮೇಶ ರಾಜೋಳೆ ನಿರೂಪಿಸಿದರು. ಶಿಕ್ಷಕ ಕ್ಷೇಮಲಿಂಗ ಬೆಳಮಗಿ ವಂದಿಸಿದರು. ಕಾರ್ಯಕ್ರಮಕ್ಕೂ ಮುನ್ನ ಪ್ರೊ. ರುದ್ರೇಶ್ವರ ಪೂರ್ಣಿಮಾ ದಂಪತಿಗಳು ಪೂಜ್ಯ ಶ್ರೀಗಳ ಪಾದಪೂಜೆ ನೆರವೇರಿಸಿದರು.

ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷ ಬಸವಂತಪ್ಪ ಲವಾರೆ, ಪ್ರಾಚಾರ್ಯ ಎ.ಜಿ.ಪಾಟೀಲ, ಲಕ್ಷ್ಮಣ ಸಿಂಗಾರೆ, ಮಲ್ಲಿಕಾರ್ಜುನ ನಂದಿ, ಬಾಬುರಾವ ಚಳಕಾಪುರೆ, ಚಂದ್ರಕಾಂತ ಘಾಳೆ, ಸೂರ್ಯಕಾಂತ ಪಂಚಾಳ, ಚಂದ್ರಕಾಂತ ಸ್ವಾಮಿ ನಾರಾಯಣಪುರ, ಶರಣಯ್ಯ ಸ್ವಾಮಿ, ರೇವಣಸಿದ್ದಯ್ಯ ವಸ್ತದ, ಸದಾನಂದ ಕಣಜೆ, ಶರಣಯ್ಯ ಸ್ವಾಮಿ, ಶಾಂತವೀರ ಸ್ವಾಮಿ, ಮಹಾದೇವ ಆನಂದವಾಡಿ, ಮಹಾದೇವ ರಾಜೋಳೆ, ಪ್ರೊ.ಎ.ಡಿ.ಪಾಟೀಲ, ಡಾ.ವಿ.ಎಸ್.ರಾಜೋಳೆ, ಪ್ರೊ.ವಿಠೋಬಾ ಡೊಣ್ಣೆಗೌಡ, ಪ್ರೊ.ಸಂತೋಷ ಮಹಾಜನ, ಡಾ.ಚಿತ್ರಶೇಖರ ಚಿರಳ್ಳಿ, ಪ್ರೊ.ದಿಲೀಪ ಪತಂಗೆ, ಪ್ರೊ.ಬಸವರಾಜ ಸೇರಿ, ಶಿವಕುಮಾರ ಪಾಟೀಲ, ಸೂರ್ಯಕಾಂತ ಸ್ವಾಮಿ, ಜಗನ್ನಾಥ ಸ್ವಾಮಿ, ಗಂಗಮ್ಮ ಮಠಪತಿ, ನಿವೃತ್ತ ಶಿಕ್ಷಕಿ ಲಕ್ಷ್ಮಿಬಾಯಿ ಪಾಟೀಲ, ಶಿಕ್ಷಕಿ ಸುವರ್ಣ ಆಗ್ರೆ, ಬಸಮ್ಮ ಘಾಳೆ, ನೀಲಾಂಬಿಕಾ ಕನಾಡೆ, ಪ್ರೊ.ಪುಷ್ಪಾ ಕೋರೆ, ಆಶ್ವಿನಿ ಘಾಳೆ, ಅನ್ನಪೂರ್ಣ ಚಿರಳ್ಳಿ, ಸಿದ್ದಮ್ಮ ರಾಜೋಳೆ, ಹೇಮಾವತಿ ಸ್ವಾಮಿ ಇದ್ದರು.

> ಗವಿಮಠ ಪೂಜ್ಯ ಶ್ರೀಗಳ ದಿವ್ಯ ಸಾನಿಧ್ಯದಲ್ಲಿ ಪ್ರತಿ ತಿಂಗಳು ನಡೆಯುತ್ತಿರುವ ಮನೆ ಮನಗಳಲ್ಲಿ ಸದ್ಭಾವ ಚಿಂತನ ಕಾರ್ಯಕ್ರಮ ಬಹಳ ಅರ್ಥಪೂರ್ಣವಾಗಿದೆ. ಶ್ರೀಗಳು ಪ್ರತಿ ತಿಂಗಳು ಭಕ್ತರ ಮನೆಗೆ ಆಗಮಿಸಿ ಸದ್ಭಾವ ಚಿಂತನ ಮಾಡುವುದರ ಮೂಲಕ ಆ ಮನಸ್ಸುಗಳನ್ನು ಪರಿಶುದ್ಧ ಮಾಡುತ್ತಿರುವುದು ಅತ್ಯುತ್ತಮ ಕಾರ್ಯ.
>
> **ಪ್ರೊ.ಶಾಂತಲಿಂಗ ಮಠಪತಿ,**
> ಅಧ್ಯಕ್ಷ, ತಾಲೂಕು ಕಸಾಪ

ವಿಜಯ ಕರ್ನಾಟಕ ಕಲಬುರಗಿ, ಶನಿವಾರ,26 ಮಾರ್ಚ್ 2022

ಅಭಿನವ ಘನಲಿಂಗ ಶ್ರೀ ಪ್ರಶಸ್ತಿಗೆ ಲವಾರೆ ಆಯ್ಕೆ

ಸಂ.ಕ.ಸಮಾಚಾರ ಬಸವಕಲ್ಯಾಣ : ತ್ರಿಪುರಾಂತ ಗವಿಮಠದಿಂದ ಕೊಡಮಾಡುವ ಅಭಿನವ ಘನಲಿಂಗ ಶ್ರೀ ಪ್ರಶಸ್ತಿಗೆ ಜಲಾನಯನದ ಇಲಾಖೆಯ ನಿವೃತ್ತ ಅಧಿಕಾರಿ, ತಾಲ್ಲೂಕು ಸದ್ಭೋದನಾ ಸಂಸ್ಥೆಯ ಅಧ್ಯಕ್ಷ ಬಸವಂತಪ್ಪ ಲವಾರೆ ಆಯ್ಕೆಯಾಗಿದ್ದಾರೆ.

ಶ್ರೀಮದ್ ರಂಭಾಪುರಿ ಜಗದ್ಗುರುಗಳು ಹಾಗೂ ಶ್ರೀಮದ್ ಕೇದಾರ ಜಗದ್ಗುರುಗಳ ಸಾನಿಧ್ಯದಲ್ಲಿ ಏಪ್ರಿಲ್ 23 ರಂದು ನಡೆಯಲಿರುವ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಸಮಾರಂಭದಲ್ಲಿ 2022ನೇ ಸಾಲಿನ ಪ್ರಶಸ್ತಿಯನ್ನು ಲವಾರೆ ಅವರಿಗೆ ಪ್ರದಾನ ಮಾಡಲಾಗುವುದು ಎಂದು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದ್ದಾರೆ. ಅಭಿನವ ಶ್ರೀಗಳ ನೇತೃತ್ವದಲ್ಲಿ ಶ್ರೀಮದ್ ವೀರಶೈವ ಸದ್ಭೋಧನ ಸಂಸ್ಥೆಯ ಪದಾಧಿಕಾರಿಗಳು ಬಸವಂತಪ್ಪ ಲವಾರೆ ಮನೆಗೆ ತೆರಳಿ ಸನ್ಮಾನಿಸಿ ಅಭಿನಂದಿಸಿ ಆಮಂತ್ರಣ ನೀಡಿದರು.

ರೇವಣಸಿದ್ದಯ್ಯಾ ಸ್ವಾಮಿ, ಪ್ರೊ.ಸೂರ್ಯಕಾಂತ ಶೀಲವಂತ, ರಾಕೇಶ್ ಪುರವಂತ, ಡಾ.ಬಸವರಾಜ ಸ್ವಾಮಿ, ರಮೇಶ್ ರಾಜೋಳೆ, ಕಸಾಪ ಅಧ್ಯಕ್ಷ ಶಾಂತಲಿಂಗ ಮಠಪತಿ, ಸಂದೀಪ್ ಪಾಟೀಲ್, ಬಾಬುರಾವ್ ಚಳಕಾಪುರೆ, ಬಾಬುರಾವ ಉಳ್ಳೆ, ಸಂಜು ಜಾಧವ್, ಶಾಂತವೀರ ಮಠಪತಿ ಇದ್ದರು.



ಬಸವಕಲ್ಯಾಣ ಗವಿಮಠದಿಂದ ಕೊಡಮಾಡುವ ಅಭಿನವ ಘನಲಿಂಗ ಶ್ರೀ ಪ್ರಶಸ್ತಿಗೆ ಆಯ್ಕೆಯಾಗಿರುವ ಜಲಾನಯನದ ಇಲಾಖೆಯ ನಿವೃತ್ತ ಅಧಿಕಾರಿ ಬಸವಂತಪ್ಪ ಲವಾರೆ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

30 ಮಾರ್ಚ್ 2022
ಬುಧವಾರ
ಕಲಬುರಗಿ

ಸಂಯುಕ್ತ ಕರ್ನಾಟಕ KALABURAGI

ಡಾ। ಅಭಿನವ ಘನಲಿಂಗ ರುದ್ರಮುನಿ ಶ್ರೀ ಹರ್ಷ



ಬಸವಕಲ್ಯಾಣ: ಜಗದ ಆದಿ ಜಗದ್ಗುರು ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಆಚರಣೆಯನ್ನು ಸರ್ಕಾರದಿಂದ ಆಚರಿಸಲು ತೀರ್ಮಾನಿಸಿ ಆದೇಶ ಹೊರಡಿಸಿರುವುದಕ್ಕೆ ತ್ರಿಪುರಾಂತ ಗವಿಮಠದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹರ್ಷ ವ್ಯಕ್ತ ಪಡಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಬಹು ಸಂಖ್ಯಾತ ವೀರಶೈವ ಲಿಂಗಾಯತರು ಸಮುದಾಯದ ಜೊತೆಗೆ ಹಲವು ಸಮುದಾಯಗಳ ಅಗಣಿತ ಸಂಖ್ಯೆಯ ಭಕ್ತರ ಆರಾಧ್ಯ ಜಗದ್ಗುರುಗಳು ಅವರಾಗಿದ್ದಾರೆ. ಹೀಗಾಗಿ ಭಕ್ತರ ಬಹುದಿನದ ಸಂಕಲ್ಪ ಸರ್ಕಾರ ಈಡೇರಿಸಿದಂತಾಗಿದೆ. ಹಾಗೂ ಶ್ರೀ ರೇಣುಕಾಚಾರ್ಯರ ಶ್ರೀ ಸಿದ್ಧಾಂತ ಶಿಖಾಮಣಿಯ ಮೂಲಕ ಮಾನವ ಧರ್ಮ ಬೋಧಿಸಿ ಮನುಕುಲದ ಉದ್ಧಾರ ಮಾಡಿದ ಪರಮಾಚಾರ್ಯ ಅವರಾಗಿದ್ದಾರೆ. ಹೀಗಾಗಿ ರಾಜ್ಯ ಸರ್ಕಾರ ಭಕ್ತರ ಸಂಕಲ್ಪವನ್ನು ಸಕಾರಗೊಳಿಸಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪೆಗೆ ಪಾತ್ರವಾಗಿದೆ ಎಂದು ತಿಳಿಸಿದ್ದಾರೆ.

ಉದಯವಾಣಿ ಕಲಬುರಗಿ
ರವಿವಾರ, ಮಾರ್ಚ್ 27, 2022

Scanned with OKEN Scanner

ಸುದ್ದಿ ಕಾರ್ನರ್

ಅಭಿನವ ಘನಲಿಂಗ ಶ್ರೀ ಪ್ರಶಸ್ತಿಗೆ ಲವಾರೆ ಭಾಜನ



ವಿಜಯವಾಣಿ ಚಿತ್ರ

ಅಭಿನವ ಘನಲಿಂಗಶ್ರೀ ಪ್ರಶಸ್ತಿಗೆ ಭಾಜನರಾದ ಬಸವಂತಪ್ಪ ಲವಾರೆ ಅವರನ್ನು ಬಸವಕಲ್ಯಾಣದಲ್ಲಿ ಸನ್ಮಾನಿಸಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಪ್ರೊ. ಸೂರ್ಯಕಾಂತ ಶೀಲವಂತ, ರೇವಣಸಿದ್ದಯ್ಯಾ ಸ್ವಾಮಿ, ರಾಕೇಶ್ ಪುರವಂತ, ಡಾ.ಬಸವರಾಜ ಸ್ವಾಮಿ ಇತರರಿದ್ದರು.

ಬಸವಕಲ್ಯಾಣ: ಇಲ್ಲಿನ ಗವಿಮಠದಿಂದ ಕೊಡಮಾಡುವ ಅಭಿನವ ಘನಲಿಂಗಶ್ರೀ ಪ್ರಶಸ್ತಿಗೆ ಜಲಾನಯನದ ನಿವೃತ್ತ ಅಧಿಕಾರಿ, ಸಂಘ್ಯೋದನಾ ಸಂಸ್ಥೆ ತಾಲೂಕಾಧ್ಯಕ್ಷ ಬಸವಂತಪ್ಪ ಲವಾರೆ ಭಾಜನರಾಗಿದ್ದಾರೆ. ಲವಾರೆ ಅವರ ಸಾಧನೆ ಹಾಗೂ ಧಾರ್ಮಿಕ, ಸಾಮಾಜಿಕ ಕ್ಷೇತ್ರದಲ್ಲಿ ನೀಡುರುವ ಕೊಡುಗೆ ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದ್ದಾರೆ.

ಏ.23ರಂದು ನಗರದಲ್ಲಿ ಆಯೋಜಿಸಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪೂಜ್ಯ ರಂಭಾಪುರಿ ಜಗದ್ಗುರು, ಪೂಜ್ಯ ಕೇದಾರ ಜಗದ್ಗುರು ಸೇರಿದಂತೆ ವಿವಿಧ ಮಠಾಧೀಶರು, ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದ್ದಾರೆ. ಲವಾರೆ ಅವರ ಮನೆಗೆ ಭಾನುವಾರ ಪೂಜ್ಯರು ತೆರಳಿ ಆಮಂತ್ರಣ ನೀಡಿ ಸನ್ಮಾನಿಸಿದರು. ಕಸಾಪ ತಾಲೂಕಾಧ್ಯಕ್ಷ ಶಾಂತಲಿಂಗ ಮಠಪತಿ, ಪ್ರಮುಖರಾದ ರೇವಣಸಿದ್ದಯ್ಯಾ ಸ್ವಾಮಿ, ಪ್ರೊ. ಸೂರ್ಯಕಾಂತ ಶೀಲವಂತ, ರಾಕೇಶ್ ಪುರವಂತ, ಡಾ.ಬಸವರಾಜ ಸ್ವಾಮಿ, ರಮೇಶ ರಾಜೋಳೆ, ಸಂದೀಪ ಪಾಟೀಲ್, ಬಾಬುರಾವ ಚಳಕಾಪುರೆ, ಬಾಬುರಾವ ಉಳ್ಳೆ, ಸಂಜು ಜಾಧವ್, ಶಾಂತವೀರ ಮಠಪತಿ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 29 ಮಾರ್ಚ್ 2022
29 MARCH 2022

ಅಭಿನವ ಘನಲಿಂಗ ಶ್ರೀ ನುಡಿ । ಕಲ್ಯಾಣದಲ್ಲಿ ಸದ್ಭಾವ ಚಿಂತನ ಕಾರ್ಯಕ್ರಮ

ಧರ್ಮ ಅನುಷ್ಠಾನದಿಂದ ಸಾರ್ಥಕ ಜೀವನ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮನುಷ್ಯನಿಗೆ ಧರ್ಮದ ಸಂಸ್ಕಾರ ಬಹಳ ಮುಖ್ಯ. ಗುರುವಿನಿಂದ ಸಂಸ್ಕಾರ ಪಡೆದ ಮನುಷ್ಯ ಧರ್ಮ ಮಾರ್ಗದಲ್ಲಿ ನಡೆದಾಗ ಜೀವನ ಸಾರ್ಥಕಗೊಳಿಸಿಕೊಳ್ಳಲು ಸಾಧ್ಯ ಎಂದು ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಸೀತಾ ಕಾಲನಿಯಲ್ಲಿ ಪ್ರೊ.ರುದ್ರೇಶ್ವರ ಗೋರ್ಟಾ ಅವರಿಂದ ಗುರುವಾರ ಆಯೋಜಿಸಿದ್ದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ದೇವರು, ಧರ್ಮದ ಬಗ್ಗೆ ಭಕ್ತಿ, ಶ್ರದ್ಧೆ ಇರಬೇಕು. ಗುರು- ಹಿರಿಯರನ್ನು ಗೌರವದಿಂದ ಕಾಣಬೇಕೆಂದು ಹೇಳಿದರು.

ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ ಮಾತನಾಡಿ, ಗವಿಮಠದ ಶ್ರೀಗಳ ಸಾನ್ನಿಧ್ಯದಲ್ಲಿ ಪ್ರತಿ ತಿಂಗಳು ನಡೆಯುತ್ತಿರುವ ಮನೆ ಮನಗಳಲ್ಲಿ ಸದ್ಭಾವ ಚಿಂತನ ಕಾರ್ಯಕ್ರಮ ಅರ್ಥಪೂರ್ಣವಾಗಿದೆ. ಇದು ಮನಸ್ಸನ್ನು ಪರಿಶುದ್ಧ ಮಾಡುವ ಕೆಲಸ ಮಾಡುತ್ತಿದೆ ಎಂದು ಬಣ್ಣಿಸಿದರು.

ಹಿರಿಯರಾದ ಗುಂಡಯ್ಯ ಶಿವಲಿಂಗಯ್ಯ ಕನಾಡೆ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಪ್ರಾಚಾರ್ಯ ಎ.ಜಿ.ಪಾಟೀಲ್, ಲಕ್ಷ್ಮಣ ಸಿಂಗಾರೆ, ಮಲ್ಲಿಕಾರ್ಜುನ ನಂದಿ, ಬಾಬುರಾವ



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಗುರುವಾರ ಆಯೋಜಿಸಿದ್ದ ಮನೆ ಮನಗಳಲ್ಲಿ ಸದ್ಭಾವ ಚಿಂತನ ಮಾಸಿಕ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ರಮೇಶ ರಾಜೋಳೆ, ಶಾಂತಲಿಂಗ ಮಠಪತಿ, ಗುಂಡಯ್ಯ ಕನಾಡೆ, ಪ್ರೊ.ರುದ್ರೇಶ್ವರ ಇದ್ದರು.

ಚಳಕಾಪುರೆ, ಚಂದ್ರಕಾಂತ ಘಾಳೆ, ಸೂರ್ಯಕಾಂತ ಪಂಚಾಳ, ಚಂದ್ರಕಾಂತ ಸ್ವಾಮಿ, ಶರಣಯ್ಯ ಸ್ವಾಮಿ, ರೇವಣಸಿದ್ದಯ್ಯ ವಸ್ತ್ರದ, ಸದಾನಂದ ಕಣಜಿ, ಮಹಾದೇವ ರಾಜೋಳೆ, ಡಾ.ವಿ.ಎಸ್.ರಾಜೋಳೆ, ಇತರರಿದ್ದರು.

ಪ್ರೊ.ರುದ್ರೇಶ್ವರ ಗೋರ್ಟಾ ಸ್ವಾಗತಿಸಿದರು. ಕ್ಷೇಮಲಿಂಗ ಬೆಳಮಗಿ ವಂದಿಸಿದರು. ಮುಖ್ಯಗುರು ರಮೇಶ ರಾಜೋಳೆ ನಿರೂಪಣೆ ಮಾಡಿದರು. ಶ್ರೇಯಾ ಶಾಂತಲಿಂಗ ಮಠಪತಿ ವಚನ ಗಾಯನ ಮಾಡಿದರು.

ಕಾರ್ಯಕ್ರಮಕ್ಕೂ ಮುನ್ನ ಪ್ರೊ.ರುದ್ರೇಶ್ವರ ಪೂರ್ಣಿಮಾ ದಂಪತಿ ಶ್ರೀಗಳ ಪಾದಪೂಜೆ ನೆರವೇರಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 28 ಮಾರ್ಚ್ 2022
28 MARCH 2022

Scanned with OKEN Scanner

ಮೂಲ ಅನುಭವ ಮಂಟಪ ಶೋಧಕ್ಕೆ ಒತ್ತಡ | ಆಡಳಿತದಿಂದ ಮುಂಜಾಗ್ರತಾ ಕ್ರಮ | ಬಿಗಿ ಬಂದೋಬಸ್ತ್

ಕಲ್ಯಾಣ ಕಡೆ ಇಂದು ಮಠಾಧೀಶರ ನಡೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಹನ್ನೆರಡನೇ ಶತಮಾನದಲ್ಲಿದ್ದ ಮೂಲ ಅನುಭವ ಮಂಟಪ ಸಂಶೋಧನೆಗೆ ಒತ್ತಾಯಿಸಿ ಭಾನುವಾರ ನಗರದಲ್ಲಿ ನಡೆಯಲಿರುವ 'ಮಠಾಧೀಶರ ನಡೆ ಮೂಲ ಅನುಭವ ಮಂಟಪ ಕಡೆ' ಹೋರಾಟಕ್ಕೆ ಭೂಮಿಕೆ ಸಿದ್ಧವಾಗಿದೆ.

ನಗರದ ರಥ ಮೈದಾನದ ಸಭಾ ಭವನದಲ್ಲಿ ಬೆಳಗ್ಗೆ 11ಕ್ಕೆ ಕಾರ್ಯಕ್ರಮ ನಡೆಯಲಿದ್ದು, ರಾಜ್ಯ-ನೆರೆ ರಾಜ್ಯಗಳ ವಿವಿಧೆಡೆಯಿಂದ ಆಗಮಿಸಲಿರುವ ಮಠಾಧೀಶರು ಭಾಗವಹಿಸಲಿದ್ದಾರೆ. ರಾಜ್ಯದ ವಿವಿಧ ಜಿಲ್ಲೆಗಳಿಂದಲೂ ಜನ ಭಾಗವಹಿಸಲಿದ್ದಾರೆಂದು ಸಂಘಟಕರು ತಿಳಿಸಿದ್ದಾರೆ. ಶರಣಭೂಮಿಯಲ್ಲಿ ನಡೆಯುತ್ತಿರುವ ಈ ಹೋರಾಟ ಹಲವು ಆಯಾಮಗಳಿಂದ ಚರ್ಚೆಗೆ ಗ್ರಾಸವಾಗಿದ್ದು, ಭಾನುವಾರ ಏನೆಲ್ಲ ಬೆಳವಣಿಗೆ ಆಗಬಹುದು ಎಂಬ ಕುತೂಹಲ ಮೂಡಿಸಿದೆ.

ಒಂದೆಡೆ 600 ಕೋಟಿ ರೂ.ವೆಚ್ಚದಲ್ಲಿ ನೂತನ ಅನುಭವ ಮಂಟಪ ಕಾಮಗಾರಿಗೆ ಕಳೆದ ವಾರ ಚಾಲನೆ ಸಿಕ್ಕಿದ್ದು, ಈ ಮಧ್ಯೆ ಮೂಲ ಅನುಭವ ಮಂಟಪ ಶೋಧ ಮಾಡಲು ಆಗ್ರಹಿಸಿ ಚಳವಳಿ ಶುರುವಾಗಿದೆ. ಇದು ಪರ-ವಿರೋಧಕ್ಕೂ ಕಾರಣವಾಗಿದ್ದು, ಪರಿಸ್ಥಿತಿಯನ್ನು ಸಮರ್ಥ ಹಾಗೂ ಸೂಕ್ಷ್ಮವಾಗಿ ನಿಭಾಯಿಸಲು ಆಡಳಿತ ಸತರ್ಕ್ ಆಗಿದೆ. ಮುಂಜಾಗ್ರತಾ ಕ್ರಮವಾಗಿ ನಗರಾದ್ಯಂತ ವ್ಯಾಪಕ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ನಗರದ ಪೀರ್‌ಪಾಷಾ ಬಂಗ್ಲಾ ಪರಿಸರದಲ್ಲಿ ಮೂಲ ಅನುಭವ ಮಂಟಪ ಇತ್ತು ಎನ್ನುವದಕ್ಕೆ ಕೆಲವು ಪುರಾವೆಗಳಿವೆ. ಈ ಕುರಿತು ಸಮಗ್ರ ಸಂಶೋಧನೆ ಆಗಲಿ ಎಂದು ಒಂದು ಹೋರಾಟ ನಡೆಸುತ್ತಿರುವ ಮಠಾಧೀಶರ ಪ್ರಮುಖ ಬೇಡಿಕೆಯಾಗಿದೆ. ಇನ್ನೊಂದೆಡೆ ಪೀರ್‌ಪಾಷಾ ಬಂಗ್ಲಾದಲ್ಲಿ ಮೂಲ ಅನುಭವ ಮಂಟಪ ಇತ್ತದೆಂಬುದಕ್ಕೆ ಯಾವುದೇ ಪುರಾವೆ ಇಲ್ಲ. ಇದು ಅಲ್ಲವೇ ಅಲ್ಲ ಎನ್ನುವುದು ಇನ್ನೊಂದು ಕಡೆಯವರ ವಾದ. ಈ ಕಾರಣಕ್ಕಾಗಿ ಆಡಳಿತವು ಮುಂಜಾಗ್ರತಾ ತಯಾರಿ ನಡೆಸಿದೆ. ಶನಿವಾರ ನಗರದಲ್ಲಿ ಪೊಲೀಸ್ ಪಥ ಸಂಚಲನ ಸಹ ನಡೆಸಲಾಗಿದೆ.

ಮೂಲ ಅನುಭವ ಮಂಟಪ ಸಂಶೋಧನಾ ಹೋರಾಟ ಸಮಿತಿ, ವೀರಶೈವ ಲಿಂಗಾಯತ ಸಂಘಟನಾ ವೇದಿಕೆ, ಜಿಲ್ಲೆಯ ಮಠಾಧೀಶರ ಒಕ್ಕೂಟದ ಆಶ್ರಯದಲ್ಲಿ ಬಸವಾಭಿಮಾನಿಗಳ ಸಹಕಾರದೊಂದಿಗೆ ಕಾರ್ಯಕ್ರಮ ಜರುಗಲಿದೆ. ರಾಜ್ಯ ಹಾಗೂ ನೆರೆ ರಾಜ್ಯಗಳ ಮಠಾಧೀಶರು ಭಾಗವಹಿಸಲಿದ್ದಾರೆ ಎಂದು ತಡೋಳಾ-ಮೆಹಕರ್ ಸಂಸ್ಥಾನದ ಪೂಜ್ಯಶ್ರೀ ರಾಜೇಶ್ವರ ಶಿವಾಚಾರ್ಯರು ತಿಳಿಸಿದ್ದಾರೆ.



ವಿಜಯವಾಣಿ ಚಿತ್ರಗಳು

ಬಸವಕಲ್ಯಾಣದಲ್ಲಿ ನಡೆಯಲಿರುವ ಮಠಾಧೀಶರ ನಡೆ ಮೂಲ ಅನುಭವ ಮಂಟಪ ಕಡೆ ಕಾರ್ಯಕ್ರಮ ಹಿನ್ನೆಲೆಯಲ್ಲಿ ಗವಿಮಠದ ಪರಿಸರದಲ್ಲಿ ಸಿದ್ಧತೆ ಕುರಿತು ಮಠಾಧೀಶರು ಸಮಾಲೋಚನೆ ನಡೆಸಿದರು. ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀ ಜಯಶಾಂತಲಿಂಗ ಶಿವಾಚಾರ್ಯರು, ಶ್ರೀ ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯರು ಇತರರಿದ್ದರು.

ಏನೇನಿವೆ ಕಾರ್ಯಕ್ರಮ?

ನಗರದ ಬಸವೇಶ್ವರ ವೃತ್ತದಲ್ಲಿ ಗುರು ಬಸವಣ್ಣನವರ ಮೂರ್ತಿಗೆ ಮಠಾಧೀಶರಿಂದ ಮಾಲಾರ್ಪಣೆ ಮಾಡಿದ ನಂತರ ರಥ ಮೈದಾನ ಸಭಾ ಭವನದಲ್ಲಿ ಕಾರ್ಯಕ್ರಮ ನಡೆಯಲಿದೆ. ಮೊದಲಿಗೆ 770 ಅಮರ ಗಣಂಗಳಿಗೆ ಗೌರವ ಸಲ್ಲಿಸಿದ ನಂತರ ಚಿಂತನ-ಮಂಥನ ಜರುಗಲಿದೆ. ಮೂಲ ಅನುಭವ ಮಂಟಪ ಸಂಶೋಧನೆ ಮಾಡುವ ಕುರಿತು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಕ್ಕೆ ಈ ವೇಳೆ ಮನವಿ ಪತ್ರ ಸಲ್ಲಿಸಲಾಗುವುದು. ಪೀರ್ ಪಾಷಾ ಬಂಗ್ಲಾ ಕಡೆಗೆ ಹೋರಾಟಗಾರರು ಯಾರೂ ಹೋಗದಂತೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

> ರಾಜ್ಯ ಸರ್ಕಾರದಿಂದ ನಿರ್ಮಿಸುತ್ತಿರುವ ನೂತನ ಅನುಭವ ಮಂಟಪ ಕಾರ್ಯಕ್ಕೆ ನಮ್ಮ ಸ್ವಾಗತವಿದೆ. ಇದರ ಜತೆಯಲ್ಲೇ ಮೂಲ ಅನುಭವ ಮಂಟಪ ಸಂಶೋಧನೆಯಾಗಲಿ ಎಂಬುದೇ ಎಲ್ಲರ ಆಶಯವಾಗಿದೆ. ಐತಿಹಾಸಿಕ ಸತ್ಯಗಳು ಜನರ ಮುಂದೆ ಬರಬೇಕಾಗಿದೆ. ಮುಂದಿನ ಪೀಳಿಗೆಗೆ ಸ್ಪಷ್ಟ ಇತಿಹಾಸ ಗೊತ್ತಾಗಬೇಕಿದೆ.
>
> | ಪೂಜ್ಯಶ್ರೀ ರಾಜೇಶ್ವರ ಶಿವಾಚಾರ್ಯರು
> ತಡೋಳಾ-ಮೆಹಕರ್ ಸಂಸ್ಥಾನ



ಬಸವಕಲ್ಯಾಣದಲ್ಲಿ ಶನಿವಾರ ಪೊಲೀಸ್ ಪಥ ಸಂಚಲನ ನಡೆಯಿತು. ಹೆಚ್ಚುವರಿ ಎಸ್‌ಪಿ ಮಹೇಶ ಮೇಘಣ್ಣನವರ, ಡಿವೈಎಸ್‌ಪಿ ಸೋಮಲಿಂಗ ಕುಂಬಾರ, ಎಸಿಪಿ ಸುನೀಲ ಕೊಡ್ಲಿ, ಸಿಪಿಐಗಳಾದ ಗೋಪಾಲ ನಾಯಕ್, ರಘುವೀರಸಿಂಗ್ ಠಾಕೂರ್, ಅಮೂಲ ಕಾಳೆ, ಈರಣ್ಣ ದೊಡ್ಡಮನಿ, ಕಪಿಲದೇವ್, ಶರಣು ಕೊಡ್ಲಾ ಇತರರಿದ್ದರು.

ಶರಣರ ನಾಡಿನಲ್ಲಿ ಶಾಂತಿ ಕಾಪಾಡಿ

ನಗರದಲ್ಲಿ ಯಾವುದೇ ಭೇದಭಾವ ಇಲ್ಲದೆ ಎಲ್ಲ ಸಮಾಜದವರು ಸಹೋದರರಂತೆ ಬಾಳುತ್ತಿದ್ದು, ಇಲ್ಲಿ ಶಾಂತಿ ಕಾಪಾಡಬೇಕೆಂದು ಸರ್ಕಾರಕ್ಕೆ ಜೆಡಿಎಸ್ ಒತ್ತಾಯಿಸಿದೆ. ಶುಕ್ರವಾರ ಪಕ್ಷದ ಪ್ರಮುಖರ ನಿಯೋಗ ತಹಸೀಲ್ ಕಚೇರಿಗೆ ತೆರಳಿ ಮುಖ್ಯಮಂತ್ರಿಗೆ ಬರೆದ ಮನವಿ ಪತ್ರ ಉಪ ತಹಸೀಲ್ದಾರ್ ಯಾದೇಶ ಅವರಿಗೆ ಸಲ್ಲಿಸಿದೆ. ಭಾನುವಾರ ಇಲ್ಲಿಗೆ ಆಗಮಿಸುತ್ತಿರುವ ಮಠಾಧೀಶರ ಮನವೊಲಿಸಿ ಶಾಂತಿ ಕಾಪಾಡಲು ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ಕೋರಿದ್ದಾರೆ. ನಗರದ ಪೀರ್‌ಪಾಷಾ ಬಂಗ್ಲಾ ಹಾಗೂ ಅನುಭವ ಮಂಟಪ ಐತಿಹಾಸಿಕ ಸ್ಥಳಗಳಾಗಿವೆ. ಶಾಂತಿಯ ವಾತಾವರಣ ಇಲ್ಲಿದೆ.ಎಲ್ಲ ಸಮುದಾಯದ ಜನ ಒಂದೇ ಎಂಬ ಭಾವನೆಯಿಂದ ಜೀವಿಸುತ್ತಿದ್ದಾರೆ. ನಗರಕ್ಕೆ ಆಗಮಿಸುವ ಮಠಾಧೀಶರು ಸಮಾಜ ಒಡೆಯುವ ಕೆಲಸ ಮಾಡುತ್ತಿದ್ದರಿಂದ ಅವರ ಮನವೊಲಿಸುವ ಅಗತ್ಯವಿದೆ ಎಂದು ಗಮನ ಸೆಳೆದಿದ್ದಾರೆ. ರಾಜ್ಯ ಸರ್ಕಾರ ನೂತನ ಅನುಭವ ಮಂಟಪ ನಿರ್ಮಿಸಲು ಮುಂದಾಗಿದ್ದು, ಈಗಾಗಲೇ ಕಟ್ಟಡದ ಕಾಮಗಾರಿ ಆರಂಭವಾಗಿದೆ. ಇದು ಬಸವಾಭಿಮಾನಿಗಳಿಗೆ ಸಂತಸ ತಂದಿದೆ. ಈ ಹಿಂದೆ ಬಸವಕಲ್ಯಾಣದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಜಾಮದಾರ್ ಕಾರ್ಯ ನಿರ್ವಹಿಸಿದ್ದು, ಪೀರ್‌ಪಾಷಾ ಬಂಗ್ಲಾದಲ್ಲಿ ಮೂಲ ಅನುಭವ ಮಂಟಪದ ಪುರಾವೆಗಳಿಲ್ಲ ಎಂದು ಹೇಳಿದ್ದಾರೆ. ಅವರ ಹೇಳಿಕೆ ಸಹ ಮಠಾಧೀಶರು ಪರಿಗಣಿಸುತ್ತಿಲ್ಲ ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ. ಮುಖಂಡ ಸೈಯದ್ ಯಸ್ರಬ್ ಅಲಿ ಖಾದ್ರಿ, ಅರ್ಷದ್ ಮಹಾಗಾವಿ, ಬಸವಣಪ್ಪ ನೆಲ್ಲಗಿ, ಸಂಜುಕುಮಾರ ಸಂಗನೂರೆ, ಧನರಾಜ ರಾಜೋಳೆ, ಪ್ರೀತಮ್ ಮದಲವಾಡ, ರಾಹುಲ್ ಸಿಂಧೆ, ಗೌತಮ ಕಾಂಬಳೆ, ಮಾರುತಿ ಪುಲೆ, ಗೌಸ್, ನಸೀರ್ ಪಟೇಲ್ ಇತರರಿದ್ದರು.

ಎಲ್ಲ ಕಡೆಗಳಲ್ಲಿ ಖಾಕಿ ಕಣ್ಗಾವಲು

ಕಾರ್ಯಕ್ರಮದ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ನಗರದಲ್ಲಿ ವ್ಯಾಪಕ ಪೊಲೀಸ್ ಬಂದೋಬಸ್ತ್ ಮಾಡಲಾಗುತ್ತಿದೆ. ಆಯ್ದ ಸ್ಥಳ ಹಾಗೂ ಆಯಕಟ್ಟಿನ ಜಾಗಗಳಲ್ಲಿ ಹೆಚ್ಚಿನ ಬಲ ನಿಯೋಜಿಸಲಾಗುತ್ತಿದೆ. ಎಸ್‌ಪಿ ಕಿಶೋರಬಾಬು, ಹೆಚ್ಚುವರಿ ಎಸ್‌ಪಿ ಮಹೇಶ ಮೇಘಣ್ಣನವರ, ಡಿವೈಎಸ್ಪಿ ಸೋಮಲಿಂಗ ಕುಂಬಾರ ನೇತೃತ್ವದಲ್ಲಿ ಜಿಲ್ಲೆಯ ವಿವಿಧ ಠಾಣೆ ಇನ್‌ಸ್ಪೆಕ್ಟರ್, ಪಿಎಸ್‌ಐ ಸೇರಿ ಒಂದು ಸಾವಿರಕ್ಕೂ ಹೆಚ್ಚು ಸಿಬ್ಬಂದಿಗಳನ್ನು ಬಂದೋಬಸ್ತ್‌ನಲ್ಲಿರಲಿದ್ದಾರೆ. ಅಲ್ಲಲ್ಲಿ ತೀವ್ರ ನಿಗಾ ಇರಿಸಲು ಡ್ರೋಣ್ ಕ್ಯಾಮರಾ ಸಹ ಬಳಸಲಾಗುತ್ತಿದೆ. ಈ ಮಧ್ಯೆ ಶನಿವಾರ ನಗರದ ರಥ ಮೈದಾನದಿಂದ ಬನಶಂಕರಿ ಗಲ್ಲಿ ಕ್ರಾಸ್, ಪಾಶಾಪುರ, ಧರ್ಮಪ್ರಕಾಶ ಗಲ್ಲಿ, ಕಾಳೆ ಗಲ್ಲಿ, ಗಾಂಧಿ ವೃತ್ತದವರೆಗೆ ಮುಖ್ಯ ರಸ್ತೆ ಸೇರಿ ಇತರ ರಸ್ತೆಗಳಲ್ಲಿ ಪೊಲೀಸ್ ಪಥ ಸಂಚಲನ ನಡೆಯಿತು. ಡಿಸಿ, ಎಸ್ಪಿ ಭೇಟಿ: ಶನಿವಾರ ನಗರಕ್ಕೆ ಡಿಸಿ ಗೋವಿಂದರಡ್ಡಿ, ಎಸ್ಪಿ ಕಿಶೋರಬಾಬು ಭೇಟಿ ನೀಡಿ ಕಾನೂನು ಸುವ್ಯವಸ್ಥೆಗಾಗಿ ಕೈಗೊಂಡ ಕ್ರಮಗಳನ್ನು ಪರಿಶೀಲಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಭಾನುವಾರ 12 ಜೂನ್ 2022
12 JUNE 2022

Scanned with OKEN Scanner

ಯುಗಮಾನೋತ್ಸವ ಏ.23ಕ್ಕೆ

ಸ್ವಾಗತ ಸಮಿತಿ ಅಧ್ಯಕ್ಷರಾಗಿ ಶಾಸಕ ಶರಣು ಸಲಗರ ಆಯ್ಕೆ



ವಿಜಯವಾಣಿ ಚಿತ್ರ

ಬಸವಕಲ್ಯಾಣ ಗವಿ ಮಠದಲ್ಲಿ ಭಾನುವಾರ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ನಿಮಿತ್ತ ನಡೆದ ಪೂರ್ವಭಾವಿ ಸಭೆಯಲ್ಲಿ ಶಾಸಕ ಶರಣು ಸಲಗರ ಮಾತನಾಡಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು, ಶರಣಪ್ಪ ಬಿರಾದಾರ, ಆನಂದ ದೇವಪ್ಪ, ದೀಪಕ ಮಾಲಗಾರ, ಅರ್ಜುನ ಕನಕ ಇದ್ದರು.

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಶ್ರೀ ರಂಭಾಪುರಿ ಪೀಠದ ಜಗದ್ಗುರು ಶ್ರೀ ಡಾ.ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ ಸಾನ್ನಿಧ್ಯದಲ್ಲಿ ಹಾಗೂ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಇಲ್ಲಿಯ ಗವಿಮಠದಲ್ಲಿ ಏ.23ರಂದು ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಅರ್ಥಪೂರ್ಣವಾಗಿ ಆಚರಿಸಲು ತೀರ್ಮಾನಿಸಲಾಯಿತು.

ಇಲ್ಲಿಯ ಗವಿ ಮಠದಲ್ಲಿ ಭಾನುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದ ಹಲವರು ಸಲಹೆ, ಸೂಚನೆಗಳನ್ನು ನೀಡಿದರು. ಶಾಸಕ ಶರಣು ಸಲಗರ ಅವರನ್ನು ಸ್ವಾಗತ ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು.

ಶಾಸಕ ಸಲಗರ ಮಾತನಾಡಿ, ನಾನು ಈ ಗವಿ ಮಠದ ಹಾಗೂ ರಂಭಾಪುರಿ ಪೀಠದ ಪರಮ ಭಕ್ತ. ವೈಭವದ ಯುಗಮಾನೋತ್ಸವ ಆಚರಣೆಗೆ ತನು, ಮನ, ಧನದಿಂದ ಸೇವೆ ಮಾಡಲು ಸದಾ ಸಿದ್ಧ ಎಂದು ತಿಳಿಸಿದರು. ಅಲ್ಲದೆ ರಂಭಾಪುರಿ ಜಗದ್ಗುರು ಮಹಾ ಸನ್ನಿಧಿಯವರು ಬಸವಕಲ್ಯಾಣಕ್ಕೆ ಆಗಮಿಸುತ್ತಿರುವುದು ನಮ್ಮೆಲ್ಲರ ಭಾಗ್ಯ. ಹೀಗಾಗಿ ನಾವೆಲ್ಲರೂ ಸೇರಿ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಸಮಾರಂಭ ಏರ್ಪಡಿಸೋಣ ಎಂದು ಹೇಳಿದರು.

ಶ್ರೀ ಡಾ.ಅಭಿನವ ಘನಲಿಂಗ ಶಿವಾಚಾರ್ಯರು ಮಾತನಾಡಿ, ಜಯಂತಿ ಯುಗಮಾನೋತ್ಸವದ ಸಂಕಲ್ಪ ಹಾಗೂ ಸ್ವರೂಪ ತಿಳಿಸಿದರು. ಭಕ್ತರ ಜತೆ ಎಲ್ಲ ಪಕ್ಷಗಳ ಮುಖಂಡರು ಭಕ್ತಿ ಸೇವೆಗೆ ಮುಂದಾಗಿದ್ದು ಖುಷಿ ತಂದಿದೆ ಎಂದರು. ಎಐಸಿಸಿ ಸದಸ್ಯ ಆನಂದ ದೇವಪ್ಪ, ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ದೀಪಕ ಮಾಲಗರ, ಅರ್ಜುನ ಕನಕ ಮಾತನಾಡಿ, ಕಾರ್ಯಕ್ರಮಕ್ಕೆ ತನು, ಮನ, ಧನದಿಂದ ಸಹಾಯ ನೀಡುವುದಾಗಿ ತಿಳಿಸಿದರು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಬಾಬುರಾವ ಉಳ್ಳಿ, ಶಿವಕುಮಾರ ಮಠ, ಪ್ರೊ.ಸೂರ್ಯಕಾಂತ ಶೀಲವಂತ, ರಮೇಶ ರಾಜೋಳೆ, ಮರೆಪ್ಪ ಪೊಲೀಸ್ ಪಾಟೀಲ್, ಲಿಂಗರಾಜ ಬಿರಾದಾರ, ಬಸವರಾಜ ಮಾಲಿಪಾಟೀಲ್, ಸೂರ್ಯಕಾಂತ ಪಂಚಾಳ, ರೇವಣಸಿದ್ದಯ್ಯ ವಸ್ತ್ರದ, ಸಂಜೀವ ಜಾಧವ್, ಶಾಂತವೀರ ಸ್ವಾಮಿ, ರಾಕೇಶ ಪುರವಂತ, ಕಾರ್ತಿಕ ಬಿರಾದಾರ, ಸಂದೀಪ ಪಾಟೀಲ್, ದೇವೇಂದ್ರ, ಗೋವಿಂದರೆಡ್ಡಿ, ವಿಜಯಕುಮಾರ ಪಂಚಾಳ, ಪ್ರದೀಪ ಬಿ, ಅನೀಲಕುಮಾರ ಡೊಂಗೆ, ಶಿವಕುಮಾರ ಬಚ್ಚಣಿ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಗುರುವಾರ 24 ಮಾರ್ಚ್ 2022
24 MARCH 2022

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 27 ಆಗಸ್ಟ್ 2022
27 AUGUST 2022

ರುದ್ರಮುನಿಶ್ರೀ ನುಡಿ | ಕಲ್ಯಾಣದ ಸಂಸ್ಥಾನ ಗವಿಮಠದಲ್ಲಿ ಉಪನ್ಯಾಸ ಮಾಲೆ

ಭಗವಂತ ಭಕ್ತಿಗೆ ಒಲಿಯುವ ಭಾವಲಿಂಗ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಭಗವಂತನು ಭಕ್ತನ ಭಕ್ತಿ ಭಾವಕ್ಕೆ ಪ್ರಸನ್ನನಾಗುವ ಭಾವಲಿಂಗ ಎಂದು ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣ ಮಾಸದ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕಾ ಘಟಕದ ಸಹಯೋಗದಲ್ಲಿ ಗುರುವಾರ ಸಂಜೆ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಭಾವೇನ ಗೃಹತೇ ದೇವೋ ಭಗವಾನ್ ಪರಮ: ಶಿವ: ಎಂಬ ಯುಕ್ತಿಯಂತೆ ಆನಂದರೂಪನೂ ಮತ್ತು ಜ್ಞಾನರೂಪನೂ ಆದ ಆ ಭಾವಲಿಂಗ ರೂಪವಾದ ಪರಶಿವನು ಭಕ್ತರು ಮಾಡಿದ ಭಾವನಾಮಯ ಉಪಚಾರಗಳ ಪೂಜೆಯಿಂದ ಪ್ರಸನ್ನನಾಗುತ್ತಾನೆ. ಅದರಂತೆ ಇಷ್ಟಲಿಂಗವು ದಿನನಿತ್ಯ ಪೂಜಿಸಿದರೆ ಪ್ರಸನ್ನವಾಗಿರಬಹುದು ಎಂದರು.

ಶ್ರೀರಾಮಸೇನೆ ತಾಲೂಕು ಅಧ್ಯಕ್ಷರವಿನಾವದಗಿಕರ್ ಮಾತನಾಡಿ, ಗವಿಮಠದ ಪೂಜ್ಯರು ಎಲ್ಲರನ್ನೂ ಸಮನಾಗಿ ಕಾಣುತ್ತಾರೆ. ಯುವ ಹೋರಾಟಗಾರರಿಗೆ ಸದಾ ಮಾರ್ಗದರ್ಶನ ಮಾಡುತ್ತಿರುವುದು ಸಂತಸದ ವಿಷಯ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ರೇವಣಸಿದ್ದಯ್ಯ ಮಠಪತಿ ಮಾತನಾಡಿದರು. ಜುಬೇರ್ ಅಹಮ್ಮದ್ ಪಾಶಾ, ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ್, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ಸ್ವಾಮಿ, ಮಲ್ಲಯ್ಯ ಸ್ವಾಮಿ, ಲಿಂಗರಾಜ ಬಿರಾದಾರ್ ಇತರರಿದ್ದರು. ಶ್ರೀನಿವಾಸ ಬಿರಾದಾರ್ ಸ್ವಾಗತಿಸಿದರು. ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ನಿರೂಪಣೆ ಮಾಡಿದರು. ಕಲಾವಿದರಾದ ನಾಗಣ್ಣ ಭೂತೆಟ್ಟಿ ಹಾಗೂ ಮಲ್ಲಿಕಾರ್ಜುನ ಶೀಲವಂತ ಸಂಗೀತ ಸೇವೆ ಮಾಡಿದರು.

ಮಂಠಾಳದ ಅಕ್ಕಮಹಾದೇವಿ ಮಹಿಳಾ ಭಜನಾ ಮಂಡಳಿಯವರಿಂದ ಭಜನೆ ಸೇವೆ ಜರುಗಿತು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ಗವಿಮಠದಲ್ಲಿ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಶ್ರೀರಾಮ ಸೇನೆ ತಾಲೂಕು ಅಧ್ಯಕ್ಷ ರವಿ ನಾವದಗಿಕರ್ ಅವರನ್ನು ಸನ್ಮಾನಿಸಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಜುಬೇರ್ ಅಹಮ್ಮದ್ ಪಾಶಾ, ಬಸವಂತಪ್ಪ ಲವಾರೆ, ರೇವಣಸಿದ್ದಯ್ಯ ಮಠಪತಿ ಇದ್ದರು.

Scanned with OKEN Scanner

ನಂ. 1 ಕನ್ನಡದ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 30 ಜುಲೈ 2022
30 JULY 2022

ಅಭಿನವ ಶ್ರೀಗಳ ಅಭಿಮತ | ಗವಿಮಠದಲ್ಲಿ ಉಪನ್ಯಾಸ ಮಾಲೆಗೆ ಚಾಲನೆ

ಶ್ರಾವಣ ಮಾಸ ಅತ್ಯಂತ ಪವಿತ್ರ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಶ್ರಾವಣ ಅತ್ಯಂತ ಪವಿತ್ರ ಹಾಗೂ ಶ್ರೇಷ್ಠ ಮಾಸ ಎಂದು ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಶ್ರಾವಣ ಮಾಸದ ನಿಮಿತ್ತ ಗವಿಮಠದಲ್ಲಿ ಗುರುವಾರ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಪುರಾಣ, ಪ್ರವಚನ, ಆಶೀರ್ವಚನ ಕೇಳುವುದೇ ಶ್ರಾವಣ ಮಾಸ. ಜೀವನವನ್ನು ಪರಿಶುದ್ಧ ಮಾಡಿಕೊಳ್ಳುವ ಮಾಸವೇ ಶ್ರಾವಣ. ಎಲ್ಲರೂ ಪೂಜೆ, ಧ್ಯಾನ, ಜಪ, ತಪ, ಅನುಷ್ಠಾನ ಮಾಡುತ್ತ ಭಗವಂತನನ್ನು ಆರಾಧಿಸಿ ಆತನ ಕೃಪೆ ಪಡೆಯಬೇಕು. ಭಗವಂತನ, ಗುರುವಿನ ಮಹಿಮೆಯನ್ನು ಶ್ರವಣ ಮಾಡಬೇಕು. ಇದರಿಂದ ಜೀನದಲ್ಲಿ ಬರುವ ಕಷ್ಟಗಳು ನಿವಾರಣಿಯಾಗುತ್ತವೆ ಎಂದರು.

ಉದ್ಘಾಟನೆ ನೆರವೇರಿಸಿದ ಭೂ ಸೇನೆಯ ನಿವೃತ್ತ ಕ್ಯಾಪ್ಟನ್ ಬಾಬು ಗೋರಟಿ ಮಾತನಾಡಿ, ಸಂಸ್ಥಾನ ಗವಿಮಠದಲ್ಲಿ ಪೂಜ್ಯರು ಸನ್ಮಾನಿಸಿದ್ದು ಸಂತೋಷ ತಂದಿದೆ. ಇದು ನನ್ನ ದೇಶ ಸೇವೆಗೆ ಸಂದ ಗೌರವ. ಕಾರಣ ಸೈನ್ಯದಲ್ಲಿ ದೇಶ ರಕ್ಷಣೆಗಾಗಿ ಬಹಳಷ್ಟು ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಪ್ರಾಣವನ್ನು ಲೆಕ್ಕಿಸದೆ ದೇಶ ರಕ್ಷಣೆಗಾಗಿ ಶತ್ರುಗಳ ವಿರುದ್ಧ ಹೋರಾಡಬೇಕಾಗುತ್ತದೆ ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡರು.


ವಿಜಯವಾಣಿ

ಬಸವಕಲ್ಯಾಣ ಗವಿಮಠದಲ್ಲಿ ಗುರುವಾರ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆಯನ್ನು ನಿವೃತ್ತ ಕ್ಯಾಪ್ಟನ್ ಬಾಬು ಗೋರಟಿ ಉದ್ಘಾಟಿಸಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ಪ್ರೊ.ರುದ್ರೇಶ್ವರ ಸ್ವಾಮಿ, ಸವಿತಾ ಸ್ವಾಮಿ ಇತರರಿದ್ದರು.

ಆಧ್ಯಕ್ಷತೆ ವಹಿಸಿದ್ದ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ತಾಲೂಕು ಆಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿದರು. ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ಸ್ವಾಮಿ, ಬಾಬುರಾವ ಉಳ್ಳಿ, ಮಲ್ಲಿಕಾರ್ಜುನ ಅಲಗೂಡೆ, ಪ್ರೊ. ಬಸವರಾಜ ಸೇರಿ, ಸುಭದ್ರಾಬಾಯಿ ಸ್ವಾಮಿ, ಪ್ರೊ. ಲೀಲಾ ಸನಕಳ್ಳಿ, ಶೀಲಾದೇವಿ ಲವಾರೆ, ಮಂಗಲಾ ಸ್ವಾಮಿ, ರೇಣುಕಾ ಸ್ವಾಮಿ, ಕಲಾವತಿ ಸ್ವಾಮಿ, ಮಲ್ಲಮ್ಮ ಅಕ್ಕನಾಗಮ್ಮನಗವಿ, ಲೀಲಾವತಿ, ಪುಷ್ಪಾ ಮಲ್ಲಾಡಿ, ಶಾಂತಾ ಕಾಡಾದಿ ಇದ್ದರು.

ಪ್ರೊ.ಸರ್ಯಕಾಂತ ಶೀಲವಂತ ಪ್ರಾಸ್ತಾವಿಕ ಮಾತನಾಡಿದರು. ಪ್ರೊ.ರುದ್ರೇಶ್ವರ ಸ್ವಾಮಿ ನಿರೂಪಣೆ ಮಾಡಿದರು. ವೀರಣ್ಣ ಶೀಲವಂತ ಪ್ರಾರ್ಥನಾ ಗೀತೆ ಹಾಡಿದರು. ಅಕ್ಕನಾಗಮ್ಮನ ಗವಿ ಮಹಿಳಾ ಭಜನಾ ಬಳಗದವರು ಮಂಗಳಾರತಿ ಗೀತೆಗಳನ್ನು ಪ್ರಸ್ತುತಪಡಿಸಿದರು.

ಅಧ್ಯಾತ್ಮಕ್ಕಿದೆ ಭವಸಾಗರ ದಾಟಿಸುವ ಶಕ್ತಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಈ ಮೋಹ ಕತ್ತಲೆಯಿಂದಾಗಿಯೇ ಮನುಷ್ಯನಿಗೆ ಭವರೋಗವು ಅಂಟಿಕೊಂಡಿದೆ. ಆಧ್ಯಾತ್ಮಿಕ ಜ್ಞಾನದಿಂದ ಮಾತ್ರ ಭವರೋಗ ನಿವಾರಣೆಯಾಗಿ ಭವಸಾಗರ ದಾಟಿಸುವ ಶಕ್ತಿ ಆಧ್ಯಾತ್ಮಕ್ಕಿದೆ ಎಂದು ನಗರದ ಸಂಸ್ಥಾನ ಗವಿಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಇತಿಹಾಸ ಪ್ರಸಿದ್ಧ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ಸಹಯೋಗದಲ್ಲಿ ನಡೆಯುತ್ತಿರುವ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಮಾತನಾಡಿದ, ಭಕ್ತರಿಗೆ ಉಪದೇಶ ದಯ ಪಾಲಿಸುತ್ತ ಜಗದ್ಗುರು ರೇಣುಕಾಚರ್ಯರು ಜಗತ್ತಿಗೆ ತಮ್ಮ ಸಿದ್ಧಾಂತ ಶಿಖಾಮಣಿ ಮೂಲಕ ಆಧ್ಯಾತ್ಮದಲ್ಲಿ ಭವರೋಗ ನಿವಾರಿಸುವ ಶಕ್ತಿ ಇದೆ. ಆಧ್ಯಾತ್ಮ ಎಂಬುದು ಅಂಧಕಾರ ತೊಲಗಿಸುವ ಜ್ಞಾನದ ಬೆಳಕು ಎಂದು ಬೋಧಿಸಿದ್ದಾರೆ ಎಂದರು.

ಬಸವಣ್ಣನವರು ಕತ್ತಲು ಸುತ್ತಲೂ ಆವರಿಸಿ ಆದರ ಮುಂದೆ ದೀಪ ಚಿಕ್ಕದಾಗಿದ್ದರೂ ಕತ್ತಲು ಘನ ಅನ್ನಬಹುದೇ? ಚಿಕ್ಕ ದೀಪದ ಬೆಳಕು ದೊಡ್ಡ ಕತ್ತಲನ್ನು ಓಡಿಸುವಂತೆ ಜ್ಞಾನ ದೊಡ್ಡದು ಎಂದು ತಮ್ಮ ವಚನದ ಮೂಲಕ ಜ್ಞಾನದ ಮಹತ್ವ ತಿಳಿಸಿದ್ದಾರೆ. ಆದ್ದರಿಂದ ಈ ಭವಸಾಗರ ದಾಟಿಸುವ ಶಕ್ತಿ ಆಧ್ಯಾತ್ಮದಲ್ಲಿದೆ. ಅಲ್ಲದೇ 84 ಲಕ್ಷ ಜೀವರಾಶಿಗಳಲ್ಲಿ ಮನುಷ್ಯ ಜನ್ಮ ಅತ್ಯಂತ ಶ್ರೇಷ್ಠ. ಹೀಗಾಗಿ ಶ್ರಾವಣ ಮಾಸದಲ್ಲಿ ಆಧ್ಯಾತ್ಮ ಪ್ರವಚನ ಶ್ರವಣ ಮಾಡುವುದರ ಮೂಲಕ ಮನುಷ್ಯ ಜೀವನ ಸಾರ್ಥಕ ಮಾಡಿ ಕೊಳ್ಳಬೇಕು ಎಂದು ಉಪದೇಶಿಸಿದರು.ಶಿಕ್ಷಕ ಮಲ್ಲಿಕ್ಲರ್ಜುನ ಅಲಗೂಡೆ ಮಾತನಾಡಿ, ಹರ ಮುನಿದರೆ ಗುರು ಕಾಯುವರು ಗುರು ಮುನಿದರೆ ಮತ್ತಾರು ಕಾಯುವುದಿಲ್ಲ, ಮಾನವ ಜನ್ಮ ದೊಡ್ಡದು ಆದನ್ನು ಹಾಳು ಮಾಡಿಕೊಳ್ಳಬಾರದು. ಗುರುವಿನ ಋಣ, ತಂದೆ -ತಾಯಿ ಋಣ ಸಮಾಜದ ಋಣ ತೀರಿಸಬೇಕು. ಗವಿಮಠದ ಗುರುವಿನ ಕೃಪೆ ಸದಾ ನಮ್ಮೆಲ್ಲರ ಮೇಲೆ ಇರಲಿ ಎಂದು ಪ್ರಾರ್ಥಿಸಿದರು. ಮಲ್ಲಯ್ಯ ಸ್ವಾಮಿ ಧನ್ನೂರ ಗುರುವಿನ ಮಹಿಮೆ ಕುರಿತು ಮಾತನಾಡಿದರು. ಯುವ ಮುಖಂಡ ಕಾರ್ತಿಕ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಶಕುಂತಲಾ ಗುರು ಲಿಂಗಯ್ಯ ಪ್ರಾರ್ಥನಾ ಗೀತೆ ಹಾಡಿದರು.

ಮಲ್ಲಿಕಾರ್ಜುನ ನಂದಿ, ವೀರಣ್ಣ ಶೀಲವಂತ, ಮಂಜಾಳದ ಶಿವಕುಮಾರ ಶಟಕಾರ, ಮಹಾದೇವ ಪೊಲೀಸ್ ಪಾಟೀಲ್, ಶಾಮ ಮಹಾರಾಜ, ಚಂದ್ರ ಕಾಂತ ಜುಂಜಾ, ಧನರಾಜ ಸಾತಭಾಯಿ, ಪ್ರೊ.ರುದ್ರೇಶ್ವರ ಗರ್ಟಾ, ಚನ್ನವೀರ ಬಿರಾದಾರ, ಅಣವೀರ ಬಿರಾದಾರ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ಸ್ವಾಮಿ, ಸುಭದ್ರಾಬಾಯಿ ವೀರಯ್ಯ, ಶೀಲಾದೇವಿ ಲವಾರೆ, ಸುನಂದಾ ನಂದಿ, ನಿವೃತ್ತ ಶಿಕ್ಷಕಿ ಸರಸ್ವತಿ ಬೆಂಬಳಿ, ರೇಣುಕಾ ಸ್ವಾಮಿ, ಪೂರ್ಣಿಮಾ ರುದ್ರೇಶ್ವರ ಇದ್ದರು.

ಬಸವಕಲ್ಯಾಣದ ಗವಿಮಠದಲ್ಲಿ ವಿಶೇಷ ಉಪನ್ಯಾಸ



ಬಸವಕಲ್ಯಾಣದ ಗವಿಮಠದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉಪನ್ಯಾಸ ನೀಡಿದರು.

ನಮ್ಮ ಬೀದರ್ ಬುಧವಾರ,3 ಆಗಸ್ಟ್ 2022

Scanned with OKEN Scanner

ವಿಜಯವಾಣಿ ಚಿತ್ರ

ಸಮ್ಮೇಳನಾಧ್ಯಕ್ಷ ಡಾ.ಜೈಶೇನ್‌ಪ್ರಸಾದ ಆಶಯ | ಸಸ್ತಾಪುರದಲ್ಲಿ ತಾಲೂಕು ಪ್ರಥಮ ಸಮ್ಮೇಳನ

ದಲಿತ ಸಾಹಿತ್ಯ ಜನಮುಖಿಯಾಗಲಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮಾಧ್ಯ, ಸಂಪ್ರದಾಯ ಮೀರಿ ನಿಂತ ಲೇಖಕರಿಂದ ಮಾತ್ರ ದಲಿತ ಸಾಹಿತ್ಯ ಜನಮುಖಿಯಾಗಲಿದೆ ಎಂದು ತಾಲೂಕು ದಲಿತ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ.ಜೈಶೇನ್‌ಪ್ರಸಾದ ಹೇಳಿದರು.

ಶ್ರೀ ಯಲ್ಲಾಲಿಂಗೇಶ್ವರರ 37ನೇ ಪುಣ್ಯಸ್ಮರಣೆ ಮತ್ತು ಶರಣೆ ಮಹಾದೇವಿ ತಾಯಿ 58ನೇ ಜನ್ಮ ದಿನೋತ್ಸವ ನಿಮಿತ್ತ ಸಸ್ತಾಪುರದ ಶ್ರೀ ಯಲ್ಲಾಲಿಂಗೇಶ್ವರ ಮಠ ಪರಿಸರದಲ್ಲಿ ದಲಿತ ಸಾಹಿತ್ಯ ಪರಿಷತ್ ಹಾಗೂ ಶ್ರೀ ಯಲ್ಲಾಲಿಂಗ ಮಠ ಟ್ರಸ್ಟ್ ಸಹಯೋಗದಡಿ ಮಂಗಳವಾರ ಆಯೋಜಿಸಿದ್ದ ತಾಲೂಕು ಪ್ರಥಮ ದಲಿತ ಸಾಹಿತ್ಯ ಸಮ್ಮೇಳನ ಮತ್ತು ಜಿಲ್ಲಾ ಬೆಳ್ಳಿ ಸಂಭ್ರಮದಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದ ಅವರು, ಈ ಭಾಗದ ಚಳವಳಿ, ಸಾಹಿತ್ಯ, ವಚನ ಸಾಹಿತ್ಯ, ದಲಿತ ಸಾಹಿತ್ಯ, ಸಾಹಿತಿ, ಲೇಖಕರನ್ನು ಸ್ಮರಿಸಿದರು.

ತಾಲೂಕಿನ ದಲಿತ ಸಾಹಿತ್ಯ ಹಾಗೂ ಚಳವಳಿಗೆ ಬುದ್ಧ, ಬಸವ, ಅಂಬೇಡ್ಕರ್, ಬಿ.ಶ್ಯಾಮಸುಂದರ, ತಾತ್ಯಾರಾವ ಕಾಂಬಳೆ ಪ್ರೇರಣೆ. ಈ ಭಾಗ ಮರಾಠಿ, ಹಿಂದಿ, ಉರ್ದು ಪ್ರಭಾವದಲ್ಲೂ ಕನ್ನಡ ಉಳಿಸುವ ಕೆಲಸ ದಲಿತ ಅನಕ್ಷರಸ್ಥರು ಮಾಡಿದ ಇತಿಹಾಸ ಮರೆಮಾಚಲಾಗಿದೆ. ಅದನ್ನು ಬೆಳಕಿಗೆ ತರುವ ಪ್ರಯತ್ನ ಲೇಖಕರು ಮಾಡಬೇಕೆಂದು ಸಲಹೆ ನೀಡಿದರು.

ಮೊದಲು ಮೇಲ್ವರ್ಗ-ಕೆಳವರ್ಗದ ನಡುವೆ, ಅನಂತರ ಕೆಳವರ್ಗ ಹಿಂದುಳಿದವರ ಮಧ್ಯೆ, ಈಗ ದಲಿತ ದಲಿತರಲ್ಲಿ ಸಂಘರ್ಷವಿದೆ. ಇದು ನಿಲ್ಲಬೇಕಾದರೆ ವೈಮನಸ್ಸು, ಸ್ವಪ್ರತಿಷ್ಠೆ ಬಿಟ್ಟು ಸಮಾನವಾಗಿ ಬಂದಾಗ ನಮ್ಮ ಪ್ರಗತಿ ಸಾಧ್ಯ. ಇರದಿದ್ದರೆ ನಮ್ಮ ಮೇಲೆ ಸವಾರಿ ನಡೆಯುವುದಂತೂ ಗ್ಯಾರಂಟಿ ಎಂದು ಎಚ್ಚರಿಸಿದರು.

ಸಮ್ಮೇಳನ ಉದ್ಘಾಟಿಸಿದ ಬೆಂಗಳೂರಿನ ಚಿಂತಕ ಆರ್. ಜಿ. ಹಳ್ಳಿ ನಾಗರಾಜ ಮಾತನಾಡಿ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಪ್ರಯತ್ನಗಳು ನಡೆಯುತ್ತಿವೆ ಎಂದು ಕಳವಳ ವ್ಯಕ್ತಪಡಿಸಿ, ವೈಚಾರಿಕ ಪ್ರಜ್ಞೆ ಬೆಳೆಸಲು ಇಂತಹ ಸಮ್ಮೇಳನಗಳು ಪೂರಕವಾಗಿವೆ. ವೈಚಾರಿಕ ಪ್ರಜ್ಞೆ ಬೆಳೆಸುವಂತಹ ಸಾಹಿತ್ಯ ಓದಿದಾಗ ಜನಪರ, ಸಮಾಜಮುಖಿ ಸಾಹಿತ್ಯ ಹೊರಬರಲು ಸಾಧ್ಯ. ಜನಪರ ಸಾಹಿತ್ಯ ಬೆಂಬಲಿಸುವ ಕೆಲಸ ನಡೆಯಬೇಕು ಎಂದು ಅಭಿಪ್ರಾಯಪಟ್ಟರು.



ವಿಜಯವಾಣಿ ಚಿತ್ರ

ಸಸ್ತಾಪುರದಲ್ಲಿ ಮಂಗಳವಾರ ಆಯೋಜಿಸಿದ್ದ ತಾಲೂಕಿನ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನವನ್ನು ಚಿಂತಕ ಆರ್.ಜಿ.ಹಳ್ಳಿ ನಾಗರಾಜ ಉದ್ಘಾಟಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಶ್ರೀ ಪಂಚಾಕ್ಷರಿ ಸ್ವಾಮೀಜಿ, ಪೂಜ್ಯ ಮಹಾದೇವಿ ತಾಯಿ, ಸಮ್ಮೇಳನಾಧ್ಯಕ್ಷ ಡಾ.ಜೈಶೇನ್‌ಪ್ರಸಾದ, ಎಂ.ಎಂ.ತಂಬಾಕೆ, ಡಾ.ಜಯದೇವಿ ಗಾಯಕವಾಡ, ಡಾ.ಗವಿಸಿದ್ಧಪ್ಪ ಪಾಟೀಲ್, ಶಿವಾನಂದ ಮೇತ್ರೆ, ವೈಶಾಲಿ ಮೋರೆ, ನರಸಿಂಗರೆಡ್ಡಿ ಇತರರಿದ್ದರು.

ಹುಲಸೂರು ತಹಸೀಲ್ದಾರ್ ಶಿವಾನಂದ ಮೇತ್ರೆ ಮಾತನಾಡಿದರು. ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ, ಬೇಲೂರಿನ ಶ್ರೀ ಪಂಚಾಕ್ಷರಿ ಸ್ವಾಮೀಜಿ ಸಮ್ಮುಖ, ನಿವೃತ್ತ ಪ್ರಾಚಾರ್ಯ ಎಂ.ಎಂ. ತಂಬಾಕೆ ಅಧ್ಯಕ್ಷತೆ ವಹಿಸಿದ್ದರು.

ಸಸ್ತಾಪುರದ ಪೂಜ್ಯ ಮಹಾದೇವಿ ತಾಯಿ ನೇತೃತ್ವ ವಹಿಸಿದ್ದರು. ಪ್ರಾಚಾರ್ಯ ಎಚ್.ಪ್ರಭು, ನಿವೃತ್ತ ಪ್ರಾಚಾರ್ಯ ಎನ್.ವಿ. ಢೋಲೆ, ಭಾರತೀಯ ಬೌದ್ಧ ಮಹಾಸಭೆಯ ವೈಶಾಲಿ ಎಂ.ಮೋರೆ, ಮುಖಂಡರಾದ ನರಸಿಂಗರಾವ ಕಾಂಬಳೆ, ಹಣಮಂತರಾವ ಕಾಂಬಳೆ, ಸುರೇಶ ಕಾನೇಕರ್, ಡಾ.ಸುನೀತಾ ಪಂಕಜ ಇತರರಿದ್ದರು.

ದಸಾಪ ಜಿಲ್ಲಾಧ್ಯಕ್ಷೆ ಸಾಹಿತಿ ಡಾ.ಜಯದೇವಿ ಗಾಯಕವಾಡ ಆಶಯ ಭಾಷಣ ಮಾಡಿದರೆ, ಸಮ್ಮೇಳನ ಸಂಯೋಜಕ ಡಾ.ಸಿದ್ದಪ್ಪ ಪಾಟೀಲ್ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಸಂಜುಕುಮಾರ ನಡುಕರ ನಿರೂಪಣೆ ಮಾಡಿದರು. ಸಮ್ಮೇಳನಕ್ಕೂ ಮುನ್ನ ಶ್ರೀ ಯಲ್ಲಾಲಿಂಗೇಶ್ವರರ ಮೂರ್ತಿಯೊಂದಿಗೆ ಸಮ್ಮೇಳನಾಧ್ಯಕ್ಷರ ಭವ್ಯ ಮೆರವಣಿಗೆ ಸಾರೋಟಿನಲ್ಲಿ ಜರುಗಿತು.

ಸಮ್ಮೇಳನಗಳಿಗೆ ಅನುದಾನ ಕಲ್ಪಿಸಲಿ

ಬಸವಕಲ್ಯಾಣದಲ್ಲಿ ದಲಿತ ಅಧ್ಯಯನ ಪೀಠ ಸ್ಥಾಪನೆಯಾಗಬೇಕು. ದಲಿತ ಲೇಖಕರ ಕೃತಿಗಳ ಕನಿಷ್ಠ 50 ಪ್ರತಿ ಖರೀದಿಸಲು ಸರ್ಕಾರ ಆದೇಶಿಸಬೇಕು. ದಲಿತ ಪೌರ ಕಾರ್ಮಿಕರಿಗೆ ಸೂಕ್ತ ಸಂಬಳ, ಸೇವಾ ಭದ್ರತೆ ಕಲ್ಪಿಸಬೇಕು ಎಂದು ಎಂದು ದಲಿತ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ.ಜೈಶೇನ್‌ಪ್ರಸಾದ ಹಕ್ಕೊತ್ತಾಯ ಮಂಡಿಸಿದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸ್ಥಾನದಲ್ಲಿ ಮೀಸಲಾತಿ ಜಾರಿ ಮಾಡಬೇಕು. ಕಸಾಪದಂತೆ ದಲಿತ ಸಾಹಿತ್ಯ ಪರಿಷತ್‌ಗೂ ಸರ್ಕಾರ ಪ್ರತಿವರ್ಷ ತಾಲೂಕು, ಜಿಲ್ಲಾ, ರಾಜ್ಯ ಸಮ್ಮೇಳನಕ್ಕೆ ಅನುದಾನ ಮೀಸಲಿಡಬೇಕು. ದಲಿತ ಲೇಖಕಿಯರಿಗೆ ಪರಿಷತ್‌ಗಳಲ್ಲಿ ಅವಕಾಶ ನೀಡುವುದರ ಜತೆಗೆ ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಬೇಕು. ಅಹಿಂದ ವರ್ಗದ ಸಮುದಾಯದ ಮೀಸಲಾತಿಯಲ್ಲಿ ಬೇರೆಯವರನ್ನು ಸೇರಿಸಬಾರದು. ಬಡ್ತಿ, ಬ್ಯಾಕ್‌ಲಾಗ್ ಹುದ್ದೆ ಭರ್ತಿಯಲ್ಲಿ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಯಲ್ಲಾಲಿಂಗ ಮಠದಲ್ಲಿ ಈಗಾಗಲೇ 13 ಸಮ್ಮೇಳನ ಮಾಡಿದ್ದು, ಪೂಜ್ಯ ಮಾತೆ ಮಹಾದೇವಿ ಮಾಡಿದ ಸೇವೆ ಪರಿಗಣಿಸಿ ಸರ್ಕಾರ ಸೂಕ್ತ ಸ್ಥಾನಮಾನ ನೀಡಬೇಕು ಎಂದು ಒತ್ತಾಯಿಸಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 18 ಜನವರಿ 2023
18 JANUARY 2023

ಅಭಿನವ ಶ್ರೀ ಅಭಿಮತ | ಸಂಸ್ಥಾನ ಗವಿಮಠದಲ್ಲಿ ಉಪನ್ಯಾಸ ಮಾಲೆ

ಜ್ಞಾನವಿಲ್ಲದ ಬದುಕಿಗೆ ಬೆಲೆ ಇಲ್ಲ

ಬಸವಕಲ್ಯಾಣ: ಜ್ಞಾನವಿಲ್ಲದ ಬದುಕಿಗೆ ಬೆಲೆ ಇಲ್ಲ. ಹೀಗಾಗಿ ಮನುಷ್ಯ ಮೊದಲು ಜ್ಞಾನವನ್ನು ಸಂಪಾದಿಸಬೇಕು ಎಂದು ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣ ಮಾಸದ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಗುರುವಾರ ಸಂಜೆ ಹಮ್ಮಿಕೊಂಡಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಜ್ಞಾನ ಶ್ರೇಷ್ಠವಾದದ್ದು. ಹೀಗಾಗಿ ಭಕ್ತರು ಜ್ಞಾನ ಉಳ್ಳವರನ್ನೇ ಗುರುವಾಗಿ ಸ್ವೀಕರಿಸಬೇಕು. ಕಾರಣ ಭವಿಯನ್ನು ಭಕ್ತನನ್ನಾಗಿಸುವ ಶಕ್ತಿ ಗುರುವಿನಲ್ಲಿ ಇದೆ ಎಂದು ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ತಮ್ಮ ಸಿದ್ಧಾಂತ ಶಿಖಾಮಣಿ ಮೂಲಕ ಬೋಧಿಸಿದ್ದಾರೆ ಎಂದರು. ತಹಸೀಲ್ದಾರ್ ಸಾವಿತ್ರಿ ಸಲಗರ ಮಾತನಾಡಿ, ಸಂಸ್ಥಾನ ಗವಿಮಠವು ಭಾರತೀಯ ಸಂಸ್ಕೃತಿ ಪರಂಪರೆಯ ಪ್ರತೀಕ. ಸದಾ ಧಾರ್ಮಿಕ ಸಾಮಾಜಿಕ ಚಟುವಟಿಕೆಗಳ ಕೇಂದ್ರ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಂಚಾರಿ ಪೊಲೀಸ್ ಠಾಣೆ ಪಿಎಸ್‌ಐ ಪುಷ್ಪಾ ಮಾತನಾಡಿದರು. ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ್, ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಸಂಸ್ಥೆ ಮಹಿಳಾ ಘಟಕ ಅಧ್ಯಕ್ಷೆ ಸವಿತಾ ಸ್ವಾಮಿ, ಎ.ಜಿ.ಪಾಟೀಲ್, ಮಲ್ಲಿಕಾರ್ಜುನ ನಂದಿ, ಮಲ್ಲಯ್ಯ ಸ್ವಾಮಿ, ಪ್ರೊ.ರುದ್ರೇಶ್ವರ ಗೋರ್ಟಾ ಇತರರಿದ್ದರು. ಸರಸ್ವತಿ ಬೆಂಬಳಿ ನಿರೂಪಣೆ ಮಾಡಿದರು. ಶ್ರೀಕೃಷ್ಣ ಜನ್ಮಾಷ್ಟಮಿ ನಿಮಿತ್ತ ನಗರದ ಶ್ರೀಗುರು ಮಹಾಲಿಂಗೇಶ್ವರ ಶಾಲೆ ವಿದ್ಯಾರ್ಥಿಗಳು ಪ್ರದರ್ಶಿಸಿದ ನೃತ್ಯ ಗಮನ ಸೆಳೆಯಿತು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ಸಂಸ್ಥಾನ ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ನೃತ್ಯ ಪ್ರದರ್ಶನ ಮಾಡಿದ ಶ್ರೀಗುರು ಮಹಾಲಿಂಗೇಶ್ವರ ಶಾಲೆಯ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪಿಎಸ್‌ಐ ಪುಷ್ಪಾ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 22 ಆಗಸ್ಟ್ 2022
22 AUGUST 2022

Scanned with OKEN Scanner

ದಲಿತ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ.ಜೈಶೇನಪ್ರಸಾದ ಅಭಿಮತ

ದಲಿತ ಸಾಧಕರ ಮರೆಮಾಚಿ ಇತಿಹಾಸ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಸಮಾಜ ಕಾರ್ಯ ಕೈಗೊಂಡಿರುವ ಹಾಗೂ ಕನ್ನಡ ನಾಡು ನುಡಿಯ ಸೇವೆಗೈದ ದಲಿತ ಸಾಧಕರ ಇತಿಹಾಸ ಮರೆಮಾಚಿ ಅನ್ಯಾಯ ಮಾಡ ಲಾಗಿದೆ. ಅದನ್ನು ಯುವ ಸಾಹಿತಿಗಳು ಬಹಿರಂಗಗೊಳಿಸಬೇಕು' ಎಂದು ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಡಾ. ಜೈಶೇನಪ್ರಸಾದ ಹೇಳಿದರು.

ತಾಲ್ಲೂಕಿನ ಸಸ್ತಾಪುರದ ಯಲ್ಲಾ-ಲಿಂಗೇಶ್ವರ ಆಶ್ರಮದಲ್ಲಿ ಮಂಗಳವಾರ ದಲಿತ ಸಾಹಿತ್ಯ ಪರಿಷತ್ತಿನಿಂದ ನಡೆದ ತಲ್ಲೂಕು ಮಟ್ಟದ ದಲಿತ ಸಾಹಿತ್ಯ ಸಮ್ಮೇ-ಳನದಲ್ಲಿ ಅವರು ಮಾತನಾಡಿದರು.

'ದಲಿತ ಸಾಹಿತ್ಯ ಹಾಗೂ ಚಳವಳಿಗೆ 20ನೇ ಶತಮಾನದಲ್ಲಿ ಬಿ.ಶ್ಯಾಮ-ಸುಂದರ, ತಾತೇರಾವ್ ಕಾಂಬಳೆ ಅವರು ಮಹತ್ವದ ಕಾಣಿಕೆ ನೀಡಿದ್ದಾರೆ. ಹಿಂದಿ, ಮರಾಠಿ, ಉರ್ದು ಭಾಷೆಗಳ ಪ್ರಭಾವದಲ್ಲೂ ಅನೇಕರು ಕನ್ನಡ ಬೆಳೆಸಿದ್ದಾರೆ. ಸಾಹಿತ್ಯ ಸಮಾಜಮುಖಿ, ಜನಪರ ಆಗಿರಬೇಕು. ಮೌಢ್ಯತೆಗೆ ಅಸ್ಪದ ನೀಡಬಾರದು. ಅಸ್ಪೃಶ್ಯತೆ ತೊಲಗಬೇಕು. ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರ ತತ್ವ ಅಳವಡಿ-ಸಿಕೊಂಡಾಗಲೇ ಸಮಾನತೆಯ ನವ ಸಮಾಜ ನಿರ್ಮಾಣ ಸಾಧ್ಯ. ಕನ್ನಡ ಸಾಹಿತ್ಯ ಪರಿಷತ್ತಿನಂತೆ ದಲಿತ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಮತ್ತು ಜಿಲ್ಲಾ ಸಮ್ಮೇಳನಗಳಿಗೆ ಸರ್ಕಾರ ಅನುದಾನ ನೀಡಲಿ' ಎಂದರು.

ಉದ್ಘಾಟನೆ ನೆರವೇರಿಸಿದ ಆರ್.ಜಿ. ಹಳ್ಳಿ ನಾಗರಾಜ, 'ದಲಿತ, ಬಂಡಾಯ ಸಾಹಿತ್ಯದಿಂದ ಸಮಾಜ ಜಾಗೃತಿಯ ಕಾರ್ಯ ನಡೆದಿದೆ. ಬಸವಾದಿ ಶರಣರ ಸಮಾನತೆಯ ತತ್ವ ಆಚರಣೆಗೆ ಬರಬೇಕು. ಯುವ ಬರಹಗಾರರಿಗೆ ಹಾಗೂ ಪ್ರತಿಭಾವಂತರಿಗೆ ಪ್ರೋತ್ಸಾಹಿ-ಸಬೇಕಾಗಿದೆ' ಎಂದರು.

ತಹಶೀಲ್ದಾರ್ ಶಿವಾನಂದ ಮೇತ್ರೆ ಮಾತನಾಡಿ, 'ದಲಿತರ ಹಕ್ಕೊತ್ತಾ-ಯಗಳಿಗೆ ಸಂಬಂಧಿತರು ಸ್ಪಂದಿಸಲಿ. ಇಂಥ ಸಮ್ಮೇಳನಗಳು ನಿರಂತರವಾಗಿ ನಡೆಯಲಿ' ಎಂದು ಹೇಳಿದರು.

ದಲಿತ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷೆ ಡಾ.ಜಯದೇವಿ ಗಾಯಕವಾಡ ಮಾತನಾಡಿ, 'ದಲಿತ ಸಾಹಿತ್ಯ ಪರಿಷತ್ತು ಸಾಹಿತಿ, ಸಾಹಿತ್ಯದ ಬೆಳವಣಿಗೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದು ಬೆಳ್ಳಿಹಬ್ಬ ಆಚರಿಸುತ್ತಿದೆ' ಎಂದು ತಿಳಿಸಿದರು.

ಬೇಲೂರ ಪಂಚಾಕ್ಷರಿ ಸ್ವಾಮೀಜಿ, ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಎಂ.ಎಂ. ತಂಬಾಕೆ, ಸಂಯೋಜಕ ಡಾ.ಗವಿಸಿದ್ದಪ್ಪ ಪಾಟೀಲ, ಸಂಜೀವಕುಮಾರ ನಡುಕರ್, ಜೈಭೀಮ ಹೊಳಿಕೇರಿ, ವೈಶಾಲಿ ಮೋರೆ ಮಾತನಾಡಿದರು.

ಶರಣ ಮಹಾದೇವಿತಾಯಿ, ನಿವೃತ್ತ ಪ್ರಾಂಶುಪಾಲ ನಾಗೇಂದ್ರ ಢೋಲೆ, ಉಪನ್ಯಾಸಕ ನರಸಿಂಗರೆಡ್ಡಿ ಗದ್ದೇಗಾಂವ, ದಯಾನಂದ ಶಾಸ್ತ್ರಿ ಇದ್ದರು. ಕಾರ್ಯಕ್ರಮದ ಮೊದಲು ಸಮ್ಮೇಳನಾಧ್ಯಕ್ಷ ಡಾ.ಜೈಶೇನಪ್ರಸಾದ ಅವರನ್ನು ಸಾರೋಟದಲ್ಲಿ ಮೆರವಣಿಗೆ ಮೂಲಕ ವೇದಿಕೆಗೆ ಕರೆತರಲಾಯಿತು.



ಬಸವಕಲ್ಯಾಣ ತಾಲ್ಲೂಕಿನ ಸಸ್ತಾಪುರದಲ್ಲಿ ಮಂಗಳವಾರ ನಡೆದ ತಾಲ್ಲೂಕು ಮಟ್ಟದ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷ ಡಾ.ಜೈಶೇನಪ್ರಸಾದ ಅವರನ್ನು ಸನ್ಮಾನಿಸಲಾಯಿತು. ಸಾಹಿತಿ ಆರ್.ಜಿ. ಹಳ್ಳಿ ನಾಗರಾಜ ಇದ್ದರು

'ಪಂಚಶೀಲ ಸಿರಿ' ಪ್ರಶಸ್ತಿ ಪ್ರದಾನ

ಕಾರ್ಯಕ್ರಮದಲ್ಲಿ ಸಾಹಿತಿ, ಸಾಧಕರಿಗೆ 'ಪಂಚಶೀಲ ಸಿರಿ' ಪ್ರಶಸ್ತಿ ನೀಡಲಾಯಿತು. ಸುರೇಶ ಮೋರೆ, ಡಾ.ಮನ್ಮಥ ಡೋಳೆ, ಡಾ.ಮಲ್ಲಿಕಾರ್ಜುನ ಆಮ್ಲೆ, ಅವಿನಾಶ ದೇವನೂರ, ಡಾ.ಅರುಣಕುಮಾರ ಕುರ್ನೆ, ಶಿವಶಂಕರ ಹಡಪದ, ಮಿಲಿಂದ ಕಾಂಬಳೆ, ಸೇವಂತಾ ಗಾಯಕವಾಡ, ರವಿಕುಮಾರ ಅಂತಪ್ಪ ಅವರಿಗೆ ಪ್ರಶಸ್ತಿ ನೀಡಲಾಯಿತು.

ಉತ್ತಮ ಜೀವನ ಪದ್ಧತಿಯಿಂದ ಆರೋಗ್ಯ ವೃದ್ಧಿ

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಭಿಮತ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಜೀವನ ಪದ್ಧತಿ ಉತ್ತ ಮವಾಗಿದ್ದರೆ ಅನಾರೋಗ್ಯ ಕಾಡದು' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಭಿಪ್ರಾ-ಯಪಟ್ಟರು.

ನಗರದ ಸಂಕಲ್ಪ ಕಾಲೇಜಿನಲ್ಲಿ ಭಾರತ ಸರ್ಕಾರದ ಆಯುಷ್ ಇಲಾಖೆ, ಸೂರ್ಯ ಫೌಂಡೇಶನ್, ಮಾತೃಭೂಮಿ ಸೇವಾ ಪ್ರತಿಷ್ಠಾನ, ಪತಂಜಲಿ ಯೋಗ ಸಮಿತಿ ಸಹಯೋಗದಲ್ಲಿ ನಡೆದ ಪ್ರಕೃತಿ ಚಿಕಿತ್ಸಾ ದಿವಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆರೋಗ್ಯಂ ಆಯುರ್ವೇದ ಆಸ್ಪತ್ರೆ ವೈದ್ಯೆ ಡಾ.ಸುಹಾಸಿನಿ ಬಿರಾದಾರ ಮಾತನಾಡಿ,'ಆಯುರ್ವೇದ ಮತ್ತು ಪ್ರಕೃತಿ ಚಿಕಿತ್ಸಾ ಪದ್ಧತಿಯಿಂದ ಅನೇಕ ಮಾರಕ ರೋಗಗಳನ್ನು ಗುಣಪಡಿ-ಸಬಹುದು. ಈಚೆಗೆ ಆಯುರ್ವೇದ ಚಿಕಿತ್ಸಾ ಪದ್ಧತಿ ಹೆಚ್ಚು ಜನಪ್ರಿಯತೆ ಪಡೆಯುತ್ತಿದೆ' ಎಂದರು.

ಕೇಂದ್ರ ಸರ್ಕಾರದ ಆಯುಷ್ ಇಲಾಖೆಯ ನೋಂದಣಿ ಮಂಡಳಿ ಸದಸ್ಯ ಅನಂತ ಬಿರಾದಾರ ಮಾತ-ನಾಡಿ,'ಪ್ರಕೃತಿ ಚಿಕಿತ್ಸೆಗೆ ಕೇಂದ್ರ ಸರ್ಕಾರ ಆದ್ಯತೆ ನೀಡುತ್ತಿದೆ. ವಿವಿಧ ಯೋಜನೆಗಳನ್ನು ಜಾರಿಗೊಳಿಸಿದ್ದು, ಇದರ ಪ್ರಯೋಜನ ಪಡೆದುಕೊಳ್ಳಬೇ-ಕು' ಎಂದರು.

ಸಂಸ್ಥೆಯ ಅಧ್ಯಕ್ಷೆ ಕಲ್ಪನಾ ಚಪಾತೆ, ಪ್ರಾಂಶುಪಾಲ ವೇದಪ್ರಕಾಶ, ಪ್ರಭುಲಿಂಗ ಕಲ್ಲೂರೆ, ಸೂರ್ಯ ಫೌಂಡೇಶನ್ ಸಂಯೋಜಕ ಗುರುನಾಥ ರಾಜಗೀರಾ ಹಾಗೂ ಲೋಕೇಶ ಮೋಳಕೆರೆ ಮಾತನಾಡಿದರು. ಜಗದೀಶ ಮುಖೇಡಕರ್, ಧೋಂಡಿರಾಮ ಚಾಂದಿವಾಲೆ, ಕಲ್ಪನಾ, ಸುಭಾಷ ಪತಂಗೆ ಹಾಗೂ ರೇಣುಕಾ ಇದ್ದರು.



ಬಸವಕಲ್ಯಾಣದ ಸಂಕಲ್ಪ ಕಾಲೇಜಿನಲ್ಲಿ ನಡೆದ ಪ್ರಕೃತಿ ಚಿಕಿತ್ಸಾ ದಿವಸ ಕಾರ್ಯಕ್ರಮದಲ್ಲಿ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಭಾವಚಿತ್ರದ ಪೂಜೆ ನೆರವೇರಿಸಿದರು

ಪ್ರಜಾವಾಣಿ ಬೀದರ್ ಶನಿವಾರ • ಫೆಬ್ರುವರಿ 11, 2023

Scanned with OKEN Scanner

ತ್ರೀಪುರಾಂತ ಸ್ವಾಮೀಜಿ ಅಭಿಮತ | ವಿದ್ಯಾಭಾರತಿಯಿಂದ ಜಿಲ್ಲಾ ಶೈಕ್ಷಣಿಕ ಸಹಮಿಲನ

ವಿದ್ಯೆ ಜತೆ ವಿನಯವೂ ಅವಶ್ಯಕ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ವಿದ್ಯೆ ಜತೆಗೆ ವಿನಯ ಅವಶ್ಯಕ. ಗುಣಮಟ್ಟದ ಶಿಕ್ಷಣದೊಂದಿಗೆ ಸಂಸ್ಕಾರ, ಸೇವೆ ಹಾಗೂ ದೇಶಭಕ್ತಿ ಭಾವ ಬೆಳೆಸಬೇಕಾದ ಅಗತ್ಯವಿದೆ ಎಂದು ಗವಿಮಠ ಸಂಸ್ಥಾನದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಅಖಿಲ ಭಾರತೀಯ ಶಿಕ್ಷಾ ಸಂಸ್ಥಾನ್ ಸಂಬಂಧಿತ ವಿದ್ಯಾಭಾರತಿ ಕರ್ನಾಟಕ ಬೀದರ್ ವತಿಯಿಂದ ತ್ರಿಪುರಾಂತ ಗವಿಮಠದಲ್ಲಿ ಶನಿವಾರ ಆಯೋಜಿಸಿದ್ದ ಜಿಲ್ಲಾ ಶೈಕ್ಷಣಿಕ ಸಹಮಿಲನ ಉದ್ಘಾಟನಾ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ಶಿಕ್ಷಣದ ಜತೆಗೆ ಸಂಸ್ಕಾರ ಬೆಳೆಸುವ ಕೆಲಸ ವಿದ್ಯಾಭಾರತಿಯಿಂದ ನಡೆಯುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತಹಸೀಲ್ದಾರ್ ಸಾವಿತ್ರಿ ಸಲಗರ ಉದ್ಘಾಟಿಸಿ ಮಾತನಾಡಿ, ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆಯುವುದು ಮುಖ್ಯವಲ್ಲ. ಹೆಚ್ಚಿನ ಜ್ಞಾನ ಸಂಪಾದನೆ ಮುಖ್ಯ. ಮಕ್ಕಳಿಗೆ ಶಿಕ್ಷಣ ಜತೆ ಭಾರತೀಯ ಸಂಸ್ಕೃತಿ ತಿಳಿಸಿಕೊಡುವ ಕೆಲಸ ಆಗಬೇಕು. ಪಠ್ಯದ ಜತೆಗೆ ಪ್ರಸ್ತುತ ವಿದ್ಯಾಮಾನಗಳ ಮಾಹಿತಿ ಹೇಳಿಕೊಡಬೇಕು. ಪ್ರಾಥಮಿಕ ಹಂತದಲ್ಲೇ ಸ್ವರ್ಧಾತ್ಮಕ ಮನೋಭಾವ ಬೆಳೆಸಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾಭಾರತಿ ಕರ್ನಾಟಕ ಜಿಲ್ಲಾಧ್ಯಕ್ಷ ಎಸ್.ಬಿ. ಸಜ್ಜನಶೆಟ್ಟಿ ಮಾತನಾಡಿ, ವಿದ್ಯಾಭಾರತಿ ಶಾಲೆಗಳು ಪರಿವಾರದಂತೆ ಕೆಲಸ ಮಾಡುತ್ತಿವೆ. ಇಲ್ಲಿ ಅಧ್ಯಕ್ಷರಿಂದ ಆಯಾವರೆಗೆ ಎಲ್ಲರಿಗೂ ಅಷ್ಟೇ ಮಹತ್ವವಿದೆ. ಅಂಕಕ್ಕೆ ಮಹತ್ವ ನೀಡದೆ ಜ್ಞಾನ ಆಧಾರಿತ ಶಿಕ್ಷಣಕ್ಕೆ ಮಹತ್ವ ನೀಡಲಾಗುತ್ತಿದೆ ಎಂದು ತಿಳಿಸಿದರು.

ದೈಹಿಕ ಶಿಕ್ಷಣ ಪರಿವೀಕ್ಷಕ ಬಸವರಾಜ ಪಾಟೀಲ್, ಪ್ರಮುಖರಾದ ಭೀಮಣ್ಣ ಮೈನಾಳೆ, ಓಂಕಾರೇಶ್ವರ ಮಠಪತಿ, ವಿದ್ಯಾರಾಣಿ ಬಿರಾದಾರ, ಮಲ್ಲಿಕಾರ್ಜುನ ಬಿರಾದಾರ, ರಮೇಶ ಧಬಾಲೆ, ಮರುಳಾರಾಧ್ಯ ಸ್ವಾಮಿ, ರೇವಣಸಿದ್ದಪ್ಪ ಜಲಾದೆ, ಶಿವಲಿಂಗ ಕುಂಬಾರ, ರವಿ ಸ್ವಾಮಿ, ರಾಜಶ್ರೀ ಬಿರಾದಾರ, ಗೌರಮ್ಮ ಬೆಳ್ಳಿ ಇತರರಿದ್ದರು.



ಬಸವಕಲ್ಯಾಣ ತ್ರಿಪುರಾಂತ ಗವಿಮಠದಲ್ಲಿ ಶನಿವಾರ ವಿದ್ಯಾಭಾರತಿ ಕರ್ನಾಟಕ ಆಯೋಜಿಸಿದ್ದ ಜಿಲ್ಲಾ ಶೈಕ್ಷಣಿಕ ಸಹಮಿಲನ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ತಹಸೀಲ್ದಾರ್ ಸಾವಿತ್ರಿ ಸಲಗರ, ಬಸವರಾಜ ಪಾಟೀಲ್, ಎಸ್.ಬಿ.ಸಜ್ಜನಶೆಟ್ಟಿ ಇತರರಿದ್ದರು.

ವಿಕಾಸ ಪೂರಕ ಶಿಕ್ಷಣ ಅಗತ್ಯ

ಮಾನವೀಯ ಆಧಾರದಲ್ಲಿ ಸರ್ವಾಂಗೀಣ ವಿಕಾಸಕ್ಕೆ ಪೂರಕವಾದ ಶಿಕ್ಷಣ ಪದ್ಧತಿ ಅಗತ್ಯವಿದೆ ಎಂದು ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಅಭಿಪ್ರಾಯಪಟ್ಟರು. ಸಮಾರೋಪದಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ಶಿಕ್ಷಣ ಸಂಸ್ಥೆಗಳು, ಸುಸಂಸ್ಕೃತ ನಾಗರಿಕರನ್ನು ರೂಪಿಸುವ ವಿದ್ಯಾ ಕೇಂದ್ರಗಳಾಗಬೇಕು. ದೇಶದಲ್ಲಿ ಇನ್ನೂ ಜಾರಿಯಲ್ಲಿರುವ ಮೆಕಾಲೆ ಶಿಕ್ಷಣ ಪದ್ಧತಿಯಿಂದಾಗಿ ವಿದ್ಯಾರ್ಥಿಗಳ ಸಮಗ್ರ ವಿಕಸನವಾಗುತ್ತಿಲ್ಲ. ಈ ವ್ಯವಸ್ಥೆಯಲ್ಲಿ ಅರ್ಥ ಮಾತ್ತು ವಿಲಾಸಕ್ಕೆ ಪ್ರಾಧಾನ್ಯವಿದೆ ಎಂದರು. ವಿದ್ಯಾಭಾರತಿ ಕರ್ನಾಟಕ ಪ್ರಾಂತೀಯ ಅಧ್ಯಕ್ಷ ಪರಮೇಶ್ವರ ಹೆಗಡೆ ಮಾತನಾಡಿದರು.

ಮನೋರಂಜನಾ ಮಾತಾಜಿ ಪ್ರಾರ್ಥನೆ ನಡೆಸಿಕೊಟ್ಟರು. ಕಾರ್ಯದರ್ಶಿ ಭಗುಸಿಂಗ್ ಜಾಧವ್ ಸ್ವಾಗತಿಸಿದರು. ಖಜಾಂಚಿ ಪ್ರಕಾಶ ಬಿರಾದಾರ ನಿರೂಪಣೆ ಮಾಡಿದರು. ರೇವಣಸಿದ್ಧ ಪಾಟೀಲ್ ವಂದಿಸಿದರು.

ರಾಷ್ಟ್ರೀಯತೆಗೆ ಸಂಸ್ಕೃತಿಯೇ ಆಧಾರ

ಭಾರತದಲ್ಲಿರುವ ರಾಷ್ಟ್ರೀಯತೆಗೆ ಪ್ರಾಚೀನ ಸಂಸ್ಕೃತಿಯೇ ಆಧಾರ. ಇದು ಸ್ವಾತಂತ್ರ್ಯ ಹೋರಾಟಕ್ಕೂ ಪ್ರೇರಣೆ ನೀಡಿತ್ತು ಎಂದು ಆರ್‌ಎಸ್‌ಎಸ್ ಕರ್ನಾಟಕ ಉತ್ತರ ಪ್ರಾಂತ ಕಾರ್ಯಕಾರಿಣಿ ಸದಸ್ಯ ಡಾ.ರವೀಂದ್ರ ಅಭಿಪ್ರಾಯಪಟ್ಟರು. ಸ್ವಾತಂತ್ರ್ಯ ಅಮೃತ ಮಹೋತ್ಸವ ನಿಮಿತ್ತ ಆಜಾದ್ ಹಿಂದ್ ಸರ್ಕಾರ ವಿಷಯ ಕುರಿತು ಉಪನ್ಯಾಸ ಮಂಡಿಸಿದ ಅವರು, ಆಂದು-ಇಂದು ಮತ್ತು ಮುಂದಿನ ಭಾರತ ಕುರಿತು ಆತ್ಮಾವಲೋಕನ, ಚಿಂತನ-ಮಂಥನ ಮಾಡುವ ಸಂದರ್ಭ ಇದು. ಸ್ವತಂತ್ರ ಪೂರ್ವದ ದೀರ್ಘಕಾಲಿನ ಸಂಘರ್ಷ, ಚಳವಳಿ, ನಂತರ ಸಾಧನೆ-ಸವಾಲು, ಭವಿಷ್ಯದ ಭಾರತ ಕುರಿತು ವಿಶ್ಲೇಷಿಸಿ, ಜಗತ್ತಿನಲ್ಲಿ ಹೋಲಿಸುವುದಾದರೆ ವೈವಿಧ್ಯ, ಅನೇಕತೆಯಲ್ಲಿ ಸಾಮರಸ್ಯದಿಂದ ಸಾಗಿರುವುದು ಭಾರತ. ಸಾಮರಸ್ಯದ ಕಡೆ ಹೆಚ್ಚಿನ ಗಮನಹರಿಸುವುದು ಅವಶ್ಯಕ ಎಂದು ಪ್ರತಿಪಾದಿಸಿದರು. ಪ್ರಸ್ತುತ ದೇಶದಲ್ಲಿ ಸಾಧನೆ ಜತೆಗೆ ಸಂಕಷ್ಟವೂ ಇದೆ. ಸಮರಸ ಭಾರತದಲ್ಲಿ ಸಾಮಾಜಿಕ ಸಮೃದ್ಧಿ, ರಾಷ್ಟ್ರೀಯ ಸುರಕ್ಷೆ, ಸಾಮಾಜಿಕ ಸಾಮರಸ್ಯ ಮೂರು ವಿಷಯ ಇರಬೇಕು. ಮುಂದಿನದ್ದು ವಿಶ್ವ ಶಕ್ತಿ ಭಾರತ, ವಿಶ್ವಗುರು ಭಾರತ, ಜಗತ್ ಜನನಿ ಭಾರತ ಎಂದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಭಾನುವಾರ 10 ಜುಲೈ 2022
10 JULY 2022

ಪುಸ್ತಕ ಓದಿದರೆ ಜ್ಞಾನವೃದ್ಧಿ: ಟೋಕರೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಪುಸ್ತಕ ಓದುವುದರಿಂದ ಜ್ಞಾನ ವೃದ್ಧಿಸುತ್ತದೆ. ಆದ್ದರಿಂದ ಓದುವ ಸಂಸ್ಕೃತಿ ಬೆಳೆಯಬೇಕು' ಎಂದು ಪ್ರಾಂಶುಪಾಲ ಶಿವಶಂಕರ ಟೋಕರೆ ಹೇಳಿದ್ದಾರೆ.

ನಗರದ ಗವಿಮಠದಲ್ಲಿ ಈಚೆಗೆ ನಡೆದ ಸಾಹಿತಿ ವೀರಶೆಟ್ಟಿ ಪಾಟೀಲ ಅವರು ತಮ್ಮ ಮಗ ಸಾತ್ವಿಕನ ಜನ್ಮದಿನದ ಅಂಗವಾಗಿ ಬರೆದ 'ನಗುಮೊಗದ ಜನ್ಮೋತ್ಸವ' ಎಂಬ ಕವನ ಸಂಕಲನ ಬಿಡುಗಡೆಗೊಳಿಸಿ ಮಾತನಾಡಿದರು.

ನೇತೃತ್ವ ವಹಿಸಿದ್ದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಪುಸ್ತಕ ಬರೆಯುವವರಿಗೆ ಪ್ರೋತ್ಸಾಹ ನೀಡಬೇಕು. ಮನೆ ಕಾರ್ಯಕ್ರಮಗಳಲ್ಲಿ ಸಾಹಿತ್ಯಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಉತ್ತಮ ಕಾರ್ಯ' ಎಂದು ಅವರು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಭನ್ನಶೆಟ್ಟಿ, ಉಪನ್ಯಾಸಕ ರೇವಣಸಿದ್ದಪ್ಪ ದೂರೆಗಳ್, ಶಿವಲಿಂಗ ಹೆಡೆ, ನಾಗೇಂದ್ರ ಬಿರಾದಾರ, ವೀರಶೆಟ್ಟಿ ಪಾಟೀಲ ಮಾತನಾಡಿದರು. ಬಸವಂತಪ್ಪ ಲವಾರೆ, ಶಾಂತಲಿಂಗ ಮಠಪತಿ ಹಾಗೂ ಡಾ.ಶಿವಲೀಲಾ ಮಠಪತಿ, ಡಾ.ರುದ್ರಮಣಿ ಮಠಪತಿ, ಪ್ರತಿಮಾ ಪಾಟೀಲ ಇದ್ದರು.



ಬಸವಕಲ್ಯಾಣದಲ್ಲಿ ಈಚೆಗೆ ವೀರಶೆಟ್ಟಿ ಪಾಟೀಲ ಬರೆದ 'ನಗುಮೊಗದ ಜನ್ಮೋತ್ಸವ' ಕವನ ಸಂಕಲನ ಬಿಡುಗಡೆಗೊಳಿಸಲಾಯಿತು

ಪ್ರಜಾವಾಣಿ ಗುರುವಾರ • ಜನವರಿ 12, 2023

Scanned with OKEN Scanner

ಜೀವನದಲ್ಲಿ ಮಾನವೀಯ ಮೌಲ್ಯ ಅಳವಡಿಸಿಕೊಳ್ಳಿ

ವಿಕ ಸುದ್ದಿಲೋಕ ಬಸವಕಲ್ಯಾಣ

ಜಾತ್ರೆಗಳಲ್ಲಿ ಭಾಗವಹಿಸುವ ಮೂಲಕ ಗುರುಗಳ, ಮಹಾತ್ಮರ ವಾಣಿಯಲ್ಲಿನ ಮಾನವೀಯ ಸಂದೇಶಗಳು ತಮ್ಮ ಜೀವನ ದುದ್ದಕ್ಕೂ ಅಳವಡಿಸಿಕೊಂಡು ಆಚರಣೆಗೆ ತಂದಾಗ ಮಾತ್ರ ಇಂತಹ ಜಾತ್ರೆಗಳಿಗೆ ಬೆಲೆ ಬರಲು ಸಾಧ್ಯವಾಗುತ್ತದೆ ಎಂದು ವಿಶ್ವಕರ್ಮ ಏಕದಂಡಗಿ ಮಠದ ಶ್ರೀ ಶ್ರೀನಿವಾಸ ಸ್ವಾಮೀಜಿ ಸಲಹೆ ನೀಡಿದರು.

ನಗರದ ಶ್ರೀ ಮೌನೇಶ್ವರ ದೇವಸ್ಥಾನದಲ್ಲಿ ಸದ್ಗುರು ಶ್ರೀ ಮೌನೇಶ್ವರರ 13ನೇ ಜಾತ್ರಾ ಮಹೋತ್ಸವ ನಿಮಿತ್ತ ಬುಧವಾರ ನಡೆದ ಧರ್ಮಸಭೆಯನ್ನು ಉದ್ಘಾಟಿಸಿ ಆಶೀರ್ವಚನ ನೀಡಿದ ಶ್ರೀಗಳು, ಹಿಂದೂ ಮತ್ತು ಮುಸ್ಲಿಂ ಸಮಾಜದವರಿಗೆ ಒಂದೇ ಸಂದೇಶ ಸಾರಿದವರು ಶ್ರೀ ಮೌನೇಶ್ವರರು ನಾವೆಲ್ಲರೂ ಒಂದೇ ಎಂದು ಹೇಳಿದ್ದಾರೆ ಎಂದರು.

ತಿಂಥಿಣಿಯಲ್ಲಿ ಐದು ದಿನಗಳ ಜಾತ್ರಾ ಮಹೋತ್ಸವ ಜರುಗಿದರೆ ಬಸವಕಲ್ಯಾಣದಲ್ಲಿ ಆರು ದಿನಗಳ ಜಾತ್ರಾ ಮಹೋತ್ಸವ ಆಚರಣೆ ಮಾಡಿದರೆ ಸಂತಸವಾಗುತ್ತಿವೆ. ಶ್ರೀ ಮೌನೇಶ್ವರರ ಮೇಲೆ ಇಲ್ಲಿನ ಭಕ್ತರು ಇಟ್ಟಿರುವ ಅಪಾರ ಭಕ್ತಿ ಇದಕ್ಕೆ ಸಾಕ್ಷಿಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಹಿರನಾಗಾಂವನ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಮಾತನಾಡಿ, ಎಲ್ಲ ಭಕ್ತರನ್ನು ಸೇರಿ ಮಾಡುತ್ತಿರುವ ಮೌನೇಶ್ವರರ ಜಾತ್ರೆಯಲ್ಲಿ ಏಕತೆ ಸಂದೇಶ ಸಾರುತ್ತಿದೆ. ಆದೇ ಶ್ರೀ ಮೌನೇಶ್ವರರ ಜಾತ್ರೆಯಾಗಿದೆ ಎಂದ ಶ್ರೀಗಳು ಮನುಷ್ಯನಿಗೆ ಬದುಕುವ ದಾರಿ ಬೇಕಿದೆ. ಸತ್ಕಾರ್ಯದಲ್ಲಿ ದುಡಿದು ಬಾಳಬೇಕು ಎಂದು ತಿಳಿಸಿದರು.ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ್ ಮಾತನಾಡಿದರು.

ಶಾಸಕ ಶರಣು ಸಲಗರ, ನಗರಸಭೆ ಅಧ್ಯಕ್ಷೆ ಶಹಜಹಾನ ತನ್ವೀರ, ನಗರ ಸಭೆ ಸದಸ್ಯೆ ನಿರ್ಮಲಾ ಶಿವಣಕರ, ಮಾಲಾ.ಬಿ. ನಾರಾಯಣರಾವ, ಪ್ರದೀಪ ವಾತಡೆ, ಧನರಾಜ ತಾಳಂಪಳ್ಳಿ, ಆನಂದ ದೇವಪ್ಪ ಮಾತನಾಡಿದರು. ಸಸ್ತಾಪೂರನ ಶ್ರೀ ಸದಾನಂದ ಅಪ್ಪನವರು, ಗಣಜ ಲಖೇಡನ ಶ್ರೀ ನಾಗೇಶ ಮುತ್ಯಾ ಉಪಸ್ಥಿತರಿದ್ದರು. ವಿಜಯಕುಮಾರ ಪಂಚಾಳ ಕಾರ್ಯಕ್ರಮ ನಿರೂಪಿಸಿದರು.

ಅದ್ದೂರಿ ಮೆರವಣಿಗೆ : ಇದಕ್ಕೂ ಮುನ್ನ ನಗರದಲ್ಲಿ ಶ್ರೀ ಮೌನೇಶ್ವರರ ಭಾವಚಿತ್ರದ ಅದ್ದೂರಿ ಮೆರ ವಣಿಗೆ ಜರುಗಿತು. ಪಲ್ಲಕ್ಕಿ ಮೆರವಣಿಗೆಯೊಂದಿಗೆ ಪರವಂತರ ಸೇವೆಯೊಂದಿಗೆ ನಗರದ ಮುಖ್ಯ ರಸ್ತೆಯಲ್ಲಿ ಮೆರವಣಿಗೆ ಸಾಗಿತು. ಮೆರವಣಿಗೆ ಯುದ್ದಕ್ಕೂ ಭಾಜಾ, ಭಜಂತ್ರಿಗಳೊಂದಿಗೆ ಸಾಗಿದ ಮೆರವಣಿಗೆಯಲ್ಲಿ ಬಾನೆತ್ತರಕ್ಕೂ ಪಟಾಕಿ ಸಿಡಿದು ಗಮನ ಸೆಳೆಯಿತು.

ಶ್ರೀ ಮೌನೇಶ್ವರ ದೇವಸ್ಥಾನದಲ್ಲಿ ಸದ್ಗುರು ಶ್ರೀ ಮೌನೇಶ್ವರರ 13ನೇ ಜಾತ್ರಾ ಮಹೋತ್ಸವ



ಬಸವಕಲ್ಯಾಣ ನಗರದ ಶ್ರೀ ಮೌನೇಶ್ವರ ದೇವಸ್ಥಾನದಲ್ಲಿ ಸದ್ಗುರು ಶ್ರೀ ಮೌನೇಶ್ವರರ 13ನೇ ಜಾತ್ರಾ ಮಹೋತ್ಸವ ನಿಮಿತ್ತ ಬುಧವಾರ ನಡೆದ ಧರ್ಮ ಸಭೆಯನ್ನು ವಿಶ್ವಕರ್ಮ ಏಕದಂಡಗಿ ಮಠದ ಶ್ರೀ ಶ್ರೀನಿವಾಸ ಮಹಾಸ್ವಾಮೀಜಿ ಉದ್ಘಾಟಿಸಿದರು. ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಸದಾನಂದ ಸ್ವಾಮೀಜಿ, ಶ್ರೀ ನಾಗೇಶ ಮುತ್ಯಾ, ಮಾಲಾ ಬಿ.ನಾರಾಯಣರಾವ, ನಿರ್ಮಲಾ ಶಿವಣಕರ್ ಇದ್ದರು.

ಶ್ರೀ ಮೌನೇಶ್ವರರ ಆಶೀರ್ವಾದ ಇರಲಿ

ತಮ್ಮ ಕಲೆಯ ಮೂಲಕ ಸುಂದರ ರಾಷ್ಟ್ರ ನಿರ್ಮಿಸುವಲ್ಲಿ ವಿಶ್ವಕರ್ಮ ಸಮಾಜದ ಕಾರ್ಯ ದೊಡ್ಡದಾಗಿದೆ. ಜಗತ್ತಿಗೆ ಕಾಯಕದ ಮೂಲಕ ಶ್ರೇಷ್ಠ ಕೊಡುಗೆ ನೀಡಿದ ಸಮಾಜ ಇದಾಗಿದೆ. ನಿಮ್ಮ ಸಮಾಜದ ಮೇಲೆ ಶ್ರೀ ಮೌನೇಶ್ವರರ ಹಾಗೂ ಗುರು ಬಸವಣ್ಣನವರ ಆಶೀರ್ವಾದ ಸದಾ ಇರಲಿ ಎಂದು ಶಾಸಕ ಶರಣು ಸಲಗರ ತಿಳಿಸಿದರು. ಈಗಾಗಲೇ ಸಮಾಜದ ಬೇಡಿಕೆಗೆ ಅನುಗುಣವಾಗಿ ಸಮುದಾಯ ಭವನ ನಿರ್ಮಿಸಲು ಐದು ಲಕ್ಷ ರೂ ನೀಡಿದ್ದೇನೆ. 50 ಲಕ್ಷದಲ್ಲಿ ಸಿಸಿ ರಸ್ತೆ ನಿರ್ಮಿಸಲಾಗವುದು. ಮುಂದಿನ ದಿನಗಳಲ್ಲಿ ನಿಮ್ಮ ಸಮಾಜದ ಆಶೀರ್ವಾದ ನನ್ನ ಮೇಲಿದ್ದರೆ ಇನ್ನೂ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ಮಾಡುವ ಮೂಲಕ ಬಸವಕಲ್ಯಾಣದತ್ತ ಜನರು ಮುಖ ಮಾಡಿ ನೋಡಬೇಕು ಆ ನಿಟ್ಟನಲ್ಲಿ ಅಭಿವೃದ್ಧಿ ಪಡಿಸುವೆ ಎಂದರು.

ನಮ್ಮ ಜಿಲ್ಲೆ ಗುರುವಾರ, 26 ಜನವರಿ 2023

ಸಾಧನೆಗೆ ಬೇಕು ನಿರಂತರ ಅಧ್ಯಯನ

ಅಭಿನವ ಘನಲಿಂಗ ಶ್ರೀ ಅನಿಸಿಕೆ | ಸರ್ಕಾರಿ ಕಾಲೇಜಿನಲ್ಲಿ ಶಿಕ್ಷಕರ ದಿನಾಚರಣೆ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ನಿರಂತರ ಅಧ್ಯಯನದಿಂದ ಮಾತ್ರ ಜೀವನದಲ್ಲಿ ಸಾಧನೆ ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಪರಿಶ್ರಮದ ಜತೆಗೆ ಶಿಸ್ತು, ಪ್ರಾಮಾಣಿಕತೆ ಮೈಗೂಡಿಸಿಕೊಂಡಾಗ ಉನ್ನತ ಸ್ಥಾನಮಾನ ಪಡೆಯಬಹುದು ಎಂದು ಸಂಸ್ಥಾನ ಗವಿಮಠದ ಪೀಠಾಧಿಪತಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾನುವಾರ ಆಯೋಜಿಸಿದ್ದ ಶಿಕ್ಷಕರ ದಿನ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿ, ಕಠಿಣ ಪರಿಶ್ರಮದಿಂದ ಅಭ್ಯಾಸ ಮಾಡುವ ಮೂಲಕ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು. ಸಮಾಜದ ಋಣ ತೀರಿಸುವ ಜವಾಬ್ದಾರಿ ತಮ್ಮೆಲ್ಲರ ಮೇಲಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಬಲಿರಾಮ ಹುಡೆ ಮಾತನಾಡಿ, ವಿದ್ಯಾರ್ಥಿಗಳು ಸಮಯವನ್ನು ಸಮರ್ಪಕವಾಗಿ ಬಳಸಿಕೊಂಡು ನಿರಂತರ ಓದುವುದನ್ನು ರೂಢಿಸಿಕೊಳ್ಳಬೇಕು ಎಂದು ಹೇಳಿದರು.

ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ಪ್ರೊ.ಸಿ.ಬಿ.ಪರ್ತಾಪುರೆ, ಸಂಜೀವಕುಮಾರ ಗಾಯಕವಾಡ ಮಾತನಾಡಿದರು. ಸರ್ಕಾರಿ ಪಿಯು ಕಾಲೇಜಿನ ಪ್ರಾಚಾರ್ಯ ಸಿದ್ದಣ್ಣ ಮಾರ್ಪಳ್ಳಿ, ಪುಣ್ಯಕೋಟಿ ಕಾಲೇಜಿನ ಅಧ್ಯಕ್ಷ ಪ್ರೊ.ಸೂರ್ಯಕಾಂತ ಶೀಲವಂತ, ಸರ್ಕಾರಿ ನೀಲಾಂಬಿಕೆ ಪಿಯು ಕಾಲೇಜಿನ ಉಪನ್ಯಾಸಕ ನರಸಿಂಗ್ ರೆಡ್ಡಿ ಗದಲೇಗಾಂವ, ಸಿಡಿಸಿ ಸದಸ್ಯರಾದ ಸುಭಾಷ ಹೊಳಕುಂದೆ, ಬಾಬುರಾವ ಹಿಂಸೆ, ರೇಖಾಬಾಯಿ ನಾಗನಾಥರಾವ, ಭೀಮಸೇನರಾವ ಬೆಳಕೆರೆ, ರವಿ ಕಾದೇಪುರೆ, ಬಸವರಾಜ ಶೀಲವಂತ, ಸಂತೋಷ ಕಾಮಶೆಟ್ಟಿ, ಉಪನ್ಯಾಸಕರಾದ ಡಾ.ವೀರಶೆಟ್ಟಿ ಚಿಟಗುಪ್ಪ, ಪ್ರೊ.ದಶವಂತ ಮಾರುತಿ, ಪ್ರೊ.ಶೈಲಜಾ ಎಂ, ಡಾ.ಮಲ್ಲಿಕಾರ್ಜುನ ಬಿರಾದಾರ್, ಪ್ರೊ.ಪುಷ್ಪಾಬಾಯಿ ಕೋರೆ, ಡಾ.ಚಂದ್ರಕಾಂತ ಗಾಯಕವಾಡ, ದೀಪಕಕುಮಾರ ಗೌಡ, ವೆಂಕಟರಾವ ಗುನಾಳೆ ಇದ್ದರು. ಪ್ರೊ.ಮೀನಾಕ್ಷಿ ಬಿರಾದಾರ್ ಪ್ರಾಸ್ತಾವಿಕ ಮಾತನಾಡಿದರು. ಡಾ.ಚಿತ್ರಶೇಖರ ಚಿರಳ್ಳಿ ನಿರೂಪಣೆ ಮಾಡಿದರು. ಶಾಲಿನಿ ಹಾಗೂ ಆದರ್ಶ ಪತಂಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.



ವಿಜಯವಾಣಿ

ಬಸವಕಲ್ಯಾಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನ ಕಾರ್ಯಕ್ರಮದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಪ್ರೊ.ಸೂರ್ಯಕಾಂತ ಶೀಲವಂತ, ಪ್ರೊ.ಸಿ.ಬಿ.ಪರ್ತಾಪುರೆ, ಸುಭಾಷ ಹೊಳಕುಂದೆ, ಸಂಜೀವಕುಮಾರ ಗಾಯಕವಾಡ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಬುಧವಾರ 21 ಸೆಪ್ಟೆಂಬರ್ 2022
21 SEPTEMBER 2022

Scanned with OKEN Scanner

ಬುಧವಾರ ಕುಂಕುಮಾರ್ಚನೆ, ನಾಳೆ ಕುಂಭಮೇಳ, ತೊಟ್ಟಿಲು | 6ರಂದು ಪಲ್ಲಕ್ಕಿ ಹಾಗೂ ರಥೋತ್ಸವ

ಶ್ರೀ ಬನಶಂಕರಿ ದೇವಿ ಜಾತ್ರೋತ್ಸವ ಇಂದಿನಿಂದ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ನಗರದ ಬನಶಂಕರಿ ಗಲ್ಲಿಯಲ್ಲಿ ಶ್ರೀ ಬನಶಂಕರಿ ದೇವಿಯ 43ನೇ ಜಾತ್ರಾ ಮಹೋತ್ಸವ ನಿಮಿತ್ತ ದೇವಸ್ಥಾನದಲ್ಲಿ ಬುಧವಾರ ಬೆಳಗ್ಗೆ 10ಕ್ಕೆ ಕುಂಕುಮಾರ್ಚನೆ ಹಾಗೂ ಪ್ರವಚನದ ಸಮಾರೋಪ ಸಮಾರಂಭ ಸಂಜೆ 7ಕ್ಕೆ ಜರುಗಲಿದೆ. ಶಾಸಕ ಶರಣು ಸಲಗರ, ಕಾಂಗ್ರೆಸ್ ಮುಖಂಡ ಶಿವಶರಣ ಬಿರಾದಾರ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಗುರುವಾರ ಬೆಳಗ್ಗೆ 8ಕ್ಕೆ ಕುಂಭಮೇಳಕ್ಕೆ ಚಾಲನೆ ನೀಡಲಾಗುವುದು. ಸಂಜೆ 6ಕ್ಕೆ ತೊಟ್ಟಿಲು ಕಾರ್ಯಕ್ರಮಕ್ಕೆ ಕಾಂಗ್ರೆಸ್ ನಾಯಕಿ ಮಾಲಾ ಬಿ.ನಾರಾಯಣರಾವ ಹಾಗೂ ನಗರಸಭೆ ಸದಸ್ಯ ರೇಖಾಬಾಯಿ ಚಾಲನೆ ನೀಡುವರು. 7ಕ್ಕೆ ದೀಪೋತ್ಸವ ಹಾಗೂ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಎಐಸಿಸಿ ಸದಸ್ಯ ಆನಂದ ದೇವಪ್ಪ ಚಾಲನೆ ನೀಡುವರು. ಜಿಪಂ ಮಾಜಿ ಅಧ್ಯಕ್ಷ ಅನಿಲ ಭುಸಾರೆ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಶುಕ್ರವಾರ ಮಧ್ಯಾಹ್ನ 1ಕ್ಕೆ ಪಲ್ಲಕ್ಕಿ ಮೆರವಣಿಗೆಗೆ ಮಾಜಿ ಎಂಎಲ್ಸಿ ವಿಜಯಸಿಂಗ್ ಚಾಲನೆ ನೀಡುವರು. ನಗರಸಭೆ ಸದಸ್ಯ ರವೀಂದ್ರ ಬೋರಾಳೆ ಅತಿಥಿಗಳಾಗಿವರು. ಸಂಜೆ 6ಕ್ಕೆ ಅದ್ದೂರಿ ರಥೋತ್ಸವಕ್ಕೆ ಬಿಜೆಪಿ ಮುಖಂಡ ಪ್ರದೀಪ ವಾತಡೆ ಚಾಲನೆ ನೀಡುವರು. ಪಿಎಸ್ಐ ಅಮರ ಕುಲ್ಕರ್ಣಿ, ನಗರಸಭೆ ಸದಸ್ಯ ದೀಪಕ ಗುಡ್ಡಾ ಅತಿಥಿಗಳಾಗಿವರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಶ್ರೀ ಬನಶಂಕರಿ ದೇವಿಯ 43ನೇ ಜಾತ್ರಾ ಮಹೋತ್ಸವ ನಿಮಿತ್ತ ಭುರಳೆ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರಕ್ಕೆ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು. ಡಾ.ಅಪರ್ಣ, ಡಾ.ಜಿ.ಎಸ್.ಭುರಳೆ, ಡಾ.ಗಿರೀಶ ಭುರಳೆ, ಡಾ.ಕ್ಷಮಾ ಭುರಳೆ, ಡಾ.ಪ್ರಮೀಳಾ, ಡಾ.ಸಂದೀಪ ರಂಗದಾಳ ಇತರರಿದ್ದರು.

ರಥೋತ್ಸವದ ನಂತರ ಆಕರ್ಷಕ ಮದ್ದು ಸುಡುವ ಕಾರ್ಯಕ್ರಮ ಜರುಗಲಿದೆ. ಕಳೆದ ಡಿ.30ರಿಂದ ದೇವಸ್ಥಾನದಲ್ಲಿ ಪ್ರತಿ ದಿನ ಸಂಜೆ ಮೈಂದರಗಿಯ ಶ್ರೀ ಅಭಿನವ ರೇವಣಸಿದ್ಧ ಪಟ್ಟದೇವರಿಂದ ಪ್ರವಚನ ಕಾರ್ಯಕ್ರಮ ನಡೆಯುತ್ತಿದೆ. ಜಾತ್ರಾ ಮಹೋತ್ಸವದ ನಿಮಿತ್ತ ಭುರಳೆ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಭಾನುವಾರ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ ಜರುಗಿತು. ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು. ಸರ್ಕಾರಿ ಆಸ್ಪತ್ರೆ ಸಿಎಂಒ ಡಾ.ಅಪರ್ಣ, ನಿವೃತ್ತ ಟಿಎಚ್ಒ ಡಾ.ಜಿ.ಎಸ್.ಭುರಳೆ, ಡಾ.ಗಿರೀಶ ಭುರಳೆ, ಡಾ.ಕ್ಷಮಾ ಭುರಳೆ, ಡಾ.ಸಂದೀಪ ರಂಗದಾಳ ಹಾಗೂ ಕಲಬುರಗಿ ಎಚ್ಸಿಜಿ ಕ್ಯಾನ್ಸರ್ ಆಸ್ಪತ್ರೆಯ ವೈದ್ಯೆ ಡಾ.ಪ್ರಮೀಳಾ ಹಾಗೂ ಸಿಬ್ಬಂದಿ ಹಾಗೂ ದೇವಸ್ಥಾನ ಪಂಚ ಕಮಿಟಿ ಪದಾಧಿಕಾರಿಗಳು ಮತ್ತು ಸದಸ್ಯರು ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 4 ಜನವರಿ 2023
4 JANUARY 2023

ಶಿವಲಿಂಗ ಹೇಡೆ ಆಶಯ | ಡಾ.ಶಿವಲೀಲಾ ಮಠಪತಿ ಅವರ ಕವನ ಸಂಕಲನ ಲೋಕಾರ್ಪಣೆ

ಕಾವ್ಯ ಸಮಸಮಾಜ ನಿರ್ಮಿಸಲಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಕಾವ್ಯ ಸಾಮಾಜಿಕ ಜವಾಬ್ದಾರಿಯೊಂದಿಗೆ ಸಮಸಮಾಜವನ್ನು ನಿರ್ಮಿಸಲು ಸಹಕಾರಿ ಆಗಬೇಕು. ಇದಕ್ಕೆ ಬಲಿತ ಕಲೆ ಕವನ ಸಂಕಲನ ಪೂರಕವಾಗಿದೆ ಎಂದು ಸಾಹಿತಿ ಶಿವಲಿಂಗ ಹೇಡೆ ಅಭಿಪ್ರಾಯಪಟ್ಟರು.

ನಗರದ ವಿದ್ಯಾಶ್ರೀ ಬಡಾವಣೆಯಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನಿಂದ ಭಾನುವಾರ ಆಯೋಜಿಸಿದ್ದ ಡಾ.ಶಿವಲೀಲಾ ಎಸ್.ಮಠಪತಿ ಅವರ 'ಬಲಿತ ಕಲೆ' ಕವನ ಸಂಕಲನ ಲೋಕಾರ್ಪಣೆ, ಕಸಾಪ ಮಹಿಳಾ ಘಟಕ ಹಾಗೂ ವಿದ್ಯಾಶ್ರೀ ಶೈಕ್ಷಣಿಕ ಸಾಂಸ್ಕೃತಿಕ ಚಾರಿಟೇಬಲ್ ಟ್ರಸ್ಟ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶಿವಲೀಲಾ ಮಠಪತಿ ಅವರ ಒಟ್ಟು ಕವಿತೆಗಳಲ್ಲಿ ಭಾವ ನಿಷ್ಠತೆಯ ಮೂಲಕ ಮನುಷ್ಯ ಸಹಜ ಸ್ವಭಾವ, ಮಾನವೀಯ ಮೌಲ್ಯ, ನಾಡು ನುಡಿ ಚಿಂತನೆಯ ಹಲವು ಆಯಾಮ ಎದ್ದು ಕಾಣುತ್ತವೆ. ನವಿರಾದ ಭಾವ, ಚಿಂತನೆಗಳಿದ್ದು, ತಂದೆ, ತಾಯಿ, ಗುರು ಮಹತ್ವದೊಂದಿಗೆ ವ್ಯಕ್ತಿ ಚಿತ್ರಗಳೂ ಸೇರಿ ಕಾವ್ಯದ ತೂಕ ಹೆಚ್ಚಿದೆ. ಪ್ರಕೃತಿ, ಸಾಮಾಜಿಕ ಸಂವೇದನೆ ಮತ್ತು ಮನುಷ್ಯ ಸಂಬಂಧ ಅನಾವರಣ ಸೇರಿ ಹಲವು ಸಂಗತಿಗಳನ್ನು ಸಂಕಲನ ಹೊಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಲಬುರಗಿ ಮಹಾನಗರ ಪಾಲಿಕೆ ಎಸ್ಟೇಟ್ ಅಧಿಕಾರಿ ಸಾವಿತ್ರಿ ಸಲಗರ ಮಾತನಾಡಿ, ಕವಿತೆ ಈ ನೆಲದ ಸಜಗುಣ. ಅದಕ್ಕೆ ಕವಿರಾಜಮಾರ್ಗ ಹಾಗೂ ವಚನ ಸಾಹಿತ್ಯದಲ್ಲಿ ಉಲ್ಲೇಖಗಳಿವೆ. ಬಲಿತ ಕಲೆ ಕವನ ಸಂಕಲನ ಉತ್ತಮ ಕೃತಿಯಾಗಿದೆ ಎಂದರು.

ಬಿಡಿಯಲ್ ಶಿಕ್ಷಣ ಸಮೂಹದ ಅಧ್ಯಕ್ಷ ಮುಜಾಹಿದ್ ಪಾಷಾ ಖುರೇಷಿ ಮಾತನಾಡಿ, ಜಗತ್ತಿಗೆ ವಚನ ಸಾಹಿತ್ಯದ ಕೊಡುಗೆ ಅಪಾರವಾಗಿದೆ. ಮೊದಲ ಸಂಸ್ತಿನ ಪರಿಕಲ್ಪನೆ ನೀಡಿದ ನೆಲ ಕಲ್ಯಾಣ, ಶರಣರು ಅನುಭವ ಮಂಟಪದ ಮೂಲಕ ಮನುಷ್ಯ ಸಂಬಂಧಗಳನ್ನು ಕಟ್ಟಿದರು. ಇದನ್ನು ಮುಂದುವರಿಸುವ ಜವಾಬ್ದಾರಿ ನಮ್ಮೆಲ್ಲರದ್ದು ಎಂದರು.

ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಬೆಳಗಾವಿಯ ನಿವೃತ್ತ ಅಧಿಕಾರಿ ದಿವಾಕರ್ ಎಸ್, ಪ್ರಾಚಾರ್ಯೆ ಡಾ.ಇಂದುಮತಿ ಪಾಟೀಲ್, ಸಾಹಿತಿ ಡಾ.ಬಸವರಾಜ ಬಲ್ಲೂರ ಮಾತನಾಡಿದರು.

ಶಾಸಕ ಶರಣು ಸಲಗರ ಉದ್ಘಾಟಿಸಿದರು. ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ, ಡಾ.ಜ್ಯೋತಿ ಖಂಡ್ರೆ, ನಿರ್ಮಲಾ ಖಂಡ್ರೆ, ಇಂದುಮತಿ ಹುಣಸಗೆರೆ, ಚಿನ್ನಮ್ಮ ಇಲ್ಲಾಮಲ್ಲೆ. ಕಾಶಮ್ಮ ಬಿರಾದಾರ, ಅನಿತಾ ಕಾಳಗೆ, ಸವಿತಾ ಕಲ್ಯಾಣಿ, ಶೀತಲ ಸ್ವಾಮಿ, ರಾಜಶ್ರೀ, ಸೋಮನಾಥ ಮಾಶೆಟ್ಟಿ, ಸೋಮಣ್ಣ ಮಾನಕರ್, ಬಿಇಒ ಸೂರ್ಯಕಾಂತ ಪಾಟೀಲ್, ಕಸಾಪ ತಾಲೂಕು ಗೌರವ ಕಾರ್ಯದರ್ಶಿ ರಮೇಶ ಉಮ್ಮಾಪುರೆ, ಕೋಶಾಧ್ಯಕ್ಷ ರುದ್ರೇಶ್ವರ ಗೋರ್ಟಾ, ಶಾಂತಯ್ಯ ಮಠಪತಿ, ವೀರಯ್ಯ ಸ್ಥಾವರಮಠ, ಮಲ್ಲಿಕಾರ್ಜುನ ನಂದಿ, ಅಮೃತರೆಡ್ಡಿ ಇತರರಿದ್ದರು.

ಚನ್ನವೀರ ಜಮಾದಾರ ಆಶಯ ಭಾಷಣ ಮಾಡಿದರು. ಕಸಾಪ ಮಹಿಳಾ ಘಟಕದ ಅಧ್ಯಕ್ಷೆ ನಾಗಮ್ಮ ಭೂರೆ ಸ್ವಾಗತಿಸಿದರು. ದೇವಿದಾಸ ಜಾಧವ್ ವಂದಿಸಿದರು. ರಾವು ಬಾಯಿ ನಿರೂಪಣೆ ಮಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಡಾ.ಶಿವಲೀಲಾ ಮಠಪತಿ ಅವರ ಬಲಿತ ಕಲೆ ಕವನ ಸಂಕಲನವನ್ನು ನಿವೃತ್ತ ಅಧಿಕಾರಿ ದಿವಾಕರ್ ಎಸ್ ಲೋಕಾರ್ಪಣೆ ಮಾಡಿದರು. ಗವಿಮಠದ ಅಭಿನವ ಶ್ರೀ, ಶಾಸಕ ಶರಣು ಸಲಗರ, ಸಾವಿತ್ರಿ ಸಲಗರ, ಶಿವಲಿಂಗ ಹೇಡೆ, ಶಾಂತಲಿಂಗ ಮಠಪತಿ ಇತರರಿದ್ದರು.

> ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಭಾರತೀಯ ಸಂಸ್ಕೃತಿ ಹಾಳಾಗುತ್ತಿದೆ. ಸಾಹಿತ್ಯದ ಕಾರ್ಯಕ್ರಮಗಳ ಮೂಲಕ ನಮ್ಮ ನೆಲಮೂಲ ಸಂಸ್ಕೃತಿ ಎತ್ತಿ ಹಿಡಿಯಬಹುದು.
> | ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 22 ನವೆಂಬರ್ 2022
22 NOVEMBER 2022

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶುಕ್ರವಾರ 6 ಜನವರಿ 2023
6 JANUARY 2023

ಮಕ್ಕಳಲ್ಲಿ ಸಂಸ್ಕೃತಿ ಬೆಳೆಸಲು ಕಾಳಜಿ ವಹಿಸಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮಕ್ಕಳಲ್ಲಿ ಭಾರತೀಯ ಸಂಸ್ಕೃತಿ ಬೆಳೆಸುವಲ್ಲಿ ಪಾಲಕರು ಕಾಳಜಿ ವಹಿಸಬೇಕು ಎಂದು ಸಂತಪುರನ ಪ್ರೌಢ ಶಾಲೆ ಶಿಕ್ಷಕ, ಸಾಹಿತಿ ಶಿವಲಿಂಗ ಹೇಡೆ ಹೇಳಿದರು.

ತ್ರಿಪುರಾಂತ ಗವಿಮಠದಲ್ಲಿ ಕನ್ನಡ ಸಾಹಿತ್ಯ ಪರಿಷತ್, ಅಭಿನವಶ್ರೀ ಪ್ರಕಾಶನ ತ್ರಿಪುರಾಂತ, ಪ್ರತಿಮಾ ಪ್ರಕಾಶನ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ಸಾಹಿತಿ ವೀರಶೆಟ್ಟಿ ಪಾಟೀಲ್ ಸಂಪಾದಿತ 'ನಗುಮೊಗದ ಜನ್ಮೋತ್ಸವ' ಕವನ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಔರಾದ ಸರ್ಕಾರಿ ಐಟಿಐ ಪ್ರಾಚಾರ್ಯ ಶಿವಶಂಕರ ಟೋಕರೆ ಮಾತನಾಡಿ, ಮೊಬೈಲ್ ಹಾವಳಿಯಿಂದ ಬರೆಯುವ, ಓದುವ ಹವ್ಯಾಸ ಕಡಿಮೆಯಾಗುತ್ತಿದೆ ಎಂದರು. ಸಾನ್ನಿಧ್ಯ ವಹಿಸಿದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಕೃತಿಯ ಸಂಪಾದಕ ವೀರೇಟ್ಟಿ ಎಂ.ಪಾಟೀಲರು ಪ್ರಾಸ್ತಾವಿಕ ಮಾತನಾಡಿದರು. ಕಸಾಪ ಜಿಲ್ಲಾಧ್ಯಕ್ಷ ಸುರೇಶ ಚನ್ನಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕುಮಾರ ಸಾತ್ವಿಕ, ಸಾಹಿತಿ ರೇವಣಸಿದ್ಧಪ್ಪ ದೊರೆಗೋಳ, ಸದ್ಭೋದನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಪ್ರತಿಮಾ ಪಾಟೀಲ್, ಪ್ರಮುಖರಾದ ಶಾಂತಲಿಂಗ ಮಠಪತಿ, ಪ್ರಾಚಾರ್ಯ ಡಾ.ರುದ್ರಮಣಿ ಮಠಪತಿ, ನಿತೀನ ನೀಲಕಂಠೆ, ಶಿವಾನಂದ ಪಟವಾಡಿ, ಅಭೀಷೇಕ ಮಠಪತಿ, ನಾಗಮ್ಮ ಭೂರೆ, ಭಾನುದಾಸ ಪಾಟೀಲ್, ಸಂಜಯ ರೋಹಿಲೆ, ಶಶಿಧರ ಪಾಟೀಲ್, ರಾಜಕುಮಾರ ಮದಕಟ್ಟಿ ಇತರರಿದ್ದರು. ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ ಸ್ವಾಗತಿಸಿದರು. ನಾಗೇಂದ್ರ ಬಿರಾದಾರ ವಂದಿಸಿದರು. ಡಾ.ಶಿವಲೀಲಾ ಮಠಪತಿ ನಿರೂಪಣೆ ಮಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ವೀರಶೆಟ್ಟಿ ಪಾಟೀಲ್ ಸಂಪಾದಿತ ನಗುಮೊಗದ ಜನ್ಮೋತ್ಸವ ಕವನ ಸಂಕಲನ ಬಿಡುಗಡೆ ಮಾಡಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸುರೇಶ ಚನ್ನಶೆಟ್ಟಿ, ಶಿವಲಿಂಗ ಹೇಡೆ, ಶಿವಶಂಕರ ಟೋಕರೆ, ಶಾಂತಲಿಂಗ ಮಠಪತಿ ಇತರರಿದ್ದರು.

ಜನ್ಮೋತ್ಸವ ಪ್ರಶಸ್ತಿ ಪ್ರದಾನ

ಕಸಾಪ ಜಿಲ್ಲಾ ಮತ್ತು ಎಲ್ಲ ತಾಲೂಕು ಅಧ್ಯಕ್ಷರು ಹಾಗೂ ನಗುಮೊಗದ ಜನ್ಮೋತ್ಸವ ಕವನ ಸಂಕಲನದಲ್ಲಿ ಕವನ ಬರೆದವರಿಗೆಲ್ಲ ಜನ್ಮೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಸಾಪ ಜಿಲ್ಲಾಧ್ಯಕ್ಷ ಸುರೇಶ ಚೆನ್ನಶೆಟ್ಟಿ, ತಾಲೂಕು ಅಧ್ಯಕ್ಷರಾದ ಎಂ.ಎಸ್.ಮನೋಹರ, ನಾಗಭೂಷಣ ಮಾಮಡಿ, ರಮೇಶ ಸಲಗರ, ಸಿದ್ಧಲಿಂಗ ವಿ. ನಿರ್ಣಾ, ನಾಗರಾಜ ಹಾವಣ್ಣಾ, ಶಾಂತಲಿಂಗ ಮಠಪತಿ, ನಗುಮೊಗದ ಜನ್ಮೋತ್ಸವ ಸಂಕಲನದಲ್ಲಿ ಕವಿತೆಗಳು ಬರೆದ ಸರೋಜಿನಿ ಪಿ.ಹಿರೇಮಠ, ಪಿ.ಜಿ.ಹಿರೇಮಠ, ಶಿವಲಿಂಗ ಹೇಡೆ, ಡಾ.ರುದ್ರಮಣಿ ಮಠಪತಿ, ನಾಗೇಂದ್ರ ಬಿರಾದಾರ, ಮಲ್ಲಿಕಾರ್ಜುನ ಕಾಡಾದಿ, ರೇವಣಸಿದ್ಧಪ್ಪ ದೊರೆಗಳ್, ಶಿವಕುಮಾರ ಸ್ವಾಮಿ ಯರಬಾಗ, ಡಾ. ಶಿವಲೀಲಾ ಮಠಪತಿ, ಡಾ.ಚಿತ್ರಶೇಖರ ಚಿರಳ್ಳಿ, ಪವಿತ್ರಾ ಗಿರಗಂಟೆ, ಪತ್ರಕರ್ತ ಡಿ.ಕೆ ಪ್ರಲ್ಹಾದ, ಡಾ.ಭೀಮಾಶಂಕರ ಬಿರಾದಾರ, ಪ್ರಕಾಶ ಜಮಾದಾರ, ಅಂಬ್ರೀಶ್ ಜಮಾದಾರ ಸೇರಿ ಹಲವರಿಗೆ ಜನ್ಮೋತ್ಸವ ಪ್ರಶಸ್ತಿ ನೀಡಲಾಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಗುರುವಾರ 25 ಆಗಸ್ಟ್ 2022
25 AUGUST 2022

ಡಾ.ಅಭಿನವ ಶ್ರೀಗಳ ನುಡಿ | ಸಂಸ್ಥಾನ ಗವಿಮಠದಲ್ಲಿ ಉಪನ್ಯಾಸ ಮಾಲೆ

ಸತ್ಯಶುದ್ಧ ಕಾಯಕ ದೇವರಲ್ಲಿ ನಿಷ್ಠೆ ಅವಶ್ಯ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ದೇವರು ಒಬ್ಬನೇ ಇದ್ದಾನೆ. ಆದರೆ ಹೆಸರುಗಳು ಅನಂತವಾಗಿವೆ. ಆತ ನಿರಾಕಾರ, ನಿರ್ಗುಣ ಎಂದು ನಗರದ ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಶ್ರಾವಣ ಮಾಸದ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಸೋಮವಾರ ಸಂಜೆ ಹಮ್ಮಿಕೊಂಡಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಜಗದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಮೂಲಕ ದೇವರ ಈ ನಿರಾಕಾರ ಸ್ವರೂಪವನ್ನು ಏಕಂ ಸತ್ ವಿಪ್ರಾ, ಬಹುದಾ ವದಂತಿ ಎಂದು ಜಗತ್ತಿಗೆ ಬೋಧಿಸಿದ್ದಾರೆ. ಹೀಗಾಗಿ ನಡೆ-ನುಡಿ ಒಂದಾಗಿ ಸತ್ಯಶುದ್ಧ ಕಾಯಕ ಮಾಡುತ್ತ ದೇವರಲ್ಲಿ ನಿಷ್ಠೆ ಹೊಂದಿ, ಧ್ಯಾನ, ಪೂಜೆ, ಪ್ರಾರ್ಥನೆ, ಜಪ ಮುಂತಾದ ವ್ರತಗಳನ್ನು ಶುದ್ಧ ಮನಸ್ಸಿನಿಂದ ಮಾಡಿದರೆ ದೇವರ ಕೃಪೆ ಕಿಂಚಿತ್ತಾದರೂ ಲಭಿಸಬಹುದು ಎಂದು ನುಡಿದರು.

ಮಕ್ಕಳ ವೈದ್ಯ ಡಾ.ಜಿ.ಎಸ್.ಭುರಳೆ ಮಾತನಾಡಿ, ದುಶ್ಚಟಗಳಿಂದ ಆರೋಗ್ಯ ಹಾಳಾಗುತ್ತದೆ. ಗುಟ್ಕಾ, ತಂಬಾಕುಗಳಂಥ ಚಟಗಳಿಗೆ ಯುವಕರು ಆಕರ್ಷಿತರಾಗಬಾರದು. ಆರೋಗ್ಯ ಕಾಯ್ದುಕೊಂಡು ಉತ್ತಮ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು. ಮಕ್ಕಳ ಶಿಕ್ಷಣದ ಜತೆಗೆ ಆರೋಗ್ಯದ ಬಗ್ಗೆಯೂ ಪಾಲಕರು ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು.

ಹಿರಿಯಜೀವಿ ಸುಭದ್ರಾತಾಯಿ ವೀರಯ್ಯ ಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ಸ್ವಾಮಿ, ಲೋಕನಾಥ ಸ್ವಾಮಿ, ಸಿದ್ಧಲಿಂಗಪ್ಪ ಪೋಲೀಸ್ ಪಾಟೀಲ್, ರುದ್ರಮುನಿ ಹಿರೇಮಠ ಇತರರಿದ್ದರು.

ರುದ್ರಮುನಿ ಗಚ್ಚಿನಮಠ ವೇದಘೋಷ ಮಾಡಿದರು. ಸಂಸ್ಥೆ ಪ್ರಧಾನ ಕಾರ್ಯದರ್ಶಿ ಪ್ರೊ. ರುದ್ರೇಶ್ವರ ಗೋರ್ಟಾ ಸ್ವಾಗತಿಸಿದರು. ಪ್ರೊ. ಸೂರ್ಯಕಾಂತ ಶೀಲವಂತ ನಿರೂಪಣೆ ಮಾಡಿದರು. ವೀರಣ್ಣ ಶೀಲವಂತ ಪ್ರಾರ್ಥನೆ ಗೀತೆ ಹಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಸಂಸ್ಥಾನ ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಸೋಮವಾರ ಸಂಜೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸುಭದ್ರಾತಾಯಿ ವೀರಯ್ಯ ಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಡಾ.ಅಭಿನವ ಶ್ರೀಗಳು, ಡಾ.ಜಿ.ಎಸ್.ಭುರಳೆ, ಬಸವಂತಪ್ಪ ಲವಾರೆ, ಸೂರ್ಯಕಾಂತ ಶೀಲವಂತ ಇತರರಿದ್ದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಸಂಸ್ಥಾನ ಗವಿಮಠದಲ್ಲಿ ಸೋಮವಾರ ಶ್ರಾವಣ ಮಾಸ ಅಂಗವಾಗಿ ಹಮ್ಮಿಕೊಂಡಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಬೀದರ್ ಜಿಲ್ಲಾ ಪದವಿಪೂರ್ವ ಕಾಲೇಜು ಪ್ರಾಚಾರ್ಯರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಸುರೇಶ ಆಕ್ಕಣ್ಣ ಅವರನ್ನು ಶ್ರೀ ಡಾ.ಅಭಿನವ ಘನಲಿಂಗ ಶಿವಾಚಾರ್ಯರು ಸನ್ಮಾನಿಸಿ ಆಶೀರ್ವದಿಸಿದರು. ಶರಣಪ್ಪ ಬಿರಾದಾರ, ಬಾಬುರಾವ ಉಳ್ಳೆ, ಪ್ರೊ.ರುದ್ರೇಶ್ವರ ಗೋರ್ಟಾ, ಮಲ್ಲಿಕಾರ್ಜುನ ಆಲಗುಡೆ ಇತರರಿದ್ದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ಸಂಸ್ಥಾನ ಗವಿಮಠದಲ್ಲಿ ದಸರಾ ಹಬ್ಬದ ನಿಮಿತ್ತ ಬುಧವಾರ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬನ್ನಿ ಮರಕ್ಕೆ ಪೂಜೆ ಸಲ್ಲಿಸಿದರು. ಶಾಸಕ ಶರಣು ಸಲಗರ, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಉದ್ಯಮಿ ಧನರಾಜ ತಾಳಂಪಳ್ಳಿ, ಗುಂಡುರೆಡ್ಡಿ ಕಮಲಾಪುರೆ, ರಾಜಕುಮಾರ ಸುಗುರೆ, ಶಬ್ಬೀರ್ ಪಾಷಾ, ಶರಣಪ್ಪ ಬಿರಾದಾರ, ಪ್ರೋ. ಶಾಂತಲಿಂಗ ಮಠಪತಿ, ಎ. ಜಿ. ಪಾಟೀಲ್, ಮಲ್ಲಿಕಾರ್ಜುನ ನಂದಿ, ಕಾರ್ತಿಕ ಬಿರಾದಾರ, ಪ್ರೋ.ರುದ್ರೇಶ್ವರ ಸ್ವಾಮಿ ಇತರರಿದ್ದರು.

Scanned with OKEN Scanner

ವಿಜಯವಾಣಿ ಪತ್ರಿಗಳು



ಬಸವಕಲ್ಯಾಣದಲ್ಲಿ ಮಂಗಳವಾರ ಆಜಾದಿ ಕಾ ಅಮೃತ ಮಹೋತ್ಸವ ಹಾಗೂ ಕಾರ್ಗಿಲ್ ವಿಜಯೋತ್ಸವ ನಿಮಿತ್ತ ಹಮ್ಮಿಕೊಂಡಿದ್ದ 108 ಅಡಿ ಉದ್ದದ ತಿರಂಗಾ ಯಾತ್ರೆಗೆ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು. ಮಾಜಿ ಎಂಎಲ್ಸಿ ವಿಜಯಸಿಂಗ್, ತಹಸೀಲ್ದಾರ್ ಸಾವಿತ್ರಿ ಸಲಗರ, ಅನೀಲ ಭುಸಾರೆ, ಗುಂಡಾರೆಡ್ಡಿ, ಪ್ರದೀಪ ವಾತಡೆ, ಅಮೃತ ಸಿಂಗ್ ದಾಮಿ, ದೀಪಕ ಮಾಲಗಾರ, ಕೃಷ್ಣಾ ಗೋಣೆ, ಲೋಕೇಶ ಮೋಳಕೆರೆ, ವಿನೋದ ಪಾಟೀಲ್, ಗುರು ದೇಗಾಂವ ಇತರರಿದ್ದರು.

ಕಲ್ಯಾಣದಲ್ಲಿ 108 ಅಡಿ ಉದ್ದದ ತಿರಂಗಾ ಯಾತ್ರೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಭಾರತ ಸ್ನೇಹಕ್ಕೆ ಬದ್ಧ ಸಮರಕ್ಕೂ ಸಿದ್ಧ ಎನ್ನುವುದನ್ನು ಜಾಗತಿಕ ಮಟ್ಟದಲ್ಲಿ ಸಾಬಿತುಪಡಿಸಿದ ದಿನವೇ ಕಾರ್ಗಿಲ್ ವಿಜಯ ದಿವಸ. ಭಾರತೀಯ ಯೋಧರು ಪಾಕಿಸ್ತಾನಿ ನುಸುಳುಕೋರರ ಹುಟ್ಟಡಗಿಸಿ ವಿಜಯ ಪತಾಕೆ ಹಾರಿಸಿದ ದಿನವಿದು ಎಂದು ಮಾತೃಭೂಮಿ ಸೇವಾ ಪ್ರತಿಷ್ಠಾನದ ಸಂಸ್ಥಾಪಕ ಗುರುನಾಥ ರಾಜಗೀರಾ ಹೇಳಿದರು.

ಮಾತೃಭೂಮಿ ಸೇವಾ ಪ್ರತಿಷ್ಠಾನ, ಕಸಾಪ ಯುವ ಘಟಕ ಹಾಗೂ ಸಮರ್ಥ ಸೇವಾ ಸಂಸ್ಥೆ ಬೀದರ್ ಸಹಯೋಗದಲ್ಲಿ ಆಜಾದಿ ಕಾ ಅಮೃತ ಮಹೋತ್ಸವ ಹಾಗೂ ಕಾರ್ಗಿಲ್ ವಿಜಯೋತ್ಸವದ ನಿಮಿತ್ತ ಮಂಗಳವಾರ ನಗರದ ಮಡಿವಾಳ ವೃತ್ತದಿಂದ ಬಸವೇಶ್ವರ ವೃತ್ತದವರೆಗೆ ಹಮ್ಮಿಕೊಂಡಿದ್ದ 108 ಅಡಿ ಉದ್ದದ ತಿರಂಗಾ ಯಾತ್ರೆಯಲ್ಲಿ ಮಾತನಾಡಿದ ಅವರು, ಕಾರ್ಗಿಲ್ ವಿಜಯ ದಿವಸ್ ಭಾರತೀಯ ಯೋಧರ ತ್ಯಾಗ, ದೇಶ ಪ್ರೇಮ, ಸಾಹಸ, ಪರಾಕ್ರಮ, ಸಮರ್ಪಣೆ ಭಾವವನ್ನು ನೆನಪಿಸುತ್ತದೆ ಎಂದರು.

ಗವಿಮಠ ಸಂಸ್ಥಾನದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತ್ರಿಪುರಾಂತನ ಮಡಿವಾಳ ವೃತ್ತದ ಬಳಿ ತಿರಂಗಾ ಯಾತ್ರೆಗೆ ಚಾಲನೆ ನೀಡಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಂಕಲ್ಪ ಕಾಲೇಜು, ಎಸ್ಎಸ್ಕೆಬಿ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಯಾತ್ರೆಯಲ್ಲಿ ಭಾಗವಹಿಸಿದ್ದರು.

ಮಾಜಿ ಎಂಎಲ್ಸಿ ವಿಜಯಸಿಂಗ್, ತಹಸೀಲ್ದಾರ್ ಸಾವಿತ್ರಿ ಸಲಗರ,

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 27 ಜುಲೈ 2022
27 JULY 2022

ಬಸವಕಲ್ಯಾಣದಲ್ಲಿ 108 ಅಡಿ ಉದ್ದದ ತಿರಂಗಾ ಯಾತ್ರೆ

ಬಸವಕಲ್ಯಾಣ: ಭಾರತ ತಾನು ಸ್ನೇಹಕ್ಕೆ ಬದ್ಧ ಸಮರಕ್ಕೂ ಸಿದ್ಧ ಎಂದು ಜಾಗತಿಕ ಮಟ್ಟದಲ್ಲಿ ಸಾಬೀತು ಪಡಿಸಿದ ದಿನವೇ ಕಾರ್ಗಿಲ್ ವಿಜಯ ದಿವಸ್. ಪಾಕಿಸ್ತಾನಿ ನುಸುಳುಕೋರರ ಹುಟ್ಟಡಗಿಸಿ ಭಾರತೀಯ ಯೋಧರು ವಿಜಯ ಪತಾಕೆ ಹಾರಿಸಿದ ದಿನವಿದು ಎಂದು ಮಾತೃಭೂಮಿ ಸೇವಾ ಪ್ರತಿಷ್ಠಾನದ ಸಂಸ್ಥಾಪಕ ಗುರುನಾಥ ರಾಜಗೀರಾ ಹೇಳಿದರು.

ಮಾತೃಭೂಮಿ ಸೇವಾ ಪ್ರತಿಷ್ಠಾನ, ಕಸಾಪ ಯುವ ಘಟಕ ಹಾಗೂ ಸಮರ್ಥ ಸೇವಾ ಸಂಸ್ಥೆಯಿಂದ ಆಜಾದಿ ಕಾ



ಬಸವಕಲ್ಯಾಣ: ನಗರದಲ್ಲಿ ಆಜಾದಿ ಕಾ ಅಮೃತ್ ಮಹೋತ್ಸವ ಪ್ರಯುಕ್ತ ಮಾತೃಭೂಮಿ ಸೇವಾ ಪ್ರತಿಷ್ಠಾನದಿಂದ ತಿರಂಗಾ ಯಾತ್ರೆ ನಡೆಯಿತು.



ಕಲಬುರಗಿ ಉದಯವಾಣಿ
ಬುಧವಾರ, ಜುಲೈ 27, 2022

Scanned with OKEN Scanner

ಚಾಂಗಲೇರಾದಲ್ಲಿ ಲಕ್ಷಾಂತರ ಭಕ್ತರ ಜೈಘೋಷ । ಪಲ್ಲಕ್ಕಿ ಮೆರವಣಿಗೆ ಸಂಭ್ರಮ

ವೀರಭದ್ರೇಶ್ವರ ರಥ ವೈಭವ

ಪುಣ್ಯಕ್ಷೇತ್ರದ ಅಭಿವೃದ್ಧಿಗೆ ಸಂಘಟಿತ ಪ್ರಯತ್ನ

ವಿಜಯವಾಣಿ ಸುದ್ದಿಜಾಲ ಚಿಟಗುಪ್ಪ

ಚಾಂಗಲೇರಾದ ಶ್ರೀವೀರಭದ್ರೇಶ್ವರ ಜಾತ್ರೆ ನಿಮಿತ್ತ ಬುಧವಾರ ಮಧ್ಯರಾತ್ರಿ ಅಪಾರ ಭಕ್ತ ಸಮೂಹದ ಮಧ್ಯೆ ರಥೋತ್ಸವ ಸಡಗರ ಸಂಭ್ರಮದಿಂದ ಅದ್ಧೂರಿಯಾಗಿ ಜರುಗಿತು.

ಸಂಜೆ ದೇವಸ್ಥಾನದಿಂದ ಮುತ್ತಿನ ಹಾಗೂ ಬೆಳ್ಳಿ ಪಲ್ಲಕ್ಕಿ ಉತ್ಸವ ವಿವಿಧ ವಾದ್ಯ ಮೇಳಗಳ ವಿವಿಧ ಕಲಾ ತಂಡಗಳು, ಪುರವಂತಿಕೆ, ವೀರಗಾಸೆ, ಭಜನೆ ಸೇರಿ, ನಾನಾ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಮೆರವಣಿಗೆ ಥೇರ್ ಮೈದಾನ ತಲುಪಿತು.

ಶ್ರೀ ಗುರುಲಿಂಗ ಶಿವಾಚಾರ್ಯರು, ಶ್ರೀರೇಣುಕಾ ಗಂಗಾಧರ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ರಥೋತ್ಸವಕ್ಕೆ ಶಾಸಕ ಬಂಡೆಪ್ಪ ಖಾಶೆಂಪುರ ಚಾಲನೆ ನೀಡಿದರು. ಸಹಸ್ರಾರು ಭಕ್ತರು ಜೈಘೋಷಣೆಗಳ ಮಧ್ಯೆ ರಥ ಸಾಗಿತು. ಭಕ್ತರು ಬೆಂಡು ಬತ್ತಾಸು ಹಾರಿಸಿ, ಹರಕೆ ತೀರಿಸಿದರು. ತೆಲಂಗಾಣ, ಆಂಧ್ರ ಪ್ರದೇಶ, ಮಹಾರಾಷ್ಟ್ರದ ವಿವಿಧೆಡೆಯಿಂದ ಆಗಮಿಸಿದ ಅಪಾರ ಭಕ್ತರು ಪಾಲ್ಗೊಂಡಿದ್ದರು. ಗುರುವಾರ ಬೆಳಗ್ಗೆ ಪೈಲ್ವಾನರಿಂದ ಜಂಗಿ ಕುಸ್ತಿಗಳು ಜರುಗಿದವು.



ಚಾಂಗಲೇರಾದ ಶ್ರೀ ವೀರಭದ್ರೇಶ್ವರ ರಥೋತ್ಸವ.

ವಿಜಯವಾಣಿ ಸುದ್ದಿಜಾಲ ಚಿಟಗುಪ್ಪ

ಚಾಂಗಲೇರಾದ ಶ್ರೀ ವೀರಭದ್ರೇಶ್ವರ ದೇವಸ್ಥಾನ ಈ ಭಾಗದ ಪುಣ್ಯ ಕ್ಷೇತ್ರವಾಗಿದ್ದು, ವೀರಭದ್ರೇಶ್ವರ ಮಹಿಮೆ ಅಪಾರ ಎಂದು ಶಾಸಕ ಬಂಡೆಪ್ಪ ಖಾಶೆಂಪುರ ಹೇಳಿದರು.

ಚಾಂಗಲೇರಾದ ಶ್ರೀ ವೀರಭದ್ರೇಶ್ವರ ಜಾತ್ರೆಯ ನಿಮಿತ್ತ ಬುಧವಾರ ರಾತ್ರಿ ಏರ್ಪಡಿಸಿದ್ದ ಧಾರ್ಮಿಕ ಸಭೆಯಲ್ಲಿ ಮಾತನಾಡಿ, ಜಾತ್ರೆಯಲ್ಲಿ ತೆಲಂಗಾಣ, ಮಹಾರಾಷ್ಟ್ರ ಸೇರಿ ರಾಷ್ಟ್ರದ ವಿವಿಧೆಡೆಯಿಂದ ಲಕ್ಷಾಂತರ ಭಕ್ತರು ಆಗಮಿಸುವುದು ದೇವರ ಮಹಿಮೆಗೆ ಸಾಕ್ಷಿ. ಜಾತ್ರೆ, ಧರ್ಮ ಸಭೆ, ಸಮಾರಂಭಗಳಲ್ಲಿ ಪಾಲ್ಗೊಳ್ಳುವುದರಿಂದ ಮನಸ್ಸಿಗೆ ಶಾಂತಿ, ನೆಮ್ಮದಿ ದೊರೆಯುತ್ತದೆ ಎಂದು ಹೇಳಿದರು.

ಪುಣ್ಯ ಕ್ಷೇತ್ರದ ಅಭಿವೃದ್ಧಿಗಾಗಿ ಸುಮಾರು 5 ಕೋಟಿ ರೂ. ನೀಡುವ ಭರವಸೆಯಿಂದ ಈಗಾಗಲೇ 3.5 ಕೋಟಿ ರೂ. ಒದಗಿಸಲಾಗಿದೆ. ಬಾಕಿ 1.5 ಕೋಟಿ ರೂ. ಶೀಘ್ರ ಒದಗಿಸಲಾಗುವುದು. ಎಲ್ಲರೂ ಒಗ್ಗೂಡಿ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡೋಣ ಎಂದರು.

ತಡೋಳದ ಶ್ರೀ ರಾಜೇಶ್ವರ ಶಿವಾಚಾರ್ಯರು, ಹುಮನಾಬಾದ್ ಹಿರೇಮಠದ ಶ್ರೀ ರೇಣುಕಾ ಗಂಗಾಧರ ಶಿವಾಚಾರ್ಯರು, ಬಸವಕಲ್ಯಾಣದ ಶ್ರೀ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು.

ಜೆಡಿಎಸ್ ಮುಖಂಡ ಸಂತೋಷ ರಾಸೂರ, ಪ್ರಮುಖರಾದ ವಿಜಯಕುಮಾರ ವಾಲಿ, ಮಲ್ಲಪ್ಪ ಗಣಗೊಂಡ, ಕಂಟೆಪ್ಪ ತುಮಕುಂಟಾ, ದೇವಸ್ಥಾನ ಇಒ ಅನಂತರಾವ ಕುಲಕರ್ಣಿ, ಕಾರ್ಯದರ್ಶಿ ಸಂಜುರಾವ ದೇಸಾಯಿ, ಅನಿಲಕುಮಾರ ಪಾಟೀಲ್, ಪಿಎಸ್‌ಐ ಶಿವಕುಮಾರ, ಮಹೇಶಕುಮಾರ ಆನಂತವಾಡಕರ್, ಮಹಾರುದ್ರ ಉಡಬಾಳಕರ್, ರಾಜಶೇಖರ ದಾನಪ್ಪ, ಶಿವಕುಮಾರ ಸಾಲಿ, ವೀರಯ್ಯ ಸ್ವಾಮಿ, ನೀಲಕಂಠ ಇಸ್ಲಾಂಪುರ ಇತರರಿದ್ದರು. ರವೀಂದ್ರ ಘಾರೆಲ್ ಸ್ವಾಗತಿಸಿದರು. ರಾಜಶೇಖರ ಮಳ್ಳಿ ನಿರೂಪಣೆ ಮಾಡಿದರು.



ವಿಜಯವಾಣಿ ಚಿತ್ರ

ಚಾಂಗಲೇರಾದಲ್ಲಿ ಶ್ರೀವೀರಭದ್ರೇಶ್ವರ ಜಾತ್ರೆಯ ಧಾರ್ಮಿಕ ಸಭೆಯನ್ನು ಶಾಸಕ ಬಂಡೆಪ್ಪ ಖಾಶೆಂಪುರ ಉದ್ಘಾಟಿಸಿದರು. ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀರೇಣುಕಾ ಗಂಗಾಧರ ಶಿವಾಚಾರ್ಯರು, ಶ್ರೀ ರುದ್ರಮುನಿ ಶಿವಾಚಾರ್ಯರು, ಇತರರಿದ್ದರು.

'ಅಧ್ಯಾತ್ಮ ಚಿಂತನೆಯಿಂದ ಮನಸ್ಸು ಹಗುರ'

ಪ್ರಜಾವಾಣಿ ವಾರ್ತೆ

ಚಿಟಗುಪ್ಪ: 'ಅಧ್ಯಾತ್ಮ ಚಿಂತನೆಯಿಂದ ಮನಸ್ಸು ಹಗುರವಾಗುತ್ತದೆ' ಎಂದು ತಡೋಳದ ರಾಜೇಶ್ವರ ಶಿವಾಚಾರ್ಯರು ಹೇಳಿದರು.

ತಾಲ್ಲೂಕಿನ ವಳಖಿಂಡಿ ಗ್ರಾಮದಲ್ಲಿ ವಿದ್ಯಾದೇವಿ ಮಾತೆ, ಬಸವರಾಜ ಸ್ವಾಮಿ ಮೋಳಕೇರಿ ಅವರ ಸ್ಮರಣೋತ್ಸವದ ಅಂಗವಾಗಿ ಜಪಯಜ್ಞ, ರುದ್ರಾಭಿಷೇಕ ಪೂಜೆ ನಡೆಸಿಕೊಟ್ಟು ಮಾತನಾಡಿದರು.

'ಅಧ್ಯಾತ್ಮವಿಲ್ಲದ ಅಭಿವೃದ್ಧಿ ಕುರುಡಾದರೆ, ಅಭಿವೃದ್ಧಿಯೇ ಇಲ್ಲದ ಅಧ್ಯಾತ್ಮ ಕುಂಟ ನಡಿಗೆಯಂತೆ. ಇದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು' ಎಂದರು.

'ಉದ್ಯೋಗದ ಅಲಭ್ಯತೆಯಿಂದ ಯುವಜನರು ವಾಮಮಾರ್ಗದೆಡೆಗೆ ಸಾಗುತ್ತಾರೆ. ಹೊಸ ಉದ್ಯೋಗ ಸೃಷ್ಟಿ ಮಾಡಿ, ಯುವಜನರಿಗೆ ನೀಡಿದರೆ ದಾರ್ಶನಿಕರು ಕಂಡ ಕನಸು ನನಸಾಗುತ್ತದೆ' ಎಂದು ಅವರು ಹೇಳಿದರು.



ಚಿಟಗುಪ್ಪ ತಾಲ್ಲೂಕಿನ ವಳಖಿಂಡಿ ಗ್ರಾಮದಲ್ಲಿ ನಡೆದ ವಿದ್ಯಾದೇವಿ ಮಾತೆ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಹುಡಗಿ ವಿರುಪಾಕ್ಷ ಶಿವಾಚಾರ್ಯರು ಮಾತನಾಡಿದರು

ಸಾನ್ನಿಧ್ಯ ವಹಿಸಿದ್ದ ಹುಡಗಿ ವಿರುಪಾಕ್ಷ ಶಿವಾಚಾರ್ಯರು ಮಾತನಾಡಿ,'ಮಾತೆ ವಿದ್ಯಾದೇವಿ ಅವರ ಅಧ್ಯಾತ್ಮಿಕ ಚಿಂತನೆ, ಬದುಕು ಎಲ್ಲರಿಗೂ ಮಾದರಿ' ಎಂದರು. ಬಸವಕಲ್ಯಾಣದ ತ್ರಿಪುರಾಂತ ಗವಿ ಮಠದ ಪೀಠಾಧಿಪತಿ ರುದ್ರಮುನಿ ಶಿವಾಚಾರ್ಯರು ಮಾತನಾಡಿ,'ಇಂದ್ರಿಯ ನಿಗ್ರಹದಿಂದ ಜೀವನದಲ್ಲಿ ಯಶಸ್ಸು ಗಳಿಸಬಹುದು' ಎಂದು ತಿಳಿಸಿದರು. ಗಂಗಾಧರ ಶಿವಾಚಾರ್ಯರು ಹಾಗೂ ಇಟಗಾ ಮುಕ್ತಿಮಠದ ಹಿರಿಯ ಪೀಠಾಧಿಪತಿ ಚನ್ನಮಲ್ಲೇಶ್ವರ ತ್ಯಾಗಿ ಇದ್ದರು.

Scanned with OKEN Scanner

ವಿಜಯವಾಣಿ
ನಂ. 1 ಕನ್ನಡ ದಿನಪತ್ರಿಕೆ
VIJAYAVANI » KALABURAGI
ಗುರುವಾರ 14 ಜುಲೈ 2022
14 JULY 2022

ಡಾ.ಅಭಿನವ ಶ್ರೀ ಅಭಿಮತ | ಗವಿಮಠದಲ್ಲಿ ಪಾದಪೂಜೆ ಮಾಡಿದ ಭಕ್ತಗಣ

ನಿಂತ ನೀರಾಗದೆ ಹರಿಯುವ ನದಿಯಾಗಲಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಗುರು ತನ್ನ ಅರ್ಜಿತ ಜ್ಞಾನವನ್ನು ಲೋಕ ಕಲ್ಯಾಣಾರ್ಥವಾಗಿ ಹಂಚಲು ಸದಾ ಸಂಚಾರಿಯಾಗಿರಬೇಕು. ನಿಂತ ನೀರಾಗದೆ ಹರಿಯುವ ನದಿಯಾಗಬೇಕು ಎಂದು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಸಂಸ್ಥಾನ ಗವಿಮಠದಲ್ಲಿ ಬುಧವಾರ ಗುರು ಪೂರ್ಣಿಮೆ ನಿಮಿತ್ತ ಭಕ್ತರಿಂದ ಹಮ್ಮಿಕೊಂಡ ಗುರು ಪಾದಪೂಜೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ಹಳ್ಳಿಗೆ ಏಕ ರಾತ್ರಿ, ಪಟ್ಟಣಕ್ಕೆ ಪಂಚ ರಾತ್ರಿ. ಇದು ಗುರುವಿನ ಧೈರ್ಯವಾಗಬೇಕು. ಸದ್ವಿಚಾರ ಸತ್ ಚಿಂತಕನಾಗಿರಬೇಕು. ಗುರು ವಿಶ್ವಕುಟುಂಬಿಯಾಗಿರಬೇಕು. ಸರ್ವೇ ಜನಾಃ ಸುಖಿನೋ ಭವಂತು ಇದು ಗುರುವಿನ ಸಂಕಲ್ಪವಾಗಿರಬೇಕು ಎಂದರು.

ಯಾವುದೇ ಸ್ವಜನ ಪಕ್ಷಪಾತ ಗುರುವಿನ ಸ್ಥಾನದಲ್ಲಿದ್ದವರಲ್ಲಿ ಬರಬಾರದು. ಸರ್ವರನ್ನು ಸನ್ಮಾರ್ಗದತ್ತ ಕೊಂಡೊಯ್ಯಲು ಪ್ರಯತ್ನಿಸಬೇಕು. ಗುರು ಯಾವತ್ತೂ ಶುದ್ಧ ವಿದ್ಯೆಯ


ವಿಜಯವಾಣಿ ಚಿತ್ರ

ಬಸವಕಲ್ಯಾಣ ಸಂಸ್ಥಾನ ಗವಿಮಠದಲ್ಲಿ ಬುಧವಾರ ಗುರು ಪೂರ್ಣಿಮೆ ನಿಮಿತ್ತ ಭಕ್ತರಿಂದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಾದಪೂಜೆ ನೆರವೇರಿಸಲಾಯಿತು. ಬಸವಂತಪ್ಪ ಲವಾರೆ, ಸವಿತಾ ಸ್ವಾಮಿ, ರಮೇಶ ಸ್ವಾಮಿ, ವೀರಶೆಟ್ಟಿ ಪಾಟೀಲ್, ಮಡಿವಾಳಪ್ಪ ಇತರರಿದ್ದರು.

ಬೋಧಕನಾಗಿರಬೇಕು. ಶಿಷ್ಯನ ಸಂಸಾರಿಕ ಸಮಸ್ಯೆಗಳನ್ನು ಕೇವಲ ಕೃಪಮಾತ್ರದಿಂದ ನಿವಾರಿಸುವ ಶಕ್ತಿವಂತನಾಗಿರಬೇಕು. ತನ್ನ ಮೌನ ಮಾತ್ರದಿಂದಲೇ ಪರಿಹರಿಸುವವನಾಗಿರಬೇಕು. ಈ ಗುಣಗಳು ಗುರುವಿನಲ್ಲಿ ಸಮ್ಮಿಳಿತಗೊಂಡಿರಬೇಕು ಎಂದರು.

ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ಸ್ವಾಮಿ, ರಮೇಶ ಸ್ವಾಮಿ, ವೀರಶೆಟ್ಟಿ ಪಾಟೀಲ್, ಮಡಿವಾಳಪ್ಪ ಕಲ್ಯಾಣಿ, ಬಸವರಾಜ ಉಪಾಸೆ, ರೇವಣಸಿದ್ದಯ್ಯ ಮಠಪತಿ, ಶಾಂತವೀರ ಸ್ವಾಮಿ, ಗುರುರಾಜ ಹುಲಿಕಾಂತಿಮಠ, ದಯಾನಂದ ಚಂಡಕಾಪುರ, ಸುಭದ್ರಾಬಾಯಿ ವೀರಯ್ಯ, ಶೀಲಾದೇವಿ ಲವಾರೆ, ರೇಣುಕಾ ಸ್ವಾಮಿ, ಪೂರ್ಣಿಮಾ ರುದ್ರೇಶ್ವರ, ಮಲ್ಲಿಕಾರ್ಜುನ ಸ್ವಾಮಿ ಮೊದಲಾದ ಸದ್ಭಕ್ತರು ಪಾಲ್ಗೊಂಡು ಗುರುಗಳ ಪಾದಪೂಜೆ ಮಾಡಿ ದರ್ಶನ - ಆಶೀರ್ವಾದ ಪಡೆದು ಪ್ರಸಾದ ಸ್ವೀಕರಿಸಿದರು.

ಸಾಹಿತ್ಯ ಸಮ್ಮೇಳನದ ಸಮಾರೋಪ; ಪಂಚಾಕ್ಷರಿ ಸ್ವಾಮೀಜಿ ಅಭಿಮತ

'ಮಠ ಕಟ್ಟುವುದರ ಜತೆ ಸಾಹಿತ್ಯ ಸೇವೆ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಮಹಾದೇವಿ ತಾಯಿ ಅವರು ಮಠವನ್ನು ಕಟ್ಟುವುದರ ಜತೆಗೆ ಪ್ರತಿ ವರ್ಷ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸುತ್ತಿರುವುದು ಶ್ಲಾಘನೀಯ ಎಂದು ಬೇಲೂರ ಪಂಚಾಕ್ಷರಿ ಸ್ವಾಮೀಜಿ ಹೇಳಿದ್ದಾರೆ.

ತಾಲ್ಲೂಕಿನ ಸಸ್ತಾಪುರದ ಯಲ್ಲಾಲಿಂಗೇಶ್ವರ ಆಶ್ರಮದಲ್ಲಿ ನಡೆದ 2 ದಿನಗಳ ಕರುನಾಡ ಸಾಹಿತ್ಯ ಸಮ್ಮೇಳನ ಹಾಗೂ ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಸಮಾರೋಪದಲ್ಲಿ ಮಾತನಾಡಿ, ರಾಜಕೀಯ ಬೆಂಬಲವಿಲ್ಲದೆ ಈ ರೀತಿ ಮಾದರಿ ಕಾರ್ಯಕ್ರಮ ಆಯೋಜಿಸಿ ಮಠಾಧೀಶರಿಗೆ ಮಾದರಿಯಾಗಿದ್ದಾರೆ ಎಂದರು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಧರ್ಮಾಚರಣೆಯಿಂದ ಶಾಂತಿ, ನೆಮ್ಮದಿ ಸಾಧ್ಯ. ಯಲ್ಲಾಲಿಂಗೇಶ್ವರರು ಪವಾಡ ಪುರುಷ ಆಗಿದ್ದರು' ಎಂದರು.

ಮುಚಳಂಬ ಪ್ರಣವಾನಂದ ಸ್ವಾಮೀಜಿ, ಸಮ್ಮೇಳನಾಧ್ಯಕ್ಷ ಬಸವರಾಜ ದಯಾಸಾಗರ, ಸಾಹಿತಿ ಡಾ.ಗವಿಸಿದ್ದಪ್ಪ



ಬಸವಕಲ್ಯಾಣ ತಾಲ್ಲೂಕಿನ ಸಸ್ತಾಪುರದಲ್ಲಿ ಗುರುವಾರ ನಡೆದ ಕರುನಾಡು ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಬೇಲೂರ ಪಂಚಾಕ್ಷರಿ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು. ಮುಚಳಂಬ ಪ್ರಣವಾನಂದ ಸ್ವಾಮೀಜಿ, ರುದ್ರಮುನಿ ಶಿವಾಚಾರ್ಯರು ಇದ್ದರು

ಪಾಟೀಲ ಮಾತನಾಡಿದರು. ಅಂಬಿಗರ ಚೌಡಯ್ಯ ದೇವಸ್ಥಾನದ ರತ್ನಾಕಾಂತ ಸ್ವಾಮೀಜಿ, ಸದಾನಂದ ಅಪ್ಪಗಳು, ಮಹಾದೇವಿತಾಯಿ ಇದ್ದರು.

ಸಾಹಿತ್ಯಶ್ರೀ ಪ್ರಶಸ್ತಿ: ಜಿ.ಎಸ್. ಮಾಲಿಪಾಟೀಲ, ಅರ್.ಎಸ್. ಕುಲಕರ್ಣಿ, ಡಾ.ಅಶೋಕಬಾಬು, ಡಾ. ರಾಜಕುಮಾರ ಮಾಳಗೆ, ಡಾ.ಶಿವಗಂಗಾ ಬಿಲಗುಂದಿ, ಡಾ.ಕರುಣಾ ಜಮದರ ಖಾನಿ, ಡಾ.ಶರಣಪ್ಪ ಚಲವಾದಿ, ಡಾ.ಶರಣಮ್ಮ ಪಾಟೀಲ. ಪತ್ರಕರ್ತಸಿರಿ ಪ್ರಶಸ್ತಿ: ಮಾರ್ತಂಡ ಜೋಶಿ, ರಾಜೇಂದ್ರ ಗೋಖಲೆ, ನಾಗಪ್ಪ ನಿಷ್ಠೆ ಸಮಾಜ ಸೇವೆಸಿರಿ: ನರಸಿಂಗರೆಡ್ಡಿ ಗದ್ದಲಗಾಂವ, ನಂದಕುಮಾರ ಚಿದ್ರಿ, ಬಿ.ಎನ್.ಬಾಚಿಮಟ್ಟಿ, ನಾಗೇಂದ್ರ ಠಾಕೂರ. ಡಾ.ನಾಗನಾಥ ಹುಲಸೂರೆ, ದೀಪಕ ಕಮತರ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕವಿಗೋಷ್ಠಿ: ಕಾವ್ಯ ರಚನೆ ಸುಲಭವಲ್ಲ. ಅದು ಶ್ರಮದಿಂದ ಕೂಡಿದ್ದರೆ ಅದಕ್ಕೆ ಬದ್ಧತೆಯಿರುತ್ತದೆ. ಮನುಷ್ಯ ಪರವಾದ ಸಾಹಿತ್ಯ ರಚನೆ ಆಗಬೇಕು' ಎಂದು ಸಾಹಿತಿ ಡಾ.ಸದಾಶಿವ ದೊಡ್ಮನಿ ನುಡಿದರು.

ಡಾ.ಎಂ.ಜಿ.ದೇಶಪಾಂಡೆ ಅಧ್ಯಕ್ಷತೆ ವಹಿಸಿದ್ದರು. ರಾಜಮತಿ ಕೋರಾಳೆ, ನಾಗೇಶ ಸ್ವಾಮಿ, ಸಂಗಮೇಶ ಜ್ಯಾಂತೆ, ಡಾ.ಮಹೇಶ್ವರಿ ಹೇಡೆ, ಶಾಂತಲಿಂಗ ಮಠಪತಿ ಇದ್ದರು. ಕವಿಗಳಾದ ವೀರಶೆಟ್ಟಿ ಪಾಟೀಲ, ನಾಗೇಂದ್ರ ಬಿರಾದಾರ, ಮಲ್ಲಿಕಾರ್ಜುನ ಕಾಡಾದಿಮಠ, ಸರೋಜಿನಿ ಪಿ.ಹಿರೇಮಠ, ಸೂರ್ಯಕಾಂತ ಸಸಾನೆ, ನಿಜಲಿಂಗ ರಗಟೆ, ಅವಿನಾಶ ಬಿರಾದಾರ, ಅಜೀತ ನೇಳಗೆ, ಸ್ಮಿತಾರಾಣಿ, ಮೊಯಿನುದ್ದಿನ್, ವಿಶ್ವನಾಥ ಬಿರಾದಾರ, ಓಂಕಾರ ಪಾಟೀಲ, ಚೇತನ ಬಿರಾದಾರ ಕವನ ವಾಚಿಸಿದರು.

ಶುಕ್ರವಾರ • ನವೆಂಬರ್ 11, 2022 ಪ್ರಜಾವಾಣಿ

Scanned with OKEN Scanner

ಪ್ರಾದೇಶಿಕ ಕನ್ನಡ ದಿನ ಪತ್ರಿಕೆ
ಮಲ್ಲಮ್ಮ ನುಡಿ
ಶುಕ್ರವಾರ 06- 01- 2023



ಬಸವಕಲ್ಯಾಣ:ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ–ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು – ಅಭಿನವಶ್ರೀ ಪ್ರಕಾಶನ ಮತ್ತು ಪ್ರತಿಮಾ ಪ್ರಕಾಶನ ಸಹಯೋಗದೊಂದಿಗೆ ಪ್ರತಿಮಾ ವೀರಶೆಟ್ಟಿ ಪಾಟೀಲ ದಂಪತಿಯವರ ಮಗ "ಸಾತ್ವಿಕ"ನ ಹುಟ್ಟುಹಬ್ಬದ ನಿಮಿತ್ಯ ವೀರಶೆಟ್ಟಿ ಎಂ.ಪಾಟೀಲ ಸಂಪಾದಿದ "ನಗುಮೊಗದ ಜನ್ಮೋತ್ಸವ" ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪೂಜ್ಯಶ್ರೀ ಷ.ಬ್ರ. ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ –ಇಲ್ಲಿನ ಗವಿಮಠದಲ್ಲಿ "ಜನ್ಮೋತ್ಸವ" ಪ್ರಶಸ್ತಿ ನೀಡಿ ಗೌರವಿಸಲಾಯಿತು.(ಮಲ್ಲಮ್ಮ ನುಡಿ ವಾರ್ತೆ)



'ಸಮನ್ವಯತೆ ಸಾಧಿಸಿದ ಏಕೈಕ ಗವಿಮಠ'

ಸಂ.ಕ.ಸಮಾಚಾರ ಬಸವಕಲ್ಯಾಣ

ಪ್ರತಿ ಶ್ರಾವಣ ಮಾಸದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸುವ ಮೂಲಕ ಕ-ಕ ದಲ್ಲಿಯೇ ಸಮನ್ವಯತೆ ಸಾಧಿಸಿದ ಏಕೈಕ ಮಠ ಎಂದರೆ ಅದು ಬಸವಕಲ್ಯಾಣದ ಸಂಸ್ಥಾನ ಗವಿಮಠ ಎಂದು ಅಭಿನವ ಬಸವಲಿಂಗ ಸ್ವಾಮಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರಾವಣ ಮಾಸ ಅಂಗವಾಗಿ ಇಲ್ಲಿಯ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ಗವಿಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಅಂದು ಹಾನಗಲ್ಲ ಶ್ರೀ ಗುರು ಕುಮಾರ ಶಿವಯೋಗಿಗಳು ಗುರು-ವಿರಕ್ತ ಗುರುಗಳಲ್ಲಿ ಸಮನ್ವಯತೆಗಾಗಿ 'ಗುರು-ವಿರಕ್ತರು ಒಂದೇ ಎಂಬ ಸಮತೆ ಸಾರಿತೋ' ಎಂಬ ದಿವ್ಯ ಸಂದೇಶ ಸಾರಿದರು. ಆ ಸಂದೇಶ ಇವತ್ತು ನಮ್ಮ ಸಂಸ್ಥಾನ ಗವಿಮಠವು ಸಾರುತ್ತಿದೆ ಎಂದರು.

ಉಪನ್ಯಾಸಕ ಶ್ರೀನಿವಾಸ ಸಿಂಧೆ ಮಾತನಾಡಿದರು. ನಿವೃತ್ತ ಜಲಾನಯನ ಅಧಿಕಾರಿ ಮಲ್ಲಿಕಾರ್ಜುನ ನಂದಿ ಸಿದ್ಧಕ್ಷತೆ ವಹಿಸಿದ್ದರು. ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಮಹಿಳಾಘಟಕದಅಧ್ಯಕ್ಷೆಸವಿತಾಸ್ವಾಮಿ,ಎ.ಜಿ.ಪಾಟೀಲ್, ಬಾಬುರಾವ ಉಳ್ಳೆ, ಪ್ರೊ. ಸೂರ್ಯಕಾಂತ ಶೀಲವಂತ, ಪ್ರೊ.ರುದ್ರೇಶ್ವರ ಸ್ವಾಮಿ, ರಾಕೇಶ ಪುರವಂತ, ಮಲ್ಲಿಕಾರ್ಜುನ ಅಲಗುಡೆ, ವೀರಣ್ಣ ಶೀಲವಂತ, ಮುಖ್ಯಗುರು ರಮೇಶ ರಾಜೋಳೆ ಮತ್ತಿತರರಿದ್ದರು.

ಭಕ್ತಿ ಭಾವಕ್ಕೆ ಭಗವಂತ ಪ್ರಸನ್ನ

ವಿಕ ಸುದ್ದಿಲೋಕ ಬಸವಕಲ್ಯಾಣ

ಭಗವಂತನು ಭಕ್ತನ ಭಕ್ತಿ ಭಾವಕ್ಕೆ ಪ್ರಸನ್ನನಾಗುವ ಭಾವಲಿಂಗ ಎಂದು ಸಂಸ್ಥಾನ ಗವಿಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣ ಮಾಸದ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕದ ಸಹಯೋಗದಲ್ಲಿ ಗುರುವಾರ ಸಂಜೆ ಆಯೋಜಿಸಲಾಗಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಭಾವೇನ ಗೃಹತೇ ದೇವೋ ಭಗವಾನ್ ಪರಮ: ಶಿವ: ಎಂಬ ಯುಕ್ತಿಯಂತೆ ಆನಂದರೂಪನೂ ಮತ್ತು ಜ್ಞಾನರೂಪನೂ ಆದ ಆ ಭಾವಲಿಂಗ ರೂಪವಾದ ಪರಶಿವನು ಭಕ್ತರು ಮಾಡಿದ ಭಾವನಾಮಯ ಉಪಚಾರಗಳ ಪೂಜೆಯಿಂದ ಪ್ರಸನ್ನನಾಗುತ್ತಾನೆ. ಆದರಂತೆ ಇಷ್ಟಲಿಂಗವು ದಿನನಿತ್ಯ ಪೂಜಿಸಿದರೆ ಪ್ರಸನ್ನವಾಗಿರಬಹುದು ಎಂದರು.

ಶ್ರೀ ರಾಮಸೇನೆ ತಾಲೂಕು ಅಧ್ಯಕ್ಷ ರವಿ ನಾವದಗಿಕರ್ ಮಾತನಾಡಿ, ಗವಿ ಮಠದ ಪೂಜ್ಯರು ಎಲ್ಲರನ್ನು ಸಮಾನವಾಗಿ ಕಾಣುತ್ತಾರೆ. ಯುವ ಹೋರಾಟಗಾರರಿಗೆ ಪೂಜ್ಯ ಶ್ರೀ ಅಭಿನವ ಗುರುಗಳು ಸದಾ ಮಾರ್ಗದರ್ಶನ ಮಾಡುತ್ತಾ ಸನ್ಮಾರ್ಗ ತೋರುತ್ತಿರುವದು ಸಂತಸದ ವಿಷಯ ಎಂದರು.

ಅಧ್ಯಕ್ಷತೆ ವಹಿಸಿದ್ದ ರೇವಣಸಿದ್ಧಯ್ಯ ಮಠಪತಿ ಮಾತನಾಡಿದರು. ಜುಬೇರ್ ಅಹಮ್ಮದ್ ಪಾಷಾ, ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ಸ್ವಾಮಿ, ಮಲ್ಲಯ್ಯ ಸ್ವಾಮಿ, ಲಿಂಗರಾಜ ಬಿರಾದಾರ ಇತರರು ಉಪಸ್ಥಿತರಿದ್ದರು.

ಶ್ರೀನಿವಾಸ ಬಿರಾದಾರ ಸ್ವಾಗತಿಸಿದರು. ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ನಿರೂಪಿಸಿದರು. ಕಲಾವಿದರಾದ ನಾಗಣ್ಣ ಭೂಶೆಟ್ಟಿ ಹಾಗೂ ಮಲ್ಲಿಕಾರ್ಜುನ ಶೀಲವಂತ ಸಂಗೀತ ಸೇವೆ ಮಾಡಿದರು. ಮಂಠಾಳದ ಅಕ್ಕಮಹಾದೇವಿ ಮಹಿಳಾ ಭಜನಾ ಮಂಡಳಿಯವರಿಂದ ಭಜನೆ ಸೇವೆ ಜರುಗಿತು.

ಗವಿ ಮಠದಲ್ಲಿ ಜರುಗಿದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಉಪನ್ಯಾಸ ಮಾಲೆ



ಬಸವಕಲ್ಯಾಣ ಇಲ್ಲಿಯ ಗವಿ ಮಠದಲ್ಲಿ ಆಯೋಜಿಸಲಾಗಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಶ್ರೀ ರಾಮ ಸೇನೆ ತಾಲೂಕು ಅಧ್ಯಕ್ಷ ರವಿ ನಾವದಗಿಕರ್ ಅವರನ್ನು ಸನ್ಮಾನಿಸಲಾಯಿತು. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಜುಬೇರ್ ಅಹಮ್ಮದ್ ಪಾಷಾ, ಬಸವಂತಪ್ಪ ಲವಾರೆ, ರೇವಣಸಿದ್ಧಯ್ಯ ಮಠಪತಿ ಉಪಸ್ಥಿತರಿದ್ದರು.

ನಮ್ಮ ಬೀದರ್ ಭಾನುವಾರ,28 ಆಗಸ್ಟ್ 2022

ಸಂಯುಕ್ತ ಕರ್ನಾಟಕ
04
31 ಆಗಸ್ಟ್ 2022
ಬುಧವಾರ
ಕಲಬುರಗಿ
KALABURAGI

Scanned with OKEN Scanner



ಶ್ರಾವಣ ಸಂದೇಶ

ಸ್ಪರ್ಧಾತ್ಮಕ ಯುಗದಲ್ಲಿ ಆಧ್ಯಾತ್ಮಿಕ ಪರಿಣಾಮ



ಶ್ರಾವಣ ಮಾಸದ ಎಂದರೆ ಹಿಂದೂಗಳಿಗೆ ಪವಿತ್ರ ವಾಗಿರುವ ಮಾಸ ಇವತ್ತಿನ ಸ್ಪರ್ಧಾತ್ಮಕ ಯುಗದಲ್ಲಿ ಆಧ್ಯಾತ್ಮಿಕ ಪರಿಣಾಮವು ಒಂದಾಗಿದೆ ಎಂಬ ಮಾತು ಅಷ್ಟೇ ಸತ್ಯ ಇದಕ್ಕೆ ವರ್ಷ ಋತುವಿನ ಶ್ರಾವಣ ಮಾಸವೇ ನಿದರ್ಶ ನವಾಗಿದ್ದು ವರ್ಷದ ಎಲ್ಲ ಧಾರ್ಮಿಕ, ಆಧ್ಯಾತ್ಮಿಕ ವಿಧಿಗಳ ಆಚರಣೆ ಈ ಶ್ರಾವಣ ಮಾಸವು ಮೀಸಲಾಗಿರುವುದೇ ಮೂಲ ಕಾರಣವಾಗಿದೆ ಎಂದು ಹೇಳಬಹುದು. ಋತುಗಳ ರಾಜ ವಸಂತ ಋತು ಹೇಗೋ ಹಾಗೆ ಮಾಸಗಳ ರಾಜ ಶ್ರಾವಣ ಮಾಸ ಎನ್ನಬಹುದು ಶ್ರಾವಣ ಮಾಸದಲ್ಲಿ ನಡೆಯುವ ಧರ್ಮಾಚರಣೆಯ ವಿಧಿ-ವಿಧಾನಗಳಾದ ಜಪ, ತಪ ನಿಯಮ, ಪೂಜಾ, ಅನುಷ್ಠಾನ ಪ್ರವಚನ, ಪುರಾಣ, ಶಾಸ್ತ್ರ ಭಜನೆ ಕೀರ್ತನೆ, ಸತ್ಸಂಗ ಪುಣ್ಯ ಕ್ಷೇತ್ರಗಳ ದರ್ಶನ ಹೋಮ, ಯಜ್ಞ, ಯಾಗ ಹವನ ಮುಂತಾದವುಗಳಿಗೆ ಶ್ರಾವಣ ಮಾಸವೇ ಶ್ರೇಷ್ಠವಾಗಿದೆ. ಹೀಗಾಗಿ ದಾಸರು ಹೇಳಿದ ಹಾಗೆ ಶ್ರವಣಂ ಕೀರ್ತನಂ ಶಂಭೋ ಸ್ಮರಣಂ ಪಾದ ಸೇವನಂ ಅರ್ಚನಂ ವಂದನಂ ದಾಸ್ಯಂ ಸಖ್ಯಂ ಆತ್ಮ ನಿವೇದನಮ್ ಎನ್ನುವಂತೆ ನವವಿಧ ಭಕ್ತಿ ಚಿಂತನೆಯೇ ಶ್ರಾವಣ ಮಾಸದಲ್ಲಿ ವಿಶೇಷ ವಾಗಿದೆ. ಶ್ರಾವಣ ಮಾಸದಲ್ಲಿ ಬರುವ ಎಲ್ಲ ಸೋಮವಾರದಲ್ಲಿ ಶಿವ ಪೂಜೆಯನ್ನು ಮತ್ತು ಉಪವಾಸ ವ್ರತವನ್ನು ಮಾಡಬೇಕು. ಈ ಉಪವಾಸದಲ್ಲಿ ಬೆಳಗ್ಗೆ ಗಂಗಾ ಸ್ನಾನ ಅಥವಾ ಪವಿತ್ರ ನದಿ, ಸರೋವರ, ಬಾವಿಗಳಲ್ಲಿ ಸ್ನಾನ ಮಾಡಿದ ನಂತರ ಶಿವ ದೇವಾಲಯಕ್ಕೆ ಹೋಗಿ ವಿಧಿ ವಿಧಾನದಿಂದ ಸ್ಥಾಪಿಸಲಾದ ಶಿವಲಿಂಗವನ್ನು ಪೂಜಿಸಬೇಕು. ಈ ವ್ರತ ಶ್ರಾವಣದಲ್ಲಿ ಶಿವನ ಅನುಗ್ರಹ ದೊರೆತು ವಿಶೇಷ ಫಲ ದೊರೆಯುತ್ತದೆ. ಈ ಸಮಯದಲ್ಲಿ ಶಿವನನ್ನು ಪೂಜಿಸಿದರೆ ಅದು ಶೀಘ್ರವಾಗಿ ನಮ್ಮ ಸಂಕಲ್ಪ ಈಡೇರುತ್ತದೆ ಎಂಬ ನಂಬಿಕೆ ಇದೆ. ಹೀಗಾಗಿ ಶ್ರಾವಣ ಮಾಸದಲ್ಲಿ ರುದ್ರಾಕ್ಷಿ ಧರಿಸಿದರೆ ಶುಭವಾಗುತ್ತೆ. ಇನ್ನೂ ಶ್ರಾವಣದಲ್ಲಿ ರುದ್ರಾಕ್ಷಿಯ ಹಾರ ಓಲೆ ಧರಿಸುವುದು ಅತ್ಯಂತ ಶುಭ ಎನ್ನಲಾಗಿದೆ. ಶ್ರಾವಣ ಸೋಮ ವಾರದ ವ್ರತ ಮಾಡುವುದು ರುದ್ರಾಕ್ಷಿಯ ಹಾರ ದರಿಸುವುದು ಅತ್ಯಂತ ಶ್ರೇಷ್ಠ ಹೀಗಾಗಿ ಶ್ರಾವಣ ಮಾಸ ಶ್ರೇಷ್ಠ ಮಾಸ.

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು

ಸಂಸ್ಥಾನ ತ್ರಿಪುರಾಂತ ಗವಿಮಠ ಬಸವಕಲ್ಯಾಣ

ನಂ. 1 ಕನ್ನಡ ದಿನಪತ್ರಿಕೆ

ವಿಜಯವಾಣಿ

VIJAYAVANI » KALABURAGI

ಶನಿವಾರ 7 ಜನವರಿ 2023
7 JANUARY 2023

3

ಬೀದರ್ ಲೋಕಲ್ ಎಕ್ಸ್‌ಪ್ರೆಸ್



ಕ್ಯಾಲೆಂಡರ್ ಬಿಡುಗಡೆ

ಬಸವಕಲ್ಯಾಣದ ಗವಿಮಠದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ 2023ರ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಶ್ರೀಮದ್ವಿರಶೈವ ಸದ್ಭೋಧನ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಶಿವಲಿಂಗ ಸ್ವಾಮಿ, ಸಿದ್ದು ಉಳ್ಳೆ, ಸೂರ್ಯಕಾಂತ ಪಂಚಾಳ, ಶಿವಕುಮಾರ ಖಟಗಿಮಠ, ಪ್ರಭು ಪೂಜಾರಿ, ಲಕ್ಷ್ಮೀಕಾಂತ ಜ್ಯಾಂತೆ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ

ವಿಜಯವಾಣಿ

VIJAYAVANI » KALABURAGI

ಗುರುವಾರ 3 ಮಾರ್ಚ್ 2022
3 MARCH 2022

5

ಬೀದರ್ ಲೋಕಲ್ ಎಕ್ಸ್‌ಪ್ರೆಸ್



ಇಷ್ಟಲಿಂಗ ಪೂಜೆ...

ಬಸವಕಲ್ಯಾಣ ಗವಿಮಠದಲ್ಲಿ ಮಹಾಶಿವರಾತ್ರಿ ನಿಮಿತ್ತ ಮಂಗಳವಾರ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಆಶ್ರಯದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ಜರುಗಿತು.



ಬಸವಕಲ್ಯಾಣ ಗವಿ ಮಠದಲ್ಲಿ ಭಾನುವಾರ ಆಯೋಜಿಸಿದ್ದ ದೊಡ್ಡಪ್ಪ ಅಪ್ಪ ಬಿಸಿಎ ಮಹಾವಿದ್ಯಾಲಯ ಎನ್‌ಎಸ್‌ಎಸ್ ಘಟಕ ಹಾಗೂ ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಭಾನುವಾರ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರದಲ್ಲಿ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಮೋಟಾರು ವಾಹನ ನಿರೀಕ್ಷಕ ಪರಮಾನಂದ ಸಜ್ಜನ, ಪ್ರಾಚಾರ್ಯ ಸುಧಾಕರ ಬಿರಾದಾರ ಇತರರಿದ್ದರು.

Scanned with OKEN Scanner

ಸಮ್ಮೇಳನಾಧ್ಯಕ್ಷ ಡಾ.ಜೈಶೇನ್‌ಪ್ರಸಾದ ಆಶಯ | ಸಸ್ತಾಪುರದಲ್ಲಿ ಪ್ರಥಮ ತಾಲೂಕು ದಲಿತ ಸಾಹಿತ್ಯ ಸಮ್ಮೇಳನ

ಮರೆಮಾಚಿದ ಇತಿಹಾಸ ಬೆಳಕಿಗೆ ತನ್ನಿ

ವಿಕ ಸುದ್ದಿಲೋಕ ಬಸವಕಲ್ಯಾಣ

ದಲಿತ ಸಾಹಿತ್ಯ ಹಾಗೂ ಚಳವಳಿಗೆ ಬುದ್ಧ, ಬಸವ, ಅಂಬೇಡ್ಕರ್, ಬಿ.ಶ್ಯಾಮಸುಂದರ, ತಾತ್ಯಾರಾವ ಕಾಂಬಳೆ ಅವರು ಪ್ರೇರಣೆ. ಈ ಭಾಗ ಮರಾಠಿ, ಹಿಂದಿ, ಉರ್ದುಗಳ ಪ್ರಭಾವದಲ್ಲೂ ಕನ್ನಡ ಉಳಿಸುವ ಕೆಲಸ ದಲಿತ ಆನಕ್ಷರಸ್ಥರು ಮಾಡಿದ ಇತಿಹಾಸ ಮರೆಮಾಚಲಾಗಿದೆ. ಅದನ್ನು ಬೆಳಕಿಗೆ ತರುವ ಪ್ರಯತ್ನ ಲೇಖಕರು ಮಾಡಬೇಕು ಎಂದು ತಾಲೂಕು ದಲಿತ ಸಾಹಿತ್ಯ ಸಮ್ಮೇಳನಾಧ್ಯಕ್ಷ, ಸಾಹಿತಿ ಡಾ. ಜೈಶೇನಪ್ರಸಾದ ತಿಳಿಸಿದರು.

ತಾಲೂಕಿನ ಸಸ್ತಾಪುರದಲ್ಲಿ ಶ್ರೀ ಯಲ್ಲಾಲಿಂ ಗೇಶ್ವರ ಮಠದ ಪರಿಸರದಲ್ಲಿ ಮಂಗಳವಾರ ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕ ಮತ್ತು ಜಿಲ್ಲಾ ಘಟಕ ಹಾಗೂ ಶ್ರೀ ಯಲ್ಲಾಲಿಂಗ ಮಠ ಟ್ರಸ್ಟ್ ಆಶ್ರಯದಲ್ಲಿ ತಾಲೂಕಿನ ಶ್ರೀ ಯಲ್ಲಾಲಿಂಗೇಶ್ವರರ 37ನೇ ಪುಣ್ಯಸ್ಮರಣೆ ಮತ್ತು ಶರಣ್ ಮಹಾದೇವಿ ತಾಯಿ ಅವರ 58ನೇ ಜನ್ಮ ದಿನೋತ್ಸವ ನಿಮಿತ್ತ ತಾಲೂಕಿನ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನ ಮತ್ತು ಜಿಲ್ಲಾಬೆಳ್ಳಿ ಸಂಭ್ರಮ ಕಾರ್ಯಕ್ರಮ ಅಧ್ಯಕ್ಷೀಯ ಭಾಷಣದಲ್ಲಿ ಮಾತನಾಡಿದ ಅವರು, ಮೌಢ್ಯತೆ, ಸಂಪ್ರದಾಯಗಳನ್ನು ಮೀರಿ ನಿಂತ ಲೇಖಕರಿಂದ ಮಾತ್ರ ದಲಿತ ಸಾಹಿತ್ಯ ಜನಮುಖಿಯಾಗಲಿದೆ. ಈ ಭಾಗದ ಚಳವಳಿ, ಸಾಹಿತ್ಯ, ವಚನ ಸಾಹಿತ್ಯ ದಲಿತ ಸಾಹಿತ್ಯ, ಸಾಹಿತಿ, ಲೇಖಕರನ್ನು ಸ್ಮರಿಸಿದರು.

ಮೊದಲು ಮೇಲ್ವರ್ಗ ಕೆಳವರ್ಗದ ನಡುವೆ, ಆನಂತರ ಕೆಳವರ್ಗ ಹಿಂದುಳಿದವರ ಮಧ್ಯ, ಈಗ ದಲಿತ ದಲಿತರಲ್ಲಿ ಸಂಘರ್ಷವಿದೆ. ಇದು ನಿಲ್ಲಬೇಕಾದರೆ ನಾವು ವೈಮನಸ್ಸು ಸ್ಪರ್ಧಿಸಿ ಬಿಟ್ಟು ಸಮಾನವಾಗಿ ಬಂದಾಗ ನಮ್ಮ ಪ್ರಗತಿ ಸಾಧ್ಯ. ಇರದಿದ್ದರೆ ನಮ್ಮ ಮೇಲೆ ಸವಾರಿ ನಡೆಯುವುದಂತೂ ಗ್ಯಾರಂಟಿ ಎಂದು ಎಚ್ಚರಿಸಿದರು.ನಮ್ಮ ಸಂವಿಧಾನದ ಮೇಲೆ ಈಗ ಪ್ರಹಾರ ನಡೆದಿದೆ. ಹೀಗಾಗಿ ಎಚ್ಚೆತ್ತುಕೊಳ್ಳಬೇಕಾದ ಅಗತ್ಯತೆ, ಇಂತಹ ಸಮ್ಮೇಳನಗಳು ಎಚ್ಚರಿಸುವ ಮಾಡಲಿವೆ ಆದರೆ ಸೊಕಾಲ್ಡ್ ಲೇಖನ ನಾನೆ ಶ್ಯಾಣೆ ಎಂದರೆ ಕೇಳುವವರಾರು ಎಂದು ಪ್ರಶ್ನಿಸಿದರು. ಬುದ್ಧ ಬಸವ ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳ ಆಳವಡಿಸಿಕೊಂಡಾಗಲೇ ಸಮ ಸಮಾಜ ನಿರ್ಮಾಣ ಸಾಧ್ಯವಿದೆ ಎಂದರು.



ಬಸವಕಲ್ಯಾಣ ತಾಲೂಕಿನ ಸಸ್ತಾಪುರದಲ್ಲಿ ಹಮ್ಮಿಕೊಂಡಿದ್ದ ತಾಲೂಕು ಪ್ರಥಮ ದಲಿತ ಸಾಹಿತ್ಯ ಸಮ್ಮೇಳನವನ್ನು ಚಿಂತಕ ಆರ್.ಜಿ.ಹಳ್ಳಿ ನಾಗರಾಜ ಉದ್ಘಾಟಿಸಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು. ಶ್ರೀ ಪಂಚಾಕ್ಷರಿ ಸ್ವಾಮೀಜಿ, ಪೂಜ್ಯ ಶ್ರೀ ಮಹಾದೇವಿ ತಾಯಿ, ಸಮ್ಮೇಳನಾಧ್ಯಕ್ಷ, ಸಾಹಿತಿ ಡಾ.ಜೈಶೇನಪ್ರಸಾದ, ಎಂ.ಎಂ.ತಂಬಾಕೆ, ಡಾ.ಜಯದೇವಿ ಗಾಯಕವಾಡ, ಡಾ.ಗವಿಸಿದ್ದಪ್ಪ ಪಾಟೀಲ್, ಶಿವಾನಂದ ಮೇತ್ರೆ, ವೈಶಾಲಿ ಮೋರೆ, ನರಸಿಂಗರೆಡ್ಡಿ ಉಪಸ್ಥಿತರಿದ್ದರು.

> ವಚನ ಸಾಹಿತ್ಯದ ಕಡೆಗೆ ಗಮನ ಹರಿಸಬೇಕು. ವೈಚಾರಿಕ ಪ್ರಜ್ಞೆ ಬೆಳೆಸುವಂತ ಸಾಹಿತ್ಯ ಓದಿದಾಗ ಜನಪರವಾದ, ಸಮಾಜಮುಖಿ ಸಾಹಿತ್ಯ ಹೊರಬರಲು ಸಾಧ್ಯವಾಗುತ್ತದೆ. ಜನಪರವಾದ ಸಾಹಿತ್ಯ ಬೆಂಬಲಿಸುವ ಕೆಲಸ ನಡೆಯಬೇಕು. ಸಾಹಿತಿ ಡಾ.ಗವಿಸಿದ್ದಪ್ಪ ಪಾಟೀಲ್ ಹಾಗೂ ಸಾಹಿತಿ ಡಾ.ಜಯದೇವಿ ಗಾಯಕವಾಡ ದಂಪತಿಯ ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆ ಮೆಚ್ಚುವಂತಹದ್ದು.
>
> – ಆರ್.ಜಿ.ಹಳ್ಳಿ ನಾಗರಾಜ, ಚಿಂತಕ

ಸಮ್ಮೇಳನಾಧ್ಯಕ್ಷರ ಹಕ್ಕೊತ್ತಾಯ

ಬಸವಕಲ್ಯಾಣದಲ್ಲಿ ದಲಿತ ಅಧ್ಯಯನ ಪೀಠ ಸ್ಥಾಪನೆಯಾಗಲಿ, ದಲಿತ ಲೇಖಕರ ಕೃತಿಗಳನ್ನು ಸರ್ಕಾರ ಕನಿಷ್ಠ 500 ಪ್ರತಿ ಖರೀದಿಸಲು ಆದೇಶ ನೀಡಬೇಕು. ದಲಿತ ಪೌರ ಕಾರ್ಮಿಕರಿಗೆ ಸೂಕ್ತ ಸಂಬಳ ಸೇವಾ ಭದ್ರತೆ ಕಲ್ಪಿಸಬೇಕು ಎಂದು ಎಂದು ದಲಿತ ಸಾಹಿತ್ಯ ಸಮ್ಮೇಳನಾಧ್ಯಕ್ಷರು ಹಕ್ಕೊತ್ತಾಯ ಮಂಡಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಲ್ಲಿ ಮೀಸಲಾತಿ ಜಾರಿ ಮಾಡಬೇಕು. ತಾಲೂಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ಗೌರವ ನೀಡಬೇಕು. ಕನ್ನಡ ಸಾಹಿತ್ಯ ಪರಿಷತ್ತಿನಂತೆ ದಲಿತ ಸಾಹಿತ್ಯ ಪರಿಷತ್ತಿಗೂ ಸರ್ಕಾರ ಪ್ರತಿವರ್ಷ ತಾಲೂಕು, ಜಿಲ್ಲಾ, ರಾಜ್ಯ ಸಮ್ಮೇಳನಕ್ಕೆ ಅನುದಾನ ಮೀಸಲಿಡಬೇಕು. ದಲಿತ ಮಹಿಳೆಗೆ ಇತರ ಮಹಿಳೆಯರಂತೆ ಅವಕಾಶ ನೀಡಬೇಕು. ದಲಿತ ಲೇಖಕಿಯರಿಗೆ ಪರಿಷತ್ತುಗಳಲ್ಲಿ ಅವಕಾಶ ನೀಡಬೇಕು. ದಲಿತ ಲೇಖಕಿಯನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಬೇಕು ಎಂದು ಒತ್ತಾಯಿಸಿದರು.

ಆಹಿಂದ ವರ್ಗದ ಸಮುದಾಯಕ್ಕೆ ಮೀಸಲಾತಿಯು ಹೀಗೆ ಇರಲಿ ಇದರಲ್ಲಿ ಬೇರೆಯವರನ್ನು ಸೇರಿಸಬಾರದು. ಬಡ್ತಿ, ಬ್ಯಾಕ್‌ಲಾಗ್ ಹುದ್ದೆ ಭರ್ತಿಯಲ್ಲಿ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಯಲ್ಲಾಲಿಂಗ ಮಠದಲ್ಲಿ ಈಗಾಗಲೇ 13 ಸಮ್ಮೇಳನ ಮಾಡಿದೆ. ಪೂಜ್ಯ ಮಾತೆ ಮಹಾದೇವಿ ತಾಯಿ ಅವರು ಮಾಡಿದ ಸೇವೆ ಪರಿಗಣಿಸಿ ಅವರಿಗೆ ಸರ್ಕಾರ ಸೂಕ್ತ ಸ್ಥಾನ ನೀಡಬೇಕು ಎಂದರು.

ಸಮ್ಮೇಳನವನ್ನು ಉದ್ಘಾಟಿಸಿದ ಬೆಂಗಳೂರಿನ ಚಿಂತಕ ಆರ್.ಜಿ.ಹಳ್ಳಿ ನಾಗರಾಜ ಮಾತನಾಡಿ, ಅಭಿವ್ಯಕ್ತಿ ಸ್ವಾತಂತ್ರಕ್ಕೆ ಧಕ್ಕೆ ತರುವ ಪ್ರಯತ್ನಗಳು ನಡೆಯುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದ ಅವರು, ವೈಚಾರಿಕ ಪ್ರಜ್ಞೆ ಬೆಳೆಸುವ ಕೆಲಸ ನಡೆಯ ಬೇಕು. ಇಂತಹ ಸಮ್ಮೇಳನಗಳು ಇದಕ್ಕೆ ಪೂರಕ ವಾಗಿದೆ ಎಂದರು.ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ದರು. ಬೇಲೂರಿನ ಶ್ರೀ ಪಂಚಾಕ್ಷರಿ ಸ್ವಾಮೀಜಿ ಸಮ್ಮುಖ ವಹಿಸಿದರು. ನಿವೃತ್ತ ಪ್ರಾಚಾರ್ಯ ಎಂ.ಎಂ.ತಂಬಾಕೆ ಅಧ್ಯಕ್ಷತೆ ವಹಿಸಿದರು. ಹುಲಸೂರು ತಹಸೀಲ್ದಾರ್ ಶಿವಾನಂದ ಮೇತ್ರೆ ಮಾತನಾ ಡಿದರು. ಸಸ್ತಾಪುರದ ಪೂಜ್ಯ ಮಹಾದೇವಿ ತಾಯಿ ನೇತೃತ್ವ ವಹಿಸಿದ್ದರು. ಪ್ರಾಚಾರ್ಯ ಎಚ್.ಪ್ರಭು, ನಿವೃತ್ತ ಪ್ರಾಚಾರ್ಯ ಎನ್.ವಿ.ಢೋಲೆ, ಭಾರತಿಯ ಬೌದ್ಧಮಹಾ ಸಭೆಯ ವೈಶಾಲಿ ಎಂ.ಮೋರೆ, ಮುಖಂಡರಾದ ನರಸಿಂಗರಾವ ಕಾಂಬಳೆ, ಹಣಮಂತರಾವ ಕಾಂಬಳೆ, ಸುರೇಶ ಕಾನೇಕರ್, ಡಾ.ಸುನೀತಾ ಪಂಕಜ ಹಾಗೂ ಪ್ರಮುಖರಿದ್ದರು.

ದಸಾಪ ಜಿಲ್ಲಾಧ್ಯಕ್ಷೆ ಸಾಹಿತಿ ಡಾ.ಜಯದೇವಿ ಗಾಯಕವಾಡ ಆಶಯ ಭಾಷಣ ಮಾಡಿದರೆ, ಸಮ್ಮೇಳನ ಸಂಯೋಜಕ ಡಾ.ಸಿದ್ಧಪ್ಪ ಪಾಟೀಲ್ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಸಂಜುಕುಮಾರ ನಡುಕರ ನಿರೂಪಿಸಿದರು.

ಸಮ್ಮೇಳನಕ್ಕೂ ಮುನ್ನ ಶ್ರೀ ಯಲ್ಲಾಲಿಂಗೇಶ್ವರರ ಮೂರ್ತಿಯೊಂದಿಗೆ ಸಮ್ಮೇಳನಾಧ್ಯಕ್ಷರ ಭವ್ಯ ಮೆರವಣಿಗೆ ಸಾರೋಟಿನಲ್ಲಿ ಜರುಗಿತು. ಸಾಹಿತಿಗಳು, ಪ್ರಮುಖರು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

Scanned with OKEN Scanner



ಶ್ರಾವಣ ಸಂದೇಶ

ಶ್ರಾವಣ ಉಪವಾಸದಿಂದ ಆರೋಗ್ಯ ಸಂಪತ್ತು ಶಕ್ತಿ ವೃದ್ಧಿ



ಸಮುದ್ರ ಮಂಥನದ ಸಮಯದಲ್ಲಿ ವಿಷ ಕೂಡ ಸಮುದ್ರದಿಂದ ಉದ್ಭವಿಸುತ್ತದೆ ಈ ವಿಷವು ಇಡೀ ವಿಶ್ವವನ್ನೇ ನಾಶಪಡಿಸುವಷ್ಟು ಶಕ್ತಿಯನ್ನು ಪಡೆದಿದ್ದು ಶಿವನು ಈ ವಿಷವನ್ನು ಸೇವಿಸುವ ನಿರ್ಧಾರವನ್ನು ಕೈಗೊಳ್ಳುತ್ತಾರೆ ಶಿವನು ವಿಷವನ್ನು ಕುಡಿದು ಅದನ್ನು ತನ್ನ ಗಂಟಲಿನಲ್ಲಿ ಇಟ್ಟುಕೊಳ್ಳುತ್ತಾರೆ.

ಇದರಿಂದ ಅವರ ಗಂಟಲು ನೀಲಿಮಯವಾಗುತ್ತದೆ ಆದ್ದರಿಂದಲೇ ನೀಲಕಂಠ ಎಂಬ ಹೆಸರು ಬಂದಿದೆ ಇದರಿಂದ ತಿಳಿದು ಬರುವುದೇನೆಂದರೆ, ಯೋಗಿಗಳು ಋಣಾತ್ಮಕ ಅಂಶಗಳನ್ನು ಇತರರ ಮೇಲೆ ಬೀರುವುದರ ಬದಲಿಗೆ ತನ್ನಲ್ಲಿಯೇ ಇಟ್ಟುಕೊಳ್ಳಬೇಕು ಅದನ್ನು ಜೀರ್ಣಿಸಿ ಕೊಳ್ಳಬಾರದು.

ಇನ್ನು ಪುರಾಣ ಕಥೆಗಳ ಪ್ರಕಾರ ಶಿರಸಾಗರ ಮಂಥನದ ಸಮಯದಲ್ಲಿ ಉದ್ಭವಿಸಿದ ಹಾಲಾಹಲದಿಂದ ಎಲ್ಲಾ ಜೀವಿಗಳಿಗೂ ಅಪಾಯ ಒದಗುವ ಸಂದರ್ಭ ಬಂದಾಗ ಶಿವನು ಮಧ್ಯಪ್ರವೇಶಿಸಿ ಅದನ್ನು ಸೇವಿಸಿದನು ಇದನ್ನು ಸೇವಿಸಿದ ನಂತರ ಶಿವನು ಮೂರ್ಛೆ ತಪ್ಪಿದನು ಆಗ ದೇವತೆಗಳ ಸಲಹೆಯಂತೆ ಬ್ರಹ್ಮ ದೇವನು ಶಿವನಿಗೆ ಜಲಾಭಿಷೇಕವನ್ನು ಮಾಡಿ ಹಲವಾರು ಗಿಡ ಮೂಲಿಕೆಗಳಿಂದ ಶಿವನಿಗೆ ಚಿಕಿತ್ಸೆ ನೀಡಿದನು ಆಗ ಶಿವನು ಪ್ರಜ್ಞೆಗೆ ಮರಳಿದನು. ಇದರಿಂದಾಗಿಯೇ ಶ್ರಾವಣದಲ್ಲಿ ಶಿವಲಿಂಗದ ಮೇಲೆ ಜಲಾಭಿಷೇಕವನ್ನು ಮಾಡುವ ಪದ್ಧತಿ ಅನುಷ್ಠಾನಕ್ಕೆ ಬಂದಿತ್ತು. ಭಕ್ತರು ಈ ತಿಂಗಳಿನಲ್ಲಿ ಅಥವಾ ಈ ಮಾಸದಲ್ಲಿ ಸೋಮವಾರ ಮಹಾದೇವನ ಅಥವ ಶಿವನ ಅನುಗ್ರಹಕ್ಕಾಗಿ ಉಪವಾಸ ಮಾಡುತ್ತಾರೆ. ಜನರು ತಮ್ಮ ನಂಬಿಕೆಗಳು ಮತ್ತು ಅನುಕೂಲಕ್ಕಾಗಿ ಕಟ್ಟುನಿಟ್ಟಾದ ಉಪವಾ ಸವನ್ನು ಪಾಲಿಸುತ್ತಾರೆ. ಪರಿಪೂರ್ಣ ಜೀವನ ಕೆಲವರು ಉಪವಾಸ ಕೈಗೊಂಡರೆ ಈ ಮಾಸದಲ್ಲಿ ಸೋಮವಾರಗಳಂದು ಉಪವಾಸ ಮಾಡುವುದರಿಂದ ಆರೋಗ್ಯ ಸಂಪತ್ತು ಶಕ್ತಿ ಆಧ್ಯಾತ್ಮಿಕ ಆನಂದವನ್ನು ಭಕ್ತರಿಗೆ ಲಭಿಸುತ್ತದೆ ಎಂಬ ನಂಬಿಕೆ ಶ್ರಾವಣ ಮಾಸದಲ್ಲಿ ಈ ಎಲ್ಲಾ ಪೂಜೆ ವ್ರತ ಭಕ್ತರಲ್ಲಿ ಕಾಣಬಹುದು.

- ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು
ಸಂಸ್ಥಾನ ತ್ರಿಪುರಾಂತ ಗವಿಮಠ ಬಸವಕಲ್ಯಾಣ

ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ - ವಚನ ಸಾಹಿತ್ಯ ವಿಶೇಷ ಉಪನ್ಯಾಸ ಕಾರ್ಯಕ್ರಮ

ಜಗದ್ಗುರು ರೇಣುಕಾಚಾರ್ಯರ ತತ್ವ ಪಾಲಿಸಿ

ವಿಕ ಸುದ್ದಿಲೋಕ ಬಸವಕಲ್ಯಾಣ

ಜಗದ್ಗುರು ಶ್ರೀ ರೇಣುಕಾಚಾರ್ಯರರು ಜೀವನ ಉದ್ಧಾರಕ್ಕಾಗಿ ಜಗತ್ತಿನ ಮನುಕುಲಕ್ಕೆ ತಮ್ಮ ಸಿದ್ಧಾಂತ ಶಿಖಾಮಣಿ ಮೂಲಕ ಅಹಿಂಸಾ, ಸತ್ಯ, ಅಸ್ತೇಯ ದಯಾ, ಕ್ಷಮಾ ಮೊದಲಾದ ತತ್ವಗಳನ್ನು ಬೋಧಿಸಿದ್ದಾರೆ. ಅದೇ ರೀತಿ ಬಸವಣ್ಣನವರು ತಮ್ಮ ವಚನದ ಮೂಲಕ ದಯವೇ ಧರ್ಮದ ಮೂಲವಯ್ಯ ಎಂದು ಹೇಳಿದ್ದಾರೆ ಎಂದು ತಡೋಳಾದ ಶ್ರೀ ರಾ ಜೇಶ್ವರ ಶಿವಾಚಾರ್ಯರು ನುಡಿದರು.

ಶ್ರಾವಣಮಾಸದ ನಿಮಿತ್ತ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಘಟಕದ ವತಿಯಿಂದ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆ ಸಮಾರಂಭದ ಸಾನ್ನಿಧ್ಯ ವಹಿಸಿ ಗವಿಮಠದ ಶ್ರೀ ಡಾ. ಅಭಿನವ ಆಶೀರ್ವಚನ ನೀಡಿದ ಶ್ರೀಗಳು, ಶ್ರೀ ಘನಲಿಂಗ ರುದ್ರಮುನಿ ಶಿವಾಚಾ ರೇಣುಕಾಚಾರ್ಯರ ತತ್ವಗಳನ್ನು ರ್ಯರು ಮಾತನಾಡಿ, ಮನಸ್ಸಿನ ಪಾಲಿಸಿದರೆ ಮಾನವ ಮಹಾ ಚಂಚಲತೆಗೆ ಇಂದ್ರೀಯಗಳೇ ಕಾರಣ. ದೇವನಾಗಬಲ್ಲ ಎಂದರು. ಹೀಗಾಗಿ ಮನಸ್ಸನ್ನು ಶಿವನಲ್ಲಿ ಲೀನವಾಗಿಸಿದಾಗ ಇಂದ್ರೀಯಗಳ ನಿಯಂತ್ರಣ ಸಾಧ್ಯ. ಅದೇರೀತಿ ಅಕ್ಕ ಮಹಾದೇವಿ ತಮ್ಮ ವಚನದ ಮೂಲಕ ಎನ್ನ ಮನ ನಿಮ್ಮಲ್ಲಿ ಸೇರಿದ ಬಳಿಕ ಎನಗೆ ಭವ ಉಂಟೇ ಚನ್ನಮಲ್ಲಿಕಾರ್ಜುನ ಎಂದಿದ್ದಾರೆ ಎಂದು ನುಡಿದರು. ಮುಖಂಡ ಅರ್ಜುನ ಕನಕ ಮಾತನಾಡಿ, ಡಾ. ಅಭಿನವ ಶ್ರೀಗಳು ಪಟ್ಟದ್ದೇವರಾದ ಮೇಲೆ ಗವಿಮಠವನ್ನು ಸಾಕಷ್ಟು ಪ್ರಗತಿ ಮಾಡಿದ್ದಾರೆ. ಗವಿಮಠದ ಎಲ್ಲ ಕಾರ್ಯಕ್ಕೂ ನಾನು ಸದಾ ಸಿದ್ಧ ಎಂದರು.ಅಂಬಾರಾಯ ಉಗಾಜಿ ಮಾತನಾಡಿದರು. ಈ ವೇಳೆ ಶರಣಯ್ಯ ಸ್ವಾಮಿ, ವೀರಣ್ಣ ಶೀಲವಂತ, ಮಲ್ಲಿಕಾರ್ಜುನ ನಂದಿ, ಬಾಬುರಾವ ಉಳ್ಳೆ, ಬಸತೀರ್ಥಯ್ಯ ಕಾಡಾದಿ, ರೇವಣಸಿದ್ದ ಮಠಪತಿ, ವೀರಶೆಟ್ಟಿ ಪಾಟೀಲ್, ಮಡಿವಾಳಪ್ಪ ಕಲ್ಯಾಣಿ, ಸವಿತಾ ಸ್ವಾಮಿ, ಸುಭದ್ರಾಬಾಯಿ ವೀರಯ್ಯ, ಶೀಲಾದೇವಿ ಲವಾರೆ, ಸರಸ್ವತಿ ಬೆಂಬಳಿ, ರೇಣುಕಾ ಸ್ವಾಮಿ, ಚನ್ನವೀರ ಬಿರಾದಾರ, ಅಣವೀರ ಬಿರಾದಾರ ಸೇರಿದಂತೆ ಇತರರು ಇದ್ದರು.ನಗರದ ಶ್ರೀ ಗುರು ಮಹಾಲಿಂಗೇಶ್ವರ ಶಿಕ್ಷಣ ಸಂಸ್ಥೆ ಮಕ್ಕಳು ಮಾಡಿದ ನೃತ್ಯ ಗಮನ ಸೆಳೆಯಿತು. ಶಕುಂತಲಾ ಗುರುಲಿಂಗ ಸ್ವಾಮಿ ಪ್ರಾರ್ಥನೆ ಗೀತೆ ಹಾಡಿದರು. ಬಸವಂತಪ್ಪ ಲವಾರೆ ಸ್ವಾಗತಿಸಿದರು.



ಬಸವಕಲ್ಯಾಣದ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನಾ ಸಂಸ್ಥೆ ವತಿಯಿಂದ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆ ಸಮಾರಂಭದಲ್ಲಿ ಶ್ರೀ ರಾಜೇಶ್ವರ ಶಿವಾಚಾರ್ಯರರು ಆಶಿರ್ವಚನ ನೀಡಿದರು. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು, ಅರ್ಜುನ ಕನಕ, ಅಂಬಾರಾಯ ಉಗಾಜಿ, ಶರಣಯ್ಯ ಸ್ವಾಮಿ ಉಪಸ್ಥಿತರಿದ್ದರು.

> ಗವಿಮಠ ಟ್ರಸ್ಟ್ ಹಾಗೂ ಸದ್ಭೋಧನಾ ಸಂಸ್ಥೆ ಕಲ್ಯಾಣ ನಾಡಿನಲ್ಲಿ ಉತ್ತಮವಾದ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಕಾರ್ಯ ಮಾಡುತ್ತಿವೆ. ಇದೇ ರೀತಿ ಸದಾ ಸದ್ಭಕ್ತರು ಗವಿ ಮಠದ ನಿತ್ಯ ದಾಸೋಹಕ್ಕಾಗಿ ಧನ ಸೇವೆ ಮಾಡಿ ಗುರುಗಳ ಕೃಪೆಗೆ ಪಾತ್ರರಾಗಬೇಕು.
> **ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು**

Scanned with OKEN Scanner

ಕಲ್ಯಾಣ ಅಭಿವೃದ್ಧಿಯೇ ನಮ್ಮ ಗುರಿ



ಬಸವಕಲ್ಯಾಣ ಮಾಜಿ ಶಾಸಕ ಮಲ್ಲಿಕಾರ್ಜುನ ಎಸ್ ಖೂಬಾ ಅವರ 45ನೇ ಜನ್ಮ ದಿನದ ನಿಮಿತ್ತ ಅವರ ಅಭಿಮಾನಿ ಬಳಗದ ವತಿಯಿಂದ ಖೂಬಾ ಅವರ ನಿವಾಸದಲ್ಲಿ ಶನಿವಾರ ಸಂಜೆ ನಡೆದ ಜನ್ಮ ದಿನವನ್ನು ಅವರ ಅಪಾರ ಅಭಿಮಾನಿಗಳ ಮಧ್ಯೆ ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಮಾಜಿ ಶಾಸಕ ಮಲ್ಲಿಕಾರ್ಜುನ ಎಸ್ ಖೂಬಾ ಅವರ 45ನೇ ಜನ್ಮದಿನದ ನಿಮಿತ್ತ ಅವರ ಅಭಿಮಾನಿ ಬಳಗದ ವತಿಯಿಂದ ಖೂಬಾ ನಿವಾಸದಲ್ಲಿ ಶನಿವಾರ ಸಂಜೆ ನಡೆದ ಜನ್ಮದಿನ ಕಾರ್ಯಕ್ರಮವನ್ನು ಅವರ ಅಪಾರ ಅಭಿಮಾನಿಗಳ ಮಧ್ಯೆ ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.

ಈ ವೇಳೆ ತ್ರಿಪುರಾಂತ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನಿಧ್ಯ ವಹಿಸಿ ಮಾತನಾಡಿ, ಮಾಜಿ ಶಾಸಕ ಮಲ್ಲಿಕಾರ್ಜುನ ಎಸ್ ಖೂಬಾ ಅವರು ಸರಳ ಸಜ್ಜನಿಕೆ ವ್ಯಕ್ತಿಗಳಾಗಿದ್ದಾರೆ. ಅವರು ಈ ಹಿಂದೆ ಈ ಕ್ಷೇತ್ರದಲ್ಲಿ ಎರಡು ಬಾರಿ ಶಾಸಕರಾಗಿ ಹಲವಾರು ಜನಪರ ಹಾಗೂ ಅಭಿವೃದ್ಧಿ ಪರ ಕಾರ್ಯಗಳು ಕೈಗೊಂಡಿದ್ದಾರೆ. ಖೂಬಾ ಅವರು ಸ್ವಂತವಾಗಿ ಹುಟ್ಟು ಹಬ್ಬ ಆಚರಣೆಮಾಡಿಕೊಳ್ಳದೇ ಅವರ ಅಭಿಮಾನಿ ಬಳಗ ಸೇರಿ ಮಳೆ ಲೆಕ್ಕಿಸದೇ ಹುಟ್ಟು ಹಬ್ಬ ಆಚರಿಸುವ ಮೂಲಕ ಜನರ ಪ್ರೀತಿ ವಿಶ್ವಾಸ ಹೇಗಿದೆ ಎಂದು ತೋರಿಸಿಕೊಟ್ಟಿದ್ದಾರೆ. ಅವರು ಮುಂಬರುವ ರಾಜಕೀಯ ಜೀವನದಲ್ಲಿ ಯಶಸ್ಸು ಕಾಣಲಿ ಎಂದು ಶ್ರೀಗಳು ಶುಭ ಹಾರೈಸಿದರು.

ಮಾಜಿ ಶಾಸಕ ಮಲ್ಲಿಕಾರ್ಜುನ ಎಸ್ ಖೂಬಾ ಅಭಿಮಾನಿಗಳಿಂದ ಸನ್ಮಾನ ಸ್ವೀಕರಿಸಿ ಮಾತನಾಡಿ, **ರಾಜಕೀಯ ಜೀವನದಲ್ಲಿ ಸೋಲು ಗೆಲುವು ಸಹಜ. ಆದರೆ, ಅವಕಾಶಗಳು ಕೂಡಿ ಬರುತ್ತವೆ. ರಾಜಕೀಯ ಬೆಳವಣಿಗೆಯಲ್ಲಿ ಸ್ಥಳೀಯರು ಮುಂದೆ ಬಂದು ಬೆಳೆಯಬೇಕು, ಕಾರ್ಯಕರ್ತರು ಬೆಳೆಯಬೇಕು ಅಂತವರಿಗೆ ನಾವು ಸದಾ ಸಹಕಾರ ನೀಡುತ್ತೇವೆ. ಒಟ್ಟಾರೆ ನಮ್ಮ ಕ್ಷೇತ್ರ ಅಭಿವೃದ್ಧಿಯಾಗಬೇಕು. ಬಸವಕಲ್ಯಾಣ ಹೆಸರು ಉನ್ನತ ಮಟ್ಟದಲ್ಲಿ ಬೆಳೆಸಬೇಕು ಎಂಬುದೇ ನಮ್ಮೆಲ್ಲರ ಗುರಿ.**

- ಮಲ್ಲಿಕಾರ್ಜುನ ಖೂಬಾ, ಮಾಜಿ ಶಾಸಕರು.

ಜನರು ತಮ್ಮ ಮೇಲೆ ಇಟ್ಟಿರುವ ಪ್ರೀತಿ ವಿಶ್ವಾಸಕ್ಕೆ ಎಂದಿಗೂ ದ್ರೋಹ ಬಗೆಯಲ್ಲ. ಎರಡು ಸಲ ಶಾಸಕರಾಗಿ ಆಯ್ಕೆ ಮಾಡಿ ಜನ ಸೇವೆ ಮಾಡಲು ಅವಕಾಶ ನೀಡಿದ್ದಾರೆ. ಹೀಗಾಗಿ ಜನರ ಬಗ್ಗೆ ನಮಗೆ ಅಪಾರ ಗೌರವ ಇದೆ ಎಂದರು. ಈ ವೇಳೆ ಬಸ್ಸು ಖೂಬಾ, ದತ್ತಾತ್ರಿ ರಾಘು, ಹಣಮಂತ ಅತಲಾಪೂರ, ಶಿವಕುಮಾರ ಸ್ವಾಮಿ, ವಿಶಾಲ್, ರವಿಕುಮಾರ ಇಲ್ಲಾಳ, ಶಿವಕುಮಾರ ಬಿರಾದಾರ ಸೇರಿ ಖೂಬಾ ಅವರ ಅನೇಕ ಅಭಿಮಾನಿಗಳು ಪಾಲ್ಗೊಂಡಿದರು. ಇದೇ ಸಂದರ್ಭದಲ್ಲಿ ಪಕ್ಷಾತೀತವಾಗಿ ನಾಯಕರು ಮಲ್ಲಿಕಾರ್ಜುನ ಎಸ್ ಖೂಬಾ ಅವರಿಗೆ ಶುಭ ಕೋರಿ ಅಭಿನಂದಿಸಿದರು.



ಬಸವಕಲ್ಯಾಣದ ಅಲ್ಲಮ ಪ್ರಭು ಕಾಲೇಜಿನಲ್ಲಿ ಆಜಾದಿ ಕಾ ಅಮೃತ ಮಹೋತ್ಸವ ನಿಮಿತ್ತ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಹಾಗೂ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಜ್ಞಾನಾರ್ಜನೆ ಮಾಡಿ ಪ್ರಾಮಾಣಿಕತೆ ಅಳವಡಿಸಿಕೊಳ್ಳಿ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಬಸವಕಲ್ಯಾಣ ಅಲ್ಲಮ ಪ್ರಭು ಪದವಿ ಪೂರ್ವ ಕಾಲೇಜಿನಲ್ಲಿ ಆಜಾದಿ ಕಾ ಅಮೃತ ಮಹೋತ್ಸವ ಕಾರ್ಯಕ್ರಮ

ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದ ದೇಶ ಭಕ್ತರನ್ನು ಸ್ಮರಿಸಿಕೊಳ್ಳುವ ಮೂಲಕ ಅವರು ತೋರಿದ ಮಾರ್ಗದಲ್ಲಿ ಸಾಗಿದಾಗ ಮಾತ್ರ ರಾಷ್ಟ್ರ ಅಭಿವೃದ್ಧಿ ಜತೆಗೆ ಸದೃಢ ಸಮಾಜ ನಿರ್ಮಾಣಗೊಳ್ಳಲು ಸಾಧ್ಯ ಎಂದು ಗವಿಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಅಲ್ಲಮ ಪ್ರಭು ಪದವಿ ಪೂರ್ವ ಕಾಲೇಜಿನಲ್ಲಿ ಆಜಾದಿ ಕಾ ಅಮೃತ ಮಹೋತ್ಸವ ನಿಮಿತ್ತ ಏರ್ಪಡಿಸಿದ ಕಾರ್ಯಕ್ರಮದಲ್ಲಿನೇತೃತ್ವವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ವಿದ್ಯಾರ್ಥಿ ಗಳು ಜೀವನದಲ್ಲಿ ಪ್ರತಿಯೊಬ್ಬರನ್ನು ಪ್ರೀತಿಯಿಂದ ಕಾಣುತ್ತಾ ಜ್ಞಾನಾರ್ಜನೆಯನ್ನು ಮಾಡಿ ಪ್ರಾಮಾಣಿಕತೆಯನ್ನು ಅಳವಡಿಸಿ ಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಪ್ರಾಂಶುಪಾಲರ ಸಂಘದ ಅಧ್ಯಕ್ಷ ಸುರೇಶ ಅಕ್ಕಣ್ಣ ಮಾತನಾಡಿ, ಗ್ರಾಮೀಣ ಪ್ರದೇಶದಿಂದ ಬಂದಿರುವ ವಿದ್ಯಾರ್ಥಿಗಳು ನಿರಂತರ ಅಧ್ಯಯನ ಮಾಡಿ ಉನ್ನತ ಸ್ಥಾನಕ್ಕೇರಬೇಕು. ಗ್ರಾಮೀಣ ಭಾಗದ ಜನರಲ್ಲಿ ದೇಶ ಭಕ್ತಿಯ ವಿಚಾರಗಳನ್ನು ಪ್ರೇರೇಪಿಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಹುಲಸೂರಿನ ಬಿಇಒ ಸೂರ್ಯಕಾಂತ ಪಾಟೀಲ್ ಮಾತನಾಡಿ, ವಿದ್ಯಾರ್ಥಿಗಳು ಸನ್ಮಾರ್ಗದಲ್ಲಿ ನಡೆಯುತ್ತಾ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡಬೇಕು ಎಂದು ಹೇಳಿದರು.

ನಮ್ಮ ದೇಶ ಇಂದು ಜಗತ್ತಿನಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಒಂದಾಗಿದ್ದು, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ಕೈಗಾರಿಕೋದ್ಯಮ ಹಾಗೂ ವೈಜ್ಞಾನಿಕ ಕ್ಷೇತ್ರಗಳಲ್ಲಿ ಅಲ್ಪ ಸಮಯದಲ್ಲಿಯೇ ಸಾಧನೆ ಮಾಡುತ್ತ ಡಾ. ಅಂಬೇಡ್ಕರರು ಉಲ್ಲೇಖಿಸಿದ ಸಂವಿಧಾನದ ಆಶಯಗಳನ್ನು ಈಡೇರಿಸುತ್ತಲಿದೆ.

- ಎಸ್.ಜಿ. ಹುಡೇದ, ನಿವೃತ್ತ ಉಪನ್ಯಾಸಕ

ಕಾಲೇಜಿನ ಪ್ರಾಚಾರ್ಯ ಚಂದ್ರಕಾಂತ ಅಕ್ಕಣ್ಣ ಮಾತನಾಡಿ, ದೇಶದ ಭವಿಷ್ಯ ಉಜ್ವಲಗೊಳಿಸಲು ಪೂರಕ ವಾತವರಣ ನಿರ್ಮಾಣ ಮಾಡುವುದು ಇಂದಿನ ಯುವ ಜನರ ಕೈಯಲ್ಲಿದೆ. ಉತ್ತಮ ಚಾರಿತ್ರ್ಯ ಹಾಗೂ ಒಳ್ಳೆಯ ಸಂಸ್ಕಾರಗಳನ್ನು ರೂಢಿಸಿಕೊಳ್ಳಲು ತಿಳಿಸಿದರು.

ನಿವೃತ್ತ ಉಪನ್ಯಾಸಕ ಎಸ್.ಜಿ. ಹುಡೇದ ಮಾತನಾಡಿದರು. ಅಲ್ಲದೆ ಪಿಯುಸಿ ದ್ವಿತೀಯ ವರ್ಷದಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಶರಣಬಸಪ್ಪ ಬಿರಾದಾರ, ಶ್ರೀನಿವಾಸ ಸಿಂಧೆ, ಬಲಭೀಮ ಪಾಟೀಲ್, ಇರ್ಫಾನ್ ಪಟೇಲ್, ವಿಶಾಲ ಗಾಯಕವಾಡ, ಪ್ರಭು, ತ್ರಿಲೋಚನ ಪಂಚಾಳ, ಸುಷ್ಮಾ ವಾತಡೆ, ಶಿಲ್ಪಾ ಕಾವೇರಿ ಶೀಲವಂತ, ಸಂಗೀತಾ ಅಕ್ಕಣ್ಣ, ಗೀತಾ ಇತರರು ಇದ್ದರು. ಕು. ಭವಾನಿ ಪ್ರಾರ್ಥನೆಗೀತೆ ಹಾಡಿದರೆ, ವೀರಭದ್ರ ಮತ್ತು ಭವಾನಿ ನಿರೂಪಿಸಿದರು. ಉಪನ್ಯಾಸಕ ಚಾಕೂರೆ ವಂದಿಸಿದರು.

Scanned with OKEN Scanner

ಡಾ.ಸಿ.ಸೋಮಶೇಖರ ವಿಶ್ಲೇಷಣೆ | ಹಾರಕೂಡ ಹಿರೇಮಠದಿಂದ ಬಸವಕಲ್ಯಾಣದಲ್ಲಿ ಉತ್ಸವ

ಶರಣರದ್ದು ಕರ್ಮ ಕಾಯಕ ಸಿದ್ಧಾಂತ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಹಾರಕೂಡದ ಶ್ರೀ ಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠದಿಂದ ಬಸವಕಲ್ಯಾಣ ಕ್ಷೇತ್ರ ಸಮಿತಿ ಸಹಯೋಗದಡಿ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾಯಕ ಉತ್ಸವ ಈ ನೆಲದ ಸಂಸ್ಕೃತಿ ಜಾಗೃತಗೊಳಿಸಲು ವೇದಿಕೆ ಕಲ್ಪಿಸಿಕೊಟ್ಟಿತು.

ರಥ ಮೈದಾನದ ಬಿಕೆಡಿಬಿ ಸಭಾ ಭವನದಲ್ಲಿ ಕಾಯಕ ಉತ್ಸವ ಮತ್ತು ಕಾಯಕ ಸಂಸ್ಕೃತಿ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿದ ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ ಮಾತನಾಡಿ, ಕರ್ಮವನ್ನೇ ಕಾಯಕ ಸಿದ್ಧಾಂತವಾಗಿ ಕಂಡವರು ಶರಣರು. ಬೆವರು ಮತ್ತು ಶ್ರಮ ಸಂಸ್ಕೃತಿಯೇ ಕಾಯಕ ಸಂಸ್ಕೃತಿ ಎಂದು ಪ್ರತಿಪಾದಿಸಿದರು.

ಭಾವನಾತ್ಮಕವಾಗಿ ಅಂತರಂಗದ ಶುಚಿತ್ವದಲ್ಲಿ ಆರಳುವ ಕಾರ್ಯವೇ ಕಾಯಕ. ಕಲ್ಯಾಣ ರಾಜ್ಯ ನಿರ್ಮಾಣಕ್ಕೆ ಬೇಕಿರುವ ಕನಸು, ಕಲ್ಪನೆ ಕೊಟ್ಟದ್ದು ವಚನ ಸಾಹಿತ್ಯ ಎಂದರು.

ಕ್ಷೇತ್ರ ಸಮಿತಿ ಸಂಯೋಜಕ ಡಾ.ಬಸವರಾಜ ಪಾಟೀಲ್ ಸೇಡಂ ಮಾತನಾಡಿ, ಶರಣರು ನೀಡಿದ ಕಾಯಕ ಸಂಸ್ಕೃತಿಯನ್ನು ಮತ್ತೆ ಬೆಳೆಸುವುದೇ ಕಾರ್ಯಕ್ರಮದ ಮೂಲ ಆಶಯ. ಹಾರಕೂಡ ಶ್ರೀಗಳ ನೇತೃತ್ವದ ಈ ಉತ್ಸವ ಮುಂಬರುವ ದಿನಗಳಲ್ಲಿ ರಾಜ್ಯ ಮಟ್ಟದಲ್ಲಿ



ವಿಜಯವಾಣಿ

ಬಸವಕಲ್ಯಾಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾಯಕ ಉತ್ಸವವನ್ನು ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ.ಸಿ. ಸೋಮಶೇಖರ ಉದ್ಘಾಟಿಸಿದರು. ಶ್ರೀ ಡಾ.ಚನ್ನವೀರ ಶಿವಾಚಾರ್ಯರು, ಶ್ರೀ ಡಾ.ಶಿವಾನಂದ ಸ್ವಾಮೀಜಿ, ಡಾ.ಬಸವರಾಜ ಸಾದರ, ಡಾ.ಗಂಗಾಂಬಿಕಾ ಅಕ್ಕ, ಶ್ರೀ ಶಾಂತವೀರ ಮುರುಘರಾಜೇಂದ್ರ ಸ್ವಾಮೀಜಿ, ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಬಸವರಾಜ ಪಾಟೀಲ್ ಸೇಡಂ ಇತರರಿದ್ದರು.

ಬೆಳೆದು ಕಾಯಕ ಸಂಸ್ಕೃತಿಗೆ ಪ್ರೇರಣೆ ನೀಡಲಿದೆ ಎಂದು ಸದಾಶಯ ವ್ಯಕ್ತಪಡಿಸಿದರು.

ಹರಳಯ್ಯ ಗವಿಯ ಪೂಜ್ಯ ಡಾ.ಗಂಗಾಂಬಿಕಾ ಅಕ್ಕ ಮಾತನಾಡಿ, ಕಾಯಕ ಮತ್ತು ದಾಸೋಹ ತತ್ವ ಶರಣರು ವಿಶ್ವಕ್ಕೆ ನೀಡಿದ ಶ್ರೇಷ್ಠ ಕೊಡುಗೆ ಎಂದರು.

ಹುಲಸೂರಿನ ಶ್ರೀ ಡಾ.ಶಿವಾನಂದ ಸ್ವಾಮೀಜಿ, ಆಕಾಶವಾಣಿ ನಿವೃತ್ತ ನಿರ್ದೇಶಕ ಡಾ.ಬಸವರಾಜ ಸಾದರ ಅನುಭಾವ ನೀಡಿದರು. ಹಾರಕೂಡದ ಶ್ರೀ ಡಾ.ಚನ್ನವೀರ ಶಿವಾಚಾರ್ಯರು, ಶ್ರೀ ಶಾಂತವೀರ ಮುರುಘರಾಜೇಂದ್ರ ಸ್ವಾಮೀಜಿ, ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ, ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಪಂಚಾಕ್ಷರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಜಿಪಂ ಮಾಜಿ ಸದಸ್ಯ ಜಗನ್ನಾಥ ಪಾಟೀಲ್ ಮಂಠಾಳ ಷಟಸ್ಥಲ ಧ್ವಜಾರೋಹಣ ನೆರವೇರಿಸಿದರು. ನಿವೃತ್ತ ಪೊಲೀಸ್ ಅಧಿಕಾರಿ ಪ್ರಕಾಶ ಮೂಗಿ, ಬಿಡಿವಿಸಿ ಅಧ್ಯಕ್ಷ ಶಶಿಕಾಂತ ದುರ್ಗೆ, ಉಪಾಧ್ಯಕ್ಷ ಡಾ.ಜಿ.ಎಸ್.ಭುರಳೆ, ಉದ್ಯಮಿ ಧನರಾಜ ತಾಳಂಪಳ್ಳಿ, ನಾಗಯ್ಯ ಸ್ವಾಮಿ, ಕೇಶಪ್ಪ ಬಿರಾದಾರ, ಅರ್ಜುನ ಕನಕ, ಕಾವೇರಿ ಪಾಟೀಲ್, ಮೇಘರಾಜ ನಾಗರಾಳೆ, ಬಿ.ಕೆ.ಹಿರೇಮಠ, ಮಲ್ಲಿನಾಥ ಹಿರೇಮಠ, ಡಾ.ಬಸವರಾಜ ಸ್ವಾಮಿ, ಸೂರ್ಯಕಾಮತ ಮಠ, ಚಂದ್ರಕಾಂತ ಸ್ವಾಮಿ ಇತರರಿದ್ದರು. ಕಲಾವಿದ ನವಲಿಂಗ ಪಾಟೀಲ್ ನಿರೂಪಣೆ ಮಾಡಿದರು. ಕಾರ್ತಿಕ ಸ್ವಾಮಿ ವಚನ ಸಂಗೀತ ನಡೆಸಿಕೊಟ್ಟರು.

ಪ್ರದರ್ಶನ: ಉತ್ಸವ ನಿಮಿತ್ತ ರಥ ಮೈದಾನದಲ್ಲಿ ಸ್ಥಳೀಯ ಉತ್ಪನ್ನಗಳ ಪ್ರದರ್ಶನಕ್ಕೆ ಮಳಿಗೆಗಳನ್ನು ಹಾಕಲಾಗಿತ್ತು. ಕಾಯಕನಿರತ ಶರಣರ ಭಾವಚಿತ್ರ, ಕರಕುಶಲ ಉತ್ಪನ್ನಗಳು, ಮನೆಯಲ್ಲಿ ಸಿದ್ಧಪಡಿಸಿದ ವಸ್ತುಗಳು ಹಾಗೂ ಆಯುರ್ವೇದಿಕ ಔಷಧ, ಪುಸ್ತಕಗಳು ಮಳಿಗೆಯಲ್ಲಿದ್ದವು. ಉತ್ಸವಕ್ಕೆ ಆಗಮಿಸಿದ ಜನ ಮಳಿಗೆಗಳಲ್ಲಿ ಸುತ್ತಾಡಿ ನೋಡುವ ಜತೆಗೆ ಖರೀದಿಯೂ ಮಾಡುತ್ತಿರುವುದು ಕಂಡಿತು.

ಕಾಯಕ ಸಂಸ್ಕೃತಿ ಕಲಿಸುವ ವಿವಿ ಬೇಕು

ಜಗತ್ತಿಗೆ ಪ್ರಜಾಪ್ರಭುತ್ವ ತತ್ವಗಳನ್ನು ಮೊದಲು ನೀಡಿದವರು ಬಸವಣ್ಣ. ದುಡಿಯದೆ ತಿನ್ನುವವವರಿಗೆ ದುಡಿಯುವುದನ್ನು ಶರಣರು ಕಲಿಸಿದರು. ಬಸವಣ್ಣನವರ ಹೆಸರು ಹೇಳುವ ಎಲ್ಲ ಮಠಗಳು ಬೆಳೆಯುವ ಜತೆಗೆ ಶರಣ ಸಂಸ್ಕೃತಿ ಬೆಳೆಸಲು ಮುಂದಾಗಬೇಕು ಎಂದು ಆಕಾಶವಾಣಿ ನಿವೃತ್ತ ನಿರ್ದೇಶಕ ಡಾ.ಬಸವರಾಜ ಸಾದರ ಆಶಯ ವ್ಯಕ್ತಪಡಿಸಿದರು. ಕಲ್ಯಾಣದಲ್ಲಿ ವಚನ ವಿಶ್ವವಿದ್ಯಾಲಯ ಸ್ಥಾಪಿಸಬೇಕು. ವಚನ ಸಾಹಿತ್ಯವನ್ನು ವಿಶ್ವದ ಎಲ್ಲ ಭಾಷೆಗಳಿಗೂ ಅನುವಾದಿಸುವ ಜತೆಗೆ ಎಲ್ಲರಿಗೂ ತಲುಪಿಸುವ ಕೆಲಸ ಆಗಬೇಕು. ಕಾಯಕ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕು. ಸ್ವದೇಶಿ ಉತ್ಪನ್ನ ಉತ್ಪಾದನೆ ಜತೆಗೆ ತಯಾರಿಕೆ ಕುರಿತು ತಿಳಿವಳಿಕೆ ನೀಡುವ ಕಾರ್ಯ ನಡೆಯುವ ಅಗತ್ಯವಿದೆ ಎಂದರು.

> ದುಡಿಯದೆ ದೊಡ್ಡವರಾಗಬೇಕು ಎಂಬ ಮನೋಭಾವ ಸಮಾಜ ಮತ್ತು ದೇಶದ ಪ್ರಗತಿಗೆ ಮಾರಕ. ನೌಕರಿಗಾಗಿ ಶಿಕ್ಷಣ ಎಂಬುದರ ಬದಲಿಗೆ ಜ್ಞಾನಕ್ಕಾಗಿ ಶಿಕ್ಷಣ ಎಂಬ ಭಾವ ಬೆಳೆಯಬೇಕು. ಸತ್ಯ ಶುದ್ಧ ಕಾಯಕದಿಂದ ಬಂದ ಆದಾಯದಲ್ಲಿ ಒಂದಿಷ್ಟು ಬಡವರು, ದುಡಿಯುವವರಿಗೆ ನೀಡಬೇಕು.
>
> **| ಡಾ.ಬಸವರಾಜ ಪಾಟೀಲ್ ಸೇಡಂ**
> ಕ್ಷೇತ್ರ ಸಮಿತಿ ಸಂಯೋಜಕ

> ದಾಸೋಹ ಪರಂಪರೆಯನ್ನು ಹಾರಕೂಡ ಮಠ ಮುಂದುವರಿಸಿದೆ. ಕವಿ-ಕಲಾವಿದರು, ಸಾಹಿತಿಗಳು, ಪೂಜ್ಯರನ್ನು ಸತ್ಕರಿಸುವ ಹಾರಕೂಡ ಶ್ರೀಗಳ ನೇತೃತ್ವದ ಕಾಯಕ ಉತ್ಸವ ಕಾಯಕ ಸಂಸ್ಕೃತಿ ಬೆಳೆಸಲಿದೆ. ಕಲ್ಯಾಣದಲ್ಲಿ ಕಾಯಕ ವಿಶ್ವವಿದ್ಯಾಲಯ ಸ್ಥಾಪನೆಗೆ ಪ್ರೇರಣೆಯೂ ಆಗಲಿದೆ.
>
> **| ಶ್ರೀ ಡಾ.ಶಿವಾನಂದ ಸ್ವಾಮೀಜಿ**
> ಹುಲಸೂರು ಗುರುಬಸವೇಶ್ವರ ಸಂಸ್ಥಾನ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 11 ಫೆಬ್ರವರಿ 2023
11 FEBRUARY 2023

Scanned with OKEN Scanner

ಶ್ರೀ ಅಭಿನವ ಬಸವಲಿಂಗ ಸ್ವಾಮೀಜಿ ಬಣ್ಣನೆ । ಉಪನ್ಯಾಸ ಮಾಲೆ ಸಮಾರೋಪ

ಸಮನ್ವಯ ಸಂಸ್ಥಾನ ಕಲ್ಯಾಣದ ಗವಿಮಠ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಶ್ರಾವಣದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ವಿಶೇಷ ಉಪನ್ಯಾಸ ಏರ್ಪಡಿಸುವ ಮೂಲಕ ಗವಿಮಠ ಕಲ್ಯಾಣ ಕರ್ನಾಟಕದಲ್ಲಿ ಸಮನ್ವಯತೆ ಸಾಧಿಸಿದೆ ಎಂದು ಲಾಡಮುಗಳಿ ಶ್ರೀ ಅಭಿನವ ಬಸವಲಿಂಗ ಸ್ವಾಮೀಜಿ ನುಡಿದರು.

ಶ್ರಾವಣ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಸಹಯೋಗದಲ್ಲಿ ಸೋಮವಾರ ಸಂಜೆ ಏರ್ಪಡಿಸಿದ್ದ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆ ಸಮಾರೋಪದಲ್ಲಿ ಆಶೀರ್ವಚನ ನೀಡಿದ ಅವರು, ಅಭಿನವ ಶ್ರೀಗಳು ಚಿಕ್ಕ ವಯಸ್ಸಿನಲ್ಲೇ ಹತ್ತು ಹಲವು ಧಾರ್ಮಿಕ, ಸಾಮಾಜಿಕ ಕಾರ್ಯ ಮಾಡುವುದರ ಮೂಲಕ ಸಾಧನೆ ಮಾಡಿದ ಸಾಕಾರಮೂರ್ತಿ ಎಂದು ಬಣ್ಣಿಸಿದರು.

ನೇತೃತ್ವ ವಹಿಸಿದ್ದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಅಂದು ಹಾನಗಲ್ ಪೂಜ್ಯ ಗುರುಕುಮಾರ ಶಿವಯೋಗಿಗಳು ಸಮನ್ವಯತೆಗಾಗಿ ಗುರು-ವಿರಕ್ತರು



ವಿಜಯವಾಣಿ

ಬಸವಕಲ್ಯಾಣ ಸಂಸ್ಥಾನ ಗವಿಮಠದಲ್ಲಿ ಸೋಮವಾರ ಸಂಜೆ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಮಾಲೆ ಸಮಾರೋಪದಲ್ಲಿ ಶ್ರೀ ಅಭಿನವ ಬಸವಲಿಂಗ ಸ್ವಾಮೀಜಿ ಮಾತನಾಡಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮಲ್ಲಿಕಾರ್ಜುನ ನಂದಿ, ಶ್ರೀನಿವಾಸ ಸಿಂಧೆ ಇದ್ದರು.

ಒಂದೇ ಎಂಬ ಸಮತೆ ಸಾರಿತೋ... ಎಂಬ ದಿವ್ಯ ಸಂದೇಶ ಸಾರಿದರು. ಆ ಸಂದೇಶವನ್ನು ಇವತ್ತು ನಮ್ಮ ಸಂಸ್ಥಾನ ಗವಿಮಠ ಸಾರುತ್ತಿದೆ ಎಂದು ತಿಳಿಸಿದರು.

ಪ್ರಾಧ್ಯಾಪಕ ಶ್ರೀನಿವಾಸ ಸಿಂಧೆ ಉಪನ್ಯಾಸ ನೀಡಿದರು. ಜಲಾನಯನ ನಿವೃತ್ತ ಅಧಿಕಾರಿ ಮಲ್ಲಿಕಾರ್ಜುನ ನಂದಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ಸ್ವಾಮಿ, ಪ್ರಮುಖರಾದ ರಾಕೇಶ ಪುರವಂತ, ಎ.ಜಿ. ಪಾಟೀಲ್, ಬಾಬುರಾವ ಉಳ್ಳೆ, ಪ್ರೊ.ಸೂರ್ಯಕಾಂತ ಶೀಲವಂತ, ಪ್ರೊ.ರುದ್ರೇಶ್ವರ ಸ್ವಾಮಿ, ಸುಭದ್ರಾತಾಯಿ ಸ್ವಾಮಿ, ವಿಮಲಾಬಾಯಿ ಬಿರಾದಾರ್, ಪಾರ್ವತಿ ರೋಜೆ ಇತರರಿದ್ದರು. ವೀರಣ್ಣ ಶೀಲವಂತ ಪ್ರಾರ್ಥನಾಗೀತೆ ಹಾಡಿದರು. ಮಲ್ಲಿಕಾರ್ಜುನ ಅಲಗುಡೆ ಸ್ವಾಗತಿಸಿದರು. ಮುಖ್ಯಗುರು ರಮೇಶ ರಾಜೋಳೆ ನಿರೂಪಣೆ ಮಾಡಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 3 ಸೆಪ್ಟೆಂಬರ್ 2022
3 SEPTEMBER 2022

'ವೈವಿಧ್ಯತೆಯಲ್ಲಿ ಏಕತೆಯಿಂದ ಸಮೃದ್ಧಿ'

ಬಸವಕಲ್ಯಾಣ: ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ವೈವಿಧ್ಯತೆಯಲ್ಲಿ ಏಕತೆ ಇದ್ದರೆ ದೇಶದಲ್ಲಿ ಸುಖ ಶಾಂತಿ ಮತ್ತು ಸಮೃದ್ಧಿ ಸಾಧ್ಯ' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದ್ದಾರೆ.

ನಗರದ ಅಲ್ಲಮಪ್ರಭು ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಹಾಗೂ ವಿವಿಧ ಕ್ಷೇತ್ರದ ಸಾಧಕರ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿರುವ ಹುತಾತ್ಮ ಯೋಧರ, ಹೋರಾಟಗಾರರ ಸ್ಮರಣೆ ಅಗತ್ಯವಾಗಿದೆ. ಅಂಥವರಿಂದ ಯುವ ಜನತೆ ಪ್ರೇರಣೆ ಪಡೆಯಬೇಕು. ಉತ್ತಮ ಶಿಕ್ಷಣ ಪಡೆದು ಪ್ರಾಮಾಣಿಕವಾಗಿ ಕಾರ್ಯಗೈದರೆ ದೇಶದೋನ್ನತಿ ಆಗುತ್ತದೆ' ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸೂರ್ಯಕಾಂತ ಪಾಟೀಲ, ಪ್ರಾಂಶುಪಾಲ ಚಂದ್ರಕಾಂತ ಅಕ್ಕಣ್ಣ ಮಾತನಾಡಿದರು.



ಬಸವಕಲ್ಯಾಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು

ಪ್ರಾಂಶುಪಾಲರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಅಕ್ಕಣ್ಣ, ಮುಖ್ಯ ಶಿಕ್ಷಕ ಎಸ್.ಪಿ.ಬಿರಾದಾರ, ನಿವೃತ್ತ ಉಪನ್ಯಾಸಕ ಎಸ್.ಜಿ.ಹುಡೇದ್, ಕ್ಷೇತ್ರ ಶಿಕ್ಷಣಾಧಿಕಾರಿ ಸೂರ್ಯಕಾಂತ ಪಾಟೀಲ, ಶ್ರೀನಿವಾಸ ಶಿಂಧೆ ಅವರನ್ನು ಸನ್ಮಾನಿಸಲಾಯಿತು.

ಪಿಯು ದ್ವಿತೀಯ ವರ್ಷದಲ್ಲಿ ಅತ್ಯಧಿಕ ಅಂಕ ಪಡೆದಿರುವ ಹಾಗೂ ದೇಶಭಕ್ತಿಗೀತೆ, ಪ್ರಬಂಧ ಮತ್ತಿತರೆ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಬಲಭೀಮ ಪಾಟೀಲ, ಇರ್ಫಾನ್ ಪಟೇಲ್, ವಿಶಾಲ ಗಾಯಕವಾಡ, ಪ್ರಭು, ತ್ರಿಲೋಚನ ಪಂಚಾಳ, ಸುಷ್ಮಾ ವಾತಡೆ, ಶಿಲ್ಪಾ, ಕಾವೇರಿ ಶೀಲವಂತ, ಸಂಗೀತಾ ಅಕ್ಕಣ್ಣ, ಗೀತಾ ಸೇರಿದಂತೆ ಮುಖಂಡರು ಉಪಸ್ಥಿತರಿದ್ದರು.

ಪ್ರಜಾವಾಣಿ
ಸೋಮವಾರ • ಆಗಸ್ಟ್ 8, 2022

Scanned with OKEN Scanner



ಹಾಸ್ವಾಮೀಜಿ ಅಭಿಮತ | ಬಸವಕಲ್ಯಾಣದಲ್ಲಿ ಧರ್ಮ ಸಭೆ

ಲ್ಲಿ ಸಮಾಜದ ಪ್ರಗತಿ



ಬಸವಕಲ್ಯಾಣದಲ್ಲಿ ಸದ್ಗುರು ಶ್ರೀ ಮೌನೇಶ್ವರ ಜಾತ್ರೋತ್ಸವ ನಿಮಿತ್ತ ಶನಿವಾರ ನಡೆದ ಧರ್ಮಸಭೆಯನ್ನು ಪೂಜ್ಯರು ಉದ್ಘಾಟಿಸಿದರು. ಶ್ರೀ ಶ್ರೀನಿವಾಸ ಮಹಾಸ್ವಾಮೀಜಿ, ಶ್ರೀ ಸದಾನಂದ ಅಪ್ಪಗಳು, ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಶಿವಲಿಂಗ ಮಹಾಸ್ವಾಮೀಜಿ, ಧನರಾಜ ತಾಳಂಪಳ್ಳಿ, ಅಲಿಸಾಬ್ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » KALABURAGI
ಭಾನುವಾರ 26 ಜನವರಿ 2025
26 JANUARY 2025



ಬಸವಕಲ್ಯಾಣದ ಗವಿ ಮಠದಲ್ಲಿ ಬುಧವಾರ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನೋತ್ಸವ, ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಶ್ರೀಗಳನ್ನು ಸನ್ಮಾನಿಸಲಾಯಿತು. ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಮಾಲಾ ನಾರಾಯಣರಾವ, ಬಾಬುಹೊನ್ನಾ ನಾಯಕ, ಗುಂಡುರೆಡ್ಡಿ, ಸುಧೀರ ಕಾಡಾದಿ, ಪ್ರದೀಪ ವಾತಡೆ, ಆನಂದ ದೇವಪ್ಪ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » KALABURAGI
ಗುರುವಾರ 29 ಸೆಪ್ಟೆಂಬರ್ 2022
29 SEPTEMBER 2022

ಭವ ಸಾಗರ ದಾಟಿಸುವ ಅಧ್ಯಾತ್ಮ



ಬಸವಕಲ್ಯಾಣ ಸಂಸ್ಥಾನ ಗವಿ ಮಠದಲ್ಲಿ ಶ್ರಾವಣ ಮಾಸ ನಿಮಿತ್ತ ಸೋಮವಾರ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಮಲ್ಲಿಕಾರ್ಜುನ ಅಲಗೂಡೆ, ಮಲ್ಲಯ್ಯ ಸ್ವಾಮಿ ಧನ್ನೂರ, ಕಾರ್ತಿಕ ಬಿರಾದಾರ ಇದ್ದರು.

ಬಸವಕಲ್ಯಾಣ: ಭವ ರೋಗ ನಿವಾರಣೆಯಾಗಿ ಭವಸಾಗರ ದಾಟಿಸುವ ಶಕ್ತಿ ಅಧ್ಯಾತ್ಮಕ್ಕಿದೆ ಎಂದು ನಗರದ ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು. ಸಂಸ್ಥಾನ ಗವಿ ಮಠದಲ್ಲಿ ಶ್ರಾವಣ ಮಾಸ ನಿಮಿತ್ತ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಎರಡನೇ ವಿಶೇಷ ಉಪನ್ಯಾಸ ಮಾಲೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಜಗದ್ಗುರು ರೇಣುಕಾಚಾರ್ಯರು ಜಗತ್ತಿಗೆ ತಮ್ಮ ಸಿದ್ಧಾಂತ ಶಿಖಾಮಣಿ ಮೂಲಕ ಅಧ್ಯಾತ್ಮದಲ್ಲಿ ಭವ ರೋಗ ನಿವಾರಿಸುವ ಶಕ್ತಿ ಇದೆ. ಅಧ್ಯಾತ್ಮ ಎಂಬುದು ಅಂಧಕಾರ ತೊಲಗಿಸುವ ಜ್ಞಾನ. ಗುರು ಬಸವಣ್ಣನವರು ವಚನ ಮೂಲಕ ಜ್ಞಾನದ ಮಹತ್ವ ತಿಳಿಸಿದ್ದಾರೆ ಎಂದರು. ಶಿಕ್ಷಕ ಮಲ್ಲಿಕಾರ್ಜುನ ಅಲಗೂಡೆ, ಮಲ್ಲಯ್ಯ ಸ್ವಾಮಿ ಧನ್ನೂರ ಮಾತನಾಡಿದರು. ಯುವ ಮುಖಂಡ ಕಾರ್ತಿಕ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಮಲ್ಲಿಕಾರ್ಜುನ ನಂದಿ, ವೀರಣ್ಣ ಶೀಲವಂತ, ಮಂಠಾಳದ ಶಿವಕುಮಾರ ಶೆಟಕಾರ, ಮಹಾದೇವ ಪೊಲೀಸ್ ಪಾಟೀಲ್, ಶಾಮ ಮಹಾರಾಜ, ಚಂದ್ರಕಾಂತ ಜುಂಜಾ, ಧನರಾಜ ಸಾತಬಾಯಿ, ಪ್ರೊ. ರುದ್ರೇಶ್ವರ ಗೊರ್ಟಾ, ಚನ್ನವೀರ ಬಿರಾದಾರ, ಅಣವೀರ ಬಿರಾದಾರ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ಸ್ವಾಮಿ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » KALABURAGI
ಶುಕ್ರವಾರ 5 ಆಗಸ್ಟ್ 2022
5 AUGUST 2022

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » KALABURAGI
ಭಾನುವಾರ 24 ಏಪ್ರಿಲ್ 2022
24 APRIL 2022

ರಂಭಾಪುರಿ ಜಗದ್ಗುರು ನುಡಿ | ಬಸವಕಲ್ಯಾಣದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ

ವ್ಯಕ್ತಿತ್ವ ವಿಕಸನಕ್ಕೆ ರೇಣುಕರ ಕೊಡುಗೆ ಅಪಾರ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮನುಷ್ಯ ಯಂತ್ರದಂತೆ ದುಡಿಯುತ್ತ ಸಂಪತ್ತು, ಅಧಿಕಾರ-ಅಂತಸ್ತು ಪಡೆದರೂ ಜೀವನದಲ್ಲಿ ಇರಬೇಕಾದಷ್ಟು ಶಾಂತಿ, ನೆಮ್ಮದಿಯಿಲ್ಲ. ವ್ಯಕ್ತಿತ್ವ ವಿಕಾಸಕ್ಕೆ ಸಂಸ್ಕಾರ, ಸಂಸ್ಕೃತಿಗಳ ಅಗತ್ಯವಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಉಜ್ವಲ ಬದುಕಿಗೆ ಕೊಟ್ಟ ಕೊಡುಗೆ ಅಪಾರ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ತ್ರಿಪುರಾಂತದ ಸಂಸ್ಥಾನ ಗವಿಮಠದಲ್ಲಿ ಶನಿವಾರ ಹಮ್ಮಿಕೊಂಡ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಮತ್ತು ಧರ್ಮಸಭೆಯಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಜಗದ್ಗುರುಗಳು, ದೇಹದ ಸಂರಕ್ಷಣೆಗಾಗಿ ಜೀವನ ಸತ್ವಗಳ ಅವಶ್ಯಕತೆ ಇರುವಂತೆ ಆತ್ಮ ಸಂಶೋಧನೆಗೆ ಧಾರ್ಮಿಕ ತತ್ವಗಳೇ ಸಂಜೀವಿನಿಯಾಗಿವೆ ಎಂದರು.

ಭೂಮಿ-ಆಗಸದ ಅಂತರ ಕಡಿಮೆಯಾಗುತ್ತಿದ್ದರೂ ಮನುಷ್ಯ-ಮನುಷ್ಯನ ನಡುವಣ ಅಂತರ ಹೆಚ್ಚುತ್ತಲೇ ಇದೆ. ಜ್ಞಾನ-ವಿಜ್ಞಾನ ಬೆಳೆಯುತ್ತಿದ್ದರೂ ಜನಸಮುದಾಯದಲ್ಲಿ ವಿಶ್ವಾಸ, ನಂಬಿಕೆ, ವಾತ್ಸಲ್ಯದ ಕೊರತೆ ಕಾಣಲಾಗುತ್ತಿದೆ. ಶಿವಾದ್ವೈತ ಜ್ಞಾನ ಸಂಪಾದನೆಯಿಂದ ಬದುಕು ಶ್ರೀಮಂತಗೊಳ್ಳುತ್ತದೆ. ಶ್ರದ್ಧೆ, ಉದ್ಯೋಗಶೀಲತೆ, ನಿರ್ಭಯತೆ, ಸಾತ್ವಿಕತೆ, ಅಹಿಂಸೆ, ದಯೆ, ಕ್ಷಮಾ ಸದ್ಗುಣಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಬಾಳಬೇಕೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ್ದಾರೆ ಎಂದು ತಿಳಿಸಿದರು.

ಸಾನ್ನಿಧ್ಯ ವಹಿಸಿದ್ದ ಕೇದಾರಪೀಠದ ಶ್ರೀ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರು ಆಶೀರ್ವಚನ ನೀಡಿ, ಜೀವ ಶಿವನಾಗಲು ಭವಿ ಭಕ್ತನಾಗಲು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ತತ್ವ-ಸಿದ್ಧಾಂತಗಳು ಅಡಿಪಾಯವಾಗಿವೆ. ನೀತಿ ಮತ್ತು ಸ್ವಾಭಿಮಾನದಿಂದ ಮನುಷ್ಯನಿಗೆ ನಿಜಬೆಲೆ ಸಿಗುತ್ತದೆ. ನೆಮ್ಮದಿ, ಶಾಂತಿ ಬದುಕಿಗೆ ಭಗವಂತನ ಚಿಂತನೆ ಮತ್ತು ಗುರು ಕಾರುಣ್ಯ



ವಿಜಯವಾಣಿ ಚಿತ್ರಗಳು

ಬಸವಕಲ್ಯಾಣ ಸಂಸ್ಥಾನ ಗವಿಮಠದಲ್ಲಿ ಆಯೋಜಿಸಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಮತ್ತು ಧರ್ಮಸಭೆಯನ್ನು ಶ್ರೀ ರಂಭಾಪುರಿ ಹಾಗೂ ಶ್ರೀ ಕೇದಾರ ಜಗದ್ಗುರುಗಳು ಉದ್ಘಾಟಿಸಿದರು. ಡಾ.ಅಭಿನವ ಘನಲಿಂಗ ಶ್ರೀ, ಶ್ರೀ ರಾಜೇಶ್ವರ ಶಿವಾಚಾರ್ಯ, ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶಾಸಕ ಶರಣು ಸಲಗರ, ರಾಜಕುಮಾರ ಸಿರಗಾಪುರ, ಸಾವಿತ್ರಿ ಸಲಗರ, ಆನಂದ ದೇವಪ್ಪ, ಶಿವರಾಜ ನರಶೆಟ್ಟಿ, ಪ್ರದೀಪ ವಾತಡೆ, ಬಸವಂತಪ್ಪ ಲವಾರೆ ಇತರರಿದ್ದರು.



ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವದಲ್ಲಿ ಶ್ರೀ ಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ನೀಡಿ ಸತ್ಕರಿಸಲಾಯಿತು. ಶ್ರೀ ರಂಭಾಪುರಿ ಜಗದ್ಗುರು, ಶ್ರೀ ಕೇದಾರ ಜಗದ್ಗುರು, ಡಾ.ಅಭಿನವ ಘನಲಿಂಗ ಶ್ರೀ, ಶ್ರೀ ರಾಜೇಶ್ವರ ಶಿವಾಚಾರ್ಯ, ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶಾಸಕರಾದ ಈಶ್ವರ ಖಂಡ್ರೆ, ಶರಣು ಸಲಗರ ಇತರರಿದ್ದರು.

ಲವಾರೆಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ

ಶ್ರೀ ಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಅವರಿಗೆ ಗವಿಮಠದಿಂದ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಿ ಉಭಯ ಜಗದ್ಗುರುಗಳು ಆಶೀರ್ವದಿಸಿದರು. ಲೇಖಕ ವೀರಶೆಟ್ಟಿ ಪಾಟೀಲ್ ಬರೆದ ಕಲ್ಯಾಣದ ಶ್ರೀ ಗುರು ಘನಲಿಂಗ ರುದ್ರಮುನಿ ಗವಿಮಠ ಪುಸ್ತಕ ಮತ್ತು ಬಸವಕಲ್ಯಾಣ ಗವಿಮಠದ ವೆಬ್ ಸೈಟ್ ಬಿಡುಗಡೆ ಮಾಡಲಾಯಿತು.

> ಲೋಕಕ್ಕೆ ಬೆಳಕು ನೀಡಿದ ರುದ್ರಮುನಿ ಶಿವಾಚಾರ್ಯರ ತಪೋತಾಣ ಸಾಕಷ್ಟು ಪ್ರಗತಿಯಾಗಿದೆ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ವಯಸ್ಸಿನಲ್ಲಿ ಕಿರಿಯರಾದರೂ ಹಿರಿದಾದ ಸಾಧನೆ ಮಾಡಿದ್ದಾರೆ. ಈ ಪವಿತ್ರ ಕ್ಷೇತ್ರ ನೊಂದು-ಬೆಂದು ಬಂದ ಜನಸಮುದಾಯಕ್ಕೆ ಶಾಂತಿ, ಸಮಾಧಾನ ತಂದುಕೊಡುವುದರಲ್ಲಿ ಯಾವುದೇ ಸಂದೇಹವಿಲ್ಲ.
> ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಬಾಳೆಹೊನ್ನೂರು

> ಬಸವಕಲ್ಯಾಣದಲ್ಲಿ ಸರ್ಕಾರ ನೂತನ ಅನುಭವ ಮಂಟಪ ನಿರ್ಮಿಸಲು ಮುಂದಾಗಿರುವುದು

ಗವಿಮಠ ಸಂಪನ್ಮೂಲ ಯಥಾಸ್ಥಿತಿಯಲ್ಲಿ ಸಂರಕ್ಷಿಸಿ

ಬಸವಕಲ್ಯಾಣ ಕ್ಷೇತ್ರ ಪ್ರಗತಿ ಆಗಬೇಕು

ಕಲ್ಯಾಣದಿಂದ ಧರ್ಮ ದಂಡಯಾತ್ರೆ

ಧರ್ಮದ ಪ್ರಸಾರ-ಪ್ರಚಾರಕ್ಕಾಗಿ ಧರ್ಮದಂಡ ಯಾತ್ರೆಗೆ ವೇದಿಕೆ ಸಿದ್ಧಪಡಿಸಲು ಚಂತನೆ ನಡೆದಿದ್ದು, ತಪೋತಾಣ ಗವಿ ಮಠದಿಂದಲೇ ಯಾತ್ರೆ ಆರಂಭಿಸುವ ಕುರಿತು ರಂಭಾಪುರಿ ಹಾಗೂ ಕೇದಾರ ಜಗದ್ಗುರುಗಳು







* Source: Average Combined Circulation for All Editions. ABC July-Dec 2019

Scanned with OKEN Scanner

ರೇಣುಕಾಚಾರ್ಯರ ಜಯಂತಿ: ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಅಭಿಮತ

ಶರಣರ ಶಿವದೀಕ್ಷಾ ತಾಣ ತ್ರಿಪುರಾಂತ ಗವಿಮಠ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ತ್ರಿಪುರಾಂತ ಗವಿಮಠ 12ನೇ ಶತಮಾನದ ಶರಣರಿಗೆ ಶಿವದೀಕ್ಷೆ ನೀಡಿದ ತಾಣವಾಗಿದೆ' ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಹೇಳಿದರು.

ನಗರದ ತ್ರಿಪುರಾಂತ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಶನಿವಾರ ಆಯೋಜಿಸಿದ್ದ ರೇಣುಕಾಚಾರ್ಯರ ಜಯಂತಿ, ಯುಗಮಾನೋತ್ಸವ ಹಾಗೂ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ರೇವಣಸಿದ್ದೇಶ್ವರರು ಇಲ್ಲಿ ಚಂಗಲಗಣ ಮಂಟಪ ಕಟ್ಟಿದ್ದರು. ಈ ಮೂಲಕ ಶರಣರಿಗೆ ಸಂಸ್ಕಾರ ಮತ್ತು ಆಧ್ಯಾತ್ಮಿಕ ಬಲ ನೀಡಲಾಗುತ್ತಿತ್ತು. ಇಂಥ ಐತಿಹಾಸಿಕ ಮತ್ತು ಪವಿತ್ರ ಸ್ಥಳದ ಸಂರಕ್ಷಣೆ ಅಗತ್ಯವಾಗಿದೆ. ನಾವು 30 ವರ್ಷಗಳಿಂದ ಇದರ ಸಂಪರ್ಕದಲ್ಲಿದ್ದು ಸುಧಾರಣೆಗೆ ಯತ್ನಿಸಿದ್ದೇವೆ. ಈಗಿನ ಪೀಠಾಧಿಪತಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾಕಷ್ಟು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದಾರೆ. ಪಂಚಪೀಠಗಳ ಪರಂಪರೆಯನ್ನು ಎಲ್ಲರೂ ಗೌರವಿಸಬೇಕು. ಶಾಖಾ ಮಠಗಳ ಸುಧಾರಣೆಗೆ ಸಹಕಾರ ನೀಡಬೇಕು. ಬಸವಕಲ್ಯಾಣ ನಗರದಲ್ಲಿ ರಂಭಾಪುರಿ ಪೀಠದಿಂದ ದಸರಾ ಮಹೋತ್ಸವ ನಡೆಸುವ ಯೋಚನೆಯೂ ಇದೆ' ಎಂದರು.

'ಇಲ್ಲಿನ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗವಿಮಠದ ಜಮೀನು ಕಿತ್ತುಕೊಂಡು ಅದನ್ನು ಕೆಡಿಸುವ ಹುನ್ನಾರವನ್ನು ಕೆಲವರು ಮಾಡುತ್ತಿದ್ದು, ಅದಕ್ಕೆ ಆಸ್ಪದ ಕೊಡಬಾರದು' ಎಂದು ಸ್ವಾಮೀಜಿ ಹೇಳಿದರು.

'ಈ ಹಿಂದೆ ಕೆಲವರು ವೀರಶೈವ, ಲಿಂಗಾಯತ ಬೇರೆ ಎಂದು ಭೇದ ಮೂಡಿಸಲು ಯತ್ನಿಸಿ ಸಮಾಜದಲ್ಲಿ ಒಡಕು ತಂದಂತೆ ಈಗಲೂ ಇಲ್ಲಿ ಸಮಸ್ಯೆ ಸೃಷ್ಟಿಸುತ್ತಿದ್ದಾರೆ. ಆದರೆ, ಗುರು-ವಿರಕ್ತರು ಕೂಡಿಕೊಂಡು ಸಭೆ ನಡೆಸಿ ಆ ಸಮಸ್ಯೆಯನ್ನು ಬಗೆಹರಿಸಿದ್ದೇವೆ. ಅದರಂತೆ ಇಲ್ಲಿಯೂ ಸಂಘರ್ಷದ ಹಾದಿ ಬೇಡ. ಧರ್ಮಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಧರ್ಮ ದಂಡಯಾತ್ರೆ ನಡೆಸುವ ವಿಚಾರವನ್ನು ಕೇದಾರ ಶ್ರೀಗಳು ವ್ಯಕ್ತಪಡಿಸಿದ್ದು, ಅದಕ್ಕೆ ಸಮ್ಮತಿ ಸೂಚಿಸುತ್ತೇನೆ. ಈ ಭಾಗದ ಎಲ್ಲ ಮಠಾಧೀಶರು ಈ ಯಾತ್ರೆಯ ನೇತೃತ್ವ ವಹಿಸಿಕೊಳ್ಳಬೇಕು' ಎಂದು ತಿಳಿಸಿದರು.

ಕೇದಾರ ಪೀಠದ ಭೀಮಾಶಂಕರಲಿಂಗ ಶಿವಾಚಾರ್ಯರು ಮಾತನಾಡಿ, 'ಡಿಸೆಂಬರ್‌ನಲ್ಲಿ ಈ ಸ್ಥಳದಿಂದ ಧರ್ಮ ದಂಡಯಾತ್ರೆ ಆರಂಭಿಸಲಾಗುವುದು. ಧರ್ಮದ ಉಳಿವಿಗೆ ಇಂಥ ಯಾತ್ರೆ ಅಗತ್ಯವಾಗಿದೆ' ಎಂದು ತಿಳಿಸಿದರು.

ತಡೋಳಾ ರಾಜೇಶ್ವರ ಶಿವಾಚಾರ್ಯರು ಮಾತನಾಡಿ,

ಅನುಭವ ಮಂಟಪದ ಪಕ್ಕದಲ್ಲಿನ ಬಿಲ್ವಪತ್ರೆ ವನದಲ್ಲಿ ಅನುಷ್ಠಾನ ಮಂಟಪ ನಿರ್ಮಿಸುವ ಯೋಜನೆಯಿದೆ. ಇದಕ್ಕೆ ಆಡಳಿತದವರು ಸಹಕಾರ ನೀಡಬೇಕು
ರಾಜೇಶ್ವರ ಶಿವಾಚಾರ್ಯರು, ತಡೋಳಾ

ಮುಖ್ಯಾಂಶಗಳು

- ಡಿಸೆಂಬರ್‌ನಲ್ಲಿ ಧರ್ಮ ದಂಡಯಾತ್ರೆ
- ಬಸವಂತಪ್ಪ ಲವಾರೆಗೆ ಪ್ರಶಸ್ತಿ ಪ್ರದಾನ
- ವೀರಶೆಟ್ಟಿ ಪಾಟೀಲರ ಕೃತಿ ಬಿಡುಗಡೆ

ಹಳೆಯ ಪರುಷಕಟ್ಟೆ ಇದ್ದಲ್ಲಿಯೇ ಅಭಿವೃದ್ಧಿ ಕಾರ್ಯ ಕೈಗೊಂಡಂತೆ, 12ನೇ ಶತಮಾನದ ಹಳೆಯ ಅನುಭವ ಮಂಟಪ ಹುಡುಕಿ ಅದರ ಜೀರ್ಣೋದ್ಧಾರ ನಡೆಸುವ ಅಗತ್ಯವಿದೆ' ಎಂದರು.

ಹಿರೇನಾಗಾಂವ ಜಯಶಾಂತಲಿಂಗ ಸ್ವಾಮೀಜಿ ಮಾತನಾಡಿ, 'ಗವಿಮಠಕ್ಕೆ ಯಾವುದೇ ರೀತಿಯಲ್ಲಿ ಧಕ್ಕೆ ಆಗಬಾರದು' ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಮಾತನಾಡಿ, 'ಸಮಾನತೆ, ಸಹೋದರತ್ವದ ಭಾವನೆ ಎಲ್ಲರಲ್ಲೂ ಬರಬೇಕು. ಅನ್ಯರ ಬಗ್ಗೆ ಅಸಹಿಷ್ಣುತೆ ಸಲ್ಲದು. ಪಕ್ಕದ ಮನೆಯ ಬೆಂಕಿ ನಮ್ಮ ಮನೆಗೂ ಆವರಿಸಿತು ಎಂಬುದನ್ನು ಅರಿತು ನಡೆಯಬೇಕು' ಎಂದರು.

ಶಾಸಕ ಶರಣು ಸಲಗರ, ಉಪನ್ಯಾಸಕ ರೇವಣಸಿದ್ದ ದೊರೆಗಳ, ನವಲಿಂಗ ಕುಮಾರ ಪಾಟೀಲ ಮಾತನಾಡಿದರು.

ಶ್ರೀಮದ್ವೀರಶೈವ ಸದ್ಯೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಅವರಿಗೆ 'ಅಭಿನವ ಘನಲಿಂಗ ಶ್ರೀ ಪ್ರಶಸ್ತಿ' ಪ್ರದಾನ ಮಾಡಲಾಯಿತು. ವೀರಶೆಟ್ಟಿ ಪಾಟೀಲ ಬರೆದ 'ಕಲ್ಯಾಣದ ಶ್ರೀಗುರು ಘನಲಿಂಗ ರುದ್ರಮುನಿ ಗವಿಮಠ' ಗ್ರಂಥ ಹಾಗೂ ಧ್ವನಿಸುರುಳಿ ಬಿಡುಗಡೆಗೊಳಿಸಲಾಯಿತು. ಮಠದ ವೆಬ್ ಸೈಟ್ ಗೆ ಚಾಲನೆ ನೀಡಲಾಯಿತು.

ಬಬಲಾದ ಗುರುಪಾದಲಿಂಗ ಸ್ವಾಮೀಜಿ, ರಾಜೇಶ್ವರ ಘನಲಿಂಗ ರುದ್ರಮುನಿ ಶಿವಾಚಾರ್ಯರು, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ರಾಜಕುಮಾರ ಶಿರಗಾಪುರ, ನಗರಸಭೆ ಅಧ್ಯಕ್ಷೆ ಶಹಾಜಹಾನಾ ತನ್ವೀರ್, ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಎಪಿಸಿ ಸದಸ್ಯ ಆನಂದ ದೇವಪ್ಪ, ಅರ್ಜುನ ಕನಕ, ಶಿವರಾಜ ನರಶೆಟ್ಟಿ, ಪ್ರದೀಪ ವಾತಡೆ, ಸುಧೀರ ಕಾಡಾದಿ, ಯಶೋಧಾ ರಾಠೋಡ, ತಹಶೀಲ್ದಾರ್ ಸಾವಿತ್ರಿ ಸಲಗರ ಪಾಲ್ಗೊಂಡಿದ್ದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಶನಿವಾರ ನಡೆದ ರೇಣುಕಾಚಾರ್ಯರ ಜಯಂತಿಯಲ್ಲಿ ಶ್ರೀಗಳು ಹಾಗೂ ಗಣ್ಯರು ಬಸವಂತಪ್ಪ ಲವಾರೆ ಅವರಿಗೆ 'ಅಭಿನವ ಘನಲಿಂಗಶ್ರೀ ಪ್ರಶಸ್ತಿ' ನೀಡಿ ಗೌರವಿಸಿದರು



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಶನಿವಾರ ನಡೆದ ರೇಣುಕಾಚಾರ್ಯರ ಜಯಂತಿಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರು

Scanned with OKEN Scanner

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವದಲ್ಲಿ ರಂಭಾಪುರಿ ಜಗದ್ಗುರು ಅಭಿಮತ....

'ವ್ಯಕ್ತಿತ್ವ ವಿಕಾಸಕ್ಕೆ ಸಂಸ್ಕಾರ, ಸಂಸ್ಕೃತಿಗಳ ಅವಶ್ಯಕತೆಯಿದೆ'

ಸಂ.ಕ. ಸಮಾಚಾರ ಬಸವಕಲ್ಯಾಣ ಆಧುನಿಕತೆಯ ಬದುಕಿನಲ್ಲಿ ಮನುಷ್ಯನಿಗೆ ಭೌತಿಕವಾಗಿ ಸಂಪತ್ತು, ಅಧಿಕಾರ, ಅಂತಸ್ತು ಎಲ್ಲವು ಇದ್ದರು ಸಹ ಜೀವನದಲ್ಲಿ ಶಾಂತಿ ನೆಮ್ಮದಿ ಇಲ್ಲದಂತಾಗಿದೆ. ವ್ಯಕ್ತಿತ್ವ ವಿಕಾಸಕ್ಕೆ ಸಂಸ್ಕಾರ, ಸಂಸ್ಕೃತಿಗಳ ಅವಶ್ಯಕತೆಯಿದೆ ಎಂದು ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಅಭಿಪ್ರಾಯಪಟ್ಟರು.

ತ್ರಿಪುರಾಂತ ಸಂಸ್ಥಾನ ಗವಿಮಠದಲ್ಲಿ ಶನಿವಾರ ಜರುಗಿದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮಸಭೆಯಲ್ಲಿ ಆಶೀರ್ವಚನ ನೀಡಿದ ಅವರು, ಬಸವಕಲ್ಯಾಣ ಕ್ಷೇತ್ರ ಪ್ರಗತಿ ಆಗಬೇಕು ಎಂದು ಸರ್ಕಾರ ಬಸವಕಲ್ಯಾಣ ಅಭಿವೃದ್ಧಿಮಂಡಳಿ ರಚನೆ ಮಾಡಿದೆ. ಈ ಕ್ಷೇತ್ರ ವ್ಯಾಪಕವಾಗಿ ಬೆಳೆಯಲಿ, ತಪೋ ತಾಣವಾಗಿರುವ ಗವಿಮಠದ ಪುರನರುತ್ಥಾನಕ್ಕೆ ಗಮನ ಹರಿಸಬೇಕು ಎಂದರು.

ಕೇದಾರ್‌ನ ಶ್ರೀ ಭೀಮಾಶಂಕರ ಜಗದ್ಗುರುಗಳು ಆಶೀರ್ವಚನ ನೀಡಿ ಧರ್ಮದ ಪ್ರಸಾರ-ಪ್ರಸಾರಕ್ಕಾಗಿ ರಂಭಾಪುರಿ ಜಗದ್ಗುರುಗಳು ಹಾಗೂ ಕೇದಾರ ಜಗದ್ಗುರುಗಳು ಧರ್ಮ ದಂಡ ಯಾತ್ರೆಗೆ ವೇದಿಕೆ ಸಿದ್ಧಪಡಿಸಲು ಚಿಂತನೆ ನಡೆದಿದೆ. ತಪೋ ತಾಣವಾಗಿರುವ ಗವಿ ಮಠದಿಂದಲೇ ಧರ್ಮ ಯಾತ್ರೆ ಆರಂಭಿಸುವ ಕುರಿತು ಜಗದ್ಗುರುಗಳು ಘೋಷಣೆ ಮಾಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಮಾತನಾಡಿ ಸಮಾಜ ಸಂಘಟಿಸುವ ಐಕ್ಯತೆ ದಾರಿಯಲ್ಲಿ ನಾವೆಲ್ಲರೂ ಸಾಗಬೇಕಿದೆ. ವೀರಶೈವ ಲಿಂಗಾಯತ ಧರ್ಮಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆ ಇದೆ ಎಂದರು.



ಬಸವಕಲ್ಯಾಣದ ಗವಿಮಠದಲ್ಲಿ ನಡೆದ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಸಭೆಯಲ್ಲಿ ಶ್ರೀ ಮದ್ವೀರಶೈವ ಸದ್ಭೋಧನಾ ಸಂಸ್ಥೆಯ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ನೀಡಿ ಸತ್ಕರಿಸಲಾಯಿತು.

ಶಾಸಕ ಶರಣು ಸಲಗರ ಮಾತನಾಡಿ ಮಾನವ ಧರ್ಮಕ್ಕೆ ಜಯವಾಗಲಿ ಎಂಬ ಸಂದೇಶ ಸಾರುವ ಮೂಲಕ ಮಾನವಕುಲದ ಹಿತ ಚಿಂತನೆ ತೋರಿದ ರೇಣುಕಾಚಾರ್ಯ ಜಯಂತಿ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿದೆ ಎಂದರು. ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀ ಜಯಶಾಂತಲಿಂಗ ಸ್ವಾಮೀಜಿ, ರೇವಣಸಿದ್ಧಪ್ಪ ದೊರೆಗೋಳ್ ಪುಸ್ತಕ ಪರಿಚಯ ಮಾಡಿಕೊಟ್ಟರು. ಬಬಲಾದ್‌ನ ಗುರುಪಾದಲಿಂಗ ಸ್ವಾಮೀಜಿ, ಅಫಜಲಪೂರ್‌ನ ವಿಶ್ವಾರಾಧ್ಯ ಮುಳೆಂದ್ರ ಶಿವಾಚಾರ್ಯರು, ಸಿದ್ದೇಶ್ವರ ಶಿವಾಚಾರ್ಯರು, ಘನಲಿಂಗ ರುದ್ರಮುನಿ ಶಿವಾಚಾರ್ಯರು, ನಗರಸಭೆ ಅಧ್ಯಕ್ಷೆ ಶಾಹಾಜಾನ ತನ್ವೀರ, ಮೀರ ಅಜರಲಿ ನವರಂಗ, ಶರಣಪ್ಪಾ ಬಿರಾದಾರ, ರಾಜಕುಮಾರ ಬಿರಾದಾರ ಸಿರಗಾಪೂರ, ನಿರ್ಮಲಾ ಮಾನೆಗೋಪಾಳೆ, ಲತಾ ಹಾರಕೂಡೆ, ನೀಲಕಂಠ ರಾಠೋಡ, ಯಶೋಧಾ ರಾಠೋಡ, ಸುಧೀರ ಕಾಡಾದಿ, ಆನಂದ ದೇವಪ್ಪಾ, ಭಸವರಾಜ ಸ್ವಾಮಿ, ಶಶಿಕಾಂತ ದುರ್ಗೆ, ಪ್ರದೀಪ ವಾತಾಡೆ, ಅರ್ಜುನ ಕನಕ, ಶಿವರಾಜ ನರಶೆಟ್ಟೆ, ಲಕ್ಷ್ಮೀಬಾಯಿ ಭೀಮ್ಮಾ ಘುಳೆ, ದೀಪಕ ಮಾಲಗಾರ, ಸಿದ್ರಾಮ ಗುದಗೆ ಇದ್ದರು. ಹಾಸ್ಯ ಕಲಾವಿದ ನವಲಿಂಗ ಪಾಟೀಲ್ ನಿರೂಪಿಸಿದರು.

ಪ್ರಶಸ್ತಿ ಪ್ರದಾನ

ಶ್ರೀ ಮದ್ವೀರಶೈವ ಸದ್ಭೋಧನಾ ಸಂಸ್ಥೆಯ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಅವರಿಗೆ ಗವಿಮಠದಿಂದ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಲೇಖಕ ವೀರಶೆಟ್ಟಿ ಪಾಟೀಲ್ ಬರೆದ ಕಲ್ಯಾಣದ ಶ್ರೀ ಗುರು ಘನಲಿಂಗ ರುದ್ರಮುನಿ ಗವಿಮಠ ಮಸ್ತಕ ಮತ್ತು ಬಸವಕಲ್ಯಾಣ ಗವಿಮಠದ ವೆಬ್‌ಸೈಟ್ ಇದೆ ವೇಳೆ ಬಿಡುಗಡೆ ಮಾಡಲಾಯಿತು.

ಸಂಯುಕ್ತ ಕರ್ನಾಟಕ 24 ಏಪ್ರಿಲ್ 2022 ಭಾನುವಾರ

Scanned with OKEN Scanner

ಗವಿಮಠದಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ

UDAYAKALA
Thursday, March 17, 2022

ಉದಯಕಾಲ ನ್ಯೂಸ್

ಬಸವಕಲ್ಯಾಣ: ಬರುವ ಏಪ್ರಿಲ್ 23 ರಂದು ಶ್ರೀಮದ್ ರಂಭಾಪುರಿ ಪೀಠದ ಜಗದ್ಗುರು ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾ ಸ್ವಾಮೀಜಿಯವರ ದಿವ್ಯಸಾನಿಧ್ಯದಲ್ಲಿ ಹಾಗೂ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ನಗರದಲ್ಲಿ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ಭಕ್ತರು ನಿರ್ಧರಿಸಿದ್ದಾರೆ.



ಹೀಗಾಗಿ ಗವಿಮಠದಲ್ಲಿ ಬುಧವಾರ ಗವಿ ಮಠದ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅವರು ಧ್ವಜಾರೋಹಣ ಮಾಡುವು ಮೂಲಕ ಸಾಂಕೇತಿಕವಾಗಿ ಜಗದ್ಗುರು ಶ್ರೀ ರೇಣುಕಾಚಾರ್ಯ ಜಯಂತಿ ಯುಗಮಾ ನೋತ್ಸವವನ್ನು ಆಚರಿಸಿದರು. ಅದಕ್ಕೂ ಮುಂಚೆ ಜಗದ್ಗುರು ಶ್ರೀ ರೇಣುಕಾಚಾರ್ಯ ಮೂರ್ತಿಗೆ ರುದ್ರಾಭಿಷೇಕ ನಡೆಸಿದರು.

ಈ ಸಂದರ್ಭದಲ್ಲಿ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆಯ ತಾಲೂಕಾ ಅಧ್ಯಕ್ಷ ಬಸವಂತಪ್ಪ ಲವಾರೆ, ಪ್ರಾಚಾರ್ಯ ಎ. ಜೆ. ಪಾಟೀಲ, ಮಲ್ಲಿಕಾರ್ಜುನ ನಂದಿ, ಬಾಬುರಾವ ಚಳಕಾಪುರೆ, ಮರೆಪ್ಪ ಪೊಲೀಸ್ ಪಾಟೀಲ, ನಟರಾಜ ಬಿರಾದಾರ, ಕಾರ್ತಿಕ ಬಿರಾದಾರ, ರಮೇಶ ಸ್ವಾಮಿ, ಬಾಬುರಾವ ಉಳ್ಳೆ, ಶಿವಕುಮಾರ ಮಠ, ಮಲ್ಲಿಕಾರ್ಜುನ ಕಾಡಾದಿ, ನಾಗಯ್ಯ ಸ್ವಾಮಿ, ಸದಾನಂದ ಕಣಜೆ, ಶಾಂತವೀರ ಸ್ವಾಮಿ, ರಾಕೇಶ ಪುರವಂತ, ಬೂದಯ್ಯ ಸ್ವಾಮಿ, ಶರಣಯ್ಯ ಸ್ವಾಮಿ, ಪ್ರೊ. ಶಾಂತಲಿಂಗ ಮಠಪತಿ, ವೈಜೀನಾಥ ಸ್ವಾಮಿ, ಪ್ರೊ. ರುದ್ರೇಶ್ವರ ಗೋರ್ಟಾ, ವೀರಶೈವ ಲಿಂಗಾಯತ ಸಂಘಟನಾ ವೇದಿಕೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ಪ್ರದೀಪ ಭೋಜನ, ಸಂಗಮೇಶ ಹುಣಚಗೆರೆ, ಸೋಮು ರಾಜೋಳೆ, ಮಲ್ಲಿಕಾರ್ಜುನ ಬಿರಾದಾರ, ಶಿವಕುಮಾರ ಮುನ್ನೋಳೆ, ಶೀಲಾ ಮಡಿವಾಳಪ್ಪಾ ಕಲ್ಯಾಣಿ, ಶೋಭಾ ವೀರಣ್ಣಾ ಬೋಕ್ಕೆ ಮೊದಲಾದವರು ಪಾಲ್ಗೊಂಡಿದ್ದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಗವಿ ಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಆಚರಿಸಲಾಯಿತು. ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ನಟರಾಜ ಬಿರಾದಾರ, ಶಂಕರ ಹುಲಸೂರೆ, ಓಂಕಾರ ಪಾಟೀಲ್, ಮಲ್ಲಿಕಾರ್ಜುನ ಆಲಗೂಡ, ಸಿದ್ದು ಸ್ವಾಮಿ, ವೈಜನಾಥ ಲಾಡವಂತೆ, ಮಹೇಶ ಪಾಟೀಲ್ ಇತರರಿದ್ದರು.



ಬಸವಕಲ್ಯಾಣದ ಗವಿ ಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಆಚರಿಸಲಾಯಿತು. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು, ನಟರಾಜ ಬಿರಾದಾರ, ಶಂಕರ ಹುಲಸೂರೆ, ಓಂಕಾರ ಪಾಟೀಲ, ಮಲ್ಲಿಕಾರ್ಜುನ ಆಲಗೂಡ, ಸಿದ್ದುಸ್ವಾಮಿ, ವೈಜನಾಥ ಲಾಡವಂತೆ, ಮಹೇಶ ಪಾಟೀಲ್ ಇತರರಿದ್ದರು.

ಕಲಬುರಗಿ, ಮಂಗಳವಾರ,7 ಮಾರ್ಚ್ 2023 ನಮ್ಮ ಬೀದರ್

Scanned with OKEN Scanner

ಉದಯವಾಣಿ ಕಲ್ಯಾಣ
ದಿನಾಂಕ, ಏಪ್ರಿಲ್ 24, 2022

ಗವಿಮಠ ಅಭಿವೃದ್ಧಿ ಕಾರ್ಯ ನಡೆಯಲಿ

| ಶ್ರೀ ಮಠಕ್ಕಿದೆ ಪ್ರಾಚೀನ-ಗುರು ಪರಂಪರೆ | ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ವಿಶೇಷ ಕಾಳಜಿ ವಹಿಸಲಿ

ಬಸವಕಲ್ಯಾಣ: ಲೋಕಕ್ಕೆ ಬೆಳಕನ್ನು ನೀಡಿದ ತಪೋಸ್ಥಾನವಾದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಂಸ್ಥಾನ ಮಠವನ್ನು ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ವಿಶೇಷ ಗಮನ ಹರಿಸುವ ಮೂಲಕ ಪ್ರಾಚೀನ ಮತ್ತು ಗುರು ಪರಂಪರೆಯನ್ನು ಹಿನ್ನೆಲೆ.ಹೊಂದಿದ ಈ ಮಠವನ್ನು ಪುನಶ್ಚೇತನ ಗೊಳಿಸಬೇಕು ಎಂದು ಬಾಳೆಹೊನ್ನೂರು ರಂಭಾಪುರಿ ವೀರ ಸಿಂಹಾಸನಾಧೀಶ್ವರ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯರು ಹೇಳಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಶನಿವಾರ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಹಾಗೂ ಯುವಮಾನೋತ್ಸವ ಮತ್ತು ಧರ್ಮ ಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರ ಸಾಕಷ್ಟು ಸಂಪನ್ಮೂಲ ಕೊಡುತ್ತಿರುವುದು ಸಂತೋಷ ಸಂಗತಿ. ಆದರಲ್ಲಿ ಪ್ರಾಚೀನ ಕಾಲದ ಈ ಮಠದ ಕಡೆಯು ಗಮನ ಹರಿಸಿ, ಯಥಾಸ್ಥಿತಿ ನಡೆಸಿಕೊಂಡು ಹೋಗಲು ಶಾಸಕರು ಹಾಗೂ ಭಕ್ತಾದಿಗಳು ಮಾಡಬೇಕು ಎಂದರು.

ಕಳೆದ 30 ವರ್ಷಗಳ ಹಿಂದೆ ಗವಿಮಠ ಒಂದು ಬಿಟ್ಟರೆ ಯಾವುದೇ ಅಭಿವೃದ್ಧಿ ನಡೆದಿಲ್ಲ ಲೋಕಕ್ಕೆ ಬೆಳಕನ್ನು ನೀಡಿದ ಈ ಸ್ಥಾವನ್ನು ನೋಡಿ ಜಗದ್ಗುರು ಪೀಠಗಳಿಗೆ ಬಹಳ ನೋವಾಗಿತ್ತು ಎಂದು ಹೇಳಿದ್ದೇವೆ. ಆದರೆ ಅಂದು ನೋಡಿದ ಮಠಕ್ಕೂ ಇಂದು ನೋಡಿದ ಮಠಕ್ಕೂ ನೋಡಿದ್ದರೆ ಬಹಳ ಸಂತೋಷವಾಗುತ್ತಿದೆ. ಅತ್ಯಂತ ಚಿಕ್ಕವಯಸ್ಸಿನಲ್ಲಿ ಗವಿಮಠ ಶ್ರೀಗಳಿಗೆ ಧರ್ಮ ದೀಕ್ಷೆ ಕೊಟ್ಟಿರುವುದು ರಂಭಾಪುರಿ ಶ್ರೀಗಳು ಹಾಗೂ ಕೇದಾರನಾಥ ಶ್ರೀಗಳು ಎಂಬುವುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಆದರೆ ಅವರ ಮಾಡಿರುವ ಸಾಧನೆ ವರ್ಣಿಸಲು ಸಾಧ್ಯವಿಲ್ಲ ಎಂದು ಬಣ್ಣಿಸಿದರು.

12ನೇ ಶತಮಾನದಲ್ಲಿ ಭಕ್ತಿ ಭಂಡಾರಿ



ಬಸವಕಲ್ಯಾಣ: ತ್ರಿಪುರಾಂತ ಗವಿಮಠದಲ್ಲಿ ಶನಿವಾರ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಹಾಗೂ ಯುವಮಾನೋತ್ಸವ ಮತ್ತು ಧರ್ಮಸಭೆ ಕಾರ್ಯಕ್ರಮ ನಡೆಯಿತು.

ಬಸವಣ್ಣನವರು ಹಮ್ಮಿಕೊಂಡ ಜನಾಂದೋಲನ ಧರ್ಮಜಾಗೃತಿ ಸಮಾರಂಭದಲ್ಲಿ ಘನಲಿಂಗ ರುದ್ರಮುನಿ ಶಿವಾಚಾರ್ಯರು ಶಿವಯೋಗಿಗಳು ಶರಣ ಸಂಕೋಲನಕ್ಕೆ ಆದರ್ಶಗಳು ಎಂದಿಗೂ ಮರೆಯುವಂತಿಲ್ಲ, ಎಲ್ಲ ಶರಣರಿಗೂ ವೀರಶೈವ ಧರ್ಮದ ಪದ್ಧತಿ ಪ್ರಕಾರ ಶಿವ ದೀಕ್ಷೆ ಮಾಡಿ, ಸಾಧನೆ ಅಡಿಪಾಯ ಹಾಕಿಕೊಟ್ಟ ಕೀರ್ತಿ ಈ ಕ್ಷೇತ್ರಕ್ಕೆ ಸಲ್ಲುತ್ತದೆ. ನಂತರವೇ ಅನುಭವ ಮಂಟಪಕ್ಕೆ ಶರಣರಿಗೆ ಬರಲು ಅವಕಾಶ ಕಲ್ಪಿಸಿಕೊಟ್ಟಿರುವ ಜನರನ್ನು ಮರೆಯುವಂತಿಲ್ಲ ಎಂದು ಹೇಳಿದರು.

ಸ್ವಾಗತ ಸಮಿತಿ ಅಧ್ಯಕ್ಷ ಹಾಗೂ ಶಾಸಕ ಶರಣು ಸಲಗರ್ ಮಾತನಾಡಿ, ಜಗದ್ಗುರು ರೇಣುಕಾಚಾರ್ಯರು ಮಾನವ ಧರ್ಮಕ್ಕೆ ಜಯವಾಗಲಿ ಎಂಬ ವಾಕ್ಯವನ್ನು ನೀಡಿದ್ದವರು. ಅಂತವರ ಕಾರ್ಯಕ್ರಮನವನ್ನು ನಡೆಯುತ್ತಿರುವುದು ನಮ್ಮ ಪುಣ್ಯವಾಗಿದೆ ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ್ ಖಂಡ್ರೆ ಮಾತನಾಡಿ, ಇಂದು ವಿಶಿಷ್ಟ ದಿನವಾಗಿದೆ. ಕೊರೊನಾದಿಂದಾಗಿ ಕಳೆದ ಎರಡು ವರ್ಷಗಳಿಂದ ಯಾವುದೇ ಕಾರ್ಯಕ್ರಮ ನಡೆದಿಲ್ಲ ಸಂಪೂರ್ಣವಾಗಿ ತೊಡಬೇಕಾದರೆ ಶ್ರೀಗಳ ಆಶೀರ್ವಾದ ತುಂಬಾ ಅವಶ್ಯಕವಾಗಿದೆ ಎಂದರು.

ಉತ್ತರಾಖಂಡದ ಕೇದಾರ ಪೀಠದ ಶ್ರೀ ಜಗದ್ಗುರು ರಾವಲ್ ಪದವಿ ವಿಭೂಷಿತ ಭೀಮಾ ಶಂಕರಲಿಂಗ ಶಿವಾಚಾರ್ಯರು ಮಾತನಾಡಿದರು. ಮೇಹಕರ-ತಡೋಳಾ ಶ್ರೀ ರಾಜೇಶ್ವರ ಶಿವಾಚಾರ್ಯರು, ಗವಿಮಠದ ಶ್ರೀ ಡಾ। ಘನಲಿಂಗ ರುದ್ರಮುನಿ ಶಿವಾಚಾರ್ಯರು, ಹಿರೇನಾಗಾಂವ್ ವೀರಕ್ತ ಮಠದ ಶ್ರೀ ಜಯಶಾಂತಲಿಂಗ ಸ್ವಾಮಿಗಳು ಆಶೀರ್ವಚನ ನೀಡಿದರು.

ಬಿಡಿಎ ಅಧ್ಯಕ್ಷ ರಾಜಕುಮಾರ ಶಿರಗಾಪೂರ, ನಗರಸಭೆ ಅಧ್ಯಕ್ಷೆ ಶಹಾಜಾನ್ ತನ್ವೀರ್, ಶ್ರೀಮದ್ವಿರಶೈವ ಸದ್ಭೋಧನ ಸಮಸ್ಥೆ ತಾಲೂಕು ಘಟಕ ಅಧ್ಯಕ್ಷ ಬಸವಂತಪ್ಪ ಲವಾರೆ, ಅಜರ ಅಲಿ ನವರಂಗ, ಜಿಪಂ ಮಾಜಿ ಅಧ್ಯಕ್ಷೆ ನಿರ್ಮಲಾ ಮಾನೆಗೋಪಾಳೆ, ಲತಾ ಹಾರಕೂಡೆ, ತಾಪಂ ಮಾಜಿ ಅಧ್ಯಕ್ಷೆ ಯಶೋಧಾ ನೀಲಕಂಠ ರಾಠೋಡ, ತಹಶೀಲ್ದಾರ್ ಸಾವಿತ್ರಿ ಶರಣು ಸಲಗರ್, ಸುಧೀರ ಕಾಡಾದೆ, ದೀಪಕ ಮಾಲಗಾರ, ಆನಂದ, ದೇವಪ್ಪ ಪ್ರದೀಪ ವಾತಡೆ, ಅರ್ಜುನ ಕನಕ, ಶಿವರಾಜ ನರಶೆಟ್ಟಿ ಸಿದ್ರಾಮ ಗುದಗೆ, ಪ್ರೊ। ರುದ್ರೇಶ್ವರ ಗೋರ್ಟಾ, ಕಾಶಿನಾಥ ಸ್ವಾಮಿ ಸೇರಿದಂತೆ ಮತ್ತಿತರರು ಇದ್ದರು.

Scanned with OKEN Scanner

ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಹೇಳಿಕೆ

ಘನಲಿಂಗ ರುದ್ರಮುನಿ ಶಿವಾಚಾರ್ಯರ ಸೇವೆ ಶ್ಲಾಘನೀಯ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಚಿಕ್ಕ ವಯಸ್ಸಿನಲ್ಲಿಯೇ ಮಠದ ಜವಾಬ್ದಾರಿ ವಹಿಸಿಕೊಂಡಿರುವ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಧಾರ್ಮಿಕ ಚಟುವಟಿಕೆಯೊಂದಿಗೆ ಸಮಾಜೋದ್ಧಾರ ಕಾರ್ಯವನ್ನೂ ಕೈಗೊಳ್ಳುತ್ತಿದ್ದಾರೆ' ಎಂದು ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಶ್ಲಾಘಿಸಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಬುಧವಾರ ನಡೆದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರದ ವರ್ಧಂತಿ ಮಹೋತ್ಸವದಲ್ಲಿ ಅವರು ಮಾತನಾಡಿದರು.

ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಗುಂಡುರೆಡ್ಡಿ ಕಮಲಾಪುರ ಮಾತನಾಡಿ,'ಸಮಾಜದಲ್ಲಿ ಸುಖ, ಶಾಂತಿ ನೆಲೆಸುವಲ್ಲಿ ಮಠಾಧೀಶರ ಪಾತ್ರ ಬಹಳಷ್ಟಿದೆ. ಅಭಿನವಶ್ರೀಗಳು ಮುಶ್ಟಟ ದಿಡಿಸುವ ಅಭಿಯಾನವೂ ಹಮ್ಮಿಕೊಂಡಿದ್ದರು' ಎಂದು ಅವರು ಹೇಳಿದರು.

ಚಿಂಚನಸೂರು ಸಿದ್ಧಮಲ್ಲ ಶಿವಾಚಾರ್ಯರು, ಮುಖಂಡರಾದ ಮಾಲಾ ನಾರಾಯಣರಾವ್, ಬಾಬು ಹೊನ್ನಾನಾಯಕ, ಲತಾ ಹಾರಕೂಡೆ, ಪ್ರದೀಪ ವಾತಡೆ, ಅರ್ಜುನ ಕನಕ, ಮನೋಹರ ಮೈಸೆ, ದೀಪಕ ಮಾಲಗಾರ, ಶಹಾಜಹಾನಾ ತಶ್ವೀರ್, ಸುಧೀರ್ ಕಾಡಾದಿ ಹಾಗೂ ಭಕ್ತ ಕುಂಬಾರ ಮಾತನಾಡಿದರು.

ಪ್ರಮುಖರಾದ ಆನಂದ ದೇವಪ್ಪ, ರಾಜಕುಮಾರ ಶಿರಗಾಪುರ, ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ಆಲಗೂಡೆ, ರುದ್ರೇಶ್ವರ ಗೋರಟಾ, ಅಮೃತಸಿಂಗ್ ಧಾಮಿ, ಮಹಾಂತಯ್ಯ ಮಠಪತಿ, ಮೇಘರಾಜ ನಾಗರಾಳೆ ಇದ್ದರು.

ಭಕ್ತರು ಸ್ವಾಮೀಜಿ ಅವರನ್ನು ಸನ್ಮಾನಿಸಿದರು.



ಬಸವಕಲ್ಯಾಣದಲ್ಲಿ ಬುಧವಾರ ನಡೆದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರದ ವರ್ಧಂತಿ ಮಹೋತ್ಸವದಲ್ಲಿ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಗುಂಡುರೆಡ್ಡಿ, ಚಿಂಚನಸೂರು ಸಿದ್ಧಮಲ್ಲ ಶಿವಾಚಾರ್ಯರು ಪಾಲ್ಗೊಂಡಿದ್ದರು

ಪ್ರಜಾವಾಣಿ ಗುರುವಾರ • ಸೆಪ್ಟೆಂಬರ್ 29, 2022

ಶ್ರೀಗಳ ಸೇವಾ ಕಾರ್ಯಕ್ಕೆ ಬೆನ್ನೆಲುಬಾಗಿ ನಿಲ್ಲೋಣ: ಖೂಬಾ

ಬಸವಕಲ್ಯಾಣ: ಪರಿಸರ ಪ್ರಜ್ಞೆ, ದುಶ್ಚಟಗಳನ್ನು ಜೋಳಿಗೆಗೆ ಹಾಕಿಕೊಳ್ಳುವ ಮೂಲಕ ಸಮಾಜವು ಸರಿದಾರಿಗೆ ತರಲು ಶ್ರಮಿಸುತ್ತಿರುವ ಶ್ರೀಗಳ ಕಾರ್ಯ ಉತ್ತಮವಾಗಿದೆ. ನಾವೆಲ್ಲರೂ ಸೇರಿ ಅವರ ಬೆನ್ನೆಲುಬಾಗಿ ನಿಲ್ಲೋಣ ಎಂದು ಮಾಜಿ ಶಾಸಕ ಮಲ್ಲಿಕಾರ್ಜುನ ಎಸ್ ಖೂಬಾ ಹೇಳಿದರು.

ಇಲ್ಲಿಯ ಗವಿ ಮಠದಲ್ಲಿ ಬುಧವಾರ ನಡೆದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರ ಜನ್ಮ ದಿನೋತ್ಸವ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಕ್ತಿ ಭಾವದ ಮೂಲಕ ಭಕ್ತರನ್ನು ಸರಿದಾರಿಗೆ ತರುವ ಜೊತೆಗೆ ಗವಿ ಮಠವು ಅಭಿವೃದ್ಧಿ ಪಡಿಸುತ್ತಿದ್ದಾರೆ ಎಂದರು.

ಸಿದ್ಧಮಲ್ಲ ಶಿವಾಚಾರ್ಯರು ಮಾತನಾಡಿ, ಇಲ್ಲಿಯ ಗವಿ ಮಠಕ್ಕೆ ಆಸ್ತಿ ಭಕ್ತರೇ ಹೊರತು ಯಾರೂ ಇಲ್ಲ ಭಕ್ತರು ತನು, ಮನ, ಧನದಿಂದ ಶ್ರೀಗಳ ಸಂಕಷ್ಟದಲ್ಲಿ ಭಾಗಿಯಾಗಿ ಮಠದ ಅಭಿವೃದ್ಧಿಗೆ ಮುಂದಾಗಿರುವದು ಸ್ವಾಗತಾರ್ಹ ಎಂದರು.



ಬಸವಕಲ್ಯಾಣ: ಇಲ್ಲಿಯ ಗವಿ ಮಠದಲ್ಲಿ ಬುಧವಾರ ನಡೆದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನೋತ್ಸವ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಶ್ರೀಗಳನ್ನು ಸನ್ಮಾನಿಸಲಾಯಿತು.

ಕಾಂಗ್ರೆಸ್ ಮುಖಂಡ ಮಾಲಾ ಬಿ.ನಾರಾಯಣರಾವ ಮಾತನಾಡಿದರು. ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಗವಿ ಮಠ ಟ್ರಸ್ಟನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಪ್ರೊ। ರುದ್ರೇಶ ಗೋರ್ಟಾ (ಬಿ) ಆಶಯ ನುಡಿಗಳಾದರು.

ಜಿಪಂ ಮಾಜಿ ಸದಸ್ಯ ಗುಂಡುರೆಡ್ಡಿ ಜಿಪಂ ಮಾಜಿ ಸದಸ್ಯರಾದ ಲತಾ ಹಾರಕೂಡೆ, ಸುಧೀರ ಕಾಡಾದಿ, ಅರ್ಜುನ ಕನಕ, ದೀಪಕ ಮಾಲಗಾರ, ಅಮೃತಸಿಂಗ್ ಧಾಮಿ ಮಾತನಾಡಿದರು. ನಗರಸಭೆ ಅಧ್ಯಕ್ಷೆ ಶಾಹಾಜಾನ್ ತನ್ವೀರ್, ಬಿಡಿಎ ಅಧ್ಯಕ್ಷ ರಾಜಕುಮಾರ ಸಿರಗಾಪುರ, ಪ್ರದೀಪ ಬಿಜೆಪಿ ಯುವ ಮುಖಂಡ ಪ್ರದೀಪ ವಾತಾಡೆ, ಬಾಬು ಹೊನ್ನಾನಾಯಕ, ಅಶೋಕ ವಕಾರೆ, ಆನಂದ ದೇವಪ್ಪ ಮತ್ತಿತರಿದ್ದರು.

ಉದಯವಾಣಿ ಕಲಬುರಗಿ
ಗುರುವಾರ, ಸೆಪ್ಟೆಂಬರ್ 29, 2022

ವಿರಾಟಪುರ ವಿರಾಗಿ ರಥಯಾತ್ರೆಗೆ ಚಾಲನೆ

ಬಸವಕಲ್ಯಾಣ: ಹಾನಗಲ್ ಕುಮಾರ ಶಿವಯೋಗಿಗಳ ಜೀವನ ಚರಿತ್ರೆ ಆಧಾರಿತ ಚಲನಚಿತ್ರ ವಿರಾಟಪುರ ವಿರಾಗಿ ಪ್ರಚಾರಾರ್ಥ ರಥ ಯಾತ್ರೆಗೆ ನಗರದ ಶ್ರೀಬಸವೇಶ್ವರ ದೇವಸ್ಥಾನದಲ್ಲಿ ಸ್ವಾಗತಿಸಲಾಯಿತು. ಮಠಾಧೀಶರು ಹಾಗೂ ಪ್ರಮುಖರು ಪುಷ್ಪ ವೃಷ್ಟಿ ಮೂಲಕ ಸ್ವಾಗತಿಸಿದರು. ಪ್ರಚಾರ ರಥಕ್ಕೆ ಚಾಲನೆ ನೀಡಿದ ಶ್ರೀ ಡಾ.ಚನ್ನವೀರ ಶಿವಾಚಾರ್ಯರು ಮಾತನಾಡಿ, ಯುಗಪುರುಷ ಹಾನಗಲ್ಲ ಶ್ರೀ ಕುಮಾರ ಸ್ವಾಮೀಜಿ, ನಮ್ಮ ನಾಡಿನ ಧಾರ್ಮಿಕ ಕ್ಷೇತ್ರದ ಮಹಾ ಜ್ಯೋತಿ. ಅಖಿಲ ಭಾರತ ವೀರಶೈವ ಮಹಾಸಭೆ ಹಾಗೂ ಶ್ರೀ ಶಿವಯೋಗ ಮಂದಿರದ ಸಂಸ್ಥಾಪಕರಾಗಿ, ನಾಡಿಗೆ ಅನೇಕ ದಿಗ್ಗಜ ಸ್ವಾಮೀಜಿಗಳನ್ನು ತಯಾರಿಸಿದ ಕೀರ್ತಿ ಪೂಜ್ಯರಿಗೆ ಸಲ್ಲುತ್ತದೆ. ಅವರು ನಮ್ಮ ನಾಡಿನ ಸ್ವಾಮಿಗಳ ಹೃದಯದ ಆರಾಧ್ಯ ದೇವರು ಎಂದು ನುಡಿದರು. ಹುಲಸೂರನ ಶ್ರೀ ಡಾ.ಶಿವಾನಂದ ಸ್ವಾಮೀಜಿ ಮಾತನಾಡಿ. ಸಾಮಾಜಿ, ಶೈಕ್ಷಣಿಕ, ಧಾರ್ಮಿಕ ಕ್ಷೇತ್ರಕ್ಕೆ ಹಾನಗಲ್ ಕುಮಾರ ಶಿವಯೋಗಿಗಳ ಕೊಡುಗೆ ದೊಡ್ಡದು. ಗುರು ವಿರಕ್ತರು ಒಂದೇ ಎಂಬ ಸಮತೆ ಸಾರಿತು ಎನ್ನುವ ಕುಮಾರರ ಆಶಯದಂತೆ ಒಂದೇ ವೇದಿಕೆಯಲ್ಲಿದ್ದೇವೆ ಎಂದರು. ಹಿರನಾಗಾಂವನ ಶ್ರೀಜಯಶಾಂತಲಿಂಗ ಸ್ವಾಮೀಜಿ ಮಾತನಾಡಿದರು. ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಗವಿಮಠದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು. ಶ್ರೀ ಅಭಿನವ ಶಿವಲಿಂಗ ಸ್ವಾಮೀಜಿ, ರಾಜೇಶ್ವರದ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಗಡಿಗೌಂಡಗಾಂವ ಶ್ರೀ ಶಾಂವೀರ ಶಿವಾಚಾರ್ಯರು, ಕಿಟ್ಟಾದ ಶ್ರೀ ಸಿದ್ದೇಶ್ವರ ಶಿವಾಚಾರ್ಯರು, ಬೇಲೂರನ ಶ್ರೀ ಪ್ರಭುಕುಮಾರ ಶಿವಾಚಾರ್ಯರು, ಶ್ರೀ ಸಿದ್ದಲಿಂಗ ಶಿವಾಚಾರ್ಯರು, ಸಾಯಗಾಂವದ ಶ್ರೀ ಶಿವಾನಂದ ಸ್ವಾಮೀಜಿ, ಧರಣಿ ಜೋಳಿಯ ಶ್ರೀ ಗಂಗಾಧರ ಸ್ವಾಮೀಜಿ, ಸದಲಾಪುರದ ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಹುಡಗಿಯ ಶ್ರೀ ಚನ್ನಮಲ್ಲ ದೇವರು, ಮಂಠಾಳ ದೇವರು ಸ್ವಾಮೀಜಿ ಇತರರಿದ್ದರು. ಬಿಡಿಪಿಸಿ ಅಧ್ಯಕ್ಷ ಬಸವರಾಜ ಕೊರಕೆ, ಮಲ್ಲಿಕಾರ್ಜುನ ಚಿರಡೆ, ವಿವೇಕ ಹೊದಲೂರೆ, ಶ್ರೀಕಾಂತ ಬಡದಾಳೆ, ಮಲ್ಲಯ್ಯ ಹಿರೇಮಠ, ವೀರಣ್ಣ ಹಲಶೆಟ್ಟೆ, ರಾಜಕುಮಾರ ಹೊಳಕುಂದೆ, ಕಾಶಪ್ಪ ಸಕ್ಕರಬಾವಿ, ಆನಂದ ದೇವಪ್ಪ, ಗುಂಡುರೆಡ್ಡಿ, ಬಸವಂತಪ್ಪ ಲವಾರೆ, ಪ್ರದೀಪ ವಾತಡೆ, ಆನೀಲ ಭೂಸಾರೆ, ಶಿವರಾಜ ನರಶೆಟ್ಟೆ, ಮಲ್ಲಿಕಾರ್ಜುನ ನಂದಿ, ಡಾ.ಬಸವರಾಜ ಸ್ವಾಮಿ, ಕೃಷ್ಣಾ ಗೋಣಿ, ರಮೇಶ ರಾಜೋಳೆ, ಶಾಂತಲಿಂಗ ಮಠಪತಿ, ಓಂಪ್ರಕಾಶ ರೊಟ್ಟೆ, ಶ್ರೀನಿವಾಸರೆಡ್ಡಿ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಗುರುವಾರ 22 ಡಿಸೆಂಬರ್ 2022
22 DECEMBER 2022



ಬಸವಕಲ್ಯಾಣದ ಶ್ರೀಬಸವೇಶ್ವರ ದೇವಸ್ಥಾನದ ಬಳಿ ಹಾನಗಲ್ ಕುಮಾರ ಶಿವಯೋಗಿಗಳ ಜೀವನ ಚರಿತ್ರೆ ಆಧಾರಿತ ಚಲನಚಿತ್ರ ವಿರಾಟಪುರ ವಿರಾಗಿ ಪ್ರಚಾರಾರ್ಥ ರಥ ಯಾತ್ರೆಗೆ ಶ್ರೀ ಡಾ.ಚನ್ನವೀರ ಶಿವಾಚಾರ್ಯರು ಚಾಲನೆ ನೀಡಿದರು. ಶ್ರೀ ಡಾ.ಶಿವಾನಂದ ಸ್ವಾಮೀಜಿ, ಶ್ರೀಜಯಶಾಂತಲಿಂಗ ಸ್ವಾಮೀಜಿ, ಶ್ರೀರಾಜೇಶ್ವರ ಶಿವಾಚಾರ್ಯರು, ಗವಿಮಠದ ಅಭಿನವ ಶ್ರೀ ಇತರರಿದ್ದರು

Scanned with OKEN Scanner

'ಅಭಿನವ ಶ್ರೀಗಳ ಕಾರ್ಯಕ್ಕೆ ನಾವೆಲ್ಲರೂ ಕೈ ಜೋಡಿಸೋಣ'

ಸಂ.ಕ.ಸಮಾಚಾರ ಬಸವಕಲ್ಯಾಣ

'ಗವಿಮಠದ ಪರಂಪರೆ ಮುಂದುವರೆಸಿಕೊಂಡು ಹೋಗುವ ಜತೆಗೆ ದುಶ್ಚಟಗಳನ್ನು ಜೋಳಿಗೆಗೆ ಹಾಕಿಕೊಳ್ಳುವ ಮೂಲಕ ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಕಾಳಜಿ ವಹಿಸಿ ಕಾರ್ಯ ನಿರ್ವಹಿಸುತ್ತಿರುವ ಗವಿಮಠದ ಶ್ರೀಗಳ ಕಾರ್ಯಗಳಿಗೆ ನಾವೆಲ್ಲರೂ ಕೈ ಜೋಡಿಸೋಣ ಎಂದು ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಹೇಳಿದರು.

ಇಲ್ಲಿಯ ಸಂಸ್ಥಾನ ಗವಿಮಠದಲ್ಲಿ ಆಯೋಜಿಸಲಾದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನೋತ್ಸವ ಹಾಗೂ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ಕಾಂಗ್ರೆಸ್ ಮುಖಂಡೆ ಮಾಲಾ ಬಿ.ನಾರಾಯಣರಾವ ಮಾತನಾಡಿ ದಿ. ಶಾಸಕ ಬಿ.ನಾರಾಯಣರಾವ ಅವರು ಈ ಹಿಂದೆ ಬಸವಕಲ್ಯಾಣದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ಕೈಗೊಂಡಿದ್ದರು. ಅಲ್ಲದೆ ಇನ್ನೂ ಅನೇಕ ಕೆಲಸಗಳು ನನಸಾಗದೇ ಉಳಿದಿವೆ, ಮುಂದಿನ ದಿನಗಳಲ್ಲಿ ಇವುಗಳನ್ನು ಪೂರ್ಣಗೊಳಿಸಲು ಶ್ರೀಗಳ ಆಶೀರ್ವಾದ ಬೇಕು ಎಂದರು. ಜಿಪಂ ಮಾಜಿ ಸದಸ್ಯ ಗುಂಡುರೆಡ್ಡಿ ಆರ್ ಕಮಲಾಪೂರೆ ಮಾತನಾಡಿ ಗವಿಮಠದಲ್ಲಿ ಎಲ್ಲರಿಗೂ ಸಮಾನ ಸ್ಥಾನವಿದೆ ಎಂದರು. ಚಿಂಚನಸೂರ ಶ್ರೀ ಸಿದ್ದಮಲ್ಲ ಶಿವಾಚಾರ್ಯರು ಆಶೀರ್ವಚನ ನೀಡಿದರು. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು.



ಬಸವಕಲ್ಯಾಣದ ಗವಿ ಮಠದಲ್ಲಿ ಜರುಗಿದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನೋತ್ಸವ, ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಪ್ರಮುಖರು ಶ್ರೀಗಳನ್ನು ಸನ್ಮಾನಿಸಿದರು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಜಿಪಂ ಮಾಜಿ ಉಪಾಧ್ಯಕ್ಷೆ ಲತಾ ಹಾರಕೂಡೆ, ಮಾಜಿ ಸದಸ್ಯ ಸುಧೀರ ಕಾಡಾದಿ, ಮುಖಂಡರಾದ ಅರ್ಜುನ ಕನಕ, ದೀಪಕ ಮಾಲಗಾರ, ಅಮೃತಸಿಂಗ್ ಧಾಮಿ ಮಾತನಾಡಿದರು. ಪ್ರೊ ರುದ್ರೇಶ ಗೋರ್ಟಾ (ಬಿ)ಆಶಯ ಭಾಷಣ ಮಾಡಿದರು. ನಗರಸಭೆ ಅಧ್ಯಕ್ಷೆ ಶಹಜಾನ್ ತನ್ವೀರ್, ಬಿಡಿಎ ಅಧ್ಯಕ್ಷ ರಾಜಕುಮಾರ ಸಿರಗಾಪೂರ, ಮುಖಂಡರಾದ ಬಾಬು ಹೊನ್ನಾನಾಯಕ, ಆನಂದ ದೇವಪ್ಪ, ಅಶೋಕ ವಕಾರೆ, ಪ್ರದೀಪ ವಾತಾಡೆ, ಮನೋಹರ ಮೈಸೆ, ಮೇಘರಾಜ ನಾಗರಾಳೆ, ಶಬ್ಬೀರ ಪಾಶಾ ಮುಜಾವರ ಮತ್ತಿತರಿದ್ದರು. ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಎಸ್.ಎಮ್ ಭಕ್ತ ಕುಂಬಾರ ನಿರೂಪಿಸಿದರು.

ಸಂಯುಕ್ತ ಕರ್ನಾಟಕ KALABURAGI 30 ಸೆಪ್ಟೆಂಬರ್ 2022 ಶುಕ್ರವಾರ ಕಲಬುರಗಿ

ರೇಣುಕಾಚಾರ್ಯರು ಮಾನವ ಧರ್ಮ ಪ್ರಸಾರಕರು

ಬಸವಕಲ್ಯಾಣ: ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಶರಣು ಸಲಗರ ಅಭಿಮತ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ರೇಣುಕಾ ಚಾರ್ಯರು ಮಾನವ ಧರ್ಮಕ್ಕೆ ಜಯವಾಗಲಿ, ವಿಶ್ವಕ್ಕೆ ಶಾಂತಿ ದೊರಕಲಿ ಎಂದು ಸಾರಿ ಸಕಲ ಮಾನವರ ಹಿತ ಬಯಸಿದ್ದರು' ಎಂದು ಶಾಸಕ ಶರಣು ಸಲಗರ ಹೇಳಿದರು.

ತಾಲ್ಲೂಕು ಆಡಳಿತದಿಂದ ನಗರದ ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯ ಕಲ್ಯಾಣ ಮಂಟಪದಲ್ಲಿ ಸೋಮವಾರ ನಡೆದ ರೇಣುಕಾಚಾರ್ಯರ ಜಯಂತಿಯಲ್ಲಿ ಮಾತನಾಡಿದರು.

'ಎಲ್ಲರೂ ನೆಮ್ಮದಿಯಿಂದ ಬದುಕಲಿ ಎಂಬ ಸದುದ್ದೇಶ ಹೊಂದಿದ ಅವರ ಜಯಂತಿ ಆಚರಣೆಗೆ ಮುಖ್ಯ ಮಂತ್ರಿಯವರು ನಿರ್ಧರಿಸಿರುವ ಕಾರಣ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಇಲ್ಲಿ ಎಲ್ಲ ಜಯಂತಿಗಳಿಗಿಂತ ವಿಶಿಷ್ಟವಾಗಿ ಹಾಗೂ ಅದ್ದೂರಿಯಾಗಿ ಈ ಜಯಂತಿ ಆಚರಿಸಿರುವುದಕ್ಕೆ ಸಂತಸ ಆಗುತ್ತಿದೆ' ಎಂದರು.

ಅಖಿಲ ಭಾರತ ಬೇಡ ಜಂಗಮ ಸಂಘಟನೆಗಳ ಒಕ್ಕೂಟದ ರಾಜ್ಯ ಘಟಕದ ಪದಾಧಿಕಾರಿ ಡಾ.ಬಸವರಾಜ ಸ್ವಾಮಿ ಮಾತನಾಡಿ, 'ರೇಣುಕಾಚಾರ್ಯರು ಮಾತಂಗ ಮಹರ್ಷಿಯನ್ನು ಉದ್ಧರಿಸಿರುವುದು ನೋಡಿದರೆ ಹಾಗೂ ಕೊಲ್ಲಿಪಾಕಿಯಲ್ಲಿ 18 ಜಾತಿಯ ಮಠಗಳನ್ನು ಸ್ಥಾಪಿಸಿರುವುದನ್ನು ಕಂಡರೆ ಅವರು ಜಾತಿ ವ್ಯವಸ್ಥೆಯ ವಿರೋಧಿ ಆಗಿದ್ದರು. ಸರ್ವ ಜನಾಂಗದ ಉದ್ಧಾರ ಬಯಸಿದ್ದರು ಎನ್ನಬಹುದು. ದಾಸೋಹ, ಮಹಿಳಾ ಸ್ವಾತಂತ್ರ್ಯಕ್ಕೂ ಮಹತ್ವ ನೀಡಿದ್ದರು' ಎಂದರು. ಹಿರೇನಾಗಾಂವ ಜಯ ಶಾಂತಲಿಂಗ ಸ್ವಾಮೀಜಿ ಮಾತನಾಡಿ, 'ರೇಣುಕಾಚಾರ್ಯರ ಸಂದೇಶ ಪಾಲನೆ ಅಗತ್ಯ' ಎಂದರು. ತಹಶೀಲ್ದಾರ್ ಶಾಂತಗೌಡ ಬಿರಾದಾರ, ಶಿವಕುಮಾರ ಜಡಗೆ ಹಾಗೂ ರಮೇಶ ರಾಜೋಳೆ ಮಾತನಾಡಿದರು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಗಡಿಗೌಡಗಾಂವದ ಶಾಂತವೀರ ಶಿವಾಚಾರ್ಯರು, ಡಾ.ಈಶ್ವರಾನಂದ ಸ್ವಾಮೀಜಿ, ರಾಜೇಶ್ವರ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ಕಿಟ್ಟಾ ಸಿದ್ದೇಶ್ವರ ಸ್ವಾಮೀಜಿ, ನಗರಸಭೆ ಆಯುಕ್ತ ಶರಣಬಸಪ್ಪ ಸಜ್ಜನಶೆಟ್ಟಿ, ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ರೇವಣಸಿದ್ದಯ್ಯ, ಸದಾನಂದ ಕಣಜೆ, ಸೋಮಶೇಖರ ವಸ್ತದ್, ಮಲ್ಲಯ್ಯ ಸ್ವಾಮಿ, ರಾಕೇಶ ಪುರವಂತ ಹಾಗೂ ಲೋಕೇಶ ಇದ್ದರು.

ಕಾರ್ಯಕ್ರಮಕ್ಕೂ ಮೊದಲು ಮುಖ್ಯರಸ್ತೆಯ ಮೂಲಕ ಭಾವಚಿತ್ರದ ಮೆರವಣಿಗೆ ನಡೆಯಿತು. ಸ್ತಬ್ಧ ಚಿತ್ರಗಳು, ಡೊಳ್ಳು, ಬ್ಯಾಂಡ್-ಬಾಜಾ, ಭಜನಾ ತಂಡದವರು ಭಾಗವಹಿಸಿದ್ದರು.



ಬಸವಕಲ್ಯಾಣದಲ್ಲಿ ಸೋಮವಾರ ನಡೆದ ರೇಣುಕಾಚಾರ್ಯರ ಜಯಂತಿಯಲ್ಲಿ ಶಾಸಕ ಶರಣು ಸಲಗರ ಭಾವಚಿತ್ರದ ಪೂಜೆ ನೆರವೇರಿಸಿದರು. ಜಯಶಾಂತಲಿಂಗ ಸ್ವಾಮೀಜಿ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹಾಗೂ ಡಾ.ಬಸವರಾಜ ಸ್ವಾಮಿ ಇದ್ದರು

ಮುಖ್ಯಾಂಶಗಳು

- 18 ಜಾತಿಯ ಮಠಗಳ ಸ್ಥಾಪನೆ
- ದಾಸೋಹ, ಮಹಿಳಾ ಸ್ವಾತಂತ್ರ್ಯಕ್ಕೂ ಮಹತ್ವ
- ರೇಣುಕಾಚಾರ್ಯರ ಸಂದೇಶ ಪಾಲಿಸಿ

ಪ್ರಜಾವಾಣಿ ಮಂಗಳವಾರ • ಮಾರ್ಚ್ 21, 2023

Scanned with OKEN Scanner

ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ

ಗವಿಮಠದ ಅಭಿವೃದ್ಧಿಗೆ ಶ್ರಮಿಸೋಣ

ವಿಕ ಸುದ್ದಿಲೋಕ ಬಸವಕಲ್ಯಾಣ

ಪರಿಸರ ಪ್ರಜ್ಞೆ,ದುಶ್ಚಟಗಳನ್ನು ಜೋಳಿಗೆಗೆ ಹಾಕಿಕೊಳ್ಳುವ ಮೂಲಕ ಸಮಾಜವು ಸರಿದಾರಿಗೆ ತರಲು ಶ್ರಮಿಸುತ್ತಿರುವ ಶ್ರೀಗಳ ಕಾರ್ಯ ಉತ್ತಮವಾಗಿದೆ. ಅವರು ಮಾಡುವ ಕಾರ್ಯಗಳಿಗೆ ನಾವೆಲ್ಲರೂ ಸೇರಿ ಅವರ ಬೆನ್ನೆಲುಬಾಗಿ ನಿಲ್ಲೋಣ ಎಂದು ಮಾಜಿ ಶಾಸಕ ಮಲ್ಲಿಕಾರ್ಜುನ ಎಸ್ ಖೂಬಾ ಹೇಳಿದರು.

ಇಲ್ಲಿಯ ಗವಿ ಮಠದಲ್ಲಿ ಬುಧವಾರ ಜರುಗಿದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರ ಜನ್ಮ ದಿನೋತ್ಸವ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಕ್ತಿ ಭಾವದ ಮೂಲಕ ಭಕ್ತರನ್ನು ಸರಿದಾರಿಗೆ ತರುವ ಜೊತೆಗೆ ಗವಿ ಮಠವು ಅಭಿವೃದ್ಧಿಪಡಿಸುತ್ತಿದ್ದಾರೆ ಎಂದರು.

ಮನುಷ್ಯನಿಗೆ ಗುರು ಅವಶ್ಯಕ, ಗುರುವಿನ ಆಶಿರ್ವಾದ ಇದ್ದರೆ ಜೀವನದಲ್ಲಿ ಮುಂದೆ ಬರಲು ಸಾಧ್ಯ ಆದರೆ ಮುಂದೆ ಬರುವ ವ್ಯಕ್ತಿಗಳನ್ನು ಕೈಲಾದರೆ ಪ್ರೋತ್ಸಾಹಿಸಬೇಕು ಹೊರತು ಕಾಲು ಹಿಡಿದು ಎಳೆಯುವ ಕೆಲಸ ಯಾರೂ ಮಾಡಬಾರದು. ಗವಿ ಮಠದಲ್ಲಿ ದಾಸೋಹ ಭವನ ನಿರ್ಮಿಸಲು ಮುಂದಾಗಿದ್ದು ಭಕ್ತರು ಕೈಲಾದಷ್ಟು ಭಕ್ತಿ ಸಮರ್ಪಿಸಿದರೆ ಉಳಿದ ಹಣವನ್ನು ಸರಕಾರದಿಂದ ಎಲ್ಲ ಪಕ್ಷದವರು ಸೇರಿಕೊಂಡು ಸಿಎಂ ಬಳಿ ನಿಯೋಗ ಹೊಗೋಣ ಎಂದರು.

ಕಾಂಗ್ರೆಸ್ ಮುಖಂಡ ಮಾಲಾ ಬಿ.ನಾರಾಯಣರಾವ ಮಾತನಾಡಿ, ದಿ.ಬಿ ನಾರಾಯಣರಾವ ಅವರು ಈ ಹಿಂದೆ ಬಸವಕಲ್ಯಾಣದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ಕೈಗೊಂಡಿದ್ದರು. ಅಲ್ಲದೆ ಇನ್ನೂ ಅನೇಕ ಕೆಲಸಗಳು ನನಸಾಗದೇ ಹೋದವು. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಶ್ರೀಗಳು ನನಗೆ ಆಶಿರ್ವದಿಸಿದರೆ ನಾರಾಯಣರಾವ ಅವರು ಕಂಡ ಕನಸುಗಳೆಲ್ಲವೂ ನನಸು ಮಾಡಲು ಶ್ರಮಿಸುವೆ ಎಂದು ಬೇಡಿಕೊಂಡರು.

ಜಿಪಂ ಮಾಜಿ ಸದಸ್ಯ ಗುಂಡುರೆಡ್ಡಿ ಆರ್ ಕಮಲಾಪುರೆ ಮಾತನಾಡಿ, ಗವಿ ಮಠದಲ್ಲಿ ಶ್ರೀಮಂತ, ಬಡವ ಇಬ್ಬರಿಗೂ ಸಮಾನ ಸ್ಥಾನವಿದೆ. ಶ್ರೀಗಳು ಎಲ್ಲರನ್ನು ಹಾಗೂ ಎಲ್ಲಾ ಸಮಾಜದ ಜನರನ್ನು ಗೌರವಿಸುವ ಮೂಲಕ ಎಲ್ಲಾ ವರ್ಗದ ಜನರನ್ನು ಒಟ್ಟಕೊಂಡು ಮಠ ಅಭಿವೃದ್ಧಿಪಡಿಸುತ್ತಿದ್ದಾರೆ. ಹೀಗಾಗಿ ಈ ಮಠ ಇನ್ನಷ್ಟು ಅಭಿವೃದ್ಧಿ ಹೊಂದಲು ಎಲ್ಲರೂ ಕೈ ಜೋಡಿಸೋಣ ಎಂದರು.

ಕಾರ್ಯಕ್ರಮದ ನೇತೃತ್ವವನ್ನು ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ವಹಿಸಿದ್ದರು. ಗವಿಮಠ ಟ್ರಸ್ಟನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ರುದ್ರೇಶ ಗೋರ್ಟಾ (ಬ) ಆಶಯ ನುಡಿಗಳಾದರು.



ಬಸವಕಲ್ಯಾಣ ಇಲ್ಲಿಯ ಗವಿ ಮಠದಲ್ಲಿ ಬುಧವಾರ ಜರುಗಿದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನೋತ್ಸವ ಮತ್ತು ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಗವಿಮಠದ ಶ್ರೀಗಳನ್ನು ಸನ್ಮಾನಿಸಲಾಯಿತು. ಮಾಜಿ ಶಾಸಕ ಮಲ್ಲಿಕಾರ್ಜುನ ಎಸ್ ಖೂಬಾ, ಮಾಲಾ ಬಿ.ನಾರಾಯಣರಾವ, ಗುಂಡುರೆಡ್ಡಿ, ಪ್ರದೀಪ ವಾತಾಡೆ, ಆನಂದ ದೇವಪ್ಪ, ಅರ್ಜುನ ಕನಕ, ಮನೋಹರ ಮೈಸೆ, ಸುಧೀರ ಕಾಡಾದಿ, ಬಾಬು ಹೊನ್ನಾನಾಯಕ ಇತರರಿದ್ದರು.

> ಇಲ್ಲಿಯ ಗವಿ ಮಠಕ್ಕೆ ಆಸ್ತಿ ಎಂದರೆ ಭಕ್ತರೇ ಹೊರತು ಯಾರೂ ಇಲ್ಲ, ಎಕ್ಕರೆ ತನು,ಮನ,ಧನದಿಂದ ಶ್ರೀಗಳ ಸಂಕಷ್ಟದಲ್ಲಿ ಭಾಗಿಯಾಗಿ ಮಠ ಅಭಿವೃದ್ಧಿಗೆ ಮುಂದಾಗಿರುವುದು ಸ್ವಾಗತಾರ್ಹ. ಮುಂದಿನ ದಿನಗಳಲ್ಲಿಯೂ ಸಹ ಭಕ್ತರು ಶ್ರೀಗಳ ಜತೆಗಿರಲಿ ಎಲ್ಲ ಭಕ್ತಾದಿಗಳ ಮೇಲೆ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರ ಆಶಿರ್ವಾದ ಸದಾ ಇರಲಿ.
>
> **- ಶ್ರೀ ಸಿದ್ದಮಲ್ಲ ಶಿವಾಚಾರ್ಯರರು**
> ಚಿಂಚನಸೂರ

ವಿವಿಧೆಡೆಯಿಂದ ಭಕ್ತರ ಆಗಮನ

ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರ ಜನ್ಮ ದಿನೋತ್ಸವ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯಕ್ರಮದ ನಿಮಿತ್ತ ವಿವಿಧೆಡೆಯಿಂದ ಭಕ್ತರು ಗವಿ ಮಠಕ್ಕೆ ಆಗಮಿಸಿ ಶ್ರೀಗಳನ್ನು ಸತ್ಕರಿಸಿ ಗೌರವಿಸಿ ಆಶಿರ್ವಾದ ಪಡೆದರು.

ಜಿಪಂ ಮಾಜಿ ಸದಸ್ಯರಾದ ಲತಾ ಹಾರಕೂಡೆ, ಸುಧೀರ ಕಾಡಾದಿ, ಅರ್ಜುನ ಕನಕ, ದೀಪಕ ಮಾಲಗಾರ, ಅಮೃತಸಿಂಗ್ ಧಾಮಿ ಮಾತನಾಡಿದರು. ವೇದಿಕೆಯಲ್ಲಿ ನಗರ ಸಭೆ ಅಧ್ಯಕ್ಷೆ ಶಾಹಾಜಾನ್ ತನ್ವೀರ್, ಬಿಡಿಎ ಅಧ್ಯಕ್ಷ ರಾಜಕುಮಾರ ಸಿರಗಾಪುರ, ಬಾಬು ಹೊನ್ನಾನಾಯಕ, ಅಶೋಕ ವಕಾರೆ, ಆನಂದ ದೇವಪ್ಪ, ಪ್ರದೀಪ ವಾತಾಡೆ, ಮನೋಹರ ಮೈಸೆ, ಮೇಘರಾಜ ನಾಗರಾಳೆ, ಶಭ್ಬೀರ ಪಾಶಾ ಮುಜಾವರ ಸೇರಿದಂತೆ ಮತ್ತಿತರಿದ್ದರು. ಬಸವಂತಪ್ಪ ಲವಾರೆ ಸ್ವಾಗತಿಸಿದರೆ, ಎಸ್.ಎಮ್ ಭಕ್ತ ಕುಂಬಾರ ನಿರೂಪಿಸಿದರು.

ನಮ್ಮ ಬೀದರ್ ಗುರುವಾರ,29 ಸೆಪ್ಟೆಂಬರ್ 2022

ಚಿತ್ರ ಸುದ್ದಿ



ಬಸವಕಲ್ಯಾಣದಲ್ಲಿ ಏ.11 ರಂದು ನಡೆಯಲಿರುವ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಜಾತ್ರಾ ಮಹೋತ್ಸವ ನಿಮಿತ್ತ ಗವಿ ಮಠದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಮಂತ್ರಣ ಪತ್ರಿಕೆ ಬಿಡುಗಡೆ ಮಾಡಿದರು. ಸೋಮಲಿಂಗ ಕೆ, ಆನಂದ ಚಂದ್ರಶೇಖರ ತೊಗಲೆ, ಬಸವಂತಪ್ಪಾ ಲವಾರೆ, ಪ್ರೊ.ರುದ್ರೇಶ್ವರ ಗೋರ್ಟಾ, ಬಸವಂತಪ್ಪಾ ಮಾಲಿ ಪಾಟೀಲ್, ಮರೆಪ್ಪಾ ಪೊಲೀಸ್ ಪಾಟೀಲ್, ವೀರಶೆಟ್ಟಿ.ಎಂ.ಪಾಟೀಲ್, ಬಸವರಾಜ ಬಿರಾದಾರ, ಸಂಜುಕುಮಾರ ಜಾಧವ ಇದ್ದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ಗವಿಮಠಕ್ಕೆ ಶನಿವಾರ ಭೇಟಿ ನೀಡಿದ ಶಾಸಕ ಶರಣು ಸಲಗರ ಅವರನ್ನು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸತ್ಕರಿಸಿ ಆಶೀರ್ವದಿಸಿದರು. ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಬಸವರಾಜ ಸ್ವಾಮಿ, ನಟರಾಜ ಬಿರಾದಾರ, ಸದಾನಂದ ಪಾಟೀಲ್ ಮುಡಬಿ ಇತರರಿದ್ದರು.

Scanned with OKEN Scanner

ಸಮಾನತೆ ಸಂದೇಶ ಸಾರಿದ ರೇಣುಕ

ಶಾಸಕ ಶರಣು ಸಲಗರ ಬಣ್ಣನೆ । ಬಸವಕಲ್ಯಾಣದಲ್ಲಿ ರೇಣುಕಾಚಾರ್ಯರ ಜಯಂತ್ಯುತ್ಸವ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಜಗದ್ಗುರು ರೇಣುಕಾಚಾರ್ಯರು ಮಾನವ ಧರ್ಮಕ್ಕೆ ಜಯವಾಗಲಿ, ಪ್ರತಿಯೊಬ್ಬರು ಶಾಂತಿ ನೆಮ್ಮದಿಯಿಂದ ಬದುಕಲಿ ಎಂದು ಸಂದೇಶ ಸಾರಿದ್ದಾರೆ ಎಂದು ಶಾಸಕ ಶರಣು ಸಲಗರ ಹೇಳಿದರು.

ನಗರದ ಬಿಕೆಡಿಬಿ ಕಲ್ಯಾಣ ಮಂಟಪದಲ್ಲಿ ಸೋಮವಾರ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವದಲ್ಲಿ ಮಾತನಾಡಿ, ಸರ್ಕಾರ ಪ್ರಸಕ್ತ ವರ್ಷ ಜಯಂತಿ ಆಚರಿಸಲು ಮುಂದಾಗಿದ್ದು, ಮುಂದಿನ ವರ್ಷ ಇದಕ್ಕಿಂತ ಅದ್ಧೂರಿಯಾಗಿ ಆಚರಿಸೋಣ ಎಂದರು.

ಹಿರನಾಗಾಂವನ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಮಾತನಾಡಿ, ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂದು ಜಗದ್ಗುರು ರೇಣುಕಾಚಾರ್ಯರು ಸಾರಿದ್ದಾರೆ. ಅವರು ನೀಡಿರುವ ತತ್ವ -ಸಂದೇಶಗಳನ್ನು ಅರಿತು ಅಳವಡಿಸಿಕೊಳ್ಳಬೇಕು. ಆಗ ತತ್ವಗಳು ಗಟ್ಟಿಯಾಗಿ ಉಳಿಯುತ್ತವೆ ಎಂದರು.

ಅಖಿಲ ಭಾರತ ಬೇಡ ಜಂಗಮ ಸಂಘಟನೆಗಳ ಒಕ್ಕೂಟದ ರಾಜ್ಯ ವಕ್ತಾರ ಡಾ.ಬಸವರಾಜ ಸ್ವಾಮಿ ವಿಶೇಷ ಉಪನ್ಯಾಸ ನೀಡಿ, ಜಗತ್ತಿನಲ್ಲಿ ವರ್ಗ, ವರ್ಣ ರಹಿತವಾದ ಸಮಾಜ ಕಲ್ಪನೆ ನೀಡಿದವರು ಜಗದ್ಗುರು ರೇಣುಕಾಚಾರ್ಯರು. ಸಿದ್ಧಾಂತ ಶಿಖಾಮಣಿಯ ಮೂಲಕ ಮಾನವ ಕುಲಕ್ಕೆ ಮಾನವೀಯ ಮೌಲ್ಯಗಳನ್ನು ಕೊಡುಗೆ ನೀಡಿದ ಸಮನ್ವಯಾಚಾರ್ಯರು ಅವರಾಗಿದ್ದಾರೆ ಎಂದರು.

ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಶ್ರೀ ಡಾ.ಈಶ್ವರಾನಂದ ಸ್ವಾಮೀಜಿ, ಶ್ರೀ ಮುರುಗೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ತಹಸೀಲ್ದಾರ್ ಶಾಂತಗೌಡ ಬಿರಾದಾರ, ನಗರ ಸಭೆ ಪ್ರಾಯುಕ್ತ ಶಿವಶರಣಪ್ಪ ಸಜ್ಜನಶೆಟ್ಟಿ ಉಪಸ್ಥಿತರಿದ್ದರು. ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಶಿವಕುಮಾರ ಜಡಗೆ ನಿರೂಪಣೆ ಮಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ತಾಲೂಕು ಆಡಳಿತದಿಂದ ಏರ್ಪಡಿಸಿದ್ದ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ಶಾಸಕ ಶರಣು ಸಲಗರ ಉದ್ಘಾಟಿಸಿದರು. ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಶ್ರೀಪತಿ ಪಂಡಿತರಾದ್ಯ ಶಿವಾಚಾರ್ಯರು, ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಶ್ರೀಮುರುಗೇಂದ್ರ ಸ್ವಾಮೀಜಿ, ಶ್ರೀ ಡಾ.ಈಶ್ವರಾನಂದ ಸ್ವಾಮೀಜಿ ಇತರರಿದ್ದರು.



ಬಸವಕಲ್ಯಾಣದಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದ ನಿಮಿತ್ತ ನಡೆದ ವೈಭವದ ಮೆರವಣಿಗೆಯಲ್ಲಿ ಡೊಳ್ಳು ಕಲಾ ತಂಡದ ಪ್ರದರ್ಶನ.

ವೈಭವದ ಮೆರವಣಿಗೆ

ನಗರದ ಐತಿಹಾಸಿಕ ಕೋಟೆಯಿಂದ ಮುಖ್ಯ ರಸ್ತೆ ಮಾರ್ಗವಾಗಿ ಅಂಬೇಡ್ಕರ್ ವೃತ್ತದ ಮೂಲಕ ಬಿಕೆಡಿಬಿ ಕಲ್ಯಾಣ ಮಂಟಪದ ವರೆಗೆ ಅಲಂಕೃತ ತೆರೆದ ವಾಹನದಲ್ಲಿ ಜಗದ್ಗುರು ರೇಣುಕಾಚಾರ್ಯರ ಮೂರ್ತಿ ಹಾಗೂ ಭಾವಚಿತ್ರದ ಮತ್ತು ಬಸವವಣ್ಣನವರ ಮೂರ್ತಿ ಅದ್ಧೂರಿ ಮೆರವಣಿಗೆ ಜರುಗಿತು. ತಾಳ, ಮೇಳ ವಾದ್ಯ, ಭಜನೆಯೊಂದಿಗೆ ನಡೆದ ಮೆರವಣಿಗೆಯಲ್ಲಿ ಪುರವಂತರಿಂದ ಹಾಗೂ ಮಹಿಳೆಯರಿಂದ ನಡೆದ ಕೋಲಾಟ ಗಮನ ಸೆಳೆಯಿತು. ಗವಿಮಠದ ಶ್ರೀ, ಶ್ರೀಶಾಂತವೀರ ಶಿವಾಚಾರ್ಯರರು, ಶ್ರೀಸಿದ್ದೇಶ್ವರ ಶಿವಾಚಾರ್ಯರರು, ಶಾಸಕ ಶರಣು ಸಲಗರ, ಪ್ರಮುಖರಾದ ಶಹಜಹಾನ್ ಶೇಖ್ ತನ್ವೀರ ಅಹ್ಮದ್, ಬಸವರಾಜ ಕೊರಕೆ, ಧನರಾಜ ತಾಳಂಪಳ್ಳಿ, ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂದಿ, ಮಲ್ಲಯ್ಯ ಸ್ವಾಮಿ, ಅರ್ಜುನ ಕನಕ, ದೀಪಕ ಮಾಲಗಾರ, ವೀರಣ್ಣ ಹಲಶೆಟ್ಟಿ, ಸೋಮಶೇಖರ ವಸ್ತದ, ಕಾಶಪ್ಪ ಸಕ್ಕರಬಾಯಿ, ಅಧಿಕಾರಿಗಳು, ಸಮಾಜದ ಪ್ರಮುಖರು ಭಾಗವಹಿಸಿದರು.



ಹುಲಸೂರದಲ್ಲಿ ಭಾನುವಾರ ರಾತ್ರಿ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಜಾಗೃತಿ ಸಮ್ಮೇಳನ ಉದ್ಘಾಟನೆ ನಡೆಯಿತು. ಶ್ರೀ ರಾಜಶೇಖರ ಸ್ವಾಮೀಜಿ, ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸುಧೀರ ಕಾಡಾದಿ, ಲತಾ ಹಾರಕೂಡೆ, ಓಂಕಾರ ಪಟ್ಟೆ, ಡಾ.ನಾಗನಾಥ ತೊಗರಗೆ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 21 ಮಾರ್ಚ್ 2023
21 MARCH 2023

Scanned with OKEN Scanner

ನಾರಾಯಣಪುರದಲ್ಲಿ ವನಮಹೋತ್ಸವ ಸಂಭ್ರಮ | ಬಸವಕಲ್ಯಾಣದ ಗವಿ ಮಠದ ಶ್ರೀ ಹೇಳಿಕೆ

ಶಿಕ್ಷಣದ ಜತೆಗಿರಲಿ ಪರಿಸರ ಕಾಳಜಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಇಂದಿನ ವಿದ್ಯಾರ್ಥಿಗಳಿಗೆ ಶಿಕ್ಷಣದ ಜತೆಗೆ ಉತ್ತಮವಾದ ಪರಿಸರ ಬಗ್ಗೆ ಕಾಳಜಿ ವಹಿಸಲು ಶ್ರಮಿಸಬೇಕಾದ ಅಗತ್ಯತೆ ಎದುರಾಗಿದೆ. ಕಾಡು ಬೆಳೆಸಿ ನಾಡು ಉಳಿಸಿ ಎಂಬ ಪ್ರಜ್ಞೆ ಮಕ್ಕಳಲ್ಲಿ ಮೂಡಿಸಬೇಕಿದೆ ಎಂದು ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಕರ್ನಾಟಕ ರೂರಲ್, ಅರ್ಬನ್ ಡೆವಲಪಮೆಂಟ್ (ಕೆಆರ್‌ಯುಡಿ) ಸೊಸೈಟಿ ಬೀದರ್ ಮತ್ತು ಗ್ರಾಮ ಪಂಚಾಯಿತಿ ನಾರಾಯಣಪೂರ ಸಂಯುಕ್ತಾಶ್ರಯದಲ್ಲಿ ಸರಕಾರಿ ಸಂಯುಕ್ತ ಪ್ರೌಢ ಶಾಲೆಯಲ್ಲಿ ಗುರುವಾರ ನಡೆದ ವನಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದು ಸತ್ಯಕ್ಕೆ ಹಾಗೂ ಶಿವನಿಗೆ ಬೆಲೆ ನೀಡದೆ ಸುಂದರತೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಸುಂದರತೆಗೆ ಹೆಚ್ಚು ಆದ್ಯತೆ ನೀಡದೇ ಪರಿಸರದ ಬಗ್ಗೆ ಕಾಳಜಿ ವಹಿಸಬೇಕು. ಈ ಹಿಂದೆ ವಿಶ್ವಕ್ಕೆ ಎದುರಾದ ಕೊರೊನಾ ನಮಗೆ ದೊಡ್ಡ ಪಾಠ ಕಲಿಸಿದೆ. ಆಮ್ಲಜನಕ ಸಿಗಬೇಕಾದರೆ ಈಗಲಾದರೂ ಎಚ್ಚೆತ್ತುಕೊಂಡು ಪರಸರ ಕಾಪಾಡಿಕೊಂಡು ಬೆಳೆಸಬೇಕಿದೆ. ಹೀಗಾಗಿ ಪ್ರತಿ ವಿದ್ಯಾರ್ಥಿ ಕೂಡಾ ಆವರ ಜನ್ಮ ದಿನದ ನಿಮಿತ್ತ ಒಂದು ಸಸಿ ನೆಟ್ಟು ಪೋಷಿಸಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.



ನಾರಾಯಣಪೂರ ಗ್ರಾಮದ ಸರಕಾರಿ ಸಂಯುಕ್ತ ಪ್ರೌಢ ಶಾಲೆಯಲ್ಲಿ ಗುರುವಾರ ನಡೆದ ವನಮಹೋತ್ಸವ ಕಾರ್ಯಕ್ರಮವನ್ನು ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು.

ನಾವು ಉತ್ತಮವಾಗಿ ಗಾಳಿ ಸೇವನೆ ಮಾಡಬೇಕಾದರೆ ಉತ್ತಮ ಪರಿಸರ ನಿರ್ಮಾಣದ ಅವಶ್ಯಕವಾಗಿದೆ. ಹೀಗಾಗಿ ಪ್ರತಿ ವಿದ್ಯಾರ್ಥಿಯು ಕೂಡಾ ತಮ್ಮ ಮನೆಯ ಮುಂಭಾಗದಲ್ಲಿ ಸಸಿ ನೆಟ್ಟು ಪೋಷಿಸುವ ಕೆಲಸ ಮಾಡಿದರೆ ಪರಿಸರ ಉಳಿಸಲು ಸಾಧ್ಯ.

- ಶೈಲೇಂದ್ರ ಕಾವಡೆ,

ರಾಜೀವಗಾಂಧಿ ಪರಿಸರ ಪ್ರಶಸ್ತಿ ಪುರಸ್ಕೃತರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ ಹಳ್ಳದ್ ಮಾತನಾಡಿ, ಇಂದಿನ ಮಕ್ಕಳು ನಾಳಿನ ಪ್ರಜೆಗಳು ಎನ್ನುತ್ತಿದ್ದರು. ಆದರೆ, ಇಂದು ಇಂದಿನ ಮಕ್ಕಳೇ ಇಂದಿನ ಪ್ರಜೆಗಳು ಎಂಬಂತಾಗಿದೆ. ಮಕ್ಕಳಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸುವುದು ಅವಶ್ಯಕವಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಜಿಲ್ಲೆಯಾದ್ಯಂತ ವನಮಹೋತ್ಸವ ಆಚರಣೆ ಹೆಚ್ಚು ಒತ್ತು ನೀಡಿದ ಫಲವಾಗಿ ಈ ತಿಂಗಳಲ್ಲಿ ಲಕ್ಷಾನುಗಟ್ಟಲೇ ಸಸಿ ನೆಡಲಾಗಿದೆ ಎಂದರು. ಪ್ರತಿ ಮಗುವಿಗೂ ಒಂದೊಂದು ಸಸಿ ವಿತರಿಸಿದ್ದು, ನಮ್ಮ ತಾಲೂಕಿನಲ್ಲಿ ಆರು ಸಾವಿರ ಸಸಿ ವಿತರಿಸಿದ್ದಾರೆ. ನೆಟ್ಟ ಸಸಿಗಳು ಜೋಪಾನ ಮಾಡುವ ಮೂಲಕ ಪೋಷಿಸಬೇಕು ಎಂದರು.

ಇದೇವೇಳೆ ಹೆಚ್ಚು ಸಸಿ ನೆಟ್ಟ ವಚನ ಚಾರಿಟೇಬಲ್ ಟ್ರಸ್ಟ್‌ನ ಸದಸ್ಯ ವೀರಕೆಟ್ಟಿ ಮಲಕೆಟ್ಟಿ ಅವರಿಗೆ ಬಸವಕಲ್ಯಾಣ ಅಪ್‌ಡೇಟ್ ವತಿಯಿಂದ ಗೌರವಿಸಲಾಯಿತು. ವೇದಿಕೆಯಲ್ಲಿ ನಾರಾಯಣಪುರ ಗ್ರಾಪಂ ಅಧ್ಯಕ್ಷ ಅಹ್ಮದ ಪಾಸಾ, ಪಿಡಿಒ ಚಂದ್ರಮ, ಪ್ರೌಢ ಶಾಲೆಯ ಮುಖ್ಯಗುರು ಉಮಾ ಕುಲಕರ್ಣಿ, ಪ್ರಾಥಮಿಕ ಶಾಲೆಯ ಮುಖ್ಯಗುರು ನಾಗಮ್ಮ ಭುರೆ ಇದ್ದರು. ನಿಖಿತಾ ಸಂಗಡಿಗರಿಂದ ಸ್ವಾಗತ ಗೀತೆ ಹಾಡಿದರು. ಮಹಾಂತಯ್ಯ ಸ್ವಾಮಿ ಸ್ವಾಗತಿಸಿದರು. ಶಿಕ್ಷಕ ನಾಗೇಂದ್ರ ಬಿರಾದಾರ ನಿರೂಪಿಸಿದರು, ಶಿವು ಮಠಪತಿ ವಂದಿಸಿದರು.

ವಿಜಯ ಕರ್ನಾಟಕ
ಶುಕ್ರವಾರ,14 ಜುಲೈ 2023,
ಕಲಬುರಗಿ

Scanned with OKEN Scanner

ಗವಿಮಠದ ಶ್ರೀ ಘನಲಿಂಗ ರುದ್ರಮುನಿ ಜಾತ್ರೆ, ಧರ್ಮ ಸಭೆ, ಗ್ರಂಥ ಲೋಕಾರ್ಪಣೆ

ಮುಂದಿನ ವರ್ಷ ರಥೋತ್ಸವ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಗವಿಮಠದಲ್ಲಿ ಶ್ರೀ ಘನಲಿಂಗ ರುದ್ರಮುನಿ ಜಾತ್ರೆ ನಿಮಿತ್ತ ಮಂಗಳವಾರ ಧರ್ಮ ಸಭೆ, ಅಭಿನವ ಘನಲಿಂಗಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಾಗೂ ವಿರಶೆಟ್ಟಿ ಪಾಟೀಲ್ ಅವರ ಸಂಪಾದಿತ ಕವನ ಸಂಕಲನ ನೋಡ ಬನ್ನಿ ಗವಿಮಠ ಗ್ರಂಥ ಲೋಕಾರ್ಪಣೆ ಸೇರಿ ಇತರೆ ಕಾರ್ಯಕ್ರಮ ಜರುಗಿದವು.

ಧರ್ಮ ಸಭೆಯಲ್ಲಿ ನೋಡ ಬನ್ನಿ ಗವಿಮಠ ಗ್ರಂಥ ಲೋಕಾರ್ಪಣೆ ಮಾಡಿ ಮಾತನಾಡಿದ ಶ್ರೀ ರಾಜೇಶ್ವರ ಶಿವಾಚಾರ್ಯರು, ಗವಿ ಮಠದಲ್ಲಿ ಅಭಿವೃದ್ಧಿಗೆ ಭಕ್ತರೇ ಕಾರಣರಾಗಿದ್ದಾರೆ. ಭಕ್ತರು ತನು, ಮನ, ಧನದಿಂದ ಸಹಾಯ-ಸಹಕಾರ ನೀಡುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮುಂದಿನ ವರ್ಷದಿಂದ ಗವಿಮಠದಲ್ಲಿ ಶ್ರೀ ಘನಲಿಂಗ ರುದ್ರಮುನಿ ಜಾತ್ರೆ ವೈಭವಪೂರ್ಣ, ಅರ್ಥಪೂರ್ಣವಾಗಿ ಆಚರಿಸೋಣ. ಕಲೆ, ಅದ್ದೂರಿ ರಥೋತ್ಸವದ ಜತೆಗೆ ಸಾಹಿತ್ಯ, ಸಂಸ್ಕೃತಿಗೆ ಆದ್ಯತೆ ನೀಡಿ ಭಕ್ತರಿಗೆ ಜ್ಞಾನವು ಮನ ಮುಟ್ಟುವಂತೆ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸೋಣ ಎಂದರು.

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಮಠದ ಪ್ರಗತಿಗೆ ಭಕ್ತರೆ ಮಠದ ನಿಜ ಆಸ್ತಿ. ಮಠದ ಪ್ರಗತಿಗೆ ತನು ಮನದಿಂದ ಸಹಕರಿಸಿದ್ದಾರೆ. ಗವಿ ಮಠಕ್ಕೆ ಎಲ್ಲ ಸಮಾಜದ ಜನರು ಆಗಮಿಸಿ ಗದ್ದುಗೆ ದರ್ಶನ ಪಡೆಯುತ್ತಿದ್ದಾರೆ. ಜಾತಿ, ಮತ, ಪಂಥ ಎನ್ನದೇ ಎಲ್ಲ ಸಮುದಾಯದವರು ಒಂದಾಗಿ ಬದುಕಬೇಕಿದೆ ಎಂದರು.



ಬಸವಕಲ್ಯಾಣದಲ್ಲಿ ಶ್ರೀ ಘನಲಿಂಗ ರುದ್ರಮುನಿ ಜಾತ್ರೆ ನಿಮಿತ್ತ ಏರ್ಪಡಿಸಿದ್ದ ಧರ್ಮ ಸಭೆಯಲ್ಲಿ 'ನೋಡ ಬನ್ನಿ ಗವಿಮಠ' ಗ್ರಂಥ ಲೋಕಾರ್ಪಣೆ ಮಾಡಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ಚಂದ್ರಗುಂಡ ಶಿವಾಚಾರ್ಯರು, ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ ಇತರರಿದ್ದರು.

ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ಚಂದ್ರಗುಂಡ ಶಿವಾಚಾರ್ಯರು, ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಗವಿಮಠ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ, ಪ್ರೊ. ವಿಠೋಬಾ ಡೊಣ್ಣೆಗೌಡರ್, ಸಾಹಿತಿ ವೀರಶೆಟ್ಟಿ ಪಾಟೀಲ್, ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಉಪಸ್ಥಿತರಿದ್ದರು. ಶಿವಕುಮಾರ ಮುನ್ನೋಳಿ ಸ್ವಾಗತಿಸಿದರು. ಅಂಬಾರಾಯ ಸೈದಾಪುರೆ ನಿರೂಪಣೆ ಮಾಡಿದರು.

ತ್ರೀಪುರಾಂತನ ಸದ್ಭಕ್ತರಿಂದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ತುಲಾಭಾರ ಜರುಗಿತು.

> ಒತ್ತಡದ ಜೀವನದಲ್ಲಿ ಮನುಷ್ಯನಿಗೆ ಮಾನಸಿಕ ನೆಮ್ಮದಿ ಅವಶ್ಯವಿದೆ. ಧರ್ಮ ಮಾರ್ಗ ಗುರುಗಳ ಉಪದೇಶ, ಮಾರ್ಗದರ್ಶನದಲ್ಲಿ ನೆಮ್ಮದಿ ಕಾಣಲು ಸಾಧ್ಯ. ಗಳಿಸುವ ಆದಾಯದಲ್ಲಿ ಸ್ವಲ್ಪನಾದರೂ ದಾನ ಧರ್ಮಕ್ಕೆ ಮೀಸಲಿಡಬೇಕು.
>
> | ಶ್ರೀ ರಾಜೇಶ್ವರ ಶಿವಾಚಾರ್ಯರು ತಡೋಳಾ

ಶ್ರೀಗುರು ಮಹಾಲಿಂಗೇಶ್ವರ ಶಿಕ್ಷಣ ಸಂಸ್ಥೆ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

> ಮುಂದಿನ ವರ್ಷದಿಂದ ಹನುಮಾನ ಜಯಂತಿಯಾದ ಐದನೇ ದಿನಕ್ಕೆ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ರಥೋತ್ಸವ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸೋಣ. ರಥೋತ್ಸವವನ್ನು ರಂಭಾಪುರಿ ಜಗದ್ಗುರುಗಳಿಂದ ಉದ್ಘಾಟಿಸಲಾಗುವುದು. ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುವುದು. ಮನೆ-ಮನೆಗೂ ಜೋಳಿಗೆ ಹಿಡಿದು ಆಗಮಿಸುವೆ. ಭಕ್ತರು ನೀಡುವ ಕಾಣಿಕೆ ಸ್ವೀಕರಿಸಿ ರಥೋತ್ಸವಕ್ಕೆ ಸಮರ್ಪಿಸಲಾಗುವುದು.
>
> | ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು

ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ನಡೆದ ಸಮಾರಂಭದಲ್ಲಿ ಸಮಾರಂಭದಲ್ಲಿ ಆಲಗೂಡ ಸರ್ಕಾರಿ ಪ್ರೌಢ ಶಾಲೆ ಮುಖ್ಯಗುರು ರಮೇಶ ರಾಜೋಳೆ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಗವಿ ಮಠದ ಪರಿಸರದಲ್ಲಿ ಪರಿಸರದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಜರುಗಿತು.



ಗವಿಮಠ ಜಾತ್ರೆಯಲ್ಲಿ ರಮೇಶ ರಾಜೋಳೆ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಚಂದ್ರಗುಂಡ ಶ್ರೀ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 12 ಏಪ್ರಿಲ್ 2023
12 APRIL 2023

Scanned with OKEN Scanner

ಸಂಯುಕ್ತ ಕರ್ನಾಟಕ
ಜುಲೈ 14 ಶುಕ್ರವಾರ 2023

ನಾರಾಯಣಪುರದಲ್ಲಿ ವನಮಹೋತ್ಸವ * ಅಭಿನವ ಶ್ರೀ ಸಲಹೆ

'ಕಾಡು ಬೆಳೆಸಿ ನಾಡು ಉಳಿಸಿ ಪ್ರಜ್ಞೆ ಮೂಡಿಸಬೇಕಿದೆ'

ಸಂ.ಕ.ಸಮಾಚಾರ ಬಸವಕಲ್ಯಾಣ: ವಿದ್ಯಾರ್ಥಿಗಳಿಗೆ ಶಿಕ್ಷಣದೊಂದಿಗೆ ಪರಿಸರ ಬಗ್ಗೆ ಕಾಳಜಿ ವಹಿಸಲು ಶ್ರಮಿಸಬೇಕಾದ ಅಗತ್ಯತೆ ಎದುರಾಗಿದೆ. ಕಾಡು ಬೆಳೆಸಿ ನಾಡು ಉಳಿಸಿ ಎಂಬ ಪ್ರಜ್ಞೆ ಮಕ್ಕಳಲ್ಲಿ ಮೂಡಿಸಬೇಕಿದೆ ಎಂದು ತ್ರಿಪುರಾಂತ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಲಹೆ ನೀಡಿದರು. ತಾಲ್ಲೂಕಿನ ನಾರಾಯಣಪೂರ ಗ್ರಾಮದ ಸರ್ಕಾರಿ ಸಂಯುಕ್ತ ಪ್ರೌಢ ಶಾಲೆಯಲ್ಲಿ ಗುರುವಾರ ಕರ್ನಾಟಕ ರೂರಲ್, ಅರ್ಬನ್ ಡೆವಲಪಮೆಂಟ್ (ಕೆಆರ್‌ಯುಡಿ) ಸೊಸೈಟಿ ಬೀದರ್ ಮತ್ತು ಗ್ರಾಮ ಪಂಚಾಯತ್ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ವನಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ, ಇಂದು ಸತ್ಯಕ್ಕೆ ಹಾಗೂ ಶಿವನಿಗೆ ಬೆಲೆ ನೀಡದೆ ಸುಂದರತೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಸುಂದರತೆಗೆ ಹೆಚ್ಚು ಆದ್ಯತೆ ನೀಡದೇ ಪರಿಸರದ ಬಗ್ಗೆ ಕಾಳಜಿ ವಹಿಸಬೇಕು. ಈ ಹಿಂದೆ ವಿಶ್ವಕ್ಕೆ ಎದುರಾದ ಕೊರೊನಾ ನಮಗೆ ದೊಡ್ಡ ಪಾಠ ಕಲಿಸಿದೆ. ಆಮ್ಲಜನಕ ಸಿಗಬೇಕಾದರೆ ಈಗಲಾದರೂ ಎಚ್ಚೆತ್ತುಕೊಂಡು ಪರಸರ ಕಾಪಾಡಿಕೊಂಡು ಬೆಳೆಸಬೇಕಿದೆ. ಹೀಗಾಗಿ ಪ್ರತಿ ವಿದ್ಯಾರ್ಥಿಯು ಕೂಡಾ ಅವರ ಜನ್ಮ ದಿನದ ನಿಮಿತ್ಯ ಒಂದು ಸಸಿ ನೆಟ್ಟು ಅದನ್ನು ಜೋಪಾನವಾಗಿ ಪಾಲಿಸಿ ಪೋಷಿಸಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ. ಹಳ್ಳದ್ ಮಾತನಾಡಿ ಇಂದಿನ ಮಕ್ಕಳು ನಾಳಿನ ಪ್ರಜೆಗಳು ಎನ್ನುತ್ತಿದ್ದರು. ಆದರೆ ಇಂದು ಇಂದಿನ ಮಕ್ಕಳೆ ಇಂದಿನ ಪ್ರಜೆಗಳು ಎಂಬಂತಾಗಿದೆ. ಮಕ್ಕಳಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸುವದು ಅವಶ್ಯಕವಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಜಿಲ್ಲೆಯಾದ್ಯಂತ ವನಮಹೋತ್ಸವ ಆಚರಣೆ ಹೆಚ್ಚು ಒತ್ತು ನೀಡಿದ ಫಲವಾಗಿ ಈ ತಿಂಗಳಲ್ಲಿ ಲಕ್ಷಾನುಗಟ್ಟಲೇ ಸಸಿ ನೆಡಲಾಗಿದೆ ಎಂದ ಅವರು, ಪ್ರತಿ ಮಗುವಿಗೂ ಒಂದೊಂದು ಸಸಿ ವಿತರಣೆ ಮಾಡಿದ್ದು ನಮ್ಮ ತಾಲ್ಲೂಕಿನಲ್ಲಿ ಆರು ಸಾವಿರ ಸಸಿ ವಿತರಣೆ ಮಾಡಿದ್ದಾರೆ. ನೆಟ್ಟ ಸಸಿಗಳು ಜೋಪಾನ ಮಾಡುವ ಮೂಲಕ ಪೋಷಿಸಬೇಕು ಎಂದು ತಿಳಿಸಿದರು. ರಾಜೀವಗಾಂಧಿ ಪರಿಸರ ಪ್ರಶಸ್ತಿ ಪುರಸ್ಕೃತ ಶೈಲೇಂದ್ರ ಕಾವಡಿ ಮಾತನಾಡಿ ನಾವು ಉತ್ತಮವಾಗಿ ಗಾಳಿ ಸೇವನೆ ಮಾಡಬೇಕಾದರೆ ಉತ್ತಮ ಪರಿಸರ ನಿರ್ಮಾಣ ಅವಶ್ಯಕವಾಗಿದೆ. ಹೀಗಾಗಿ ಪ್ರತಿ ವಿದ್ಯಾರ್ಥಿಯು ಕೂಡಾ ತಮ್ಮ ಮನೆಯ ಮುಂಭಾಗದಲ್ಲಿ ಸಸಿ ನೆಡಲು ಸಲಹೆ ನೀಡಿದರು. ನಾರಾಯಣಪೂರ ಗ್ರಾಪಂ ಅಧ್ಯಕ್ಷ ಅಹ್ಮದ ಪಾಶಾ, ಪಿಡಿಓ ಚಂದ್ರಮ್, ಪ್ರೌಢ ಶಾಲೆಯ ಮುಖ್ಯಗುರು ಉಮಾ ಕುಲಕರ್ಣಿ, ಪ್ರಾಥಮಿಕ ಶಾಲೆಯ ಮುಖ್ಯಗುರು ನಾಗಮ್ಮ ಭುರೆ ಉಪಸ್ಥಿತರಿದ್ದರು. ನಿವಿತಾ ಸಂಗಡಿಗರು ಸ್ವಾಗತ ಗೀತೆ ಹಾಡಿದರು. ಮಹಾಂತಯ್ಯ ಸ್ವಾಮಿ ಸ್ವಾಗತಿಸಿದರು. ಶಿಕ್ಷಕ ನಾಗೇಂದ್ರ ಬಿರಾದಾರ ನಿರೂಪಿಸಿದರು. ಶಿವು ಮಠಪತಿ ವಂದಿಸಿದರು.



ಬಸವಕಲ್ಯಾಣ: ನಾರಾಯಣಪೂರ ಗ್ರಾಮದ ಸರ್ಕಾರಿ ಸಂಯುಕ್ತ ಪ್ರೌಢ ಶಾಲೆಯಲ್ಲಿ ಗುರುವಾರ ಹಮ್ಮಿಕೊಂಡ ವನಮಹೋತ್ಸವ ಕಾರ್ಯಕ್ರಮ. ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು.

Scanned with OKEN Scanner

ಘನಲಿಂಗ ರುದ್ರಮುನಿ ಜಾತ್ರೆಗೆ ಸಿದ್ಧತೆ

ಬಸವಕಲ್ಯಾಣದ ಐತಿಹಾಸಿಕ ಹಾಗೂ ಅತ್ಯಂತ ಹಳೆಯ ಕಟ್ಟಡವಿರುವ ದೇವಸ್ಥಾನ

• ಮಾಣಿಕ ಆರ್.ಭುರೆ



ಘನಲಿಂಗ ರುದ್ರಮುನಿ ಸ್ವಾಮೀಜಿ

ಬಸವಕಲ್ಯಾಣ: ನಗರದ ತ್ರಿಪುರಾಂತ ಕೆರೆ ದಂಡೆಯಲ್ಲಿನ ಘನಲಿಂಗ ರುದ್ರಮುನಿ ಗವಿಮಠ ಅಪಾರ ಭಕ್ತರ ಶ್ರದ್ಧಾ ಕೇಂದ್ರವಾಗಿದೆ. ಬಿಲ್ವಪತ್ರೆಯ ವನದಿಂದ ಸುತ್ತುವರೆದು ಹಸಿರು ಪರಿಸರದಿಂದ ಕಂಗೊಳಿಸುವ ಈ ತಾಣದಲ್ಲಿ ಏಪ್ರಿಲ್ 11 ರಂದು ಜಾತ್ರೆ ನಡೆಯಲಿದೆ.

ಕಟ್ಟಡ ರೂಪದಲ್ಲಿರುವ ಶರಣರ ಕೆಲವೇ ಸ್ಮಾರಕಗಳಲ್ಲಿ ಗವಿಮಠ ಪ್ರಮುಖವಾದದ್ದು. ಪೂರ್ವಾಭಿಮುಖವಾದ ಪ್ರವೇಶದ್ವಾರದಿಂದ ಸಭಾ ಮಂಟಪದೊಳಗೆ ಹೋಗಿ ಹಳೆಯ ಕಮಾನುಗಳಿರುವ ಕಟ್ಟಡದ ಮೂಲಕ ಗುಹೆಯನ್ನು ಪ್ರವೇಶಿಸಬೇಕಾಗುತ್ತದೆ. ಪ್ರಶಾಂತ ವಾತಾವರಣವಿರುವ 25 ಅಡಿ ಉದ್ದದ ಗುಹೆಯು ಒಮ್ಮೇಲೆ ಇಬ್ಬರು ಒಳಹೋಗುವಷ್ಟು ದೊಡ್ಡದಾಗಿದೆ. ಇದರ ಕೊನೆಗಿರುವ ಗದ್ದುಗೆಯ ಮೇಲೆ ಲಿಂಗವಿದೆ. ಶಿವರಾತ್ರಿ ಹಾಗೂ ಇತರೆ ಸಂದರ್ಭದಲ್ಲಿ ಸೂರ್ಯನ ಪ್ರಥಮ ಕಿರಣ ಲಿಂಗದ ಮೇಲೆ ಬೀಳುವುದರಿಂದ



ಬಸವಕಲ್ಯಾಣದಲ್ಲಿನ ಘನಲಿಂಗ ರುದ್ರಮುನಿ ಗವಿಮಠದಲ್ಲಿನ ಗದ್ದುಗೆ

ಗುಹೆಯೊಳಗೆ ಬಂಗಾರ ಬಣ್ಣದ ಬೆಳಕು ಪ್ರತಿಫಲಿಸುತ್ತದೆ. ಹೀಗಾಗಿ ನಯನಮನೋಹರ ದೃಶ್ಯ ಸೃಷ್ಟಿ ಆಗುತ್ತದೆ.

ಘನಲಿಂಗ ರುದ್ರಮುನಿಯವರು 12ನೇ ಶತಮಾನದವರು. ಕಾಲಜ್ಞಾನದ ವಚನಗಳನ್ನು ಬರೆದಿದ್ದಾರೆ. ಅವರು ಶರಣರಿಗೆ ದೀಕ್ಷೆ ನೀಡಿರುವ ಕಾರಣ ಇದು ಶರಣರ ದೀಕ್ಷಾ ಸ್ಥಳವೆಂದೂ ಪ್ರಸಿದ್ಧವಾಗಿದೆ. ಅನೇಕ ಶರಣರು ವಚನಗಳನ್ನು ಇಲ್ಲಿ ಸಂಗ್ರಹಿಸಿ ಇಟ್ಟಿದ್ದರು. ಈಗಲೂ ಇಲ್ಲಿ ವಚನಗಳ ಕಟ್ಟುಗಳಿವೆ. ಎದುರಿಗೆ ವಿಶಾಲ ಕೆರೆ, ಆವರಣದಲ್ಲಿ ಸಾಕಷ್ಟು ಜಾಗ, ಕುಡಿಯುವ ನೀರಿನ ವ್ಯವಸ್ಥೆ ಇರುವುದರಿಂದ ಇಲ್ಲಿ ಮದುವೆ ಮತ್ತಿತರೆ ಕಾರ್ಯಕ್ರಮ ಆಯೋಜಿಸಲಾಗುತ್ತದೆ. ಭಕ್ತರ ಅನುಕೂಲಕ್ಕಾಗಿ ಕೆರೆಯ ಮಧ್ಯಭಾಗದಿಂದ ನೇರವಾಗಿ ಗವಿಮಠಕ್ಕೆ ಮೇಲ್ಸೇತುವೆ ರೂಪದಲ್ಲಿ ರಸ್ತೆ ನಿರ್ಮಿಸಬೇಕು ಎಂಬುದು ಹಲವರ ಬೇಡಿಕೆಯಾಗಿದೆ.

'ಶ್ರಾವಣ ತಿಂಗಳಲ್ಲಿ ಪ್ರವಚನ, ಶಿವರಾತ್ರಿಗೆ ಸಾಮೂಹಿಕ ಇಷ್ಟಲಿಂಗ ಪೂಜೆ ಹಮ್ಮಿಕೊಳ್ಳಲಾಗುತ್ತದೆ. ರೇಣುಕಾಚಾರ್ಯರ ಜಯಂತಿ ಮತ್ತು ಯುಗಮಾನೋತ್ಸವ ಸಹ ನಡೆಯುತ್ತಿತ್ತು. ಆದರೆ ಈ ವರ್ಷದಿಂದ



ಧಾರ್ಮಿಕ ಆಚರಣೆಗಳ ಜತೆಯಲ್ಲಿ ಪುಸ್ತಕ ಬಿಡುಗಡೆ, ಉಪನ್ಯಾಸ, ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಯೋಜಿಸಿ ಜಾತ್ರೆಯನ್ನು ವಿಶಿಷ್ಟಗೊಳಿಸಲು ನಿರ್ಣಯಿಸಲಾಗಿದೆ.
ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪೀಠಾಧಿಪತಿ

ಸರ್ಕಾರವೇ ಜಯಂತಿ ಆಚರಿಸುತ್ತಿರುವ ಕಾರಣ ಜಾತ್ರೆ ನಡೆಸುವುದಕ್ಕೆ ತೀರ್ಮಾನಿಸಲಾಯಿತು. ಅಂದು ವಿಶೇಷ ಪೂಜೆ, ಅಭಿಷೇಕದ ಜತೆ ಉಪನ್ಯಾಸ ಇರುತ್ತದೆ. ಶಿಕ್ಷಕ ರಮೇಶ ರಾಜೋಳೆ ಅವರಿಗೆ ಪ್ರಸಕ್ತ ಸಾಲಿನ 'ಅಭಿನವಶ್ರೀ ಪ್ರಶಸ್ತಿ' ನೀಡಲಾಗುತ್ತದೆ. ವಿವಿಧ ಕವಿಗಳು ಬರೆದ 'ನೋಡ ಬನ್ನಿ ಗವಿಮಠ' ಎಂಬ ವೀರಶೆಟ್ಟಿ ಪಾಟೀಲ ಸಂಪಾದಿಸಿದ ಕವನಗಳ ಸಂಕಲನ ಬಿಡುಗಡೆಗೊಳಿಸಲಾಗುತ್ತದೆ' ಎಂದು ಪೀಠಾಧಿಪತಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದ್ದಾರೆ.

ಪ್ರಜಾವಾಣಿ ಸೋಮವಾರ • ಏಪ್ರಿಲ್ 3, 2023

'ಅಜ್ಞಾನ ಹೋಗಲಾಡಿಸುವವ ನಿಜಗುರು'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಶಿಷ್ಯನಲ್ಲಿನ ಅಜ್ಞಾನ ಹೋಗಲಾಡಿಸುವವನೇ ನಿಜಗುರು. ಅದಕ್ಕಾಗಿ ಅವರು ಸ್ವತಃ ಜ್ಞಾನಿ ಆಗುವುದು ಸಹ ಅವಶ್ಯಕ' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಸೋಮವಾರ ನಡೆದ ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಹರ ಮುನಿದರೂ ಗುರು ಕಾಯುವನು ಎಂದು ಹೇಳಲಾಗುತ್ತದೆ. ಹೀಗಾಗಿ ಗುರುವಿನ ಮಹತ್ವ



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಸೋಮವಾರ ನಡೆದ ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಅವರನ್ನು ಶಿಷ್ಯ ಬಳಗದಿಂದ ಸನ್ಮಾನಿಸಲಾಯಿತು

ಬಹಳಷ್ಟಿದೆ. ಅವರ ಉಪದೇಶದಿಂದ ಜೀವನ ಪಾವನ ಆಗುತ್ತದೆ' ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಿಷ್ಯ ಬಳಗದಿಂದ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು.

ಪೂರ್ಣಿಮಾ ರುದ್ರೇಶ್ವರ ದಂಪತಿ ಪಾದಪೂಜೆ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಎ.ಜಿ. ಪಾಟೀಲ, ಮಲ್ಲಿಕಾರ್ಜುನ ಅಲಶೆಟ್ಟಿ, ಸಂಜೀವ ಜಾಧವ, ಸೂರ್ಯಕಾಂತ ಶೀಲವಂತ, ಸೋಮಶೇಖರ ವಸ್ತದ್, ಮಹಾಂತಯ್ಯ ಸ್ವಾಮಿ, ಶಿವಕುಮಾರ ಮುನ್ನೋಳೆ, ಮಲ್ಲಯ್ಯ ಧನ್ನೂರ, ನಟರಾಜ ಬಿರಾದಾರ, ಮಡಿವಾಳಯ್ಯ ಹಿರೇಮಠ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ ಮಂಗಳವಾರ • ಜುಲೈ 4, 2023

Scanned with OKEN Scanner

■ ಧರ್ಮಸಭೆ, ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ, ಗ್ರಂಥ ಲೋಕಾರ್ಪಣೆ ■ ತಡೋಳಾ ರಾಜೇಶ್ವರ ಶ್ರೀ ಸಲಹೆ

ಗುರುವಿನ ಆಶೀರ್ವಾದ-ಉಪದೇಶದಿಂದ ನೆಮ್ಮದಿ



ಬಸವಕಲ್ಯಾಣ: ಗವಿಮಠದಲ್ಲಿ ಮಂಗಳವಾರ ಜರುಗಿದ ಸಮಾರಂಭದಲ್ಲಿ 'ನೋಡ ಬನ್ನಿ ಗವಿಮಠ' ಗ್ರಂಥ ಲೋಕಾರ್ಪಣೆ ಮಾಡಲಾಯಿತು.



ಬಸವಕಲ್ಯಾಣ: ಸಮಾರಂಭದಲ್ಲಿ ಮುಖ್ಯಗುರು ರಮೇಶ ರಾಜೋಳೆ ಶಿವಪುರ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಿ ಸತ್ಕರಿಸಲಾಯಿತು.

ಬಸವಕಲ್ಯಾಣ: ಮನುಷ್ಯನ ಜೀವನದಲ್ಲಿ ಒತ್ತಡ ಹೆಚ್ಚಾಗಿದೆ. ಮಾನಸಿಕ ನೆಮ್ಮದಿ ಅವಶ್ಯವಾಗಿದೆ. ಜೊತೆಗೆ ಗುರುಗಳ ಆಶೀರ್ವಾದದ ಜೊತೆಗೆ ಉಪದೇಶ ಅನುಸರಿಸಿದರೆ ನೆಮ್ಮದಿ ಕಾಣಲು ಸಾಧ್ಯ. ಗಳಿಸುವ ಆದಾಯದಲ್ಲಿ ಸ್ವಲ್ಪವಾದರೂ ದಾನ-ಧರ್ಮಕ್ಕೆ ಮೀಸಲಿಡಬೇಕು ಎಂದು ಎಂದು ತಡೋಳಾದ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಗವಿಮಠದಲ್ಲಿ ಶ್ರೀ ಘನಲಿಂಗ ರುದ್ರಮುನಿ ಜಾತ್ರಾ ಮಹೋತ್ಸವ, ಧರ್ಮಸಭೆ, ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಹಾಗೂ ವೀರಶೆಟ್ಟಿ ಪಾಟೀಲ್ ಸಂಪಾದಿತ ಕವನ ಸಂಕಲನ 'ನೋಡ ಬನ್ನಿ ಗವಿಮಠ' ಗ್ರಂಥ ಲೋಕಾರ್ಪಣೆ ಸಮಾರಂಭದಲ್ಲಿ ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಗವಿಮಠದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮುಂದಿನ ವರ್ಷದಿಂದ ಹನುಮಾನ ಜಯಂತಿಯಾದ ಐದನೇ ದಿನಕ್ಕೆ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ರಥೋತ್ಸವ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸೋಣ. ಹೀಗಾಗಿ ಮನೆ-ಮನೆಗೂ ಜೋಳಿಗೆ ಹಿಡಿದು ಆಗಮಿಸುವೆ. ಭಕ್ತರು ನೀಡುವ ಕಾಣಿಕೆ ಸ್ವೀಕರಿಸಿ ಮುಂದಿನ ರಥೋತ್ಸವಕ್ಕೆ ಸಮರ್ಪಿಸಲಾಗುವುದು. ಜೊತೆಗೆ ರಂಭಾಪುರಿ ಜಗದ್ಗುರುಗಳ ಹಸ್ತದಿಂದ ರಥೋತ್ಸವ ಉದ್ಘಾಟಿಸಲಾಗುವುದು ಎಂದರು.

ಗ್ರಂಥ ಲೋಕಾರ್ಪಣೆ: ಇದೇ ಸಂದರ್ಭದಲ್ಲಿ ವೀರಶೆಟ್ಟಿ ಎಂ.ಪಾಟೀಲ ಅವರ ಸಂಪಾದಿತ ಕವನ ಸಂಕಲನ 'ನೋಡಬನ್ನಿ ಗವಿಮಠ' ಗ್ರಂಥ ಲೋಕಾರ್ಪಣೆ ಮಾಡಲಾಯಿತು. ಮುಖ್ಯಗುರು ರಮೇಶ ರಾಜೋಳೆ ಶಿವಪುರ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಿ ಸತ್ಕರಿಸಲಾಯಿತು. ಮತ್ತು ಗವಿಮಠದ ಪರಿಸರದಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರ ಜರುಗಿತು.

ನಂತರ ಶ್ರೀ ಗುರು ಮಹಾಲಿಂಗೇಶ್ವರ ಶಿಕ್ಷಣ ಸಂಸ್ಥೆ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ಅಲ್ಲದೇ ಶ್ರೀಪುರಾಂತನ ಭಕ್ತರಿಂದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ತುಲಾಭಾರ ಜರುಗಿತು.

ಈ ವೇಳೆ ಹಿರನಾಗಾಂವ ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ಚಂದ್ರಗುಂಡ ಶಿವಾಚಾರ್ಯರು, ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣಪ್ಪ ಬಿರಾದಾರ, ಶಾಂತಲಿಂಗ - ಮಠಪತಿ, ವಿಠೋಬಾ ಡೊಣ್ಣೆಗೌಡರ್, ವೀರಶೆಟ್ಟಿ ಪಾಟೀಲ, ಬಸವಂತಪ್ಪ ಲವಾರೆ ಇದ್ದರು.

ಉದಯವಾಣಿ ಕಲಬುರಗಿ
ಬುಧವಾರ, ಏಪ್ರಿಲ್ 12, 2023



ಬಸವ ಕಲ್ಯಾಣದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವ ನಿಮಿತ್ತ ನಗರದ ಐತಿಹಾಸಿಕ ಕೋಟೆಯಿಂದ ಕಾರ್ಯಕ್ರಮದ ಪೂರ್ವಭಾವಿಯಾಗಿ ಭವ್ಯ ಮೆರವಣಿಗೆ ಜರುಗಿತು. ವಿವಿಧ ಮಠಾಧೀಶರು, ಸಮಾಜದ ಗಣ್ಯರು ಇದ್ದರು



ಬಸವಕಲ್ಯಾಣದ ಗವಿ ಮಠದಲ್ಲಿ 11ರಂದು ನಡೆಯಲಿರುವ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಜಾತ್ರೆಯ ಆಮಂತ್ರಣ ಪತ್ರಿಕೆಯನ್ನು ಗವಿಮಠದಲ್ಲಿ ಮಂಗಳವಾರ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬಿಡುಗಡೆ ಮಾಡಿದರು. ಸೋಮಲಿಂಗ ಕೆ, ಆನಂದ ತೊಗಲೆ ಇತರರಿದ್ದರು.



ಬಸವಕಲ್ಯಾಣದ ವಾರ್ಡ್ 23ರ ಸರ್ಕಾರಿ ಪ್ರಾಥಮಿಕ ಶಾಲೆ ಮತಗಟ್ಟೆಯಲ್ಲಿ ತ್ರಿಪುರಾಂತನ (ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮತ ಚಲಾಯಿಸಿದರು.

Scanned with OKEN Scanner

ರೇಣುಕಾಚಾರ್ಯರ ಆದರ್ಶ ಅನುಸರಿಸಿ

ತಾಲೂಕು ಆಡಳಿತದಿಂದ ಜಗದ್ಗುರು ಶ್ರೀ ರೇಣುಕಾಚಾರ್ಯ ಜಯಂತಿ ಆಚರಣೆ



ಬಸವಕಲ್ಯಾಣ ತಾಲೂಕು ಆಡಳಿತದ ವತಿಯಿಂದ ಸೋಮವಾರ ಹಮ್ಮಿಕೊಂಡ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಮಠಾಧೀಶರು ಹಾಗೂ ಗಣ್ಯರು ಪಾಲ್ಗೊಂಡಿದ್ದರು.

ರಾಜ್ಯ ಸರಕಾರದಿಂದ ಈ ವರ್ಷ ರೇಣುಕಾಚಾರ್ಯ ಜಯಂತಿ ಆಚರಿಸಲು ಮುಂದಾಗಿರುವದು ಹರ್ಷ ತಂದಿದೆ. ಇಲ್ಲಿನೀಡುವ ರೇಣುಕರ ತತ್ವಗಳು ನಮ್ಮ ನಿಜ ಜೀವನದಲ್ಲಿ ಆಳವಡಿಸಿಕೊಂಡು ಆಚರಣೆಗೆ ತರಬೇಕು ಆಂದಾಗ ಮಾತ್ರ ಆ ತತ್ವಗಳು ಉಳಿಯುತ್ತವೆ. ಜತೆಗೆ ಅಭಿಮಾನದಿಂದ ಧರ್ಮದ ಆಚರ ಣೆಗಳು ಉಳಿಸಿ ಬೆಳೆಸಿ ಬಾಳಬೇಕು.

- ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಹಿರನಾಗಾಂವ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಮಾನವ ಧರ್ಮಕ್ಕೆ ಜಯವಾಗಲಿ ಧರ್ಮ ದಿಂದಲೇ ವಿಶ್ವಕ್ಕೆ ಶಾಂತಿ ಎಂದು ಜಗದ್ಗುರು ರೇಣುಕಾಚಾರ್ಯರು ತಿಳಿಸಿದ್ದು, ಅವರು ನೀಡಿರುವ ತತ್ವಾದರ್ಶ ಗಳನ್ನು ನಮ್ಮ ಜೀವನದಲ್ಲಿ ಆಳವಡಿ ಸಿಕೊಂಡು ಮುಂದೆ ಸಾಗಬೇಕು ಎಂದು ಹಿರನಾಗಾಂವನ ಶ್ರೀ ಜಯಶಾಂ ತಲಿಂಗ ಸ್ವಾಮೀಜಿ ತಿಳಿಸಿದರು.

ನಗರದ ಶ್ರೀ ಬಸವೇಶ್ವರ ವೃತ್ತದ ಬಳಿ ಇರುವ ಬಿಕೆಡಿಬಿ ಕಲ್ಯಾಣ ಮಂಟಪದಲ್ಲಿ ಸೋಮವಾರ ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯ ಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಶಾಸಕ ಶರಣು ಸಲಗರ ಮಾತನಾಡಿ, ಮಾನವ ಧರ್ಮಕ್ಕೆ ಜುಯವಾಗಲಿ, ಜಗತ್ತಿನ ಎಲ್ಲ ಧರ್ಮಗಳಿಗೆ ಜಯ ವಾಗಲಿ ಪ್ರತಿಯೊಬ್ಬರೂ ನೆಮ್ಮದಿ ಯಿಂದ ಬದು ಕಲಿ ಎಂದು ರೇಣುಕಾ ಚಾರ್ಯ ರರು ಭೋಧಿಸಿದ್ದಾರೆ. ಸರಕಾರ ಈ ವರ್ಷ ಜಯಂತಿ ಆಚರಿಸಲು ಮುಂದಾ ಗಿರುವು ದಕ್ಕೆ ಕೃತಜ್ಞತೆ ಸಲ್ಲಿಸುವೆ. ಮುಂದಿನ ವರ್ಷ ಇದಕ್ಕಿಂತ ಅದ್ದೂರಿ ಯಾಗಿ ಆಚರಿಸೋಣ. ನಿಮ್ಮೆಲ್ಲರ ಪ್ರೀತಿ, ವಿಶ್ವಾಸ ಹಾರೈಕೆ ನನ್ನ ಮೇಲಿರಲಿ ಎಂದರು.

ಡಾ. ಬಸವರಾಜ ಸ್ವಾಮಿ ವಿಶೇಷ ಉಪನ್ಯಾಸ ನೀಡಿದರು.

ವೇದಿಕೆಯಲ್ಲಿ ತ್ರಿಪುರಾಂತನ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾ ರ್ಯರು, ರಾಜೇಶ್ವರನ ಶ್ರೀ ಘನಲಿಂಗ ರುದ್ರಮುನಿ ಶಿವಾಚಾ ರ್ಯರು, ಸದಲಾ ಪುರದ ಶ್ರೀ ಸಿದ್ದಲಿಂಗ ಶಿವಾಚಾರ್ಯರು, ಹಳ್ಳಖೇಡನ ಶ್ರೀಪತಿ ಪಂಡಿತರಾದ್ಯ ಶಿವಾಚಾರ್ಯರು, ಬಾಂಬೋಳನ ಶ್ರೀ ಮುರುಗೇಂದ್ರ ಮಹಾಸ್ವಾಮೀಜಿ, ಸಸ್ತಾಪುರನ ಡಾ. ಈಶ್ವರಾನಂದ ಸ್ವಾಮೀಜಿ, ತಹಸೀಲ್ದಾರ ಶಾಂತಗೌಡ ಬಿರಾದಾರ, ನಗರ ಸಭೆ ಪೌರಾಯುಕ್ತ ಶಿವಶರಣಪ್ಪ ಸಜ್ಜನಶೆಟ್ಟಿ ಸೇರಿದಂತೆ ಇತರೆ ಇಲಾಖೆಯ ಅಧಿ ಕಾರಿಗಳು ಉಪಸ್ಥಿತರಿದ್ದರು. ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಶಿವಕುಮಾರ ಜಡಗೆ ನಿರೂಪಿಸಿದರು.

ಮೆರವಣಿಗೆ: ಇದಕ್ಕೂ ಮುನ್ನ ನಗರದ ಐತಿಹಾಸಿಕ ಕೋಟೆಯಿಂದ ಮುಖ್ಯ ರಸ್ತೆಯ ಮಾರ್ಗವಾಗಿ ಕಾರ್ಯಕ್ರಮದ ವೇದಿಕೆಯವರೆಗೂ ಜಗದ್ಗುರು ರೇಣುಕಾ ಚಾರ್ಯರ ಭಾವಚಿತ್ರದ ಅದ್ದೂರಿ ಮೆರವಣಿಗೆ ಜರುಗಿತು. ತೆರೆದ ವಾಹ ನದಲ್ಲಿ ರೇಣುಕಾಚಾರ್ಯರರ ಭಾವಚಿತ್ರ ಇಟ್ಟು ಮೆರವಣಿಗೆ ನಡೆಸಲಾಯಿತು. ಮುಖ್ಯ ರಸ್ತೆ ಮಾರ್ಗವಾಗಿ ಅಂಬೇಡ್ಕರ ವೃತ್ತದವರೆಗೂ ಸಾಗಿದ ನಂತರ ಶ್ರೀ ಬಸವೇಶ್ವರ ವೃತ್ತದಲ್ಲಿರುವ ಬಿಕೆಡಿಬಿ ಕಲ್ಯಾಣ ಮಂಟಪದವರೆಗೆ ಮೆರವಣಿಗೆ ಸಾಗಿತು. ತ್ರೀಪುರಾಂತನ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾ ರ್ಯರರು, ಗಡಿಗೌಂಡ ಗ್ರಾಂವನ ಶಾಂತವೀರ ಶಿವಾಚಾ ರ್ಯರರು, ಕಿಟ್ಟಾದ ಶ್ರೀ ಸಿದ್ದೇಶ್ವರ ಶಿವಾಚಾ ರ್ಯರರು, ಕಾಂಗ್ರೇಸ್ ಮು ಖಂಡ ಧನರಾಜ ತಾಳಂಪಳ್ಳಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಭಾಗವಹಿಸಿದರು.

ವಿಜಯ ಕರ್ನಾಟಕ ಮಂಗಳವಾರ,21 ಮಾರ್ಚ್ 2023



ಬಸವಕಲ್ಯಾಣದ ಗವಿಮಠದಲ್ಲಿ ಗುರು ಪೂರ್ಣಿಮೆ ನಿಮಿತ್ತ ಸೋಮವಾರ ಭಕ್ತರಿಂದ ಗುರುವಂದನೆ ಕಾರ್ಯಕ್ರಮದಲ್ಲಿ ಪ್ರೊ. ರುದ್ರೇಶ್ವರ ದಂಪತಿಯಿಂದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಾದಪೂಜೆ ಜರುಗಿತು.

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಗುರು ಒಬ್ಬವ್ಯಕ್ತಿ ಅಲ್ಲ ಧರ್ಮ-ಆಧ್ಯಾತ್ಮ ಮಾರ್ಗದರ್ಶಕ. ಯಾರು ಜ್ಞಾನ ಕೊಡುತ್ತಾರೋ ಅವರೇ ಗುರುಗಳು. ಸಾಧಕರು ಮತ್ತು ಶಿಷ್ಯರು ಪರಮಾತ್ಮನನ್ನು ಅರಿಯಲು ಗುರುಗಳ ಅವಶ್ಯಕತೆ ಇದೆ ಎಂದು ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಗವಿ ಮಠದಲ್ಲಿ ಗುರು ಪೂರ್ಣಿಮೆ ನಿಮಿತ್ತ ಸೋಮವಾರ ಭಕ್ತರಿಂದ ಗುರುವಂದನೆ ಸ್ವೀಕರಿಸಿ ಆಶೀರ್ವಚನ ನೀಡಿದ ಶ್ರೀಗಳು, ಭಕ್ತರ ಶ್ರೇಯೋಭಿವೃದ್ಧಿಯೇ ಗುರುಗಳ ಆಶಯವಾಗಿತ್ತದೆ. ಗುರುಗಳು ತಮ್ಮ ಉಪದೇಶಾಮೃತದಿಂದ ಭಕ್ತರ ಅಜ್ಞಾನ ದೂರಗೊಳಿಸಿ ಸುಜ್ಞಾನ ಕರುಣಿಸುವರು. ಹೀಗಾಗಿ ಗುರುವಿನ ಅನುಗ್ರಹ ಎಲ್ಲರಿಗೂ ಆವಶ್ಯಕವಾಗಿದೆ ಎಂದರು.

ಪಾದಪೂಜೆ: ಪ್ರೊ. ರುದ್ರೇಶ್ವರ ದಂಪತಿ ಗುರು ಪೂರ್ಣಿಮೆ ನಿಮಿತ್ತ ಗುರುಗಳ ಪಾದಪೂಜೆ ಮಾಡಿ ಆಶೀರ್ವಾದ ಪಡೆದರು. ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಪ್ರಾಚಾರ್ಯ ಪ್ರೊ.ಸೂರ್ಯಕಾಂತ ಶೀಲವಂತ, ಪ್ರಾಚಾರ್ಯ ಎ. ಜಿ. ಪಾಟೀಲ್, ಮಲ್ಲಿಕಾರ್ಜುನ ಆಲಶೆಟ್ಟಿ ಬಾಬುರಾವ ಚಳಕಾಪುರೆ, ಚನ್ನಪ್ಪ ಅಳ್ಳಿಕಟ್ಟಿ ವಿಜಯಕುಮಾರ ರೆಡ್ಡಿ ಸೋಮಶೇಖರ ವಸ್ತದ, ಮಹಾಂತಯ್ಯ ಸ್ವಾಮಿ, ಸಂಜಯ ಜಾಧವ, ಶಿವಕುಮಾರ ಮುನ್ನೊಳ್ಳಿ ಬಾಬು ಪ್ರತಾಪುರ, ಮಲ್ಲಯ್ಯ ಧನ್ನೂರ, ನಟರಾಜ ಬಿರಾದಾರ, ಮಡಿವಾಳಯ್ಯ ಹಿರೇಮಠ, ಬಸವರಾಜ ಬಿರಾದಾರ, ಶೀಲಾದೇವಿ ಕಲ್ಯಾಣಿ, ಭಾಗ್ಯಶ್ರೀ .ಎಸ್ .ಮುನ್ನೊಳ್ಳಿ, ಪೂರ್ಣಿಮಾ ರುದ್ರೇಶ್ವರ ಪಾಲ್ಗೊಂಡಿದ್ದ ರು. ಇದೇವೇಳೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕದ ನೂತನ ಪದಾಧಿ ಕಾರಿಗಳ ಸನ್ಮಾನ ಕಾರ್ಯಕ್ರಮ ಜರುಗಿತು. ಉಪಾಧ್ಯಕ್ಷ ಪ್ರಲ್ಲಾದ ಡಿಕೆ, ಪ್ರಧಾನ ಕಾರ್ಯದರ್ಶಿ ಉದಯಕುಮಾರ ಮುಳೆ, ಕಾರ್ಯದರ್ಶಿ ಶಿವಪುತ್ರ ಪಾಟೀಲ್, ಕೋಶಾಧ್ಯಕ್ಷ ಪ್ರದೀಪ ವಿಸಾಜಿ, ಗೌರವ ಸಲಹೆಗಾರ ವೀರಶೆಟ್ಟಿ ಮಲಶೆಟ್ಟಿ ಇತರರನ್ನು ಸನ್ಮಾನಿಸಲಾಯಿತು.

ವಿಜಯ ಕರ್ನಾಟಕ ಕಲಬುರಗಿ, ಮಂಗಳವಾರ,4 ಜುಲೈ 2023

Scanned with OKEN Scanner

ಗವಿ ಮಠದಲ್ಲಿ ಶ್ರೀ ಘನಲಿಂಗ ರುದ್ರಮುನಿ ಜಾತ್ರಾ ಮಹೋತ್ಸವ | ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ

ಮುಂದಿನ ವರ್ಷದಿಂದ ಅದ್ಧೂರಿ ರಥೋತ್ಸವ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಗವಿ ಮಠದ ಪರಿಸರದಲ್ಲಿ ಇಷ್ಟೊಂದು ಅಭಿವೃದ್ಧಿ ಕಾಣಲು ಭಕ್ತರೇ ಕಾರಣರಾಗಿದ್ದಾರೆ. ಮನಪೂರ್ವಕವಾಗಿ ಭಕ್ತರು ನೀಡುತ್ತಿರುವ ತನು, ಮನ, ಧನದಿಂದ ಸಹಾಯ-ಸಹಕಾರ ನೀಡುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ ಎಂದು ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಹೇಳಿದರು.

ಇಲ್ಲಿನ ಗವಿಮಠದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಮಂಗಳವಾರ ನಡೆದ ಶ್ರೀ ಘನಲಿಂಗ ರುದ್ರಮುನಿ ಜಾತ್ರಾ ಮಹೋತ್ಸವ, ಧರ್ಮ ಸಭೆ, ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಾಗೂ ವೀರಶೆಟ್ಟಿ ಪಾಟೀಲ್ ಅವರ ಸಂಪಾದಿತ ಕವನ ಸಂಕಲನ ನೋಡಬನ್ನಿ ಗವಿಮಠ ಗ್ರಂಥ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಶ್ರೀಗಳು, ಗವಿ ಮಠದಲ್ಲಿ ಮುಂದಿನ ವರ್ಷದಿಂದ ಶ್ರೀ ಘನಲಿಂಗ ರುದ್ರಮುನಿ ಜಾತ್ರಾ ಮಹೋತ್ಸವ ಬಹಳ ಅರ್ಥಪೂರ್ಣವಾಗಿ ಆಚರಿಸೋಣ. ಕಲೆ, ಸಾಹಿತ್ಯ, ಸಂಸ್ಕೃತಿಗೆ ಆದ್ಯತೆ ನೀಡಿ ಭಕ್ತರಿಗೆ ಜ್ಞಾನವು ಮನ ಮುಟ್ಟುವಂತೆ ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗುವುದು ಎಂದರು.

ಇದೇ ವೇಳೆ ವೀರಶೆಟ್ಟಿ ಎಂ.ಪಾಟೀಲ್ ಅವರ ಸಂಪಾದಿತ ಕವನ ಸಂಕಲನ ನೋಡಬನ್ನಿ ಗವಿಮಠ ಗ್ರಂಥ ಲೋಕಾರ್ಪಣೆಗೊಳಿಸಲಾಯಿತು.



ಬಸವಕಲ್ಯಾಣದ ಗವಿಮಠದಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ನೋಡಬನ್ನಿ ಗವಿಮಠ ಗ್ರಂಥ ಲೋಕಾರ್ಪಣೆ ಮಾಡಲಾಯಿತು. ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ಚಂದ್ರಗುಂಡ ಶಿವಾಚಾರ್ಯರು, ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣಪ್ಪಾ ಬಿರಾದಾರ ಇದ್ದರು.

ರಂಭಾಪುರಿ ಶ್ರೀಗಳಿಂದ ರಥೋತ್ಸವ ಉದ್ಘಾಟನೆ

ಜಾತಿ, ಮತ, ಪಂತ, ಭೇದ ಮರೆತು ಸಮಾಜದಲ್ಲಿ ಎಲ್ಲರೂ ಒಂದಾಗಿ ಬದುಕಿ ಬಾಳಬೇಕಿದೆ. ಗವಿ ಮಠಕ್ಕೆ ಎಲ್ಲ ಸಮಾಜದ ಜನರು ಆಗಮಿಸಿ ಶ್ರೀಗಳ ಗದ್ದುಗೆಯ ದರ್ಶನ ಪಡೆಯುತ್ತಿದ್ದಾರೆ ಎಂದು ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು. ಮುಂದಿನ ವರ್ಷದಿಂದ ಹನುಮಾನ ಜಯಂತಿಯಾದ ಐದನೇ ದಿನಕ್ಕೆ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ರಥೋತ್ಸವ ಅದ್ಧೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸೋಣ. ಹೀಗಾಗಿ ಮನೆ-ಮನೆಗೂ ಜೋಳಿಗೆ ಹಿಡಿದು ಆಗಮಿಸುವೆ. ಭಕ್ತರು ನೀಡುವ ಕಾಣಿಕೆ ಸ್ವೀಕರಿಸಿ ಮುಂದಿನ ರಥೋತ್ಸವಕ್ಕೆ ಸಮರ್ಪಿಸಲಾಗುವುದು. ಜತೆಗೆ ರಂಭಾಪುರಿ ಜಗದ್ಗುರುಗಳ ಲಿಂಗ ಹಸ್ತದಿಂದ ರಥೋತ್ಸವ ಉದ್ಘಾಟಿಸಲಾಗುವುದು ಎಂದರು.

ಮುಖ್ಯಗುರು ರಮೇಶ ರಾಜೋಳೆ ಶಿವಪುರ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮತ್ತು ಗವಿ ಮಠದ ಪರಿಸರದಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರ ಜರುಗಿತು. ಶ್ರೀ ಗುರು ಮಹಾಲಿಂಗೇಶ್ವರ ಶಿಕ್ಷಣ ಸಂಸ್ಥೆ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಅಲ್ಲದೆ ತ್ರಿಪುರಾಂತನ ಸದ್ಭಕ್ತರಿಂದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ತುಲಾಭಾರ ಜರುಗಿತು. ವೇದಿಕೆಯಲ್ಲಿ ಹಿರನಾಗಾಂವನ ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ಚಂದ್ರಗುಂಡ ಶಿವಾಚಾರ್ಯರು, ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣಪ್ಪ ಬಿರಾದಾರ, ಶಾಂತಲಿಂಗ ಮಠಪತಿ, ವಿಠೋಬಾ ಡೊಣ್ಣೆಗೌಡರ್, ವೀರಶೆಟ್ಟಿ ಎಂ. ಪಾಟೀಲ, ಬಸವಂತಪ್ಪ ಲವಾರೆ ಇದ್ದರು. ಶಿವಕುಮಾರ ಬಿ. ಮುನ್ನೋಳೆ ಸ್ವಾಗತಿಸಿದರು. ಅಂಬಾರಾಯ ಸೈದಾಪುರ ನಿರೂಪಿಸಿದರು.

ವಿಜಯ ಕರ್ನಾಟಕ | ಕಲಬುರಗಿ, ಬುಧವಾರ,12 ಏಪ್ರಿಲ್ 2023

ಘನಲಿಂಗ ರುದ್ರಮುನಿ ಪ್ರಥಮ ಜಾತ್ರೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ನಗರದ ತ್ರಿಪುರಾಂತ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಏಪ್ರಿಲ್ 11ರಂದು ಜಾತ್ರಾ ಮಹೋತ್ಸವ ಅಂಗವಾಗಿ ಧರ್ಮಸಭೆ ಹಾಗೂ ಅಭಿನವ ಘನಲಿಂಗಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಕಾರ್ಯಕ್ರಮದ ಆಮಂತ್ರಣ ಪತ್ರಿಕೆಗಳನ್ನು ಬುಧವಾರ ಬಿಡುಗಡೆಗೊಳಿಸಲಾಯಿತು.

ಅಂದು ಬೆಳಿಗ್ಗೆ 11.40 ಗಂಟೆಗೆ ನಡೆಯುವ ಧರ್ಮಸಭೆಯನ್ನು ಹೊನ್ನಕಿರಣಗಿ ಚಂದ್ರಗುಂಡ ಶಿವಾಚಾರ್ಯರು ಉದ್ಘಾಟಿಸುವರು. ಹಿರೇನಾಗಾಂವ ಜಯಶಾಂತಲಿಂಗ ಶಿವಾಚಾರ್ಯರು ಸಾನಿಧ್ಯ ವಹಿಸುವರು. ತಡೋಳಾ ರಾಜೇಶ್ವರ ಶಿವಾಚಾರ್ಯರು 'ನೋಡ ಬನ್ನಿ ಗವಿಮಠ' ಕವನ ಸಂಕಲನ ಬಿಡುಗಡೆ ಮಾಡುವರು. ಹಳ್ಳಿಖೇಡ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನಿಧ್ಯ ವಹಿಸುವರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಜಾತ್ರೆಯ ಆಮಂತ್ರಣ ಪತ್ರಿಕೆಗಳನ್ನು ಬಿಡುಗಡೆ ಮಾಡಿದರು

ರಮೇಶ ರಾಜೋಳೆ ಅವರಿಗೆ 'ಅಭಿನವ ಘನಲಿಂಗ ಶ್ರೀ' ಪ್ರಶಸ್ತಿ ನೀಡಲಾಗುತ್ತದೆ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಅವರ ತುಲಾಭಾರ ನೆರವೇರಲಿದೆ. ಮತ್ತು ಸಾಧಕರಿಗೆ ಶ್ರೀಗುರು ರತ್ನ ನೀಡಲಾಗುತ್ತದೆ. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸುವರು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಶಾಂತಲಿಂಗ ಮಠಪತಿ, ಉಪನ್ಯಾಸಕ ವಿಠೋಬಾ ಡೊಣ್ಣೆಗೌಡರ್, ವೀರಶೆಟ್ಟಿ ಪಾಟೀಲ, ಅಂಬಾರಾಯ ಸೈದಾಪುರೆ, ಶಿವಕುಮಾರ ಮುನ್ನೋಳೆ ಪಾಲ್ಗೊಳ್ಳುವರು. ಇಡೀ ದಿನ ತುಳಸಿ ಆಪ್ಟಿಕಲ್ಸ್ ಸೆಂಟರ್‌ನಿಂದ ಕಣ್ಣಿನ ಉಚಿತ ತಪಾಸಣೆ ನಡೆಯಲಿದೆ.

ಪ್ರಜಾವಾಣಿ | ಗುರುವಾರ • ಏಪ್ರಿಲ್ 6, 2023

Scanned with OKEN Scanner

ಶ್ರೀ ಘನಲಿಂಗ ರುದ್ರಮುನಿ ಜಾತ್ರಾ ಮಹೋತ್ಸವ, ಧರ್ಮ ಸಭೆ * : ರಾಜೇಶ್ವರ ಶಿವಾಚಾರ್ಯರು

'ಮಠಕ್ಕೆ ಯಾವುದೇ ಆಸ್ತಿ ಇಲ್ಲ, ಭಕ್ತರೇ ಆಸ್ತಿ

ಸಂ.ಕ.ಸಮಾಚಾರ ಬಸವಕಲ್ಯಾಣ : ಮಠಕ್ಕೆ ಯಾವುದೇ ಆಸ್ತಿ ಇಲ್ಲ, ಭಕ್ತರೆ ಆಸ್ತಿಯಾಗಿದ್ದಾರೆ. ಗವಿ ಮಠದ ಪರಿಸರದಲ್ಲಿ ಇಷ್ಟೊಂದು ಅಭಿವೃದ್ಧಿ ಕಾಣಲು ಭಕ್ತರೇ ಕಾರಣರಾಗಿದ್ದಾರೆ ಎಂದು ತಡೋಳಾದ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಇಲ್ಲಿಯ ಗವಿಮಠದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಮಂಗಳವಾರ ಜರುಗಿದ ಶ್ರೀ ಘನಲಿಂಗ ರುದ್ರಮುನಿ ಜಾತ್ರಾ ಮಹೋತ್ಸವ, ಧರ್ಮ ಸಭೆ, ಅಭಿನವ ಘನಲಿಂಗಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಾಗೂ ವಿರಶೆಟ್ಟಿ ಪಾಟೀಲ್ ಅವರ ಸಂಪಾದಿತ ಕವನ ಸಂಕಲನ ನೋಡ ಬನ್ನಿ ಗವಿಮಠ ಗ್ರಂಥ ಲೋಕಾರ್ಪಣೆ ಸಮಾರಂಭದಲ್ಲಿ ಪುಸ್ತಕ ಬಿಡುಗಡೆಗೊಳಿಸಿ ಶ್ರೀಗಳು ಮಾತನಾಡಿದರು. ಗವಿ ಮಠದ ಶ್ರೀ ಘನಲಿಂಗ ರುದ್ರಮುನಿಗಳ ಪ್ರಥಮ ಜಾತ್ರಾಮಹೋತ್ಸವ ಅರ್ಥಪೂರ್ಣವಾಗಿ ಆಚರಿಸಲಾಗಿದೆ. ಮುಂದಿನ ವರ್ಷದಿಂದ ಜಾತ್ರಾ ಮಹೋತ್ಸವವು ವೈಭವದಿಂದ ಆಚರಿಸೋಣ. ಕಲೆ, ಸಾಹಿತ್ಯ, ಸಂಸ್ಕೃತಿಗೆ ಆದ್ಯತೆ ನೀಡಿ ಭಕ್ತರಿಗೆ ಜ್ಞಾನವು ಮನ ಮುಟ್ಟುವಂತೆ ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗುವದು ಹಾಗೂ ಸುಂದರವಾದ ರಥೋತ್ಸವ ಆಚರಿಸಲಾಗುವದು ಎಂದರು.

ಗವಿ ಮಠದ ಪಿಠಾಧಿಪತಿ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನ್ನಾಡಿ ಜಾತಿ, ಮಥ, ಪಂತ, ಭೇದ ಮರೆತು ಸಮಾಜದಲ್ಲಿ ಎಲ್ಲರೂ ಒಂದಾಗಿ ಬದುಕಿ ಬಾಳಬೇಕಿದೆ. ಮುಂದಿನ ವರ್ಷದಿಂದ ಹನುಮಾನ ಜಯಂತಿಯಾದ ಐದನೇ ದಿನಕ್ಕೆ ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯರ ರಥೋತ್ಸವ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸೋಣ. ಹೀಗಾಗಿ ಮನೆ-ಮನೆಗೂ ಜೋಳಿಗೆ ಹಿಡಿದು ಆಗಮಿಸುವೆ. ಭಕ್ತರು ನೀಡುವ ಕಾಣಿಕೆ ಸ್ವೀಕರಿಸಿ ಮುಂದಿನ ರಥೋತ್ಸವಕ್ಕೆ ಸಮರ್ಪಿಸಲಾಗುವದು. ರಂಭಾಪೂರಿ ಜಗದ್ಗುರುಗಳಿಂದ ರಥೋತ್ಸವ ಉದ್ಘಾಟಿಸಲಾಗುವದು ಎಂದರು.



ಬಸವಕಲ್ಯಾಣ: ತ್ರಿಪುರಾಂತ ಗವಿಮಠದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಮಂಗಳವಾರ ಜರುಗಿದ ಸಮಾರಂಭದಲ್ಲಿ ಮುಖ್ಯಗರು ರಮೇಶ ರಾಜೋಳೆಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಿ ಸತ್ಕರಿಸಲಾಯಿತು.

ಕಾರ್ಯಕ್ರಮದಲ್ಲಿ ವೀರಶೆಟ್ಟಿ ಎಂ.ಪಾಟೀಲ್ ಅವರ ಸಂಪಾದಿತ ಕವನ ಸಂಕಲನ ನೋಡಬನ್ನಿ ಗವಿಮಠ ಗ್ರಂಥ ಲೋಕಾರ್ಪಣೆಗೊಳಿಸಲಾಯಿತು. ಮುಖ್ಯಗರು ರಮೇಶ ರಾಜೋಳೆ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಿ ಸತ್ಕರಿಸಲಾಯಿತು.

ಜಾತ್ರಾಮಹೋತ್ಸವ ನಿಮಿತ್ತ ಗವಿ ಮಠದ ಪರಿಸರದಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರ ಜರುಗಿತು. ಶ್ರೀ ಗುರು ಮಹಾಲಿಂಗೇಶ್ವರ ಶಿಕ್ಷಣ ಸಂಸ್ಥೆ ಮಕ್ಕಳಿಂದ ಜರುಗಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸೆಳೆದವು. ಇದೇ ವೇಳೆ ತ್ರಿಪುರಾಂತನ ಸದ್ಭಕ್ತರಿಂದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರ ತುಲಾಭಾರ ಜರುಗಿತು. ಹಿರನಾಗಾಂವ್‌ನ ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ಚಂದ್ರಗುಂಡ ಶಿವಾಚಾರ್ಯರು, ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣಪ್ಪಾ ಬಿರಾದಾರ, ಶಾಂತಲಿಂಗ ಮಠಪತಿ, ವಿಠೋಬಾ ಡೊಣ್ಣೆಗೌಡರ್, ವೀರಶೆಟ್ಟಿ ಎಂ. ಪಾಟೀಲ್, ಬಸವಂತಪ್ಪಾ ಲವಾರೆ ಉಪಸ್ಥಿತರಿದ್ದರು. ಶಿವಕುಮಾರ ಬಿ. ಮುನ್ನೋಳೆ ಸ್ವಾಗತಿಸಿದರು. ಅಂಬಾರಾಯ ಸೈದಾಪೂರೆ ನಿರೂಪಿಸಿದರು.

Scanned with OKEN Scanner

ಶ್ರೀ ಡಾ.ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯ ನುಡಿ | ಗವಿಮಠದಲ್ಲಿ ಕಾರ್ಯಕ್ರಮ

ಅಜ್ಞಾನ ದೂರ ಮಾಡಿ ಸುಜ್ಞಾನ ಕರುಣಿಸುವ ಗುರು

ಬಸವಕಲ್ಯಾಣ: ಗುರು ಒಬ್ಬ ವ್ಯಕ್ತಿ ಅಲ್ಲ. ಧರ್ಮ-ಆಧ್ಯಾತ್ಮದ ಮಾರ್ಗದರ್ಶಕ. ಇತರರಿಗೆ ಜ್ಞಾನ ಹಂಚುವ ಗುರು. ಸಾಧಕರು ಮತ್ತು ಶಿಷ್ಯರು ಪರಮಾತ್ಮನನ್ನು ಅರಿಯುವ ಮಾರ್ಗದತ್ತ ಸಾಗುವಲ್ಲಿ ಗುರುವಿನ ಪಾತ್ರ ಪ್ರಮುಖವಾಗಿದೆ ಎಂದು ಗವಿಮಠದ ಶ್ರೀ ಡಾ.ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಇಲ್ಲಿನ ಗವಿಮಠದಲ್ಲಿ ಗುರು ಪೂರ್ಣಿಮೆ ನಿಮಿತ್ತ ಸೋಮವಾರ ಭಕ್ತರಿಂದ ಗುರುವಂದನೆ ಸ್ವೀಕರಿಸಿದ ಅವರು, ಭಕ್ತರ ಶ್ರೇಯೋಭಿವೃದ್ಧಿಯೇ ಗುರುವಿನ ಆಶಯ. ಗುರು ತನ್ನ ಉಪದೇಶಾಮೃತದಿಂದ ಭಕ್ತರ ಅಜ್ಞಾನ ದೂರ ಮಾಡಿ ಸುಜ್ಞಾನ ಕರುಣಿಸುವರು. ಹೀಗಾಗಿ ಗುರುವಿನ ಅನುಗ್ರಹ ಎಲ್ಲರಿಗೂ ಅವಶ್ಯಕವಾಗಿದೆ ಎಂದರು.

ಮಠಕ್ಕೆ ತನ್ನದೇ ಆದ ಶ್ರೇಷ್ಠ ಇತಿಹಾಸ, ಪರಂಪರೆ ಇದೆ. ಭಕ್ತರೇ ನಿಜವಾದ ಆಸ್ತಿ. ಮಠದ ಪರಿಸರದ ತ್ರಿಪುರಾಂತ ಕೆರೆಯನ್ನು ಶ್ರೀ ಜಗದ್ಗುರು ರೇವಣಸಿದ್ದೇಶ್ವರರು ನಿರ್ಮಿಸಿರುವುದು ದಾಖಲೆಯಿಂದ ತಿಳಿಯುತ್ತದೆ. ಮಠಕ್ಕೆ ಸೇರಿದ ಜಮೀನಿನ ಎಲ್ಲ ದಾಖಲೆಗಳಿವೆ ಎಂದು ಹೇಳಿದರು.

ಪ್ರೊ.ರುದ್ರೇಶ್ವರ ದಂಪತಿ ಗುರುಗಳ ಪಾದಪೂಜೆ ಮಾಡಿದರು. ಶರಣಪ್ಪ ಬಿರಾದಾರ್, ಬಸವಂತಪ್ಪ ಲವಾರೆ, ಪ್ರೊ.ಸೂರ್ಯಕಾಂತ ಶೀಲವಂತ, ಎ.ಜಿ. ಪಾಟೀಲ್, ಮಲ್ಲಿಕಾರ್ಜುನ ಅಲಶೆಟ್ಟಿ, ಬಾಬುರಾವ ಬಳಕಾಪುರೆ, ಚನ್ನಪ್ಪ ಅಳ್ಳಿಕಟ್ಟಿ, ವಿಜಯಕುಮಾರ ರೆಡ್ಡಿ, ಸೋಮಶೇಖರ ವಸ್ತ್ರದ್, ಮಹಾಂತಯ್ಯ ಸ್ವಾಮಿ, ಸಂಜಯ ಜಾಧವ್, ಶಿವಕುಮಾರ ಮುನ್ನೊಳ್ಳಿ, ಬಾಬು ಪ್ರತಾಪುರ, ಮಲ್ಲಯ್ಯ ಧನ್ನೂರ, ನಟರಾಜ ಬಿರಾದಾರ್, ಮಡಿವಾಳಯ್ಯ ಹಿರೇಮಠ, ಬಸವರಾಜ ಬಿರಾದಾರ್, ಶೀಲಾದೇವಿ ಕಲ್ಯಾಣಿ, ಭಾಗ್ಯಶ್ರೀ ಮುನ್ನೊಳ್ಳಿ, ಪೂರ್ಣಿಮಾ ರುದ್ರೇಶ್ವರ ಇತರರಿದ್ದರು.

ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಪದಾಧಿಕಾರಿಗಳಾದ ಪ್ರಹ್ಲಾದ್ ಡಿಕೆ, ಉದಯಕುಮಾರ ಮುಳೆ, ಶಿವಪುತ್ರ ಪಾಟೀಲ್, ಪ್ರದೀಪ ವಿಸಾಜಿ, ವೀರಶೆಟ್ಟಿ ಮಲಶೆಟ್ಟಿ ಇತರರನ್ನು ಸನ್ಮಾನಿಸಲಾಯಿತು.



ಬಸವಕಲ್ಯಾಣ ಗವಿಮಠದಲ್ಲಿ ಗುರು ಪೂರ್ಣಿಮೆ ನಿಮಿತ್ತ ಸೋಮವಾರ ಏರ್ಪಡಿಸಿದ್ದ ಗುರುವಂದನೆ ಕಾರ್ಯಕ್ರಮದಲ್ಲಿ ಪ್ರೊ.ರುದ್ರೇಶ್ವರ ದಂಪತಿಯಿಂದ ಶ್ರೀ ಡಾ.ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರ ಪಾದಪೂಜೆ ಜರುಗಿತು. ಶರಣಪ್ಪ ಬಿರಾದಾರ್, ಬಸವಂತಪ್ಪ, ಪ್ರೊ.ಸೂರ್ಯಕಾಂತ, ಎ.ಜಿ.ಪಾಟೀಲ್, ಮಲ್ಲಿಕಾರ್ಜುನ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 4 ಜುಲೈ 2023
4 JULY 2023



ಬಸವಕಲ್ಯಾಣ :– ಇಲ್ಲಿನ ಸಮೀಪದ ಶಿವಪೂರ ದಲ್ಲಿ ನಂದಿಧ್ವಜ ತರಬೇತಿ ಸೇವಾ ಸಮಿತಿಯಿಂದ 20.ನೇಯ ದಿವಸದ ಮುಕ್ತಾಯ ಸಮಾರಂಭದಲ್ಲಿ ನಂದಿಧ್ವಜ ತರಬೇತಿ ಪಡೆದುಕೊಂಡಿರುವ ಸುಮಾರು 50. ಕೂ ಹೆಚ್ಚಿನ ಯುವಕರಿಗೆ ತಿಪುರಾಂತಿನ ಪೂಜ್ಯ ಶ್ರೀ ಡಾ. ಅಭಿನವಫನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು. ಹಿರಿಯರಾದ ರೇವಣಪಾ ವಾಂಜರಖೇಡೆ. ಗುರುಪಾದಪ್ಪಾ ಕರುಣೆ. ಬಸಪ್ಪ ಭದಾಡೆ. ಬೀದರ ಜಿಲ್ಲಾ ವಾಣಿಜ್ಯ ಇಲಾಖೆಯ ಸಹಾಯಕ ಆಯುಕ್ತರಾದ ಮಹೇಶ ಪಾಟೀಲ. ಸುಭಾಷ ಬಾವಗೆ. ಸಚಿನ ಹುಡಗೆ. ಸಾಗರ ಲಾಡ. ಕಲಯಾ ಸ್ವಾಮಿ. ಸಾಗರ ಬಾಲಕಿಲೆ. ರಾಜಪ್ಪಾ ಶೀಲವಂತ. ಸಂಗಯಾ ಸ್ವಾಮಿ. ಸೇರಿದಂತೆ ಅನೇಕರು ಭಾಗವಹಿಸಿದ್ದರು.

ನಿಮ್ಮ ಕನ್ನಡ ಪ್ರಭ
ಬೀದರ್ ಜಿಲ್ಲೆ
12-04-2023

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶುಕ್ರವಾರ 14 ಜುಲೈ 2023
14 JULY 2023

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಅಭಿಮತ | ನಾರಾಯಣಪುರದಲ್ಲಿ ವನಮಹೋತ್ಸವ

ಮಕ್ಕಳಲ್ಲಿ ಮೊಬೈಲ್‌ಚಟ ಇರಿಸಿ ಇಟ್ಟ ಜ್ಞಾನ



ಚಿತ್ರ: ಬಸವರಾಜ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ವಿದ್ಯಾರ್ಥಿಗಳಿಗೆ ಪಿಕ್ಚರ್ ಜತೆಗೆ ಪಠ್ಯದ ಕಡೆ ಗಮನ ಕೊಡಿಸಲಾಗ ಆಗತ್ತಿದೆ. ಕಾಡು ಮಡಿಬೇಕಿದೆ ಎಂದು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಕರ್ನಾಟಕ ರೋರಲ್, ಅರ್ಬನ್ ಡೆವಲಪ್‌ಮೆಂಟ್ (ಕೆಆರ್‌ಯುಡಿ) ಸೊಸೈಟಿ ಮತ್ತು ಗ್ರಾಪಂ (ಸಹಕಾರಿ ಸಂಘಗಳು) ನಾರಾಯಣಪುರ ಸರ್ಕಾರಿ ಸಂಯುಕ್ತ ಪ್ರೌಢ ಶಾಲೆಯಲ್ಲಿ ಗುರುವಾರ ಆಯೋಜಿಸಿದ್ದ ವನಮಹೋತ್ಸವದಲ್ಲಿ ಮಾತನಾಡಿ ನಮ್ಮ ಮಕ್ಕಳ ಜೀವನದ ಮಂದಗತಿಗೆ ಕೆಟ್ಟ ಮೊಬೈಲ್‌ಗಳೇ ಕಾರಣ ಆಗುತ್ತಿವೆ. ಸಂದರ್ಶನ ಅಧ್ಯತೆ ನೀಡಲಾಗುತ್ತಿದೆ. ಸಂದರ್ಶನ ಮಕ್ಕಳು ಸಾಳಿನ ಪಜೇಗಳು ಮಾಡಹೊಡಿ, ಇಂದಿನ ಮಕ್ಕಳು ಸಾಳಿನ ಪಜೇಗಳಾಗಿದ್ದು, ಪಜ್ಸುತ ಇಂದಿನ ಪಜೇಗಳಾಗಿದ್ದು, ಪರಿಸರ ಬಗ್ಗೆ ಕಾಳಜಿ ಇಹಿಸಬೇಕು ಎಂದರು.

ಕರೊನಾ ನಮಗೆ ದೊಡ್ಡ ಪಾಠ ಕಲಿಸಿದೆ. ಅಮ್ಮನಕ ಜಾಗೃತಿ ಮೂಡಿಸುವುದು ಅವಶ್ಯ ಎಂದರು.

ರಾಜೀವಗಾಂಧಿ ಪರಿಸರ ಪ್ರಶಸ್ತಿ ಪುರಸ್ಕೃತ ಶೈಲೇಂದ್ರ ಕಾವಡೆ ವಿಶೇಷ ಉಪನ್ಯಾಸ ನೀಡಿ, ಉತ್ತಮ ಗಾಳಿ ಸೇವನೆಗೆ ಉತ್ತಮ ಪರಿಸರ ಬೇಕೇಬೇಕು. ಹೀಗಾಗಿ ಪ್ರತಿ ವಿದ್ಯಾರ್ಥಿ ಮನೆ ಎದುರು ಸಸಿ ನೆಟ್ಟು ಪೋಷಿಸಬೇಕೆಂದು ಕಿವಿಮಾತು ಹೇಳಿದರು.

ಗ್ರಾಪಂ ಅಧ್ಯಕ್ಷ ಅಕ್ಕಮಹಾದೇವಿ ಪಾಟೀಲ, ಉಪಾಧ್ಯಕ್ಷ ಚಂದ್ರಮ, ಪ್ರೌಢಶಾಲೆ ಮುಖ್ಯಗುರು ಅಮೂಲ್ಯ ಕುಲಕರ್ಣಿ, ಪ್ರಾಥಮಿಕ ಶಾಲೆ ಮುಖ್ಯಗುರು ನಾಗಮ್ಮ ಭುರೆ ಇತರರಿದ್ದರು. ನಿಖಿತಾ ಸಂಗಡಿಗರು ಸ್ವಾಗತ ಗೀತೆ ಹಾಡಿದರು. ಮಹಾಂತಯ್ಯ ಸ್ವಾಮಿ ಸ್ವಾಗತಿಸಿದರು. ಶಿವು ಮಠಪತಿ ವಂದಿಸಿದರು. ಶಿಕ್ಷಕ ನಾಗೇಂದ್ರ ಬಿರಾದಾರ ನಿರೂಪಣೆ ಮಾಡಿದರು. ಸಸ್ಯ ಸಸಿಗಳನ್ನು ನೆಟ್ಟುರುವ ಪಚನ ಚಾರಿಟೀಬಲ್ ಟ್ರಸ್ಟ್‌ನವರ ವೀರಶೆಟ್ಟಿ ಮಲಶೆಟ್ಟಿ ಅವರನ್ನು ಸತ್ಕರಿಸಲಾಯಿತು.

ಬಸವಕಲ್ಯಾಣ ತಾಲೂಕಿನ ನಾರಾಯಣಪುರದಲ್ಲಿ ಗುರುವಾರ ಏರ್ಪಡಿಸಿದ ವನಮಹೋತ್ಸವದಲ್ಲಿ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಪ್ರಾಂಶುಪಾಲ ಎಕ್ಕರ್ ಪಾಷಾ, ಬಿಇಒ ಸಿ.ಜಿ. ಹಳ್ಳದ, ಶೈಲೇಂದ್ರ ಕಾವಡೆ, ಅಮ್ಮ ಕುಲಕರ್ಣಿ, ನಾಗಮ್ಮ ಭುರೆ ಇತರರಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಜಿಲ್ಲಾಂತ ವನಮಹೋತ್ಸವಕ್ಕೆ ಒತ್ತು ನೀಡಿದ ಫಲವಾಗಿ ಈ ತಿಂಗಳಲ್ಲಿ ಲಕ್ಷಾಂತರ ಸಸಿ ನೆಡಲಾಗಿದೆ. ಪ್ರತಿ ಮನಗಳಿಗೆ ಒಂದೊಂದು ಸಸಿ ವಿತರಿಸಿದ್ದು, ನಮ್ಮ ಶಾಲೆಗಳಲ್ಲಿ 6000 ಸಸಿ ನೆಟ್ಟಿದ್ದು, ಮೋಜಾನ ಹೊರಬದ ಮೂಲಕ ಪೋಷಿಸಬೇಕು.

| ಸಿ.ಜಿ. ಹಳ್ಳದ ಕ್ಷೇತ್ರ ಶಿಕ್ಷಣಾಧಿಕಾರಿ

ಸಿಗೇಕೇಂದರೆ ವಿಷ್ಟೆಯ ಪರಿಸರ ರಕ್ಷಿಸಬೇಕೆ. ಹೀಗಾಗಿ ಪ್ರತಿ ವಿದ್ಯಾರ್ಥಿ ಜನ್ಮದಿನ ನಿಮಿತ್ತ ಒಂದು ಸಸಿ ನೆಟ್ಟು ಪೋಷಣೆಮಾಡಿ ಪೋಷಿಸಬೇಕು ಎಂದು ಸಲಹೆ ನೀಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ. ಹಳ್ಳದ ಮಾತನಾಡಿ, ಇಂದಿನ ಮಕ್ಕಳು ಸಾಳಿನ ಪಜೇಗಳು ಎನ್ನುತ್ತಿದ್ದರು. ಪ್ರಸ್ತುತ ಇಂದಿನ ಪಜೇಗಳಾಗಿದ್ದು, ಪರಿಸರ

ಸುದ್ದಿ ಕಾರ್ನರ್

ಗವಿಮಠದಲ್ಲಿ ಜಾತ್ರಾ ಮಹೋತ್ಸವ ಇಂದು

ಬಸವಕಲ್ಯಾಣ: ಗವಿಮಠದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಶ್ರೀ ಘನಲಿಂಗ ರುದ್ರಮುನಿ ಜಾತ್ರಾ ಮಹೋತ್ಸವ, ಧರ್ಮ ಸಭೆ, ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಾಗೂ ವೀರಶೆಟ್ಟಿ ಪಾಟೀಲ್ ಅವರ ಸಂಪಾದಿತ ಕವನ ಸಂಕಲನ 'ನೋಡ ಬನ್ನಿ ಗವಿಮಠ' ಗ್ರಂಥ ಲೋಕಾರ್ಪಣೆ ಮಂಗಳವಾರ ಬೆಳಗ್ಗೆ 11.40ಕ್ಕೆ ಜರುಗಲಿದೆ. ಆಲಗೂಡ ಸರ್ಕಾರಿ ಪ್ರೌಢ ಶಾಲೆ ಮುಖ್ಯಗುರು ರಮೇಶ ರಾಜೋಳೆ ಅವರಿಗೆ ಅಭಿನವ ಘನಲಿಂಗಶ್ರೀ ಪ್ರಶಸ್ತಿ ಪ್ರದಾನ ನಡೆಯಲಿದೆ. ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ಚಂದ್ರಗೊಂಡ ಶಿವಾಚಾರ್ಯರು, ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು ಸಾನ್ನಿಧ್ಯ ವಹಿಸಿಸಲಿದ್ದಾರೆ. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಲಿದ್ದು, ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸುವರು. ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ, ಪ್ರೊ.ವಿಠೋಬಾ ಡೊಣ್ಣೆಗೌಡರ, ಸಾಹಿತಿ ವೀರಶೆಟ್ಟಿ ಪಾಟೀಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಗುರು ರಕ್ಷೆ: ಡಾ.ಬಸವರಾಜ ಸ್ವಾಮಿ, ರೇವಣಸಿದ್ದಯ್ಯ ಮಠಪತಿ, ಮಲ್ಲಿಕಾರ್ಜುನ ನಂದಿ, ಸದಾನಂದ ಕಣಜಿ, ಶಾಂತವೀರ ಸ್ವಾಮಿ, ರಾಕೇಶ ಪುರವಂತ, ಗಂಗಾಧರ ಸ್ವಾಮಿ, ಬಸವರಾಜ ಬಿರಾದಾರ, ನಟರಾಜ ಬಿರಾದಾರ, ಬಸವಂತಪ್ಪ ಮಾಲಿಪಾಟೀಲ್, ಮರೆಪ್ಪ ಪೊಲೀಸ್ ಪಾಟೀಲ್, ಮಲ್ಲಿಕಾರ್ಜುನ ಚನ್ನಮಲ್ಲೆ ಅವರಿಗೆ ಶ್ರೀಗಳಿಂದ ಗುರು ರಕ್ಷೆ ನಡೆಯಲಿದೆ. ಗವಿಮಠದ ಪರಿಸರದಲ್ಲಿ ಬೆಳಗ್ಗೆ 10ರಿಂದ ಸಂಜೆ 4ರ ವರೆಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿದೆ.



ಅಭಿನವ ಶ್ರೀ

» ಧರ್ಮ ಸಭೆ, ಪ್ರಶಸ್ತಿ ಪ್ರದಾನ, ಗ್ರಂಥ ಲೋಕಾರ್ಪಣೆ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 11 ಏಪ್ರಿಲ್ 2023
11 APRIL 2023



ಉಮರಗಾ : ಶಹರಾತಿಲ ಚೌಕಿ ಮಠಾತ ಮಹಾತ್ಮಾ ಬಸವೇಶ್ವರ ಜಯಂತಿಚ್ಯಾ ಪೂರ್ವಸಂಧ್ಯೆಲಾ ಬಸವ ಪ್ರವಚನಾತ ಮಾರ್ಗದರ್ಶನ ಕರತಾನಾ ಡಾ. ಅಭಿನವಾ ಘಣಲಿಂಗ.

ಬಸವೇಶ್ವರಾಂನಿ ಮಾನವತಾವಾದಿ ಯುಗ ನಿರ್ಮಾಣ ಕೆಲೆ : ಡಾ. ಘಣಲಿಂಗ

ಉಮರಗಾ, ತಾ. ೨೨ (ಬಾತಮೀದಾರ) : ಬಾರಾವ್ಯಾ ಶತಕಾತ ಜನ್ಮಲೆಲ್ಯಾ ಮಹಾತ್ಮಾ ಬಸವೇಶ್ವರಾಂನಿ ಸಮತಾ, ಬಂಧುತಾ ವ ನ್ಯಾಯ ಯಾ ಭೂಮಿಕೆಚೆ ಸಮರ್ಥನ ಕರೂನ ದೇಶಾತ ಮಾನವತಾವಾದಿ ಯುಗ ನಿರ್ಮಾಣ ಕೆಲೆ. ಶ್ರಮಾಲಾ ಪ್ರತಿಷ್ಠಾ ನಿರ್ಮಾಣ ಕರೂನ ದಿಲಿ, ತ್ಯಾಂಚ್ಯಾ ಕಾರ್ಯಾಚಾ ಆದರ್ಶ ಆಜ ಜಪಣ್ಯಾಚಾ ಗರಜ ಆಹೆ ಅಸೆ ಮತ ಪರಮಪೂಜ್ಯ ಡಾ. ಅಭಿನವಾ ಘಣಲಿಂಗ ಯಾಂನಿ ವ್ಯಕ್ತ ಕೆಲೆ.

ಶಹರಾತಿಲ ಚೌಕಿ ಮಠಾತ ಶುಕ್ರವಾರೀ (ತಾ. ೨೧) ಮಹಾತ್ಮಾ ಬಸವೇಶ್ವರ ಜಯಂತಿಚ್ಯಾ ಪೂರ್ವಸಂಧ್ಯೆಲಾ ಆಯೋಜಿತ ಬಸವ ಪ್ರವಚನಾತ ಡಾ. ಅಭಿನವಾ ಘಣಲಿಂಗ ಯಾಂನಿ ಮಾರ್ಗದರ್ಶನ ಕೆಲೆ. ವೀರಶೈವ ಲಿಂಗಾಯತ ಸಮಾಜ ಮಂಡಾಚೆ ಅಧ್ಯಕ್ಷ ಡಾ. ಮಲ್ಲಿನಾಥ ಮಲಂಗ ಅಧ್ಯಕ್ಷಸ್ಥಾನೀ ಹೋತೆ ತರ ಪ್ರಮುಖ ವಕ್ತೆ ಮ್ಹಣೂನ ಸರಿತಾ ಉಪಾಸೆ- ವೈರಾಗಕರ ಯಾಂಚೀ ಉಪಸ್ಥಿತೀ ಹೋತೀ. ಪುಢೆ ಘನಲಿಂಗ ಶಿವಾಚಾರ್ಯ ಮಹಾರಾಜ್ ಯಾಂನಿ ಸಾಂಗಿತಲೆ ಕೀ, ಮಹಾತ್ಮಾ ಬಸವೇಶ್ವರಾಂನಿ ಬಾರಾವ್ಯಾ ಶತಕಾತ ಅನುಭವ ಮಂಟಪ ನಾವಾಚೀ ಜಗಾತೀಲ ಪಹಿಲೀ ಸಂಸದ ನಿರ್ಮಾಣ ಕೆಲೀ. ಯಾವೆಳೀ ಶ್ರೀಮತೀ ಉಪಾಸೆ ಯಾಂನಿ ಮಹಾತ್ಮಾ ಬಸವೇಶ್ವರಾಂಚ್ಯಾ ಮಹಾನ ಕಾರ್ಯಾಚೀ ಮಾಹಿತೀ ವ್ಯಾಖ್ಯಾನಾತೂನ ದಿಲೀ. ಎಮ್. ಓ. ಪಾಟೀಲ, ಡೀ. ಎಸ್. ಮಾಳಗೆ, ಅಶೋಕ ಖಸಗೆ, ಶರಣಾಪ್ಪಾ ಯೆಳಾಪುರೆ, ಶಿವಶಂಕರ ಮಾಳಗೆ, ಪ್ರವೀಣ ಮಾಸಾಳಕರ, ನಾಗೇಶ ದಂಡಗೆ, ಸೋನೂ ಜವಳಗೆ, ಪ್ರದೀಪ ಗಿರೀಬಾ, ದಯಾನಂದ ಮಲಂಗ, ಬಾಳೂ ಪರಾಂಡೆ, ಆಶೀಷ ಮಾಸಾಳಕರ, ಶಿವಶಂಕರ ವ್ಹಡರೆ, ಸುನೀಲ ಯೆಳಾಪುರೆ, ಈಶ್ವರ ತುಕಶೆಟ್ಟೀ, ರಾಹುಲ ರಟಕಲ, ಸೋಮೂ ಯೆಳಾಪುರೆ, ಸಿದ್ಧೂ ದಮಶೆಟ್ಟೀ, ಆದೀಂನೀ ಕಾರ್ಯಕ್ರಮಾಚ್ಯಾ ಯಶಸ್ವಿತೇಸಾಠೀ ಪುಢಾಕಾರ ಘೇತಲಾ.

ಛತ್ರಪತಿ ಸಂಭಾಜೀನಗರ, ರವಿವಾರ, ೨೩ ಏಪ್ರಿಲ್ ೨೦೨೩

Scanned with OKEN Scanner

ಜಗದ್ಗುರು ರೇಣುಕಾಚಾರ್ಯ ಜಯಂತಿ



ಬಸವಕಲ್ಯಾಣ: ತಾಲೂಕು ಆಡಳಿತದ ವತಿಯಿಂದ ಸೋಮವಾರ ನಡೆದ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಶರಣು ಸಲಗರ ಮಾತನಾಡಿದರು.

ಬಸವಕಲ್ಯಾಣ: ಮಾನವ ಧರ್ಮಕ್ಕೆ ಜಯವಾಗಲಿ, ಜಗತ್ತಿನ ಎಲ್ಲಾ ಧರ್ಮಗಳಿಗೆ ಜಯವಾಗಲಿ. ಪ್ರತಿಯೊಬ್ಬರು ನೆಮ್ಮದಿಯಿಂದ ಬದುಕಲಿ ಎಂದು ರೇಣುಕಾಚಾರ್ಯರರು ಬೋಧಿಸಿದ್ದಾರೆ. ಅವರ ತತ್ವ ಆದರ್ಶಗಳು ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದು ಶಾಸಕ ಶರಣು ಸಲಗರ ತಿಳಿಸಿದರು.

ನಗರದ ಬಿಕೆಡಿಬಿ ಕಲ್ಯಾಣ ಮಂಟಪದಲ್ಲಿ ಸೋಮವಾರ ತಾಲೂಕು ಆಡಳಿತ ವತಿಯಿಂದ ಹಮ್ಮಿಕೊಂಡ ಜಗದ್ಗುರು ರೇಣುಕಾಚಾರ್ಯ ಜಯಂತಿಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರಕಾರ ಈ ವರ್ಷ ಜಯಂತಿ ಆಚರಿಸಲು ಮುಂದಾಗಿರುವುದಕ್ಕೆ ಕೃತಜ್ಞತೆ ಸಲ್ಲಿಸುವೆ. ಮುಂದಿನ ವರ್ಷ ಇದಕ್ಕಿಂತ ಅದ್ದೂರಿಯಾಗಿ ಆಚರಿಸೋಣ ಎಂದರು.

ಡಾ। ಬಸವರಾಜ ಸ್ವಾಮಿ ವಿಶೇಷ ಉಪನ್ಯಾಸ ನೀಡಿದರು. ಹಿರನಾಗಾಂವನ ಜಯಶಾಂತಲಿಂಗ ಸ್ವಾಮೀಜಿ ಮಾತನಾಡಿದರು. ವೇದಿಕೆಯಲ್ಲಿ ತ್ರೀಪುರಾಂತನ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ರಾಜೇಶ್ವರನ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸದಲಾಪೂರನ ಸಿದ್ದಲಿಂಗ ಶಿವಾಚಾರ್ಯರು, ಹಳ್ಳಿಖೇಡನ ಶ್ರೀಪತಿ ಪಂಡಿತರಾಧ್ಯ ಶಿವಾಚಾರ್ಯರು, ಚಾಂಬೋಳನ ಮುರುಗೇಂದ್ರ ಮಹಾಸ್ವಾಮೀಜಿ, ಸಸ್ತಾಪುರನ ಡಾ। ಈಶ್ವರಾನಂದ ಸ್ವಾಮೀಜಿ, ತಹಶೀಲ್ದಾರ್ ಶಾಂತಗೌಡ ಬಿರಾದಾರ, ನಗರಸಭೆ ಪೌರಾಯುಕ್ತ ಶಿವಶರಣಪ್ಪ ಸಜ್ಜನಶೆಟ್ಟಿ ಸೇರಿದಂತೆ ಇತರೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮೆರವಣಿಗೆ: ಇದಕ್ಕೂ ಮುನ್ನ ನಗರದ ಐತಿಹಾಸಿಕ ಕೋಟೆಯಿಂದ ಮುಖ್ಯರಸ್ತೆಯ ಮಾರ್ಗವಾಗಿ ಕಾರ್ಯಕ್ರಮದ ವೇದಿಕೆಯವರೆಗೂ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರದ ಅದ್ದೂರಿ ಮೆರವಣಿಗೆ ಜರುಗಿತು. ತೆರೆದ ವಾಹನದಲ್ಲಿ ರೇಣುಕಾಚಾರ್ಯರ ಭಾವಚಿತ್ರ ಇಟ್ಟು ಮೆರವಣಿಗೆ ನಡೆಸಲಾಯಿತು.

ಉದಯವಾಣಿ
ಮಂಗಳವಾರ, ಮಾರ್ಚ್ 21, 2023

'ಅಭಿವೃದ್ಧಿಗಾಗಿ ಪರಿಸರ ಹಾನಿ ಸಲ್ಲದು'

ವನ ಮಹೋತ್ಸವದಲ್ಲಿ ತ್ರಿಪುರಾಂತ ಅಭಿನವಶ್ರೀ ಅಭಿಮತ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣ ತಾಲ್ಲೂಕಿನ ನಾರಾಯಣಪುರದ ಸರ್ಕಾರಿ ಸಂಯುಕ್ತ ಪ್ರೌಢಶಾಲೆಯಲ್ಲಿ ಗುರುವಾರ ಕರ್ನಾಟಕ ಗ್ರಾಮೀಣ ಮತ್ತು ನಗರ ಅಭಿವೃದ್ಧಿ ಸಂಸ್ಥೆಯಿಂದ ನಡೆದ ವನ ಮಹೋತ್ಸವದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಸಿಗೆ ನೀರೆರೆದರು

ಬಸವಕಲ್ಯಾಣ: 'ಅಭಿವೃದ್ಧಿ ಹೆಸರಲ್ಲಿ ಪರಿಸರಕ್ಕೆ ಹಾನಿಯನ್ನುಂಟು ಮಾಡುವುದು ಸರಿಯಲ್ಲ. ಹಸಿರು ಇಲ್ಲದೆ ಮಳೆ ಬರುತ್ತಿಲ್ಲ. ಆಮ್ಲಜನಕದ ಕೊರತೆ ಆಗುತ್ತಿದೆ' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತಾಲ್ಲೂಕಿನ ನಾರಾಯಣಪುರದ ಸರ್ಕಾರಿ ಸಂಯುಕ್ತ ಪ್ರೌಢಶಾಲೆಯಲ್ಲಿ ಕರ್ನಾಟಕ ಗ್ರಾಮೀಣ ಮತ್ತು ನಗರ ಅಭಿವೃದ್ಧಿ ಸಂಸ್ಥೆಯಿಂದ ಗುರುವಾರ ನಡೆದ ವನ ಮಹೋತ್ಸವ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಗಿಡಗಳನ್ನು ಕಡಿದು ಅಲಂಕಾರಿಕ ಸಸಿಗಳನ್ನು ಮನೆ ಎದುರು ಇಡುವಲ್ಲಿ ಆಸಕ್ತಿ ಹೆಚ್ಚಾಗಿದೆ. ಕೌಟುಂಬಿಕ ಕಾರ್ಯಕ್ರಮಗಳಲ್ಲಿ ದುಂದುವೆಚ್ಚ ಮಾಡದೆ ಸಸಿ ವಿತರಣೆ, ಗಿಡ ಹಚ್ಚುವ ಕಾರ್ಯಕ್ರಮ ಆಯೋಜಿಸಬೇಕು. ಕೋವಿಡ್ ಕಾಲದಲ್ಲಿ ಆಮ್ಲಜನಕದ ಕೊರತೆಯಾಗಿ ತೊಂದರೆ ಅನುಭವಿಸಿದರೂ ಯಾರೂ ಪಾಠ ಕಲಿತಿಲ್ಲ. ಪರಿಸರ ಹಸಿರಿನಿಂದ ಕೂಡಿದರೆ ನೆಮ್ಮದಿ, ಸುಖ-ಶಾಂತಿ ದೊರಕುತ್ತದೆ' ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ್ ಮಾತನಾಡಿ, 'ಅರಣ್ಯ ಸಚಿವರು ನಮ್ಮ ಜಿಲ್ಲೆಯವರೇ ಆಗಿದ್ದು ಸಸಿ ನೆಡುವುದಕ್ಕೆ ಆದ್ಯತೆ ನೀಡಿದ್ದಾರೆ. ತಾಲ್ಲೂಕಿನ ಶಾಲೆಗಳಿಗೆ 6 ಸಾವಿರ ಸಸಿ ವಿತರಿಸಲಾಗಿದೆ. ಜಿಲ್ಲಾ ಪರಿಸರ ವಾಹಿನಿ ಸಂಚಾಲಕ ಶೈಲೇಂದ್ರ ಕಾವಡಿ ಸಹ ಹತ್ತಾರು ವರ್ಷಗಳಿಂದ ಪರಿಸರ ಜಾಗೃತಿ ಮೂಡಿಸುವ ಜತೆಗೆ ಸ್ವತಃ ಸಸಿಗಳನ್ನೂ ನೆಟ್ಟಿದ್ದಾರೆ' ಎಂದು ಅವರು ಶ್ಲಾಘಿಸಿದರು.

ಕರ್ನಾಟಕ ಗ್ರಾಮೀಣ ಮತ್ತು ನಗರ ಅಭಿವೃದ್ಧಿ ಸಂಸ್ಥೆ ಅಧ್ಯಕ್ಷ ಕರಬಸಯ್ಯ ಸ್ವಾಮಿ, ಶೈಲೇಂದ್ರ ಕಾವಡಿ, ಮಹಾಂತಯ್ಯ ನಾರಾಯಣಪುರ, ಶಿವು ಮಠಪತಿ ಮಾತನಾಡಿದರು. ವಚನ ಬಾರಿಟೇಬಲ್ ಟ್ರಸ್ಟ್ ಸದಸ್ಯ ವೀರಶೆಟ್ಟಿ ಮಲಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಶರಣೆ ಲಲಿತಾತಾಯಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ಅಹ್ಮದ ಪಾಷಾ, ಪಿಡಿಒ ಚಂದ್ರಾಮ ಧೂಳಖೇಡ, ಮುಖಂಡ ಪೋಪಟ್ ಜಮಾದಾರ ಮುಖ್ಯ ಶಿಕ್ಷಕಿ ನಾಗಮ್ಮ ಉಮಾ ಕುಲಕರ್ಣಿ ಉಪಸ್ಥಿತರಿದ್ದರು. ಮಕ್ಕಳಿಗೆ ಸಸಿಗಳನ್ನು ವಿತರಿಸಲಾಯಿತು.

ಪ್ರಜಾವಾಣಿ ಶುಕ್ರವಾರ • ಜುಲೈ 14, 2023

Scanned with OKEN Scanner

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಅಭಿಮತ

'ಶರಣರ ದೀಕ್ಷಾ ಸ್ಥಳವಾಗಿದ್ದ ಗವಿಮಠ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಘನಲಿಂಗ ರುದ್ರಮುನಿ ಗವಿಮಠವು 12 ನೇ ಶತಮಾನದ ಶಿವಶರಣರ ಲಿಂಗದೀಕ್ಷಾ ಸ್ಥಳವಾಗಿದೆ' ಎಂದು ಪೀಠಾಧಿಪತಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದ್ದಾರೆ.

ನಗರದ ತ್ರಿಪುರಾಂತ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಮಂಗಳ ವಾರ ನಡೆದ ಪ್ರಥಮ ಜಾತ್ರೆಯ ಧರ್ಮಸಭೆಯಲ್ಲಿ ಅವರು ಮಾತನಾಡಿದರು.

'ಘನಲಿಂಗ ರುದ್ರಮುನಿಯವರು ಬಸವಣ್ಣನವರ ಪತ್ನಿ ಗಂಗಾಂಬಿಕೆಗೂ ಲಿಂಗದೀಕ್ಷೆ ನೀಡಿದ್ದರು. ಇಂಥ ಐತಿಹಾಸಿಕ ಮತ್ತು ಧಾರ್ಮಿಕ ಮಹತ್ವದ ಸ್ಥಳ ಇದಾಗಿದೆ. ಇಲ್ಲಿ ಪ್ರಥಮವಾಗಿ ಜಾತ್ರೆ ನಡೆಯುತ್ತಿದೆ. ಮುಂದಿನ ವರ್ಷ ರಂಭಾಪುರಿ ವೀರಸೋಮೇಶ್ವರ ಶಿವಾಚಾರ್ಯರ ಹಸ್ತದಿಂದ ಹೊಸ ತೇರಿನ ಪೂಜೆ ನೆರವೇರಿಸಲಾಗುತ್ತದೆ. ಮಠದಿಂದ ಮೂರು ಗ್ರಂಥಗಳನ್ನು ಪ್ರಕಟಿಸಿ ಸಾಹಿತ್ಯ ಸೇವೆಗೆ ಚಾಲನೆ ನೀಡಲಾಗಿದೆ' ಎಂದರು.

ತಡೋಳಾ ರಾಜೇಶ್ವರ ಶಿವಾಚಾರ್ಯರು 'ನೋಡ ಬನ್ನಿ ಗವಿಮಠ' ಗ್ರಂಥ ಬಿಡುಗಡೆಗೊಳಿಸಿದರು.

ಮುಖ್ಯಾಂಶಗಳು

- ಪ್ರಥಮ ಜಾತ್ರಾ ಮಹೋತ್ಸವ ಸಂಭ್ರಮ
- 'ನೋಡಬನ್ನಿ ಗವಿಮಠ' ಕವನ ಸಂಕಲನ ಬಿಡುಗಡೆ
- ಉಚಿತ ನೇತ್ರ ತಪಾಸಣೆ ಶಿಬಿರ ಆಯೋಜನೆ

ಪ್ರೊ.ವಿಠೋಬಾ ದೊಣ್ಣೆಗೌಡರ್ ಮಾತನಾಡಿ, 'ನೋಡಬನ್ನಿ ಗವಿಮಠ ಕವನ ಸಂಕಲನವು ವಿವಿಧ ಕವಿಗಳಿಂದ ಮಠದ ಹಾಗೂ ಸ್ವಾಮೀಜಿಯವರ ಸಾಧನೆ ಮತ್ತು ಮಹತ್ವ ಕುರಿತು ರಚಿಸಿದ ಪದ್ಯಗಳ ಸಂಕಲನವಾಗಿದೆ' ಎಂದರು.

ಹೊನ್ನಕಿರಣಗಿ ಚಂದ್ರಗುಂಡ ಶಿವಾಚಾರ್ಯರು ಉದ್ಘಾಟನೆ ನೆರವೇರಿಸಿದರು. ಶಿಕ್ಷಕ ರಮೇಶ ರಾಜೋಳೆ ಶಿವಪುರ ದಂಪತಿಗಳನ್ನು ಸನ್ಮಾನಿಸಿ ಅವರಿಗೆ 'ಅಭಿನವ ಘನಲಿಂಗಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ಫಲಕ, ₹5,000 ನಗದು ಒಳಗೊಂಡಿದೆ. ಭಕ್ತರಿಂದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ತುಲಾಭಾರ ನಡೆಯಿತು.

ಹಳ್ಳಿಖೇಡ ಪಂಡಿತಾರಾಧ್ಯ ಶಿವಾಚಾರ್ಯರು, ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಪ್ರೊ. ರುದ್ರೇಶ್ವರ ಗೋರಟಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶಾಂತಲಿಂಗ ಮಠಪತಿ, ಸಾಹಿತಿ ವೀರಶೆಟ್ಟಿ ಪಾಟೀಲ ಉಪಸ್ಥಿತರಿದ್ದರು.

ಡಾ.ಬಸವರಾಜಸ್ವಾಮಿ ತ್ರಿಪುರಾಂತ, ರೇವಣಸಿದ್ದಯ್ಯ ಮಠಪತಿ, ಮಲ್ಲಿಕಾರ್ಜುನ ನಂದಿ, ಸದಾನಂದ ಕಣಜೆ, ಶಾಂತವೀರಸ್ವಾಮಿ, ರಾಕೇಶ ಪುರವಂತ, ಗಂಗಾಧರ ಸ್ವಾಮಿ, ಬಸವರಾಜ ಬಿರಾದಾರ, ನಟರಾಜ ಬಿರಾದಾರ, ಬಸವಂತಪ್ಪ ಮಾಲಿಪಾಟೀಲ, ಮರೆಪ್ಪ ಪೊಲೀಸ್ ಪಾಟೀಲ, ಮಲ್ಲಿಕಾರ್ಜುನ ಚನ್ನಮಲ್ಲೆ, ರಾಜಶೇಖರ ಮಂಠಾಳೆ, ನಾರಾಯಣ ರಾವ್ ಬಿರಾದಾರ, ಶಿವಕುಮಾರಸ್ವಾಮಿ ಯರಬಾಗ ಅವರಿಗೆ ಗುರುರಕ್ಷೆ ನೀಡಿ ಸನ್ಮಾನಿಸಲಾಯಿತು.

ಸೂರ್ಯಕಾಂತ ಬಿರಾದಾರ, ದಿಲೀಪಕುಮಾರ ದೇಸಾಯಿ, ಶರಣಪ್ಪ ಜಮಾದಾರ ಸಂಗೀತ ಪ್ರಸ್ತುತಪಡಿಸಿದರು.

ಶಿವಕುಮಾರ ಮುನ್ನೋಳೆ ಸ್ವಾಗತಿಸಿದರು. ಅಂಬಾರಾಯ ಸೈದಾಪುರ ನಿರೂಪಿಸಿದರು. ತುಳಸಿ ಆಪ್ಟಿಕಲ್ ವತಿಯಿಂದ ಉಚಿತ ನೇತ್ರ ತಪಾಸಣೆ ಶಿಬಿರ ಆಯೋಜಿಸಲಾಗಿತ್ತು.



ಬಸವಕಲ್ಯಾಣದಲ್ಲಿ ಉದ್ಘಾಟನೆ ಬೆಟಗೇರಿಯ ಶ್ರೀ ಕುಮಾರ ಪಿರೂಪಾಕ್ಷ ಸ್ವಾಮೀಜಿ, ಕ್ಯಾಡಗಿಯ ಶ್ರೀ ಶಿವಬಸವ ರಾಜೇಂದ್ರ ಸ್ವಾಮೀಜಿ, ಆಮಿನಗಢದ ಶ್ರೀ ಪ್ರಭುಶಂಕರ ರಾಜೇಂದ್ರ ಸ್ವಾಮೀಜಿ ಮತ್ತು ಮುನವಳ್ಳಿಯ ಶ್ರೀ ಮುರುಘೇಂದ್ರ ಸ್ವಾಮೀಜಿ ಅವರನ್ನು ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸತ್ಕರಿಸಿದರು. ಶ್ರೀ ಜಯಶಾಂತಲಿಂಗ ಶಿವಾಚಾರ್ಯ, ಶ್ರೀ ಶಾಂತವೀರ ಶಿವಾಚಾರ್ಯ, ಶ್ರೀ ಅಭಿನವ ಶಿವಲಿಂಗ ಸ್ವಾಮೀಜಿ ಇದ್ದರು.

ವಿಜಯವಾಣಿ ಚಿತ್ರ

Scanned with OKEN Scanner

ಪಂಡಿತ ರಾಜವೀರಜಿ ಶಾಸ್ತ್ರಿ ಕರೆ | ಕಲ್ಯಾಣದಲ್ಲಿ ಮಹರ್ಷಿ ಸರಸ್ವತಿಯವರ ಜನ್ಮೋತ್ಸವ

ದಯಾನಂದರ ಜೀವನಚರಿತ್ರೆ ಅಧ್ಯಯನ ಮಾಡಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸತ್ಯದ ಪ್ರಸಾರ ಜಾಗತಿಕ ಮಟ್ಟದಲ್ಲಿ ಆಗಬೇಕು. ಎಲ್ಲರೂ ಒಂದು ಎನ್ನುವ ವಿಶ್ವ ಭಾತೃತ್ವ ಭಾವನೆ ಬೆಳೆಯಬೇಕು. ಇದಕ್ಕಾಗಿ ವೇದ ಜ್ಞಾನ ಪ್ರಚಾರವಾಗಬೇಕು ಎನ್ನುವುದೇ ಆರ್ಯ ಸಮಾಜದ ಸ್ಥಾಪನೆಯ ಹಿಂದಿನ ಮೂಲ ಆಶವಾಗಿದೆ ಎಂದು ಸೊಲ್ಲಾಪುರದ ಪಂಡಿತ ರಾಜವೀರಜಿ ಶಾಸ್ತ್ರಿ ಹೇಳಿದರು.

ಮಹರ್ಷಿ ದಯಾನಂದ ಸರಸ್ವತಿಯವರ ದ್ವಿಜನ್ಮ ಶತಾಬ್ಧಿ ಮಹೋತ್ಸವ ನಿಮಿತ್ತ ಪಟ್ಟಣದಲ್ಲಿ ಆರ್ಯ ಸಮಾಜದಿಂದ ಸೋಮವಾರ ಆಯೋಜಿಸಿದ್ದ ಸಮಾರಂಭದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು, ಮಹರ್ಷಿ ದಯಾನಂದರ ಜೀವನ ಚರಿತ್ರೆ, ಸಾಧನೆ, ಸಾಹಿತ್ಯ ಅಧ್ಯಯನ ಮಾಡಿ ಅಳವಡಿಸಿಕೊಂಡರೆ ಜೀವನ ಕಲ್ಯಾಣವಾಗುತ್ತದೆ ಎಂದರು.

ಗುಲಾಮಗಿರಿಯಿಂದ ವ್ಯಕ್ತಿ ವಿಕಾಸ, ದೇಶದ ಪ್ರಗತಿಯಾಗದು ಎಂದು ಬಲವಾಗಿ ನಂಬಿದ್ದ ಮಹರ್ಷಿ ದಯಾನಂದರು ಸ್ವರಾಜ್ಯಕ್ಕಾಗಿ ಕರೆ ನೀಡಿದ್ದರು. ಧರ್ಮ ಪಾಲನೆಯಿಂದ ವ್ಯಕ್ತಿ ಸುಖ ಜೀವನ ನಡೆಸಲು ಸಾಧ್ಯವಿದೆ. ಆದರೆ ಸ್ವಾರ್ಥ, ಪ್ರತಿಷ್ಠೆ, ಅಜ್ಞಾನದಿಂದಾಗಿ ಸತ್ಯ ಎದುರಿಗಿದ್ದರೂ ಹಲವರು ಸ್ವೀಕಾರ ಮಾಡಲು ಹಿಂಜರಿಯುತ್ತಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಕರ್ನಾಟಕ ಆರ್ಯ ಪ್ರತಿನಿಧಿ ಸಭಾ ಗೌರವ ಅಧ್ಯಕ್ಷ ಸುಭಾಷ ಅಷ್ಟಿಕರ ಮಾತನಾಡಿ, ಸಮಾಜದಲ್ಲಿ ನ್ಯೂನ್ಯತೆಗಳ ವಿರುದ್ಧ ಜಾಗೃತಿ ಮೂಡಿಸಿ, ಸಮಾಜ ಸುಧಾರಣೆಗೆ ದುಡಿದ ಮಹರ್ಷಿ ದಯಾನಂದ ಸರಸ್ವತಿ ಸಮಾಜಕ್ಕೆ ಮತ್ತು ದೇಶಕ್ಕೆ ಮಹತ್ವದ ಕೊಡುಗೆ ನೀಡಿದ ಮಹಾನ್ ತಪಸ್ವಿಗಳು, ಮಹಾಪುರಷರು ಎಂದರು.

ಬೆಂಗಳೂರಿನ ಕರ್ನಾಟಕ ಆರ್ಯ ಪ್ರತಿನಿಧಿ ಸಭಾದ ಪ್ರಧಾನ ಋಷಿಮಿತ್ರ ಮಾತನಾಡಿದರು.



ವಿಜಯವಾಣಿ ಚಿತ್ರಗಳು

ಮಹರ್ಷಿ ದಯಾನಂದ ಸರಸ್ವತಿಯವರ ದ್ವಿಜನ್ಮ ಶತಾಬ್ಧಿ ಮಹೋತ್ಸವ ನಿಮಿತ್ತ ಬಸವಕಲ್ಯಾಣದಲ್ಲಿ ಆರ್ಯ ಸಮಾಜದಿಂದ ಸೋಮವಾರ ಆಯೋಜಿಸಿದ್ದ ಸಮಾರಂಭವನ್ನು ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಋಷಿಮಿತ್ರ, ಸುಭಾಷ ಅಷ್ಟಿಕರ, ಪಂಡಿತ ರಾಜವೀರಜಿ ಶಾಸ್ತ್ರೀ, ಬಸವರಾಜ ಆರ್ಯ, ಸಂಜಯ ಜಾಧವ್, ಶಿವಾಜಿರಾವ ಜಗತಾಪ ಇತರರಿದ್ದರು.



ಚಿಟಗುಪ್ಪ ತಾಲೂಕಿನ ಮನ್ನಾಎಖೇಳ್ಳಿ ಗ್ರಾಮದ ಆರ್ಯ ಸಮಾಜ ಮಂದಿರದಲ್ಲಿ ಸೋಮವಾರ ಮಹರ್ಷಿ ದಯಾನಂದ ಸರಸ್ವತಿ ಅವರ ದ್ವಿಜನ್ಮ ಶತಾಬ್ಧಿ ನಿಮಿತ್ತ ಧ್ವಜಾರೋಹಣ ಡಾ.ನಾಗರಾಜ ಶೇರಿಕಾರ ನೆರವೇರಿಸಿದರು. ಮಾತೆ ಮೈತ್ರಾದೇವಿ ತಾಯಿ, ಪ್ರಮುಖರಾದ ದತ್ತು ರಾಸೂರ, ಭೀಮಣ್ಣ ವರವಟ್ಟಿ, ಗ್ರಾಪಂ ಮಾಜಿ ಅಧ್ಯಕ್ಷ ಸಂತೋಷ ಹಳ್ಳಿಖೇಡ, ಪ್ರಮುಖರಾದ ರಾಜೇಂದ್ರ ಮಹಾರಾಜ, ರಾಜು ಪಾಂಚಾಳ, ಡಾ. ರಾಜಕುಮಾರ ಪಾಟೀಲ್, ಶಿವಕುಮಾರ ಡೊಂಗರಗಾಂವ್ಕರ, ಸುರೇಶ ಆಚಾರ್ಯ, ಸಂಗ್ರಾಮ ನಾಟೀಕಾರ ಇತರರಿದ್ದರು.

ಸಾನ್ನಿಧ್ಯ ವಹಿಸಿದ ಗವಿಮಠದ ಶ್ರೀ ಅಭಿನವ ಆಶೀರ್ವಚನ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಮಾಜ ಪ್ರಧಾನ ಶಿವಾಜಿರಾವ ಜಗತಾಪ,

> ದೇಶ ಕಟ್ಟುವ ಕಾರ್ಯದಲ್ಲಿ ಆರ್ಯ ಸಮಾಜದ ಪಾತ್ರ ಮಹತ್ವದ್ದು, ಸ್ವರಾಜ್ಯಕ್ಕಾಗಿ ಇಂಡಿಯ ಫಾರ್ ಇಂಡಿಯನ್ಸ್ ಎಂಬ ಕರೆ ಕೊಟ್ಟರು. ಅವರ ಜೀವನ ಸಾಧನೆ, ಸಂದೇಶಗಳನ್ನು ಮಕ್ಕಳಿಗೆ ತಿಳಿಸಿಕೊಡುವ ಮೂಲಕ ಸ್ಫೂರ್ತಿ ತುಂಬುವ ಕೆಲಸ ನಡೆಯಬೇಕು.
>
> ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಗವಿಮಠ ತ್ರಿಪುರಾಂತ

ಪ್ರಮುಖರಾದ ಬಸವರಾಜ ಆರ್ಯ, ರಾಮರಾವ ಬಿರಾದಾರ ವರವಟ್ಟಿ ಮಾತನಾಡಿದರು.

ಪ್ರಮುಖರಾದ ನಾರಾಯಣರಾವ ಚಿದ್ರಿ, ಮಾಣಿಕರಾವ ಲಾಡ, ತುಕಾರಮ ಮೋರೆ, ಉದಗೀರನ ಪ್ರತಾಪಸಿಂಹಜಿ ಚವ್ಹಾಣ್, ಹೀರಾಚಂದ ವಾಘಮಾರೆ, ಪಂಢರಿನಾಥ ಚಿಟಗುಪ್ಪ, ಸಮಾಜದ ಪದಾಧಿಕಾರಿಗಳಾದ ನಾರಾಯಣರಾವ ಬೊನ್ನಾ, ಮಾರುತಿರಾವ ಮಹೇಂದ್ರಕರ, ಸತೀಶ ಲಾಡ, ವಿಠ್ಠಲರಾವ ಸೂರ್ಯವಂಶಿ, ಶಿವಾಜಿ ಕಾಳೆ, ಅಶ್ವಿನ ಸೂತ್ರಾವೆ, ಸುಭಾಷ ಸಿರ್ಕೆ ಉಪಸ್ಥಿತರಿದ್ದರು.

ಸುರೇಂದ್ರಗಿರ ಗೋಸ್ವಾಮಿ ಸ್ವಾಗತಿಸಿದರು. ಸಮಾಜದ ಮಂತ್ರಿ ಸಂಜಯಕುಮಾರ ಜಾಧವ್ ನಿರೂಪಣೆ ಮಾಡಿದರು.

ಬೆಳಗ್ಗೆ ಈಶ್ವರ ನಗರದ ಧರ್ಮ ಪ್ರಕಾಶ ಪ್ರಾಥಮಿಕ ಶಾಲಾ ಪರಿಸರದಲ್ಲಿ ಯಜ್ಞ ಹವನ ಜರುಗಿತು. ನಂತರ ಮಹರ್ಷಿ ದಯಾನಂದ ಸರಸ್ವತಿ ಅವರ ಭಾವಚಿತ್ರದೊಂದಿಗೆ ಈಶ್ವರ ನಗರದಿಂದ ಕಾಳೆಗಲ್ಲಿ, ಕೋಟೆ, ಗಾಂಧಿ ಚೌಕ ಮೂಲಕ ಮುಖ್ಯ ರಸ್ತೆ ಮಾರ್ಗವಾಗಿ ಆರ್ಯ ಸಮಾಜ ಮಂದಿರದ ವರೆಗೆ ನಗರ ಕೀರ್ತನೆ ನಡೆಯಿತು. ಡಾ.ಸುಜಾತಾ ಸಂಜಯ ಜಾಧವ್ ಅವರನ್ನು ಸನ್ಮಾನಿಸಲಾಯಿತು.



ಉಪ್ಪಿನ ಬೆಟಗೇರಿಯ ಶ್ರೀಕುಮಾರ ವಿರೂಪಾಕ್ಷ ಸ್ವಾಮೀಜಿ, ಖ್ಯಾಡಗಿಯ ಶಿವಬಸವರಾಜೇಂದ್ರ ಮಹಾಸ್ವಾಮೀಜಿ, ಅಮ್ಮಿನಭಾವಿಯ ಪ್ರಭುಶಂಕರ ರಾಜೇಂದ್ರ ಮಹಾಸ್ವಾಮೀಜಿ ಮತ್ತು ಮುನವಳ್ಳಿಯ ಮುರುಗೇಂದ್ರ ಮಹಾಸ್ವಾಮೀಜಿಗೆ ಅವರಿಗೆ ಬಸವ ಕಲ್ಯಾಣದ ಗವಿ ಮಠದಲ್ಲಿ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸತ್ಕರಿಸಿ ಗೌರವಿಸಿದರು.ಜಯಶಾಂತಲಿಂಗ ಶಿವಾಚಾರ್ಯರು, ಶಾಂತವೀರ ಶಿವಾಚಾರ್ಯರು,ಅಭಿನವ ಶಿವಲಿಂಗ ಸ್ವಾಮೀಜಿ ಇದ್ದರು.



ಹಿರನಾಗಾಂವನ ಜಯಶಾಂತಲಿಂಗ ಸ್ವಾಮೀಜಿ ನೇತೃತ್ವದಲ್ಲಿ ಸಿಎಂಗೆ ಸನ್ಮಾನಿಸಲಾಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 13 ಫೆಬ್ರವರಿ 2024
13 FEBRUARY 2024

Scanned with OKEN Scanner

ಸಂಗೀತ ಕ್ಷೇತ್ರಕ್ಕೆ ಗವಾಯಿಗಳ ಕೊಡುಗೆ ಅಪಾರ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಗಾನಯೋಗಿ ಶಿವಯೋಗಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳು ಸಂಗೀತ ಕ್ಷೇತ್ರಕ್ಕೆ ಅದ್ಭುತ ಕೊಡುಗೆ ನೀಡಿದ್ದಾರೆ ಎಂದು ಇಲ್ಲಿನ ತ್ರಿಪುರಾಂತನ ಗವಿಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಆರ್ಯ ಸಮಾಜ ಭವನದಲ್ಲಿ ಪದ್ಮ ಭೂಷಣ ಡಾ. ಪಂಡಿತ ಶ್ರೀ ಪುಟ್ಟರಾಜ ಕವಿ ಗವಾಯಿಗಳವರ 110 ನೇ ಜನ್ಮ ದಿನೋತ್ಸವವನ್ನು ಶಿಷ್ಯರ ಸಂಗೀತ ಕಲಾ ಬಳಗದ ವತಿಯಿಂದ ಜರುಗಿದ ಸಂಗೀತ ಹಾಗೂ ಭರತ ನಾಟ್ಯ ಸಮಾರಂಭದಲ್ಲಿ ಸಾನಿಧ್ಯ ವಹಿಸಿ ಶ್ರೀಗಳು ಮಾತನಾಡಿ, ಪುಟ್ಟರಾಜ ಗವಾಯಿಗಳು ಸಂಗೀತ ಅಲ್ಲದೆ ಶಿವಯೋಗ ಸಾಧಕರಾಗಿದ್ದರು.

ಸಂಗೀತ ಕ್ಷೇತ್ರದಲ್ಲಿ ಅವರಿಗೆ ಸರಿಸಾಟಿ ಯಾರು ಇಲ್ಲದೆ ಅಂಧರ ಬಾಳಿಗೆ ಬೆಳಕಾದವರು. ಅವರ ಶಿಷ್ಯಂದಿರು ಇಂದು ಪ್ರಖ್ಯಾತ ಸಂಗೀತ ಕಲಾವಿದರಾಗಿದ್ದಾರೆ ಎಂದರು.



ಬಸವಕಲ್ಯಾಣದಲ್ಲಿ ಪದ್ಮ ಭೂಷಣ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳವರ 110 ನೇಯ ಜನ್ಮ ದಿನೋತ್ಸವವನ್ನು ಶಿಷ್ಯರ ಸಂಗೀತ ಕಲಾ ಬಳಗದ ವತಿಯಿಂದ ನಡೆದ ಸಂಗೀತ ಹಾಗೂ ಭರತ ನಾಟ್ಯ ಸಮಾರಂಭದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸುರೇಶ್ ಆಕ್ಕಣ್ಣಾ, ಶಶಿಧರ ಪಾಟೀಲ್, ಭೀಮರಡ್ಡಿ ರಾಸನೆ. ಶರಣಬಸಪ್ಪ ದಂಡೆ, ಸಂಜಯ ರೋಹಿಲೆ,ಶಂಕರರಾವ ಮಾಲಿ ಬಿರಾದಾರ ಇದ್ದರು.

ನೀಲಾಂಬಿಕಾ ಪದವಿ ಪೂರ್ವ ಮಹಾ ವಿದ್ಯಾಲಯದ ಪ್ರಾಚಾರ್ಯ ಸುರೇಶ್ ಆಕ್ಕಣ್ಣಾ ಅಧ್ಯಕ್ಷತೆ ವಹಿಸಿ ಮಾತನಾಡಿ, ಮನಸ್ಸಿಗೆ ನೆಮ್ಮದಿ ಶಾಂತಿ ಸಿಗಬೇಕಾದರೆ ಸಂಗೀತದಿಂದ ಮಾತ್ರ ಸಾಧ್ಯ.ಆದರಲ್ಲಿ ಅಂತಹ ಅದ್ಭುತ ಶಕ್ತಿಯಿದೆ ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಪಿಐ ಆಲಿಸಾಬ್, ವಸತಿ ನಿಲಯಗಳ ಪ್ರಚಾರ್ಯರಾದ ಶಶಿಧರ ಪಾಟೀಲ್, ಭೀಮರಡ್ಡಿ ರಾಸನೆ, ಶರಣಬಸಪ್ಪ ದಂಡೆ, ಸಂಜಯ ರೋಹಿಲೆ, ಶಂಕರರಾವ ಮಾಲಿ ಬಿರಾದಾರ, ಪತ್ರಕರ್ತ ನಾಗಪ್ಪಾ ನಿಣ್ಣೆ ಅನೀಲ ದಸ್ತಾಪೂರೆ ಇದ್ದರು. ಸಂಗೀತ ಕಲಾವಿದರಾಗಿ ಬೆಳಗಲಿ ರೇಖಾ ಬಳ್ಳಾರಿ. ಹಣಮಂತ ಬೆಳಗಲಿ. ಭರತನಾಟ್ಯ ಕಲಾವಿದೆ ಸೌಖ್ಯ ಪ್ರವೀಣ ಅವರು ತಮ್ಮ ಕಲಾ ಪ್ರತಿಭೆ ವ್ಯಕ್ತಪಡಿಸಿದರು.

ಸಂಗೀತ ಕಲಾವಿದರಾದ ರಾಜಕುಮಾರ್ ಹೂಗಾರ, ರಾಮಚಂದ್ರ ಕಲಹಿಪ್ಪರಗಿ, ಹಣಮಂತರಾವ ಮಳ್ಳಿ, ನೀಲಯ್ಯ ಹಿರೇಮಠ, ಜಗನ್ನಾಥ ಬೇಂದ್ರೆ, ಗಣೇಶ್ ಗೋರ್ಟಾ, ಶಿವರಾಜ ಖೇಲೆ, ರಮೇಶ್ ಗರೂಡಕರ, ನಾಗಣ್ಣಾ ಭೂಶೆಟ್ಟೆ ಅವರು ಸಂಗೀತ ಸೇವೆ ಸಲ್ಲಿಸಿದರು. ಪುಟ್ಟರಾಜ ಸಂಗೀತ ಮಹಾವಿದ್ಯಾಲಯದ ಮಕ್ಕಳು ಪ್ರಾರ್ಥನೆ ಗೀತೆ ನಡೆಸಿಕೊಟ್ಟರು. ಹಿರಿಯ ಕಲಾವಿದ ರಾಜಕುಮಾರ ಮದಕಟ್ಟಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಂತ್ಯ ಮಠಪತಿ ನಿರೂಪಿಸಿದರು.

ವಿಜಯ ಕರ್ನಾಟಕ ಕಲಬುರಗಿ, ಬುಧವಾರ,13 ಮಾರ್ಚ್ 2024

ಯರಂಡಗಿ: ಬಸವಣ್ಣ ಮೂರ್ತಿ ಅನಾವರಣ ಕಾರ್ಯಕ್ರಮ

'ಬಸವಣ್ಣ ಸಾಮಾಜಿಕ ನ್ಯಾಯದ ಪ್ರತಿಪಾದಕ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಬಸವಣ್ಣನವರು ಸಾಮಾಜಿಕ ನ್ಯಾಯದ ಪ್ರತಿಪಾದಕ ಆಗಿದ್ದು ಅವರು ಯಾವುದೇ ಜಾತಿ, ಧರ್ಮಕ್ಕೆ ಸೀಮಿತರಲ್ಲ' ಎಂದು ಹುಮನಾಬಾದ್ ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ ಹೇಳಿದ್ದಾರೆ.

ತಾಲ್ಲೂಕಿನ ಹುಮನಾಬಾದ್ ವಿಧಾನಸಭಾ ಕ್ಷೇತ್ರದ ಯರಂಡಗಿ ಗ್ರಾಮದಲ್ಲಿ ಶುಕ್ರವಾರ ಬಸವಣ್ಣನವರ ಅಶ್ವಾರೂಢ ಮೂರ್ತಿ ಅನಾವರಣಗೊಳಿಸಿ ಮಾತನಾಡಿದರು.

'12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಅನುಭವ ಮಂಟಪ ನಿರ್ಮಾಣವಾಗಿತ್ತು. ಬಸವಕಲ್ಯಾಣದಲ್ಲಿ ಮತ್ತೆ ನೂತನ ಅನುಭವ ಮಂಟಪ ಕಟ್ಟಲಾಗುತ್ತಿದ್ದು, ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಅದಕ್ಕೆ ನೂರಾರು ಕೋಟಿ ಅನುದಾನ ಒದಗಿಸಿದ್ದಾರೆ. ಇಲ್ಲಿನ ಮೂರ್ತಿ ಸಿದ್ಧವಾಗಿ 10 ವರ್ಷವಾದರೂ ಅನಾವರಣ ಆಗಿರಲಿಲ್ಲ. ಕೆಲ ಮುಖಂಡರನ್ನು ಆಹ್ವಾನಿಸದಿರುವ ಬಗ್ಗೆ ಈಗಲೂ ಕೆಲವರು ವಾದ ಮಂಡಿಸಿದ್ದರು. ಚುನಾವಣೆಯಲ್ಲಿ ಮಾತ್ರ ರಾಜಕೀಯ ತರಬೇಕು. ಇಂಥ ಕೆಲಸಕ್ಕೆ ಎಲ್ಲರೂ ಕೈಜೋಡಿಸಬೇಕು' ಎಂದರು.



ಬಸವಕಲ್ಯಾಣ ತಾಲ್ಲೂಕಿನ ಯರಂಡಗಿಯಲ್ಲಿ ಶುಕ್ರವಾರ ಪುತ್ಥಳಿ ಅನಾವರಣ ಕಾರ್ಯಕ್ರಮವನ್ನು ಶಾಸಕ ಡಾ.ಸಿದ್ಧಲಿಂಗಪ್ಪ ಪಾಟೀಲ ಉದ್ಘಾಟಿಸಿದರು

'ಬುದ್ಧ, ಬಸವಣ್ಣ, ಅಂಬೇಡ್ಕರ್, ಶಿವಾಜಿ, ಕನಕದಾಸ, ವಾಲ್ಮೀಕಿ ಅವರ ತತ್ವ ಲೋಕಕಲ್ಯಾಣದ ಉದ್ದೇಶ ಹೊಂದಿದ್ದು ಅವರ ತತ್ವದ ಪಾಲನೆ ಆಗಲಿ. ಗ್ರಾಮದಲ್ಲಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಿದ್ದೇನೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಮಹತ್ವದ ಕೆಲಸ ಆಗುತ್ತಿಲ್ಲ. ಕಬ್ಬು ಬೆಳೆಯುವ ರೈತರ ಸಮಸ್ಯೆ ಬಗೆಹರಿಯುತ್ತಿಲ್ಲ' ಎಂದು ದೂರಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮೂರ್ತಿ ಅನಾವರಣಗೊಳಿಸಿ ಬಸವಕಲ್ಯಾಣದ ಅನುಭವ ಮಂಟಪದ ವೀಕ್ಷಣೆಗೆ ಬರುವವರಿದ್ದರು. ಆದರೆ ದಿಢೀರ್ ಅವರ ಕಾರ್ಯಕ್ರಮ ರದ್ದಾಯಿತು ಎಂದು ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ ಹೇಳಿದರು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ರಾಜೇಶ್ವರ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಹಿರೇನಾಗಾಂವ ಜಯಶಾಂತಲಿಂಗ ಸ್ವಾಮೀಜಿ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಾಮಲಾಬಾಯಿ ಶಿಂಧೆ, ಉಪಾಧ್ಯಕ್ಷೆ ಶ್ರೀದೇವಿ ಪೂಜಾರಿ, ರೈತ ಮುಖಂಡ ಚಂದ್ರಶೇಖರ ಜಮಖಂಡಿ, ಮಲ್ಲಿಕಾರ್ಜುನ ಕುಂಬಾರ, ಬಲಭೀಮ ಹಳ್ಳಿ, ಭಗವಾನ ಕಸ್ತೂರಿ, ರಾಜಕುಮಾರ ಜಮಖಂಡಿ, ಸಂತೋಷ ಹಳ್ಳಿ, ಲೋಕೇಶ ಜಮಖಂಡಿ, ಗಣೇಶ ಗಂಗೆ, ನಾಗೇಶ ಗಂಗೆ, ದತ್ತಾತ್ರಿ ಮಾನೆ, ಮಾರುತಿ ಚೀನಕೇರಾ ನಾಗಭೂಷಣ ಸಂಗಮ, ಗಿರೀಶ ತುಂಬಾ, ರಾಜಕುಮಾರ ಉಪಸ್ಥಿತರಿದ್ದರು.

ಪ್ರಜಾವಾಣಿ ಶನಿವಾರ • ಫೆಬ್ರುವರಿ 10, 2024

Scanned with OKEN Scanner

ಬಸವ ಕಲ್ಯಾಣದಲ್ಲಿ ಆರ್ಯ ಸಮಾಜದ ವತಿಯಿಂದ ಮಹರ್ಷಿ ದಯಾನಂದ ಸರಸ್ವತಿ 200ನೇ ಜನ್ಮೋತ್ಸವ

ಜಾಗತಿಕ ಮಟ್ಟದಲ್ಲಿ ಸತ್ಯದ ಪ್ರಸಾರವಾಗಲಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಮಹರ್ಷಿ ದಯಾನಂದರ ಜೀವನ ಚರಿತ್ರೆ,ಸಾಧನೆ, ಸಾಹಿತ್ಯ ಅಧ್ಯಯನ ಮಾಡುವ ಮೂಲಕ ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಜೀವನ ಕಲ್ಯಾಣವಾಗುತ್ತದೆ ಎಂದು ಸೊಲ್ಲಾಪುರ ಪಂಡಿತ ರಾಜವೀರಜಿ ಶಾಸ್ತ್ರೀಜಿ ಹೇಳಿದರು.

ಮಹರ್ಷಿ ದಯಾನಂದ ಸರಸ್ವತಿಯವರ ದ್ವಿಜನ್ಮಶತಾಬ್ದಿ ಮಹೋತ್ಸವ, (200ನೇ ಜನ್ಮೋತ್ಸವ) ನಿಮಿತ್ತ ಇಲ್ಲಿನ ಆರ್ಯ ಸಮಾಜದ ವತಿಯಿಂದ ಸೋಮವಾರ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು, ಜಾಗತಿಕ ಮಟ್ಟದಲ್ಲಿ ಸತ್ಯದ ಪ್ರಸಾರ ಆಗಬೇಕು.ಎಲ್ಲರೂ ಒಂದು ಎನ್ನುವ ವಿಶ್ವ ಭಾತೃತ್ವ ಭಾವನೆ ಬೆಳೆಯಬೇಕು. ಇದಕ್ಕಾಗಿ ವೇದ ಜ್ಞಾನ ಪ್ರಚಾರವಾಗಬೇಕು ಎನ್ನುವದು ಆರ್ಯ ಸಮಾಜದ ಸ್ಥಾಪನೆಯ ಹಿಂದಿನ ಮೂಲ ಉದ್ದೇಶವಾಗಿದೆ ಎಂದರು.



ಮಹರ್ಷಿ ದಯಾನಂದ ಸರಸ್ವತಿಯವರ ದ್ವಿಜನ್ಮ ಶತಾಬ್ದಿ ಮಹೋತ್ಸವ, (200ನೇ ಜನ್ಮೋತ್ಸವ) ನಿಮಿತ್ತ ಬಸವಕಲ್ಯಾಣದ ಆರ್ಯ ಸಮಾಜದ ವತಿಯಿಂದ ಸೋಮವಾರ ಆಯೋಜಿಸಲಾಗಿದ್ದ ಸಮಾರಂಭವನ್ನು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಋಷಿಮಿತ್ರ, ಸುಭಾಷ ಅಷ್ಟಿಕರ್, ಪಂಡಿತ ರಾಜವೀರಜಿ ಶಾಸ್ತ್ರೀಜಿ, ಬಸವರಾಜ ಆರ್ಯ, ಸಂಜಯ ಜಾಧವ, ಶಿವಾಜಿರಾವ ಜಗತಾಪ ಸೇರಿ ಅನೇಕರಿದ್ದರು.

ಕರ್ನಾಟಕ ಆರ್ಯ ಪ್ರತಿನಿಧಿ ಸಭಾ ಗೌರವ ಅಧ್ಯಕ್ಷ ಸುಭಾಷ ಅಷ್ಟಿಕರ್ ಮಾತನಾಡಿ, ಸಮಾಜದಲ್ಲಿನ್ಯೂನ್ಯತೆಗಳ ವಿರುದ್ಧ ಜಾಗೃತಿ ಮೂಡಿಸಿ, ಸಮಾಜ ಸುಧಾರಣೆಗಾಗಿ ದುಡಿದ ಮಹರ್ಷಿ ದಯಾನಂದ ಸರಸ್ವತಿ ಅವರು ಸಮಾಜಕ್ಕೆ ಮತ್ತು ದೇಶಕ್ಕೆ ಮಹತ್ವದ ಕೊಡುಗೆ ನೀಡಿದ ಮಹಾನ್ ತಪಸ್ವಿಗಳು, ಮಹಾಪುರುಷರು ಎಂದು ಬಣ್ಣಿಸಿದರು.

ಸಾನ್ನಿಧ್ಯ ವಹಿಸಿದ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ದೇಶ ಕಟ್ಟುವ ಕಾರ್ಯದಲ್ಲಿ ಆರ್ಯ ಸಮಾಜದ ಪಾತ್ರ ಮಹತ್ವದ್ದು ಭಾರತ ಭಾರತೀಯರಿಗಾಗಿ ಎಂದು ಮಹರ್ಷಿ ದಯಾನಂದ ಸರಸ್ವತಿ ಅವರು ಕರೆ ನೀಡುವ ಮೂಲಕ ಅಂದೇ ಸ್ವರಾಜ್ಯಕ್ಕೆ ಕರೆ ನೀಡಿದ್ದರು. ಅವರ ಜೀವನ ಸಾಧನೆ, ಸಂದೇಶಗಳನ್ನು ಮಕ್ಕಳಿಗೆ ತಿಳಿಸಿಕೊಡುವ ಮೂಲಕ ಸ್ಫೂರ್ತಿ ತುಂಬುವ ಕೆಲಸ ನಡೆಯಬೇಕು ಎಂದರು.

ಬೆಂಗಳೂರಿನ ಕರ್ನಾಟಕ ಆರ್ಯ ಪ್ರತಿನಿಧಿ ಸಭಾದ ಪ್ರಧಾನ ಋಷಿಮಿತ್ರ ಮಾತನಾಡಿ, ಮಹಾಪುರುಷರ ಜಯಂತಿ ಆಚರಿಸಿದರೆ ಸಾಲದು.ಅವರು ಸಾರಿದ ತತ್ವ -ಸಿದ್ಧಾಂತಗಳನ್ನು ಅರಿತು ಅವರು ತೋರಿದ ಮಾರ್ಗದಲ್ಲಿ ನಡೆಯಲು ಪ್ರತಿಯೊಬ್ಬರು ಸಂಕಲ್ಪ ಮಾಡಬೇಕಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಇಲ್ಲಿಯ ಆರ್ಯ ಸಮಾಜ ಪ್ರಧಾನ ಶಿವಾಜಿರಾವ ಜಗತಾಪ, ಪ್ರಮುಖರಾದ ಬಸವರಾಜ ಆರ್ಯ, ರಾಮರಾವ ಬಿರಾದಾರ ವರವಟ್ಟಿ ಮಾತನಾಡಿದರು. ಸುರೇಂದ್ರಗಿರಿ ಗೋಸ್ವಾಮಿ ಸ್ವಾಗತಿಸಿದರು. ಆರ್ಯ ಸಮಾಜ ಮಂತ್ರಿ ಸಂಜಯ ಜಾಧವ್ ನಿರೂಪಿಸಿದರು.ನಾರಾಯಣರಾವ ಚಿದ್ರಿ, ಮಾಣಿಕರಾವ ಲಾಡ, ತುಕಾರಾಮ ಮೋರೆ, ಉದಗೀರ್‌ನ ಪ್ರತಾಪಸಿಂಹಜಿ ಚವ್ಹಾಣ, ಹೀರಾಚಂದ ಫಾಫಮಾರೆ, ಪಂಢರಿನಾಥ ಚಿಟಗುಪ್ಪ ಇದ್ದರು.

ಆರ್ಯ ಸಮಾಜ ಪದಾಧಿಕಾರಿಗಳಾದ ನಾರಾಯಣರಾವ ಬೊನ್ನಾಮಾರುತಿರಾವ ಮಹೇಂದ್ರಕರ್, ಸತೀಶ್ ಲಾಡ್,ವಿಠ್ಠಲರಾವ ಸೂರ್ಯವಂಶಿ, ಶಿವಾಜಿ ಕಾಳೆ, ಆಶ್ವಿನ ಸೂತ್ರಾವೆ, ಸುಭಾಷ ಸಿರ್ಕೆ ಇದ್ದರು. ಎಂಬಿಬಿಎಸ್ ಪಾಸಾಗಿರುವ ಡಾ.ಸುಜಾತಾ ಸಂಜಯ ಜಾಧವ್ ಅವರಿಗೆ ಆರ್ಯ ಸಮಾಜದಿಂದ ಸನ್ಮಾನಿಸಲಾಯಿತು.

> ಗುಲಾಮಗಿರಿಯಿಂದ ವ್ಯಕ್ತಿ ವಿಕಾಸ, ದೇಶದ ಅಭಿವೃದ್ಧಿ ಆಗದು ಎಂದು ನಂಬಿದ್ದ ಮಹರ್ಷಿ ದಯಾನಂದರು ಸ್ವರಾಜ್ಯಕ್ಕಾಗಿ ಕರೆ ನೀಡಿದ್ದರು. ಧರ್ಮ ಪಾಲನೆಯಿಂದ ವ್ಯಕ್ತಿ ಸುಖ ಜೀವನ ನಡೆಸಲು ಸಾಧ್ಯವಿದೆ. ಆದರೆ,ಸ್ವಾರ್ಥ, ಪ್ರತಿಷ್ಠೆ, ಅಜ್ಞಾನದಿಂದಾಗಿ ಸತ್ಯ ಎದುರಿಗಿದ್ದರೂ ಹಲವರು ಸ್ವೀಕಾರ ಮಾಡಲು ಹಿಂಜರಿಯುತ್ತಾರೆ.
> -ಪಂಡಿತ ರಾಜವೀರಜಿ ಶಾಸ್ತ್ರೀಜಿ,ಸೊಲ್ಲಾಪುರ.

ನಗರ ಕೀರ್ತನೆ

ಬೆಳಗ್ಗೆ ಈಶ್ವರ ನಗರದ ಧರ್ಮ ಪ್ರಕಾಶ ಪ್ರಾಥಮಿಕ ಶಾಲಾ ಪರಿಸರದಲ್ಲಿ ಯಜ್ಞ ಹವನ ಜರುಗಿತು.ನಂತರ ಮಹರ್ಷಿ ದಯಾನಂದ ಸರಸ್ವತಿ ಅವರ ಭಾವಚಿತ್ರದೊಂದಿಗೆ ಈಶ್ವರ ನಗರದಿಂದ ಕಾಳಿಗಲ್ಲಿ, ಕೋಟೆ, ಗಾಂಧಿ ಚೌಕ್ ಮೂಲಕ ಮುಖ್ಯ ರಸ್ತೆ ಮಾರ್ಗವಾಗಿ ಆರ್ಯ ಸಮಾಜ ಮಂದಿರದ ವರೆಗೆ ನಗರ ಕೀರ್ತನೆ ನಡೆಯಿತು.

Scanned with OKEN Scanner

ನಿರಂತರ ಪರಿಶ್ರಮದಿಂದ ಸಾಧನೆ ಸಾಧ್ಯ: ಚಿತ್ರಶೇಖರ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ನಿಮ್ಮ ಕ್ಷೇತ್ರ ಯಾವುದೇ ಇದ್ದರೂ ಪರವಾಗಿಲ್ಲ. ನಿರಂತರ ಹಾಗೂ ಕಠಿಣ ಪರಿಶ್ರಮದಿಂದ ಮಾತ್ರ ಉನ್ನತ ಸಾಧನೆ ಮಾಡಬಹುದು' ಎಂದು ಉಪನ್ಯಾಸಕ ಚಿತ್ರಶೇಖರ ಚಿರಳ್ಳಿ ಹೇಳಿದ್ದಾರೆ.

ತಾಲ್ಲೂಕಿನ ಖಾನಾಪುರದ ಕಿತ್ತೂರರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ಜೀವನದಲ್ಲಿ ಉನ್ನತ ಗುರಿ ಇಟ್ಟುಕೊಳ್ಳಬೇಕು. ಆಗ ಮಾತ್ರ ಸಾಧಿಸುವ ಛಲ ಹುಟ್ಟುತ್ತದೆ. ಮಕ್ಕಳು ತಂದೆ, ತಾಯಿ ಮತ್ತು ಶಿಕ್ಷಕರಿಗೆ ಗೌರವ ನೀಡುವುದು ಅಗತ್ಯವಾಗಿದೆ. ಶಿಸ್ತು, ಸಂಯಮದಿಂದ ಇರುವುದು ಕೂಡ ಮುಖ್ಯವಾಗಿದೆ' ಎಂದು ಹೇಳಿದರು.



ಬಸವಕಲ್ಯಾಣ ತಾಲ್ಲೂಕಿನ ಖಾನಾಪುರದ ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ದೀಪ ಬೆಳಗಿಸಿದರು. ಚಿತ್ರಶೇಖರ ಚಿರಳ್ಳಿ, ಶರಣಬಸಪ್ಪ ದಂಡೆ ಪಾಲ್ಗೊಂಡಿದ್ದರು

ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ದೀಪ ಬೆಳಗಿಸಿದರು. ಮಾತನಾಡಿ, 'ವಿದ್ಯಾರ್ಥಿದೆಸೆಯಲ್ಲಿ ಸಂಸ್ಕಾರ ಮತ್ತು ಸಂಸ್ಕೃತಿಗೆ ಮಹತ್ವ ನೀಡಬೇಕು. ವಿದ್ಯೆ ಕಲಿತರೆ ಉತ್ತಮ ವ್ಯಕ್ತಿತ್ವ ರೂಪುಗೊಳ್ಳುವುದಿಲ್ಲ. ಎಲ್ಲ ಕ್ಷೇತ್ರದಲ್ಲೂ ಸ್ಪರ್ಧೆ ಹೆಚ್ಚಿರುವುದರಿಂದ ಕಠಿಣ ಪರಿಶ್ರಮ ಅಗತ್ಯವಾಗಿದೆ' ಎಂದು ಹೇಳಿದರು.

ಪ್ರಾಚಾರ್ಯ ಶರಣಬಸಪ್ಪ ದಂಡೆ, ಶಿಕ್ಷಕರಾದ ಜಗನ್ನಾಥಯ್ಯ ಸ್ವಾಮಿ, ರಾಘವೇಂದ್ರ ಹಣಕುಣಿ, ವಕೀಲ ಸೂರ್ಯಕಾಂತ ಗಾಯಕವಾಡ ಮಾತನಾಡಿದರು. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಶಿಕ್ಷಕ ಸಿದ್ಧಲಿಂಗ ನೇತೃತ್ವದಲ್ಲಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಸಿಪಿಐ ಅಲಿಸಾಬ್, ಶಾಂತಯ್ಯ ಮಠಪತಿ, ಸಂಜಯ ರೋಹಿಲೆ, ಶಶಿಧರ ಪಾಟೀಲ, ದಿಗಂಬರ ಕಿವಡೆ, ಅನಿಲ ಕಾಂಬಳೆ, ಚಂದ್ರಕಾಂತ ಪವಾಡಶೆಟ್ಟಿ, ರಾಹುಬಾಯಿ, ಕೀರ್ತನಾ ರಾಜಪ್ಪ, ಆಯಿಷಾ ಉಪಸ್ಥಿತರಿದ್ದರು.

ಬುಧವಾರ • ಫೆಬ್ರುವರಿ 21, 2024 ಪ್ರಜಾವಾಣಿ



ಬಸವಕಲ್ಯಾಣ ತಾಲ್ಲೂಕಿನ ಸಸ್ತಾಪುರ ಬಂಗ್ಲಾ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಶುಕ್ರವಾರ ನಡೆದ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ವಿದ್ಯಾರ್ಥಿನಿ ರಕ್ಷಿತಾ ಸುಧಾಕರ ಅವರಿಗೆ ಸನ್ಮಾನ ನಡೆಯಿತು

'ಕಠಿಣ ಪರಿಶ್ರಮದಿಂದ ಯಶಸ್ಸು ನಿಶ್ಚಿತ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಕಠಿಣ ಪರಿಶ್ರಮದಿಂದ ಜೀವನದಲ್ಲಿ ಯಶಸ್ಸು ನಿಶ್ಚಿತ' ಎಂದು ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ನರಸಿಂಗರಡ್ಡಿ ಗದ್ದೇಗಾಂವ ಹೇಳಿದ್ದಾರೆ.

ತಾಲ್ಲೂಕಿನ ಸಸ್ತಾಪುರ ಬಂಗ್ಲಾ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ಇದು ಸ್ಪರ್ಧಾತ್ಮಕ ಯುಗ ಆಗಿರುವುದರಿಂದ ಸತತವಾಗಿ ಅಧ್ಯಯನ ನಡೆಸಬೇಕಾಗಿದೆ. ವಾರ್ಷಿಕ ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳನ್ನು ಪಡೆದುಕೊಳ್ಳುವುದು ಅನಿವಾರ್ಯ. ಸರ್ಕಾರ ವಸತಿ ಶಾಲೆಗಳನ್ನು ಆರಂಭಿಸಿ ಬಡ ಕುಟುಂಬದ ಮಕ್ಕಳ ಶಿಕ್ಷಣಕ್ಕೆ ಅನುಕೂಲ ಕಲ್ಪಿಸಿದ್ದು ಇದರ ಸದುಪಯೋಗ ಪಡೆಯಬೇಕು' ಎಂದರು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಮಕ್ಕಳಿಗೆ ವಿದ್ಯೆಯೊಂದಿಗೆ ಸಂಸ್ಕಾರ ನೀಡಬೇಕಾಗಿದೆ. ಸಂಸ್ಕೃತಿಯ ಪಾಲನೆ ಅಗತ್ಯ. ಜೀವನದಲ್ಲಿ ಶಾಂತಿ ಮತ್ತು ನೆಮ್ಮದಿಯಿಂದ ಇರಬೇಕಾದರೆ ಉತ್ತಮ ಕಾರ್ಯಗೈಯಬೇಕು' ಎಂದರು.

ನಗರ ಠಾಣೆ ಸಿಪಿಐ ಅಲಿಸಾಬ್ ಮಾತನಾಡಿ, 'ಸಮಯದ ಸರಿಯಾದ ಪಾಲನೆ ಮಾಡಬೇಕು. ಶಿಸ್ತು, ಸಂಯಮ ಬೆಳೆಸಿಕೊಳ್ಳುವುದು ಸಹ ಅತ್ಯಂತ ಅವಶ್ಯಕ' ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ವಿ.ಬಿ.ಹಿರೇಗೌಡರ, ಪ್ರಾಚಾರ್ಯ ಭೀಮರಡ್ಡಿ ರಾಸೂನೆ, ಶಿಕ್ಷಕ ಗೋರಖನಾಥ ಹಳ್ಳಿಖೇಡ, ಸಂಜೀವಕುಮಾರ ಕಟ್ಟಿಮನಿ ಮಾತನಾಡಿದರು.

ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿ ರಕ್ಷಿತಾ ಸುಧಾಕರ ಅವರಿಗೆ ಸನ್ಮಾನ ನಡೆಯಿತು.

ಮುಖಂಡ ಶಾಂತಪ್ಪ ಪಾಟೀಲ, ಶಾಂತಯ್ಯ ಮಠಪತಿ, ಶರಣಬಸಪ್ಪ ದಂಡೆ, ಅನಿಲ ಕಾಂಬಳೆ, ಶಶಿಧರ ಪಾಟೀಲ, ಮಾಣಿಕರೆಡ್ಡಿ ಕಲ್ಯಾಣೆ, ಅಶೋಕರೆಡ್ಡಿ ನಿಂಗಾವರೆ ಉಪಸ್ಥಿತರಿದ್ದರು. ನಂತರ ಮಕ್ಕಳು ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರದರ್ಶಿಸಿದರು. ಗಣ್ಯರು, ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಪ್ರಜಾವಾಣಿ ಶನಿವಾರ • ಫೆಬ್ರುವರಿ 17, 2024

Scanned with OKEN Scanner



ಬಸವಕಲ್ಯಾಣ ತಾಲ್ಲೂಕಿನ ಬೆಟಬಾಲ್ಕುಂದಾ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಂಗಳವಾರ ನಡೆದ ವಾರ್ಷಿಕೋತ್ಸವದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಶಿಕ್ಷಕರನ್ನು ಸನ್ಮಾನಿಸಲಾಯಿತು

'ಮಕ್ಕಳಿಗೆ ಸಂಸ್ಕಾರ, ಸಂಸ್ಕೃತಿ ಕಲಿಸಿ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಮಕ್ಕಳಿಗೆ ವಿದ್ಯೆಯೊಂದಿಗೆ ಸಂಸ್ಕಾರ, ಸಂಸ್ಕೃತಿ ಕಲಿಸಬೇಕು' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ತಾಲ್ಲೂಕಿನ ಬೆಟಬಾಲ್ಕುಂದಾ ಮೊರಾರ್ಜಿದೇಸಾಯಿ ವಸತಿ ಶಾಲೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ನಾಗರಾಜ ಹಾವಣ್ಣ ಮಾತನಾಡಿ, 'ಸತತ ಪರಿಶ್ರಮದಿಂದ ಯಾವುದೇ ಕೆಲಸದಲ್ಲಿ ಯಶಸ್ಸು ಸಾಧಿಸಬಹುದು. ಪಠ್ಯೇತರ ಚಟುವಟಿಕೆಗಳಲ್ಲೂ ಮಕ್ಕಳು ಆಸಕ್ತಿ ತೋರಬೇಕು' ಎಂದರು.

ವಿವಿಧ ಕ್ಷೇತ್ರದ ಸಾಧಕ ಶಿಕ್ಷಕರಾದ ಶರಣಬಸಪ್ಪ ದಂಡೆ, ಜಗನ್ನಾಥಯ್ಯ ಸ್ವಾಮಿ, ಅಲ್ಲಾ ಸಲಗರೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಾದ ಬಸವಸಾಗರ, ಕರಣ ನಾಮದೇವ, ಕಾರ್ತಿಕ ಚಿತ್ರಶೇಖರ ಅವರನ್ನು ಸನ್ಮಾನಿಸಲಾಯಿತು. ಶಿಕ್ಷಕರಾದ ರಾಜಶೇಖರ ವರ್ಮಾ, ಕೃಷ್ಣಕುಮಾರ, ಚಂದ್ರಕಾಂತ ಪವಾಡಶೆಟ್ಟಿ ಮಾತನಾಡಿದರು.

ಪ್ರಾಚಾರ್ಯ ಸಂಜಯ ರೋಹಿಲೆ, ಗ್ರಾಮ ಪಂಚಾಯಿತಿ ಅಧ್ಯಕ್ಷ ಪ್ರಹ್ಲಾದ್ ರಾಠೋಡ, ಹಣಮಂತರಾವ್ ಮಳ್ಳಿ, ಕರುಣಾಬಾಯಿ, ಅಮಿತೊಧನ, ಪಿಡಿಓ ವಿಷ್ಣುಕಾಂತರೆಡ್ಡಿ, ಶಾಂತಯ್ಯ ಮಠಪತಿ, ಶಶಿಧರ ಪಾಟೀಲ, ಅನಿಲ ಕಾಂಬಳೆ, ದಿಗಂಬರ ಕಿವಡೆ, ರಾಜಕುಮಾರ ಹೊನ್ನಾಡೆ, ಗೌತಮ, ಮಹಾನಂದ ಧಬಾಲೆ, ಸುಜಾತಾ, ಪದ್ಮಾ ಉಪಸ್ಥಿತರಿದ್ದರು.

ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ವಿವಿಧ ಚಟುವಟಿಕೆಗಳಲ್ಲಿ ವಿಜೇತರಾದ ಮಕ್ಕಳಿಗೆ ಪ್ರಮಾಣ ಪತ್ರ ನೀಡಲಾಯಿತು.

ಪ್ರಜಾವಾಣಿ ಬುಧವಾರ • ಫೆಬ್ರುವರಿ 28, 2024

ಶನಿವಾರ 2 ಸೆಪ್ಟೆಂಬರ್ 2023
2 SEPTEMBER 2023
ನಂ.1 ವಿಜಯವಾಣಿ
VIJAYAVANI »KALABURAGI

ಡಾ.ಅಭಿನವ ಘನಲಿಂಗ ಶ್ರೀ ನುಡಿ । ಗವಿ ಮಠದಲ್ಲಿ ವಿಶೇಷ ಉಪನ್ಯಾಸ

ದೇವರು ಒಬ್ಬನೇ ಆರಾಧನೆ ಅನಂತ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮೂಲದಲ್ಲಿ ದೇವರು ಒಬ್ಬನೇ. ಆದರೆ ಭಕ್ತಿಯ ಪ್ರತೀಕವಾಗಿ ಅವನನ್ನು ಅನಂತ ಹೆಸರುಗಳಿಂದ ಆರಾಧಿಸುತ್ತೇವೆ ಎಂದು ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣ ಮಾಸದ ನಿಮಿತ್ತ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಸಹಯೋಗದಲ್ಲಿ ಗುರುವಾರ ಸಂಜೆ ಏರ್ಪಡಿಸಿದ್ದ ವೀರಶೈವ ಲಿಂಗಾಯತ ಧರ್ಮಗ್ರಂಥ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಐದನೇ ವಿಶೇಷ ಉಪನ್ಯಾಸ ಮಾಲೆಯಲ್ಲಿ ಅವರು ಮಾತನಾಡಿದರು.

ಪ್ರಪಂಚದಲ್ಲಿರುವ ಒಬ್ಬ ದೇವನೇ ಶಿವ. ಆತ ನಿರ್ಗುಣ, ನಿರಾಕಾರ ಎಂದು ಜಗತ್ತಿನ ಪ್ರಥಮ ಜಗದ್ಗುರು ಶ್ರೀ ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಮೂಲಕ ಜಗತ್ತಿಗೆ ಸಾರಿ ಹೇಳಿದ್ದಾರೆ. ಬಸವಣ್ಣನವರು ತಮ್ಮ ವಚನದ ಮೂಲಕ ನಮಗೆ ಕನ್ನಡದಲ್ಲಿ ತಿಳಿಸಿಕೊಟ್ಟಿದ್ದಾರೆ ಎಂದರು.

ಪುಣ್ಯಕೋಟಿ ಕಾಲೇಜು ಪ್ರಾಚಾರ್ಯ ಪ್ರೊ. ಸೂರ್ಯಕಾಂತ ಶೀಲವಂತ ಮಾತನಾಡಿ, ಗವಿಮಠ 12ನೇ ಶತಮಾನಕ್ಕಿಂತ ಪೂರ್ವದ್ದು. ಜಗದ್ಗುರು ಶ್ರೀ ರೇವಸಿದ್ಧೇಶ್ವರರಿಂದ ಸ್ಥಾಪನೆಯಾಗಿದೆ. ಅವರ ವರಪ್ರಸಾದ ಜಗದ್ಗುರು ಶ್ರೀ ಘನಲಿಂಗ ರುದ್ರಮುನಿಗಳು ಪವಾಡಗೈದ ಪುಣ್ಯತಾಣ ಇದಾಗಿದೆ ಎಂದು ಗವಿಮಠದ ಚರಿತ್ರೆ ಹೇಳಿದರು.

ಅಲ್ತಾಫ್ ಅಲಿ ಮಾತನಾಡಿ, ಶ್ರಾವಣ ಹಾಗೂ ರಂಜಾನ್ ಎರಡೂ ಒಂದೇ ರೀತಿಯ ಪವಿತ್ರ ಮಾಸಗಳು. ಗವಿಮಠದ ಡಾ.ಅಭಿನವ ಸ್ವಾಮೀಜಿ ಸರ್ವಧರ್ಮ ಸಮನ್ವಯ ಹಾಗೂ ಸಮಾನತೆಯ ಪ್ರತಿಪಾದಕರು ಎಂದು ಬಣ್ಣಿಸಿದರು.

ಯುವ ಮುಖಂಡ ಅಮರ ಬಡದಾಳೆ ಮಾತನಾಡಿದರು. ರೆಡ್ಡಿ ಸಮಾಜದ ಅಧ್ಯಕ್ಷ ವಿಜಯಕುಮಾರ ರೆಡ್ಡಿ, ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಮಂಜೂರ್ ಪೇಶಮಾಮ್, ಗಿರಯ್ಯ ಸ್ವಾಮಿ, ರುದ್ರಮುನಿ ಚನ್ನೂರ, ಬಸವರಾಜ ಚಿರಡೆ, ಶಿವಾನಂದ ಪರ್ತಾಪುರೆ, ವಿಜಯಲಕ್ಷ್ಮೀ, ಹೇಮಾವತಿ, ಶಾಂತಾಬಾಯಿ, ಮಂಗಲಾ, ಪರಮೇಶ್ವರಿ ಇತರರಿದ್ದರು.

ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಮುಖ್ಯಗುರು ರಮೇಶ ರಾಜೋಳೆ ನಿರೂಪಣೆ ಮಾಡಿದರು. ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ಪ್ರಾರ್ಥನಾಗೀತೆ ಹಾಡಿದರು. ವಿದ್ಯಾರ್ಥಿ ಶರಣಬಸಪ್ಪ ಅಲಗುಡೆ ಮಂಗಳಾರತಿ ಹಾಡಿದರು.



ಬಸವಕಲ್ಯಾಣದ ಗವಿಮಠದಲ್ಲಿ ಗುರುವಾರ ಏರ್ಪಡಿಸಿದ್ದ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಮುಖಂಡ ಅಮರ ಬಡದಾಳೆ ಅವರನ್ನು ಸನ್ಮಾನಿಸಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪ್ರೊ. ಸೂರ್ಯಕಾಂತ ಶೀಲವಂತ, ಅಲ್ತಾಫ್ ಅಲಿ, ಮಂಜೂರ್ ಪೇಶಮಾಮ್, ವಿಜಯಕುಮಾರ ರೆಡ್ಡಿ ಇತರರಿದ್ದರು.

Scanned with OKEN Scanner

ತುಮಕೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ವೆಂಕಟರೆಡ್ಡಿ ಅಭಿಪ್ರಾಯ

ಬರವಣಿಗೆಗೆ ಭಾಷಾಜ್ಞಾನ ಅಗತ್ಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸುರಗಿರಿ ಗ್ರಂಥ ಲೋಕಾರ್ಪಣೆ
- ಕಲ್ಯಾಣದ ಪರಂಪರೆ ಎತ್ತಿಹಿಡಿಯಲು ಪ್ರಯತ್ನಿಸಿ
- ಪುಸ್ತಕ ಓದುವ ಹವ್ಯಾಸ ಬೆಳೆಯಬೇಕು

ಬಸವಕಲ್ಯಾಣ: 'ಯಾವುದೇ ಬರವಣಿಗೆಗೆ ಭಾಷಾಜ್ಞಾನ ಅಗತ್ಯವಿದ್ದು ಇದಕ್ಕಾಗಿ ನಿರಂತರ ಅಧ್ಯಯನ ಕೈಗೊಳ್ಳಬೇಕು. ಕೆಲವರು ಓದದೆಯೇ ಬರಹಗಾರ ಅನಿಸಿಕೊಳ್ಳುತ್ತಿರುವುದು ವಿಪರ್ಯಾಸ' ಎಂದು ತುಮಕೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಮುಖ್ಯಸ್ಥ ವೆಂಕಟರೆಡ್ಡಿ ನಾರಾಯಣಪುರ ಅಭಿಪ್ರಾಯಪಟ್ಟರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ, ಅಭಿನವಶ್ರೀ ಪ್ರಕಾಶನ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸುರಗಿರಿ ಗ್ರಂಥ ಲೋಕಾರ್ಪಣೆಗೈದು ಅವರು ಮಾತನಾಡಿದರು.

'ಕಲ್ಯಾಣವು ಶರಣರ ನಾಡಾಗಿದೆ. ಈ ನೆಲದ ಮಹಿಮೆಯನ್ನರಿತು ವೈಚಾರಿಕತೆ ಬಿತ್ತರಿಸುವುದಕ್ಕೆ ಮತ್ತು ಪರಂಪರೆಯನ್ನು ಎತ್ತಿ ಹಿಡಿಯುವುದಕ್ಕೆ ಬರಹಗಾರರು ಪ್ರಯತ್ನಿಸಬೇಕು. ಹನಿಗವನ ಸಾಹಿತ್ಯ ಪ್ರಭಾವಪೂರ್ಣ ಹಾಗೂ ಕೆಲವೇ ಶಬ್ದಗಳಲ್ಲಿ ಮಹತ್ವದನ್ನು ಹೇಳುವುದಾಗಿದೆ. ನಾಡಿನ ಸಾಹಿತಿಗಳು ಮತ್ತು ಲಂಕೇಶ ಹಾಗೂ ಇತರೆ ಅನೇಕ ಪತ್ರಕರ್ತರು ವಿವಿಧ ಪ್ರಕಾರದ ಸಾಹಿತ್ಯ ರಚಿಸಿದ್ದರೂ ಗಟ್ಟಿ ಸಾಹಿತ್ಯದ ಕೆಲ ಗ್ರಂಥಗಳು ಮಾತ್ರ ಲಭ್ಯ ಇವೆ' ಎಂದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ವೈಚಾರಿಕತೆ, ಆಧುನಿಕತೆ ರೂಢಿಸಿಕೊಳ್ಳಬೇಕು. ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ ಸಂವರ್ಧನೆ ಆಗುವುದಕ್ಕೆ ಎಲ್ಲರ ಪ್ರೋತ್ಸಾಹ ಅಗತ್ಯವಾಗಿದೆ. ನಾಗರಾಜು ಅವರ ಸುರಗಿರಿ ಗ್ರಂಥ ವೈಚಾರಿಕ ಲೇಖನ ಒಳಗೊಂಡಿದೆ' ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ವಿ.ಬಿ.ಹಿರೇಗೌಡರ್ ಮಾತನಾಡಿ, 'ಪುಸ್ತಕ ಓದುವ ಹವ್ಯಾಸ ಬೆಳೆಯಬೇಕು' ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ, ಪತ್ರಕರ್ತ ಮಾರ್ತಂಡ ಜೋಶಿ, ನಾಗರಾಜು, ಪ್ರೊ. ರುದ್ರೇಶ್ವರ ವಿರೂಪಾಕ್ಷಯ್ಯ ಸ್ವಾಮಿ, ರಮೇಶ ರಾಜೋಳೆ, ಶರಣಬಸಪ್ಪ ಆಲಗೂಡೆ, ನಿತೀನ ನೀಲಕಂಠ ಮಾತನಾಡಿದರು.

ಸಾಹಿತಿ ವೀರಶೆಟ್ಟಿ ಪಾಟೀಲ, ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಗವಿಮಠ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ, ಮಲ್ಲಿಕಾರ್ಜುನ ಆಲಗೂಡೆ, ಧನರಾಜ ರಾಜೋಳೆ, ಶಂಕರ ಕರಣೆ ಇದ್ದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಗುರುವಾರ ನಡೆದ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ತುಮಕೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ವೆಂಕಟರೆಡ್ಡಿ ನಾರಾಯಣಪುರ ಅವರನ್ನು ದಂಪತಿ ಸಮೇತ ಸನ್ಮಾನಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ನಾಗರಾಜು ಇತರರಿದ್ದರು

ಬಸವಕಲ್ಯಾಣ: ಶರಣರ ಬಗೆಗಿನ ತಪ್ಪು ಮಾಹಿತಿ ದೂರಿನ ಹಿನ್ನೆಲೆ

ತಪ್ಪು ಇತಿಹಾಸದ ಫಲಕ ಮುಚ್ಚಿದ ಮಂಡಳಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ನಗರದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಗವಿಮಠದ ಆವರಣದಲ್ಲಿನ ನಾಮಫಲಕದಲ್ಲಿ ಶರಣರ ಕುರಿತು ತಪ್ಪು ಮಾಹಿತಿ ಪ್ರಕಟಿಸಿದ ದೂರಿನ ಹಿನ್ನೆಲೆಯಲ್ಲಿ ಬುಧವಾರ ನಾಮಫಲಕವನ್ನು ಮುಚ್ಚಲಾಯಿತು.

'ನಗರದಲ್ಲಿ ಅನೇಕ ಶರಣ ಸ್ಮಾರಕಗಳ ಎದುರಲ್ಲಿ ಮಾಹಿತಿ ಫಲಕಗಳನ್ನು ಅಳವಡಿಸಲಾಗಿದ್ದು, ಘನಲಿಂಗ ರುದ್ರಮುನಿ ಗವಿಮಠದ ಎದುರಿನ ಫಲಕದಲ್ಲಿ ತಪ್ಪು ಮಾಹಿತಿ ಪ್ರಕಟಿಸಲಾಗಿದೆ ಎಂದು ಕೆಲ ಮಠಾಧೀಶರು ಹಾಗೂ ಮುಖಂಡರು ದೂರಿದ್ದರು. ತಪ್ಪು ಮಾಹಿತಿಯ ಬಗ್ಗೆ ಟೀಕೆ ವ್ಯಕ್ತವಾಗಿತ್ತು. ಆದ್ದರಿಂದ ಫಲಕವನ್ನು ಮುಚ್ಚಲಾಗಿದೆ' ಎಂದು ಈ ಸಂಬಂಧ ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಆಯುಕ್ತ ರಮೇಶ ಕೋಲಾರ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

'ರಾಜ್ಯ ಸರ್ಕಾರದಿಂದ ₹ 620 ಕೋಟಿ ವೆಚ್ಚದಲ್ಲಿ ನಿರ್ಮಿಸುತ್ತಿರುವ ನೂತನ ಅನುಭವ ಮಂಟಪದ ಕಾಮಗಾರಿ ಮುಂದುವರಿದಿದ್ದು, ಅದರಲ್ಲಿನ ಕಲ್ಲಿನ ಕಂಬಗಳ ಮೇಲೆ ಶರಣರ ವಚನಗಳನ್ನು ಕೆತ್ತಲಾಗುತ್ತಿದೆ. ಅದಕ್ಕಾಗಿ ವಚನಗಳ ಆಯ್ಕೆಗೆ ಗೋ.ರು. ಚನ್ನಬಸಪ್ಪ, ಅರವಿಂದ ಜತ್ತಿ, ರಂಜಾನ್ ದರ್ಗಾ ಮತ್ತಿತರರನ್ನು ಒಳಗೊಂಡಿರುವ ಸಮಿತಿ ರಚಿಸಲಾಗಿದೆ. ಈ ಸಮಿತಿ ಸೂಚಿಸಿದ ಮಾಹಿತಿಯನ್ನು ಫಲಕದಲ್ಲಿ ಬರೆಸಲಾಗುತ್ತದೆ. ಅದುವರೆಗೆ ಅದನ್ನು ಮುಚ್ಚಿಡಲಾಗುತ್ತದೆ' ಎಂದಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಮುಖಂಡ ಆಕಾಶ ಖಂಡಾಳೆಯವರು, 'ಗವಿಮಠದಲ್ಲಿನ ಫಲಕದಲ್ಲಿ ಶರಣರಿಗೆ ಅಪಚಾರ ಎಸಗುವಂಥ ಮಾಹಿತಿ ಪ್ರಕಟ ಆಗಿತ್ತು. ಆದ್ದರಿಂದ ಈ ಬಗ್ಗೆ ತಾವು ಹಾಗೂ ಕೆಲ ಮಠಾಧೀಶರು ಮಾಹಿತಿ ಅಳಿಸುವುದಕ್ಕೆ ಆಗ್ರಹಿಸಿದ್ದವು. ಸಾಹಿತಿಗಳು ಆ ಫಲಕ ಮುಚ್ಚಿರುವುದಕ್ಕೆ ಸಂತಸವಾಗಿದೆ. ಇಂಥ ತಪ್ಪುಗಳು ಆಗದಿರುವಂತೆ ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯವರು ಕಾಳಜಿವಹಿಸಬೇಕು' ಎಂದಿದ್ದಾರೆ.



ಬಸವಕಲ್ಯಾಣದ ತ್ರಿಪುರಾಂತ ಘನಲಿಂಗ ರುದ್ರಮುನಿ ಗವಿಮಠದ ಆವರಣದಲ್ಲಿನ ಫಲಕದ ಮೇಲೆ ಗೋ.ರು.ಚನ್ನಬಸವ, ಅರವಿಂದ ಜತ್ತಿ ನೇತೃತ್ವದಲ್ಲಿ ಹೊದಿಕೆ ಹಾಕಿ ಮುಚ್ಚಲಾಯಿತು

Scanned with OKEN Scanner

ಇಂದು ಬೈಕ್ ಮೆರವಣಿಗೆ, ಜ.16ರವರೆಗೆ ಜಾತ್ರೆ, ವಿವಿಧ ಕಾರ್ಯಕ್ರಮ

ನಿಸರ್ಗ ಸೌಂದರ್ಯದ ಮಾಚಿದೇವರ ದೇಗುಲ

• ಮಾಣಿಕ ಆರ್.ಭುರೆ



ಮಡಿವಾಳ ಮಾಚಿದೇವರ ತೈಲಚಿತ್ರ

ಬಸವಕಲ್ಯಾಣ: ನಗರದ ಶರಣ ಮಡಿವಾಳ ಮಾಚಿದೇವರ ದೇವಸ್ಥಾನದ ಸುತ್ತಲಿನಲ್ಲಿ ನೀರಿನ ಹೊಂಡ, ಎಲ್ಲೆಡೆ ಹುಲ್ಲು, ಹೂಗಿಡಗಳು ಮತ್ತು ಮರಗಳಿರುವ ಕಾರಣ ನಿಸರ್ಗ ಸೌಂದರ್ಯದಿಂದ ಕೂಡಿದೆ. ಜನವರಿ 13ರಿಂದ 16ರವರೆಗೆ ಮಾಚಿದೇವರ ಜಾತ್ರೆ ಅಂಗವಾಗಿ ಇಲ್ಲಿ ಮತ್ತು ತ್ರಿಪುರಾಂತದಲ್ಲಿ ವಿವಿಧ ಕಾರ್ಯಕ್ರಮಗಳು ಜರುಗಲಿವೆ.

ಮಾಚಿದೇವರು 12ನೇ ಶತಮಾನದ ಪ್ರಮುಖ ಶರಣರು. ಬಸವಾದಿ ಶರಣರ ವಚನಸಾಹಿತ್ಯದ ಸಂರಕ್ಷಣೆಗೆ ಹೋರಾಡಿದವರು. ಅದಕ್ಕಾಗಿಯೇ ಇವರನ್ನು ವೀರಗಣಾಚಾರಿ ಎನ್ನಲಾಗುತ್ತದೆ. ಅಲ್ಲಮಪ್ರಭು ದೇವರ ಗದ್ದುಗೆ ಮಠದ ಹಿಂದುಗಡೆ ಸ್ವಲ್ಪ ದೂರದಲ್ಲಿ ಈ ದೇವಸ್ಥಾನವಿದ್ದು ಇಲ್ಲಿ ಮಾಚಿದೇವರು ವಾಸಿಸುತ್ತಿದ್ದರು. ಇಲ್ಲಿನ ಹೊಂಡದಲ್ಲಿ ಬಟ್ಟೆ ಸ್ವಚ್ಛತೆಯ ಕಾಯಕ ಕೈಗೊಂಡಿದ್ದರು ಎನ್ನಲಾಗುತ್ತದೆ.



ಬಸವಕಲ್ಯಾಣದಲ್ಲಿರುವ ಹೊಂಡದ ಮಧ್ಯದಲ್ಲಿನ ಮಡಿವಾಳ ಮಾಚಿದೇವರ ದೇವಸ್ಥಾನ

ಹೊಂಡದ ಮಧ್ಯದಲ್ಲಿ ಹಳೆಯ ಕಾಲದ ದೇವಸ್ಥಾನವಿತ್ತು. ಅದನ್ನು ಕೆಡವಿ ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯಿಂದ ಕೆಲ ವರ್ಷಗಳ ಹಿಂದೆ ಕೆತ್ತನೆಯ ಕಲ್ಲುಗಳಿಂದ ಹೊಸ ದೇವಸ್ಥಾನ ನಿರ್ಮಿಸಲಾಗಿದೆ. ಎದುರಿಗೆ ನಂದಿ ಮಂಟಪವಿದೆ. ಆವರಣದಲ್ಲಿ ಹಳೆಯ ಕಾಲದ ಬಾವಿ ಹಾಗೆಯೇ ಇದೆ. ಹೊಂಡಕ್ಕೆ ತಡೆಗೋಡೆ ನಿರ್ಮಿಸಿ ಅದನ್ನು ಇನ್ನಷ್ಟು ಸುಂದರಗೊಳಿಸಲಾಗಿದೆ. ಹೀಗಾಗಿ ಇಲ್ಲಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ.

'ಜಾತ್ರೆ ಅಂಗವಾಗಿ ಭಕ್ತರು ಈ ದೇವಸ್ಥಾನದಲ್ಲಿ ನೈವೇದ್ಯ, ತೆಂಗು ಅರ್ಪಿಸುತ್ತಾರೆ. ಆದರೆ ಎಲ್ಲ ಧಾರ್ಮಿಕ ಚಟುವಟಿಕೆಗಳು ಸಮೀಪದ ತ್ರಿಪುರಾಂತದಲ್ಲಿ ಹಾಗೂ ಕೆರೆ ದಂಡೆಯಲ್ಲಿ ನಡೆಯುತ್ತವೆ. ತ್ರಿಪುರಾಂತದ ಎರಡು ಪ್ರತ್ಯೇಕ ಮನೆಗಳಲ್ಲಿ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗುತ್ತದೆ. ಪಲ್ಲಕ್ಕಿ ಮೆರವಣಿಗೆ ಮಾತ್ರ ಜೊತೆ ಜೊತೆಯಾಗಿಯೇ ಜರುಗುತ್ತದೆ' ಎಂದು ಹಿರಿಯರಾದ ಬಕ್ಕಯ್ಯಸ್ವಾಮಿ ತಿಳಿಸಿದರು.

'ಉತ್ಸವ ಮೂರ್ತಿಗಳಿಗೆ ಎಣ್ಣೆ ಹಚ್ಚುವುದರೊಂದಿಗೆ ಜಾತ್ರೆ ಆರಂಭ ಆಗುತ್ತದೆ. ವಾರದವರೆಗೆ ವಿವಿಧ ಕಾರ್ಯಕ್ರಮಗಳು ನಡೆಯುತ್ತವೆ. ತ್ರಿಪುರಾಂತ ಕೆರೆ ದಂಡೆಯಲ್ಲಿ ಅಗ್ನಿಪೂಜೆ ಮತ್ತು ಕೆಂಡ ಹಾಯುವುದರೊಂದಿಗೆ ಜಾತ್ರೆ ಸಮಾಪ್ತಗೊಳ್ಳುತ್ತದೆ' ಎಂದು ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.



ಜಾತ್ರೆಯ ಕೊನೆಯ ದಿನದಂದು ಬೆಳಿಗ್ಗೆ ಹಮ್ಮಿಕೊಳ್ಳುವ ಅಗ್ನಿಪೂಜೆಗೆ ಅನೇಕ ವರ್ಷಗಳಿಂದ ನಾನೇ ಚಾಲನೆ ನೀಡುತ್ತೇನೆ. ಸಾವಿರಾರು ಭಕ್ತರು ಪಾಲ್ಗೊಳ್ಳುತ್ತಾರೆ
ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ತ್ರಿಪುರಾಂತ ಗವಿಮಠ

'ಜ.13 ರಂದು ಜಾತ್ರೆ ಅಂಗವಾಗಿ ನಗರದಲ್ಲಿ ಬೈಕ್ ಮೆರವಣಿಗೆ ನಡೆಯಲಿದೆ. ಜನವರಿ 14ರ ರಾತ್ರಿ ಪಲ್ಲಕ್ಕಿ ಪೂಜೆ ಮತ್ತು ಶಲ್ಯ ಸುಡುವ ಕಾರ್ಯಕ್ರಮವಿರುತ್ತದೆ. 15ರಂದು ರಾತ್ರಿ ನಾಟಕ ಮತ್ತಿತರೆ ಸಾಂಸ್ಕೃತಿಕ ಚಟುವಟಿಕೆಗಳು ನಡೆಯಲಿವೆ. 16ರಂದು ಬೆಳಿಗ್ಗೆ ಪಲ್ಲಕ್ಕಿ ಮೆರವಣಿಗೆಯೊಂದಿಗೆ ಭಕ್ತರು ಕೆರೆ ದಂಡೆಗೆ ಬಂದು ಅಗ್ನಿಪೂಜೆ ನೆರವೇರಿಸಿ ಕೆಂಡ ಹಾಯುತ್ತಾರೆ' ಎಂದು ಅವರು ವಿವರಿಸಿದರು.

ಪ್ರಜಾವಾಣಿ ಶನಿವಾರ • ಜನವರಿ 13, 2024



ರಾಷ್ಟ್ರ, ಧರ್ಮಕ್ಕಾಗಿ ತನುಮನ ಸಮರ್ಪಿಸಿ



ಪಂಚಮಹಾಭೂತಗಳು ಸದಾ ಸಮರ್ಪಣೆಯನ್ನು ಮಾಡುತ್ತಲಿವೆ. ನಮ್ಮ ಜೀವನದಲ್ಲಿ ಸಮರ್ಪಣೆಯು ಒಂದು ಮಹತ್ವವಾದ ಕಾರ್ಯ ಎಲ್ಲಿಯವರೆಗೆ ನಾವು ಭಗವಂತನಿಗೆ ಸಂಪೂರ್ಣವಾಗಿ ಸಮರ್ಪಿತರಾಗುವುದಿಲ್ಲವೋ ಅಲ್ಲಿಯವರೆಗೆ ಅವನ ಕೃಪೆಯು ನಮಗೆ ದೊರೆಯಲಾರದು ಆಧ್ಯಾತ್ಮಿಕ ಜೀವನದಲ್ಲಿ ಸಮರ್ಪಣೆಗೆ ಮಹತ್ವ ಇರುವಂತೆ ಲೌಕಿಕ ಜೀವನದಲ್ಲಿಯೂ ಸಹ ಅದಕ್ಕೆ ಅತಿಯಾದ ಮಹತ್ವವಿದೆ.

ಯಾರು ರಾಷ್ಟ್ರಕ್ಕಾಗಿ ಸಮಾಜಕ್ಕಾಗಿ ಮತ್ತು ಧರ್ಮಕ್ಕಾಗಿ ತಮ್ಮ ತನು ಮನ ಧನಗಳನ್ನು ಸಮರ್ಪಿಸುತ್ತಾರೆಯೋ ರಾಷ್ಟ್ರದ ಜನತೆ ಅವರನ್ನು ಅತ್ಯಂತ ಗೌರವದಿಂದ ಕಾಣುತ್ತದೆ ಸಮರ್ಪಣಾತ್ಮಕವಾದ ಅರ್ಥಾತ್ ತ್ಯಾಗಾತ್ಮಕವಾದ ಗುಣದಿಂದಲೇ ಪಶು ಪಾಷಾಣಾದಿಗಳು ಸಹ ಭಗವಂತನಂತೆ ಪೂಜೆ ಗೊಳ್ಳುತ್ತಲಿವೆ.

ಹಿಮಾಲಯದ ಗಂಗೋತ್ರಿಯಲ್ಲಿ ಕುದಿಸಿದ ಗಂಗೆಯೂ ಸಾಗರವನ್ನು ಸೇರುವರೆಗೆ ತನ್ನ ಪವಿತ್ರವಾದ ಜಲದಿಂದ ಅನೇಕ ಕಲ್ಯಾಣಕಾರಿ ಕಾರ್ಯಗಳನ್ನು ಮಾಡುತ್ತಿರುತ್ತದೆ. ಕೆಲವರು ಪಾಪ ವಿಮೋಚನೆಗಾಗಿ ಇದರಲ್ಲಿ ಸ್ನಾನ ಮಾಡಿದರೆ ಮತ್ತೆ ಕೆಲವರು ತಮ್ ತಮ್ಮ ತೃಷೆಯನ್ನು ತೃಪ್ತಿಪಡಿಸಿ ಕೊಳ್ಳುತ್ತಾರೆ ಇನ್ನೂ ಕೆಲವರು ತಮ್ಮ ಹೊಲದ ಪೈರಿಗಾಗಿ ಅದನ್ನು ಬಳಸಿಕೊಳ್ಳುತ್ತಾರೆ. ಈ ರೀತಿಯಾಗಿ ತನ್ನ ಹತ್ತಿರ ಬಂದವರಿಗೆಲ್ಲ ತನ್ನ ಸ್ವಲ್ಪ ಅಂಶವನ್ನು ಸಮರ್ಪಿಸುತ್ತ ಕೊನೆಗೆ ಉಳಿದಿರುವ ತನ್ನ ಅಸ್ತಿತ್ವವನ್ನೆಲ್ಲ ಸಾಗರಕ್ಕೆ ಸಮರ್ಪಿಸಿ ಬಿಡುತ್ತದೆ. ಗಂಗೆಯ ಈ ಅಖಂಡವಾದ ಪ್ರವಾಹವು ಮಾನವ ಕುಲಕ್ಕೆ ಅಂದಿನಿಂದ ಇಂದಿನವರೆಗೆ ಸಮರ್ಪಣಾ ಸಂದೇಶವನ್ನು ಕೊಡುತ್ತಿರುವುದು ಭಾಸವಾಗುತ್ತದೆ. ಜನ್ಮದ ಆರಂಭದಿಂದ ಮೃತ್ಯುವಿನ ಪರ್ಯಂತರ ತನ್ನ ಜೀವನವೂ ಯಾರಿಗಾದರೂ ಉಪಯೋಗವಾಗುವಂತೆ ನಡೆದುಕೊಳ್ಳುತ್ತಿರಬೇಕು. ಪರಮಾತ್ಮನಿಂದ ರಚಿಸಲ್ಪಟ್ಟ ಪಂಚ ಮಹಾಭೂತಗಳು ಸದಾ ಇಂತಹ ಸಮರ್ಪಣೆಯನ್ನು ಮಾಡುತ್ತಿವುದರಿಂದಲೇ ನಾವುಗಳೆಲ್ಲ ಅವುಗಳನ್ನು ಪೂಜಿಸುತ್ತಾ ಬಂದಿದ್ದೇವೆ.

- ಪೂಜ್ಯ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತ್ರಿಪುರಾಂತ ಗವಿಮಠ ಬನವಕಲ್ಯಾಣ

ಶುಕ್ರವಾರ,8 ಸೆಪ್ಟೆಂಬರ್ 2023

Scanned with OKEN Scanner

ಶ್ರೀ ಸಿದ್ದೇಶ್ವರ ಶಿವಾಚಾರ್ಯ ನುಡಿ | ಗವಿ ಮಠದಲ್ಲಿ ವಿಶೇಷ ಉಪನ್ಯಾಸ

ಕಣ್ಣಿಗೆ ಕಾಣುವ ದೇವರು ಗುರು

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಜಗತ್ತಿನಲ್ಲಿ ಕಣ್ಣಿಗೆ ಕಾಣುವ ದೇವರು ಗುರು. ಅವರು ಸಚ್ಚಿದಾನಂದ ಶಿವಸ್ವರೂಪರು ಎಂದು ಪ್ರಥಮ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಮೂಲಕ ಮನುಕುಲಕ್ಕೆ ಬೋಧಿಸಿದ್ದಾರೆ ಎಂದು ಕಿಟ್ಟಾ ಹಿರೇಮಠದ ಶ್ರೀ ಸಿದ್ಧೇಶ್ವರ ಶಿವಾಚಾರ್ಯರು ನುಡಿದರು.

ಶ್ರಾವಣ ಮಾಸ ನಿಮಿತ್ತ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ಸಹಯೋಗದಡಿ ಗವಿಮಠದಲ್ಲಿ ಗುರುವಾರ ಸಂಜೆ ಏರ್ಪಡಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥ 'ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ವಿಶೇಷ' ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿದ ಅವರು, ಗವಿಮಠವು ಅಪಾರ ಶಕ್ತಿ ಹೊಂದಿದ ಪವಿತ್ರ ಸ್ಥಳ, ಶ್ರದ್ಧಾ- ಭಕ್ತಿಯ ಕೇಂದ್ರ. ಅಭಿನವ ಶ್ರೀಗಳ ಸತ್‌ಸಂಕಲ್ಪ ಹಾಗೂ ಭಕ್ತರ ಭಕ್ತಿಯಿಂದ ಸಂಸ್ಥಾನ ಅಭಿವೃದ್ಧಿಯಾಗಿದೆ ಎಂದರು.

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಬಸವಣ್ಣನವರು 'ಲಿಂಗ ಮಧ್ಯೆ ಜಗತ್ ಸರ್ವಂ' ಎಂಬ ವಚನದ ಮೂಲಕ ಜಗತ್ತೇ ಶಿವಮಯವಾಗಿದೆ ಎಂದು ಸಾರಿದ್ದಾರೆ. ಭಕ್ತರೇ ನಮ್ಮ ಮಠದ ನಿಜವಾದ ಆಸ್ತಿ. ಅವರ ತನು ಮನ ಧನ ಸೇವೆಯೇ ಸಂಸ್ಥಾನ ಗವಿಮಠದ ಅಭಿವೃದ್ಧಿಗೆ ಕಾರಣ. ಧರ್ಮ ಕಾರ್ಯ ಮತ್ತು ಸಮಾಜ ಸೇವೆಯೇ ನಮ್ಮ ಧ್ಯೇಯ ಎಂದು ಹೇಳಿದರು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಸವಿತಾ ರಮೇಶ ಸ್ವಾಮಿ, ಶ್ರೀ ಮದ್ವೀರಶೈವ ಸದ್ಬೋದನ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಬಸವರಾಜ ಸೊನ್ನಗಿ, ಮಲ್ಲಿಕಾರ್ಜುನ



ಬಸವಕಲ್ಯಾಣ ಗವಿಮಠದಲ್ಲಿ ಗುರುವಾರ ಏರ್ಪಡಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಸಮಾರಂಭವನ್ನು ಶ್ರೀ ಸಿದ್ಧೇಶ್ವರ ಶಿವಾಚಾರ್ಯರು ಉದ್ಘಾಟಿಸಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣಪ್ಪ ಬಿರಾದಾರ, ಸವಿತಾ ರಮೇಶ ಸ್ವಾಮಿ ಇದ್ದರು.

ನಂದಿ, ಎ.ಜಿ.ಪಾಟೀಲ್, ರಾಮಚಂದ್ರ ಹುಡಗೆ, ಸುಭದ್ರಾ ಸ್ವಾಮಿ, ಮಲ್ಲಿಕಾರ್ಜುನ ಅಲಶೆಟ್ಟಿ, ಸುಭಾಷ ರಗಟೆ, ಪ್ರೊ.ರಾಜೋಳೆ, ರಮೇಶ ರಾಜೋಳೆ, ವೀರಶೆಟ್ಟಿ ಎಂ.ಪಾಟೀಲ್ ಇತರರಿದ್ದರು. ಸಂಜುಕುಮಾರ ಜಾಧವ್ ಸ್ವಾಗತಿಸಿದರು. ಮಲ್ಲಿಕಾರ್ಜುನ ಅಲಗುಡೆ ನಿರೂಪಣೆ ಮಾಡಿದರು. ಶರಣಬಸಪ್ಪ ಅಲಗುಡೆ ಪ್ರಾರ್ಥನಾಗೀತೆ ಹಾಡಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 19 ಆಗಸ್ಟ್ 2023
19 AUGUST 2023

ವಿಜಯ ಕರ್ನಾಟಕ ಬುಧವಾರ,23 ಆಗಸ್ಟ್ 2023

ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಎರಡನೇ ವಿಶೇಷ ಉಪನ್ಯಾಸ ಮಾಲೆ

ಅನ್ನ ನೀರು ಸುಭಾಷಿತ ಶ್ರೇಷ್ಠ ರತ್ನಗಳು

ವಿಕ ಸುದ್ದಿಲೋಕ ಬಸವಕಲ್ಯಾಣ

ಅನ್ನ ನೀರು ಹಾಗೂ ಸುಭಾಷಿತ ಎಂಬುವ ಈ ಮೂರು ಶ್ರೇಷ್ಠ ರತ್ನಗಳಾಗಿವೆ ಎಂದು ಜಗದ ಪ್ರಥಮ ಜಗದ್ಗುರು ಶ್ರೀ ರೇಣುಕಾಚಾರ್ಯರು ತಮ್ಮ ಸಿದ್ಧಾಂತ ಶಿಖಾಮಣಿಯ ಮೂಲಕ ಮನುಕುಲಕ್ಕೆ ಬೋಧಿಸಿದ್ದಾರೆ ಎಂದು ಇಲ್ಲಿಯ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದರು.

ಇಲ್ಲಿಯ ಗವಿ ಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಎರಡನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶಿರ್ವಚನ ನೀಡಿದ ಶ್ರೀಗಳು, ಸುಭಾಷಿತ ಅಂದರೆ ನಮ್ಮ ನುಡಿಗಳು ಹಿತವಾಗಿದ್ದು ರತ್ನಕ್ಕೆ ಸಮಾನವಾದ ಶ್ರೇಷ್ಠ ಮಟ್ಟದ್ದಾಗಿರಬೇಕು. ಆದೇ ರೀತಿ ಬಸವಣ್ಣನವರು ನುಡಿದರೆ ಮುತ್ತಿನ ಹಾರದಂತಿರಬೇಕು ಎಂದು ತಮ್ಮ ವಚನದ ಮೂಲಕ ಸಾರಿದ್ದಾರೆ ಎಂದರು.

ಡಾ. ಬಾಲಕೃಷ್ಣ ರಾಠೋಡ ಆರೋಗ್ಯದ ಕುರಿತು ಮಾತನಾಡಿ,. ಇವತ್ತು ಬಹಳಷ್ಟು ಜನರು ಆಹಾರ ಸೇವನೆ ವಿಧಾನ ಗೊತ್ತಿಲ್ಲದೇ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ನಿಯಮತವಾಗಿ ಹಿತವಾದ ಆಹಾರ



ಬಸವಕಲ್ಯಾಣದ ಗವಿ ಮಠದಲ್ಲಿ ಹಮ್ಮಿಕೊಂಡಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಎರಡನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಯುವ ಮುಖಂಡ ಶಿವಕುಮಾರ ಬಿರಾದಾರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸೇರಿ ಇತರರಿದ್ದರು.

ಗವಿಮಠದಲ್ಲಿ ಬುಲಾಯಿ ಆಚರಣೆ

ನಾಗಪಂಚಮಿ ಹಬ್ಬದ ನಿಮಿತ್ತ ಸೋಮವಾರ ಸಂಜೆ ಸಂಸ್ಥಾನ ಗವಿಮಠದಲ್ಲಿ ಪೂಜ್ಯರ ಸಮ್ಮುಖದಲ್ಲಿ ಮಹಿಳೆಯರು ಸಾಮೂಹಿಕವಾಗಿ ಬುಲಾಯಿ ಪದಗಳನ್ನು ಹಾಡಿದ್ದು ವಿಶೇಷವಾಗಿತ್ತು. ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಎ.ಜಿ.ಪಾಟೀಲ, ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ, ಮಲ್ಲಿಕಾರ್ಜುನ ಅಲಗುಡೆ, ಶಿವಕುಮಾರ ಪರ್ತಾಪುರೆ, ಮಾಹಾನಂದಾ, ಶಕುಂತಲಾ, ರಾಚಮ್ಮ ಕಲಾವತಿ ಮಠಪತಿ, ಸವಿತಾ ಸ್ವಾಮಿ, ಪೂರ್ಣಿಮಾ ರುದ್ರೇಶ, ಸುಭದ್ರಾಬಾಯಿ, ಪಾರ್ವತಿ ರೋಜೆ, ಸತ್ಯವತಿ ಬಾಬು ಸ್ವಾಮಿ, ಶಾಂತಾಬಾಯಿ, ಮಯೂರಿ, ವೃಷ್ಣವಿ ಸೇರಿದಂತೆ ಅನೇಕರು ಇದ್ದರು.

ಸೇವನೆಯಿಂದ ಆರೋಗ್ಯವಂತರಾಗಿ ಬದುಕು ನಡೆಸಬಹುದು. ಜತೆಗೆ ಗವಿಮಠದ ಪೂಜ್ಯರ ಗುರುಗಳ ಕೃಪಾಶಿರ್ವಾದ ಸದಾ ನಮ್ಮ ಮೇಲೆ ಇರುವುದು ನಮ್ಮ ಭಾಗ್ಯ ಎಂದರು.

ಯುವ ಮುಖಂಡ ಶಿವಕುಮಾರ ಬಿರಾದಾರ ವಿಶೇಷ ಸನ್ಮಾನ ಸ್ವೀಕರಿಸಿ ಮಾತನಾಡಿ, ಗುರುವಿನ ಸನ್ಮಾರ್ಗದಲ್ಲಿ ಮುನ್ನಡೆಯುವುದೇ ನಿಜವಾದ ಧರ್ಮ. ಸಂಸ್ಥಾನ ಗವಿಮಠದ ಶ್ರೀ ಅಭಿನವ ಘನಲಿಂಗ ಗುರುಗಳು ವಿಶೇಷ ಸನ್ಮಾನ ಮಾಡಿ ಆಶೀರ್ವದಿಸಿದ್ದು, ನನ್ನ ಭಾಗ್ಯ ಧರ್ಮ ಹಾಗೂ ಸಮಾಜ ಸುಧಾರಣೆಗಾಗಿ ಪೂಜ್ಯ ಅಭಿನವ ಘನಲಿಂಗ ಗುರುಗಳ ತ್ಯಾಗ ದೊಡ್ಡದಾಗಿದೆ. ಅವರ ನಿಸ್ವಾರ್ಥ ಸೇವೆಯಿಂದ ಸಂಸ್ಥಾನ ಗವಿಮಠ ಸಾಕಷ್ಟು ಬೆಳೆದಿದೆ ಎಂದು ಹೇಳಿದರು.

ಇದೇ ವೇಳೆ ವೈಷ್ಣವಿ ವಿಠಲ ಯದಲಾಪುರ ಅವರಿಗೆ ಶ್ರೀಗಳು ಸತ್ಕರಿಸಿ ಆಶಿರ್ವದಿಸಿದರು. ಮಲ್ಲಿಕಾರ್ಜುನ ಅಲಶೆಟ್ಟಿ ವೇದಿಕೆಯಲ್ಲಿದ್ದರು. ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಅಧ್ಯಕ್ಷ ಬಸವಂತಪ್ಪ ಲವಾರೆ ಅಧ್ಯಕ್ಷತೆ ವಹಿಸಿದ್ದರು. ಮಲ್ಲಯ್ಯ ಹಿರೇಮಠ ಧನ್ನೂರ ಪ್ರಾರ್ಥನಾ ಗೀತೆ ಹಾಡಿದರು. ಮುಖ್ಯಗುರು ರಮೇಶ ರಾಜೋಳೆ ಸ್ವಾಗತಿಸಿದರೆ, ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ನಿರೂಪಿಸಿದರು.

Scanned with OKEN Scanner

ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ವಿಶೇಷ ಉಪನ್ಯಾಸ ಮಾಲೆ

ಜೀವನ ಸಾರ್ಥಕ ಮಾಡಿಕೊಳ್ಳಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಪರೋಪಕಾರಾರ್ಥಂ ಇದಂ ಶರೀರಂ ಅಂದರೆ ಈ ಶರೀರ ಪರರಿಗೆ ಉಪಕಾರಿ ಆಗಬೇಕು ಎಂದು ಇಲ್ಲಿಯ ತ್ರಿಪುರಾಂತನ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬೋಧಿಸಿದರು.

ಇಲ್ಲಿಯ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಏಳನೇ ವಿಶೇಷ ಉಪನ್ಯಾಸ ಮಾಲೆಯಲ್ಲಿ ಸಾನಿಧ್ಯ ವಹಿಸಿ ಶ್ರೀಗಳು ಮಾತನಾಡಿ, ಜೀವನ ಕ್ಷಣಿಕವಾಗಿದ್ದು, ಮನುಷ್ಯನಾಗಿ ಹುಟ್ಟಿದ ಮೇಲೆ ಪರರಿಗೆ ಒಂದಿಷ್ಟು ಸೇವೆ, ದಾನ, ಧರ್ಮ ಮಾಡುವುದರ ಮೂಲಕ ಪರರಿಗೆ ಉಪಕಾರಿಯಾಗಿ ಬದುಕಿನ ಜೀವನ ಸಾರ್ಥಕ ಮಾಡಿಕೊಳ್ಳಬೇಕು. ಮನುಷ್ಯ ಜನ್ಮ ಶ್ರೇಷ್ಠ ಜನ್ಮ ಎಂದು ತಿಳಿಸಿದರು.

ನೇತ್ರ ತಜ್ಞೆ ಡಾ.ಜ್ಯೋತಿ ಖಂಡ್ರೆ ಮಾತನಾಡಿ, ಕಣ್ಣು ದೇಹದ ಒಂದು ಪ್ರಮುಖ ಅಂಗ. ಆಲಕ್ಷ ಮಾಡದೇ ಕಣ್ಣಿನ ಆರೋಗ್ಯದ ಕುರಿತು ಎಲ್ಲರೂ ಸದಾ ಕಾಳಜಿ ವಹಿಸಬೇಕು. ಅಂಧತ್ವ ಬದುಕನ್ನು ಕತ್ತಲೆ ಮಾಡುತ್ತದೆ. ನೇತ್ರಾದಾನ ಶ್ರೇಷ್ಠದಾನ ವಾಗಿದೆ. ನೇತ್ರಾದಾನ ಮಾಡಿ ಅಂಧರ ಬಾಳಿಗೆ ಬೆಳಕಾಗಿ ಎಂದು ಕರೆ ನೀಡಿದರು.



ಬಸವಕಲ್ಯಾಣ ಇಲ್ಲಿಯ ಗವಿಮಠದಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಏಳನೇ ವಿಶೇಷ ಉಪನ್ಯಾಸ ಮಾಲೆಯಲ್ಲಿ ವೈಷ್ಣವಿ ಗುರುಲಿಂಗಯ್ಯ ಅವರಿಗೆ ವಿಶೇಷವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಶ್ರೀ ಗುರು ಮಹಾಲಿಂಗೇಶ್ವರ ಶಾಲೆಯ ಪ್ರಾಚಾರ್ಯೆ ಹಾಗೂ ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ ಮಾತನಾಡಿ, ಸಿದ್ಧಾಂತ ಶಿಖಾಮಣಿ ಮೋಕ್ಷ ಮಾರ್ಗ ತೋರುವ ಒಂದು ಶ್ರೇಷ್ಠ ಧರ್ಮ ಗ್ರಂಥ, ಹರ ಮುನಿದರೆ ಗುರು ಕಾಯುವರು. ಹೀಗಾಗಿ ಗುರು ದೇವರಿಗಿಂತ ಅಧಿಕ. ತನು ಮನ ಧನ ಶ್ರೇಷ್ಠ ಸೇವೆಗಳು. ಕೈಲಾದಷ್ಟು ಸದಾ ಈ ಮೂರು ಸೇವೆಗಳನ್ನು ಮಾಡಬೇಕು. ಗವಿಮಠವು ಗುರುವಿನ ಶಕ್ತಿ ಆಧಾರವಾಗಿದೆ. ಭಕ್ತಿಯಿಂದ ನಡೆದುಕೊಳ್ಳುತ್ತಿರುವುದಕ್ಕೆ ನಮಗೆ ಸದಾ ಸುಖ ಸಂತೋಷ ಲಭಿಸುತ್ತಿದೆ ಎಂದು ತಿಳಿಸಿದರು. ರೇಖಾ ರಾಜು ಮಂಠಾಳೆ ಮಾತನಾಡಿದರು. ವೇದಿಕೆಯಲ್ಲಿ ಗ್ರೇಡ್-2 ತಹಸೀಲ್ದಾರ ಪಲ್ಲವಿ ಬೆಳೆಕೆರೆ, ಪೂರ್ಣಿಮಾ ರುದ್ರೇಶ್ವರ ಗೋರ್ಟಾ ಇದ್ದರು.

ಶಕುಂತಲಾ ಗುರುಲಿಂಗಯ್ಯ ಸ್ವಾಮಿ ಪ್ರಾರ್ಥನಾ ಗೀತೆ ಹಾಡಿದರು. ಡಾ. ಬಸವಜ್ಯೋತಿ ಸ್ವಾಮಿ ಸ್ವಾಗತಿಸಿದರು ಅಕ್ಷತಾ ಬಸವಣಪ್ಪಾ ನಿರೂಪಿಸಿದರು. ಶರಣಬಸಪ್ಪ ಅಲಗುಡೆ ಮಂಗಳಾರುತಿ ಹಾಡಿದರು. ಇದೇ ವೇಳೆ ವೈಷ್ಣವಿ ಗುರುಲಿಂಗಯ್ಯ ಅವರಿಗೆ ವಿಶೇಷವಾಗಿ ಸನ್ಮಾನಿಸಿ ಗೌರವಿಸಲಾಯಿತು. ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ಅಲಗುಡೆ, ಪ್ರೊ. ರುದ್ರೇಶ್ವರ ಗೋರ್ಟಾ, ರುದ್ರಮುನಿ ಚೆನ್ನೂರ, ಸಿದ್ದಲಿಂಗಪ್ಪ ಗೌಡ, ಬಸವರಾಜ ಚಿರಡೆ, ಸುಭದ್ರಬಾಯಿ ವೀರಯ್ಯಾ ಸ್ವಾಮಿ, ಐಶ್ವರ್ಯ ಧನರಾಜ್, ರಂಗಮ್ಮ ಸಂತೋಷ ಸೇರಿ ಇತರರಿದ್ದರು.

ವಿಜಯ ಕರ್ನಾಟಕ ಭಾನುವಾರ,10 ಸೆಪ್ಟೆಂಬರ್ 2023

ಗುರು ದೇವರೆಂದ ರೇಣುಕಾಚಾರ್ಯರು

ಉಪನ್ಯಾಸ ಮಾಲೆಯ ಉದ್ಘಾಟನೆ: ಕಿಟ್ಟಾ ಸಿದ್ದೇಶ್ವರ ಶಿವಾಚಾರ್ಯರ ಅಭಿಮತ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಗುರು ಕಣ್ಣಿಗೆ ಕಾಣುವ ದೇವರು. ಶಿವಸ್ವರೂಪರು ಎಂದು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಗ್ರಂಥದಲ್ಲಿ ಉಲ್ಲೇಖ ಮಾಡಿದ್ದಾರೆ' ಎಂದು ಕಿಟ್ಟಾ ಸಿದ್ದೇಶ್ವರ ಶಿವಾಚಾರ್ಯರು ಹೇಳಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಹಾಗೂ ಗವಿಮಠ ಟ್ರಸ್ಟ್‌ನಿಂದ ಶ್ರಾವಣ ಮಾಸದ ಅಂಗವಾಗಿ ಗುರುವಾರ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ಉಪನ್ಯಾಸ ಮಾಲೆಯ ಉದ್ಘಾಟನೆಯಲ್ಲಿ ಅವರು ಮಾತನಾಡಿದರು.

'ಸಿದ್ಧಾಂತ ಶಿಖಾಮಣಿ ವೀರಶೈವ ಲಿಂಗಾಯತರ ಧರ್ಮಗ್ರಂಥ ಆಗಿದೆ. ಇದರಲ್ಲಿ ಲೋಕೋದ್ಧಾರದ ಅಂಶಗಳು ಇವೆ. ನೈತಿಕ ಮೌಲ್ಯಗಳನ್ನು ಸಾರಲಾಗಿದೆ. ಶ್ರಾವಣ ಮಾಸದಲ್ಲಿ ನಿತ್ಯ-ನಿರಂತರ ಗುರುವಿನ ಉಪದೇಶ ಶ್ರವಣ ಮಾಡಬೇಕು. ಗವಿಮಠ ಸಂಸ್ಥಾನ ಪವಿತ್ರ ಸ್ಥಳವಾಗಿದೆ. ಶಿವಶರಣರ ತಪೋಭೂಮಿ ಆಗಿದ್ದರಿಂದ ಭಕ್ತಿ-ಶಕ್ತಿಯ ಕೇಂದ್ರವಾಗಿ ಮಾರ್ಪಟ್ಟಿದೆ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸತತ ಪ್ರಯತ್ನ ಮತ್ತು ಶ್ರಮದಿಂದ ಅಭಿವೃದ್ಧಿ ಕಂಡಿದೆ' ಎಂದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ನಡೆದ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ಉಪನ್ಯಾಸ ಮಾಲೆ ಉದ್ಘಾಟನೆಯಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಕಿಟ್ಟಾ ಸಿದ್ದೇಶ್ವರ ಶಿವಾಚಾರ್ಯರು ಉಪಸ್ಥಿತರಿದ್ದರು

ಸಾನ್ನಿಧ್ಯ ವಹಿಸಿದ್ದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಬಸವಣ್ಣನವರು ಲಿಂಗಮಧ್ಯೆ ಜಗತ್ ಸರ್ವಂ ಎಂದು ಸಾರಿರುವುದು ನೋಡಿದರೆ ಇಡೀ ಜಗತ್ತೇ ಶಿವಮಯವಾಗಿದೆ ಎನ್ನಬಹುದು. ಗುರು, ಲಿಂಗ, ಜಂಗಮಕ್ಕೆ ಬಹಳಷ್ಟು ಮಹತ್ವವಿದೆ. ಕೂಡಲಸಂಗಮ ದೇವರ ಒಲವಿನಿಂದ ಪ್ರಸಾದ ಕಾಯವ ಕೆಡಿಸಲಾಗದು ಎಂದು ವಚನಗಳು ಸಾರುತ್ತವೆ' ಎಂದರು.

'ಗವಿಮಠದಿಂದ ಧರ್ಮಕಾರ್ಯ ಮತ್ತು ಸಮಾಜ ಸೇವೆ ನಿರಂತರವಾಗಿ ನಡೆದುಕೊಂಡು ಬಂದಿದೆ. ಭಕ್ತರ ಸಹಕಾರದಿಂದಲೇ ಇಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳು ನಡೆದಿವೆ' ಎಂದರು.

ಮುಖ್ಯಾಂಶಗಳು

- ಗುರುವಿನ ಉಪದೇಶ ಶ್ರವಣ ಮಾಡಿ
- ಗವಿಮಠದಿಂದ ಧರ್ಮ ಕಾರ್ಯ: ಅಭಿಮತ
- ಸಿದ್ಧಾಂತ ಶಿಖಾಮಣಿ ಧರ್ಮಗ್ರಂಥ

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಬಸವರಾಜ ಸೊನ್ನಗಿ, ಸವಿತಾ ರಮೇಶ ಸ್ವಾಮಿ, ಸಂಜೀವಕುಮಾರ ಜಾಧವ, ಮಲ್ಲಿಕಾರ್ಜುನ ಆಲಗೂಡೆ ಹಾಗೂ ಶರಣಬಸಪ್ಪ ಮಾತನಾಡಿದರು.

ಶ್ರೀಮದ್ವೀರಶೈವ ಸದ್ಭೋದನಾ ಸಂಸ್ಥೆ ತಾಲ್ಲೂಕು ಘಟಕದ ಅಧ್ಯಕ್ಷ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ನಂದಿ, ಎ.ಜಿ ಪಾಟೀಲ, ರಾಮಚಂದ್ರ 'ಹುಡುಗೆ ಇದ್ದರು.

ಪ್ರಜಾವಾಣಿ ಶನಿವಾರ • ಆಗಸ್ಟ್ 19, 2023

Scanned with OKEN Scanner

ವೇದಗಳ ಆಂತರ್ಯ ಸಾರಿದ ಶರಣರ ವಚನಗಳು

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಅನುಭವಕ್ಕೆ ತಿಳಿಯುವ ಅಧ್ಯಾತ್ಮ ಮತ್ತು ವೇದಗಳ ಆಂತರ್ಯವನ್ನು ವಚನಕಾರರು 12ನೇ ಶತಮಾನದಲ್ಲೇ ಸಾರಿದ್ದಾರೆ. ಗುರು ಲಿಂಗ ಜಂಗಮ ಮತ್ತು ಜೀವ-ಜಡ-ದೇವರ ಸಂಬಂಧದ ಬಗ್ಗೆ ಜಗತ್ತಿಗೆ ಅರುಹಿದ್ದಾರೆ ಎಂದು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವಿರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆಯ ಮಂಗಲ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಚನಗಳು ಪಾರಮಾರ್ಥಿಕವಾಗಿ ತಂದೆ-ತಾಯಿ-ಬಂಧು-ಬಳಗ ಎಲ್ಲವನ್ನಾಗಿ ದೇವರ ಸ್ಥಾನವನ್ನು ತೋರಿಸಿವೆ. ವಚನದ ಪ್ರತಿ ಧ್ವನ್ಯಾತ್ಮಕ ಶಬ್ದಗಳೂ ಓಂಕಾರನಾದ ಭಗವಂತನ ಮಹಿಮೆ ಸಾರುತ್ತವೆ. ಪರಬ್ರಹ್ಮನು ಒಬ್ಬನೇ ಸ್ವತಂತ್ರ. ಅವನೇ ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳಿಂಬ ಸಕಲಕ್ಕೂ ಮುಖ್ಯಕಾರಣ ಎಂದರು.

ಭಗವಂತನಿಗೆ ನಮ್ಮಂತೆ ಜಡಪ್ರಕೃತಿಯ ಶರೀರ ಇಲ್ಲದಿರುವುದರಿಂದ ಅವನನ್ನು ನಿರ್ಗುಣ, ನಿರಾಕಾರ ಎಂದು ವೇದವಾಕ್ಯಗಳು ವಚನಗಳು ಹೇಳುತ್ತವೆ ಎಂದರು. ಮುಖ್ಯ ಅತಿಥಿ ಮಂಜುನಾಥ ಮಠಪತಿ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಶರಣಬಸಪ್ಪ ಅಲಗುಡೆ ಸಂಚಾಲನೆ ಮಾಡಿದರು. ಸಾಮೂಹಿಕವಾಗಿ ಮಂಗಳಾರತಿ ಹಾಡಿದರು. ಪ್ರಮುಖರಾದ ಶಿವಲಿಂಗ ಸ್ವಾಮಿ, ಮಂಜುನಾಥ ಸ್ವಾಮಿ, ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಲಿಂಗಣ್ಣಗೌಡ ಚನ್ನೂರ, ಸಿದ್ದಲಿಂಗಪ್ಪ ಗೌಡ, ರುದ್ರಮುನಿ ಚನ್ನೂರ, ಬಾಬುರಾವ ಚಳಕಾಪುರೆ, ಸವಿತಾ ಸ್ವಾಮಿ, ಶಿವಕುಮಾರ ಕೌಠೆ, ಕಮಲಾಕರ ಬಿರಾದಾರ ಇತರರಿದ್ದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಗವಿಮಠದಲ್ಲಿ ಏರ್ಪಡಿಸಿದ್ದ ಸಿದ್ಧಾಂತ ಶಿಖಾಮಣಿ, ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆಯ ಶ್ರಾವಣ ಮಂಗಲ ಕಾರ್ಯಕ್ರಮದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಮಂಜುನಾಥ ಮಠಪತಿ, ಬಸವಂತಪ್ಪ ಲವಾರೆ, ಶಿವಲಿಂಗ ಸ್ವಾಮಿ, ಮಂಜುನಾಥ ಸ್ವಾಮಿ, ಶರಣಪ್ಪ ಬಿರಾದಾರ, ಲಿಂಗಣ್ಣಗೌಡ ಚನ್ನೂರ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 18 ಸೆಪ್ಟೆಂಬರ್ 2023
18 SEPTEMBER 2023

ಜಗತ್ತಿನಲ್ಲಿ ಕಣ್ಣಿಗೆ ಕಾಣುವ ದೇವರೇ ಗುರು

ಸಂಸ್ಥಾನ ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಇಲ್ಲಿಯ ಶ್ರೀಪುರಾಂತನ ಕೆರೆಯ ದಂಡೆಯಲ್ಲಿರುವ ಗವಿಮಠವು ಪವಿತ್ರ ಸ್ಥಳವಾಗಿದ್ದು, ಅಪಾರ ಶಕ್ತಿ ಹೊಂದಿದ ಶ್ರದ್ಧಾ- ಭಕ್ತಿಯ ಕೇಂದ್ರ. ಅಭಿನವ ಶ್ರೀಗಳ ಸತ್ ಸಂಕಲ್ಪ ಹಾಗೂ ಭಕ್ತರ ಭಕ್ತಿಯಿಂದ ಇಂದು ಸಂಸ್ಥಾನ ಗವಿ ಮಠವು ಸಾಕಷ್ಟು ಅಭಿವೃದ್ಧಿಗೊಂಡಿದೆ ಎಂದು ಕಿಟ್ಟಾ ಹಿರೇಮಠದ ಶ್ರೀ ಸಿದ್ಧೇಶ್ವರ ಶಿವಾಚಾರ್ಯರು ಹೇಳಿದರು.

ಶ್ರಾವಣ ಮಾಸ ನಿಮಿತ್ತ ಇಲ್ಲಿಯ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಗವಿ ಮಠದಲ್ಲಿ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಈ ಜಗತ್ತಿನಲ್ಲಿ ಕಣ್ಣಿಗೆ ಕಾಣುವ ದೇವರೇ ಗುರು. ಅವರು ಸಚ್ಚಿದಾನಂದ ಶಿವ ಸ್ವರೂಪರು ಎಂದು ಜಗದ ಪ್ರಥಮ ಜಗದ್ಗುರು ರೇಣುಕಾಚಾರ್ಯರು ತಮ್ಮ ಸಿದ್ಧಾಂತ ಶಿಖಾಮಣಿ ಮೂಲಕ ಮನು ಕುಲಕ್ಕೆ ಬೋಸಿದ್ದಾರೆ ಎಂದರು.

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಬಸವಣ್ಣನವರು ಲಿಂಗ ಮಧ್ಯೆ ಜಗತ್ ಸರ್ವಂ ಎಂದು ತಮ್ಮ ವಚನದ ಮೂಲಕ ಜಗತ್ತೇ ಶಿವಮಯವಾಗಿದೆ ಎಂದು ಸಾರಿದ್ದಾರೆ. ಭಕ್ತರೇ ನಮ್ಮ ಮಠದ ನಿಜವಾದ ಆಸ್ತಿ. ಆವರ ತನು ಮನ ಧನ ಸೇವೆಯೇ ಸಂಸ್ಥಾನ ಗವಿ ಮಠದ ಅಭಿವೃದ್ಧಿಗೆ ಕಾರಣ. ಧರ್ಮ ಕಾರ್ಯ ಹಾಗೂ ಸಮಾಜ ಸೇವೆಯೇ ನಮ್ಮ ಧ್ಯೇಯ ಎಂದು ಹೇಳಿದರು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಬಸವರಾಜ ಸೊನ್ನಗಿ, ಪ್ರಾಚಾರ್ಯ ಸವಿತಾ ರಮೇಶ ಸ್ವಾಮಿ, ಶ್ರೀ ಮದ್ವಿರಶೈವ ಸದ್ಭೋದನಾ ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನಂದಿ, ಎ.ಜಿ ಪಾಟೀಲ್, ರಾಮಚಂದ್ರ ಹುಡುಗೆ, ಸುಭದ್ರ ಸ್ವಾಮಿ, ಮಲ್ಲಿಕಾರ್ಜುನ ಅಲಶೆಟ್ಟಿ, ಸುಭಾಷ ರಗಟೆ, ಪ್ರೊ.ವಿ.ಎಸ್ ರಾಜೋಳೆ, ರಮೇಶ್ ರಾಜೋಳೆ ವೀರಶೇಟ್ಟಿಎಂ. ಪಾಟೀಲ್ ಇತರರಿದ್ದರು. ಸಂಜುಕುಮಾರ್ ಜಾಧವ್ ಸ್ವಾಗತಿಸಿದರು, ಮಲ್ಲಿಕಾರ್ಜುನ ಅಲಗುಡೆ ನಿರೂಪಿಸಿದರು, ಶರಣಬಸಪ್ಪ ಅಲಗುಡೆ ಪ್ರಾರ್ಥನಾ ಗೀತೆ ಹಾಡಿದರು.



ಬಸವಕಲ್ಯಾಣ ಇಲ್ಲಿಯ ಗವಿಮಠದಲ್ಲಿ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಸಮಾರಂಭದಲ್ಲಿ ಕಿಟ್ಟಾ ಹಿರೇಮಠದ ಶ್ರೀ ಸಿದ್ಧೇಶ್ವರ ಶಿವಾಚಾರ್ಯರು ಮಾತನಾಡಿದರು.

ವಿಜಯ ಕರ್ನಾಟಕ
ಶನಿವಾರ,19 ಆಗಸ್ಟ್ 2023

Scanned with OKEN Scanner

ವೇದಗಳ ಆಂತರ್ಯ ಸಾರಿದ ಶರಣರ ವಚನಗಳು

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಅನುಭವಕ್ಕೆ ತಿಳಿಯುವ ಅಧ್ಯಾತ್ಮ ಮತ್ತು ವೇದಗಳ ಆಂತರ್ಯವನ್ನು ವಚನಕಾರರು 12ನೇ ಶತಮಾನದಲ್ಲೇ ಸಾರಿದ್ದಾರೆ. ಗುರು ಲಿಂಗ ಜಂಗಮ ಮತ್ತು ಜೀವ-ಜಡ-ದೇವರ ಸಂಬಂಧದ ಬಗ್ಗೆ ಜಗತ್ತಿಗೆ ಅರುಹಿದ್ದಾರೆ ಎಂದು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವಿರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆಯ ಮಂಗಲ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಚನಗಳು ಪಾರಮಾರ್ಥಿಕವಾಗಿ ತಂದೆ-ತಾಯಿ-ಬಂಧು-ಬಳಗ ಎಲ್ಲವನ್ನಾಗಿ ದೇವರ ಸ್ಥಾನವನ್ನು ತೋರಿಸಿವೆ. ವಚನದ ಪ್ರತಿ ಧ್ವನ್ಯಾತ್ಮಕ ಶಬ್ದಗಳೂ ಓಂಕಾರನಾದ ಭಗವಂತನ ಮಹಿಮೆ ಸಾರುತ್ತವೆ. ಪರಬ್ರಹ್ಮನು ಒಬ್ಬನೇ ಸ್ವತಂತ್ರ. ಅವನೇ ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳೆಂಬ ಸಕಲಕ್ಕೂ ಮುಖ್ಯಕಾರಣ ಎಂದರು.

ಭಗವಂತನಿಗೆ ನಮ್ಮಂತೆ ಜಡಪ್ರಕೃತಿಯ ಶರೀರ ಇಲ್ಲದಿರುವುದರಿಂದ ಅವನನ್ನು ನಿರ್ಗುಣ, ನಿರಾಕಾರ ಎಂದು ವೇದವಾಕ್ಯಗಳು ವಚನಗಳು ಹೇಳುತ್ತವೆ ಎಂದರು. ಮುಖ್ಯ ಅತಿಥಿ ಮಂಜುನಾಥ ಮಠಪತಿ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಶರಣಬಸಪ್ಪ ಅಲಗುಡೆ ಸಂಚಾಲನೆ ಮಾಡಿದರು. ಸಾಮೂಹಿಕವಾಗಿ ಮಂಗಳಾರತಿ ಹಾಡಿದರು. ಪ್ರಮುಖರಾದ ಶಿವಲಿಂಗ ಸ್ವಾಮಿ, ಮಂಜುನಾಥ ಸ್ವಾಮಿ, ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಲಿಂಗಣ್ಣಗೌಡ ಚನ್ನೂರ, ಸಿದ್ದಲಿಂಗಪ್ಪ ಗೌಡ, ರುದ್ರಮುನಿ ಚನ್ನೂರ, ಬಾಬುರಾವ ಚಳಕಾಪುರೆ, ಸವಿತಾ ಸ್ವಾಮಿ, ಶಿವಕುಮಾರ ಕೌಠೆ, ಕಮಲಾಕರ ಬಿರಾದಾರ ಇತರರಿದ್ದರು.



ಬಸವಕಲ್ಯಾಣದ ಗವಿಮಠದಲ್ಲಿ ಏರ್ಪಡಿಸಿದ್ದ ಸಿದ್ಧಾಂತ ಶಿಖಾಮಣಿ, ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆಯ ಶ್ರಾವಣ ಮಂಗಲ ಕಾರ್ಯಕ್ರಮದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಮಂಜುನಾಥ ಮಠಪತಿ, ಬಸವಂತಪ್ಪ ಲವಾರೆ, ಶಿವಲಿಂಗ ಸ್ವಾಮಿ, ಮಂಜುನಾಥ ಸ್ವಾಮಿ, ಶರಣಪ್ಪ ಬಿರಾದಾರ, ಲಿಂಗಣ್ಣಗೌಡ ಚನ್ನೂರ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 18 ಸೆಪ್ಟೆಂಬರ್ 2023
18 SEPTEMBER 2023

ಜಗತ್ತಿನಲ್ಲಿ ಕಣ್ಣಿಗೆ ಕಾಣುವ ದೇವರೇ ಗುರು

■ ವಿಕ ಸುದ್ದಿಲೋಕ ಬಸವಕಲ್ಯಾಣ

ಸಂಸ್ಥಾನ ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ

ಇಲ್ಲಿಯ ತ್ರೀಪುರಾಂತನ ಕೆರೆಯ ದಂಡೆಯಲ್ಲಿರುವ ಗವಿಮಠವು ಪವಿತ್ರ ಸ್ಥಳವಾಗಿದ್ದು, ಅಪಾರ ಶಕ್ತಿ ಹೊಂದಿದ ಶ್ರದ್ಧಾ- ಭಕ್ತಿಯ ಕೇಂದ್ರ. ಅಭಿನವ ಶ್ರೀಗಳ ಸತ್ ಸಂಕಲ್ಪ ಹಾಗೂ ಭಕ್ತರ ಭಕ್ತಿಯಿಂದ ಇಂದು ಸಂಸ್ಥಾನ ಗವಿ ಮಠವು ಸಾಕಷ್ಟು ಅಭಿವೃದ್ಧಿಗೊಂಡಿದೆ ಎಂದು ಕಟ್ಟಾ ಹಿರೇಮಠದ ಶ್ರೀ ಸಿದ್ಧೇಶ್ವರ ಶಿವಾಚಾರ್ಯರು ಹೇಳಿದರು.

ಶ್ರಾವಣ ಮಾಸ ನಿಮಿತ್ತ ಇಲ್ಲಿಯ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಗವಿ ಮಠದಲ್ಲಿ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಈ ಜಗತ್ತಿನಲ್ಲಿ ಕಣ್ಣಿಗೆ ಕಾಣುವ ದೇವರೇ ಗುರು. ಅವರು ಸಚ್ಚಿದಾನಂದ ಶಿವ ಸ್ವರೂಪರು ಎಂದು ಜಗದ ಪ್ರಥಮ ಜಗದ್ಗುರು ರೇಣುಕಾಚಾರ್ಯರು ತಮ್ಮ ಸಿದ್ಧಾಂತ ಶಿಖಾಮಣಿ ಮೂಲಕ ಮನು ಕುಲಕ್ಕೆ ಬೋಸಿದ್ದಾರೆ.ಎಂದರು.

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಬಸವಣ್ಣನವರು ಲಿಂಗ ಮಧ್ಯೆ ಜಗತ್ ಸರ್ವಂ ಎಂದು ತಮ್ಮ ವಚನದ ಮೂಲಕ ಜಗತ್ತೇ ಶಿವಮಯವಾಗಿದೆ ಎಂದು ಸಾರಿದ್ದಾರೆ. ಭಕ್ತರೇ ನಮ್ಮ ಮಠದ ನಿಜವಾದ ಆಸ್ತಿ. ಅವರ ತನು ಮನ ಧನ ಸೇವೆಯೇ ಸಂಸ್ಥಾನ ಗವಿ ಮಠದ ಅಭಿವೃದ್ಧಿಗೆ ಕಾರಣ. ಧರ್ಮ ಕಾರ್ಯ ಹಾಗೂ ಸಮಾಜ ಸೇವೆಯೇ ನಮ್ಮ ಧ್ಯೇಯ ಎಂದು ಹೇಳಿದರು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಬಸವರಾಜ ಸೊನ್ನಗಿ, ಪ್ರಾಚಾರ್ಯ ಸವಿತಾ ರಮೇಶ ಸ್ವಾಮಿ, ಶ್ರೀ ಮದ್ವಿರಶೈವ ಸದ್ಭೋದನಾ ಸಂಸ್ಥೆ ತಾಲೂಕು ಘಟಕದ ಅಧ್ಯಕ್ಷ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನಂದಿ, ಎ.ಜಿ ಪಾಟೀಲ್, ರಾಮಚಂದ್ರ ಹುಡುಗೆ, ಸುಭದ್ರ ಸ್ವಾಮಿ, ಮಲ್ಲಿಕಾರ್ಜುನ ಅಲಶೆಟ್ಟಿ, ಸುಭಾಷ ರಗಟೆ, ಪ್ರೊ.ವಿ.ಎಸ್ ರಾಜೋಳೆ, ರಮೇಶ್ ರಾಜೋಳೆ ವೀರಶೆಟ್ಟಿ ಎಂ. ಪಾಟೀಲ್ ಇತರರಿದ್ದರು. ಸಂಜುಕುಮಾರ್ ಜಾಧವ್ ಸ್ವಾಗತಿಸಿದರು, ಮಲ್ಲಿಕಾರ್ಜುನ ಅಲಗುಡೆ ನಿರೂಪಿಸಿದರು, ಶರಣಬಸಪ್ಪ ಅಲಗುಡೆ ಪ್ರಾರ್ಥನಾ ಗೀತೆ ಹಾಡಿದರು.



ಬಸವಕಲ್ಯಾಣ ಇಲ್ಲಿಯ ಗವಿಮಠದಲ್ಲಿ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಸಮಾರಂಭದಲ್ಲಿ ಕಟ್ಟಾ ಹಿರೇಮಠದ ಶ್ರೀ ಸಿದ್ಧೇಶ್ವರ ಶಿವಾಚಾರ್ಯರು ಮಾತನಾಡಿದರು.

ವಿಜಯ ಕರ್ನಾಟಕ
ಶನಿವಾರ,19 ಆಗಸ್ಟ್ 2023

Scanned with OKEN Scanner



ಬಸವಕಲ್ಯಾಣದಲ್ಲಿ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ, ಜಗದ್ಗುರು ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಬುದ್ಧಜ್ಯೋತಿ ಪಾದಯಾತ್ರೆಯಲ್ಲಿ ಅಭಿನವ ಶ್ರೀಗಳನ್ನು ಶಾಸಕರಾದ ಶರಣು ಸಲಗರ ಹಾಗೂ ಡಾ.ಸಿದ್ದಲಿಂಗಪ್ಪ ಪಾಟೀಲ್ ಸನ್ಮಾನಿಸಿದರು.

ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ-ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆ

ಪ್ರಾಮಾಣಿಕವಾಗಿ ಹಣ ಸಂಪಾದಿಸಲು ಸಲಹೆ

ಬಸವಕಲ್ಯಾಣ: ನಾವು ನಾಲಿಗೆಯಿಂದ ಮಾತಾಡಿಯೇ ಲಕ್ಷ್ಮೀಯನ್ನುಸಂಪಾದಿಸಿಕೊಳ್ಳುತ್ತೇವೆ ಎಂದು ಇಲ್ಲಿಯ ಗವಿ ಮಠದ ಶ್ರೀ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿಯ ಗವಿಮಠದಲ್ಲಿ ಸೋಮವಾರ ಸಾಯಂಕಾಲ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕದ ಸಹಯೋಗದಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಎಂಟನೇ ವಿಶೇಷ ಉಪನ್ಯಾಸ ಮಾಲೆ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು. ಮನುಷ್ಯನ ಮನಸ್ಸಿನಲ್ಲಿಯಾವಾಗ ಲೋಭಗುಣವು ಪ್ರಾಬಲ್ಯವನ್ನು ತಾಳುವುದು. ಆಗ ಅದು ಮನಸ್ಸಿನಲ್ಲಿ ಚೌರ್ಯತನವನ್ನು ಹುಟ್ಟಿಸುತ್ತದೆ. ಚೌರ್ಯ ಎಂದರೆ ಮತ್ತೊಬ್ಬರ ವಸ್ತುವನ್ನು ಅಪಹರಿಸುವುದಷ್ಟೇ ಅಲ್ಲ ತಾನೇ ಅನ್ಯರಿಗೆ ಕೊಟ್ಟು ವಸ್ತುವನ್ನು ಪುನಃ ತೆಗೆದುಕೊಂಡರೆ ಅದು ಸಹ ಚೌರ್ಯವೆಂದೆ ಕರೆಯುತ್ತಾರೆ ಎಂದರು.



ಬಸವಕಲ್ಯಾಣ: ಗವಿಮಠದಲ್ಲಿ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಬೀದರನ ದಂತ ವೈದ್ಯ ಡಾ। ವಿಜಯ ಕೊಂಡ ಮಾತನಾಡಿ, ಒಂದು ವ್ಯವಹಾರಕ್ಕೆ ಸೀಮಿತವಾಗುವುದನ್ನು ಬಿಟ್ಟು ಎರಡು ವ್ಯವಹಾರಗಳು ಅಥವಾ ವ್ಯಾಪಾರಗಳನ್ನು ಮಾಡಿದಾಗ ಮಾತ್ರ ನಾವು ಏನಾದರೂ ಏಳಿಗೆ ಮಾಡಿಕೊಳ್ಳಬಹುದು. ಜೀವನಕ್ಕೆ ದುಡ್ಡು ಬಹಳ ಮುಖ್ಯ. ಆ ದುಡ್ಡು ಹೇಗೆ ಪ್ರಾಮಾಣಿಕವಾಗಿ ಸಂಪಾದಿಸಬೇಕು ಎಂಬುದು ಅರಿವು ನಮ್ಮ ಮನಸ್ಸಿನಲ್ಲಿರಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಹುಲಸೂರ ತಹಶೀಲ್ದಾರ್ ಶಿವಾನಂದ ಮೇತ್ರೆ ಮಾತನಾಡಿ, ಗವಿಮಠ ಸರ್ವರನ್ನು ಕೈ ಬೀಸಿ ಕರೆಯುತ್ತಿದೆ. ಶ್ರೀಗಳು ಯಾವತ್ತೂ ಸಮಾಜಮುಖಿಯಾಗಿ ಕೆಲಸ ಮಾಡುತ್ತಿದ್ದಾರೆ. ಆವರ ನಡೆ ನುಡಿ ಒಂದಾಗಿದೆ. ಪೂಜ್ಯರ ಸಂದೇಶ ನಮಗೆಲ್ಲರಿಗೂ ಸ್ಫೂರ್ತಿ ಎಂದರು. ಮಕ್ಕಳ ತಜ್ಞ ಡಾ। ಜಿ.ಎಸ್. ಭೂರಾಳೆ, ಮುಖಂಡ ರವಿ ನಾವದಗಿ, ವಿದ್ಯಾರ್ಥಿ ಶರಣಬಸಪ್ಪ ಆಲಗುಡೆ ಮಾತನಾಡಿದರು. ಶ್ರೀಶೈಲ ವಾತಡೆ ವೇದಿಕೆಯಲ್ಲಿದ್ದರು.

ಷಣ್ಮುಖಯ್ಯಾ ಸ್ವಾಮಿ ಸ್ವಾಗತಿಸಿದರು. ಶಿವಕುಮಾರ ಮನ್ನೋಳ್ಳಿ ನಿರೂಪಿಸಿದರು. ಈ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ನೂತನ ಪದಾಧಿಕಾರಿಗಳಿಗೆ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರು ಸತ್ಕರಿಸಿ ಗೌರವಿಸಿದರು.

ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ಅಲಗುಡೆ, ರುದ್ರಮುನಿ ಚೆನ್ನೂರ, ಸಿದ್ದಲಿಂಗಪ್ಪ ಗೌಡ, ಬಸವರಾಜ ಉಪಾಸೆ, ಲೋಕೇಶ ಮೊಳಕೇರೆ, ಶಿವಕುಮಾರ ಬಿರಾದಾರ, ಸಂದೀಪ ಪಾಟೀಲ, ಶ್ರೀನಿವಾಸ ಬಿರಾದಾರ, ಅನಿಲ ಸಕ್ಕರಬಾವಿ, ಅಜಯ ಸ್ವಾಮಿ, ಆಕಾಶ ಬಾಲಕಿಲೆ, ವೀರಶೆಟ್ಟಿ ಮಡಿವಾಳ ಸೇರಿದಂತೆ ಅನೇಕರು ಇದ್ದರು.

ಕಲಬುರಗಿ ಉದಯವಾಣಿ
ಬುಧವಾರ, ಸೆಪ್ಟೆಂಬರ್ 13, 2023

ಮೊಬೈಲ್ ದುರ್ಬಳಕೆ: ಜಾಗೃತಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ:ಇಲ್ಲಿನ ತ್ರಿಪುರಾಂತ ಗವಿಮಠದಲ್ಲಿ ಪೀಠಾಧಿಪತಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರ ವರ್ಧಂತಿ ಹಾಗೂ ಜನ್ಮದಿನ ಕಾರ್ಯಕ್ರಮದ ಅಂಗವಾಗಿ ಸೆಪ್ಟೆಂಬರ್ 27 ರಂದು ಮೊಬೈಲ್ ದುರ್ಬಳಕೆ ಬಗ್ಗೆ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ ಬಸವೇಶ್ವರ ದೇವಸ್ಥಾನದಿಂದ ತ್ರಿಪುರಾಂತವರೆಗೆ ಪಾದಯಾತ್ರೆ ನಡೆಯಲಿದೆ. ಬಳಿಕ ಧರ್ಮಸಭೆ ನಡೆಯಲಿದೆ. ಹಿರೇನಾಗಾಂವ ಜಯಶಾಂತಲಿಂಗ



ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ

ಸ್ವಾಮೀಜಿ, ತಡೋಳಾ ರಾಜೇಶ್ವರ ಶಿವಾಚಾರ್ಯ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸಾನ್ನಿಧ್ಯ ವಹಿಸುವರು. ಶಾಸಕ ಶರಣು ಸಲಗರ ಉದ್ಘಾಟಿಸುವರು. ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ, ವಿಧಾನಪರಿಷತ್ ಸದಸ್ಯ ಡಾ.ಚಂದ್ರಶೇಖರ ಪಾಟೀಲ, ಮಾಜಿ ಶಾಸಕ ಎಂ.ಜಿ. ಮುಳೆ, ವಿಧಾನ ಪರಿಷತ್ ಮಾಜಿ ಸದಸ್ಯ ವಿಜಯಸಿಂಗ್, ಉಪ ವಿಭಾಗಾಧಿಕಾರಿ ಪ್ರಕಾಶ ಕುದರಿ ಮತ್ತಿತರರು ಪಾಲ್ಗೊಳ್ಳುವರು.

ವಿವಿಧ ಕ್ಷೇತ್ರದ ಸಾಧಕರಾದ ರವಿ ನಾವದ್ಗೇಕರ್, ಶಿವಕುಮಾರ ಬಿರಾದಾರ, ಲೋಕೇಶ ಮೋಳಕೆರೆ, ವಿನೋದ ಬಡಿಗೇರ್ ಅವರಿಗೆ ಶ್ರೀಗುರು ರಕ್ಷೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು.

ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಚಾರ್ಯ ಶಾಂತಯ್ಯ ಮಠಪತಿ, ಶರಣಬಸಪ್ಪ ದಂಡೆ, ಸಂಜಯ ರೋಹಿಲೆ, ಶಶಿಧರ ಪಾಟೀಲ, ಭೀಮರೆಡ್ಡಿ ರಾಸನೆ, ಮಲ್ಲಿಕಾರ್ಜುನ ಹಾದಿಮನಿ ವಿಶೇಷ ಸನ್ಮಾನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸೋಮವಾರ • ಸೆಪ್ಟೆಂಬರ್ 25, 2023
ಪ್ರಜಾವಾಣಿ

Scanned with OKEN Scanner

ಬಸವಕಲ್ಯಾಣ: ದೇವರ ಮೂರ್ತಿ ಪ್ರತಿಷ್ಠಾಪನೆ

ಸಂ.ಕ.ಸಮಾಚಾರ ಬಸವಕಲ್ಯಾಣ : ಇಲ್ಲಿಯ ನಾರಾಯಣಪೂರ ರಸ್ತೆಯಲ್ಲಿಯ ಶಿವಯೋಗಿ ನಗರದಲ್ಲಿ ಶ್ರಾವಣ ಮಾನದ ನಿಮಿತ್ಯ ಶ್ರೀ ಮಹಾದೇವ ಮೂರ್ತಿ, ಶ್ರೀ ಗಣೇಶನ ಮೂರ್ತಿ, ನಂದಿ ಬಸವಣ್ಣ ಹಾಗೂ ಕಾಸವ್ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ ಜರುಗಿತು.

ತ್ರಿಪುರಾಂತ ಗವಿ ಮಠದ ಶ್ರೀ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರ ಅಮೃತ ಹಸ್ತದಿಂದ ಮೂರ್ತಿಗಳ ಪ್ರತಿಷ್ಠಾಪನೆ ನೆರವೇರಿಸಲಾಯಿತು. ಇದಕ್ಕೂ ಮುನ್ನ ಜೈ ಹನುಮಾನ ದೇವಸ್ಥಾನದಲ್ಲಿ ವಿಶೇಷವಾಗಿ ಅಭಿಷೇಕ ಮತ್ತು ಹವನ ಪೂಜೆ ನೆರವೇರಿಸಲಾಯಿತು. ನಂತರ ಸುತ್ತ ಮುತ್ತಲಿನಿಂದ ಆಗಮಿಸಿದ ಭಕ್ತಾದಿಗಳಿಗೆ ಮಹಾ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಗೋಕುಳ ಗ್ರಾಮದ ವಾಮನರಾವ ಸಂಗೀತ ಕಲಾ ತಂಡದವರಿಂದ ಭಜನೆ ಕಾರ್ಯಕ್ರಮ ಜರುಗಿತು. ಇದೆ ಸಂದರ್ಭದಲ್ಲಿ ತೆಲಂಗ ಸಮಾಜದ ತಾಲ್ಲೂಕು ಅಧ್ಯಕ್ಷ ಶ್ರೀನಿವಾಸ ತೆಲಂಗ ಮೂರ್ತಿಗಳು ದಾನಿಯಾಗಿ ನೀಡಿದ್ದಾರೆ. ಪ್ರದೀಪ್ ಪಾಠಕ್ ಮಹಾರಾಜ, ಪ್ರಶಾಂತ ಪಾಠಕ್ ನೇತೃತ್ವದಲ್ಲಿ ಪೂಜೆ ನಡೆಸಲಾಯಿತು.



ಬಸವಕಲ್ಯಾಣದ ಶಿವಯೋಗಿ ನಗರದಲ್ಲಿ ಶ್ರಾವಣ ಮಾಸದ ನಿಮಿತ್ಯ ಶ್ರೀ ಮಹಾದೇವ ಮೂರ್ತಿ, ಶ್ರೀ ಗಣೇಶನ ಮೂರ್ತಿ, ನಂದಿ ಬಸವಣ್ಣ ಹಾಗೂ ಕಾಸವ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ ಜರುಗಿತು.

ಈ ವೇಳೆ ಶ್ರೀ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ಮೂರ್ತಿ ದಾನಿಗಳಾದ ಶ್ರೀನಿವಾಸ ತೆಲಂಗ ದಂಪತಿ ಹಾಗೂ ಹಾರಕೂಡ ಗ್ರಾಮ ಪಂಚಾಯತ ಜೆಇ ಜಾಧವ್ ಅವರಿಗೆ ಸನ್ಮಾನಿಸಿದರು.

ವಚನ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಕಲ್ಯಾಣರಾವ ಮದರಗಾಂವಕರ್, ಪ್ರಮುಖರಾದ ಬಾಲಾಜಿ ಬಿರಾದಾರ, ದತ್ತು ಚೌದ್ರಿ, ಕಮಲಾಕರ ಲಾತೂರಕರ ಗೌಳಿ, ದಸ್ತಗೀರ ಅಹೇಮದ, ಪ್ರಭು ಭಂಡಾರಿ ಹುಮನಾಬಾದ, ಬಾಲಾಜಿ ವಾಗಲೆ, ಅನೀಲಕುಮಾರ ಇಂಗೋಲೆ, ಚೆನ್ನಬಸವ ಬಿರಾದಾರ, ಮಹಾದೇವ ಸ್ವಾಮಿ, ಬಾಲಾಜಿ ಭಗಾಡೆ, ಪ್ರೇಮಸಿಂಗ್ ರಾಠೋಡ, ಪ್ರಹಲಾದ ಮಾನಕರೆ, ಬಬ್ರುವಾನ್ ಮೋರೆ, ಜ್ಞಾನೇಶ್ವರ ಬಿರಾದಾರ, ಗೋವಿಂದ ರಡ್ಡಿ, ಡಾ. ರವಿಂದ್ರ ಹೂಗಾರ, ಮಹೇಶ್ ಬೇಟ್‌ಬಾಲಕುಂದಾ, ಶರಣಪ್ಪ ಬೇಲೂರ, ಅಬಿತ್ ಸಿಂಧೆ, ಸಹದೇವ ಮೇತ್ರೆ, ಸತೀಷ ರಾಠೋಡ ಮತ್ತಿತರಿದ್ದರು. ಇದಕ್ಕೂ ಮುನ್ನ ಹಾಲ ಬಸವಣ್ಣ ದೇವಸ್ಥಾನದಿಂದ ಹನುಮಾನ ದೇವಸ್ಥಾನದ ವರೆಗೆ ಮೂರ್ತಿಗಳ ಭವ್ಯ ಮೆರವಣಿಗೆ ನಡೆಯಿತು.

ಸಂಯುಕ್ತ ಕರ್ನಾಟಕ
ಗುರುವಾರ, 07, ಸೆಪ್ಟೆಂಬರ್, 2023
ಕಲಬುರಗಿ | KALABURAGI

ಬಸವೇಶ್ವರ ದೇವಸ್ಥಾನದಿಂದ ತ್ರಿಪುರಾಂತನ ಮಡಿವಾಳ ಮಾಚಿದೇವರ ವೃತ್ತದ ವರೆಗೆ ಪಾದಯಾತ್ರೆ

ಮೊಬೈಲ್ ಜಾಗೃತಿ ಅಭಿಯಾನ ಯಶಸ್ವಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಗವಿ ಮಠದ ಪೀಠಾಧಿಪತಿ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರ ಜನುಮ ದಿನ, ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಬುಧವಾರ ನಗರದಲ್ಲಿ ಅಭಿನವ ಶ್ರೀಗಳ ನೇತೃತ್ವದಲ್ಲಿ ಮೊಬೈಲ್ ಜಾಗೃತಿ ಅಭಿಯಾನ ಕಾರ್ಯಕ್ರಮ ಜರುಗಿತು.

ನಗರದ ಐತಿಹಾಸಿಕ ಶ್ರೀಬಸವೇಶ್ವರ ದೇವಸ್ಥಾನದಿಂದ ಮುಖ್ಯ ರಸ್ತೆಯ ಮಾರ್ಗವಾಗಿ ತ್ರಿಪುರಾಂತನ ಮಡಿವಾಳ ಮಾಚಿದೇವರ ವೃತ್ತದವರೆಗೂ ಅಭಿನವ ಶ್ರೀಗಳ ನೇತೃತ್ವದಲ್ಲಿ ಪಾದಯಾತ್ರೆ ನಡೆಯಿತು. ಮೊಬೈಲ್‌ನಿಂದಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಫಲಕಗಳೊಂದಿಗೆ ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ, ಪುಸ್ತಕ ಕೊಡಿ,ಮೊಬೈಲ್ ದೂರವಿಡಿ ಎಂಬ ಘೋಷಣೆಗಳೊಂದಿಗೆ ನಡೆದ ಜಾಗೃತಿ ಅಭಿಯಾನದಲ್ಲಿ ಜನ ಪ್ರತಿನಿಧಿಗಳು, ಗಣ್ಯರು, ವಿವಿಧ ಸಂಘ-ಸಂಸ್ಥೆ ಪದಾಧಿಕಾರಿಗಳು, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಶ್ರೀಮಠದ ಭಕ್ತರು ಭಾಗವಹಿಸಿದ್ದರು.

ಅಭಿಯಾನಕ್ಕೆ ಚಾಲನೆ ನೀಡಿದ ನಂತರ ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಜನ್ಮ ದಿನದ ನಿಮಿತ್ತ ಆಯೋಜಿಸಿದ್ದ ಸಮಾಜಜಮುಖಿ ಜಾಗೃತಿ ಕಾರ್ಯಕ್ರಮಕ್ಕೆ ಎಲ್ಲರೂ ಕೈಜೋಡಿಸಿ ಯಶಸ್ವಿ ಗೊಳಿಸಿರುವುದು ಸಂತಸ ತಂದಿದೆ ಎಂದರು.

ಮುಖಂಡ ಶಾಂತಪ್ಪಾಜಿ. ಪಾಟೀಲ್, ಸಿಪಿಐ ಅಲಿಸಾಬ, ಉಪನ್ಯಾಸಕರ ಸಂಘದ ರಾಜ್ಯ ಕಾರ್ಯದರ್ಶಿ ನರಸಿಂಗರೆಡ್ಡಿ ಗದಲೇಗಾಂವ, ಯುವ ಮುಖಂಡ ಶಿವಕುಮಾರ ಬಿರಾದಾರ, ಬಜರಂಗ ದಳದ ತಾಲೂಕು ಸಂಯೋಜಕ ರವಿ ನಾವದ್ಗೇಕರ್ ಮಾತನಾಡಿದರು.



ಬಸವಕಲ್ಯಾಣ ನಗರದಲ್ಲಿ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನ, ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಬುಧವಾರ ನಡೆದ ಮೊಬೈಲ್ ಜಾಗೃತಿ ಪಾದಯಾತ್ರೆಯಲ್ಲಿ ಪ್ರಮುಖರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಶ್ರೀಗಳು ಈ ಹಿಂದೆಯೂ ಆರೋಗ್ಯ ಪೂರ್ಣ ಸಮಾಜಕ್ಕಾಗಿ ಗುಟಕಾ, ತಂಬಾಕು ಸೇವನೆ ವಿರುದ್ಧ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ. ತಮ್ಮ ಜನ್ಮ ದಿನದ ನಿಮಿತ್ತ ಬೀದಿಗಿಳಿದು ಪಾದಯಾತ್ರೆ ನಡೆಸುವ ಮೂಲಕ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ.ಶ್ರೀಗಳ ಸಂದೇಶ ಎಲ್ಲಡೆ ತಲುಪಲಿ, ಅವರ ಆಶಯ ಸಾಕಾರಗೊಳ್ಳಲಿ.

-ಶರಣು ಸಲಗರ್, ಶಾನಕ, ಬಕಲ್ಯಾಣ.

ಮೊಬೈಲ್‌ನಿಂದ ಕಣ್ಣು ಮತ್ತು ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಮೊಬೈಲ್ ನೋಡಿ ಮಲಗಿದರೆ ನಿದ್ದೆ ನೆಮ್ಮದಿ ಹಾಳಾಗುತ್ತಿದೆ. ಹೀಗಾಗಿ ಜನ್ಮ ದಿನದ ನಿಮಿತ್ತ ಶ್ರೀಗಳು ಮೊಬೈಲ್ ಕುರಿತು ಜಾಗೃತಿ ಮೂಡಿಸುವ ಸಮಾಜಮುಖಿ ಕಾರ್ಯ ಮಾಡುತ್ತಿದ್ದಾರೆ.ಇದು ನಿಜಕ್ಕೂ ಮಾದರಿ ಕಾರ್ಯ.

-ಡಾ.ಸಿದ್ದು ಪಾಟೀಲ್, ಶಾನಕ, ಹುಮನಾಬಾದ್.

ಮುಖಂಡ ಅರ್ಜುನ ಕನಕ, ಗವಿಮಠ ಟ್ರಸ್ಟನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ,ಬಿಡಿವಿಸಿ ಉಪಾಧ್ಯಕ್ಷ, ಖ್ಯಾತ ಮಕ್ಕಳ ತಜ್ಞ ಡಾ.ಜಿ.ಎಸ್ .ಭುರಳೆ, ವಿಶ್ವ ಹಿಂದು ಪರಿಷತ್ ತಾಲೂಕು ಅಧ್ಯಕ್ಷ ಶ್ರೀಶೈಲ್ ವಾತಡೆ, ಪ್ರಾಚಾರ್ಯ ಎ.ಜಿ.ಪಾಟೀಲ್, ಯುವ ಮುಖಂಡ ಲೋಕೇಶ ಮೋಳಕೆರೆ, ಗೋರಕ್ಷಾ ಪ್ರಮುಖ ವಿನೋದ ಬಡಗೇಕರ, ರಮೇಶ ರಾಜೋಳೆ ,ಪ್ರೊ. ರುದ್ರೇಶ್ವರ ಸ್ವಾಮಿ,ಪ್ರೊ. ವಿ.ಎಸ್.ರಾಜೋಳೆ, ಇಕ್ರಮೋದ್ದಿನ್ ಖಾದಿವಾಲಾ, ಮನ್ನೂರಲಿ, ಚನ್ನವೀರ ಜಮಾದಾರ, ಬಸವರಾಜ ಬಿರಾದಾರ, ಬಸವಂತಪ್ಪ ಮಾಲಿ ಪಾಟೀಲ್, ಮರೆಪ್ಪಾ ಪೊಲೀಸ್ ಪಾಟೀಲ್,ಶ್ರೀನಿವಾಸ ಬಿರಾದಾರ, ಸಚಿನ ಗರಡುಕರ, ಸಚಿನ ಸೂರ್ಯವಂಶಿ, ಅಜಯ ಗೌಳಿ, ಲೋಕೇಶ ಜಮಖಂಡಿ, ಗುರು ದೇಗಾಂವ, ಲಕ್ಷ್ಮಿಕಾಂತ ಜಾಂತೆ ಪಾಲ್ಗೊಂಡಿದ್ದರು.

ವಿಜಯ ಕರ್ನಾಟಕ VK
ಗುರುವಾರ,28 ಸೆಪ್ಟೆಂಬರ್ 2023,
ಕಲಬುರಗಿ

Scanned with OKEN Scanner



ಬಸವಕಲ್ಯಾಣದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಎಂಟನೇ ವಿಶೇಷ ಉಪನ್ಯಾಸ ಮಾಲೆಯಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

'ಮನಸ್ಸಿನ ಲೋಭಗುಣವು ಮನುಷ್ಯನ ಪ್ರಾಬಲ್ಯ ತಾಳುವುದು'

ಸಂ.ಬಸವಕಲ್ಯಾಣ: ಜಿಹ್ವಾಗ್ರೇ ವರ್ತತೇ ಲಕ್ಷ್ಮೀ ಜಿಹ್ವಾಗ್ರೇ ಮಿತ್ರ ಬಾಂಧವ್ಯ. ನಾವು ನಾಲಿಗೆಯಿಂದ ಮಾತಾಡಿಯೇ ಲಕ್ಷ್ಮೀಯನ್ನು ಸಂಪಾದಿಸಿಕೊಳ್ಳುತ್ತೇವೆ ಎಂದು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬೋಧಿಸಿದರು.

ಇಲ್ಲಿಯ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಎಂಟನೇ ವಿಶೇಷ ಉಪನ್ಯಾಸ ಮಾಲೆಯ ವಿಶೇಷ ವೇದಿಕೆಯಲ್ಲಿ ಮಾತನಾಡಿ ಮನುಷ್ಯನ ಮನಸ್ಸಿನಲ್ಲಿ ಯಾವಾಗ ಲೋಭಗುಣವು ಪ್ರಾಬಲ್ಯವನ್ನು ತಾಳುವುದು ಆಗ ಅದು ಮನಸ್ಸಿನಲ್ಲಿ ಚೌರ್ಯತನ ಹುಟ್ಟಿಸುತ್ತದೆ. ಚೌರ್ಯ ಎಂದರೆ ಮತ್ತೊಬ್ಬರ ವಸ್ತುವನ್ನು ಅಪಹರಿಸುವುದಷ್ಟೆ ಅಲ್ಲ ತಾನೇ ಅನ್ಯರಿಗೆ ಕೊಟ್ಟ ವಸ್ತುವನ್ನು ಪುನಃ ತೆಗೆದುಕೊಂಡರೆ ಅದು ಸಹ ಚೌರ್ಯವೆಂದೆ ಕರೆಯುತ್ತಾರೆ ಎಂದು ಸದ್ಭಕ್ತರಿಗೆ ಬೋಧಿಸಿದರು.

ಬೀದರ್‌ನ ದಂತ ವೈದ್ಯ ಡಾ.ವಿಜಯ ಕೊಂಡ ಅವರು ಒಂದು ವ್ಯವಹಾರಕ್ಕೆ ಸೀಮಿತವಾಗುವವುದನ್ನು ಬಿಟ್ಟು ಎರಡು ವ್ಯವಹಾರಗಳು ಅಥವಾ ವ್ಯಾಪಾರಗಳನ್ನು ಮಾಡಿದಾಗ ಮಾತ್ರ ನಾವು ಏನಾದರೂ ಏಳಿಗೆ ಮಾಡಿಕೊಳ್ಳಬಹುದು. ಜೀವನಕ್ಕೆ ದುಡ್ಡು ಬಹಳ ಮುಖ್ಯ. ಆ ದುಡ್ಡು ಹೇಗೆ ಪ್ರಾಮಾಣಿಕವಾಗಿ ಸಂಪಾದಿಸಬೇಕು ಎಂಬುದು ಅರಿವು ನಮ್ಮ ಮನಸ್ಸಿನಲ್ಲಿರಬೇಕು ಎಂದು ಹೇಳಿದರು.

ಹುಲಸೂರ ತಹಶೀಲ್ದಾರ್ ಶಿವಾನಂದ ಮೇತ್ರೆ ಮಾತನಾಡಿ ಗವಿಮಠ ಸರ್ವರನ್ನು ಕೈ ಬೀಸಿ ಕರೆಯುತ್ತಿದೆ. ಶ್ರೀಗಳು ಯಾವತ್ತೂ ಸಮಾಜಮುಖಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ನಡೆ ನುಡಿ ಒಂದಾಗಿದ್ದು, ಶ್ರೀಗಳ ಸಂದೇಶ ನಮಗೆಲ್ಲರಿಗೂ ಸ್ಫೂರ್ತಿ ಎಂದು ನುಡಿದರು. ಡಾ. ಜಿ.ಎಸ್.ಭೂರಾಳೆ, ರವಿ ನಾವದ್ಗೆಕರ್, ವಿದ್ಯಾರ್ಥಿ ಶರಣಬಸಪ್ಪ ಅಲಗುಡೆ ಮಾತನಾಡಿದರು.

ಷಣ್ಮುಖಿಯ್ಯಾ ಸ್ವಾಮಿ ಸ್ವಾಗತಿಸಿದರು. ಶಿವಕುಮಾರ ಮುನ್ನೋಳಿ ಸಂಚಾಲಿಸಿದರು. ವೀರಶೈವ ಲಿಂಗಾಯತ ಸಂಘಟನಾ ವೇದಿಕೆಯ ನೂತನ ಪದಾಧಿಕಾರಿಗಳಿಗೆ ಶ್ರೀಗಳಿಂದ ಸತ್ಕರಿಸಲಾಯಿತು. ಶ್ರೀಶೈಲ ವಾತಡೆ, ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ತಾಲ್ಲೂಕಾಧ್ಯಕ್ಷ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ಅಲಗುಡೆ, ರುದ್ರಮುನಿ ಚೆನ್ನೂರ, ಸಿದ್ದಲಿಂಗಪ್ಪ ಗೌಡ, ಬಸವರಾಜ ಉಪಾಸೆ, ಲೋಕೇಶ ಮೊಳಕೇರಿ, ಶಿವಕುಮಾರ್ ಬಿರಾದಾರ, ಸಂದೀಪ್ ಪಾಟೀಲ್, ಶ್ರೀನಿವಾಸ ಬಿರಾದಾರ, ಅನಿಲ ಸಕ್ಕರಬಾವಿ, ಅಜಯ ಸ್ವಾಮಿ, ಆಕಾಶ ಬಾಲಕಿಲೆ, ವೀರಶೆಟ್ಟಿ ಮಡಿವಾಳ ಇನ್ನಿತರರಿದ್ದರು.

ಸಂಯುಕ್ತ ಕರ್ನಾಟಕ
ಭಾನುವಾರ, 10, ಸೆಪ್ಟೆಂಬರ್, 2023
ಕಲಬುರಗಿ | KALABURAGI



ಬಸವಕಲ್ಯಾಣದ ಗವಿಮಠದಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಏಳನೇ ವಿಶೇಷ ಉಪನ್ಯಾಸ ಮಾಲೆಯಲ್ಲಿ ವೈಷ್ಣವಿ ಗುರುಲಿಂಗಯ್ಯಾ ಅವರನ್ನು ಸನ್ಮಾನಿಸಲಾಯಿತು.

'ಪರರಿಗೆ ಉಪಕಾರಿಯಾಗಿ ಜೀವನ ಸಾರ್ಥಕ ಮಾಡಿಕೊಳ್ಳಿ'

ಸಂ.ಕ.ಸಮಾಚಾರ ಬಸವಕಲ್ಯಾಣ: ಜೀವನ ಕ್ಷಣಿಕವಾಗಿದ್ದು, ಮನುಷ್ಯನಾಗಿ ಹುಟ್ಟಿದ ಮೇಲೆ ಪರರಿಗೆ ಒಂದಿಷ್ಟು ಸೇವೆ, ದಾನ, ಧರ್ಮ ಮಾಡುವುದರ ಮೂಲಕ ಪರರಿಗೆ ಉಪಕಾರಿಯಾಗಿ ಬದುಕಿನ ಜೀವನ ಸಾರ್ಥಕ ಮಾಡಿಕೊಳ್ಳಬೇಕು ಎಂದು ಇಲ್ಲಿಯ ತ್ರೀಪುರಾಂತನ ಗವಿ ಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬೋಧಿಸಿದರು.

ಇಲ್ಲಿಯ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲ್ಲೂಕು ಘಟಕ ಸಹಯೋಗದಲ್ಲಿ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಏಳನೇ ವಿಶೇಷ ಉಪನ್ಯಾಸ ಮಾಲೆಯಲ್ಲಿ ಮಾತನಾಡಿ ಮನುಷ್ಯ ಜನ್ಮ ಶ್ರೇಷ್ಠ ಜನ್ಮ ಎಂದು ತಿಳಿಸಿದರು. ನೇತ್ರ ತಜ್ಞೆ ಡಾ. ಜ್ಯೋತಿ ಖಂಡ್ರೆ ಮಾತನಾಡಿ ಕಣ್ಣು ದೇಹದ ಒಂದು ಪ್ರಮುಖ ಅಂಗ. ಅಲಕ್ಷ ಮಾಡದೇ ಕಣ್ಣಿನ ಆರೋಗ್ಯದ ಕುರಿತು ಎಲ್ಲರೂ ಸದಾ ಕಾಳಜಿ ವಹಿಸಬೇಕು. ಅಂಧತ್ವ ಬದುಕನ್ನು ಕತ್ತಲೆ ಮಾಡುತ್ತದೆ. ನೇತ್ರದಾನ ಶ್ರೇಷ್ಠದಾನವಾಗಿದೆ. ನೇತ್ರದಾನ ಮಾಡಿ ಅಂಧರ ಬಾಳಿಗೆ ಬೆಳಕಾಗಿ ಎಂದು ಕರೆ ನೀಡಿದರು.

ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ ಮಾತನಾಡಿ ಸಿದ್ಧಾಂತ ಶಿಖಾಮಣಿ ಮೋಕ್ಷ ಮಾರ್ಗ ತೋರುವ ಒಂದು ಶ್ರೇಷ್ಠ ಧರ್ಮ ಗ್ರಂಥ. ಹರ ಮುನಿದರೆ ಗುರು ಕಾಯುವರು. ಹೀಗಾಗಿ ಗುರು ದೇವರಿಗಿಂತ ಅಧಿಕ. ತನು, ಮನ, ಧನ ಶ್ರೇಷ್ಠ ಸೇವೆಗಳು. ಕೈಲಾದಷ್ಟು ಸದಾ ಈ ಮೂರು ಸೇವೆಗಳನ್ನು ಮಾಡಬೇಕು ಎಂದರು.

ರೇಖಾ ರಾಜು ಮಂಠಾಳೆ ಮಾತನಾಡಿದರು. ಗ್ರೇಡ್-2 ತಹಶೀಲ್ದಾರ ಪಲ್ಲವಿ ಬೆಳೆಕೆರೆ, ಪೂರ್ಣಿಮಾ ರುದ್ರೇಶ್ವರ ಗೋರ್ಟಾ ಇದ್ದರು. ಶಕುಂತಲಾ ಗುರುಲಿಂಗಯ್ಯ ಸ್ವಾಮಿ ಪ್ರಾರ್ಥನಾ ಗೀತೆ ಹಾಡಿದರು. ಡಾ. ಬಸವಜ್ಯೋತಿ ಸ್ವಾಮಿ ಸ್ವಾಗತಿಸಿದರು. ಅಕ್ಷತಾ ಬಸವಣಪ್ಪಾ ನಿರೂಪಿಸಿದರು. ಶರಣಬಸಪ್ಪ ಅಲಗುಡೆ ಮಂಗಳಾರುತಿ ಹಾಡಿದರು. ಇದೇ ವೇಳೆ ವೈಷ್ಣವಿ ಗುರುಲಿಂಗಯ್ಯಾ ಅವರಿಗೆ ವಿಶೇಷವಾಗಿ ಸನ್ಮಾನಿಸಲಾಯಿತು. ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ಅಲಗುಡೆ, ಪ್ರೊ. ರುದ್ರೇಶ್ವರ ಗೋರ್ಟಾ, ರುದ್ರಮುನಿ ಚೆನ್ನೂರ, ಸಿದ್ದಲಿಂಗಪ್ಪ ಗೌಡ, ಬಸವರಾಜ ಚಿರಡೆ, ಸುಭದ್ರಬಾಯಿ ವೀರಯ್ಯಾ ಸ್ವಾಮಿ, ಐಶ್ವರ್ಯ ಧನರಾಜ್, ರಂಗಮ್ಮ ಸಂತೋಷ ಸೇರಿದಂತೆ ಇತರರಿದ್ದರು.

ಸಂಯುಕ್ತ ಕರ್ನಾಟಕ
ಭಾನುವಾರ, 10, ಸೆಪ್ಟೆಂಬರ್, 2023
ಕಲಬುರಗಿ | KALABURAGI

Scanned with OKEN Scanner

ಅಭಿನವ ಘನಲಿಂಗ ಶ್ರೀ ನುಡಿ । ಸಂಸ್ಥಾನ ಗವಿಮಠದಲ್ಲಿ ಉಪನ್ಯಾಸ ಮಾಲೆ

ಸತ್ಕಾರ್ಯದಿಂದ ಸಾರ್ಥಕತೆ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸದ್ಗುಣ, ಸದಾಚಾರ, ಸತ್ಕಾರ್ಯಗಳು ಜೀವನದಲ್ಲಿ ನೆಮ್ಮದಿ ಮತ್ತು ಸಾರ್ಥಕತೆ ತಂದುಕೊಡುತ್ತವೆ ಎಂದು ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣ ಮಾಸದ ನಿಮಿತ್ತ ನಗರದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಮತ್ತು ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಸಹಯೋಗದಡಿ ಸೋಮವಾರ ಸಂಜೆ ಏರ್ಪಡಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲಿಕೆಯಲ್ಲಿ ಅವರು ಮಾತನಾಡಿದರು.

ಮನುಷ್ಯನ ಮನಸ್ಸಿನಲ್ಲಿ ಯಾವಾಗ ಲೋಭಗುಣ ಪ್ರಾಬಲ್ಯ ತಾಳುವುದೋ ಆಗ ಮನಸ್ಸಿನಲ್ಲಿ ಚೌರ್ಯತನ ಮೂಡುತ್ತದೆ. ಚೌರ್ಯ ಎಂದರೆ ಮತ್ತೊಬ್ಬರ ವಸ್ತು ಅಪಹರಿಸುವುದಷ್ಟೇ ಅಲ್ಲ, ತಾನೇ ಅನ್ಯರಿಗೆ ಕೊಟ್ಟ ವಸ್ತು ಪುನಃ ತೆಗೆದುಕೊಳ್ಳುವುದು ಎಂದರು.

ಮಕ್ಕಳ ತಜ್ಞ ಡಾ.ಜಿ.ಎಸ್. ಭುರಳೆ ಮಾತನಾಡಿ, ಅತಿಯಾದ ಮೊಬೈಲ್ ಬಳಕೆ ಮಕ್ಕಳ ಮನಸ್ಸಿನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಮಕ್ಕಳಿಗೆ ಮೊಬೈಲ್ ಕೊಡದೆ ಉತ್ತಮ ಸಂಸ್ಕಾರ ಮತ್ತು ಸಂಸ್ಕೃತಿ ತಿಳಿಸಿಕೊಡುವಲ್ಲಿ ಪಾಲಕರು ಕಾಳಜಿ ವಹಿಸಬೇಕಾದ ಅಗತ್ಯವಿದೆ ಎಂದು ಸಲಹೆ ನೀಡಿದರು.

ಹುಲಸೂರು ತಹಸೀಲ್ದಾರ್ ಶಿವಾನಂದ ಮೇತ್ರೆ ಮಾತನಾಡಿ, ಗವಿಮಠದ ಶ್ರೀಗಳು ನಡೆ-ನುಡಿ ಒಂದಾಗಿಸಿಕೊಂಡು ಸಮಾಜಮುಖಿ ಕೆಲಸ ಮಾಡುತ್ತಿರುವುದರಿಂದ ಮಠ ಸರ್ವರನ್ನು ಕೈ ಬೀಸಿ ಕರೆಯುತ್ತಿದೆ ಎಂದರು.


ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಸೋಮವಾರ ಸಂಜೆ ಏರ್ಪಡಿಸಿದ್ದ ಉಪನ್ಯಾಸ ಮಾಲೆಯಲ್ಲಿ ಡಾ.ಜಿ.ಎಸ್.ಭುರಳೆ ಮಾತನಾಡಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ತಹಸೀಲ್ದಾರ್ ಶಿವಾನಂದ ಮೇತ್ರೆ, ಡಾ.ವಿಜಯ ಕೊಂಡ, ಶ್ರೀಶೈಲ ವಾತಡೆ, ರವಿ ನಾವದಗೇಕರ್ ಇತರರಿದ್ದರು.

ಬೀದರ್‌ನ ದಂತ ವೈದ್ಯ ಡಾ.ವಿಜಯ ಕೊಂಡ ಮಾತನಾಡಿ, ಜೀವನಕ್ಕೆ ದುಡ್ಡು ಮುಖ್ಯ. ದುಡ್ಡು ಪ್ರಾಮಾಣಿಕವಾಗಿ ಹೇಗೆ ಸಂಪಾದಿಸಬೇಕು ಎಂದು ಅರಿಯುವುದು ಮನಸ್ಸಿನಲ್ಲಿರಬೇಕು. ಒಂದು ವ್ಯವಹಾರಕ್ಕೆ ಸೀಮಿತವಾಗದೆ ಎರಡು ವ್ಯವಹಾರ, ವ್ಯಾಪಾರ ಮಾಡಿದಾಗ ಮಾತ್ರ ಏಳಿಗೆ ಮಾಡಿಕೊಳ್ಳಬಹುದು ಎಂದರು.

ಬಜರಂಗದಳ ಸಂಯೋಜಕ ರವಿ ನಾವದಗೇಕರ್ ಮಾತನಾಡಿದರು. ವಿವಿಪ್ಪಿ ತಾಲೂಕು ಅಧ್ಯಕ್ಷ ಶ್ರೀಶೈಲ ವಾತಡೆ, ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ಅಲಗುಡೆ, ರುದ್ರಮುನಿ ಚನ್ನೂರ, ಶರಣಬಸಪ್ಪ ಅಲಗುಡೆ, ಸಿದ್ದಲಿಂಗಪ್ಪ ಗೌಡ, ಬಸವರಾಜ ಉಪಾಸೆ, ಲೋಕೇಶ ಮೊಳಕೇರಿ, ಶಿವಕುಮಾರ ಬಿರಾದಾರ, ಸಂದೀಪ ಪಾಟೀಲ್, ಶ್ರೀನಿವಾಸ ಬಿರಾದಾರ, ಅನಿಲ ಸಕ್ಕರಬಾವಿ, ಆಜಯ ಸ್ವಾಮಿ, ಆಕಾಶ ಬಾಲಕಿಲೆ, ವೀರಶೆಟ್ಟಿ ಮಡಿವಾಳ ಇತರರಿದ್ದರು.

ಷಣ್ಮುಖಯ್ಯ ಸ್ವಾಮಿ ಸ್ವಾಗತಿಸಿದರು. ಶಿವಕುಮಾರ ಮುನ್ನೊಳಿ ಸಂಚಾಲನೆ ಮಾಡಿದರು. ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ನೂತನ ಪದಾಧಿಕಾರಿಗಳನ್ನು ಸತ್ಕರಿಸಲಾಯಿತು.

> ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ ಮತ್ತು ಪಟ್ಟಾಧಿಕಾರ ವರ್ಧಂತಿ ಉತ್ಸವ ನಿಮಿತ್ತ ಮೊಬೈಲ್ ಬಳಕೆಯಿಂದ ಮಕ್ಕಳನ್ನು ದೂರವಿಡಲು ಸೆ.27ರಂದು ಬಸವಕಲ್ಯಾಣದ ಮುಖ್ಯ ರಸ್ತೆಯಲ್ಲಿ ಮೊಬೈಲ್ ಜಾಗೃತಿ ಪಾದಯಾತ್ರೆ ಅಭಿಯಾನ ಸಂಕಲ್ಪ ಮಾಡಿದ್ದು ವಿಶೇಷ ಸಾಮಾಜಿಕ ಕಾರ್ಯ.
>
> **। ರವಿ ನಾವದಗೇಕರ್**
> ಬಜರಂಗದಳ ಸಂಯೋಜಕ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 13 ಸೆಪ್ಟೆಂಬರ್ 2023
13 SEPTEMBER 2023

ಅಭಿನವ ಘನಲಿಂಗ ಶ್ರೀ ನುಡಿ ಗವಿಮಠದಲ್ಲಿ ಉಪನ್ಯಾಸ ಮಾಲೆ

ಅನ್ನ ನೀರು ಸುಭಾಷಿತ ಶ್ರೇಷ್ಠ ರತ್ನಗಳು

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಅನ್ನ, ನೀರು, ಶುಭಾಷಿತಗಳು ಶ್ರೇಷ್ಠ ರತ್ನಗಳು ಎಂದು ಜಗದ ಪ್ರಥಮ ಜಗದ್ಗುರು ಶ್ರೀ ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಮೂಲಕ ಮನುಕುಲಕ್ಕೆ ಬೋಧಿಸಿದ್ದಾರೆ ಎಂದು ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣ ಮಾಸದ ನಿಮಿತ್ತ ಸೋಮವಾರ ಸಂಜೆ ನಗರದ ಇತಿಹಾಸ ಪ್ರಸಿದ್ಧ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನಾ ಸಂಸ್ಥೆ ಆಶ್ರಯದಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಎರಡನೇ ವಿಶೇಷ ಉಪನ್ಯಾಸ ಮಾಲೆಯಲ್ಲಿ ಮಾತನಾಡಿದರು.

ಯುವ ಮುಖಂಡ ಶಿವಕುಮಾರ ಬಿರಾದಾರ ಮಾತನಾಡಿ, ಗುರುವಿನ ಮಾರ್ಗದರ್ಶನದಲ್ಲಿ ಸನ್ಮಾರ್ಗದಲ್ಲಿ ಮುನ್ನಡೆಯುವುದೇ ನಿಜ ಧರ್ಮ ಎಂದರು.

ವೈದ್ಯಾಧಿಕಾರಿ ಡಾ.ಬಾಲಕೃಷ್ಣ ರಾಠೋಡ ಮಾತನಾಡಿ, ಆಹಾರ ಸೇವನೆ ವಿಧಾನ ಗೊತ್ತಿಲ್ಲದೇ ಬಹಳಷ್ಟು ಜನರು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದು, ನಿಯಮಿತ, ಹಿತ ಆಹಾರ ಸೇವಿಸಬೇಕು ಎಂದರು.


ವಿಜಯವಾಣಿ ಚಿತ್ರ

ಬಸವಕಲ್ಯಾಣದ ಗವಿಮಠದಲ್ಲಿ ಸೋಮವಾರ ಸಂಜೆ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಮಾಲೆಯಲ್ಲಿ ಮುಖಂಡ ಶಿವಕುಮಾರ ಬಿರಾದಾರ ಅವರನ್ನು ಸನ್ಮಾನಿಸಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ಬಾಲಕೃಷ್ಣ ರಾಠೋಡ, ಬಸವಂತಪ್ಪ ಲವಾರೆ ಇತರರಿದ್ದರು.

ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಅಧ್ಯಕ್ಷತೆ ವಹಿಸಿದ್ದರು. ಪ್ರಮುಖರಾದ ಮಲ್ಲಿಕಾರ್ಜುನ ಅಲಶೆಟ್ಟಿ, ಶರಣಪ್ಪ ಬಿರಾದಾರ, ಎ.ಜಿ.ಪಾಟೀಲ್, ಶಾಂತಲಿಂಗ ಮಠಪತಿ, ಮಲ್ಲಿಕಾರ್ಜುನ ಅಲಗುಡೆ, ಶಿವಕುಮಾರ ಪರ್ತಾಪುರೆ, ಮಹಾನಂದಾ, ಶಕುಂತಲಾ, ಕಲಾವತಿ ಮಠಪತಿ, ಸವಿತಾ ಸ್ವಾಮಿ, ಪೂರ್ಣಿಮಾ ರುದ್ರೇಶ, ಸುಭದ್ರಾಬಾಯಿ, ಪಾರ್ವತಿ ರೋಜೆ, ಸತ್ಯವತಿ ಸ್ವಾಮಿ ಇತರರಿದ್ದರು.

ಮಹಿಳೆಯರು ಸಾಮೂಹಿಕವಾಗಿ ಭೂಲಾಯಿ ಪದಗಳನ್ನು ಹಾಡಿದರು. ರಮೇಶ ರಾಜೋಳೆ ಸ್ವಾಗತಿಸಿದರು. ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ನಿರೂಪಣೆ ಮಾಡಿದರು. ಮಲ್ಲಯ್ಯ ಧನ್ನೂರ ಪ್ರಾರ್ಥನಾ ಗೀತೆ ಹಾಡಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 23 ಆಗಸ್ಟ್ 2023
23 AUGUST 2023

Scanned with OKEN Scanner

'ಭಕ್ತಿಯಿಂದ ಜೀವನ ಸುಖಮಯ'

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಈಚೆಗೆ ನಡೆದ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ಉಪನ್ಯಾಸ ಕಾರ್ಯಕ್ರಮದಲ್ಲಿ ವೈಷ್ಣವಿ ಗುರುಲಿಂಗಯ್ಯ ಅವರನ್ನು ಸನ್ಮಾನಿಸಲಾಯಿತು

ಬಸವಕಲ್ಯಾಣ: 'ಭಕ್ತಿಯಿದ್ದರೆ ಶಕ್ತಿ ದೊರಕುತ್ತದೆ ಹಾಗೂ ಜೀವನ ಸುಖಮಯ ಆಗುತ್ತದೆ' ಎಂದು ಶ್ರೀಗುರು ಮಹಾಲಿಂಗೇಶ್ವರ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಸವಿತಾ ರಮೇಶ ಸ್ವಾಮಿ ಹೇಳಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಈಚೆಗೆ ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಆಶ್ರಯದಲ್ಲಿ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ಉಪನ್ಯಾಸಮಾಲೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಹರ ಮುನಿದರೆ ಗುರು ಕಾಯುವನು ಎಂದು ಹೇಳಲಾಗುತ್ತದೆ. ಸಿದ್ಧಾಂತ ಶಿಖಾಮಣಿ ಗ್ರಂಥವು ಗುರುವಿನ ಮಹತ್ವ ಸಾರುತ್ತದೆ. ಮೋಕ್ಷದ ಮಾರ್ಗ ತೋರುತ್ತದೆ' ಎಂದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಜೀವನ ಕ್ಷಣಿಕವಾಗಿದ್ದು, ಶರೀರ ಇರುವವರೆಗೆ ಪರೋಪಕಾರ ಮಾಡಬೇಕು' ಎಂದರು.

ರೇಖಾ ರಾಜೀವ ಮಂಠಾಳೆ ಮಾತನಾಡಿದರು.

ತಹಶೀಲ್ದಾರ್ ಪಲ್ಲವಿ ಬೆಳಕಿರೆ, ಡಾ.ಜ್ಯೋತಿ ಖಂಡ್ರೆ, ಡಾ.ಬಸವಜ್ಯೋತಿ, ಶಕುಂತಲಾ ಗುರುಲಿಂಗಯ್ಯ ಸ್ವಾಮಿ, ಅಕ್ಷತಾ ಬಸವಣ್ಣಪ್ಪ ಲವಾರೆ, ಶರಣ ಬಸಪ್ಪ ಮಲ್ಲಿಕಾರ್ಜುನ ಅಲಗೂಡೆ ಮಾತನಾಡಿದರು.

ವೈಷ್ಣವಿ ಗುರುಲಿಂಗಯ್ಯ ಅವರನ್ನು ಸನ್ಮಾನಿಸಲಾಯಿತು. ಪೂರ್ಣಿಮಾ ರುದ್ರೇಶ್ವರ ಗೋರಟಾ, ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ ಮತ್ತಿತರರು ಇದ್ದರು. ಅನ್ನಸಂತರ್ಪಣೆ ನಡೆಯಿತು.

ಪ್ರಜಾವಾಣಿ ಮಂಗಳವಾರ • ಸೆಪ್ಟೆಂಬರ್ 12, 2023

'ನಡೆ–ನುಡಿ ಒಂದಾಗಿದ್ದರೆ ಚಂದ'

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪನ್ಯಾಸದಲ್ಲಿ ವಿದ್ಯಾರ್ಥಿನಿ ವೈಷ್ಣವಿ ಯದ್ಲಾಪುರ ಅವರನ್ನು ಸನ್ಮಾನಿಸಲಾಯಿತು.

ಬಸವಕಲ್ಯಾಣ: ನಡೆ-ನುಡಿ ಒಂದಾಗಿದ್ದರೆ ಚಂದ. ಸಿದ್ಧಾಂತ ಶಿಖಾಮಣಿ ಹಾಗೂ ಶರಣರ ವಚನಗಳಲ್ಲಿ ಇದಕ್ಕೆ ಬಹಳಷ್ಟು ಮಹತ್ವ ನೀಡಲಾಗಿದೆ' ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದ್ದಾರೆ.

ನಗರದ ತ್ರಿಪುರಾಂತ ಗವಿಮಠದಲ್ಲಿ ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಹಾಗೂ ಗವಿಮಠ ಟ್ರಸ್ಟ್‌ನಿಂದ ಸೋಮವಾರ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯದ ಎರಡನೇ ಉಪನ್ಯಾಸ ಮಾಲೆಯಲ್ಲಿ ಅವರು ಮಾತನಾಡಿದರು.

'ರೇಣುಕಾಚಾರ್ಯರು ಅನ್ನ, ನೀರು ಮತ್ತು ಸುಭಾಷಿತ ಇವು ಶ್ರೇಷ್ಠರತ್ನಗಳು ಎಂದು ಸಾರಿದ್ದಾರೆ. ಹಾಗೆಯೇ ಬಸವಣ್ಣನವರು ನುಡಿದರೆ ಮುತ್ತಿನ ಹಾರದಂತಿರಬೇಕು ಎಂದಿದ್ದಾರೆ. ಕಾಯಕ ದಾಸೋಹಕ್ಕೆ ಮಹತ್ವ ನೀಡಿದ್ದಾರೆ. ಶರಣ, ಸಂತರ ತತ್ವಗಳನ್ನು ಬರೀ ಹೇಳುವುದಲ್ಲ ಆಚರಣೆಯಲ್ಲೂ ತರಬೇಕು' ಎಂದರು. ಪ್ರಾಧ್ಯಾಪಕ ರುದ್ರೇಶ್ವರ ವಿರೂಪಾಕ್ಷಯ್ಯಸ್ವಾಮಿ, ಮುಖ್ಯಶಿಕ್ಷಕ ರಮೇಶ ರಾಜೋಳೆ, ಮಲ್ಲಯ್ಯ ಹಿರೇಮಠ ಮಾತನಾಡಿದರು. ಡಾ.ಬಾಲಕೃಷ್ಣ ರಾಜೋಡ, ಶಿವಕುಮಾರ ಬಿರಾದಾರ ಹಾಗೂ ವಿದ್ಯಾರ್ಥಿನಿ ವೈಷ್ಣವಿ ಯದ್ಲಾ ಪುರ ಅವರನ್ನು ಸನ್ಮಾನಿಸಲಾಯಿತು.ಗವಿಮಠ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ಅಲಶೆಟ್ಟೆ ಇದ್ದರು. ನಾಗಪಂಚಮಿ ಅಂಗವಾಗಿ ಮಹಿಳೆಯರು ಭೂಲಾಯಿ ಪದ ಹಾಡಿದರು.

ಪ್ರಜಾವಾಣಿ ಬುಧವಾರ • ಆಗಸ್ಟ್ 23, 2023

Scanned with OKEN Scanner

ಅಭಿನವ ಶ್ರೀಗಳ 37ನೇ ಜನ್ಮ ವರ್ಷದ ದಿನೋತ್ಸವ, 18ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ

'ಭಕ್ತರ ಹೃದಯ ಮಂದಿರದಲ್ಲಿ ನೆಲೆಸಿರುವ ಘನಲಿಂಗ ಶ್ರೀಗಳು'

ಸಂ.ಕ.ಸಮಾಚಾರ ಬಸವಕಲ್ಯಾಣ: ಶ್ರೀ ಮಠದ ಭಕ್ತರ ಹೃದಯದಲ್ಲಿ ಘನಲಿಂಗರುದ್ರಮುನಿ ಶಿವಾಚಾರ್ಯರು ನೆಲೆಸಿದ್ದಾರೆ ಎಂದು ಹಿರನಾಗಾಂವ್‌ನ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಶ್ರೀಮಠದ ಭಕ್ತರಿಗೆ ಸಲಹೆ ನೀಡಿದರು.

ಇಲ್ಲಿಯ ಗವಿ ಮಠದಲ್ಲಿ ನಡೆದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 37ನೇ ವರ್ಷದ ಜನ್ಮ ದಿನೋತ್ಸವ ಹಾಗೂ 18ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ ಭಕ್ತರು ಗವಿ ಮಠದ ಮೇಲಿಟ್ಟಿರುವ ಪ್ರೀತಿ ವಿಶ್ವಾಸದ ಜತೆಗೆ ತನು-ಮನದ ಸಹಕಾರ ನೀಡುತ್ತಿರುವ ಫಲವಾಗಿ ಗವಿ ಮಠ ಸಾಕಷ್ಟು ಪ್ರಗತಿ ಹೊಂದುತ್ತಿದೆ. ಮುಂದೆಯೂ ಕೂಡಾ ಇದೇ ರೀತಿಯಲ್ಲಿ ಶ್ರೀ ಮಠಕ್ಕೆ ಭಕ್ತರು ಬೆನ್ನೆಲುಬಾಗಿ ನಿಲ್ಲಬೇಕು ಎಂದು ಹೇಳಿದರು. ಡಾ. ಅಭಿನವ ಶ್ರೀಗಳು ಮುಂದಿನ ವರ್ಷ ಏಪ್ರಿಲ್‌ನಲ್ಲಿ ಗವಿ ಮಠದಲ್ಲಿ ಹಮ್ಮಿಕೊಂಡಿರುವ ಜಾತ್ರಾ ಮಹೋತ್ಸವ ನಿಮಿತ್ಯ ರಥೋತ್ಸವದ ನಿರ್ಮಾಣಕ್ಕಾಗಿ ವೈಯಕ್ತಿಕವಾಗಿ 51 ಸಾವಿರ ರೂ. ನೀಡುವುದಾಗಿ ಹೇಳಿದರು.

ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಶ್ರೀ ಮಠದ ಭಕ್ತರು ನೀಡಿದ ಕಾಣಿಕೆಯಲ್ಲಿ ಗವಿ ಮಠದಲ್ಲಿ ಭವ್ಯವಾದ ಸಭಾ ಭವನ ನಿರ್ಮಿಸಲಾಗಿದೆ. ಹೊರತು ಸರ್ಕಾರದಿಂದ ಅನುದಾನ ಪಡೆದಿಲ್ಲ. ಏಪ್ರೀಲ್ ತಿಂಗಳಲ್ಲಿ ಗವಿ ಮಠದಲ್ಲಿ ಜಾತ್ರಾ ಮಹೋತ್ಸವ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಹೀಗಾಗಿ ಗವಿ ಮಠದಲ್ಲಿ 50 ಲಕ್ಷ ವೆಚ್ಚದಲ್ಲಿ ಮಹಾದ್ವಾರ ನಿರ್ಮಿಸಬೇಕಿದೆ. ಅದಕ್ಕೆ ಶಾಸಕ ಶರಣು ಸಲಗರ ಅವರು ಸರ್ಕಾರದ ಅನುದಾನದಲ್ಲಿ ನಿರ್ಮಿಸುತ್ತಾರೊ ಅಥವಾ ತಮ್ಮ ಸ್ವಂತದರಲ್ಲಿ ನಿರ್ಮಿಸುತ್ತಾರೋ ಗೊತ್ತಿಲ್ಲ. ಒಟ್ಟಾರೆಯಾಗಿ ಮಹಾದ್ವಾರ ನಿರ್ಮಿಸುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ಮಾಜಿ ಶಾಸಕ ಮಲ್ಲಿಕಾರ್ಜುನ ಎಸ್ ಖೂಬಾ, ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ, ಮುಖಂಡರಾದ ಪ್ರದೀಪ ವಾತಡೆ ಮಾತನಾಡಿದರು. ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪಾ ಬಿರಾದಾರ ಅಧ್ಯಕ್ಷತೆ ವಹಿಸಿದರು. ಜಗದ್ಗುರು ಚೆನ್ನಬಸವಾನಂದ ಸ್ವಾಮೀಜಿ, ಹುಲಸೂರ ತಹಶೀಲ್ದಾರ ಶಿವಾನಂದ ಮೇತ್ರೆ, ಕಸಾಪ ತಾಲ್ಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ, ಬಸವಂತಪ್ಪಾ ಲವಾರೆ, ಲತಾ ಹಾರಕೂಡೆ, ಕೇಶಪ್ಪಾ ಬಿರಾದಾರ ಸೇರಿದಂತೆ ಮತ್ತಿತರಿದ್ದರು. ಇದೇ ವೇಳೆಯಲ್ಲಿ ಗವಿ ಮಠದ ಶ್ರೇಯೋಭಿವೃದ್ಧಿಗಾಗಿ ಶಾಸಕ ಶರಣು ಸಲಗರ ವೈಯಕ್ತಿಕವಾಗಿ ಐದು ಲಕ್ಷ ರೂ. ದೇಣಿಗೆ ನೀಡಿದರು. ಲೊಕೇಶ ಮೋಳಕೆರೆ ಸ್ವಾಗತಿಸಿದರು. ಪ್ರೊ. ಸೂರ್ಯಕಾಂತ ಶೀಲವಂತ ಸ್ವಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ರಮೇಶ ರಾಜೋಳೆ ನಿರೂಪಿಸಿದರು.



ಬಸವಕಲ್ಯಾಣದ ಗವಿ ಮಠದಲ್ಲಿ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 37ನೇ ವರ್ಷದ ಜನ್ಮ ದಿನೋತ್ಸವ ಹಾಗೂ 18ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯಕ್ರಮ ಶಾಸಕ ಶರಣು ಸಲಗರ ಉದ್ಘಾಟಿಸಿದರು.

ಮತದಾರರೇ ನಿಜವಾದ ಆಸ್ತಿ

ನನಗೆ ಕ್ಷೇತ್ರದ ಮತದಾರರು ಎರಡು ಬಾರಿ ಆಶೀರ್ವಾದ ಮಾಡಿದ್ದಾರೆ. ಹೀಗಾಗಿ ಜೀವನದ ಕೊನೆ ಉಸಿರಿರುವರೆಗೂ ಜನರ ಸೇವಕನಾಗಿ ಹಾಗೂ ಗವಿ ಮಠದ ಪರಮ ಭಕ್ತನಾಗಿ ಕೆಲಸ ಮಾಡುವೆ. ಅಲ್ಲದೆ ಡಾ. ಅಭಿನವ ಶ್ರೀಗಳು ಸಮಾಜ ಮುಖಿ ಕಾರ್ಯಗಳಿಗೆ ಸಹಾಯ-ಸಹಕಾರ ನೀಡುವೆ. ನಾನು ಶಾಸಕನಾದರೂ ಕೂಡ ಸ್ವಂತ ಮನೆಯಿಲ್ಲ. ಒಂದು ಎಕರೆಯೂ ಜಮೀನಿಲ್ಲ. ಆದರೆ, ಜನರು ನನ್ನ ಮೇಲಿಟ್ಟಿರುವ ವಿಶ್ವಾಸಕ್ಕೆ ನಾನು ಚಿರರುಣಿ. ನನಗೆ ಕ್ಷೇತ್ರದ ಮತದಾರರೇ ನಿಜವಾದ ಆಸ್ತಿ.

■ ಶರಣು ಸಲಗರ್, ಶಾಸಕರು

Scanned with OKEN Scanner

ಮೊಬೈಲ್ ಜಾಗೃತಿ ಅಭಿಯಾನ * ಸಮಾಜಮುಖಿ ಜಾಗೃತಿ ಕಾರ್ಯಕ್ರಮ * ತ್ರೀಪುರಾಂತ ಶ್ರೀ ಭಾಗಿ

'ಮಕ್ಕಳ ಕೈಗೆ ಮೊಬೈಲ್ ಬೇಡ, ಪುಸ್ತಕ ಕೊಡಿ'

ಸಂ.ಕ.ಸಮಾಚಾರ ಬಸವಕಲ್ಯಾಣ: ಇಲ್ಲಿಯ ತ್ರೀಪುರಾಂತನ ಗವಿ ಮಠದ ಪೀಠಾಧಿಪತಿಗಳಾದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಹುಟ್ಟು ಹಬ್ಬ, ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಬುಧವಾರ ನಗರದಲ್ಲಿ ಅಭಿನವ ಶ್ರೀಗಳ ನೇತೃತ್ವದಲ್ಲಿ ಮೊಬೈಲ್ ಜಾಗೃತಿ ಅಭಿಯಾನ ಕಾರ್ಯಕ್ರಮ ಜರುಗಿತು. ನಗರದ ಶ್ರೀ ಐತಿಹಾಸಿಕ ಶ್ರೀ ಬಸವೇಶ್ವರ ದೇವಸ್ಥಾನದಿಂದ ಮುಖ್ಯ ರಸ್ತೆಯ ಮಾರ್ಗವಾಗಿ ತ್ರಿಪುರಾಂತನ ಶ್ರೀ ಮಡಿವಾಳ ಮಾಚಿದೇವರ ವೃತ್ತದವರೆಗೂ ಅಭಿನವ ಶ್ರೀಗಳ ನೇತೃತ್ವದಲ್ಲಿ ಪಾದಯಾತ್ರೆ ಜರುಗಿತು.

ಮೊಬೈಲ್‌ನಿಂದಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಫಲಕಗಳೊಂದಿಗೆ ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ, ಪುಸ್ತಕ ಕೊಡಿ, ಮೊಬೈಲ್ ದೂರವಿಡಿ ಎನ್ನುವ ಘೋಷಣೆಗಳೊಂದಿಗೆ ನಡೆದ ಜಾಗೃತಿ ಅಭಿಯಾನದಲ್ಲಿ ಜನ ಪ್ರತಿನಿಧಿಗಳು, ಗಣ್ಯರು, ವಿವಿಧ ಸಂಘ-ಸಂಸ್ಥೆ ಪದಾಧಿಕಾರಿಗಳು, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಶ್ರೀಮಠದ ಭಕ್ತರು ಭಾಗವಹಿಸಿದ್ದರು.

ಶ್ರೀ ಬಸವೇಶ್ವರ ದೇವಸ್ಥಾನದ ಬಳಿ ಅಭಿಯಾನಕ್ಕೆ ಚಾಲನೆ ನೀಡಿದ ನಂತರ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಮಕ್ಕಳ ಕೈಗೆ ಮೊಬೈಲ್ ಕೊಡಬಾರದು. ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಜನ್ಮ ದಿನದ ನಿಮಿತ್ತ ಆಯೋಜಿಸಿದ ಸಮಾಜಜಮುಖಿ ಜಾಗೃತಿ ಕಾರ್ಯಕಮ ಎಲ್ಲರೂ ಕೈಜೋಡಿಸಿ ಯಶಸ್ವಿಗೊಳಿಸಿರುವದು ಸಂತಸ ತಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹುಮನಾಬಾದ ಶಾಸಕ ಡಾ. ಸಿದ್ದಲಿಂಗಪ್ಪ (ಸಿದ್ದು) ಪಾಟೀಲ, ಮಾತನಾಡಿ, ಊಟ ಮಾಡುವಾಗ ಹಠ ಮಾಡುವ ಮಕ್ಕಳಿಗೆ ತಂದೆ-ತಾಯಿಗಳೆ ಮೊಬೈಲ್ ಗೇಮ್ ಹಚ್ಚಿಕೊಟ್ಟು ಊಟ ಮಾಡಿಸುವದು ಹಲವೆಡೆ ನೋಡುತ್ತೇವೆ. ಮೊಬೈಲ್‌ನಿಂದ ಕಣ್ಣು ಮತ್ತು ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಮೊಬೈಲ್ ನೋಡಿ ಮಲಗಿದರೆ ನಿದ್ದೆ, ನೆಮ್ಮದಿ ಹಾಳಾಗುತ್ತಿದೆ. ಹೀಗಾಗಿ ಜನ್ಮ ದಿನದ ನಿಮಿತ್ತ ಶ್ರೀಗಳು ಮೊಬೈಲ್ ಕುರಿತು ಜಾಗೃತಿ ಮೂಡಿಸುವ ಸಮಾಜಮುಖಿ ಕಾರ್ಯ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮುಖಂಡ ಶಾಂತಪ್ಪಾ ಜಿ. ಪಾಟೀಲ್, ಸಿಪಿಐ ಅಲಿಸಾಬ, ಉಪನ್ಯಾಸಕರ ಸಂಘದ ರಾಜ್ಯ ಕಾರ್ಯದರ್ಶಿ ನರಸಿಂಗರೆಡ್ಡಿ ಗದಲೇಗಾಂವ, ಯುವ ಮುಖಂಡ ಶಿವಕುಮಾರ ಬಿರಾದಾರ, ಬಜರಂಗ ದಳದ ತಾಲೂಕು ಸಂಯೋಜಕ ರವಿ ನಾವದ್ಗೇಕರ್ ಮಾತನಾಡಿದರು.



ಬಸವಕಲ್ಯಾಣ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನ, ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಬುಧವಾರ ನಡೆದ ಮೊಬೈಲ್ ಜಾಗೃತಿ ಪಾದಯಾತ್ರೆಯಲ್ಲಿ ಪ್ರಮುಖರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮುಖಂಡ ಅರ್ಜುನ ಕನಕ, ಗವಿಮಠ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಬಿಡಿವಿಸಿ ಉಪಾಧ್ಯಕ್ಷ, ಖ್ಯಾತ ಮಕ್ಕಳ ತಜ್ಞ ಡಾ.ಜಿ.ಎಸ್.ಭುರಳೆ, ವಿಶ್ವ ಹಿಂದು ಪರಿಷತ್ ತಾಲೂಕು ಅಧ್ಯಕ್ಷ ಶ್ರೀಶೈಲ ವಾತಡೆ, ಪ್ರಾಚಾರ್ಯ ಎಜಿ.ಪಾಟೀಲ್, ಯುವ ಮುಖಂಡ ಲೋಕೇಶ ಮೋಳಕೆರೆ, ಗೋರಕ್ಷಾ ಪ್ರಮುಖ ವಿನೋದ ಬಡಗೇಕರ, ರಮೇಶ ರಾಜೋಳೆ ಪ್ರೊ, ರುದ್ರೇಶ್ವರ ಸ್ವಾಮಿ, ಪ್ರೊ ವಿ.ಎಸ್ ರಾಜೋಳೆ, ಇಕ್ರಮೋದ್ದಿನ್ ಖಾದಿವಾಲಾ, ಮನ್ನೂರಲಿ, ಚನ್ನವೀರ ಜಮಾದಾರ, ಬಸವರಾಜ ಬಿರಾದಾರ, ಬಸವಂತಪ್ಪ ಮಾಲಿ ಪಾಟೀಲ, ಮರೆಪ್ಪಾ ಪೊಲೀಸ ಪಾಟೀಲ, ಶ್ರೀನಿವಾಸ ಬಿರಾದಾರ, ಸಚಿನ ಗರಡುಕರ, ಸಚಿನ ಸೂರ್ಯವಂಶಿ, ಅಜಯ ಗೌವಳಿ, ಲೋಕೇಶ ಜಮಖಂಡಿ, ಗುರು ದೇಗಾಂವ, ಲಕ್ಷ್ಮಿಕಾಂತ ಜಾಂತೆ ಭಾಗವಹಿಸಿದ್ದರು.

> ಇಂದಿನ ಮಕ್ಕಳು ನಾಳಿನ ದೇಶದ ಪ್ರಜೆಗಳು ಹೀಗಾಗಿ ಸಣ್ಣ ಮಕ್ಕಳು ಪಾಟಿ-ಪೆನ್ಸಿಲ್ ಹಿಡಿಯುವ ವಯಸ್ಸಿನಲ್ಲಿ ಮೊಬೈಲ್ ಹಿಡಿಯುತ್ತಿದ್ದಾರೆ. ಮಕ್ಕಳ ಮೊಬೈಲ್ ಗೀಳು ಬಿಡಿಸಿ ಸನ್ಮಾರ್ಗದ ಕಡೆಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಗವಿ ಮಠದ ಪೂಜ್ಯರು ತಮ್ಮ ಜನ್ಮ ದಿನದ ನಿಮಿತ್ತ ಬೀದಿಗಿಳಿದು ಪಾದಯಾತ್ರೆ ನಡೆಸುವ ಮೂಲಕ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ಹಿಂದೆಯೂ ಆರೋಗ್ಯ ಪೂರ್ಣ ಸಮಾಜಕ್ಕಾಗಿ ಗುಟಕಾ, ತಂಬಾಕು ಸೇವನೆ ವಿರುದ್ಧ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ. ಶ್ರೀಗಳ ಸಂದೇಶ ಎಲ್ಲಡೆ ತಲುಪಲಿ, ಅವರ ಆಶಯ ಸಾಕಾರಗೊಳ್ಳಲಿ.
>
> ■ ಶರಣು ಸಲಗರ್, ಶಾಸಕರು

Scanned with OKEN Scanner

ಮೊಬೈಲ್ ಜಾಗೃತಿ ಅಭಿಯಾನ-ಪಾದಯಾತ್ರೆ

! ಸಮಾಜಮುಖಿ ಜಾಗೃತಿ ಯಶಸ್ಸಿಗೆ ಎಲ್ಲರ ಸಹಕಾರ ನೀಡಿಕೆ: ತ್ರಿಪುರಾಂತ ಶ್ರೀ ಸಂತಸ

ಬಸವಕಲ್ಯಾಣ: ಇಲ್ಲಿಯ ತ್ರೀಪುರಾಂತನ ಗವಿಮಠದ ಪೀಠಾಧಿಪತಿ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ, ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಬುಧವಾರ ನಗರದಲ್ಲಿ ಅಭಿನವ ಶ್ರೀಗಳ ನೇತೃತ್ವದಲ್ಲಿ ಮೊಬೈಲ್ ಜಾಗೃತಿ ಅಭಿಯಾನ ಕಾರ್ಯಕ್ರಮ ಜರುಗಿತು.

ನಗರದ ಐತಿಹಾಸಿಕ ಬಸವೇಶ್ವರ ದೇವಸ್ಥಾನದಿಂದ ಮುಖ್ಯರಸ್ತೆಯ ಮಾರ್ಗವಾಗಿ ತ್ರಿಪುರಾಂತನ ಶ್ರೀ ಮಡಿವಾಳ ಮಾಚಿದೇವರ ವೃತ್ತದವರೆಗೂ ಅಭಿನವ ಶ್ರೀಗಳ ನೇತೃತ್ವದಲ್ಲಿ ಪಾದಯಾತ್ರೆ ನಡೆಯಿತು. ಮೊಬೈಲ್‌ನಿಂದಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಫಲಗಳೊಂದಿಗೆ ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ. ಪುಸ್ತಕ ಕೊಡಿ. ಮೊಬೈಲ್ ದೂರವಿಡಿ ಎನ್ನುವ ಘೋಷಣೆಗಳೊಂದಿಗೆ ನಡೆದ ಜಾಗೃತಿ ಅಭಿಯಾನದಲ್ಲಿ ಜನಪ್ರತಿನಿಧಿಗಳು, ಗಣ್ಯರು, ವಿವಿಧ ಸಂಘ-ಸಂಸ್ಥೆ ಪದಾಧಿಕಾರಿಗಳು, ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಭಕ್ತರು ಭಾಗವಹಿಸಿದ್ದರು.

ಅಭಿಯಾನಕ್ಕೆ ಚಾಲನೆ ನೀಡಿದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ,ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಮಕ್ಕಳ ಕೈಗೆ ಮೊಬೈಲ್ ಕೊಡಬಾರದು. ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಜನ್ಮದಿನದ ನಿಮಿತ್ತ ಆಯೋಜಿಸಿದ್ದ ಸಮಾಜಜಮುಖಿ ಜಾಗೃತಿ ಕಾರ್ಯಕ್ರಮ ಎಲ್ಲರೂ ಕೈಜೋಡಿಸಿ ಯಶಸ್ವಿಗೊಳಿಸಿರುವುದು ಸಂತಸ ತಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಶರಣು ಸಲಗರ ಮಾತನಾಡಿ, ಇಂದಿನ ಮಕ್ಕಳು ನಾಳಿನ ದೇಶದ ಪ್ರಜೆಗಳು. ಹೀಗಾಗಿ ಸಣ್ಣ ಮಕ್ಕಳು ಪಾಟಿ-ಪೆನ್ಸಿಲ್ ಹಿಡಿಯುವ ವಯಸ್ಸಿನಲ್ಲಿ ಮೊಬೈಲ್ ಹಿಡಿಯುತ್ತಿದ್ದಾರೆ. ಮಕ್ಕಳ ಮೊಬೈಲ್ ಗೀಳು ಬಿಡಿಸಿ ಸನ್ಮಾರ್ಗದ ಕಡೆಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಗವಿ ಮಠದ ಪೂಜ್ಯರು ತಮ್ಮ ಜನ್ಮದಿನದ ನಿಮಿತ್ತ ಬೀದಿಗಿಳಿದು ಪಾದಯಾತ್ರೆ ನಡೆಸುವ ಮೂಲಕ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ಶ್ರೀಗಳ ಸಂದೇಶ ಎಲ್ಲೆಡೆ ತಲುಪಲಿ ಅವರ ಆಶಯ ಸಾಕಾರಗೊಳ್ಳಲಿ ಎಂದು ಆಶಿಸಿದರು.

ಹುಮನಾಬಾದ ಶಾಸಕ ಡಾ। ಸಿದ್ದಲಿಂಗಪ್ಪ (ಸಿದ್ದು) ಪಾಟೀಲ ಮಾತನಾಡಿ, ಊಟ ಮಾಡುವಾಗ ಹಠ ಮಾಡುವ ಮಕ್ಕಳಿಗೆ ತಂದೆ-ತಾಯಿಗಳೆ ಮೊಬೈಲ್ ಗೇಮ್ ಹಚ್ಚಿಕೊಟ್ಟು ಊಟ ಮಾಡಿಸುವದು ಹಲವೆಡೆ ನೋಡುತ್ತೇವೆ. ಮೊಬೈಲ್‌ನಿಂದ ಕಣ್ಣು ಮತ್ತು ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಈ ಕುರಿತು ಜಾಗೃತಿ ಮೂಡಿಸುವ ಸಮಾಜಮುಖಿ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಮುಖಂಡ ಶಾಂತಪ್ಪಾ ಜಿ. ಪಾಟೀಲ್, ಸಿಪಿಐ ಅಲಿಸಾಬ, ಉಪನ್ಯಾಸಕರ ಸಂಘದ ರಾಜ್ಯ ಕಾರ್ಯದರ್ಶಿ ನರಸಿಂಗರೆಡ್ಡಿ ಗದಲೇಗಾಂವ, ಯುವ ಮುಖಂಡ ಶಿವಕುಮಾರ ಬಿರಾದಾರ, ಬಜರಂಗ ದಳದ ತಾಲೂಕು ಸಂಯೋಜಕ ರವಿ ನಾವದ್ಗೇಕರ್ ಮಾತನಾಡಿದರು. ಮುಖಂಡ ಅರ್ಜುನ ಕನಕ, ಗವಿಮಠ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಮದ್ವೀರಶೈವ ಸದ್ಭೋದನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಬಿಡಿವಿಸಿ ಉಪಾಧ್ಯಕ್ಷ, ಖ್ಯಾತ ಮಕ್ಕಳ ತಜ್ಞ ಡಾ। ಜಿ.ಎಸ್.ಭುರಳೆ, ವಿಶ್ವ ಹಿಂದು ಪರಿಷತ್ ತಾಲೂಕು ಅಧ್ಯಕ್ಷ ಶ್ರೀಶೈಲ ವಾತಡೆ, ಪ್ರಾಚಾರ್ಯ ಎ.ಜಿ. ಪಾಟೀಲ್, ಯುವ ಮುಖಂಡ ಲೋಕೇಶ ಮೋಳಕೆರೆ, ಗೋರಕ್ಷಾ ಪ್ರಮುಖ ವಿನೋದ ಬಡಗೇಕರ, ರಮೇಶ ರಾಜೋಳೆ ಪ್ರೊ। ರುದ್ರೇಶ್ವರ ಸ್ವಾಮಿ, ಪ್ರೊ। ವಿ.ಎಸ್ ರಾಜೋಳೆ, ಇಕ್ರಮೋದ್ದಿನ್ ಖಾದಿವಾಲಾ, ಮನ್ಸೂರಲಿ, ಚನ್ನವೀರ ಜಮಾದಾರ, ಬಸವರಾಜ ಬಿರಾದಾರ, ಬಸವಂತಪ್ಪ ಮಾಲಿ ಪಾಟೀಲ, ಮರೆಪ್ಪಾ ಪೊಲೀಸ ಪಾಟೀಲ, ಶ್ರೀನಿವಾಸ ಬಿರಾದಾರ, ಸಚಿನ ಗರಡುಕರ, ಸಚಿನ ಸೂರ್ಯವಂಶಿ, ಅಜಯ ಗೌವಳಿ, ಲೋಕೇಶ ಜಮಖಂಡಿ, ಗುರು ದೇಗಾಂವ, ಲಕ್ಷ್ಮಿಕಾಂತ ಜಾಂತೆ ಇದ್ದರು.





ಬಸವಕಲ್ಯಾಣ: ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ, ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಬುಧವಾರ ನಡೆದ ಮೊಬೈಲ್ ಜಾಗೃತಿ ಪಾದಯಾತ್ರೆಯಲ್ಲಿ ಅಭಿನವ ಶ್ರೀಗಳನ್ನು ಶಾಸಕರಾದ ಶರಣು ಸಲಗರ ಹಾಗೂ ಡಾ। ಸಿದ್ದಲಿಂಗಪ್ಪ ಪಾಟೀಲ್ ಸನ್ಮಾನಿಸಿದರು. ಮೊಬೈಲ್ ಜಾಗೃತಿ ಪಾದಯಾತ್ರೆಯಲ್ಲಿ ಪ್ರಮುಖರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. (ಬಲಚಿತ್ರ)

ಉದಯವಾಣಿ ಕಲಬುರಗಿ
ಗುರುವಾರ, ಸೆಪ್ಟೆಂಬರ್ 28, 2023

Scanned with OKEN Scanner

ಅಭಿನವ ಶ್ರೀಗಳ ಸಾಮಾಜಿಕ ಕಾರ್ಯಕ್ಕೆ ಮೆಚ್ಚುಗೆ

। ಗವಿಮಠದಲ್ಲಿ ಅಭಿನವ ಶ್ರೀಗಳ 37ನೇ ಜನ್ಮದಿನೋತ್ಸವ । 18ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ

ಬಸವಕಲ್ಯಾಣ: ಭಕ್ತರು ಗವಿ ಮಠದ ಮೇಲಿಟ್ಟಿರುವ ಪ್ರೀತಿ ವಿಶ್ವಾಸದ ಜೊತೆಗೆ ತನು-ಮನದ ಸಹಕಾರ ನೀಡುತ್ತಿರುವ ಫಲವಾಗಿ ಗವಿ ಮಠ ಸಾಕಷ್ಟು ಪ್ರಗತಿ ಹೊಂದುತ್ತಿದೆ. ಮುಂದೆಯೂ ಕೂಡಾ ಇದೇ ರೀತಿಯಲ್ಲಿ ಶ್ರೀಮಠಕ್ಕೆ ಭಕ್ತರು ಬೆನ್ನೆಲುಬಾಗಿ ನಿಲ್ಲಬೇಕು ಎಂದು ಹಿರನಾಗಾಂವನಜಯಶಾಂತಲಿಂಗ ಸ್ವಾಮೀಜಿ ಸಲಹೆ ನೀಡಿದರು.

ಇಲ್ಲಿಯ ಗವಿ ಮಠದಲ್ಲಿ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 37ನೇ ಜನ್ಮದಿನೋತ್ಸವ ಹಾಗೂ 18ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಠದ ಭಕ್ತರ ಹೃದಯದಲ್ಲಿ ಘನಲಿಂಗರುದ್ರಮುನಿ ಶಿವಾಚಾರ್ಯರು ನೆಲೆಸಿದ್ದಾರೆ ಎಂದರು.

ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನಗರದಲ್ಲಿ ಮೊಬೈಲ್ ಜಾಗೃತಿ ಮಾಡಿದ್ದಾರೆ. ಈ ಹಿಂದೆ ವ್ಯಸನ ಮುಕ್ತ ಸಮಾಜಕ್ಕಾಗಿ ಜೋಳಿಗೆ ಹಿಡಿದಿದ್ದಾರೆ. ಹೀಗೆ ಹತ್ತಾರು ಸಮಾಜದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಶ್ರೀಗಳ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಶ್ರೀಮಠದ ಭಕ್ತರು ನೀಡಿದ ಕಾಣಿಕೆಯಲ್ಲಿ ಗವಿ ಮಠದಲ್ಲಿ ಭವ್ಯವಾದ ಸಭಾ ಭವನ ನಿರ್ಮಿಸಲಾಗಿದೆ. ಇದಕ್ಕೆ ಸರಕಾರದಿಂದ ಅನುದಾನ ಪಡೆದಿಲ್ಲ, ಏಪ್ರೀಲ್ ತಿಂಗಳಲ್ಲಿ ಗವಿ ಮಠದಲ್ಲಿ ಜಾತ್ರಾ ಮಹೋತ್ಸವ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಹೀಗಾಗಿ ಗವಿ ಮಠದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಮಹಾದ್ವಾರ ನಿರ್ಮಿಸಬೇಕಿದೆ. ಅದಕ್ಕೆ ಶಾಸಕ ಶರಣು ಸಲಗರ ಅವರು ಸರಕಾರದ ಅನುದಾನದಲ್ಲಿ ನಿರ್ಮಿಸುತ್ತಾರೊ ಅಥವಾ ತಮ್ಮ ಸ್ವಂತದರಲ್ಲಿ ನಿರ್ಮಿಸುತ್ತಾರೋ ಗೊತ್ತಿಲ್ಲ, ಒಟ್ಟಾರೆ ಮಹಾದ್ವಾರ ನಿರ್ಮಿಸುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ಮಾಜಿ ಶಾಸಕ ಮಲ್ಲಿಕಾರ್ಜುನ ಎಸ್ ಖೂಬಾ ಮಾತನಾಡಿ, ಗವಿ ಮಠದಿಂದ ನಿರಂತರ ಸಮಾಜಮುಖಿ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಭಕ್ತರನ್ನು ಸರಿದಾರಿಗೆ ತರುತ್ತಿದ್ದಾರೆ. ಕಷ್ಟ ಬಂದಾಗ ಮಾತ್ರ ದೇವರು, ಗುರುಗಳನ್ನು ನೆನೆಯದೇ ನಿತ್ಯವೂ ಗುರುಗಳ ಮಾರ್ಗದರ್ಶನದಲ್ಲಿ ನಡೆದಾಗ ಮಾತ್ರ ಜೀವನ ಪಾವನವಾಗಲು ಸಾಧ್ಯ ಎಂದರು.

ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ, ಮುಖಂಡರಾದ ಪ್ರದೀಪ ವಾತಡೆ ಮಾತನಾಡಿ, ಅರ್ಜುನ ಕನಕ ಮಾತನಾಡಿದರು. ಟ್ರಸ್ಟನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಜಗದ್ಗುರು ಚೆನ್ನಬಸವಾನಂದ ಸ್ವಾಮೀಜಿ, ಹುಲಸೂರ ತಹಶೀಲ್ದಾರ್ ಶಿವಾನಂದ ಮೇತ್ರೆ, ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ, ಬಸವಂತಪ್ಪ ಲವಾರೆ, ಲತಾ ಹಾರಕೂಡೆ, ಕೇಶಪ್ಪ ಬಿರಾದಾರ ಸೇರಿದಂತೆ ಮತ್ತಿತರಿದ್ದರು.

ಇದೇ ವೇಳೆಯಲ್ಲಿ ಗವಿ ಮಠದ ಶ್ರೇಯೋಭಿವೃದ್ಧಿಗಾಗಿ ಶಾಸಕ ಶರಣು ಸಲಗರ ವೈಯಕ್ತಿಕವಾಗಿ ಐದು ಲಕ್ಷ ರೂ. ದೇಣಿಗೆ ನೀಡಿದರು. ಪ್ರಾಂಶುಪಾಲರಾದ ಶಶಿಧರ ಪಾಟೀಲ, ಶಾಂತಯ್ಯ ಮಠಪತಿ, ಸಂಜಯ ರೋಹಿಲೆ, ಶರಣಪ್ಪ ದಂಡೆ, ದಿಗಂಬರ ಕಿವುಡೆ, ಭೀಮ್ಮರೆಡ್ಡಿ ರಾಸನೇ ಹಾಗೂ ಮಲ್ಲಿಕಾರ್ಜುನ ಹಾದಿಮನಿ ಅವರನ್ನು ಸನ್ಮಾನಿಸಲಾಯಿತು. ರವಿ ನಾವದ್ಗೇಕರ್, ಶಿವಕುಮಾರ ಬಿರಾದಾರ, ಲೋಕೇಶ ಮೋಳಕೇರೆ ಮತ್ತು ವಿನೋದ ಬಡಗೇಕರ ಅವರಿಗೆ ಶ್ರೀಗಳಿಂದ ಶ್ರೀ ಗುರು ರಕ್ಷೆ ನೀಡಲಾಯಿತು.



ಬಸವಕಲ್ಯಾಣ: ಗವಿ ಮಠದಲ್ಲಿ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 37ನೇ ಜನ್ಮ ದಿನೋತ್ಸವ ಹಾಗೂ 18ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯಕ್ರಮವನ್ನು ಶಾಸಕ ಶರಣು ಸಲಗರ ಉದ್ಘಾಟಿಸಿದರು.

ಯುವ ಜನರನ್ನು ಸರಿ ದಾರಿಗೆ ತರಲು ಸಾಮಾಜಿಕ ಕಾರ್ಯ ಮಾಡುತ್ತಿರುವ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಕಾರ್ಯ ಒಳ್ಳೆಯದು. ಮಕ್ಕಳಿಗೆ ಮೊಬೈಲ್ ಬದಲು ಪುಸ್ತಕ ನೀಡಿ ಎಂಬ ಸಂದೇಶ ಸಾರಿರುವ ಶ್ರೀಗಳ ಕಾರ್ಯಕ್ಕೆ ಪಾಲಕರು ಸಹಕರಿಸಬೇಕಿದೆ ಎಂದು ಶಾಸಕ ಶರಣು ಸಲಗರ ಹೇಳಿದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನನಗೆ ಕ್ಷೇತ್ರದ ಮತದಾರರು ಎರಡು ಬಾರಿ ಆಶೀರ್ವಾದ ಮಾಡಿದ್ದಾರೆ. ಹೀಗಾಗಿ ಕೊನೆ ಉಸಿರಿರುವರೆಗೂ ಜನರ ಸೇವಕನಾಗಿ ಹಾಗೂ ಗವಿ ಮಠದ ಪರಮ ಭಕ್ತನಾಗಿ ಕೆಲಸ ಮಾಡುವೆ ಎಂದರು.

ಕಲಬುರಗಿ ಉದಯವಾಣಿ
ಶುಕ್ರವಾರ, ಸೆಪ್ಟೆಂಬರ್ 29, 2023

Scanned with OKEN Scanner

ಗವಿಮಠ ಶ್ರೀಗಳ ಸಮಾಜಮುಖಿ ಕಾರ್ಯಕ್ಕೆ ಶ್ಲಾಘನೆ | ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ಪಾದಯಾತ್ರೆ

ಮೊಬೈಲ್ ಜಾಗೃತಿ ಅಭಿಯಾನಕ್ಕೆ ಮೆಚ್ಚುಗೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಂಸ್ಥಾನ ಗವಿಮಠದ ಪೀಠಾಧಿಪತಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ, ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ನಿಮಿತ್ತ ನಗರದಲ್ಲಿ ಬುಧವಾರ ಶ್ರೀಗಳ ನೇತೃತ್ವದಲ್ಲಿ ಪಾದಯಾತ್ರೆ ಮೂಲಕ ಮೊಬೈಲ್ ಜಾಗೃತಿ ಅಭಿಯಾನ ನಡೆಯಿತು.

ಶ್ರೀ ಬಸವೇಶ್ವರ ದೇವಸ್ಥಾನದಿಂದ ಮುಖ್ಯ ರಸ್ತೆ ಮಾರ್ಗವಾಗಿ ತ್ರಿಪುರಾಂತದ ಶ್ರೀ ಮಡಿವಾಳ ಮಾಚಿದೇವರ ವೃತ್ತದವರೆಗೆ ನಡೆದ ಅಭಿಯಾನದಲ್ಲಿ ಮೊಬೈಲ್‌ನಿಂದ ಆಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಫಲಕಗಳೊಂದಿಗೆ ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ ಪುಸ್ತಕ ಕೊಡಿ, ಮೊಬೈಲ್ ದೂರವಿಡಿ ಎಂಬ ಘೋಷವಾಕ್ಯಗಳ ಮೂಲಕ ಜನಪ್ರತಿನಿಧಿಗಳು, ಗಣ್ಯರು, ವಿವಿಧ ಸಂಘ-ಸಂಸ್ಥೆ ಪದಾಧಿಕಾರಿಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಶ್ರೀಮಠದ ಭಕ್ತರು ಪಾಲ್ಗೊಂಡಿದ್ದರು.

ಪ್ರಮುಖ ವೃತ್ತಗಳಲ್ಲಿ ಪ್ರಮುಖರು ಮಾತನಾಡಿ, ಮೊಬೈಲ್ ಕುರಿತು ಜಾಗೃತಿ ಮೂಡಿಸುವ ಅಗತ್ಯವಿದೆ. ಮೊಬೈಲ್ ಬಳಕೆಯಿಂದಾಗಿ ಮಕ್ಕಳ ಮೇಲಾಗುವ ದುಷ್ಪರಿಣಾಮಗಳ ಕುರಿತು ತಿಳಿವಳಿಕೆ ನೀಡಲು ಗವಿಮಠದ ಪೂಜ್ಯರು ತಮ್ಮ ಜನ್ಮದಿನ ನಿಮಿತ್ತ ಪಾದಯಾತ್ರೆ ಮೂಲಕ ಸಮಾಜಮುಖಿ ಕಾರ್ಯ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೇವಸ್ಥಾನ ಬಳಿ ಅಭಿಯಾನಕ್ಕೆ ಚಾಲನೆ ನೀಡಿದ ನಂತರ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಮಕ್ಕಳ ಕೈಗೆ ಮೊಬೈಲ್ ಕೊಡಬಾರದು. ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಜನ್ಮದಿನ ನಿಮಿತ್ತ ಆಯೋಜಿಸಿದ ಸಮಾಜಮುಖಿ ಜಾಗೃತಿ ಕಾರ್ಯಕಮಕ್ಕೆ ಎಲ್ಲರೂ ಕೈಜೋಡಿಸಿ ಯಶಸ್ವಿಗೊಳಿಸಿರುವುದು ಸಂತಸ ತಂದಿದೆ ಎಂದರು.

ಶಾಸಕರಾದ ಶರಣು ಸಲಗರ, ಡಾ.ಸಿದ್ದಲಿಂಗಪ್ಪ ಪಾಟೀಲ್, ಮುಖಂಡ ಶಾಂತಪ್ಪ ಜಿ.ಪಾಟೀಲ್, ಸಿಪಿಐ ಅಲಿಸಾಬ್, ಉಪನ್ಯಾಸಕರ ಸಂಘದ ರಾಜ್ಯ ಕಾರ್ಯದರ್ಶಿ ನರಸಿಂಗರೆಡ್ಡಿ ಗದಲಿಗಾಂವ, ಯುವ ಮುಖಂಡ ಶಿವಕುಮಾರ ಬಿರಾದಾರ, ಬಜರಂಗ ದಳ ತಾಲೂಕು ಸಂಯೋಜಕ ರವಿ ನಾವದಗೇಕರ್ ಮಾತನಾಡಿದರು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಬಿಡಿವಿಸಿ ಉಪಾಧ್ಯಕ್ಷ ಡಾ.ಜಿ.ಎಸ್. ಭುರಳೆ, ವಿಶ್ವ ಹಿಂದು ಪರಿಷತ್ ತಾಲೂಕು ಅಧ್ಯಕ್ಷ ಶ್ರೀಶೈಲ ವಾತಡೆ, ಪ್ರಾಚಾರ್ಯ ಎ.ಜಿ.ಪಾಟೀಲ್, ಪ್ರಮುಖರಾದ ಅರ್ಜುನ ಕನಕ, ಲೋಕೇಶ ಮೋಳಕೆರೆ, ವಿನೋದ ಬಡಗೇಕರ, ರಮೇಶ ರಾಜೋಳಿ, ಪ್ರೊ.ರುದ್ರೇಶ್ವರ ಸ್ವಾಮಿ, ಇಕ್ರಾಮೋದ್ದಿನ್ ಖಾದಿವಾಲಾ, ಮನ್ಸೂರಲಿ, ಅನೀಲ ಶಾಸ್ತ್ರಿ, ಚನ್ನವೀರ ಜಮಾದಾರ, ಬಸವರಾಜ ಬಿರಾದಾರ, ಬಸವಂತಪ್ಪ ಮಾಲಿಪಾಟೀಲ್, ಮರೆಪ್ಪ ಪೊಲೀಸ್ ಪಾಟೀಲ್, ಶ್ರೀನಿವಾಸ ಬಿರಾದಾರ, ಸಚಿನ್ ಗರುಡಕರ, ಸಚಿನ್ ಸೂರ್ಯವಂಶಿ, ಅಜಯ ಗೌಳಿ, ಲೋಕೇಶ ಜಮಖಂಡಿ, ಗುರು ದೇಗಾಂವ, ಲಕ್ಷ್ಮೀಕಾಂತ ಜಾಂತೆ ಪಾಲ್ಗೊಂಡಿದ್ದರು.



ವಿಜಯವಾಣಿ ಚಿತ್ರಗಳು

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ ನಿಮಿತ್ತ ಬಸವಕಲ್ಯಾಣದಲ್ಲಿ ಬುಧವಾರ ನಡೆದ ಮೊಬೈಲ್ ಜಾಗೃತಿ ಅಭಿಯಾನದಲ್ಲಿ ಶ್ರೀಗಳನ್ನು ಶಾಸಕ ಶರಣು ಸಲಗರ ಹಾಗೂ ಡಾ.ಸಿದ್ದಲಿಂಗಪ್ಪ ಪಾಟೀಲ್ ಗೌರವಿಸಿದರು. ಸಿಪಿಐ ಅಲಿಸಾಬ್, ಡಾ.ಜಿ.ಎಸ್.ಭುರಳೆ, ಶಾಂತಪ್ಪ ಪಾಟೀಲ್, ಅರ್ಜುನ ಕನಕ, ಬಸವಂತಪ್ಪ ಲವಾರೆ, ನರಸಿಂಗರೆಡ್ಡಿ, ರವಿ ನಾವದಗೇಕರ್, ಶಿವಕುಮಾರ ಬಿರಾದಾರ ಇತರರಿದ್ದರು.



ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ ನಿಮಿತ್ತ ಬಸವಕಲ್ಯಾಣದಲ್ಲಿ ಬುಧವಾರ ಹಮ್ಮಿಕೊಂಡ ಮೊಬೈಲ್ ಜಾಗೃತಿ ಪಾದಯಾತ್ರೆಗೆ ಬಸವೇಶ್ವರ ದೇವಸ್ಥಾನದಲ್ಲಿ ಚಾಲನೆ ನೀಡಲಾಯಿತು.

ನಾಡಿನ ಭವಿಷ್ಯವಾಗಿರುವ ಮಕ್ಕಳು ಪಾಟಿ-ಪೆನ್ಸಿಲ್ ಹಿಡಿಯುವ ವಯಸ್ಸಿನಲ್ಲಿ ಮೊಬೈಲ್ ಹಿಡಿಯುತ್ತಿದ್ದಾರೆ. ಮಕ್ಕಳ ಮೊಬೈಲ್ ಗೀಳು ಬಿಡಿಸಿ ಸನ್ಮಾರ್ಗದ ಕಡೆಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಗವಿಮಠದ ಪೂಜ್ಯರು ಜನ್ಮದಿನ ನಿಮಿತ್ತ ಬೀದಿಗಿಳಿದು ಪಾದಯಾತ್ರೆ ಮೂಲಕ ಜಾಗೃತಿ ಮೂಡಿಸಿದ್ದಾರೆ. ಹಿಂದೆಯೂ ಆರೋಗ್ಯಪೂರ್ಣ ಸಮಾಜಕ್ಕಾಗಿ ಗುಟ್ಕಾ, ತಂಬಾಕು ಸೇವನೆ ವಿರುದ್ಧ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ. ಶ್ರೀಗಳ ಸಂದೇಶ ಎಲ್ಲೆಡೆ ತಲುಪಲಿ, ಅವರ ಆಶಯ ಸಾಕಾರಗೊಳ್ಳಲಿ.

| ಶರಣು ಸಲಗರ ಬಸವಕಲ್ಯಾಣ ಶಾಸಕ

ಜಿದ್ದು ಮಾಡುವ ಮಕ್ಕಳಿಗೆ ತಂದೆ-ತಾಯಿಯೇ ಮೊಬೈಲ್ ಗೇಮ್ ಹಚ್ಚಿಕೊಟ್ಟು ಊಟ ಮಾಡಿಸುವುದನ್ನು ನೋಡುತ್ತಿದ್ದೇವೆ. ಮೊಬೈಲ್‌ನಿಂದ ಕಣ್ಣು ಮತ್ತು ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಮೊಬೈಲ್ ನೋಡಿ ಮಲಗಿದರೆ ನಿದ್ದೆ ನಮ್ಮದಿ ಹಾಳಾಗುತ್ತಿದೆ. ಹೀಗಾಗಿ ಜನ್ಮದಿನ ನಿಮಿತ್ತ ಶ್ರೀಗಳು ಮೊಬೈಲ್ ಕುರಿತು ಜಾಗೃತಿ ಮೂಡಿಸುವ ಸಮಾಜಮುಖಿ ಕಾರ್ಯ ಮಾಡಿದ್ದಾರೆ.

| ಡಾ.ಸಿದ್ದಲಿಂಗಪ್ಪ ಪಾಟೀಲ್ ಹುಮನಾಬಾದ್ ಶಾಸಕ

ಪೂಜ್ಯರ ಜನ್ಮದಿನ ಇಂದು

ಬಸವಕಲ್ಯಾಣ ಸಂಸ್ಥಾನ ಗವಿಮಠದಲ್ಲಿ ಗುರುವಾರ ಬೆಳಗ್ಗೆ 11ಕ್ಕೆ ಪೀಠಾಧಿಪತಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನ, ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಜರುಗಲಿದೆ. ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಗುರು ರಕ್ಷೆ ಮತ್ತು ವಿಶೇಷ ಸನ್ಮಾನ ನಡೆಯಲಿದೆ.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಗುರುವಾರ 28 ಸೆಪ್ಟೆಂಬರ್ 2023
28 SEPTEMBER 2023

Scanned with OKEN Scanner

ಎಸ್‌ಎಸ್‌ಕೆಬಿ ಕಾಲೇಜಿನಲ್ಲಿ ಜರುಗಿದ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಜನ ಜಾಗೃತಿ ಜಾಥಾ ಸಮಾವೇಶ

ಯುವಕರಿಂದ ಸದೃಢ ಸಮಾಜ ನಿರ್ಮಾಣ

ವಿಕ ಸುದ್ದಿಲೋಕ ಬಸವಕಲ್ಯಾಣ

ಭಾರತ ದೇಶದ ಸಂಸ್ಕೃತಿ ಪರಂಪರೆ ಬಹಳ ಮಹತ್ವದ್ದಾಗಿದೆ. ಆದರೆ ಇಂದು ಸಂಸ್ಕೃತಿ ಹಾಗೂ ಸಂಸ್ಕಾರ ಹಾಳಾಗುತ್ತಿದ್ದು, ಯುವ ಸಮೂಹ ವಿದೇಶಿ ಸಂಸ್ಕೃತಿಗೆ ಮಾರು ಹೋಗುತ್ತಿರುವುದು ಕಳವಳಕಾರಿಯಾಗಿದ್ದು, ಅವರನ್ನು ಸರಿ ದಾರಿಗೆ ತಂದು ಸದೃಢ ಸಮಾಜ ನಿರ್ಮಿಸಬೇಕಿದೆ ಎಂದು ತ್ರಿಪುರಾಂತ ಗವಿ ಮಠದ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ (ರಿ) ಬಸವಕಲ್ಯಾಣ, ತಾಲೂಕ ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ, ಬೆಳ್ತಂಗಡಿ ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ ಬೀದರ್, ಎಸ್.ಎಸ್.ಕೆ. ಬಸವೇಶ್ವರ ಕಲಾ, ವಿಜ್ಞಾನ, ವಾಣಿಜ್ಯ, ಸ್ನಾತಕ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯ, ಬಸವಕಲ್ಯಾಣ ಇವರ ಜಂಟಿ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡ ಗಾಂಧಿ ಜಯಂತಿ ಸಂಭ್ರಮಾಚರಣೆಯ ಪ್ರಯುಕ್ತ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಜನ ಜಾಗೃತಿ ಜಾಥಾ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ಡಾ. ವಿರೇಂದ್ರ ಹೆಗಡೆ ಅವರು ಸುಂದರ ಸಮಾಜ ನಿರ್ಮಿಸಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ನೂರಾರು ಯೋಜನೆಗಳ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಶ್ಲಾಘನಿಯವಾಗಿದೆ. ಗಾಂಧಿ ಜಯಂತಿ ಸಂಭ್ರಮಾಚರಣೆ ಯಶಸ್ವಿಯಾಗಬೇಕಾದರೆ ಎಲ್ಲರೂ ತಮ್ಮಲಿರುವ ದುಶ್ಚಟಗಳನ್ನು ಈಗಿನಿಂದಲೇ ಬಿಡಬೇಕು ಎಂದು ಕರೆ ನೀಡಿದರು.





ಬಸವಕಲ್ಯಾಣದಲ್ಲಿ ಭಾನುವಾರ ಹಮ್ಮಿಕೊಂಡ ಗಾಂಧಿ ಜಯಂತಿ ಸಂಭ್ರಮಾಚರಣೆಯ ಪ್ರಯುಕ್ತ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಜನ ಜಾಗೃತಿ ಜಾಥಾ ಸಮಾವೇಶವನ್ನು ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು.

ಬಸವಕಲ್ಯಾಣ ಇದಕ್ಕೂ ಮುನ್ನ ನಗರದಲ್ಲಿ ಜಾಥಾ ಜರುಗಿತು.

ಡಾ. ಸಂಗೀತಾ ಮಂಠಾಳೆ ಮಾತನಾಡಿ, ವಿದ್ಯಾರ್ಥಿಗಳು ಆನ್‌ಲೈನ್ ಕ್ಲಾಸ್‌ಗಾಗಿ ಮೊಬೈಲ್ ಬಳಸುವುದನ್ನ ಬಿಟ್ಟು ಬೇರೆ ಬೇರೆ ಕೆಲಸಕ್ಕೆ ಬಳಕೆಯಾಗುತ್ತಿದ್ದು, ಇದರಿಂದಾಗಿ ಅನಾರೋಗ್ಯ ಪೀಡಿತರಾಗುತ್ತಿದ್ದಾರೆ. ನಿದ್ದೆಗೆಟ್ಟು ಆರೋಗ್ಯ ಹಾಳು ಮಾಡಿಕೊಳ್ಳುತ್ತಿರುವುದರಿಂದ ತಂದೆ ತಾಯಿಗಳು ಇದನ್ನು ನಿಷೇಧಿಸಬೇಕು ಎಂದು ಸಲಹೆ ನೀಡಿದರು.

ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಮಾರ್ತಂಡ ಜೋಶಿ ಮಾತನಾಡಿ, ನಮ್ಮ ದೇಶ ಸಾಕಷ್ಟು ಮುಂದುವರಿದರು, ಆದರೆ ಬಹಳಷ್ಟು ಯುವಕರು ದುಶ್ಚಟಕ್ಕೆ ಬಲಿಯಾಗುತ್ತಿದ್ದಾರೆ.

ಉತ್ತಮ ಸಮಾಜ ನಿರ್ಮಾಣವಾಗಬೇಕಾದರೆ ದುಶ್ಚಟಗಳ ನಿರ್ಮೂಲನೆ ಆಗಬೇಕು ಎಂದರು.

ಧರ್ಮಸ್ಥಳ ಯೋಜನಾಧಿಕಾರಿ ಸೋಮಲಿಂಗ ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ಸಂಸ್ಥೆಯಿಂದ ಸ್ವಸಹಾಯ ಸಂಘಗಳಿಂದ 100 ಕೋಟಿ ರೂ. ವ್ಯವಹಾರವನ್ನು ಮಾಡಲಾಗಿದೆ. ಅಲ್ಲದೆ ವಿವಿಧ ಸಾಮಾಜಿಕ ಕೆಲಸಗಳು ಹಮ್ಮಿಕೊಂಡಿದ್ದೇವೆ ಎಂದರು.

ಅಧ್ಯಕ್ಷತೆ ವಹಿಸಿ ಪ್ರಾಂಶುಪಾಲ ಡಾ. ಬಸವರಾಜ ಎವಲೆ ಮಾತನಾಡಿದರು. ವೇದಿಕೆಯಲ್ಲಿ ಬೀದರ್ ಜಿಲ್ಲಾ ಜನ ಜಾಗೃತಿ ವೇದಿಕೆಯ ಜಿಲ್ಲಾ ಉಪಾಧ್ಯಕ್ಷ ಗುರುನಾಥ ಗಡ್ಡೆ, ಸದಸ್ಯರಾದ ಶಾಮರಾವ, ರಾಜಶೇಖರ ಮಡಕೆ ಉಪಸ್ಥಿತರಿದ್ದರು. ಇದಕ್ಕೂ ಮುನ್ನ ನಗರದಲ್ಲಿ ಜಾಥಾ ಜರುಗಿತು.

> ಕೆರೆ ಹುಳು ಎತ್ತುವ ಕೆಲಸ, ಶಾಲೆಗಳಿಗೆ ಪಿಠೋಪಕರಣಗಳನ್ನು ಒದಗಿಸುವುದು, ಬಡ ವಿದ್ಯಾರ್ಥಿಗಳಿಗೆ, ನಿರ್ಗತಿಕರಿಗೆ, ಅಂಗವಿಕಲರಿಗೆ ಮಾಸಾಶನ ಮತ್ತು ಶುದ್ಧ ಕುಡಿಯುವ ನೀರಿನ ಘಟಕಗಳು ಸ್ಥಾಪನೆ, ದೇವಾಲಯಗಳ ಸುತ್ತ ಸ್ವಚ್ಛತೆ ಮುಂತಾದ ಕೆಲಸಗಳು ಮಾಡಲಾಗುತ್ತಿದೆ.
>
> **-ಸೋಮಲಿಂಗ,** ಧರ್ಮಸ್ಥಳ ಯೋಜನಾಧಿಕಾರಿ

ವಿಜಯ ಕರ್ನಾಟಕ ಭಾನುವಾರ,8 ಅಕ್ಟೋಬರ್ 2023

Scanned with OKEN Scanner

ಶ್ರೀಗಳ ಸಮಾಜಮುಖಿ ಕಾರ್ಯ ಮಾದರಿ

ಅಭಿನವ ಶ್ರೀಗಳ 37ನೇ ಜನ್ಮ ದಿನೋತ್ಸವ-18ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯಕ್ರಮ

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಭಕ್ತರು ಗವಿ ಮಠದ ಮೇಲಿಟ್ಟಿರುವ ಪ್ರೀತಿ,ವಿಶ್ವಾಸದ ಜತೆಗೆ ತನು-ಮನದ ಸಹಕಾರ ನೀಡುತ್ತಿರುವ ಫಲವಾಗಿ ಗವಿ ಮಠ ಸಾಕಷ್ಟು ಪ್ರಗತಿ ಹೊಂದುತ್ತಿದೆ. ಮುಂದೆಯೂ ಕೂಡಾ ಇದೇ ರೀತಿ ಶ್ರೀ ಮಠಕ್ಕೆ ಭಕ್ತರು ಬೆನ್ನೆಲುಬಾಗಿ ನಿಲ್ಲಬೇಕು ಎಂದು ಹಿರನಾಗಾಂವನ ಜಯ ಶಾಂತಲಿಂಗ ಸ್ವಾಮೀಜಿ ಹೇಳಿದರು.

ನಗರದ ಗವಿ ಮಠದಲ್ಲಿ ಡಾ.ಅಭಿನವ ಘನಲಿಂಗ ರುದ್ರ ಮುನಿ ಶಿವಾಚಾರ್ಯರ 37ನೇ ಜನ್ಮ ದಿನೋತ್ಸವ,18ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯ ಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು,ಸಮಾಜದ ಅಭಿವೃದ್ಧಿಗಾಗಿ ಶ್ರಮಿ ಸುತ್ತಿರುವ ಶ್ರೀಗಳ ಕಾರ್ಯ ಶ್ಲಾಘನೀಯ ಎಂದರು.

ನೇತೃತ್ವವಹಿಸಿದ್ದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಏಪ್ರಿಲ್ ತಿಂಗಳಲ್ಲಿ ಗವಿ ಮಠದಲ್ಲಿ ಜಾತ್ರಾ ಮಹೋತ್ಸವ ಹಮ್ಮಿ ಕೊಳ್ಳಲು ನಿರ್ಧರಿಸಲಾಗಿದೆ. ಹೀಗಾಗಿ ಗವಿ ಮಠದಲ್ಲಿ 50 ಲಕ್ಷ ವೆಚ್ಚದಲ್ಲಿ ಮಹಾದ್ವಾರ ನಿರ್ಮಿಸಬೇಕಿದೆ. ಆದಕ್ಕೆ ಶಾಸಕ ಶರಣು ಸಲಗರ ಅವರು ಸರಕಾರದ ಅನುದಾನದಲ್ಲಿ ನಿರ್ಮಿಸು ತ್ತಾರೋ ಅಥವಾ ತಮ್ಮ ಸ್ವಂತದರಲ್ಲಿ ನಿರ್ಮಿಸುತ್ತಾರೋ ಗೊತ್ತಿಲ್ಲ .ಒಟ್ಟಾರೆ ಮಹಾದ್ವಾರ ನಿರ್ಮಿಸುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ಮುಖಂಡರಾದ ಪ್ರದೀಪ ವಾತಡೆ,ಅರ್ಜುನ ಕನಕ ಮಾತನಾಡಿದರು. ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣ ಪ್ಪಾ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಜಗದ್ಗುರು ಚೆನ್ನಬಸ ವಾನಂದ ಸ್ವಾಮೀಜಿ, ಹುಲಸೂರ ತಹಸೀಲ್ದಾರ ಶಿವಾನಂದ ಮೇತ್ರೆ, ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ, ಬಸವಂತಪ್ಪಾ ಲವಾರೆ, ಲತಾ ಹಾರಕೂಡೆ, ಕೇಶಪ್ಪಾ ಬಿರಾದಾರ ಇದ್ದರು.

ಇದೇ ವೇಳೆ ಗವಿ ಮಠದ ಅಭಿವೃದ್ಧಿಗೆ ಶಾಸಕ ಶರಣು ಸಲಗರ ಅವರು ವೈಯಕ್ತಿಕವಾಗಿ ಐದು ಲಕ್ಷ ರೂ ದೇಣಿಗೆ ನೀಡಿದರು. ಪ್ರಾಂಶುಪಾಲರಾದ ಶಶಿಧರ ಪಾಟೀಲ್, ಶಾಂತಯ್ಯ ಮಠಪತಿ, ಸಂಜಯ ರೋಹಿಲೆ, ಶರಣಪ್ಪಾ ದಂಡೆ, ದಿಗಂಬರ ಕಿವುಡೆ, ಭೀಮರೆಡ್ಡಿ ರಾಸನೇ ಹಾಗೂ ಮಲ್ಲಿಕಾರ್ಜುನ ಹಾದಿಮನಿ ಆವರಿಗೆ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸನ್ಮಾನಿಸಿದರು.

ರವಿ ನಾವದ್ಗೇಕರ್, ಶಿವಕುಮಾರ ಬಿರಾದಾರ, ಲೋಕೇಶ ಮೋಳಕೆರೆ,



ಬಸವಕಲ್ಯಾಣದಲ್ಲಿ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 37 ನೇ ಜನ್ಮ ದಿನೋತ್ಸವ-18ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಕಾರ್ಯಕ್ರಮವನ್ನು ಶಾಸಕ ಶರಣು ಸಲಗರ್ ಉದ್ಘಾಟಿಸಿದರು.

ಗವಿ ಮಠದಿಂದ ನಿರಂತರವಾಗಿ ಸಮಾಜ ಮುಖಿ ಕಾರ್ಯಕ್ರಮದ ಮೂಲಕ ಭಕ್ತರನ್ನು ಸರಿದಾರಿಗೆ ತರುತ್ತಿದ್ದಾರೆ. ಕಷ್ಟ ಬಂದಾಗ ಮಾತ್ರ ದೇವರು, ಗುರುಗಳನ್ನು ನೆನೆಯದೇ ನಿತ್ಯವೂ ಗುರುಗಳ ಮಾರ್ಗದರ್ಶನದಲ್ಲಿ ನಡೆದಾಗ ಮಾತ್ರ ಜೀವನ ಪಾವನವಾಗಲು ಸಾಧ್ಯ.ಗವಿ ಮಠದಲ್ಲಿ ಒಂದು ಕೋಟಿ ವೆಚ್ಚದಲ್ಲಿ ಯಾತ್ರಿ ಭವನ ನಿರ್ಮಿಸಲು ಸರಕಾರದ ಮೇಲೆ ಒತ್ತಡ ಹೇರಲಾಗುವುದು.

- ಮಲ್ಲಿಕಾರ್ಜುನ .ಎಸ್.ಖೂಬಾ, ಮಾಜಿ ಶಾಸಕ.

ಡಾ. ಅಭಿನವ ಶ್ರೀಗಳ ಸಮಾಜ ಮುಖಿ ಕಾರ್ಯಗಳಿಗೆ ಅಗತ್ಯ ಸಹಾಯ-ಸಹಕಾರ ನೀಡುವೆ. ತಾವು ಶಾಸಕನಾದರೂ ಕೂಡಾ ಸ್ವಂತ ಮನೆಯಿಲ್ಲ. ಒಂದು ಎಕರೂ ಜಮೀನಿಲ್ಲ.ಆದರೆ, ಜನರು ನನ್ನ ಮೇಲಿಟ್ಟಿರುವ ವಿಶ್ವಾಸಕ್ಕೆ ನಾನು ಚಿರರುಣಿ. ನನಗೆ ಕ್ಷೇತ್ರದ ಮತದಾರರೇ ನಿಜವಾದ ಆಸ್ತಿ.

-ಶರಣು ಸಲಗರ್, ಶಾಸಕ, ಬಸವ ಕಲ್ಯಾಣ.

ಗವಿ ಮಠದ ಶ್ರೇಯೋಭಿವೃದ್ಧಿಗೆ ಕೈಲಾದಷ್ಟು ಸಹಾಯ-ಸಹಕಾರ ನೀಡಿದ್ದೇನೆ. ಮುಂದಿನ ದಿನಗಳಲ್ಲಿ ಗವಿ ಮಠದಲ್ಲಿ ನಿತ್ಯ ಪ್ರಸಾದಕ್ಕೆ ಸರಕಾರದಿಂದ ಸಿಗುವ ಸೌಲಭ್ಯಗಳು ಪ್ರಯತ್ನಿಸಲಾಗುವುದು.ಜತೆಗೆ ಗವಿ ಮಠಕ್ಕೆ ಬೇಕಾದ ಸೌಲಭ್ಯಗಳ ಕುರಿತು ಶ್ರೀಗಳು ಪಟ್ಟಿ ನೀಡಿದರೆ ನಮ್ಮದೇ ಸರಕಾರದಲ್ಲಿ ಕೆಲಸ ಮಾಡಿಕೊಡಲಾಗುವುದು.

- ಧನರಾಜ ತಾಳಂಪಳ್ಳಿ, ಕಾಂಗ್ರೆಸ್ ಮುಖಂಡರು.

ವಿನೋದ ಬಡಗೇಕರ್ ಅವರಿಗೆ ಶ್ರೀಗಳಿಂದ ಗುರು ರಕ್ಷೆ ನೀಡಲಾಯಿತು. ಲೋಕೇಶ ಮೋಳಕೆರೆ ಸ್ವಾಗತಿಸಿದರು.ಪ್ರೊ.ಸೂರ್ಯ ಕಾಂತ ಶೀಲವಂತ ಪ್ರಾಸ್ತಾವಿಕವಾಗಿ ಮಾತನಾಡಿ ದರು. ಶಿಕ್ಷಕ ರಮೇಶ ರಾಜೋಳೆ ನಿರೂಪಿಸಿದರು.

ವಿಜಯ ಕರ್ನಾಟಕ ಶುಕ್ರವಾರ,29 ಸೆಪ್ಟೆಂಬರ್ 2023

ಮೊಬೈಲ್ ದುರ್ಬಳಕೆ ತಡೆಗೆ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ನಗರದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬುಧವಾರ ಜನ್ಮದಿನ ಹಾಗೂ ಪಟ್ಟಾಧಿಕಾರ ವರ್ಧಂತಿ ಅಂಗವಾಗಿ ಮೊಬೈಲ್ ಜಾಗೃತಿ ಪಾದಯಾತ್ರೆ ಕೈಗೊಂಡರು.

ಬಸವೇಶ್ವರ ದೇವಸ್ಥಾನದಿಂದ ಮುಖ್ಯ ರಸ್ತೆಯ ಮೂಲಕ ಮಡಿವಾಳ ಮಾಚಿದೇವ ಚೌಕ್ ವರೆಗೆ ಪಾದಯಾತ್ರೆ ನಡೆಯಿತು. ಈ ಸಂದರ್ಭದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಮಕ್ಕಳ ಕೈಗೆ ಮೊಬೈಲ್ ಕೊಡಬಾರದು. ಇದರಿಂದ ದುಷ್ಪರಿಣಾಮ ಆಗುತ್ತದೆ' ಎಂದರು.

ಶಾಸಕ ಶರಣು ಸಲಗರ ಮಾತನಾಡಿ, 'ಪುಸ್ತಕ ಹಿಡಿಯುವ ಮಕ್ಕಳ ಕೈಯಲ್ಲಿ ಮೊಬೈಲ್ ಕೊಡುತ್ತಿರುವುದು ತಪ್ಪಾಗಿದೆ. ಶಿವಾಚಾರ್ಯರು ಪ್ರತಿಸಲ ತಮ್ಮ ಜನ್ಮದಿನವನ್ನು ವಿಶಿಷ್ಟವಾಗಿ ಆಚರಿಸುತ್ತಾರೆ. ಇದಕ್ಕೂ ಮೊದಲು ದುಶ್ಚಟ ಬಿಡಿಸುವುದಕ್ಕಾಗಿ ಪಾದಯಾತ್ರೆ ಕೈಗೊಂಡು ಇತರರಿಗೆ ಮಾದರಿ ಆಗಿದ್ದಾರೆ' ಎಂದರು. ಹುಮನಾಬಾದ್ ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ, ಮುಖಂಡರಾದ ಅರ್ಜುನ ಕನಕ, ಸಿಪಿಐ ಅಲಿಸಾಬ್ ಮಾತನಾಡಿದರು.

ಮುಖಂಡ ಶಾಂತಪ್ಪ ಪಾಟೀಲ, ತಹಶೀಲ್ದಾರ್ ಶಿವಾನಂದ ಮೇತ್ರೆ, ಗವಿಮಠ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಡಾ.ಜಿ.ಎಸ್.ಭುರಳೆ, ಚನ್ನವೀರ ಜಮಾದಾರ, ನರಸಿಂಗರೆಡ್ಡಿ ಗದ್ಲೇಗಾಂವ, ಇಕ್ರಾಮ ಖಾದಿವಾಲೆ, ಶಿವಕುಮಾರ . ಬಿರಾದಾರ, ರವಿ ನಾವದ್ಗೇಕರ್, ಲೋಕೇಶ ಮೋಳಕೆರೆ, ಅಮರ ಬಡದಾಳೆ, ಶಾಂತಲಿಂಗ ಮಠಪತಿ, ಗುರು ಗದ್ಲೇಗಾಂವ, ಅನಿಲ ಶಾಸ್ತ್ರೀ, ರತಿಕಾಂತ ಕೊಹಿನೂರ, ವೀರಶೆಟ್ಟಿ ಪಾಟೀಲ, ಶ್ರೀನಿವಾಸ ಬಿರಾದಾರ, ಸಂದೀಪ ಪಾಟೀಲ, ಬಸವಲಿಂಗ ಸುಬೇದಾರ, ರಮೇಶ ರಾಜೋಳೆ ಪಾಲ್ಗೊಂಡಿದ್ದರು.



ಬಸವಕಲ್ಯಾಣದಲ್ಲಿ ಬುಧವಾರ ಮೊಬೈಲ್ ಜಾಗೃತಿ ಪಾದಯಾತ್ರೆ ನಡೆಸಿದ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಸನ್ಮಾನಿಸಲಾಯಿತು. ಶಾಸಕರಾದ ಶರಣು ಸಲಗರ, ಡಾ.ಸಿದ್ಧಲಿಂಗಪ್ಪ ಪಾಟೀಲ ಇದ್ದರು

ಪ್ರಜಾವಾಣಿ ಶುಕ್ರವಾರ • ಸೆಪ್ಟೆಂಬರ್ 29, 2023

Scanned with OKEN Scanner

ಭಾನುವಾರ 8 ಅಕ್ಟೋಬರ್ 2023
8 OCTOBER 2023
ವಿಜಯವಾಣಿ VIJAYAVANI » KALABURAGI

ಡಾ.ಅಭಿನವ ಘನಲಿಂಗ ರುದ್ರಮುನಿ ಶ್ರೀ ನುಡಿ | ದುಶ್ಚಟ ಮುಕ್ತಿಗಾಗಿ ಜಾಗೃತಿ ಜಾಥಾ

ಯುವಕರಿಂದ ಬಲಿಷ್ಠ ಸಮಾಜ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸದೃಢ ರಾಷ್ಟ್ರ, ಸಮೃದ್ಧ ಸಮಾಜ ಕಟ್ಟುವಲ್ಲಿ ಯುವ ಸಮೂಹದ ಪಾತ್ರ ಮಹತ್ವದ್ದಾಗಿದೆ. ಯುವಕರು ದುಶ್ಚಟಗಳಿಗೆ ಆಕರ್ಷಿತರಾಗದೆ ಆರೋಗ್ಯಯುತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಸಹಯೋಗದಡಿ ಎಸ್‌ಎಸ್‌ಕೆ ಬಸವೇಶ್ವರ ಕಲಾ, ವಿಜ್ಞಾನ, ವಾಣಿಜ್ಯ ಸ್ನಾತಕ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯದಲ್ಲಿ ಗಾಂಧಿ ಜಯಂತಿ ನಿಮಿತ್ತ ದುಶ್ಚಟಮುಕ್ತ ಸಮಾಜ ನಿರ್ಮಾಣಕ್ಕಾಗಿ ಶನಿವಾರ ಆಯೋಜಿಸಿದ್ದ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಧರ್ಮಸ್ಥಳದ ಪೂಜ್ಯರ ಮಾರ್ಗದರ್ಶನಲ್ಲಿ ದೇಶದ ನೈಸರ್ಗಿಕ, ಪರಂಪರೆ ಸಂರಕ್ಷಣೆ ಮತ್ತು ಹಲವು ಯೋಜನೆ, ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಜನರ ಬದುಕಿನಲ್ಲಿ ಭರವಸೆ ಮೂಡಿಸಲಾಗುತ್ತಿದೆ. ಸ್ವಚ್ಛ ಸಮಾಜಕ್ಕಾಗಿ ದುಶ್ಚಟಗಳ ವಿರುದ್ಧ ಜಾಗೃತಿ ಅಭಿಯಾನ ನಡೆಸಲಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಲಬುರಗಿ ವಿಭಾಗ ರಾಷ್ಟ್ರೀಯ ಬಾಯಿ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾ.ಸಂಗೀತಾ ಮಂಠಾಳೆ ಮಾತನಾಡಿ, ಒಳ್ಳೆಯ ಚಟ ಮತ್ತು ಆಲೋಚನೆ ಮೈಗೂಡಿಸಿಕೊಂಡಾಗ ಕೆಟ್ಟ ಚಟ ದೂರಾಗುತ್ತವೆ. ಅತಿ ಮೊಬೈಲ್ ಬಳಕೆ ನಿದ್ರಾಹೀನತೆ, ಅನಾರೋಗ್ಯಕ್ಕೆ ಕಾರಣ. ಮನೆಯಲ್ಲಿ ಮಕ್ಕಳ ಮೊಬೈಲ್ ಬಳಕೆ ಮೇಲೆ ಪಾಲಕರು ನಿಗಾ ಇಡಬೇಕು ಎಂದು ಸಲಹೆ ನೀಡಿದರು.

ಪ್ರಾಚಾರ್ಯ ಡಾ.ಬಸವರಾಜ ಎವಲೆ ಮಾತನಾಡಿ, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ದುಶ್ಚಟಗಳಿಗೆ ದಾಸರಾಗಿ ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಸಮಾಜದಲ್ಲಿನ ದುಶ್ಚಟಗಳ ನಿರ್ಮೂಲನೆಗೆ ಜನಜಾಗೃತಿ ಅವಶ್ಯಕವಾಗಿದೆ ಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕ್ಷೇತ್ರ ಯೋಜನಾಧಿಕಾರಿ ಸೋಮಲಿಂಗ ಕೆ. ಪ್ರಾಸ್ತಾವಿಕ ಮಾತನಾಡಿ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಬೆಳ್ತಂಗಡಿ ಮೂಲಕ ತಾಲೂಕು ಮಟ್ಟದಲ್ಲಿ ಮದ್ಯವರ್ಜನ ಶಿಬಿರ ಆಯೋಜಿಸಿ ಮದ್ಯಮುಕ್ತರನ್ನಾಗಿ ಮಾಡುವ ಕಾರ್ಯ ಯೋಜನೆಯಿಂದ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಮಾರ್ತಂಡ ಜೋಶಿ ಮಾತನಾಡಿದರು. ಜನಜಾಗೃತಿ ವೇದಿಕೆ ಜಿಲ್ಲಾ ಉಪಾಧ್ಯಕ್ಷ ಗುರುನಾಥ ಗಡ್ಡೆ, ಸದಸ್ಯರಾದ ಶಾಮರಾವ, ರಾಜಶೇಖರ ಮಡಕೆ, ಡಾ.ಶಿವಕುಮಾರ ಪಾಟೀಲ್, ನಾರಾಯಣಪುರ ವಲಯ ಮೇಲ್ವಿಚಾರಕ ಮಹೇಶ ಕದಂ, ಮಹೇಶ ಕಲಕೇರಿ, ಮಂಜುನಾಥ, ಭೀಮರಾಯ ಪೂಜಾರಿ, ಮೇಲ್ವಿಚಾರಕ ಸಿದ್ದರಾಜು, ಕೃಷಿ ವಿಸ್ತರಣಾಧಿಕಾರಿ ಮಹಾಂತೇಶ ಇತರರಿದ್ದರು. ತ್ರಿಪುರಾಂತ ಮಡಿವಾಳೇಶ್ವರ ಚೌಕ್‌ನಿಂದ ಕಾಲೇಜಿನವರೆಗೆ ಬೃಹತ್ ಜನಜಾಗೃತಿ ಜಾಥಾ ಜರುಗಿತು.


ವಿಜಯವಾಣಿ

ಬಸವಕಲ್ಯಾಣದಲ್ಲಿ ಗಾಂಧಿ ಜಯಂತಿ ನಿಮಿತ್ತ ದುಶ್ಚಟಮುಕ್ತ ಸಮಾಜ ನಿರ್ಮಾಣಕ್ಕಾಗಿ ಶನಿವಾರ ಆಯೋಜಿಸಿದ್ದ ಸಮಾವೇಶವನ್ನು ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಡಾ.ಸಂಗೀತಾ ಮಂಠಾಳೆ, ಡಾ.ಬಸವರಾಜ ಎವಲೆ, ಸೋಮಲಿಂಗ ಕೆ., ಮಾರ್ತಂಡ ಜೋಶಿ ಇತರರಿದ್ದರು.

> ವಾಟ್ಸ್‌ಆ್ಯಪ್, ಫೇಸ್‌ಬುಕ್‌ನಂಥ ಸಾಮಾಜಿಕ ಜಾಲತಾಣ ಅಗತ್ಯಕ್ಕಿಂತ ಹೆಚ್ಚಿನ ಬಳಕೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಕರೋನಾ ವೇಳೆ ಆನ್‌ಲೈನ್ ಕ್ಲಾಸ್‌ಗಾಗಿ ಬಳಕೆ ಅಧಿಕವಾಗಿತ್ತು. ಆದರೀಗ ಒಳ್ಳೆಯದಕ್ಕಿಂತ ಕೆಟ್ಟದ್ದಕ್ಕೆ ಬಳಕೆ ಹೆಚ್ಚಾಗಿದೆ. ಜ್ಞಾನ ವೃದ್ಧಿ ಒಳ್ಳೆಯ ಉದ್ದೇಶಕ್ಕೆ ಬಳಕೆಯಾಗಲಿ. ಅನಗತ್ಯ ಬಳಕೆಗೆ ಸ್ವಯಂ ಕಡಿವಾಣ ಅವಶ್ಯ.
>
> | ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು

ನಿರ್ಗತಿಕರಿಗೆ ಮಾಸಾಶನ

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಲಾಕ್‌ಡೌನ್ ವೇಳೆ ಜ್ಞಾನ ತಾಣ ಕಾರ್ಯಕ್ರಮದಡಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಟ್ಯಾಬ್ ಮತ್ತು ಲ್ಯಾಪ್‌ಟಾಪ್ ನೀಡುವ ಮೂಲಕ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಸಮಾಜದ ನಿರ್ಗತಿಕರಿಗೆ ತಿಂಗಳಿಗೆ 750ರಿಂದ 1000 ರೂ. ಮಾಸಾಶನ ನೀಡಲಾಗುತ್ತಿದೆ ಎಂದು ಸೋಮಲಿಂಗ ಕೆ. ತಿಳಿಸಿದರು. ನಿರ್ಗತಿಕರಿಗೆ ವಾತ್ಸಲ್ಯ ಮನೆ ನಿರ್ಮಿಸಲಾಗುತ್ತಿದೆ. ಅಂತರ್ಜಲ ಮಟ್ಟ ಹೆಚ್ಚಿಸಲು ಕೆರೆ ನಿರ್ಮಾಣ, ಜನಮಂಗಲ ಕಾರ್ಯಕ್ರಮದಡಿ ಅಂಗವಿಕಲರಿಗೆ ವಾಟರ್‌ಬೆಡ್, ವೀಲ್‌ಚೇರ್, ಯುಶೇಪ್ ವಾಕರ್, ಊರುಗೋಲು ಸೇರಿ ವಿವಿಧ ಸಲಕರಣೆ ಉಚಿತವಾಗಿ ಒದಗಿಸಲಾಗುತ್ತಿದೆ. ಪ್ರಸ್ತುತ ಆರ್ಥಿಕ ವರ್ಷದಲ್ಲಿ ಗ್ರಾಮೀಣ ಭಾಗದಲ್ಲಿ ಶಿಕ್ಷಕರ ಕೊರತೆ ಇರುವ 20 ಸರ್ಕಾರಿ ಶಾಲೆಗಳಿಗೆ ಜ್ಞಾನದೀಪ ಸ್ವಯಂ ಶಿಕ್ಷಕರನ್ನು ಒದಗಿಸಲಾಗಿದೆ. ವೃತ್ತಿಪರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಗತಿ ಬಂಧು ಸ್ವಸಹಾಯ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿ ತಿಂಗಳು ಸುಜ್ಞಾನ ನಿಧಿ ಶಿಷ್ಯವೇತನ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಸಂಯುಕ್ತ ಕರ್ನಾಟಕ ● ಅಕ್ಟೋಬರ್ 17, 2023
ಪ್ರಜಾವಾಣಿ

ಬಸವಣ್ಣನ ಭಾವಚಿತ್ರಕ್ಕೆ ಅವಮಾನ: ಖಂಡನೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಹಲಕರ್ಟಿಯಲ್ಲಿ ಮಹಾತ್ಮ ಬಸವಣ್ಣವರ ಭಾವಚಿತ್ರಕ್ಕೆ ಅವಮಾನ ಮಾಡಿರುವುದನ್ನು ಖಂಡಿಸಿ ವೀರಶೈವ ಲಿಂಗಾಯತ ಸಂಘಟನಾ ವೇದಿಕೆಯಿಂದ ಸೋಮವಾರ ನಗರದ ಬಸವೇಶ್ವರ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹಾಗೂ ಹುಲಸೂರ ಶಿವಾನಂದ ಸ್ವಾಮೀಜಿ ಮಾತನಾಡಿ,'ಗುರು ಬಸವಣ್ಣನವರ ಭಾವಚಿತ್ರಕ್ಕೆ ಹಾನಿ ಮಾಡಿರುವುದು ಅತ್ಯಂತ ಹೇಯ ಕೃತ್ಯ. ಈ ಕಾರ್ಯದಲ್ಲಿ ಭಾಗಿಯಾದ ಕಿಡಿಗೇಡಿಗಳನ್ನು ಶೀಘ್ರ ಬಂಧಿಸಬೇಕು' ಎಂದು ಆಗ್ರಹಿಸಿದರು.

ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಬಸವರಾಜ ಕೋರಕೆ, ಶಶಿಕಾಂತ ದುರ್ಗೆ, ಸಂಘಟನೆ ಜಿಲ್ಲಾ ಘಟಕದ ಅಧ್ಯಕ್ಷ ಸುನಿಲ ಪತ್ರಿ, ಪ್ರದೀಪ ಜೋಜನ್, ತಾಲ್ಲೂಕು ಘಟಕದ ಅಧ್ಯಕ್ಷ ಲೋಕೇಶ ಜಮಖಂಡಿ, ಪ್ರಧಾನ ಕಾರ್ಯದರ್ಶಿ ವಿವೇಕಾನಂದ ಮಠಪತಿ, ಡಾ. ಜಿ.ಎಸ್.ಭುರಳೆ, ರವೀಂದ್ರ ಕೊಳಕೂರ, ಶಿವಕುಮಾರ ಬಿರಾದಾರ, ಸಾಗರ ದಂಡೋತಿ, ಶಿವು ಶೆಟಗಾರ, ಸಿದ್ದು ಬಿರಾದಾರ, ಅಮರ ಬಡದಾಳೆ, ಜಗನ್ನಾಥ ಪಾಟೀಲ, ವಿವೇಕಾನಂದ ಸ್ವಾಮಿ ಮತ್ತಿತರರು ಪಾಲ್ಗೊಂಡಿದ್ದರು.



ಬಸವೇಶ್ವರ ಭಾವಚಿತ್ರದ ಅವಮಾನ ಖಂಡಿಸಿ ವೀರಶೈವ ಲಿಂಗಾಯತ ಸಂಘಟನಾ ವೇದಿಕೆಯಿಂದ ಬಸವಕಲ್ಯಾಣದಲ್ಲಿ ತಹಶೀಲ್ದಾರ್ ಶಾಂತಗೌಡ ಬಿರಾದಾರ ಅವರಿಗೆ ಸೋಮವಾರ ಮನವಿಪತ್ರ ಸಲ್ಲಿಸಲಾಯಿತು

Scanned with OKEN Scanner

'ಯುವಕರನ್ನು ಸರಿ ದಾರಿಗೆ ತಂದು ಸದೃಢ ಸಮಾಜ ನಿರ್ಮಿಸಬೇಕಿದೆ'

ಸಂ.ಕ.ಸಮಾಚಾರ ಬಸವಕಲ್ಯಾಣ

ಭಾರತ ದೇಶದ ಸಂಸ್ಕೃತಿ, ಪರಂಪರೆ ಬಹಳ ಮಹತ್ವದ್ದಾಗಿದೆ. ಆದರೆ, ಇಂದು ಸಂಸ್ಕೃತಿ ಹಾಗೂ ಸಂಸ್ಕಾರ ಹಾಳಾಗುತ್ತಿದ್ದು ಯುವ ಸಮೂಹ ವಿದೇಶಿ ಸಂಸ್ಕೃತಿಗೆ ಮಾರು ಹೋಗುತ್ತಿರುವದು ಕಳವಳಕಾರಿ ಸಂಗತಿಯಾಗಿದೆ. ಅವರನ್ನು ಸರಿ ದಾರಿಗೆ ತರಲು ಪ್ರಯತ್ನಿಸಿ ಸದೃಢ ಸಮಾಜ ನಿರ್ಮಿಸಬೇಕಿದೆ ಎಂದು ತ್ರಿಪುರಾಂತ್ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಬಸವಕಲ್ಯಾಣ, ತಾಲ್ಲೂಕು ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ, ಬೆಳ್ತಂಗಡಿ ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ ಬೀದರ್, ಎಸ್. ಎಸ್.ಕೆ.ಬಸವೇಶ್ವರ ಕಲಾ, ವಿಜ್ಞಾನ, ವಾಣಿಜ್ಯ, ಸ್ನಾತಕ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡ ಗಾಂಧಿ ಜಯಂತಿ ಸಂಭ್ರಮಾಚರಣೆಯ ಪ್ರಯುಕ್ತ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಜನ ಜಾಗೃತಿ ಜಾಥಾ ಸಮಾವೇಶ ಉದ್ಘಾಟಿಸಿ ಶ್ರೀಗಳು ಮಾತನಾಡಿದರು. ಡಾ. ವಿರೇಂದ್ರ ಹೇಗಡೆ ಅವರು ಸುಂದರ ಸಮಾಜ ನಿರ್ಮಿಸಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ನೂರಾರು ಯೋಜನೆಗಳ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಶ್ಲಾಘನೀಯವಾಗಿದೆ. ಗಾಂಧಿ ಜಯಂತಿ ಸಂಭ್ರಮಾಚಾರಣೆ ಯಶಸ್ವಿಯಾಗಬೇಕಾದರೆ ಎಲ್ಲರು ತಮ್ಮಲಿರುವ ದುಶ್ಚಟಗಳನ್ನು ಈಗಿನಿಂದಲೇ ಬಿಡಬೇಕು ಎಂದು ಕರೆ ನಿಡಿದರು.

ಡಾ. ಸಂಗೀತಾ ಮಂಠಾಳೆ ಮಾತನಾಡಿ ವಿದ್ಯಾರ್ಥಿಗಳು ಆನಲೈನ್ ಕ್ಲಾಸ್‌ಗಾಗಿ ಮೊಬೈಲ್ ಬಳಸಬೇಕು. ಅದು ಬಿಟ್ಟು ಬೇರೆ ಬೇರೆ ಕೆಲಸಕ್ಕೆ ಮೊಬೈಲ್ ಬಳಕೆಯಾಗಿ ವಿದ್ಯಾರ್ಥಿಗಳು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ತಂದೆ, ತಾಯಿ ಇದನ್ನು ನಿಷೇಧಿಸಬೇಕು ಎಂದು ಸಲಹೆ ನೀಡಿದರು.

ಪತ್ರಕರ್ತರ ಸಂಘದ ತಾಲ್ಲೂಕು ಅಧ್ಯಕ್ಷ ಮಾರ್ಥಂಡ ಜೋಶಿ ಮಾತನಾಡಿ ಇಂದು ದೇಶವು ಸರ್ವ ರೀತಿಯಲ್ಲಿ ಅಭಿವೃದ್ಧಿಯಾಗಿದೆ. ಆದರೆ ಬಹಳಷ್ಟು ಯುವಕರು ದುಶ್ಚಟಕ್ಕೆ ಬಲಿಯಾಗುತ್ತಿದ್ದಾರೆ.

ಈ ಕುರಿತು ಎಲ್ಲರು ಒಟ್ಟಾಗಿ ಹೋರಾಟ ಮಾಡಿ ದುಶ್ಚಟ ಮುಕ್ತ ಸಮಾಜ ನಿರ್ಮಿಸಬೇಕು ಎಂದರು. ಪ್ರಾಂಶುಪಾಲ ಡಾ. ಬಸವರಾಜ ಎವಲೆ ಮಾತನಾಡಿದರು. ಧರ್ಮಸ್ಥಳ ಯೋಜನಾಧಿಕಾರಿ ಸೋಮಲಿಂಗ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಬೀದರ್ ಜಿಲ್ಲಾ ಜನ ಜಾಗೃತಿ ವೇದಿಕೆಯ ಜಿಲ್ಲಾ ಉಪಾಧ್ಯಕ್ಷ ಗುರುನಾಥ ಗಡ್ಡೆ, ಸದಸ್ಯರಾದ ಶಾಮರಾವ, ರಾಜಶೇಖರ ಮಡಕೆ ಉಪಸ್ಥಿತರಿದ್ದರು. ಇದಕ್ಕೂ ಮುನ್ನ ನಗರದಲ್ಲಿ ಜಾಥಾ ಜರುಗಿತು.



ಬಸವಕಲ್ಯಾಣದಲ್ಲಿ ಭಾನುವಾರ ಹಮ್ಮಿಕೊಂಡ ಗಾಂಧಿ ಜಯಂತಿ ಸಂಭ್ರಮಾಚರಣೆಯ ಪ್ರಯುಕ್ತ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಜನ ಜಾಗೃತಿ ಜಾಥಾ ಸಮಾವೇಶ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು.

ಸಂಯುಕ್ತ ಕರ್ನಾಟಕ
ಭಾನುವಾರ, 08, ಅಕ್ಟೋಬರ್, 2023
ಕಲಬುರಗಿ | KALABURAGI

ಮಕ್ಕಳ ಕೈಗೆ ಮೊಬೈಲ್ ಬದಲು ಪುಸ್ತಕ ಕೊಡಿ: ರುದ್ರಮುನಿ ಶಿವಾಚಾರ್ಯರು

ಗವಿಮಠ ಶ್ರೀಗಳ ಜನ್ಮದಿನ ನಿಮಿತ್ತ ಜಾಗೃತಿ ಯಾತ್ರೆ



ಬಸವಕಲ್ಯಾಣ ನಗರದ ತ್ರಿಪುರಾಂತ ಗವಿ ಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಮ್ಮ ಜನ್ಮದಿನದ ನಿಮಿತ್ತ ಪಾದಯಾತ್ರೆ ನಡೆಸಿದರು.

ಬಸವಕಲ್ಯಾಣ: ಮಕ್ಕಳ ಕೈಯಲ್ಲಿ ಮೊಬೈಲ್ ಬದಲು ಪುಸ್ತಕ ನೀಡಿ ಎಂಬ ಜನಜಾಗೃತಿ ಪಾದಯಾತ್ರೆಯನ್ನು ತ್ರಿಪುರಾಂತ ಗವಿ ಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಅವರುತಮ್ಮ ಜನ್ಮದಿನಾಚರಣೆನಿಮಿತ್ತ ನಗರದಬಸವೇಶ್ವರದೇವಸ್ಥಾನದಿಂದಮುಖ್ಯ ರಸ್ತೆ ಮುಖಾಂತರತ್ರಿಪುರಾಂತದ ಮಡಿವಾಳ ಮಾಚಿದೇವ ವೃತ್ತದವರೆಗೆ ಆಯೋಜಿಸಿದ್ದ ವಿಶಿಷ್ಟ ಜಾಗೃತಿ ಯಾತ್ರೆಯಲ್ಲಿ ಮಾತನಾಡಿದರು.

ಈ ಪಾದಯಾತ್ರೆಯಲ್ಲಿ ಬಸವಕಲ್ಯಾಣ ಶಾಸಕ ಶರಣು ಸಲಗರ ಮಾತನಾಡಿ, ವಿದ್ಯಾರ್ಥಿಗಳು ಪ್ರಾಯದಲ್ಲಿಯೇ ದುಶ್ಚಟಗಳಿಗೆ ಬಲಿಯಾಗುತ್ತಿರುವುದು ವಿಷಾದನೀಯ. ಈ ದುಶ್ಚಟಗಳಿಂದ ಮುಕ್ತಗೊಳಿಸಲು ಶ್ರೀಗಳು ಹಮ್ಮಿಕೊಂಡಿರುವ ಜನ ಜಾಗೃತಿ ಅಭಿಯಾನ ಶ್ಲಾಘನೀಯವಾಗಿದೆ ಎಂದರು.

ಹುಮನಾಬಾದ್ ಶಾಸಕ ಸಿದ್ದು ಪಾಟೀಲ ಭಾಗವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಬಿಡಿ, ಸಿಗರೇಟ್, ಗುಟಕಾ, ಡ್ರಗ್ಸ್ ಮುಂತಾದ ಚಟಗಳಿಗೆ ಬಲಿಯಾಗಿ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆ ಪೂಜ್ಯರು ವಿದ್ಯಾರ್ಥಿಗಳನ್ನು ಸರಿ ದಾರಿಗೆ ತರಲು ಅಭಿಯಾನ ಹಮ್ಮಿಕೊಂಡಿರುವುದು ಸಂತೋಷ ಉಂಟು ಮಾಡಿದೆ ಎಂದರು.

ಪಾದಾಯಾತ್ರೆಯಲ್ಲಿ ವಿವಿಧ ಶಾಲಾ ಕಾಲೇಜುಗಳ ಮಕ್ಕಳು ಮೊಬೈಲ್ ಹಟಾವೊ ಕುರಿತುನಾಮಫಲಕಗಳನ್ನುಹಿಡಿದಿದ್ದರು. ಇವರಜೊತೆಯಲ್ಲಿತಾಲೂಕಿನಪ್ರಮುಖರಾದ ಶಾಂತಪ್ಪ ಜಿ ಪಾಟೀಲ, ಶರಣಪ್ಪ ಬಿರಾದಾರ, ಲೋಕೇಶ, ಶಿವಕುಮಾರ ಬಿರಾದಾರ, ಅರ್ಜುನಕನಕ, ಡಾ.ಜಿ.ಎಸ್ ಭುರಾಳೆ, ಸಿಪಿಐ ಅಲಿಸಾಬ, ಶ್ರೀಶೈಲ ವಾತಾಡೆ, ವಿನೋದ ಬಡಗೇಕರ ಮುಂತಾದ ಸಾವಿರಾರು ವಿದ್ಯಾರ್ಥಿಗಳು, ಗಣ್ಯರು ಭಾಗವಹಿಸಿದರು.

ಕನ್ನಡಪ್ರಭ
ಶುಕ್ರವಾರ 29.09.2023

ರಾಜ್ಯ ಚುಟುಕು ಸಮ್ಮೇಳನಕ್ಕೆ ಅಧ್ಯಕ್ಷರಾಗಿ ರುದ್ರಮುನಿ ಶ್ರೀ ಆಯ್ಕೆ



ರುದ್ರಮುನಿ ಶ್ರೀ

ಬಸವಕಲ್ಯಾಣ: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ರಾಜ್ಯಮಟ್ಟದ 12ನೇ ಸಮ್ಮೇಳನದ ಅಧ್ಯಕ್ಷರನ್ನಾಗಿ ನಗರದ ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಅವರನ್ನು ಆಯ್ಕೆ ಮಾಡಲಾಗಿದೆ.

ಶ್ರೀಗಳು ಸಾಮಾಜಿಕ ಕಾರ್ಯದಲ್ಲಿ ಸದಾ ಕ್ರಿಯಾಶೀಲರಾಗಿದ್ದು, ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ವೈಚಾರಿಕ ಮತ್ತು ಧಾರ್ಮಿಕ ವಿಷಯದಲ್ಲಿ ವಾಗ್ಮಿಗಳು ಆಗಿದ್ದರಿಂದ ಅವರನ್ನು ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಪರಿಷತ್ತಿನ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಬೋಧನೆಯಲ್ಲಿ ಶಿವಾಚಾರ್ಯರು ಅಪಾರ ಪರಿಶ್ರಮವಹಿಸಿದ್ದಾರೆ ಹಾಗೂ ಯುವ ಉತ್ಸಾಹಿ ಆಗಿದ್ದಾರೆ ಎಂದಿದ್ದಾರೆ. ಮೇ ತಿಂಗಳಲ್ಲಿ ಶಿರಸಿಯಲ್ಲಿ ಸಮ್ಮೇಳನ ಜರುಗಲಿದೆ. ಸಮ್ಮೇಳನದಲ್ಲಿ ಚುಟುಕುಗಳ ವಾಚನಕ್ಕಾಗಿ ಆಸಕ್ತರು, 9482181305 ಸಂಪರ್ಕಿಸಬಹುದು ಎಂದು ಹೇಳಿದ್ದಾರೆ.

ಪ್ರಜಾವಾಣಿ
ಭಾನುವಾರ • ಏಪ್ರಿಲ್ 14, 2024

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶುಕ್ರವಾರ 29 ಸೆಪ್ಟೆಂಬರ್ 2023
29 SEPTEMBER 2023

ಶ್ರೀ ಜಯಶಾಂತಲಿಂಗ ಸ್ವಾಮೀಜಿ ನುಡಿ | ಅಭಿನವ ಶ್ರೀ ಜನ್ಮದಿನ, ಪಟ್ಟಾಧಿಕಾರ ವರ್ಧಂತಿ

ಗವಿಮಠ ಶ್ರೀ ಕಾರ್ಯ ಶ್ಲಾಘನೀಯ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಭಕ್ತರ ಪ್ರೀತಿ, ವಿಶ್ವಾಸ, ಸಹಾಯ ಸಹಕಾರದಿಂದ ಗವಿಮಠ ಪ್ರಗತಿ ಕಂಡಿದೆ. ಮುಂದೆಯೂ ಮಠದ ಕಾರ್ಯಕ್ಕೆ ಭಕ್ತರು ಕೈಜೋಡಿಸಬೇಕು ಎಂದು ಹಿರೇನಾಗಾಂವನ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಹೇಳಿದರು.

ಸಂಸ್ಥಾನ ಗವಿ ಮಠದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 37ನೇ ಜನ್ಮದಿನೋತ್ಸವ ಹಾಗೂ 18ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದಲ್ಲಿ ಮಾತನಾಡಿ, ಡಾ.ಅಭಿನವ ಶ್ರೀಗಳು ನಗರದಲ್ಲಿ ಮೊಬೈಲ್ ಜಾಗೃತಿ ಮಾಡಿದ್ದಾರೆ. ಹತ್ತಾರು ಸಮಾಜ ಮುಖಿ ಕೆಲಸಗಳಿಗೆ ಶ್ರಮಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಶಾಸಕ ಶರಣು ಸಲಗರ ಮಾತನಾಡಿ, ಯುವ ಸಮೂಹಕ್ಕೆ ಸನ್ಮಾರ್ಗ ತೋರುವ ಸಮಾಜಮುಖಿ ಕಾರ್ಯ ಅಭಿನವ ಶ್ರೀಗಳು ಮಾಡುತ್ತಿದ್ದಾರೆ. ಮಕ್ಕಳಿಗೆ ಮೊಬೈಲ್ ಬದಲು ಪುಸ್ತಕ ನೀಡಿ ಎಂದು ಸಾರಲು ಪಾದಯಾತ್ರೆ ಮಾಡಿದ್ದು, ಪಾಲಕರು ಸ್ಪಂದಿಸಬೇಕು ಎಂದರು.

ಮಾಜಿ ಶಾಸಕ ಮಲ್ಲಿಕಾರ್ಜುನ ಎಸ್ ಖೂಬಾ ಮಾತನಾಡಿ, ಗವಿ ಮಠದಲ್ಲಿ 1 ಕೋಟಿ ರೂ. ವೆಚ್ಚದಲ್ಲಿ ಯಾತ್ರಿ ಭವನ ನಿರ್ಮಿಸಲು ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದರು.

ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ ಮಾತನಾಡಿ, ಗವಿ ಮಠದ ಶ್ರೇಯೋಭಿವೃದ್ಧಿಗಾಗಿ ಕೈಲಾದಷ್ಟು ಸಹಕಾರ ನೀಡಿದ್ದೇನೆ.ನಿತ್ಯ ಪ್ರಸಾದಕ್ಕೆ ಸರ್ಕಾರದಿಂದ ಸಿಗುವ ಸೌಲಭ್ಯಕ್ಕೆ ಪ್ರಯತ್ನಿಸಲಾಗುವುದು ಎಂದರು.

ಗವಿ ಮಠದ ಅಭಿವೃದ್ಧಿ ಕಾರ್ಯಕ್ಕೆ ಶಾಸಕ ಶರಣು ಸಲಗರ ವೈಯಕ್ತಿಕವಾಗಿ ಐದು ಲಕ್ಷ ರೂ ದೇಣಿಗೆ ನೀಡಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿದರು. ಮುಖಂಡರಾದ ಪ್ರದೀಪ ವಾತಡೆ, ಅರ್ಜುನ ಕನಕ ಮಾತನಾಡಿದರು. ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದರು. ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ, ಹುಲಸೂರ್ ತಹಸೀಲ್ದಾರ್ ಶಿವಾನಂದ ಮೇತ್ರೆ, ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ, ಸದ್ಭೋದನಾ ಸಂಸ್ಥೆ ಅಧ್ಯಕ್ಷ ಬಸವಂತಪ್ಪ ಲವಾರೆ, ಲತಾ ಹಾರಕೂಡೆ, ಕೇಶಪ್ಪ ಬಿರಾದಾರ ಇತರರಿದ್ದರು. ಲೋಕೇಶ ಮೋಳಕೆರೆ ಸ್ವಾಗತಿಸಿದರು. ಪ್ರೊ.ಸೂರ್ಯಕಾಂತ ಶೀಲವಂತ ಪ್ರಾಸ್ತಾವಿಕ ಮಾತನಾಡಿದರು. ಶಿಕ್ಷಕ ರಮೇಶ ರಾಜೋಳಿ ನಿರೂಪಣೆ ಮಾಡಿದರು.

ಸನ್ಮಾನ, ಗುರುರಕ್ಷೆ

ಪ್ರಾಂಶುಪಾಲರಾದ ಶಶಿಧರ ಪಾಟೀಲ್, ಶಾಂತಯ್ಯ ಮಠಪತಿ, ಸಂಜಯ ರೋಹಿಲೆ, ಶರಣಪ್ಪ ದಂಡೆ, ದಿಗಂಬರ ಕಿವುಡೆ, ಭೀಮರೆಡ್ಡಿ ರಾಸನೇ ಹಾಗೂ ಮಲ್ಲಿಕಾರ್ಜುನ ಹಾದಿಮನಿ ಅವರನ್ನು ಸನ್ಮಾನಿಸಲಾಯಿತು. ರವಿ ನಾವದ್ಗೇಕರ್, ಶಿವಕುಮಾರ ಬಿರಾದಾರ, ಲೋಕೇಶ ಮೋಳಕೆರೆ ಮತ್ತು ವಿನೋದ ಬಡಗೇಕರ ಅವರಿಗೆ ಶ್ರೀಗಳಿಂದ ಶ್ರೀಗುರು ರಕ್ಷೆ ನೀಡಲಾಯಿತು.



ಬಸವಕಲ್ಯಾಣ ಗವಿ ಮಠದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮದಿನೋತ್ಸವ ಹಾಗೂ ಪಟ್ಟಾಧಿಕಾರ ವರ್ಧಂತ್ಯುತ್ಸವವನ್ನು ಶಾಸಕ ಶರಣು ಸಲಗರ ಉದ್ಘಾಟಿಸಿದರು. ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಧನರಾಜ ತಾಳಂಪಳ್ಳಿ, ಪ್ರದೀಪ ವಾತಡೆ, ಅರ್ಜುನ ಕನಕ, ಶಾಂತಲಿಂಗ ಮಠಪತಿ ಇತರರಿದ್ದರು.

ಗವಿಮಠದ ಭಕ್ತರು ನೀಡಿದ ಕಾಣಿಕೆಯಲ್ಲಿ ಗವಿ ಮಠದಲ್ಲಿ ಭವ್ಯ ಸಭಾ ಭವನ ನಿರ್ಮಿಸಲಾಗಿದೆ. ಏಪ್ರಿಲ್‌ನಲ್ಲಿ ಗವಿ ಮಠದಲ್ಲಿ ಜಾತ್ರೆ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಗವಿ ಮಠದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಮಹಾದ್ವಾರ ನಿರ್ಮಿಸಬೇಕಿದೆ. ಶಾಸಕ ಶರಣು ಸಲಗರ ಸರ್ಕಾರದ ಅನುದಾನದಲ್ಲಿ ನಿರ್ಮಿಸುತ್ತಾರೊ ಅಥವಾ ಸ್ವಂತದರಲ್ಲಿ ನಿರ್ಮಿಸುತ್ತಾರೋ ಗೊತ್ತಿಲ್ಲ. ಒಟ್ಟಾರೆಯಾಗಿ ಮಹಾದ್ವಾರ ನಿರ್ಮಿಸುತ್ತಾರೆ ಎಂಬ ವಿಶ್ವಾಸವಿದೆ.

| ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು

ಮಾಡಿವಾಳ ಮಾಚಿದೇವರ ಜಾತ್ರೆ: ಭಕ್ತರಿಂದ ಅಗ್ನಿ ಪ್ರವೇಶ

ಸಂ.ಕ.ಸಮಾಚಾರ ಬಸವಕಲ್ಯಾಣ : ನಗರದ ತ್ರಿಪುರಾಂತನಲ್ಲಿಯ ಶ್ರೀ ಮಡಿವಾಳ ಮಾಚಿದೇವರ ಜಾತ್ರಾಮಹೋತ್ಸವದ ನಿಮಿತ್ತ ಗುರುವಾರ ಬೆಳಗ್ಗೆ ಅಗ್ನಿಪೂಜೆ ಹಾಗೂ ಪಲ್ಲಕ್ಕಿ ಮೆರವಣಿಗೆ ವೈಭವದಿಂದ ಜರುಗಿತು.

ತ್ರಿಪುರಾಂತ ಕೆರೆಯ ಪರಿಸರದಲ್ಲಿಯ ಅಗ್ನಿ ಕುಂಡದಲ್ಲಿ ಬೆಳಗ್ಗೆ ಭಕ್ತರು ಭಕ್ತಿ ಶ್ರದ್ಧೆಯಿಂದ ಅಗ್ನಿ ಪ್ರವೇಶ ಮಾಡಿದ್ದರು, ವಿವಿಧ ಡೆಯಿಂದ ಆಗಮಿಸಿದ ಮಹಿಳೆಯರು, ಮಕ್ಕಳು, ವೃದ್ಧರು ಸೇರಿದಂತೆ ಭಕ್ತರು ಅಗ್ನಿ ಪ್ರವೇಶ ಮಾಡಿದ್ದು ವಿಶೇಷವಾಗಿತ್ತು.

ತ್ರಿಪುರಾಂತ ಗವಿಮಠದ ಶ್ರೀ ಡಾ: ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಗ್ನಿ ಕುಂಡಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ನಂತರ ಗ್ರಾಮದ ಪ್ರಮುಖರ ಬೀದಿಗಳಲ್ಲಿ ಮಾಚಿದೇವರ ಮೂರ್ತಿ ಹಾಗೂ ಪಲ್ಲಕ್ಕಿ ಮೆರವಣಿಗೆ ಅದ್ದೂರಿಯಾಗಿ ಜರುಗಿತು. ಸಾಂಸ್ಕೃತಿಕ ವೈಭವದೊಂದಿಗೆ ನಡೆದ ಪಲ್ಲಕ್ಕಿ ಮೆರವಣಿಗೆಯಲ್ಲಿ ಪುರವಂತರ ಪ್ರದರ್ಶನ, ಗೊಂಬೆಗಳ ಕುಣಿತ ಹಾಗೂ ಡೊಳ್ಳಿನ ತಂಡದವರಿಂದ ನಡೆದ ಪ್ರದರ್ಶನ ಗಮನ ಸೆಳೆಯಿತು.



ಬಸವಕಲ್ಯಾಣ: ನಗರದ ತ್ರಿಪುರಾಂತನಲ್ಲಿಯ ಶ್ರೀ ಮಡಿವಾಳ ಮಾಚಿದೇವರ ಜಾತ್ರಾಮಹೋತ್ಸವದ ನಿಮಿತ್ತ ಭಕ್ತರಿಂದ ಅಗ್ನಿ ಪ್ರವೇಶ ಜರುಗಿತು.

ಶಾಸಕ ಶರಣು ಸಲಗರ್, ವಿಧಾನ ಪರಿಷತ್ ಮಾಜಿ ಸದಸ್ಯ ವಿಜಯಸಿಂಗ್, ಗ್ರಾಮದ ಪ್ರಮುಖರಾದ ಬಕ್ಕಯ್ಯ ಸ್ವಾಮಿ, ನಾಗರಾಜ್ ಸ್ವಾಮಿ, ಡಾ. ಬಸವರಾಜ್ ಸ್ವಾಮಿ, ಮರಿಯಪ್ಪ ಪೊಲೀಸ್ ಪಾಟೀಲ್, ಭೀಮ್‌ಶಾ ಪುಲ್, ಕರಬಸ್ ಪೂಜಾರಿ, ಬಸವರಾಜ್, ಬಾಬು ಸ್ವಾಮಿ, ಹಣಮಂತ ಮಾಳಿ, ಸಂಗಮೇಶ್ವರ, ಮಲ್ಲಿಕಾರ್ಜುನ್ ಬೊಕ್ಕೆ, ಸಂಗಮೇಶ್ ಹುಣಸಿಗೆರೆ, ಶಿವಬಸಪ್ಪ ಚನ್ನಮಲ್ಲೆ, ಲಿಂಗರಾಜ್ ಬಿರಾದಾರ್, ವಿಜಯ್‌ಕುಮಾರ್, ಕಾರ್ತಿಕ ಬಿರಾದಾರ ಸೇರಿದಂತೆ ಪ್ರಮುಖರು, ಗಣ್ಯರು ಪಾಲ್ಗೊಂಡಿದ್ದರು.

ಜಯಭಾರತ
ಶುಕ್ರವಾರ, 17 ಜನವರಿ, 2025
ಕಲಬುರಗಿ | KALABURAGI

Scanned with OKEN Scanner

ಪತ್ರಿಕೋದ್ಯಮಕ್ಕೆ ಸಾಹಿತ್ಯ ಸ್ಪರ್ಶ ಅಗತ್ಯ

ಗವಿ ಮಠದಲ್ಲಿ ಲೇಖಕ ಡಾ.ವೆಂಕಟರೆಡ್ಡಿ ರಾಮರೆಡ್ಡಿ ಅವರು ಸುರಗಿರಿ ಗ್ರಂಥ ಲೋಕಾರ್ಪಣೆ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಪತ್ರಿಕೋದ್ಯಮಕ್ಕೆ ಸಾಹಿತ್ಯ ಸಂಸ್ಪರ್ಶ ಅಗತ್ಯ ಎಂದು ತುಮಕೂರು ವಿವಿಯ ವಿಜ್ಞಾನ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ವೆಂಕಟರೆಡ್ಡಿ ರಾಮರೆಡ್ಡಿ ಅಭಿಪ್ರಾಯಪಟ್ಟರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್, ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ಹಾಗೂ ಅಭಿನವ ಶ್ರೀ ಪ್ರಕಾಶನ ಆಶ್ರಯದಲ್ಲಿ ಶ್ರಾವಣ ಮಾಸದ ನಿಮಿತ್ತ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮಗ್ರಂಥವಾದ ಸಿದ್ಧಾಂತ ಶಿಖಾಮಣಿ, ವಚನ ಸಾಹಿತ್ಯ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಸುರಗಿರಿ ಗ್ರಂಥ ಲೋಕಾರ್ಪಣೆಗೊಳಿಸಿ ಮಾತನಾಡಿದರು. ಗವಿಮಠದ ಸಮಾಜಪರ, ರಚನಾತ್ಮಕ ಕಾರ್ಯಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ, ವೈಚಾರಿಕತೆ, ನಾಗರಿಕತೆ, ಆಧುನಿಕತೆಯ ನಾಗಲೋಟದಲ್ಲಿ ಕಲೆ ಸಾಹಿತ್ಯ ಸಂಸ್ಕೃತಿ ಪರಂಪರೆ ಇತಿಹಾಸ ಮರೆಯಾಗಬಾರದು. ಸಾಹಿತ್ಯ ಸಂಸ್ಕೃತಿಯ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಬೆಳೆಸುವ ಕೆಲಸ ನಡೆಯಬೇಕು.



ಬಸವಕಲ್ಯಾಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ.ವೆಂಕಟರೆಡ್ಡಿ ರಾಮರೆಡ್ಡಿ ಅವರು ಸುರಗಿರಿ ಗ್ರಂಥ ಲೋಕಾರ್ಪಣೆಗೊಳಿಸಿದರು. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಾಂತಲಿಂಗ ಮಠಪತಿ, ವಿ. ಬಿ. ಹಿರೇಗೌಡರ್, ಮಾರ್ತಂಡ ಜೋಶಿ ಮತ್ತಿತರರಿದ್ದರು.

ಗವಿಮಠದ ಕುರಿತು ಸಾಹಿತಿ ವಿರಶೆಟ್ಟಿ ಪಾಟೀಲ್ ಅವರು ಮೂರು ಪುಸ್ತಕಗಳು ಬರೆದಿದ್ದು, ಮಠದಿಂದ ಪ್ರಕಟಿಸಲಾಗಿದೆ ಎಂದರು.

ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಮಾರ್ತಂಡ ಜೋಶಿ ಕಾರ್ಯಕ್ರಮ ಉದ್ಘಾಟಿಸಿ, ಸಮಾಜದಲ್ಲಿ ಪರಿವರ್ತನೆ ತರುವ ಶಕ್ತಿ ಸಾಹಿತ್ಯಕ್ಕಿದೆ. ಜನಪರವಾದ ಸಮಾಜಮುಖಿ ಸಾಹಿತ್ಯ ಗಟ್ಟಿಯಾಗಿ ನಿಲ್ಲುತ್ತದೆ. ಯುವ ಸಮೂಹ ಪುಸ್ತಕ, ಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು. ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ವಿ. ಬಿ. ಹಿರೇಗೌಡರ್ ಮಾತನಾಡಿ, ಮೊಬೈಲ್ ಬಳಕೆ ಕಡಿಮೆಮಾಡಿ ಸಾಹಿತ್ಯ ಓದುವ ಹವ್ಯಾಸ ನಾವೆಲ್ಲರೂ ರೂಢಿಸಿಕೊಳ್ಳಬೇಕು ಎಂದರು.

ಮಾನವೀಯತೆ ಬಿಂಬಿಸುತ್ತವೆ

ಸಾಹಿತ್ಯ ಪತ್ರಿಕೋದ್ಯಮದ ಜತೆಗೆ ಚಳುವಳಿ ಕ್ಷೇತ್ರದಲ್ಲಿ ಹೀಗೆ ವಿವಿಧ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಡಾ.ನಾಗರಾಜ ಬರಹಗಳು ಮತ್ತು ವೈಚಾರಿಕ ಲೇಖನಗಳ ಸಂಕಲನ ಮಾನವೀಯತೆ ಮತ್ತು ಸಮಕಾಲಿನ ವಾಸ್ತವವನ್ನು ಬಿಂಬಿಸುತ್ತವೆ. ಈ ಪುಸ್ತಕ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೂ ಮಾರ್ಗದರ್ಶಿಯಾಗಿದೆ ಎಂದು ಡಾ. ವೆಂಕಟರೆಡ್ಡಿ ರಾಮರೆಡ್ಡಿ ಹೇಳಿದರು.

ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವಿರಶೆಟ್ಟಿ ಪಾಟೀಲ್, ಪ್ರೊ. ಶಂಕರ ಕರುಣೆ, ಪ್ರೊ. ರುದ್ರೇಶ್ವರ ಸ್ವಾಮಿ, ಗೋರ್ಟಾ, ನಾಗಪ್ಪ ನಿಣ್ಣೆ, ಧನರಾಜ ರಾಜೋಳೆ, ಸೂರ್ಯಕಾಂತ ಪಾಟೀಲ, ನಾಗೇಂದ್ರ ಬಿರಾದಾರ, ಎ.ಜೆ.ಪಾಟೀಲ, ಸವಿತಾ ಸ್ವಾಮಿ, ಗೋವಿಂದರೆಡ್ಡಿ ಮುಂತಾದವರು ಉಪಸ್ಥಿತರಿದ್ದರು ಶರಣಬಸಪ್ಪ ಅಲಗೂಡೆ ಪ್ರಾರ್ಥನೆ ಗೀತೆ ಹಾಡಿದರು. ಮಲ್ಲಿಕಾರ್ಜುನ ಅಲಗೂಡೆ ಸ್ವಾಗತಿಸಿದರು. ರಮೇಶ ರಾಜೋಳೆ ನಿರೂಪಿಸಿದರು. ನಿತೀನ್ ನೀಲಕಂಠೆ ವಂದಿಸಿದರು.

ವಿಜಯ ಕರ್ನಾಟಕ
ಗುರುವಾರ, 31 ಆಗಸ್ಟ್ 2023
ಕಲಬುರಗಿ

22ರಂದು ಜಗದ್ಗುರು ರೇಣುಕಾಚಾರ್ಯ ಜಯಂತಿ, ಪ್ರಶಸ್ತಿ ಪ್ರದಾನ

ಸಂ.ಕ.ಸಮಾಚಾರ ಬಸವಕಲ್ಯಾಣ

ತ್ರಿಪುರಾಂತ ಗವಿಮಠದಲ್ಲಿ ಮಾರ್ಚ್ 22 ರಂದು ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಆಚರಿಸಲು ನಿರ್ಧರಿಸಲಾಯಿತು.

ಮಠದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಹಿರೇನಾಗಾಂವ್‌ನ ಶ್ರೀ ಜಯಶಾಂತಲಿಂಗ ಮಹಾಸ್ವಾಮಿಗಳು ದಿವ್ಯ ಸಾನಿಧ್ಯದಲ್ಲಿ, ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ತಿರ್ಮಾನಿಸಲಾಯಿತು. ಹಲವರು ಭಾಗವಹಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಿದರು. ಜಗದ್ಗುರು ರೇಣುಕಾಚಾರ್ಯ ಜಯಂತಿ ಅಂಗವಾಗಿ ಗವಿಮಠದಲ್ಲಿ ರುದ್ರಾಭಿಷೇಕ, ಮಹಾ ಮಂಗಳಾರತಿ ಮತ್ತು ಪಂಚಾಚಾರ್ಯ ಧ್ವಜಾರೋಹಣ ಹಾಗೂ ಮಹಾಪ್ರಸಾದ ಜರುಗಲಿದ್ದು, ಇದೆ ಸಂದರ್ಭದಲ್ಲಿ 2024ನೇ ಸಾಲಿನ ಅಭಿನವ ರೇಣುಕ ಶ್ರೀ ಪ್ರಶಸ್ತಿ ರಾಜಕುಮಾರ ಬಿ.ಹಲಿಂಗೆ ಮು.ಆನಂದವಾಡಿ ಇವರಿಗೆ ನೀಡುವುದಕ್ಕೆ ನಿರ್ಧರಿಸಲಾಯಿತು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪಾ ಬಿರಾದಾರ, ಶರಣಬಸಪ್ಪಾ ಅಲಗೂಡೆ, ಶಿವಕುಮಾರ್ ಬಿರಾದಾರ, ಮಹಾದೇವ ಪಾಟೀಲ್, ಚನ್ನಬಸವ ಬಿರಾದಾರ, ವಿಜಯಕುಮಾರ್ ಸ್ವಾಮಿ, ರುದ್ರಮುನಿ ಹಿರೇಮಠ, ಶಿವಕುಮಾರ್ ಮುನ್ನೋಳ್ಳಿ ಮತ್ತಿತರಿದ್ದರು.

ಸಂಯುಕ್ತ ಕರ್ನಾಟಕ
ಮಂಗಳವಾರ 19 ಮಾರ್ಚ್ 2024
ಕಲಬುರಗಿ । KALABURAGI

Scanned with OKEN Scanner

ತ್ರಿಪುರಾಂತ ಸ್ವಾಮೀಜಿ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ

'ರಚನಾತ್ಮಕ ಕಾರ್ಯದಿಂದ ಸಮಾಜೋದ್ಧಾರ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ರಚನಾತ್ಮಕ ಕಾರ್ಯ ಕೈಗೊಂಡರೆ ಸಮಾಜದ ಉದ್ಧಾರ ಸಾಧ್ಯ ಎಂದು ಶಾಸಕ ಶರಣು ಸಲಗರ ಅಭಿಪ್ರಾಯಪಟ್ಟರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಗುರುವಾರ ನಡೆದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದಲ್ಲಿ ಅವರು ಮಾತನಾಡಿದರು.

ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಮಾತನಾಡಿ, 'ಮಠದ ಆವರಣದಲ್ಲಿ ಸಭಾಭವನ ನಿರ್ಮಾಣಕ್ಕೆ ನಾನು ಶಾಸಕನಿದ್ದಾಗ ₹ 75 ಲಕ್ಷ ನೀಡಿದ್ದೇನೆ. ಈಗಿನ ಶಾಸಕರು ₹ 20 ಲಕ್ಷ ಒದಗಿಸಬೇಕು. ಸ್ವಾಮೀಜಿಯವರು ಮೊಬೈಲ್ ಬಗ್ಗೆ ಜಾಗೃತಿ ಮೂಡಿಸಿದಂತೆ ಜನಪ್ರತಿನಿಧಿಗಳು ಸುಳ್ಳಾಡಬಾರದು ಎಂಬ ಅಭಿಯಾನವನ್ನೂ ಕೈಗೊಳ್ಳಬೇಕು' ಎಂದು ಕೋರಿದರು.

ಹಿರೇನಾಗಾಂವ ಜಯಶಾಂತಲಿಂಗ ಸ್ವಾಮೀಜಿ ಮಾತನಾಡಿ, 'ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪ್ರತಿ ಪಟ್ಟಾಧಿಕಾರ ಮಹೋತ್ಸವಕ್ಕೆ ವಿವಿಧ ರೀತಿಯ ಜಾಗೃತಿ ಅಭಿಯಾನ, ಪಾದಯಾತ್ರೆ ನಡೆಸುತ್ತಿರುವುದು ಶ್ಲಾಘನೀಯ' ಎಂದರು. ಚನ್ನಬಸವಾನಂದ ಸ್ವಾಮೀಜಿ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮುಖಂಡ ಧನರಾಜ ತಾಳಂಪಲ್ಲಿ ಮಾತನಾಡಿದರು.

ವಿವಿಧ ಕ್ಷೇತ್ರದ ಸಾಧಕರಾದ ರವಿ ನಾವದ್ಗೇಕರ್, ಶಿವಕುಮಾರ ಬಿರಾದಾರ, ಲೋಕೇಶ ಮೋಳಕೆರೆ, ಶ್ರೀನಿವಾಸ ಬಿರಾದಾರ, ವಿನೋದ ಬಡಿಗೇರ್, ಶಾಂತಯ್ಯ ಮಠಪತಿ, ಶರಣಬಸಪ್ಪ ದಂಡೆ, ಸಂಜಯ ರೋಹಿಲೆ, ಮಲ್ಲಿಕಾರ್ಜುನ ಹಾದಿಮನಿ, ಶಶಿಧರ ಪಾಟೀಲ, ಭೀಮರೆಡ್ಡಿ ಲಾಸನೆ ಅವರಿಗೆ ಗುರುರಕ್ಷೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ತಹಶೀಲ್ದಾರ್ ಶಿವಾನಂದ ಮೇತ್ರೆ, ಮುಖಂಡರಾದ ಮಾಲಾ ನಾರಾಯಣರಾವ್, ಪ್ರದೀಪ ವಾತಡೆ, ಅರ್ಜುನ ಕನಕ, ಲತಾ ಹಾರಕೂಡೆ, ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ಶಾಂತಲಿಂಗ ಮಠಪತಿ, ರಮೇಶ ರಾಜೋಳೆ ಉಪಸ್ಥಿತರಿದ್ದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಗುರುವಾರ ನಡೆದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು. ಶಾಸಕ ಶರಣು ಸಲಗರ ಇದ್ದರು

ಗುರುವಾರದ ಹವಾಮಾನ : ಗರಿಷ್ಠ 30° ಕನಿಷ್ಠ 22° ಪ್ರಜಾವಾಣಿ

ಅಭಿನವ ಘನಲಿಂಗ ಶ್ರೀ ನುಡಿ | ಗವಿ ಮಠದಲ್ಲಿ ಉಪನ್ಯಾಸ ಮಾಲೆ

ಭಗವಂತನ ಉಪಕಾರ ಸದಾ ಸ್ಮರಿಸಬೇಕು

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಭಗವಂತನ ಉಪಕಾರ ಸದಾ ಸ್ಮರಿಸಬೇಕು ಎಂದು ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್, ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ಆಶ್ರಯದಲ್ಲಿ ಶ್ರಾವಣ ಮಾಸದ ನಿಮಿತ್ತ ಸೋಮವಾರ ಸಂಜೆ ಗವಿಮಠದಲ್ಲಿ ಏರ್ಪಡಿಸಿದ್ದ ವೀರಶೈವ ಲಿಂಗಾಯತ ಧರ್ಮಗ್ರಂಥ ಸಿದ್ಧಾಂತ ಶಿಖಾಮಣಿ, ವಚನ ಸಾಹಿತ್ಯ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ನೇತೃತ್ವ ವಹಿಸಿದ್ದ ಅವರು, ಶಿವ ಪಥವ ಅರಿದೊಡೆ ಗುರುಪಥವೇ ಮೊದಲು. ನ ಗುರೋರ ಅಧಿಕಂ. ಭಕ್ತ ಮುಮುಕ್ಷುಗಳ ಬದುಕು ಹಸನಾಗಬೇಕು. ಸದೃಢ ಸಮಾಜ ನಿರ್ಮಾಣವಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಟಿಂಗಳಿಯ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಆಶೀರ್ವಚನ ನೀಡಿ, ಶ್ರೀ ಜಗದ್ಗುರು ಘನಲಿಂಗರು ಶಿವಶರಣರಿಗೆ ಇಷ್ಟಲಿಂಗ ದೀಕ್ಷೆ ಕೊಟ್ಟು ಮುಕ್ತಿ ಮಾರ್ಗ ತೋರಿದ ಮಹಾಮಹಿಮರು. ಶಕ್ತಿ ತೋರಿದ ಪವಾಡ ಪುರುಷರು. ಇವರು ಕಾಲಜ್ಞಾನಿಗಳೂ ಆಗಿದ್ದರು ಎಂದರು.

ಮುಖಂಡ ಲೋಕೇಶ ಮೊಳಕೇರೆ ಮಾತನಾಡಿ, ಗವಿಮಠದ ಅಭಿನವ ಶ್ರೀಗಳ ಸಮಾಜಮುಖಿ ಕಾರ್ಯಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರಮುಖರಾದ ಬಾಬುರಾವ ಚಳಕಾಪುರೆ, ಮಹಾಂತೇಶ ಸ್ವಾಮಿ ನಾರಾಯಣಪುರ, ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ರಮೇಶ ರಾಜೋಳೆ, ವಿಜಯಕುಮಾರ, ಸವಿತಾ ಸ್ವಾಮಿ, ಸುಭದ್ರಾಬಾಯಿ, ಮಡಿವಾಳಪ್ಪ ಕಲ್ಯಾಣ ಇತರರಿದ್ದರು. ಶಿವಕುಮಾರ ಮುನ್ನೊಳಿ ನಿರೂಪಣೆ ಮಾಡಿದರು. ಶಕುಂತಲಾ ಸ್ವಾಮಿ ಸ್ವಾಗತ ಗೀತೆ ಹಾಡಿದರು.



ವಿಜಯವಾಣಿ

ಬಸವಕಲ್ಯಾಣದ ಗವಿಮಠದಲ್ಲಿ ಏರ್ಪಡಿಸಿದ್ದ ಸಿದ್ಧಾಂತ ಶಿಖಾಮಣಿ, ವಚನ ಸಾಹಿತ್ಯ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಲೋಕೇಶ ಮೊಳಕೇರೆ ಅವರನ್ನು ಸನ್ಮಾನಿಸಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಬಾಬುರಾವ ಚಳಕಾಪುರೆ, ಮಹಾಂತೇಶ ಸ್ವಾಮಿ, ಬಸವಂತಪ್ಪ ಲವಾರೆ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಗುರುವಾರ 31 ಆಗಸ್ಟ್ 2023
31 AUGUST 2023

Scanned with OKEN Scanner

ತಡೋಳಾ ಶ್ರೀ ನುಡಿ | ಬಸವಕಲ್ಯಾಣದಲ್ಲಿ ಶೌರ್ಯ ಜಾಗರಣ ರಥಯಾತ್ರೆ ಕಾರ್ಯಕ್ರಮ

ಹಿಂದು ಧರ್ಮದ ಸಂಸ್ಕಾರ ಜಗತ್ತಿಗೆ ಮಾದರಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಹಿಂದು ಧರ್ಮದ ಸಂಸ್ಕಾರ ಜಗತ್ತಿಗೆ ಮಾದರಿಯಾಗಿದೆ. ಜಗತ್ತೇ ಅದಕ್ಕೆ ತಲೆ ಬಾಗ್ತುತ್ತಿದೆ. ಆದರೆ ಅದನ್ನು ನಮ್ಮವರೇ ಅತಿವೇಗದ ಜೀವನಕ್ಕೆ ಹೊಂದಿಕೊಂಡು ಮರೆಯುತ್ತಿದ್ದಾರೆ ಎಂದು ಶ್ರೀ ರಾಜೇಶ್ವರ ಶಿವಾಚಾರ್ಯರು ಕಳವಳ ವ್ಯಕ್ತಪಡಿಸಿದರು.

ವಿಶ್ವ ಹಿಂದು ಪರಿಷತ್, ಬಜರಂಗದಳ ಹಮ್ಮಿಕೊಂಡ ಶೌರ್ಯ ಜಾಗರಣ ರಥಯಾತ್ರೆಗೆ ಭಾನುವಾರ ಸಂಜೆ ಪಟ್ಟಣದಲ್ಲಿ ಅದ್ದೂರಿ ಸ್ವಾಗತದ ನಂತರ ಏರ್ಪಡಿಸಿದ್ದ ಸಮಾರಂಭದಲ್ಲಿ ಮಾತನಾಡಿದ ಅವರು, ಧರ್ಮ ಕಾರ್ಯಕ್ಕೆ ವಿಎಚ್‌ಪಿ, ಬಜರಂಗದಳ ಹಗಲಿರುಳು ಕೆಲಸ ಮಾಡುತ್ತಿವೆ. ಕೆಲ ರಾಜಕೀಯ ಇಚ್ಛಾಶಕ್ತಿಗಳಿಗೆ ಇದು ಸಹಿಸಲು ಆಗುತ್ತಿಲ್ಲ. ಆಡಳಿತ ವರ್ಗದ ಮೇಲೆ ಒತ್ತಡ ಹೇರಿ ಕಾರ್ಯಕರ್ತರ ವಿರುದ್ಧ ಎಷ್ಟೇ ದೂರು ದಾಖಲಿಸಿದರೂ ಎದೆಗುಂದದೆ ಪುಟಿದು ನಿಲ್ಲುತ್ತಿದೆ ಎಂದರು.

ಮುಚಳಂಬದ ಶ್ರೀ ಪ್ರಣವಾನಂದ ಸ್ವಾಮೀಜಿ ಮಾತನಾಡಿ, ಶೌರ್ಯಕ್ಕೆ ಧೈರ್ಯ ಬೇಕು. ಆ ಧೈರ್ಯ ಶೌರ್ಯ ವಿಶ್ವ ಹಿಂದು ಪರಿಷತ್, ಬಜರಂಗದಳ ಕಾರ್ಯಕರ್ತರಲ್ಲಿ ನೋಡಬಹುದು. ಸನಾತನದಿಂದಲೇ ನಾವು ಧರ್ಮದ ಹಾದಿಯಲ್ಲಿದ್ದೇವೆ ಎಂದು ನುಡಿದರು.

ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಬಜರಂಗದಳ ತಾಲೂಕು ಸಂಯೋಜಕ ರವಿ ನಾವದ್ಗೇಕರ್ ಸ್ವಾಗತಿಸಿದರು. ವಿಎಚ್‌ಪಿ ವಿಭಾಗ ಕಾರ್ಯದರ್ಶಿ ಶಿವರಾಜ ಸಂಗೋಳಗಿ, ಜಿಲ್ಲಾಧ್ಯಕ್ಷ ಸತೀಶ ನೌಬಾದೆ, ಕಾರ್ಯದರ್ಶಿ ಉಮಾಕಾಂತ ಮೇತ್ರೆ, ಉಪಾಧ್ಯಕ್ಷ ಅಶೋಕ ಮಾನೂರೆ, ತಾಲೂಕು ಅಧ್ಯಕ್ಷ ಶ್ರೀಶೈಲ ವಾತಡೆ, ಪ್ರಮುಖರಾದ ಶ್ರೀಕಾಂತ ಬಡದಾಳೆ, ಚನ್ನಪ್ಪ ರಾಜಾಪುರೆ, ಸಚಿನ್ ಗರುಡಕರ್; ವಿನೋದ ಬಡಗೇಕರ್, ಸಚಿನ್ ಸೂರ್ಯವಂಶಿ, ಸೋಮನಾಥ ನಾವದ್ಗೇಕರ್, ಸ್ನೇಮ ಮುಜನಾಯಕ, ಸುರೇಶ ಜಮ್ಮು, ಸಂಜುಕುಮಾರ ಪೂಜಾರಿ, ಶ್ರೀಧರ ಮುತ್ತೆ, ನಿತಿನ್ ಸೂರ್ಯವಂಶಿ, ಅಜಯ ಗೌಳಿ, ನಾಗೇಶ ಭಂಡಾರಿ, ಓಂಕಾರ ಕಾಂಬಳೆ, ವಿಶಾಲ ಮುಜನಾಯಕ, ರೋಹಿತ ವಿಶ್ವಕರ್ಮ ಇತರರಿದ್ದರು. ರಮೇಶ ರಾಜೋಳೆ ನಿರೂಪಣೆ ಮಾಡಿದರು. ಶ್ರೀನಿವಾಸ ಬಿರಾದಾರ ವಂದಿಸಿದರು.


ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ವಿಶ್ವ ಹಿಂದು ಪರಿಷತ್, ಬಜರಂಗದಳ ಹಮ್ಮಿಕೊಂಡ ಶೌರ್ಯ ಜಾಗರಣ ರಥಯಾತ್ರೆ ಸಮಾರಂಭವನ್ನು ಶ್ರೀ ರಾಜೇಶ್ವರ ಶಿವಾಚಾರ್ಯರು, ಶ್ರೀ ಪ್ರಣವಾನಂದ ಸ್ವಾಮೀಜಿ ಉದ್ಘಾಟಿಸಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸಂಗೋಳಗಿ, ಸತೀಶ ನೌಬಾದೆ, ಶ್ರೀಕಾಂತ ಬಡದಾಳೆ, ರವಿ ನಾವದ್ಗೇಕರ್, ಶ್ರೀಶೈಲ ವಾತಡೆ, ಚನ್ನಪ್ಪ ರಾಜಾಪುರೆ ಇತರರಿದ್ದರು.

ಅದ್ದೂರಿ ಸ್ವಾಗತ: ತಡೋಳಾ ಗುರುಕುಲಾಶ್ರಮದಲ್ಲಿ ಪೂಜೆ ನೆರವೇರಿಸಿದ ಶ್ರೀ ರಾಜೇಶ್ವರ ಶಿವಾಚಾರ್ಯರು ಯಾತ್ರೆಗೆ ಚಾಲನೆ ನೀಡಿದರು. ಸಸ್ತಾಪುರ ಬಂಗ್ಲಾ ಮಹಾದ್ವಾರ ಬಳಿ ಅದ್ದೂರಿ ಸ್ವಾಗತ ಕೋರಲಾಯಿತು. ಜೈಘೋಷಗಳೊಂದಿಗೆ ಬೈಕ್ ರ‍್ಯಾಲಿ ಮೂಲಕ ಬಿಕೆಡಿಬಿ ಕಲ್ಯಾಣ ಮಂಟಪಕ್ಕೆ ಯಾತ್ರೆ ತಲುಪಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 3 ಅಕ್ಟೋಬರ್ 2023
3 OCTOBER 2023

ಡಾ.ವೆಂಕಟರೆಡ್ಡಿ ಅಭಿಪ್ರಾಯ | ಕಲ್ಯಾಣದಲ್ಲಿ ಸುರಗಿರಿ ಗ್ರಂಥ ಲೋಕಾರ್ಪಣೆ

ಪತ್ರಿಕೋದ್ಯಮಕ್ಕೆ ಸಾಹಿತ್ಯ ಸಂಸ್ಪರ್ಶ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಪತ್ರಿಕೋದ್ಯಮಕ್ಕೆ ಸಾಹಿತ್ಯ ಸಂಸ್ಪರ್ಶ ಅವಶ್ಯಕ ಎಂದು ತುಮಕೂರು ವಿಶ್ವವಿದ್ಯಾಲಯದ ವಿಜ್ಞಾನ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ವೆಂಕಟರೆಡ್ಡಿ ರಾಮರೆಡ್ಡಿ ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಪರಿಷತ್, ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್, ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ಹಾಗೂ ಅಭಿನವ ಶ್ರೀ ಪ್ರಕಾಶನ ಸಹಯೋಗದಡಿ ಶ್ರಾವಣ ಮಾಸ ನಿಮಿತ್ತ ಗುರುವಾರ ಸಂಜೆ ಏರ್ಪಡಿಸಿದ್ದ ಸಿದ್ಧಾಂತ ಶಿಖಾಮಣಿ, ವಚನ ಸಾಹಿತ್ಯ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ 'ಸುರಗಿರಿ' ಗ್ರಂಥ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

ಸಾಹಿತ್ಯ, ಪತ್ರಿಕೋದ್ಯಮ ಜತೆಗೆ ಚಳವಳಿ ಸೇರಿ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಡಾ.ನಾಗರಾಜ ಅವರ ಬರಹ ಮತ್ತು ವೈಚಾರಿಕ ಲೇಖನಗಳ ಸಂಕಲನ ಮಾನವೀಯತೆ ಮತ್ತು ಸಮಕಾಲಿನ ವಾಸ್ತವ ಬಿಂಬಿಸುತ್ತದೆ. ಪುಸ್ತಕ, ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೂ ಮಾರ್ಗದರ್ಶಿಯಾಗಿದೆ ಎಂದರು.

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಸಾಹಿತ್ಯ ಸಂಸ್ಕೃತಿ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಬೆಳೆಸಬೇಕು. ಗವಿಮಠದ ಕುರಿತು ಸಾಹಿತಿ ವೀರಶೆಟ್ಟಿ ಪಾಟೀಲ್ ಮೂರು ಪುಸ್ತಕ ಬರೆದಿದ್ದು, ಮಠದಿಂದ ಪ್ರಕಟಿಸಲಾಗಿದೆ ಎಂದು ತಿಳಿಸಿದರು.

ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಮಾರ್ತಂಡ ಜೋಶಿ ಮಾತನಾಡಿ, ಸಮಾಜದಲ್ಲಿ ಪರಿವರ್ತನೆ ತರುವ ಶಕ್ತಿ ಸಾಹಿತ್ಯಕ್ಕಿದೆ. ಯುವ ಸಮೂಹ ಪುಸ್ತಕ, ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ ಮಾತನಾಡಿ, ಪರಿಷತ್‌ನಿಂದ ಪ್ರೌಢ ಶಾಲೆಯಲ್ಲಿ ಸಾಹಿತ್ಯ ಕಾರ್ಯಕ್ರಮ ಆಯೋಜಿಸಲು ಯೋಜನೆ ರೂಪಿಸಲಾಗುತ್ತಿದೆ ಎಂದರು.

ಹಿಂದುಳಿದ ವರ್ಗಗಳ ತಾಲೂಕು ಕಲ್ಯಾಣಾಧಿಕಾರಿ ವಿ.ಬಿ. ಹಿರೇಗೌಡರ್ ಮಾತನಾಡಿದರು. ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವೀರಶೆಟ್ಟಿ ಪಾಟೀಲ್, ಪ್ರೊ.ಶಂಕರ ಕರುಣೆ, ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ, ನಾಗಪ್ಪ ನಿಣ್ಣೆ, ಧನರಾಜ ರಾಜೋಳೆ, ಸೂರ್ಯಕಾಂತ ಪಾಟೀಲ್, ನಾಗೇಂದ್ರ ಬಿರಾದಾರ, ಎ.ಜಿ. ಪಾಟೀಲ್, ಸವಿತಾ ಸ್ವಾಮಿ, ಗೋವಿಂದರೆಡ್ಡಿ ಇತರರಿದ್ದರು.

ಶರಣಬಸಪ್ಪ ಅಲಗೂಡೆ ಪ್ರಾರ್ಥಿಸಿದರು. ಮಲ್ಲಿಕಾರ್ಜುನ ಅಲಗೂಡೆ ಸ್ವಾಗತಿಸಿದರು. ನಿತೀನ್ ನೀಲಕಂಠ ವಂದಿಸಿದರು. ರಮೇಶ ರಾಜೋಳೆ ನಿರೂಪಣೆ ಮಾಡಿದರು.


ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಗುರುವಾರ ಸಂಜೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸುರಗಿರಿ ಗ್ರಂಥವನ್ನು ಡಾ.ವೆಂಕಟರೆಡ್ಡಿ ಲೋಕಾರ್ಪಣೆಗೊಳಿಸಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಾಂತಲಿಂಗ ಮಠಪತಿ, ವಿ.ಬಿ. ಹಿರೇಗೌಡರ್, ಮಾರ್ತಂಡ ಜೋಶಿ, ಬಸವಂತಪ್ಪ ಲವಾರೆ, ಶರಣಪ್ಪ ಬಿರಾದಾರ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 26 ಆಗಸ್ಟ್ 2023
26 AUGUST 2023

Scanned with OKEN Scanner

'ಜ್ಞಾನದ ಬೀಡಿನ ಊರು ಬಸವಕಲ್ಯಾಣ'

ಅಭಿನಂದನಾ ಸಮಾರಂಭದಲ್ಲಿ ನಟ–ನಿರ್ದೇಶಕ ಎಸ್.ನಾರಾಯಣ ಹೇಳಿಕೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಕಲ್ಯಾಣವು ಜ್ಞಾನದ ಬೀಡಿನ ಊರಾಗಿದ್ದು ಇದರ ಮಹತ್ವ ಇನ್ನಷ್ಟು ಪ್ರಸಾರವಾಗುವ ಅಗತ್ಯವಿದೆ' ಎಂದು ನಟ-ನಿರ್ದೇಶಕ ಎಸ್. ನಾರಾಯಣ ಹೇಳಿದ್ದಾರೆ.

ನಗರದ ಗವಿಮಠದಲ್ಲಿ ಕೇಂದ್ರ ಸಂಸ್ಕೃತಿ ಸಚಿವಾಲಯ, ಜಗದ್ಗುರು ಪಂಚಾಚಾರ್ಯ ಯುವಕ ಸಂಘ ಮತ್ತು ಘನಲಿಂಗ ರುದ್ರಮುನಿ ಶಿವಾಚಾರ್ಯ ಟ್ರಸ್ಟ್‌ದಿಂದ ಶುಕ್ರವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭ ಮತ್ತು ಲಂಬಾಣಿ ಜಾನಪದ ಉತ್ಸವ ಹಾಗೂ ವಿಚಾರ ಸಂಕಿರಣದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಈ ಭಾಗದ ಸಂಸ್ಕೃತಿ ಕಲೆ ಉತ್ತಮವಾಗಿದೆ. ಈ ಸಂಪ್ರದಾಯದ ಕುರಿತಾಗಿ ಚಿತ್ರ ನಿರ್ಮಿಸುವ ಉದ್ದೇಶವಿದೆ. ಹೊಸ ಪ್ರತಿಭೆಗಳನ್ನು ಗುರುತಿಸುವುದು ನನ್ನ ನಿರಂತರ ಕಾರ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರಯತ್ನಿಸುತ್ತೇನೆ. ಯುವಕರು ವಿದ್ಯೆಯೊಂದಿಗೆ ಸಂಸ್ಕಾರ ಕಲಿಯಬೇಕಾಗಿದೆ' ಎಂದರು.



ಬಸವಕಲ್ಯಾಣದಲ್ಲಿ ಶುಕ್ರವಾರ ನಟ ನಿರ್ದೇಶಕ ಎಸ್.ನಾರಾಯಣ ಅವರನ್ನು ಸನ್ಮಾನಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಾಸಕ ಶರಣು ಸಲಗರ ಇದ್ದರು

ಶಾಸಕ ಶರಣು ಸಲಗರ, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಧನರಾಜ ತಾಳಂಪಳ್ಳಿ, ಶಿವಯ್ಯ ಸ್ವಾಮಿ, ಲೋಕೇಶ ಮೋಳಕೆರೆ, ಶಿವು ಮಠಪತಿ ನಾರಾಯಣಪುರ ಮಾತನಾಡಿದರು. ಮುಖಂಡರಾದ ಅರ್ಜುನ ಕನಕ, ಮನೋಹರ ಮೈಸೆ, ಶರಣಪ್ಪ ಬಿರಾದಾರ, ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವರಾಜ ಸ್ವಾಮಿ ತ್ರಿಪುರಾಂತ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶಾಂತಲಿಂಗ ಮಠಪತಿ, ಸೂರ್ಯಕಾಂತ ಪಾಟೀಲ, ರಾಚಯ್ಯ ಮಠಪತಿ, ಬಸವರಾಜ ಸೇರಿ, ರಾಹುಲ್ ತೂತಾರೆ, ಓಂಪ್ರಕಾಶ ರೊಟ್ಟೆ, ಕಾಶಿನಾಥ ಹಿರೇಮಠ ಉಪಸ್ಥಿತರಿದ್ದರು.

ವಿವಿಧ ತಂಡಗಳಿಂದ ಲಂಬಾಣಿ ನೃತ್ಯ ನಡೆಯಿತು.

ಪ್ರಜಾವಾಣಿ ಶನಿವಾರ • ಜನವರಿ 27, 2024

ಅನ್ನ, ನೀರು, ಸುಭಾಷಿತ ಮೂರು ರತ್ನಗಳು

ಸಿದ್ಧಾಂತ ಶಿಖಾಮಣಿ, ವಚನ ಸಾಹಿತ್ಯ ಉಪನ್ಯಾಸದಲ್ಲಿ ರುದ್ರಮುನಿ ಶಿವಾಚಾರ್ಯರು

• ಕನ್ನಡಪ್ರಭ ವಾರ್ತೆ. ಬಸವಕಲ್ಯಾಣ

ಅನ್ನ, ನೀರು, ಸುಭಾಷಿತ ಎಂಬುವವು ಶ್ರೇಷ್ಠ ಮೂರು ರತ್ನಗಳುಎಂದುಜಗದಪ್ರಥಮಜಗದ್ಗುರುರೇಣುಕಾಚಾರ್ಯರು ತಮ್ಮ ಸಿದ್ಧಾಂತ ಶಿಖಾಮಣಿಯ ಮೂಲಕ ಮನುಕುಲಕ್ಕೆಬೋಧಿಸಿದ್ದಾರೆಎಂದುಸಂಸ್ಥಾನಗವಿಮಠದ ಡಾ. ಅಭಿನವಘನಲಿಂಗರುದ್ರಮುನಿಶಿವಾಚಾರ್ಯರು ನುಡಿದರು.

ಪ್ರತಿವರ್ಷದಂತೆ ಪವಿತ್ರ ಶ್ರಾವಣ ಮಾಸದ ನಿಮಿತ್ತ ಸೋಮವಾರ ಸಂಜೆ ನಗರದ ಇತಿಹಾಸ ಪ್ರಸಿದ್ಧ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕದ ಸಹಯೋಗದಲ್ಲಿ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಎರಡನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯ ಕ್ರಮದ ಸಾನಿಧ್ಯ ವಹಿಸಿ ಭಕ್ತರಿಗೆ ಉಪದೇಶ ನೀಡಿದರು.

ನಮ್ಮ ನುಡಿಗಳು ಹಿತವಾಗಿದ್ದು ರತ್ನಕ್ಕೆ ಸಮಾನವಾದ ಶ್ರೇಷ್ಠ ಮಟ್ಟದ್ದಾಗಿರಬೇಕು ಎಂದರು. ಅದೇ ರೀತಿ ಬಸವಣ್ಣನವರು ನುಡಿದರೆ ಮುತ್ತಿನ ಹಾರದಂತಿರಬೇಕು ಎಂದು ತಮ್ಮ ವಚನದ ಮೂಲಕ ಸಾರಿದ್ದಾರೆ.

ಡಾ. ಬಾಲಕೃಷ್ಣ ರಾಠೋಡ ಸರಳ ಸಜ್ಜನಿಕೆ ಉಳ್ಳವರಾ ಗಿದ್ದು, ಸದಾ ಸಮಾಜ ಮುಖಿಯಾಗಿ ಜನರ ಆರೋಗ್ಯ ಕಾಪಾಡುವಲ್ಲಿ ಅವರ ನಿರಂತರ ಸೇವೆ



ಬಸವಕಲ್ಯಾಣದ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸದಲ್ಲಿ ಡಾ. ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಸ್ಮರಣೀಯವಾಗಿದೆ. ಜೊತೆಗೆ ಅವರು ನಮ್ಮ ಮೇಲೆ ಅಪಾರ ಭಕ್ತಿ ಹೊಂದಿ ಸಂಸ್ಥಾನ ಗವಿಮಠಕ್ಕೆ ನಿರಂತರ ಸೇವೆ ಸಲ್ಲಿಸುತ್ತಿರುವುದು ಸಂತಸದ ಸಂಗತಿ. ಯುವ ಮುಖಂಡ ಶಿವಕುಮಾರ ಬಿರಾದಾರ ಅವರು ನಮ್ಮ ಮೇಲೆ ಅಪಾರ ಭಕ್ತಿ ಹೊಂದಿ ಹೊಸ ಚಿಂತನೆಗಳ ಮೂಲಕ ರಾಜಕೀಯ, ಸಾಮಾಜಿಕ ಸೇವೆಯಲ್ಲಿ ತೊಡಗಿದ್ದಾರೆ ಎಂದರು.

ರಾಜೇಶ್ವರದ ವೈದ್ಯಾಧಿಕಾರಿ ಡಾ. ಬಾಲಕೃಷ್ಣ ರಾಠೋಡ ಅವರು ಆರೋಗ್ಯದ ಕುರಿತು ಮಾತನಾಡಿ, ಇಂದು ಬಹಳಷ್ಟು ಜನರು ಆಹಾರ ಸೇವನೆ ವಿಧಾನ ಗೊತ್ತಿಲ್ಲದೇ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ನಿಯಮಿ ತವಾಗಿ ಹಿತವಾದ ಆಹಾರ ಸೇವನೆಯಿಂದ ಸಮಸ್ಯೆಗಳನ್ನು ನಿವಾರಿಸಿಕೊಂಡು ಆರೋಗ್ಯವಂತರಾಗಿ ಬದುಕು ನಡೆಸಬಹುದು ಎಂದು ನುಡಿದರು.

ಸಾಧನೆಗೈದ ವೈಷ್ಣವಿ ವಿಠಲ ಯದಲಾಪುರ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು. ಹಿರಿಯರಾದ ಮಲ್ಲಿಕಾ ರ್ಜುನ ಆಲಶೆಟ್ಟಿ, ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಅಧ್ಯಕ್ಷತೆ ವಹಿಸಿದ್ದರು. ಮಲ್ಲಯ್ಯ ಹಿರೇಮಠ ಧನ್ನೂರ, ಮುಖ್ಯ ಗುರು ರಮೇಶ ರಾಜೋಳೆ, ಪ್ರೊ.ರುದ್ರೇಶ್ವರ ವಿರೂಪಾಕ್ಷ ಸ್ವಾಮಿ ಇದ್ದರು.

ಈ ಸಂದರ್ಭದಲ್ಲಿ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಎ.ಜಿ ಪಾಟೀಲ್, ಕಸಾಪ ಅಧ್ಯಕ್ಷ ಶಾಂತ ಲಿಂಗ ಮಠಪತಿ, ಮಲ್ಲಿಕಾರ್ಜುನ ಅಲಗುಡೆ, ಶಿವಕು ಮಾರ್ ಪರ್ತಾಪೂರೆ, ಮಹಾನಂದಾ, ಶಕುಂತಲಾ, ರಾಚಮ್ಮಾ, ಕಲಾವತಿ ಮಠಪತಿ, ಸವಿತಾ ಸ್ವಾಮಿ, ಪೂರ್ಣಿಮಾ ರುದ್ರೇಶ, ಸುಭದ್ರಾಬಾಯಿ, ಪಾರ್ವತಿ ರೋಜೆ, ಸತ್ಯವತಿ ಬಾಬು ಸ್ವಾಮಿ, ಶಾಂತಾಬಾಯಿ, ಮಯೂರಿ, ವೈಷ್ಣವಿ ಇನ್ನಿತರರು ಇದ್ದರು.

ಕನ್ನಡಪ್ರಭ
ಬುಧವಾರ 23.8.2023

Scanned with OKEN Scanner

ಸಾತ್ವಿಕ ಪ್ರಶಸ್ತಿ ಪ್ರದಾನ | ಸಾಹಿತಿ ವಿರಶೆಟ್ಟಿ ಪಾಟೀಲ್‌ರ ಕವನ ಸಂಕಲನ ಬಿಡುಗಡೆ

ಸಾಹಿತ್ಯಕ್ಕಿದೆ ಸಮಾಜ ಪರಿವರ್ತನೆ ಶಕ್ತಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಸಮಾಜದಲ್ಲಿ ಪರಿವರ್ತನೆ ತರುವ ಶಕ್ತಿ ಸಾಹಿತ್ಯಕ್ಕಿದ್ದು, ಮಕ್ಕಳಲ್ಲಿ ಸಾಹಿತ್ಯದ ಬಗ್ಗೆ ಆಸಕ್ತಿ ಬೆಳೆಸುವ ಕೆಲಸ ನಿರಂತರವಾಗಿ ನಡೆಯಬೇಕು ಎಂದು ಇಲ್ಲಿಯ ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಅಭಿನವ ಶ್ರೀಪ್ರಕಾಶನ ಹಾಗೂ ಪ್ರತಿಮಾ ಪ್ರಕಾಶನ ಸಹಯೋಗದಲ್ಲಿ ಇಲ್ಲಿನ ಗವಿ ಮಠದಲ್ಲಿ ಆಯೋಜಿಸಲಾಗಿದ್ದ ಸಾತ್ವಿಕ್ ಪ್ರಶಸ್ತಿ ಪ್ರದಾನ ಹಾಗೂ ಸಾಹಿತಿ ವೀರಶೆಟ್ಟಿ ಪಾಟೀಲ್ ಅವರ ಸ್ವರಚಿತ ಕವನ ಸಂಕಲನ ಕಲಿಯುಗ ಮುಗಿಯುವ ಮುನ್ನ ಮತ್ತು ಫೋಟೋಗ್ರಾಫಿ ಸಂಪಾದಿತ ಕವನ ಸಂಕಲನ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿ, ಕಲೆಯಲ್ಲಿ ಅದ್ಭುತ ಶಕ್ತಿ ಅಡಗಿದ್ದು, ಒಂದು ಚಿತ್ರ ಅಥವಾ ಕಲಾಕೃತಿ ಸಾವಿರ ಪದಗಳಿಗೆ ಸಮ ಎಂದರು.

ಫೋಟೋಗ್ರಾಫಿ ಪುಸ್ತಕ ಬಿಡುಗಡೆ ಮಾಡಿದ ಕೇಂದ್ರ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಕಲಬುರಗಿಯ ಮೊಹಮ್ಮದ್ ಆಯಾಜೋದ್ದಿನ್ ಪಟೇ ಲ್ ಮಾತನಾಡಿದರು. ಪ್ರೊ.ವೆಂಕಣ್ಣ ಡೊಣ್ಣೇಗೌಡರು ಎರಡು ಪುಸ್ತಕಗಳ ಪರಿಚಯ ಮಾಡಿ ಮಾತನಾಡಿದರು. ಹುಲಸೂರ ತಹಸೀಲ್ದಾರ ಶಿವಾನಂದ ಮೇತ್ರೆ ಉದ್ಘಾಟನಾ ಭಾಷಣ ಮಾಡಿದರು. ಸಾತ್ವಿಕ್ ವಿ. ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಿದರು.

ಬೀದರ್‌ನ ನಿವೃತ್ತ ಪ್ರಾಚಾರ್ಯ ಶಿವಶಂಕರ ಟೋಕರೆ, ಶಿಕ್ಷಕಿ ಪ್ರತಿಮಾ ಪಾಟೀಲ್, ಪ್ರತಿಮಾ ಪ್ರಕಾಶನದ ಅಧ್ಯಕ್ಷ ವೀರಶೆಟ್ಟಿ ಪಾಟೀಲ್, ಪ್ರಮುಖರಾದ ಬಸವಂತಪ್ಪಲವಾರೆ, ತುಳಸಿರಾಮ ತುಮಬಾರೆ, ವೀರಣ್ಣ ಶೀಲವಂತ, ನಾಗಪ್ಪ ನಿಣ್ಣೆ ವಿರಶೆಟ್ಟಿ ಮಲಶೆಟ್ಟಿ ಚಂದ್ರಕಾಂತ ಜೋಕಾರೆ, ಶಶಿಧರ ಪಾಟೀಲ್, ಶಿವಕುಮಾರ ಸ್ವಾಮಿ ಉಪಸ್ಥಿತರಿದ್ದರು. ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು.ನಗರ ಘ ಟಕದ ಅಧ್ಯಕ್ಷ ನೀತಿನ ನೀಲಕಂಠೆ ನಿರೂಪಿಸಿದರು.



ಬಸವಕಲ್ಯಾಣ ಕಸಾಪ, ಅಭಿನವಶ್ರೀ ಪ್ರಕಾಶನ ಹಾಗೂ ಪ್ರತಿಮಾ ಪ್ರಕಾಶನ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಾದ ಉದಯಕುಮಾರ ಮುಳೆ, ಶಿವರಾಜ ಮೇಕಾಲೆ, ವಿಠ್ಠಲ ಜಾಧವ, ಸೈಯದ ಆಕ್ಟರ್‌ಅಲಿ, ರಮೇಶ ಗರುಡಕರ್, ಬಲವಂತ ಚಾಕೂರೆ ಅವರಿಗೆ ಸಾತ್ವಿಕ್ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

> ರಾಜ್ಯದಲ್ಲಿಯೇ ಮೊದಲು, ಕಲಾವಿದರು, ಸಾಹಿತಿಗಳು ಹಾಗೂ ಕವಿಗಳಿಂದ ಬರೆದ ವಿಶಿಷ್ಟವಾದ ಕವನಗಳನ್ನು ಸಂಪಾದಿಸಿ ಕೃತಿ ರೂಪದಲ್ಲಿ ಹೊರ ತಂದಿರುವ ವೀರಶೆಟ್ಟಿ ಪಾಟೀಲ್‌ರ ಕಾರ್ಯ ಶ್ಲಾಘನೀಯ.
>
> **- ಸುರೇಶ ಚನ್ನಶೆಟ್ಟಿ**
> ಜಿಲ್ಲಾಧ್ಯಕ್ಷರು,ಕಸಾಪ ಬೀದರ್.

ಪ್ರಶಸ್ತಿ: ಪತ್ರಕರ್ತ ಉದಯಕುಮಾರ ಮುಳೆ, ಫೋಟೋಗ್ರಾಫರ್ ಶಿವರಾಜ ಮೇಕಾಲೆ, ಚಿತ್ರ ಕಲಾವಿದ ವಠ್ಠಲ ಜಾಧವ,ಯುಟ್ಯೂಬ್ ಚನಾಲ್ ಸೈಯದ್ ಆಕ್ಟರ್‌ಅಲಿ, ಸಂಗೀತಗಾರ ರಮೇಶ ಗರುಡಕರ್,ನಿವೃತ್ತ ಶಿಕ್ಷಕ ಬಲವಂತ ಚಾಕೂರೆ ಅವರಿಗೆ ಸಾತ್ವಿಕ ಪ್ರಶಸ್ತಿ ಪ್ರದಾನ ಮಾಡಿ ಗೌರವಿ ಸಲಾಯಿತು.

ವಿಜಯ ಕರ್ನಾಟಕ VK ಕಲಬುರಗಿ, ಗುರುವಾರ,4 ಜನವರಿ 2024,

ಶ್ರೀ ಶ್ರೀನಿವಾಸ ಮಹಾಸ್ವಾಮೀಜಿ ಬಣ್ಣನೆ | ಬಸವಕಲ್ಯಾಣದಲ್ಲಿ ಶ್ರೀ ಮೌನೇಶ್ವರರ ಜಾತ್ರೋತ್ಸವ

ಕಾಯಕಕ್ಕೆ ವಿಶ್ವಕರ್ಮ ಸಮಾಜ ಮಹತ್ವ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಕಾಯಕಕ್ಕೆ ಮಹತ್ವ ನೀಡಿ, ಕಾಯಕವೇ ಉಸಿರಾಗಿಸಿಕೊಂಡು ಬದುಕುವ ವಿಶ್ವಕರ್ಮ ಸಮಾಜ ಸ್ವಾಭಿಮಾನದ ಸಮಾಜ ಎಂದು ವಿಶ್ವಕರ್ಮ ಏಕದಂಡಗಿ ಮಠದ ಶ್ರೀ ಶ್ರೀನಿವಾಸ ಮಹಾಸ್ವಾಮೀಜಿ ನುಡಿದರು.

ನಗರದ ಸರ್ವೋದಯ ಕಾಲನಿಯ ಶ್ರೀ ಮೌನೇಶ್ವರ ದೇವಸ್ಥಾನದಲ್ಲಿ ಸದ್ಗುರು ಶ್ರೀ ಮೌನೇಶ್ವರರ 14ನೇ ವರ್ಷದ ಜಾತ್ರೋತ್ಸವ ನಿಮಿತ್ತ ಗುರುವಾರ ಆಯೋಜಿಸಲಾಗಿದ್ದ ಧರ್ಮಸಭೆಯಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ನಗರದಲ್ಲಿ ಮೌನೇಶ್ವರರ ಭಾವಚಿತ್ರದ ಅದ್ದೂರಿ ಮೆರವಣಿಗೆ ನಡೆದಿರುವದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಾಡಿನ ತುಂಬೆಲ್ಲ ಸಂಚರಿಸಿದ್ದ ಭ್ರಹ್ಮಲೀನ ಶ್ರೀ ಗುರುನಥೇಂದ್ರ ಸರಸ್ವತಿ ಸ್ವಾಮೀಜಿ ಅವರು ವಿಶ್ವಕರ್ಮ ಸಮಾಜದ ಜನರು ಯಾವ ರೀತಿಯಲ್ಲಿ ಬದುಕಬೇಕು. ಸಮಾಜ ಹೇಗೆ ಸಂಘಟಿತಗೊಳಿಸಬೇಕು ಎಂಬ ಪ್ರಜ್ಞೆ ಸಮಾಜದ ಜನರಲ್ಲಿ ಬಿತ್ತಿದ್ದಾರೆ. ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಸಮಾಜದ ಜನರು ಮುಂದೆ ಸಾಗುತ್ತಿದ್ದಾರೆ ಎಂದು ಹೇಳಿದರು.

ನಿಮ್ಮ ವೈಯಕ್ತಿಕ ಭಿನ್ನಾಭಿಪ್ರಾಯಗಳು ಬದಿಗಿಟ್ಟು ಸಮಾಜದ ಜನರು ಒಂದಾಗಿರಬೇಕು. ಮಹಿಳೆಯರು ಗಾಯತ್ರಿ ಮಹಿಳಾ ಸಂಘ ರಚಿಸಿ ಮುಂದೆ ಸಾಗಬೇಕು. ಪರುಷರು ಕೂಡವ ವಿಶ್ವಕರ್ಮ ಸಮಾಜದ ಸಂಘ ರಚಿಸಿಕೊಂಡು ಸಮಾಜ ಇನ್ನಷ್ಟು ಸಂಘಟಿಸಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ತ್ರೀಪುರಾಂತನ ಗವಿ ಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಮೌನೇಶ್ವರರ ಜಾತ್ರೋತ್ಸವ ಭಾವೈಕ್ಯತೆಯ ಮಹೋತ್ಸವವಾಗಿದೆ. ಇಲ್ಲಿ ಪಲ್ಲಕ್ಕಿ, ಸಂಗೀತ ದರ್ಬಾರ ಹಾಗೂ ಅನುಭವದ ಮೂಲಕ ಸಮಾಜದವರು ಜಾತ್ರೆ ಮಾಡುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.



ಸದ್ಗುರು ಶ್ರೀ ಮೌನೇಶ್ವರರ ಜಾತ್ರೋತ್ಸವ ನಿಮಿತ್ತ ಬಸವಕಲ್ಯಾಣದ ಶ್ರೀ ಮೌನೇಶ್ವರ ದೇವಸ್ಥಾನದಲ್ಲಿ ಗುರುವಾರ ಆಯೋಜಿಸಿದ್ದ ಧರ್ಮಸಭೆಯನ್ನು ಪೂಜ್ಯರು ಉದ್ಘಾಟಿಸಿದರು. ಶ್ರೀ ಶ್ರೀನಿವಾಸ ಮಹಾಸ್ವಾಮೀಜಿ, ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಸಿದ್ಧೇಶ್ವರ ಶಿವಾಚಾರ್ಯರು, ಪ್ರೊ.ಸೂರ್ಯಕಾಂತ ಶೀಲವಂತ, ನಿರ್ಮಲಾ ಶಿವಣಕರ ಇತರರಿದ್ದರು.

ತೆರೆದ ವಾಹನದಲ್ಲಿ ಪಲ್ಲಕ್ಕಿ ಮೆರವಣಿಗೆ

ಶ್ರೀ ಮೌನೇಶ್ವರ ದೇವಸ್ಥಾನದಿಂದ ಹರಳಯ್ಯ ವೃತ್ತ, ಗದ್ದುಗಿ ಮಠ, ಬಸವೇಶ್ವರ, ಅಂಬೇಡ್ಕರ್ ವೃತ್ತ ಮೂಲಕ ಮುಖ್ಯ ರಸ್ತೆ ಮಾರ್ಗವಾಗಿ ದೇವಸ್ಥಾನವರೆಗೆ ತೆರೆದ ವಾಹನದಲ್ಲಿ ಶ್ರೀ ಮೌನೇಶ್ವರ ಭಾವಚಿತ್ರದೊಂದಿಗೆ ಪಲ್ಲಕ್ಕಿ ಮೆರವಣಿಗೆ ನಡೆಯಿತು. ಕುಂಭ ಕಳಸ ಹೊತ್ತ ಮಹಿಳೆಯರು ಶ್ರದ್ಧಾ ಭಕ್ತಿಯೊಂದಿಗೆ ಹೆಜ್ಜೆ ಹಾಕಿದರು. ಪುರವಂತರು, ಡೊಳ್ಳು ಕಲಾವಿದರ ಪ್ರದರ್ಶನ ಗಮನ ಸೆಳೆಯಿತು.



ಬಸವಕಲ್ಯಾಣದಲ್ಲಿ ಶ್ರೀ ಮೌನೇಶ್ವರರ ಭಾವಚಿತ್ರ ಹಾಗೂ ಪಲ್ಲಕ್ಕಿ ಮೆರವಣಿಗೆ ಜರುಗಿತು.

ಶೀಲವಂತ ಅಕ್ಯಸಾಲಿಗ ಸಮಾಜದ ತಾಲೂಕು ಅಧ್ಯಕ್ಷ ಪ್ರೊ. ಸೂರ್ಯಕಾಂತ ಶೀಲವಂತ, ನಗರ ಸಭೆ ಸದಸ್ಯೆ ನಿರ್ಮಲಾ ಶಿವಣಕರ, ಗೋಲ್ಡ್ ಮಾರ್ಕೆಟ್ ಅಧ್ಯಕ್ಷ ಬಾಳಾಸಾಹೇಬ ಕುಲಕರ್ಣಿ, ಬಾಬುರಾವ ಚಿಮ್ಮಕೋಡ ಮಾತನಾಡಿದರು. ಹಿರನಾಗಾಂವನ ಶ್ರೀ ಜಯಶಾಂತಲಿಂಗ ಮಹಾಸ್ವಾಮೀಜಿ, ಸಸ್ತಾಪುರನ ಶ್ರೀ ಸದಾನಂದ ಅಪ್ಪಗಳು, ಖೇಳಗಿಯ ಶ್ರೀ ಶಿವಲಿಂಗೇಶ್ವರ ಮಹಾಸ್ವಾಮೀಜಿ, ಶ್ರೀ ಸಿದ್ಧೇಶ್ವರ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಈರಣ್ಣ ಎಸ್. ಪಂಚಾಳ ಪ್ರಾಸ್ತಾವಿಕ ಮಾತನಾಡಿದರು. ಮಹೇಶ ಪಂಚಾಳ, ಸಿದ್ದಾರೂಢ ಬೀದರ್, ಅಶೋಕಕುಮಾರ ಪಂಚಾಳ, ಪ್ರಮುಖರಾದ ಈರಣ್ಣ ಎಸ್ ಪಂಚಾಳ, ಲಕ್ಷ್ಮೀಕಾಂತ ಪಂಚಾಳ,ಜಗನ್ನಾಥ ಪಂಚಾಳ, ವೀರಣ್ಣ ಪಂಚಾಳ, ಕಾಶೀನಾಥ ಪಂಚಾಳ, ವೈಜಿನಾಥ ಪಂಚಾಳ ಇತರರಿದ್ದರು. ಕ್ರಾಂತಿಕುಮಾರ ಪಂಚಾಳ ಸ್ವಾಗತಿಸಿದರು. ವೈಜಿನಾಥ ಪಂಚಾಳ ನಿರೂಪಣೆ ಮಾಡಿ ವಂದಿಸಿದರು.

VIJAYAVANI » KALABURAGI
ಶನಿವಾರ 27 ಜನವರಿ 2024
27 JANUARY 2024
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

Scanned with OKEN Scanner

ಸಮಾಜದಲ್ಲಿ ಪರಿವರ್ತನೆ ತರುವ ಶಕ್ತಿ ಸಾಹಿತ್ಯಕ್ಕಿದೆ : ಡಾ. ಅಭಿನವ ಶ್ರೀ

ಸಂ.ಕ. ಸಮಾಚಾರ ಬಸವಕಲ್ಯಾಣ : ಸಮಾಜದಲ್ಲಿ ಪರಿವರ್ತನೆ ತರುವ ಶಕ್ತಿ ಸಾಹಿತ್ಯಕ್ಕಿದ್ದು, ಮಕ್ಕಳಲ್ಲಿ ಸಾಹಿತ್ಯದ ಬಗ್ಗೆ ಆಸಕ್ತಿ ಬೆಳೆಸುವ ಕೆಲಸ ನಿರಂತರವಾಗಿ ನಡೆಯಬೇಕು ಎಂದು ಇಲ್ಲಿಯ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಅಭಿನವ ಶ್ರೀ ಪ್ರಕಾಶನ ಹಾಗೂ ಪ್ರತಿಮಾ ಪ್ರಕಾಶನ ಸಹಯೋಗದಲ್ಲಿ ಇಲ್ಲಿಯ ಗವಿ ಮಠದಲ್ಲಿ ಆಯೋಜಿಸಲಾದ ಸಾತ್ವಿಕ್ ಪ್ರಶಸ್ತಿ ಪ್ರದಾನ ಹಾಗೂ ಸಾಹಿತಿ ವೀರಶೆಟ್ಟಿ ಪಾಟೀಲ್ ಅವರ ಸ್ವರಚಿತ ಕವನ ಸಂಕಲನ ಕಲಿಯುಗ ಮುಗಿಯುವ ಮುನ್ನ ಮತ್ತು ಫೋಟೋಗ್ರಾಫಿ ಸಂಪಾದಿತ ಕವನ ಸಂಕಲನ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಕಲೆಯಲ್ಲಿ ಅದ್ಭುತ ಶಕ್ತಿ ಅಡಗಿದ್ದು, ಒಂದು ಚಿತ್ರ ಅಥವಾ ಕಲಾಕೃತಿ ಸಾವಿರ ಪದಗಳಿಗೆ ಸಮ ಎಂದರು.

ಫೋಟೋಗ್ರಾಫಿ ಪುಸ್ತಕ ಬಿಡುಗಡೆ ಮಾಡಿದ ಕೇಂದ್ರ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಕಲಬುರಗಿಯ ಮೊಹಮ್ಮದ್ ಅಯಾಜೋದ್ದಿನ್ ಪಟೇಲ್ ಮಾತನಾಡಿ, ಇಂಡೋನೇಶಿಯಾದಲ್ಲಿಯೂ ಸೇರಿ ವಿವಿಧ ದೇಶಗಳಲ್ಲಿ ಸಹ ಭಾರತೀಯ ಸಂಸ್ಕೃತಿ ಬಿಂಬಿಸುವ ಐತಿಹಾಸಿಕ ಸ್ಥಳಗಳಿವೆ. ಭಾರತೀಯ ಇತಿಹಾಸ ಸಂಸ್ಕೃತಿ ಶ್ರೇಷ್ಠವಾಗಿದೆ.

ಕಲ್ಯಾಣದಲ್ಲಿ ಅನೇಕ ಐತಿಹಾಸಿಕ ಸ್ಥಳಗಳಿದ್ದು, ಇವುಗಳನ್ನು ಜೀರ್ಣೋದ್ಧಾರಕ್ಕೆ ಪುರಾತತ್ವ ಇಲಾಖೆಯವರು ಕಾಳಜಿ ವಹಿಸಬೇಕಾದ ಅವಶ್ಯಕತೆ ಇದೆ ಎಂದು ಹೇಳಿದರು.

ಕಸಾಪ ಜಿಲ್ಲಾಧ್ಯಕ್ಷ ಸುರೇಶ ಚನ್ನಶೆಟ್ಟಿ ಮಾತನಾಡಿ, ಪ್ರೊ.ವೆಂಕಣ್ಣ ಡೊಣ್ಣೆಗೌಡರು ಮಾತನಾಡಿದರು. ಹುಲಸೂರ ತಹಶೀಲ್ದಾರ ಶಿವಾನಂದ ಮೇತ್ರೆ ಉದ್ಘಾಟನಾ ಭಾಷಣ ಮಾಡಿದರು. ಸಾತ್ವಿಕ್ ವಿ. ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಿದರು.

ಇದೆ ಸಂದರ್ಭದಲ್ಲಿ ಪತ್ರಕರ್ತ ಉದಯಕುಮಾರ ಮುಳೆ, ಶಿವರಾಜ ಮೇಕಾಲೆ, ಚಿತ್ರ ಕಲಾವಿದ ವಿಠ್ಠಲ ಜಾಧವ, ಸೈಯದ ಅಕ್ಬರ್‌ಅಲಿ, ಸಂಗೀತಗಾರ ರಮೇಶ ಗರುಡಕರ್, ನಿವೃತ್ತ ಶಿಕ್ಷಕ ಬಲವಂತ ಚಾಕೂರೆ ಅವರಿಗೆ ಸಾತ್ವಿಕ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಬೀದರ್‌ನ ನಿವೃತ್ತ ಪ್ರಾಚಾರ್ಯ ಶಿವಶಂಕರ ಟೋಕರೆ, ಶಿಕ್ಷಕಿ ಪ್ರತಿಮಾ ಪಾಟೀಲ್, ಪ್ರತಿಮಾ ಪ್ರಕಾಶನದ ಅಧ್ಯಕ್ಷ ವೀರಶೆಟ್ಟಿ ಪಾಟೀಲ್, ಪ್ರಮುಖರಾದ ಬಸವಂತಪ್ಪ ಲವಾರೆ, ತುಳಸಿರಾಮ ತುಮಬಾರೆ, ವೀರಣ್ಣ ಶೀಲವಂತ, ನಾಗಪ್ಪ ನಿಣ್ಣೆ, ವಿರಶೆಟ್ಟಿ ಮಲಶೆಟ್ಟಿ, ಚಂದ್ರಕಾಂತ ಜೋಕಾರೆ, ಶಶಿಧರ ಪಾಟೀಲ್, ಶಿವಕುಮಾರ ಸ್ವಾಮಿ ಉಪಸ್ಥಿತರಿದ್ದರು.

ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ನಗರ ಘಟಕದ ಅಧ್ಯಕ್ಷ ನೀತಿನ ನೀಲಕಂಠೆ ನಿರೂಪಿಸಿದರು.



ಬಸವಕಲ್ಯಾಣದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಾದ ಉದಯಕುಮಾರ ಮುಳೆ, ಶಿವರಾಜ ಮೇಕಾಲೆ, ವಿಠ್ಠಲ ಜಾಧವ, ಸೈಯದ ಅಕ್ಬರ್‌ಅಲಿ, ರಮೇಶ ಗರುಡಕರ್, ಬಲವಂತ ಚಾಕೂರೆ ಅವರಿಗೆ ಸಾತ್ವಿಕ್ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಸಂಯುಕ್ತ ಕರ್ನಾಟಕ
ಗುರುವಾರ, 04, ಜನವರಿ, 2024
ಕಲಬುರಗಿ | KALABURAGI

Scanned with OKEN Scanner

ಡಾ.ಅಭಿನವ ಫನಲಿಂಗ ಶ್ರೀ ನುಡಿ | ಸಾತ್ವಿಕ ಪ್ರಶಸ್ತಿ ಪ್ರದಾನ, ಕವನ ಸಂಕಲನ ಬಿಡುಗಡೆ

ಸಾಹಿತ್ಯಕ್ಕಿದೆ ಪರಿವರ್ತನೆ ತರುವ ಶಕ್ತಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಮಾಜದಲ್ಲಿ ಪರಿವರ್ತನೆ ತರುವ ಶಕ್ತಿ ಸಾಹಿತ್ಯಕ್ಕಿದೆ. ಮಕ್ಕಳಲ್ಲಿ ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಿಸಬೇಕು ಎಂದು ಗವಿಮಠದ ಶ್ರೀ ಡಾ.ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್, ಅಭಿನವ ಶ್ರೀ ಪ್ರಕಾಶನ ಹಾಗೂ ಪ್ರತಿಮಾ ಪ್ರಕಾಶನ ಸಹಯೋಗದಡಿ ಗವಿಮಠ ಸಂಸ್ಥಾನದಲ್ಲಿ ಮಂಗಳವಾರ ಆಯೋಜಿಸಿದ್ದ ಸಾತ್ವಿಕ ಪ್ರಶಸ್ತಿ ಪ್ರದಾನ ಹಾಗೂ ಸಾಹಿತಿ ವೀರಶೆಟ್ಟಿ ಪಾಟೀಲ್ ರಚಿತ ಕವನ ಸಂಕಲನ ಕಲಿಯುಗ ಮುಗಿಯುವ ಮುನ್ನ ಮತ್ತು ಫೋಟೋಗ್ರಫಿ ಸಂಪಾದಿತ ಕವನ ಸಂಕಲನ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಸಾಹಿತಿ ವೀರಶೆಟ್ಟಿ ಪಾಟೀಲ್ ಚಿತ್ರಕಲೆ ಜತೆಗೆ ಸಾಹಿತ್ಯ ರಚನೆಯಲ್ಲಿ ತೊಡಗಿಸಿ 12 ಕೃತಿಗಳನ್ನು ಹೊರ ತಂದಿದ್ದಾರೆ ಎಂದರು.

ಪ್ರೊ.ವೆಂಕಣ್ಣ ಡೊಣ್ಣೇಗೌಡ ಮಾತನಾಡಿ, ವೀರಶೆಟ್ಟಿ ಪಾಟೀಲ್ ಕಲೆ ಜತೆಗೆ ಸಾಹಿತ್ಯ ಕೃಷಿ ಮಾಡುತ್ತಿದ್ದಾರೆ ಎಂದು ಕೊಂಡಾಡಿದರು.

ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಅಯಾಜುದ್ದಿನ್ ಪಟೇಲ್ ಫೋಟೋಗ್ರಾಫಿ ಪುಸ್ತಕ ಬಿಡುಗಡೆ ಮಾಡಿದರು. ಸಾತ್ವಿಕ್ ವಿ.ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಿದರು.

ಹುಲಸೂರು ತಹಸೀಲ್ದಾರ್ ಶಿವಾನಂದ ಮೇತ್ರೆ, ಕಸಾಪ ಜಿಲ್ಲಾಧ್ಯಕ್ಷ ಸುರೇಶ ಚನ್ನಶೆಟ್ಟಿ, ಪ್ರಮುಖರಾದ ಶಿವಶಂಕರ ಟೋಕರೆ, ಪ್ರತಿಮಾ ಪಾಟೀಲ್, ವೀರಶೆಟ್ಟಿ ಪಾಟೀಲ್, ಬಸವಂತಪ್ಪ ಲವಾರೆ, ತುಳಸಿರಾಮ ತುಮಬಾರೆ, ವೀರಣ್ಣ ಶೀಲವಂತ, ನಾಗಪ್ಪ ನಿಣ್ಣೆ, ವೀರಶೆಟ್ಟಿ ಮಲಶೆಟ್ಟಿ, ಚಂದ್ರಕಾಂತ ಜೋಕಾರೆ, ಶಶಿಧರ ಪಾಟೀಲ್, ಶಿವಕುಮಾರ ಸ್ವಾಮಿ ಇತರರಿದ್ದರು. ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ನಿತಿನ್ ನೀಲಕಂಠೆ ನಿರೂಪಣೆ ಮಾಡಿದರು.



ಬಸವಕಲ್ಯಾಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಾಧಕರಾದ ಉದಯಕುಮಾರ ಮುಳೆ, ಶಿವರಾಜ ಮೇಕಾಲೆ, ವಿಠ್ಠಲ್ ಜಾಧವ್, ಸೈಯದ್ ಅಕ್ಬರ್ ಅಲಿ, ರಮೇಶ ಗರುಡಕರ್, ಬಲವಂತ ಚಾಕೂರೆ ಅವರಿಗೆ ಸಾತ್ವಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಭಿನವ ಶ್ರೀ, ಶಿವಾನಂದ ಮೇತ್ರೆ, ಮೊಹಮ್ಮದ್ ಅಯಾಜುದ್ದಿನ್ ಪಟೇಲ್, ಸುರೇಶ ಚನ್ನಶೆಟ್ಟಿ, ವೀರಶೆಟ್ಟಿ ಪಾಟೀಲ್, ಶಾಂತಲಿಂಗ ಮಠಪತಿ ಇತರರಿದ್ದರು.

ಸಾಧಕರಿಗೆ ಸಾತ್ವಿಕ ಪ್ರಶಸ್ತಿ

ಪತ್ರಕರ್ತ ಉದಯಕುಮಾರ ಮುಳೆ, ಫೋಟೋಗ್ರಾಫರ್ ಶಿವರಾಜ ಮೇಕಾಲೆ, ಚಿತ್ರ ಕಲಾವಿದ ವಿಠಲ್ ಜಾಧವ್, ಸೈಯದ್ ಅಕ್ಬರ್ ಅಲಿ, ಸಂಗೀತಗಾರ ರಮೇಶ ಗರುಡಕರ್, ನಿವೃತ್ತ ಶಿಕ್ಷಕ ಬಲವಂತ ಚಾಕೂರೆ ಅವರಿಗೆ ಸಾತ್ವಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಇಂಡೋನೇಷ್ಯಾ ಸೇರಿ ವಿವಿಧ ದೇಶಗಳಲ್ಲಿ ಭಾರತೀಯ ಸಂಸ್ಕೃತಿ ಬಿಂಬಿಸುವ ಐತಿಹಾಸಿಕ ಸ್ಥಳಗಳಿವೆ. ಭಾರತದ ಇತಿಹಾಸ ಸಂಸ್ಕೃತಿ ಶ್ರೇಷ್ಠವಾಗಿದೆ. ಕಲ್ಯಾಣದಲ್ಲಿನ ಐತಿಹಾಸಿಕ ಸ್ಥಳಗಳ ಜೀರ್ಣೋದ್ಧಾರಕ್ಕೆ ಪುರಾತತ್ವ ಇಲಾಖೆಯವರು ಕಾಳಜಿ ವಹಿಸಬೇಕು.

| ಮೊಹಮ್ಮದ್ ಅಯಾಜುದ್ದಿನ್ ಪಟೇಲ್
ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತ

VIJAYAVANI » KALABURAGI
ಗುರುವಾರ 4 ಜನವರಿ 2024
4 JANUARY 2024

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಭಗವಂತನ ಉಪಕಾರ ಸದಾ ಸ್ಮರಿಸಿ

ವಿಕ ಸುದ್ದಿಲೋಕ ಬಸವಕಲ್ಯಾಣ

ಭಗವಂತನ ಉಪಕಾರ ಸದಾಕಾಲ ಸ್ಮರಿಸಬೇಕು ಎಂದು ಗವಿಮಠದ ಶ್ರೀ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಶ್ರೀ ಜಗದ್ಗುರು ಫನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್, ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ಆಶ್ರಯದಲ್ಲಿ ಶ್ರಾವಣ ಮಾಸದ ನಿಮಿತ್ತ ಸೋಮವಾರ ಸಂಜೆ ಗವಿಮಠದಲ್ಲಿ ಆಯೋಜಿಸಲಾಗಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ, ವಚನ ಸಾಹಿತ್ಯ ಉಪನ್ಯಾಸ ಮಾಲೆ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿ, ಶಿವ ಪಥವ ಅರಿದೊಡೆ ಗುರುಪಥವೇ ಮೊದಲು. ಸದೃಢ ಸಮಾಜ ನಿರ್ಮಾಣವಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಟೆಂಗಳಿಯ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಆಶೀರ್ವಚನ ನೀಡಿ, ಶ್ರೀ ಜಗದ್ಗುರು ಫನಲಿಂಗರು ಶಿವ ಶರಣರಿಗೆ ಇಷ್ಟಲಿಂಗ ದೀಕ್ಷೆಕೊಟ್ಟು ಮುಕ್ತಿಯ ಮಾರ್ಗ ತೋರಿದ ಮಹಾಮಹಿಮರು. ಶಕ್ತಿ ತೋರಿದ ಪವಾಡ ಪುರುಷರು. ಇವರು ಕಾಲಜ್ಞಾನಿಗಳೂ ಆಗಿದ್ದರು ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿ ಯುವ ಮುಖಂಡ ಲೋಕೇಶ ಮೊಳಕೆರೆ ಮಾತನಾಡಿ, ಗವಿಮಠದ ಅಭಿನವ ಶ್ರೀಗಳ ಸಮಾಜಮುಖಿ ಕಾರ್ಯಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಮುಖರಾದ ಬಾಬುರಾವ್ ಚಳಕಾಪುರೆ, ಮಾಹಾಂತೇಶ ಸ್ವಾಮಿ ನಾರಾಯಣಪೂರ, ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ, ರಮೇಶ್ ರಾಜೋಳೆ, ವಿಜಯಕುಮಾರ, ಸವಿತಾ ಸ್ವಾಮಿ, ಸುಭದ್ರಬಾಯಿ, ಮಡಿವಾಳಪ್ಪ ಕಲ್ಯಾಣ ಉಪಸ್ಥಿತರಿದ್ದರು. ಶಿವಕುಮಾರ ಮುನ್ನೊಳೆ ನಿರೂಪಿಸಿದರು. ಶಕುಂತಲಾ ಸ್ವಾಮಿ ಸ್ವಾಗತ ಗೀತೆ ಹಾಡಿದರು.



ಬಸವಕಲ್ಯಾಣದ ಗವಿಮಠದಲ್ಲಿ ಆಯೋಜಿಸಲಾಗಿದ್ದ ವೀರಶೈವ ಲಿಂಗಾಯತ ಧರ್ಮಗ್ರಂಥವಾದ ಸಿದ್ಧಾಂತ ಶಿಖಾಮಣಿ, ವಚನ ಸಾಹಿತ್ಯ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಲೋಕೇಶ ಮೊಳಕೆರೆ ಅವರನ್ನು ಸನ್ಮಾನಿಸಲಾಯಿತು. ಶ್ರೀ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಬಾಬುರಾವ್ ಚಳಕಾಪುರೆ, ಮಾಹಾಂತೇಶ ಸ್ವಾಮಿ, ಬಸವಂತಪ್ಪ ಲವಾರೆ ಉಪಸ್ಥಿತರಿದ್ದರು

ವಿಜಯವಾಣಿ ಗುರುವಾರ, 31 ಆಗಸ್ಟ್ 2023

Scanned with OKEN Scanner

ಬಸವಕಲ್ಯಾಣದಲ್ಲಿ ಚಿತ್ರ ನಟ, ನಿರ್ಮಾಪಕ, ಡಾ.ಎಸ್.ನಾರಾಯಣ ಹೇಳಿಕೆ

ಲಂಬಾಣಿ ಕಲೆ,ಸಂಸ್ಕೃತಿ ಕುರಿತು ಚಿತ್ರ ತಯಾರಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

12ನೇ ಶತಮಾನದಲ್ಲಿ ವಚನ ಸಾಹಿತ್ಯದ ಮೂಲಕ ಮನುಕುಲಕ್ಕೆ ಜ್ಞಾನದ ಬೆಳಕು ನೀಡಿದ ಬಸವಣ್ಣನವರ ಕಾಯಕ ಭೂಮಿ ಬಸವಕಲ್ಯಾಣ ಕರ್ನಾಟಕದ ಬೇರು. ಜ್ಞಾನದ ಉಗಮ ಸ್ಥಾನ ಕಲ್ಯಾಣ ಎಂದು ಖ್ಯಾತ ಚಲನ ಚಿತ್ರ ನಟ, ನಿರ್ಮಾಪಕ, ನಿರ್ದೇಶಕ ಡಾ.ಎಸ್.ನಾರಾಯಣ ಹೇಳಿದರು.

ಕೇಂದ್ರದ ಸಾಂಸ್ಕೃತಿಕ ಮಂತ್ರಾಲಯ ಶ್ರೀಜಗದ್ಗುರು ಪಂಚಾಚಾರ್ಯ ಯೂತ್ ಕ್ಲಬ್ ಕಮಿಟಾ ಹಾಗೂ ಘನಲಿಂಗ ರುದ್ರಮುನಿ ಶಿವಾಚಾರ್ಯ ಟ್ರಸ್ಟ್ ಗವಿ ಮಠ ಸಂಯುಕ್ತ ಆಶ್ರಯದಲ್ಲಿ ಗವಿ ಮಠದಲ್ಲಿ ಶುಕ್ರವಾರ ನಡೆದ ಬುಡ ಕಟ್ಟು ಲಂಬಾಣಿ ಜಾನಪದ ಉತ್ಸವ, ವಿಚಾರ ಸಂಕಿರಣ ಮತ್ತು ತಮ್ಮ ಅಭಿನಂದನಾ ಸಮಾರಂಭದಲ್ಲಿ ಸತ್ಕಾರ ಸ್ವೀಕರಿಸಿ ಅವರು ಮಾತನಾಡಿದರು. ವಿದ್ಯೆಯ ಜತೆಗೆ ವಿವೇಕ ಅವಶ್ಯಕ, ಶಿಕ್ಷಣಕ್ಕೆ ಆದ್ಯತೆ ನೀಡ ಬೇಕು ಶಿಕ್ಷಣ, ಸಂಸ್ಕೃತಿ, ಸಂಸ್ಕಾರ ದಿಂದ ಬದುಕಿನಿಂದ ಸದೃಢ ಸಮಾಜ ನಿರ್ಮಾಣವಾಗಲಿದೆ. ಹೀಗಾಗಿ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಸಂಸ್ಕಾರ



ಬುಡಕಟ್ಟು ಲಂಬಾಣಿ ಜಾನಪದ ಉತ್ಸವ ಹಾಗೂ ಚಿತ್ರ ನಟ, ನಿರ್ಮಾಪಕ, ಡಾ.ಎಸ್.ನಾರಾಯಣ ಅಭಿನಂದನಾ ಸಮಾರಂಭದಲ್ಲಿ ಅವರನ್ನು ಸತ್ಕರಿಸಿ ಗೌರವಿಸಲಾಯಿತು. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಾಸಕ ಶರಣು ಸಲಗರ, ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ ಇದ್ದರು.

ನೀಡುವಲ್ಲಿ ಕಾಳಜಿ ವಹಿಸಬೇಕು ಎಂದರು. ಹೊಸ ಪ್ರಯೋಗ ಮತ್ತು ಹೊಸ ಪ್ರತಿಭೆಗಳನ್ನು ಗುರುತಿಸಿ ಅವಕಾಶ ನೀಡುವ ಕೆಲಸ ಮೊದಲಿಂದಲೂ ಮಾಡಲಾ ಗುತ್ತಿದೆ.ಲಂಬಾಣಿ ಸಮುದಾಯದ ಕಲೆ, ಸಂಸ್ಕೃತಿ, ಪರಂಪರೆ ಕುರಿತು ಚಿತ್ರ ಮಾಡುತ್ತಿದ್ದೇನೆ. ಈ ಭಾಗದಲ್ಲಿ ಸ್ಥಳಗಳಿಗೂ ಭೇಟಿ ನೀಡಿ, ಈ ಭಾಗವನ್ನು ಪರಿಚ ಯಿಸುವ ಕೆಲಸ ಮಾಡ ಲಾಗು ವುದು ಎಂದರು.ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ ಮಾತನಾಡಿ,ಈ ಭಾಗದಲ್ಲಿ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಇಂತಹ ಕಾರ್ಯ ಕ್ರಮಗಳು ನಿರಂತರ ವಾಗಿ ನಡೆಯಬೇಕು ಎಂದರು. ಸಾನ್ನಿಧ್ಯ ವಹಿಸಿದ್ದ ಅಭಿನವ ಘನಲಿಂಗರುದ್ರಮುನಿಶಿವಾಚಾರ್ಯರು ಆಶೀರ್ವಚನ ನೀಡಿದರು. ಕೇಂದ್ರದ ರಾಜ್ಯ ಅಭಿವೃದ್ಧಿ ಸಮನ್ವಯ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯ ಶಿವಯ್ಯ ಸ್ವಾಮಿ ಪ್ರಾಸ್ತಾವಿಕ ಮಾತನಾಡಿದರು. ಬೀದರ್ ಎನ್‌ವೈಕೆ ಜಿಲ್ಲಾ ಯುವ ಅಧಿಕಾರಿ ಮಯೂರಕುಮಾರ ಗೊರಮೆ, ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತ ಓಂಪ್ರಕಾಶ ರೊಟ್ಟೆ, ಜನಪದ ಪರಿಷತ್ ತಾಲೂಕು ಅಧ್ಯಕ್ಷ ಡಾ.ಬಸವರಾಜ ಸ್ವಾಮಿ, ಕಸಾಪ ತಾಲೂಕು ಅಧ್ಯಕ್ಷ ಶಾಂತ ಲಿಂಗ ಮಠಪತಿ, ಗವಿಮಠ ಟ್ರಸ್ಟ್ ಕಾರ್ಯಾ ಧ್ಯಕ್ಷ ಶರಣಪ್ಪ ಬಿರಾದಾರ, ಮಹಾ ರಾಷ್ಟ್ರಸಾರಿಗೆ ಅಧಿಕಾರಿ ಸಂಜಯ ವಾಡೇಕರ್, ಮುಖಂಡರಾದ ಅರ್ಜುನ ಕನಕ, ಮನೋಹರ ಮೈಸೆ, ಯಥ್ ಕ್ಲಬ್ ಕಾರ್ಯ ದರ್ಶಿ ಕಾಶಿನಾಥ ಹಿರೇಮಠ ಇದ್ದರು. ಪತ್ರಕರ್ತ ಶಿವು ಮಠಪತಿ ಸ್ವಾಗತಿಸಿದರು. ಲೋಕೇಶ ಮೋಳಕೆರಿ ನಿರೂಪಿಸಿದರು.

> ಜಗತ್ತಿಗೆ ಮೊಟ್ಟ ಮೊದಲಿಗೆ ಪ್ರಜಾ ಪ್ರಭುತ್ವದ ಕಲ್ಪನೆ. ಕಾಯಕ ದಾಸೋಹ ಸಿದ್ಧಾಂತ ನೀಡಿದ ಪವಿತ್ರ ನೆಲ ಕಲ್ಯಾಣ. ಅಯೋಧ್ಯೆಯಷ್ಟೇ ಪವಿತ್ರ ವಾಗಿದೆ. ಇಲ್ಲಿನೂತನ ಅನು ಭವ ಮಂಟಪ ನಿರ್ಮಾ ಣವಾ ಗುತ್ತಿದೆ. ಮುಂಬರುವ ದಿನಗ ಳಲ್ಲಿ ಕಲ್ಯಾ ಣವೂ ವಿಶ್ವದ ಗಮನ ಸೆಳೆಯಲಿದೆ.
> -ಶರಣು ಸಲಗರ್, ಶಾಸಕರು, ಬಸವಕಲ್ಯಾಣ.

ವಿಜಯ ಕರ್ನಾಟಕ VK | ಸೋಮವಾರ,29 ಜನವರಿ 2024, ಕಲಬುರಗಿ



ಬಸವಕಲ್ಯಾಣದಲ್ಲಿ ನಡೆದ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು

'ಸಾಹಿತ್ಯದಿಂದ ಸಮಾಜ ಸುಧಾರಣೆ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಸಾಹಿತ್ಯದಿಂದ ಸಮಾಜ ಸುಧಾರಣೆ ಸಾಧ್ಯ' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಭಿಪ್ರಾಯಪಟ್ಟರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಅಭಿನವಶ್ರೀ ಪ್ರಕಾಶನ ಮತ್ತು ಪ್ರತಿಮಾ ಪ್ರಕಾಶನದ ಸಹಯೋಗದಲ್ಲಿ ಸಾತ್ವಿಕ ವೀರಶೆಟ್ಟಿ ಪಾಟೀಲ ಅವರ ಜನ್ಮದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಚೆನ್ನಶೆಟ್ಟಿ, ಪ್ರಾಧ್ಯಾಪಕ ವೆಂಕಣ್ಣ ದೊಣ್ಣೆಗೌಡ ಮಾತನಾಡಿದರು.

ತಹಶೀಲ್ದಾರ್ ಶಿವಾನಂದ ಮೇತ್ರೆ, ಚಿತ್ರಕಲಾವಿದ ಆಯಾಜುದ್ದೀನ್ ಪಟೇಲ್, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಶಾಂತಲಿಂಗ ಮಠಪತಿ , ನಿತೀನ್ ನೀಲಕಂಠ ಮಾತನಾಡಿದರು.

ವಿಠಲ್ ಜಾಧವ, ಉದಯಕುಮಾರ ಮುಳೆ, ಶಿವರಾಜ ಮೆಕಾಲೆ, ಸೈಯದ್ ಅಕ್ಬರ್ ಅಲಿ, ರಮೇಶ ಗರೂಡಕರ್, ಬಲವಂತ ಚಾಕೂರೆ ಅವರಿಗೆಪ್ರಸಸ್ತಿ ಪ್ರದಾನ ಮಾಡಲಾಯಿತು.

ವೀರಶೆಟ್ಟಿ ಪಾಟೀಲ ಅವರ 'ಫೋಟೊಗ್ರಾಫಿ' ಮತ್ತು 'ಕಲಿಯುಗ ಮುಗಿಯುವ ಮುನ್ನ' ಕವನ ಸಂಕಲನಗಳನ್ನು ಬಿಡುಗಡೆ ಮಾಡಲಾಯಿತು.

ಸಾತ್ವಿಕ ಪಾಟೀಲ, ನಾಗರಾಜ ಹಾವಣ್ಣ, ನಾರಾಯಣ ಜೋಶಿ, ಶಿವಕುಮಾರ ಮಠಪತಿ, ಶಿವಕುಮಾರ ಯರಬಾಗ, ಖಾಜಾ ಪಟೇಲ್, ಶಾಂತಯ್ಯ ಮಠಪತಿ ಉಪಸ್ಥಿತರಿದ್ದರು.

ಪ್ರಜಾವಾಣಿ | ಗುರುವಾರ • ಜನವರಿ 4, 2024

ಬದುಕಿರುವಷ್ಟು ದಿನ ಪರೋಪಕಾರಿಯಾಗಿರಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮಾನವ ಜನ್ಮ ದೊಡ್ಡದು. ಒಂದಿಷ್ಟು ಪರೋಪಕಾರಿ ಕಾರ್ಯಗಳನ್ನು ಮಾಡುವ ಮೂಲಕ ಕ್ಷಣಿಕ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು ಎಂದು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉಪದೇಶಿಸಿದರು.

» ಅಭಿನವ ಶ್ರೀ ಹಿತೋಪದೇಶ

ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಸಹಯೋಗದಡಿ ಶ್ರಾವಣ ನಿಮಿತ್ತ ಗುರುವಾರ ಏರ್ಪಡಿಸಿದ್ದ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ಕುರಿತ ಏಳನೇ ವಿಶೇಷ ಉಪನ್ಯಾಸ ಮಾಲಿಕೆಯಲ್ಲಿ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ನೇತ್ರ ತಜ್ಞೆ ಡಾ.ಜ್ಯೋತಿ ಖಂಡ್ರೆ ಮಾತನಾಡಿ, ಕಣ್ಣು ದೇಹದ ಪ್ರಮುಖ ಅಂಗ. ಅಲಕ್ಷ ಮಾಡದೆ ಕಣ್ಣಿನ ಆರೋಗ್ಯದ ಕುರಿತು ಎಲ್ಲರೂ ಕಾಳಜಿ ವಹಿಸಬೇಕು. ನೇತ್ರದಾನ ಶ್ರೇಷ್ಠ ದಾನ. ನೇತ್ರದಾನ ಮೂಲಕ ಅಂಧರ ಬಾಳಿಗೆ ಬೆಳಕಾಗಿ ಎಂದರು.

ಸವಿತಾ ಸ್ವಾಮಿ, ರೇಖಾ ಮಂಠಾಳೆ ಮಾತನಾಡಿದರು. ಗ್ರೇಡ್-2 ತಹಸೀಲ್ದಾರ್ ಪಲ್ಲವಿ ಬೆಳಕೆರೆ, ಪೂರ್ಣಿಮಾ ಗೋರ್ಟಾ, ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ಅಲಗುಡೆ, ಪ್ರೊ.ರುದ್ರೇಶ್ವರ ಗೋರ್ಟಾ, ರುದ್ರಮುನಿ ಚೆನ್ನೂರ, ಸಿದ್ದಲಿಂಗಪ್ಪ ಗೌಡ, ಬಸವರಾಜ ಚಿರಡೆ, ಸುಭದ್ರಾಬಾಯಿ ಸ್ವಾಮಿ, ಐಶ್ವರ್ಯ ಧನರಾಜ, ರಂಗಮ್ಮ ಸಂತೋಷ ಇತರರಿದ್ದರು. ಡಾ.ಬಸವಜ್ಯೋತಿ ಸ್ವಾಮಿ ಸ್ವಾಗತಿಸಿದರು. ಅಕ್ಷತಾ ಬಸವಣಪ್ಪ ನಿರೂಪಣೆ ಮಾಡಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಭಾನುವಾರ 10 ಸೆಪ್ಟೆಂಬರ್ 2023
10 SEPTEMBER 2023

Scanned with OKEN Scanner



1. ನೀನು ನಿನ್ನೆ ಎಷ್ಟು ಗಂಟೆಗೆ ಎದ್ದೆ?
   ನಾನು ನಿನ್ನೆ 6 ಗಂಟೆಗೆ ಎದ್ದೆ.
   What time did you get up yesterday?
   I got up at 6 O'clock yesterday.
2. ನಂತರ ನೀನು ಏನು ಮಾಡಿದೆ?
   ನಾನು ನನ್ನ ಹಲ್ಲುಜ್ಜಿದೆ ಮತ್ತು ಮುಖ ತೊಳೆದುಕೊಂಡೆ.
   What did you do after that?
   I brushed my teeth and washed my face.
3. ನಿನ್ನ ತಂದೆ ನಿನಗೆ ಇವತ್ತು ಪಾಕೆಟ್ ಮನಿ ಕೊಟ್ಟರೆ?
   ಇಲ್ಲ, ನನಗೆ ಅವರು ಪಾಕೆಟ್ ಮನಿ ಕೊಡಲಿಲ್ಲ.
   Did your father give you pocket money today?
   No. He did not give me pocket money today.
4. ನೀನೇಕೆ ಅವರ ಹತ್ತಿರ ಕೇಳಲಿಲ್ಲ?
   ನನ್ನ ಹತ್ತಿರ ಇದ್ದಿತ್ತು. ಆದುದರಿಂದ ನಾನು ಕೇಳಲಿಲ್ಲ.
   Why didn't you ask him?
   I had money. So I didn't ask him.

ಅನುವಾದಿಸಿ:

1. ನೀನು ಇವತ್ತು ರಾಜುವನ್ನು ನೋಡಿದೆಯಾ?
   ಹೌದು. ನಾನು ಅವನನ್ನು ವಾಚನಾಲಯದಲ್ಲಿ ನೋಡಿದೆ.
2. ಅವನು ನಿನ್ನ ಜೊತೆ ಬಂದನೆ?
   ಇಲ್ಲ, ಅವನು ನನ್ನ ಜೊತೆ ಬರಲಿಲ್ಲ.
3. ನೀನು ಯಾರ ಜೊತೆ ಇಲ್ಲಿಗೆ ಬಂದೆ?
   ನಾನು ಒಬ್ಬನೇ ಬಸ್ಸಿನಲ್ಲಿ ಬಂದೆ.

ಬಸವ ಜಯಂತಿ ಉತ್ಸವ ಸಮಿತಿ ಪದಾಧಿಕಾರಿಗಳ ಆಯ್ಕೆ

ಬೀದರ್: ಪ್ರಸಕ್ತ ಸಾಲಿನ ಬಸವ ಜಯಂತಿ ಉತ್ಸವ ಸಮಿತಿಗೆ ಕುಶಾಲರಾವ್ ಪಾಟೀಲ ಖಾಜಾಪೂರ (ಗೌರವಾಧ್ಯಕ್ಷ), ಬಸವರಾಜ ಪಾಟೀಲ ಹಾರೂರಗೇರಿ (ಅಧ್ಯಕ್ಷ), ಸೂರ್ಯಕಾಂತ ನಾಗಮಾರಪಳ್ಳಿ (ಕಾರ್ಯಾಧ್ಯಕ್ಷ) ಸೇರಿ ಇತರೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ವಿವರ ಹೀಗಿದೆ: ಪ್ರಭುರಾವ್ ವಸ್ಮತೆ, ಬಸವರಾಜ ಧನ್ನೂರ, ವಿಜಯಕುಮಾರ ಪಾಟೀಲ ಗಾದಗಿ, ಸೋಮಶೇಖರ ಪಾಟೀಲ ಗಾದಗಿ, ದೀಪಕ ವಾಲಿ, ಬಸವರಾಜ ಬುಳ್ಳಾ, ಶ್ರೀಕಾಂತ ಸ್ವಾಮಿ, ರಮೇಶ ಪಾಟೀಲ ಸೋಲಪೂರ, ಚಂದ್ರಕಾಂತ ಹೆಬ್ಬಾಳೆ, ಜೈರಾಜ ಖಂಡ್ರೆ, ವಿಜಯಕುಮಾರ ಆನಂದೆ (ಉಪಾಧ್ಯಕ್ಷರು).



ರಾಜೇಂದ್ರಕುಮಾರ ಗಂದಗೆ (ಪ್ರಧಾನ ಕಾರ್ಯದರ್ಶಿ), ಡಾ. ರಜನೀಶ್ ವಾಲಿ (ಖಜಾಂಚಿ), ಜಗದೀಶ ಖೂಬಾ, ಭರತ ಶೆಟಕಾರ, ಸಂತೋಷ ತಾಳಂಪಳ್ಳಿ, ಧನರಾಜ ಹಂಗರಗಿ, ಅಶೋಕ ಹೊಕ್ರಾಣೆ, ಕೃಪಾಸಿಂಧು ಪಾಟೀಲ್ (ಕಾರ್ಯದರ್ಶಿ), ಧನರಾಜ ಕರಂಜೆ ಗಾದಗಿ, ಶ್ರೀಮಂತ ಸಪಾಟೆ, ವಿಶಾಲ್ ಪಾಟೀಲ್, ಬಸವರಾಜ ಭೆತಮುರ್ಗೆ, ಬಸವರಾಜ ಗುಮ್ಮಾ, ಶಿವಕುಮಾರ ಬಿರಾದಾರ ಕೌಠಾ (ಸಂಘಟನಾ ಕಾರ್ಯದರ್ಶಿ), ಶಿವಶರಣಪ್ಪ ವಾಲಿ, ಬಿ.ಜಿ. ಶೆಟಕಾರ್, ಚಂದ್ರಶೇಖರ ಪಾಟೀಲ ಗಾದಗಿ, ಗುರುನಾಥ ಕೊಳ್ಳೂರು, ಶಂಕರರಾವ್ ಹೊನ್ನಾ, ವೈಜನಾಥ ಕಮಠಾಣೆ, ಡಾ. ಶೈಲೇಂದ್ರ ಬೆಲ್ದಾಳೆ, ಬಾಬು ವಾಲಿ, ಶರಣಪ್ಪ ಮಿಠಾರೆ, (ಗೌರವ ಸಲಹೆಗಾರರು).

ಮೆರವಣಿಗೆ ಸಮಿತಿಗೆ ವಿರೂಪಾಕ್ಷ ಗಾದಗಿ (ಅಧ್ಯಕ್ಷ), ಸಂಜಕುಮಾರ ಪಾಟೀಲ (ಕಾರ್ಯದರ್ಶಿ). ಬೈಕ್ ರ್‍ಯಾಲಿ

ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ್ ಹೇಳಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಹಿರೇಮಠ ಸಂಸ್ಥಾನದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ವಚನ ಜಾತ್ರೆ-2022 ಮತ್ತು ಡಾ.ಚನ್ನಬಸವ ಪಟ್ಟದ್ದೇವರ 23ನೆಯ ಸ್ಮರಣೋತ್ಸವ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಬಸವಾದಿ ಶರಣರ ತತ್ವ ಸಿದ್ಧಾಂತಗಳು ಮಾದರಿಯಾಗಿವೆ. ಮನುಷ್ಯನ ಎಲ್ಲ ಸಮಸ್ಯೆಗಳಿಗೆ ವಚನ ಸಾಹಿತ್ಯದಲ್ಲಿ ಪರಿಹಾರವಿದೆ. ಫ.ಗು.ಹಳಕಟ್ಟಿ ಅವರು ತಮ್ಮ ಜೀವನ ವಚನ ಸಾಹಿತ್ಯಕ್ಕಾಗಿ ಮೀಸಲಿಟ್ಟಿದ್ದರು. ಇಂತಹ ವಚನ ಸಾಹಿತ್ಯ ವಿಶ್ವದ ಪ್ರತಿಯೊಬ್ಬರಿಗೂ ತಲುಪಿಸುವ ಕೆಲಸ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಶರಣರ ಎಲ್ಲ ವಚನಗಳು ಜಗತ್ತಿನ ಎಲ್ಲ ಭಾಷೆಗಳಲ್ಲಿ ಅನುವಾದಿಸುವ ನಿಟ್ಟಿನಲ್ಲಿ ದಿಟ್ಟ ಪ್ರಯತ್ನ ನಡೆಯಬೇಕಿದೆ ಎಂದರು.

ಡಾ.ಚನ್ನಬಸವ ಪಟ್ಟದ್ದೇವರು ತಮ್ಮ ಇಡೀ ಬದುಕು ಬಸವತತ್ವ ಪ್ರಚಾರ ಮತ್ತು ಪ್ರಸಾರ, ಸಮಾಜಕ್ಕಾಗಿ ಮೀಸಲಿಟ್ಟಿದ್ದರು. ಅವರು 109 ವರ್ಷಗಳ ಕಾಲ ಸಾರ್ಥಕ ಬದುಕು ಸವಿದು ಈ ಭಾಗಕ್ಕೆ ಅದ್ಭುತ ಕೊಡುಗೆ ನೀಡಿದ್ದರು. ಅನೇಕ ಕಾರ್ಯಗಳ ಜತೆಗೆ ದಿನ ದುರ್ಬಲ ವರ್ಗದವರಿಗೆ ಉಚಿತ ಶಿಕ್ಷಣ, ಅನ್ನ, ಆಶ್ರಯ ನೀಡಿರುವುದು ಮಾದರಿ ಎನಸಿದೆ. ಅವರ ತತ್ವ ಸಿದ್ಧಾಂತ ಎಲ್ಲರೂ ಅನುಸರಿಸಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ ಸ್ಮರಣೋತ್ಸವ ಸ್ವಾಗತ ಸಮಿತಿ ಅಧ್ಯಕ್ಷ ಆಗಿರುವ ಶಾಸಕ ಈಶ್ವರ ಖಂಡ್ರೆ ಮಾತನಾಡಿ, ಪಟ್ಟದ್ದೇವರು ತಮ್ಮ ಬದುಕಿನುದ್ದಕ್ಕೂ ಆದರ್ಶಮಯ ಬದುಕು ಸಾಗಿಸಿದರು. ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ ಎನ್ನುವ ವಚನ ಪಟ್ಟದ್ದೇವರು ಅಕ್ಷರಸಹ ಪಾಲಿಸಿದರು. ಅವರು ಬಸವತತ್ವ ಮತ್ತು ಕಾಯಕ- ದಾಸೋಹ ತತ್ವ ಬೋಧಿಸಲಿಲ್ಲ, ತಮ್ಮ ಜೀವನದಲ್ಲಿ ನಿಜವಾದ ಅರ್ಥದಲ್ಲಿ ಜಾರಿಗೆ ತಂದಿದ್ದರು. ಬಸವತತ್ವದ ಪರಿಪಾಲಕರಾಗಿ



ಭಾಲ್ಕಿಯ ಚನ್ನಬಸವಾಶ್ರಮದಲ್ಲಿ ನಡೆದ ವ
23ನೆಯ ಸ್ಮರಣೋತ್ಸವ ಸಮಾರಂಭವನ್ನು ಕ
ಉದ್ಘಾಟಿಸಿದರು. ಡಾ.ಬಸವಲಿಂಗ ಪಟ್ಟದ್ದೇ
ತಾಯಿ, ಶಾಸಕ ಈಶ್ವರ ಖಂಡ್ರೆ, ಹುಮನಾಬ
ಬಸವರಾಜ ಬುಳ್ಳಾ, ಬಸವರಾಜ ಧನ್ನೂರು,



ಭಾಲ್ಕಿಯ ಚನ್ನಬಸವಾಶ್ರಮ ಪರಿಸರದಲ್ಲಿ ನಡೆ
ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು.
ಅಸಮಾನತೆ, ಕಂದಾಚಾರ ವಿರುದ್ಧ ಹೋ
ಮಾಡಿದರು. ಪಟ್ಟದ್ದೇವರು ಮತ್ತು ಡಾ.ಭೀ
ಖಂಡ್ರೆ ಒಂದೇ ನಾಣ್ಯದ ಎರಡು ಮುಖಗ
ಸಮಾಜದ ಏಳಿಗೆ ಬಯಸಿದರು ಎಂದು ತಿಳಿಸಿದರ

ನೇತೃತ್ವ ವಹಿಸಿದ ಹಿರೇಮಠ ಸಂಸ್ಥಾನದ ಪೀ
ಪತಿ ಗುರುಬಸವ ಪಟ್ಟದ್ದೇವರು ಮಾತನ
ಬಸವಣ್ಣನವರ ವಿಚಾರಧಾರೆ ವಿಶ್ವಕ್ಕೆ ಮಾದರಿಯಾ
ಬಸವಣ್ಣನವರು ಸಕಲ ಜೀವ ರಾಶಿಯನ್ನು ಪ್ರೀತಿಸಿದ

ಮೆಥೋಡಿಸ್ಟ್ ಕ್ರೈಸ್ತ್ ವಾಪಿ







Scanned with OKEN Scanner

ಬುಧವಾರ, 23, ಆಗಸ್ಟ್, 2023
ಕಲಬುರಗಿ | KALABURAGI

ಅನ್ನ, ನೀರು, ಸುಭಾಷಿತ ಮೂರು ಶ್ರೇಷ್ಠರತ್ನಗಳು: ಅಭಿನವ ಶ್ರೀ

ಸಂ.ಕ. ಸಮಾಚಾರ ಬಸವಕಲ್ಯಾಣ

ಅನ್ನ, ನೀರು, ಸುಭಾಷಿತ ಎಂಬುವವು ಶ್ರೇಷ್ಠ ಮೂರು ರತ್ನಗಳು ಎಂದು ಜಗದ ಪ್ರಥಮ ಜಗದ್ಗುರು ಶ್ರೀ ರೇಣುಕಾಚಾರ್ಯರು ತಮ್ಮ ಸಿದ್ಧಾಂತ ಶಿಖಾಮಣಿಯ ಮೂಲಕ ಮನುಕುಲಕ್ಕೆ ಬೋಧಿಸಿದ್ದಾರೆ ಎಂದು ಸಂಸ್ಥಾನ ಗವಿಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣ ಮಾಸದ ನಿಮಿತ್ತ ಇಲ್ಲಿಯ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ನಡೆಯುತ್ತಿರುವ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಎರಡನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಮಾತನಾಡಿ ಸುಭಾಷಿತ ಅಂದರೆ ನಮ್ಮ ನುಡಿಗಳು ಹಿತವಾಗಿದ್ದು ರತ್ನಕ್ಕೆ ಸಮಾನವಾದ ಶ್ರೇಷ್ಠ ಮಟ್ಟದ್ದಾಗಿರಬೇಕು ಎಂದರು. ರಾಜೇಶ್ವರದ ವೈದ್ಯಾಧಿಕಾರಿ ಡಾ. ಬಾಲಕೃಷ್ಣ ರಾಠೋಡ ಮಾತನಾಡಿದರು.

ಶಿವಕುಮಾರ ಬಿರಾದಾರ ಮಾತನಾಡಿದರು. ಸಾಧಕಿ ವೈಷ್ಣವಿ ವಿಠಲ ಯದಲಾಪುರ ಅವರಿಗೆ ಶ್ರೀಗಳು ವಿಶೇಷವಾಗಿ ಸನ್ಮಾನಿಸಿ, ಆಶೀರ್ವದಿಸಿದರು. ಮಲ್ಲಿಕಾರ್ಜುನ ಅಲಶೆಟ್ಟಿ ಉಪಸ್ಥಿತರಿದ್ದರು. ಸಂಸ್ಥೆ ತಾಲ್ಲೂಕು ಅಧ್ಯಕ್ಷ ಬಸವಂತಪ್ಪ ಲವಾರೆ ಅಧ್ಯಕ್ಷತೆ ವಹಿಸಿದ್ದರು. ಮಲ್ಲಯ್ಯ ಹಿರೇಮಠ ಧನ್ನೂರ ಪ್ರಾರ್ಥನಾ ಗೀತೆ ಹಾಡಿದರು. ಮುಖ್ಯಗುರು ರಮೇಶ ರಾಜೋಳೆ ಸ್ವಾಗತಿಸಿದರು. ಪ್ರೊ. ರುದ್ರೇಶ್ವರ ವಿರೂಪಾಕ್ಷಸ್ವಾಮಿ ನಿರೂಪಿಸಿದರು. ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪಾ ಬಿರಾದಾರ, ಎ.ಜಿ. ಪಾಟೀಲ್, ಕಸಾಪ ಅಧ್ಯಕ್ಷ ಶಾಂತಲಿಂಗ ಮಠಪತಿ, ಮಲ್ಲಿಕಾರ್ಜುನ ಅಲಗುಡೆ, ಶಿವಕುಮಾರ್ ಪರ್ತಾಪೂರೆ, ಮಾಹಾನಂದಾ, ಶಕುಂತಲಾ, ರಾಚಮ್ಮಾ, ಕಲಾವತಿ ಮಠಪತಿ, ಸವಿತಾ ಸ್ವಾಮಿ, ಪೂರ್ಣಿಮಾ ರುದ್ರೇಶ, ಸುಭದ್ರಾಬಾಯಿ, ಪಾರ್ವತಿ ರೋಜೆ, ಸತ್ಯವತಿ ಬಾಬು ಸ್ವಾಮಿ ಶಾಂತಾಬಾಯಿ, ಮಯೂರಿ, ವೈಷ್ಣವಿ ಇದ್ದರು.



ಬಸವಕಲ್ಯಾಣದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ನಡೆಯುತ್ತಿರುವ ಎರಡನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.



ಬಸವಕಲ್ಯಾಣ: ತ್ರಿಪುರಾಂತ ಗವಿಮಠದ 2024ನೇ ಸಾಲಿನ ಕ್ಯಾಲೆಂಡರ್ ಪೀಠಾಧಿಪತಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬಿಡುಗಡೆ ಮಾಡಿದರು. ನಾಗನಾಥ ಸಂಗೋಳಗೆ, ಅಮರ ಕಾಳ್ಗೆ, ರಿತೇಶ್ ಪೂಕಾರ, ಲಖನ ರೆಡ್ಡಿ, ಶಿವಾ ಗಿಲ್ಕೆ, ಸಚಿನ್ ಉಪಸ್ಥಿತರಿದ್ದರು.



ಬಸವಕಲ್ಯಾಣದ ತ್ರೀಪುರಾಂತನ ಗವಿ ಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಿತ್ರ ನಿರ್ಮಾಪಕ, ನಿರ್ದೇಶಕ ಡಾ. ಎಸ್ ನಾರಾಯಣ ಅವರನ್ನು ಕಸಾಪ ವತಿಯಿಂದ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ ಅವರು ಸನ್ಮಾನಿಸಿ, ಗೌರವಿಸಿದರು. ಶ್ರೀಮಠದ ಪೀಠಾಧಿಪತಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಾಸಕ ಶರಣು ಸಲಗರ, ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ ಪ್ರಮುಖರಾದ ಶಿವಯ್ಯ ಸ್ವಾಮಿ, ಡಾ.ಬಸವರಾಜ ಸ್ವಾಮಿ, ಅರ್ಜುನ ಕನಕ, ಮನೋಹರ ಮೈಸೆ, ಸೂರ್ಯಕಾಂತ ಪಾಟೀಲ್, ರಾಚಯ್ಯ ಮಠಪತಿ, ನಾಗಪ್ಪಾ ನಿಣ್ಣೆ ಬಸವರಾಜ ಸೇರಿ ಅನೇಕರಿದ್ದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ಗವಿಮಠದಲ್ಲಿ ಸೋಮವಾರ ಸಂಜೆ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಯುವ ಮುಖಂಡ ಸಂದೀಪ ಪಾಟೀಲ್ ಅವರನ್ನು ಸನ್ಮಾನಿಸಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಡಾ.ರವೀಂದ್ರನಾಥ, ಮಲ್ಲಿಕಾರ್ಜುನ ಅಲಗುಡೆ, ಶಶಿಕಾಂತ ಶೀಲವಂತ ಇತರರಿದ್ದರು.



ಬಸವಕಲ್ಯಾಣದ ಗವಿಮಠದಲ್ಲಿ ಪ್ರಸಕ್ತ ಸಾಲಿನ 2024ರ ಕ್ಯಾಲೆಂಡರ್ ಗವಿ ಮಠದ ಪೀಠಾಧಿಪತಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬಿಡುಗಡೆ ಮಾಡಿದರು. ನಾಗನಾಥ ಸಂಗೋಳಗೆ, ಅಮರ ಕಾಳ್ಗೆ, ರಿತೇಶ್ ಪೂಕಾರ, ಲಖನ ರೆಡ್ಡಿ, ಶಿವಾ ಗಿಲ್ಕೆ, ಸಚಿನ್ ಇದ್ದರು.

Scanned with OKEN Scanner

ಜಗದ್ಗುರು ರೇಣುಕಾಚಾರ್ಯ ಜಯಂತಿ 22ಕ್ಕೆ

■ **ವಿಕ ಸುದ್ದಿಲೋಕ** ಬಸವಕಲ್ಯಾಣ



ನಗರದ ಗವಿ ಮಠದಲ್ಲಿ ಮಾ. 22ರಂದು ಶ್ರೀಜಗದ್ಗುರು ರೇಣುಕಾಚಾರ್ಯ ಜಯಂತಿ ಆಚರಿಸಲು ನಿರ್ಧರಿಸಲಾಗಿದೆ. ಹಿರನಾಗಾಂವನ ಜಯಶಾಂತಲಿಂಗ ಶಿವಾಚಾರ್ಯರ ಸಾನಿಧ್ಯದಲ್ಲಿ ಹಾಗೂ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮವನ್ನು ಅರ್ಥ ಪೂರ್ಣವಾಗಿ ಆಚರಿಸಲು ಸಭೆಯಲ್ಲಿ ಸಭೆಯಲ್ಲಿತೀರ್ಮಾನಿಸಲಾಯಿತು.

ಗವಿಮಠದಲ್ಲಿ ಕಾರ್ಯಕ್ರಮ ನಿಮಿತ್ತ ನಡೆದ ಪೂರ್ವ ಭಾವಿ ಸಭೆಯಲ್ಲಿ ಹಲವರು ಭಾಗವಹಿಸಿ ತಮ್ಮ ಸಲಹೆ ಸೂಚನೆ ನೀಡಿದರು. ಜಗದ್ಗುರು ರೇಣುಕಾಚಾರ್ಯ ಜಯಂತಿ ಅಂಗವಾಗಿ ಗವಿ ಮಠದಲ್ಲಿ ರುದ್ರಾಭಿಷೇಕ,ಮಹಾ ಮಂಗಳಾರತಿ ಮತ್ತು ಪಂಚಾಚಾರ್ಯ ಧ್ವಜಾರೋಹಣ ಹಾಗೂ

ಅಭಿನವ ರೇಣುಕ ಶ್ರೀ ಪ್ರಶಸ್ತಿ ಘೋಷಣೆ

ಮಹಾ ಪ್ರಸಾದ ಜರುಗಲಿದೆ. ಇದೇವೇಳೆ 2024ನೇ ಸಾಲಿನ ಅಭಿನವ ರೇಣುಕ ಶ್ರೀ ಪ್ರಶಸ್ತಿಯನ್ನು ತಾಲೂಕಿನ ಆನಂದ ವಾಡಿ ಗ್ರಾಮದ ರಾಜಕುಮಾರ ಬಿ.ಹಲಿಂಗೆ ಅವರಿಗೆ ಅಂದು ನಡೆಯುವ ಸಮಾರಂಭದಲ್ಲಿ ನೀಡಲು ನಿರ್ಧಾರ ಕೈಗೊಳ್ಳಲಾಯಿತು. ಈ ಸಭೆಯಲ್ಲಿ ಗವಿ ಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪಾ ಬಿರಾದಾರ, ಶರಣಬಸಪ್ಪಾ ಅಲಗೂಡೆ, ಶಿವಕುಮಾರ ಬಿರಾದಾರ,ಮಹಾದೇವ ಪಾಟೀಲ್, ಚನ್ನಬಸವ ಬಿರಾದಾರ, ವಿಜಯ ಕುಮಾರ ಸ್ವಾಮಿ,ರುದ್ರಮುನಿ ಹಿರೇಮಠ, ಶಿವಕುಮಾರ ಮುನ್ನೋಳ್ಳಿಸೇರಿ ಅನೇಕರಿದ್ದರು.

ವಿಜಯ ಕರ್ನಾಟಕ VK ಮಂಗಳವಾರ,19 ಮಾರ್ಚ್ 2024, ಕಲಬುರಗಿ

ರೇಣುಕಾಚಾರ್ಯ ಜಯಂತಿ 22ಕ್ಕೆ



ಬಸವಕಲ್ಯಾಣ: ಗವಿಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಮಾ.22ರಂದು ಆಚರಿಸಲು ತೀರ್ಮಾನಿಸಲಾಯಿತು. ಹಿರನಾಗಾಂವನ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಸಾನ್ನಿಧ್ಯ ಹಾಗೂ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ನಡೆದ ಪೂರ್ವ ಸಿದ್ಧತಾ ಸಭೆಯಲ್ಲಿ ಜಯಂತಿ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಯಿತು. ಅಂದು ಗವಿಮಠದಲ್ಲಿ ರುದ್ರಾಭಿಷೇಕ, ಮಹಾ ಮಂಗಳಾರತಿ ಮತ್ತು ಪಂಚಾಚಾರ್ಯ ಧ್ವಜಾರೋಹಣ ನಂತರ ನಡೆಯುವ ಸಮಾರಂಭದಲ್ಲಿ ಗವಿಠದಿಂದ ಕೊಡ ಮಾಡುವ 2024ನೇ ಸಾಲಿನ ಅಭಿನವ ರೇಣುಕ ಶ್ರೀ ಪ್ರಶಸ್ತಿಯನ್ನು ಆನಂದವಾಡಿಯ ರಾಜಕುಮಾರ ಬಿ.ಹಲಿಂಗೆ ಅವರಿಗೆ ಪ್ರದಾನ ಮಾಡಲು ತೀರ್ಮಾನಿಸಲಾಯಿತು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಶರಣಬಸಪ್ಪ ಅಲಗೂಡೆ, ಶಿವಕುಮಾರ ಬಿರಾದಾರ, ಮಹಾದೇವ ಪಾಟೀಲ್, ಚನ್ನಬಸವ ಬಿರಾದಾರ, ವಿಜಯಕುಮಾರ ಸ್ವಾಮಿ, ರುದ್ರಮುನಿ ಹಿರೇಮಠ, ಶಿವಕುಮಾರ ಮುನ್ನೋಳ್ಳಿ ಇತರರಿದ್ದರು.

ನಂ1 ವಿಜಯವಾಣಿ VIJAYAVANI » KALABURAGI
ಬುಧವಾರ 20 ಮಾರ್ಚ್ 2024
20 MARCH 2024

ರೇಣುಕಾಚಾರ್ಯರ ಜಯಂತಿ: 'ಅಭಿನವ ರೇಣುಕಶ್ರೀ ಪ್ರಶಸ್ತಿ' ಪ್ರದಾನ

'ಮಾನವ ಧರ್ಮದ ಜಯವೇ ಧ್ಯೇಯ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಮಾನವ ಧರ್ಮದ ಜಯವೇ ಎಲ್ಲ ಮಠಾಧೀಶರ ಧ್ಯೇಯವಾಗಿದ್ದು, ಯಾರೂ ಆಯಾ ಜಾತಿ, ಧರ್ಮಕ್ಕೆ ಜಯವಾಗಲಿ ಎನ್ನುವುದಿಲ್ಲ. ಇದಕ್ಕಾಗಿ ಭಕ್ತರು ಇಂಥವರಿಗೆ ಸಹಕಾರ ನೀಡುವುದು ಅತ್ಯಗತ್ಯ' ಎಂದು ಹಿರೇನಾಗಾಂವ ಜಯಶಾಂತಲಿಂಗ ಸ್ವಾಮೀಜಿ ಹೇಳಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಅಭಿನವ ರೇಣುಕಶ್ರೀ ಪ್ರಶಸ್ತಿ' ಪ್ರದಾನ ಹಾಗೂ ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು:

'ಉತ್ತಮರಾದವರಿಗೆ ಕಷ್ಟಗಳು ಎದುರಾಗಬಹುದು. ಆದರೆ, ಸರಿಯಾದ ಗುಣಮಟ್ಟದ ವಸ್ತುವಿಗೆ ಬೆಲೆ ಯಾವಾಗಲೂ ಇದ್ದೇ ಇರುತ್ತದೆ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಹ ಇತರರಿಗೆ ಆದರ್ಶರಾಗುವ ಕಾರ್ಯ ಮಾಡುತ್ತಿದ್ದಾರೆ. ಅವರಿಗೆ ಭಕ್ತರೂ ಎಲ್ಲ ರೀತಿಯಿಂದಲೂ ಸಹಾಯ, ಸಹಕಾರ ನೀಡಬೇಕು' ಎಂದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಶುಕ್ರವಾರ ನಡೆದ ರೇಣುಕಾಚಾರ್ಯರ ಜಯಂತಿ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಂಗೀತಗಾರರಾದ ಹಣಮಂತರಾವ್ ಮಳ್ಳಿ, ಶಾಂತಯ್ಯ ಮಠಪತಿ, ನೀಲಯ್ಯ ಹಿರೇಮಠ, ರಮೇಶ ಗರೂಡಕರ್, ರಾಮಚಂದ್ರ ಕಲ್ಲಹಿಪ್ಪರ್ಗಿ ಅವರನ್ನು ಸನ್ಮಾನಿಸಿದರು

ಮಠಾಧಿಪತಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ರೇಣುಕಾಚಾರ್ಯರು ಮಾನವ ಕುಲಕೋಟಿಗೆ ಒಳಿತನ್ನು ಬಯಸಿದ್ದರು. ಮಠದಲ್ಲಿ ವಾರ್ಷಿಕ ಉತ್ಸವ, ರಥೋತ್ಸವ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ' ಎಂದರು.

ಗವಿಮಠ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ರಾಜಕುಮಾರ ಹಲಿಂಗೆ ಆನಂದವಾಡಿ ಅವರಿಗೆ 'ಅಭಿನವ ರೇಣುಕಶ್ರೀ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಸಂಗೀತಗಾರರಾದ ಹಣಮಂತರಾವ್ ಮಳ್ಳಿ, ನೀಲಯ್ಯ ಹಿರೇಮಠ, ರಮೇಶ ಗರೂಡಕರ್, ಶಾಂತಯ್ಯ ಮಠಪತಿ, ರಾಮಚಂದ್ರ ಕಲ್ಲಹಿಪ್ಪರ್ಗಿ ಅವರನ್ನು ಸನ್ಮಾನಿಸಲಾಯಿತು. ವಿವಿಧ ಧಾರ್ಮಿಕ ಕಾರ್ಯಗಳು ಜರುಗಿದವು.

ಪ್ರಜಾವಾಣಿ ಶನಿವಾರ, ಮಾರ್ಚ್ 23, 20

Scanned with OKEN Scanner

ಬಸವಕಲ್ಯಾಣದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತಿ | ಅಭಿನವ ರೇಣುಕಶ್ರೀ ಪ್ರಶಸ್ತಿ ಪ್ರದಾನ

ರೇಣುಕಾಚಾರ್ಯರ ಸಮಾನತೆ ಪರಿಕಲ್ಪನೆ ಮಾದರಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಸಂದೇಶ ನೀಡಿರುವ ಕೀರ್ತಿ ಜಗದ್ಗುರು ಶ್ರೀರೇಣುಕಾಚಾರ್ಯರಿಗೆ ಸಲ್ಲುತ್ತದೆ ಎಂದು ತ್ರಿಪುರಾಂತನ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ತ್ರಿಪುರಾಂತನ ಗವಿ ಮಠದಲ್ಲಿ ಶುಕ್ರವಾರ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀಗಳು, ರೇಣುಕಾಚಾರ್ಯರು ಸಮಾಜ ಮುಖಿ ಕಾರ್ಯ ಮಾಡುವ ಮೂಲಕ ಜಾತಿ, ಮತ, ಪಂಥ ಎನ್ನದೇ ಎಲ್ಲರೂ ಒಂದೇ ಎಂಬ ಭಾವದಿಂದ ಕಾಣಿದರು. ಹೀಗಾಗಿ ಕೋಲಿಪಾಕನಲ್ಲಿ 18 ಜಾತಿಯ ಮಠಗಳನ್ನು ಒಂದೇ ಸ್ಥಳದಲ್ಲಿ ಇಂದು ಕೂಡಾ ಕಾಣಬಹುದಾಗಿದೆ ಎಂದರು.

ಶ್ರೀ ಜಗದ್ಗುರು ರೇಣುಕಾಚಾರ್ಯರು ದಶಧರ್ಮ ಸೂತ್ರಗಳನ್ನು ನೀಡುವ ಮೂಲಕ ಮಾನವ ಕುಲ ಕೋಟಿಗೆ ಉದ್ದರಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.ಶ್ರೀಸಿದ್ಧಾಂತ ಶಿಖಾಮಣಿ ಇಡೀ ಮಾನವ ಕುಲದ ಒಳಿತಿಗಾಗಿ ಇದೆ. ಇಂತಹ ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತಿ ರಾಜ್ಯ ಸರಕಾರ ಪ್ರತಿ ವರ್ಷ ತ್ರಯೋದಶಿ ತಿಥಿಯಂದು ಆಚರಣೆಗೆ ಕ್ರಮ ಕೈಗೊಂಡಿದ್ದು ಸಂತಸ ತಂದಿದೆ ಎಂದರು.

ಹಿರನಾಗಾಂವನ ಜಯಶಾಂತಲಿಂಗ ಸ್ವಾಮೀಜಿ ಮಾತನಾಡಿ,ಮಠದಿಂದ ಘಟ ಬೆಳಗಬಾರದು.ಘಟದಿಂದ ಮಠಗಳು ಬೆಳಗಬೇಕು ಎಂದರು. ತಾಲೂಕಿನ ಆನಂದ ವಾಡಿಯ ರಾಜಕುಮಾರ ಹಲಿಂಗೆ ಅವರಿಗೆ ಅಭಿನವ ರೇಣುಕ ಶ್ರೀಪ್ರಶಸ್ತಿ ನೀಡಿ ಸನ್ಮಾನಿಸಿರುವುದು ಸಂತಸ ತಂದಿದೆ ಎಂದು ಹೇಳಿದರು.ವೇದಿಕೆಯಲ್ಲಿ ಆನಂದ ವಾಡಿಯ ಗುರುಲಿಂಗ ಸ್ವಾಮೀಜಿ ಇದ್ದರು. ಗವಿ ಮಠದ ಕಾರ್ಯಾಧ್ಯಕ್ಷರಾದ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು.

ಈ ವೇಳೆ ಪ್ರಮುಖರಾದ ಪ್ರೊ.ರುದ್ರೇಶ್ವರ ಗೋರ್ಟಾ,ಎ.ಜಿ ಪಾಟೀಲ್, ಮಲ್ಲಿಕಾರ್ಜುನ ಆಲಗೂಡೆ, ಬಾಬುರಾವ ಉಳ್ಳೆ, ವೀರಶೆಟ್ಟಿ ಎಂ.ಪಾಟೀಲ್, ಪ್ರೊ.ಸೂರ್ಯಕಾಂತ ಶೀಲವಂತ, ನಟರಾಜ ಬಿರಾದಾರ, ಸಾಗರ ಮಾಲಗರ್, ಬಸವರಾಜ ಬಿರಾದಾರ, ಸಂಜುಕುಮಾರ ಬಿರಾದಾರ, ರಾಜಕುಮಾರ ಬಿರಾದಾರ, ಕಾರ್ತಿಕ ಬಿರಾದಾರ, ಶಿವಕುಮಾರ್ ಮುನ್ನೋಳ್ಳಿ ಪ್ರದೀಪ ಕುಂಬಾರ ಇದ್ದರು. ಗಾನಯೋಗಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳ ಸಂಘದ ವತಿಯಿಂದ ಸಂಗೀತ ಕಾರ್ಯಕ್ರಮ ಜರುಗಿತು. ಪ್ರಾಚಾರ್ಯ ಶಾಂತಯ್ಯ.ಎಸ್ ಮಠಪತಿ ನಿರೂಪಿಸಿದರು.



ತ್ರಿಪುರಾಂತನ ಗವಿ ಮಠದಲ್ಲಿ ಶುಕ್ರವಾರ ನಡೆದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ರಾಜಕುಮಾರ ಹಲಿಂಗೆ ಅವರಿಗೆ ಅಭಿನವ ರೇಣುಕ ಶ್ರೀಪ್ರಶಸ್ತಿ ನೀಡಿ ಸತ್ಕರಿಸಲಾಯಿತು. ಜಯಶಾಂತಲಿಂಗ ಸ್ವಾಮೀಜಿ, ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಗುರುಲಿಂಗ ಸ್ವಾಮೀಜಿ, ಶರಣಪ್ಪ ಬಿರಾದಾರ ಇದ್ದರು.

ಅಭಿನವ ರೇಣುಕ ಶ್ರೀ ಪ್ರಶಸ್ತಿ ಪ್ರದಾನ

ನಗರದ ಗವಿ ಮಠದಲ್ಲಿ ನಡೆದ ಜಗದ್ಗುರು ರೇಣುಕಾ ಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ತಾಲೂಕಿನ ಆನಂದ ವಾಡಿಯ ರಾಜಕುಮಾರ ಹಲಿಂಗೆ ಅವರಿಗೆ ಅಭಿನವ ರೇಣುಕ ಶ್ರೀ ಪ್ರಶಸ್ತಿ ನೀಡಿ ಪೂಜ್ಯರು ಸತ್ಕರಿಸಿದರು. ಪ್ರಶಸ್ತಿ ಸ್ವೀಕರಿಸಿ ರಾಜಕುಮಾರ ಹಲಿಂಗೆ ಮಾತನಾಡಿ, ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನನ್ನನ್ನು ಗುರುತಿಸಿ ಈ ಪ್ರಶಸ್ತಿ ನೀಡಿ ಸತ್ಕರಿಸಿದ್ದಾರೆ. ಹೀಗಾಗಿ ನನಗೆ ಒಂದೆಡೆ ಖುಷಿ ತಂದರೆ ಇನ್ನೊಂದೆಡೆ ನನ್ನ ಜವಾಬ್ದಾರಿ ಹೆಚ್ಚಿಸಿದೆ. ಈ ಗವಿ ಮಠದಲ್ಲಿ ಜಾತಿಗಳಿಗೆ ಆಸ್ಪದ ಇಲ್ಲ.ಎಲ್ಲರನ್ನು ಶ್ರೀಗಳು ಸಮಾನವಾಗಿ ಕಾಣುವ ಮನೋಭಾವ ಹೊಂದಿದ್ದಾರೆ ಎಂದರು.

Scanned with OKEN Scanner

ರಂಜಿಸಿದ ನೃತ್ಯ ವೈಭವ, ಯಕ್ಷಗಾನ ತಾಳಮದ್ದಲೆ



ಶಿರಸಿ: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್,ಕೇಂದ್ರ ಸಮಿತಿ ಹುಬ್ಬಳ್ಳಿ, ಸಾಹಿತ್ಯ ಸಂಚಲನ ಶಿರಸಿ ಸಹಕಾರದೊಂದಿಗೆ ನಡೆದ ನೃತ್ಯ ವೈಭವ, ವೈಚಾರಿಕ ಚಿಂತನ ಗೋಷ್ಠಿ, ಯಕ್ಷಗಾನ ತಾಳಮದ್ದಲೆ, ಚುಟುಕು ಕವಿಗೋಷ್ಠಿ, ಸಂವಾದ ಕಾರ್ಯಕ್ರಮ ರಂಜಿಸಿತು.

ಉದ್ಘಾಟನಾ ಸಮಾರಂಭದ ಬಳಿಕ ಖ್ಯಾತ ಪೋಷಕ ನಟ ದಿವಂಗತ ಕೆ.ಎಸ್. ಅಶ್ವತ್ಥ್‌ರವರ ಪುತ್ರಿ ವಿಜಯಾಮೂರ್ತಿ ಮತ್ತು ಶಿಷ್ಯೆಯಾದ ವಿದ್ಯಾಮೂರ್ತಿಯವರಿಂದ ಅಮೋಘ ನೃತ್ಯ ವೈಭವ ಜರುಗಿತು.

ಗಣಪತಿ ಸ್ತುತಿಯಿಂದ ಹಿಡಿದು, ದಾಸರ ಪದ, ವಚನ, ರಾಮನಾಮ ಮುಂತಾದ ನೃತ್ಯ ರೂಪಕಗಳು ಅಭಿಮಾನಿಗಳ ಮೆಚ್ಚುಗೆ ಪಡೆಯಿತು. ವೈಚಾರಿಕ ಚಿಂತನ ಗೋಷ್ಠಿಯಲ್ಲಿ ಪ್ರೊ.ವಸಂತ ನಾಯಕ ದಿಕ್ಸೂಚಿ ಉಪನ್ಯಾಸ ನೀಡಿದರು. ವಿದ್ವಾನ್ ರಘುಪತಿ ಭಟ್ಟರು ''ಭಾರತೀಯ ಪರಂಪರೆಯ'' ಬಗೆಗೆ ವಿದ್ವತ್ಪೂರ್ಣವಾದ ಉಪನ್ಯಾಸ ನೀಡಿದರೆ, ಯಶಸ್ವಿನಿ ಶ್ರೀಧರ ಮೂರ್ತಿಯವರು ''ಯುವಜನಾಂಗ ಮತ್ತು ಸಾಹಿತ್ಯ'' ಕುರಿತು ಉಪನ್ಯಾಸ ನೀಡಿ ಮೆಚ್ಚುಗೆ ಪಡೆದರು. ಎನ್ ವಿ ರಮೇಶ್ ರವರು ''ಯುವ ಜನಾಂಗ-ಬದುಕಿನ ದಾರಿ'' ವಿಷಯವಾಗಿ ಪ್ರಸ್ತುತ ವಿದ್ಯಮಾನ, ಯುವಕರ ಪಾತ್ರದ ಬಗೆಗೆ ಮನೋಜ್ಞವಾಗಿ ಉಪನ್ಯಾಸ ನೀಡಿದರು.

ಡಾ. ಜಿ ಎ ಹೆಗಡೆ ಸೋಂದಾ ವಿಚಾರ ಮಂಡನೆಯ ವಿಷಯಗಳನ್ನು ಸಮನ್ವಯಗೊಳಿಸಿ ತಾರ್ಕಿಕವಾಗಿ ಅಂತಿಮ ಸ್ಪರ್ಶ ನೀಡಿ ಅಧ್ಯಕ್ಷೀಯ ನುಡಿಗಳನ್ನಾಡಿದರು. ರೇಣುಕಾ ನಾಗರಾಜ್ ಮತ್ತು ಸತೀಶ್ ವಾಲಿ ಕಾರ್ಯಕ್ರಮವನ್ನು ನಿರೂಪಿಸಿದರು.

ಪರಿಷತ್ತಿನ ಮಹಿಳಾ ಕಲಾವಿದರಿಂದ ''ಭೀಮ ಮತ್ತು ದ್ರೌಪದಿ'' ತಾಳಮದ್ದಲೆ ಕಾರ್ಯಕ್ರಮ ನಡೆಯಿತು. ಕೃಷ್ಣನ ಪಾತ್ರದಲ್ಲಿ ನಿರ್ಮಲ ಗೋಳಿಕೊಪ್ಪ, ಭೀಮನ ಪಾತ್ರದಲ್ಲಿ ದಾಕ್ಷಾಯಿಣಿ ಪಿ ಸಿ, ದ್ರೌಪದಿಯ ಪಾತ್ರದಲ್ಲಿ ರೋಹಿಣಿ ತಮ್ಮ ಅರ್ಥಗಾರಿಕೆಯಿಂದ ಮಿಂಚಿದರು. ಭಾಗವತರಾಗಿ ಶ್ರೀಧರ ಹೆಗಡೆ ಹಣಗಾರು, ಮದ್ದಲೆ ವಾದಕರಾಗಿ ಶ್ರೀಪಾದ್ ಭಟ್ಟ ಮೂಡ್ಗಾರು ರಂಜಿಸಿದರು. ''ಚುಟುಕು ಸಂಭ್ರಮ'' ಚುಟುಕು ಗೋಷ್ಠಿಯಲ್ಲಿ ಡಾ. ಪ್ರಭಾಕರ ನಾಯಕ ಆಶಯದ ನುಡಿಗಳನ್ನಾಡಿ ಚುಟುಕು ಸಾಹಿತ್ಯಕ್ಕೆ ಉತ್ತರ ಕನ್ನಡ ಜಿಲ್ಲೆಯವರು ನೀಡಿದ ಕೊಡುಗೆಗಳ ಬಗ್ಗೆ ಮೆಲುಕು ಹಾಕಿದರು.

ಅಧ್ಯಕ್ಷತೆಯನ್ನು ಶಿಕ್ಷಕ ರಮೇಶ ಹೆಗಡೆ ಕೆರೆಕೋಣ ವಹಿಸಿದ್ದರು. ವಿಜಯಪುರ, ಬೆಂಗಳೂರು, ಹಾವೇರಿ, ಧಾರವಾಡ, ಬೀದರ, ಹೊಸಪೇಟೆ, ಬಾಗೇವಾಡಿ. ರಾಜ್ಯದ ನಾನಾ ಜಿಲ್ಲೆಗಳ 25ಕ್ಕೂ ಹೆಚ್ಚು ಚುಟುಕು ಕವಿಗಳು ತಮ್ಮ ಚುಟುಕುಗಳನ್ನು ಪ್ರಸ್ತುತಪಡಿಸಿದ್ದರು. ಅಧ್ಯಕ್ಷೀಯ ಭಾಷಣದಲ್ಲಿ ರಮೇಶ ಹೆಗಡೆಯವರು ಚುಟು ಕು ಸಾಹಿತ್ಯದ ಬಗೆಗೆ ತಮ್ಮ ನಿಲುವನ್ನು ಪ್ರಸ್ತುತಪಡಿಸುತ್ತಾ ಕಲ್ಪನೆಗಿಂತ ಜೀವನಾನುಭವದಿಂದ ಮೂಡಿಬಂದ ಚುಟುಕುಗಳು ಬಹುದಿನ ಬಾಳಬಲ್ಲವು ಎಂದು ತಮ್ಮದೇ ಆದ ಚುಟುಕನ್ನು ಪ್ರಸ್ತುತಪಡಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಕಥೆಗಾರ ರಾಜು ಉಗ್ರಾಣಕರ ಮತ್ತು ಡಾ. ವಂದನಾ ರಮೇಶ ಮಾಡಿದರು. ಸರ್ವಾಧ್ಯಕ್ಷರಾದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿಯವರೊಂದಿಗೆ ಸಂವಾದದಲ್ಲಿ ವಿಜಯಾ ಗಣಪತಿ ಶೆಟ್ಟಿ ಶಿರಸಿ, ಮಲ್ಲಿಕಾರ್ಜುನ ಪಾಟೀಲ ವಿಜಯಪುರ, ಶೇಖರ್ ಗೌಡ ಪಾಟೀಲ ಹುಬ್ಬಳ್ಳಿ, ಭಾಗವಹಿಸಿ ತಮ್ಮ ಪ್ರಶ್ನೆಗಳಿಗೆ ಶ್ರೀಗಳಿಂದ ಉತ್ತರ ಪಡೆದರು.

ಗಣಪತಿ ಭಟ್ ವರ್ಗಾಸರ ಕಾರ್ಯಕ್ರಮವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರೂಪಿಸಿದರು. ಸಮಾರೋಪ ಸಮಾರಂಭದಲ್ಲಿ ಪ್ರೊ ಡಿ ಎಂ ಭಟ್ ಕುಳವೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ '' ಸಾಹಿತ್ಯ ಪ್ರೇಮವನ್ನು ಮಕ್ಕಳಲ್ಲಿ ಹೆಚ್ಚಿಸಬೇಕು ಚುಟುಕು ಬಿಂದುವಿನಲ್ಲಿ ಬ್ರಹ್ಮಾಂಡವನ್ನು ತೋರಿಸುತ್ತದೆ. ಎದುರಿಗಿದ್ದವರನ್ನು ಎತ್ತರಿಸುವ ಉನ್ನತೀಕರಿಸುವ ಸಮಾಜದ ಏಳಿಗೆಗಾಗಿ ಸಾಮರಸ್ಯಕ್ಕಾಗಿ ವಿವಿಧತೆಯಲ್ಲಿ ಏಕತೆಗಾಗಿ ನಮ್ಮನ್ನು ಮುಂದುವರೆಯುವ ಜ್ಞಾನ ನೀಡುತ್ತದೆ'' ಎಂದರು.

ಸರ್ವಾಧ್ಯಕ್ಷರಾದ ಡಾ ಘನಲಿಂಗ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಆಶೀರ್ವಚನ ನೀಡುವುದರ ಮೂಲಕ ಸಮಾರೋಪ ಭಾಷಣವನ್ನು ಮಾಡಿದರು. ಡಾ.ಜಿ.ಎ.ಹೆಗಡೆ, ಮನೋಹರ ಮಲ್ಮನೆ, ಜಿ.ಯು.ನಾಯಕ, ರಾಘದಾಸ ರಾಮ ಪೈ, ಕೃಷ್ಣಮೂರ್ತಿ ಕುಲಕರ್ಣಿ ಉಪಸ್ಥಿತರಿದ್ದರು. ಕಾರ್ಯನಿರತ ಕಚುಸಾಪ ಜಿಲ್ಲಾಧ್ಯಕ್ಷರುಗಳಿಗೆ ಚುಟುಕು ದಾಸೋಹಿ ಬಿರುದನ್ನಿತ್ತು ಗೌರವಿಸಲಾಯಿತು. ಸಮಾರೋಪ ಕಾರ್ಯಕ್ರಮವನ್ನು ಸಾವಿತ್ರಿ ಶಾಸ್ತಿ ನಿರೂಪಿಸಿದರು. ಸಾಹಿತ್ಯ ಸಂಚಲನದ ಅಧ್ಯಕ್ಷ ಕೃಷ್ಣ ಪದಕಿ ಅವರು ಕಾರ್ಯಕ್ರಮದ ಯಶಸ್ವಿಗೆ ಕಾರಣಕರ್ತರಾದ ಸರ್ವರನ್ನು ವಂದಿಸಿದರು.

ಲೋಕಧ್ವನಿ 30.05.2024 ಗುರುವಾರ

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಹೇಳಿಕೆ

'ಸಮಾಜ ಸಂಘಗಳು ಮಕ್ಕಳನ್ನು ಪ್ರೋತ್ಸಾಹಿಸಲಿ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಸಮಾಜ ಸಂಘಗಳು ಪ್ರತಿಭಾವಂತ ಮಕ್ಕಳನ್ನು ಸನ್ಮಾನಿಸಿ ಪ್ರೋತ್ಸಾಹಿಸಿದರೆ ಹೆಚ್ಚಿನ ಸಾಧನೆಗೆ ಪ್ರೇರಣೆ ದೊರಕುತ್ತದೆ' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದಲ್ಲಿ ಶೀಲವಂತ ಅಕ್ಕಸಾಲಿಗ ಸಮಾಜ ಮತ್ತು ವೀರಭದ್ರೇಶ್ವರ ದೇವಸ್ಥಾನ ಟ್ರಸ್ಟ್ ವತಿಯಿಂದ ಶುಕ್ರವಾರ ನಡೆದ ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಸಂಘಗಳು ಸಮಾಜದ ಆರ್ಥಿಕ ಬಲವರ್ಧನೆ, ಗುಡಿ ಇತ್ಯಾದಿ ನಿರ್ಮಾಣಕ್ಕಾಗಿ ಪ್ರಯತ್ನಿಸುವ ಜೊತೆಗೆ ಪರಸ್ಪರರಲ್ಲಿ ಸಾಮರಸ್ಯ ಮೂಡಿಸಬೇಕು' ಎಂದರು.



ಬಸವಕಲ್ಯಾಣದಲ್ಲಿ ಶೀಲವಂತ ಆಕ್ಕಸಾಲಿಗ ಸಮಾಜ ಮತ್ತು ವೀರಭದ್ರೇಶ್ವರ ದೇವಸ್ಥಾನ ಟ್ರಸ್ಟ್‌ನಿಂದ ಶುಕ್ರವಾರ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸೂರ್ಯಕಾಂತ ಶೀಲವಂತ ಉಪಸ್ಥಿತರಿದ್ದರು

ಸಮಾಜ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಪ್ರೊ.ಸೂರ್ಯಕಾಂತ ಶೀಲವಂತ ಮಾತನಾಡಿ, 'ಅಕ್ಕಸಾಲಿಗರು ಕುಲಕಸಬು ಮುಂದುವರಿಸುವ ಜೊತೆಗೆ ಮಕ್ಕಳಿಗೆ ಶಿಕ್ಷಣ ನೀಡುವುದು ಕೂಡ ಅಷ್ಟೇ ಅನಿವಾರ್ಯವಾಗಿದೆ. ಆದ್ದರಿಂದ ಪ್ರತಿಭಾವಂತರನ್ನು ಪ್ರೋತ್ಸಾಹಿಸುವ ಕಾರ್ಯ ಮುಂದೆಯೂ ನಡೆಯಲಿದೆ' ಎಂದರು.

ಶಶಿಕಾಂತ ಶೀಲವಂತ ಮಾತನಾಡಿ, 'ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರ ಕಲಿಸಿಕೊಡಬೇಕಾಗಿದೆ. ಮಾನವೀಯ ಮೌಲ್ಯಗಳನ್ನು ಅವರಲ್ಲಿ ಬೆಳೆಸುವುದು ಎಲ್ಲರ ಜವಬ್ದಾರಿಯಾಗಿದೆ' ಎಂದರು. ಪ್ರಭು ಶೀಲವಂತ, ಉಮೇಶ ಶೀಲವಂತ ಮಾತನಾಡಿದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚಿನ ಅಂಕ ಪಡೆದ ವೈಷ್ಣವಿ ಗಂಗಾಧರ, ಅಭಿಷೇಕ್ ಶಶಿಕಾಂತ, ವೈಭವಿ ರವಿ, ದಾನೇಶ್ವರಿ ಮಹಾಲಿಂಗ, ವೀರೇಶ ಪ್ರಭು, ಗಣೇಶ ಸೂರ್ಯಕಾಂತ, ಅಭಿಷೇಕ್ ಜಗದೀಶ, ನೇಹಾ ಮಲ್ಲಿಕಾರ್ಜುನ ಅವರನ್ನು ಸನ್ಮಾನಿಸಲಾಯಿತು.

ಸಂಘದ ಪದಾಧಿಕಾರಿಗಳಾದ ಚನ್ನಪ್ಪ ರಾಜಾಪುರೆ, ಈಶ್ವರ ಶೀಲವಂತ, ಗಂಗಾಧರ ಅಂಬುಲಗೆ, ಮಹಾಲಿಂಗ ಅಂಬುಲಗೆ, ಉಮೇಶ ಚಿಂಚೋಳಿಕರ್, ನಾಗಪ್ಪ ತೂಗಾವೆ, ಸಂತೋಷ ಮಾಗೈ, ವೀರಭದ್ರ ಪಂಚಾಳ, ಧನರಾಜ ಶೀಲವಂತ ಉಪಸ್ಥಿತರಿದ್ದರು.

ಪ್ರಜಾವಾಣಿ ಭಾನುವಾರ • ಜೂನ್ 9, 2024

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 4 ಜೂನ್ 2024
4 JUNE 2024

ಶ್ರೀ ರಾಜೇಶ್ವರ ಶಿವಾಚಾರ್ಯ ಆಶಯ | ಬಸವಕಲ್ಯಾಣದಲ್ಲಿ ಪರಿಸರ ಜಾಗೃತಿ ಜಾಥಾ

ಜೀವಸಂಕುಲ ಸಂರಕ್ಷಣೆ ಕಾರ್ಯ ನಡೆಯಲಿ

ಪರಿಸರ ಸಂರಕ್ಷಣೆ ಜತೆಗೆ ಬಸವಕಲ್ಯಾಣ ಸ್ವಚ್ಛ ಸುಂದರ ನಗರವಾಗಬೇಕು ಎಂಬ ಉದ್ದೇಶದಿಂದ ಪರಸರ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಸಸಿಗಳನ್ನು ನೆಡುವುದರ ಜತೆಗೆ ಕಾಳಜಿಯಿಂದ ಬೆಳೆಸುವ ಮೂಲಕ ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕು.
| ಮುಜಾಹಿದ್ ಪಾಶಾ ಖುರೇಶಿ
ಅಧ್ಯಕ್ಷ, ಐಡಿಯಲ್ ಸಂಸ್ಥೆ ಬಸವಕಲ್ಯಾಣ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮಳೆ ನೀರು ಭೂಮಿಯಲ್ಲಿ ಇಂಗಿಸುವ ಕೆಲಸದ ಜತೆಗೆ ವೃಕ್ಷಗಳನ್ನು ಬೆಳೆಸುವ ಕಾರ್ಯ ಹೆಚ್ಚಿಚ್ಚು ನಡೆಯಬೇಕು. ಜೀವ ಸಂಕುಲದ ಸಂರಕ್ಷಣೆ ಆಗಬೇಕಿದೆ. ಮನುಷ್ಯನ ನೆಮ್ಮದಿ ಬದುಕಿಗೆ ಇದೆಲ್ಲವೂ ಅವಶ್ಯಕ ಎಂದು ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯ ನುಡಿದರು.

ನಗರದಲ್ಲಿ ಐಡಿಯಲ್ ಶಿಕ್ಷಣ ಸಂಸ್ಥೆ, ಕನ್ನಡ ಸಾಹಿತ್ಯ ಪರಿಷತ್, ನಗರಸಭೆ, ಪೊಲೀಸ್, ಶಿಕ್ಷಣ, ಅರಣ್ಯ ಇಲಾಖೆ ಸಹಯೋಗದಡಿ ಸೋಮವಾರ ಆಯೋಜಿಸಿದ್ದ ಪರಿಸರ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ಪರಿಸರ ಸಂರಕ್ಷಣೆ ಆದಾಗಲೇ ಜೀವ ಸಂಕುಲದ ಉಳಿವು ಸಾಧ್ಯ. ಮನುಷ್ಯ ತನ್ನ ಭೌತಿಕ ಅಪೇಕ್ಷೆಗಳಿಗಾಗಿ ಪರಿಸರ ನಷ್ಟ ಮಾಡಿ ಪ್ರಾಕೃತಿಕ ವ್ಯವಸ್ಥೆ ಕೆಡಿಸುತ್ತಿದ್ದಾನೆ ಎಂದು ಕಳವಳ ವ್ಯಕ್ತಪಡಿಸಿದರು.

ಜಾಥಾ ಚಾಲನೆ ನೀಡಿದ ತ್ರಿಪುರಾಂತ ಗವಿಮಠ ಸಂಸ್ಥಾನದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಮಾತನಾಡಿ, ಪ್ರತಿಯೊಬ್ಬರೂ ಮನೆ ಮನೆಗೆ ಒಂದು ಸಸಿ ನೆಡುವ ಜತೆಗೆ ಕಾಳಜಿಯಿಂದ ಬೆಳೆಸುವ ಮೂಲಕ ಭವಿಷ್ಯದಲ್ಲಿ ಪರಿಸರದಲ್ಲಿ ಉಂಟಾಗುವ ಅಘಾತಕಾರಿ ಬದಲಾವಣೆಗಳನ್ನು ತಡೆಗಟ್ಟಬಹುದು ಎಂದರು.


ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಪರಿಸರ ದಿನ ನಿಮಿತ್ತ ಸೋಮವಾರ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಕ್ಕೆ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಚಾಲನೆ ನೀಡಿದರು. ಶ್ರೀ ರಾಜೇಶ್ವರ ಶಿವಾಚಾರ್ಯ, ಶ್ರೀ ಬಸವಪ್ರಭು ಸ್ವಾಮೀಜಿ, ಮೌಲಾನಾ ಅಬ್ದುಲ್ ಸಾಹೇಬ್, ಮುಜಾಹಿದ್ ಪಾಶಾ ಖುರೇಶಿ, ಸಿಪಿಐ ಅಲಿಸಾಬ್, ಆರ್ ಎಫ್ಒ ಐಶ್ವರ್ಯ ಗಬ್ಬೂರ, ಬಿಇಒ ಸಿದ್ದವೀರಯ್ಯ ರುದ್ದೂರ, ಶಾಂತಲಿಂಗ ಮಠಪತಿ ಇತರರಿದ್ದರು.

ಗುಣತೀರ್ಥವಾಡಿಯ ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ಮರಗಳ ನಾಶದಿಂದ ವಾತಾವರಣದಲ್ಲಿ ಉಷ್ಣತೆ ಏರಿಕೆ ಕಾಣುತ್ತಿದ್ದೇವೆ. ಪರಿಸರ ಮೇಲಾಗುತ್ತಿರುವ ಪ್ರತಿಕೂಲ ಪರಿಣಾಮದಿಂದ ಭವಿಷ್ಯದಲ್ಲಿ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಹೀಗಾಗಿ ಪ್ರತಿಯೊಬ್ಬರೂ ಪರಿಸರ ಸಂರಕ್ಷಿಸುವಲ್ಲಿ ಕಾಳಜಿ ವಹಿಸಬೇಕು ಎಂದು ಹೇಳಿದರು.

ಐಡಿಯಲ್ ಸಂಸ್ಥೆ ಅಧ್ಯಕ್ಷ ಮುಜಾಹಿದ್ ಪಾಶಾ ಖುರೇಶಿ, ಮೌಲಾನಾ ಅಬ್ದುಲ್ ಸಾಹೇಬ್, ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ದವೀರಯ್ಯ ರುದ್ದೂರ, ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ, ಸಂಸ್ಥೆ ಸದಸ್ಯ ಮುಕ್ತದೀರ್ ಉಮರ್, ನಿವೃತ್ತ ಪ್ರಾಚಾರ್ಯ ಎಂ.ಎಂ. ತಂಬಾಕೆ ಮಾತನಾಡಿದರು.

ಆರ್ಎಫ್ಒ ಐಶ್ವರ್ಯ ಗಬ್ಬೂರ, ಅರಣ್ಯಾಧಿಕಾರಿ ಸಂತೋಷ ಯಾಚೆ, ಸಿಪಿಐ ಅಲಿಸಾಬ್, ಸಂಚಾರಿ ಪಿಎಸ್ಐ ಸುವರ್ಣ ಮಲಶೆಟ್ಟಿ, ನಗರಸಭೆ ಎಇಇ ಪರಿಸರ ಅಭಿಯಂತರ ಮನೋಜ ಕಾಂಬಳೆ, ಎಇಇ ಶಿವಶರಣಪ್ಪ ಸಜ್ಜನಶೆಟ್ಟಿ, ನಿತ್ಯಾನಂದ ಜಮಾದಾರ, ಪ್ರಮುಖರಾದ ತಹಸೀನ್ ಅಲಿ ಜಮಾದಾರ್, ಮುಜಾಹಿದ್ ಉಮರ್ ಖುರೇಷಿ, ಪ್ರಾಚಾರ್ಯ ನರೇಂದ್ರಕುಮಾರ, ಅಬ್ದುಲ್ ಮಾಜಿದ್, ಮೇಘರಾಜ ಜಾಧವ್, ಪ್ರಭಾಕರ ನೌಗೀರೆ, ಎಂ.ಡಿ. ಸಲಾವುದ್ದೀನ್, ಖಾಸಿಮ್, ಆಸಿಫ್, ರೂಪಾ ಪಾಂಚಾಳ, ವಿಜಯಲಕ್ಷ್ಮೀ, ಸುಮಿತ್ರಾ ಘಾಳೆ, ಅಸ್ಮೀತಾ ಹಿಬಾರೆ, ರಹೀಮ್, ಜಾವೀದ್ ಖಾನ್ ಇತರರಿದ್ದರು.

Jodii
by KannadaMatrimony
ವಿಶೇಷ ಮ್ಯಾಟ್ರಿಮೋನಿ ಅಪ್ಲಿಕೇಶನ್
ದಿಪ್ಲೊಮಾ, ಪಿಯುಸಿ, ಹತ್ತನೇ ತರಗತಿ ಮತ್ತು ಕೆಳಗಿನವರಿಗೆ
ಕನ್ನಡ ಭಾಷೆಯಲ್ಲಿ ಬಳಸಿ | ಮಹಿಳೆಯರಿಗೆ ಉಚಿತ!
ಸಹಾಯಕ್ಕಾಗಿ ಕರೆ ಮಾಡಿ 91761 42901

ಕರ್ನಾಟಕದಲ್ಲಿ ಕನ್ನಡ ಭಾಷೆ ಮೆರೆಯಬೇಕು ,ಕನ್ನಡವೇ ಆಳಬೇಕು: ಗವಿಮಠ ಶ್ರೀ

ಜನಮಾಧ್ಯಮ
ಸೋಮವಾರ | ಮೇ | 27 | 2024

»ಜನಮಾಧ್ಯಮ, ಶಿರಸಿ: ಕನ್ನಡ ಶಾಲೆಗಳು ಇಂದು ನಮ್ಮ ರಾಜ್ಯದಲ್ಲಿಯೇ ಶೋಚನೀಯ ಸ್ಥಿತಿಗೆ ಬಂದು ತಲುಪಿವೆ. ಆಂಗ್ಲ ಮಾಧ್ಯಮ ಶಾಲೆಗಳು ಅಟ್ಟಹಾಸದಿಂದ ಮೆರೆಯುತ್ತಿವೆ. ಕರ್ನಾಟಕದಲ್ಲಿ ಕನ್ನಡ ಭಾಷೆ ಮೆರೆಯಬೇಕು ಮತ್ತು ಕನ್ನಡವೇ ಆಳಬೇಕು ಎಂದು ಬಸವಕಲ್ಯಾಣ ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು. ಅವರು ಭಾನುವಾರ ನಗರದ ನೆಮ್ಮದಿ ಅವರಣದಲ್ಲಿ ಆಯೋಜಿಸಲಾಗಿದ್ದ ರಾಜ್ಯಮಟ್ಟದ 12ನೇ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡಿದರು. ರಾಜ್ಯದ ಗಡಿ ಭಾಗದಲ್ಲಿ, ರಾಜಧಾನಿ ಬೆಂಗಳೂರಿನಲ್ಲಿ ತಮಿಳು, ತೆಲುಗು, ಮರಾಠಿ ಭಾಷೆ ಪ್ರಭಾವ ಜಾಸ್ತಿಯಾಗಿದೆ. ಕನ್ನಡ ಉಳಿಸಿ ಬೆಳೆಸಲು ನಾವು ಶ್ರಮ ಪಡಬೇಕಿದೆ. ರಾಷ್ಟ್ರ ಭಾಷೆ ಹಿಂದಿ



ಪ್ರಾಥಮಿಕ ಶಾಲಾ ಮಟ್ಟದಲ್ಲಿಯೇ ಕನ್ನಡದ ಭಾಷು ಮಕ್ಕಳಲ್ಲಿ ಭದ್ರವಾಗಿ ಬೇರೂರಿದೆ ಆದು ಮುಂದೆ ಹೆಮ್ಮರವಾಗಲು ಸಾಧ್ಯ. ಆಂಗ್ಲ ಮಾಧ್ಯಮಕ್ಕೆ ಸೇರಿಸಲು ತುದಿಗಾಲಲ್ಲಿ ನಿಂತಿರುವ ಪಾಲಕರು ಈ ಅಂಶವನ್ನು ಗಮನಿಸಬೇಕು.
● ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ

ಕಲಿಯುವುದು ಅನಿವಾರ್ಯ ಮತ್ತು ಆದರಲ್ಲಿ ತಪ್ಪೇನಿಲ್ಲ. ಆದರೆ, ಕನ್ನಡ ಭಾಷೆಯೇ ರಾಜ್ಯದಲ್ಲಿ ಪ್ರಧಾನವಾಗಬೇಕು. ನಮ್ಮ ಗ್ರಾಮ ಗ್ರಾಮಗಳಲ್ಲಿ ಕನ್ನಡ ಉಳಿಸಿಕೊಂಡು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದರು. ಬಸವಣ್ಣನವರು ಹೊಸ ಸಮಾಜದ ಹಾದಿಯತ್ತ ಸಾಗಿದಾಗಲೂ ಲೋಕ ವಿರೋಧಗಳು ಬಂದಿದ್ದವು. ಆಗ ಅತ್ಯಂತ ಗಟ್ಟಿತನ, ಧೈರ್ಯದಿಂದ ಮುಂದೆ ಸಾಗಿದ ಅವರು, ಶರಣ ವಚನೋಕ್ತಿಗಳನ್ನು ಪ್ರಸ್ತುತ ಪಡಿಸಿದಾಗ ಆತ್ಮ ವಿಶ್ವಾಸದ ದಾರಿಗಳು ತೆರೆದುಕೊಂಡವು. ಬಸವಾದಿ ಶರಣರ ಅನೇಕ ವಿಚಾರಗಳು ಇಂದಿನ ಯುವ ಜನರ ಸುಂದರ ಬದುಕಿಗೆ ದಾರಿ ದೀಪಗಳಾಗಿವೆ. ಮಾನವ ಎಷ್ಟೇ ದಿನ ಬದುಕುಳಿಯಲಿ, ಏನೇ ಸಾಧಿಸಲಿ. ಆದರೆ ಸಾಧನೆಯೆಲ್ಲ ಒಳ್ಳೆಯ ತನದಿಂದ ಕೂಡಿರಬೇಕು. ನಾಡಿನಲ್ಲಿ ಹಲವಾರು ಮಠಗಳಿಂದ ಅನೇಕ ಸಾಧಕರ ಸರಣೀಕೃತ ಪುಸ್ತಕಗಳು ಹೊರಬಂದಿವೆ. ಇಂತಹ ಸಾಧನೆ ರಾಜ್ಯ ಚುಟುಕು ಸಾಹಿತ್ಯ ಪರಿಷತ್ತಿನಿಂದಲೂ ನಡೆಯಬೇಕಿದೆ. ಇದಕ್ಕೆ ಸಮಾಜ ಹಾಗೂ ಸರ್ಕಾರ ಆಗತ್ಯ ನೆರವು ನೀಡಬೇಕು ಎಂದರು. ಹಿರಿಯ ಚಿಂತಕ ರಾಮದಾಸ ರಾಮ ಪೈ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀ ರುದ್ರದೇವರ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ನಾಟಕಕಾರ ಹನುಮಂತ ಸಾಲಿ, ಚುಟುಕು ಸಾಹಿತ್ಯ ಪರಿಷತ್ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ, ಪ್ರಸಾರಾಂಗ ನಿರ್ದೇಶಕ ಚೆನ್ನಬಸಪ್ಪ ಧಾರವಾಡ ಶೆಟ್ರು, ಮನೋಹರ ಮಲ್ಕನೆ, ಕೃಷ್ಣ ಪದಕಿ, ಜಿ.ಯು.ಹೊನ್ನಾವರ, ಡಾ.ಶಾಂತಣ್ಣ ಕಡಿದಾಲ, ರಾಮು ಕಿಣಿ, ಮಂಜುನಾಥ ಹೆಗಡೆ ಹುಡ್ಲಮನೆ ಮತ್ತಿತರರು ಉಪಸ್ಥಿತರಿದ್ದರು. ಭವ್ಯ ಹಳೆಯೂರು ನಿರೂಪಿಸಿ, ವಂದಿಸಿದರು.

Scanned with OKEN Scanner

ಡಾ.ಅಭಿನವ ಶ್ರೀ ಅಭಿಮತ | ಗವಿ ಮಠದಲ್ಲಿ ಜಗದ್ಗುರು ಜಯಂತ್ಯುತ್ಸವ

ಮಾವನ ಕುಲ ಉದ್ಧರಿಸಿದ ರೇಣುಕಾಚಾರ್ಯ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಶ್ರೀ ಜಗದ್ಗುರು ರೇಣುಕಾಚಾರ್ಯರು ದಶಧರ್ಮ ಸೂತ್ರಗಳನ್ನು ನೀಡುವ ಮೂಲಕ ಮಾನವ ಕುಲ ಕೋಟಿ ಉದ್ಧರಿಸಿದ್ದಾರೆ. ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಸಂದೇಶ ನೀಡಿರುವ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಗವಿ ಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಹೇಳಿದರು.

ಇಲ್ಲಿಯ ತ್ರಿಪುರಾಂತನ ಗವಿ ಮಠದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವಲ್ಲಿ ಮಾತನಾಡಿ, ಸಿದ್ಧಾಂತ ಶಿಖಾಮಣಿ ಇಡೀ ಮಾನವ ಕುಲದ ಒಳತಿಗಾಗಿ ಇದೆ. ರೇಣುಕಾಚಾರ್ಯರು ಸಮಾಜ ಮುಖಿ ಕಾರ್ಯ ಅವಿಸ್ಮರಣೀಯ. ಜಾತಿ, ಮತ, ಪಂಥ ಎನ್ನದೇ ಎಲ್ಲರೂ ಒಂದೇ ಎಂಬ ಭಾವದಿಂದ ಉಪದೇಶ ನೀಡಿದ್ದಾರೆ. ಹೀಗಾಗಿ ತೆಲಂಗಾಣದ ಕೋಲಿಪಾಕ್‌ನಲ್ಲಿ 18 ಜಾತಿಯ ಮಠಗಳನ್ನು ಒಂದೇ ಸ್ಥಳದಲ್ಲಿ ಸ್ಥಾಪಿಸಿದ್ದು ಕಾಣಬಹುದು ಎಂದರು.

ಹಿರನಾಗಾಂವನ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಮಾತನಾಡಿದರು. ಶ್ರೀ ಗುರುಲಿಂಗ ಸ್ವಾಮಿ ಸಾನ್ನಿಧ್ಯ, ಗವಿ ಮಠದ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ್ ಅಧ್ಯಕ್ಷತೆ ವಹಿಸಿದ್ದರು. ಬಾಬುರಾವ್ ಉಳ್ಳಿ, ವೀರಶೆಟ್ಟಿ ಎಂ.ಪಾಟೀಲ್, ಪ್ರಮುಖರಾದ ಪ್ರೊ.ರುದ್ರೇಶ್ವರ ಗೋರ್ಟಾ, ಪ್ರೊ. ಸೂರ್ಯಕಾಂತ ಶೀಲವಂತ, ನಟರಾಜ ಎ.ಜಿ. ಪಾಟೀಲ್, ಮಲ್ಲಿಕಾರ್ಜುನ ಅಲಗೂಡೆ, ಬಿರಾದಾರ್, ಸಾಗರ ಮಾಲಗರ್, ಬಸವರಾಜ ಬಿರಾದಾರ್, ಸಂಜುಕುಮಾರ ಬಿರಾದಾರ್, ರಾಜಕುಮಾರ ಬಿರಾದಾರ್, ಕಾರ್ತಿಕ ಬಿರಾದಾರ್, ಶಿವಕುಮಾರ ಮುನ್ನೋಳ್ಳಿ, ಪ್ರದೀಪ ಕುಂಬಾರ ಇತರರಿದ್ದರು. ಗಾನಯೋಗಿ ಪಂಡಿತ ಪುಟ್ಟರಾಜ ಕವಿ ಗವಾಯಿ ಸಂಘದಿಂದ ಸಂಗೀತ ಕಾರ್ಯಕ್ರಮ ಜರುಗಿತು. ಪ್ರಾಚಾರ್ಯ ಶಾಂತಯ್ಯ ಎಸ್. ಮಠಪತಿ ನಿರೂಪಣೆ ಮಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಗವಿ ಮಠದಲ್ಲಿ ಶುಕ್ರವಾರ ಆಯೋಜಿಸಿದ ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವದಲ್ಲಿ ರಾಜಕುಮಾರ ಹಲಿಂಗೆ ಅವರಿಗೆ ಅಭಿನವ ರೇಣುಕಾ ಶ್ರೀ ಪ್ರಶಸ್ತಿ ನೀಡಿ ಸತ್ಕರಿಸಲಾಯಿತು. ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಶ್ರೀ ಗುರುಲಿಂಗ ಸ್ವಾಮೀಜಿ, ಶರಣಪ್ಪ ಬಿರಾದಾರ್ ಇದ್ದರು.

ರೇಣುಕಾ ಶ್ರೀ ಪ್ರಶಸ್ತಿ ಪ್ರದಾನ

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ನಿಮಿತ್ತ ಗವಿ ಮಠದಿಂದ ಕೊಡಮಾಡುವ ಅಭಿನವ ರೇಣುಕಾ ಶ್ರೀ ಪ್ರಶಸ್ತಿಯನ್ನು ತಾಲೂಕಿನ ಆನಂದವಾಡಿ ಗ್ರಾಮದ ರಾಜಕುಮಾರ ಹಲಿಂಗೆ ಅವರಿಗೆ ಪ್ರದಾನ ಮಾಡಲಾಯಿತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಹಲಿಂಗೆ, ನನಗೆ ಗುರುತಿಸಿ ಪ್ರಶಸ್ತಿ ನೀಡಿದ್ದು ಖುಷಿ ತಂದಿದೆ ಹಾಗೂ ಜವಾಬ್ದಾರಿ ಹೆಚ್ಚಿದೆ. ಗವಿಮಠದಲ್ಲಿ ಜಾತಿಯತೆ ಇಲ್ಲ. ಎಲ್ಲರನ್ನು ಸಮನಾಗಿ ಕಾಣಲಾಗುತ್ತಿದೆ. ಶ್ರೀಗಳ ಸಮಾಜಮುಖಿ ಕಾರ್ಯ ಶ್ಲಾಘನೀಯ ಎಂದು ಬಣ್ಣಿಸಿದರು.

ಶ್ರೀರಾಮ ಮಂದಿರದಲ್ಲಿ ಪೂಜೆ

ಬಸವಕಲ್ಯಾಣ: ನಗರದ ಸಿದ್ದೇಶ್ವರ ಕಾಲನಿಯ ಮುಚಳಂಬಿ ಲೇಔಟ್‌ನ ಶ್ರೀರಾಮ ಮಂದಿರದಲ್ಲಿ ವಿಶೇಷ ಪೂಜೆ ಹಾಗೂ ಪ್ರಸಾದ ವಿತರಣೆ ಜರುಗಿತು. ನೇತೃತ್ವ ವಹಿಸಿದ್ದ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ವಿಶೇಷ ಪೂಜೆ ನೆರವೇರಿಸಿದ ನಂತರ ಮಾತನಾಡಿ, ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರರ ಆದರ್ಶವನ್ನು ಪ್ರತಿಯೊಬ್ಬರು ಜೀವನದಲ್ಲಿ ಪಾಲಿಸಬೇಕು ಎಂದು ಸಲಹೆ ನೀಡಿದರು. ಶ್ರೀರಾಮನ ಭಾವಚಿತ್ರಕ್ಕೆ ಶಾಸಕ ಶರಣು ಸಲಗರ ಪೂಜೆ ಸಲ್ಲಿಸಿದರು. ನ್ಯಾಯವಾದಿ ರಾಜಕುಮಾರ ಮುಡಬಿ, ಪ್ರಮುಖರಾದ ವಿಜಯಕುಮಾರ ಮುಚಳಂಬಿ, ಅಮೂಲಕುಮಾರ ಸದಾನಂದೆ, ಶಿವರಾಜ ಹಿಂದರಗೆ, ಕೃಷ್ಣಾ ಗೋಣೆ, ರಾಚಣ್ಣ ವಸ್ತ್ರದ, ವಿಶ್ವನಾಥ ಚಿರಡೆ. ಸಂಜು ಪಾಟೀಲ್, ಶಿವರಾಜ ಮೆಂಗದೆ, ವೆಂಕಟೇಶ ಖರಟಮಲ್, ಶಿವಶಂಕರ ಅಮರಶೆಟ್ಟೆ, ಡಾ.ವೈಜಿನಾಥ ಭಂಡಾರೆ, ಶಾಂತವೀರ ಸ್ವಾಮಿ ಇತರರಿದ್ದರು. ಬೆಳಗ್ಗೆ ವಿಶೇಷ ಪೂಜೆ ನಡೆದ ನಂತರ ಮಹಾ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು, ಕಾಲನಿ ಸೇರಿ ಇತರ ಕಡೆಗಳಿಂದ ಆಗಮಿಸಿದ ಭಕ್ತರು ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು. ಸಿದ್ದೇಶ್ವರ ಕಾಲನಿಯಲ್ಲಿ ಮಂದಿರಕ್ಕಾಗಿ ಸುತ್ತುಗೋಡೆ ನಿರ್ಮಿಸಲಾಗಿದೆ. ಮುಂದಿನ ವರ್ಷ ಗರ್ಭ ಗುಡಿ ನಿರ್ಮಿಸಿ ಮೂರ್ತಿ ಪ್ರತಿಷ್ಠಾಪಿಸಲಾಗುವದು ಎಂದು ಆಯೋಜಕರು ತಿಳಿಸಿದ್ದಾರೆ.

ನಂ1 ವಿಜಯವಾಣಿ
VIJAYAVANI » KALABURAGI
ಶನಿವಾರ 23 ಮಾರ್ಚ್ 2024
23 MARCH 2024



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಸೀತಾ ಕಾಲನಿಯಲ್ಲಿ ಇತ್ತೀಚಿಗೆ ಆಯೋಜಿಸಿದ್ದ ರುದ್ರಾಭಿಷೇಕ ಮತ್ತು ಅಭಿನಂದನಾ ಸಮಾರಂಭದಲ್ಲಿ ಉತ್ತರಕನ್ನಡ ಜಿಲ್ಲೆ ಶಿರಸಿಯಲ್ಲಿ ನಡೆದ ರಾಜ್ಯ ಮಟ್ಟದ 12ನೇ ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಚುಟುಕು ಚೇತನ ಸಾಹಿತ್ಯ ಪುರಸ್ಕೃತರಾದ ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಅವರನ್ನು ವಿದ್ಯುತ್ ಗುತ್ತಿಗೆದಾರ ರಾಕೇಶ ಪುರವಂತ ದಂಪತಿ ಸತ್ಕರಿಸಿದರು.

Scanned with OKEN Scanner

ಸರ್ಕಾರದಿಂದ ರೇಣುಕ ಜಯಂತಿ-ಸಂತಸ

| ತ್ರೀಪುರಾಂತನ ಗವಿ ಮಠದಲ್ಲಿ ರೇಣುಕಾಚಾರ್ಯ ಜಯಂತಿ | ಹಲಿಂಗೆಗೆ ಅಭಿನವ ರೇಣುಕ ಶ್ರೀ ಪ್ರಶಸ್ತಿ ಪ್ರದಾನ

■ ಉದಯವಾಣಿ ಸಮಾಚಾರ

ಬಸವಕಲ್ಯಾಣ: ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಸಂದೇಶ ನೀಡಿರುವ ಕೀರ್ತಿ ಜಗದ್ಗುರು ರೇಣುಕಾಚಾರ್ಯರಿಗೆ ಸಲ್ಲುತ್ತದೆ ಎಂದು ಇಲ್ಲಿಯ ತ್ರೀಪುರಾಂತನ ಗವಿ ಮಠದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿಯ ತ್ರೀಪುರಾಂತನ ಗವಿ ಮಠದಲ್ಲಿ ಶುಕ್ರವಾರ ಹಮ್ಮಿಕೊಂಡ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೇಣುಕಾಚಾರ್ಯರು ಸಮಾಜಮುಖಿ ಕಾರ್ಯ ಮಾಡುವ ಮೂಲಕ ಜಾತಿ, ಮತ, ಪಂಥ ಎನ್ನದೇ ಎಲ್ಲರೂ ಒಂದೇ ಎಂಬ ಭಾವದಿಂದ ಕಾಣಿದರು. ಹೀಗಾಗಿ ಕೋಲಿಪಾಕನಲ್ಲಿ 18 ಜಾತಿಯ ಮಠಗಳನ್ನು ಒಂದೇ ಸ್ಥಳದಲ್ಲಿ ಇಂದು ಕೂಡಾ ಕಾಣಬಹುದಾಗಿದೆ ಎಂದರು.

ಜಗದ್ಗುರು ರೇಣುಕಾಚಾರ್ಯರು ದಶಧರ್ಮ ಸೂತ್ರಗಳನ್ನು ನೀಡುವ ಮೂಲಕ ಮಾನವ ಕುಲ ಕೋಟಿಗೆ ಉದ್ದರಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಸಿದ್ಧಾಂತ ಶಿಖಾಮಣಿ ಇಡೀ ಮಾನವ ಕುಲದ ಒಳಿತಿಗಾಗಿ ಇದೆ. ಸಿದ್ಧಾಂತ ಶಿಖಾಮಣಿಯ ನೂರಾ ಒಂದು ಸ್ಥಲಗಳನ್ನ ರೇಣುಕಾ ಚಾರ್ಯರು ಅಗ್ಗಸ್ತ ಮಹಾಋಷಿಯನ್ನು ಬೋಧಿಸಿದ ಗ್ರಂಥ ಸಿದ್ಧಾಂತ ಶಿಖಾಮಣಿಯಾಗಿದೆ ಎಂದರು. ರೇಣುಕಾಚಾರ್ಯರು ಅಷ್ಟಾವರಣ, ಪಂಚಾಚಾರ್ಯ, ಷಟಸ್ಥಲಗಳನ್ನ ಮಾನವ ಕುಲಕೋಟಿಗೆ ತಿಳಿಸಿದ್ದಾರೆ. ಇಂತಹ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ರಾಜ್ಯ ಸರಕಾರ ಜನಾಂಗದ ಶಾಂತಿಯ ತೋಟ ಈ ಗವಿ ಮಠವಾಗಿದೆ. ತಾಲೂಕಿನ ಆನಂದ ವಾಡಿ ಗ್ರಾಮದ ನಿವಾಸಿಯಾಗಿರುವ ಹಾಗೂ ಸಮಾಜಮುಖಿ ಕಾರ್ಯಗಳನ್ನು ಕೈಗೊಳ್ಳುವ ಜೊತೆಗೆ ಸಾಮಾಜಿಕ, ಧಾರ್ಮಿಕ ಸೇವೆ ಸಲ್ಲಿಸುತ್ತಿರುವ ರಾಜಕುಮಾರ ಹಲಿಂಗೆ ಅವರಿಗೆ ಅಭಿನವ ರೇಣುಕ ಶ್ರೀ ಪ್ರಶಸ್ತಿ ನೀಡಿ ಸತ್ಕರಿಸಿರುವುದು ಸಂತಸ ತಂದಿದೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಆನಂದ ವಾಡಿಯ ಗುರುಲಿಂಗ ಸ್ವಾಮೀಜಿ ಉಪಸ್ಥಿತರಿದ್ದರು. ಗವಿ ಮಠದ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಪ್ರಮುಖರಾದ ಪ್ರೊ। ರುದ್ರೇಶ್ವರ ಗೋರ್ಟಾ, ಎ.ಜಿ ಪಾಟೀಲ, ಮಲ್ಲಿಕಾರ್ಜುನ ಅಲಗೂಡೆ, ಬಾಬುರಾವ ಉಳ್ಳೆ ವೀರಶೆಟ್ಟಿ ಎಂ.ಪಾಟೀಲ, ಪ್ರೊ। ಸೂರ್ಯಕಾಂತ ಶೀಲವಂತ, ನಟರಾಜ ಬಿರಾದಾರ, ಸಾಗರ ಮಾಲಗರ, ಬಸವರಾಜ ಬಿರಾದಾರ, ಸಂಜುಕುಮಾರ ಬಿರಾದಾರ, ರಾಜಕುಮಾರ ಬಿರಾದಾರ, ಕಾರ್ತಿಕ ಬಿರಾದಾರ, ಶಿವಕುಮಾರ್ ಮುನ್ನೋಳ್ಳಿ, ಪ್ರದೀಪ ಕುಂಬಾರ ಸೇರಿದಂತೆ ಶ್ರೀಮಠದ ಭಕ್ತರು ಪಾಲ್ಗೊಂಡಿದ್ದರು. ಗಾನಯೋಗಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳ ಸಂಘದ ವತಿಯಿಂದ ಸಂಗೀತ ಕಾರ್ಯಕ್ರಮ ಜರುಗಿತು.



ಬಸವಕಲ್ಯಾಣ: ತ್ರೀಪುರಾಂತನ ಗವಿಮಠದಲ್ಲಿ ಶುಕ್ರವಾರ ಹಮ್ಮಿಕೊಂಡ ಜಗದ್ಗುರು ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ರಾಜಕುಮಾರ ಹಲಿಂಗೆ ಅವರಿಗೆ ಅಭಿನವ ರೇಣುಕ ಶ್ರೀ ಪ್ರಶಸ್ತಿ ನೀಡಿ ಸತ್ಕರಿಸಲಾಯಿತು.

ಇಲ್ಲಿಯ ಗವಿ ಮಠದಲ್ಲಿ ನಡೆದ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ತಾಲೂಕಿನ ಆನಂದ ವಾಡಿ ಗ್ರಾಮದ ರಾಜಕುಮಾರ ಹಲಿಂಗೆ ಅವರಿಗೆ ಅಭಿನವ ರೇಣುಕ ಶ್ರೀ ಪ್ರಶಸ್ತಿ ನೀಡಿ ಪೂಜ್ಯರು ಸತ್ಕರಿಸಿದರು. ಪ್ರಶಸ್ತಿ ಸ್ವೀಕರಿಸಿ ರಾಜಕುಮಾರ ಹಲಿಂಗೆ ಮಾತನಾಡಿ, ಡಾ। ಅಭಿನವ ಘನಲಿಂಗಗ ರುದ್ರಮುನಿ ಶಿವಾಚಾರ್ಯರು ನನ್ನನ್ನು ಗುರುತಿಸಿ ಈ ಪ್ರಶಸ್ತಿ ನೀಡಿ ಸತ್ಕರಿಸಿದ್ದಾರೆ. ಹೀಗಾಗಿ ನನಗೆ ಒಂದೆಡೆ ಖುಷಿ ತಂದರೆ ಇನ್ನೊಂದೆಡೆ ನನ್ನ ಜವಾಬ್ದಾರಿ ಹೆಚ್ಚಿಸಿದೆ. ಈ ಪ್ರಶಸ್ತಿ ನೀಡಿರುವದು ಎಂದಿಗೂ ಮರೆಯಲಾರೆ ಎಂದರು.

ಪ್ರತಿ ವರ್ಷ ತ್ರಯೋದಶಿ ತಿಥಿಯಂದು ಆಚರಣೆಗೆ ಕ್ರಮ ಕೈಗೊಂಡಿದ್ದು ಸಂತಸ ತಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಹಿರನಾಗಾಂವನ ಜಯಶಾಂತಲಿಂಗ ಸ್ವಾಮೀಜಿ ಮಾತನಾಡಿ, ಮಠದಿಂದ ಘಟ ಬೆಳಗಬಾರದು ಘಟದಿಂದ ಮಠಗಳು ಬೆಳಗಬೇಕು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವ ಹಾಗೆ ಸರ್ವ

ಕಲಬುರಗಿ ಉದಯವಾಣಿ
ಶನಿವಾರ, ಮಾರ್ಚ್ 23, 2024

Scanned with OKEN Scanner

'ಧರ್ಮ ರಕ್ಷಿಸಿದ ರೇಣುಕಾಚಾರ್ಯರು'

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದ ಹಿರೇಮಠ ಕಾಲೊನಿಯ ರೇಣುಕಾಚಾರ್ಯರ ದೇವಸ್ಥಾನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜಯಂತಿಯಲ್ಲಿ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಸನ್ಮಾನಿಸಲಾಯಿತು

ಬಸವಕಲ್ಯಾಣ: ನಗರದ ಹಿರೇಮಠ ಕಾಲೊನಿಯಲ್ಲಿ ಶನಿವಾರ ಬೀಡ ಜಂಗಮ ಕ್ಷೇಮಾಭಿವೃದ್ಧಿ ಟ್ರಸ್ಟ್ ಮತ್ತು ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ವತಿಯಿಂದ ರೇಣುಕಾಚಾರ್ಯರ ಜಯಂತಿ ಆಚರಿಸಲಾಯಿತು.

ಗಡಿಗೌಡಗಾಂವ ಶಾಂತವೀರ ಶಿವಾಚಾರ್ಯರು ಮಾತನಾಡಿ, 'ರೇಣುಕಾಚಾರ್ಯರು ಧರ್ಮ ರಕ್ಷಣೆಗೈದರು' ಎಂದರು. ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ತೆಲಂಗಾಣದ ಕೊಲ್ಲನಪಾಕಿ ರೇಣುಕಾಚಾರ್ಯರ ಜನ್ಮಸ್ಥಳವಾಗಿದ್ದು ಅಲ್ಲಿ 18 ಜಾತಿಯ ಮಠಗಳು ಇವೆ' ಎಂದರು.

ಸಂಘದ ಅಧ್ಯಕ್ಷ ಬಸವರಾಜ ಸ್ವಾಮಿ, ರಾಕೇಶ ಪುರವಂತ, ಶಾಂತವೀರ ಪೂಜಾರಿ ಮಾತನಾಡಿದರು. ಮಠಪತಿ, ಶರಣಯ್ಯ ಮಠಪತಿ, ಪ್ರಮುಖರಾದ ಎ.ಜಿ.ಪಾಟೀಲ, ಬಕ್ಕಯ್ಯ ವೈಜನಾಥ ಸ್ವಾಮಿ, ಸೂರ್ಯಕಾಂತ ಸ್ವಾಮಿ, ಮಲ್ಲಿಕಾರ್ಜುನ ಕಾಡಾದಿಮಠ, ಮಠ, ಲಕ್ಷ್ಮಣಸಿಂಗ ಸಿಂಗಾರೆ, ರಮೇಶ ಎಂ.ಕೆ.ನಂದಿ, ವೀರಣ್ಣ ಶೀಲವಂತ, ರಾಜೋಳೆ ಉಪಸ್ಥಿತರಿದ್ದರು. ಅಭಿಷೇಕ, ಶಾಂತವೀರಯ್ಯ, ರೇವಣಸಿದ್ದಯ್ಯ ಅನ್ನ ಸಂತರ್ಪಣೆ ನಡೆಯಿತು.

ಪ್ರಜಾವಾಣಿ ಭಾನುವಾರ • ಮಾರ್ಚ್ 24, 2024

ಅಭಿನವ ಘನಲಿಂಗ ಶ್ರೀ ಪ್ರಶಸ್ತಿಗೆ ರಾಕೇಶ ಭಾಜನ



ಬಸವಕಲ್ಯಾಣ: ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ರಾಕೇಶ ಪುರವಂತ ದಂಪತಿಯನ್ನು ಅಭಿನಂದಿಸಿ ಸಮಾರಂಭಕ್ಕೆ ಆಹ್ವಾನಿಸಿದರು.

■ ಉದಯವಾಣಿ ಸಮಾಚಾರ

ಬಸವಕಲ್ಯಾಣ: ಇಲ್ಲಿಯ ತ್ರಿಪುರಾಂತನ ಗವಿ ಮಠದಿಂದ ಕೊಡ ಮಾಡುವ 2024ನೇ ಸಾಲಿನ ಅಭಿನವ ಘನಲಿಂಗ ಶ್ರೀ ಪ್ರಶಸ್ತಿಗೆ ರಾಕೇಶ ಪುರವಂತ ಭಾಜನರಾಗಿದ್ದಾರೆ ಎಂದು ಶ್ರೀಮಠ ಪ್ರಕಟಣೆ ತಿಳಿಸಿದೆ.

ರಾಕೇಶ ಪುರವಂತ ಮಠದ ಭಕ್ತರಲ್ಲಿ ಒಬ್ಬರು. ಅವರು ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಿಗೆ ನೀಡಿರುವ ಕೊಡುಗೆ ಅಪಾರ. ವಿಶೇಷವಾಗಿ ಅವರು ಮಠಕ್ಕೆ ಸಲ್ಲಿಸಿರುವ ಸೇವೆ ಗುರುತಿಸಿ ಈ ಪ್ರಶಸ್ತಿಗೆ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಸ್ಥಾನ ಗವಿಮಠದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದ್ದಾರೆ.

ಏ.28ರಂದು ನಗರದ ಸಂಸ್ಥಾನ ಗವಿಮಠದಲ್ಲಿ ನಡೆಯಲಿರುವ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಜಾತ್ರಾ ಮಹೋತ್ಸವ ಹಾಗೂ ಧರ್ಮ ಸಮಾರಂಭದಲ್ಲಿ ರಾಕೇಶ ಪುರವಂತ ಅವರಿಗೆ 'ಅಭಿನವ ಘನಲಿಂಗ ಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಅಲ್ಲದೇ ಸಮಾರಂಭದಲ್ಲಿ ಪೂಜ್ಯ ಹರಗುರು ಚರ ಮೂರ್ತಿಗಳು, ಸಾಹಿತಿಗಳು, ಕಲಾವಿದರು, ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳಲಿದ್ದಾರೆ ಎಂದಿದ್ದಾರೆ.

ಹೀಗಾಗಿ ಪೂಜ್ಯರು ಹಾಗೂ ಭಕ್ತರು ರಾಕೇಶ ಪುರವಂತ ಮನೆಗೆ ತೆರಳಿ ದಂಪತಿ ಸಮೇತ ಅವರನ್ನು ಅಭಿನಂದಿಸಿ ಸಮಾರಂಭಕ್ಕೆ ಆಹ್ವಾನಿಸಿದರು.

ಈ ವೇಳೆ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪಾ ಬಿರಾದಾರ, ಎ.ಜಿ. ಪಾಟೀಲ, ರಾಮಚಂದ್ರ ಹುಡುಗೆ, ಪ್ರೊ। ರುದ್ರೇಶ್ವರ ಗೋರ್ಟಾ (ಬಿ), ರಮೇಶ ರಾಜೋಳೆ, ಇಂದ್ರಸೇನ ಬಿರಾದಾರ, ಶಾಂತವೀರ ಪೂಜಾರಿ, ಸದಾನಂದ ಕಣಜೆ, ಶರಣು ಮಠಪತಿ, ವಿರಶೆಟ್ಟಿ ಎಂ. ಪಾಟೀಲ, ರವಿ ಚಿಟ್ಟೆ ಮಲ್ಲಿಕಾರ್ಜುನ ಹಿರೇಮಠ, ದೀಪಕ ಪುರವಂತ, ರಾಜು ಸೇರಿದಂತೆ ಇತರರಿದ್ದರು.

ಕಲಬುರಗಿ ಉದಯವಾಣಿ
ಬುಧವಾರ, ಏಪ್ರಿಲ್ 17, 2024

Scanned with OKEN Scanner

ಗವಿ ಮಠದಲ್ಲಿ ಏ.28 ರಂದು ಜರುಗಲಿರುವ ಜಾತ್ರಾ ಮಹೋತ್ಸವ ಹಾಗೂ ಧರ್ಮ ಸಮಾರಂಭ

ಅಭಿನವ ಘನಲಿಂಗ ಶ್ರೀ ಪ್ರಶಸ್ತಿಗೆ ರಾಕೇಶ ಭಾಜನ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಇಲ್ಲಿಯ ತ್ರೀಪುರಾಂತನ ಗವಿ ಮಠದಿಂದ ಕೊಡ ಮಾಡುವ 2024ನೇ ಸಾಲಿನ ಅಭಿನವ ಘನಲಿಂಗ ಶ್ರೀ ಪ್ರಶಸ್ತಿಗೆ ರಾಕೇಶ ಪುರವಂತ ಅವರು ಭಾಜನರಾಗಿದ್ದಾರೆ ಎಂದು ಶ್ರೀಮಠದಿಂದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಾಕೇಶ ಪುರವಂತ ಅವರು ಶ್ರೀಮಠದ ಪರಮ ಭಕ್ತರಲ್ಲಿ ಒಬ್ಬರಾಗಿದ್ದಾರೆ. ಅವರ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಿಗೆ ನೀಡಿರುವ ಕೊಡುಗೆ ಅಪಾರವಾಗಿದೆ. ವಿಶೇಷವಾಗಿ ಅವರು ಶ್ರೀಮಠಕ್ಕೆ ಸಲ್ಲಿಸಿರುವ ಸೇವೆ ಗುರುತಿಸಿ ಈ ಪ್ರಶಸ್ತಿಗೆ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಸ್ಥಾನ ಗವಿಮಠದ ಡಾ. ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯರು ತಿಳಿಸಿದ್ದಾರೆ.

ಇದೇ ಏ.28ರಂದು ನಗರದ ಸಂಸ್ಥಾನ ಗವಿಮಠದಲ್ಲಿ ನಡೆಯಲಿರುವ ಶ್ರೀ ಜಗದ್ಗುರು ಘನಲಿಂಗ ರುದ್ರಮನಿ ಜಾತ್ರಾ ಮಹೋತ್ಸವ ಹಾಗೂ ಧರ್ಮ ಸಮಾರಂಭದಲ್ಲಿ ರಾಕೇಶ ಪುರವಂತ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಅಲ್ಲದೆ ಈ ಸಮಾರಾಭದಲ್ಲಿ ಪೂಜ್ಯ ಹರಗುರು ಚರ ಮೂರ್ತಿಗಳು, ಸಾಹಿತಿಗಳು, ಕಲಾವಿದರು, ಮತ್ತು ಆಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.ಹೀಗಾಗಿ ಭಾನುವಾರ ಪೂಜ್ಯರು ಹಾಗೂ ಭಕ್ತರು ರಾಕೇಶ ಪುರವಂತ ಅವರ ಮನೆಗೆ ತೆರಳಿ ದಂಪತಿ ಸಮೇತ ಅವರಿಗೆ ಅಭಿನಂದಿಸಿ ಆಹ್ವಾನ ನೀಡಿದರು.ಈ ಸಂದರ್ಭದಲ್ಲಿ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪಾ ಬಿರಾದಾರ, ಎ.ಜಿ.ಪಾಟೀಲ, ರಾಮಚಂದ್ರ ಹುಡುಗೆ, ಪ್ರೊ.ರುದ್ರೇಶ್ವರ ಗೋರ್ಟಾ (ಬಿ), ರಮೇಶ ರಾಜೋಳೆ, ಇಂದ್ರಸೇನ ಬಿರಾದಾರ, ಶಾಂತವೀರ ಪೂಜಾರಿ, ಸದಾನಂದ ಕಣಜೆ, ಶರಣು ಮಠಪತಿ, ವೀರಶೆಟ್ಟಿ ಎಂ.ಪಾಟೀಲ, ರವಿ ಚಿಟ್ಟೆ, ಮಲ್ಲಿಕಾರ್ಜುನ ಹಿರೇಮಠ, ದೀಪಕ ಪುರವಂತ, ರಾಜು ಸೇರಿದಂತೆ ಶ್ರೀಮಠದ ಅನೇಕ ಭಕ್ತರು ಉಪಸ್ಥಿತರಿದ್ದರು.



ಬಸವಕಲ್ಯಾಣ ಇಲ್ಲಿಯ ತ್ರೀಪುರಾಂತನ ಗವಿ ಮಠದಿಂದ ಕೊಡ ಮಾಡುವ 2024ನೇ ಸಾಲಿನ ಅಭಿನವ ಘನಲಿಂಗ ಶ್ರೀ ಪ್ರಶಸ್ತಿಗೆ ಭಾಜನರಾದ ರಾಕೇಶ ಪುರವಂತ ಅವರ ನಿವಾಸಕ್ಕೆ ತೆರಳಿದ ಡಾ.ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯರು ದಂಪತಿ ಸಮೇತ ಅವರಿಗೆ ಅಭಿನಂದಿಸಿ ಆಹ್ವಾನ ನೀಡಿದರು.

ವಿಜಯ ಕರ್ನಾಟಕ ಬುಧವಾರ,17 ಏಪ್ರಿಲ್ 2024

ಅಭಿನವ ಘನಲಿಂಗ ಶ್ರೀ ಪ್ರಶಸ್ತಿಗೆ ರಾಕೇಶ ಆಯ್ಕೆ

ವಿಜಯವಾಣಿ ಚಿತ್ರ



ಅಭಿನವ ಘನಲಿಂಗ ಶ್ರೀ ಪ್ರಶಸ್ತಿಗೆ ಭಾಜನರಾದ ರಾಕೇಶ ಪುರವಂತ ಅವರನ್ನು ಬಸವಕಲ್ಯಾಣದಲ್ಲಿ ಭಾನುವಾರ ಸನ್ಮಾನಿಸಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯರು, ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಎ.ಜಿ ಪಾಟೀಲ್, ಪ್ರೊ.ರುದ್ರೇಶ್ವರ ಗೋರ್ಟಾ, ರಮೇಶ ರಾಜೋಳೆ, ವಿರಶೆಟ್ಟಿ ಎಂ.ಪಾಟೀಲ್, ಇಂದ್ರಸೇನ ಬಿರಾದಾರ ಇತರರಿದ್ದರು.

ಬಸವಕಲ್ಯಾಣ: ನಗರದ ಸಂಸ್ಥಾನ ಗವಿಮಠದಿಂದ ಕೊಡಮಾಡುವ 2024ನೇ ಸಾಲಿನ ಅಭಿನವ ಘನಲಿಂಗ ಶ್ರೀ ಪ್ರಶಸ್ತಿಗೆ ರಾಕೇಶ ಪುರವಂತ ಭಾಜನರಾಗಿದ್ದಾರೆ. ರಾಕೇಶ ಅವರ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಿಗೆ ನೀಡಿರುವ ಕೊಡುಗೆ ಅಪಾರವಾದದ್ದು, ಶ್ರೀಮಠಕ್ಕೆ ಅವರು ಸಲ್ಲಿಸಿರುವ ಸೇವೆ ಗುರುತಿಸಿ ಈ ಪ್ರಶಸ್ತಿಗೆ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯರು ತಿಳಿಸಿದ್ದಾರೆ. ಏ.28ರಂದು ನಗರದ ಸಂಸ್ಥಾನ ಗವಿಮಠದಲ್ಲಿ ಜರುಗಲಿರುವ ಶ್ರೀ ಜಗದ್ಗುರು ಘನಲಿಂಗ ರುದ್ರಮನಿ ಜಾತ್ರೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ನಂ1 ವಿಜಯವಾಣಿ VIJAYAVANI » KALABURAGI
ಮಂಗಳವಾರ 16 ಏಪ್ರಿಲ್ 2024
16 APRIL 2024

ಸಮ್ಮೇಳನ ಸರ್ವಾಧ್ಯಕ್ಷರಾಗಿ ಘನಲಿಂಗ ರುದ್ರಮುನಿ ಶಿವಾಚಾರ್ಯ ಆಯ್ಕೆ

ಬಸವಕಲ್ಯಾಣ: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್‌ನ ರಾಜ್ಯಮಟ್ಟದ 12ನೇ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಇಲ್ಲಿಯ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಆಯ್ಕೆ ಮಾಡಲಾಗಿದೆ ಎಂದು. ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ. ರಂಭಾಪುರಿ ಶಾಖಾ ಮಠದ ಉತ್ತಾಸಿ ಸ್ವಾಮಿಗಳಿಗೆ ಬೆಂಗಳೂರು ಅಧ್ಯಾತ್ಮ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ವೈಚಾರಿಕ, ಧಾರ್ಮಿಕ ವಿಚಾರದಲ್ಲಿ ವಾಗ್ಮಿಗಳಾದ ಇವರು ಅಭಿನವ ಶ್ರೀ ಪ್ರಕಾಶನ ಮತಿಯಿಂದ ಕೆಲವು ಪುಸ್ತಕಗಳು ಪ್ರಕಟಿಸಿದ್ದಾರೆ. ಸಿದ್ಧಾಂತ ಸಿಖಾಮಣಿ, ವಚನ ಸಾಹಿತ್ಯ ಬೋಧನೆಯಲ್ಲಿ ಅಪಾರ ಪರಿಶ್ರಮ ಇವರದು. ಮೇ ತಿಂಗಳ ಕೊನೆಯಲ್ಲಿ ಶಿರಸಿಯಲ್ಲಿ ಸಮ್ಮೇಳನ ಜರುಗಲಿದೆ ಎಂದು ಪ್ರಸಾರಾಂಗ ನಿರ್ದೇಶಕ ಚನ್ನಬಸಪ್ಪ ಧಾರವಾಡ ಶೆಟ್ರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.



■ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್‌ನ ರಾಜ್ಯ ಸಮ್ಮೇಳನ

ವಿಜಯ ಕರ್ನಾಟಕ
ಶುಕ್ರವಾರ,19 ಏಪ್ರಿಲ್ 2024

Scanned with OKEN Scanner

ಶ್ರೀ ಮೃತ್ಯುಂಜಯ ಶಿವಾಚಾರ್ಯ ಅಭಿಮತ | ಗವಿಮಠದಲ್ಲಿ ಪ್ರಶಸ್ತಿ ಪ್ರದಾನ

ಜಾತ್ರೆಗಳಿಂದ ಸಮಾಜದಲ್ಲಿ ಸಾಮರಸ್ಯ

ವಿಜಯವಾಣಿ ಚಿತ್ರ



ಗವಿಮಠದಲ್ಲಿ ಭಾನುವಾರ ಏರ್ಪಡಿಸಿದ್ದ ಶ್ರೀ ಘನಲಿಂಗ ರುದ್ರಮುನಿ ಜಾತ್ರೋತ್ಸವದಲ್ಲಿ ರಾಕೇಶ ಪುರವಂತ ಅವರಿಗೆ 2024ರ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರೀ ಮೃತ್ಯುಂಜಯ ಶಿವಾಚಾರ್ಯರು, ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಬಸವಲಿಂಗ ಮಹಾಸ್ವಾಮೀಜಿ, ಶರಣಪ್ಪ ಬಿರಾದಾರ, ಮಹಾದೇವಿ ಪುರವಂತ ಇತರರಿದ್ದರು.

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮಾನವೀಯತೆಗಿಂತ ಮಿಗಿಲಾದ ಧರ್ಮ ಇನ್ನೊಂದಿಲ್ಲ. ಸಮರ ಜೀವನ ಕೊನೆಗೊಂಡು ಅಮರ ಜೀವನದಡೆ ಕೊಂಡೊಯ್ಯುವುದೇ ಗುರುವಿನ ಧರ್ಮ. ಧರ್ಮ ಹಾಗೂ ದೇಶ ಮಾನವನ ಕಣ್ಣು ಇದ್ದಂತೆ. ಎಲ್ಲರಲ್ಲೂ ಧರ್ಮಪ್ರಜ್ಞೆ ಸಾಮರಸ್ಯ ಬೆಳೆಸುವುದೇ ಜಾತ್ರೆಯ ಮೂಲ ಗುರಿಯಾಗಿದೆ ಎಂದು ಕಲ್ಲೂರಿನ ಶ್ರೀ ಮೃತ್ಯುಂಜಯ ಶಿವಾಚಾರ್ಯರು ನುಡಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಭಾನುವಾರ ಏರ್ಪಡಿಸಿದ್ದ ಶ್ರೀ ಘನಲಿಂಗ ರುದ್ರಮುನಿ ಜಾತ್ರೋತ್ಸವ ಹಾಗೂ 2024ರ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಯೋಗಿಗಳು ಶರಣರಿಗೆ ಇಷ್ಟಲಿಂಗ ದೀಕ್ಷೆ ಕೊಟ್ಟು ಮುಕ್ತಿಯ ಮಾರ್ಗ ತೋರಿದ ಮಹಾಮಹಿಮರು ಎಂದು ಹೇಳಿದರು.

ನೇತೃತ್ವ ವಹಿಸಿದ್ದ ಗವಿಮಠ ಸಂಸ್ಥಾನದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಆಧುನಿಕ ಜಗತ್ತಿನಲ್ಲಿ ಪ್ರಗತಿಪರ ವಿಚಾರಧಾರೆಗಳ ಹೆಸರಿನಲ್ಲಿ ಭಾರತೀಯ ಉತ್ಕೃಷ್ಟ ಸಂಸ್ಕೃತಿ ನಾಶವಾಗಬಾರದು. ಧರ್ಮ ಸಂಪ್ರದಾಯ ಆಚರಣೆ ಬೇರೆ ಬೇರೆಯಾದರೂ ಎಲ್ಲರ ಗುರಿ ಮಾನವ ಕಲ್ಯಾಣವೇ ಆಗಿದೆ. ಹೀಗಾಗಿ ಈ ಗವಿಮಠದ ಜಾತ್ರೆ ಭಾವೈಕ್ಯತೆಯ ಜಾತ್ರೆಯಾಗಬೇಕು ಎಂದು ಸದಾಶಯ ವ್ಯಕ್ತಪಡಿಸಿದರು.

ಖಟಕ ಚಿಂಚೋಳಿಯ ಶ್ರೀ ಬಸವಲಿಂಗ ಮಹಾಸ್ವಾಮೀಜಿ ಆಶೀರ್ವಚನ ನೀಡಿದರು. ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಪ್ರಮುಖರಾದ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ಅಲಗೂಡ, ಮಡಿವಾಳಯ್ಯ ಸ್ವಾಮಿ, ಬಸವರಾಜ ಬಿರಾದಾರ, ಮಂಜುನಾಥ ಸ್ವಾಮಿ, ನಟರಾಜ ಬಿರಾದಾರ, ಬಸವರಾಜ ಬಿರಾದಾರ, ಶರಣು ಮಠಪತಿ, ಶಾಂತವೀರ ಕಾಪಾಡೆ, ಓಂನಾಥ ಪಾಟೀಲ್, ಪ್ರೊ. ರುದ್ರೇಶ್ವರ ಗೋರ್ಟಾ, ಪ್ರೊ.ಸೂರ್ಯಕಾಂತ ಶೀಲವಂತ, ರಮೇಶ ರಾಜೋಳಿ, ಭೀಮು ಬಚಣಿ, ಶಿವಕುಮಾರ ಬಿರಾದಾರ, ಸದಾನಂದ ಕಣಜೆ, ಸಾಗರ ಮಾಲಗರ, ವಿಠ್ಠಲ ರಾಯಪ್ಪನೋರ ಇತರರಿದ್ದರು.

> ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಯುವ ಸ್ವಾಮಿಗಳಾಗಿ ಸರ್ವ ಭಕ್ತರನ್ನು ಆಕರ್ಷಿಸುವ ಹಾಗೆ ಭಕ್ತರ ಸಹಕಾರದಿಂದ ಶ್ರೀಮಠ ಬೆಳೆಸುತ್ತಿದ್ದಾರೆ. ವಿಶೇಷವಾಗಿ ಭಕ್ತರನ್ನು ಧರ್ಮ ಮಾರ್ಗದಲ್ಲಿ ಮುನ್ನಡೆಸಲು ಸಂಕಲ್ಪ ಮಾಡಿದ್ದಾರೆ.
> | ಶ್ರೀ ಬಸವಲಿಂಗ ಮಹಾಸ್ವಾಮೀಜಿ
> ಖಟಕ ಚಿಂಚೋಳಿ

ಪ್ರಾಚಾರ್ಯ ಶಾಂತಯ್ಯ ಮಠಪತಿ ಪ್ರಾಸ್ತಾವಿಕ ನುಡಿದರು. ಶಿಕ್ಷಕ ಶಿವಕುಮಾರ ಮುನ್ನೋಳಿ ಸ್ವಾಗತಿಸಿದರು. ಅಂಬಾರಾಯ ಊಗಾಜಿ ಕೋಹಿನೂರ ನಿರೂಪಣೆ ಮಾಡಿದರು. ಶ್ರೀ ಗಾನಯೋಗಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳ ಶಿಷ್ಯರಿಂದ ಸಂಗೀತ ಸೇವೆ ಜರುಗಿತು. ಮಂಠಾಳ ಮತ್ತು ತೋಗಲೂರ ಮಹಿಳಾ ಭಜನಾ ಮಂಡಳಿಯಿಂದ ಚಕ್ರಿ ಭಜನೆ ಹಾಗೂ ಕೋಲಾಟ ಗಮನ ಸೆಳೆಯಿತು.

ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ: ರಾಕೇಶ ಪುರವಂತ ಅವರಿಗೆ 2024ರ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು. ಬಸತೀರ್ಥಯ್ಯಾ ಕಾಡಾದೆ, ಲಿಂಗರಾಜ ಬಿರಾದಾರ, ಸಿದ್ರಾಮಪ್ಪ ಕಲ್ಯಾಣಿ ತ್ರಿಪುರಾಂತ ಅವರಿಗೆ ಶ್ರೀ ಗುರುರಕ್ಷೆ ನೀಡಿ ಆಶೀರ್ವದಿಸಲಾಯಿತು.

ವಿಜಯವಾಣಿ VIJAYAVANI » KALABURAGI
ಸೋಮವಾರ 29 ಏಪ್ರಿಲ್ 2024
29 APRIL 2024

ಪ್ರತಿಭಾವಂತರಿಗೆ ಪ್ರೋತ್ಸಾಹಿಸುವ ಕಾರ್ಯವಾಗಲಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಸಮಾಜದಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವ ಕಾರ್ಯ ನಿರಂತರವಾಗಿ ನಡೆಯಬೇಕು. ಅವರ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿ ಇನ್ನೂ ಹೆಚ್ಚಿನ ಸಾಧನೆಗೆ ಪ್ರೇರಣೆ ನೀಡಿದಾಗ ಮಾತ್ರ ವಿದ್ಯಾರ್ಥಿಗಳಿಂದ ಉತ್ತಮ ಮತ್ತು ಗುಣಮಟ್ಟದ ಫಲಿತಾಂಶ ಪಡೆಯಲು ಸಾಧ್ಯ ಎಂದು ಇಲ್ಲಿಯ ಗವಿ ಮಠದ ಪೂಜ್ಯ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಸದಾನಂದ ಸ್ವಾಮಿ ಮಠದಲ್ಲಿ ಹಮ್ಮಿಕೊಂಡಿದ್ದ ಶ್ರೀ ವೀರಭದ್ರೇಶ್ವರ ದೇವಸ್ಥಾನ ಟ್ರಸ್ಟ್ ಶೀಲವಂತ್ ಅಕ್ಕಸಾಲಿಗ ಸಮಾಜ ಸಂಘದ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ವಿದ್ಯಾರ್ಥಿಗಳು ಜೀವನದಲ್ಲಿ ದೊಡ್ಡ ಗುರಿಯ ಕನಸು ಕಾಣಬೇಕು. ಆ ಕನಸು ನನಸಾಗಿಸಲು ಪ್ರಯತ್ನಿಸಬೇಕು ಜತೆಗೆ ಶಿಕ್ಷಕರ ಮಾರ್ಗದರ್ಶನದಲ್ಲಿ ಸಾಗಿದಾಗ ಖಂಡಿತವಾಗಿ ಯಶಸ್ಸು ಕಾಣಲು ಸಾಧ್ಯವಾಗುತ್ತದೆ ಎಂದರು.ಅಧ್ಯಕ್ಷತೆ ವಹಿಸಿದ್ದ ಪ್ರೊ.ಸೂರ್ಯಕಾಂತ ಶೀಲವಂತ ಮಾತನಾಡಿ, ಶೀಲವಂತ ಸಮಾಜದ ಮತಿಯಿಂದ ಮೊದಲನೇ ಬಾರಿಗೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸಾಧಕರಿಗೆ ಪ್ರೋತ್ಸಾಹಿಸುವ ಕೆಲಸ ನಿರಂತರವಾಗಿ ನಡೆಯುತ್ತದೆ. ಕುಲ ಕಸುಬುದೊಂದಿಗೆ ಶಿಕ್ಷಣ ಪಡೆಯುವುದು ಇಂದು ಎಲ್ಲರಿಗೂ ಅವಶ್ಯಕವಾಗಿದೆ ಎಂದು ಹೇಳಿದರು.ಸಮಾಜದ ಮುಖಂಡ ಶಶಿಕಾಂತ ಶೀಲವಂತ ಮಾತನಾಡಿ, ಸಮಾಜದ ಮತಿಯಿಂದ ಇಂತಹ ಕಾರ್ಯಕ್ರಮಗಳು ಆಯೋಜಿಸಿ ಮಕ್ಕಳಿಗೆ ಧಾರ್ಮಿಕ ಸಂಸ್ಕಾರ ಮತ್ತು ಜೀವನದ ಮೌಲ್ಯಗಳು ಕುರಿತು ತಿಳಿಸಬೇಕಾಗಿರುವುದು ಅವಶ್ಯವಾಗಿದೆ ಎಂದರು.



ಬಸವಕಲ್ಯಾಣ ಶ್ರೀ ವೀರಭದ್ರೇಶ್ವರ ದೇವಸ್ಥಾನ ಟ್ರಸ್ಟ್, ಶೀಲವಂತ್ ಅಕ್ಕಸಾಲಿಗ ಸಮಾಜ ಸಂಘದ ವತಿಯಿಂದ ನಗರದ ಸದಾನಂದ ಸ್ವಾಮಿ ಮಠದಲ್ಲಿ ಹಮ್ಮಿಕೊಂಡಿದ್ದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಸನ್ಮಾನ: ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವೈಷ್ಣವಿ ಗಂಗಾಧರ್ ಶೇ.92 ಪ್ರತಿಶತ, ಅಭಿಷೇಕ್ ಶಶಿಕಾಂತ್ ಶೇ.86 ಪ್ರತಿಶತ, ವೈಭವಿ ರವಿ ಶೇ.85 ಪ್ರತಿಶತ ಅಂಕ ಪಡೆದ ಪಾಸಾದರೆ, ದ್ವಿತೀಯ ಪಿಯುಸಿ ವಿಜ್ಞಾನ ಪರೀಕ್ಷೆಯಲ್ಲಿ ದಾನೇಶ್ವರಿ ಮಹಾಲಿಂಗ ಶೇ.95 ಪ್ರತಿಶತ, ವೀರೇಶ ಪ್ರಭು ಶೇ.94 ಪ್ರತಿಶತ, ಗಣೇಶ್ ಸೂರ್ಯಕಾಂತ ಶೇ.92, ಅಭಿಷೇಕ ಜಗದೀಶ್ ಶೇ.87 ಪ್ರತಿಶತ, ನೇಹಾ ಮಲ್ಕಾರ್ಜುನ್ ಶೇ.85ರಷ್ಟು ಅಂಕ ಪಡೆದು ಸಾಧನೆಗೈದ ಪ್ರತಿಭಾವಂತರಿಗೆ ಸಮಾಜದ ಮತಿಯಿಂದ ಸನ್ಮಾನಿಸಲಾಯಿತು.

ಸಮಾಜದ ಸಂಘದ ಪದಾಧಿಕಾರಿಗಳಾದ ಚೆನ್ನಪ್ಪ ರಾಜಾಪುರೆ, ಈಶ್ವರ್ ಶೀಲವಂತ, ಗಂಗಾಧರ ಅಂಬುಲಗೆ, ಮಹಾಲಿಂಗ ಅಂಬುಲಗೆ, ಉಮೇಶ್ ಚಿಂಚೋಳಿಕರ, ನಾಗಪ್ಪ ತೂಗಾವೆ, ಸಂತೋಷ ಮಾಗ್ಯೆ, ವೀರಭದ್ರ ಪಾಂಚಾಳ, ಧನರಾಜ ಶೀಲವಂತ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಕಾರ್ಯದರ್ಶಿ ಪ್ರಭು ಶೀಲವಂತ ಸ್ವಾಗತಿಸಿದರು.ನಿರ್ದೇಶಕ ಉಮೇಶ್ ಶೀಲವಂತ ನಿರೂಪಿಸಿದರು.

ನಮ್ಮ ಚಾವಡಿ ಭಾನುವಾರ,9 ಜೂನ್ 2024

Scanned with OKEN Scanner

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು

'ಕಾಲಜ್ಞಾನದಂತೆ ಮತ್ತೆ ಶರಣ ವೈಭವ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಕಾಲಜ್ಞಾನದ ವಚನಗಳಲ್ಲಿ ಶರಣರು ಮತ್ತೆ ಹುಟ್ಟಿ ಬಂದಾರು ಎಂದಿರುವ ಕಾರಣ ಕಲ್ಯಾಣಕ್ಕೆ ಶರಣ ವೈಭವದ ಕಳೆ ಪ್ರಾಪ್ತವಾಗುವ ದಿನ ದೂರವಿಲ್ಲ' ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ತ್ರಿಪುರಾಂತ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಜಾತ್ರಾ ಮಹೋತ್ಸವದ ನೇತೃತ್ವ ವಹಿಸಿಕೊಂಡು ಅವರು ಮಾತನಾಡಿದರು. 'ರೇಣುಕಾಚಾರ್ಯರ ಜಯಂತಿಗೆ ಭವ್ಯ ಸಮಾರಂಭ ನಡೆಯುತ್ತಿತ್ತು. ಆದರೆ, ಸರ್ಕಾರವೇ ಜಯಂತಿ ಆಚರಿಸಲು ಆರಂಭಿಸಿದ ಕಾರಣ ಅದಕ್ಕೆ ಸರ್ವರೀತಿಯಿಂದ ಸಹಕಾರ ನೀಡಿ ಎರಡು ವರ್ಷಗಳಿಂದ ಜಾತ್ರೆ ಹಮ್ಮಿಕೊಳ್ಳಲಾಗುತ್ತಿದೆ. ಜಾತ್ರೆಯಲ್ಲಿ ರಥೋತ್ಸವ ನಡೆಸಲು ಯೋಜನೆ ಹಾಕಿಕೊಳ್ಳಲಾಗಿದೆ. ಕಾಲಜ್ಞಾನದ ವಚನಗಳಲ್ಲಿ ಗವಿಮಠದಲ್ಲಿ ತೇರು ಎಳೆದೀತು ಎಂಬುದರ ಉಲ್ಲೇಖ ಸಹ ಇದ್ದು ಅದು ಸತ್ಯವಾಗುವ ದಿನ ದೂರವಿಲ್ಲ. ಗವಿಮಠ ಜಾಗೃತ ದೇವಸ್ಥಾನವಾಗಿದ್ದು ಶ್ರದ್ಧಾ ಭಕ್ತಿಯಿಂದ ಭಜಿಸಿದರೆ ಇಷ್ಟಾರ್ಥಗಳು ಈಡೇರುತ್ತವೆ' ಎಂದು ಹೇಳಿದರು.

ಕಲ್ಲೂರು ಹಿರೇಮಠದ ಮೃತ್ಯುಂಜಯ ಶಿವಾಚಾರ್ಯರು ಮಾತನಾಡಿ, 'ತ್ರಿಪುರಾಂತ ಕೆರೆ ದಂಡೆಯಲ್ಲಿನ ಪ್ರಶಾಂತ ಸ್ಥಳದಲ್ಲಿನ ಗವಿಮಠವು ಎರಡು ದಶಕಗಳಲ್ಲಿ ಸಾಕಷ್ಟು ಬೆಳವಣಿಗೆ ಕಂಡಿದೆ. ಪೀಠಾಧಿಪತಿಗಳಾದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಎಷ್ಟೇ ಕಷ್ಟಗಳು ಎದುರಾದರೂ ಛಲಬಿಡದೆ ವಿವಿಧ ಯೋಜನೆಗಳನ್ನು ಕೈಗೊಳ್ಳುತ್ತಿದ್ದಾರೆ. ಧಾರ್ಮಿಕ ಮತ್ತು ಸಾಮಾಜಿಕ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ಜಾತ್ರೆಗಳು ಭಾವೈಕ್ಯತೆ ಸಾರುತ್ತವೆ. ಭಕ್ತಿ, ಜ್ಞಾನ ಮತ್ತು ವೈರಾಗ್ಯ ಜಾತ್ರೆಗಳಲ್ಲಿಯೇ ಹುಟ್ಟುತ್ತದೆ' ಎಂದರು.

ಖಟಕಚಿಂಚೋಳಿ ಬಸವಲಿಂಗ ಸ್ವಾಮೀಜಿ ಮಾತನಾಡಿ, 'ಧರ್ಮಕಾರ್ಯಗಳಿಂದ ಜೀವನದಲ್ಲಿ ಶಾಂತಿ ಮತ್ತು ನೆಮ್ಮದಿ ದೊರಕುತ್ತದೆ' ಎಂದು ಹೇಳಿದರು. ಪ್ರಾಚಾರ್ಯ ಶಾಂತಯ್ಯ ಮಠಪತಿ, ಅಂಬಾರಾಯ ಉಗಾಜಿ ಕೊಹಿನೂರ, ರಮೇಶ ರಾಜೋಳೆ ಶಿವಪುರ, ಶಿವಕುಮಾರ ಮುನ್ನೋಳೆ ಮಾತನಾಡಿದರು.

ಯುವ ಸಾಧಕ ರಾಕೇಶ ಪುರವಂತ



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಭಾನುವಾರ ರಾಕೇಶ ಪುರವಂತ ದಂಪತಿಗೆ 'ಅಭಿನವ ಘನಲಿಂಗಶ್ರೀ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮೃತ್ಯುಂಜಯ ಶಿವಾಚಾರ್ಯರು, ಬಸವಲಿಂಗ ಸ್ವಾಮೀಜಿ, ಶರಣಪ್ಪ ಬಿರಾದಾರ ಹಾಜರಿದ್ದರು

ಅವರಿಗೆ ಪ್ರಸಕ್ತ ಸಾಲಿನ 'ಅಭಿನವ ಘನಲಿಂಗ ಶ್ರೀ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಬಸತೀರ್ಥಯ್ಯ ಕಾಡಾದಿ, ಸಿದ್ರಾಮಪ್ಪ ಕಲ್ಯಾಣೆ ತ್ರಿಪುರಾಂತ, ಲಿಂಗರಾಜ ಬಿರಾದಾರ ಅವರಿಗೆ ಗುರು ರಕ್ಷೆ ನೀಡಿ ವಿಶೇಷವಾಗಿ ಸನ್ಮಾನಿಸಲಾಯಿತು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ಬಸವಂತಪ್ಪ ಲವಾರೆ, ನಟರಾಜ ಬಿರಾದಾರ, ಪ್ರೊ. ರುದ್ರೇಶ್ವರ ಗೋರಟಾ, ಮಲ್ಲಿಕಾರ್ಜುನ ಆಲಗೂಡ, ಶಾಂತವೀರ ಕಪಾಡೆ, ಭೀಮಾಶಂಕರ ಬಚಣ್ಣೆ ಸಾಗರ ಮಾಲಗಾರ, ಸದಾನಂದ ಕಣಜೆ ಮತ್ತಿತರರು ಉಪಸ್ಥಿತರಿದ್ದರು. ಮಂಠಾಳ ಮತ್ತು ತೊಗಲೂರ ಮಹಿಳಾ ಮಂಡಳಗಳಿಂದ ಭಜನೆ, ಕೋಲಾಟ ಹಮ್ಮಿಕೊಳ್ಳಲಾಗಿತ್ತು. ಅನ್ನಸಂತರ್ಪಣೆ ನಡೆಯಿತು.

ಪ್ರಜಾವಾಣಿ ಸೋಮವಾರ • ಏಪ್ರಿಲ್ 29, 2024

ಪರಿಸರ ಸಂರಕ್ಷಣೆ ಕಾರ್ಯಕ್ಕೆ ಕೈಜೋಡಿಸಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಆನಂದದ ಜೀವನಕ್ಕಾಗಿ ಪ್ರತಿಯೊಬ್ಬರೂ ಐದು ಸಸಿಗಳನ್ನು ನೆಡುವ ಜತೆಗೆ ಕಾಳಜಿಯಿಂದ ಬೆಳೆಸಬೇಕು. ಪರಿಸರ ಸಂರಕ್ಷಣೆ ಕಾರ್ಯಕ್ಕೆ ಕೈಜೋಡಿಸಬೇಕು. ಅಂದಾಗ ಮಾತ್ರ ಭವಿಷ್ಯದಲ್ಲಿ ಪರಿಸರ ಸಮತೋಲನೆ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಗವಿಮಠ ಸಂಸ್ಥಾನದ ಶ್ರೀ ಡಾ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

» ಅಭಿನವ ಶ್ರೀ ಮನವಿ

ವಿಶ್ವ ಪರಿಸರ ದಿನಾಚರಣೆ ನಿಮಿತ್ತ ನಗರದ ಐಡಿಯಲ್ ಶಿಕ್ಷಣ ಸಂಸ್ಥೆಯ ಶಾಲಾ-ಕಾಲೇಜು, ತಾಲೂಕು ಕನ್ನಡ ಸಾಹಿತ್ಯ ಪರಿಷತ್, ನಗರಸಭೆ, ಪೊಲೀಸ್, ಶಿಕ್ಷಣ, ಅರಣ್ಯ ಇಲಾಖೆ ಸಹಯೋಗದಲ್ಲಿ ಐತಿಹಾಸಿಕ ತ್ರಿಪುರಾಂತ ಕೆರೆಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕೆರೆ ಸ್ವಚ್ಛತೆ ಹಾಗೂ ಸಸಿ ನೆಡುವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಶೆಲ್ಫಿ ಫೋಟೋಗಾಗಿ ಸ್ವಚ್ಛತೆ ನಡೆಯಬಾರದು, ಪ್ರಾಮಾಣಿಕವಾಗಿ ಸ್ವಚ್ಛತೆ ಕಾರ್ಯ ನಡೆಯಬೇಕು. ಪರಿಸರ ಕಾಳಜಿಯಿಂದ ಐಡಿಯಲ್ ಸಂಸ್ಥೆ ಕೆರೆ ಸ್ವಚ್ಛತೆಯ ಜತೆಗೆ ಪರಿಸರ ಕುರಿತು ಜಾಗೃತಿ ಮೂಡಿಸುವ ಮತ್ತು ಪ್ರೋತ್ಸಾಹಿಸುವ ಆಶಯದೊಂದಿಗೆ ವಿವಿಧ ಕಾರ್ಯಕ್ರಮಗಳು ಹಮ್ಮಿಕೊಂಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಗರಸಭೆ ಪ್ರಾಯುಕ್ತ ರಾಜು ಬಣಕರ್ ಮಾತನಾಡಿ, ಪರಿಸರ ಸಂರಕ್ಷಣೆ, ನಗರ ಸ್ವಚ್ಛತೆ ನಗರ ಸಭೆಯವರ ಕಾರ್ಯ ಎನ್ನುವ ಭಾವನೆ ಸರಿಯಲ್ಲ. ಈ ಕಾರ್ಯಕ್ಕೆ ಕೈಜೋಡಿಸುವುದು ಎಲ್ಲ ನಾಗರಿಕರ ಕರ್ತವ್ಯವೂ ಆಗಿದೆ ಎಂದರು.



ವಿಜಯವಾಣಿ ಚಿತ್ರ

ಪರಿಸರ ದಿನಾಚರಣೆ ನಿಮಿತ್ತ ಬಸವಕಲ್ಯಾಣದ ತ್ರಿಪುರಾಂತ ಕೆರೆಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮಕ್ಕೆ ಸಸಿಗೆ ನೀರೆರೆಯುವ ಮೂಲಕ ಪ್ರಾಯುಕ್ತ ರಾಜು ಬಣಕರ ಚಾಲನೆ ನೀಡಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮುಜಾಹಿದ್ ಪಾಶಾ ಖುರೇಶಿ, ಐಶ್ವರ್ಯ ಗೊಬ್ಬೂರ, ಸಂತೋಷಕುಮಾರ ಯಾಚೆ, ಮನೋಜ ಕಾಂಬಳೆ, ಎಇಇ ಶಿವಶರಣಪ್ಪ ಸಜ್ಜನಶೆಟ್ಟಿ, ಶಾಂತಲಿಂಗ ಮಠಪತಿ ಇತರರಿದ್ದರು.

ಐಡಿಯಲ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮುಜಾಹಿದ್ ಪಾಶಾ ಖುರೇಶಿ ಮಾತನಾಡಿ, ಕರೆಯ ಸ್ವಚ್ಛತೆ ಜತೆಗೆ ಪರಿಸರ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಐತಿಹಾಸಿಕ ತ್ರಿಪುರಾಂತ ಕೆರೆಯ ಸ್ವಚ್ಛತೆಯ ಜತೆಗೆ ಕೆರೆಯ ದಡೆಯ ಮೇಲೆ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಆರ್‌ಎಫ್‌ಒ ಐಶ್ವರ್ಯ ಗೊಬ್ಬೂರ ಮಾತನಾಡಿದರು. ಸಂಸ್ಥೆ ಸದಸ್ಯ ಮುಕ್ತದೀರ್ ಉಮರ್ ಪ್ರಾಸ್ತಾವಿಕ ಮಾತನಾಡಿದರು. ಆರ್‌ಎಫ್‌ಒ ಕರೆಪ್ಪ ಪೂಜಾರಿ, ಪಿಎಸ್‌ಐ ಸುವರ್ಣ ಮಲಶೆಟ್ಟಿ, ಸಂತೋಷಕುಮಾರ ಯಾಚೆ, ಮನೋಜ ಕಾಂಬಳೆ, ಎಇಇ ಶಿವಶರಣಪ್ಪ ಸಜ್ಜನಶೆಟ್ಟಿ, ನಿತ್ಯಾನಂದ ಜಮಾದಾರ, ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ, ಮೀರ್ ವಾರೀಸ್ ಅಲಿ, ಸಿಆರ್‌ಸಿ ನಾಸೀರ್ ಪಟೇಲ್, ಗಿರಿಧರ, ನರೇಂದ್ರಕುಮಾರ, ಪ್ರಾಚಾರ್ಯ ಬಾಸಿಲ್ ಅಜಾದ್, ಫರಹಾರ್, ಪ್ರಭಾ ನೌಗಿರೆ, ಶಿವಕುಮಾರ, ಸತೀಶ ಬೇಲಕಟ್ಟಿ, ರೂಪಾ ಪಂಚಾಳ, ಸುಮಿತ್ರಾ ಘಾಳೆ ಇದ್ದರು. ಶ್ರೇಯಾ ಮಠಪತಿ ಸ್ವಾಗತಿಸಿದರು. ಅಬ್ದುಲ್ ಮಾಜಿದ್ ವಂದಿಸಿದರು. ರಾಜಕುಮಾರ ರಾಠೋಡ್ ನಿರೂಪಣೆ ಮಾಡಿದರು.

ನಂ1 ವಿಜಯವಾಣಿ ಗುರುವಾರ 6 ಜೂನ್ 2024 » 6 JUNE 2024

Scanned with OKEN Scanner

12ನೇ ಚುಟುಕು ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿ ಆಯ್ಕೆ

'ಸಾಹಿತ್ಯಕ್ಕೆ ಗವಿಮಠಶ್ರೀ ಕೊಡುಗೆ ದೊಡ್ಡದು'

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದಲ್ಲಿ ಗುರುವಾರ ಶಿರಸಿಯಲ್ಲಿನ ರಾಜ್ಯಮಟ್ಟದ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಗೊಂಡಿರುವ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಆವರನ್ನು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸನ್ಮಾನಿಸಲಾಯಿತು

ಬಸವಕಲ್ಯಾಣ: 'ತ್ರಿಪುರಾಂತ ಗವಿಮಠದಿಂದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅನೇಕ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ' ಎಂದು ರಾಜೀವಗಾಂಧಿ ಕಾಲೇಜಿನ ಪ್ರಾಧ್ಯಾಪಕ ರುದ್ರೇಶ್ವರಸ್ವಾಮಿ ಗೋರಟಾ ಹೇಳಿದ್ದಾರೆ.

ರಾಜ್ಯಮಟ್ಟದ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದಕ್ಕೆ ನಗರದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಗುರುವಾರ ಹಮ್ಮಿಕೊಂಡಿದ್ದ ಶಿವಾಚಾರ್ಯರ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಶಿವಾಚಾರ್ಯರು ಚುಟುಕು ರೂಪದಲ್ಲಿ ಅಮೃತವಾಣಿ ಬರೆದು ಭಕ್ತರ ಮಾರ್ಗದರ್ಶನ ಮಾಡಿದ್ದಾರೆ. ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯದಲ್ಲೂ ಇವರದ್ದು ಎತ್ತಿದ ಕೈಯಾಗಿದೆ. ಆದ್ದರಿಂದ ಮೇ 26 ರಂದು ಶಿರಸಿಯಲ್ಲಿ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನಿಂದ ಹಮ್ಮಿಕೊಂಡಿರುವ ರಾಜ್ಯಮಟ್ಟದ 12 ನೇ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಈ ಭಾಗದ ಮಠಾಧೀಶರಿಗೆ ಈ ರೀತಿಯ ಗೌರವ ದೊರೆತಿರುವುದು ಹೆಮ್ಮೆ ಮತ್ತು ಸಂತಸದ ಸಂಗತಿ' ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಶಾಂತಲಿಂಗ ಮಠಪತಿ, ಪ್ರಾಚಾರ್ಯ ಬಸವರಾಜ ಹಿರೇಮಠ, ದಿಲೀಪಕುಮಾರ ಮಂಠಾಳೆ, ವೀರಶೆಟ್ಟಿ ಪಾಟೀಲ, ಚಿತ್ರಶೇಖರ ಚಿರಳ್ಳಿ, ನಾಗೇಂದ್ರ ಬಿರಾದಾರ, ಗೋವಿಂದರೆಡ್ಡಿ ನಾರಾಯಣಪುರ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಮೇ 26 ರಂದು ಶಿರಸಿಯಲ್ಲಿ ಚುಟುಕು ಸಾಹಿತ್ಯ ಸಮ್ಮೇಳನ
- ಚುಟುಕು ರೂಪದಲ್ಲಿ ಅಮೃತವಾಣಿ

ಸಮ್ಮೇಳನ: ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಮೇ 26 ರಂದು ಬೆಳಿಗ್ಗೆ 9.30 ಗಂಟೆಗೆ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನಿಂದ ರಾಜ್ಯಮಟ್ಟದ 12 ನೇ ಚುಟುಕು ಸಾಹಿತ್ಯ ಸಮ್ಮೇಳನ ನಡೆಯಲಿದೆ. ಬಸವಕಲ್ಯಾಣ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸರ್ವಾಧ್ಯಕ್ಷತೆ ವಹಿಸುವರು.

ಮಲ್ಲಿಕಾರ್ಜುನ ಸ್ವಾಮೀಜಿ ಸಾನಿಧ್ಯ ವಹಿಸುವರು. ಚಿಂತಕ ರಾಮದಾಸ ರಾಮ ಪೈ ಉದ್ಘಾಟನೆ ನೆರವೇರಿಸುವರು. ಪರಿಷತ್ತಿನ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ, ಚನ್ನಬಸಪ್ಪ ಧಾರವಾಡಶೆಟ್ಟರು, ಮನೋಹರ ಮೇಲ್ಮನೆ, ಕೃಷ್ಣ ದತ್ತಾತ್ರೇಯ ಪದಕಿ, ಜಿ.ಯು.ನಾಯಕ, ಶಾಂತಣ್ಣ ಕಡಿವಾಲ, ಜಯರಾಮ ಹೆಗಡೆ, ರಾಮ ಕಿಣಿ, ಮಂಜುನಾಥ ಹೆಗಡೆ, ಪ್ರಭುಸ್ವಾಮಿ ಹಾಲಾಡಿಮಠ ಪಾಲ್ಗೊಳ್ಳುವರು.

ನಂತರ ವಿಜಯಾ ಮೂರ್ತಿ ಮೈಸೂರು ಅವರಿಂದ ನೃತ್ಯವೈಭವ ಕಾರ್ಯಕ್ರಮವಿರುತ್ತದೆ. ಅದಾದ ಮೇಲೆ ವೈಚಾರಿಕ ಚಿಂತನಗೋಷ್ಠಿ ನಡೆಯಲಿದ್ದು ಪ್ರಾಧ್ಯಾಪಕ ವಸಂತ ನಾಯಕ, ಸಾಹಿತಿ ಜಿ.ಎ.ಹೆಗಡೆ ಸೋಂದಾ, ರಘುಪತಿ ಭಟ್, ಪಲ್ಲವಿ ಪಾಟೀಲ, ಯಶಸ್ವಿನಿ ಶ್ರೀಧರಮೂರ್ತಿ ಪಾಲ್ಗೊಳ್ಳುವರು. ನಂತರ ಚುಟುಕು ಸಂಭ್ರಮ ಕವಿಗೋಷ್ಠಿ ಏರ್ಪಡಿಸಲಾಗುತ್ತದೆ. ಸಂಜೆ 4 ಗಂಟೆಗೆ ಸರ್ವಾಧ್ಯಕ್ಷರೊಂದಿಗೆ ಸಂವಾದ ಮತ್ತು ಸಮಾರೋಪ ಸಮಾರಂಭ. ಗಣ್ಯರ ಸನ್ಮಾನ ನಡೆಯಲಿದೆ ಎಂದು ತಿಳಿಸಲಾಗಿದೆ.

ಗೆಜ್ಜೆ ಕರಿಯರ್ ಅಕಾಡೆಮಿ
ವಿಜಯಪುರ
KAS / PSI
44ನೇ ಬ್ಯಾಚ್
ಪ್ರವೇಶ ಪ್ರಾರಂಭ : ದಿ: 20-05-2024
ತರಬೇತಿ ಪ್ರಾರಂಭ : ದಿ: 30-05-2024
ಇಲಕಲ್ ಬಿಲ್ಡಿಂಗ್,
ಮೀನಾಕ್ಷಿ ಚೌಕ, ವಿಜಯಪುರ
☎ : 08352-223177
M : 9606656226, 6363011401, 6360452726

ಪ್ರಜಾವಾಣಿ ಶನಿವಾರ • ಮೇ 25, 2024



ಬಸವಕಲ್ಯಾಣ ಮೇ 26 ರಂದು ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಜರುಗಲಿರುವ ರಾಜ್ಯಮಟ್ಟದ 12ನೇ ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಇಲ್ಲಿಯ ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಯ್ಕೆಯಾದ ನಿಮಿತ್ತ ಕಸಾಪ ಅಧ್ಯಕ್ಷ ಶಾಂತಲಿಂಗ ಮಠಪತಿ ಅಭಿನಂದಿಸಿದರು. ಪ್ರಾಚಾರ್ಯ ಬಸವರಾಜ ಹಿರೇಮಠ, ದಿಲೀಪ ಮಂಠಾಳೆ, ಡಾ. ಚಿತ್ರಶೇಖರ ಚಿರಳ್ಳಿ, ನಾಗೇಂದ್ರ ಬಿರಾದಾರ, ವೀರಶೈಟ್ಟಪಾಟೀಲ, ಗೋವಿಂದರೆಡ್ಡಿಕೋತಾಪಲ್ಲೆ, ಪ್ರೊ. ರುದ್ರೇಶ್ವರ ಸ್ವಾಮಿ ಉಪಸ್ಥಿತರಿದ್ದರು.

ನಮ್ಮ ಬೀದರ್ ಶನಿವಾರ,25 ಮೇ 2024

ಸುದ್ದಿ ಕಾರ್ನರ್



ಉತ್ತರ ಕನ್ನಡ ಜಿಲ್ಲೆ ಶಿರಸಿಯಲ್ಲಿ ಭಾನುವಾರ ಏರ್ಪಡಿಸಿದ್ದ ರಾಜ್ಯ ಮಟ್ಟದ 12ನೇ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಸರ್ವಾಧ್ಯಕ್ಷರಾದ ಬಸವಕಲ್ಯಾಣ ಗವಿ ಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಚುಟುಕು ಚೇತನ ಗೌರವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮೀಜಿ, ಕೃಷ್ಣಮೂರ್ತಿ ಕುಲಕರ್ಣಿ, ರಾಮದಾಸ ರಾಮ ಪೈ, ಚನ್ನಬಸಪ್ಪ ಧಾರವಾಡ ಶೆಟ್ರು, ಪ್ರೊ ಜಿ.ಯು. ನಾಯಕ, ಮನೋಹರ ಮೇಲ್ಮನೆ, ಗಣಪತಿ ಭಟ್, ಡಾ.ಜಿ.ಎಸ್. ಹೆಗಡೆ, ಕೃಷ್ಣ ಪದಕಿ, ಮಂಜುನಾಥ ದೊಡ್ಡಮನೆ, ಡಾ.ಪ್ರಭುಸ್ವಾಮಿ ಹಾಲಾಡಿಮಠ, ವಿರೂಪಾಕ್ಷ ಲಮಾಣಿ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 28 ಮೇ 2024
28 MAY 2024

Scanned with OKEN Scanner

ಗವಿ ಮಠದಲ್ಲಿ ರಾಕೇಶ್ ವಿ ಪುರವಂತ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ

ಜಾತ್ರೆಗಳಿಂದ ಭಕ್ತಿ, ಸಂಸ್ಕಾರ ಹೆಚ್ಚಳ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಯೋಗಿಗಳು ಸಕಲ ಶರಣರಿಗೆ ಇಷ್ಟಲಿಂಗ ದೀಕ್ಷೆಕೊಟ್ಟು ಮುಕ್ತಿಯ ಮಾರ್ಗ ತೋರಿದ ಮಹಾಮಹಿಮರು. ಮಾನವೀಯತೆಗಿಂತ ಮಿಗಿಲಾದ ಧರ್ಮ ಇನ್ನೊಂದಿಲ್ಲ ಎಂದು ಕಲ್ಲೂರಿನ ಶ್ರೀ ಮೃತ್ಯುಂಜಯ ಶಿವಾಚಾರ್ಯರು ಹೇಳಿದರು.

ಇಲ್ಲಿಯ ಗವಿ ಮಠದಲ್ಲಿ ಭಾನುವಾರ ಜರುಗಿದ ಶ್ರೀ ಘನಲಿಂಗ ರುದ್ರಮುನಿ ಜಾತ್ರಾ ಮಹೋತ್ಸವ ಹಾಗೂ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸಮರ ಜೀವನ ಕೊನೆಗೊಂಡು ಅಮರ ಜೀವನದಡೆ ಕರೆದು ಕೊಂಡು ಒಯ್ಯುವುದೇ ಗುರುವಿನ ಧರ್ಮ. ಧರ್ಮ ಹಾಗೂ ದೇಶ ಮಾನವನ ಕಣ್ಣು ಇದ್ದಂತೆ. ಎಲ್ಲರಲ್ಲೂ ಧರ್ಮಪ್ರಜ್ಞೆ ಸಾಮರಸ್ಯ ಬೆಳೆಸುವುದೇ ಜಾತ್ರೆಯ ಹಾಗೂ ಧರ್ಮ ದ ಮೂಲ ಗುರಿಯಾಗಿದೆ ಎಂದರು.

ನೇತೃತ್ವ ವಹಿಸಿ ಡಾ.ಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರು ಮಾತನಾಡಿ, ಇಂದಿನ ಆಧುನಿಕ ಜಗತ್ತಿನಲ್ಲಿ ಪ್ರಗತಿಪರ ವಿಚಾರಧಾರೆಗಳ ಹೆಸರಿನಲ್ಲಿ ಭಾರತೀಯ ಉತ್ಕೃಷ್ಟ ಸಂಸ್ಕೃತಿ ನಾಶವಾಗಬಾರದು. ಧರ್ಮ ಸಂಪ್ರದಾಯ ಆಚರಣೆ ಬೇರೆ ಬೇರೆ ಯಾದರೂ ಎಲ್ಲರ ಗುರಿ ಮಾನವ ಕಲ್ಯಾಣವೇ ಆಗಿದೆ.



ಬಸವಕಲ್ಯಾಣ ಇಲ್ಲಿಯ ಗವಿ ಮಠದಲ್ಲಿ ಭಾನುವಾರ ಜರುಗಿದ ಶ್ರೀ ಘನಲಿಂಗ ರುದ್ರಮುನಿ ಜಾತ್ರಾ ಮಹೋತ್ಸವ ಹಾಗೂ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಕೇಶ್ ವಿ. ಪುರವಂತ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಹೀಗಾಗಿ ಈ ಗವಿಮಠದ ಜಾತ್ರೆ ಭಾವೈಕ್ಯತೆಯ ಜಾತ್ರೆಯಾಗಬೇಕು ಎಂದು ತಿಳಿಸಿದರು.ಖಟಕ ಚಿಂಚೋಳಿಯ ಶ್ರೀ ಬಸವಲಿಂಗ ಸ್ವಾಮೀಜಿ ಮಾತನಾಡಿ, ಗವಿಮಠದ ಪೂಜ್ಯರು ಯುವ ಸ್ವಾಮಿಗಳಾಗಿ ಸರ್ವ ಭಕ್ತರನ್ನು ಆಕರ್ಷಿಸುವ ಹಾಗೆ ಶ್ರೀಮಠ ಬೆಳೆಸುತ್ತಿದ್ದಾರೆ. ವಿಶೇಷವಾಗಿ ಭಕ್ತರನ್ನು ಧರ್ಮ ಮಾರ್ಗದಲ್ಲಿ ಮುನ್ನಡೆಸಲು ಗವಿ ಮಠದ ಜಾತ್ರೆ ಸಂಕಲ್ಪ ಮಾಡಿದ್ದಾರೆ ಎಂದು ಹೇಳಿದರು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪಾ ಬಿರಾದಾರ ಅಧ್ಯಕ್ಷತೆ ವಹಿಸಿದರು, ಶ್ರೀ ಗಾನಯೋಗಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳ ಶಿಷ್ಯರಿಂದ ಸಂಗೀತ ಸೇವೆ ಜರುಗಿತು. ಶಿಕ್ಷಕ ಶಿವಕುಮಾರ ಮುನ್ನೊಳೆ ಸ್ವಾಗತಿಸಿದರು. ಪ್ರಾಚಾರ್ಯ ಶಾಂತಯ್ಯ ಮಠಪತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಂಬಾ ರಾಯ ಊಗಾಜಿ ಕೋಹಿನೂರ ನಿರೂಪಿಸಿದರು.ಇದೇ ಸಂದರ್ಭದಲ್ಲಿ ಜಾತ್ರಾ ಮಹೋತ್ಸವ ನಿಮಿತ್ತ ಬಸತೀರ್ಥಯ್ಯ ಕಾಡಾದೆ, ಲಿಂಗರಾಜ ಬಿರಾದಾರ, ಸಿದ್ರಾಮಪ್ಪಾ ಕಲ್ಯಾಣಿ ತ್ರಿಪುರಾಂತ ಅವರಿಗೆ ಶ್ರೀ ಗುರುರಕ್ಷೆ ನೀಡಿ ಆಶೀರ್ವದಿಸಲಾಯಿತು.

ಮಂಠಾಳ ಮತ್ತು ತೋಗಲೂರ ಮಹಿಳಾ ಭಜನಾ ಮಂಡಳಿ ಮತಿಯಿಂದ ಚಕ್ರಿ ಭಜನೆ ಹಾಗೂ ಕೋಲಾಟ ಜರುಗಿದ್ದು ಬಹಳ ಆಕರ್ಷಿತವಾಗಿ ಕಂಡು ಬಂತು.

ಬಸವಂತಪ್ಪಾ ಲಾರೆ, ಮಲ್ಲಿಕಾರ್ಜುನ ಅಲಗೂಡ, ಮಡಿವಾಳಯ್ಯಾ ಸ್ವಾಮಿ, ಬಸವರಾಜ ಬಿರಾದಾರ, ಮಂಜುನಾಥ ಸ್ವಾಮಿ, ನಟರಾಜ ಬಿರಾದಾರ, ಬಸವರಾಜ ಬಿರಾದಾರ, ಶರಣು ಮಠಪತಿ, ಶಾಂತವೀರ ಕಾಪಾಡೆ, ಓಂನಾಥ ಪಾಟೀಲ, ಪ್ರೊ.ರುದ್ರೇಶ್ವರ ಗೋರ್ಟಾ, ಸೂರ್ಯಕಾಂತ ಶೀಲವಂತ, ರಮೇಶ್ ರಾಜೋಳೆ, ಭೀಮು ಬಚಣೆ, ಶಿವಕುಮಾರ್ ಬಿರಾದಾರ, ಸದಾನಂದ ಕಣಜೆ, ಸಾಗರ ಮಾಲಗರ, ವಿಠ್ಠಲ ರಾಯಪ್ಪಾನೋರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಜಾತ್ರಾ ಮಹೋತ್ಸವ ನಿಮಿತ್ತ ವಿವಿಧೆಡೆಯಿಂದ ಆಗಮಿಸಿದ ಅಪಾರ ಭಕ್ತರಿಗೆ ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿತ್ತು.

ನಿರಂತರವಾಗಿ ಸೇವೆ

ಪ್ರಶಸ್ತ ಸಾಲಿನ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಸ್ವೀಕರಿಸಿ ರಾಕೇಶ್ ವಿ ಪುರವಂತ ಮಾತನಾಡಿ, ನಾನೇನು ದೊಡ್ಡವನಲ್ಲ, ದೊಡ್ಡ ಸಾಧನೆ ಮಾಡಿದವನಲ್ಲ, ತಂದೆ-ತಾಯಿಗಳ ಹಾಗೂ ಗುರುಗಳ ಮಾರ್ಗದರ್ಶನದಲ್ಲಿ ಧರ್ಮ ಮಾರ್ಗದಲ್ಲಿ ಮುನ್ನಡೆದು ಕೈಲಾದಷ್ಟು ಮಟ್ಟಿಗೆ ಗವಿಮಠಕ್ಕೆ ಸೇವೆ ಸಲ್ಲಿಸಿದ್ದೇನೆ. ನನ್ನ ಈ ಸೇವೆಯನ್ನು ಗುರುತಿಸಿ ಗವಿ ಮಠದ ಪೂಜ್ಯರು ಈ ಪ್ರಶಸ್ತಿಯನ್ನು ನನಗೆ ಪ್ರದಾನ ಮಾಡಿ ಆಶೀರ್ವದಿಸಿದ್ದು ನನ್ನ ಪೂರ್ವ ಜನ್ಮದ ಪುಣ್ಯವಾಗಿದ್ದು ಗವಿಮಠಕ್ಕೆ ಹಾಗೂ ಪೂಜ್ಯ ಗುರುಗಳಿಗೆ ನಾನು ನಿರಂತರವಾಗಿ ಸೇವೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ನಮ್ಮ ಬೀದರ್ ಸೋಮವಾರ,29 ಏಪ್ರಿಲ್ 2024



ಬಸವಕಲ್ಯಾಣ ಗವಿ ಮಠದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಯೋಗ ಮಾಡಿದರು.



ಬೋಂತಿ ತಾಂಡಾ ನಿವಾಸದಲ್ಲಿ ಶಾಸಕ ಪ್ರಭು ಚವ್ಹಾಣ್ ಅವರು ಯೋಗಾಭ್ಯಾಸ ಮಾಡಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 22 ಜೂನ್ 2024
22 JUNE 2024

---

4 ಸೋಮವಾರ • ಜುಲೈ 22, 2024



ಬಸವಕಲ್ಯಾಣದಲ್ಲಿ ಭಾನುವಾರ ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಾದಪೂಜೆಯನ್ನು ಪ್ರೊ.ಶಾಂತಲಿಂಗ ಮಠಪತಿ ಮತ್ತು ಶಿವಲೀಲಾ ದಂಪತಿ ನೆರವೇರಿಸಿದರು

ಪ್ರಜಾವಾಣಿ

Scanned with OKEN Scanner

ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ

ಕರ್ನಾಟಕದಲ್ಲಿ ಕನ್ನಡ ಮೆರೆಯಬೇಕು

■ ವಿಜಯವಾಣಿ ಸುದ್ದಿಜಾಲ ಶಿರಸಿ

ಪ್ರಾಥಮಿಕ ಶಾಲಾ ಮಟ್ಟದಲ್ಲಿಯೇ ಕನ್ನಡದ ಛಾಪು ಮಕ್ಕಳಲ್ಲಿ ಭದ್ರವಾಗಿ ಬೇರೂರಿದರೆ ಅದು ಮುಂದೆ ಹೆಮ್ಮರವಾಗಲು ಸಾಧ್ಯ. ಆಂಗ್ಲ ಮಾಧ್ಯಮಕ್ಕೆ ಸೇರಿಸಲು ತುದಿಗಾಲಲ್ಲಿ ನಿಂತಿರುವ ಪಾಲಕರು ಈ ಅಂಶವನ್ನು ಗಮನಿಸಬೇಕು ಎಂದು ಬಸವಕಲ್ಯಾಣ ಸಂಸ್ಥಾನ ಗವಿಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ನೆಮ್ಮದಿ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ 12ನೇ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕನ್ನಡ ಶಾಲೆಗಳು ಇಂದು ನಮ್ಮ ರಾಜ್ಯದಲ್ಲಿಯೇ ಶೋಚನೀಯ ಸ್ಥಿತಿಗೆ ಬಂದು ತಲುಪಿವೆ. ಆಂಗ್ಲ ಮಾಧ್ಯಮ ಶಾಲೆಗಳು ಮೆರೆಯುತ್ತಿವೆ. ಕರ್ನಾಟಕದಲ್ಲಿ ಕನ್ನಡ ಭಾಷೆ ಮೆರೆಯಬೇಕು ಮತ್ತು ಕನ್ನಡವೇ ಆಳಬೇಕು. ಗಡಿ ಭಾಗ, ರಾಜಧಾನಿ ಬೆಂಗಳೂರಿನಲ್ಲಿ ತಮಿಳು, ತೆಲುಗು, ಉರ್ದು, ಮರಾಠಿ ಭಾಷೆ ಪ್ರಭಾವ ಜಾಸ್ತಿಯಾಗಿದೆ. ಕನ್ನಡ ಉಳಿಸಿ ಬೆಳೆಸಲು ನಾವು ಶ್ರಮ ಪಡಬೇಕಿದೆ ಎಂದ ಅವರು, ರಾಷ್ಟ್ರ ಭಾಷೆ ಹಿಂದಿ ಕಲಿಯುವುದು ಅನಿವಾರ್ಯ ಮತ್ತು ಅದರಲ್ಲಿ ತಪ್ಪೇನಿಲ್ಲ. ಆದರೆ, ಕನ್ನಡ ಭಾಷೆಯೇ ರಾಜ್ಯದಲ್ಲಿ ಪ್ರಧಾನವಾಗಬೇಕು. ನಮ್ಮ ಗ್ರಾಮ ಗ್ರಾಮಗಳಲ್ಲಿ ಕನ್ನಡ ಉಳಿಸಿಕೊಂಡು ಮುಂದಿನ ಪೀಳಿಗೆಗೆ ಹಸ್ತಾಂತರಿಸವ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ಬಸವಣ್ಣನವರು ಹೊಸ ಸಮಾಜದ ಹಾದಿಯತ್ತ ಸಾಗಿದಾಗಲೂ ಲೋಕ ವಿರೋಧಗಳು ಬಂದಿದ್ದವು. ಆಗ ಅತ್ಯಂತ ಗಟ್ಟಿತನ, ಧೈರ್ಯದಿಂದ ಮುಂದೆ ಸಾಗಿದ ಅವರು, ಶರಣ ವಚನೋಕ್ತಿಗಳನ್ನು ಪ್ರಸ್ತುತ ಪಡಿಸಿದಾಗ ಆತ್ಮ ವಿಶ್ವಾಸದ ದಾರಿಗಳು ತೆರೆದುಕೊಂಡವು. ಬಸವಾದಿ ಶರಣರ ಅನೇಕ ವಿಚಾರಗಳು ಇಂದಿನ ಯುವ ಜನರ ಸುಂದರ ಬದುಕಿಗೆ ದಾರಿ ದೀಪಗಳಾಗಿವೆ. ಮಾನವ ಎಷ್ಟೇ ದಿನ ಬದುಕುಳಿಯಲಿ, ಏನೇ ಸಾಧಿಸಲಿ, ಎಲ್ಲ ಸಾಧನೆ ಒಳ್ಳೆಯ ತನದಿಂದ ಕೂಡಿರಬೇಕು ಎಂದರು.

ನಾಡಿನಲ್ಲಿ ಹಲವಾರು ಮಠಗಳಿಂದ ಅನೇಕ ಸಾಧಕರ ಸರಣೀಕೃತ ಪುಸ್ತಕಗಳು ಹೊರಬಂದಿವೆ. ಇಂತಹ ಸಾಧನೆ ರಾಜ್ಯ ಚುಟುಕು ಸಾಹಿತ್ಯ ಪರಿಷತ್ತಿನಿಂದಲೂ ನಡೆಯಬೇಕಿದೆ. ಇದಕ್ಕೆ ಸಮಾಜ ಹಾಗೂ ಸರ್ಕಾರ ಅಗತ್ಯ ನೆರವು ನೀಡಬೇಕು ಎಂದರು.

ಹಿರಿಯ ಚಿಂತಕ ರಾಮದಾಸ ರಾಮ ಪೈ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀ ರುದ್ರದೇವರ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ನಾಟಕಕಾರ ಹನುಮಂತ ಸಾಲಿ, ಚುಟುಕು ಸಾಹಿತ್ಯ ಪರಿಷತ್ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ, ಪ್ರಸಾರಾಂಗ ನಿರ್ದೇಶಕ ಚೆನ್ನಬಸಪ್ಪ ಧಾರವಾಡ ಶೆಟ್ರು, ಮನೋಹರ ಮಲ್ಮನೆ, ಕೃಷ್ಣ ಪದಕಿ, ಜಿ.ಯು. ಹೊನ್ನಾವರ, ಡಾ. ಶಾಂತಣ್ಣ ಕಡಿದಾಲ, ರಾಮು ಕಿಣಿ, ಮಂಜುನಾಥ ಹೆಗಡೆ ಹುಡ್ಲಮನೆ ಇತರರಿದ್ದರು. ಭವ್ಯ ಹಳೆಯೂರು ನಿರ್ವಹಿಸಿದರು. ಸ್ವಾಮೀಜಿ ಅವರನ್ನು ಮತ್ತು ರಾಮದಾಸ ಪೈ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.



ಶಿರಸಿಯಲ್ಲಿ ಏರ್ಪಡಿಸಿದ್ದ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಸರ್ವಾಧ್ಯಕ್ಷ ಬಸವಕಲ್ಯಾಣದ ಶ್ರೀ ಡಾ. ಅಭಿನವ ಶಿವಾಚಾರ್ಯ ಸ್ವಾಮೀಜಿ, ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ರಾಮದಾಸ ರಾಮ ಪೈ ಅವರನ್ನು ಸನ್ಮಾನಿಸಲಾಯಿತು. ಕೃಷ್ಣಮೂರ್ತಿ ಕುಲಕರ್ಣಿ, ಚೆನ್ನಬಸಪ್ಪ ಧಾರವಾಡ ಶೆಟ್ರು, ಮನೋಹರ ಮಲ್ಮನೆ, ಕೃಷ್ಣ ಪದಕಿ, ರಾಮು ಕಿಣಿ, ಭವ್ಯಾ ಹಳೆಯೂರು ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
● VIJAYAVANI » HUBBALLI
ಸೋಮವಾರ 27 ಮೇ 2024
27 MAY 2024

ಗುರು ಮಾರ್ಗದರ್ಶನಿಂದ ಸಂಸ್ಕಾರ ಸಾಧ್ಯ

■ ವಿಕ ಸುದ್ದಿಲೋಕ ಬಸವಕಲ್ಯಾಣ

ದುಶ್ಚಟಗಳಿಗೆ ದಾಸನಾಗದೇ ಭಕ್ತರು ಗುರುಗಳ ಮಾರ್ಗದರ್ಶನದಲ್ಲಿ ಸಾಗಿದಾಗ ಖಂಡಿತವಾಗಿಯೂ ಉತ್ತಮ ಮನುಷ್ಯ ನಾಗಿ ಸಮಾಜದಲ್ಲಿ ಒಳ್ಳೆಯ ಸಂಸ್ಕಾರ ವಂತನಾಗಿ ಬಳಲು ಸಾಧ್ಯವಾಗುತ್ತದೆ ಎಂದು ಇಲ್ಲಿಯ ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಇತ್ತೀಚಿಗೆ ಜರುಗಿದ ರಾಜ್ಯಮಟ್ಟದ 12ನೇ ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ 'ಚುಟುಕು ಚೇತನ ಸಾಹಿತ್ಯ ಪ್ರಶಸ್ತಿ' ಸ್ವೀಕರಿಸಿ ನಗರಕ್ಕೆ ಆಗಮಿಸಿದ್ದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾ ರ್ಯರಿಗೆ ನಗರದ ಸೀತಾ ಕಾಲೊನಿಯಲ್ಲಿ ಮಹಾನಂದ ರಾಕೇಶ ವಿ.ಪುರವಂತ ದಂಪತಿಯಿಂದ ಹಮ್ಮಿ ಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

ರಾಕೇಶ ಪುರವಂತ ವೃತ್ತಿಯಲ್ಲಿ ವಿದ್ಯುತ್ ಗುತ್ತಿಗೆದಾರಾರಾಗಿದ್ದರೂ ಪ್ರವೃತ್ತಿ ಯಲ್ಲಿ ದೇವರು ಧರ್ಮ ಗುರುಗಳಲ್ಲಿ ಅಪಾರ ಶ್ರದ್ಧಾ ಭಕ್ತಿ ಹೊಂದಿದ್ದಾರೆ. ಈ ಪ್ರಶಸ್ತಿ ಕೇವಲ ನನಗಲ್ಲ, ಬಸವಕಲ್ಯಾಣ ತಾಲೂಕಿನ ಭಕ್ತರಿಗೆ ದೊರತ ಪ್ರಶಸ್ತಿ ಇದಾಗಿದೆ ಎಂದು ತಿಳಿಸಿದರು.

ಬಿಡಿಪಿಸಿ ನಿರ್ದೇಶಕ ಮಲ್ಲಯ್ಯ ಹಿರೇಮಠ ಮಾತನಾಡಿ, ಪುರವಂತ ಪರಿವಾರ ಸಭ್ಯ, ಸುಸಂಸ್ಕೃತ ಪಾರಿವಾರ 'ವಾಗಿದ್ದು ರಾಕೇಶ ಪುರವಂತ ಅವರು ಗುರು ಹಿರಿಯರಲ್ಲಿ ಅಪಾರ ಭಕ್ತಿ ಗೌರವ ಹೊಂದಿ ಗುರುಗಳನ್ನು ಭಕ್ತಿ ಯಿಂದ ಸತ್ಕರಿಸಿ ಅಭಿನಂದಿಸಿದ್ದು ಶ್ಲಾಘ ನೀಯ ಎಂದು ಸಂತಸ ವ್ಯಕ್ತಪಡಿಸಿದರು.

ಪ್ರೊ. ಸೂರ್ಯಕಾಂತ ಶೀಲವಂತ ಮಾತನಾಡಿ, ಸಂಸ್ಥಾನ ಗವಿಮಠದ ಶ್ರೀಗಳು ಕಿರಿಯ ವಯಸ್ಸಿನಲ್ಲಿಯೇ ಹಿರಿಯ ಸಾಧನೆಗೈದು ಸಮಾಜಕ್ಕೆ ದಾರಿ ದೀಪವಾಗಿದ್ದಾರೆ ಎಂದರು.

ವೇದಿಕೆಯಲ್ಲಿ ಕಲ್ಯಾಣರಾವ ಶರಣಯ್ಯ ಪುರವಂತ, ಪ್ರೊ.ದಯಾನಂದ ಶೀಲವಂತ, ರಾಕೇಶ ಪುರವಂತ ಇದ್ದರು. ಈ ವೇಳೆ ಸೂರ್ಯಕಾಂತ ಪಾಟೀಲ, ರಾಜು ಬಳಿಗಾರ, ಡಾ. ರೇವಣಸಿದ್ಧಯ್ಯ ಶಂಕರಗುಡಿ, ಬಸಲಿಂಗಯ್ಯ ಶಂಕರಗುಡಿ, ಓಂಕಾರ ಪಾಟೀಲ, ಎಂ. ಕೆ. ನಂದಿ, ಗಣಾಚಾರಿ ಪುರಾಣಿಕ, ವೀರಣ್ಣ ಶೀಲವಂತ, ರೇವಣಸಿದ್ಧಯ್ಯ ಮಠಪತಿ, ರಾಮಲಿಂಗ ಝುಂಗಾ, ವೀರಶೈಟ್ಟಿ ಪಾಟೀಲ, ಶಾಂತವೀರ ಪೂಜಾರಿ, ಸದಾನಂದ ಕಣಜೆ, ಲೋಕೇಶ ಮಠಪತಿ, ಶರಣು ಮಠಪತಿ, ರವಿಕಾಂತ ಚಿಟ್ಟೆ, ಪ್ರಭು ಸ್ವಾಮಿ, ದೀಪಕ ಪುರವಂತ, ನೀಲಮ್ಮ ಪುರವಂತ, ರೇಖಾ ಚಿಟ್ಟೆ, ಜ್ಯೋತಿ ಪುರವಂತ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಪ್ರೊ.ರುದ್ರೇಶ್ವರ ಗೋರ್ಟಾ ಪ್ರಾರ್ಥನೆ ಗೀತೆ ಹಾಡಿದರೆ, ಮುಖ್ಯಗುರು ರಮೇಶ ರಾಜೋಳೆ ನಿರೂಪಿಸಿದರು. ಮಲ್ಲಿಕಾರ್ಜುನ ಸ್ವಾಮಿ ವಂದಿಸಿದರು.



ಬಸವಕಲ್ಯಾಣ ನಗರದ ಸೀತಾ ಕಾಲೊನಿಯಲ್ಲಿ ಮಹಾನಂದ ರಾಕೇಶ ವಿ.ಪುರವಂತ ದಂಪತಿಯಿಂದ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರಿಗೆ ಸನ್ಮಾನಿಸಲಾಯಿತು.

10 ನಮ್ಮ ಚಿದರ್ ಬುಧವಾರ, 19 ಜೂನ್ 2024

Scanned with OKEN Scanner

ಚುಟುಕು ಸಾಹಿತ್ಯಕ್ಕೆ ಜನರಲ್ಲಿ ಪರಿಣಾಮ ಬೀರಬಲ್ಲ ಶಕ್ತಿ ಇದೆ: ಮಲ್ಲಿಕಾರ್ಜುನ ಶ್ರೀ

ಕನ್ನಡ ಜನಾಂತರಂಗ ವರದಿ

ಶಿರಸಿ: ''ಸಾಹಿತ್ಯ ವಲಯದ ಬೆಳವಣಿಗೆಗೆ ಮೊಬೈಲ್ ಮಹಾಮಾರಿಯಾಗಿದೆ. ಇದರಿಂದ ಪುಸ್ತಕ ಓದುವ ಆಸಕ್ತಿ ಕಡಿಮೆಯಾಗಿದೆ. ಜನರಲ್ಲಿ ಚುಟುಕು ಸಾಹಿತ್ಯ ಪರಿಣಾಮ ಬೀರಬಲ್ಲ ಶಕ್ತಿ ಹೊಂದಿದೆ'' ಎಂದು ಶಿರಸಿಯ ರುದ್ರದೇವರ ಮಠದ ಮಲ್ಲಿಕಾರ್ಜುನ ಸ್ವಾಮಿಗಳು ಹೇಳಿದರು.



ಸಮ್ಮೇಳನವನ್ನು ಶಿರಸಿಯ ರುದ್ರದೇವರ ಮಠದ ಮಲ್ಲಿಕಾರ್ಜುನ ಸ್ವಾಮಿಗಳು ಸೇರಿದಂತೆ ಗಣ್ಯರು ಉದ್ಘಾಟಿಸುತ್ತಿರುವುದು.

ಅವರು ರವಿವಾರ ರಂಗಧಾಮದಲ್ಲಿ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ಆಶ್ರಯದಲ್ಲಿನಡೆದ ರಾಜ್ಯಮಟ್ಟದ 12ನೇ ಚುಟುಕು ಸಾಹಿತ್ಯ ಸಮ್ಮೇಳನದ ಸಾನಿಧ್ಯ ವಹಿಸಿ ಮಾತನಾಡಿ, ''ಬದುಕಿನಲ್ಲಿ ಸಾಹಿತ್ಯದ ಪಾತ್ರ ವಿಶೇಷವಾಗಿದೆ. 400 ಪುಟದ ಗ್ರಂಥದ ಅರ್ಥವನ್ನು ನಾಲ್ಕು ಸಾಲಿನ ಚುಟಕು ನೀಡಬಲ್ಲ ಶಕ್ತಿ ಹೊಂದಿದೆ. ಜನರಲ್ಲಿ ಓದುವ ಆಸಕ್ತಿ ಬದಲಾಗಿದೆ. ಜನರು ಪುಸ್ತಕದ ಜೊತೆಗೆ ದಿನಪತ್ರಿಕೆ ಓದುವ ಹವ್ಯಾಸ ಹೆಚ್ಚಿಸಿಕೊಂಡಾಗ ಜ್ಞಾನ ಸಂವರ್ಧನೆಯಾಗುತ್ತದೆ. ಶಿರಸಿಯು ಸಾಹಿತ್ಯದ ತ್ರಿವೇಣಿ ಸಂಗಮ. ಇಲ್ಲಿ ಬರೆಯುವವರು, ಮಾತನಾಡುವವರು, ಅಧ್ಯಯನಕಾರರಿದ್ದಾರೆ'' ಎಂದು ತಿಳಿಸಿದರು.

ಹಿರಿಯ ಚಿಂತಕ ರಾಮದಾಸ ಪೈ ಮಾತನಾಡಿ, ''ಮಹತ್ವದ ವಿಷಯ ಚುಟುಕಾಗಿ ತಿಳಿಸುವುದೇ ಚುಟುಕು. ಶ್ರೀಸಾಮಾನ್ಯರಿಗೂ ಅರ್ಥಪೂರ್ಣವಾಗಿ ತಿಳಿಸುವ ಶಕ್ತಿಯಿದೆ. ಬದುಕಿಗೂ ಪರಿಣಾಮ ನೀಡುತ್ತದೆ. ಕನ್ನಡ ಭಾಷೆ ಬರೆಯಲು ಒಳ್ಳೆಯ ಭಾಷೆ'' ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಬಸವ ಕಲ್ಯಾಣದ ರುದ್ರಮುನಿ ಶಿವಾಚಾರ್ಯ ಸ್ವಾಮಿ ಮಾತನಾಡಿ, ''ಸಾಹಿತ್ಯದ ವಿಶಿಷ್ಟ ಪ್ರಕಾರವಾದ ಚುಟುಕು ಸಾಹಿತ್ಯಕ್ಕೆ ವಿಶೇಷ ಶಕ್ತಿಯಿದ್ದು ಅದನ್ನು ಬೆಳೆಸುವ ಪ್ರೋತ್ಸಾಹಿಸುವ ಕೆಲಸವಾಗಬೇಕು'' ಎಂದು ತಿಳಿಸಿದರು.

ರುದ್ರಮುನಿ ಸ್ವಾಮಿ, ಮಲ್ಲಿಕಾರ್ಜುನ ಸ್ವಾಮಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಶಿರಸಿ ಜಿಲ್ಲಾಧ್ಯಕ್ಷ ಮನೋಹರ ಮಲ್ಮನೆ ಸ್ವಾಗತಿಸಿದರು. ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ಪ್ರಸ್ತಾಪಿಸಿದರು. ಜಿಲ್ಲಾಧ್ಯಕ್ಷ ಜಿ ಯು ನಾಯಕ ಅತಿಥಿಗಳನ್ನು ಪರಿಚಯಿಸಿದರು. ಭವ್ಯಾ ಹಳೆಯೂರ ನಿರ್ವಹಿಸಿದರು. ಡಾ ಪ್ರಭುಸ್ವಾಮಿ ಅಭಿನಂದಿಸಿದರು. ಪ್ರಸಾರಂಗ ನಿರ್ದೇಶಕ ಚನ್ನಬಸಪ್ಪ ಧಾರವಾಡ, ಶಿರಸಿ ಸಾಹಿತ್ಯ ಸಂಚಲನ ಅಧ್ಯಕ್ಷ ಕೃಷ್ಣ ಪದಕಿ, ಪ್ರಗತಿಪರ ಕೃಷಿಕ ರಾಮು ಕಿಣಿ, ತಾ ಅಧ್ಯಕ್ಷ ಮಂಜುನಾಥ ಹೆಗಡೆ ಇದ್ದರು. ಬಳಿಕ ಮೈಸೂರಿನ ವಿಜಯಾಮೂರ್ತಿ ಅವರಿಂದ ನೃತ್ಯ ವೈಭವ ಕಾರ್ಯಕ್ರಮ ನಡೆಯಿತು.

ಕನ್ನಡ ಜನಾಂತರಂಗ 27-05-2024

'ಬಾಲ್ಯದಲ್ಲೇ ಕನ್ನಡದ ಭಾವು ಮೂಡಲಿ'

ಪ್ರಜಾವಾಣಿ ವಾರ್ತೆ

ಶಿರಸಿ: ಪ್ರಾಥಮಿಕ ಶಾಲಾ ಮಟ್ಟದಲ್ಲಿಯೇ ಕನ್ನಡದ ಭಾವು ಮಕ್ಕಳಲ್ಲಿ ಭದ್ರವಾಗಿ ಬೇರೂರಿದರೆ ಅದು ಮುಂದೆ ಹೆಮ್ಮರವಾಗಲು ಸಾಧ್ಯ. ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸಲು ತುದಿಗಾಲಲ್ಲಿ ನಿಂತಿರುವ ಪಾಲಕರು ಈ ಅಂಶವನ್ನು ಗಮನಿಸಬೇಕು ಎಂದು ಬಸವಕಲ್ಯಾಣ ಸಂಸ್ಥಾನ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ನೆಮ್ಮದಿ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ 12ನೇ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಕನ್ನಡ ಶಾಲೆಗಳು ಇಂದು ನಮ್ಮ ರಾಜ್ಯದಲ್ಲಿಯೇ ಶೋಚನೀಯ ಸ್ಥಿತಿಗೆ ಬಂದು ತಲುಪಿವೆ. ಇಂಗ್ಲಿಷ್ ಮಾಧ್ಯಮ ಶಾಲೆಗಳು ಅಟ್ಟಹಾಸದಿಂದ ಮೆರೆಯುತ್ತಿವೆ. ಕರ್ನಾಟಕದಲ್ಲಿ ಕನ್ನಡ ಭಾಷೆ ಮೆರೆಯಬೇಕು ಮತ್ತು ಕನ್ನಡವೇ ಆಳಬೇಕು. ಗಡಿ ಭಾಗದಲ್ಲಿ, ರಾಜಧಾನಿ ಬೆಂಗಳೂರಿನಲ್ಲಿ ತಮಿಳು, ತೆಲುಗು, ಉರ್ದು, ಮರಾಠಿ ಭಾಷೆ ಪ್ರಭಾವ ಜಾಸ್ತಿಯಾಗಿದೆ. ಕನ್ನಡ ಉಳಿಸಿ ಬೆಳೆಸಲು ನಾವು ಶ್ರಮ ಪಡಬೇಕಿದೆ ಎಂದ ಅವರು, ರಾಷ್ಟ್ರ ಭಾಷೆ ಹಿಂದಿ ಕಲಿಯುವುದು ಅನಿವಾರ್ಯ ಮತ್ತು ಅದರಲ್ಲಿ ತಪ್ಪೇನಿಲ್ಲ. ಆದರೆ, ಕನ್ನಡ ಭಾಷೆಯೇ ರಾಜ್ಯದಲ್ಲಿ ಪ್ರಧಾನವಾಗಬೇಕು. ನಮ್ಮ ಗ್ರಾಮ



ಶಿರಸಿಯಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ರಾಮದಾಸ ಪೈ ಹಾಗೂ ಮಲ್ಲಿಕಾರ್ಜುನ ಸ್ವಾಮೀಜಿ ಅವರನ್ನು ಸನ್ಮಾನಿಸಲಾಯಿತು

ಗ್ರಾಮಗಳಲ್ಲಿ ಕನ್ನಡ ಉಳಿಸಿಕೊಂಡು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ಬಸವಾದಿ ಶರಣರ ಅನೇಕ ವಿಚಾರಗಳು ಇಂದಿನ ಯುವ ಜನರ ಸುಂದರ ಬದುಕಿಗೆ ದಾರಿ ದೀಪಗಳಾಗಿವೆ. ಮಾನವ ಎಷ್ಟೇ ದಿನ ಬದುಕುಳಿಯಲಿ, ಏನೇ ಸಾಧಿಸಲಿ. ಆದರೆ ಸಾಧನೆಯೆಲ್ಲ ಒಳ್ಳೆಯ ತನದಿಂದ ಕೂಡಿರಬೇಕು. ನಾಡಿನಲ್ಲಿ ಹಲವಾರು ಮಠಗಳಿಂದ ಅನೇಕ ಸಾಧಕರ ಸರಣೀಕೃತ ಪುಸ್ತಕಗಳು ಹೊರಬಂದಿವೆ. ಇಂತಹ ಸಾಧನೆ ರಾಜ್ಯ ಚುಟುಕು ಸಾಹಿತ್ಯ ಪರಿಷತ್ತಿನಿಂದಲೂ ನಡೆಯಬೇಕಿದೆ. ಇದಕ್ಕೆ ಸಮಾಜ ಹಾಗೂ ಸರ್ಕಾರ ಅಗತ್ಯ ನೆರವು ನೀಡಬೇಕು ಎಂದರು.

ಹಿರಿಯ ಚಿಂತಕ ರಾಮದಾಸ ಪೈ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ರುದ್ರದೇವರ ಮಠದ ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ರಾಮದಾಸ ಪೈ ಹಾಗೂ ಯತಿದ್ವಯರನ್ನು ಪರಿಷತ್ ವತಿಯಿಂದ ಸನ್ಮಾನಿಸಲಾಯಿತು. ನಾಟಕಕಾರ ಹನುಮಂತ ಸಾಲಿ, ಚುಟುಕು ಸಾಹಿತ್ಯ ಪರಿಷತ್ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ, ಪ್ರಸಾರಾಂಗ ನಿರ್ದೇಶಕ ಚೆನ್ನಬಸಪ್ಪ ಧಾರವಾಡ ಶೆಟ್ರು ಮನೋಹರ ಮಲ್ಮನೆ, ಕೃಷ್ಣ ಪದಕಿ, ಜಿ.ಯು.ಹೊನ್ನಾವರ, ಶಾಂತಣ್ಣ ಕಡಿದಾಳ, ರಾಮು ಕಿಣಿ, ಮಂಜುನಾಥ ಹೆಗಡೆ ಹುಡ್ಲಮನೆ ಇತರರಿದ್ದರು. ಭವ್ಯ ಹಳೆಯೂರು ನಿರ್ವಹಿಸಿದರು.

ಪ್ರಜಾವಾಣಿ ಸೋಮವಾರ • ಮೇ 27, 2024

ಸಾಹಿತ್ಯ ಚುಟುಕಾದರೂ ಅರ್ಥ ಪ್ರಖರ

ಚುಟುಕು ಚೇತನ ಪ್ರಶಸ್ತಿ ಸ್ವೀಕರಿಸಿದ ರುದ್ರದೇವರ ಮಠದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿ ಅಭಿಪ್ರಾಯ

ಪ್ರಜಾವಾಣಿ
27.05.2024
ಕೊಪ್ಪಳ

ಶಿರಸಿ: ಇಲ್ಲಿಯ ನೆಮ್ಮದಿ ಆವರಣದ ರಂಗಧಾಮದಲ್ಲಿ ನಡೆದ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ರಾಜ್ಯ ಮಟ್ಟದ 12 ನೇ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಶಿರಸಿಯ ರುದ್ರದೇವರ ಮಠದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳಿಗೆ ಹಾಗೂ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿದ್ದ ಬಸವಕಲ್ಯಾಣದ ಗವಿಮಠ ಸಂಸ್ಥಾನದ ಶ್ರೀ ಡಾ.ಘನಲಿಂಗ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಚುಟುಕು ಚೇತನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಸಾವಿರಾರು ಪುಟದ ಗ್ರಂಥವನ್ನು ಒಂದೆರಡು ಸಾಲಿನಲ್ಲಿ ಚುಟುಕಾಗಿ ಹಾಗೂ ಸಾಹಿತ್ಯಾತ್ಮಕವಾಗಿ ಹೇಳುವ ಶಕ್ತಿ ಚುಟುಕಿನಲ್ಲಿದೆ. ಚುಟುಕು ಬರೆಯುವುದಕ್ಕೂ ನಿಖರವಾದ ಅಧ್ಯಯನ ಬೇಕು ಮತ್ತು ಭಾಷೆಯ ಅರಿವಿನ ಜೊತೆಗೆ ಶಬ್ದ ಭಂಡಾರವೇ ಬೇಕಾಗುತ್ತದೆ ಎಂದರು.

ಚುಟುಕು ಸಾಹಿತ್ಯ ಸಂಕ್ಷಿಪ್ತವಾಗಿದ್ದರೂ ದೊಡ್ಡ ಅರ್ಥವನ್ನೇ ಕೊಡುತ್ತದೆ. ಚಟುಕು ಬ್ರಹ್ಮ ದಿನಕರ ದೇಸಾಯಿ, ಬೀಚಿ ಇವರ ಮಾತಿನಲ್ಲೆ ಸಾಹಿತ್ಯ ಇರುತ್ತಿತ್ತು. ಇವರು ಚುಟುಕು ಸಾಹಿತ್ಯದಿಂದಲೇ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕೆಲಸ ಮಾಡಿದರು. ಇವರ ಸಾಹಿತ್ಯ ಬಾಣ ಹೊಡೆದಂತೆ ಹಾಗೂ ವಿಡಂಬನಾತ್ಮಕವಾಗಿರುತ್ತಿತ್ತು. ನಮ್ಮಲ್ಲಿ ಎಲ್ಲಾ ರೀತಿಯ ಪಂಡಿತರಿದ್ದಾರೆ. ಅವರಲ್ಲಿ ಕೆಲವರು ತುಂಬಾ ಚೆನ್ನಾಗಿ ಮಾತನಾಡಿದರೂ ಅವರಿಗೆ ಬರೆಯಲು ಬರುವದಿಲ್ಲ. ಇನ್ನೂ ಕೆಲವರು ಚೆನ್ನಾಗಿ ಬರೆಯುತ್ತಾರೆ ಆದರೆ ಅವರು ಮಾತನಾಡುವದಿಲ್ಲ, ಇದು ನಮ ಸಾಹಿತಿಗಳಲ್ಲಿರುವ ವ್ಯತ್ಯಾಸ ಎಂದು ಹೇಳಿದರು.



ಶಿರಸಿಯ ನೆಮ್ಮದಿ ಆವರಣದ ರಂಗಧಾಮದಲ್ಲಿ ಜರುಗಿದ ಚುಟುಕು ಸಾಹಿತ್ಯ ಪರಿಷತ್ತಿನ ರಾಜ್ಯ ಮಟ್ಟದ 12 ನೇ ಚುಟುಕು ಸಾಹಿತ್ಯ ಸಮ್ಮೇಳನವನ್ನು ಗಣ್ಯರು ಉದ್ಘಾಟಿಸಿದರು.

ನಮ್ಮಲ್ಲಿ ಓದುವ ಪ್ರವೃತ್ತಿ ಕಡಿಮೆಯಾಗುತ್ತಿದೆ ಎಂದರೆ ಅದಕ್ಕೆ ಕಾರಣ ಮೊಬೈಲ್ ಮತ್ತು ಟಿವಿ. ಇಂದಿನ ತಂತ್ರಜ್ಞಾನ ಯುಗದಲ್ಲಿ ಎಲ್ಲವೂ ಕಾಲಾಡಿ ಕೈಯಡಿ ಸಿಗುತ್ತಿರುವಾಗ ಎಲ್ಲಾ ಮಾಹಿತಿ ಗಳೂ ಮೊಬೈಲ್ ನಲ್ಲಿ ಸಿಗುತ್ತಿರುವುದು ಪುಸ್ತಕ ಗಳನ್ನುಕೊಂಡು ಓದುಗರ ಸಂಖ್ಯೆ ತೀರಾ ಕಡಿಮೆ ಯಾಗುತ್ತಿದೆ. ಇದು ಮುಂದೆ ಸಾಹಿತ್ಯದ ಹಿನ್ನಡೆಗೆ ಕಾರಣವಾಗಬಹುದೆಂದು ಆತಂಕ ವ್ಯಕ್ತಪಡಿಸಿದರು.

ಮೊದಲು ಜ್ಞಾನಕ್ಕಾಗಿ ಓದುತ್ತಿದ್ದರು ಈಗ ಕೇವಲ ಅಂಕಗಳಿಸುವುದಕಷ್ಟೇ ಓದಲಾಗುತ್ತಿದೆ. ಇವೆಲ್ಲವೂ ಮುಂದೊಂದು ದಿನ ಸಾಹಿತ್ಯಕ್ಕೆ ಮಾರಕವಾಗಲಿದೆ ಎಂದರು.

ಶಿರಸಿಯಲ್ಲಿ ಸಾಹಿತ್ಯ ಕೃಷಿ ಚೆನ್ನಾಗಿ ನಡೆಯುತ್ತಿದೆ. ಇಲ್ಲಿ ಓದುಗರು, ಬರಹಗಾರರು ಹಾಗು ಅಧ್ಯಯನ ಶೀಲರು ಇರುವುದರಿಂದ ಶಿರಸಿ ಸಾಹಿತ್ಯದ ತ್ರಿವೇಣಿ ಸಂಗಮವೆಂದು ಬಣ್ಣಿಸಿದ ಅವರು ಇಲ್ಲಿ ಚುಟುಕು ಸಾಹಿತ್ಯ ಸಮ್ಮೇಳನ ನಡೆಸಿದ್ದು ಅರ್ಥಪೂರ್ಣವಾಗಿದೆ ಎಂದರು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ಚಿಂತಕರಾದ ರಾಮದಾಸ ರಾಮ ಪೈ, ಜೀವನದ ಮೌಲ್ಯಗಳನ್ನು ಚುಟುಕುಗಳ ಮೂಲಕ ಉಳಿಸಿಕೊಳ್ಳಲು ರಾಜ್ಯ ಮಟ್ಟದ ಸಮ್ಮೇಳನಗಳನ್ನು ನಡೆಸುತ್ತಿರುವುದು ಶ್ಲಾಘನೀಯವಾಗಿದೆ ಎಂದರು.

ಚುಟುಕು ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ಮಹತ್ವದ ಸ್ಥಾನ ಪಡೆದುಕೊಂಡಿದೆ. ಪತ್ರಿಕೆಗಳ ಸಹಾಯದಿಂದ ಚುಟುಕು ಸಾಹಿತಿಗಳು ಪ್ರಬುದ್ಧ ಮಾನಕ್ಕೆ ಬರುತ್ತಿದ್ದಾರೆ. ಈ ಸಾಹಿತ್ಯ ಆಕಾರದಲ್ಲಿ ಚಿಕ್ಕದಾದರೂ ದೊಡ್ಡ ಅರ್ಥವನ್ನೇ ಕೊಡುವ ಶಕ್ತಿಯನ್ನು ಹೊಂದಿದ್ದು ಶ್ರೀಸಾಮಾನ್ಯ ರಿಗೆ ಮುಟ್ಟಿಸುವಲ್ಲಿ ಯಶಸ್ವಿಯಾಗಿದೆ. ಕಾವ್ಯ ಚಿಕ್ಕದಾದರೂ ಅದರ ಪ್ರತಾಪ ದೊಡ್ಡದು. ಹಾಗೆಂದು ಇದನ್ನು ಮಿತಿಯೊಳಗೆ ಒಳಪಡಿಸುವುದು ಕಷ್ಟ, ಈ ಸಾಹಿತ್ಯ ಶೂನ್ಯ ತುಂಬುವುದರ ಜೊತೆಗೆ ಅರ್ಥವಂತಿಕೆ ಯನ್ನು ನೀಡುವ ಬುದುಕಿನ ಲಾಲಿತ್ಯವೂ ಹೌದು. ಜನರಿಗೆ ಕಚುಗುಳಿ ನೀಡುತ್ತ ಸೂಪ್ತ ಮನಸ್ಸುಗಳಿಗೆ ಜಾಗೃತೆ ಮೂಡಿಸುತ್ತಿರುವ ಚುಟುಕು ಸಾಹಿತ್ಯಕ್ಕೆ ಹೊಸ ನೆಲೆ ದೊರಕಿಸಿಕೊಡಬೇಕೆಂದು ಮನವಿ ಮಾಡಿದರು.

ಕಚುಸಾಪದ ಜಿಲ್ಲಾ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಕಚುಸಾಪದ ಶಿರಸಿ ಶೈಕ್ಷಣಿಕ ಜಿಲ್ಲೆಯ ಅಧ್ಯಕ್ಷ ಮನೋಹರ ಮಲ್ಮನೆ, ಸಾಹಿತ್ಯ ಸಂಚಲನದ ತಾಲೂಕಾ ಅಧ್ಯಕ್ಷ ಕೃಷ್ಣಾ ದತ್ತಾತ್ರೇಯ ಪದಕಿ, ಜಿಲ್ಲಾಧ್ಯಕ್ಷ ಜಿ.ಯು.ನಾಯಕ್, ಪ್ರಗತಿಪರ ಕೃಷಿಕ ರಾಮು ಕಿಣಿ, ಕಚುಸಾಪದ ತಾಲೂಕಾ ಅಧ್ಯಕ್ಷ ಮಂಜುನಾಥ ಹೆಗಡೆ ಹೂಡ್ಲಮನೆ, ಕಚುಸಾಪದ ಹುಬ್ಬಳ್ಳಿ ಪ್ರಸಾರಾಂಗ ನಿರ್ದೇಶಕ ಚನ್ನಬಸಪ್ಪ ದಾರವಾಡಶೆಟ್ರು, ಕಚುಸಾಪ ಹುಬ್ಬಳ್ಳಿಯ ಶಾಂತಣ್ಣ ಕೆಡಿವಾಲ ಇತರರಿದ್ದರು.

ಕಚುಸಾಪದ ಭವ್ಯ ಹಳೆಯೂರ ಹಾಗೂ ಕಚುಸಾಪದ ಶಿರಸಿ ಗೌರವಾಧ್ಯಕ್ಷ ಗಣಪತಿ ಭಟ್ ವರ್ಗಾಸರ ಕಾರ್ಯಕ್ರಮ ನಿರ್ವಹಿಸಿದರು.



ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ನಿಮಿತ್ತ ಬಸವಕಲ್ಯಾಣದ ಗವಿ ಮಠದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಯೋಗ ಮಾಡಿದರು.

ವಿಜಯ ಕರ್ನಾಟಕ VK
ಶನಿವಾರ,22 ಜೂನ್ 2024,
ಕಲಬುರಗಿ

Scanned with OKEN Scanner



ರಾಜ್ಯದ ಕನ್ನಡ ಶಾಲೆಗಳಿಗೆ ಶೋಚನೀಯ ಸ್ಥಿತಿ: ಅಭಿನವ ಶ್ರೀ

ಶಿರಸಿ ಸಮಾಚಾರ ⏭ ಶಿರಸಿ: ಪ್ರಾಥಮಿಕ ಶಾಲಾ ಮಟ್ಟದಲ್ಲಿಯೇ ಕನ್ನಡವ ಭಾಷಾ ಮಕ್ಕಳಲ್ಲಿ ಭದ್ರವಾಗಿ ಬೇರೂರಿದರೆ ಅದು ಮುಂದೆ ಹೆಮ್ಮರವಾಗಲು ಸಾಧ್ಯ ಆಂಗ್ಲ ಮಾಧ್ಯಮಕ್ಕೆ ಸೇರಿಸಲು ತುದಿಗಾಲಲ್ಲಿ ನಿಂತಿರುವ ಪಾಲಕರು ಈ ಅಂಶವನ್ನು ಗಮನಿಸಬೇಕು ಎಂದು ಬಸವಕಲ್ಯಾಣ ಸಂಸ್ಥಾನ ಗವಿಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ನೆಮ್ಮದಿ ಆವರಣದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ 12ನೇ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕನ್ನಡ ಶಾಲೆಗಳು ಇಂದು ನಮ್ಮ ರಾಜ್ಯದಲ್ಲಿಯೇ ಶೋಚನೀಯ ಸ್ಥಿತಿಗೆ ಬಂದು ತಲುಪಿವೆ. ಆಂಗ್ಲ ಮಾಧ್ಯಮ ಶಾಲೆಗಳು ಅಟ್ಟಹಾಸದಿಂದ ಮೆರೆಯುತ್ತಿವೆ. ಕರ್ನಾಟಕದಲ್ಲಿ ಕನ್ನಡ ಭಾಷೆ ಮರೆಯಬೇಕು ಮತ್ತು ಕನ್ನಡವೇ ಆಳಬೇಕು. ಗಡಿ ಭಾಗದಲ್ಲಿ, ರಾಜಧಾನಿ ಬೆಂಗಳೂರಿನಲ್ಲಿ ತಮಿಳು, ತೆಲುಗು, ಮರಾಠಿ ಭಾಷೆ ಪ್ರಭಾವ ಜಾಸ್ತಿಯಾಗಿದೆ. ಕನ್ನಡ ಉಳಿಸಿ ಬೆಳೆಸಲು ನಾವು ಶ್ರಮ ಪಡಬೇಕಿದೆ ಎಂದ ಅವರು, ರಾಷ್ಟ್ರ ಭಾಷೆ ಹಿಂದಿ ಕಲಿಯುವುದು ಅನಿವಾರ್ಯ ಮತ್ತು ಅದರಲ್ಲಿ ತಪ್ಪೇನಿಲ್ಲ. ಆದರೆ, ಕನ್ನಡ ಭಾಷೆಯೇ ರಾಜ್ಯದಲ್ಲಿ ಪ್ರಧಾನವಾಗಬೇಕು. ನಮ್ಮ ಗ್ರಾಮ ಗ್ರಾಮಗಳಲ್ಲಿ ಕನ್ನಡ ಉಳಿಸಿಕೊಂಡು ಮುಂದಿನ ಪೀಳಿಗೆಗೆ ಹಸ್ತಾಂತರಿಸವ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ಬಸವಣ್ಣನವರು ಹೊಸ ಸಮಾಜದ ಹಾದಿಯತ್ತ ಸಾಗಿದಾಗಲೂ ಲೋಕ ವಿರೋಧಗಳು ಬಂದಿದ್ದವು. ಆಗ ಅತ್ಯಂತ ಗಟ್ಟಿತನ, ಧೈರ್ಯದಿಂದ ಮುಂದೆ ಸಾಗಿದ ಅವರು, ಶರಣ ವಚನೋಕ್ತಿಗಳನ್ನು ಪ್ರಸ್ತುತ ಪಡಿಸಿದಾಗ ಆತ್ಮ ವಿಶ್ವಾಸದ ದಾರಿಗಳು ತೆರೆದುಕೊಂಡವು. ಬಸವಾದಿ ಶರಣರ ಅನೇಕ ವಿಚಾರಗಳು ಇಂದಿನ ಯುವ ಜನರ ಸುಂದರ ಬದುಕಿಗೆ ದಾರಿ ದೀಪಗಳಾಗಿವೆ. ಮಾನವ ಎಷ್ಟೇ ದಿನ ಬದುಕುಳಿಯಲಿ, ಏನೇ ಸಾಧಿಸಲಿ. ಆದರೆ ಸಾಧನೆಯೆಲ್ಲ ಒಳ್ಳೆಯ ತನದಿಂದ ಕೂಡಿರಬೇಕು ಎಂದರು.

ನಾಡಿನಲ್ಲಿ ಹಲವಾರು ಮಠಗಳಿಂದ ಅನೇಕ ಸಾಧಕರ ಸರಣೀಕೃತ ಪುಸ್ತಕಗಳು ಹೊರಬಂದಿವೆ. ಇಂತಹ ಸಾಧನೆ ರಾಜ್ಯ ಚುಟುಕು ಸಾಹಿತ್ಯ ಪರಿಷತ್ತಿನಿಂದಲೂ ನಡೆಯಬೇಕಿದೆ. ಇದಕ್ಕೆ ಸಮಾಜ ಹಾಗೂ ಸರ್ಕಾರ ಅಗತ್ಯ ನೆರವು ನೀಡಬೇಕು ಎಂದರು.

' ಹಿರಿಯ ಚಿಂತಕ ರಾಮದಾಸ ರಾಮ ಪೈ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀ ರುದ್ರದೇವರ ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ನಾಟಕಕಾರ ಹನುಮಂತ ಸಾಲಿ, ಚುಟುಕು ಸಾಹಿತ್ಯ ಪರಿಷತ್ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ, ಪ್ರಸಾರಾಂಗ ನಿರ್ದೇಶಕ ಚೆನ್ನಬಸಪ್ಪ ಧಾರವಾಡ ಶೆಟ್ರು, ಮನೋಹರ ಮಲ್ಮನೆ, ಕೃಷ್ಣ ಪದಕಿ, ಜಿ.ಯು. ಹೊನ್ನಾವರ, ಡಾ. ಶಾಂತಣ್ಣ ಕಡಿದಾಲ, ರಾಮು ಕಿಣಿ, ಮಂಜುನಾಥ ಹೆಗಡೆ ಹುಡ್ಲಮನೆ ಇತರರಿದ್ದರು. ಭವ್ಯ ಹಳೆಯೂರು ನಿರ್ವಹಿಸಿದರು.



ಶಿರಸಿ ಸಮಾಚಾರ ಗುರುವಾರ, 30.05.2024



ಬಸವಕಲ್ಯಾಣ: ಶ್ರಾವಣ ಮಾಸದ ನಿಮಿತ್ಯ ಗವಿ ಮಠದಲ್ಲಿ ಏರ್ಪಡಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆ ಸಮಾರಂಭ ಹಿರೇನಾಗಾಂವ್‌ನ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಉದ್ಘಾಟಿಸಿದರು.

'ಸಿದ್ಧಾಂತ ಶಿಖಾಮಣಿ–ವಚನ ಸಾಹಿತ್ಯ ಮೋಕ್ಷ ಮಾರ್ಗ ತೋರುವ ಸಾಹಿತ್ಯವಾಗಿವೆ'

ಸಂ.ಕ.ಸಮಾಚಾರ ಬಸವಕಲ್ಯಾಣ : ಜಗದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ಶಿವಶರಣರು ರಚಿಸಿದ ವಚನ ಸಾಹಿತ್ಯ ಮೋಕ್ಷ ಮಾರ್ಗ ತೋರುವ ಮಹತ್ವದ ಸಾಹಿತ್ಯವಾಗಿವೆ ಎಂದು ಹಿರೇನಾಗಾಂವ್‌ನ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಹೇಳಿದರು.

ಶ್ರಾವಣ ಮಾಸದ ನಿಮಿತ್ಯ ಗವಿ ಮಠದಲ್ಲಿ ಶ್ರಾವಣ ಸೋಮವಾರದ ಸಂಜೆ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲ್ಲೂಕು ಘಟಕ ಸಹಯೋಗದಲ್ಲಿ ಏರ್ಪಡಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆ ಸಮಾರಂಭ ಉದ್ಘಾಟಿಸಿ ಮಾತನಾಡಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಎರಡು ಕಣ್ಣುಗಳು ಇದ್ದ ಹಾಗೆ. ಆದರೆ ದೃಷ್ಟಿ ಒಂದೇ ಎಂದು ತಿಳಿಸಿದರು. ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಸರಿಯಾಗಿ ಅರಿತು ಮುನ್ನಡೆದರೆ ಮನುಷ್ಯನ ಜನ್ಮ ಸಾರ್ಥಕವಾಗುತ್ತದೆ. ಹಾಗೆಯೆ ಮುಂಬರುವ ವರ್ಷದಲ್ಲಿ ಶ್ರೀಮದ್ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್ ಸಮಾರಂಭದ ಸಿದ್ಧತೆಗೆ ಸಮಸ್ತ ಸದ್ಭಕ್ತರು ಪಾಲ್ಗೊಳ್ಳಬೇಕೆಂದು ಕರೆ ನೀಡಿದರು.

ಪ್ರಾಚಾರ್ಯ ಪ್ರೊ. ಸೂರ್ಯಕಾಂತ ಶೀಲವಂತ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿ ಭಕ್ತರಿಗೆ ಧರ್ಮ ಸಂಸ್ಕಾರಕ್ಕಾಗಿ ಸಂಸ್ಥಾನ ಗವಿಮಠದಲ್ಲಿ ಪವಿತ್ರ ಶ್ರಾವಣ ಮಾಸದಲ್ಲಿ ಶ್ರೀಗಳು ಈ ಪುಣ್ಯ ಕಾರ್ಯ ದಯಪಾಲಿಸುತ್ತಿರುವುದು ನಮ್ಮ ಭಾಗ್ಯ ಮುಂಬರುವ ವರ್ಷದಲ್ಲಿ ಬಸವಕಲ್ಯಾಣದಲ್ಲಿ ಶ್ರೀಮದ್ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್ ಸಂಕಲ್ಪವನ್ನು ಸದ್ಭಕ್ತರು ಮಾಡಿದ್ದೇವೆ. ಈ ಸಮಾರಂಭದ ಯಶಸ್ವಿಗಾಗಿ ಸಮಸ್ತ ಸದ್ಭಕ್ತರು ಕೈ ಜೋಡಿಸಬೇಕು ಎಂದು ಮನವಿ ಮಾಡಿದರು. ಸಂಸ್ಥಾನ ಗವಿಮಠ ಟ್ರಸ್ಟಿನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಉಪಾಧ್ಯಕ್ಷ ಚಂದ್ರಕಾಂತ ಪಾಟೀಲ್, ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ ಉಪಸ್ಥಿತರಿದ್ದರು. ಶರಣಬಸವ ಅಲಗುಡೆ ಪ್ರಾರ್ಥನೆ ಹಾಡಿದರು. ಮುಖ್ಯಗುರು ರಮೇಶ ರಾಜೋಳೆ ನಿರೂಪಿಸಿದರು.

ಷಣ್ಮುಕಪ್ಪ ಕಣಸೂರೆ, ಎ.ಜಿ ಪಾಟೀಲ್, ಲಕ್ಷ್ಮಣ ಸಿಂಗಾರೆ, ಬಸವಂತಪ್ಪ ಲವಾರೆ, ಪ್ರೊ ರುದ್ರೇಶ್ವರ ಗೋರ್ಟಾ, ಧ್ಯಾನೇಂದ ಶೀಲವಂತ, ಪ್ರೊ. ಶಾಂತಲಿಂಗ ಮಠಪತಿ, ಗೋವಿಂದ ರೆಡ್ಡಿ, ಮಲ್ಲಿಕಾರ್ಜುನ ಅಲಗುಡೆ, ಬಸವಣ್ಣಪ್ಪಾ ನೆಲೋಗಿ, ಶಿವಶಂಕರ್ ರಾಮಣ್ಣನವರ, ವೀರಶೆಟ್ಟಿ ಎಂ.ಪಾಟೀಲ್, ಲಿಂಗರಾಜ ಬಿರಾದಾರ, ವಿಮಲಾಬಾಯಿ ಬಿರಾದಾರ, ಸವಿತಾ ಸ್ವಾಮಿ, ಅಂಜನಾ ಮೂಲಗೆ, ಸರೋಜನಿ ಹಿರೇಮಠ ಮತ್ತಿತರಿದ್ದರು.

ಸಂಯುಕ್ತ ಕರ್ನಾಟಕ ಬುಧವಾರ, 07, ಆಗಸ್ಟ್, 2024 ಕಲಬುರಗಿ | KALABURAGI

Scanned with OKEN Scanner

ಸಡಗರದಿಂದ ಜರುಗಿದ ವಸ್ತ್ರ ಅಲಂಕಾರ ಮತ್ತು ಧರ್ಮಸಭೆ

ಶ್ರೀ ಶಿವಕುಮಾರ ಸ್ವಾಮಿಜಿಯವರ ಸೇವೆ ಅಮೋಘ : ತ್ರಿಪುರಾಂತ ಶ್ರೀಗಳು





ಹುಮ್ನಾಬಾದ್: ತಾಲೂಕಿನ ಕುಮಾರ ಚಿಂಚೋಳಿ ಗ್ರಾಮದಲ್ಲಿ ಶಿವಕುಮಾರ ಸ್ವಾಮಿಜಿಯವರ ವಸ್ತ್ರ ಅಲಂಕಾರ ಮತ್ತು ಧರ್ಮಸಭೆ ನೇತೃತ್ವವಹಿಸಿ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಹುಮ್ನಾಬಾದ್:

ತಾಲೂಕಿನ ಕುಮಾರ್ ಚಿಂಚೋಳಿ ಲಿಂಗೈಕ್ಯ ಜಯಪ್ಪ ಅಪ್ಪಾಜಿಯವರ ಕೃಪಾ ಆಶೀರ್ವಾದದಿಂದ ಧಾರ್ಮಿಕ ಸೇವೆ ಆರಂಭಿಸಿರುವ ಶಿವ ಕುಮಾರ ಸ್ವಾಮಿಜಿಯವರು ಜನರ ಸಮಸ್ಯೆಗಳನ್ನು ನಿವಾರಿಸಿ ಭಕ್ತಾಧಿಗಳ ಪ್ರೀತಿಗೆ ಪಾತ್ರರಾಗಿದ್ದಾರೆ ಎಂದು ಬಸವಕಲ್ಯಾಣ ತ್ರಿಪುರಾಂತ ಗವಿ ಮಠದ ಘನ [illegible] ರುದ್ರಮುನಿ ಶಿವಾಚಾರ್ಯರು ತಾಲೂಕಿನ ಕುಮಾರ ಚಿಂಚೋಳಿ ಗ್ರಾಮದಲ್ಲಿ ಶಿವಕುಮಾರ ಸ್ವಾಮಿಜಿಯವರ ವಸ್ತ್ರ ಅಲಂಕಾರ ಮತ್ತು ಧರ್ಮಸಭೆ ನೇತೃತ್ವವಹಿಸಿ ಮಾತನಾಡುತ್ತಾ ತಿಳಿಸಿದರು. ಶಾಸಕ ಸಿದ್ದು ಪಾಟೀಲ ಮಾತನಾಡಿ ಶಿವಕುಮಾರ್ ಸ್ವಾಮೀಜಿಯವರು ಜನರ ಕಷ್ಟಗಳನ್ನು ನಿವಾರಿಸುತ್ತಾ ಭಕ್ತರ ಹೃದಯ ಗೆಲ್ಲುತಿದ್ದಾರೆ. ಚುನಾವಣೆ ಸಂದರ್ಭದಲ್ಲಿ ನಾನು ಕೂಡಾ ಸ್ವಾಮಿಜಿಯವ ದರ್ಶನ ಪಡೆದಿದ್ದೆ ನನಗು ಕೂಡಾ ಸ್ವಾಮಿಜಿಯವರು ಆಶೀರ್ವದ ಮಾಡಿದ್ದಾರೆ ಎಂದರು. ಕುಮಾರ್ ಚಿಂಚೋಳಿ ಗ್ರಾಮದ ಅಭಿವೃದ್ಧಿಗೆ ಸಹಾಯ ಮಾಡುವುದಾಗಿ ತಿಳಿಸಿದರು ಶಿವಕುಮಾರ್ ಸ್ವಾಮೀಜಿಯವರ ಕೆಲಸ ಕಾರ್ಯಗಳಿಗೆ ನನ್ನ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು. ಕಾರ್ಯಕ್ರಮದ ಅಂಗವಾಗಿ ರಸಮಂಜರಿ ಕಾರ್ಯಕ್ರಮವನ್ನು ಗುಂಡಪ್ಪ ಡಿಗ್ಗಿ, ರೇವಣಸಿದ್ದ ಹಿರೇಮಠ್, ಜೂನಿಯರ್ ರಾಜ ಕುಮಾರ್ ನಡೆಸಿಕೊಟ್ಟರು. ಬಾಬುರಾವ ಸ್ವಾಮಿ, ಮಹಾನಂದ ಸ್ವಾಮಿ, ರುದ್ರಮಣಿ ಸ್ವಾಮಿಜಿ, ಯಲ್ಲಾಲಿಂಗ ಮಾರ ಗೊಂಡ, ಸಾಯಬ ಗೌಡ ಹಳ್ಳಿಖೇಡ ಬಿ, ಶಿವರಾಜ ಗೋರ್ಟಾ, ವಿವೇಕಾಂದ ಸ್ವಾಮಿ ಭಾಲ್ಕಿ, ವೈಜಿನಾಥ ಘನಚಕ್ರೆ, ಮಾಂತೇಶ ಘನಚಕ್ರೆ, ಶಿವಪುತ್ರ ಬೀದರ ಸಾಧನೆ ಮಾಡಿದ ಸಾಧಕರಿಗೆ ಶಿವಕುಮಾರ್ ಸ್ವಾಮೀಜಿ ಅವರು ಸನ್ಮಾನ ಮಾಡಿದರು.

ಆಕಾಶವಾಣಿ ಕಲಾವಿದ ನವಲಿಂಗ ಪಾಟೀಲ್ ಕಾರ್ಯಕ್ರಮ ನಿರೂಪಿಸಿ ಕೊನೆಯಲ್ಲಿ ವಂದಿಸಿದರು.

"ಪಬ್ಲಿಕ್" ಕನ್ನಡ ದಿನ ಪತ್ರಿಕೆ | **ದಿ: 17-11-2023**

2024 ಜನತಂತ್ರದ ಹಬ್ಬ



ಬಸವಕಲ್ಯಾಣದ ತ್ರಿಪುರಾಂತ ಮತಗಟ್ಟೆಯಲ್ಲಿ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಅವರ ತಾಯಿ ನಿರ್ಮಲಾ ಮತ ಚಲಾಯಿಸಿ ಬೆರಳು ತೋರಿಸಿದರು. ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಇದ್ದರು



ಬಸವಕಲ್ಯಾಣ: ಉತ್ತರ ಕನ್ನಡ ಜಿಲ್ಲೆಯ ಶಿರಸಿ ನಗರದ ರಂಗಧಾಮ ಸಭಾಂಗಣದಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ 12ನೇ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಸರ್ವಾಧ್ಯಕ್ಷ ಗವಿಮಠದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ್ನ ಚುಟುಕು ಚೇತನ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಉದಯವಾಣಿ ಕಲಬುರಗಿ
ಮಂಗಳವಾರ, ಮೇ 28, 2024

Scanned with OKEN Scanner

ಧರ್ಮ ಬೋಧನೆಯೊಂದಿಗೆ ಸಾಹಿತ್ಯದಲ್ಲಿ ಸಾಧನೆ

ಗವಿ ಮಠದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಅಭಿನಂದನಾ ಸಮಾರಂಭ

ನಿಕ ಸುದ್ದಿಲೋಕ ಬಸವಕಲ್ಯಾಣ

ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು ಉತ್ತರ ಕನ್ನಡ ಜಿಲ್ಲೆ ಶಿರಸಿಯಲ್ಲಿ ಏರ್ಪಡಿಸಿದ್ದ 12ನೇ ರಾಜ್ಯ ಮಟ್ಟದ ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರು, ಸಾಹಿತ್ಯ ಚೇತನ ಪ್ರಶಸ್ತಿ ಪುರಸ್ಕೃತ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಭಾನುವಾರ ಗವಿ ಮಠದಲ್ಲಿ ಅಭಿನಂದನಾ ಸಮಾರಂಭ ಜರುಗಿತು.

ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್, ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಮತ್ತು ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ಮಹಿಳಾ ಘಟಕ ಹಾಗೂ ಸಮಸ್ತ ಸದ್ಭಕ್ತರ ಸಹಯೋಗದಲ್ಲಿ ಈ ಅಭಿನಂದನಾ ಸಮಾರಂಭ ಆಯೋಜಿಸಲಾಗಿತ್ತು. ಶ್ರೀಮಠದ ಸಮಸ್ತ ಸದ್ಭಕ್ತರ ಸಮ್ಮುಖದಲ್ಲಿ ಡಾ. ಅಭಿನವ ಘನಲಿಗ ರುದ್ರಮುನಿ ಶಿವಾಚಾರ್ಯರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ಕಲಬುರಗಿಯ ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ.ವೆಂಕಣ್ಣ ದೊಣ್ಣೆಗೌಡ ಮಾತನಾಡಿ, ಒಬ್ಬ ಮನುಷ್ಯ ತನ್ನ ಜ್ಞಾನವನ್ನು ಅಕ್ಷರಗಳಲ್ಲಿ ನೆರೆ ಹಿಡಿದದ್ದೇ ಸಾಹಿತ್ಯ. ಗವಿಮಠದ ಪೂಜ್ಯ ಶ್ರೀಗಳು ಧರ್ಮ ಬೋಧನೆ ಮಾಡುತ್ತ ಕನ್ನಡದಲ್ಲಿ ಚುಟುಕು ಸಾಹಿತ್ಯ ರಚನೆ ಮಾಡುವುದರ ಮೂಲಕ ಸಾಹಿತ್ಯಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಈ ಸಾಧನೆಯನ್ನು ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು ಗುರುತಿಸಿ ಶ್ರೀಗಳನ್ನು ಪ್ರಶಸ್ತಿ ನೀಡಿದೆ ಎಂದರು.



ಬಸವಕಲ್ಯಾಣದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಭಾನುವಾರ ಗವಿ ಮಠದಲ್ಲಿ ಶ್ರೀಮಠದ ಸದ್ಭಕ್ತರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.

ಸಮಸ್ತ ಭಕ್ತರಿಗೆ ದೊರೆತ ಗೌರವ

ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಜರುಗಿದ 12ನೇ ರಾಜ್ಯ ಮಟ್ಟದ ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ನನಗೆ ಸಾಹಿತ್ಯ ಚೇತನ ಪ್ರಶಸ್ತಿ ನೀಡಿ ಗೌರವಿಸಿದ್ದು ನಮ್ಮ ಸಮಸ್ತ ಭಕ್ತರಿಗೆ ದೊರೆತ ಪ್ರಶಸ್ತಿ. ಇದು ಜಗದ್ಗುರು ಘನಲಿಂಗರ ಕೃಪೆ. ಜಗದ್ಗುರು ಘನಲಿಂಗರು 12 ನೇ ಶತಮಾನದಲ್ಲಿ ಶಿಮಠಣರ ಗುರುಗಳಾಗಿದ್ದವರು. ಈ ಗವಿಮಠದ ಕೀರ್ತಿ ಹೆಚ್ಚಿಸೋದು ನನ್ನ ಕರ್ತವ್ಯ. ನಮ್ಮ ಭಕ್ತರೇ ನನಗೆ ಪ್ರೇರಣಾ ಶಕ್ತಿ ಎಂದು ಶ್ರೀಗಳು ಹೇಳಿದರು.

ಶಿಕ್ಷಕ ಮಲ್ಲಿಕಾರ್ಜುನ ಆಲಗೂಡೆ ಮಾತನಾಡಿ, ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವಂತೆ ಅಸಾಮಾನ್ಯ ಗುರುಗಳು. ಅಪಾರ ತಪಸ್ವಿ ಹೊಂದಿದವರು. ಕರುಣಾ ಮೂರ್ತಿಗಳು. ಕ್ರಿಯಾಶೀಲರು. ಸದ್ಭಕ್ತರ ಸೇವೆ ಸಹಕಾರದಿಂದ ಘಟವಾಗಿದ್ದ ಈ ಪವಿತ್ರ ಸ್ಥಳವನ್ನು ಅದ್ಭುತ ಮಠವಾಗಿ ನಿರ್ಮಿಸಿದ್ದಾರೆ ಎಂದು ಹೇಳಿದರು.

ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಅಧ್ಯಕ್ಷ ಡಾ.ಬಸವರಾಜ ಸ್ವಾಮಿ ಮಾತನಾಡಿ, ಗವಿ ಮಠದ ಶ್ರೀಗಳು ನಮ್ಮೆಲ್ಲರಿಗೆ ಗುರುಗಳಾಗಿ ದೊರೆತದ್ದು ನಮ್ಮೆಲ್ಲರ ಭಾಗ್ಯ. ನಮ್ಮ ಗುರುಗಳು ನಮಗೆ ಉಪದೇಶ ಮಾಡುವುದರ ಮೂಲಕ ಧರ್ಮಮಾರ್ಗ ಬೋಧಿಸುತ್ತಿದ್ದಾರೆ. ಅದರ ಜೊತೆಗೆ ವಿಶೇಷವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದು ಸಾಹಿತ್ಯ ಚೇತನ ಪ್ರಶಸ್ತಿ ಪುರಸ್ಕೃತರಾಗಿದ್ದ ಹಿನ್ನೆಲೆಯಲ್ಲಿ ಈ ಅಭಿನಂದಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ ಮಾತನಾಡಿದರು. ವೇದಿಕೆಯಲ್ಲಿ ಶರಣಪ್ಪ ಬಿರಾದಾರ, ಕಲ್ಪನಾ ಶೀಲವಂತ, ಬಸವಂತಪ್ಪ ಲವಾರೆ ಉಪಸ್ಥಿತರಿದ್ದರು. ವೀರಶೆಟ್ಟಿ ಪಾಟೀಲ ಕನವ ವಾಚನ ಮಾಡಿದರು.

ಈ ಸಂದರ್ಭದಲ್ಲಿ ಜಗನ್ನಾಥ ಹೆಬ್ಬಾಳೆ, ಶಂಭುಲಿಂಗ ಕಾಮಣ್ಣ ಸಿದ್ದು ಉಳ್ಳೆ, ಶಿವಲಿಂಗ ಸ್ವಾಮಿ, ಪ್ರೊ.ಸೂರ್ಯಕಾಂತ ಶೀಲವಂತ, ದಯಾನಂದ ಶೀಲವಂತ, ಎ.ಜಿ.ಪಾಟೀಲ, ಲೋಕೇಶ ಸ್ವಾಮಿ, ಕಲ್ಪನಾ ಶೀಲವಂತ, ಸದಾನಂದ ಕಣಜೆ, ಬಾಬುರಾವ ಚಳಕಾಪೂರೆ, ಶರಣು ಸ್ವಾಮಿ, ಸಂಗೀತಾ ಸುನೀಲ ಪಾಟೀಲ, ಡಾ. ಚಿತ್ರಶೇಖರ ಚಿರಳ್ಳಿ, ಸವಿತಾ ರಮೇಶ ಸ್ವಾಮಿ, ಶಿಕ್ಷಕ ಸೂರ್ಯಕಾಂತ ಪಾಟೀಲ, ಪ್ರಾಚಾರ್ಯರಾದ ಶರಣಬಸಪ್ಪ ದಂಡೆ ಹಾಗೂ ಸಂಜಯ ರೋಹಿಲೆ ಮತ್ತು ಮಹಾನಂದಾ ಪತರವಂತ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಕಲಾವತಿ ಸ್ವಾಮಿ ಹಾಗೂ ನಿರ್ಮಲಾ ಶಿಲವಂತ ಪ್ರಾರ್ಥನೆ ಗೀತೆ ಹಾಡಿದರೆ, ಯುವ ಕಲಾವಿದ ವಿವೇಕ ವಸ್ತದ ಮತ್ತು ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ಸಂಗೀತ ಸೇವೆ ಸಲ್ಲಿಸಿದರು. ಶಿಕ್ಷಕ ರಮೇಶ ರಾಜೋಳೆ ನಿರೂಪಿಸಿದರು. ರಾಕೇಶ ವಿ. ಪುರವಂತ ವಂದಿಸಿದರು.

ನಮ್ಮ ಬೀದರ್ ಸೋಮವಾರ,29 ಜುಲೈ 2024 ವಿಜಯ ಕರ್ನಾಟಕ

ತ್ರಿಪುರಾಂತ ಗವಿಮಠ ಶಿವಾಚಾರ್ಯರಿಗೆ ಸನ್ಮಾನ

ರಾಜ್ಯಮಟ್ಟದ ಚುಟುಕು ಸಾಹಿತ್ಯ ಸಮ್ಮೇಳನದ ಅಧ್ಯಕರಾಗಿದ್ದ ಶ್ರೀಗಳು

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ನಗರದ ತ್ರಿಪುರಾಂತ ಘನಲಿಂಗ ರುದ್ರಮುನಿ ಗವಿಮಠದಲ್ಲಿ ಭಾನುವಾರ ಶಿರಸಿಯಲ್ಲಿನ ರಾಜ್ಯಮಟ್ಟದ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನ ವಹಿಸಿದ್ದ ಹಾಗೂ ಚುಟುಕು ಪರಿಷತ್ತಿನ ಸಾಹಿತ್ಯ ಸಿಂಚನ ಪ್ರಶಸ್ತಿ ಪಡೆದಿರುವ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಅಭಿನಂದನಾ ಸಮಾರಂಭ ಜರುಗಿತು.

ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ, ಗವಿಮಠ ಟ್ರಸ್ಟ್ ಹಾಗೂ ಭಕ್ತರ ಪರವಾಗಿ ಶ್ರೀಗಳಿಗೆ ಸನ್ಮಾನಪತ್ರ, ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, 'ಇಲ್ಲಿ ಘನಲಿಂಗ ರುದ್ರಮುನಿಯವರ ಕರ್ತೃ ಗದ್ದುಗೆ ಇದ್ದು ಅವರು 12ನೇ ಶತಮಾನದ ವಚನಕಾರ ಆಗಿದ್ದರು. ಅನೇಕ ಶರಣರಿಗೆ ದೀಕ್ಷೆ ನೀಡಿದ್ದರು. ನನ್ನಿಂದ ವಿವಿಧ ಕಾರ್ಯಗಳು ನಡೆಯುವಂತಾಗಲು ಅವರೇ ನನಗೆ ಪ್ರೇರಣೆ' ಎಂದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಭಾನುವಾರ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಸನ್ಮಾನಪತ್ರ ನೀಡಿ ಗೌರವಿಸಲಾಯಿತು

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಶಾಂತಲಿಂಗ ಮಠಪತಿ ಮಾತನಾಡಿ, 'ಶಿವಾಚಾರ್ಯರು ಕೈಗೊಂಡಿರುವ ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯಕ ಕಾರ್ಯ ಅಮೋಘವಾಗಿದೆ' ಎಂದರು.

ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಬಸವರಾಜ ಸ್ವಾಮಿ, ನಿವೃತ್ತ ಪ್ರಾಧ್ಯಾಪಕ ವೆಂಕಣ್ಣ ದೊಣ್ಣೆಗೌಡ, ಮಲ್ಲಿಕಾರ್ಜುನ ಆಲಗೂಡೆ, ರಮೇಶ ರಾಜೋಳೆ, ರಾಕೇಶ ಪುರವಂತ ಮಾತನಾಡಿದರು.

ಸದ್ಭೋಧನಾ ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ ಸನ್ಮಾನಪತ್ರ ಓದಿದರು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ಪ್ರೊ.ಸೂರ್ಯಕಾಂತ ಶೀಲವಂತ, ಸದಾನಂದ ಕಣಜೆ, ದಯಾನಂದ ಶೀಲವಂತ, ರೇವಣಯ್ಯ ಸ್ವಾಮಿ, ಬಾಬು ಸ್ವಾಮಿ, ಶಿವಲೀಲಾ ಮಠಪತಿ, ಸವಿತಾ ಸ್ವಾಮಿ, ಸಂಗೀತಾ ಸುನಿಲ ಪಾಟೀಲ, ಮಹಾನಂದಾ ರಾಕೇಶ ಪುರವಂತ, ಸರೋಜನಿ ಹಿರೇಮಠ, ಕಲಾವತಿ ಸ್ವಾಮಿ ಉಪಸ್ಥಿತರಿದ್ದರು.

ಪ್ರೊ.ರುದ್ರೇಶ್ವರ ಗೋರ್ಟಾ, ವಿವೇಕ ವಸ್ತದ ಸಂಗೀತ ಪ್ರಸ್ತುತಪಡಿಸಿದರು.

ಪ್ರಜಾವಾಣಿ ಸೋಮವಾರ • ಜುಲೈ 29, 2024

Scanned with OKEN Scanner

ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ-ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆ

ವಚನ ಸಾಹಿತ್ಯ ಮೋಕ್ಷಕ್ಕೆ ಮಾರ್ಗ

ವಿಕ ಸುದ್ದಿಲೋಕ ಬಸವಕಲ್ಯಾಣ

ಜಗದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ಶಿವಶರಣರು ರಚಿಸಿದ ವಚನ ಸಾಹಿತ್ಯ ಮೋಕ್ಷ ಮಾರ್ಗತೋರುವ ಮಹತ್ವದ ಸಾಹಿತ್ಯವಾಗಿವೆ ಎಂದು ಹಿರೇನಾಗಾಂವದ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಹೇಳಿದರು.

ಇಲ್ಲಿಯ ಗವಿ ಮಠದಲ್ಲಿ ಶ್ರಾವಣ ಸೋಮವಾರದ ನಿಮಿತ್ತ ಸಂಜೆ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಏರ್ಪಡಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಎರಡು ಕಣ್ಣುಗಳು ಇದ್ದ ಹಾಗೆ. ಆದರೆ ದೃಷ್ಟಿ ಒಂದೇ ಎಂದು ತಿಳಿಸಿದರು.

ನೇತೃತ್ವವಹಿಸಿ ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಎರಡನ್ನೂ ಸರಿಯಾಗಿ ಅರಿತು ಮುನ್ನಡೆದರೆ ಮನುಷ್ಯನ ಜನ್ಮ ಸಾರ್ಥಕವಾಗುತ್ತದೆ. ಹಾಗೆಯೆ ಮುಂಬರುವ ವರ್ಷದಲ್ಲಿ ಶ್ರೀಮದ್ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್ ಸಮಾರಂಭದ ಸಿದ್ಧತೆಗೆ ಸಮಸ್ತ ಸದ್ಭಕ್ತರು ಪಾಲ್ಗೊಳ್ಳಬೇಕು ಎಂದು ಹೇಳಿದರು.



ಬಸವಕಲ್ಯಾಣದ ಗವಿ ಮಠದಲ್ಲಿ ನಡೆದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆ ಸಮಾರಂಭವನ್ನು ಹಿರೇನಾಗಾಂವದ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಉದ್ಘಾಟಿಸಿದರು.

ಪಾಲ್ಗೊಂಡಿದ್ದ ಗಣ್ಯರು ಈ ಕಾರ್ಯಕ್ರಮದಲ್ಲಿ ಷಣ್ಮುಕಪ್ಪ ಕಣಸೂರೆ, ಎ.ಜಿ ಪಾಟೀಲ್, ಲಕ್ಷ್ಮಣ ಸಿಂಗಾರೆ, ಬಸವಂತಪ್ಪ ಲವಾರೆ, ಪ್ರೊ.ರುದ್ರೇಶ್ವರ ಗೋರ್ಟಾ, ದಯಾನಂದ ಶೀಲವಂತ, ಪ್ರೊ.ಶಾಂತಲಿಂಗ ಮಠಪತಿ, ಗೋವಿಂದ ರೆಡ್ಡಿ, ಮಲ್ಲಿಕಾರ್ಜುನ ಆಲಗುಡೆ, ಬಸವಣ್ಣಪ್ಪಾ ನೆಲೋಗಿ, ಶಿವಶಂಕರ್ ರಾಮಣ್ಣನವರ, ವೀರಶೆಟ್ಟಿ ಎಂ.ಪಾಟೀಲ, ಲಿಂಗರಾಜ ಬಿರಾದಾರ, ವಿಮಲಾಬಾಯಿ ಬಿರಾದಾರ, ಸವಿತಾ ಸ್ವಾಮಿ, ಅಂಜನಾ ಮೂಲಗೆ, ಸರೋಜನಿ ಹಿರೇಮಠ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ ಭಕ್ತಾದಿಗಳು ಪಾಲ್ಗೊಂಡಿದ್ದರು.

ಪ್ರಾಚಾರ್ಯ ಪ್ರೊ. ಸೂರ್ಯಕಾಂತ ಶೀಲವಂತ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿ, ಭಕ್ತರಿಗೆ ಧರ್ಮ ಸಂಸ್ಕಾರಕ್ಕಾಗಿ ಸಂಸ್ಥಾನ ಗವಿಮಠದಲ್ಲಿ ಪವಿತ್ರ ಶ್ರಾವಣ ಮಾಸದಲ್ಲಿ ಪೂಜ್ಯರು ಈ ಪುಣ್ಯ ಕಾರ್ಯದಯಪಾಲಿಸುತ್ತಿರುವುದು ನಮ್ಮ ಭಾಗ್ಯ. ಮುಂಬರುವ ವರ್ಷದಲ್ಲಿ ಬಸವಕಲ್ಯಾಣದಲ್ಲಿ ಶ್ರೀಮದ್ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್ ಸಂಕಲ್ಪವನ್ನು ಸದ್ಭಕ್ತರು ಮಾಡಿದ್ದೇವೆ. ಈ ಸಮಾರಂಭದ ಯಶಸ್ವಿಗಾಗಿ ಸಮಸ್ತ ಸದ್ಭಕ್ತರು ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ಸಂಸ್ಥಾನ ಗವಿಮಠ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಸಂಸ್ಥೆಯ ಉಪಾಧ್ಯಕ್ಷ ಚಂದ್ರಕಾಂತ ಪಾಟೀಲ, ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ ಉಪಸ್ಥಿತರಿದ್ದರು. ಕು.ಶರಣಬಸವ ಆಲಗುಡೆ ಪ್ರಾರ್ಥನೆ ಹಾಡಿದರು. ಮುಖ್ಯ ಗುರು ರಮೇಶ ರಾಜೋಳೆ ನಿರೂಪಿಸಿದರು.

ನಮ್ಮ ಬೀದರ್ ಶುಕ್ರವಾರ,9 ಆಗಸ್ಟ್ 2024 ವಿಜಯ ಕರ್ನಾಟಕ

'ಸನಾತನ ಪರಂಪರೆಯಲ್ಲಿ ಗುರುವಿಗೆ ಶ್ರೇಷ್ಠ ಸ್ಥಾನಮಾನವಿದೆ'

ಸಂ.ಕ.ಸಮಾಚಾರ ಬಸವಕಲ್ಯಾಣ: ಭಾರತೀಯ ಸನಾತನ ಪರಂಪರೆಯಲ್ಲಿ ಗುರುವಿಗೆ ಅತ್ಯಂತ ಶ್ರೇಷ್ಠ ಸ್ಥಾನಮಾನವಿದೆ. ಮನುಷ್ಯ ಜೀವನದಲ್ಲಿ ಧರ್ಮ ದೇವರು ಮತ್ತು ಗುರುವನ್ನು ಎಂದಿಗೂ ಮರೆಯಬಾರದು ಎಂದು ಇಲ್ಲಿಯ ಗವಿ ಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಗುರು ಪೂರ್ಣಿಮೆ ನಿಮಿತ್ಯ ಇಲ್ಲಿಯ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿ ಮಠದಲ್ಲಿ ಭಾನುವಾರ ಗವಿ ಮಠ ಟ್ರಸ್ಟ್ ಹಾಗೂ ಸಮಸ್ತ ಸದ್ಭಕ್ತರು ಭಾನುವಾರ ಏರ್ಪಡಿಸಿದ ಗುರು ಪೂರ್ಣಿಮೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು. ಗುರುಗಳು ತಮ್ಮ ಭಕ್ತರಿಗೆ ಆಧ್ಯಾತ್ಮದ ಭೋದಾಮೃತವನ್ನು ನೀಡುತ್ತಿರುತ್ತಾರೆ. ಗುರುಗಳ ಋಣವನ್ನು ತೀರಿಸುವುದು ಅಸಾಧ್ಯ. ಆದರೂ ಭಕ್ತರು ಆ ಗುರುಗಳ ಬಗ್ಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವುದೇ ಗುರು ಪೂರ್ಣಿಮೆ ಆಚರಿಸುವುದರ ಒಂದಿನ ಉದ್ದೇಶವಾಗಿದೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎನ್ನುವ ಹಾಗೆ ಭಕ್ತರು ಗುರುವಿನ ನಿಜವಾದ ಶಿಷ್ಯನಾದರೆ ಮಾತ್ರ ಮೋಕ್ಷವನ್ನು ಪಡೆಯಬಹುದು. ಒಬ್ಬ ವ್ಯಕ್ತಿಯು ಅನೇಕ ಶಾಸ್ತ್ರಗಳನ್ನು ಪುಸ್ತಕಗಳನ್ನು ಓದುತ್ತಿದ್ದರು ಸಹ ಆ ವ್ಯಕ್ತಿಯು ತನ್ನ ಗುರುಗಳಿಗೆ ತನ್ನನ್ನು ತಾನೇ ಒಪ್ಪಿಸದಿದ್ದರೆ ಅದು ಯಾವುದೇ ಪ್ರಯೋಜನವಿಲ್ಲ. ಒಬ್ಬ ವ್ಯಕ್ತಿಯು ಮೋಕ್ಷ, ಸುಖ, ಶಾಂತಿ, ಸಮೃದ್ಧಿಯನ್ನು ಪಡೆಯಲು ಗುರು ಭಕ್ತಿಯು ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಕಸಾಪ ತಾಲ್ಲೂಕು ಅಧ್ಯಕ್ಷ ಪ್ರೊ ಶಾಂತಲಿಂಗ, ಡಾ. ಶಿವಲೀಲಾ ಮಠಪತಿ ದಂಪತಿ ಗುರುಗಳ ಪಾದಪೂಜೆ ನೆರವೇರಿಸಿದರು. ವಿಧಿವತ್ತಾಗಿ ವೀರಯ್ಯ ಸ್ವಾಮಿ ಅವರು ವೈದಿಕ ಸೇವೆ ಸಲ್ಲಿಸಿದರು. ವಿವೇಕ ವಸ್ತ್ರದ ಸಂಗೀತ ಸೇವೆ ಸಲ್ಲಿಸಿದರು. ಪ್ರಾಚಾರ್ಯ ಎ.ಜಿ ಪಾಟೀಲ್, ಬಸವಂತಪ್ಪ ಲವಾರೆ, ಬಾಬುರಾವ್ ಚಳಕಾಪೂರೆ, ಪ್ರೊ ರುದ್ರೇಶ್ವರ ಗೋರ್ಟಾ, ಮಲ್ಲಿಕಾರ್ಜುನ ಆಲಗುಡೆ, ಶರಣಬಸಪ್ಪ ಪವಾಡಶೆಟ್ಟಿ, ರಾಕೇಶ ಪುರವಂತ, ರೇವಣಸಿದ್ಧಯ್ಯ ವಸ್ತ್ರದ, ಶಾಂತವೀರ ಪೂಜಾರಿ, ಸದಾನಂದ ಕಣಜೆ, ಶಿವಕುಮಾರ್ ಚಿಂಚೋಳಿ, ಶಿವಕುಮಾರ ಮುನ್ನೊಳಿ, ರಾಜಕುಮಾರ ಕಾಂಬಳೆ, ವಿನೋದ್ ಲಾಕೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಬಸವಕಲ್ಯಾಣ: ಗುರು ಪೂರ್ಣಿಮೆಯ ನಿಮಿತ್ಯ ಭಾನುವಾರ ಗವಿ ಮಠದಲ್ಲಿ ಹಮ್ಮಿಕೊಂಡ ಗುರು ಪೂರ್ಣಿಮೆಯ ಕಾರ್ಯಕ್ರಮದಲ್ಲಿ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಾದಪೂಜೆ ನೆರವೇರಿತು.

ಸಂಯುಕ್ತ ಕರ್ನಾಟಕ ಸೋಮವಾರ, 22, ಜುಲೈ, 2024 ಕಲಬುರಗಿ | KALABURAGI

Scanned with OKEN Scanner

ಪಂಡಿತ ರಾಜವೀರಜಿ ಶಾಸ್ತ್ರಿ ಆಶಯ | ಹುತಾತ್ಮ ಧರ್ಮಪ್ರಕಾಶಜಿ ಸ್ಮೃತಿ ಕಾರ್ಯಕ್ರಮ

ಎಲ್ಲರಲ್ಲಿರಲಿ ರಾಷ್ಟ್ರ ಧರ್ಮ ಅಭಿಮಾನ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಧರ್ಮಕ್ಕಿಂತ ರಾಷ್ಟ್ರ ಧರ್ಮ ದೊಡ್ಡದು. ಮತ, ಸಂಪ್ರದಾಯ, ಆಚರಣೆ ಮನೆಗೆ ಸೀಮಿತವಾಗಿರಬೇಕು. ಮನೆಯಿಂದ ಹೊರಬಂದರೆ ಒಂದೇ ಧರ್ಮ. ಅದುವೇ ರಾಷ್ಟ್ರಧರ್ಮ. ನಾವೆಲ್ಲರೂ ಒಂದು ಎಂಬ ಭಾವ ಎಲ್ಲರಲ್ಲಿ ಬೆಳೆಯಬೇಕು ಎಂದು ಸೊಲ್ಲಾಪುರದ ಪಂಡಿತ ರಾಜವೀರಜಿ ಶಾಸ್ತ್ರಿ ಹೇಳಿದರು.

ನಗರದ ಆರ್ಯ ಸಮಾಜ ಮಂದಿರ ಪರಿಸರದಲ್ಲಿ ಶುಕ್ರವಾರ ಆಯೋಜಿಸಿದ್ದ ಹುತಾತ್ಮ ಧರ್ಮಪ್ರಕಾಶಜಿ ಅವರ 86ನೇ ಸ್ಮೃತಿ ಹಾಗೂ ದೇಶ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣೆ ಮಾಡಿದ ಹುತಾತ್ಮರಿಗೆ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮುಖ್ಯ ಉಪನ್ಯಾಸ ನೀಡಿದ ಅವರು, ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾದ ಧರ್ಮಪ್ರಕಾಶಜಿ ಅವರ ದೇಶ ಭಕ್ತಿ, ತ್ಯಾಗ-ಬಲಿದಾನ ಸ್ಮರಿಸಬೇಕು. ದೇಶದ ಭವ್ಯ ಸಂಸ್ಕೃತಿ, ಸ್ವಾತಂತ್ರ್ಯ ಸಂರಕ್ಷಣೆಗೆ ಪ್ರತಿಯೊಬ್ಬರೂ ಸಂಕಲ್ಪ ಮಾಡಬೇಕಿದೆ. ದೇಶದ ಭವಿಷ್ಯದ ದೃಷ್ಟಿಯಿಂದ ಇದು ಅವಶ್ಯಕ ಎಂದು ಪ್ರತಿಪಾದಿಸಿದರು.

ಹೈದರಾಬಾದ್‌ನ ಪಂಡಿತ ನರೇಂದ್ರಜಿ ಆಚಾರ್ಯ ವಿಶೇಷ ಉಪನ್ಯಾಸ ನೀಡಿ, ಜೀವನದಲ್ಲಿ ದುಃಖ, ಸಮಸ್ಯೆಗಳ ಜತೆ ಸಮಾಧಾನವೂ ಇದೆ. ಇದರ ಮಾರ್ಗ ಅರಿಯಬೇಕು. ರಾಷ್ಟ್ರಕ್ಕಾಗಿ ಪ್ರತಿಯೊಬ್ಬರು ತಮ್ಮ ಕೊಡುಗೆ ನೀಡುವುದನ್ನು ಮರೆಯಬಾರದು. ಮನೆಯಲ್ಲಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವ ಜತೆಗೆ ದೇಶ ಭಕ್ತರ, ವೀರರ ಚರಿತ್ರೆ ತಿಳಿಸಿಕೊಡುವ ಮೂಲಕ ಸ್ಫೂರ್ತಿ ತುಂಬಬೇಕು. ಜ್ಞಾನ ವೃದ್ಧಿಯಾಗಿ ಆರ್ಯ ಸಮಾಜಕ್ಕೆ ಬರಬೇಕು ಎಂದು ಹೇಳಿದರು.

ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ ಮಾತನಾಡಿ, ಹೈದರಾಬಾದ್ (ಕಲ್ಯಾಣ) ಕರ್ನಾಟಕ ವಿಮೋಚನಾ ಚಳವಳಿಯಲ್ಲಿ ಆರ್ಯ ಸಮಾಜದ ಪಾತ್ರ ಮಹತ್ವದ್ದಾಗಿತ್ತು. ಇಂದು ಕಲುಷಿತಗೊಳ್ಳುತ್ತಿರುವ ವಾತಾವರಣದಲ್ಲಿ ಪರಿವರ್ತನೆ ತರಬೇಕಾದರೆ ಯುವಕರಲ್ಲಿ ಸಂಸ್ಕಾರ ಮತ್ತು ರಾಷ್ಟ್ರಭಕ್ತಿ ಜಾಗೃತಗೊಳಿಸುವ ಅಗತ್ಯವಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಬೆಂಗಳೂರಿನ ಕರ್ನಾಟಕ ಆರ್ಯ ಪ್ರತಿನಿಧಿ ಸಭಾ ಪ್ರಧಾನ ಶ್ರೀ ಋಷಿಮಿತ್ರ ಮಾತನಾಡಿ, ಮಕ್ಕಳಲ್ಲಿ ಉತ್ತಮ ಸಂಸ್ಕೃತಿ ಮತ್ತು ಸಂಸ್ಕಾರ ಬೆಳೆಸುವ ನಿಟ್ಟಿನಲ್ಲಿ ಆರ್ಯ ಸಮಾಜದಿಂದ ಗುರುಕುಲ ಆರಂಭಿಸುವ ಯೋಜನೆ ಇದೆ ಎಂದು ತಿಳಿಸಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಶುಕ್ರವಾರ ಆಯೋಜಿಸಿದ್ದ ಹುತಾತ್ಮ ಧರ್ಮಪ್ರಕಾಶಜಿ 86ನೇ ಸ್ಮೃತಿ ಕಾರ್ಯಕ್ರಮದಲ್ಲಿ ಪಂಡಿತ ರಾಜವೀರಜಿ ಶಾಸ್ತ್ರಿ ಮಾತನಾಡಿದರು. ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಶ್ರೀ ವಿಜ್ಞಾನಮುನಿ, ಶ್ರೀ ಋಷಿಮಿತ್ರ, ಪಂಡಿತ ನರೇಂದ್ರಜಿ ಆಚಾರ್ಯ, ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ, ಸುಭಾಷ ಅಷ್ಟಿಕರ್, ನಾರಾಯಣರಾವ ಚಿದ್ರಿ ಇದ್ದರು.

ಆರ್ಯ ಪ್ರತಿನಿಧಿ ಸಭಾ ನಿಕಟಪೂರ್ವ ಅಧ್ಯಕ್ಷ ಸುಭಾಷ ಅಷ್ಟಿಕರ್ ಮಾತನಾಡಿ, ವ್ಯಕ್ತಿ ನಿರ್ಮಾಣದ ಕಾರ್ಯ ನಡೆಯಬೇಕಿದೆ. ಆರ್ಯ ಸಮಾಜದ ಆಶಯವೂ ಇದೇ ಆಗಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಆಶೀರ್ವಚನ ನೀಡಿದರು.

ಉಮರ್ಗಾದ ಶ್ರೀ ವಿಜ್ಞಾನ ಮುನಿ ಸಮ್ಮುಖ ವಹಿಸಿದ್ದರು. ಪ್ರಮುಖರಾದ ಬಸವರಾಜ ಆರ್ಯ, ನಾರಾಯಣರಾವ ಚಿದ್ರಿ, ಮಲ್ಲಯ್ಯ ಸ್ವಾಮಿ ಹಿರೇಮಠ, ವಿಠ್ಠಲರಾವ ಸೂರ್ಯವಂಶಿ, ಸತೀಶರಾವ ಲಾಡ, ಮಾಣಿಕರಾವ ಲಾಡ, ನಾರಾಯಣರಾವ ಬುನ್ನಾ, ಭಾನುಪ್ರಸಾದ ಪಾಂಡೆ ಇತರರಿದ್ದರು.

ಬಸವಕಲ್ಯಾಣ ಆರ್ಯ ಸಮಾಜದ ಪ್ರಧಾನ ಶಿವಾಜಿರಾವ ಜಗತಾಪ ಪ್ರಾಸ್ತಾವಿಕ ಮಾತನಾಡಿದರು. ಪುರೋಹಿತ ಸುರೇಂದ್ರಗೀರ ಗೋಸ್ವಾಮಿ ಸ್ವಾಗತಿಸಿದರು. ಮಂತ್ರಿ ಸಂಜುಕುಮಾರ ಜಾಧವ್ ನಿರೂಪಣೆ ಮಾಡಿದರು. ಉದಗೀರ್‌ನ ಪ್ರತಾಪಸಿಂಹಜಿ ಚವ್ಹಾಣ್ ಭಜನೆ ನಡೆಸಿಕೊಟ್ಟರು. ಬೆಳಗ್ಗೆ ಈಶ್ವರ ನಗರದ ಧರ್ಮ ಪ್ರಕಾಶ ಪ್ರಾಥಮಿಕ ಶಾಲೆಯಲ್ಲಿ ಅಗ್ನಿಹೋತ್ರ (ಯಜ್ಞ), ನಂತರ ಧರ್ಮಪ್ರಕಾಶ ಗಲ್ಲಿಯಿಂದ ಮುಖ್ಯ ರಸ್ತೆ ಮಾರ್ಗವಾಗಿ ಆರ್ಯ ಸಮಾಜ ಮಂದಿರವರೆಗೆ ಭಜನೆ, ಜೈಘೋಷಗಳೊಂದಿಗೆ ನಗರ ಕೀರ್ತನೆ ಜರುಗಿತು.

> ಕಲ್ಯಾಣ ಕರ್ನಾಟಕ ವಿಮೋಚನಾ ಚಳವಳಿಯಲ್ಲಿ ಆರ್ಯ ಸಮಾಜದ ಕೊಡುಗೆ ದೊಡ್ಡದು. ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನ ಮಾಡಿದ ದೇಶಭಕ್ತರ ಜೀವನ ಚರಿತ್ರೆಯನ್ನು ಮಕ್ಕಳಿಗೆ ತಿಳಿಸಿಕೊಡುವ ಕೆಲಸ ಆಗಬೇಕು. ವೈಚಾರಿಕತೆ ನೆಪದಲ್ಲಿ ನಮ್ಮ ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯ ಮರೆಯಬಾರದು. ಮಕ್ಕಳಲ್ಲಿ ಉತ್ತಮ ಸಂಸ್ಕಾರ ಬಿತ್ತುವ ಜತೆಗೆ ದೇಶಭಕ್ತಿ ಭಾವ ಜಾಗೃತಗೊಳಿಸುವ ಅಗತ್ಯವಿದೆ.
>
> | ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠ

> ದೇಶದ ಪ್ರತಿಯೊಬ್ಬ ನಾಗರಿಕ ಸ್ವಾರ್ಥ ಮತ್ತು ಭ್ರಷ್ಟಾಚಾರಮುಕ್ತರಾಗಿ ನಿಸ್ವಾರ್ಥ ಮತ್ತು ಪ್ರಾಮಾಣಿಕತೆ ಬೆಳೆಸಿಕೊಂಡಾಗ ಮಾತ್ರ ಭ್ರಷ್ಟಾಚಾರಮುಕ್ತ ಭಾರತ ನಿರ್ಮಾಣ ಸಾಧ್ಯವಿದೆ. ಇದಕ್ಕಾಗಿ ಯುವಕರಲ್ಲಿ ಒಳ್ಳೆಯ ಸಂಸ್ಕಾರ ಮತ್ತು ದೇಶಭಕ್ತಿ ಭಾವ ತುಂಬುವ ಕೆಲಸ ನಡೆಯಬೇಕು.
>
> | ಪಂಡಿತ ರಾಜವೀರಜಿ ಶಾಸ್ತ್ರಿ ಸೊಲ್ಲಾಪುರ

Scanned with OKEN Scanner

ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ಉಪನ್ಯಾಸ

ಮಲ್ಲಮ್ಮ ನುಡಿ ವಾರ್ತೆ
(ಡಿ.ಕೆ. ಪ್ರಹ್ಲಾದ)

ಬಸವಕಲ್ಯಾಣ : – ಜಗದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ಶಿವಶರಣರು ರಚಿಸಿದ ವಚನ ಸಾಹಿತ್ಯ ಮೋಕ್ಷ ಮಾರ್ಗ ತೋರುವ ಮಹತ್ವದ ಸಾಹಿತ್ಯವಾಗಿವೆ ಎಂದು ಸುಕ್ಷೇತ್ರ ಹಿರೇನಾಗಾಂವದ ಪೂಜ್ಯಶ್ರೀ ಮ. ನಿ. ಪ್ರ. ಜಯಶಾಂತಲಿಂಗ ಮಹಾಸ್ವಾಮಿಗಳು ನುಡಿದರು.



ಪವಿತ್ರ ಶ್ರಾವಣ ಮಾಸ ನಿಮಿತ್ಯ ನಗರದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕಾ ಘಟಕ ಸಹಯೋಗದಲ್ಲಿ ಏರ್ಪಡಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಎರಡು ಕಣ್ಣುಗಳು ಇದ್ದ ಹಾಗೆ. ಆದರೆ ದೃಷ್ಟಿ ಒಂದೇ ಎಂದು ನುಡಿದರು.

ನೇತೃತ್ವವಹಿಸಿದ್ದ ಸಂಸ್ಥಾನ ಗವಿಮಠದ ಪೂಜ್ಯಶ್ರೀ ಷ. ಬ್ರ. ಡಾ ಟಟ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಸರಿಯಾಗಿ ಅರಿತು ನಡೆದರೆ ಜನ್ಮ ಸಾರ್ಥಕವಾಗುತ್ತದೆ. ಹಾಗೆಯೇ ಮುಂಬರುವ ವರ್ಷದಲ್ಲಿ ಶ್ರೀಮದ್ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್ ಸಮಾರಂಭದ ಸಿದ್ಧತೆಗೆ ಸಮಸ್ತ ಸದ್ಭಕ್ತರು ಪಾಲ್ಗೊಳ್ಳಬೇಕೆಂದು ಕರೆನೀಡಿದರು.

ಸಂಸ್ಥಾನ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆ ಉಪಾಧ್ಯಕ್ಷ ಚಂದ್ರಕಾಂತ ಪಾಟೀಲ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ ವೇದಿಕೆಮೇಲಿದ್ದರು.

ಪ್ರಾಚಾರ್ಯ ಪ್ರೊ. ಸೂರ್ಯಕಾಂತ ಶೀಲವಂತ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿ ಭಕ್ತರಿಗೆ ಧರ್ಮ ಸಂಸ್ಕಾರಕ್ಕಾಗಿ ಸಂಸ್ಥಾನ ಗವಿಮಠದಲ್ಲಿ ಪವಿತ್ರ ಶ್ರಾವಣ ಮಾಸದಲ್ಲಿ ಪೂಜ್ಯರು ಈ ಪುಣ್ಯ ಕಾರ್ಯ ದಯಪಾಲಿಸುತ್ತಿರುವುದು ನಮ್ಮ ಭಾಗ್ಯ. ಮುಂಬರುವ ವರ್ಷದಲ್ಲಿ ಶ್ರೀಮದ್ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್ ಸಂಕಲ್ಪವನ್ನು ಸದ್ಭಕ್ತರು ಮಾಡಿದ್ದೇವೆ. ಈ ಸಮಾರಂಭದ ಯಶಸ್ವಿಗಾಗಿ ಸಮಸ್ತ ಸದ್ಭಕ್ತರು ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಷಣ್ಮುಖಿ ಪ್ಪ ಕಣಸೂರೆ, ಪ್ರಾಚಾರ್ಯ ಎ.ಜಿ. ಪಾಟೀಲ್, ಲಕ್ಷ್ಮಣ ಸಿಂಗಾರೆ, ಬಸವಂತಪ್ಪ ಲವಾರೆ, ಪ್ರೋ. ರುದ್ರೇಶ್ವರ ಗೋರ್ಟಾ, ದಯಾನಂದ ಶೀಲವಂತ, ಪ್ರೋ. ಶಾಂತಲಿಂಗ ಮಠಪತಿ, ಗೋವಿಂದ ರೆಡ್ಡಿ, ಮಲ್ಲಿಕಾರ್ಜುನ್ ಅಲಗುಡೆ, ಬಸವಣ್ಣಪ್ಪಾ ನೆಲೋಗಿ, ಶಿವಶಂಕರ್ ರಾಮಣ್ಣನವರ, ವೀರಶೆಟ್ಟಿ ಎಂ. ಪಾಟೀಲ, ಲಿಂಗರಾಜ ಬಿರಾದಾರ, ವಿಮಲಾಬಾಯಿ ಬಿರಾದಾರ, ಸವಿತಾ ಸ್ವಾಮಿ, ಅಂಜನಾ ಮೂಲಗೆ, ಸರೋಜನಿ ಹಿರೇಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಕು. ಶರಣ ಬಸವ ಅಲಗೂಡ ಪ್ರಾರ್ಥನೆ. ಮುಖ್ಯಗುರುಗಳಾದ ರಮೇಶ ರಾಜೋಳೆ ಸಂಚಾಲನೆ ಮಾಡಿದರು.

ಮಲ್ಲಮ್ಮ ನುಡಿ

ವಿಜಯ ಕರ್ನಾಟಕ

ಶನಿವಾರ, 10 ಆಗಸ್ಟ್ 2024, ಕಲಬುರಗಿ

ಶ್ರಾವಣ ಸಂದೇಶ 07

ಹಬ್ಬಹರಿದಿನಗಳ ಮಾಸ ಶ್ರಾವಣ

ಸಾಮಾನ್ಯವಾಗಿ ಶ್ರಾವಣ ಮಾಸವು ನಮಗೆಲ್ಲ ಪವಿತ್ರವಾದ ತಿಂಗಳು. ಈ ತಿಂಗಳಲ್ಲಿ ಎಲ್ಲರಿಗೂ ಸಂತೋಷವೇ ಸಂತೋಷ ಪರಿಸರದಂತೆಯೇ ಪ್ರತಿ ವ್ಯಕ್ತಿಯಲ್ಲಿ ಚೈತನ್ಯ ಆಳವಡುತ್ತದೆ. ಈ ತಿಂಗಳಲ್ಲಿ ಹಬ್ಬ ಹರಿದಿನಗಳು ಸಾಕಷ್ಟು ಬರುವುದರಿಂದ ಎಲ್ಲ ಕಡೆಗೂ ಸಂತೋಷದ ವಾತಾವರಣ. ಇಡೀ ತಿಂಗಳು ಪುರಾಣ, ಪ್ರವಚನ, ಕೀರ್ತನೆ, ಹರಿಕಥೆ, ಭಜನೆ ಮೊದಲಾದವುಗಳು ನಮ್ಮ ಸುತ್ತ ಮುತ್ತಲಿರುವ ದೇವಸ್ಥಾನ, ಮಠ ಮಂದಿರಗಳಲ್ಲಿ ನಡೆಯುತ್ತವೆ. ಶ್ರಾವಣ ಮಾಸದ ವೈಭವ ಹಾಗೂ ವೈಭೋಗವನ್ನು ಕಂಡು ಕವಿವರ್ಯರಾದ ಬೇಂದ್ರೆಯವರ ಅಂತರಂಗದ ಶಬ್ದಗಳು ಈ ಕೆಳಗಿನಂತೆ ಹೊರಬಂದಿವೆ.

ಶ್ರಾವಣ ಬಂತು , ಕಾಡಿಗೆ ಬಂತು ನಾಡಿಗೆ, ಬಂತು ಬೀದಿಗೆ, ಶ್ರಾವಣ ಬಂತು, ಕಡಲಿಗೆ ಬಂತು, ಶ್ರಾವಣ ಕುಣಿದ್ಹಾಂಗ ರಾವಣ, ಕುಣಿದಾವ ಗಾಳಿ, ಬೈರವನ ರೂಪ ತಾಳಿ ಎಂದು ಬೇಂದ್ರೆಯವರು ತಮ್ಮ ಶ್ರಾವಣ ಎಂಬ ಕವನದಲ್ಲಿ ಅದ್ಭುತ ಪ್ರಕೃತಿಯ ರಮಣೀಯ ದೃಶ್ಯವನ್ನು ಕವಿಗಳು ಶ್ರಾವಣದ ಮರ್ಮವನ್ನು ವಿವರಿಸಿದ್ದಾರೆ. ಶ್ರಾವಣ ಬಂತು ಕಾಡಿಗೆ, ಬಂತು ನಾಡಿಗೆ, ಬಂತು ಬೀಡಿಗೆ ಎಂದು ವರಕವಿ ದ.ರಾ.ಬೇಂದ್ರೆಯವರ ಹಾಡು ಗಮನಿಸಿದರೆ ಶ್ರಾವಣ ಮಾಸದಲ್ಲಿ ಪರಿಸರದಲ್ಲೂ ಮನುಷ್ಯನ ಮುಖದಲ್ಲೂ ಒಂದು ಉಲ್ಲಾಸ ಎದ್ದುತೋರುತ್ತದೆ. ಅದಕ್ಕೆ ಕಾರಣ ಈ ಮಾಸದಲ್ಲಿ ಆಗುವ ಪ್ರಾಕೃತಿಕ ಬದಲಾವಣೆ ಮತ್ತು ಆಗಮಿಸುವ ಹಬ್ಬಗಳ ಸಾಲು ಎಂದಿದ್ದಾರೆ.

ಇದು ಶ್ರವಣ ಮಾತ್ರದಿಂದ ಘಟಿಸುವುದು. ಅಂದರೆ ಪರೋಕ್ಷವಾಗಿ ಶ್ರಾವಣ-ಶ್ರವಣ-ಆಲಿಸು, ಆಲಿಸಿದಾಗಲೇ ಮುಕ್ತಿ ಎಂದರ್ಥ. ಆದ್ದರಿಂದ ಶ್ರಾವಣದಲ್ಲಿಯ ಶ್ರವಣ ಪದವು ಮೋಕ್ಷದಾಯಕವಾಗಿದೆ. ಶ್ರವಣ, ಮನನ, ನಿಧಿದ್ಯಾಸ, ಈ ನಿಧಿದ್ಯಾಸದ ಪ್ರತಿಫಲವೇ ಸಮಾಧಿ. ಇದೇ ಮುಕ್ತಿಯ ಸಾಮ್ರಾಜ್ಯವಾಗಿದೆ. ಆದ್ದರಿಂದ ಶ್ರಾವಣವು ಮುಕ್ತಿಯ ಮಾರ್ಗಕ್ಕೆ ಕೊಂಡೊಯ್ಯುತ್ತದೆ ಎಂಬದು ನಮ್ಮವರ ಸಂಪ್ರದಾಯ ಈ ಮಾಸದಲ್ಲಿ ಕೂಡಿ ಮಾಡುವ ವ್ರತೋತ್ಸವಗಳು ಹೆಚ್ಚು. ಸಂನ್ಯಾಸಿಗಳೂ ಚಾತುರ್ಮಾಸ್ಯ ವ್ರತವನ್ನು ಹಿಡಿದು ಒಂದೆಡೆ ವಾಸಿಸುವುದರಿಂದ ಜನರಿಗೆ ಗುರುಗಳಿಂದ ಧಾರ್ಮಿಕ ಪ್ರವಚನ, ಚರ್ಚೆ ಉಪದೇಶಾದಿಗಳು ಲಭ್ಯವಾಗುತ್ತವೆ.



ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಸ್ನಾನಾದಿಗಳನ್ನು ಮುಗಿಸಿ, ಮನೆಯನ್ನು ತಳಿರು-ತೋರಣ-ರಂಗವಲ್ಲಿಗಳಿಂದ ಸಿಂಗರಿಸಿ, ಪೂಜಾಮಂಟಪವನ್ನು ಅಲಂಕರಿಸಿ, ಉಪವಾಸ, ಪೂಜೆ, ದಾನಧರ್ಮಗಳಲ್ಲಿ ತೊಡಗುವುದು, ಸಾಯಂಕಾಲ ಹಾಡು, ಕಥಾಶ್ರವಣ ಹಾಗೂ ತಾಂಬೂಲ ವಿನಿಮಯ ಮಾಡಿಕೊಳ್ಳುವುದು ಹೀಗೆ ಶ್ರಾವಣ ಮಾಸವು ವಿಶೇಷತೆಯನ್ನು ಹೊಂದಿದೆ.

– ಪೂಜ್ಯ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು
ಸಂಸ್ಥಾನ ಗವಿಮಠ ಬಸವಕಲ್ಯಾಣ

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 29 ಜುಲೈ 2024
29 JULY 2024

ಮಠದ ಭಕ್ತರೇ ನನಗೆ ಪ್ರೇರಣಾಶಕ್ತಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಶಿರಸಿಯಲ್ಲಿ ನಡೆದ ರಾಜ್ಯ ಮಟ್ಟದ ಚುಟುಕು ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷರಾಗಿ ಆಯ್ಕೆ ಜತೆಗೆ ಸಾಹಿತ್ಯ ಚೇತನ ಪ್ರಶಸ್ತಿ ಪುರಸ್ಕೃತರಾದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಗವಿಮಠದಲ್ಲಿ ಭಾನುವಾರ ಸನ್ಮಾನಿಸಿ ಅಭಿನಂದಿಸಲಾಯಿತು.

» ಶ್ರೀ ಡಾ.ಅಭಿನವ ಗುರುಲಿಂಗ ರುದ್ರಮುನಿ ಶಿವಾಚಾರ್ಯ ನುಡಿ

» ಗವಿಮಠದಲ್ಲಿ ಅಭಿನಂದನಾ ಸಮಾರಂಭ

ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್, ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಮತ್ತು ಮಹಿಳಾ ಘಟಕದ ಸಹಯೋಗದಡಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿದ ಶ್ರೀಗಳು ಮಾತನಾಡಿ, ಈ ಪ್ರಶಸ್ತಿ ಸಮಸ್ತ ಭಕ್ತರಿಗೆ ಸಂದ ಗೌರವ. ಮಠದ ಭಕ್ತರೇ ನನಗೆ ಪ್ರೇರಣಾ ಶಕ್ತಿ ಎಂದರು.

ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ.ವೆಂಕಣ್ಣ ದೊಣ್ಣೆಗೌಡ ಮಾತನಾಡಿ, ಜ್ಞಾನವನ್ನು ಅಕ್ಷರಗಳಲ್ಲಿ ಹಿಡಿದಿಡುವುದೇ ಸಾಹಿತ್ಯ. ಗವಿಮಠದ ಅಭಿನವ ಶ್ರೀಗಳು ಧರ್ಮ ಬೋಧನೆ ಜತೆಗೆ ಕನ್ನಡದಲ್ಲಿ ಚುಟುಕು ಸಾಹಿತ್ಯ ರಚನೆ ಮೂಲಕ ಸಾಧನೆ ಮಾಡಿದ್ದಾರೆ ಎಂದು ಕೊಂಡಾಡಿದರು.

> ಗವಿಮಠದ ಶ್ರೀಗಳು ಗುರುವಾಗಿ ದೊರೆತಿದ್ದು ನಮ್ಮೆಲ್ಲರ ಭಾಗ್ಯ. ಉಪದೇಶ ಮೂಲಕ ಧರ್ಮ ಮಾರ್ಗದ ಬೋಧನೆ ಮಾಡುತ್ತಿದ್ದಾರೆ. ಜತೆಗೆ ವಿಶೇಷವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದು ಸಾಹಿತ್ಯ ಚೇತನ ಪ್ರಶಸ್ತಿ ಪುರಸ್ಕೃತರಾಗಿದ್ದರಿಂದ ಈ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.
>
> **| ಡಾ.ಬಸವರಾಜ ಸ್ವಾಮಿ**
> ತಾಲೂಕು ಅಧ್ಯಕ್ಷ, ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ

ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ, ಶಿಕ್ಷಕ ಮಲ್ಲಿಕಾರ್ಜುನ ಅಲಗುಡೆ ಮಾತನಾಡಿದರು. ಪ್ರಮುಖರಾದ ಶರಣಪ್ಪ ಬಿರಾದಾರ, ಕಲ್ಪನಾ ಶೀಲವಂತ, ಬಸವಂತಪ್ಪ ಲವಾರೆ, ಸಿದ್ದು ಉಳ್ಳಿ, ಶಿವಲಿಂಗ ಸ್ವಾಮಿ, ಪ್ರೊ.ಸೂರ್ಯಕಾಂತ ಶೀಲವಂತ, ದಯಾನಂದ ಶೀಲವಂತ, ಎ.ಜಿ. ಪಾಟೀಲ್, ಲೋಕೇಶ ಸ್ವಾಮಿ, ಸದಾನಂದ ಕಣಜೆ, ಬಾಬುರಾವ ಚಳಕಾಪುರೆ, ಶರಣು ಸ್ವಾಮಿ, ಸಂಗೀತಾ ಪಾಟೀಲ್, ಡಾ.ಚಿತ್ರಶೇಖರ ಚಿರಳ್ಳಿ, ಸವಿತಾ ಸ್ವಾಮಿ, ಸೂರ್ಯಕಾಂತ ಪಾಟೀಲ್, ಶರಣಬಸಪ್ಪ ದಂಡೆ, ಸಂಜಯ ರೋಹಿಲೆ, ಮಹಾನಂದಾ ಪುರವಂತ ಉಪಸ್ಥಿತರಿದ್ದರು.


ವಿಜಯವಾಣಿ ಚಿತ್ರ

ಶಿರಸಿಯಲ್ಲಿ ನಡೆದಿದ್ದ ರಾಜ್ಯ ಮಟ್ಟದ ಚುಟುಕು ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷ ಮತ್ತು ಸಾಹಿತ್ಯ ಚೇತನ ಪ್ರಶಸ್ತಿ ಪುರಸ್ಕೃತರಾದ ಶ್ರೀಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಬಸವಕಲ್ಯಾಣ ಗವಿಮಠದಲ್ಲಿ ಭಾನುವಾರ ಸನ್ಮಾನಿಸಿ ಅಭಿನಂದಿಸಲಾಯಿತು. ಪ್ರೊ.ವೆಂಕಣ್ಣ ದೊಣ್ಣೆಗೌಡ, ಶಾಂತಲಿಂಗ ಮಠಪತಿ, ಮಲ್ಲಿಕಾರ್ಜುನ ಅಲಗುಡೆ, ಡಾ.ಬಸವರಾಜ ಸ್ವಾಮಿ ಇತರರಿದ್ದರು.

ಡಾ.ಬಸವರಾಜ ಸ್ವಾಮಿ ಸ್ವಾಗತಿಸಿದರು. ರಾಕೇಶ ವಿ.ಪುರವಂತ ವಂದಿಸಿದರು. ಮುಖ್ಯಗುರು ರಮೇಶ ರಾಜೋಳೆ ನಿರೂಪಣೆ ಮಾಡಿದರು. ವೀರಶೆಟ್ಟಿ ಪಾಟೀಲ್ ಕವನ ವಾಚನ ಮಾಡಿದರು. ಕಲಾವತಿ ಸ್ವಾಮಿ ಮತ್ತು ನಿರ್ಮಲಾ ಶೀಲವಂತ ಪ್ರಾರ್ಥನಾಗೀತೆ ಹಾಡಿದರು. ಕಲಾವಿದ ವಿವೇಕ ವಸ್ತ್ರದ ಮತ್ತು ಪ್ರೊ.ರುದ್ರೇಶ್ವರ ಸ್ವಾಮಿ ಗೋರ್ಟಾ ಸಂಗೀತ ಸೇವೆ ಸಲ್ಲಿಸಿದರು.

ಗುರು ಬಗ್ಗೆ ಕೃತಜ್ಞತೆ ವ್ಯಕ್ತಪಡಿಸುವುದೇ ಗುರುಪೂರ್ಣಿಮೆ

ಬಸವಕಲ್ಯಾಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಸ್ವಾಮೀಜಿ ಆಶೀರ್ವಚನ

ಬಸವಕಲ್ಯಾಣ: ಮನುಷ್ಯ ಜೀವನದಲ್ಲಿ ಧರ್ಮ ದೇವರು ಮತ್ತು ಗುರುವನ್ನು ಎಂದಿಗೂ ಮರೆಯಬಾರದು ಎಂದು ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಗುರುಪೂರ್ಣಿಮೆ ನಿಮಿತ್ತ ನಗರದ ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಸದ್ಭಕ್ತರು ಏರ್ಪಡಿಸಿದ್ದ ಗುರು ಪೂರ್ಣಿಮೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಗುರುಗಳು ತಮ್ಮ ಭಕ್ತರಿಗೆ ಆಧ್ಯಾತ್ಮದ ಭೋದಾಮೃತ ನೀಡುತ್ತಿರುತ್ತಾರೆ. ಗುರುಗಳ ಋಣ ತೀರಿಸುವುದು ಅಸಾಧ್ಯ. ಆದರೂ ಭಕ್ತರು ಆ ಗುರುಗಳ ಬಗ್ಗೆ ಕೃತಜ್ಞತೆ ವ್ಯಕ್ತಪಡಿಸುವುದೇ ಗುರುಪೂರ್ಣಿಮೆ ಆಚರಿಸುವುದರ ಹಿಂದಿನ ಉದ್ದೇಶವಾಗಿದೆ ಎಂದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶಾಂತಲಿಂಗ ಮಠಪತಿ, ಡಾ.ಶಿವಲೀಲಾ ಮಠಪತಿ ದಂಪತಿಗಳು ಗುರುಗಳ ಪಾದಪೂಜೆ ನೆರವೇರಿಸಿದರು. ವಿವೇಕ ವಸ್ತ್ರದ ಸಂಗೀತ ಸೇವೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಎ.ಜಿ ಪಾಟೀಲ್, ಬಸವಂತಪ್ಪ ಲವಾರೆ, ಬಾಬುರಾವ್ ಚಳಕಾಪೂರೆ, ಮಲ್ಲಿಕಾರ್ಜುನ ಅಲಗುಡೆ, ವೀರಯ್ಯ ಸ್ವಾಮಿ, ಶರಣಬಸಪ್ಪ ಪವಾಡಶೆಟ್ಟಿ, ರೇವಣಸಿದ್ದಯ್ಯ ವಸ್ತ್ರದ, ಶಾಂತವೀರ ಪೂಜಾರಿ, ಸದಾನಂದ ಕಣಜೆ, ಪ್ರೊ ರುದ್ರೇಶ್ವರ ಗೋರ್ಟಾ, ಶಿವಕುಮಾರ್‌ಚಿಂಚೋಳಿ, ಶಿವಕುಮಾರ ಮುನ್ನೊಳಿ, ರಾಜಕುಮಾರ್‌ಕಾಂಬಳೆ ವಿನೋದ್ ಲಾಕೆ, ಇನ್ನಿತರರು ಉಪಸ್ಥಿತರಿದ್ದರು.



ಕನ್ನಡಪ್ರಭ
ಸೋಮವಾರ 22.07.2024

ಇಂದು ಅಭಿನಂದನಾ ಸಮಾರಂಭ

■ ವಿಕ ಸುದ್ದಿಲೋಕ ಬಸವಕಲ್ಯಾಣ



ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು ಉತ್ತರ ಕನ್ನಡ ಜಿಲ್ಲೆ ಶಿರಸಿಯಲ್ಲಿ ಏರ್ಪಡಿಸಿದ್ದ 12ನೇ ರಾಜ್ಯಮಟ್ಟದ ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಾಹಿತ್ಯ ಚೇತನ ಪ್ರಶಸ್ತಿ ಪುರಸ್ಕೃತರಾದ ಇಲ್ಲಿಯ ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಭಾನುವಾರ ಬೆಳಗ್ಗೆ 11-30ಕ್ಕೆ ಗವಿ ಮಠದಲ್ಲಿ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್, ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಮತ್ತು ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ಮಹಿಳಾ ಘಟಕ ಹಾಗೂ ಸಮಸ್ತ ಸದ್ಭಕ್ತರ ಸಹಯೋಗದಲ್ಲಿ ಈ ಅಭಿನಂದನಾ ಸಮಾರಂಭ ಜರುಗಲಿದೆ. ಹೀಗಾಗಿ ಸಮಸ್ತ ಸದ್ಭಕ್ತರು ಪಾಲ್ಗೊಂಡು ಗುರುಗಳ ದರ್ಶನ ಮಾಡಿ ಆಶೀರ್ವಾದ ಪಡೆದು ಪ್ರಸಾದ ಸ್ವೀಕರಿಸಿ ಪುನೀತರಾಗಬೇಕೆಂದು ಶ್ರೀ ಮದ್ವೀರ ಶೈವ ಸದ್ಬೋಧನ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರಾಕೇಶ ವಿ. ಪುರವಂತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Scanned with OKEN Scanner

ಸಾಹಿತ್ಯ ಚೇತನ ಪುರಸ್ಕೃತ ಗವಿಮಠ ಶ್ರೀಗೆ ಅಭಿನಂದನೆ

ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಸನ್ಮಾನ

■ ಉದಯವಾಣಿ ಸಮಾಚಾರ

ಬಸವಕಲ್ಯಾಣ: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್‌ನಿಂದ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಮೇ 27ರಂದು ಏರ್ಪಡಿಸಿದ್ದ 12ನೇ ರಾಜ್ಯಮಟ್ಟದ ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ 'ಸಾಹಿತ್ಯ ಚೇತನ' ಪ್ರಶಸ್ತಿ ಪುರಸ್ಕೃತರಾದ ಗವಿಮಠದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಗವಿ ಮಠದಲ್ಲಿ ಅಭಿನಂದಿಸಿ ಸನ್ಮಾನಿಸಲಾಯಿತು.

ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಮತ್ತು ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ಮಹಿಳಾ ಘಟಕ ಹಾಗೂ ಸಮಸ್ತ ಸದ್ಭಕ್ತರ ಸಹಯೋಗದಲ್ಲಿ ರವಿವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಠದ ಸದ್ಭಕ್ತರ ಸಮ್ಮುಖದಲ್ಲಿಡಾ।ಅಭಿನವಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಗೌರವಿಸಲಾಯಿತು.

'ಕಲಬುರಗಿ ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ। ವೆಂಕಣ್ಣಗೌಡ ಮಾತನಾಡಿ, ಒಬ್ಬ ಮನುಷ್ಯ ತನ್ನ ಜ್ಞಾನ ಅಕ್ಷರಗಳಲ್ಲಿ ಸೆರೆ ಹಿಡಿದದ್ದೇ ಸಾಹಿತ್ಯ. ಗವಿಮಠದ ಶ್ರೀಗಳು ಧರ್ಮ ಬೋಧನೆ ಮಾಡುತ್ತ ಕನ್ನಡದಲ್ಲಿ ಚುಟುಕು ಸಾಹಿತ್ಯ ರಚನೆ ಮಾಡುವ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಈ ಸಾಧನೆ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ಗುರುತಿಸಿ ಶ್ರೀಗಳಿಗೆ ಪ್ರಶಸ್ತಿ ನೀಡಿದೆ ಎಂದರು.

ಶಿಕ್ಷಕ ಮಲ್ಲಿಕಾರ್ಜುನ ಅಲಗುಡೆ ಮಾತನಾಡಿ, ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಸಾಮಾನ್ಯ ಗುರುಗಳು. ಸದ್ಭಕ್ತರ ಸೇವೆ, ಸಹಕಾರದಿಂದ ಈ ಪವಿತ್ರ ಸ್ಥಳವನ್ನು ಅದ್ಭುತ ಮಠವಾಗಿ ನಿರ್ಮಿಸಿದ್ದಾರೆ. ಅಲ್ಲದೇ ಗುರುಗಳ ಸಾಹಿತ್ಯ ಕೊಡುಗೆ ಅಪರವಾಗಿದ್ದು ಚುಟುಕು ಸಾಹಿತ್ಯ ಸಂದೇಶಗಳ ಮೂಲಕ ಸಾಧನೆಗೈದ ಪ್ರಯುಕ್ತ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು ಶ್ರೀಗಳನ್ನು ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸಾಹಿತ್ಯ ಚೇತನ ಪ್ರಶಸ್ತಿ ಕೊಟ್ಟು ಗೌರವಿಸಿದ್ದು ಶ್ರೇಷ್ಠ ಎಂದು ಸಂತಸ ವ್ಯಕ್ತಪಡಿಸಿದರು.

ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಅಧ್ಯಕ್ಷ ಡಾ। ಬಸವರಾಜ ಸ್ವಾಮಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿ, ಗವಿ ಮಠದ ಶ್ರೀಗಳು ಎಲ್ಲರಿಗೂ ಗುರುಗಳಾಗಿ ದೊರೆತದ್ದು ನಮ್ಮೆಲ್ಲರ ಭಾಗ್ಯ. ಗುರುಗಳು ಉಪದೇಶದ ಮೂಲಕ ಧರ್ಮಮಾರ್ಗ ಬೋಧಿಸುತ್ತಿದ್ದಾರೆ. ಜೊತೆಗೆ ವಿಶೇಷವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದು ಸಾಹಿತ್ಯ ಚೇತನ ಪ್ರಶಸ್ತಿ ಪುರಸ್ಕೃತರಾದ ಹಿನ್ನೆಲೆಯಲ್ಲಿ ಈ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ ಮಾತನಾಡಿದರು. ವೀರಶೆಟ್ಟಿ ಪಾಟೀಲ ಕವನ ವಾಚನ ಮಾಡಿದರು.

ಈ ಸಂದರ್ಭದಲ್ಲಿ ಜಗನ್ನಾಥ ಹೆಬ್ಬಾಳೆ, ಶಂಭುಲಿಂಗ ಕಾಮಣ್ಣ ಸಿದ್ದು ಉಳ್ಳೆ, ಶಿವಲಿಂಗ ಸ್ವಾಮಿ, ಪ್ರೊ। ಸೂರ್ಯಕಾಂತ ಶೀಲವಂತ, ದಯಾನಂದ ಶೀಲವಂತ, ಎ.ಜಿ. ಪಾಟೀಲ, ಲೋಕೇಶ ಸ್ವಾಮಿ, ಕಲ್ಪನಾ ಶೀಲವಂತ, ಸದಾನಂದ ಕಣಜಿ, ಬಾಬುರಾವ್ ಚಳಕಾಪುರೆ, ಶರಣು ಸ್ವಾಮಿ, ಸಂಗೀತಾ ಸುನೀಲ ಪಾಟೀಲ, ಡಾ। ಚಿತ್ರಶೇಖರ ಚಿರಳ್ಳಿ, ಸವಿತಾ ಶಮೇಶ ಸ್ವಾಮಿ, ಶಿಕ್ಷಕ ಸೂರ್ಯಕಾಂತ ಪಾಟೀಲ, ಪ್ರಾಚಾರ್ಯರಾದ ಶರಣಬಸಪ್ಪ ದಂಡೆ, ಸಂಜಯ ರೋಹಿಲೆ, ಮಹಾನಂದಾ ಪಿ. ಸೇರಿದಂತೆ ಇತರರಿದ್ದರು.

ಕಲಾವತಿ ಸ್ವಾಮಿ ಹಾಗೂ ನಿರ್ಮಲಾ ಶೀಲವಂತ ಪ್ರಾರ್ಥನೆ ಮಾಡಿದರು. ಯುವ ಕಲಾವಿದ ವಿವೇಕ ವಸ್ತ್ರದ ಮತ್ತು ಪ್ರೊ। ರುದ್ರೇಶ್ವರ ಸ್ವಾಮಿ ಗೋರ್ಟಾ ಸಂಗೀತ ಸೇವೆ ಸಲ್ಲಿಸಿದರು. ಶಿಕ್ಷಕ ರಮೇಶ ರಾಜೋಳಿ ನಿರೂಪಿಸಿದರು. ರಾಕೇಶ ಎ. ಪುರವಂತ ವಂದಿಸಿದರು.



ಬಸವಕಲ್ಯಾಣ: ಗವಿಮಠದಲ್ಲಿ 'ಸಾಹಿತ್ಯ ಚೇತನ' ಪ್ರಶಸ್ತಿ ಪುರಸ್ಕೃತ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ರವಿವಾರ ಸನ್ಮಾನಿಸಲಾಯಿತು.

> ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಮೇ 27ರಂದು ಜರುಗಿದ 12ನೇ ರಾಜ್ಯಮಟ್ಟದ ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ನನಗೆ ಸಾಹಿತ್ಯ ಚೇತನ ಪ್ರಶಸ್ತಿ ನೀಡಿ ಗೌರವಿಸಿದ್ದು ನಮ್ಮ ಸಮಸ್ತ ಭಕ್ತರಿಗೆ ದೊರೆತ ಪ್ರಶಸ್ತಿ. ಇದು ಜಗದ್ಗುರು ಘನಲಿಂಗರ ಕೃಪೆ. ಜಗದ್ಗುರು ಘನಲಿಂಗರು 12ನೇ ಶತಮಾನದಲ್ಲಿ ಶಿವಶರಣರ ಗುರುಗಳಾಗಿದ್ದವರು. ಮತ್ತೆ ಅದೇ ರೀತಿ 12ನೇ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಈ ಗವಿಮಠದ ಕೀರ್ತಿ ಹೆಚ್ಚಿಸೋದು ನನ್ನ ಕರ್ತವ್ಯ. ನಮ್ಮ ಭಕ್ತರೇ ನನಗೆ ಪ್ರೇರಣಾ ಶಕ್ತಿ.
>
> ● ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಗವಿಮಠ

ಉದಯವಾಣಿ ಕಲಬುರಗಿ
ಸೋಮವಾರ, ಜುಲೈ 29, 2024

ದೇವರು-ಗುರುವನ್ನು ಮರೆಯಬಾರದು

ಬಸವಕಲ್ಯಾಣ: ಮನುಷ್ಯನ ಜೀವನದಲ್ಲಿ ಧರ್ಮ, ದೇವರು ಮತ್ತು ಗುರುವನ್ನು ಎಂದಿಗೂ ಸಹ ಮರೆಯಬಾರದು ಎಂದು ಸಂಸ್ಥಾನ ಗವಿಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಸದ್ಭಕ್ತರಿಂದ ಭಾನುವಾರ ಆಯೋಜಿಸಿದ್ದ ಗುರುಪೂರ್ಣಿಮೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಭಾರತೀಯ ಪರಂಪರೆಯಲ್ಲಿ ಗುರುವಿಗೆ ಅತ್ಯಂತ ಶ್ರೇಷ್ಠ ಸ್ಥಾನಮಾನವಿದೆ. ಗುರುಗಳು ಭಕ್ತರಿಗೆ ಅಧ್ಯಾತ್ಮದ ಬೋಧನೆ ನೀಡುತ್ತಿರುತ್ತಾರೆ. ಗುರುಗಳ ಋಣವನ್ನು ತೀರಿಸಲು ಆಗದು. ಭಕ್ತರು ಆ ಗುರುಗಳ ಬಗ್ಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವುದೇ ಗುರುಪೂರ್ಣಿಮೆ ಆಚರಿಸುವುದರ ಹಿಂದಿನ ಉದ್ದೇಶವಾಗಿದೆ ಎಂದರು.

ಭಕ್ತ ಗುರುವಿನ ನಿಜವಾದ ಶಿಷ್ಯನಾದರೆ ಮಾತ್ರ ಮೋಕ್ಷ ಪಡೆಯಬಹುದು. ಒಬ್ಬ ವ್ಯಕ್ತಿ ಅನೇಕ ಶಾಸ್ತ್ರಗಳನ್ನು ಪುಸ್ತಕಗಳನ್ನು ಓದುತ್ತಿದ್ದರೂ ಸಹ ತನ್ನ ಗುರುಗಳಿಗೆ ತನ್ನನ್ನು ತಾನೇ ಒಪ್ಪಿಸಬೇಕಾಗುತ್ತದೆ. ಜೀವನದಲ್ಲಿ ಮೋಕ್ಷ, ಸುಖ, ಶಾಂತಿ, ಸಮೃದ್ಧಿಯನ್ನು ಪಡೆಯಲು ಗುರು ಭಕ್ತಿಯು ಸಹಾಯ ಮಾಡುತ್ತದೆ ಎಂದು ಹೇಳಿದರು.



ಬಸವಕಲ್ಯಾಣದ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಸದ್ಭಕ್ತರಿಂದ ಆಯೋಜಿಸಿದ್ದ ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ಗುರು ಪಾದಪೂಜೆಯನ್ನು ಕಸಾಪ ತಾಲೂಕು ಅಧ್ಯಕ್ಷ ಪ್ರೊ. ಶಾಂತಲಿಂಗ ಮಠಪತಿ ದಂಪತಿ ನೆರವೇರಿಸಿದರು. ಪ್ರಾಚಾರ್ಯ ಎ.ಜಿ ಪಾಟೀಲ್, ಬಸವಂತಪ್ಪ ಲವಾರೆ, ಬಾಬುರಾವ ಚಳಕಾಪುರೆ, ಮಲ್ಲಿಕಾರ್ಜುನ ಅಲಗುಡೆ, ಶರಣಬಸಪ್ಪ ಪವಾಡಶೆಟ್ಟಿ ಇತರರಿದ್ದರು.

ಗುರುಪಾದಪೂಜೆಯನ್ನು ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಪ್ರೊ.ಶಾಂತಲಿಂಗ ಮಠಪತಿ, ಶಿವಲೀಲಾ ಮಠಪತಿ ದಂಪತಿ ನೆರವೇರಿಸಿದರು. ವೀರಯ್ಯಸ್ವಾಮಿ ವೈದಿಕ ಸೇವೆ ಹಾಗೂ ವಿವೇಕ ವಸ್ತ್ರದ ಸಂಗೀತ ಸೇವೆ ಸಲ್ಲಿಸಿದರು. ಪ್ರಾಚಾರ್ಯ ಎ.ಜಿ ಪಾಟೀಲ್, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ಬಾಬುರಾವ ಚಳಕಾಪುರೆ, ಮಲ್ಲಿಕಾರ್ಜುನ ಅಲಗುಡೆ, ಶರಣಬಸಪ್ಪ ಪವಾಡಶೆಟ್ಟಿ, ರೇವಣಸಿದ್ದಯ್ಯ ವಸ್ತ್ರದ, ಶಾಂತವೀರ ಪೂಜಾರಿ, ಸದಾನಂದ ಕಣಜಿ, ಪ್ರೊರುದ್ರೇಶ್ವರ ಗೋರ್ಟಾ, ಶಿವಕುಮಾರ ಚಿಂಚೋಳಿ, ಶಿವಕುಮಾರ ಮುನ್ನೋಳಿ, ರಾಜಕುಮಾರ ಕಾಂಬಳೆ, ವಿನೋದ ಲಾಕೆ ಇದ್ದರು.

ನಂ.1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » KALABURAGI
ಸೋಮವಾರ 22 ಜುಲೈ 2024
22 JULY 2024

Scanned with OKEN Scanner

ಶ್ರೀ ಜಯಶಾಂತಲಿಂಗ ಸ್ವಾಮೀಜಿ ಅಭಿಪ್ರಾಯ | ಸಂಸ್ಥಾನ ಗವಿಮಠದಲ್ಲಿ ಉಪನ್ಯಾಸ ಮಾಲೆ

ಶಿಖಾಮಣಿ-ವಚನ ಸಾಹಿತ್ಯ ಎರಡು ಕಣ್ಣುಗಳಿದ್ದಂತೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಎರಡು ಕಣ್ಣುಗಳು ಇದ್ದಂತೆ. ಆದರೆ ದೃಷ್ಟಿ ಒಂದೇ ಎಂದು ಹಿರೇನಾಗಾಂವನ ಶ್ರೀ ಜಯಶಾಂತಲಿಂಗ ಸ್ವಾಮೀಜಿ ನುಡಿದರು.

ಪವಿತ್ರ ಶ್ರಾವಣ ಮಾಸ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆ ಸಮಾರಂಭವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದ ಅವರು, ಜಗದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ಶಿವಶರಣರು ರಚಿಸಿದ ವಚನ ಸಾಹಿತ್ಯ ಮೋಕ್ಷ ಮಾರ್ಗತೋರುವ ಮಹತ್ವದ ಸಾಹಿತ್ಯವಾಗಿವೆ ಎಂದು ಹೇಳಿದರು.

ನೇತೃತ್ವ ವಹಿಸಿದ್ದ ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಸರಿಯಾಗಿ ಅರಿತು ನಡೆದರೆ ಜನುಮ ಸಾರ್ಥಕವಾಗುತ್ತದೆ. ಮುಂಬರುವ ವರ್ಷದಲ್ಲಿ ಶ್ರೀಮದ್ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್ ಸಮಾರಂಭಕ್ಕೆ ಪ್ರಯತ್ನಿಸಲಾಗುತ್ತಿದ್ದು, ಸಿದ್ಧತೆಗೆ ಸಮಸ್ತ ಸದ್ಭಕ್ತರು ಸಿದ್ಧರಾಗಬೇಕಿದೆ ಎಂದರು.

ಸಂಸ್ಥಾನ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಪ್ರೊ.ಸೂರ್ಯಕಾಂತ ಶೀಲವಂತ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಮುಖ್ಯಗುರು ರಮೇಶ ರಾಜೋಳೆ ನಿರೂಪಣೆ ಮಾಡಿದರು. ಶರಣಬಸವ ಅಲಗುಡೆ ಪ್ರಾರ್ಥನೆ ಹಾಡಿದರು.

ಸಂಸ್ಥೆ ಉಪಾಧ್ಯಕ್ಷ ಚಂದ್ರಕಾಂತ ಪಾಟೀಲ್, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ಪ್ರಾಚಾರ್ಯ ಎ.ಜಿ.ಪಾಟೀಲ್, ಪ್ರೊ. ರುದ್ರೇಶ್ವರ ಗೋರ್ಟಾ, ಲಕ್ಷ್ಮಣ ಸಿಂಗಾರೆ, ದಯಾನಂದ ಶೀಲವಂತ, ಪ್ರೊ.ಶಾಂತಲಿಂಗ ಮಠಪತಿ, ಗೋವಿಂದರೆಡ್ಡಿ, ಮಲ್ಲಿಕಾರ್ಜುನ ಅಲಗುಡೆ, ಬಸವಣ್ಣಪ್ಪ ನೆಲೋಗಿ, ಶಿವಶಂಕರ ರಾಮಣ್ಣನವರ, ವೀರಶೆಟ್ಟಿ ಎಂ.ಪಾಟೀಲ್, ಲಿಂಗರಾಜ ಬಿರಾದಾರ, ವಿಮಲಾಬಾಯಿ ಬಿರಾದಾರ, ಸವಿತಾ ಸ್ವಾಮಿ, ಅಂಜನಾ ಮೂಲಗೆ, ಸರೋಜನಿ ಹಿರೇಮಠ ಇತರರಿದ್ದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ಶ್ರಾವಣ ಮಾಸ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆ ಸಮಾರಂಭವನ್ನು ಶ್ರೀ ಜಯಶಾಂತಲಿಂಗ ಸ್ವಾಮೀಜಿ ಉದ್ಘಾಟಿಸಿದರು. ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶರಣಪ್ಪ ಬಿರಾದಾರ, ಚಂದ್ರಕಾಂತ ಪಾಟೀಲ್, ಕಲ್ಪನಾ ಶೀಲವಂತ, ಸೂರ್ಯಕಾಂತ ಶೀಲವಂತ, ದಯಾನಂದ ಶೀಲವಂತ, ಬಸವಣ್ಣಪ್ಪ ನೆಲ್ಲಗಿ, ಎ.ಜಿ.ಪಾಟೀಲ್, ಪ್ರೊ.ರುದ್ರೇಶ್ವರ ಗೋರ್ಟಾ, ಶಾಂತಲಿಂಗ ಮಠಪತಿ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 7 ಆಗಸ್ಟ್ 2024
7 AUGUST 2024

ಆಚಾರವುಳ್ಳ ಭಕ್ತನೇ ಶಿವನಿಗೆ ಪ್ರಿಯ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಆಚಾರವುಳ್ಳ ಭಕ್ತನೇ ಶಿವನಿಗೆ ಪ್ರಿಯನಾಗುವನು. ಆ ಶಿವನನ್ನು ಪೂಜಿಸಬೇಕಾದರೆ ಆಚಾರವಂತನಾಗಿಯೇ ಪೂಜಿಸಬೇಕು ಎಂದು ಇಲ್ಲಿಯ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಗವಿ ಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕೂ ಘಟಕದ ಸಹಯೋಗದಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ಜರುಗಿದ 3ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಅನಾಚಾರಿಯಾದ ವ್ಯಕ್ತಿಯು ಅದೆಂಥಾ ದೊಡ್ಡ ಪೂಜೆಯನ್ನು ಮಾಡಿದರೂ ಶಿವನು ಅದನ್ನು ಸ್ವೀಕರಿಸುವುದಿಲ್ಲ ಎಂದರು.

ಬಿಇಟಿ ಕಾಲೇಜಿನ ನಿರ್ದೇಶಕ ಅಶೋಕುಮಾರ ವಣಗೇರಿ ಮಾತನಾಡಿ, ಡಾ.ಅಭಿನವ ಘನಲಿಂಗ ರುದ್ರಮುನಿ ಗುರುಗಳು ತಮ್ಮ ಸಂಸ್ಥಾನ ಗವಿಮಠದ ಮೂಲಕ ಈ ಪವಿತ್ರ ಶ್ರಾವಣ ಮಾಸದಲ್ಲಿ ಧರ್ಮ ಸಂಸ್ಕಾರ ಕೊಡುವ ಮಹತ್ವದ ಕಾರ್ಯ ಮಾಡುತ್ತಿದ್ದಾರೆ ಎಂದು ಹೇಳಿದರು. ಆಲ್ ಅಮೀನ್ ಶಾಲೆಯ ಅಧ್ಯಕ್ಷ ಮಹಮ್ಮದ್ ಘಿಯುದ್ದಿನ್ ಚೌಧರಿ, ನಗರದ ಬೃಂದಾವನ ಶಾಲೆಯ ಅಧ್ಯಕ್ಷ ಗೋವಿಂದ ಚಾಮಲೆ ಮಾತನಾಡಿದರು. ಬಸವ ಬೆರಳಚ್ಚು ಸಂಸ್ಥೆಯ ಪ್ರಾಚಾರ್ಯ ಎ. ಜಿ. ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಶಿಕ್ಷಕ ರಮೇಶ ರಾಜೋಳೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥಾನ ಗವಿ ಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಕಾರ್ಯದರ್ಶಿ ರಾಕೇಶ ಪುರವಂತ, ಮಲ್ಲಿಕಾರ್ಜುನ ಅಲಶೆಟ್ಟಿ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ಬಾಬುರಾವ ಚಳಕಾಪುರೆ, ನಿವೃತ್ತ ಪ್ರಾಚಾರ್ಯ ದಯಾನಂದ ಶೀಲವಂತ, ಕಾಪ ತಾಲೂಕು ಅಧ್ಯಕ್ಷ ಪ್ರೊ.ಶಾಂತಲಿಂಗ ಮಠಪತಿ, ಮಲ್ಲಿಕಾರ್ಜುನ ಹೊಳಕುಂದೆ, ಕಾರ್ತೀಕ ಬಿರಾದಾರ, ಡಾ. ವಿ. ಎಸ್. ರಾಜೋಳೆ, ನಾರಾಯಣಪುರ ವಲಯ ಕಸಾಪ ಅಧ್ಯಕ್ಷ ಗೋವಿಂದರೆಡ್ಡಿ ಕೋತಾಪಲ್ಲೆ, ಪ್ರೊ. ರುದ್ರೇಶ್ವರ ಗೋರ್ಟಾ, ಗೋವಿಂದ ಕನಕ, ಶಿಕ್ಷಕ ಜಗನ್ನಾಥ ಸ್ವಾಮಿ, ರಾಮಲಿಂಗ ರಾಮದಾಸೆ, ಗುರುರಾಮ ದಾಸೆ, ಸಿದ್ಧಯ್ಯ ಹಿರೇಮಠ ಮದಗುಣಕಿ, ವಿಮಲಾಬಾಯಿ ಬಿರಾದಾರ, ಸವಿತಾ ಬಿರಾದಾರ, ಶಿವಮ್ಮ ಬಿರಾದಾರ, ಉಮಾದೇವಿ ಪೊಲೀಸ ಪಾಟೀಲ, ಗಿರಿಜಾ ಬಿರಾದಾರ, ಸಂಗೀತ ಬಿರಾದಾರ, ಜ್ಯೋತಿ ಬಿರಾದಾರ, ಸವಿತಾ ಸ್ವಾಮಿ, ಶೀಲಾದೇವಿ ಲವಾರೆ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಶಕುಂತಲಾ ಗುರುಲಿಂಗಯ್ಯ ಮಠ ಪ್ರಾರ್ಥನಾ ಗೀತೆ ಹಾಡಿದರು. ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ ಸ್ವಾಗತಿಸಿದರು. ಪ್ರೊ. ವಿದ್ಯಾಸಾಗರ ಮೂಲಗೆ ನಿರೂಪಿಸಿದರು.



ಬಸವಕಲ್ಯಾಣದ ಗವಿ ಮಠದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ವಿಜಯ ಕರ್ನಾಟಕ
ಸೋಮವಾರ,19 ಆಗಸ್ಟ್ 2024, ಕಲಬುರಗಿ

ಅಭಿನವ ಶ್ರೀಗಳು ಇಂದು ಸಮಾರಂಭಕ್ಕೆ ಚಾಲನೆ

ಬಸವಕಲ್ಯಾಣ: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಉತ್ತರ ಕನ್ನಡ ಜಿಲ್ಲೆ ಶಿರಸಿಯಲ್ಲಿ ಫೆಬ್ರವರಿಯಲ್ಲಿ ಜರುಗಿದ್ದ 12ನೇ ರಾಜ್ಯಮಟ್ಟದ ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಅಭಿನಂದನಾ ಸಮಾರಂಭ ಗವಿ ಮಠದಲ್ಲಿ ಭಾನುವಾರ ಬೆಳಿಗ್ಗೆ 11.30ಕ್ಕೆ ನಡೆಯಲಿದೆ. ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್, ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ಮಹಿಳಾ ಘಟಕ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸದ್ಭಕ್ತರು ಪಾಲ್ಗೊಂಡು ಗುರುಗಳ ದರ್ಶನಾಶೀರ್ವಾದ ಪಡೆಯಬೇಕು ಎಂದು ಕೋರಲಾಗಿದೆ.



ಅಭಿನವ ಶ್ರೀಗಳು

Scanned with OKEN Scanner

ದೇವರು-ಗುರುಗಳನ್ನು ಯಾವತ್ತೂ ಮರೆಯಬಾರದು

■ ಉದಯವಾಣಿ ಸಮಾಚಾರ

ಬಸವಕಲ್ಯಾಣ: ಭಾರತೀಯ ಸನಾತನ ಪರಂಪರೆಯಲ್ಲಿ ಗುರುವಿಗೆ ಅತ್ಯಂತ ಶ್ರೇಷ್ಠ ಸ್ಥಾನಮಾನವಿದೆ. ಮನುಷ್ಯ ಜೀವನದಲ್ಲಿ ಧರ್ಮ, ದೇವರು ಮತ್ತು ಗುರುವನ್ನುಎಂದಿಗೂಮರೆಯಬಾರದು ಎಂದು ಇಲ್ಲಿಯ ಗವಿ ಮಠದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಗುರು ಪೂರ್ಣಿಮೆ ನಿಮಿತ್ತ ಭಾನುವಾರ ನಗರದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿ ಮಠದಲ್ಲಿಗವಿ ಮಠ ಟ್ರಸ್ಟ್ ಹಾಗೂ ಸಮಸ್ತ ಸದ್ಭಕ್ತರು ಭಾನುವಾರ ಏರ್ಪಡಿಸಿದ್ದ ಗುರು ಪೂರ್ಣಿಮೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಗುರುಗಳು ತಮ್ಮ ಭಕ್ತರಿಗೆ ಅಧ್ಯಾತ್ಮದ ಬೋಧಾಮೃತವನ್ನು ನೀಡುತ್ತಿರುತ್ತಾರೆ. ಗುರುಗಳ ಋಣವನ್ನು ತೀರಿಸುವುದು ಅಸಾಧ್ಯ. ಭಕ್ತರು ಆ ಗುರುಗಳ ಬಗ್ಗೆ ಕೃತಜ್ಞತೆ ವ್ಯಕ್ತಪಡಿಸುವುದೇ ಗುರು ಪೂರ್ಣಿಮೆ ಆಚರಿಸುವುದರ ಹಿಂದಿನ ಉದ್ದೇಶವಾಗಿದೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎನ್ನುವ ಹಾಗೆ ಭಕ್ತರು ಗುರುವಿನ ನಿಜವಾದ ಶಿಷ್ಯನಾದರೆ ಮಾತ್ರ ಮೋಕ್ಷವನ್ನು ಪಡೆಯಬಹುದು ಎಂದರು. ಒಬ್ಬ ವ್ಯಕ್ತಿ ಮೋಕ್ಷ ಸುಖ, ಶಾಂತಿ, ಸಮೃದ್ಧಿಯನ್ನು ಪಡೆಯಲು ಗುರು ಭಕ್ತಿ ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಕಸಾಪ ತಾಲೂಕು ಅಧ್ಯಕ್ಷ ಪ್ರೊ। ಶಾಂತಲಿಂಗ, ಡಾ। ಶಿವಲೀಲಾ ಮಠಪತಿ ದಂಪತಿ ಗುರುಗಳ ಪಾದಪೂಜೆ ನೆರವೇರಿಸಿದರು. ವಿಧಿವತ್ತಾಗಿ ವೀರಯ್ಯ ಸ್ವಾಮಿ ಅವರು ವೈದಿಕ ಸೇವೆ ಸಲ್ಲಿಸಿದರು. ವಿವೇಕ ವಸ್ತದ ಸಂಗೀತ ಸೇವೆ ಸಲ್ಲಿಸಿದರು.

ಪ್ರಾಚಾರ್ಯ ಎ.ಜಿ. ಪಾಟೀಲ್, ಬಸವಂತಪ್ಪ ಲವಾರೆ, ಬಾಬುರಾವ್ ಚಳಕಾಪೂರೆ, ಪ್ರೊ। ರುದ್ರೇಶ್ವರ ಗೋರ್ಟಾ, ಮಲ್ಲಿಕಾರ್ಜುನ ಆಲಗುಡೆ, ಶರಣಬಸಪ್ಪ ಪವಾಡಶೆಟ್ಟಿ ರಾಕೇಶ ಪುರವಂತ, ರೇವಣಸಿದ್ದಯ್ಯ ವಸ್ತದ, ಶಾಂತವೀರ ಪೂಜಾರಿ, ಸದಾನಂದ ಕಣಜೆ, ಶಿವಕುಮಾರ್ ಚಿಂಚೋಳಿ, ಶಿವಕುಮಾರ ಮುನ್ನೊಳ್ಳಿ, ರಾಜಕುಮಾರ ಕಾಂಬಳೆ, ವಿನೋದ್ ಲಾಕೆ ಸೇರಿದಂತೆ ಅನೇಕರು ಇದ್ದರು.



ಬಸವಕಲ್ಯಾಣ: ಗವಿ ಮಠದಲ್ಲಿ ನಡೆದ ಗುರು ಪೂರ್ಣಿಮೆ ಕಾರ್ಯಕ್ರಮದಲ್ಲಿ ಕಸಾಪ ತಾಲೂಕು ಅಧ್ಯಕ್ಷ ಪ್ರೊ। ಶಾಂತಲಿಂಗ, ಡಾ। ಶಿವಲೀಲಾ ಮಠಪತಿ ದಂಪತಿ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಾದಪೂಜೆ ನೆರವೇರಿಸಿದರು.

ಉದಯವಾಣಿ ಕಲಬುರಗಿ
ಸೋಮವಾರ, ಜುಲೈ 22, 2024

ಗುರುವನ್ನು ಎಂದಿಗೂ ಮರೆಯಬೇಡಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಭಾರತೀಯ ಸನಾತನ ಪರಂಪರೆ ಯಲ್ಲಿ ಗುರುವಿಗೆ ಅತ್ಯಂತ ಶ್ರೇಷ್ಠ ಸ್ಥಾನಮಾನವಿದೆ. ಮನುಷ್ಯ ಜೀವನ ದಲ್ಲಿ ಧರ್ಮ, ದೇವರು ಮತ್ತು ಗುರುವನ್ನು ಎಂದಿಗೂ ಮರೆಯ ಬಾರದು ಎಂದು ಇಲ್ಲಿಯ ಗವಿ ಮಠದ ಡಾ.ಅಭಿನವ ಘನಲಿಂಗೆ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿ ಮಠದಲ್ಲಿ ಗುರು ಪೂರ್ಣಿಮೆ ನಿಮಿತ್ತ ಭಾನುವಾರ ಗವಿ ಮಠ ಟ್ರಸ್ಟ್ ಹಾಗೂ ಸಮಸ್ತ ಸದ್ಭಕ್ತರು ಭಾನುವಾರ ಏರ್ಪಡಿಸಿದ್ದ ಗುರು ಪೂರ್ಣಿಮೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಗವಿ ಮಠದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಾದಪೂಜೆ

ಗುರುಗಳು ತಮ್ಮ ಭಕ್ತರಿಗೆ ಅಧ್ಯಾತ್ಮದ ಬೋಧಾಮೃತವನ್ನು ನೀಡುತ್ತಿರುತ್ತಾರೆ. ಗುರುಗಳ ಋಣವನ್ನು ತೀರಿಸುವುದು ಅಸಾಧ್ಯ. ಆದರೂ ಭಕ್ತರು ಆ ಗುರುಗಳ ಬಗ್ಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವುದೇ ಗುರು ಪೂರ್ಣಿಮೆ ಆಚರಿಸುವುದರ ಹಿಂದಿನ ಉದ್ದೇಶವಾಗಿದೆ. ಗುರುವಿನ ನಿಜವಾದ ಶಿಷ್ಯನಾದರೆ ಮಾತ್ರ ಮೋಕ್ಷವನ್ನು ಪಡೆಯಬಹುದು. ಒಬ್ಬ ವ್ಯಕ್ತಿಯು ಅನೇಕ ಶಾಸ್ತ್ರಗಳನ್ನು, ಪುಸ್ತಕಗಳನ್ನು ಓದುತ್ತಿದ್ದರು ಆ ವ್ಯಕ್ತಿಯು ತನ್ನ ಗುರುಗಳಿಗೆ ತನ್ನನ್ನು ತಾನೇ ಒಪ್ಪಿಸದಿದ್ದರೆ ಆದು ಯಾವುದೇ ಪ್ರಯೋಜನವಿಲ್ಲ. ಒಬ್ಬ ವ್ಯಕ್ತಿಯು ಮೋಕ್ಷ, ಸುಖ, ಶಾಂತಿ, ಸಮೃದ್ಧಿಯನ್ನು ಪಡೆಯಲು ಗುರು ಭಕ್ತಿಯು ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಕಸಾಪ ತಾಲೂಕು ಅಧ್ಯಕ್ಷ ಪ್ರೊ. ಶಾಂತಲಿಂಗ, ಡಾ. ಶಿವಲೀಲಾ ಮಠಪತಿ ದಂಪತಿ ಗುರುಗಳ ಪಾದಪೂಜೆ ನೆರವೇರಿಸಿದರು. ವಿಧಿವತ್ತಾಗಿ ವೀರಯ್ಯ ಸ್ವಾಮಿ ಅವರು ವೈದಿಕ ಸೇವೆ ಸಲ್ಲಿಸಿದರು. ವಿವೇಕ ವಸ್ತದ ಸಂಗೀತ ಸೇವೆ ಸಲ್ಲಿಸಿದರು.

ಈ ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಎ.ಜಿ ಪಾಟೀಲ್, ಬಸವಂತಪ್ಪ ಲವಾರೆ, ಬಾಬುರಾವ್ ಚಳಕಾಪೂರೆ, ಪ್ರೊ. ರುದ್ರೇಶ್ವರ ಗೋರ್ಟಾ, ಮಲ್ಲಿಕಾರ್ಜುನ ಆಲಗುಡೆ, ಶರಣಬಸಪ್ಪ ಪವಾಡಶೆಟ್ಟಿ ರಾಕೇಶ ಪುರವಂತ, ರೇವಣಸಿದ್ದಯ್ಯ ವಸ್ತದ, ಶಾಂತವೀರ ಪೂಜಾರಿ, ಸದಾನಂದ ಕಣಜೆ, ಶಿವಕುಮಾರ್ ಚಿಂಚೋಳಿ, ಶಿವಕುಮಾರ ಮುನ್ನೊಳ್ಳಿ, ರಾಜಕುಮಾರ ಕಾಂಬಳೆ, ವಿನೋದ್ ಲಾಕೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಬಸವಕಲ್ಯಾಣದಲ್ಲಿ ಗುರು ಪೂರ್ಣಿಮೆಯ ನಿಮಿತ್ತ ಭಾನುವಾರ ಗವಿ ಮಠದಲ್ಲಿ ಹಮ್ಮಿಕೊಂಡಿದ್ದ ಗುರು ಪೂರ್ಣಿಮೆಯ ಕಾರ್ಯಕ್ರಮದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಾದಪೂಜೆಯನ್ನು ಕಸಾಪ ತಾಲೂಕು ಅಧ್ಯಕ್ಷ ಪ್ರೊ.ಶಾಂತಲಿಂಗ, ಡಾ.ಶಿವಲೀಲಾ ಮಠಪತಿ ದಂಪತಿ ನೆರವೇರಿಸಿದರು.

ನಮ್ಮ ಪ್ರಜಾವಾಣಿ ಸೋಮವಾರ,22 ಜುಲೈ 2024
ವಿಜಯ ಕರ್ನಾಟಕ

Scanned with OKEN Scanner

ಭಾವದಿಂದ ಮಾತ್ರ ಭಗವಂತನ ಕೃಪೆಗೆ ಪಾತ್ರನಾಗಲು ಸಾಧ್ಯ

ಸಂ.ಕ.ಸಮಾಚಾರ ಬಸವಕಲ್ಯಾಣ : ಭಕ್ತಿ ಎಂಬ ಭಾವದಿಂದ ಮಾತ್ರ ಮನುಷ್ಯ ಭಗವಂತನ ಕೃಪೆಗೆ ಪಾತ್ರನಾಗಲು ಸಾಧ್ಯವಾಗುತ್ತದೆ ಎಂದು ಇಲ್ಲಿಯ ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಶ್ರಾವಣ ಮಾಸ ನಿಮಿತ್ಯ ಇಲ್ಲಿಯ ಗವಿಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲ್ಲೂಕು ಘಟಕದ ಸಹಯೋಗದಲ್ಲಿ ಹಮ್ಮಿಕೊಂಡ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ 2ನೇ ವಿಶೇಷ ಉಪನ್ಯಾಸ ಮಾಲೆಯಲ್ಲಿ ಶ್ರೀಗಳು ಮಾತನಾಡಿದರು. ಭಕ್ತನಲ್ಲಿ ಭಕ್ತಿಯ ಭಾವ ಇದ್ದಾಗ ಮಾತ್ರ ಭಗವಂತನನ್ನು ಪೂಜಿಸಿ ಕೃಪೆ ಪಡೆಯಲು ಸಾಧ್ಯ ಎಂದು ಸಿದ್ಧಾಂತ ಶಿಖಾಮಣಿ ಮೂಲಕ ಜಗದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಉಪದೇಶಿಸಿದ್ದಾರೆ. ಅದೇ ರೀತಿ ಶಿವಶರಣರೂ ಕೂಡ ತಮ್ಮ ವಚನಗಳ ಮೂಲಕ ಭಕ್ತಿಯಿಂದ ದೇವರನ್ನು ಒಲಿಸಿಕೊಳ್ಳಲು ಸಾಧ್ಯ ಎಂದು ಉಲ್ಲೇಖಿಸಿದ್ದಾರೆ ಎಂದು ಹೇಳಿದರು. ನಗರಸಭೆಯ ಮಾಜಿ ಸದಸ್ಯ ನಾಗನಾಥ ಚಾಮಲೆ ಮಾತನಾಡಿ ಇಲ್ಲಿಯ ಗವಿ ಮಠವು ಈ ಭಾಗದಲ್ಲಿ ಮಾನವ ಧರ್ಮ ಸಾರುವ ಏಕೈಕ ಮಠವಾಗಿದೆ. ನಮ್ಮ ಕಣ್ಣೆದುರಿನಲ್ಲಿಯೇ ಪೂಜ್ಯ ಡಾ. ಅಭಿನವ ಶ್ರೀಗಳು ಭಕ್ತರ ಧನ ಸೇವೆಯಿಂದ ಅಭಿವೃದ್ಧಿ ಪಡಿಸಿದ್ದು ದೊಡ್ಡ ಸಾಧನೆಯಾಗಿದೆ. ಹೀಗಾಗಿ ಸಂಸ್ಥಾನ ಗವಿಮಠದ ಸೇವೆ ಹಾಗೂ ಆಸ್ತಿಯ ಸಂರಕ್ಷಣೆಗಾಗಿ ನಮ್ಮ ಸಮಾಜ ಸದಾ ಸಿದ್ಧ ಎಂದು ತಿಳಿಸಿದರು.

ನಿವೃತ್ತ ಎಇಇ ಮುರುಗಯ್ಯ ವಸ್ತ್ರದ ಮಾತನಾಡಿ ಎಂದಿನಂತೆ ಮುಂದೆಯೂ ಸಂಸ್ಥಾನ ಗವಿಮಠ ಹಾಗೂ ಪೂಜ್ಯ ಗುರುಗಳ ಸೇವೆ ಸಲ್ಲಿಸುತ್ತಿರುವೆ ಎಂದು ಹೇಳಿದರು. ಶರಣಬಸಪ್ಪ ಅಲಗುಡೆ ಪ್ರಾರ್ಥನಾ ಗೀತೆ ಹಾಡಿದರು.

ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಸ್ವಾಗತಿಸಿದರೆ, ಪ್ರೊ. ರುದ್ರೇಶ್ವರ ಗೋರ್ಟಾ ನಿರೂಪಿಸಿದರು. ಟ್ರಸ್ಟಿನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆಯ ಅಧ್ಯಕ್ಷ ಡಾ. ಬಸವರಾಜ ಸ್ವಾಮಿ, ಸಂಸ್ಥೆ ಕಾರ್ಯದರ್ಶಿ ರಾಕೇಶ ಪುರವಂತ, ಮಲ್ಲಿಕಾರ್ಜುನ ಅಲಶೆಟ್ಟಿ, ಪ್ರಾಚಾರ್ಯ ಎ.ಜಿ.ಪಾಟೀಲ್, ನಿವೃತ್ತ ಪ್ರಾಚಾರ್ಯ ದಯಾನಂದ ಶೀಲವಂತ, ಶಿಕ್ಷಕ ಮಲ್ಲಿಕಾರ್ಜುನ ಅಲಗುಡೆ, ನಿವೃತ್ತ ಶಿಕ್ಷಕ ಬಸವಣಪ್ಪ ನೆಲೋಗಿ, ಸಾಹಿತಿ ವೀರಶೆಟ್ಟಿ ಎಂ. ಪಾಟೀಲ್, ಪ್ರೊ. ವಿ.ಎಸ್. ರಾಜೋಳೆ, ಪ್ರೊ. ಶಾಂತಲಿಂಗ ಮಠಪತಿ, ಸಂಸ್ಥೆಯ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ, ಗಂಗಮ್ಮ ಮಠಪತಿ, ಶಿಕ್ಷಕಿ ಸರಸ್ವತಿ ಬೆಂಬಳಿ, ಶೀಲಾದೇವಿ ಲವಾರೆ, ಪಾರ್ವತಿ ರೋಜೆ, ರೇಖಾ ಚಿಟ್ಟಿ ಮಹಾನಂದಾ ಪುರವಂತ, ಜ್ಯೋತಿ ಪುರವಂತ, ಪೂರ್ಣಿಮಾ ಸ್ವಾಮಿ ಅನೇಕರು ಪಾಲ್ಗೊಂಡಿದ್ದರು.



ಬಸವಕಲ್ಯಾಣ: ಶ್ರಾವಣ ಮಾಸ ನಿಮಿತ್ಯ ಗವಿಮಠದಲ್ಲಿ ಹಮ್ಮಿಕೊಂಡ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ 2ನೇ ವಿಶೇಷ ಉಪನ್ಯಾಸ ಮಾಲೆಯಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಸಂಯುಕ್ತ ಕರ್ನಾಟಕ
ಶನಿವಾರ, 10, ಆಗಸ್ಟ್, 2024
ಕಲಬುರಗಿ | KALABURAGI

ಅಭಿನವ ಶ್ರೀ ಅಭಿಮತ | ಸಂಸ್ಥಾನ ಗವಿಮಠದಲ್ಲಿ 5ನೇ ವಿಶೇಷ ಉಪನ್ಯಾಸ ಮಾಲೆ

ಫಲಾಪೇಕ್ಷೆ ಇಲ್ಲದ ದಾನ ಮಹತ್ವದ್ದು

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮನುಷ್ಯ ಯಾವುದೇ ಪ್ರತಿಫಲದ ಅಪೇಕ್ಷೆ ಇಲ್ಲದೇ ಮಾಡುವ ದಾನ ಮಹತ್ವದ್ದು ಎಂದು ಸಂಸ್ಥಾನ ಗವಿಮಠದ ಪೀಠಾಧಿಪತಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣಮಾಸ ನಿಮಿತ್ತ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕದ ಸಹಯೋಗದಲ್ಲಿ ಸಂಸ್ಥಾನ ಗವಿಮಠದಲ್ಲಿ ಸೋಮವಾರ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ 5ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ ಶ್ರೀಗಳು, ಸೋಪಾದಿಕ ದಾನ, ನಿರುಪಾದಿಕ ದಾನ ಮತ್ತು ಸಹಜದಾನ ಎಂಬ ಮೂರು ಪ್ರಕಾರದ ದಾನಗಳಲ್ಲಿ ಸಹಜದಾನವು ನಿಷ್ಕಾಮದಾನವಾಗಿದ್ದು, ಸಿದ್ಧಾಂತ ಶಿಖಾಮಣಿಯಲ್ಲಿ ಜಗದ್ಗುರು ರೇಣುಕ ಭಗವತ್ಪಾದರು ಈ ದಾನದ ಮಹತ್ವವನ್ನು ಬೋಧಿಸಿದ್ದಾರೆ. ಹಾಗೆಯೇ ಬಸವಣ್ಣನವರೂ ತಮ್ಮ ವಚನದಲ್ಲಿ ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ ಎನ್ನುತ್ತ ನೀಡುವ ನಿಜಗುಣ ಉಳ್ಳ ದಾನಿಗೆ ಕೂಡಲ ಸಂಗಮನಾಥ ಒಲಿವನು ಎಂದು ಹೇಳಿದ್ದಾರೆ ಎಂದರು.

ಬಿಡಿವಿಸಿ ಉಪಾಧ್ಯಕ್ಷ ಡಾ.ಜಿ.ಎಸ್.ಭುರಳೆ ಮಾತನಾಡಿ, ಶ್ರಾವಣದ ನಿಮಿತ್ತ ಪ್ರತಿವರ್ಷ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸುತ್ತಿರುವ ಶ್ರೀಗಳ ಕಾರ್ಯ ಶ್ಲಾಘನೀಯ. ಇಂತಹ ಕಾರ್ಯಕ್ರಮ ಮನಸ್ಸು ಶುದ್ಧಗೊಳಿಸಲು ಸಹಕಾರಿಯಾಗುತ್ತವೆ. ಉತ್ತಮ ಆರೋಗ್ಯಕ್ಕಾಗಿ ಸ್ವಚ್ಛತೆ, ಶುದ್ಧತೆಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ನಾರಾಯಣಪುರ ವಲಯ ಕಸಾಪ ಅಧ್ಯಕ್ಷ ಗೋವಿಂದರೆಡ್ಡಿ ಕೋತಪಲ್ಲಿ ಅಧ್ಯಕ್ಷತೆ ವಹಿಸಿದ್ದರು. ಮಂಜುನಾಥ ಸ್ವಾಮಿ, ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ದಯಾನಂದ ಶೀಲವಂತ, ಮಲ್ಲಿಕಾರ್ಜುನ ಹೊಳಕುಂದೆ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ, ಸುರೇಖಾ ಶೀಲವಂತ, ಗಂಗಮ್ಮ ಮಠಪತಿ, ಸಂಗೀತಾ ಬಿರಾದಾರ, ವನಿತಾ ಬಿರಾದಾರ, ಪೂರ್ಣಿಮಾ ಸ್ವಾಮಿ, ಶಕುಂತಲಾ ಮಠ ಇದ್ದರು. ಶರಣಬಸಪ್ಪ ಅಲಗುಡೆ ಪ್ರಾಸ್ತಾವಿಕ ಮಾತನಾಡಿದರು. ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಸ್ವಾಗತಿಸಿದರು. ಶಿಕ್ಷಕ ಮಲ್ಲಿಕಾರ್ಜುನ ಅಲಗುಡೆ ನಿರೂಪಣೆ ಮಾಡಿದರು. ಪ್ರೊ. ರುದ್ರೇಶ್ವರ ಗೋರ್ಟಾ ಪ್ರಾರ್ಥನಾ ಗೀತೆ ಹಾಡಿದರು.



ಬಸವಕಲ್ಯಾಣ ಗವಿಮಠದಲ್ಲಿ ಸೋಮವಾರ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ 5ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಡಾ.ಜಿ.ಎಸ್.ಭುರಳೆ ಮಾತನಾಡಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಗೋವಿಂದರೆಡ್ಡಿ ಕೋತಪಲ್ಲಿ, ಮಂಜುನಾಥ ಸ್ವಾಮಿ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶುಕ್ರವಾರ 23 ಆಗಸ್ಟ್ 2024
23 AUGUST 2024

Scanned with OKEN Scanner

ಶ್ರಾವಣ ಮಾಸದ ನಿಮಿತ್ತ ಗವಿ ಮಠದಲ್ಲಿ ವಿಶೇಷ ಉಪನ್ಯಾಸ ಮಾಲೆ

ಸತ್ಸಂಗ ಆಲಿಸುವುದರಿಂದ ಆರೋಗ್ಯ ವೃದ್ಧಿ

ವಿಕ ಸುದ್ದಿಲೋಕ ಬಸವಕಲ್ಯಾಣ

ಪ್ರತಿಫಲ ಆಪೇಕ್ಷೆ ಇಲ್ಲದೇ ಕೊಡುವ ದಾನವು ಸಹಜ ದಾನ ಎಂದು ಇಲ್ಲಿಯ ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಗವಿ ಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ಹಮ್ಮಿಕೊಂಡಿದ್ದ ನಡೆದ 5ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸೋಪಾದಿಕ ದಾನ, ನಿರುಪಾದಿಕ ದಾನ ಮತ್ತು ಸಹಜ ದಾನ ಎಂಬ ಮೂರು ಪ್ರಕಾರದ ದಾನಗಳಲ್ಲಿ ಸಹಜದಾನವು ನಿಷ್ಕಾಮದಾನವಾಗಿದ್ದು ಸಿದ್ಧಾಂತ ಶಿಖಾಮಣಿಯಲ್ಲಿ ಜಗದ್ಗುರು ರೇಣುಕ ಭಗವತ್ಪಾದರು ಈ ದಾನದ ಮಹತ್ವವನ್ನು ಬೋಧಿಸಿದ್ದಾರೆ. ಹಾಗೆಯೇ ಬಸವಣ್ಣನವರು ತಮ್ಮ ವಚನದಲ್ಲಿ ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ ಎನ್ನುತ್ತ ನೀಡುವ ನಿಜಗುಣ ಉಳ್ಳ ದಾನಿಗೆ ಕೂಡಲ ಸಂಗಮನಾಥ ಒಲಿವನು ಎಂದು ಹೇಳಿದ್ದಾರೆ ಎಂದರು.



ಬಸವಕಲ್ಯಾಣ ನಗರದ ಗವಿ ಮಠದಲ್ಲಿ ಆಯೋಜಿಸಿದ್ದ 5ನೇ ವಿಶೇಷ ಉಪನ್ಯಾಸ ಮಾಲೆಯಲ್ಲಿ ಖ್ಯಾತ ಮಕ್ಕಳ ತಜ್ಞ ಡಾ.ಜಿ.ಎಸ್. ಭೂರಾಳೆ ಮಾತನಾಡಿದರು.

ಬಿಡಿವಿಸಿ ಉಪಾಧ್ಯಕ್ಷ ಹಾಗೂ ಖ್ಯಾತ ಮಕ್ಕಳ ತಜ್ಞ ಡಾ.ಜಿ. ಎಸ್. ಭೂರಾಳೆ ಮಾತನಾಡಿ, ಅನೇಕ ವರ್ಷಗಳಿಂದ ಸಂಸ್ಥಾನ ಗವಿ ಮಠದಲ್ಲಿ ಡಾ. ಅಭಿನವ ಘನಲಿಂಗ ಗುರುಗಳು ಶ್ರಾವಣ ಮಾಸದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ಉತ್ತಮವಾದ ಉಪನ್ಯಾಸ ಕಾರ್ಯಕ್ರಮ ನಡೆಸುತ್ತಿದ್ದುದು ಸಂತೋಷದ ಸಂಗತಿ. ಪ್ರತಿ ವರ್ಷ ಆರೋಗ್ಯದ ಕುರಿತು ಪೂಜ್ಯ ಗುರುಗಳು ನನ್ನನ್ನು ಕರೆಸಿ ಆರೋಗ್ಯದ ಕುರಿತು ಉಪನ್ಯಾಸಕೊಡಿಸುತ್ತಿದ್ದು ಎಲ್ಲರೂ ಸದಾ ಶುದ್ಧವಾದ ನೀರು, ಗಾಳಿ, ಆಹಾರ ಸೇವನೆ ಮಾಡಬೇಕು. ಸತ್ಸಂಗ ಆಲಿಸುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆ ಎಂದು ಸಲಹೆ ನೀಡಿದರು.

ಎಂಜಿನಿಯರಿಂಗ್ ವಿದ್ಯಾರ್ಥಿ ಶರಣಬಸಪ್ಪ ಅಲಗುಡೆ ಪ್ರಾಸ್ತಾವಿಕವಾಗಿ ಮಾತನಾಡಿ, ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿಯು ಎಲ್ಲ ಧರ್ಮ ಸಿದ್ಧಾಂತಗಳಲ್ಲಿಯೇ ಉನ್ನತವಾದದ್ದು. ಹಾಗೆಯೇ ಶಿವಶರಣರು ರಚಿಸಿದ ವಚನ ಸಾಹಿತ್ಯವೂ ಮನುಕುಲಕ್ಕೆ ದಾರಿ ದೀಪವಾಗಿವೆ. ಹೀಗಾಗಿ ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಧರ್ಮಮಾರ್ಗ ಶ್ರಾವಣ ಉಪದೇಶಿಸುವ ಪೂಜ್ಯ ಡಾ.ಅಭಿನವ ಗುರುಗಳು ನಮಗೆ ದೊರೆತದ್ದು ನಮ್ಮ ಭಾಗ್ಯ ಎಂದರು.

ಮಂಜುನಾಥ ಸ್ವಾಮಿ ಶ್ರೀಪುರಾಂತ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಈ ವೇಳೆ ನಾರಾಯಣಪುರ ವಲಯ ಕಸಾಪ ಅಧ್ಯಕ್ಷ ಗೋವಿಂದ ರೆಡ್ಡಿ ಕೋತಪಲ್ಲೆ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ರುದ್ರೇಶ್ವರ ಗೋರ್ಟಾ ಪ್ರಾರ್ಥನಾ ಗೀತೆ ಹಾಡಿದರು. ಪ್ರಾಚಾರ್ಯ ಪ್ರೊ ಸೂರ್ಯಕಾಂತ ಶೀಲವಂತ ಸ್ವಾಗತಿಸಿದರೆ, ಶಿಕ್ಷಕ ಮಲ್ಲಿಕಾರ್ಜುನ ಅಲಗುಡೆ ನಿರೂಪಿಸಿದರು.

ಮಕ್ಕಳಿಗೆ ಸಂಸ್ಕಾರ ನೀಡುವುದು ಅವಶ್ಯ

ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀಗಳು ಹೇಳಿಕೆ

ವಿಕ ಸುದ್ದಿಲೋಕ ಬಸವಕಲ್ಯಾಣ

ಹೆಣ್ಣು ಆಬಲೆ, ಅಲ್ಲ ಸಬಲೆ ಎಲ್ಲ ರಂಗಗಳಲ್ಲಿಯೂ ಹೆಣ್ಣು ತಮ್ಮ ಸಾಮರ್ಥ್ಯದಿಂದ ಮುನ್ನುಗ್ಗುತ್ತಿದ್ದಾಳೆ ಎಂದು ಇಲ್ಲಿಯ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿಯ ಗವಿ ಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕಾ ಮಹಿಳಾ ಘಟಕ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಮಹಿಳಾ ವೇದಿಕೆ 6ನೇ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಮೂಲದಲ್ಲಿ ಹೆಣ್ಣು-ಗಂಡು ಎಂಬ ಭೇದವಿಲ್ಲ ಹೀಗಾಗಿಯೇ ಶಿವಯೋಗಿ ಸಿದ್ಧರಾಮೇಶ್ವರರು ತಮ್ಮ ವಚನದಲ್ಲಿ ಹೆಣ್ಣನ್ನು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದಿದ್ದಾರೆ. ಇಂದು ಮಹಿಳೆ ಕೇವಲ ಗೃಹಿಣಿ ಅಲ್ಲದೆ ಶಿಕ್ಷಣ, ಆಡಳಿತ, ವಿಜ್ಞಾನ, ಸೈನ್ಯ ಎಲ್ಲ ಕ್ಷೇತ್ರಗಳಲ್ಲಿ ಪುರುಷನ ಸಮಾನಳಾಗಿ ಬೆಳೆದದ್ದೇ ಇದಕ್ಕೆ ಸಾಕ್ಷಿ. ಆದರೆ ತಾಯಂದಿರು ಮಕ್ಕಳಿಗೆ ಸಂಸ್ಕಾರ ಕೊಡೋದು ಅವಶ್ಯಕ. ಸಂಸ್ಕಾರ ಪಡೆದ ಮಕ್ಕಳಿಂದ ತಾಯಿ ತಂದೆ-ಗೌರವ ಪಡೆಯಲು ಸಾಧ್ಯ ಎಂದು ಉಪದೇಶಿಸಿದರು.

ಬ್ರಹ್ಮಕುಮಾರಿಯ ಸರಸ್ವತಿ ಬಹೆನ್ ಜಿ



ಬಸವಕಲ್ಯಾಣ ಇಲ್ಲಿಯ ಗವಿ ಮಠದಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಮಹಿಳಾ ವೇದಿಕೆ 6ನೇ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಮಾತನಾಡಿ, ಹೆಣ್ಣು ಆದಿ ಶಕ್ತಿಯ ಸ್ವರೂಪ. ಶಿವ ಮತ್ತು ಶಕ್ತಿಯ ಸಂಗಮ. ಆದರೆ ಹೆಣ್ಣಿಗೆ ಇಂದು ಸುರಕ್ಷತೆ ಇಲ್ಲದಂತಾದದ್ದು ದುರ್ದೈವದ ಸಂಗತಿ ಎಂದು ಖೇದ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಶ್ರೀಗುರು ಮಹಾಲಿಂಗೇಶ್ವರ ಶಾಲೆಯ ಅಧ್ಯಕ್ಷೆ ಸವಿತಾ ಸ್ವಾಮಿ, ರೇಖಾ ಮಂಠಾಳೆ ಉಪಸ್ಥಿತರಿದ್ದರು. ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ ಅಧ್ಯಕ್ಷತೆ ವಹಿಸಿದ್ದರು.

ಸಾಮೂಹಿಕ ಬೆಳದಿಂಗಳ ಪ್ರಸಾದ: ಮಹಿಳಾ ಭಕ್ತರು ಮನೆಯಲ್ಲಿ ಸಿದ್ಧಪಡಿಸಿ ತಂದಿದ್ದ ಪ್ರಸಾದವನ್ನು ಪೂಜ್ಯ ಡಾ. ಅಭಿನವ ಘನಲಿಂಗ ಗುರುಗಳು 150 ಕ್ಕೂ ಹೆಚ್ಚು ಭಕ್ತರ ಜೊತೆ ಸೇರಿ ಸಾಮೂಹಿಕವಾಗಿ ಪ್ರಸಾದ ಸ್ವೀಕರಿಸಿದ್ದು ವಿಶೇಷವಾಗಿತ್ತು.

ನಗರದ ರಾಷ್ಟ್ರಕವಿ ಕುವೆಂಪು ಶಾಲೆಯ ಮಕ್ಕಳು ಪ್ರದರ್ಶಿಸಿದ ಹರ ಹರ ಶಂಭೋ ಹಾಗೂ ಶಿವ ತಾಂಡವ ನೃತ್ಯಗಳು ನೆರೆದ ಜನರ ಗಮನ ಸೆಳೆದವು. ಶ್ರೇಯಾ ಮಠಪತಿ ಪ್ರಾರ್ಥನಾ ಗೀತೆ ಹಾಡಿದರು. ಸಂಸ್ಥೆ ಮಹಿಳಾ ಘಟಕದ ಕಾರ್ಯದರ್ಶಿ ಸರಸ್ವತಿ ಬೆಂಬಳಿ ಸ್ವಾಗತಿಸಿದರು. ಡಾ. ಶಿವಲೀಲಾ ಮಠಪತಿ ನಿರೂಪಿಸಿದರು. ಪ್ರೊ.ರುದ್ರೇಶ್ವರ ಗೋರ್ಟಾ ಭಕ್ತಿ ಗೀತೆ ಹಾಡಿದರು.

ಈ ವೇಳೆ ಸಂಸ್ಥಾನ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಕಾರ್ಯದರ್ಶಿ ರಾಕೇಶ ಪುರವಂತ, ಪ್ರಾಚಾರ್ಯ ಎ. ಜಿ. ಪಾಟೀಲ, ಮಲ್ಲಿಕಾರ್ಜುನ ಅಲಶೆಟ್ಟಿ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ನಿವೃತ್ತ ಪ್ರಾಚಾರ್ಯ ದಯಾನಂದ ಶೀಲವಂತ, ಮುಖ್ಯ ಶಿಕ್ಷಕ ರವೀಂದ್ರ ಬಿರಾದಾರ, ರಮೇಶ ರಾಜೋಳೆ, ವಿಜಯಲಕ್ಷ್ಮಿ ರಾಜೋಳೆ, ವಿದ್ಯಾರಾಣಿ ಬಿರಾದಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ವಿಜಯ ಕರ್ನಾಟಕ ನಮ್ಮ ಬೀದರ್ ಭಾನುವಾರ,25 ಆಗಸ್ಟ್ 2024

Scanned with OKEN Scanner

www.vijaykarnataka.com ನಮ್ಮ ಬೀದರ್ ವಿಜಯ ಕರ್ನಾಟಕ
ಗುರುವಾರ, 22 ಆಗಸ್ಟ್ 2024,ಕಲಬುರಗಿ

ಜೀವನ ಪಾವನ

,ಲಕ್ಷ ಬಿಲ್ವಾರ್ಚನೆ । ಬಿಲ್ವಪತ್ರೆಯಿಂದ ಆರೋಗ್ಯ ವೃದ್ಧಿ

ಸೃಷ್ಟಿ ಕರ್ತನಾದ ದೇವರು ಮೂಲದಲ್ಲಿ ಒಬ್ಬನೇ

■ ವಿಕ ಸುದ್ದಿಲೋಕ ಬಸವಕಲ್ಯಾಣ



ಬಸವಕಲ್ಯಾಣದ ಗವಿ ಮಠದಲ್ಲಿ ಆಯೋಜಿಸಿದ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಕನ್ನಡ ಯುವ ಗಾಯಕಿ ಸಾಕ್ಷಿ ರೇವಣಸಿದ್ಧಯ್ಯ ಹಿರೇಮಠ ದಂಪತಿಗಳನ್ನು ಡಾ. ಅಭಿನವ ಶ್ರೀಗಳು ಸನ್ಮಾನಿಸಿದರು.

ಸೃಷ್ಟಿ ಕರ್ತನಾದ ದೇವರು ಮೂಲದಲ್ಲಿ ಒಬ್ಬನೇ, ಆವನೇ ಶಿವನು. ಆ ಶಿವನು ನಿರಾಕಾರನು, ನಿರ್ಗುಣನು, ನಿಶ್ಚಪಂಚಕನು ಎಂದು ಸಿದ್ಧಾಂತ ಶಿಖಾಮಣಿ ಮೂಲಕ ಜಗದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಮನುಕುಲಕ್ಕೆ ಬೋಧಿಸಿದ್ದಾರೆ ಎಂದು ಇಲ್ಲಿಯ ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಶ್ರಾವಣ ಮಾಸದ ನಿಮಿತ್ತ ನಗರದ ಗವಿ ಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕದ ಸಹಯೋಗದಲ್ಲಿ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ನಡೆದ ಮಹಿಳಾ ವೇದಿಕೆ 4ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಜಗದ ಒಡೆಯನಾದ ಆ ಪರಮಾತ್ಮನನ್ನು ಜಗಜ್ಯೋತಿ ಮಹಾತ್ಮ ಬಸವೇಶ್ವರರು ಜಗದಗಲ, ಮುಗಿಲಗಲ, ಮಿಗೆಯಗಲ, ನಿಮ್ಮಗಲ, ಪಾತಾಳದಿಂದತ್ತ ನಿಮ್ಮ ಶ್ರೀ ಚರಣ, ಬ್ರಹ್ಮಾಂಡದಿಂದ ತ್ತತ್ತ ನಿಮ್ಮ ಶ್ರೀಮುಕುಟ, ಅಗಮ್ಯ, ಅಗೋಚರ, ಆಪ್ರತಿಮ ಲಿಂಗವೇ ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯ ಕೂಡಲ ಸಂಗಮದೇವ ಎಂದು ತಮ್ಮ ವಚನದ ಮೂಲಕ ಕೊಂಡಾಡಿದ್ದಾರೆ ಎಂದು ಹೇಳಿದರು.

ಬೀದರ್ ಬಿವಿಬಿ ಪದವಿ ಕಾಲೇಜಿನ ಪ್ರಾಧ್ಯಾಪಕ ಡಾ. ಶಿವಲೀಲಾ ಮಠಪತಿ ಉಪನ್ಯಾಸ ನೀಡಿ, ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಸನ್ಮಾರ್ಗತೋರುವ ಮಹತ್ವದ ಸಾಹಿತ್ಯಗಳಾಗಿವೆ. ಶ್ರಾವಣ ನಮಗೆಲ್ಲ ಪವಿತ್ರ ಮಾಸ. ಗುರುವಿನ ಉಪದೇಶ ಶ್ರವಣ ಮಾಡುವುದೇ ಶ್ರಾವಣಮಾಸ ಎಂದರು.

ನಿವೃತ್ತ ಶಿಕ್ಷಕಿ ಅಂಜನಾ ಮೂಲಗೆ ಅಧ್ಯಕ್ಷತೆ ವಹಿಸಿ ಮಾತನಾಡಿ, ದೇವರಲ್ಲಿಯ ಅಚಲವಾದ ಭಕ್ತಿಯು ನಿಜವಾದ ಭಕ್ತಿಯಾಗಿದ್ದು ಅಚಲವಾದ ಭಕ್ತಿಯಿಂದ ಪೂಜಿಸಿದಾಗ ಮಾತ್ರ ದೇವರ ಕೃಪೆ ಪಡೆಯಲು ಸಾಧ್ಯ. ಆ ಅಚಲವಾದ ಭಕ್ತಿ ಇಂಥಾ ಪೂಜ್ಯ ಗುರುಗಳ ಉಪದೇಶದಿಂದ ಪಡೆಯಲು ಸಾಧ್ಯ ಎಂದು ತಿಳಿಸಿದರು.

ವೇದಿಕೆಯಲ್ಲಿ ನಗರದ ಅಕ್ಕಮಹಾದೇವಿ ಶಾಲೆಯ ಅಧ್ಯಕ್ಷೆ ಕೀರ್ತಿಲತಾ ಅಗ್ರೆ ಹಾಗೂ ಉಮಾದೇವಿ ಶಂಕರಗುಡಿ, ಸಂಸ್ಥಾನ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆಯ ಸಂಘಟನಾ ಕಾರ್ಯದರ್ಶಿ ರಮೇಶ ರಾಜೋಳೆ, ಸಂಸ್ಥೆಯ ಕಾರ್ಯದರ್ಶಿ ರಾಕೇಶ ಪುರವಂತ, ಪ್ರಾಚಾರ್ಯ ಎ. ಜಿ. ಪಾಟೀಲ, ರಾಮಚಂದ್ರಪ್ಪ ಹುಡುಗೆ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ನಿವೃತ್ತ ಪ್ರಾಚಾರ್ಯ ದಯಾನಂದ ಶೀಲವಂತ, ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ಕಸಾಪ ತಾಲೂಕು ಅಧ್ಯಕ್ಷ ಪ್ರೊ.ಶಾಂತಲಿಂಗ ಮಠಪತಿ, ಮಲ್ಲಿಕಾರ್ಜುನ ಹೊಳಕುಂದೆ, ನಾರಾಯಣಪುರ ವಲಯ ಕಸಾಪ ಅಧ್ಯಕ್ಷ ಗೋವಿಂದ ರೆಡ್ಡಿ ಕೋತಾಪಲ್ಲೆ, ಪ್ರೊ. ರುದ್ರೇಶ್ವರ ಗೋರ್ಟಾ ಸೇರಿ ಇತರರಿದ್ದರು.

ಕನ್ನಡ ಯುವ ಗಾಯಕಿ ಸಾಕ್ಷಿ ರೇವಣಸಿದ್ಧಯ್ಯ ಹಿರೇಮಠ ದಂಪತಿಗಳನ್ನು ಡಾ.ಅಭಿನವ ಶ್ರೀಗಳು ಸನ್ಮಾನಿಸಿ ಅಭಿನಂದಿಸಿದರು. ಮಹಾನಂದಾ ಪುರವಂತ ಹಾಗೂ ಜ್ಯೋತಿ ಪುರವಂತ ಪ್ರಾರ್ಥನಾ ಗೀತೆ ಹಾಡಿದರು. ಕಲ್ಪನಾ ಶೀಲವಂತ ಸ್ವಾಗತಿಸಿದರು. ನಿವೃತ್ತ ಶಿಕ್ಷಕಿ ಸರಸ್ವತಿ ಬೆಂಬಳಿ ನಿರೂಪಿಸಿದರು.

ಎಲ್ಲ ಕ್ಷೇತ್ರದಲ್ಲೂ ಮಹಿಳೆ ಸಾಧನೆ: ಶ್ರೀ



ಬಸವಕಲ್ಯಾಣ: ಗವಿ ಮಠದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

■ ಉದಯವಾಣಿ ಸಮಾಚಾರ

ಬಸವಕಲ್ಯಾಣ: ಹೆಣ್ಣು ಅಬಲೆ ಅಲ್ಲ ಸಬಲೆ. ಎಲ್ಲ ರಂಗಗಳಲ್ಲಿಯೂ ಸ್ವ ಸಾಮರ್ಥ್ಯದಿಂದ ಮುನ್ನುಗ್ಗುವ ಮೂಲಕ ಸಾಧನೆ ಮಾಡುತ್ತಿದ್ದಾಳೆ ಎಂದು ಗವಿಮಠದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು:

ಇಲ್ಲಿಯ ಗವಿಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಮಹಿಳಾ ಘಟಕ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಮಹಿಳಾ ವೇದಿಕೆ 6ನೇ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಶಿವಯೋಗಿ ಸಿದ್ಧರಾಮೇಶ್ವರರು ತಮ್ಮ ವಚನದಲ್ಲಿ ಹೆಣ್ಣನ್ನು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದಿದ್ದಾರೆ. ಇಂದು ಮಹಿಳೆ ಕೇವಲ ಗೃಹಿಣಿ ಮಾತ್ರವಲ್ಲದೇ ಶಿಕ್ಷಣ, ಆಡಳಿತ, ವಿಜ್ಞಾನ, ಸೈನ್ಯ ಎಲ್ಲ ಕ್ಷೇತ್ರಗಳಲ್ಲೂ ಪುರುಷನ ಸಮಾನಳಾಗಿ ಬೆಳೆದದ್ದೇ ಇದಕ್ಕೆ ಸಾಕ್ಷಿ. ಆದರೆ ತಾಯಂದಿರು ಮಕ್ಕಳಿಗೆ ಸಂಸ್ಕಾರ ಕೊಡುವುದು ಅವಶ್ಯ. ಸಂಸ್ಕಾರ ಪಡೆದ ಮಕ್ಕಳಿಂದ ತಾಯಿ-ತಂದೆ ಗೌರವ ಪಡೆಯಲು ಸಾಧ್ಯ ಎಂದರು.

ಬ್ರಹ್ಮಕುಮಾರಿ ಸರಸ್ವತಿ ಬಹೆನ್ ಜಿ. ಮುಖ್ಯ ಅತಿಥಿಯಾಗಿ ಮಾತನಾಡಿದರು. ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ ಅಧ್ಯಕ್ಷತೆ ವಹಿಸಿದ್ದರು.

ಬೆಳದಿಂಗಳ ಪ್ರಸಾದ: ಮಹಿಳಾ ಭಕ್ತರು ಮನೆಯಲ್ಲಿ ಸಿದ್ಧಪಡಿಸಿ ತಂದಿದ್ದ ಪ್ರಸಾದವನ್ನು ಪೂಜ್ಯ ಡಾ। ಅಭಿನವ ಘನಲಿಂಗ ಗುರುಗಳು 150ಕ್ಕೂ ಹೆಚ್ಚು ಭಕ್ತರ ಜೊತೆ ಸೇರಿ ಸಾಮೂಹಿಕವಾಗಿ ಪ್ರಸಾದ ಸ್ವೀಕರಿಸಿದರು.

ಈ ವೇಳೆ ಶ್ರೀ ಗುರು ಮಹಾಲಿಂಗೇಶ್ವರ ಶಾಲೆ ಅಧ್ಯಕ್ಷೆ ಸವಿತಾ ಸ್ವಾಮಿ, ರೇಖಾ ಮಂಠಾಳೆ, ಸಂಸ್ಥಾನ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಕಾರ್ಯದರ್ಶಿ ರಾಕೇಶ ಪುರವಂತ, ಪ್ರಾಚಾರ್ಯ ಎ.ಜಿ. ಪಾಟೀಲ, ಮಲ್ಲಿಕಾರ್ಜುನ ಅಲಶೆಟ್ಟಿ, ಕೃಷಿ ನಿವೃತ್ತ ಅಧಿಕಾರಿ ಬಸವಂತಪ್ಪ ಲವಾರೆ, ನಿವೃತ್ತ ಪ್ರಾಚಾರ್ಯ ದಯಾನಂದ ಶೀಲವಂತ, ಮುಖ್ಯ ಶಿಕ್ಷಕ ರವೀಂದ್ರ ಬಿರಾದಾರ, ರಮೇಶ ರಾಜೋಳೆ, ವಿಜಯಲಕ್ಷ್ಮೀ ರಾಜೋಳೆ, ವಿದ್ಯಾರಾಣಿ ಬಿರಾದಾರ ಇತರರಿದ್ದರು.

ಸಂಸ್ಥೆ ಮಹಿಳಾ ಘಟಕದ ಕಾರ್ಯದರ್ಶಿ ಸರಸ್ವತಿ ಬೆಂಬಳಿ ಸ್ವಾಗತಿಸಿದರು. ಡಾ। ಶಿವಲೀಲಾ ಮಠಪತಿ ನಿರೂಪಿಸಿದರು. ಪ್ರೊ। ರುದ್ರೇಶ್ವರ ಗೋರ್ಟಾ ಭಕ್ತಿ ಗೀತೆ ಹಾಡಿದರು.

ಕಲಬುರಗಿ ಉದಯವಾಣಿ
ಶನಿವಾರ, ಆಗಸ್ಟ್ 24, 2024

ಭಗವಂತನ ಕೃಪೆಗೆ ಭಕ್ತಿಭಾವ ಅವಶ್ಯಕ



ವಿಜಯವಾಣಿ ಚಿತ್ರ

ಬಸವಕಲ್ಯಾಣ ಗವಿಮಠದಲ್ಲಿ ಏರ್ಪಡಿಸಿದ್ದ 2ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಮಾತನಾಡಿದರು. ನಾಗನಾಥ ಚಾಮಲೆ, ಮುರುಗಯ್ಯ ವಸ್ತದ ಇದ್ದರು.

ಬಸವಕಲ್ಯಾಣ: ಭಕ್ತನಲ್ಲಿ ಭಕ್ತಿಭಾವ ಇದ್ದಾಗಲೇ ಭಗವಂತನನ್ನು ಪೂಜಿಸಿ ಕೃಪೆ ಪಡೆಯಲು ಸಾಧ್ಯ ಎಂದು ಸಿದ್ಧಾಂತ ಶಿಖಾಮಣಿ ಮೂಲಕ ಜಗದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಉಪದೇಶಿಸಿದ್ದಾರೆ. ಅದೇ ರೀತಿ ಭಕ್ತಿಯಿಂದ ದೇವರನ್ನು ಒಲಿಸಿಕೊಳ್ಳಲು ಸಾಧ್ಯ ಎಂಬುದನ್ನು ಶಿವಶರಣರೂ ತಮ್ಮ ವಚನಗಳಲ್ಲಿ ಉಲ್ಲೇಖಿಸಿದ್ದಾರೆ ಎಂದು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನುಡಿದರು. ಶ್ರಾವಣ ಮಾಸ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಗುರುವಾರ ಸಂಜೆ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಸಹಯೋಗದಡಿ ಏರ್ಪಡಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ 2ನೇ ವಿಶೇಷ ಉಪನ್ಯಾಸ ಮಾಲೆಯಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ಭಕ್ತಿ ಎಂಬ ಭಾವದಿಂದ ಮಾತ್ರ ಮನುಷ್ಯ ಭಗವಂತನ ಕೃಪೆಗೆ ಪಾತ್ರನಾಗಲು ಸಾಧ್ಯ ಎಂದರು. ನಗರಸಭೆ ಮಾಜಿ ಸದಸ್ಯ ನಾಗನಾಥ ಚಾಮಲೆ ಮಾತನಾಡಿದರು. ನಿವೃತ್ತ ಎಇಇ ಮುರುಗಯ್ಯ ವಸ್ತದ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಅಧ್ಯಕ್ಷ ಡಾ.ಬಸವರಾಜ ಸ್ವಾಮಿ, ರಾಕೇಶ ಪುರವಂತ, ಮಲ್ಲಿಕಾರ್ಜುನ ಅಲಶೆಟ್ಟಿ, ಎ.ಜಿ. ಪಾಟೀಲ್, ದಯಾನಂದ ಶೀಲವಂತ, ಮಲ್ಲಿಕಾರ್ಜುನ ಅಲಗುಡೆ, ಪ್ರೊ.ವಿ.ಎಸ್. ರಾಜೋಳೆ, ಪ್ರೊ.ಶಾಂತಲಿಂಗ ಮಠಪತಿ, ಕಲ್ಪನಾ ಶೀಲವಂತ, ಗಂಗಮ್ಮ ಮಠಪತಿ, ಸರಸ್ವತಿ ಬೆಂಬಳಿ, ಶೀಲಾದೇವಿ ಇದ್ದರು. ಬಸವಂತಪ್ಪ ಲವಾರೆ ಸ್ವಾಗತಿಸಿದರು. ಪ್ರೊ.ರುದ್ರೇಶ್ವರ ಗೋರ್ಟಾ ನಿರೂಪಣೆ ಮಾಡಿದರು. ಶರಣಬಸಪ್ಪ ಅಲಗುಡೆ ಪ್ರಾರ್ಥನಾಗೀತೆ ಹಾಡಿದರು.

ನಂ1 ವಿಜಯವಾಣಿ
ಸೋಮವಾರ 12 ಆಗಸ್ಟ್ 2024
» 12 AUGUST 2024

Scanned with OKEN Scanner

ಅಭಿನವ ಶ್ರೀ ನುಡಿ । ಸಂಸ್ಥಾನ ಗವಿಮಠದಲ್ಲಿ 6ನೇ ವಿಶೇಷ ಉಪನ್ಯಾಸ ಮಾಲೆ

ಮಕ್ಕಳಿಗೆ ನೀಡಬೇಕಿದೆ ಉತ್ತಮ ಸಂಸ್ಕಾರ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ತಾಂತ್ರಿಕ ಪ್ರಗತಿಯಲ್ಲೇ ಸಮಾಜದ ವಿಕಾಸ ಅಡಗಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಜತೆಗೆ ಮನೆಯಲ್ಲಿ ಸಂಸ್ಕಾರ ಕೊಡುವುದು ಬಹಳ ಮುಖ್ಯವಾಗಿದೆ ಎಂದು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಹೇಳಿದರು.

ಶ್ರಾವಣ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಗುರುವಾರ ಸಂಜೆ ಏರ್ಪಡಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ 6ನೇ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, ಮಹಿಳೆ ಅಬಲೆಯಲ್ಲ. ಸಬಲೆ. ಶಿಕ್ಷಣ, ಆಡಳಿತ, ವಿಜ್ಞಾನ, ತಂತ್ರಜ್ಞಾನ, ಸೈನ್ಯ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮೂಲಕ ಮಹಿಳೆ ಪುರುಷನ ಸಮಾನಳಾಗಿ ಬೆಳೆದಿದ್ದೇ ಇದಕ್ಕೆ ಸಾಕ್ಷಿ. ಶ್ರೀ ಶಿವಯೋಗಿ ಸಿದ್ಧರಾಮೇಶ್ವರರು ತಮ್ಮ ವಚನದಲ್ಲಿ ಹೆಣ್ಣನ್ನು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದಿದ್ದಾರೆ ಎಂದರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗಿನಿ ಬಿಕೆ ಸರಸ್ವತಿ ಬಹೇನ್‌ಜಿ ಮಾತನಾಡಿ, ಹೆಣ್ಣು ಆದಿ ಶಕ್ತಿಯ ಸ್ವರೂಪ. ಶಿವ ಮತ್ತು ಶಕ್ತಿಯ ಸಂಗಮ. ಆದರೆ ಹೆಣ್ಣಿಗೆ ಇಂದು ಸುರಕ್ಷತೆ ಇಲ್ಲದಂತಾದದ್ದು ದುರ್ದೈವ ಎಂದು ಕಳವಳ ವ್ಯಕ್ತಪಡಿಸಿದರು. ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ ಅಧ್ಯಕ್ಷತೆ ವಹಿಸಿದ್ದರು. ಶ್ರೀಗುರು ಮಹಾಲಿಂಗೇಶ್ವರ ಶಾಲೆ ಅಧ್ಯಕ್ಷೆ ಸವಿತಾ ಸ್ವಾಮಿ, ರೇಖಾ ಮಂಠಾಳೆ, ಸಂಸ್ಥಾನ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಕಾರ್ಯದರ್ಶಿ ರಾಕೇಶ ಪುರವಂತ, ಪ್ರಾಚಾರ್ಯ ಎ.ಜಿ. ಪಾಟೀಲ್, ಮಲ್ಲಿಕಾರ್ಜುನ ಅಲಶೆಟ್ಟಿ, ಬಸವಂತಪ್ಪ ಲವಾರೆ, ದಯಾನಂದ ಶೀಲವಂತ, ರವೀಂದ್ರ ಬಿರಾದಾರ, ರಮೇಶ ರಾಜೋಳೆ, ವಿಜಯಲಕ್ಷ್ಮೀ ರಾಜೋಳೆ, ವಿದ್ಯಾರಾಣಿ ಬಿರಾದಾರ ಉಪಸ್ಥಿತರಿದ್ದರು. ಸರಸ್ವತಿ ಬೆಂಬಳಿ ಸ್ವಾಗತಿಸಿದರು. ಡಾ.ಶಿವಲೀಲಾ ಮಠಪತಿ ನಿರೂಪಣೆ ಮಾಡಿದರು. ಪ್ರೊ.ರುದ್ರೇಶ್ವರ ಗೋರ್ಟಾ ಭಕ್ತಿಗೀತೆ, ಶ್ರೇಯಾ ಮಠಪತಿ ಪ್ರಾರ್ಥನಾಗೀತೆ ಹಾಡಿದರು. ರಾಷ್ಟ್ರಕವಿ ಕವಿ ಕುವೆಂಪು ಶಾಲೆ ಮಕ್ಕಳು ಪ್ರದರ್ಶಿಸಿದ ಹರ ಹರ ಶಂಭೋ ಹಾಗೂ ಶಿವ ತಾಂಡವ ನೃತ್ಯ ಗಮನ ಸೆಳೆಯಿತು. ನಂತರ ಮಹಿಳಾ ಭಕ್ತರು ಮನೆಯಿಂದ ತಂದಿದ್ದ ಪ್ರಸಾದವನ್ನು ಪೂಜ್ಯ ಡಾ.ಅಭಿನವ ಘನಲಿಂಗ ಗುರುಗಳು ಭಕ್ತರ ಜತೆ ಸ್ವೀಕರಿಸಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ಗವಿಮಠದಲ್ಲಿ ಗುರುವಾರ ಸಂಜೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರಾಜಯೋಗಿನಿ ಬಿಕೆ ಸರಸ್ವತಿ ಬಹೇನ್‌ಜಿ ಅವರನ್ನು ಗೌರವಿಸಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಕಲ್ಪನಾ ಶೀಲವಂತ, ಸವಿತಾ ಸ್ವಾಮಿ, ರೇಖಾ ಮಂಠಾಳೆ ಇದ್ದರು.

ಪ್ರೊ.ರುದ್ರೇಶ್ವರ ಗೋರ್ಟಾ ಅಭಿಮತ । ಸಂಸ್ಥಾನ ಗವಿಮಠದಲ್ಲಿ ವಿಶೇಷ ಉಪನ್ಯಾಸ ಮಾಲೆ

ವಚನ ಸಾಹಿತ್ಯ ಅಳವಡಿಸಿಕೊಂಡರೆ ಜೀವನ ಸಾರ್ಥಕ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಸರಿಯಾಗಿ ಅರಿತು ಜೀವನದಲ್ಲಿ ಅಳವಡಿಸಿಕೊಂಡರೆ ಬದುಕಿನಲ್ಲಿ ಸಾರ್ಥಕತೆ ಕಾಣಲು ಸಾಧ್ಯ ಎಂದು ಪ್ರೊ. ರುದ್ರೇಶ್ವರ ಗೋರ್ಟಾ ಹೇಳಿದರು.

ಶ್ರಾವಣ ಮಾಸಜ ನಿಮಿತ್ತ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಸಂಸ್ಥಾನ ಗವಿಮಠದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ 8ನೇ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ವಿಕಾಸ ಅಕಾಡೆಮಿ ತಾಲೂಕು ಸಂಚಾಲಕ ಲೋಕೇಶ ಮೋಳಕೆರೆ ಮಾತನಾಡಿ, ಗವಿಮಠದ ಪೂಜ್ಯ ಅಭಿನವ ಶ್ರೀಗಳ ಸಮಾಜಮುಖಿ ಕಾರ್ಯ ಮತ್ತು ಮಾರ್ಗದರ್ಶನವೇ ನನಗೆ ಸಮಾಜ ಸೇವಾ ಕಾರ್ಯಗಳಿಗೆ ಪ್ರೇರಣೆಯಾಗಿದೆ. ಶ್ರೀಗಳು ಹಿಂದೆ ತಮ್ಮ ಜನ್ಮ ದಿನವನ್ನು ಚಟಗಳ ವಿರುದ್ಧ ಯುವಕರಲ್ಲಿ ಜಾಗೃತಿ ಮೂಡಿಸುವ ಅಭಿಯಾನದ ಮೂಲಕ ಆಚರಿಸಿಕೊಂಡಿದ್ದರು. ಈಗ 27ರಂದು ಜನ್ಮ ದಿನದ ನಿಮಿತ್ತ ಪ್ಲಾಸ್ಟಿಕ್ ಮುಕ್ತ ಜೀವನ ಸಂದೇಶದೊಂದಿಗೆ ಪಾದಯಾತ್ರೆ ನಡೆಸಲಿದ್ದಾರೆ. ಈ ಮಹತ್ವದ ಕಾರ್ಯಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ, ಶರೀರದ ಎಲ್ಲ ಅಂಗಾಂಗಗಳ ಕ್ರಿಯೆಗೆ ಪ್ರಾಣವೇ ಮೂಲ. ಈ ಮೂಲ ಪ್ರಾಣಕ್ಕೆ ಶಿವನೇ ಆಧಾರನು. ಹೀಗಾಗಿ ಈ ಮೂಲಕ್ಕೆ ಪ್ರಾಣಲಿಂಗ ಎಂದು ಕರೆಯಲಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಸಂಘಟನಾ ಕಾರ್ಯದರ್ಶಿ ರಮೇಶ ರಾಜೋಳೆ ಮಾತನಾಡಿದರು.

ಸಂಸ್ಥಾನ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಕಾರ್ಯದರ್ಶಿ ರಾಕೇಶ ಪುರವಂತ, ಮಲ್ಲಿಕಾರ್ಜುನ ಅಲಶೆಟ್ಟಿ, ಪ್ರಾಚಾರ್ಯ ಎ.ಜಿ. ಪಾಟೀಲ್, ಗೋವಿಂದರೆಡ್ಡಿ ಕೋತಾಪಲ್ಲೆ, ಶಿಕ್ಷಕ ಮಲ್ಲಿಕಾರ್ಜುನ ಅಲಗುಡೆ, ವೀರೇಶ ಗಡೇದಾರ, ಕಲಾವತಿ ಗಡೇದಾರ, ಸಂಗೀತಾ ಬಿರಾದಾರ, ವನಿತಾ ಬಿರಾದಾರ, ರೇಖಾಚಿಟ್ಟೆ, ಮಹಾನಂದಾ ಪುರವಂತ, ಜ್ಯೋತಿ, ಪುರವಂತ, ಪೂರ್ಣಿಮಾ ಸ್ವಾಮಿ ಇತರರಿದ್ದರು.

ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಸ್ವಾಗತಿಸಿದರು. ಕುಮಾರಿ ಆರಾಧ್ಯ ಪುರವಂತ ಹಾಗೂ ಪ್ರಗತಿ ಹುಡಗಿ ಪ್ರಾರ್ಥನಾ ಗೀತೆ ಹಾಡಿದರು. ವಿದ್ಯಾರ್ಥಿ ಶರಣಬಸಪ್ಪ ಅಲಗುಡೆ ಮಂಗಳಾರುತಿ ಹಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಸಂಸ್ಥಾನ ಗವಿಮಠದಲ್ಲಿ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ 8ನೇ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಲೋಕೇಶ ಮೋಳಕೆರೆ, ಪ್ರೊ.ರುದ್ರೇಶ್ವರ ಗೋರ್ಟಾ, ರಮೇಶ ರಾಜೋಳೆ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 3 ಸೆಪ್ಟೆಂಬರ್ 2024
3 SEPTEMBER 2024

Scanned with OKEN Scanner

ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ-ವಚನ ಸಾಹಿತ್ಯ ಉಪನ್ಯಾಸ ಮಾಲೆ

ಭಕ್ತಿಯಿಂದ ಭಗವಂತನ ಕೃಪೆ ಸಾಧ್ಯ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಭಕ್ತಿ ಎಂಬ ಭಾವದಿಂದ ಮಾತ್ರ ಮನುಷ್ಯ ಭಗವಂತನ ಕೃಪೆಗೆ ಪಾತ್ರನಾಗಲು ಸಾಧ್ಯವಾಗುತ್ತದೆ ಎಂದು ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಶ್ರಾವಣ ಮಾಸ ನಿಮಿತ್ತ ಇಲ್ಲಿಯ ಗವಿಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕದ ಸಹಯೋಗದಲ್ಲಿ ಗುರುವಾರ ಸಂಜೆ ಹಮ್ಮಿಕೊಂಡ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ 2ನೇ ವಿಶೇಷ ಉಪನ್ಯಾಸ ಮಾಲೆ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಭಕ್ತನಲ್ಲಿ ಭಕ್ತಿಯ ಭಾವ ಇದ್ದಾಗ ಮಾತ್ರ ಭಗವಂತನನ್ನು ಪೂಜಿಸಿ ಕೃಪೆ ಪಡೆಯಲು ಸಾಧ್ಯ ಎಂದು ಸಿದ್ಧಾಂತ ಶಿಖಾಮಣಿ ಮೂಲಕ ಜಗದ್ಗುರು ರೇಣುಕಾಚಾರ್ಯರು ಉಪದೇಶಿಸಿದ್ದಾರೆ. ಅದೇ ರೀತಿ ಶಿವಶರಣರೂ ಕೂಡ ತಮ್ಮ ವಚನಗಳ ಮೂಲಕ ಭಕ್ತಿಯಿಂದ ದೇವರನ್ನು



ಬಸವಕಲ್ಯಾಣ ಶ್ರಾವಣ ಮಾಸ ನಿಮಿತ್ತ ಗವಿಮಠದಲ್ಲಿ ಹಮ್ಮಿಕೊಂಡ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ 2ನೇ ವಿಶೇಷ ಉಪನ್ಯಾಸ ಮಾಲೆ ಸಾನ್ನಿಧ್ಯ ವಹಿಸಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಒಲಿಸಿಕೊಳ್ಳಲು ಸಾಧ್ಯ ಎಂದು ಉಲ್ಲೇಖಿಸಿದ್ದಾರೆ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿ ನಿವೃತ್ತ ಎಇಇ ಮುರುಗಯ್ಯ ವಸ್ತದ ಮಾತನಾಡಿ, ಎಂದಿನಂತೆ ಮುಂದೆಯೂ ಸಂಸ್ಥಾನ ಗವಿಮಠ ಹಾಗೂ ಪೂಜ್ಯ ಗುರುಗಳ ಸೇವೆ ಸಲ್ಲಿಸುತ್ತಿರುವೆ ಎಂದು ಹೇಳಿದರು. ಶರಣಬಸಪ್ಪ ಅಲಗುಡೆ ಪ್ರಾರ್ಥನಾ ಗೀತೆ ಹಾಡಿದರು. ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲಾವರೆ ಸ್ವಾಗತಿಸಿದರೆ, ಪ್ರೊ. ರುದ್ರೇಶ್ವರ ಗೋರ್ಟಾ ನಿರೂಪಿಸಿದರು. ಟ್ರಸ್ಟಿನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆಯ ಅಧ್ಯಕ್ಷ ಡಾ. ಬಸವರಾಜ ಸ್ವಾಮಿ, ಸಂಸ್ಥೆ ಕಾರ್ಯದರ್ಶಿ ರಾಕೇಶ ಪುರವಂತ, ಮಲ್ಲಿಕಾರ್ಜುನ ಅಲಶೆಟ್ಟಿ ಪ್ರಾಚಾರ್ಯ ಎ. ಜಿ. ಪಾಟೀಲ, ನಿವೃತ್ತ ಪ್ರಾಚಾರ್ಯ ದಯಾನಂದ ಶೀಲವಂತ, ಶಿಕ್ಷಕ ಮಲ್ಲಿಕಾರ್ಜುನ ಅಲಗುಡೆ, ನಿವೃತ್ತ ಶಿಕ್ಷಕ ಬಸವಣಪ್ಪ ನೆಲೋಗಿ, ಸಾಹಿತಿ ವೀರಶೆಟ್ಟಿ ಎಂ. ಪಾಟೀಲ, ಪ್ರೊ. ವಿ. ಎಸ್. ರಾಜೋಳೆ, ಪ್ರೊ.ಶಾಂತಲಿಂಗ ಮಠಪತಿ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲ ವಂತ, ಗಂಗಮ್ಮ ಮಠಪತಿ, ಶಿಕ್ಷಕಿ ಸರಸ್ವತಿ ಬೆಂಬಳಿ, ಶೀಲಾದೇವಿ ಲಾವರೆ, ಪಾರ್ವತಿ ರೋಜೆ, ರೇಖಾ ಚಟ್ಟೆ ಮಹಾನಂದಾ ಪುರವಂತ, ಜ್ಯೋತಿ ಪುರವಂತ, ಪೂರ್ಣಿಮಾ ಸ್ವಾಮಿ ಇದ್ದರು.

ಗವಿಮಠದ ಸೇವೆಗೆ ಸದಾ ಸಿದ್ಧ

ನಗರ ಸಭೆಯ ಮಾಜಿ ಸದಸ್ಯ ನಾಗನಾಥ ಚಾಮಲೆ ಮಾತನಾಡಿ, ಇಲ್ಲಿಯ ಗವಿ ಮಠವು ಈ ಭಾಗದಲ್ಲಿ ಮಾನವ ಧರ್ಮ ಸಾರುವ ಏಕೈಕ ಮಠವಾಗಿದೆ. ನಮ್ಮ ಕಣ್ಣೆದುರಿನಲ್ಲಿಯೇ ಪೂಜ್ಯ ಡಾ. ಅಭಿನವ ಶ್ರೀಗಳು ಭಕ್ತರ ಧನ ಸೇವೆಯಿಂದ ಅಭಿವೃದ್ಧಿ ಪಡಿಸಿದ್ದು ದೊಡ್ಡ ಸಾಧನೆಯಾಗಿದೆ. ಹೀಗಾಗಿ ಸಂಸ್ಥಾನ ಗವಿಮಠದ ಸೇವೆ ಹಾಗೂ ಆಸ್ತಿಯ ಸಂರಕ್ಷಣೆಗಾಗಿ ನಮ್ಮ ಸಮಾಜ ಸದಾ ಸಿದ್ಧ ಎಂದು ತಿಳಿಸಿದರು.

ವಿಜಯ ಕರ್ನಾಟಕ VK
ಸೋಮವಾರ,12 ಆಗಸ್ಟ್ 2024, ಕಲಬುರಗಿ

ಶ್ರಾವಣ ಮಾಸದ ನಿಮಿತ್ತ ಗವಿ ಮಠದಲ್ಲಿ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮ

ಶರೀರದ ಎಲ್ಲ ಅಂಗಾಂಗಗಳ ಕ್ರಿಯೆಗೆ ಪ್ರಾಣವೇ ಮೂಲ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಶರೀರದ ಎಲ್ಲ ಅಂಗಾಂಗಗಳ ಕ್ರಿಯೆಗೆ ಪ್ರಾಣವೇ ಮೂಲ. ಈ ಮೂಲ ಪ್ರಾಣಕ್ಕೆ ಶಿವನೇ ಆಧಾರನು. ಹೀಗಾಗಿ ಈ ಮೂಲಕ್ಕೆ ಪ್ರಾಣಲಿಂಗ ಎಂದು ಕರೆಯಲಾಗಿದೆ ಎಂದು ಇಲ್ಲಿಯ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಪವಿತ್ರ ಶ್ರಾವಣ ಮಾಸದ ನಿಮಿತ್ತ ನಗರದ ಗವಿ ಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರ ಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಜಗದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ತಮ್ಮ ಸಿದ್ಧಾಂತ ಶಿಖಾಮಣಿಯಲ್ಲಿ ಈ ಪ್ರಾಣಕ್ಕೆ ಶಿವನೇ ಆಧಾರ. ಅಲ್ಲದೇ ಶಿವನ ಸಂಕೇತದಂತೆಯೇ ಪಂಚ ಮಹಾಭೂತಗಳ ಕ್ರಿಯೆಯು ನಡೆಯುತ್ತಿವೆ. ಆದ್ದರಿಂದ ಸರ್ವಕ್ಕೂ ಶಿವನೇ ಆಧಾರ. ಹಾಗೆಯೇ ಮಹಾತ್ಮ ಬಸವೇಶ್ವರರು ತಮ್ಮ ವಚನದಲ್ಲಿ ಪಶುಪತಿ



ಬಸವಕಲ್ಯಾಣ ಪವಿತ್ರ ಶ್ರಾವಣ ಮಾಸದ ನಿಮಿತ್ತ ನಗರದ ಗವಿ ಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರ ಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಪ್ರೊ.ರುದ್ರೇಶ್ವರ ಗೋರ್ಟಾ ಮಾತನಾಡಿದರು.

ಜಗಕೇ ಏಕೋ (ಒಬ್ಬನೇ) ಧೇವ ಎನ್ನುತ್ತ ಸ್ವರ್ಗ, ಮರ್ತ್ಯ, ಪಾತಾಳದೊಳಗೆ ಒಬ್ಬನೇ ದೇವ ಕೂಡಲ ಸಂಗಮದೇವ ಎನ್ನುವುದರ ಮೂಲಕ ಜಗದೊಡೆಯ ಶಿವನನ್ನು ಕೊಂಡಾಡಿದ್ದಾರೆ ಎಂದರು.

ಸಮಾಜ ಸೇವಕ ಲೋಕೇಶ ಮೋಳಕೆರೆ ಮಾತನಾಡಿ, ಕಳೆದ ಕೆಲವು ವರ್ಷಗಳಿಂದ ನಾನು ಒಂದಿಷ್ಟು ಸಮಾಜ ಸೇವೆ ಮಾಡುತ್ತ ಸಾಗಿರುವುದಕ್ಕೆ ಸಂಸ್ಥಾನ ಗವಿಮಠದ ಶ್ರೀಗಳ ಕೃಪಾಶೀರ್ವಾದ ಹಾಗೂ ಮಾರ್ಗದರ್ಶನವೇ ನನಗೆ ಪ್ರೇರಣೆ. ಕೊರೊನಾ ಮಹಾಮಾರಿಯ ಸಂದರ್ಭದಲ್ಲಿ ನಾನು ಸಾವಿಗೆ ಭಯಪಡದೇ ಸ್ನೇಹಿತರನ್ನು ಜೊತೆ ಸೇರಿಸಿಕೊಂಡು ಭಿಕ್ಷುಕ, ಅನಾಥ, ರೋಗಿಗಳಿಗೆ ಹೀಗೆ ಹಸಿದ ಅನೇಕರಿಗೆ ಅನ್ನ, ನೀರು, ಔಷಧ ಮೊದಲಾದ ಅವಶ್ಯಕ ಸೇವೆ ಸಲ್ಲಿಸಿದ ಸಂತೃಪ್ತಿ ನನಗಿದೆ ಎಂದು ಹೇಳಿದರು.

ಗವಿ ಮಠದ ಶ್ರೀಗಳು ಪ್ರತಿ ವರ್ಷ ತಮ್ಮ ಜನ್ಮದಿನವನ್ನು ವಿಶೇಷ ಸಮಾಜ ಸೇವೆ ಮೂಲಕ ಆಚರಿಸುತ್ತಿರುವುದು ಬಸವಕಲ್ಯಾಣ ಭಾಗದ ಭಕ್ತರ ಭಾಗ್ಯದ ಗುರುಗಳಾಗಿದ್ದು, ಬರುವ ಸೆ.28 ರಂದು ಪೂಜ್ಯರ ಜನ್ಮದಿನ ನಿಮಿತ್ತ ಸೆ.27 ರಂದು ಬಸವಕಲ್ಯಾಣ ನಗರದಲ್ಲಿ ಪ್ಲಾಸ್ಟಿಕ್ ಮುಕ್ತ ಜೀವನ ಸಂದೇಶದೊಂದಿಗೆ ಪಾದಯಾತ್ರೆ ಕೈಗೊಳ್ಳಲಿದ್ದು ಪೂಜ್ಯ ಗುರುಗಳ ಜೊತೆ ಎಲ್ಲ ಸಮುದಾಯಗಳ ಸಮಸ್ತ ಸದ್ಭಕ್ತರು ಪಾದಯಾತ್ರೆಯಲ್ಲಿ ಪಾಲ್ಗೊಳ್ಳೋಣ ಎಂದು ಮನವಿ ಮಾಡಿದರು.

ಅಧ್ಯಕ್ಷತೆ ವಹಿಸಿ ಸಂಸ್ಥೆಯ ಸಂಘಟನಾ ಕಾರ್ಯದರ್ಶಿ ರಮೇಶ ರಾಜೋಳೆ ಮಾತನಾಡಿ, ಸಂಸ್ಥಾನ ಗವಿಮಠವು ಭಾವೈಕ್ಯತೆಯ ಪ್ರತೀಕ. ಸಂಸ್ಥಾನ ಗವಿಮಠದ ಪೂಜ್ಯರು ಚಿಕ್ಕವರಾಗಿದ್ದರೂ ಬಸವಣ್ಣನವರ ಹಾಗೇ ಇವ ನಮ್ಮವ ಎಂಬ ಹಿರಿದಾದ ತತ್ವದಂತೆ ನಡೆಯುತ್ತ ನಮ್ಮೆಲ್ಲರಿಗೆ ಸದಾ ಧರ್ಮಮಾರ್ಗ ಬೋಧಿಸುತ್ತ ಆ ದಾರಿಯಲ್ಲಿ ಮುನ್ನಡೆಸುತ್ತಿರುವುದು ನಮ್ಮೆಲ್ಲರ ಅಹೋ ಭಾಗ್ಯ ಎಂದರು. ಪ್ರೊ. ರುದ್ರೇಶ್ವರ ಗೋರ್ಟಾ ಮಾತನಾಡಿದರು.

> ಜಗದ ಆದಿ ಜಗದ್ಗುರು ಶ್ರೀರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗೆ ಬೋಧಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ಬಸವಾದಿ ಶಿವಶರಣ ವಚನ ಸಾಹಿತ್ಯ ಸರಿಯಾಗಿ ಅರಿತು ಜೀವನದಲ್ಲಿ ಅಳವಡಿಸಿಕೊಂಡರೆ ಮನುಷ್ಯನ ಬದುಕು ಸಾರ್ಥಕವಾಗುತ್ತದೆ.
> -ಪ್ರೊ.ರುದ್ರೇಶ್ವರ ಗೋರ್ಟಾ.

ವಿಜಯ ಕರ್ನಾಟಕ VK
ಮಂಗಳವಾರ,3 ಸೆಪ್ಟೆಂಬರ್ 2024, ಕಲಬುರಗಿ

Scanned with OKEN Scanner

ಡಾ.ಅಭಿನವ ಶ್ರೀ ನುಡಿ | ಸಂಸ್ಥಾನ ಗವಿಮಠದಲ್ಲಿ 7ನೇ ವಿಶೇಷ ಉಪನ್ಯಾಸ ಮಾಲೆ

ಎಲ್ಲ ಅಳಿದು ಉಳಿಯುವುದು ಮಾತ್ರ ಸತ್ಯ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸತ್ಯ ಶಾಶ್ವತ, ಎಲ್ಲಕ್ಕೂ ಸತ್ಯವೇ ಆಧಾರ, ಎಲ್ಲವೂ ಅಳಿದು ಉಳಿಯುವುದು ಸತ್ಯ ಮಾತ್ರ, ಸತ್ಯವೆಂದರೆ ಸಾಕ್ಷಾತ್ ಶಿವನೇ ಎಂದರ್ಥ ಎಂದು ನಗರದ ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಶ್ರಾವಣ ಮಾಸದ ನಿಮಿತ್ತ ಸಂಸ್ಥಾನ ಗವಿಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ವೀರಶೈವ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು 7ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಜಗದ ಆದಿ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿಯ ದಶ ಧರ್ಮಸೂತ್ರದಲ್ಲಿ ಸತ್ಯದ ಮಹತ್ವ ಕುರಿತು ಬೋಧಿಸಿತ್ತ ಮನುಷ್ಯ ಸತ್ಯ ತತ್ವವನ್ನು ಪಾಲಿಸದಿದ್ದರೆ ಅವನು ಆಚರಿಸುವ ಎಲ್ಲ ಧರ್ಮಾಚರಣೆಗಳು ವ್ಯರ್ಥವಾಗುತ್ತವೆ ಎಂದು ಸಾರಿದ್ದಾದ್ದಾರೆ. ಇದೇ ರೀತಿ ಜಗಜ್ಯೋತಿ ಬಸವಣ್ಣನವರು ತಮ್ಮ ವಚನದ ಮೂಲಕ ಹುಸಿಯ ನುಡಿಯಬೇಡ ಎಂದು ಹೇಳಿದ್ದಾರೆ. ಹೀಗಾಗಿ ಎಲ್ಲರೂ ಸತ್ಯವನ್ನು ಪಾಲಿಸಬೇಕು ಎಂದರು.

ನೇತೃತ್ವ ವಹಿಸಿದ್ದ ಕಲಬುರಗಿಯ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಹಿಂದಿನ ಕಾಲದಲ್ಲಿ ದೇವಾಲಯ ಹಾಗೂ ಮಠಗಳ ಬಾಗಿಲು ಕಿರಿದಾಗಿರುತ್ತಿದ್ದವು. ಭಕ್ತ ದೇವರ ದರ್ಶನಕ್ಕೆ ಬರುವಾದ ತಲೆ ಬಾಗಿ ಬರಲಿ ಎನ್ನುವುದೇ ಇದರ ಹಿಂದಿನ ಉದ್ದೇಶ. ಶೃದ್ಧೆ, ಭಕ್ತಿಯಿಂದ ನಡೆದಾಗ ಜೀವನನದಲ್ಲಿ ಸಾರ್ಥಕತೆ ಕಾಣಲು ಸಾಧ್ಯವಾಗುತ್ತದೆ ಎಂದರು. ತಾಲೂಕಾ ಬಜರಂಗದಳ ಸಂಚಾಲಕ ರವಿ ನಾವದಗಿಕರ ಮಾತನಾಡಿದರು. ಬಸವರಾಜ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆ ಕಾರ್ಯದರ್ಶಿ ರಾಕೇಶ ಪುರವಂತ, ಸಂಸ್ಥಾನ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ನಿವೃತ್ತ ಪ್ರಾಚಾರ್ಯ ದಯಾನಂದ ಶೀಲವಂತ, ಮಲ್ಲಿಕಾರ್ಜುನ ಹೊಳಕುಂದೆ, ಶ್ರೀನಿವಾಸ ಬಿರಾದಾರ, ಲೋಕೇಶ ಮೋಳಕೆರೆ, ಗೋವಿಂದರೆಡ್ಡಿ ಕೋತಾಪಲ್ಲೆ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ, ಶೀಲಾದೇವಿ ಲವಾರೆ ಇತತರಿದ್ದರು. ಪ್ರೊ.ರುದ್ರೇಶ್ವರ ಗೋರ್ಟಾ ಸ್ವಾಗತಿಸಿದರು. ಶಿಕ್ಷಕ ಮಲ್ಲಿಕಾರ್ಜುನ ಅಲಗುಡೆ ನಿರೂಪಣೆ ಮಾಡದರು. ಮಲ್ಲಿಕಾರ್ಜುನ ಹಿರೇಮಠ ಪ್ರಾರ್ಥನಾಗೀತೆ ಹಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಗವಿ ಮಠದಲ್ಲಿ ಸೋಮವಾರ ಸಂಜೆ ಆಯೋಜಿಸಿದ್ದ 7ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ರವಿ ನಾವದಗಿಕರ, ಬಸವರಾಜ ಬಿರಾದಾರ, ರಾಕೇಶ ಪುರವಂತ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 31 ಆಗಸ್ಟ್ 2024
31 AUGUST 2024

ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನ ಗುರುವಾರ 15-08-2024

ವಚನ ಸಾಹಿತ್ಯ ಕುರಿತು ವಿಶೇಷ ಉಪನ್ಯಾಸ.



ಮಲ್ಲಮ್ಮ ನುಡಿ ಪಾರ್ತೆ

(ವರದಿ. ಡಿ. ಕೆ. ಪ್ರಹ್ಲಾದ).

ಬಸವಕಲ್ಯಾಣ: – ಜಗದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಅಗಸ್ತ್ಯಮಹಾಮುನಿಗೆ ತಮ್ಮ ಸಿದ್ಧಾಂತ ಶಿಖಾಮಣಿ ಮೂಲಕ ಆಚಾರವೃಳ್ಳ ಭಕ್ತನೇ ಶಿವನಿಗೆ ಪ್ರೀಯನಾಗುವನು. ಆ ಶಿವನನ್ನು ಪೂಜಿಸಬೇಕಾದರೆ ಆಚಾರವಂತನಾಗಿಯೇ ಪೂಜಿಸಬೇಕು ಎಂದು ತಿಪುರಾಂತಿನ ಸಂಸ್ಥಾನ ಗವಿಮಠದ ಪೀಠಾಧಿಪತಿ ಪೂಜ್ಯಶ್ರೀ ಷ.ಬ್ರ. ಡಾಟಟ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಪವಿತ್ರ ಶ್ರಾವಣಮಾಸ ನಿಮಿತ್ಯ ಇಲ್ಲಿನ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕಾ ಘಟಕ ಸಹಯೋಗದಲ್ಲಿ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ಜರುಗಿದ 3ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ದಿವ್ಯಸಾನಿಧ್ಯ ವಹಿಸಿ ಮಾತನಾಡಿ ಭಕ್ತರಿಗೆ ಉಪದೇಶಿಸುತ್ತ ಅನಾಚಾರಿಯಾದ ವ್ಯಕ್ತಿಯು ಅದೆಂಥಾ ದೊಡ್ಡ ಪೂಜೆಯನ್ನು ಮಾಡಿದರೂ ಶಿವನು ಅದನ್ನು ಸ್ವೀಕರಿಸುವುದಿಲ್ಲ. ಅದೇರೀತಿ ಜಗಜ್ಯೋತಿ ಬಸವೇಶ್ವರರು ತಮ್ಮ ವಚನದ ಮೂಲಕ ಆಚಾರವೇ ಸ್ವರ್ಗ ಅನಾಚಾರವೇ ನರಕ ಎಂಬುದನ್ನು ಉಲ್ಲೇಖಿಸಿದ್ದಾರೆ ಎಂದರು.

ಮುಖ್ಯ ಅತಿಥಿಯಾಗಿ ಬಿ. ಇ. ಟಿ ಕಾಲೇಜಿನ ನಿರ್ದೇಶಕರಾದ ಅಶೋಕುಮಾರ ವಣಗೇರಿ ಮಾತನಾಡಿ ಪೂಜ್ಯಶ್ರೀ ಡಾಟಟ ಅಭಿನವ ಘನಲಿಂಗ ರುದ್ರಮುನಿ ಗುರುಗಳು ತಮ್ಮ ಸಂಸ್ಥಾನ ಗವಿಮಠದ ಮೂಲಕ ಈ ಪವಿತ್ರ ಶ್ರಾವಣಮಾಸದಲ್ಲಿ ಧರ್ಮ ಸಂಸ್ಕಾರ ಕೊಡುವ ಮಹತ್ವದ ಕಾರ್ಯ ಮಾಡುತ್ತಿದ್ದಾರೆ. ಜೊತೆಗೆ ಪ್ರತಿವರ್ಷ ಅನೇಕ ಸಾಮಾಜಿಕ, ಸಾಹಿತ್ಯ, ಸಂಸ್ಕೃತಿ ಉಳಿಸಿ ಬೆಳೆಸುವ ಅನೇಕ ಕಾರ್ಯಕ್ರಮಗಳು ಮಾಡುತ್ತಿರುವುದು ಅಭಿನಂದನೀಯ ಎಂದು ಸಂತಸ ವ್ಯಕ್ತಪಡಿಸಿದರು.

ಅತಿಥಿಯಾಗಿ ಆಲ್ ಅಮೀನ್ ಶಾಲೆಯ ಅಧ್ಯಕ್ಷ ಮಹಮ್ಮದ್ ಘಸಿಯುದ್ದಿನ್ ಚೌಧರಿ ಮಾತನಾಡಿ ಪೂಜ್ಯಶ್ರೀ ಡಾಟಟ ಅಭಿನವ ಗುರುಗಳು ಜಾತಿ ಧರ್ಮ ಭೇದ ಎಣಿಸದೆ ಎಲ್ಲರೂ ನಮ್ಮರು ಎಂದು ತಿಳಿದು ನಡೆಯುತ್ತಿದ್ದಾರೆ. ಹೀಗಾಗಿ ನಾವೂ ಅವರನ್ನು ಸದಾ ಗೌರವಿಸುತ್ತೇವೆ ಎಂದು ಹೇಳಿದರು.

ಅತಿಥಿಗಳಾಗಿ ನಗರದ ಬೃಂದಾವನ ಶಾಲೆಯ ಅಧ್ಯಕ್ಷರಾದ ಗೋವಿಂದ ಚಾಮಲ್ಲೇ ಮಾತನಾಡಿದರು. ಬಸವ ಬೆರಳಚ್ಚು ಸಂಸ್ಥೆ ಪ್ರಾಚಾರ್ಯ ಎ. ಜಿ. ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಶಿಕ್ಷಕ ರಮೇಶ ರಾಜೋಳೆ ಪ್ರಾಸ್ತಾವಿಕವಾಗಿ ಮಾತನಾಡಿ ಸಂಸ್ಥಾನ ಗವಿಮಠವು ಸರ್ವರೂ ಸಮಾನರು ಎಂಬ ಸಂದೇಶ ಸಾರುವ ಭಾವೈಕ್ಯದ ಮಠ ಎಂದು ನುಡಿದರು.

ಈ ಸಂದರ್ಭದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಕಾರ್ಯದರ್ಶಿ ರಾಕೇಶ ಪುರವಂತ, ಮಲ್ಲಿಕಾರ್ಜುನ ಅಲಶೆಟ್ಟಿ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ಬಾಬುರಾವ ಚಳಕಾಪುರೆ, ನಿವೃತ್ತ ಪ್ರಾಚಾರ್ಯ ದಯಾನಂದ ಶೀಲವಂತ, ಕಸಾಪ ತಾಲೂಕಾ ಅಧ್ಯಕ್ಷ ಪ್ರೊ.ಶಾಂತಲಿಂಗ ಮಠಪತಿ, ಮಲ್ಲಿಕಾರ್ಜುನ ಹೊಳಕುಂದೆ, ಕಾರ್ತೀಕ ಬಿರಾದಾರ, ಡಾ. ವಿ. ಎಸ್. ರಾಜೋಳೆ, ನಾರಾಯಣಪುರ ವಲಯ ಕಸಾಪ ಅಧ್ಯಕ್ಷ ಗೋವಿಂದರೆಡ್ಡಿ ಕೋತಾಪಲ್ಲೆ, ಪ್ರೊ. ರುದ್ರೇಶ್ವರ ಗೋರ್ಟಾ, ಗೋವಿಂದ ಕನಕ, ಶಿಕ್ಷಕ ಜಗನ್ನಾಥ ಸ್ವಾಮಿ, ರಾಮಲಿಂಗ ರಾಮದಾಸೆ, ಗುರು ರಾಮದಾಸೆ, ಸಿದ್ಧಯ್ಯ ಹಿರೇಮಠ ಮದಗುಣಕಿ, ವಿಮಲಾಬಾಯಿ ಬಿರಾದಾರ, ವನಿತಾ ಬಿರಾದಾರ, ಶಿವಮ್ಮ ಬಿರಾದಾರ, ಉಮಾದೇವಿ ಪೊಲೀಸಪಾಟೀಲ, ಗಿರಿಜಾ ಬಿರಾದಾರ, ಸಂಗೀತ ಬಿರಾದಾರ, ಜ್ಯೋತಿ ಬಿರಾದಾರ, ಸವಿತಾ ಸ್ವಾಮಿ, ಶೀಲಾದೇವಿ ಲವಾರೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಪ್ರಾರ್ಥನೆಗೀತೆ ಶಕುಂತಲಾ ಮಠ ಹಾಡಿದರು. ಕಲ್ಪನಾ ಶೀಲವಂತ ಸ್ವಾಗತಿಸಿದರು. ಪ್ರೊ. ವಿದ್ಯಾಸಾಗರ ಮೂಲಗೆ

‘ಸಂಸ್ಕಾರವಿಲ್ಲದೆ ಕೌಟುಂಬಿಕ ಸೌಖ್ಯವಿಲ್ಲ’

ವಚನ ಸಾಹಿತ್ಯ ಕುರಿತ ಉಪನ್ಯಾಸ: ಬಜರಂಗದಳ ಸಂಚಾಲಕ ರವಿ ಅಭಿಮತ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ‘ಮಕ್ಕಳಿಗೆ ಸಂಸ್ಕಾರ ಕಲಿಸದ ಕಾರಣ ಕೌಟುಂಬಿಕ ಸೌಖ್ಯ ಇಲ್ಲದಂತಾಗಿದೆ. ಕಾರಣ ಸಂಬಂಧಗಳು ಹಳಸುತ್ತಿವೆ’ ಎಂದು ಬಜರಂಗದಳ ತಾಲ್ಲೂಕು ಸಂಚಾಲಕ ರವಿ ನಾವದ್ಗೇಕರ್ ಕಳವಳ ವ್ಯಕ್ತಪಡಿಸಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆಯಿಂದ ಈಚೆಗೆ ಹಮ್ಮಿಕೊಂಡಿದ್ದ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ಉಪನ್ಯಾಸದಲ್ಲಿ ಮಾತನಾಡಿದರು.

‘ಭಾರತದ ಸಂಸ್ಕೃತಿ, ಪರಂಪರೆ ಶ್ರೀಮಂತ ಮತ್ತು ವಿಶಿಷ್ಟವಾದುದಾಗಿದೆ. ಸನಾತನ ಧರ್ಮವು ನೈತಿಕ ಮೌಲ್ಯ ಕಲಿಸುತ್ತದೆ. ಈ ಬಗ್ಗೆ ಎಲ್ಲರಲ್ಲೂ ಅಭಿಮಾನವಿರಬೇಕು. ಗವಿಮಠದ ಶಿವಾಚಾರ್ಯರು ಧರ್ಮ ಬೋಧನೆಯ ಜೊತೆಯಲ್ಲಿ ಸಾಮಾಜಿಕ ಕಾರ್ಯದಲ್ಲೂ ಪಾಲ್ಗೊಳ್ಳುತ್ತಿರುವುದು ಸಂತಸ ತಂದಿದೆ’ ಎಂದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಕಲಬುರಗಿಯ ಮಲ್ಲಿಕಾರ್ಜುನ ಸ್ವಾಮೀಜಿ, ಪ್ರೊ. ರುದ್ರೇಶ್ವರ ಗೋರಟಾ ಹಾಗೂ ಮಲ್ಲಿಕಾರ್ಜುನ ಆಲಗೂಡೆ ಮಾತನಾಡಿದರು.

ಬಸವರಾಜ ಬಿರಾದಾರ, ರಾಕೇಶ ಪುರವಂತ, ಶ್ರೀನಿವಾಸ ಬಿರಾದಾರ, ಶರಣಪ್ಪ ಬಿರಾದಾರ ಹಾಗೂ ಬಸವಂತಪ್ಪ ಲವಾರೆ ಉಪಸ್ಥಿತರಿದ್ದರು. ಮಲ್ಲಿಕಾರ್ಜುನ ಹಿರೇಮಠ ಸಂಗೀತ ಪ್ರಸ್ತುತಪಡಿಸಿದರು.

ಮುಖ್ಯಾಂಶಗಳು

- ‘ನೈತಿಕ ಮೌಲ್ಯ ಕಲಿಸುವ ಸನಾತನ ಧರ್ಮ’
- ದೇವರು, ಗುರುವಿನಲ್ಲಿ ಭಕ್ತಿ ಇರಲಿ
- ಸತ್ಯದ ಮಹತ್ವ ಪ್ರತಿಪಾದಿಸುವ ವಚನ ಸಾಹಿತ್ಯ



ಬಸವಕಲ್ಯಾಣದ ಗವಿಮಠದಲ್ಲಿ ಈಚೆಗೆ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಅವರನ್ನು ಸನ್ಮಾನಿಸಲಾಯಿತು. ಮಲ್ಲಿಕಾರ್ಜುನ ಸ್ವಾಮೀಜಿ, ಬಜರಂಗದಳದ ತಾಲ್ಲೂಕು ಸಂಚಾಲಕ ರವಿ ನಾವದ್ಗೇಕರ್, ಶ್ರೀನಿವಾಸ ಬಿರಾದಾರ ಹಾಜರಿದ್ದರು

ಪ್ರಜಾವಾಣಿ ಶುಕ್ರವಾರ • ಆಗಸ್ಟ್ 30, 2024

ಮಲ್ಲಮ್ಮ ನುಡಿ ಬುಧವಾರ 28-08-2024 ಪ್ರಾದೆ

ಸಂಸ್ಥಾನ ಗವಿಮಠದಲ್ಲಿ ನಡೆದ 7ನೇ ವಿಶೇಷ ಉಪನ್ಯಾಸ ಮಾಲೆ



ಮಲ್ಲಮ್ಮ ನುಡಿ ವಾರ್ತೆ (ವರದಿ. ಡಿ. ಕೆ. ಪ್ರಹ್ಲಾದ.)

ಬಸವಕಲ್ಯಾಣ :- ಎಲ್ಲವೂ ಅಳಿದ ಬಳಿಕ ಉಳಿಯುವಂತದ್ದು ಸತ್ಯವೇ. ಸತ್ಯವೆಂದರೆ ಸಾಕ್ಷಾತ್ ಶಿವನೆಎಂದರ್ಥ. ಸರ್ವವೆಲ್ಲಕ್ಕೂ ಈ ಸತ್ಯವೇ ಆಧಾರ ಎಂದು ನಗರದ ಸಂಸ್ಥಾನ ಗವಿಮಠದ ಪೂಜ್ಯಶ್ರೀ ಷ.ಬ್ರ.ಡಾ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಪವಿತ್ರಶ್ರಾವಣ ಮಾಸ ನಿಮಿತ್ಯ ಪ್ರತಿವರ್ಷ ದಂತೆ ಇಲ್ಲಿನ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕಾ ಘಟಕ ಸಹಯೋಗದಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು 7ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸಿ ಮಾತನಾಡಿ ಜಗದ ಅದಿ ಜಗದ್ಗುರು ರೇಣುಕಾಚಾರ್ಯರು ತಮ್ಮ ಸಿದ್ಧಾಂತ ಶಿಖಾಮಣಿಯ ದಶಧರ್ಮಸೂತ್ರದಲ್ಲಿ ಸತ್ಯದ ಮಹತ್ವ ಕುರಿತು ಬೋಧಿಸುತ್ತ ಮನುಷ್ಯ ಸತ್ಯ ತತ್ವವನ್ನು ಪಾಲಿಸದಿದ್ದರೆ ಆತ ಆಚರಿಸುವ ವಲ್ಲ. ಧರ್ಮಾಚರಣೆಗಳು ವ್ಯರ್ಥವಾಗುತ್ತವೆ. ಅದೇರೀತಿ ಜಗಜ್ಯೋತಿ ಬಸವಣ್ಣನವರು ತಮ್ಮ ವಚನದ ಮೂಲಕ ಹುಸಿಯ ನುಡಿಯಬೇಡ ಎಂದು ಹೇಳಿದ್ದಾರೆ. ಹೀಗಾಗಿ ಎಲ್ಲರೂ ಸತ್ಯ ನುಡಿಯಬೇಕು ಎಂದು ಭಕ್ತರಿಗೆ ಉಪದೇಶಿಸಿದರು.

ನೇತೃತ್ವ ವಹಿಸಿದ್ದ ಕಲಬುರ್ಗಿಯ ಪೂಜ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಮಾತನಾಡಿ ಭಕ್ತ ದೇವರ ದರ್ಶನಕ್ಕೆ ತಲೆಬಾಗಿ ಬರಬೇಕು. ಈ ಕಾರಣಕ್ಕಾಗಿಯೇ ಹಿಂದಿನ ಕಾಲದ ಹಿರಿಯರು ದೇವಾಲಯ ಹಾಗೂ ಮಠಗಳ ಬಾಗಿಲುಗಳು ಕಿರಿದಾಗಿಕಟ್ಟುತ್ತಿದ್ದರು ಎಂದರು. ಮಾನವ ಜನ್ಮದೊಡ್ಡದ್ದು. ಹೀಗಾಗಿ ಮನುಷ್ಯ ಸದಾ ದೇವರು ಹಾಗೂ ಗುರುವಿನ ಕುರಿತು ಶರಣರು ಹೇಳಿದಂತೆ ಬಾಗಿದ ತಲೆ ಮುಗಿದ ಕೈಯಿಂದ ಶ್ರದ್ಧಾ ಭಕ್ತಿಯಿಂದ ಮುನ್ನಡೆದಾಗ ಜೀವನ ಸಾರ್ಥಕ ಎಂದು ನುಡಿದರು.

ಮುಖ್ಯ ಅತಿಥಿ-ಯಾಗಿ ತಾಲೂಕಾ ಬಜರಂಗದಳ ಅಧ್ಯಕ್ಷರಾದ ರವಿ ನಾವದಗಿಕರ್ ಮಾತನಾಡಿ ಭಾರತೀಯ ಸನಾತನ ಧರ್ಮ ಹಾಗೂ ಸಂಸ್ಕೃತಿ ಶ್ರೀಮಂತವಾಗಿದ್ದು ಅದರ ಬಗ್ಗೆ ಹೆಮ್ಮೆ ಹಾಗೂ ಅಭಿಮಾನವನ್ನು ಪ್ರತಿಯೊಬ್ಬ ಭಾರತೀಯ ಹೊಂದಬೇಕು. ಪಾಲಕರು ತಮ್ಮ ಮಕ್ಕಳಿಗೆ ಈ ಕುರಿತು ತಪ್ಪದೇ ಸಂಸ್ಕಾರ ಕಲಿಸಬೇಕು. ಆದರೆ ಪಾಲಕರು ಇಂದು ಮಕ್ಕಳಿಗೆ ಶಿಕ್ಷಣ ಕೊಡಿಸುತಿದ್ದಾರೆ ಹೊರತು ಸಂಸ್ಕಾರ ಕೊಡುತ್ತಿಲ್ಲ. ಹೀಗಾಗಿಯೇ ಮಕ್ಕಳು ಇವತ್ತು ಸಾಕು ನಾಯಿಗೆ ಪ್ರೀತಿ ತೋರುತಿದ್ದಾರೆಯೇ ಹೊರತು ಪಾಲಕರಿಗಿಲ್ಲ. ಆದರೆ ಸಂಸ್ಥಾನ ಗವಿಮಠದ ಪೂಜ್ಯಶ್ರೀ ಡಾ. ಅಭಿನವ ಘನಲಿಂಗ ಗುರುಗಳು ನಿರಂತರವಾಗಿ ಧರ್ಮ ಮಾರ್ಗ ಬೋಧಿಸುವುದರ ಜೊತೆಗೆ ಸಮಾಜ ಸುಧಾರಣೆಯ ಅನೇಕ ಕಾರ್ಯ ಮಾಡುತ್ತ ನಮ್ಮನ್ನು ಸರಿ ದಾರಿಯಲ್ಲಿ ಮುನ್ನಡೆಸುತ್ತಿರುವುದು ಇಲ್ಲಿನ ಭಕ್ತರು ಭಾಗ್ಯಶಾಲಿಗಳಾಗಿದ್ದೇವೆ ಎಂದು ಕೃತಜ್ಞತೆ ಸಲ್ಲಿಸಿದರು.

ಬಸವರಾಜ ಬಿರಾದಾರ ತ್ರಿಪುರಾಂತ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆ ಕಾರ್ಯದರ್ಶಿ ರಾಕೇಶ ಪುರವಂತ.

ಈ ಸಂದರ್ಭದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ನಿವೃತ್ತಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ನಿವೃತ್ತಪ್ರಾಚಾರ್ಯ ದಯಾನಂದ ಶೀಲವಂತ, ಪ್ರಾಚಾರ್ಯ ಸೂರ್ಯಕಾಂತ ಶೀಲವಂತ, ಮಲ್ಲಿಕಾರ್ಜುನ ಹೊಳಕುಂದ, ಶ್ರೀನಿವಾಸ ಬಿರಾದಾರ, ಲೋಕೇಶ ಮೋಳಕೆರೆ, ನಾರಾಯಣಪೂರ ವಲಯ ಕಸಾಪ ಅಧ್ಯಕ್ಷ ಗೋವಿಂದರೆಡ್ಡಿ ಕೋತಾಪಲ್ಲೆ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ, ಶೀಲಾದೇವಿ ಲವಾರೆ ಸೇರಿದಂತೆ ಅನೇಕರು

ಎಲ್ಲ ಕ್ಷೇತ್ರದಲ್ಲೂ ಮಹಿಳೆ ಸಾಧನೆ: ಶ್ರೀ



ಬಸವಕಲ್ಯಾಣ: ಗವಿ ಮಠದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

■ ಉದಯವಾಣಿ ಸಮಾಚಾರ

ಬಸವಕಲ್ಯಾಣ: ಹೆಣ್ಣು ಅಬಲೆ ಅಲ್ಲ ಸಬಲೆ. ಎಲ್ಲ ರಂಗಗಳಲ್ಲಿಯೂ ಸ್ವ ಸಾಮರ್ಥ್ಯದಿಂದ ಮುನ್ನುಗ್ಗುವ ಮೂಲಕ ಸಾಧನೆ ಮಾಡುತ್ತಿದ್ದಾಳೆ ಎಂದು ಗವಿಮಠದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿಯ ಗವಿಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಮಹಿಳಾ ಘಟಕ ಆಯೋಜಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಮಹಿಳಾ ವೇದಿಕೆ 6ನೇ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಶಿವಯೋಗಿ ಸಿದ್ಧರಾಮೇಶ್ವರರು ತಮ್ಮ ವಚನದಲ್ಲಿ ಹೆಣ್ಣನ್ನು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದಿದ್ದಾರೆ. ಇಂದು ಮಹಿಳೆ ಕೇವಲ ಗೃಹಿಣಿ ಮಾತ್ರವಲ್ಲದೇ ಶಿಕ್ಷಣ, ಆಡಳಿತ, ವಿಜ್ಞಾನ, ಸೈನ್ಯ ಎಲ್ಲ ಕ್ಷೇತ್ರಗಳಲ್ಲೂ ಪುರುಷನ ಸಮಾನಳಾಗಿ ಬೆಳೆದದ್ದೇ ಇದಕ್ಕೆ ಸಾಕ್ಷಿ. ಆದರೆ ತಾಯಂದಿರು ಮಕ್ಕಳಿಗೆ ಸಂಸ್ಕಾರ ಕೊಡುವುದು ಅವಶ್ಯ. ಸಂಸ್ಕಾರ ಪಡೆದ ಮಕ್ಕಳಿಂದ ತಾಯಿ-ತಂದೆ ಗೌರವ ಪಡೆಯಲು ಸಾಧ್ಯ ಎಂದರು.

ಬ್ರಹ್ಮಕುಮಾರಿ ಸರಸ್ವತಿ ಬಹೆನ್ ಜಿ. ಮುಖ್ಯ ಅತಿಥಿಯಾಗಿ ಮಾತನಾಡಿದರು. ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ ಅಧ್ಯಕ್ಷತೆ ವಹಿಸಿದ್ದರು.

ಬೆಳದಿಂಗಳ ಪ್ರಸಾದ: ಮಹಿಳಾ ಭಕ್ತರು ಮನೆಯಲ್ಲಿ ಸಿದ್ಧಪಡಿಸಿ ತಂದಿದ್ದ ಪ್ರಸಾದವನ್ನು ಪೂಜ್ಯ ಡಾ। ಅಭಿನವ ಘನಲಿಂಗ ಗುರುಗಳು 150ಕ್ಕೂ ಹೆಚ್ಚು ಭಕ್ತರ ಜೊತೆ ಸೇರಿ ಸಾಮೂಹಿಕವಾಗಿ ಪ್ರಸಾದ ಸ್ವೀಕರಿಸಿದರು.

ಈ ವೇಳೆ ಶ್ರೀ ಗುರು ಮಹಾಲಿಂಗೇಶ್ವರ ಶಾಲೆ ಅಧ್ಯಕ್ಷೆ ಸವಿತಾ ಸ್ವಾಮಿ, ರೇಖಾ ಮಂಠಾಳೆ, ಸಂಸ್ಥಾನ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಕಾರ್ಯದರ್ಶಿ ರಾಕೇಶ ಪುರವಂತ, ಪ್ರಾಚಾರ್ಯ ಎ.ಜಿ. ಪಾಟೀಲ, ಮಲ್ಲಿಕಾರ್ಜುನ ಅಲಶೆಟ್ಟಿ, ಕೃಷಿ ನಿವೃತ್ತ ಅಧಿಕಾರಿ ಬಸವಂತಪ್ಪ ಲವಾರೆ, ನಿವೃತ್ತ ಪ್ರಾಚಾರ್ಯ ದಯಾನಂದ ಶೀಲವಂತ, ಮುಖ್ಯ ಶಿಕ್ಷಕ ರವೀಂದ್ರ ಬಿರಾದಾರ, ರಮೇಶ ರಾಜೋಳೆ, ವಿಜಯಲಕ್ಷ್ಮೀ ರಾಜೋಳೆ, ವಿದ್ಯಾರಾಣಿ ಬಿರಾದಾರ ಇತರರಿದ್ದರು.

ಸಂಸ್ಥೆ ಮಹಿಳಾ ಘಟಕದ ಕಾರ್ಯದರ್ಶಿ ಸರಸ್ವತಿ ಬೆಂಬಳಿ ಸ್ವಾಗತಿಸಿದರು. ಡಾ। ಶಿವಲೀಲಾ ಮಠಪತಿ ನಿರೂಪಿಸಿದರು. ಪ್ರೊ। ರುದ್ರೇಶ್ವರ ಗೋರ್ಟಾ ಭಕ್ತಿ ಗೀತೆ ಹಾಡಿದರು.

ಕಲಬುರಗಿ ಉದಯವಾಣಿ
ಶನಿವಾರ, ಆಗಸ್ಟ್ 24, 2024

'ಸಿದ್ಧಾಂತ ಶಿಖಾಮಣಿ-ವಚನ ಸಾಹಿತ್ಯದಿಂದ ಮೋಕ್ಷ ಮಾರ್ಗ'



ಬಸವಕಲ್ಯಾಣ: ಗವಿ ಮಠದಲ್ಲಿ ಹಮ್ಮಿಕೊಂಡಿದ್ದ ಸಮಾರಂಭವನ್ನು ಹಿರೇನಾಗಾಂವ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಉದ್ಘಾಟಿಸಿದರು.

■ ಉದಯವಾಣಿ ಸಮಾಚಾರ

ಬಸವಕಲ್ಯಾಣ: ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿ ಹಾಗೂ ಶಿವಶರಣರು ರಚಿಸಿದ ವಚನ ಸಾಹಿತ್ಯ ಮೋಕ್ಷ ಮಾರ್ಗ ತೋರುವ ಮಹತ್ವದ ಸಾಹಿತ್ಯವಾಗಿವೆ ಎಂದು ಹಿರೇನಾಗಾಂವ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಹೇಳಿದರು.

ಗವಿ ಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆತಾಲೂಕು ಘಟಕ ಸಹಯೋಗದಲ್ಲಿ ಏರ್ಪಡಿಸಿದ್ದ ವೀರಶೈವ ಲಿಂಗಾಯತ ಧರ್ಮ ಗ್ರಂಥ 'ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ' ಕುರಿತ ವಿಶೇಷ ಉಪನ್ಯಾಸ ಮಾಲೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಗವಿ ಮಠದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿ ಮಾತನಾಡಿ, ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಸರಿಯಾಗಿ ಅರಿತರೆ ಮನುಷ್ಯ ಜನ್ಮ ಸಾರ್ಥಕವಾಗುತ್ತದೆ. ಹಾಗೆಯೇ ಮುಂಬರುವ ವರ್ಷದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್ ಸಮಾರಂಭದ ಸಿದ್ಧತೆಗೆ ಸಮಸ್ತ ಸದ್ಭಕ್ತರು ಪಾಲ್ಗೊಳ್ಳಬೇಕು ಎಂದರು.

ಪ್ರಾಚಾರ್ಯ ಪ್ರೊ। ಸೂರ್ಯಕಾಂತ ಶೀಲವಂತ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಸಂಸ್ಥಾನ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು.

ಈ ವೇಳೆ ಸಂಸ್ಥೆ ಉಪಾಧ್ಯಕ್ಷ ಚಂದ್ರಕಾಂತ ಪಾಟೀಲ, ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ, ಷಣ್ಮುಕಪ್ಪ ಕಣಸೂರೆ, ಎ.ಜಿ. ಪಾಟೀಲ್, ಲಕ್ಷ್ಮಣ ಸಿಂಗಾರೆ, ಬಸವಂತಪ್ಪ ಲವಾರೆ, ಪ್ರೊ। ರುದ್ರೇಶ್ವರ ಗೋರ್ಟಾ, ದಯಾನಂದ ಶೀಲವಂತ, ಪ್ರೊ। ಶಾಂತಲಿಂಗ ಮಠಪತಿ, ಗೋವಿಂದ ರೆಡ್ಡಿ, ಮಲ್ಲಿಕಾರ್ಜುನ ಅಲಗುಡೆ, ಬಸವಣ್ಣಪ್ಪಾ ನೆಲೋಗಿ, ಶಿವಶಂಕರ್ ರಾಮಣ್ಣನವರ, ವೀರಶೆಟ್ಟಿ ಎಂ. ಪಾಟೀಲ, ಲಿಂಗರಾಜ ಬಿರಾದಾರ, ವಿಮಲಾಬಾಯಿ ಬಿರಾದಾರ, ಸವಿತಾ ಸ್ವಾಮಿ, ಅಂಜನಾ ಮೂಲಗೆ, ಸರೋಜನಿ ಹಿರೇಮಠ ಇತರರಿದ್ದರು.

ಶರಣಬಸವ ಅಲಗುಡೆ ಪ್ರಾರ್ಥನೆ ಹಾಡಿದರು. ಮುಖ್ಯ ಗುರು ರಮೇಶ ರಾಜೋಳೆ ನಿರೂಪಿಸಿದರು.

ಉದಯವಾಣಿ ಕಲಬುರಗಿ
ಗುರುವಾರ, ಆಗಸ್ಟ್ 8, 2024



ಬಸವಕಲ್ಯಾಣದ ಹುಲಿಕಾಂತಿ ಮಠದಲ್ಲಿ ಸೋಮವಾರ ನಡೆದ ಸದ್ಭಾವ ಚಿಂತನ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ರುದ್ರಾಕ್ಷಿ ಕಿರೀಟ ತೊಡಿಸಿ ಸನ್ಮಾನಿಸಲಾಯಿತು

'ಸಮತೋಲನದಿಂದ ಬದುಕು ಸುಖಮಯ'

ಬಸವಕಲ್ಯಾಣ: 'ಬದುಕು ಸುಖಮಯ ಆಗಬೇಕಾದರೆ ಸಮತೋಲನದ ನಡವಳಿಕೆ, ಸಮಚಿತ್ತ ಅಗತ್ಯವಾಗಿದೆ' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನುಡಿದರು.

ನಗರದ ಹುಲಿಕಾಂತಿ ಮಠದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಗುರುಪೂರ್ಣಿಮೆ ಹಾಗೂ ಮಾಸಿಕ ಸದ್ಭಾವ ಚಿಂತನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ಅಧ್ಯಕ್ಷ ಡಾ. ಬಸವರಾಜ ಸ್ವಾಮಿ ತ್ರಿಪುರಾಂತ ಮಾತನಾಡಿ, 'ಗುರುವಿನಲ್ಲಿ ಸಾಕ್ಷಾತ ಪರಶಿವನನ್ನು ಕಾಣಬಹುದು. ಗುರು ಕರುಣೆಯಿದ್ದರೆ ಜೀವನದಲ್ಲಿನ ಗುರಿ ತಲುಪಬಹುದು' ಎಂದರು.

ಬ್ಯಾಂಕ್‌ನ ನಿವೃತ್ತ ವ್ಯವಸ್ಥಾಪಕ ಬಸವರಾಜ ಸ್ವಾಮಿ ಮಾತನಾಡಿದರು.

ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಮಾತನಾಡಿದರು. ಗುರುಲಿಂಗ ಸ್ವಾಮಿ, ಸಂತೋಷ ಸ್ವಾಮಿ, ಶಿವಯೋಗಿಸ್ವಾಮಿ ಅವರು ಶಿವಾಚಾರ್ಯ ಅವರನ್ನು ಸನ್ಮಾನಿಸಿದರು. ಕಲ್ಪನಾ ಶೀಲವಂತ, ರಾಕೇಶ್ ಪುರವಂತ, ಎ.ಜಿ. ಪಾಟೀಲ, ಶಾಂತವೀರ ಇದ್ದರು.

ಪ್ರಜಾವಾಣಿ ಬುಧವಾರ • ಜುಲೈ 24, 2024

Scanned with OKEN Scanner

ಬಸವಕಲ್ಯಾಣ ಗವಿ ಮಠದಲ್ಲಿ ಸಿದ್ಧಾಂತ ಶಿಖಾಮಣಿ, ವಿಶೇಷ ಉಪನ್ಯಾಸ * ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅಭಿಮತ

ಸಂಸ್ಕಾರ ಪಡೆದ ಮಕ್ಕಳಿಂದ ಮಾತ್ರ ಗೌರವ ಪಡೆಯಲು ಸಾಧ್ಯ

ಸಂ.ಕ.ಸಮಾಚಾರ ಬಸವಕಲ್ಯಾಣ: ಹೆಣ್ಣು ಅಬಲೆ ಅಲ್ಲ ಸಬಲೆ. ಎಲ್ಲಾ ರಂಗಗಳಲ್ಲಿಯೂ ಹೆಣ್ಣು ತಮ್ಮ ಸಾಮರ್ಥ್ಯದಿಂದ ಮುನ್ನುಗ್ಗುತ್ತಿದ್ದಾಳೆ ಎಂದು ಇಲ್ಲಿಯ ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು. ಇಲ್ಲಿಯ ಗವಿ ಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲ್ಲೂಕು ಮಹಿಳಾ ಘಟಕ ಆಯೋಜಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಮಹಿಳಾ ವೇದಿಕೆ 6ನೇ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀಗಳು ಮಾತನಾಡಿದರು. ಮೂಲದಲ್ಲಿ ಹೆಣ್ಣು ಗಂಡು ಎಂಬ ಭೇದವಿಲ್ಲ. ಹೀಗಾಗಿಯೇ ಶಿವಯೋಗಿ ಸಿದ್ಧರಾಮೇಶ್ವರರು ತಮ್ಮ ವಚನದಲ್ಲಿ ಹೆಣ್ಣನ್ನು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದಿದ್ದಾರೆ. ಇಂದು ಮಹಿಳೆ ಕೇವಲ ಗೃಹಿಣಿ ಅಲ್ಲದೆ ಶಿಕ್ಷಣ, ಆಡಳಿತ, ವಿಜ್ಞಾನ, ಸೈನ್ಯ ಎಲ್ಲ ಕ್ಷೇತ್ರಗಳಲ್ಲಿ ಪುರುಷನ ಸಮಾನಳಾಗಿ ಬೆಳದದ್ದೇ ಇದಕ್ಕೆ ಸಾಕ್ಷಿ. ಆದರೆ ತಾಯಂದಿರು ಮಕ್ಕಳಿಗೆ ಸಂಸ್ಕಾರ ಕೊಡೋದು ಅವಶ್ಯಕ. ಸಂಸ್ಕಾರ ಪಡೆದ ಮಕ್ಕಳಿಂದ ತಾಯಿ ತಂದೆ ಗೌರವ ಪಡೆಯಲು ಸಾಧ್ಯ ಎಂದು ಉಪದೇಶಿಸಿದರು.

ಬ್ರಹ್ಮಕುಮಾರಿಯ ಸರಸ್ವತಿ ಬಹೇನ್‌ಜಿ ಮಾತನಾಡಿ ಹೆಣ್ಣು ಆದಿ ಶಕ್ತಿಯ ಸ್ವರೂಪ. ಶಿವ ಮತ್ತು ಶಕ್ತಿಯ ಸಂಗಮ. ಆದರೆ ಹೆಣ್ಣಿಗೆ ಇಂದು ಸುರಕ್ಷತೆ ಇಲ್ಲದಂತಾದದ್ದು ದುರ್ದೈವದ ಸಂಗತಿ ಎಂದು ಖೇದ ವ್ಯಕ್ತಪಡಿಸಿದರು. ಶ್ರೀಗುರು ಮಹಾಲಿಂಗೇಶ್ವರ ಶಾಲೆಯ ಅಧ್ಯಕ್ಷೆ ಸವಿತಾ ಸ್ವಾಮಿ, ರೇಖಾ ಮಂಠಾಳೆ ಉಪಸ್ಥಿತರಿದ್ದರು. ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ ಅಧ್ಯಕ್ಷತೆ ವಹಿಸಿದ್ದರು. ಇದೆ ವೇಳೆ ರಾಷ್ಟ್ರಕವಿ ಕುವೆಂಪು ಶಾಲೆಯ ಮಕ್ಕಳು ಪ್ರದರ್ಶಿಸಿದ ಹರ ಹರ ಶಂಭೋ ಹಾಗೂ ಶಿವ ತಾಂಡವ ನೃತ್ಯಗಳು ನೆರೆದ ಜನರ ಗಮನ ಸೆಳೆದವು. ಶ್ರೇಯಾ ಮಠಪತಿ ಪ್ರಾರ್ಥನಾ ಗೀತೆ ಹಾಡಿದರು. ಸರಸ್ವತಿ ಬೆಂಬಳಿ ಸ್ವಾಗತಿಸಿದರು. ಡಾ. ಶಿವಲೀಲಾ ಮಠಪತಿ ನಿರೂಪಿಸಿದರು. ಪ್ರೊ. ರುದ್ರೇಶ್ವರ ಗೋರ್ಟಾ ಭಕ್ತಿ ಗೀತೆ ಹಾಡಿದರು.

ಶರಣಪ್ಪ ಬಿರಾದಾರ, ರಾಕೇಶ ಪುರವಂತ, ಪ್ರಾಚಾರ್ಯ ಎ. ಜಿ. ಪಾಟೀಲ್, ಮಲ್ಲಿಕಾರ್ಜುನ ಅಲಶೆಟ್ಟಿ, ಬಸವಂತಪ್ಪ ಲವಾರೆ, ದಯಾನಂದ ಶೀಲವಂತ, ರವೀಂದ್ರ ಬಿರಾದಾರ, ರಮೇಶ ರಾಜೋಳೆ, ವಿಜಯಲಕ್ಷ್ಮೀ, ವಿದ್ಯಾರಾಣಿ ಬಿರಾದಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಬಸವಕಲ್ಯಾಣದ ಗವಿ ಮಠದಲ್ಲಿ ಹಮ್ಮಿಕೊಂಡ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಮಹಿಳಾ ವೇದಿಕೆ 6ನೇ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಸಿದ್ಧಾಂತ ಶಿಖಾಮಣಿ, ವಚನ ಸಾಹಿತ್ಯ ಪ್ರವಚನ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಸಿದ್ಧಾಂತ ಶಿಖಾಮಣಿ ಗ್ರಂಥ ಮತ್ತು ಬಸವಾದಿ ಶರಣರು ರಚಿಸಿದ ವಚನಗಳ ಸಾರ ಅರಿಯಬೇಕು. ಇದರಿಂದ ಸಮಾಜ ಮತ್ತು ಕುಟುಂಬದಲ್ಲಿ ಸುಖ ಶಾಂತಿ ನೆಲೆಸಿ ಬದುಕು ಸಾರ್ಥಕ ಆಗಬಲ್ಲದು' ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದ್ದಾರೆ.

ನಗರದ ತ್ರಿಪುರಾಂತ ಗವಿಮಠದಲ್ಲಿ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ವತಿಯಿಂದ ಈಚೆಗೆ ಶ್ರಾವಣ ಮಾಸದ ಅಂಗವಾಗಿ ಹಮ್ಮಿಕೊಂಡಿದ್ದ ಸಿದ್ಧಾಂತ ಶಿಖಾಮಣಿ ಮತ್ತು ವಚನ ಸಾಹಿತ್ಯ ಪ್ರವಚನದ ಉದ್ಘಾಟನೆಯಲ್ಲಿ ಅವರು ಮಾತನಾಡಿದರು.

ಹಿರೇನಾಗಾಂವ ಜಯ ಶಾಂತಲಿಂಗ ಸ್ವಾಮೀಜಿ ಮಾತನಾಡಿ, 'ಸಿದ್ಧಾಂತ ಶಿಖಾಮಣಿ ಮತ್ತು ವಚನಸಾಹಿತ್ಯ ಎರಡು ಕಣ್ಣುಗಳಿದ್ದಂತೆ ಎರಡರ ದೃಷ್ಟಿ ಒಂದೇ ಆಗಿದೆ. ಎರಡೂ ಜೀವನ ಮೋಕ್ಷದ ಉತ್ತಮ ಮಾರ್ಗದರ್ಶಿಗಳಾಗಿವೆ' ಎಂದರು.

ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಮಾತನಾಡಿ, 'ನಗರದಲ್ಲಿ ದಸರಾ ಹಬ್ಬಕ್ಕೆ ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಅವರ ದಸರಾ ದರ್ಬಾರ ಕಾರ್ಯಕ್ರಮ ಆಯೋಜಿಸಲು ನಿಶ್ಚಯಿಸಲಾಗಿದೆ. ಆದರಿಂದ ಭಕ್ತರು ಎಲ್ಲ ರೀತಿಯಿಂದ ಸಹಕಾರ ನೀಡಬೇಕು' ಎಂದು ಕೇಳಿಕೊಂಡರು. ಮುಖ್ಯ ಶಿಕ್ಷಕ ರಮೇಶ ರಾಜೋಳೆ, ಶರಣಬಸವ ಆಲಗೂಡೆ ಮಾತನಾಡಿದರು.

ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಚಂದ್ರಕಾಂತ ಪಾಟೀಲ, ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ ಮತ್ತಿತರರು ಉಪಸ್ಥಿತರಿದ್ದರು.

ಉಪನ್ಯಾಸ: ಪ್ರವಚನ-ಉಪನ್ಯಾಸ ಮಾಲೆಯ 2ನೇ ಕಾರ್ಯಕ್ರಮದಲ್ಲಿ ಮುಖಂಡ ನಾಗನಾಥ ಚಾಮಾಲೆ ಮಾತನಾಡಿ, 'ತ್ರಿಪುರಾಂತ ಗವಿಮಠವು ಮಾನವ ಧರ್ಮ ಸಾರುವ ಸಂಸ್ಥೆಯಾಗಿದೆ' ಎಂದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ನಿವೃತ್ತ ಎಂಜಿನಿಯರ್ ಮುರುಗಯ್ಯ ವಸ್ತ್ರದ, ಪ್ರೊ.ರುದ್ರೇಶ್ವರ ಗೋರಟಾ, ಬಸವಂತಪ್ಪ ಲವಾರೆ ಮಾತನಾಡಿದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಈಚೆಗೆ ನಡದ ಶ್ರಾವಣ ಪ್ರವಚನದ ಉದ್ಘಾಟನೆಯಲ್ಲಿ ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ ಅವರನ್ನು ಸನ್ಮಾನಿಸಲಾಯಿತು. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಜಯಶಾಂತಲಿಂಗ ಸ್ವಾಮೀಜಿ ಇದ್ದರು

Scanned with OKEN Scanner



ಬಸವಕಲ್ಯಾಣದಗವಿಮಠದಲ್ಲಿಹಮ್ಮಿಕೊಂಡಿರುವವೀರಶೈವ ಲಿಂಗಾಯತ ಧರ್ಮಗ್ರಂಥ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು 7ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿಶ್ರೀ ಮಲ್ಲಿಕಾರ್ಜುನಸ್ವಾಮೀಜಿಮಾತನಾಡಿದರು.

'ಎಲ್ಲವೂ ಅಳಿದ ಬಳಿಕ ಉಳಿಯುವುದು ಸತ್ಯ ಮಾತ್ರ'

ಸಂ.ಕ.ಸಮಾಚಾರ ಬಸವಕಲ್ಯಾಣ : ಎಲ್ಲವೂ ಅಳಿದ ಬಳಿಕ ಉಳಿಯುವಂತದ್ದು ಸತ್ಯವೇ. ಸತ್ಯವೆಂದರೆ ಸಾಕ್ಷಾತ್ ಶಿವನೆ ಎಂದರ್ಥ. ಸರ್ವವೆಲ್ಲಕ್ಕೂ ಈ ಸತ್ಯವೇ ಆಧಾರ ಎಂದು ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಇಲ್ಲಿಯ ಗವಿ ಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲ್ಲೂಕು ಘಟಕ ಸಹಯೋಗದಲ್ಲಿ ಹಮ್ಮಿಕೊಂಡಿರುವ ವೀರಶೈವ ಲಿಂಗಾಯತ ಧರ್ಮಗ್ರಂಥ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು 7ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಜಗದ ಆದಿ ಜಗದ್ಗುರು ರೇಣುಕಾಚಾರ್ಯರು ತಮ್ಮ ಸಿದ್ಧಾಂತ ಶಿಖಾಮಣಿಯ ದಶಧರ್ಮ ಸೂತ್ರದಲ್ಲಿ ಸತ್ಯದ ಮಹತ್ವ ಕುರಿತು ಬೋಧಿಸುತ್ತ ಮನುಷ್ಯ ಸತ್ಯ ತತ್ವವನ್ನು ಪಾಲಿಸದಿದ್ದರೆ ಆತ ಆಚರಿಸುವ ಎಲ್ಲ ಧರ್ಮಾಚರಣೆಗಳು ವ್ಯರ್ಥವಾಗುತ್ತವೆ. ಅದೇ ರೀತಿ ಜಗಜ್ಯೋತಿ ಬಸವಣ್ಣನವರು ತಮ್ಮ ವಚನದ ಮೂಲಕ ಹುಸಿಯ ನುಡಿಯಬೇಡ ಎಂದು ಹೇಳಿದ್ದಾರೆ. ಹೀಗಾಗಿ ಎಲ್ಲರೂ ಸತ್ಯ ನುಡಿಯಬೇಕು ಎಂದು ಭಕ್ತರಿಗೆ ಶ್ರೀಗಳು ಸಲಹೆ ನೀಡಿದರು.

ಕಲಬುರಗಿಯ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ ಭಕ್ತ ದೇವರ ದರ್ಶನಕ್ಕೆ ತಲೆಬಾಗಿ ಬರಬೇಕು. ಈ ಕಾರಣಕ್ಕಾಗಿಯೇ ಹಿಂದಿನ ಕಾಲದ ಹಿರಿಯರು ದೇವಾಲಯ ಹಾಗೂ ಮಠಗಳ ಬಾಗಿಲುಗಳು ಕಿರಿದಾಗಿ ಕಟ್ಟುತಿದ್ದರು. ಮಾನವ ಜನ್ಮ ದೊಡ್ಡದ್ದು. ಹೀಗಾಗಿ ಮನುಷ್ಯ ಸದಾ ದೇವರು ಹಾಗೂ ಗುರುವಿನ ಕುರಿತು ಶರಣರು ಹೇಳಿದಂತೆ ಬಾಗಿದತಲೆ ಮುಗಿದ ಕೈಯಿಂದ ಶ್ರದ್ಧಾ ಭಕ್ತಿಯಿಂದ ಮುನ್ನಡೆದಾಗ ಜೀವನ ಸಾರ್ಥಕವಾಗುತ್ತದೆ ಎಂದರು. ಭಜರಂಗದಳದ ತಾಲ್ಲೂಕು ಅಧ್ಯಕ್ಷ ರವಿ ನಾವದಗಿ ಮಾತನಾಡಿ ಭಾರತೀಯ ಸನಾತನ ಧರ್ಮ ಹಾಗೂ ಸಂಸ್ಕೃತಿ ಶ್ರೀಮಂತವಾಗಿದ್ದು, ಅದರ ಬಗ್ಗೆ ಹೆಮ್ಮೆ ಹಾಗೂ ಅಭಿಮಾನವನ್ನು ಪ್ರತಿಯೊಬ್ಬ ಭಾರತೀಯ ಹೊಂದಬೇಕು. ಪಾಲಕರು ತಮ್ಮ ಮಕ್ಕಳಿಗೆ ಈ ಕುರಿತು ತಪ್ಪದೇ ಸಂಸ್ಕಾರ ಕಲಿಸಬೇಕು ಎಂದು ಹೇಳಿದರು. ಬಸವರಾಜ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆ ಕಾರ್ಯದರ್ಶಿ ರಾಕೇಶ ಪುರವಂತ ಉಪಸ್ಥಿತರಿದ್ದರು. ಮಲ್ಲಿಕಾರ್ಜುನ ಹಿರೇಮಠ ಪ್ರಾರ್ಥನಾ ಗೀತೆ ಹಾಡಿದರು. ಪ್ರೊ. ರುದ್ರೇಶ್ವರ ಗೋರ್ಟಾ ಸ್ವಾಗತಿಸಿದರು. ಶಿಕ್ಷಕ ಮಲ್ಲಿಕಾರ್ಜುನ ಆಲಗೂಡೆ ನಿರೂಪಿಸಿದರು.

ಸಂಯುಕ್ತ ಕರ್ನಾಟಕ
ಬುಧವಾರ, 28, ಆಗಸ್ಟ್, 2024
ಕಲಬುರಗಿ | KALABURAGI

ಮಲ್ಲಮ್ಮ ನುಡಿ ಬುಧವಾರ 04-09-2024

ಸಂಸ್ಥಾನ ಗವಿಮಠದಲ್ಲಿ ಶ್ರೀ ವೀರಭದ್ರೇಶ್ವರ ಜಯಂತಿ



(ವರದಿ.ಡಿ.ಕೆ. ಪ್ರಹ್ಲಾದ.)

ಬಸವಕಲ್ಯಾಣ:-ನಗರದಸಂಸ್ಥಾನ ಗವಿಮಠದಲ್ಲಿ ಮಂಗಳವಾರ ಬೆಳಿಗ್ಗೆ ಶ್ರೀವೀರಭದ್ರೇಶ್ವರ ಜಯಂತಿ ಮಹೋತ್ಸವವನ್ನು ವೀರಶೈವ ಲಿಂಗಾಯತ ಸಂಘಟನೆಯರಾಜ್ಯಸಂಘಟನಾ ಕಾರ್ಯದರ್ಶಿಗಳಾದಪೂಜ್ಯಶ್ರೀ ಷ.ಬ್ರ.ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ದಿವ್ಯ ಸಾನಿಧ್ಯದಲ್ಲಿ ಸಕಲ ಸದ್ಭಕ್ತರು ವೀರಭದ್ರನ ಭಜನೆ ಪದಗಳುಹಾಡುವುದರಮೂಲಕ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಬಸವಂತಪ್ಪ ಲವಾರೆ,ರಾಕೇಶ್‌ಪುರವಂತ,ಲಿಂಗನಗೌಡ, ಸಿದ್ದಲಿಂಗಸಾಹುಕಾರ,ಶರಣಬಸವ ಅಲಗೂಡೆ, ರುದ್ರಮುನಿ ಹಿರೇಮಠ,ಚೇನ್ನೂರಿನ ಸಕಲ ಭಕ್ತರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ವಿಜಯವಾಣಿ ಚಿತ್ರ

ಶ್ರಾವಣ ಮಾಸದ ನಿಮಿತ್ತ ಬಸವಕಲ್ಯಾಣದ ಸಂಸ್ಥಾನ ಗವಿಮಠದಲ್ಲಿ ಗುರುವಾರ ಸಂಜೆ ಏರ್ಪಡಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ವಿಶೇಷ ಉಪನ್ಯಾಸ ಮಾಲೆ ಸಮಾರೋಪದಲ್ಲಿ ಪತ್ರಕರ್ತ ನಾಗಪ್ಪ ನಿಣ್ಣೆ ಅವರನ್ನು ಸನ್ಮಾನಿಸಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಎ.ಜಿ.ಪಾಟೀಲ್, ಬಸವಂತಪ್ಪ ಲವಾರೆ, ರುದ್ರೇಶ್ವರ ಗೋರ್ಟಾ, ಓಂಕಾರ ಪಾಟೀಲ್, ಮಲ್ಲಿಕಾರ್ಜುನ ಅಲಶೆಟ್ಟಿ, ಮಲ್ಲಿಕಾರ್ಜುನ ಆಲಗುಡೆ, ರಾಕೇಶ ಪುರವಂತ ಇದ್ದರು.

ನಂ1 ವಿಜಯವಾಣಿ
ಸೋಮವಾರ 9 ಸೆಪ್ಟೆಂಬರ್ 2024
» 9 SEPTEMBER 2024

Scanned with OKEN Scanner

ಸಂಯುಕ್ತ ಕರ್ನಾಟಕ
ಸೋಮವಾರ, 09, ಸೆಪ್ಟೆಂಬರ್, 2024
ಕಲಬುರಗಿ | KALABURAGI

ಮಾನವೀಯ ಮೌಲ್ಯಗಳು ಅಳವಡಿಸಿಕೊಳ್ಳಲು ಅಭಿನವ ಶ್ರೀ ಸಲಹೆ

ಸಂ.ಕ.ಸಮಾಚಾರ ಬಸವಕಲ್ಯಾಣ

ಜಗದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿ ಹಾಗೂ 12ನೇ ಶತಮಾನದಲ್ಲಿ ಶಿವಶರಣರು ರಚಿಸಿದ ವಚನ ಸಾಹಿತ್ಯದಲ್ಲಿನ ಮಾನವೀಯ ಮೌಲ್ಯಗಳು ತಿಳಿದುಕೊಂಡು ನಿಜ ಜೀವನದಲ್ಲಿ ಅಳವಡಿಸಿಕೊಂಡರೆ ಬದುಕು ಹಸನಾಗಲು ಸಾಧ್ಯವಾಗುತ್ತದೆ ಎಂದು ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿಯ ಗವಿ ಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲ್ಲೂಕು ಘಟಕದ ಸಹಯೋಗದಲ್ಲಿ ಆಯೋಜಿಸಿದ ವೀರಶೈವ ಲಿಂಗಾಯತ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಜರುಗಿದ ವಿಶೇಷ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ಶಿವಶರಣರು ನುಡಿದಂತೆ ನಡೆದಿದ್ದಾರೆ. ಶ್ರೀ ಮಠದ ನಮ್ಮ ಭಕ್ತರು ನಿರಂತರವಾಗಿ ಸಂಸ್ಥಾನ ಗವಿಮಠ ಹಾಗೂ ಗುರುಗಳ ಮೇಲೆ ಅಚಲವಾದ ಶ್ರದ್ಧಾ-ಭಕ್ತಿ ಹೊಂದಿದ್ದು ಗಟ್ಟಿ ಕಾಲುಗಳ ಹಾಗೆ ನಿಜವಾದ ಭಕ್ತರಾಗಿದ್ದು ಸದಾ ತನು ಮನ ಧನ ಸೇವೆ ಗೈಯುತ್ತಿರುವುದು ಸಂತೋಷ ತಂದಿದೆ ಎಂದರು. ಕಲಬುರಗಿಯ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ ಹರ ಮುನಿದರೆ ಗುರು ಕಾಯುವರು. ಗುರು ಸ್ವರೂಪದಲ್ಲಿ ದೇವರನ್ನು ಕಾಣಬಹುದು. ಅಂಥ ಶ್ರೀ ಡಾ. ಅಭಿನವ ಘನಲಿಂಗ ಗುರುಗಳನ್ನು ಪಡೆದ ಭಕ್ತರಾದ ತಾವು ಭಾಗ್ಯಶಾಲಿಗಳು ಎಂದು ತಿಳಿಸಿದರು.

ವಿಶೇಷ ಸನ್ಮಾನ ಸ್ವೀಕರಿಸಿದ ಹಿರಿಯ ಪತ್ರಕರ್ತ ನಾಗಪ್ಪ ನಿಣ್ಣೆ ಮಾತನಾಡಿ ಗವಿ ಮಠದ ಪೂಜ್ಯ ಡಾ. ಅಭಿನವ ಗುರುಗಳು ಘಟದಿಂದ ಮಠ ಮಾಡಿದ ಮಹಾನ್ ಸಾಧಕರು. ಹೀಗಾಗಿ ಅವರ ಶಕ್ತಿ ಅಗಾಧವಾಗಿದೆ ಎಂದು ಕೃತಜ್ಞತೆ ಸಲ್ಲಿಸಿದರು. ಸಂಸ್ಥೆಯ ನಿಕಟ ಪೂರ್ವ ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿದರು. ಅಧ್ಯಕ್ಷತೆ ವಹಿಸಿದ ಪ್ರಾಚಾರ್ಯ ಎ.ಜಿ ಪಾಟೀಲ್ ಮಾತನಾಡಿದರು. ಓಂಕಾರ ಪಾಟೀಲ್, ಮಲ್ಲಿಕಾರ್ಜುನ ಅಲಶೆಟ್ಟಿ ಉಪಸ್ಥಿತರಿದ್ದರು. ಮಲ್ಲಿಕಾರ್ಜುನ ಆಲಗೂಡೆ ನಿರೂಪಿಸಿದರು.

ಗವಿ ಮಠದಲ್ಲಿ ವಿಶೇಷ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭ



ಬಸವಕಲ್ಯಾಣದ ಗವಿ ಮಠದಲ್ಲಿ ಆಯೋಜಿಸಿದ ವೀರಶೈವ ಲಿಂಗಾಯತ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ ಜರುಗಿದ ವಿಶೇಷ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭದಲ್ಲಿ ಹಿರಿಯ ಪತ್ರಕರ್ತ ನಾಗಪ್ಪ ನಿಣ್ಣೆ ಅವರನ್ನು ಸನ್ಮಾನಿಸಲಾಯಿತು.

ಉದಯವಾಣಿ
ಬುಧವಾರ, ಸೆಪ್ಟೆಂಬರ್ 11, 2024
ಕಲಬುರಗಿ

ಗವಿಮಠದಲ್ಲಿ ವಿಶೇಷ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭ

'ಜೀವನದಲ್ಲಿ ವಚನಗಳ ಮೌಲ್ಯ ಅಳವಡಿಸಿಕೊಳ್ಳಿ'

■ ಉದಯವಾಣಿ ಸಮಾಚಾರ

ಬಸವಕಲ್ಯಾಣ: ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಬೋಧಿಸಿದ ಸಿದ್ಧಾಂತ ಶಿಖಾಮಣಿ ಹಾಗೂ 12ನೇ ಶತಮಾನದಲ್ಲಿ ಶಿವಶರಣರು ರಚಿಸಿದ ವಚನ ಸಾಹಿತ್ಯದಲ್ಲಿನ ಮಾನವೀಯ ಮೌಲ್ಯಗಳನ್ನು ತಿಳಿದುಕೊಂಡು, ನಿಜ ಜೀವನದಲ್ಲಿ ಅಳವಡಿಸಿಕೊಂಡರೆ ಬದುಕು ಹಸನಾಗುತ್ತದೆ ಎಂದು ಗವಿಮಠದ ಪೂಜ್ಯ ಡಾ। ಅಭಿನವ ಘನಲಿಂಗ ರುದ್ರಮುನಿ, ಶಿವಾಚಾರ್ಯರು ಹೇಳಿದರು.

ನಗರದ ಗವಿ ಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ತಾಲೂಕು ಘಟಕದ ಸಹಯೋಗದಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ಜರುಗಿದ ವಿಶೇಷ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.



ಬಸವಕಲ್ಯಾಣ: ವಿಶೇಷ ಉಪನ್ಯಾಸ ಮಾಲೆಯ ಸಮಾರೋಪ ಸಮಾರಂಭದಲ್ಲಿ ಹಿರಿಯ ಪತ್ರಕರ್ತ ನಾಗಪ್ಪ ನಿಣ್ಣೆ ಅವರನ್ನು ಸನ್ಮಾನಿಸಲಾಯಿತು.

ಶಿವಶರಣರು ನುಡಿದಂತೆ ನಡೆದಿದ್ದಾರೆ. ಶ್ರೀ ಮಠದ ನಮ್ಮ ಭಕ್ತರು ನಿರಂತರವಾಗಿ ಸಂಸ್ಥಾನ ಗವಿಮಠ ಹಾಗೂ ಗುರುಗಳ ಮೇಲೆ ಅಚಲವಾದ ಶ್ರದ್ಧಾ-ಭಕ್ತಿ ಹೊಂದಿದ್ದು ಸದಾ ತನು-ಮನ-ಧನದಿಂದ ಸೇವೆಗೈಯುತ್ತಿರುವುದು ಸಂತೋಷ ತಂದಿದೆ ಎಂದರು.

ನೇತೃತ್ವ ವಹಿಸಿ ಕಲಬುರಗಿಯ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಹರ ಮುನಿದರೂ ಗುರು ಕಾಯ್ವ ಗುರು ಸ್ವರೂಪದಲ್ಲಿ ದೇವರನ್ನು ಕಾಣಬಹುದು. ಅಂತಹ ಪೂಜ್ಯ ಶ್ರೀ ಡಾ। ಅಭಿನವ ಘನಲಿಂಗ ಗುರುಗಳನ್ನು ಪಡೆದ ಭಕ್ತರಾದ ತಾವು ಭಾಗ್ಯಶಾಲಿಗಳು ಎಂದು ತಿಳಿಸಿದರು..

ವಿಶೇಷ ಸನ್ಮಾನ ಸ್ವೀಕರಿಸಿ ಮಾತನಾಡಿದ ಹಿರಿಯ ಪತ್ರಕರ್ತ ನಾಗಪ್ಪ ನಿಣ್ಣೆ ಗವಿಮಠದ ಪೂಜ್ಯ ಡಾ। ಅಭಿನವ ಗುರುಗಳು ಘಟದಿಂದ ಮಠ ಮಾಡಿದ ಮಹಾ ಸಾಧಕರು. ಹೀಗಾಗಿ ಅವರ ಶಕ್ತಿ ಅಗಾಧವಾಗಿದೆ ಎಂದು ಕೃತಜ್ಞತೆ ಸಲ್ಲಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಂಸ್ಥೆಯ ನಿಕಟಪೂರ್ವ ಅಧ್ಯಕ್ಷ ಬಸವಂತಪ್ಪ ಲವಾರೆ ಮಾತನಾಡಿ, ಕಳೆದ ಹಲವು ವರ್ಷಗಳಿಂದ ಈ ಪವಿತ್ರ ಶ್ರಾವಣ ಮಾಸದಲ್ಲಿ ಡಾ। ಅಭಿನವ ಘನಲಿಂಗ ಗುರುಗಳು ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮ ಆಯೋಜಿಸಿ ಸಮನ್ವಯ ಸಂದೇಶ ಸಾರುತ್ತಿರುವುದು ಮಹತ್ವದ ಸಂಗತಿಯಾಗಿದೆ. ಪೂಜ್ಯ ಗುರುಗಳ ಸೇವೆಗೆ ಸದಾ ಸಿದ್ಧ ಎಂದರು.

ಅಧ್ಯಕ್ಷತೆ ವಹಿಸಿ ಪ್ರಾಚಾರ್ಯ ಎ.ಜಿ.ಪಾಟೀಲ ಮಾತನಾಡಿದರು. ಓಂಕಾರ ಪಾಟೀಲ ಹಾಗೂ ಮಲ್ಲಿಕಾರ್ಜುನ ಅಲಶೆಟ್ಟಿ ಇದ್ದರು. ಮಲ್ಲಿಕಾರ್ಜುನ ಆಲಗೂಡೆ ನಿರೂಪಿಸಿದರು.

Scanned with OKEN Scanner

ಶ್ರೀ ಸದಾಶಿವ ಸ್ವಾಮೀಜಿ ಕರೆ | ಬಸವಕಲ್ಯಾಣದಲ್ಲಿ ವಿಕಾಸಪಥ ಯಾತ್ರೆ

ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಭಾಗವಹಿಸಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಕಲಬುರಗಿ ಜಿಲ್ಲೆ ಸೇಡಂನಲ್ಲಿ 2025ರ ಜನವರಿಯಲ್ಲಿ ಆಯೋಜಿಸಿರುವ ಐತಿಹಾಸಿಕ 7ನೇ ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಎಲ್ಲರೂ ಭಾಗವಹಿಸಬೇಕು ಎಂದು ಸೇಡಂ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಅಧ್ಯಕ್ಷರಾದ ಶ್ರೀ ಸದಾಶಿವ ಸ್ವಾಮೀಜಿ ಕರೆ ನೀಡಿದರು.

ನಗರದ ಬಸವೇಶ್ವರ ದೇವಸ್ಥಾನದಿಂದ ಬಸವೇಶ್ವರ ಚೌಕ್ ವಿಕಾಸಪಥ ಯಾತ್ರೆ ನಂತರ ಬಿಕೆಡಿಬಿ ಕಲ್ಯಾಣ ಮಂಟಪದಲ್ಲಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 12ನೇ ಶತಮಾನದ ಶರಣರ ವಚನಗಳು ಸತ್ಸಂಗದ ದಾರಿದೀಪಗಳಾಗಿವೆ. ಧರ್ಮ, ಸಂಸ್ಕೃತಿಗೆ ದೊಡ್ಡ ಕೊಡುಗೆ ನೀಡಿರುವ ಕಲ್ಯಾಣ ನಾಡಿನ ಶರಣರು ತೋರಿದ ದಾರಿಯಲ್ಲಿ ಸಾಗುವ ಮೂಲಕ ಸಾಮರಸ್ಯದ ಬದುಕು ಕಟ್ಟಿಕೊಳ್ಳಬೇಕು ಎಂದು ಹಿತೋಪದೇಶ ನೀಡಿದರು.

ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯ, ಮುಚಳಂಬದ ಶ್ರೀ ಪ್ರಣವಾನಂದ ಮಹಾಸ್ವಾಮೀಜಿ, ಪೂಜ್ಯ ಡಾ.ಗಂಗಾಂಬಿಕಾ ಅಕ್ಕ, ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಖೇಳಗಿ ಶ್ರೀ ಶಿವಲಿಂಗ ಮಹಾಸ್ವಾಮೀಜಿ, ಬೇಲೂರಿನ ಶ್ರೀ ಪಂಚಾಕ್ಷರಿ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ವಾಣಿಜ್ಯ ತೆರಿಗೆ ಇಲಾಖೆ ಸಹಾಯಕ ಆಯುಕ್ತ ಡಾ.ಮಹೇಶ ಪಾಟೀಲ್ ಉಪಸ್ಥಿತರಿದ್ದರು. ವಿಕಾಶ ಅಕಾಡೆಮಿ ಜಿಲ್ಲಾ ಸಂಚಾಲಕ ರೇವಣಸಿದ್ದಪ್ಪ ಜಲಾದೆ ಪ್ರಾಸ್ತಾವಿಕ ಮಾತನಾಡಿದರು. ಪ್ರಕಾಶ ಬಿರಾದಾರ ಸ್ವಾಗತಿಸಿದರು. ಗುರು ದೇಗಾಂವ ನಿರೂಪಣೆ ಮಾಡಿದರು. ಲೋಕೇಶ ಮೊಳಕೇರೆ ವಂದಿಸಿದರು.



ಭಾರತೀಯ ಸಂಸ್ಕೃತಿ ಉತ್ಸವ ನಿಮಿತ್ತ ಬಸವಕಲ್ಯಾಣದಲ್ಲಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಶ್ರೀ ಸದಾಶಿವ ಸ್ವಾಮೀಜಿ ಮಾತನಾಡಿದರು. ಶ್ರೀ ರಾಜೇಶ್ವರ ಶಿವಾಚಾರ್ಯ, ಶ್ರೀ ಪ್ರಣವಾನಂದ ಮಹಾಸ್ವಾಮೀಜಿ, ಪೂಜ್ಯ ಡಾ.ಗಂಗಾಂಬಿಕಾ ಅಕ್ಕ, ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಶ್ರೀ ಶಿವಲಿಂಗ ಮಹಾಸ್ವಾಮೀಜಿ, ಶ್ರೀ ಪಂಚಾಕ್ಷರಿ ಮಹಾಸ್ವಾಮೀಜಿ, ರೇವಣಸಿದ್ದಪ್ಪ ಜಲಾದೆ, ಮಹೇಶ ಪಾಟೀಲ್ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 9 ಸೆಪ್ಟೆಂಬರ್ 2024
9 SEPTEMBER 2024

‘27ಕ್ಕೆ ಪ್ಲಾಸ್ಟಿಕ್ ಮುಕ್ತ ಜೀವನ ಜನಜಾಗೃತಿ ಪಾದಯಾತ್ರೆ’

28ಕ್ಕೆ ಡಾ। ಅಭಿನವ ಶ್ರೀಗಳ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ, 38ನೇ ಜನ್ಮದಿನ

■ ಉದಯವಾಣಿ ಸಮಾಚಾರ

ಬಸವಕಲ್ಯಾಣ: ಇಲ್ಲಿಯ ಗವಿ ಮಠದಲ್ಲಿ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮ ದಿನ ಕಾರ್ಯಕ್ರಮ ಗವಿ ಮಠದಲ್ಲಿ ಸೆ.28ರಂದು ಜರುಗಲಿದೆ ಎಂದು ಯುವ ಮುಖಂಡ ಶಿವಕುಮಾರ ಬಿರಾದಾರ ತಿಳಿಸಿದರು.

ನಗರದ ಆರ್ಯ ಸಮಾಜ ಭವನದಲ್ಲಿ ರವಿವಾರಪತ್ರಿಕಾಗೋಷ್ಠಿಯಲ್ಲಿಮಾತನಾಡಿದ ಅವರು,ಶ್ರೀಗಳಜನ್ಮದಿನನಿಮಿತ್ತಸೆ.27ರಂದು ಬೆಳಗ್ಗೆ 10 ಗಂಟೆಗೆ ನಗರದಲ್ಲಿ ಪ್ಲಾಸ್ಟಿಕ್ ಮುಕ್ತ ಜೀವನ ಜನಜಾಗೃತಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ನಗರದ ಗಾಂಧಿ ವೃತ್ತದಿಂದ ಮುಖ್ಯ ರಸ್ತೆ ಮಾರ್ಗವಾಗಿ ಶ್ರೀಪುರಾಂತನ ಮಡಿವಾಳ ಮಾಚಿದೇವರ ವೃತ್ತದವರೆಗೆ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನೇತೃತ್ವದಲ್ಲಿ ಪಾದಯಾತ್ರೆ ಜರುಗಲಿದೆಎಂದುಹೇಳಿದರು.

ಗವಿ ಮಠದ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರಮಾತನಾಡಿ,ಗವಿಮಠದಶ್ರೀಗಳು ಪ್ರತಿವರ್ಷ ತಮ್ಮಜನ್ಮದಿನನಿಮಿತ್ತಸಮಾಜದ ಒಳಿತಿಗಾಗಿ ನೂತನ ಕಾರ್ಯಕ್ರಮ ಹಾಗೂ ಜಾಗೃತಿ ಅಭಿಯಾನ ಮಾಡುತ್ತ ಬಂದಿದ್ದಾರೆ. ಕೋವಿಡ್ ಕುರಿತು ಜಾಗೃತಿ, ಅಭಿನವ ಜೋಳಿಗೆ,ಸಸಿನೆಡುವಕಾರ್ಯಕ್ರಮ,ಮೊಬೈಲ್ ನಿಂದಮಕ್ಕಳನ್ನು ದೂರಪಿಡಿಹೀಗೆಹಲವಾರು ಜಾಗೃತಿ ಅಭಿಯಾನ ಶ್ರೀಗಳು ಮಾಡಿದ್ದಾರೆ. ಸಮಾಜದಲ್ಲಿ ಆಗುತ್ತಿರುವ ಸಮಸ್ಯೆ ಮನಗಂಡು ಜನರಲ್ಲಿ ಜಾಗೃತಿ ಮೂಡಿಸಲು ಸೆ.27ರಂದು ಪ್ಲಾಸ್ಟಿಕ್ ಮುಕ್ತ ಸಮಾಜಕ್ಕೆ ಪಣ ತೊಟ್ಟಶ್ರೀಗಳಕಾರ್ಯಕ್ಕೆಎಲ್ಲರೂ ಬೆಂಬಲವಾಗಿ ನಿಲ್ಲೋಣ ಎಂದರು.

ಯುವ ಮುಖಂಡ ಲೋಕೇಶ ಮೋಳಕೇರೆ ಮಾತನಾಡಿ,ಗವಿಮಠದಶ್ರೀಗಳನೇತೃತ್ವದಲ್ಲಿ ನಡೆಯಲಿರುವ ಪ್ಲಾಸ್ಟಿಕ್ ಮುಕ್ತ ಜೀವನ ಜನಜಾಗೃತಿ ಪಾದಯಾತ್ರೆಯಲ್ಲಿ ನಗರದ ವಿವಿಧ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಂಘಟನೆ ಮುಖಂಡರು, ಸಾರ್ವಜನಿಕರು ಗಣ್ಯರು ಭಾಗಿಯಾಗಲಿದ್ದಾರೆ. ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗುತ್ತಿರುವ ಸಮಸ್ಯೆ ಹಾಗೂ ಅದರ ಬಳಕೆಯ ನಿಯಂತ್ರಣಕ್ಕೆ ಸಾರ್ವಜನಿಕರು ಏನು ಮಾಡಬೇಕೆಂಬುವುದನ್ನು ಶ್ರೀಗಳು ತಿಳಿಸಲಿದ್ದಾರೆ. ಪಾದಯಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುವ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡೋಣ ಎಂದು ಮನವಿ ಮಾಡಿದರು.

ಆಮಂತ್ರಣ ಪತ್ರಿಕೆ ಬಿಡುಗಡೆ: ಇದೇ ಸಂದರ್ಭದಲ್ಲಿ19ನೇಪಟ್ಟಾಧಿಕಾರವರ್ಧಂತಿ ಮಹೋತ್ಸವ ಹಾಗೂ 38 ನೇ ಜನ್ಮದಿನೋತ್ಸವದಆಮಂತ್ರಣಪತ್ರಿಕೆಯನ್ನು ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬಿಡುಗಡೆಗೊಳಿಸಿದರು.



ಬಸವಕಲ್ಯಾಣ: ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪತ್ರಿಕಾಗೋಷ್ಠಿಯಲ್ಲಿ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿದರು.

ಹಲವು ಗಣ್ಯರು ಭಾಗಿ

ಸೆ.28ರಂದು ಜರುಗಲಿರುವ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮದಿನೋತ್ಸವ ಸಮಾರಂಭದಲ್ಲಿ ಶ್ರೀ ಜಯಶಾಂತಲಿಂಗ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ತೆಲಂಗಾಣದ ಶ್ರೀ ವೀರೇಶ್ವರ ಶಿವಾಚಾರ್ಯರು ಆಗಮಿಸಲಿದ್ದಾರೆ. ಸಂಸದ ಸಾಗರ್ ಖಂಡ್ರೆ, ಕೆಕೆಆರ್‌ಡಿಬಿ ಅಧ್ಯಕ್ಷ ಡಾ। ಅಜಯಸಿಂಗ್, ಶಾಸಕ ಶರಣು ಸಲಗರ, ಎಂಎಲ್ಸಿ ಎಂ.ಜಿ. ಮುಳೆ, ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ಬಿ. ನಾರಾಯಣರಾವ್, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಮಾಜಿ ಎಂಎಲ್ಸಿ ವಿಜಯಸಿಂಗ್, ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ ಸೇರಿದಂತೆ ಹಲವು ಮುಖಂಡರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಗವಿಮಠದ ಶ್ರೀಗಳು ತಿಳಿಸಿದ್ದಾರೆ.

ಉದಯವಾಣಿ ಕಲಬುರಗಿ
ಸೋಮವಾರ, ಸೆಪ್ಟೆಂಬರ್ 23, 2024

Scanned with OKEN Scanner

ನಮ್ಮ ಬೀದರ್ ಶನಿವಾರ,28 ಸೆಪ್ಟೆಂಬರ್ 2024 www.vijaykarnataka.com www.vijaykarnatakaepaper.com ವಿಜಯ ಕರ್ನಾಟಕ

ಅಭಿನವ ಶ್ರೀಗಳ ನೇತೃತ್ವದಲ್ಲಿ ಪ್ಲಾಸ್ಟಿಕ್ ಮುಕ್ತ ಜೀವನ ಜಾಗೃತಿ । ಗಾಂಧಿ ವೃತ್ತದಿಂದ ತ್ರಿಪುರಾಂತದವರಿಗೆ ಪಾದಯಾತ್ರೆ

ಪ್ಲಾಸ್ಟಿಕ್ ಮುಕ್ತ ಸಮಾಜಕ್ಕೆ ಕೈಜೋಡಿಸಿ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಇಲ್ಲಿಯ ಸಂಸ್ಥಾನ ಗವಿ ಮಠದ ಪೂಜ್ಯ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸ್ವಾಮೀಜಿ ಅವರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮ ದಿನದ ನಿಮಿತ್ತ ಶುಕ್ರವಾರ ನಗರದಲ್ಲಿ ಪ್ಲಾಸ್ಟಿಕ್ ಮುಕ್ತ ಜೀವನ ಜನ ಜಾಗೃತಿ ಕುರಿತು ಪಾದಯಾತ್ರೆ ಜರುಗಿತು.

ಪೂಜ್ಯ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ನಗರದ ಗಾಂಧಿ ವೃತ್ತದಿಂದ ಮುಖ್ಯ ರಸ್ತೆಯ ಮಾರ್ಗವಾಗಿ ತ್ರಿಪುರಾಂತನ ಶ್ರೀ ಮಡಿವಾಳ ಮಾಚಿದೇವರ ವೃತ್ತದವರೆಗೆ ಜರುಗಿದ ಈ ಪಾದಯಾತ್ರೆಯಲ್ಲಿ ವಿವಿಧ ಪಕ್ಷಗಳ ಮುಖಂಡರು, ವಿವಿಧ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು, ವಿವಿಧ ಸಂಘ-ಸಂಸ್ಥೆಗಳ ಪ್ರಮುಖರು ಪಾಲ್ಗೊಂಡು ಶ್ರೀಗಳು ಕೈಗೊಂಡ ಕಾರ್ಯಕ್ಕೆ ಬೆಂಬಲ ಸೂಚಿಸಿದರು.

ಪ್ಲಾಸ್ಟಿಕ್ ಮುಕ್ತ ಜೀವನ ಜನ ಜಾಗೃತಿ ಕುರಿತು ಜರುಗಿದ ಪಾದಯಾತ್ರೆಯಲ್ಲಿ ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಿಸುವ ಫಲಕಗಳು ರಾರಾಜಿಸುತ್ತಿದ್ದವು. ಬೇಡ-ಬೇಡ ಪ್ಲಾಸ್ಟಿಕ್ ಬೇಡ, ಸ್ವಚ್ಛ ಪರಿಸರಕ್ಕಾಗಿ ಪ್ಲಾಸ್ಟಿಕ್ ನಿಷೇಧ ಎಂಬ ಘೋಷಣೆಗಳು ಪಾದಯಾತ್ರೆಯಲ್ಲಿ ಮೊಳಗಿದವು.

ಹಿರಿಯ ಚಿತ್ರನಟಿ ಪಂಕಜ ವೆಂಕಟರಮಣ ಮಾತನಾಡಿದರು.

ಗವಿ ಮಠದ ಪೂಜ್ಯ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಪ್ರತಿ ವರ್ಷ ನನ್ನ ಜನ್ಮ ದಿನದ ನಿಮಿತ್ತ ಸಮಾಜಕ್ಕೆ ಒಳ್ಳೆಯವಾಗುವ ನಿಟ್ಟಿನಲ್ಲಿ ಪ್ರತಿ ವರ್ಷ ಪಾದಯಾತ್ರೆಯ ಮೂಲಕ ಸಂದೇಶ ಸಾರಲಾಗುತ್ತಿದೆ. ಕಳೆದ ವರ್ಷ ಮೊಬೈಲ್ ಕುರಿತು ಜಾಗೃತಿ ಹಮ್ಮಿಕೊಳ್ಳಲಾಗಿದ್ದು ಈ ಬಾರಿ ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣವಾಗುವ ನಿಟ್ಟಿನಲ್ಲಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಹೀಗಾಗಿ ಎಲ್ಲರೂ ಪ್ಲಾಸ್ಟಿಕ್ ನಿಷೇಧ ಮಾಡುತ್ತೇವೆ ಎಂದು ಸಂಕಲ್ಪ ಮಾಡಿದರೆ ಭಕ್ತರು ನನ್ನ ಜನ್ಮ ದಿನಕ್ಕೆ ನೀಡುವ ಉಡುಗೊರೆ ಇದೇ ಆಗಿರುತ್ತದೆ ಎಂದು ತಿಳಿಸಿದರು.

ಈ ವೇಳೆ ನರಸಿಂಗ ರೆಡ್ಡಿ ಗದಲೇಗಾಂವ, ಅರ್ಜುನ ಕನಕ, ಶಿವಕುಮಾರ ಬಿರಾದಾರ, ರವಿ ನಾವದ್ಗೇಕರ ಮಾತನಾಡಿ, ಗವಿ ಮಠದ ಪೂಜ್ಯ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪ್ರತಿ ವರ್ಷ ತಮ್ಮ ಜನ್ಮ ದಿನದ ಪ್ರಯುಕ್ತ ಸಮಾಜಕ್ಕೆ ಒಳ್ಳೆಯ ಸಂದೇಶ ಸಾರುವ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಅವರು ಮಾಡುವ ಕಾರ್ಯಗಳಿಗೆ ನಾವೆಲ್ಲರೂ ಬೆಂಬಲ ಸೂಚಿಸುವ. ಮೂಲಕ ಗುರುಗಳು ತೋರುವ ಮಾರ್ಗದಲ್ಲಿ ಮುಂದೆ ಸಾಗೋಣ ಎಂದು ತಿಳಿಸಿದರು. ಖ್ಯಾತ ಮಕ್ಕಳ ತಜ್ಞ ಡಾ. ಜಿ.ಎಸ್ ಭುರಾಳೆ ಹಾಗೂ ಖ್ಯಾತ ಹಿರಿಯ ವೈದ್ಯ ಡಾ. ವಿ.ಎಸ್ ಮಠಪತಿ ಮಾತನಾಡಿದರು.

ಈ ವೇಳೆ ಪ್ರಮುಖರಾದ ಶರಣಪ್ಪ ಬಿರಾದಾರ, ಬಸವಂತಪ್ಪಾ ಲವಾರೆ, ಪ್ರೊ ರುದ್ರೇಶ ಗೋರ್ಟಾ, ಬಸವಣಪ್ಪ ನೆಲೋಗಿ, ಡಾ. ವಿ.ಎಸ್ ರಾಜೋಳೆ, ಜಗನ್ನಾಥ ಪತಂಗೆ, ರಮೇಶ ರಾಜೋಳೆ, ರಾಕೇಶ ಪುರವಂತ, ರಾಚಯ್ಯ ಮಠಪತಿ, ಪ್ರೊ ದಯಾನಂದ ಶೀಲವಂತ, ಶಿವಲಿಂಗ ಸ್ವಾಮಿ ಕನ್ನಾಡೆ,ಸಿದ್ದು ಉಳ್ಳೆ,ಸಂದೀಪ ಪಾಟೀಲ, ಲಿಂಗರಾಜ ಬಿರಾದಾರ, ಲಿಂಗರಾಜ ಫಾಳೆ, ಶಾಂತವೀರ ಸ್ವಾಮಿ, ರೇವಣಸಿದ್ದಯ್ಯ ವಸ್ತ್ರದ, ಲೋಕೇಶ ಮೋಳಕೆರೆ, ಶಿವು ಮಠಪತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಬಸವಕಲ್ಯಾಣ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಶುಕ್ರವಾರ ನಗರದ ಗಾಂಧಿ ವೃತ್ತದಿಂದ ತ್ರಿಪುರಾಂತನ ಶ್ರೀ ಮಡಿವಾಳ ಮಾಚಿದೇವರ ವೃತ್ತದವರೆಗೆ ಪ್ಲಾಸ್ಟಿಕ್ ಮುಕ್ತ ಜೀವನ ಜನ ಜಾಗೃತಿ ಕುರಿತು ಪಾದಯಾತ್ರೆ ಜರುಗಿತು.

ಜನರು ಪ್ಲಾಸ್ಟಿಕ್ ಬಳಸುವುದರಿಂದ ಮನುಷ್ಯನ ಆರೋಗ್ಯದ ಮೇಲೆ ಪರಿಣಾಮಗಳು ಬೀರುತ್ತಿವೆ. ಹೀಗಾಗಿ ನಾವೇ ಜಾಗೃತಗೊಂಡು ನಿಷೇಧಿಸಲು ಮುಂದಾಗಬೇಕು. ಅಲ್ಲದೆ ಸರಕಾರ ಪ್ಲಾಸ್ಟಿಕ್ ನಿಷೇಧಿಸುವ ಕುರಿತು ಕಾನೂನು ರೂಪಿಸಿ ಕಡಿವಾಣ ಹಾಕಲು ಮುಂದಾಗಬೇಕು. ಅಲ್ಲದೆ ಆರೋಗ್ಯ ಇಲಾಖೆಯಿಂದ ಹೋಟೆಲ್, ಅಂಗಡಿಗಳಲ್ಲಿ ಪರಿಶೀಲಿಸಿ ಪ್ಲಾಸ್ಟಿಕ್ ಬಳಸಿದರೆ ದಂಡ ಹಾಕಲು ಮುಂದಾಗಬೇಕು.

-ಡಾ.ವಿ.ಎಸ್ ಮಠಪತಿ, ಹಿರಿಯ ವೈದ್ಯರು.

ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣವಾಗಬೇಕೆಂಬ ಸದುದ್ದೇಶದೊಂದಿಗೆ ಹಮ್ಮಿಕೊಂಡ ಪಾದಯಾತ್ರೆಗೆ ಎಲ್ಲರೂ ಬೆಂಬಲ ಸೂಚಿಸಬೇಕು. ಪ್ಲಾಸ್ಟಿಕ್‌ನಲ್ಲಿ ಚಹಾ ಸೇವನೆಯಿಂದ ಆರೋಗ್ಯಕ್ಕೆ ತುಂಬಾ ಹಾನಿ ಇದೆ ಎಂದು ಗೊತ್ತಿದ್ದರೂ ಸೇವಿಸುತ್ತಿದ್ದೇವೆ. ಈಗಲಾದರೂ ಎಚ್ಚೆತ್ತುಕೊಳ್ಳುವ ಮೂಲಕ ಶ್ರೀಗಳು ಕೈಗೊಂಡ ಪಾದಯಾತ್ರೆಯ ಮಹತ್ವ ಅರಿತು ಪ್ಲಾಸ್ಟಿಕ್ ನಿಷೇಧಿಸಿ ಶ್ರೀಗಳಿಗೆ ಜನ್ಮ ದಿನದ ಕಾಣಿಕೆಯ ರೂಪದಲ್ಲಿ ಉಡುಗೊರೆಯಾಗಿ ನೀಡಬೇಕು.

-ಡಾ.ಜಿ.ಎಸ್.ಭುರಾಳೆ, ಖ್ಯಾತ ಮಕ್ಕಳ ತಜ್ಞ.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶುಕ್ರವಾರ 28 ಫೆಬ್ರವರಿ 2025
28 FEBRUARY 2025

ಮಹಾಶಿವರಾತ್ರಿ ಶ್ರೇಷ್ಠ ದಿನ

ವಿಜಯವಾಣಿ ಚಿತ್ರ



ಬಸವಕಲ್ಯಾಣದ ತ್ರಿಪುರಾಂತ ಸಂಸ್ಥಾನ ಗವಿಮಠದಲ್ಲಿ ಮಹಾಶಿವರಾತ್ರಿ ನಿಮಿತ್ತ ಬುಧವಾರ ಸಂಜೆ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ಜರುಗಿತು.

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮಹಾಶಿವರಾತ್ರಿ ಪವಿತ್ರ ಹಾಗೂ ಶ್ರೇಷ್ಠ ದಿನ ಎಂದು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನುಡಿದರು.

ಮಹಾಶಿವರಾತ್ರಿ ನಿಮಿತ್ತ ನಗರದ ಸಂಸ್ಥಾನ ಗವಿಮಠ ಟ್ರಸ್ಟ್, ಶ್ರೀ ಮದ್ವೀರಶೈವ ಸದ್ಭೋಧನ ಸಂಸ್ಥೆ ಮತ್ತು ಸಮಸ್ತ ಸದ್ಭಕ್ತರ ಸಹಯೋಗದಲ್ಲಿ ತ್ರಿಪುರಾಂತ ಸಂಸ್ಥಾನ ಗವಿಮಠದಲ್ಲಿ ಬುಧವಾರ ಸಂಜೆ ಆಯೋಜಿಸಿದ್ದ ಸಾಮೂಹಿಕ ಇಷ್ಟಲಿಂಗ ಪೂಜೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಮಹಾಶಿವನನ್ನು ನಾವು ಇಷ್ಟಲಿಂಗ ರೂಪದಲ್ಲಿ ನಿತ್ಯ ಪೂಜಿಸುತ್ತೇವೆ. ಇಂದು ಮಹಾ ಶಿವನು ಕೈಲಾಸದಿಂದ ಭೂಲೋಕಕ್ಕೆ ಬಂದು ತನ್ನನ್ನು ಪೂಜಿಸುವ ಭಕ್ತರಿಗೆ ಆಶೀರ್ವದಿಸುತ್ತಾನೆ ಎಂಬ ನಂಬಿಕೆಯಿಂದ ಇಂದು ಮಹಾಶಿವನಿಗೆ ವಿಶೇಷ ಪೂಜೆ ಮಾಡಿ ಆರಾಧಿಸುವ ಪರಂಪರೆ ನಮ್ಮ ಭಾರತೀಯ ಧರ್ಮ ಹಾಗೂ ಸಂಸ್ಕೃತಿ ಎಂದು ಹೇಳಿದರು.

■ ಡಾ.ಅಭಿನವ ಶ್ರೀ ಅಭಿಮತ

■ ಗವಿಮಠದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ

ಪುಣ್ಯಕೋಟಿ ಕಾಲೇಜಿನ ಪ್ರಾಚಾರ್ಯ ಸೂರ್ಯಕಾಂತ ಶೀಲವಂತ ಮಾತನಾಡಿ, ಮಹಾಶಿವರಾತ್ರಿಯ ಹಾಗೂ ಇಷ್ಟಲಿಂಗ ಪೂಜೆ ಮಹತ್ವ ತಿಳಿಸಿದರು.

ವೇದಮೂರ್ತಿ ನೀಲಕಂಠಯ್ಯ ಮಠ ಮಂಠಾಳ ಹಾಗೂ ಭಕ್ತರು ಇದ್ದರು.

Scanned with OKEN Scanner

ಗವಿಮಠದ ಶರಣಪ್ಪ ಬಿರಾದಾರ ಮಾಹಿತಿ | ಬಸವಕಲ್ಯಾಣದಲ್ಲಿ ಅಭಿನವ ಶ್ರೀ ಜನ್ಮೋತ್ಸವ ನಿಮಿತ್ತ ಅಭಿಯಾನ

ಪ್ಲಾಸ್ಟಿಕ್ ಮುಕ್ತ ಜೀವನ ಜಾಗೃತಿ ಪಾದಯಾತ್ರೆ 27ಕ್ಕೆ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 38ನೇ ಜನ್ಮದಿನ ನಿಮಿತ್ತ ಸಮಾಜದ ಹಿತದೃಷ್ಟಿಯಿಂದ ಜನಜಾಗೃತಿ ಮೂಡಿಸುವಂಥ ವಿನೂತನ ಕಾರ್ಯಕ್ರಮಗಳನ್ನು ಪ್ರತಿವರ್ಷ ನಡೆಸಲಾಗುತ್ತಿದೆ ಎಂದು ಮಠದ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಹೇಳಿದರು.

ಆರ್ಯ ಸಮಾಜದಲ್ಲಿ ಭಾನುವಾರ ಸಂಜೆ ಕರೆದಿದ್ದ ಶ್ರೀಗಳ 19ನೇ ಪಟ್ಟಾಧಿಕಾರ ವರ್ಧಂತಿ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಚಟಗಳ ವಿರುದ್ಧ ಅಭಿನವ ಜೋಳಿಗೆ, ಸಸಿ ನೆಡುವ, ಮೊಬೈಲ್‌ನಿಂದ ಮಕ್ಕಳನ್ನು ದೂರವಿರುವ ಜಾಗೃತಿ ಮೂಡಿಸಲು ಹಿಂದೆ ಶ್ರೀಗಳು ಅಭಿಯಾನ ನಡೆಸಿದ್ದಾರೆ. ಇದೀಗ ಪ್ಲಾಸ್ಟಿಕ್‌ಮುಕ್ತ ಸಮಾಜ ನಿರ್ಮಾಣ ಸಂಕಲ್ಪ ಮಾಡೋಣ ಎಂದರು.

ಯುವ ಮುಖಂಡ ಶಿವಕುಮಾರ ಬಿರಾದಾರ ಮಾತನಾಡಿ, ಗವಿ ಮಠದಲ್ಲಿ ಸೆ.28ರಂದು ಶ್ರೀಗಳ ಪಟ್ಟಾಧಿಕಾರ ವರ್ಧಂತಿ ಹಾಗೂ 38ನೇ ಜನ್ಮದಿನ ಕಾರ್ಯಕ್ರಮ ಜರುಗಲಿದೆ. 27ರಂದು ಬೆಳಗ್ಗೆ 10ಕ್ಕೆ ನಗರದಲ್ಲಿ ಪ್ಲಾಸ್ಟಿಕ್‌ಮುಕ್ತ ಜೀವನ ಜನಜಾಗೃತಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಯುವ ಮುಖಂಡ ಲೋಕೇಶ ಮೊಳಕೆರೆ ಮಾತನಾಡಿ, ಗವಿ ಮಠದ ಶ್ರೀಗಳ ನೇತೃತ್ವದ ಪಾದಯಾತ್ರೆಯಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಂಘಟನೆ ಮುಖಂಡರು, ಸಾರ್ವಜನಿಕರು, ಗಣ್ಯರು ಭಾಗಿಯಾಗಲಿದ್ದಾರೆ. ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗುತ್ತಿರುವ ಸಮಸ್ಯೆ ಹಾಗೂ ಬಳಕೆ ನಿಯಂತ್ರಣಕ್ಕೆ ಸಾರ್ವಜನಿಕರು ಅನುಸರಿಸಬೇಕಾದ ಕ್ರಮ, ವಹಿಸಬೇಕಾದ ಪಾತ್ರ ಕುರಿತು ತಿಳಿವಳಿಕೆ ಮೂಡಿಸುವುದೇ ಪಾದಯಾತ್ರೆ ಆಶಯ ಎಂದರು.

ಶ್ರೀ ಜಯಶಾಂತಲಿಂಗ ಸ್ವಾಮೀಜಿ ಸಾನ್ನಿಧ್ಯ, ತೆಲಂಗಾಣದ ಶ್ರೀ ವೀರೇಶ್ವರ ಶಿವಾಚಾರ್ಯರು ಸಾನ್ನಿಧ್ಯದ ಕಾರ್ಯಕ್ರಮದಲ್ಲಿ ಸಂಸದ ಸಾಗರ್ ಖಂಡ್ರೆ, ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯಸಿಂಗ್, ಶಾಸಕರಾದ ಶರಣು ಸಲಗರ, ಎಂ.ಜಿ. ಮುಳೆ, ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ಬಿ.ನಾರಾಯಣರಾವ, ಮಾಜಿ ಶಾಸಕರಾದ ಮಲ್ಲಿಕಾರ್ಜುನ ಖೂಬಾ, ವಿಜಯಸಿಂಗ್, ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ ಭಾಗಿಯಾಗಲಿದ್ದಾರೆ ಎಂದು ಗವಿಮಠದ ಶ್ರೀಗಳು ತಿಳಿಸಿದರು. ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ಮಲ್ಲಿಕಾರ್ಜುನ ಆಲಗೂಡೆ, ಕಲ್ಯಾಣರಾವ ಮದರಗಾಂವಕರ್ ಇದ್ದರು.



ವಿಜಯವಾಣಿ ಚಿತ್ರ

19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮದಿನ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಬಸವಕಲ್ಯಾಣದಲ್ಲಿ ಭಾನುವಾರ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಬಿಡುಗಡೆಗೊಳಿಸಿದರು. ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ಶಿವಕುಮಾರ ಬಿರಾದಾರ, ಲೋಕೇಶ ಮೊಳಕೆರೆ, ಕಲ್ಯಾಣರಾವ ಮದರಗಾಂವಕರ್, ಮಲ್ಲಿಕಾರ್ಜುನ ಆಲಗೂಡೆ, ಪವನ್ ಪೂಜಾರಿ ಇತರರಿದ್ದರು.



ಸೆ.27ರಂದು ಬಸವಕಲ್ಯಾಣದ ಗಾಂಧಿ ವೃತ್ತದಿಂದ ಮುಖ್ಯರಸ್ತೆ ಮಾರ್ಗವಾಗಿ ತ್ರಿಪುರಾಂತದ ಮಡಿವಾಳ ಮಾಚಿದೇವರ ವೃತ್ತದವರೆಗೆ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನೇತೃತ್ವದಲ್ಲಿ ಪ್ಲಾಸ್ಟಿಕ್‌ಮುಕ್ತ ಜೀವನ ಜನಜಾಗೃತಿ ಪಾದಯಾತ್ರೆ ಜರುಗಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು, ಸಾರ್ವಜನಿಕರು ಭಾಗವಹಿಸಿ ಯಶಸ್ವಿಗೊಳಿಸಬೇಕು.

| ಶಿವಕುಮಾರ ಬಿರಾದಾರ ಯುವ ಮುಖಂಡ



ಪ್ಲಾಸ್ಟಿಕ್ ಮುಕ್ತ ಜೀವನ ಜನ ಜಾಗೃತಿ

(ಡಿ.ಕೆ.ಪ್ರಲ್ಹಾದ್)

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ನಗರದ ತಿಪುರಾಂತಿನ ಶ್ರೀ ಘನಲಿಂಗ ರುದ್ರಮುನಿ ಗವಿಮಠದ ಪೂಜ್ಯ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಜನ್ಮ ದಿನೋತ್ಸವ ಅಂಗವಾಗಿ ಪ್ಲಾಸ್ಟಿಕ್ ಮುಕ್ತ ಜೀವನ ಜನ ಜಾಗೃತಿ ಪಾದಯಾತ್ರೆಯನ್ನು ಗಾಂಧಿ ಚೌಕ ದಿಂದ ಪ್ರಮುಖ ರಸ್ತೆಗಳ ಮೂಲಕ ಹರಳಯ್ಯ ಚೌಕದವರೆಗೆ ಶ್ರೀಗಳ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಯಿತ್ತು. ಈ ಸಂದರ್ಭದಲ್ಲಿ ಪ್ರಮುಖರಾದ ಬಸವೇಶ್ವರ ದೇವಸ್ಥಾನದ ಪಂಚ ಕಮಿಟಿಯ ಅಧ್ಯಕ್ಷರಾದ ಬಸವರಾಜ ಕೊರಕೆ. ಅರ್ಜುನ ಕನಕ. ಎ. ಜಿ. ಪಾಟೀಲ್. ರಾಕೇಶ್ ಪುರವಂತ. ಡಾ. ಜಿ. ಎಸ್. ಭುರಳೆ. ನರ್ಸಿಂಗರಡ್ಡಿ ಗದಲೇಗಾಂವ. ಬಸವಂತಪ್ಪ ಲವಾರೆ. ಶಿವಕುಮಾರ ಬಿರಾದಾರ. ದಯಾನಂದ ಶೀಲವಂತ. ಪ್ರಶಾಂತ ಕನಶೆಟ್ಟಿ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

Scanned with OKEN Scanner

ಡಾ.ಅಭಿನವ ಶ್ರೀಗಳ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ | ಜನ್ಮದಿನದ ನಿಮಿತ್ತ ಧರ್ಮ ಸಮಾರಂಭ

ಅಭಿನವ ಶ್ರೀಗಳ ಕಾರ್ಯ ಶ್ರೇಷ್ಠ

■ ವಿಕ ಸುದ್ದಿಲೋಕ ಬಸವಕಲ್ಯಾಣ

ಇಲ್ಲಿನ ಸಂಸ್ಥಾನ ಗವಿಮಠಕ್ಕೆ 14 ವರ್ಷವಿದ್ದಾಗಲೇ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಅವರಿಗೆ ಪಟ್ಟಾಧಿಕಾರ ಜರುಗಿತ್ತು. ಆ ಸಮಯದಲ್ಲಿ ಶ್ರೀಮಠದಲ್ಲಿ ಏನು ಇರಲಿಲ್ಲ, ಆದರೆ ಘಟದಿಂದ ಮಠವಾಗಿ ಪರಿವರ್ತಿಸಿ ಶ್ರೀಮಠ ಎತ್ತರಕ್ಕೆ ಬೆಳೆಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಹಿರನಾಗಾಂವನ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಹೇಳಿದರು.

ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮ ದಿನದ ನಿಮಿತ್ತ ಇಲ್ಲಿಯ ಗವಿ ಮಠದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಗವಿ ಮಠದ ಡಾ.ಅಭಿನವ ಶ್ರೀಗಳು ತಬ್ಬಲಿ ಅಲ್ಲ ಅವರ ಜನ್ಮದಿನಕ್ಕೆ ಅಪಾರ ಭಕ್ತರು ಸೇರಿದ್ದಾರೆ. ಅವರು ನಿಜವಾದ ಸಂಪಾದನೆ ಭಕ್ತರೇ ಆಗಿದ್ದಾರೆ. ಅಲ್ಲದೆ ಅಪಾರ ಭಕ್ತರ ಮನಸ್ಸು ಗೆದ್ದಿ ಸಮಾಜವನ್ನು ಜಾಗೃತಗೊಳಿಸಿ ಸರಿದಾರಿಗೆ ತರುವ ಕೆಲಸ ಮಾಡುತ್ತಿದ್ದಾರೆ. ಅವರ ಜನ್ಮ ದಿನದ ನಿಮಿತ್ತ ಕಳೆದ ವರ್ಷ ಮೊಬೈಲ್ ಜಾಗೃತಿ ಈ ವರ್ಷ ಪ್ಲಾಸ್ಟಿಕ್ ಜಾಗೃತಿ ಕುರಿತು ಸಂದೇಶ ನೀಡಿದ್ದಾರೆ. ಶ್ರೀಗಳು ಕೈಗೊಂಡ ಕಾರ್ಯಗಳಿಗೆ ಎಲ್ಲರೂ ಕೈಜೋಡಿಸಿ ಸಹಕರಿಸಬೇಕು ಎಂದರು.

ನೇತೃತ್ವ ವಹಿಸಿ ಗವಿ ಮಠದ ಪೂಜ್ಯ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಗುರುಗಳು ತೋರುವ ಮಾರ್ಗದಲ್ಲಿ ಭಕ್ತರು ಜೀವನ ಸಾಗಬೇಕು. ಅಂದಾಗ ಮಾತ್ರ ಭಕ್ತರ ಏಳಿಗೆಯಾಗಲು ಸಾಧ್ಯವಾಗುತ್ತದೆ. ಗುರುಗಳಿಗೂ ಭಕ್ತರ ಏಳಿಗೆ ಆಗಲಿ ಎಂಬ ಬಯಕೆ ಇರುತ್ತದೆ ಎಂದು ಹೇಳಿದರು.

ನನ್ನ ಜನ್ಮ ದಿನದ ನಿಮಿತ್ತ ಅನೇಕ ಯುವಕರ ಸಹಕಾರದೊಂದಿಗೆ ಕಳೆದ ವರ್ಷ ಮೊಬೈಲ್ ಕುರಿತು ಜಾಗೃತಿ ಮಾಡಿದೆ. ಈ ವರ್ಷ ಪ್ಲಾಸ್ಟಿಮುಕ್ತ ಸಮಾಜ ನಿರ್ಮಿಸಲು ಪಾದಯಾತ್ರೆ ನಡೆಸಿದ್ದೇನೆ. ಹೀಗಾಗಿ ನಾನು ಮಾಡಿರುವ ಪಾದಯಾತ್ರೆಯ ಮಹತ್ವ ಅರಿಯಬೇಕು. ಇಂದಿನಿಂದಲೇ ಪ್ಲಾಸ್ಟಿಕ್ ನಿಷೇಧಿಸುವ ಕಾರ್ಯಕ್ಕೆ ಸಂಕಲ್ಪ ಮಾಡಬೇಕು. ಮಾಡಿದರೆ ಭಕ್ತರು ಇದೇ ಕಾಣಿಕೆಯಾಗಿ ನೀಡಿದಂತಾಗುತ್ತದೆ ಎಂದು ತಿಳಿಸಿದರು. ಸಂಸದ ಸಾಗರ ಖಂಡ್ರೆ ಅವರು ಅಭಿನವ ಶ್ರೀಗಳ ಮೊಬೈಲ್ ಜಾಗೃತಿ ಪಾದಯಾತ್ರೆ ಗ್ರಂಥ ಲೋಕಾರ್ಪಣೆಗೊಳಿಸಿ ಮಾತನಾಡಿ, ಸಮಾಜವನ್ನು ಸರಿದಾರಿಗೆ ತರುವ ಜೊತೆಗೆ ಜಾಗೃತಿಗೊಳಿಸುವ ಕಾರ್ಯ ಮಾಡುತ್ತಿರುವ ಅಭಿನವ ಶ್ರೀಗಳ ಕಾರ್ಯಕ್ಕೆ ಬೆಂಬಲ ನೀಡಿ ಅವರ ಜೊತೆಗಿರಬೇಕು. ಪ್ಲಾಸ್ಟಿಕ್ ಮುಕ್ತಗೊಳಿಸಲು ಸಂಕಲ್ಪ ಮಾಡಿ ಪರಿಸರ ಸಂರಕ್ಷಣೆಗೆ ಮುಂದಾಗಬೇಕು. ಇದರಿಂದ ಮುಂದಿನ ಪೀಳಿಗೆಗೆ ಉತ್ತಮ ಆರೋಗ್ಯ ಸಿಗಲು ಸಹಕಾರಿಯಾಗುತ್ತದೆ. ನಿಮ್ಮೆಲ್ಲರ ಆಶೀರ್ವಾದದಿಂದ ಸಂಸದನಾ ಗಿದ್ದು ನಿಮ್ಮ ಕಷ್ಟ-ಸುಖಗಳಲ್ಲಿ ಸದಾ ಭಾಗಿಯಾಗುವೆ ಸಮಸ್ಯೆಗಳಿದ್ದರೆ ಗಮನಕ್ಕೆ ತಂದರೆ ಪ್ರಯತ್ನಿಸಲು ಮುಂದಾಗುವೆ ಎಂದು ಭರವಸೆ ನೀಡಿದರು. ಜಹೀರಾಬಾದ್‌ನ ಶ್ರೀ ವೀರೇಶ್ವರ ಶಿವಾಚಾರ್ಯರು, ಶಾಸಕ ಶರಣು ಸಲಗರ, ಮಾಜಿ ಎಂಎಲ್‌ಸಿ ವಿಜಯ ಸಿಂಗ್, ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ ಹಿರಿಯ ಚಿತ್ರನಟ ಪಂಕಜ ವೆಂಕಟರಮಣ, ಡಾ. ಸಂಜೀವ ಕುಮಾರ ಅತಿವಾಳೆ ಮಾತನಾಡಿದರು.

ವೇದಿಕೆಯಲ್ಲಿ ಎಂಎಲ್‌ಸಿ ಎಂ.ಜಿ ಮುಳೆ, ಮೀನು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ಬಿ.ನಾರಾಯಣರಾವ, ನೀಲಕಂಠ ರಾಠೋಡ, ಬಾಬು ಹೊನ್ನಾನಾಯಕ, ಅರ್ಜುನ ಕನಕ, ಜ್ಞಾನೇಶ್ವರ ಮುಳೆ, ರಾಜಶೇಖರ ಸಾಹು ಸೀರಿ, ಶಾಂತಲಿಂಗ ಮಠಪತಿ, ಶರಣಪ್ಪ ಜಿ. ಬಿರಾದಾರ, ಶಿವಲಿಂಗಯ್ಯ ಕನ್ನಾಡೆ, ಸಿದ್ದಪ್ಪಾ ಎಂ.ಉಳ್ಳೆ, ವೀರಶೆಟ್ಟಿ ಎಂ.ಪಾಟೀಲ್, ಮನೋಹರ ಮೈನೆ, ಸಿದ್ದು ಬಿರಾದಾರ, ಶ್ರೀನಿವಾಸ ಇದ್ದರು. ಇದೇ ವೇಳೆಯಲ್ಲಿ ರವಿ ನಾವದ್ಗೇಕರ, ಶ್ರೀಶೈಲ ವಾತಡೆ, ಶಿವಕುಮಾರ ಬಿರಾದಾರ, ಲೋಕೇಶ ಮೋಳಕೆರೆ, ಸಂಜುಕುಮಾರ ಜಾಧವ, ಶ್ರೀನಿವಾಸ ಬಿರಾದಾರ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು. ರಮೇಶ ರಾಜೋಳೆ ಸ್ವಾಗತಿಸಿದರೆ, ಮಲ್ಲಿಕಾರ್ಜುನ ಆಲಗೂಡೆ ನಿರೂಪಿಸಿದರು. ಶ್ರೀಗಳ ಜನ್ಮ ದಿನದ ನಿಮಿತ್ತ ವಿವಿಧೆಡೆಯಿಂದ ಆಗಮಿಸಿದ್ದ ಶ್ರೀಮಠದ ಅಪಾರ ಭಕ್ತರು ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರನ್ನು ಸತ್ಕರಿಸಿ ಆಶೀರ್ವಾದ ಪಡೆದುಕೊಂಡರು.



ಬಸವಕಲ್ಯಾಣದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮ ದಿನದ ನಿಮಿತ್ತ ಇಲ್ಲಿಯ ಗವಿ ಮಠದಲ್ಲಿ ಶನಿವಾರ ಹಮ್ಮಿಕೊಂಡ್ದಿ ಧರ್ಮ ಸಮಾರಂಭದಲ್ಲಿ ಸಂಸದ ಸಾಗರ ಖಂಡ್ರೆ ಅವರು ಅಭಿನವ ಶ್ರೀಗಳ ಮೊಬೈಲ್ ಜಾಗೃತಿ ಪಾದಯಾತ್ರೆ ಗ್ರಂಥ ಲೋಕಾರ್ಪಣೆಗೊಳಿಸಿದರು.

ದಸರಾ ದರ್ಬಾರ ಕಾರ್ಯಕ್ರಮ

ಪ್ರತಿ ವರ್ಷ ತಮ್ಮ ಜನ್ಮ ದಿನದಂದು ಸಮಾಜಕ್ಕೆ ಉತ್ತಮ ಸಂದೇಶಗಳನ್ನು ಸಾರಿ ಸಮಾಜದ ಏಳಿಗೆಗೆ ಶ್ರಮಿಸುತ್ತಿರುವ ಡಾ.ಅಭಿನವ ಶ್ರೀಗಳ ಕಾರ್ಯ ಮಹತ್ವದ್ದಾಗಿದೆ ಎಂದು ಶಾಸಕ ಶರಣು ಸಲಗರ ಹೇಳಿದರು.

ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ರಂಭಾಪುರಿ ಶ್ರೀಗಳ ನೇತೃತ್ವದಲ್ಲಿ ಮುಂದಿನ ವರ್ಷ ಬಸವಕಲ್ಯಾಣದಲ್ಲಿ ದಸರಾ ದರ್ಬಾರ ಕಾರ್ಯಕ್ರಮ ನಡೆಯಲಿದೆ. ಮುಂಬರುವ ದಿನಗಳಲ್ಲಿ ತಾಲೂಕಿನ ಹಾರಕೂಡನಲ್ಲಿ ಈ ಕುರಿತು ಪೂರ್ವಭಾವಿ ಸಭೆ ಆಯೋಜಿಸಲು ನಿರ್ಧರಿಸಲಾಗಿದೆ. ಈ ಸಭೆಯಲ್ಲಿ ಎಲ್ಲ ಪಕ್ಷಗಳ ಮುಖಂಡರು ಭಾಗಿಯಾಗಲಿದ್ದು ಈ ಭಾಗದ ಸ್ವಾಮೀಜಿಗಳನ್ನು ಈ ಸಭೆಗೆ ಆಹ್ವಾನಿಸಿ ಕಾರ್ಯಕ್ರಮದ ಯಶಸ್ವಿಗಾಗಿ ಚರ್ಚಿಸಲಾಗುವುದು ಎಂದು ತಿಳಿಸಿದರು.

> ಕೇವಲ ಉಪಯೋಗಕ್ಕಷ್ಟೇ ಮೊಬೈಲ್ ಬಳಸಬೇಕು. ಆದರೆ ಹೆಚ್ಚು ಹೊತ್ತು ಆದರಲ್ಲೇ ಕಾಲ ಕಳೆಯುವುದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ಕಳೆದ ವರ್ಷ ಶ್ರೀಗಳು ಈ ಕುರಿತು ಜಾಗೃತಿ ನಡೆಸಿದ್ದಾರೆ. ಮೊಬೈಲ್ ಬಳಕೆ ಕಡಿಮೆಯಾದರೆ ಬೇರೆ ಕೆಲಸಗಳು ಮಾಡಲು ಸಹಕಾರಿಯಾಗುತ್ತದೆ.
>
> **-ವಿಜಯಸಿಂಗ್,**
> ಮಾಜಿ ಎಂಎಲ್‌ಸಿ.

> ಡಾ. ಅಭಿನವ ಶ್ರೀಗಳು ಸಮಾಜಕ್ಕಾಗಿ ಕೈಗೊಂಡ ಕಾರ್ಯಗಳ ಮಹತ್ವ ಅರಿಯಬೇಕು. ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಜತೆಗೆ ಗುಣಮಟ್ಟದ ಶಿಕ್ಷಣ ನೀಡಿ ಅವರ ಉಜ್ವಲ ಭವಿಷ್ಯ ರೂಪಿಸಬೇಕು ಹಾಗೂ ಸರಕಾರದ ಸೌಲಭ್ಯ ಪಡೆದುಕೊಂಡು ಮುಂದೆ ಬರಬೇಕು.
>
> **-ಧನರಾಜ ತಾಳಂಪಳ್ಳಿ**
> ಕಾಂಗ್ರೆಸ್ ಮುಖಂಡರು.

Scanned with OKEN Scanner

ನಟಿ ಡಾ.ಪಂಕಜ ವೆಂಕಟರಮಣ ಆಶಯ | ಅಭಿನವ ಶ್ರೀ ನೇತೃತ್ವದಲ್ಲಿ ಜಾಗೃತಿ ಪಾದಯಾತ್ರೆ

ಪ್ಲಾಸ್ಟಿಕ್‌ಮುಕ್ತ ಜೀವನವಾಗಲಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ತ್ರಿಪುರಾಂತ ಸಂಸ್ಥಾನ ಗವಿ ಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮೋತ್ಸವ ನಿಮಿತ್ತ ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ಮತ್ತು ಆರೋಗ್ಯದ ಮೇಲಾಗುತ್ತಿರುವ ಪ್ರತಿಕೂಲ ಪರಿಣಾಮ ಕುರಿತು ಪ್ಲಾಸ್ಟಿಕ್ ಮುಕ್ತ ಜೀವನ ಜನಜಾಗೃತಿ ಪಾದಯಾತ್ರೆ ನಗರದಲ್ಲಿ ಶುಕ್ರವಾರ ಜರುಗಿತು.

ಗಾಂಧಿ ವೃತ್ತದಿಂದ ಮುಖ್ಯ ರಸ್ತೆ ಮಾರ್ಗವಾಗಿ ತ್ರಿಪುರಾಂತನ ಮಡಿವಾಳ ಮಾಚಿದೇವರ ವೃತ್ತದವರೆಗೆ ಅಭಿನವ ಶ್ರೀ ನೇತೃತ್ವದಲ್ಲಿ ಜನಜಾಗೃತಿ ಮೂಡಿಸುವಂಥ ಫಲಕಗಳೊಂದಿಗೆ ನಡೆದ ಪಾದಯಾತ್ರೆಯಲ್ಲಿ ಬೇಡ-ಬೇಡ ಪ್ಲಾಸ್ಟಿಕ್ ಬಳಕೆ ಬೇಡ, ಸ್ವಚ್ಛ ಪರಿಸರ ಉತ್ತಮ ಆರೋಗ್ಯಕ್ಕಾಗಿ ಪ್ಲಾಸ್ಟಿಕ್ ಬೇಡ, ಪ್ಲಾಸ್ಟಿಕ್‌ಮುಕ್ತ ಜೀವನ ನಮ್ಮೆಲ್ಲರದಾಗಲಿ ಎಂಬ ಘೋಷಣೆಗಳು ಮೊಳಗಿದವು.

ಹಿರಿಯ ಚಲನಚಿತ್ರ ನಟಿ ಡಾ.ಪಂಕಜ ವೆಂಕಟರಮಣ ಮಾತನಾಡಿ, ಸಮಾಜದ ಆರೋಗ್ಯ ಮತ್ತು ಏಳಿಗೆ ಆಶಯದೊಂದಿಗೆ ಪ್ಲಾಸ್ಟಿಕ್‌ಮುಕ್ತ ಸಮಾಜಕ್ಕಾಗಿ ಅಭಿನವ ಶ್ರೀಗಳು ಪಾದಯಾತ್ರೆ ನಡೆಸುತ್ತಿರುವುದು ಶ್ಲಾಘನೀಯ. ನಗರ ಸೇರಿ ಗ್ರಾಮೀಣ ಭಾಗಕ್ಕೂ ವ್ಯಾಪಿಸಿರುವ ಪ್ಲಾಸ್ಟಿಕ್ ಬಳಕೆ ನಿಯಂತ್ರಿಸಲು ಜನರು ಮುಂದಾಗಬೇಕು. ಪ್ಲಾಸ್ಟಿಕ್ ಮುಕ್ತ ಕಲ್ಯಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಬಿಡಿವಿಸಿ ಉಪಾಧ್ಯಕ್ಷರಾದ ಮಕ್ಕಳ ತಜ್ಞ ಡಾ.ಜಿ.ಎಸ್. ಭುರಳೆ ಮಾತನಾಡಿ, ಪ್ಲಾಸ್ಟಿಕ್‌ನಲ್ಲಿ ಆಹಾರವಷ್ಟೇ ಅಲ್ಲ ಚಹಾ ಸೇವನೆಯೂ ಆರೋಗ್ಯಕ್ಕೆ ಹಾನಿಕರ ಎಂಬುದು ಗೊತ್ತಿದ್ದರೂ ಸೇವಿಸುತ್ತೇವೆ. ಪ್ಲಾಸ್ಟಿಕ್ ಬಳಕೆ ಬಗ್ಗೆ ಜಾಗ್ರತೆ ವಹಿಸುವ ಅಗತ್ಯವಿದೆ. ಪ್ಲಾಸ್ಟಿಕ್‌ಮುಕ್ತ ಸಮಾಜ ನಿರ್ಮಾಣವಾಗಬೇಕು ಎಂಬ ಸಂಕಲ್ಪ, ಸದಾಶಯದೊಂದಿಗೆ ಶ್ರೀಗಳು ಪಾದಯಾತ್ರೆ ಹಮ್ಮಿಕೊಂಡಿದ್ದಾರೆ ಎಂದರು.

ನಿವೃತ್ತ ಟಿಎಚ್‌ಒ ಡಾ.ವಿ.ಎಸ್. ಮಠಪತಿ ಮಾತನಾಡಿ, ಜನರು ಪ್ಲಾಸ್ಟಿಕ್ ಬಳಸುವುದರಿಂದ ತಮ್ಮ ಆರೋಗ್ಯದ ಮೇಲಷ್ಟೇ ಅಲ್ಲ ಸುತ್ತಲಿನ ಪರಿಸರದ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತದೆ. ಪ್ಲಾಸ್ಟಿಕ್ ಬಳಕೆ ನಿಷೇಧಿಸುವ ಸಂಬಂಧ ಪರಿಣಾಮಕಾರಿ ಕಾನೂನು ರೂಪಿಸಿ ಅನುಷ್ಠಾನಕ್ಕೆ ತರಬೇಕು. ಆರೋಗ್ಯ ಇಲಾಖೆಯಿಂದ ಹೋಟೆಲ್, ಅಂಗಡಿಗಳಲ್ಲಿ ಪರಿಶೀಲಿಸಿ ಪ್ಲಾಸ್ಟಿಕ್ ಬಳಸಿದರೆ ದಂಡ ಹಾಕಬೇಕು. ಜತೆಗೆ ಸ್ವಯಂ ಜಾಗೃತರಾಗಿ ಪ್ಲಾಸ್ಟಿಕ್ ಬಳಸುವುದನ್ನು ಬಿಡಬೇಕು ಎಂದು ಸಲಹೆ ನೀಡಿದರು.

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಆಶೀರ್ವಚನ ನೀಡಿದರು. ಉಪನ್ಯಾಸಕರ ಸಂಘದ ರಾಜ್ಯ ಕಾರ್ಯದರ್ಶಿ ನರಸಿಂಗರೆಡ್ಡಿ ಗದಲೇಗಾಂವ, ಪ್ರಮುಖರಾದ ಅರ್ಜುನ ಕನಕ, ಶಿವಕುಮಾರ ಬಿರಾದಾರ, ರವಿ ನಾವದ್ಗೇಕರ ಮಾತನಾಡಿ, ಪ್ರತಿವರ್ಷ ಜನ್ಮದಿನ ನಿಮಿತ್ತ ಜನಹಿತ ದೃಷ್ಟಿಯಿಂದ ಜನಜಾಗೃತಿ ಮೂಡಿಸುವ ಶ್ರೀಗಳ ಸಮಾಜಮುಖಿ ಕಾರ್ಯಕ್ಕೆ ಎಲ್ಲರೂ ಬೆಂಬಲಿಸಬೇಕು ಎಂದು ಕೋರಿದರು.

ಬಿಡಿಪಿಸಿ ಅಧ್ಯಕ್ಷ ಬಸವರಾಜ ಕೊರಕೆ, ನಿರ್ದೇಶಕ ಮಲ್ಲಯ್ಯ ಹಿರೇಮಠ, ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ವಿಶ್ವ ಹಿಂದು ಪರಿಷತ್ ತಾಲೂಕು ಅಧ್ಯಕ್ಷ ಶ್ರೀಶೈಲ ವಾತಡೆ, ಪ್ರಮುಖರಾದ ಬಸವಂತಪ್ಪ ಲವಾರೆ, ಎ.ಜಿ. ಪಾಟೀಲ್, ಲೋಕೇಶ ಮೋಳಕೆರೆ, ರುದ್ರೇಶ್ವರ ಗೋರ್ಟಾ, ಬಸವಣಪ್ಪ ನೆಲೋಗಿ, ಡಾ.ವಿ.ಎಸ್. ರಾಜೋಳೆ, ರಾಹುಲ್ ತುತಾರೆ, ಜಗನ್ನಾಥ ಪತಂಗೆ, ರಮೇಶ ರಾಜೋಳೆ, ಬಸವಂತಪ್ಪ ಪಾಟೀಲ್, ಮರೆಪ್ಪ ಪಾಟೀಲ್, ರಾಕೇಶ ಪುರವಂತ, ರಾಚಯ್ಯ ಮಠಪತಿ, ದಯಾನಂದ ಶೀಲವಂತ, ಶಿವಲಿಂಗ ಸ್ವಾಮಿ ಕನ್ನಾಡೆ, ಸಿದ್ದು ಉಳ್ಳೆ, ಸಂದೀಪ ಪಾಟೀಲ್, ಲಿಂಗರಾಜ ಬಿರಾದಾರ, ಲಿಂಗರಾಜ ಘಾಳಿ, ಲಕ್ಷ್ಮೀಪುತ ನಿಂಬಾಳಕರ್, ಶಾಂತವೀರ ಸ್ವಾಮಿ, ರೇವಣಸಿದ್ದಯ್ಯ ವಸ್ತ್ರದ, ಶಿವು ಮಠಪತಿ, ಪ್ರಕಾಶ ಬಿರಾದಾರ ಇತರರು ಪಾಲ್ಗೊಂಡಿದ್ದರು.



ವಿಜಯವಾಣಿ

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನೇತೃತ್ವದಲ್ಲಿ ಬಸವಕಲ್ಯಾಣದ ಗಾಂಧಿ ವೃತ್ತದಿಂದ ತ್ರಿಪುರಾಂತನ ಮಡಿವಾಳ ಮಾಚಿದೇವರ ವೃತ್ತದವರೆಗೆ ಶುಕ್ರವಾರ ಪ್ಲಾಸ್ಟಿಕ್‌ಮುಕ್ತ ಜೀವನ ಜನಜಾಗೃತಿ ಪಾದಯಾತ್ರೆ ಜರುಗಿತು. ಚಲನಚಿತ್ರ ನಟಿ ಡಾ.ಪಂಕಜ ವೆಂಕಟರಮಣ, ಡಾ.ಜಿ.ಎಸ್.ಭುರಳೆ, ಡಾ.ವಿ.ಎಸ್.ಮಠಪತಿ, ಅರ್ಜುನ ಕನಕ, ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ಜಗನ್ನಾಥ ಪತಂಗೆ, ಶಿವಕುಮಾರ ಬಿರಾದಾರ, ಲಕ್ಷ್ಮೀಪುತ ನಿಂಬಾಳಕರ್ ಇದ್ದರು.

> ನಿತ್ಯ ಜೀವನದಲ್ಲಿ ಪ್ಲಾಸ್ಟಿಕ್ ಬಳಸುವುದನ್ನು ಬಿಡುವ ಸಂಕಲ್ಪ ಮಾಡುವುದೇ ನೀವು ನನಗೆ ಜನ್ಮದಿನ ನಿಮಿತ್ತ ನೀಡುವ ಬಹುದೊಡ್ಡ ಕಾಣಿಕೆ. ಪಟ್ಟಾಧಿಕಾರ ವರ್ಧಂತಿ ಮತ್ತು ಜನ್ಮದಿನ ನಿಮಿತ್ತ ಪ್ರತಿವರ್ಷ ಸಮಾಜಕ್ಕೆ ಒಳ್ಳೆಯದಾಗಲಿ ಎಂಬ ಆಶಯದೊಂದಿಗೆ ಪಾದಯಾತ್ರೆ ಮೂಲಕ ಜನಜಾಗೃತಿ ಮೂಡಿಸಲಾಗುತ್ತಿದೆ.
>
> | ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ
> ಪೀಠಾಧಿಪತಿ, ಸಂಸ್ಥಾನ ಗವಿಮಠ ತ್ರಿಪುರಾಂತ

VIJAYAVANI KALABURAGI ನಂ1 ವಿಜಯವಾಣಿ ಶನಿವಾರ 28 ಸೆಪ್ಟೆಂಬರ್ 2024 28 SEPTEMBER 2024

ಬಸವಕಲ್ಯಾಣ: ಪ್ಲಾಸ್ಟಿಕ್ ಮುಕ್ತಕ್ಕೆ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ನಗರದ ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರ ವರ್ಧಂತಿ ಹಾಗೂ ಜನ್ಮದಿನಾಚರಣೆ ಅಂಗವಾಗಿ ಶುಕ್ರವಾರ ಪ್ಲಾಸ್ಟಿಕ್ ಮುಕ್ತ ಜೀವನ ಜಾಗೃತಿಗಾಗಿ ಪಾದಯಾತ್ರೆ ನಡೆಯಿತು.

ಅಭಿಯಾನದಲ್ಲಿ ಪಾಲ್ಗೊಂಡಿದ್ದ ರಂಗಕರ್ಮಿ ಪಂಕಜಾ ವೆಂಕಟರಮಣ ಮಾತನಾಡಿ, 'ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪಟ್ಟಾಧಿಕಾರ ಮಹೋತ್ಸವಕ್ಕೆ ಪ್ರತಿವರ್ಷ ವಿವಿಧ ರೀತಿಯ ಅಭಿಯಾನ ನಡೆಸುತ್ತಿರುವುದು ಮಾದರಿ ಕಾರ್ಯವಾಗಿದೆ' ಎಂದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಉತ್ತಮ ಆರೋಗ್ಯಕ್ಕೆ ಪ್ಲಾಸ್ಟಿಕ್ ಬಳಕೆ ತಡೆಯುವುದು ಅತ್ಯಂತ ಅವಶ್ಯಕ. ಪ್ರತಿಯೊಬ್ಬರೂ ಪ್ಲಾಸ್ಟಿಕ್ ಬಳಕೆ ತಡೆಗೆ ಸಂಕಲ್ಪ ತೊಡಬೇಕು' ಎಂದರು.

ಡಾ.ಜಿ.ಎಸ್.ಭುರಳೆ ಮಾತನಾಡಿ, 'ಪ್ಲಾಸ್ಟಿಕ್ ಕಪ್‌ನಲ್ಲಿ ಚಹಾ ಸೇವನೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಆಗುತ್ತದೆ' ಎಂದರು.

ಮುಖಂಡ ಅರ್ಜುನ ಕನಕ, ಬಜರಂಗದಳ ತಾಲ್ಲೂಕು ಸಂಚಾಲಕ ರವಿ ನಾವದ್ಗೇಕರ್, ಉಪನ್ಯಾಸಕ ನರಸಿಂಗರೆಡ್ಡಿ ಗದ್ಗೇಗಾಂವ, ಶಿವಕುಮಾರ ಬಿರಾದಾರ, ಡಾ.ವಿ.ಎಸ್.ಮಠಪತಿ ಮಾತನಾಡಿದರು. ಗವಿಮಠ ಟ್ರಸ್ಟ್ ಅಧ್ಯಕ್ಷ ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ರುದ್ರೇಶ್ವರ ಗೋರಟಾ, ಜಗನ್ನಾಥ ಪತಂಗೆ, ಬಸವಣ್ಣಪ್ಪ ನೆಲ್ಲಗಿ, ಗುರು ದೇಗಾಂವ, ಲಕ್ಷ್ಮಿಕಾಂತ ನಿಂಬಾಳಕರ್, ದತ್ತು ಭಂಡೆ, ಲೋಕೇಶ ಮೋಳಕೆರೆ, ಧನರಾಜ ರಾಜೋಳೆ, ಪ್ರಕಾಶ ಬಿರಾದಾರ, ಪೋಪಟ್ ಜಮಾದಾರ, ಶಿವಲಿಂಗಸ್ವಾಮಿ ಕನಾಡೆ, ಸಿದ್ದು ಉಳ್ಳೆ, ಶಿವು ಮಠಪತಿ ನಾರಾಯಣಪುರ, ರಾಕೇಶ ಪುರವಂತ ಪಾಲ್ಗೊಂಡಿದ್ದರು.



ಬಸವಕಲ್ಯಾಣದಲ್ಲಿ ಶುಕ್ರವಾರ ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಪ್ಲಾಸ್ಟಿಕ್ ಮುಕ್ತ ಜೀವನ ಜಾಗೃತಿಗಾಗಿ ಪಾದಯಾತ್ರೆ ನಡೆಯಿತು

ಶನಿವಾರ • ಸೆಪ್ಟೆಂಬರ್ 28, 2024 ಪ್ರಜಾವಾಣಿ

Scanned with OKEN Scanner

ಪ್ಲಾಸ್ಟಿಕ್ ಮುಕ್ತ ಜೀವನ ಜನ ಜಾಗೃತಿ ಕುರಿತು ಪಾದಯಾತ್ರೆ | ಗವಿಮಠ ಶ್ರೀ ರುದ್ರಮುನಿ ಶ್ರೀ ಚಾಲನೆ

ಆರೋಗ್ಯಕ್ಕಾಗಿ ಪ್ಲಾಸ್ಟಿಕ್ ನಿಷೇಧ ಅಗತ್ಯ

ಬಸವಕಲ್ಯಾಣ: ಇಲ್ಲಿಯ ಸಂಸ್ಥಾನ ಗವಿ ಮಠದ ಪೂಜ್ಯ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸ್ವಾಮೀಜಿ ಅವರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮ ದಿನವ ಪ್ರಯುಕ್ತ ನಗರದಲ್ಲಿ ಪ್ಲಾಸ್ಟಿಕ್ ಮುಕ್ತ ಜೀವನ ಜನ ಜಾಗೃತಿ ಕುರಿತು ಪಾದಯಾತ್ರೆ ಜರುಗಿತು.

ಜನರು ಪ್ಲಾಸ್ಟಿಕ್ ಬಳಸುವುದರಿಂದ ಮನುಷ್ಯನ ಆರೋಗ್ಯದ ಮೇಲೆ ಪರಿಣಾಮಗಳು ಬೀರುತ್ತಿವೆ. ಹೀಗಾಗಿ ನಾವೇ ಜಾಗೃತಗೊಂಡು ನಿಷೇಧಿಸಲು ಮುಂದಾಗಬೇಕು ಅಲ್ಲದೆ ಸರಕಾರ ಪ್ಲಾಸ್ಟಿಕ್ ನಿಷೇಧಿಸುವ ಕುರಿತು ಕಾನೂನು ರೂಪಿಸಿ ಕಡಿವಾಣ ಹಾಕಲು ಮುಂದಾಗಬೇಕು. ಅಲ್ಲದೆ ಆರೋಗ್ಯ ಇಲಾಖೆಯಿಂದ ಹೋಟೆಲ್, ಅಂಗಡಿಗಳಲ್ಲಿ ಪರಿಶೀಲಿಸಿ ಪ್ಲಾಸ್ಟಿಕ್ ಬಳಸಿದರೆ ದಂಡ ಹಾಕಲು ಮುಂದಾಗಬೇಕು.

- ಡಾ.ಅಭಿನವ ಘನಲಿಂಗ ರುದ್ರಮುನಿ, ಶ್ರೀಗಳು



ಬಸವಕಲ್ಯಾಣ ನಗರದಲ್ಲಿ ಶ್ರೀಗಳ ನೇತೃತ್ವದಲ್ಲಿ ಪ್ಲಾಸ್ಟಿಕ್ ಮುಕ್ತ ಜೀವನ ಜನ ಜಾಗೃತಿ ಕುರಿತು ಪಾದಯಾತ್ರೆ ನಡೆಯಿತು.

ಪೂಜ್ಯ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನಿಧ್ಯದಲ್ಲಿ ನಗರದ ಗಾಂಧಿ ವೃತ್ತದಿಂದ ಮುಖ್ಯ ರಸ್ತೆಯ ಮಾರ್ಗವಾಗಿ ತ್ರೀಪುರಾಂತನ ಮಡಿವಾಳ ಮಾಚಿದೇವರ ವೃತ್ತದ ವರೆಗೆ ಜರುಗಿದ ಈ ಪಾದಯಾತ್ರೆಯಲ್ಲಿ ವಿವಿಧ ಪಕ್ಷಗಳ ಮುಖಂಡರು, ವಿವಿಧ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು, ವಿವಿಧ ಸಂಘ-ಸಂಸ್ಥೆಗಳ ಪ್ರಮುಖರು ಪಾಲ್ಗೊಂಡು ಶ್ರೀಗಳು ಕೈಗೊಂಡ ಕಾರ್ಯಕ್ಕೆ ಬೆಂಬಲ ಸೂಚಿಸಿದರು. ಪ್ಲಾಸ್ಟಿಕ್ ಮುಕ್ತ ಜೀವನ ಜನ ಜಾಗೃತಿ ಕುರಿತು ಜರುಗಿದ ಪಾದಯಾತ್ರೆಯಲ್ಲಿ ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಿಸುವ ಫಲಕಗಳು ರಾರಾಜಿಸುತ್ತಿದ್ದವು. ಬೇಡ-ಬೇಡ ಪ್ಲಾಸ್ಟಿಕ್ ಬೇಡ, ಸ್ವಚ್ಛ ಪರಿಸರಕ್ಕಾಗಿ ಪ್ಲಾಸ್ಟಿಕ್ ನಿಷೇಧ ಎಂಬ ಘೋಷಣೆಗಳು ಪಾದಯಾತ್ರೆಯಲ್ಲಿ ಮೊಳಗಿದವು.

ಹಿರಿಯ ಚಿತ್ರನಟಿ ಪಂಕಜ ವೆಂಕಟರಮಣ ಮಾತನಾಡಿ ಸಮಾಜದ ಏಳಿಗೆಗಾಗಿ ಶ್ರಮಿಸಿ, ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣವಾಬೇಕು ಎಂದು ಗವಿ ಮಠದ ಶ್ರೀಗಳು ಹಮ್ಮಿಕೊಂಡ ಪಾದಯಾತ್ರೆಗೆ ನಗರ ಹಾಗೂ ಗ್ರಾಮೀಣ ಜನರು ಬೆಂಬಲಿಸಿ ಪ್ಲಾಸ್ಟಿಕ್ ನಿಷೇಧಿಸಲು ಮುಂದಾಗಬೇಕು ಅಲ್ಲದೆ ಈ ನಗರ ಪ್ಲಾಸ್ಟಿಕ್ ಮುಕ್ತ ನಗರವಾನ್ನಾಗಿಸಲು ಎಲ್ಲರೂ ಕೈಜೋಡಿಸಬೇಕು ಎಂದರು.

ಗವಿ ಮಠದ ಪೂಜ್ಯ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಪ್ರತಿ ವರ್ಷ ನನ್ನ ಜನ್ಮ ದಿನದ ಪ್ರಯುಕ್ತ ಸಮಾಜಕ್ಕೆ ಒಳ್ಳೆಯವಾಗುವ ನಿಟ್ಟಿನಲ್ಲಿ ಪ್ರತಿ ವರ್ಷ ಪಾದಯಾತ್ರೆಯ ಮೂಲಕ ಸಂದೇಶ ಸಾರಲಾಗುತ್ತಿದೆ. ಕಳೆದ ವರ್ಷ ಮೊಬೈಲ್ ಕುರಿತು ಜಾಗೃತಿ ಹಮ್ಮಿಕೊಳ್ಳಲಾಗಿದ್ದು ಈ ಬಾರಿ ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣವಾಗುವ ನಿಟ್ಟಿನಲ್ಲಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಹೀಗಾಗಿ ಎಲ್ಲರೂ ಪ್ಲಾಸ್ಟಿಕ್ ನಿಷೇಧ ಮಾಡುತ್ತೇವೆ ಎಂದು ಸಂಕಲ್ಪ ಮಾಡಿದರೆ ಭಕ್ತರು ನನ್ನ ಜನ್ಮ ದಿನಕ್ಕೆ ನೀಡುವ ಉಡುಗೊರೆ ಇದೇ ಆಗಿರುತ್ತದೆ ಎಂದು ತಿಳಿಸಿದರು.

ಈ ವೇಳೆ ನರಸಿಂಗ ರೆಡ್ಡಿ ಗದಲೇಗಾಂವ, ಅರ್ಜುನ ಕನಕ, ಶಿವಕುಮಾರ ಬಿರಾದಾರ, ರವಿ ನಾವದ್ಗೇಕರ ಮಾತನಾಡಿ, ಗವಿ ಮಠದ ಪೂಜ್ಯ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪ್ರತಿ ವರ್ಷ ತಮ್ಮ ಜನ್ಮ ದಿನದ ಪ್ರಯುಕ್ತ ಸಮಾಜಕ್ಕೆ ಒಳ್ಳೆಯ

ಪ್ಲಾಸ್ಟಿಕ್ ಮುಕ್ತ ಕೈಜೋಡಿಸಿ

ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಿಸಲು ಎಲ್ಲರೂ ಕೈಜೋಡಿಸಬೇಕು. ಆರೋಗ್ಯಕ್ಕೆ ಹಾನಿಯಿದೆ ಎಂದು ಗೊತ್ತಿದ್ದರೂ ಕೂಡ ಜನರು ಗಮನಹರಿಸುತ್ತಿಲ್ಲ. ಪ್ಲಾಸ್ಟಿಕ್ ನಿಷೇಧಿಸಲು ಶ್ರೀಗಳಿಗೆ ಕಾಣಿಕೆ ರೂಪದಲ್ಲಿ ಉಡುಗೊರೆಯಾಗಿ ನೀಡಬೇಕು ಎಂದು ಡಾ. ಜಿ.ಎಸ್ ಭುರಾಳೆ ಖ್ಯಾತ ಮಕ್ಕಳ ತಜ್ಞರು ತಿಳಿಸಿದರು.

ಸಂದೇಶ ಸಾರುವ ಕೆಲಸ ಮಾಡುತ್ತಿದ್ದಾರೆ ಹೀಗಾಗಿ ಅವರು ಮಾಡುವ ಕಾರ್ಯಗಳಿಗೆ ನಾವೆಲ್ಲರೂ ಬೆಂಬಲ ಸೂಚಿಸುವ ಮೂಲಕ ಗುರುಗಳು ತೋರುವ ಮಾರ್ಗದಲ್ಲಿ ಮುಂದೆ ಸಾಗೋಣ ಎಂದು ತಿಳಿಸಿದರು. ಖ್ಯಾತ ಮಕ್ಕಳ ತಜ್ಞ ಡಾ. ಜಿ.ಎಸ್ ಭುರಾಳೆ ಹಾಗೂ ಖ್ಯಾತ ಹಿರಿಯ ವೈದ್ಯ ಡಾ. ವಿ.ಎಸ್ ಮಠಪತಿ ಮಾತನಾಡಿದರು.

ಮುಖಂಡರಾದ ಶರಣಪ್ಪ ಬಿರಾದಾರ, ಬಸವಂತಪ್ಪಾ ಲವಾರೆ, ಪ್ರೊ ರುದ್ರೇಶ ಗೋರ್ಟಾ, ಬಸವಣಪ್ಪ ನೆಲೋಗಿ, ಡಾ. ವಿ.ಎಸ್ ರಾಜೋಳೆ, ಜಗನ್ನಾಥ ಪತಂಗೆ, ರಮೇಶ ರಾಜೋಳೆ, ರಾಕೇಶ ಪುರವಂತ, ರಾಚಯ್ಯ ಮಠಪತಿ, ಪ್ರೊ ದಯಾನಂದ ಶೀಲವಂತ, ಶಿವಲಿಂಗ ಸ್ವಾಮಿ ಕನ್ನಾಡೆ,ಸಿದ್ದು ಉಳ್ಳೆಸಂದೀಪ ಪಾಟೀಲ, ಲಿಂಗರಾಜ ಬಿರಾದಾರ, ಲಿಂಗರಾಜ ಘಾಳೆ, ಶಾಂತವೀರ ಸ್ವಾಮಿ, ರೇವಣಸಿದ್ದಯ್ಯ ವಸ್ತ್ರದ, ಲೋಕೇಶ ಮೋಳಕೆರೆ, ಶಿವು ಮಠಪತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

Scanned with OKEN Scanner

ಪಟ್ಟಾಧಿಕಾರ ವರ್ಧಂತಿ ಮಹೋತ್ಸವ 28ಕ್ಕೆ

ಪ್ಲಾಸ್ಟಿಕ್ ಮುಕ್ತ ಸಮಾಜಕ್ಕೆ ಪಣ ತೊಟ್ಟ ಗವಿ ಮಠದ ಶ್ರೀಗಳು

ವಿಕ ಸುದ್ದಿಲೋಕ ಬಸವಕಲ್ಯಾಣ

ಇಲ್ಲಿಯ ಗವಿ ಮಠದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮದಿನ ಕಾರ್ಯಕ್ರಮವು ಇಲ್ಲಿಯ ಗವಿ ಮಠದಲ್ಲಿ ಸೆ.28 ರಂದು ಜರುಗಲಿದೆ ಎಂದು ಯುವ ಮುಖಂಡ ಶಿವಕುಮಾರ ಬಿರಾದಾರ ತಿಳಿಸಿದರು.

ನಗರದ ಆರ್ಯ ಸಮಾಜ ಭವನದಲ್ಲಿ ಭಾನುವಾರ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಶ್ರೀಗಳ ಜನ್ಮ ದಿನದ ನಿಮಿತ್ತ ಸೆ.27ರಂದು ಬೆಳಗ್ಗೆ 10ಕ್ಕೆ ನಗರದಲ್ಲಿ ಪ್ಲಾಸ್ಟಿಕ್ ಮುಕ್ತ ಜೀವನ ಜನ ಜಾಗೃತಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ನಗರದ ಗಾಂಧಿ ವೃತ್ತದಿಂದ ಮುಖ್ಯ ರಸ್ತೆಯ ಮಾರ್ಗವಾಗಿ ತ್ರಿಪುರಾಂತ ಮಡಿವಾಳ ಮಾಚಿದೇವರ ವೃತ್ತದವರೆಗೆ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನೇತೃತ್ವದಲ್ಲಿ ಈ ಪಾದಯಾತ್ರೆ ಜರುಗಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ಮಠದಭಕ್ತರು, ಸಾರ್ವಜನಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಹೇಳಿದರು.

ಗವಿ ಮಠದ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಮಾತನಾಡಿ, ಗವಿಮಠದ ಶ್ರೀಗಳು ಪ್ರತಿ ವರ್ಷವೂ ತಮ್ಮ ಜನ್ಮದಿನದ ನಿಮಿತ್ತ ಸಮಾಜದ ಒಳಿತಿಗಾಗಿ ವಿನೂತನ ಕಾರ್ಯಕ್ರಮಗಳು ಹಾಗೂ ಜಾಗೃತಿ ಅಭಿಯಾನವನ್ನು ಮಾಡುತ್ತಾ ಬಂದಿದ್ದಾರೆ. ಕೋವಿಡ್ ಕುರಿತು ಜಾಗೃತಿ, ಅಭಿನವ ಜೋಳಿಗೆ, ಸಸಿ ನೆಡುವ ಕಾರ್ಯಕ್ರಮ, ಮೊಬೈಲ್‌ಯಿಂದ ಮಕ್ಕಳಿಗೆ ದೂರವಿಡಿ ಎಂಬ ಹತ್ತಾರು ಜಾಗೃತಿ ಅಭಿಯಾನವನ್ನು ಶ್ರೀಗಳು ಮಾಡಿದ್ದಾರೆ. ಸಮಾಜದಲ್ಲಿ ಆಗುತ್ತಿರುವ ಸಮಸ್ಯೆಗಳನ್ನು ಮನಗಂಡು ಶ್ರೀಗಳು ಜನರಲ್ಲಿ ಜಾಗೃತಿ ತರುವ ಉದ್ದೇಶದಿಂದ ಸೆ-27ರಂದು ಪ್ಲಾಸ್ಟಿಕ್ ಮುಕ್ತ ಸಮಾಜಕ್ಕೆ ಪಣ ತೊಟ್ಟ ಶ್ರೀಗಳ ಕಾರ್ಯಕ್ಕೆ ನಾವೆಲ್ಲರೂ ಬೆಂಬಲವಾಗಿ ನಿಲ್ಲೋಣ ಎಂದರು.



ಬಸವಕಲ್ಯಾಣ ನಗರದ ಆರ್ಯ ಸಮಾಜ ಭವನದಲ್ಲಿ ಭಾನುವಾರ ಕರೆದ ಪತ್ರಿಕಾಗೋಷ್ಠಿಯಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮ ದಿನ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಡಾ.ಅಭಿನವ ಶ್ರೀಗಳು ಬಿಡುಗಡೆಗೊಳಿಸಿದರು.

ಯುವ ಮುಖಂಡ ಲೊಕೇಶ ಮೋಳಕೆರೆ ಮಾತನಾಡಿ, ಗವಿ ಮಠದ ಶ್ರೀಗಳ ನೇತೃತ್ವದಲ್ಲಿ ನಡೆಯಲಿರುವ ಪ್ಲಾಸ್ಟಿಕ್ ಮುಕ್ತ ಜೀವನ ಜನ ಜಾಗೃತಿ ಪಾದಯಾತ್ರೆಯಲ್ಲಿ ನಗರದ ವಿವಿಧ ಶಾಲಾ, ಕಾಲೇಜು ವಿದ್ಯಾರ್ಥಿಗಳು, ಸಂಘಟನೆಯ ಮುಖಂಡರು, ಸಾರ್ವಜನಿಕರು ಗಣ್ಯರು ಭಾಗಿಯಾಗಲಿದ್ದಾರೆ. ಪಾದಯಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಭಾಗಿಯಾಗಿ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡೋಣ ಎಂದು ಮನವಿ ಮಾಡಿದರು.

ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಇದೇ ಸಂದರ್ಭದಲ್ಲಿ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38 ನೇ ಜನ್ಮ ದಿನೋತ್ಸವದ ಆಮಂತ್ರಣ ಪತ್ರಿಕೆಯನ್ನು ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಹಸ್ತದಿಂದ ಬಿಡುಗಡೆಗೊಳಿಸಲಾಯಿತು.

ಹಲವು ಗಣ್ಯರು ಭಾಗಿ: ಸೆ.28ರಂದು ಜರುಗಲಿರುವ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮದಿನೋತ್ಸವ ಸಮಾರಂಭದ ಸಾನ್ನಿಧ್ಯವನ್ನು ಹಿರನಾಗಾಂವನ ಶ್ರೀ ಜಯ ಶಾಂತಲಿಂಗ ಮಹಾಸ್ವಾಮೀಜಿ ವಹಿಸಲಿದ್ದಾರೆ. ತೆಲಂಗಾಣದ ಶ್ರೀ ವೀರೇಶ್ವರ ಶಿವಾಚಾರ್ಯರು ಆಗಮಿಸುವರು. ಸಂಸದ ಸಾಗರ್ ಖಂಡ್ರೆ, ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ್ ಸಿಂಗ್, ಶಾಸಕ ಶರಣು ಸಲಗರ, ಎಂಎಲ್ಸಿ ಎಂ.ಜಿ.ಮುಳೆ, ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಮಾಲಾ ಬಿ.ನಾರಾಯಣರಾವ, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಮಾಜಿ ಎಂಎಲ್ಸಿ ವಿಜಯಸಿಂಗ್, ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ ಸೇರಿದಂತೆ ಹಲವು ಮುಖಂಡರು, ಗಣ್ಯರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಗವಿ ಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದ್ದಾರೆ.

ವಿಜಯವಾಣಿ VK ಸೋಮವಾರ,23 ಸೆಪ್ಟೆಂಬರ್ 2024, ಕಲಬುರಗಿ



ಬಸವಕಲ್ಯಾಣ :– ನಗರದ ಇತಿಹಾಸ ಪ್ರಸಿದ್ಧ ಶ್ರೀ ಜಗದ್ಗುರು ಘನಲಿಂಗರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಪೂಜ್ಯಶ್ರೀ ಷ. ಬ್ರ. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮದಿನೋತ್ಸವದ ಕಾರ್ಯಕ್ರಮದಲ್ಲಿ ಪೂಜ್ಯಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರರಿಗೆ ಪರಮ ಭಕ್ತರಾದ ಹಣಮಂತವಾಡಿ ಆರ್ ಜಯರಾಜ ಗೋಪಾಲಕೃಷ್ಣ ಕಮ್ಮ ಶಿವಕುಮಾರ, ಸಾಗರ ಅವರಿಂದ ಪೂಜ್ಯರಿಗೆ ಸನ್ಮಾನಿಸಲಾಯಿತು. (ಮಲ್ಲಮ್ಮ ನುಡಿ ಚಿತ್ರ)



ಬಸವಕಲ್ಯಾಣ :– ನಗರದ ಇತಿಹಾಸ ಪ್ರಸಿದ್ಧ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠದಲ್ಲಿ ಪೂಜ್ಯಶ್ರೀ ಷ. ಬ್ರ. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮದಿನೋತ್ಸವದ ಕಾರ್ಯಕ್ರಮದಲ್ಲಿ ಹಣಮಂತವಾಡಿ (ಆರ್) ಶ್ರೀ ಮಹಾಲಕ್ಷ್ಮೀ ಮಹಿಳಾ ಭಜನೆ ಮತ್ತು ಸಂಸ್ಕೃತಿಕ ಸಂಘದ ಮಹಿಳೆಯರಿಗೆ ಪೂಜ್ಯಶ್ರೀ ಷ. ಬ್ರ. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಪ್ರಮಾಣ ಪತ್ರ ವಿತರಿಸಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಕಾರ್ಯದರ್ಶಿಗಳು ಹಾಗೂ ಇತರರು ಇದ್ದರು. (ಮಲ್ಲಮ್ಮ ನುಡಿ ಚಿತ್ರ)

ಪ್ರಜಾವಾಣಿ ನುಡಿ ದಿನಾಂಕ 29-09-2024

Scanned with OKEN Scanner

ಸಮಾಜಕ್ಕೆ ಒಳ್ಳೆಯ ಸಂದೇಶ ಸಾರುವ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರ ಕಾರ್ಯ ಶ್ಲಾಘನೀಯ

ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಿ

ಸಂ.ಕ.ಸಮಾಚಾರ ಬಸವಕಲ್ಯಾಣ : ಇಲ್ಲಿಯ ಸಂಸ್ಥಾನ ಗವಿ ಮಠದ ಶ್ರೀ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮದಿನದ ಪ್ರಯುಕ್ತ ಶುಕ್ರವಾರ ನಗರದಲ್ಲಿ ಪ್ಲಾಸ್ಟಿಕ್ ಮುಕ್ತ ಜೀವನ ಜನಜಾಗೃತಿ ಕುರಿತು ಪಾದಯಾತ್ರೆ ಜರುಗಿತು.

ಪಾದಯಾತ್ರೆಯಲ್ಲಿ ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಿಸುವ ಫಲಕಗಳು ರಾರಾಜಿಸುತ್ತಿದ್ದವು. ಬೇಡ-ಬೇಡ ಪ್ಲಾಸ್ಟಿಕ್ ಬೇಡ, ಸ್ವಚ್ಛ ಪರಿಸರಕ್ಕಾಗಿ ಪ್ಲಾಸ್ಟಿಕ್ ನಿಷೇಧ ಎಂಬ ಘೋಷಣೆಗಳು ಮೊಳಗಿದವು. ಹಿರಿಯ ಚಿತ್ರನಟಿ ಪಂಕಜ ವೆಂಕಟರಮಣ ಮಾತನಾಡಿ ಸಮಾಜದ ಏಳಿಗೆಗಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು. ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣವಾಗಬೇಕು ಎಂದು ಗವಿ ಮಠದ ಶ್ರೀಗಳು ಹಮ್ಮಿಕೊಂಡ ಪಾದಯಾತ್ರೆ ನಗರ ಹಾಗೂ ಗ್ರಾಮೀಣ ಜನರು ಬೆಂಬಲಿಸಿ ಮುಂದಾಗಬೇಕು ಎಂದರು.

ಗವಿಮಠದ ಶ್ರೀ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಪ್ರತಿ ವರ್ಷ ಜನ್ಮದಿನದ ಪ್ರಯುಕ್ತ ಸಮಾಜಕ್ಕೆ ಒಳ್ಳೆಯದಾಗುವ ನಿಟ್ಟಿನಲ್ಲಿ ಪಾದಯಾತ್ರೆಯ ಮೂಲಕ ಸಂದೇಶ ಸಾರಲಾಗುತ್ತಿದೆ. ಕಳೆದ ವರ್ಷ ಮೊಬೈಲ್ ಕುರಿತು ಜಾಗೃತಿ ಹಮ್ಮಿಕೊಳ್ಳಲಾಗಿದ್ದು, ಈ ಬಾರಿ ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣವಾಗುವ ನಿಟ್ಟಿನಲ್ಲಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಹೀಗಾಗಿ ಎಲ್ಲರೂ ಪ್ಲಾಸ್ಟಿಕ್ ನಿಷೇಧ ಮಾಡುತ್ತೇವೆ ಎಂದು ಸಂಕಲ್ಪ ಮಾಡಿದರೆ ಭಕ್ತರು ನನ್ನ ಜನ್ಮದಿನಕ್ಕೆ ನೀಡುವ ಉಡುಗೊರೆ ಇದೇ ಆಗಿರುತ್ತದೆ ಎಂದು ನುಡಿದರು.

ನರಸಿಂಗ ರೆಡ್ಡಿ ಗದಲೇಗಾಂವ, ಅರ್ಜುನ ಕನಕ, ಶಿವಕುಮಾರ ಬಿರಾದಾರ, ರವಿ ನಾವದ್ಗೇಕರ ಮಾತನಾಡಿ ಗವಿ ಮಠದ ಶ್ರೀಗಳು ಪ್ರತಿ ವರ್ಷ ತಮ್ಮ ಜನ್ಮದಿನದ ಪ್ರಯುಕ್ತ ಸಮಾಜಕ್ಕೆ ಒಳ್ಳೆಯ ಸಂದೇಶ ಸಾರುವ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಅವರು ಮಾಡುವ ಕಾರ್ಯಗಳಿಗೆ ನಾವೆಲ್ಲರೂ ಬೆಂಬಲ ಸೂಚಿಸುವ ಮೂಲಕ ಗುರುಗಳು ತೋರುವ ಮಾರ್ಗದಲ್ಲಿ ಮುಂದೆ ಸಾಗೋಣ ಎಂದು ತಿಳಿಸಿದರು.

ಹಿರಿಯ ವೈದ್ಯರಾದ ಡಾ. ಜಿ.ಎಸ್ ಭುರಾಳೆ, ಡಾ. ವಿ.ಎಸ್ ಮಠಪತಿ ಮಾತನಾಡಿದರು. ಶರಣಪ್ಪ ಬಿರಾದಾರ, ಬಸವಂತಪ್ಪಾ ಲವಾರೆ, ಪ್ರೊ. ರುದ್ರೇಶ ಗೋರ್ಟಾ, ಬಸವಣಪ್ಪ ನೆಲೋಗಿ, ಡಾ. ವಿ.ಎಸ್ ರಾಜೋಳೆ, ಜಗನಾಥ ಪತಂಗೆ, ರಮೇಶ ರಾಜೋಳೆ, ರಾಕೇಶ ಪುರವಂತ, ರಾಚಯ್ಯ ಸ್ವಾಮಿ, ಪ್ರೊ. ದಯಾನಂದ ಶೀಲವಂತ, ಶಿವಲಿಂಗ ಸ್ವಾಮಿ ಕನ್ನಾಡೆ, ಸಿದ್ದು ಉಳ್ಳೆ ಸಂದೀಪ ಪಾಟೀಲ, ಲಿಂಗರಾಜ ಬಿರಾದಾರ, ಲಿಂಗರಾಜ ಫಾಳೆ, ಶಾಂತವೀರ ಸ್ವಾಮಿ, ರೇವಣಸಿದ್ಧಯ್ಯ ವಸ್ತದ, ಲೋಕೇಶ ಮೋಳಕೆರೆ, ಶಿವು ಮಠಪತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಬಸವಕಲ್ಯಾಣದಲ್ಲಿ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಶುಕ್ರವಾರ ಪ್ಲಾಸ್ಟಿಕ್ ಮುಕ್ತ ಜೀವನ ಜನಜಾಗೃತಿ ಕುರಿತು ಪಾದಯಾತ್ರೆ ಜರುಗಿತು.

> ಜನರು ಪ್ಲಾಸ್ಟಿಕ್ ಬಳಸುವುದರಿಂದ ಮನುಷ್ಯನ ಆರೋಗ್ಯದ ಮೇಲೆ ಪರಿಣಾಮಗಳು ಬೀರುತ್ತಿವೆ. ಹೀಗಾಗಿ ನಾವೇ ಜಾಗೃತಗೊಂಡು ನಿಷೇಧಿಸಲು ಮುಂದಾಗಬೇಕು. ಅಲ್ಲದೆ ಸರ್ಕಾರ ಪ್ಲಾಸ್ಟಿಕ್ ನಿಷೇಧಿಸುವ ಕುರಿತು ಕಾನೂನು ರೂಪಿಸಿ ಕಡಿವಾಣ ಹಾಕಲು ಮುಂದಾಗಬೇಕು. ಅಲ್ಲದೆ ಆರೋಗ್ಯ ಇಲಾಖೆಯಿಂದ ಹೋಟೆಲ್, ಅಂಗಡಿಗಳಲ್ಲಿ ಪರಿಶೀಲಿಸಿ ಪ್ಲಾಸ್ಟಿಕ್ ಬಳಸಿದರೆ ದಂಡ ಹಾಕಲು ಮುಂದಾಗಬೇಕು.
>
> ಡಾ.ವಿ.ಎಸ್ ಮಠಪತಿ,
> ಹಿರಿಯ ವೈದ್ಯರು

Scanned with OKEN Scanner

‘ಪ್ಲಾಸ್ಟಿಕ್ ಮುಕ್ತ ಸಮಾಜಕ್ಕೆ ಎಲ್ಲರೂ ಕೈ ಜೋಡಿಸಿ’

ಅಭಿನವ ಶ್ರೀಗಳ ನೇತೃತ್ವದಲ್ಲಿ ಪ್ಲಾಸ್ಟಿಕ್ ಮುಕ್ತ ಜೀವನ ಜಾಗೃತಿ-ಪಾದಯಾತ್ರೆ ■ ಮೊಳಗಿದ ಜನಜಾಗೃತಿ ಘೋಷಣೆ

ಉದಯವಾಣಿ ಕಲಬುರಗಿ
ಶನಿವಾರ, ಸೆಪ್ಟೆಂಬರ್ 28, 2024

■ ಉದಯವಾಣಿ ಸಮಾಚಾರ

ಬಸವಕಲ್ಯಾಣ: ಇಲ್ಲಿಯ ಸಂಸ್ಥಾನ ಗವಿ ಮಠದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸ್ವಾಮೀಜಿ ಅವರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮದಿನದ ಪ್ರಯುಕ್ತ ಶುಕ್ರವಾರ ನಗರದಲ್ಲಿ ಪ್ಲಾಸ್ಟಿಕ್ ಮುಕ್ತ ಜೀವನ ಜನಜಾಗೃತಿ ಕುರಿತು ಪಾದಯಾತ್ರೆ ಜರುಗಿತು.

ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ನಗರದ ಗಾಂಧಿ ವೃತ್ತದಿಂದ ಮುಖ್ಯರಸ್ತೆಯ ಮಾರ್ಗವಾಗಿ ಶ್ರೀಮರಾಂತನ ಮಡಿವಾಳ ಮಾಚಿದೇವರ ವೃತ್ತದ ವರೆಗೆ ಜರುಗಿದ ಈ ಪಾದಯಾತ್ರೆಯಲ್ಲಿ ವಿವಿಧ ಪಕ್ಷಗಳ ಮುಖಂಡರು, ವಿವಿಧ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು, ವಿವಿಧ ಸಂಘ-ಸಂಸ್ಥೆಗಳ ಪ್ರಮುಖರು ಪಾಲ್ಗೊಂಡು ಶ್ರೀಗಳು ಕೈಗೊಂಡ ಕಾರ್ಯಕ್ಕೆ ಬೆಂಬಲ ಸೂಚಿಸಿದರು.



ಬಸವಕಲ್ಯಾಣ: ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ನೇತೃತ್ವದಲ್ಲಿ ಶುಕ್ರವಾರ ನಗರದಲ್ಲಿ ಪ್ಲಾಸ್ಟಿಕ್ ಮುಕ್ತ ಜೀವನ ಜನ ಜಾಗೃತಿ ಕುರಿತು ಪಾದಯಾತ್ರೆ ನಡೆಯಿತು.

ಪ್ಲಾಸ್ಟಿಕ್ ಮುಕ್ತ ಜೀವನ ಜನಜಾಗೃತಿ ಕುರಿತು ನಡೆದ ಪಾದಯಾತ್ರೆಯಲ್ಲಿ ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಿಸುವ ಫಲಕಗಳು ರಾರಾಜಿಸುತ್ತಿದ್ದವು. ಬೇಡ-ಬೇಡ ಪ್ಲಾಸ್ಟಿಕ್ ಬೇಡ, ಸ್ವಚ್ಛ ಪರಿಸರಕ್ಕಾಗಿ ಪ್ಲಾಸ್ಟಿ ನಿಷೇಧ ಎಂಬ ಘೋಷಣೆಗಳು ಪಾದಯಾತ್ರೆಯಲ್ಲಿ ಮೊಳಗಿದವು.

ಹಿರಿಯ ಚಿತ್ರನಟ ಪಂಕಜ ವೆಂಕಟರಮಣ ಮಾತನಾಡಿ, ಸಮಾಜದ ಏಳಿಗೆಗಾಗಿ ಶ್ರಮಿಸಿ, ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣವಾಬೇಕು ಎಂದು ಗವಿ ಮಠದ ಶ್ರೀಗಳು ಹಮ್ಮಿಕೊಂಡ ಪಾದಯಾತ್ರೆಗೆ ನಗರ ಹಾಗೂ ಗ್ರಾಮೀಣ ಜನರು ಬೆಂಬಲಿಸಬೇಕು ಎಂದರು.

ಗವಿ ಮಠದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಪ್ರತಿ ವರ್ಷ ನನ್ನ ಜನ್ಮದಿನದ ಪ್ರಯುಕ್ತ ಸಮಾಜಕ್ಕೆ ಒಳ್ಳೆಯವಾಗುವ ನಿಟ್ಟಿನಲ್ಲಿ ಪ್ರತಿ ವರ್ಷ ಪಾದಯಾತ್ರೆ ಮೂಲಕ ಸಂದೇಶ ಸಾರಲಾಗುತ್ತಿದೆ. ಕಳೆದ ವರ್ಷ ಮೊಬೈಲ್ ಕುರಿತು ಜಾಗೃತಿ ಹಮ್ಮಿಕೊಳ್ಳಲಾಗಿದ್ದು, ಈ ಬಾರಿ ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಾಣವಾಗುವ ನಿಟ್ಟಿನಲ್ಲಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.ಈ ವೇಳೆ ನರಸಿಂಗ ರೆಡ್ಡಿ ಗದಲೇಗಾಂವ, ಅರ್ಜುನ ಕನಕ, ಶಿವಕುಮಾರ ಬಿರಾದಾರ, ರವಿ ನಾವದ್ಗೇಕರ, ಖ್ಯಾತ ಮಕ್ಕಳ ತಜ್ಞ ಡಾ। ಜಿ.ಎಸ್ ಭುರಾಳೆ ಹಾಗೂ ಖ್ಯಾತ ಹಿರಿಯ ವೈದ್ಯ ಡಾ। ವಿ.ಎಸ್ ಮಠಪತಿ ಮಾತನಾಡಿದರು.

ಈ ವೇಳೆ ಪ್ರಮುಖರಾದ ಶರಣಪ್ಪ ಬಿರಾದಾರ, ಬಸವಂತಪ್ಪಾ ಲವಾರೆ, ಪ್ರೊ। ರುದ್ರೇಶ ಗೋರ್ಟಾ, ಬಸವಣಪ್ಪ ನೆಲೋಗಿ, ಡಾ। ವಿ.ಎಸ್ ರಾಜೋಳೆ, ಜಗನ್ನಾಥ ಪತಂಗೆ, ರಮೇಶ ರಾಜೋಳೆ, ರಾಕೇಶ ಪುರವಂತ, ರಾಚಯ್ಯ ಮಠಪತಿ, ಪ್ರೊ। ದಯಾನಂದ ಶೀಲವಂತ, ಶಿವಲಿಂಗ ಸ್ವಾಮಿ ಕನ್ನಾಡೆ, ಸಿದ್ದು ಉಳ್ಳೆ, ಸಂದೀಪ ಪಾಟೀಲ, ಲಿಂಗರಾಜ ಬಿರಾದಾರ, ಲಿಂಗರಾಜ ಘಾಳೆ, ಶಾಂತವೀರ ಸ್ವಾಮಿ, ರೇವಣಸಿದ್ದಯ್ಯ ವಸ್ತದ, ಲೋಕೇಶ ಮೋಳಕೆರೆ, ಶಿವು ಮಠಪತಿ ಇದ್ದರು.

27ರಂದು ಪ್ಲಾಸ್ಟಿಕ್ ಮುಕ್ತ ಜೀವನ ಜನಜಾಗೃತಿ ಪಾದಯಾತ್ರೆ

ಸಂಯುಕ್ತ ಕರ್ನಾಟಕ
ಸೋಮವಾರ, 23 ಸೆಪ್ಟೆಂಬರ್, 2024
ಕಲಬುರಗಿ | KALABURAGI

ಸಂ.ಕ.ಸಮಾಚಾರ ಬಸವಕಲ್ಯಾಣ: ಇಲ್ಲಿಯ ಗವಿ ಮಠದಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮದಿನ ಕಾರ್ಯಕ್ರಮ ಇಲ್ಲಿಯ ಗವಿ ಮಠದಲ್ಲಿ ಸೆ. 28 ರಂದು ಜರುಗಲಿದೆ ಎಂದು ಯುವ ಮುಖಂಡ ಶಿವಕುಮಾರ ಬಿರಾದಾರ ತಿಳಿಸಿದರು.

ಇಲ್ಲಿಯ ಆರ್ಯ ಸಮಾಜ ಭವದಲ್ಲಿ ಭಾನುವಾರ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಶ್ರೀಗಳ ಜನ್ಮದಿನದ ಅಂಗವಾಗಿ ಸೆ. 27 ರಂದು. ಬೆಳಿಗ್ಗೆ 10ಕ್ಕೆ ನಗರದಲ್ಲಿ ಪ್ಲಾಸ್ಟಿಕ್ ಮುಕ್ತ ಜೀವನ ಜನ ಜಾಗೃತಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ನಗರದ ಗಾಂಧಿ ವೃತ್ತದಿಂದ ಮುಖ್ಯ ರಸ್ತೆಯ ಮಾರ್ಗವಾಗಿ ಶ್ರೀಪುರಾಂತ್‌ನ ಮಡಿವಾಳ ಮಾಚಿದೇವರ ವೃತ್ತದವರೆಗೆ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನೇತೃತ್ವದಲ್ಲಿ ಈ ಪಾದಯಾತ್ರೆ ಜರುಗಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ಮಠದ ಭಕ್ತರು, ಸಾರ್ವಜನಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.



ಬಸವಕಲ್ಯಾಣದ ಆರ್ಯ ಸಮಾಜ ಭವನದಲ್ಲಿ ಭಾನುವಾರ ಕರೆದ ಸುದ್ದಿಗೋಷ್ಠಿಯಲ್ಲಿ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮದಿನ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಡಾ. ಅಭಿನವ ಶ್ರೀಗಳು ಬಿಡುಗಡೆಗೊಳಿಸಿದರು.

ಗವಿ ಮಠದ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಮಾತನಾಡಿ ಗವಿಮಠದ ಶ್ರೀಗಳು ಪ್ರತಿ ವರ್ಷವೂ ತಮ್ಮ ಜನ್ಮದಿನದ ನಿಮಿತ್ಯ ಸಮಾಜದ ಒಳಿತಿಗಾಗಿ ವಿನೂತನ ಕಾರ್ಯಕ್ರಮಗಳು ಹಾಗೂ ಜಾಗೃತಿ ಅಭಿಯಾನ ಮಾಡುತ್ತಾ ಬಂದಿದ್ದಾರೆ. ಕೋವಿಡ್ ಕುರಿತು ಜಾಗೃತಿ, ಅಭಿನವ ಜೋಳಿಗೆ, ಸಸಿ ನೆಡುವ ಕಾರ್ಯಕ್ರಮ, ಮೊಬೈಲ್‌ನಿಂದ ಮಕ್ಕಳಿಗೆ ದೂರವಿಡಿ ಎಂಬ ಹತ್ತಾರು ಜಾಗೃತಿ ಅಭಿಯಾನ ಶ್ರೀಗಳು ಮಾಡಿದ್ದಾರೆ. ಸಮಾಜದಲ್ಲಿ ಆಗುತ್ತಿರುವ ಸಮಸ್ಯೆಗಳನ್ನು ಮನಗಂಡು ಶ್ರೀಗಳು ಜನರಲ್ಲಿ ಜಾಗೃತಿ ತರುವ ಉದ್ದೇಶದಿಂದ ಸೆ-27 ರಂದು ಪ್ಲಾಸ್ಟಿಕ್ ಮುಕ್ತ ಸಮಾಜಕ್ಕೆ ಪಣ ತೊಟ್ಟ ಶ್ರೀಗಳ ಕಾರ್ಯಕ್ಕೆ ನಾವೆಲ್ಲರೂ ಬೆಂಬಲವಾಗಿ ನಿಲ್ಲೋಣ ಎಂದರು.

ಯುವ ಮುಖಂಡ ಲೋಕೇಶ ಮೋಳಕೆರೆ ಮಾತನಾಡಿ ಗವಿ ಮಠದ ಶ್ರೀಗಳ ನೇತೃತ್ವದಲ್ಲಿ ನಡೆಯಲಿರುವ ಪ್ಲಾಸ್ಟಿಕ್ ಮುಕ್ತ ಜೀವನ ಜನ ಜಾಗೃತಿ ಪಾದಯಾತ್ರೆಯಲ್ಲಿ ನಗರದ ವಿವಿಧ ಶಾಲಾ, ಕಾಲೇಜು ವಿದ್ಯಾರ್ಥಿಗಳು, ಸಂಘಟನೆಯ ಮುಖಂಡರು, ಸಾರ್ವಜನಿಕರು ಗಣ್ಯರು ಭಾಗಿಯಾಗಲಿದ್ದಾರೆ ಎಂದರು. ಇದೆ ಸಂದರ್ಭದಲ್ಲಿ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮದಿನೋತ್ಸವದ ಆಮಂತ್ರಣ ಪತ್ರಿಕೆ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಹಸ್ತದಿಂದ ಬಿಡುಗಡೆಗೊಳಿಸಲಾಯಿತು.

ಸೆ.28 ರಂದು ಜರುಗಲಿರುವ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮದಿನೋತ್ಸವ ಸಮಾರಂಭದ ಸಾನಿಧ್ಯ ಶ್ರೀ ಜಯಶಾಂತಲಿಂಗ ಮಹಾಸ್ವಾಮೀಜಿ ವಹಿಸಲಿದ್ದಾರೆ. ತೆಲಂಗಾಣದ ಶ್ರೀ ವೀರೇಶ್ವರ ಶಿವಾಚಾರ್ಯರು ಆಗಮಿಸುವರು.

Scanned with OKEN Scanner

ಶ್ರೀ ಜಯಶಾಂತಲಿಂಗ ಸ್ವಾಮೀಜಿ ಮೆಚ್ಚುಗೆ | ಮೊಬೈಲ್ ಜಾಗೃತಿ ಪಾದಯಾತ್ರೆ ಗ್ರಂಥ ಲೋಕಾರ್ಪಣೆ

ಅಭಿನವ ಶ್ರೀಗಳದ್ದು ಸಮಾಜಮುಖಿ ಕಾರ್ಯ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಗವಿಮಠದ ಪ್ರಗತಿ ಜತೆಗೆ ಆರೋಗ್ಯಪೂರ್ಣ ಸಮಾಜಕ್ಕಾಗಿ ಯುವ ಜನರನ್ನು ಜಾಗೃತಗೊಳಿಸುವ ಅಭಿನವ ಶ್ರೀಗಳ ಸಮಾಜಮುಖಿ ಕಾರ್ಯ ಪ್ರಶಂಸಾರ್ಹ ಎಂದು ಹಿರೇನಾಗಾಂವದ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಗವಿಮಠದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮದಿನ ನಿಮಿತ್ತ ಶನಿವಾರ ಆಯೋಜಿಸಿದ್ದ ಧರ್ಮ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿದ್ದ ಅವರು, 14ನೇ ವಯಸ್ಸಿನಲ್ಲಿಯೇ ಅಭಿನವ ಶ್ರೀಗಳ ಪಟ್ಟಾಧಿಕಾರ ಜರುಗಿದಾಗ ಮಠದಲ್ಲಿ ಏನೂ ಇರಲಿಲ್ಲ. ಈಗ ಸಾಕಷ್ಟು ಪ್ರಗತಿಯಾಗಿದೆ. ಘಟದಿಂದ ಮಠವಾಗಿ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ನೇತೃತ್ವ ವಹಿಸಿದ್ದ ಗವಿ ಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಮಾತನಾಡಿ, ಭಕ್ತರ ಕಲ್ಯಾಣವೇ ಗುರುಗಳ ಆಶಯವಾಗಿರುತ್ತದೆ. ಗುರು ತೋರುವ ಮಾರ್ಗದಲ್ಲಿ ಭಕ್ತರು ಜೀವನ ಸಾಗಿಸಿದಾಗ ಶಾಂತಿ, ನೆಮ್ಮದಿ, ಪ್ರಗತಿ ಕಾಣಲು ಸಾಧ್ಯ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಶರಣು ಸಲಗರ ಮಾತನಾಡಿ, ಪ್ರತಿವರ್ಷ ಜನ್ಮದಿನೋತ್ಸವ ನಿಮಿತ್ತ ಪಾದಯಾತ್ರೆ ನಡೆಸಿ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತಿರುವ ಅಭಿನವ ಶ್ರೀಗಳ ಸಮಾಜಪರ ಕಾಳಜಿ ಮಹತ್ವದ್ದು ಎಂದರು.

ಸಾಹಿತಿ ವೀರಶೆಟ್ಟಿ ಪಾಟೀಲ್ ಸಂಪಾದಿತ ಕವನ ಸಂಕಲನ, ಅಭಿನವ ಶ್ರೀಗಳ ಮೊಬೈಲ್ ಜಾಗೃತಿ ಪಾದಯಾತ್ರೆ ಗ್ರಂಥ ಲೋಕಾರ್ಪಣೆಗೊಳಿಸಿದ ಸಂಸದ ಸಾಗರ್ ಖಂಡ್ರೆ ಮಾತನಾಡಿ, ಸಮಾಜದ ಹಿತದೃಷ್ಟಿಯಿಂದ ಜನರಲ್ಲಿ ಜಾಗೃತಿ ಮೂಡಿಸುವ ಅಭಿನವ ಶ್ರೀಗಳ ಕಾರ್ಯಕ್ಕೆ ಬೆಂಬಲಿಸುವ ಮೂಲಕ ಎಲ್ಲರೂ ಕೈಜೋಡಿಸಬೇಕು ಎಂದು ಕೋರಿದರು.

ಜಹೀರಾಬಾದ್‌ನ ಶ್ರೀ ವೀರೇಶ್ವರ ಶಿವಾಚಾರ್ಯ ಆಶೀರ್ವಚನ ನೀಡಿದರು. ಮಾಜಿ ಎಂಎಲ್ಸಿ ವಿಜಯಸಿಂಗ್, ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ, ಹಿರಿಯ ಚಿತ್ರನಟಿ ಡಾ.ಪಂಕಜ ವೆಂಕಟರಮಣ, ಡಾ.ಸಂಜೀವಕುಮಾರ ಅತಿವಾಳೆ ಮಾತನಾಡಿದರು.

ಎಂಎಲ್‌ಸಿ ಎಂ.ಜಿ. ಮುಳೆ, ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ಬಿ.ನಾರಾಯಣರಾವ, ಪ್ರಮುಖರಾದ ಬಾಬು ಹೊನ್ನಾನಾಯಕ, ನೀಲಕಂಠ ರಾಠೋಡ್, ಅರ್ಜುನ ಕನಕ, ಮನೋಹರ ಮೈಸೆ, ಶಾಂತಲಿಂಗ ಮಠಪತಿ, ಜ್ಞಾನೇಶ್ವರ ಮುಳೆ, ರಾಜಶೇಖರ ಸಾಹು ಸೀರಿ, ಶರಣಪ್ಪ ಜಿ.ಬಿರಾದಾರ, ಶಿವಲಿಂಗಯ್ಯ ಕನ್ನಾಡೆ, ಸಿದ್ದಪ್ಪ ಉಳ್ಳೆ, ವೀರಶೆಟ್ಟಿ ಪಾಟೀಲ್, ಸಿದ್ದು ಬಿರಾದಾರ, ಶ್ರೀನಿವಾಸ ಪಾಟೀಲ್ ಇತರರಿದ್ದರು.

ರಮೇಶ ರಾಜೋಳೆ ಸ್ವಾಗತಿಸಿದರು. ಮಲ್ಲಿಕಾರ್ಜುನ ಆಲಗೂಡೆ ನಿರೂಪಣೆ ಮಾಡಿದರು. ವಿವಿಧೆಡೆಯಿಂದ ಆಗಮಿಸಿದ ಶ್ರೀಮಠದ ಭಕ್ತರು ಡಾ.ಅಭಿನವ ಶ್ರೀಗಳನ್ನು ಸತ್ಕರಿಸಿ ಆಶೀರ್ವಾದ ಪಡೆದರು. ರವಿ ನಾವದಗೇಕರ, ಶ್ರೀಶೈಲ ವಾತಡೆ, ಶಿವಕುಮಾರ ಬಿರಾದಾರ, ಲೋಕೇಶ ಮೋಳಕೆರೆ, ಸಂಜುಕುಮಾರ ಜಾಧವ್, ಶ್ರೀನಿವಾಸ ಬಿರಾದಾರ ಅವರನ್ನು ಸನ್ಮಾನಿಸಲಾಯಿತು.



ವಿಜಯವಾಣಿ

ಬಸವಕಲ್ಯಾಣದಲ್ಲಿ ಶನಿವಾರ ಆಯೋಜಿಸಿದ್ದ ಧರ್ಮ ಸಮಾರಂಭದಲ್ಲಿ ಅಭಿನವ ಶ್ರೀಗಳ ಮೊಬೈಲ್ ಜಾಗೃತಿ ಪಾದಯಾತ್ರೆ ಗ್ರಂಥವನ್ನು ಸಂಸದ ಸಾಗರ್ ಖಂಡ್ರೆ ಲೋಕಾರ್ಪಣೆಗೊಳಿಸಿದರು. ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ವೀರೇಶ್ವರ ಶಿವಾಚಾರ್ಯ, ಅಭಿನವ ಶ್ರೀ, ಶಾಸಕ ಶರಣು ಸಲಗರ, ವಿಜಯಸಿಂಗ್, ಮಾಲಾ ನಾರಾಯಣರಾವ, ಧನರಾಜ ತಾಳಂಪಳ್ಳಿ, ವೀರಶೆಟ್ಟಿ ಪಾಟೀಲ್, ನಟಿ ಪಂಕಜಾ, ನೀಲಕಂಠ ರಾಠೋಡ್, ಅರ್ಜುನ ಕನಕ, ಮನೋಹರ ಮೈಸೆ, ಜ್ಞಾನೇಶ್ವರ ಮುಳೆ, ಸಿದ್ದು ಬಿರಾದಾರ ಇದ್ದರು.

> ಪ್ಲಾಸ್ಟಿಕ್‌ಮುಕ್ತ ಜೀವನ ಕುರಿತು ಜನಜಾಗೃತಿಗಾಗಿ ಅಭಿನವ ಶ್ರೀಗಳು ಪಾದಯಾತ್ರೆ ನಡೆಸಿದ್ದಾರೆ. ಶ್ರೀಗಳ ಕಾರ್ಯಕ್ಕೆ ಎಲ್ಲರ ಸಹಕಾರ ಅಗತ್ಯ. ಭವಿಷ್ಯದಲ್ಲಿ ಆರೋಗ್ಯಪೂರ್ಣ ಜೀವನಕ್ಕೆ ಉತ್ತಮ ಪರಿಸರ ಸಂರಕ್ಷಣೆಗಾಗಿ ಇಂದಿನಿಂದಲೇ ಪ್ಲಾಸ್ಟಿಕ್ ಬಳಸದೆ ಪ್ಲಾಸ್ಟಿಕ್‌ಮುಕ್ತ ಜೀವನಕ್ಕೆ ಸಂಕಲ್ಪ ಮಾಡಬೇಕಾದ ಅಗತ್ಯವಿದೆ.
>
> | ಸಾಗರ್ ಖಂಡ್ರೆ ಸಂಸದ

> ಹೆಚ್ಚು ಹೊತ್ತು ಮೊಬೈಲ್ ಬಳಕೆ ಆರೋಗ್ಯಕ್ಕೆ ಅಪಾಯಕಾರಿ. ಈ ಕುರಿತು ಜನಜಾಗೃತಿಗಾಗಿ ಕಳೆದ ವರ್ಷ ಅಭಿನವ ಶ್ರೀಗಳು ಅಭಿಯಾನ ನಡೆಸಿದ್ದಾರೆ. ಶ್ರೀಗಳ ಕಾಳಜಿ ಅರ್ಥ ಮಾಡಿಕೊಂಡು ಅನಗತ್ಯ ಮೊಬೈಲ್ ಬಳಸದೆ ಅವಶ್ಯಕತೆ ಇದ್ದಾಗ ಮಾತ್ರ ಬಳಸಬೇಕು.
>
> | ವಿಜಯಸಿಂಗ್ ಮಾಜಿ ಎಂಎಲ್‌ಸಿ

> ಬಸವಕಲ್ಯಾಣದಲ್ಲಿ ಮುಂದಿನ ವರ್ಷ ಶ್ರೀಮದ್ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್ ನಡೆಯಲಿದ್ದು, ಹಾರಕೂಡದಲ್ಲಿ ಪೂರ್ವಭಾವಿ ಸಭೆ ಆಯೋಜಿಸಲು ನಿರ್ಧರಿಸಲಾಗಿದೆ. ಸಭೆಯಲ್ಲಿ ಎಲ್ಲ ಪಕ್ಷಗಳ ಮುಖಂಡರು ಭಾಗಿಯಾಗಲಿದ್ದು, ಈ ಭಾಗದ ಸ್ವಾಮೀಜಿಗಳನ್ನು ಆಹ್ವಾನಿಸಿ ಕಾರ್ಯಕ್ರಮದ ಯಶಸ್ಸಿನ ಕುರಿತು ಚರ್ಚಿಸಲಾಗುವುದು.
>
> | ಶರಣು ಸಲಗರ ಶಾಸಕ

> ಸಮಾಜದ ಹಿತದೃಷ್ಟಿಯಿಂದ ಅಭಿನವ ಶ್ರೀಗಳು ಜನ್ಮ ದಿನೋತ್ಸವ ನಿಮಿತ್ತ ಜನಜಾಗೃತಿ ಪಾದಯಾತ್ರೆ ನಡೆಸಿದ್ದಾರೆ. ಶ್ರೀಗಳ ಜನಪರ ಕಾಳಜಿ ಮಹತ್ವದ್ದು, ಗುಣಮಟ್ಟದ ಶಿಕ್ಷಣ ಜತೆಗೆ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಲು ಪಾಲಕರು ಕಾಳಜಿ ವಹಿಸಬೇಕು.
>
> | ಧನರಾಜ ತಾಳಂಪಳ್ಳಿ
> ಕಾಂಗ್ರೆಸ್ ಮುಖಂಡ

ನಂ1 ವಿಜಯವಾಣಿ ಭಾನುವಾರ 29 ಸೆಪ್ಟೆಂಬರ್ 2024 » 29 SEPTEMBER 2024

VIJAYAVANI » KALABURAGI ನಂ1 ವಿಜಯವಾಣಿ ಸೋಮವಾರ 16 ಸೆಪ್ಟೆಂಬರ್ 2024 » 16 SEPTEMBER 2024



ವಿಜಯವಾಣಿ

ಬಸವಕಲ್ಯಾಣದ ತ್ರಿಪುರಾಂತ ಬಸ್ಸಿಲಾಲ್ ಶ್ರೀವಾಸ್ತವ ನಿವಾಸದ ಬಳಿ ಶ್ರೀ ಗಣೇಶ ಮಿತ್ರ ಮಂಡಳಿಯಿಂದ ಪ್ರತಿಷ್ಠಾಪಿಸಲಾದ ಗಣೇಶ ಮೂರ್ತಿ ಪೂಜೆ ಸಮಾರಂಭದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯರು, ಶುಭಂ ಶ್ರೀವಾಸ್ತವ, ಚನ್ನವೀರ ಬಿರಾದಾರ, ರಿತೇಶ ಪರ್ತಾಪುರೆ, ಶೈಲೇಶ ಪರ್ತಾಪುರೆ, ರಾಕೇಶ, ಅಣವೀರ ಬಿರಾದಾರ, ಕೆ. ಶಿವು, ಗುರು ಸ್ವಾಮಿ ಇದ್ದರು.

ಗಣೇಶ ಪೂಜೆ

8 ವಿಜಯ ಕರ್ನಾಟಕ ವಿಜಯವಾಣಿ ನ್ಯೂಸ್ RNI NO: KARKAN/2022/85279



ಬಸವಕಲ್ಯಾಣ ತ್ರಿಪುರಾಂತ್ ಗವಿಮಠದಲ್ಲಿ ಹಮ್ಮಿಕೊಳ್ಳಲಾದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ ಶ್ರೀಗಳ 38ನೇ ಜನ್ಮದಿನೋತ್ಸವ ಸಮಾರಂಭದಲ್ಲಿ ಸಂಸದ ಸಾಗರ ಖಂಡ್ರೆ ಅವರು ಭಾಗವಹಿಸಿ ಪೂಜ್ಯರಿಗೆ ಜನ್ಮದಿನದ ಶುಭಾಶಯಗಳು ತಿಳಿಸಿ ಆಶೀರ್ವಾದ ಪಡೆದು ಮಾತನಾಡಿದರು. ಈ ಸಂದರ್ಭದಲ್ಲಿ ಸಂಸದರು ಅಭಿನವ ಶ್ರೀಗಳ ಮೊಬೈಲ್ ಜಾಗೃತಿ ಪಾದಯಾತ್ರೆ ಗ್ರಂಥವನ್ನು ಬಿಡುಗಡೆ ಮಾಡಿ ಶುಭ ಕೋರಿದರು.

Scanned with OKEN Scanner

ಸಂಸದ ಸಾಗರ ಖಂಡ್ರೆ ಹೇಳಿಕೆ * ಡಾ. ಅಭಿನವ ಶ್ರೀಗಳ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ

'ಸಮಾಜವನ್ನು ಸರಿದಾರಿಗೆ ತರುತ್ತಿರುವ ಶ್ರೀಗಳ ಕಾರ್ಯಕ್ಕೆ ಬೆಂಬಲ'

ಸಂ.ಕ.ಸಮಾಚಾರ ಬಸವಕಲ್ಯಾಣ: ಸಮಾಜವನ್ನು ಸರಿದಾರಿಗೆ ತರುವ ಜೊತೆಗೆ ಜಾಗೃತಿಗೊಳಿಸುವ ಕಾರ್ಯ ಮಾಡುತ್ತಿರುವ ಅಭಿನವ ಶ್ರೀಗಳ ಕಾರ್ಯಕ್ಕೆ ಬೆಂಬಲ ನೀಡಿ ಅವರ ಜೊತೆಗಿರಬೇಕು ಎಂದು ಸಂಸದ ಸಾಗರ ಖಂಡ್ರೆ ಹೇಳಿದರು.

ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮದಿನದ ಪ್ರಯುಕ್ತ ಹೊರತಂದ ಅಭಿನವ ಶ್ರೀಗಳ ಮೊಬೈಲ್ ಜಾಗೃತಿ ಪಾದಯಾತ್ರೆ ಗ್ರಂಥ ಲೋಕಾರ್ಪಣೆಗೊಳಿಸಿ ಮಾತನಾಡಿ ಪ್ಲಾಸ್ಟಿಕ್ ಮುಕ್ತಗೊಳಿಸಲು ಸಂಕಲ್ಪ ಮಾಡಿ ಪರಿಸರ ಸಂರಕ್ಷಣೆಗೆ ಮುಂದಾಗಬೇಕು. ಇದರಿಂದ ಮುಂದಿನ ಪೀಳಿಗೆಗೆ ಉತ್ತಮ ಆರೋಗ್ಯ ಸಿಗಲು ಸಹಕಾರಿಯಾಗುತ್ತದೆ ಎಂದರು. ಹಿರೇನಾಗಾವ್‌ನ ಶ್ರೀ ಜಯಶಾಂತಲಿಂಗ ಸ್ವಾಮೀಜಿ ಮಾತನಾಡಿ ಗವಿ ಮಠದ ಡಾ. ಅಭಿನವ ಶ್ರೀಗಳು ತಬ್ಬಲಿ ಅಲ್ಲ ಅವರ ಹುಟ್ಟು ಹಬ್ಬಕ್ಕೆ ಅಪಾರ ಭಕ್ತರು ಸೇರಿದ್ದಾರೆ. ಅವರು ನಿಜವಾದ ಸಂಪಾದನೆ ಭಕ್ತರೇ ಆಗಿದ್ದಾರೆ. ಅಲ್ಲದೆ ಅಪಾರ ಭಕ್ತರ ಮನಸ್ಸು ಗೆದ್ದಿ ಸಮಾಜವನ್ನು ಜಾಗೃತಗೊಳಿಸಿ ಸರಿದಾರಿಗೆ ತರುವ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ಶಾಸಕ ಶರಣು ಸಲಗರ ಮಾತನಾಡಿ ರಂಭಾಪೂರಿ ಶ್ರೀಗಳ ನೇತೃತ್ವದಲ್ಲಿ ಮುಂದಿನ ವರ್ಷ ಬಸವಕಲ್ಯಾಣದಲ್ಲಿ ದಸರಾ ದರ್ಬಾರ ಕಾರ್ಯಕ್ರಮ ನಡೆಯಲಿದೆ. ಮುಂಬರುವ ದಿನಗಳಲ್ಲಿ



ಬಸವಕಲ್ಯಾಣ ಗವಿಮಠದ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರ 19ನೇ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 38ನೇ ಜನ್ಮ ದಿನದ ಪ್ರಯುಕ್ತ ಶನಿವಾರ ಹಮ್ಮಿಕೊಂಡ ಧರ್ಮ ಸಮಾರಂಭದಲ್ಲಿ ಸಂಸದ ಸಾಗರ ಖಂಡ್ರೆ ಅಭಿನವ ಶ್ರೀಗಳ ಮೊಬೈಲ್ ಜಾಗೃತಿ ಪಾದಯಾತ್ರೆ ಗ್ರಂಥ ಲೋಕಾರ್ಪಣೆಗೊಳಿಸಿದರು.

ತಾಲ್ಲೂಕಿನ ಹಾರಕೂಡದಲ್ಲಿ ಈ ಕುರಿತು ಪೂರ್ವಭಾವಿ ಸಭೆ ಆಯೋಜಿಸಲು ನಿರ್ಧರಿಸಲಾಗಿದೆ. ಈ ಸಭೆಯಲ್ಲಿ ಎಲ್ಲಾ ಪಕ್ಷಗಳ ಮುಖಂಡರು ಭಾಗಿಯಾಗಲಿದ್ದು ಈ ಭಾಗದ ಸ್ವಾಮೀಜಿಗಳನ್ನು ಈ ಸಭೆಗೆ ಆಹ್ವಾನಿಸಿ ಕಾರ್ಯಕ್ರಮದ ಯಶಸ್ವಿಗಾಗಿ ಚರ್ಚಿಸಲಾಗುವದು ಎಂದು ತಿಳಿಸಿದರು.

ಮಾಜಿ ಎಮ್‌ಎಲ್‌ಸಿ ವಿಜಯಸಿಂಗ್ ಮಾತನಾಡಿ ಕೇವಲ ಉಪಯೋಗಕಷ್ಟೇ ಮೊಬೈಲ್ ಬಳಸಬೇಕು. ಆದರೆ ಹೆಚ್ಚು ಹೊತ್ತು ಅದರಲ್ಲೇ ಕಾಲ ಕಳೆಯುವುದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ಕಳೆದ ವರ್ಷ ಶ್ರೀಗಳು ಈ ಕುರಿತು ಜಾಗೃತಿ ನಡೆಸಿದ್ದಾರೆ. ಮೊಬೈಲ್ ಬಳಕೆ ಕಡಿಮೆಯಾದರೆ

> 'ಗುರುಗಳು ತೋರುವ ಮಾರ್ಗದಲ್ಲಿ ಭಕ್ತರು ಜೀವನ ಸಾಗಬೇಕು. ಅಂದಾಗ ಮಾತ್ರ ಭಕ್ತರ ಏಳಿಗೆಯಾಗಲು ಸಾಧ್ಯವಾಗುತ್ತದೆ. ಗುರುಗಳಿಗೂ ಕೂಡ ಭಕ್ತರ ಏಳಿಗೆ ಆಗಲಿ ಎಂಬ ಬಯಕೆ ಇರುತ್ತದೆ.'
>
> ಶ್ರೀ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು, ಗವಿ ಮಠ

ಬೇರೆ ಕೆಲಸಗಳು ಮಾಡಲು ಸಹಕಾರಿಯಾಗುತ್ತದೆ ಎಂದರು. ಜಹೀರಾಬಾದ್‌ನ ಶ್ರೀ ವೀರೇಶ್ವರ ಶಿವಾಚಾರ್ಯರು, ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ, ಹಿರಿಯ ಚಿತ್ರನಟಿ ಪಂಕಜ ವೆಂಕಟರಮಣ, ಡಾ. ಸಂಜೀವಕುಮಾರ ಅತಿವಾಳೆ ಮಾತನಾಡಿದರು. ಎಮ್‌ಎಲ್‌ಸಿ ಎಂ.ಜಿ ಮುಳೆ, ಮೀನು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ಬಿ.ನಾರಾಯಣರಾವ, ನೀಲಕಂಠ ರಾಠೋಡ, ಬಾಬು ಹೊನ್ನಾನಾಯಕ, ಅರ್ಜುನ ಕನಕ, ಜ್ಞಾನೇಶ್ವರ ಮುಳೆ, ರಾಜಶೇಖರ ಸಾಹು ಸೀರಿ, ಶಾಂತಲಿಂಗ ಮಠಪತಿ, ಶರಣಪ್ಪಾ ಜಿ. ಬಿರಾದಾರ, ಶಿವಲಿಂಗಯ್ಯ ಕನ್ನಾಡೆ, ಸಿದ್ದಪ್ಪಾ ಎಮ್ ಉಳ್ಳೆ, ವೀರಶೆಟ್ಟಿ ಪಾಟೀಲ್, ಮನೋಹರ ಮೈಸೆ ಸೇರಿದಂತೆ ಮತ್ತಿತರಿದ್ದರು.

'ಜನಸಾಮಾನ್ಯರ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಿ'

ಬಸವಕಲ್ಯಾಣ: 'ಸಂಘಟನೆಯವರು ಜನಸಾಮಾನ್ಯರ ಸಮಸ್ಯೆ ಬಗೆಹರಿಸಲು ಪ್ರಯತ್ನಿಸ ಬೇಕು' ಎಂದು ಕರವೇ ಸ್ವಾಭಿಮಾನಿ ಬಣದ ರಾಜ್ಯ ಘಟಕದ ಅಧ್ಯಕ್ಷ ಪಿ. ಕೃಷ್ಣೇಗೌಡ ಹೇಳಿದ್ದಾರೆ.

ನಗರದಲ್ಲಿ ಈಚೆಗೆ ನಡೆದ ಕರವೇ ಸ್ವಾಭಿಮಾನಿ ಬಣದ ಸಮಾವೇಶದಲ್ಲಿ ಅವರು ಮಾತನಾಡಿದರು.

ತ್ರಿಪುರಾಂತ ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು, ಬೇಲೂರ ಪಂಚಾಕ್ಷರಿ ಸ್ವಾಮೀಜಿ ಮಾತನಾಡಿದರು. ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷರನ್ನಾಗಿ ಮಾಂತೇಶ ಎಸ್. ಗೌರಕರ್ ಅವರನ್ನು ನೇಮಿಸಿ ಸನ್ಮಾನಿಸಲಾಯಿತು.

ರಾಜಕುಮಾರ ಮುಡಬಿಕರ, ಅಮರ ನಿರ್ಲಿ, ಭೀಮಶಾ ಮಂದಿರ ಕರ, ಸುಧೀರ ಕಾಂಬಳೆ, ಮನೋಜ ಖೇಲೆ, ವಿನೋದ ರಾಯವಾಡೆ ಮತ್ತಿತರರು ಪಾಲ್ಗೊಂಡಿದ್ದರು.



ಬಸವಕಲ್ಯಾಣದಲ್ಲಿ ಈಚೆಗೆ ನಡೆದ ಕರವೇ ಸ್ವಾಭಿಮಾನಿ ಬಣದ ಸಮಾವೇಶದ ಉದ್ಘಾಟನೆಯಲ್ಲಿ ತ್ರಿಪುರಾಂತ ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ದೀಪ ಬೆಳಗಿಸಿದರು

ಪ್ರಜಾವಾಣಿ • ಅಕ್ಟೋಬರ್ 16, 2024 ಬುಧವಾರ

Scanned with OKEN Scanner

ಪಟ್ಟಾಧಿಕಾರ ವರ್ಧಂತಿಯಲ್ಲಿ ಶಾಸಕ ಶರಣು ಸಲಗರ ಶ್ಲಾಘನೆ

ಅಭಿನವ ಶ್ರೀಗಳಿಂದ ಗವಿಮಠಕ್ಕೆ ಮೆರುಗು

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಇಲ್ಲಿನ ತ್ರಿಪುರಾಂತ ಗವಿಮಠದ ಪಟ್ಟಾಧಿಕಾರಿಯಾದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಎರಡು ದಶಕಗಳಿಂದ ವಿವಿಧ ಕಾರ್ಯಗಳ ಮೂಲಕ ಗವಿಮಠದ ಮೆರುಗು ಹೆಚ್ಚಿಸಿದ್ದಾರೆ. ಪ್ರತಿವರ್ಷ ಜನ್ಮದಿನಕ್ಕೆ ಸಮಾಜ ಜಾಗೃತಿ ಅಭಿಯಾನ ಹಮ್ಮಿಕೊಂಡು ಇತರರಿಗೆ ಮಾದರಿ ಆಗಿದ್ದಾರೆ' ಎಂದು ಶಾಸಕ ಶರಣು ಸಲಗರ ಬಣ್ಣಿಸಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಶನಿವಾರ ನಡೆದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಟ್ಟಾಧಿಕಾರದ ವರ್ಧಂತಿ, ಗ್ರಂಥ ಬಿಡುಗಡೆ ಹಾಗೂ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಾಹಿತ್ಯಕ ಚಟುವಟಿಕೆಗಳಲ್ಲೂ ಇವರದ್ದು ಎತ್ತಿದ ಕೈಯಾಗಿದೆ. ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯರ ಮುಂದಿನ ವರ್ಷದ ದಸರಾ ದರ್ಬಾರ್ ಕಾರ್ಯಕ್ರಮ ನಗರದಲ್ಲಿ ಆಯೋಜಿಸಲಾಗುತ್ತಿದೆ. ಪೂರ್ವಸಿದ್ಧತೆಗಾಗಿ ಬೆಂಗಳೂರಿನಲ್ಲಿ ಸಭೆ ನಡೆದಿದ್ದು ಹಾರಕೂಡ ಮಠದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಮತ್ತು ಪ್ರಮುಖ ಮಠಾಧೀಶರ ಸಾನಿಧ್ಯದಲ್ಲಿ ಇನ್ನೊಂದು ಸಭೆ ಹಮ್ಮಿಕೊಳ್ಳಲಾಗುತ್ತದೆ' ಎಂದರು.

ಸಂಸದ ಸಾಗರ ಖಂಡ್ರೆ ಮಾತನಾಡಿ, 'ಉತ್ತಮ ಕೆಲಸಕ್ಕೆ ಜನ ಮತ್ತು ಜನಪ್ರತಿನಿಧಿಗಳ ಸಹಕಾರ ಅಗತ್ಯವಾಗಿದೆ. ಪರಿಸರ ಸಂರಕ್ಷಣೆ ಆಗದಿದ್ದರೆ ತಾಪಮಾನ ಅಧಿಕಗೊಂಡು ಅನಾಹುತ ಘಟಿಸಬಹುದು' ಎಂದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ನಿರ್ಜನ ಪ್ರದೇಶವಾಗಿದ್ದ ಗವಿಮಠ ಭಕ್ತರ ಸಹಕಾರದಿಂದ ಬೆಳವಣಿಗೆ ಕಂಡಿದೆ' ಎಂದರು.

ವಿಧಾನಪರಿಷತ್ ಮಾಜಿ ಸದಸ್ಯ ವಿಜಯಸಿಂಗ್, ಹಿರೇನಾಗಾಂವ ಜಯಶಾಂತಲಿಂಗ ಸ್ವಾಮೀಜಿ, ತೆಲಂಗಾಣ ವೀರೇಶ್ವರ ಶಿವಾಚಾರ್ಯರು, ಮುಖಂಡ ಧನರಾಜ ತಾಳಂಪಳ್ಳಿ, ಸಾಹಿತಿ ಸಂಜೀವಕುಮಾರ ಅತಿವಾಳೆ, ರಮೇಶ ರಾಜೋಳೆ, ಮಲ್ಲಿಕಾರ್ಜುನ ಆಲಗೂಡೆ ಮಾತನಾಡಿದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಶನಿವಾರ ಸಂಸದ ಸಾಗರ ಖಂಡ್ರೆ ಗ್ರಂಥ ಬಿಡುಗಡೆ ಮಾಡಿದರು

ವಿಧಾನಪರಿಷತ್ ಸದಸ್ಯ ಎಂ.ಜಿ. ಮುಳೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ನಾರಾಯಣರಾವ್, ಕಾಂಗ್ರೆಸ್ ಅಧ್ಯಕ್ಷ ನೀಲಕಂಠ ರಾಠೋಡ, ಬಿಜೆಪಿ ಅಧ್ಯಕ್ಷ ಜ್ಞಾನೇಶ್ವರ ಮುಳೆ, ಅರ್ಜುನ ಕನಕ, ಮನೋಹರ ಮೈಸೆ, ಪಂಕಜಾ ವೆಂಕಟರಮಣ, ಬಸವಣ್ಣಪ್ಪ ನೆಲ್ಲಗಿ, ಸಿದ್ಧಾರ್ಥ ಬಾವಿದೊಡ್ಡಿ, ರುದ್ರೇಶ್ವರ ಗೋರಟಾ ಉಪಸ್ಥಿತರಿದ್ದರು. ಶಿವಲಿಂಗಯ್ಯ ಕನಾಡೆ, ಸಿದ್ದಪ್ಪ ಉಳ್ಳೆ ಅವರ ವಿಶೇಷ ಸನ್ಮಾನ ನಡೆಯಿತು.

ವೀರಶೆಟ್ಟಿ ಪಾಟೀಲ ಸಂಪಾದಿಸಿದ 'ಅಭಿನವಶ್ರೀಗಳ ಮೊಬೈಲ್ ಜಾಗೃತಿ ಪಾದಯಾತ್ರೆ' ಗ್ರಂಥ ಬಿಡುಗಡೆ ಮಾಡಲಾಯಿತು.

ಪ್ರಜಾವಾಣಿ ಭಾನುವಾರ • ಸೆಪ್ಟೆಂಬರ್ 29, 2024

'ರುದ್ರಮುನಿ ಶ್ರೀಗಳು ಸಮತಾವಾದಿಗಳು'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಮಾಜ ಸೇವಕರು, ಸಮತಾವಾದಿಗಳು ಆಗಿದ್ದಾರೆ' ಎಂದು ಶಿಕ್ಷಕ ಚನ್ನವೀರ ಜಮಾದಾರ ಶ್ಲಾಘಿಸಿದರು.

ನಗರದ ತ್ರಿಪುರಾಂತ ಗವಿಮಠದಲ್ಲಿ ಸಮಾಜ ಸುಧಾರಣೆಗೆ ವಿವಿಧ ರೀತಿಯ ಅಭಿಯಾನ ಹಾಗೂ ಬಳ್ಳಾರಿ ಸಾಂಸ್ಕೃತಿಕ ವೇದಿಕೆಯಿಂದ ಕರ್ನಾಟಕ ಸಾಧಕ ರತ್ನ ಪ್ರಶಸ್ತಿ ಪಡೆದಿರುವ ನಿಮಿತ್ತ ಆಯೋಜಿಸಿದ್ದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಗೌರವ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, 'ವ್ಯಸನಮುಕ್ತ ಅಭಿಯಾನ ಸೇರಿದಂತೆ ಮತ್ತಿತರ ಸಾಮಾಜಿಕ ಕಾರ್ಯಗಳನ್ನು ಶ್ರೀಗಳು ಕೈಗೊಂಡಿದ್ದಾರೆ. ಸರಳ, ಸಜ್ಜನಿಕೆಯ ಸಾಕಾರಮೂರ್ತಿ ಆಗಿದ್ದಾರೆ' ಎಂದು ಹೇಳಿದರು.

ಮಲ್ಲಿಕಾರ್ಜುನ ಆಲಗೂಡೆ ಮಾತನಾಡಿ, 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವುದಕ್ಕೆ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಾಕ್ಷಿ ಆಗಿದ್ದಾರೆ' ಎಂದು ಹೇಳಿದರು.



ಬಸವಕಲ್ಯಾಣದ ತ್ರಿಪುರಾಂತ ಗವಿಮಠದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಅವರನ್ನು ಸನ್ಮಾನಿಸಲಾಯಿತು

ಮುಖಂಡ ಸೋಮಶೇಖರಯ್ಯ ವಸ್ತ್ರದ ಮಾತನಾಡಿ, 'ನಿರ್ಜನವಾಗಿದ್ದ ಸ್ಥಳವನ್ನು ಸುಂದರ ಮಠವನ್ನಾಗಿ ರೂಪಿಸಿದ ಶ್ರೇಯಸ್ಸು ಶಿವಾಚಾರ್ಯರಿಗೆ ಸಲ್ಲುತ್ತದೆ' ಎಂದರು.

ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಭಕ್ತರ ಸಹಾಯದಿಂದ ಮಠದ ಅಭಿವೃದ್ಧಿ ಸಾಧ್ಯವಾಗಿದೆ. ದುಶ್ಚಟ, ಮೊಬೈಲ್ ನಿಷೇಧ ಸಂಬಂಧದ ಪಾದಯಾತ್ರೆಗೆ ಎಲ್ಲರೂ ಸಹಕಾರ ನೀಡಿದ್ದಾರೆ' ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಗವಿಮಠ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಸನ್ಮಾನಿಸಿದರು. ಪ್ರೊ.ರುದ್ರೇಶ್ವರ ಗೋರಟಾ, ಶರಣಬಸಪ್ಪ ಆಲಗೂಡೆ, ರಮೇಶ ರಾಜೋಳೆ ಮಾತನಾಡಿದರು. ಪ್ರಮುಖರಾದ ಬಸವಂತಪ್ಪ ಲವಾರೆ, ರಾಮಚಂದ್ರ ಹುಡಗೆ, ಎ.ಜಿ. ಪಾಟೀಲ, ಲಕ್ಷ್ಮಣ ಸಿಂಗಾರೆ, ರೇವಣಸಿದ್ಧಯ್ಯ ಮಠಪತಿ, ರವಿ ನಾವದ್ಗೇಕರ, ಶಾಂತಲಿಂಗ ಮಠಪತಿ, ಪಂಭಾಕ್ಷರಿ ಹಿರೇಮಠ, ವೀರಶೆಟ್ಟಿ ಪಾಟೀಲ, ವಿ.ಎಸ್. ರಾಜೋಳೆ, ರಾಕೇಶ ಪುರವಂತ, ಬಾಬು ಸ್ವಾಮಿ, ಗೋವಿಂದರೆಡ್ಡಿ, ಸಿದ್ರಾಮ ಕಾವಳೆ ಉಪಸ್ಥಿತರಿದ್ದರು.

ಪ್ರಜಾವಾಣಿ ಮಂಗಳವಾರ • ಡಿಸೆಂಬರ್ 17, 2024

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಮಂಗಳವಾರ 17 ಡಿಸೆಂಬರ್ 2024
17 DECEMBER 2024

ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನುಡಿ | ಸಂಸ್ಥಾನ ಗವಿಮಠದಲ್ಲಿ ಭಕ್ತರಿಂದ ಅಭಿನಂದನೆ

ಸಮಾಜ ಸುಧಾರಣೆ ಕಾರ್ಯಕ್ಕೆ ಭಕ್ತಸಮೂಹವೇ ಪ್ರೇರಣೆ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

» ಪೂಜ್ಯರ ಸಮಾಜಮುಖಿ ನೇವೆ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದ ಪ್ರಮುಖರು

ವ್ಯಸನಮುಕ್ತ ಸಮಾಜಕ್ಕಾಗಿ ಜನಜಾಗೃತಿ ಅಭಿಯಾನ ನಡೆಸಿರುವುದನ್ನು ಪರಿಗಣಿಸಿ ಬಳ್ಳಾರಿಯ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆಯು ಕರ್ನಾಟಕ ಸಾಧಕ ರತ್ನ ಪ್ರಶಸ್ತಿ ನೀಡಿ ಗೌರವಿಸಿದೆ. ಇದು ನನಗೆ ಮಾತ್ರವಲ್ಲ. ನಮ್ಮ ಇಡೀ ಭಕ್ತ ಸಮೂಹಕ್ಕೆ ಸಂದ ಗೌರವ ಎಂದು ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನುಡಿದರು.

ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಸಮಸ್ತ ಸದ್ಭಕ್ತರಿಂದ ಭಾನುವಾರ ಗವಿಮಠದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಆಶೀರ್ವಚನ ನೀಡಿದ ಅವರು, ವ್ಯಸನಮುಕ್ತ ಸಮಾಜದ ಸಂಕಲ್ಪದೊಂದಿಗೆ ನಮ್ಮ ಜನ್ಮದಿನೋತ್ಸವ ನಿಮಿತ್ತ ಮರ ಬೆಳೆಸಿ ಪರಿಸರ ಉಳಿಸಿ, ದುಶ್ಚಟ ಜೋಳಿಗೆ, ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ, ಪ್ಲಾಸ್ಟಿಕ್‌ಮುಕ್ತ ಜೀವನ ಹೀಗೆ ಪ್ರತಿವರ್ಷ ಒಂದೊಂದು ಸಾಮಾಜಿಕ ಸಂದೇಶದೊಂದಿಗೆ ನಗರದ ಮುಖ್ಯ ರಸ್ತೆಯಲ್ಲಿ ಪಾದಯಾತ್ರೆ ಮೂಲಕ ಸಮಾಜ ಸುಧಾರಣೆ ಕಾರ್ಯ ಕೈಗೊಳ್ಳುತ್ತಿದ್ದೇವೆ. ಇವುಗಳಿಗೆಲ್ಲ ಭಕ್ತರೇ ಪ್ರೇರಣೆ ಎಂದು ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬುದಕ್ಕೆ ಅಭಿನವ ಪೂಜ್ಯರೇ ಸಾಕ್ಷಿ. ಇಂಥ ದಾರ್ಶನಿಕರನ್ನು ಪಡೆದ ನಾವೆಲ್ಲರೂ ಭಾಗ್ಯವಂತರು ಎಂದು ಅಭಿನಂದನಾ ನುಡಿಗಳನ್ನಾಡಿದರು.

ಸಂಪನ್ಮೂಲ ಶಿಕ್ಷಕ ಚನ್ನವೀರ ಜಮಾದಾರ ಅನಿಸಿಕೆ ವ್ಯಕ್ತಪಡಿಸುತ್ತ ಡಾ.ಅಭಿನವ ಗುರುಗಳು ಸರಳ, ಸಜ್ಜನಿಕೆ ಸಾಕಾರಮೂರ್ತಿ. ಯಾರೇ ಕರೆದರೂ ಬರುವ ಸಾಮಾನ್ಯರು. ಇಂಥವರಿಗೆ ಕರ್ನಾಟಕ ಸಾಧಕ ರತ್ನ ಪ್ರಶಸ್ತಿ ದೊರೆತಿದ್ದು ಸಾಧನೆಗೆ ಸಂದ ಗೌರವ ಎಂದರು. ಬಿಡಿವಿಸಿ ಸದಸ್ಯ ಸೋಮಶೇಖರ ವಸ್ತ್ರದ ಮಾತನಾಡಿ, ಘಟವನ್ನು ಮಠ ಮಾಡಿದ ಶ್ರೀ ಡಾ.ಅಭಿನವ ಗುರುಗಳ ಸಾಧನೆಯನ್ನು ಕೊಂಡಾಡಿದರು.

ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಪ್ರೊ. ಶಾಂತಲಿಂಗ ಮಠಪತಿ, ಪ್ರಾಚಾರ್ಯ ಎ.ಜಿ. ಪಾಟೀಲ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ಲಕ್ಷ್ಮಣ ಸಿಂಗಾರೆ, ರಾಮಚಂದ್ರ ಹುಡುಗೆ, ಮಲ್ಲಿಕಾರ್ಜುನ ಅಲಶೆಟ್ಟಿ, ಪಂಚಾಕ್ಷರಿ ಹಿರೇಮಠ, ರೇವಣಸಿದ್ದಯ್ಯ ಮಠಪತಿ, ಬರಹಗಾರ ವೀರಶೆಟ್ಟಿ ಪಾಟೀಲ, ಡಾ.ವಿ.ಎಸ್. ರಾಜೋಳೆ, ಪ್ರೊ.ಸಂತೋಷ ಮಹಾಜನ್, ರಾಕೇಶ ಪುರವಂತ, ರವಿ ಬಿರಾದಾರ, ಗೋವಿಂದರೆಡ್ಡಿ ಕೊತಾಪಲ್ಲೆ, ಸರೋಜನಿ ಹಿರೇಮಠ, ರೇಖಾ ಚಿಟ್ಟೆ, ಮಹಾನಂದಾ ಪುರವಂತ, ಜ್ಯೋತಿ ಪುರವಂತ ಇತರರಿದ್ದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಸಂಸ್ಥಾನ ಗವಿಮಠದಲ್ಲಿ ಭಾನುವಾರ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ಎ.ಜಿ.ಪಾಟೀಲ, ಸೋಮಶೇಖರ ವಸ್ತ್ರದ, ಶ್ರೀಶೈಲ್ ವಾತಡೆ, ಲಕ್ಷ್ಮಣ ಸಿಂಗಾರೆ, ರಾಮಚಂದ್ರ ಹುಡುಗೆ, ಮಲ್ಲಿಕಾರ್ಜುನ ಅಲಶೆಟ್ಟಿ, ಪಂಚಾಕ್ಷರಿ ಹಿರೇಮಠ, ರೇವಣಸಿದ್ದಯ್ಯ ಮಠಪತಿ, ವೀರಶೆಟ್ಟಿ ಪಾಟೀಲ, ಡಾ.ವಿ.ಎಸ್.ರಾಜೋಳೆ, ಪ್ರೊ.ಸಂತೋಷ ಮಹಾಜನ್, ರಾಕೇಶ ಇದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 14 ಅಕ್ಟೋಬರ್ 2024
14 OCTOBER 2024



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ವಿಜಯದಶಮಿ ಹಾಗೂ ನಾಡ ಹಬ್ಬ ದಸರಾ ನಿಮಿತ್ತ ಶ್ರೀ ಡಾ.ಅಭಿನವ ಘನಲಿಂಗ, ರುದ್ರಮುನಿ ಶಿವಾಚಾರ್ಯರು ಶನಿವಾರ ಶಮಿ ಪೂಜೆ ನೆರವೇರಿಸಿದರು. ಪ್ರಮುಖರಾದ ಶರಣಪ್ಪ ಬಿರಾದಾರ, ಬಸವಂತಪ್ಪ ಲವಾರೆ, ಎ.ಜಿ.ಪಾಟೀಲ್, ರವಿ ಚಂದನಕೆರೆ, ರುದ್ರೇಶ್ವರ ಗೋರ್ಟಾ, ರೇವಣಸಿದ್ದಯ್ಯ ಮಠಪತಿ, ಸಿದ್ದು ಬಿರಾದಾರ. ರಾಕೇಶ ಪುರವಂತ, ಮಲ್ಲಿಕಾರ್ಜುನ ಅಲಗುಡೆ, ಬಾಬುರಾವ ಹಾಗೂ ಭಕ್ತರು ಇದ್ದರು.

VIJAYAVANI » KALABURAGI
ನಂ1 ಕನ್ನಡ ದಿನಪತ್ರಿಕೆ ವಿಜಯವಾಣಿ
ಬುಧವಾರ 4 ಡಿಸೆಂಬರ್ 2024
» 4 DECEMBER 2024



ವಿಜಯವಾಣಿ ಚಿತ್ರ

ಕರ್ನಾಟಕ ರಾಜ್ಯೋತ್ಸವ ನಿಮಿತ್ತ ಬಳ್ಳಾರಿಯಲ್ಲಿ ಆಯೋಜಿಸಿದ್ದ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮ್ಮೇಳನದಲ್ಲಿ ಬಸವಕಲ್ಯಾಣ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಕರ್ನಾಟಕ ಸಾಧಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಮುಖರಾದ ತಿಮ್ಮಪ್ಪ ಜೋಳದರಾಸಿ, ಬಸವರಾಜ ಬೀಸಳಹಳ್ಳಿ, ಕೆ.ಆರ್.ಮಧು, ಜಿ.ಹರಿಪ್ರಸಾದ, ಸುಮಾ ನಾಡಿಗೇರ, ಕೆ.ತಿಪ್ಪೇರುದಪ್ಪ, ಕೆ.ಆರ್.ಮಧು ಇದ್ದರು.

Scanned with OKEN Scanner

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 20 ನವೆಂಬರ್ 2024
20 NOVEMBER 2024

ರಂಭಾಪುರಿ ಜಗದ್ಗುರು ಮಾಹಿತಿ | ಹಾರಕೂಡ ಸಂಸ್ಥಾನ ಹಿರೇಮಠದಲ್ಲಿ ಪೂರ್ವಭಾವಿ ಸಭೆ

ಕಲ್ಯಾಣದಲ್ಲಿ 2025ರ ದಸರಾ ದರ್ಬಾರ್

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ನಗರದಲ್ಲಿ 2025ರಲ್ಲಿ ಒಂಬತ್ತು ದಿನದ ಶರನ್ನವರಾತ್ರಿ ದಸರಾ ದರ್ಬಾರ್ ಯಶಸ್ವಿ ಮತ್ತು ವೈಭವಪೂರ್ಣ ನಡೆಯುವ ಜತೆಗೆ ಸಮಾಜಕ್ಕೆ ಆದರ್ಶ ಸಂದೇಶ ಸಾರಲಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ನುಡಿದರು.

ಹಾರಕೂಡ ಸಂಸ್ಥಾನ ಹಿರೇಮಠದಲ್ಲಿ ಮಂಗಳವಾರ ಕರೆದಿದ್ದ ಪೂರ್ವಭಾವಿ ಸಭೆ ಉದ್ಘಾಟಿಸಿ ಆಶೀರ್ವಚನ ನೀಡಿದ ಜಗದ್ಗುರುಗಳು, ಇದುವರೆಗೆ 33 ದಸರಾ ದರ್ಬಾರ್ ನಡೆದಿವೆ. ಬಸವಾದಿ ಶರಣರು ನಾಡಿನ ಅಧ್ಯಾತ್ಮ ಲೋಕಕ್ಕೆ ಆದರ್ಶ ಬೆಳಕು ಕೊಟ್ಟ ಐತಿಹಾಸಿಕ ನಗರ ಕಲ್ಯಾಣದಲ್ಲಿ 34ನೇ ದಸರಾ ದರ್ಬಾರ್ ಅತ್ಯಂತ ಮಹತ್ವ ಪಡೆದುಕೊಳ್ಳುತ್ತದೆ ಎಂದರು.

ಜಮಖಂಡಿ ಮತ್ತು ಬಳ್ಳಾರಿಯಲ್ಲಿ 34ನೇ ದಸರಾ ದರ್ಬಾರ್‌ಗೆ ಭಕ್ತರು ಸಮಯ ಕೇಳಿದ್ದರು. ಆದರೆ ನಿಯೋಗದೊಂದಿಗೆ ಆಗಮಿಸಿ ಕಲ್ಯಾಣದಲ್ಲಿ ನಡೆಸುವಂತೆ ಶಾಸಕ ಶರಣು ಸಲಗರ ಮಾಡಿದ ಕೋರಿಕೆಯನ್ನು ಸಮ್ಮತಿ ಸೂಚಿಸಲಾಗಿದೆ. ಹೀಗಾಗಿ ಕಲ್ಯಾಣದಲ್ಲಿ ದಸರಾ ದರ್ಬಾರ್ ಯಶಸ್ವಿಗಾಗಿ ಎಲ್ಲರೂ ಕೆಲಸ ಮಾಡುವ ಮೂಲಕ ಐತಿಹಾಸಿಕ ಸಮಾರಂಭವನ್ನಾಗಿಸುವಲ್ಲಿ ಸಂಶಯವಿಲ್ಲ ಎಂದು ಹೇಳಿದರು.

34ನೇ ದಸರಾ ದರ್ಬಾರ್ ನಿಮಿತ್ತ ರಚಿಸಿದ ಸ್ವಾಗತ ಸಮಿತಿಯಲ್ಲಿ ಹಾರಕೂಡದ ಶ್ರೀ ಡಾ.ಚನ್ನವೀರ ಶಿವಾಚಾರ್ಯ ಗೌರವಾಧ್ಯಕ್ಷರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅಧ್ಯಕ್ಷ ಮತ್ತು ಶಾಸಕ ಶರಣು ಸಲಗರ ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡುವರು. ಮುಂಬರುವ ದಿನಗಳಲ್ಲಿ ಹಾರಕೂಡ ಶ್ರೀ ಮತ್ತು ಶಾಸಕರು ಸೇರಿ ಸಮಿತಿ ಮತ್ತು ಉಪ ಸಮಿತಿ ಪದಾಧಿಕಾರಿಗಳ ನೇಮಕ ಮಾಡಲಿದ್ದಾರೆ ಎಂದರು.

ನೇತೃತ್ವ ವಹಿಸಿದ್ದ ಹಾರಕೂಡ ಹಿರೇಮಠ ಪೀಠಾಧಿಪತಿ ಶ್ರೀ ಡಾ.ಚನ್ನವೀರ ಶಿವಾಚಾರ್ಯ ಮಾತನಾಡಿ, ರಂಭಾಪುರಿ ಜಗದ್ಗುರುಗಳು ಬಸವಕಲ್ಯಾಣದಲ್ಲಿ 34ನೇ ದಸರಾ ದರ್ಬಾರ್ ಆಯೋಜಿಸಲು ಒಪ್ಪಿಗೆ ನೀಡಿದ್ದು ನಮ್ಮ ಪೂರ್ವಜನ್ಮದ ಪುಣ್ಯ ಎಂದು ಸಂತಸ ವ್ಯಕ್ತಪಡಿಸಿದರು.

ಹಿರನಾಗಾಂವನ ಶ್ರೀ ಜಯಶಾಂತಲಿಂಗ ಮಹಾಸ್ವಾಮೀಜಿ ಮಾತನಾಡಿ, ಭಕ್ತರು ನನಗೆ ನೀಡಿದ ದೇಣಿಗೆಯಲ್ಲಿ ಕಲ್ಯಾಣದಲ್ಲಿ ನಡೆಯುವ 34ನೇ ದಸರಾ ದರ್ಬಾರ್‌ಗೆ 2.51 ಲಕ್ಷ ರೂ. ನೀಡುವುದಾಗಿ ತಿಳಿಸಿದರು.

ತ್ರಿಪುರಾಂತದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಮಾತನಾಡಿ, 34ನೇ ದಸರಾ ದರ್ಬಾರ್ ಯಶಸ್ವಿಗಾಗಿ ಜಗದ್ಗುರುಗಳ ಆಪ್ಪಣೆಯಂತೆ ಕೆಲಸ ಮಾಡುವೆ ಎಂದರು.

ಶಾಸಕ ಶರಣು ಸಲಗರ ಮಾತನಾಡಿದರು. ಪ್ರಮುಖರಾದ ಶರಣಪ್ಪ ಬಿರಾದಾರ, ಬಿಡಿಪಿಸಿ ಅಧ್ಯಕ್ಷ ಬಸವರಾಜ ಕೋರಕೆ, ರಾಜಕುಮಾರ ಸಿರಗಾಪುರ, ಪ್ರಮುಖರಾದ ಸುನೀಲ ಪಾಟೀಲ್, ಮಲ್ಲಯ್ಯ ಹಿರೇಮಠ, ಸಿದ್ರಾಮಪ್ಪ ಗುದಗೆ, ಚಂದ್ರಶೇಖರ ಪಾಟೀಲ್, ಮಲ್ಲಿನಾಥ ಹಿರೇಮಠ ಹಾರಕೂಡ, ಚಂದ್ರಶೇಖರ ಪಾಟೀಲ್, ಸೋಮಸೇಖರ ವಸ್ತದ, ಶ್ರೀಕಾಂತ ಬಡದಾಳೆ, ಮೇಘರಾಜ ನಾಗರಾಳೆ, ವೀರಣ್ಣ ಶೀಲವಂತ, ಎಂ.ಕೆ. ನಂದಿ, ಎ.ಜಿ. ಪಾಟೀಲ್, ಸುಭಾಷ ಇತರರಿದ್ದರು. ಶಿಕ್ಷಕ ರಮೇಶ ರಾಜೋಳೆ ನಿರೂಪಣೆ ಮಾಡಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ದಸರಾ ದರ್ಬಾರ್ ನಿಮಿತ್ತ ಹಾರಕೂಡದಲ್ಲಿ ಮಂಗಳವಾರ ಕರೆದಿದ್ದ ಪೂರ್ವಭಾವಿ ಸಭೆಯನ್ನು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರು ಉದ್ಘಾಟಿಸಿದರು. ಶ್ರೀ ಡಾ.ಚನ್ನವೀರ ಶಿವಾಚಾರ್ಯ, ಶ್ರೀ ಜಯಶಾಂತಲಿಂಗ ಸ್ವಾಮೀಜಿ, ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಶಾಸಕ ಶರಣು ಸಲಗರ, ಬಸವರಾಜ ಕೋರಕೆ, ಶರಣಪ್ಪ ಬಿರಾದಾರ, ಸುನೀಲ ಪಾಟೀಲ್, ರಾಜಕುಮಾರ ಸಿರ್ಗಾಪೂರ, ಮೇಘರಾಜ ನಾಗರಾಳೆ ಇತರರಿದ್ದರು.

> ಇತಿಹಾಸ ನೋಡಿದಾಗ ರಂಭಾಪುರಿ ಜಗದ್ಗುರುಗಳ ಪೀಠ ಅತ್ಯಂತ ಪ್ರಾಚೀನ ಪರಂಪರೆಯದ್ದು. ಐತಿಹಾಸಿಕ ನಗರ ಬಸವಕಲ್ಯಾಣದಲ್ಲಿ ರಂಭಾಪುರಿ ಜಗದ್ಗುರುಗಳ 34ನೇ ದಸರಾ ದರ್ಬಾರ್ ಯಶಸ್ವಿಯಾಗಿ ಆಚರಿಸೋಣ. 2025ರ ಸಮಾರಂಭದಲ್ಲಿ ಹಾರಕೂಡ ಸಂಸ್ಥಾನ ಹಿರೇಮಠದಿಂದ ಐದು ದಿನ ದಾಸೋಹ ವ್ಯವಸ್ಥೆ ಮಾಡಲಾಗುವುದು.
>
> **ಶ್ರೀ ಡಾ.ಚನ್ನವೀರ ಶಿವಾಚಾರ್ಯ**
> ಹಾರಕೂಡ ಸಂಸ್ಥಾನ ಹಿರೇಮಠ

> ಮಾನವ ಕುಲಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಘೋಷವಾಕ್ಯದೊಂದಿಗೆ ನಾಡಿನಾದ್ಯಂತ ಸಮಾಜಕ್ಕೆ ಆದರ್ಶ ಸಂದೇಶ ನೀಡುತ್ತಿರುವ ರಂಭಾಪುರಿ ಜಗದ್ಗುರುಗಳ 34ನೇ ದಸರಾ ದರ್ಬಾರ್ ಬಸವಕಲ್ಯಾಣದಲ್ಲಿ ಐತಿಹಾಸಿಕವಾಗಿ ಎಲ್ಲರೂ ಸೇರಿ ಯಶಸ್ವಿಗೊಳಿಸೋಣ. ಕಲ್ಯಾಣದ ಕೀರ್ತಿ ಹೆಚ್ಚಿಸೋಣ.
>
> | ಶರಣು ಸಲಗರ ಶಾಸಕ

₹51 ಲಕ್ಷ ದೇಣಿಗೆ ವಾಗ್ದಾನ

ಬಸವಕಲ್ಯಾಣದಲ್ಲಿ 2025ರ ಶರನ್ನವರಾತ್ರಿ ದಸರಾ ದರ್ಬಾರ್‌ಗೆ ಶಾಸಕ ಶರಣು ಸಲಗರ 11 ಲಕ್ಷ ರೂ., ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ 5 ಲಕ್ಷ, ಹಾರಕೂಡ ಗ್ರಾಮಸ್ಥರಿಂದ 2 ಲಕ್ಷ, ಹಾರಕೂಡ ಶ್ರೀಗಳ ಪೂರ್ವಾಶ್ರಮ ಸಹೋದರರಿಂದ ಒಂದು ಲಕ್ಷ ಸೇರಿ 51 ಲಕ್ಷ ರೂ. ದೇಣಿಗೆ ನೀಡುವ ಸಂಬಂಧ ವಾಗ್ದಾನ ಮಾಡಲಾಗಿದೆ ಎಂದು ಹಾರಕೂಡ ಶ್ರೀ ಪ್ರಕಟಿಸಿದರು. ಪ್ರಥಮ ಪೂರ್ವಭಾವಿ ಸಭೆ ಇದಾಗಿದೆ. ಮುಂದಿನ ಸಭೆಗಳಲ್ಲಿ ಭಕ್ತರು ಮತ್ತಷ್ಟು ಹೆಚ್ಚಿನ ರೀತಿಯಲ್ಲಿ ತನು, ಮನ, ಧನದಿಂದ ಸಹಕಾರ ನೀಡಲಿದ್ದಾರೆ ಎಂದರು.

Scanned with OKEN Scanner

ಡಾ.ಚನ್ನವೀರ ಶಿವಾಚಾರ್ಯ ನುಡಿ | ಹುಲಗುತ್ತಿಯಲ್ಲಿ ಕಳಸಾರೋಣ ಸಮಾರಂಭ

ಭಾವ ಸೌಂದರ್ಯದಿಂದ ಬದುಕು ಸುಂದರ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸಣ್ಣಪುಟ್ಟ ವಿಷಯಗಳಿಗೆ ಮನಸ್ಸನ್ನು ಕೆರಳಿಸದೆ ಹೂವಿನಂತೆ ಅರಳುವಂತಾಗಬೇಕು, ಭಾವ ಸೌಂದರ್ಯದಿಂದ ಬದುಕು ಸುಂದರವಾಗುತ್ತದೆ ಎಂದು ಹಾರಕೂಡ ಸಂಸ್ಥಾನ ಹಿರೇಮಠದ ಪೀಠಾಧಿಪತಿ ಶ್ರೀ ಡಾ.ಚನ್ನವೀರ ಶಿವಾಚಾರ್ಯರು ನುಡಿದರು.

ಹುಲಗುತ್ತಿ ಗ್ರಾಮದ ಶ್ರೀ ಹನುಮಾನ ದೇವಸ್ಥಾನದ ಕಳಸಾರೋಹಣ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಹನುಮಂತನ ಭಾವಪ್ರಸನ್ನತೆ, ಧೈರ್ಯ, ಸಾಹಸಗಳನ್ನು ನಮ್ಮಲ್ಲಿ ಬೆಳೆಸಿಕೊಂಡರೆ, ಬದುಕಿನ ಎಂತಹ ವಿಷಮ ವರ್ತುಲವೂ ಪಾರು ಮಾಡಲು ಸಾಧ್ಯವಾಗುತ್ತದೆ ಎಂದರು.

ಸಹನೆ, ತಾಳ್ಮೆ ಇವು ಭಾರತೀಯ ಮಹಿಳೆಯ ನಿಜವಾದ ಆಭರಣ ಹಾಗೂ ಸುಖ ಸಂಸಾರದ ಇಂಧನ. ಜೀವನದಲ್ಲಿ ಸಹನೆ, ತಾಳ್ಮೆ ತಪಸ್ಸಿನ ಹಾಗೆ ರೂಢಿಸಿಕೊಂಡು ಬರಬೇಕು, ಈ ಮಾತು ಪುರುಷ ಸಮಾಜಕ್ಕೂ ಅನ್ವಯಿಸುತ್ತದೆ. ನೋವು ನಲಿವುಗಳನ್ನು ಸಮಚಿತ್ತದಿಂದ ಸ್ವೀಕರಿಸಿ, ಆತ್ಮಸ್ಥೈರ್ಯದಿಂದ ಬದುಕಿನ ಬಂಡಿ ದೂಡಬೇಕು ಎಂದರು.

ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಪ್ರಮುಖರಾದ ಶಂಕರ ಹಿರಗೊಪ್ಪನೋರ, ಮಹಾದೇವ ಬಾಪುನೋರ, ವಾಸುದೇವ ಹಿರಗೊಪ್ಪನೋರ, ಮಹೇಶ ಖವಳಿ, ಶಿವರಾಜ ಹಿರಗೊಪ್ಪನೋರ, ಪ್ರಕಾಶ ಹಿರಗೊಪ್ಪನೋರ, ಬಸಪ್ಪ ಹಿರಗೊಪ್ಪನೋರ ಇತರರಿದ್ದರು. ಕಾಶಿನಾಥ ಪಾಟೀಲ್ ಸ್ವಾಗತಿಸಿದರು. ಮಹಾದೇವ ಪಾಟೀಲ್ ವಂದಿಸಿದರು. ಲಕ್ಷ್ಮಣಪ್ರಸಾದ ಮೇತ್ರೆ ನಿರೂಪಣೆ ಮಾಡಿದರು. ಶಿವಕುಮಾರ ಶಾಸ್ತ್ರೀ ಪ್ರಾರ್ಥನಾ ಗೀತೆ ನಡೆಸಿಕೊಟ್ಟರು. ಸಾವಿತ್ರಾ ಪಾಟೀಲ್ ಸಂಗೀತ ಸೇವೆ ಸಲ್ಲಿಸಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ತಾಲೂಕಿನ ಹುಲಗುತ್ತಿಯ ಶ್ರೀ ಹನುಮಾನ ದೇವಸ್ಥಾನದ ಕಳಸಾರೋಣ ಸಮಾರಂಭದಲ್ಲಿ ಶ್ರೀ ಡಾ.ಚನ್ನವೀರ ಶಿವಾಚಾರ್ಯರು ಆಶೀರ್ವಚನ ನೀಡಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಕಾಶಿನಾಥ ಪಾಟೀಲ್, ಅಪ್ಪಣ್ಣ ಜನವಾಡ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 11 ನವೆಂಬರ್ 2024
11 NOVEMBER 2024

ಸಮಯಪ್ರಜ್ಞೆ ಜತೆಗೆ ಸಂಸ್ಕಾರ ಇರಲಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ವಿದ್ಯಾರ್ಥಿಗಳಲ್ಲಿ ಸಮಯಪ್ರಜ್ಞೆ ಜತೆಗೆ ಶಾಂತಿ, ಸಂಯಮ ಮತ್ತು ಸಂಸ್ಕಾರ ಇರುವ ಅಗತ್ಯವಿದೆ ಎಂದು ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನುಡಿದರು.

ನಗರದ ದೊಡ್ಡಪ್ಪ ಅಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಮಂಗಳವಾರ ಏರ್ಪಡಿಸಿದ್ದ ಪೌರತ್ವ ತರಬೇತಿ ಶಿಬಿರ ಉದ್ಘಾಟಿಸಿದ ಅವರು, ಕಲಿಕೆ ನಿರಂತರ ಪ್ರಕ್ರಿಯೆ. ಶ್ರದ್ಧೆ, ಭಕ್ತಿ ಮತ್ತು ಪ್ರಾಮಾಣಿಕತೆ ಅಳವಡಿಸಿಕೊಂಡಲ್ಲಿ ಉತ್ತಮ ಜೀವನ ನಿರ್ವಹಣೆ ಮಾಡಬಹುದು ಎಂದರು.

ದೇಶದ ಪ್ರತಿಯೊಬ್ಬ ಪ್ರಜೆ ಸಂವಿಧಾನ ನೀಡಿದ ಕರ್ತವ್ಯ, ಹಕ್ಕುಗಳನ್ನು ನಿತ್ಯದ ಜೀವನದಲ್ಲಿ ಅಳವಡಿಸಿಕೊಂಡು ನಡೆಯಬೇಕು. ಶಿಕ್ಷಕರು ಮಕ್ಕಳಿಗೆ ಕೇವಲ ಪುಸ್ತಕ ಜ್ಞಾನ ನೀಡಿದರೆ ಸಾಲದು, ವ್ಯವಹಾರಿಕ ತಿಳಿವಳಿಕೆಯೂ ನೀಡುವ ಅಗತ್ಯವಿದೆ ಎಂದು ಹೇಳಿದರು.

ಬಿಆರ್‌ಸಿ ಸಂಪನ್ಮೂಲ ವ್ಯಕ್ತಿ ಶಾಲಿವಾನ್ ಬಿರಾದಾರ್ ಮಾತನಾಡಿ, ದೇಶದ ಪ್ರತಿಯೊಬ್ಬರೂ ಸ್ವಯಂಪ್ರೇರಿತವಾಗಿ ಸಮಾಜದ ಮೌಲ್ಯಗಳು ಮತ್ತು ಪರಿಸರ ಉಳಿಸುವಲ್ಲಿ ಜವಾಬ್ದಾರಿ ನಿರ್ವಹಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ರಾಚಯ್ಯ ಮಠಪತಿ ಮಾತನಾಡಿ, ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡು ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಹೊಗಬೇಕು ಎಂದರು.

ಶಿಬಿರದ ಸಹ ನಿರ್ದೇಶಕ ಶಿವಾನಂದ ಬಿರಾದಾರ್, ನೀಲೇಶಕುಮಾರ ಟೊಂಪೆ, ಉಪನ್ಯಾಸಕರಾದ ಅರುಣಾದೇವಿ ಕಾಡಾದಿ, ಕವಿತಾ ಮಠಪತಿ, ಕೈಲಾಶ ಮಂಗಲಗಿ, ಸಂಜೀವಕುಮಾರ ಪೂಜಾರಿ, ರೂಪೇಶ ಭೋಸ್ಲೆ, ರಮೇಶ ಗರುಡಕರ್, ಬಸವರಾಜ ಕಾಸ್ಲೆ, ಮಿಥಿಲಾ ಬಿರಾದಾರ್ ಇತರರಿದ್ದರು. ಶಿಬಿರದ ನಿರ್ದೇಶಕ ಬಸವರಾಜ ಸೇರಿ ಪ್ರಾಸ್ತಾವಿಕ ಮಾತನಾಡಿದರು. ಪರಶುರಾಮ ಸ್ವಾಗತಿಸಿದರು. ರೇಣುಕಾ ನಿರೂಪಣೆ ಮಾಡಿದರು. ಪೂಜಾ ವಂದಿಸಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದ ದೊಡ್ಡಪ್ಪ ಅಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ್ದ ಪೌರತ್ವ ತರಬೇತಿ ಶಿಬಿರವನ್ನು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಉದ್ಘಾಟಿಸಿದರು. ಡಾ.ರಾಚಯ್ಯ ಮಠಪತಿ, ಅರುಣಾದೇವಿ ಕಾಡಾದಿ, ಕವಿತಾ ಮಠಪತಿ, ಶಾಲಿವಾನ್ ಬಿರಾದಾರ್, ಶಿವಾನಂದ ಬಿರಾದಾರ್, ಬಸವರಾಜ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಬುಧವಾರ 18 ಡಿಸೆಂಬರ್ 2024
18 DECEMBER 2024

ವಿಜಯವಾಣಿ ಚಿತ್ರಗಳು



ಬಸವಕಲ್ಯಾಣ ರಥ ಮೈದಾನದಲ್ಲಿ ಆಯೋಜಿಸಿರುವ ಎರಡು ದಿನದ ತೃತೀಯ ಕಾಯಕ ಉತ್ಸವದಲ್ಲಿ ಸಚಿವರ ಸ್ಥಳೀಯ ಉತ್ಪನ್ನಗಳ ಪ್ರದರ್ಶನಕ್ಕೆ ಬೀದರ್ ಡಿಸಿ ಕುಲಪತಿ ಶ್ರೀ ಬಿ.ಎಸ್.ಬಿರಾದಾರ ಚಾಲನೆ ನೀಡಿದರು. ಶ್ರೀ ಡಾ.ಚನ್ನವೀರ ಶಿವಾಚಾರ್ಯ, ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಶ್ರೀ ಪೂಜ್ಯ ಡಾ.ಗಂಗಾಂಬಿಕಾ ಅಕ್ಕ, ಬಸವರಾಜ ಪಾಟೀಲ್ ಸೇಡಂ, ರಾಜು ಬಣಕಾರ, ಬಿ.ಜಿ.ಶಟಗಾರ, ಸುಭಾಷಚಂದ್ರ ನಾಗರಾಳೆ, ಪುಟ್ಟರಾಜ, ಸೂರ್ಯಕಾಂತ ಮಠ ಇದ್ದರು.

ಉತ್ಸವದಲ್ಲಿನ ತೃತೀಯ ಪ್ರದರ್ಶನಗಳನ್ನು ವೀಕ್ಷಿಸಿದ ಬೀದರ್ ಡಿಸಿ ಕುಲಪತಿ ಶ್ರೀ ಬಿ.ಎಸ್.ಬಿರಾದಾರ ಅವರು ಸ್ಥಳೀಯ ಉತ್ಪನ್ನಗಳ ಪ್ರದರ್ಶನಕ್ಕೆ

'ಸಮಾಜ ಸುಧಾರಣೆ ಕಾರ್ಯಕ್ಕೆ ಭಕ್ತರೇ ಪ್ರೇರಣೆ'

ಸಂ.ಕ.ಸಮಾಚಾರ ಬಸವಕಲ್ಯಾಣ

ಸಾಮಾಜಿಕ ಸೇವೆ ಗುರುತಿಸಿ ಬಳ್ಳಾರಿಯ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ವೇದಿಕೆಯು ಕರ್ನಾಟಕ ಸಾಧಕ ರತ್ನ ಪ್ರಶಸ್ತಿ ಪ್ರದಾನ ಮಾಡಿ ನಮ್ಮನ್ನು ಗೌರವಿಸಿದ್ದು, ಈ ಗೌರವ ನನಗೆ ಮಾತ್ರವಲ್ಲ. ನಮ್ಮ ಭಕ್ತ ಸಮೂಹಕ್ಕೆ ಸಂದ ಗೌರವ. ಹೀಗಾಗಿ ಈ ಪ್ರಶಸ್ತಿಯನ್ನು ನಾನು ನಮ್ಮ ಇಡೀ ಭಕ್ತ ಸಮೂಹಕ್ಕೆ ಅರ್ಪಿಸುತ್ತೇನೆ ಎಂದು ಸಂಸ್ಥಾನ ಗವಿಮಠದ ಶ್ರೀ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು. ವ್ಯಸನಮುಕ್ತ ಸಮಾಜ ಸುಧಾರಣಾ ಕಾರ್ಯಗಳನ್ನು ಗುರುತಿಸಿ ಬಳ್ಳಾರಿಯಲ್ಲಿ ಕರ್ನಾಟಕ ಸಾಧಕ ರತ್ನ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದ ಹಿನ್ನೆಲೆಯಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಸಮಸ್ತ ಸದ್ಭಕ್ತರಿಂದ ಭಾನುವಾರ ಸಂಸ್ಥಾನ ಗವಿಮಠದಲ್ಲಿ ಏರ್ಪಡಿಸಿದ ಅಭಿನಂದನಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಶ್ರೀಗಳು ಆಶೀರ್ವಚನ ನೀಡಿ, ನಾವು ವ್ಯಸನ ಮುಕ್ತ ಸಮಾಜ ಸಂಕಲ್ಪ ತೊಟ್ಟು ನಮ್ಮ ಜನ್ಮ ದಿನೋತ್ಸವ ನಿಮಿತ್ತ ಮರಗಳನ್ನು ಬೆಳೆಸಿ ಪರಿಸರವನ್ನು ಉಳಿಸಿ, ದುಶ್ಚಟ ಜೋಳಿಗೆ, ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ, ಪ್ಲಾಸ್ಟಿಕ ಮುಕ್ತ ಜೀವನ ಹೇಗೆ ಪ್ರತಿವರ್ಷ ಒಂದೊಂದು ಸಾಮಾಜಿಕ ಸಂದೇಶದೊಂದಿಗೆ ನಗರದ ಮುಖ್ಯ ರಸ್ತೆಯಲ್ಲಿ ಪಾದಯಾತ್ರೆ ಕೈಕೊಳ್ಳುವುದರ ಮೂಲಕ ಸಮಾಜ ಸುಧಾರಣೆಯ ಕಾರ್ಯಗಳನ್ನು ಕೈಕೊಳ್ಳುತ್ತಿದ್ದೇವೆ. ಇವುಗಳಿಗೆಲ್ಲ ನಮ್ಮ ಭಕ್ತರೇ ಪ್ರೇರಣೆ ಎಂದು ಸಾರ್ಥಕ ಭಾವ ವ್ಯಕ್ತಪಡಿಸಿದರು. ಅಭಿನಂದನೆ; ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಟ್ರಸ್ಟ್ ಪರವಾಗಿ ಪೂಜ್ಯ ಶ್ರೀ ಡಾ. ಅಭಿನವ ಫನಲಿಂಗ ಗುರುಗಳನ್ನು ಗೌರವಿಸಿ ಅಭಿನಂದಿಸಿದರು. ಇಂಜಿನಿಯರಿಂಗ್ ವಿದ್ಯಾರ್ಥಿ ಶರಣಬಸಪ್ಪ ಅಲಗುಡೆ ಪ್ರಾರ್ಥನಾ ಗೀತೆ ಹಾಡಿದರು. ಪ್ರೊ. ರುದ್ರೇಶ್ವರ ಗೋರ್ಟಾ ಭಕ್ತಿ ಗೀತೆ ಹಾಡಿದರು. ಮುಖ್ಯ ಶಿಕ್ಷಕ ರಮೇಶ ರಾಜೋಳೆ ಸಂಚಾಲನೆ ಮಾಡಿದರು.



ಬಸವಕಲ್ಯಾಣ: ಸಂಸ್ಥಾನ ಗವಿಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಸಮಸ್ತ ಸದ್ಭಕ್ತರಿಂದ ಏರ್ಪಡಿಸಿದ ಅಭಿನಂದನಾ ಸಮಾರಂಭದಲ್ಲಿ ಶ್ರೀ ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಸಂಪನ್ಮೂಲ ಶಿಕ್ಷಕ ಚನ್ನವೀರ ಜಮಾದಾರ ಅನಿಸಿಕೆ ವ್ಯಕ್ತಪಡಿಸಿದರು. ಬಿಡಿವಿಸಿ ಸದಸ್ಯ ಸೋಮಶೇಖರ್ ವಸ್ತದ, ಶಿಕ್ಷಕ ಮಲ್ಲಿಕಾರ್ಜುನ ಅಲಗುಡೆ ಮಾತನಾಡಿದರು, ಕಸಾಪ ತಾಲೂಕ ಅಧ್ಯಕ್ಷ ಪ್ರೊ. ಶಾಂತಲಿಂಗ ಮಠಪತಿ ಉಪಸ್ಥಿತರಿದ್ದರು. ಕಸಾಪ ವತಿಯಿಂದ ಪೂಜ್ಯಶ್ರೀ ಡಾ. ಅಭಿನವ ಫನಲಿಂಗ ಗುರುಗಳನ್ನು ಅಭಿನಂದಿಸಿದರು. ಪ್ರಾಚಾರ್ಯ ಎ.ಜಿ. ಪಾಟೀಲ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ಲಕ್ಷ್ಮಣ ಸಿಂಗಾರೆ, ರಾಮಚಂದ್ರ ಹುಡುಗೆ, ಮಲ್ಲಿಕಾರ್ಜುನ ಅಲಶೆಟ್ಟಿ, ಪಂಚಾಕ್ಷರಿ ಹಿರೇಮಠ, ರೇವಣಸಿದ್ಧಯ್ಯ ಮಠಪತಿ, ಬರಹಗಾರ ವೀರಶೆಟ್ಟಿ ಪಾಟೀಲ, ಡಾ. ವಿ.ಎಸ್. ರಾಜೋಳೆ, ಪ್ರೊ. ಸಂತೋಷ ಮಹಾಜನ್, ರಾಕೇಶ ಪುರವಂತ, ರವಿ ಬಿರಾದಾರ, ಗೋವಿಂದರೆಡ್ಡಿ ಕೊತಾಪಲ್ಲೆ, ಸರೋಜನಿ ಹಿರೇಮಠ, ರೇಖಾ ಚಿಟ್ಟೆ, ಮಹಾನಂದಾ ಪುರವಂತ, ಜ್ಯೋತಿ ಪುರವಂತ ಸೇರಿ ಪ್ರಮುಖರು ಗುರುಗಳ ದರ್ಶನ ಆಶೀರ್ವಾದ ಪಡೆದು ಪ್ರಸಾದ ಸ್ವೀಕರಿಸಿದರು.

ಸಂಯುಕ್ತ ಕರ್ನಾಟಕ
ಮಂಗಳವಾರ 17 ಡಿಸೆಂಬರ್ 2024
ಕಲಬುರಗಿ.KALABURAGI

ಸಾಮಾಜಿಕ ಕಾರ್ಯಕ್ಕೆ ಭಕ್ತರೆ ಪ್ರೇರಣೆ: ಶ್ರೀ

• ದಿ ಡೈಲಿ ನ್ಯೂಸ್ ಬಸವಕಲ್ಯಾಣ

ವ್ಯಸನಮುಕ್ತ ಸಮಾಜ ಸಂಕಲ್ಪತೊಟ್ಟು ಪ್ರತಿವರ್ಷ ಒಂದೊಂದು ಸಾಮಾಜಿಕ ಸಂದೇಶದೊಂದಿಗೆ ನಗರದ ಮುಖ್ಯ ರಸ್ತೆಯಲ್ಲಿ ಪಾದಯಾತ್ರೆ ಕೈಕೊಳ್ಳುವ ಮೂಲಕ ಸಮಾಜ ಸುಧಾರಣೆಯ ಕಾರ್ಯಗಳನ್ನು ಕೈಕೊಳ್ಳುತ್ತಿದ್ದೇವೆ. ಇದಕ್ಕೆಲ್ಲ ನಮ್ಮ ಭಕ್ತರೇ ಪ್ರೇರಣೆ ಎಂದು ಡಾ. ಅಭಿನವ ಫನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ವ್ಯಸನಮುಕ್ತ ಸಮಾಜ ಸುಧಾರಣಾ ಕಾರ್ಯ ಗುರುತಿಸಿ ಬಳ್ಳಾರಿಯ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ವೇದಿಕೆಯು ಕರ್ನಾಟಕ ಸಾಧಕ ರತ್ನ ಪ್ರಶಸ್ತಿ ಪ್ರದಾನ ಮಾಡಿದ ಹಿನ್ನೆಲೆಯಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಸದ್ಭಕ್ತರು ಸೇರಿ ಸಂಸ್ಥಾನ ಗವಿಮಠದಲ್ಲಿ ಏರ್ಪಡಿಸಿದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಶ್ರೀಗಳು ಮಾತನಾಡಿದರು.

ಶಿಕ್ಷಕ ಮಲ್ಲಿಕಾರ್ಜುನ ಅಲಗುಡೆ ಮಾತನಾಡಿ, ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬುದಕ್ಕೆ ನಮ್ಮ ಪೂಜ್ಯರೇ ಸಾಕ್ಷಿ. ಅವರು ಚಿಕ್ಕವರಾದರೂ ಅವರಲ್ಲಿ ಅಗಾಧವಾದ ದೈವ ಶಕ್ತಿ ಇದೆ ಎಂದರು. ಸಂಪನ್ಮೂಲ ಶಿಕ್ಷಕ ಚನ್ನವೀರ ಜಮಾದಾರ, ಬಸವೇಶ್ವರ ದೇವಸ್ಥಾನ ನಿರ್ದೇಶಕರಾದ ಸೋಮಶೇಖರ್ ವಸ್ತದ , ಕಸಾಪ ತಾಲೂಕ ಅಧ್ಯಕ್ಷ ಶಾಂತಲಿಂಗ ಮಠಪತಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಅವರು ಟ್ರಸ್ಟ್ ವತಿಯಿಂದ ಪೂಜ್ಯರನು ಅಭಿನಂದಿಸಿದರು.



ಪ್ರಾಚಾರ್ಯ ಎ. ಜಿ. ಪಾಟೀಲ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ಲಕ್ಷ್ಮಣ ಸಿಂಗಾರೆ, ರಾಮಚಂದ್ರ ಹುಡುಗೆ, ಮಲ್ಲಿಕಾರ್ಜುನ ಅಲಶೆಟ್ಟಿ, ಪಂಚಾಕ್ಷರಿ ಹಿರೇಮಠ, ರೇವಣಸಿದ್ಧಯ್ಯ ಮಠಪತಿ, ಬರಹಗಾರ ವೀರಶೆಟ್ಟಿ ಪಾಟೀಲ, ಡಾ. ವಿ. ಎಸ್. ರಾಜೋಳೆ, ಪ್ರೊ. ಸಂತೋಷ ಮಹಾಜನ್, ರಾಕೇಶ ಪುರವಂತ, ರವಿ ಬಿರಾದಾರ, ಗೋವಿಂದರೆಡ್ಡಿ ಕೊತಾಪಲ್ಲೆ, ಸರೋಜನಿ ಹಿರೇಮಠ, ರೇಖಾ ಚಿಟ್ಟೆ, ಮಹಾನಂದಾ ಪುರವಂತ, ಜ್ಯೋತಿ ಪುರವಂತ ಇತರರಿದ್ದರು.

ವಿಜಯ ಸಾಕ್ಷಿ
ಡೈಲಿ ನ್ಯೂಸ್
ಮಂಗಳವಾರ 17 ಡಿಸೆಂಬರ್ 2024

Scanned with OKEN Scanner

ಬಸವಕಲ್ಯಾಣದಲ್ಲಿ 34ನೇ ದಸರಾ ದರ್ಬಾರ್

ಹಾರಕೂಡ ಶ್ರೀಮಠದಲ್ಲಿ ಪೂರ್ವಭಾವಿ ಸಭೆ ■ ಕಾರ್ಯಕ್ರಮ ಯಶಸ್ವಿಗೊಳಿಸಲು ರಂಭಾಪುರಿ ಶ್ರೀ ಸಲಹೆ

■ ಉದಯವಾಣಿ ಸಮಾಚಾರ

ಬಸವಕಲ್ಯಾಣ: ಬಸವಕಲ್ಯಾಣದಲ್ಲಿ 2025ಕ್ಕೆ ಒಂಭತ್ತು ದಿನಗಳ ಕಾಲ ಜರುಗಲಿರುವ ದಸರಾ ದರ್ಬಾರ್ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸುವ ಮೂಲಕ ಯಶಸ್ವಿಗೊಳಿಸಬೇಕು ಎಂದು ರಂಭಾಪುರಿ ಜಗದ್ಗುರು ಡಾ। ಪ್ರಸನ್ನ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ತಾಲೂಕಿನ ಹಾರಕೂಡ ಶ್ರೀಮಠದಲ್ಲಿ 2025ರಲ್ಲಿ ಬಸವಕಲ್ಯಾಣದಲ್ಲಿ ಜರುಗಲಿರುವ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ ನಿಮಿತ್ತ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆ ಉದ್ಘಾಟಿಸಿ ಮಾತನಾಡಿದರು.

ಹನ್ನೆರಡನೇ ಶತಮಾನದಲ್ಲಿನ ಶರಣರ ಕಾಯಕ ಭೂಮಿ, ಆಧ್ಯಾತ್ಮಿಕ ಕ್ಷೇತ್ರ, ವಚನ ಸಾಹಿತ್ಯದ ಮೂಲಕ ಆದರ್ಶ ಮೌಲ್ಯಗಳನ್ನು ಬಿತ್ತಿದ ಪವಿತ್ರ ಭೂಮಿಯಲ್ಲಿ 34ನೇ ದಸರಾ ದರ್ಬಾರ್ ಜರುಗಲಿದೆ. ಇದು ಬಹಳ ಮಹತ್ವ ಪಡೆದಿದ್ದು ಎಲ್ಲರೂ ಸೇರಿ ಇದನ್ನು ಯಶಸ್ವಿಗೊಳಿಸಬೇಕು ಎಂದು ಸಲಹೆ ನೀಡಿದರು.

ಸ್ವಾಗತ ಸಮಿತಿ ರಚನೆ: ಇದೇ ವೇಳೆ ಕಲ್ಯಾಣದಲ್ಲಿ ಜರುಗಲಿರುವ 34ನೇ ದಸರಾ ದರ್ಬಾರ್ ನಿಮಿತ್ತ ಸ್ವಾಗತ ಸಮಿತಿ ರಚಿಸಲಾಯಿತು. ಹಾರಕೂಡ ಡಾ। ಚೆನ್ನವೀರ ಶಿವಾಚಾರ್ಯರು ಗೌರವಾಧ್ಯಕ್ಷರಾಗಿ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅಧ್ಯಕ್ಷರಾಗಿ, ಶಾಸಕ ಶರಣು ಸಲಗರ ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡುವರು ಎಂದು ವೇದಿಕೆಯ ಮೂಲಕ ಘೋಷಣೆ ಮಾಡಿದರು. ನಂತರದ ದಿನಗಳಲ್ಲಿ ಹಾರಕೂಡ ಶ್ರೀಗಳು ಮತ್ತು ಶಾಸಕರು ಸೇರಿಕೊಂಡು ಸಮಿತಿ ಮತ್ತು ಉಪ ಸಮಿತಿ ಪದಾಧಿಕಾರಿಗಳ ನೇಮಕ ಮಾಡಲಿದ್ದಾರೆ ಎಂದು ರಂಭಾಪುರಿ ಶ್ರೀಗಳು ತಿಳಿಸಿದರು.



ಬಸವಕಲ್ಯಾಣ: ಹಾರಕೂಡ ಶ್ರೀಮಠದಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯನ್ನು ರಂಭಾಪುರಿ ಜಗದ್ಗುರು ಡಾ। ಪ್ರಸನ್ನ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು.

> ಧರ್ಮದ ಏಳ್ಗೆಹಾಗೂ ರಕ್ಷಣೆಗಾಗಿ ಮಾನವ ಕುಲಕ್ಕೆ ಜಯ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ವಾಕ್ಯದೊಂದಿಗೆ ನಾಡಿನಾದ್ಯಂತ ಕೆಲಸ ಮಾಡುತ್ತಿರುವ ರಂಭಾಪುರಿ ಜಗದ್ಗುರುಗಳ 34ನೇ ದಸರಾ ದರ್ಬಾರ್ ಕಾರ್ಯಕ್ರಮ ಬಸವಕಲ್ಯಾಣದಲ್ಲಿ ಒಂಭತ್ತು ದಿನಗಳ ಕಾಲ ಆಚರಿಸಲಾಗುತ್ತಿದೆ. ಎಲ್ಲರೂ ಸೇರಿ ಕಾರ್ಯಕ್ರಮ ಯಶಸ್ವಿಗೊಳಿಸೋಣ.
> ● **ಶರಣು ಸಲಗರ,** ಶಾಸಕ

> ರಂಭಾಪುರಿ ಜಗದ್ಗುರುಗಳು ಬಸವಕಲ್ಯಾಣದಲ್ಲಿ 34ನೇ ದಸರಾ ದರ್ಬಾರ್ ಕಾರ್ಯಕ್ರಮ ನಡೆಸಲು ಒಪ್ಪಿಗೆ ನೀಡಿದ್ದು ನಮ್ಮ ಪೂರ್ವ ಜನ್ಮದ ಪುಣ್ಯ. ಗುರುವಿನ ಪಥದಲ್ಲಿ ಮುಂದೆ ಜೀವನ ಸಾಗಿಸುವ ಭಕ್ತನಿಗೆ ಶಿವನ ಕೃಪೆ ಸದಾಕಾಲ ಆಗಲಿದೆ. ಒಂಭತ್ತು ದಿನಗಳ ಕಾಲ ಜರುಗುವ ದಸರಾ ದರ್ಬಾರ್ ಕಾರ್ಯಕ್ರಮದಲ್ಲಿ ಹಾರಕೂಡ ಶ್ರೀಮಠದಿಂದ ಐದು ದಿನಗಳ ಕಾಲ ದಾಸೋಹ ವ್ಯವಸ್ಥೆ ಕಲ್ಪಿಸಲಾಗುವುದು.
> ● **ಡಾ। ಚೆನ್ನವೀರ ಶಿವಾಚಾರ್ಯರು,** ಹಾರಕೂಡ

ಒಟ್ಟು 51 ಲಕ್ಷ ರೂ. ದೇಣಿಗೆ ನೀಡಲು ಒಪ್ಪಿಗೆ: ಶ್ರೀ

ಬಸವಕಲ್ಯಾಣದಲ್ಲಿ ಜರುಗಲಿರುವ ದಸರಾ ದರ್ಬಾರ್ ಕಾರ್ಯಕ್ರಮಕ್ಕೆ ಶಾಸಕ ಶರಣು ಸಲಗರ 11 ಲಕ್ಷ ರೂ., ಕಾಂಗ್ರೆಸ್ ಮುಖಂಡ ಧನರಾಜ ತಾಳಂಪಳ್ಳಿ 5 ಲಕ್ಷ ರೂ., ಹಾರಕೂಡ ಗ್ರಾಮಸ್ಥರಿಂದ 2 ಲಕ್ಷ ರೂ., ಹಾರಕೂಡ ಮಠದ ಪೂರ್ವಾಶ್ರಮದ ಸಹೋದರರಿಂದ 1 ಲಕ್ಷ ರೂ. ಸೇರಿದಂತೆ ಒಟ್ಟು 51 ಲಕ್ಷ ರೂ. ದೇಣಿಗೆ ನೀಡಲು ಒಪ್ಪಿಗೆ ಸೂಚಿಸಿದ್ದಾರೆ ಎಂದು ಹಾರಕೂಡ ಡಾ। ಚೆನ್ನವೀರ ಶಿವಾಚಾರ್ಯರು ವೇದಿಕೆ ಮೂಲಕ ಘೋಷಣೆ ಮಾಡಿದರು. ಮುಂದಿನ ದಿನಗಳಲ್ಲಿ ನಡೆಯುವ ಸಭೆಗಳಲ್ಲಿ ಭಕ್ತರು ಕಾರ್ಯಕ್ರಮಕ್ಕೆ ಜೆಚ್ಚಿನ ತನು, ಮನ, ಧನದಿಂದ ಸಹಕಾರ ನೀಡಲಿದ್ದಾರೆ ಎಂದು ತಿಳಿಸಿದರು.

ಹಿರನಾಗಾಂವ ಪೂಜ್ಯ ಜಯಶಾಂತಲಿಂಗ ಸ್ವಾಮೀಜಿ, ತ್ರಿಪುರಾಂತನ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು.

ಈ ವೇಳೆ ಶರಣಪ್ಪ ಬಿರಾದಾರ, ಬಿಡಿಪಿಸಿ ಅಧ್ಯಕ್ಷ ಬಸವರಾಜ ಕೋರಕೆ, ರಾಜಕುಮಾರ ಸಿರಗಾಪುರ, ಸುನೀಲ ಪಾಟೀಲ, ಮಲ್ಲಯ್ಯ ಹಿರೇಮಠ, ಸಿದ್ರಾಮಪ್ಪ ಗುದಗೆ, ಚಂದ್ರಶೇಖರ ಪಾಟೀಲ, ಮಲ್ಲಿನಾಥ ಹಿರೇಮಠ ಹಾರಕೂಡ, ಚಂದ್ರಶೇಖರ ಪಾಟೀಲ, ಸೋಮಶೇಖರ ಮಸ್ಕಲ, ಶ್ರೀಕಾಂತ ಬಡದಾಳೆ, ಮೇಘರಾಜ ನಾಗರಾಳೆ, ವೀರಣ್ಣ ಶೀಲವಂತ, ಎಂ.ಕೆ. ನಂದಿ, ಎ.ಜೆ. ಪಾಟೀಲ, ಸುಭಾಷ ಇತರರಿದ್ದರು. ಶಿಕ್ಷಕ ರಮೇಶ ರಾಜೋಳೆ ನಿರೂಪಿಸಿದರು.

ಉದಯವಾಣಿ ಕಲಬುರಗಿ
ಬುಧವಾರ, ನವೆಂಬರ್ 20, 2024

Scanned with OKEN Scanner

ಸಾಧಕ ರತ್ನ ಪ್ರಶಸ್ತಿ ಭಕ್ತ ಸಮೂಹಕ್ಕೆ ಅರ್ಪಣೆ: ಶ್ರೀ

■ ಉದಯವಾಣಿ ಸಮಾಚಾರ

ಬಸವಕಲ್ಯಾಣ: ನಮ್ಮ ವ್ಯಸನ ಮುಕ್ತ ಸಮಾಜ ಸುಧಾರಣಾ ಕಾರ್ಯಗಳನ್ನು ಗುರುತಿಸಿ ಬಳ್ಳಾರಿಯ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ವೇದಿಕೆಯು ಕರ್ನಾಟಕ ಸಾಧಕ ರತ್ನ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದ್ದು ಕೇವಲ ನನಗಲ್ಲ ನಮ್ಮ ಭಕ್ತ ಸಮೂಹಕ್ಕೆ ಸಂದ ಗೌರವ ಹೀಗಾಗಿ ಈ ಪ್ರಶಸ್ತಿಯನ್ನು ನಾನು ನಮ್ಮ ಇಡೀ ಭಕ್ತ ಸಮೂಹಕ್ಕೆ ಅರ್ಪಿಸುತ್ತೇನೆ ಎಂದು ಇಲ್ಲಿಯ ಗವಿಮಠದ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿಯ ಗವಿಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಸಮಸ್ತ ಸದ್ಭಕ್ತರು ಸೇರಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಶ್ರೀಗಳು ಮಾತನಾಡಿದರು.

ನಮ್ಮ ಜನ್ಮ ದೀನೋತ್ಸವ ಅಂಗವಾಗಿ ವ್ಯಸನ ಮುಕ್ತ ಸಮಾಜ ಸಂಕಲ್ಪತೊಟ್ಟು ಮರಗಳನ್ನು ಬೆಳಸಿ ಪರಿಸರವನ್ನು ಉಳಿಸಿ, ದುಶ್ಚಟ ಜೋಳಿಗೆ, ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ, ಪ್ಲಾಸ್ಟಿಕ್ ಮುಕ್ತ ಜೀವನ... ಹೀಗೆ ಒಂದೊಂದು ಸಾಮಾಜಿಕ ಸಂದೇಶದೊಂದಿಗೆ ನಗರದ ಮುಖ್ಯ ರಸ್ತೆಯಲ್ಲಿ ಪಾದಯಾತ್ರೆ ಕೈಗೊಳ್ಳುವ ಮೂಲಕ ಸಮಾಜ ಸುಧಾರಣೆಯ ಕಾರ್ಯಗಳನ್ನು ಕೈಗೊಳ್ಳುತ್ತಿದ್ದೇವೆ. ಇವುಗಳಿಗೆಲ್ಲ ನಮ್ಮ ಭಕ್ತರೇ ಪ್ರೇರಣೆ. ನಿಮ್ಮಂತಹ ಭಕ್ತರನ್ನು ಪಡೆದ ನಾನು ಧನ್ಯ. ನಿಮ್ಮ ಮೇಲೆ ಸದಾ ಭಗವಂತನ ಕೃಪೆ ಇರಲಿ ಎಂದು ಹಾರೈಸಿದರು.

ಶಿಕ್ಷಕ ಮಲ್ಲಿಕಾರ್ಜುನ ಅಲಗುಡೆ ಮಾತನಾಡಿ, ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬುದಕ್ಕೆ ನಮ್ಮ ಡಾ। ಅಭಿನವ ಗುರುಗಳು ಚಿಕ್ಕವರಾದರೂ, ಅವರಲ್ಲಿ ಅಗಾಧವಾದ ದೈವೀ ಶಕ್ತಿ ಇದೆ. ಇಂತಹ ಪೂಜ್ಯರನ್ನು ಪಡೆದ ನಾವೆಲ್ಲ ಭಾಗ್ಯವಂತರು ಎಂದರು.



ಬಸವಕಲ್ಯಾಣ: ಗವಿಮಠದಲ್ಲಿ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಶ್ರೀಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

> ಪೂಜ್ಯ ಡಾ। ಅಭಿನವ ಗುರುಗಳ ಸರಳ, ಸಜ್ಜನಿಕೆಯುಳ್ಳ ಸಾಕಾರ ಮೂರ್ತಿ. ಯಾರೆ ಕರೆದರೂ ಬರುವ ಸಾಮಾನ್ಯ ಗುರುಗಳು. ಸಮಾನತೆಯ ಪರಿಪಾಲಕರು. ಇಂತಹ ಕರ್ನಾಟಕ ಸಾಧಕ ರತ್ನ ಪ್ರಶಸ್ತಿಯು ನಿಜವಾಗಿಯೂ ಪೂಜ್ಯ ಡಾ। ಅಭಿನವ ಗುರುಗಳ ಸಾಧನೆಗೆ ಸಂದ ಗೌರವ.
> ● ಚನ್ನವೀರ ಎಸ್. ಜಮಾದಾರ, ಶಿಕ್ಷಕ

ಶಿಕ್ಷಕ ಚನ್ನವೀರ ಎಸ್.ಜಮಾದಾರ ಮಾತನಾಡಿದರು. ವೇದಿಕೆಯಲ್ಲಿ ಬಸವೇಶ್ವರ ದೇವಸ್ಥಾನದ ನಿರ್ದೇಶಕ ಸೋಮಶೇಖರ ವಸ್ತ್ರದ, ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ, ಗವಿಮಠ ಟ್ರಸ್ಟ್‌ನ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ ಇದ್ದರು.

ಶರಣಬಸಪ್ಪ ಅಲಗುಡೆ ಪ್ರಾರ್ಥಿಸಿದರು. ಪ್ರೊ। ರುದ್ರೇಶ್ವರ ಗೋರ್ಟಾ ಭಕ್ತಿ ಗೀತೆ ಹಾಡಿದರು. ಮುಖ್ಯಶಿಕ್ಷಕ ರಮೇಶ ರಾಜೋಳೆ ನಿರೂಪಿಸಿದರು. ವಿವಿಧೆಡೆಯಿಂದ ಆಗಮಿಸಿದ ಶ್ರೀಮಠದ ಭಕ್ತರು ಪಾಲ್ಗೊಂಡಿದ್ದರು.

ಉದಯವಾಣಿ ಕಲಬುರಗಿ
ಶುಕ್ರವಾರ, ಡಿಸೆಂಬರ್ 20, 2024

ಸಾಮಾಜಿಕ ಕಾರ್ಯಕ್ಕೆ ಭಕ್ತರೆ ಪ್ರೇರಣೆ

ಬಸವಕಲ್ಯಾಣ: ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ವ್ಯಸನ ಮುಕ್ತ ಸಮಾಜ ಸುಧಾರಣಾ ಕಾರ್ಯ ಗುರುತಿಸಿ ಬಳ್ಳಾರಿಯ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ವೇದಿಕೆಯು ಕರ್ನಾಟಕ ಸಾಧಕ ರತ್ನ ಪ್ರಶಸ್ತಿ ಪ್ರದಾನಮಾಡಿ ಗೌರವಿಸಿದ್ದ ಪ್ರಯುಕ್ತ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಸಮಸ್ತ ಸದ್ಭಕ್ತರು ಸೇರಿ ಸಂಸ್ಥಾನ ಗವಿಮಠದಲ್ಲಿ ಏರ್ಪಡಿಸಿದ ಅಭಿನಂದನಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಪೂಜ್ಯ ಶ್ರೀಗಳು ಮಾತನಾಡಿದರು.

ವ್ಯಸನ ಮುಕ್ತ ಸಮಾಜ ಸಂಕಲ್ಪತೊಟ್ಟು ನಮ್ಮ ಜನ್ಮ ದೀನೋತ್ಸವ ಅಂಗವಾಗಿ ಮರಗಳನ್ನು ಬೆಳಸಿ ಪರಿಸರವನ್ನು ಉಳಿಸಿ, ದುಶ್ಚಟ ಜೋಳಿಗೆ, ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ, ಪ್ಲಾಸ್ಟಿಕ್ ಮುಕ್ತ ಜೀವನ ಹೀಗೆ ಪ್ರತಿವರ್ಷ ಒಂದೊಂದು ಸಾಮಾಜಿಕ ಸಂದೇಶದೊಂದಿಗೆ ನಗರದ ಮುಖ್ಯ ರಸ್ತೆಯಲ್ಲಿ ಪಾದಯಾತ್ರೆ ಕೈಕೊಳ್ಳುವುದರ ಮೂಲಕ ಸಮಾಜ ಸುಧಾರಣೆಯ ಕಾರ್ಯಗಳನ್ನು ಕೈಕೊಳ್ಳುತ್ತಿದ್ದೇವೆ. ಇವುಗಳಿಗೆಲ್ಲ ನಮ್ಮ ಭಕ್ತರೇ ಪ್ರೇರಣೆ. ಹೀಗಾಗಿ ಮಮಭಕ್ತೋ ಮಮ ಅಧಿಕ ಎನ್ನುವಹಾಗೆ ನಿಮ್ಮಂಥ ಭಕ್ತರನ್ನು ಪಡೆದ ನಾನು ಧನ್ಯ. ನಿಮ್ಮ ಮೇಲೆ ಸದಾ ಭಗವಂತನ ಕೃಪೆ ಇರಲಿ ಎಂದು ಸಾರ್ಥಕ ಭಾವ ವ್ಯಕ್ತಪಡಿಸಿದರು.

ಶಿಕ್ಷಕ ಮಲ್ಲಿಕಾರ್ಜುನ ಅಲಗುಡೆ ಮಾತನಾಡುತ್ತ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬುದಕ್ಕೆ ಸಾಕ್ಷಿಯೇ ನಮ್ಮ ಪೂಜ್ಯ ಡಾ. ಅಭಿನವ ಗುರುಗಳು ಅವರು ಚಿಕ್ಕವರಾದರೂ ಅವರಲ್ಲಿ ಅಗಾಧವಾದ ದೈವ ಶಕ್ತಿ ಇದೆ. ಇಂಥಾ ಪೂಜ್ಯರನ್ನು ಪಡೆದ ನಾವೆಲ್ಲ ಭಕ್ತರು ಭಾಗ್ಯವಂತರು ಎಂದು ಅಭಿನಂದನಾ ನುಡಿಗಳನ್ನಾಡಿದರು. ಸಂಪನ್ಮೂಲ ಶಿಕ್ಷಕ ಚನ್ನವೀರ ಜಮಾದಾರ, ಮುಖ್ಯ ಅತಿಥಿಯಾಗಿದ್ದ ಬಸವೇಶ್ವರ ದೇವಸ್ಥಾನ ನಿರ್ದೇಶಕರಾದ ಸೋಮಶೇಖರ್ ವಸ್ತ್ರದ ಕಸಾಪ ತಾಲೂಕು ಅಧ್ಯಕ್ಷ ಶಾಂತಲಿಂಗ ಮಠಪತಿ ವೇದಿಕೆ ಮೇಲೆ ಉಪಸ್ಥಿತರಿದ್ದು,



ಸಾಂಸ್ಕೃತಿಕ ವೇದಿಕೆಯು ಕರ್ನಾಟಕ ಸಾಧಕ ರತ್ನ ಪ್ರಶಸ್ತಿ ಪ್ರದಾನಮಾಡಿ ಗೌರವಿಸಿದ್ದ ಪ್ರಯುಕ್ತ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಸಮಸ್ತ ಸದ್ಭಕ್ತರು ಸೇರಿ ಸಂಸ್ಥಾನ ಗವಿಮಠದಲ್ಲಿ ಪೂಜ್ಯ ಶ್ರೀಗಳನ್ನು ಅಭಿನಂದಿಸಲಾಯಿತು.

ಪ್ರಾಚಾರ್ಯ ಎ. ಜಿ. ಪಾಟೀಲ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ಲಕ್ಷ್ಮಣ ಸಿಂಗಾರೆ, ರಾಮಚಂದ್ರ ಹುಡುಗೆ, ಮಲ್ಲಿಕಾರ್ಜುನ ಅಲಶೆಟ್ಟಿ, ಪಂಚಾಕ್ಷರಿ ಹಿರೇಮಠ, ರೇವಣಸಿದ್ಧಯ್ಯ ಮಠಪತಿ, ಬರಹಗಾರ ವೀರಶೆಟ್ಟಿ ಪಾಟೀಲ, ಡಾ. ವಿ. ಎಸ್. ರಾಜೋಳೆ, ಪ್ರೊ. ಸಂತೋಷ ಮಹಾಜನ್, ರಾಕೇಶ ಪುರವಂತ, ರವಿ ಬಿರಾದಾರ, ಗೋವಿಂದರೆಡ್ಡಿ ಕೊತಾಪಲ್ಲೆ, ಸರೋಜನಿ ಹಿರೇಮಠ, ರೇಖಾ ಚಿಟ್ಟೆ, ಮಹಾನಂದಾ ಪುರವಂತ, ಜ್ಯೋತಿ ಪುರವಂತ ಮೊದಲಾದವರು ಪಾಲ್ಗೊಂಡು ಗುರುಗಳ ದರ್ಶನ ಆಶೀರ್ವಾದ ಪಡೆದು ಪ್ರಸಾದ ಸ್ವೀಕರಿಸಿದರು.

ವಿಶ್ವವಾಣಿ
ಕಲಬುರಗಿ
17.12.2024 ಮಂಗಳವಾರ
vishwavani.news

Scanned with OKEN Scanner

ಹಾರಕೂಡ ಶ್ರೀ ಮಠದಲ್ಲಿ ಬಸವಕಲ್ಯಾಣದ ದಸರಾ ದರ್ಬಾರ್ ನಿಮಿತ್ತವಾಗಿ ಪೂರ್ವಭಾವಿ ಸಭೆ

ಮಲ್ಲಮ್ಮ ನುಡಿ ವಾರ್ತೆ

(ವರದಿ. ಡಿ. ಕೆ. ಪ್ರಹ್ಲಾದ.)





ಬಸವಕಲ್ಯಾಣ :ಒಂಬತ್ತು ದಿನಗಳ ಕಾಲ ಜರುಗಲಿರುವ ಶರಣನವರಾತ್ರಿದಸರಾ ಧರ್ಮ ಸಮ್ಮೇಳನ ಕಾರ್ಯಕ್ರಮವು ಅಚ್ಚುಕಟ್ಟಾಗಿ ಆಯೋಜಿಸುವ ಮೂಲಕ ಯಶಸ್ವಿಗೊಳಿಸಬೇಕು ಎಂದುರಂಭಾಪುರಿಜಗದ್ಗುರುಗಳಾದ ಡಾ. ವೀರಸೋಮೇಶ್ವರ ರಾಜ ದೇಸಿಕೇಂದ್ರ ಶಿವಾಚಾರ್ಯರ ಭಗವತಾದ್ದರು ಹೇಳಿದರು. ತಾಲೂಕಿನಹಾರಕೂಡಶ್ರೀಮಠದಲ್ಲಿ 2025.ರಲ್ಲಿ ಬಸವಕಲ್ಯಾಣದಲ್ಲಿ ಜರುಗಲಿರುವಶರನ್ನವರಾತ್ರಿದಸರಾ ಧರ್ಮ ಸಮ್ಮೇಳನ ನಿಮಿತ್ತವಾಗಿ ಜರುಗಿದಪೂರ್ವಭಾವಿಸಭೆಯನ್ನು ಉದ್ಘಾಟಿಸಿ ಮಾತನಾಡಿ 12 ನೇಯ ಶತಮಾನದಲ್ಲಿ ಶರಣರ ಕಾಯಕಭೂಮಿ ಆಧ್ಯಾತ್ಮಿಕಕ್ಷೇತ್ರ ವಚನ ಸಾಹಿತ್ಯದ ಮೂಲಕ ಆದಶ್ ಮೌಲ್ಯಗಳು ಬಿತ್ತಿದ ಪವಿತ್ರ ಭೂಮಿಯಲ್ಲಿ 34 ನೇ ದಸರ ದರ್ಬಾರ ಜರುಗಲಿದೆ. ಎಲ್ಲರೂ ಸೇರಿಕೆಲಸ ಮಾಡುವ ಮೂಲಕ ಈ ಕಾರ್ಯಕ್ರಮ ಯಶಸ್ವಿಯಾಗಬೇಕು ಎಂದರು. ಇಲ್ಲಿ ಜರುಗಲಿರುವ 34 ನೇಯ ದಸರಾ ದರ್ಬಾರ್ ಕಾರ್ಯಕ್ರಮ ಯಶಸ್ವಿಯಾಗಿ ಸ್ವಾಗತ ಸಮಿತಿ ರಚಿಸಲಾಗಿದ್ದುಗೌರವಾಧ್ಯಕ್ಷರಾಗಿ ಹಾರಕೂಡದ ಪೂಜ್ಯ ಶ್ರೀ ಡಾ. ಚೆನ್ನವೀರ ಶಿವಾಚಾರ್ಯರು. ಹಾಗೂ ಅಧ್ಯಕ್ಷರಾಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಮತ್ತು ಕಾರ್ಯಧ್ಯಕ್ಷರಾಗಿ ಶಾಸಕರಾದ ಶರಣು ಸಲಗರ್. ಆಯ್ಕೆ ಮಾಡಲಾಗಿದೆ ಎಂದು ಘೋಷಣೆ ಮಾಡಿದರು. ಹಿರನಾಗಾಂವ ಪೂಜ್ಯ ಶ್ರೀ. ಜಯಶಾಂತಲಿಂಗಮಹಾಸ್ವಾಮಿಜಿ ಮಾತನಾಡಿ ಭಕ್ತರು ನೀಡಿದ ದೇಣಿಗೆಯಲಿಬಸವಕಲ್ಯಾಣದಲ್ಲಿ ನಡೆಯಲಿರುವ 34 ನೇಯ ದಸರಾ ದರ್ಬಾರ ಕಾರ್ಯಕ್ರಮಕ್ಕೆ ವ್ಯಕ್ತಿಯಾಗಿ 2.51 ಲಕ್ಷರೂಪಾಯಿ ನೀಡಲಾಗುವುದು ಎಂದರು. ತಿಪುರಾಂತಿನ ಪೂಜ್ಯ ಶ್ರೀ ಡಾ ಅಭಿನವಘನಲಿಂಗರುದ್ರಮುನಿ ಶಿವಾಚಾರ್ಯರು. ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ಮಾತನಾಡಿ ರಂಭಾಪುರಿ ಜಗದ್ಗುರುಗಳ ಬಸವಕಲ್ಯಾಣದಲ್ಲಿ 34 ನೇಯ ದಸರಾ ದರ್ಬಾರ ಕಾರ್ಯಕ್ರಮ ನಡೆಸಲು ಒಪ್ಪಿಗೆ ನೀಡಿದ್ದುನಮ್ಮ ಪೂರ್ವಜನಮದ ಪುಣ್ಯವಾಗಿದೆ ಎಂದರು. ಗುರುವಿನ ಪಥದಲ್ಲಿ ಮುಂದೆ ಜೀವನ ಸಾಗಿಸುವ ಭಕ್ತನಿಗೆ ಶಿವನ ಕೃಪೆ ಸದಾಕಾಲ ಆಗಲಿದೆ 9 ದಿನಗಳ ಕಾಲ ಜರುಗುವ ಶರನ್ನವರಾತ್ರಿದಸರಾ ಧರ್ಮ ಸಮ್ಮೇಳನ ಕಾರ್ಯಕ್ರಮದಲ್ಲಿ ಹಾರಕೂಡ ಹಿರೇಮಠ ಸಂಸ್ಥಾನದಿಂದ 5 ದಿನಗಳ ಕಾಲ ದಾಸೋಹ ವ್ಯವಸ್ಥೆ ಕಲ್ಪಿಸಲಾಗುವುದುಎಂದುಹೇಳಿದರು. ಶಾಸಕರಾದ ಶರಣು ಸಲಗರ. ಮಾತನಾಡಿ ಬಸವಕಲ್ಯಾಣದಲ್ಲಿ 34 ನೇಯ ದಸರಾ ದರ್ಬಾರ ಕಾರ್ಯಕ್ರಮ 9 ದಿನಗಳ ಕಾಲ ಆಚರಿಸಲಾಗುತ್ತಿದ್ದುಎಲ್ಲರೂಸೇರಿ ಯಶಸ್ವಿಗೊಳಿಸೋಣ ಎಂದರು. ಈ ಸಂದರ್ಭದಲ್ಲಿ ಶರಣಪ್ಪ ಬಿರಾದಾರ.ಬಿಡಿಪಿಸಿ ಅಧ್ಯಕ್ಷರಾದ ಬಸವರಾಜ ಕೊರಕೆ.ರಾಜಕುಮಾರ ಸಿರಗಾಪುರ.ಸುನೀಲ ಪಾಟೀಲ. ಮಲ್ಲಯ್ಯಹಿರೇಮಠ.ಚಂದ್ರಶೇಖರ ಪಾಟೀಲ.ಮಲ್ಲಿನಾಥ ಹಿರೇಮಠ ಹಾರಕೂಡ. ಸೋಮಶೇಖರ ವಸ್ತದ. ಶ್ರೀ ಕಾಂತ ಬಡದಾಳೆ. ಮೇಘರಾಜ ನಾಗರಾಳೆ. ವೀರಣ್ಣ ಶೀಲವಂತ. ಎಮ್. ಕೆ. ನಂದಿ. ಎ. ಜಿ. ಪಾಟೀಲ್. ಸುಭಾಷ ಮುರುಡೆ. ಶಿಕ್ಷಕರಾದ ರಮೇಶ ರಾಜೋಳೆ.ಸೇರಿದಂತೆಅನೇಕರು ಉಪಸ್ಥಿತರಿದ್ದರು.

ಮಲ್ಲಮ್ಮ ನುಡಿ ಬುಧವಾರ 27-11-2024

ಅಭಿನವ ಶ್ರೀಗಳಿಗೆ ಕರ್ನಾಟಕ ಸಾಧಕ ರತ್ನ ಪ್ರಶಸ್ತಿ



(ವರದಿ. ಡಿ. ಕೆ. ಪ್ರಹ್ಲಾದ.)

ಬಸವಕಲ್ಯಾಣ – ಇತ್ತೀಚೆಗೆ ನಡೆದಬಳ್ಳಾರಿಯಲ್ಲಿ ಮಹಾದೇವ ಎಜುಕೇಷನ್,ಆರ್ಟ್ & ಕಲ್ಚರಲ್ ಟ್ರಸ್ಟ್(ರಿ) ಜೆ.ಟಿ. ಫೌಂಡೇಷನ್, ಎಸ್.ಆರ್.ಎಂಸೇವಾಸಂಸ್ಥೆ(ರಿ), ಅಖಿಲ ಕರ್ನಾಟಕ ಕನ್ನಡ ರಾಜ್ಯೋತ್ಸವ ಸಮಿತಿ, 99ನೆ ಕನ್ನಡರಾಜ್ಯೋತ್ಸವದ ಅಂಗವಾಗಿ ಕನ್ನಡ ಸಾಹಿತ್ಯಮತ್ತು ಸಂಸ್ಕೃತಿಕ ಸಮ್ಮೇಳನ ಡಾ.ಜೋಳದರಾಶಿ ದೊಡ್ಡನಗೌಡರರಂಗಮಂದಿರದಲ್ಲಿ ಜರುಗಿತು.ಇದೇವೇಳೆಬಸವಕಲ್ಯಾಣದ ತಿಪುರಾಂತಿನ ಗವಿಮಠದ ಪೂಜ್ಯ ಶ್ರೀಷ.ಬ್ರಡಾ.ಅಭಿನವಘನಲಿಂ ರುದ್ರಮುನಿ ಶಿವಾಚಾರ್ಯರರಿ ಸಮಾಜ ಸೇವೆಯನ್ನು ಪರಿಗಣಿ ಕರ್ನಾಟಕ ಸಾಧಕ ರತ್ನ ಪ್ರಶ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿಸೇರಿದಂತೆಅನೇಕರ ಉಪಸ್ಥಿತರಿದ್ದರು.

ಮಲ್ಲಮ್ಮ ನುಡಿ ಬುಧವಾರ 04-12-2024

Scanned with OKEN Scanner

ಸಂಯುಕ್ತ ಕರ್ನಾಟಕ
ಬುಧವಾರ, 18 ಡಿಸೆಂಬರ್, 2024
ಕಲಬುರಗಿ | KALABURAGI

ವಿದ್ಯಾರ್ಥಿಗಳಲ್ಲಿ ವ್ಯವಹಾರಿಕ ಜ್ಞಾನ ಬೆಳೆಸಿ: ತ್ರಿಪುರಾಂತ ಶ್ರೀ



ಬಸವಕಲ್ಯಾಣ ನಗರದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಡಿಯಲ್ಲಿ ನಡೆಯುವ ದೊಡ್ಡಪ್ಪ ಅಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಜರುಗಿದ ಪೌರತ್ವ ತರಬೇತಿ ಶಿಬಿರಕ್ಕೆ ತ್ರಿಪುರಾಂತ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಚಾಲನೆ ನೀಡಿದರು.

ಸಂ.ಕ.ಸಮಾಚಾರ ಬಸವಕಲ್ಯಾಣ : ನಗರದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಡಿಯಲ್ಲಿ ನಡೆಯುವ ದೊಡ್ಡಪ್ಪ ಅಪ್ಪ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪೌರತ್ವ ತರಬೇತಿ ಶಿಬಿರ ಜರುಗಿತು. ಶಿಬಿರಕ್ಕೆ ಚಾಲನೆ ನೀಡಿದ ತ್ರಿಪುರಾಂತ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಶಿಕ್ಷಕರು ಮಕ್ಕಳಿಗೆ ಕೇವಲ ಪುಸ್ತಕ ಜ್ಞಾನ ನೀಡಿದರೆ ಅಷ್ಟೆ ಸಾಲದು ವ್ಯವಹಾರಿಕ ಜ್ಞಾನ ಕೂಡಾ ಬೆಳೆಸಬೇಕು, ಅಂದಾಗ ವಿದ್ಯಾರ್ಥಿಗಳು ಸ್ವಾವಲಂಬಿ ಜೀವನ ನಡೆಸಲು ಸಾಧ್ಯವಾಗುತ್ತದೆ. ಇಂದಿನ ಆಧುನಿಕ ಯುಗದಲ್ಲಿ ಮಕ್ಕಳಿಗೆ ಸಮಯ ಪ್ರಜ್ಞೆಯ ಜೊತೆಗೆ ಸಂಸ್ಕಾರ ಕಲಿಸಲ್ಲಿ ಶಿಕ್ಷಕರು ಗಮನ ಹರಿಸಬೇಕು. ದೇಶದ ಪ್ರತಿಯೊಬ್ಬ ಪ್ರಜೆಯು ಸಂವಿಧಾನ ನೀಡಿದ ಪ್ರತಿಯೊಂದು ಕರ್ತವ್ಯವನ್ನು ತನ್ನ ದಿನನಿತ್ಯದ ಜೀವನದಲ್ಲಿ ಅಳವಡಿಕೊಳ್ಳಬೇಕೆಂದು ಎಂದು ಸಲಹೆ ನೀಡಿದರು.

ಬಿ.ಆರ್.ಸಿ ಶಾಲಿವಾನ ಬಿರಾದಾರ ಮಾತನಾಡಿ, ಪ್ರತಿಯೊಬ್ಬರು ಭಾರತದ ಪ್ರಜ್ಞಾವಂತ ಪ್ರಜೆಗಳಾಗಿ ಸ್ವಯಂ ಪ್ರೇರಿತವಾಗಿ ಸಾಮಾಜಿಕ ಮೌಲ್ಯಗಳನ್ನು ಮತ್ತು ಪರಿಸರ ಉಳಿಸುವಲ್ಲಿ ತಮ್ಮ ಜವಾಬ್ದಾರಿ ನಿರ್ವಹಿಸಬೇಕು ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ರಾಚಯ್ಯ ಮಠಪತಿ ಮಾತನಾಡಿ, ಪ್ರತಿಯೊಬ್ಬ ನಾಗರಿಕನು ಸಮಾಜದಲ್ಲಿನ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡು ತನ್ನ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಕೊಂಡು ಹೊಗಬೇಕು ಎಂದರು.

ವೇದಿಕೆ ಮೇಲೆ ಅತಿಥಿಯಾಗಿ ನೀಲೇಶಕುಮಾರ ಟೊಂಪೆ ಮತ್ತು ಶಿಬಿರದ ಸಹ ನಿರ್ದೇಶಕರಾದ ಶಿವಾನಂದ ಬಿರಾದಾರ ಉಪಸ್ಥಿತರಿದ್ದರು. ಶಿಬಿರದ ನಿರ್ದೇಶಕ ಬಸವರಾಜ ಸೇರಿ, ಪೌರತ್ವ ತರಬೇತಿ ಶಿಬಿರದ ಕುರಿತು ಪ್ರಾಸ್ತಾವಿಕವಾಗಿ ಮಾತಾನಾಡಿದರು. ಉಪನ್ಯಾಸಕರಾದ ಅರುಣಾದೇವಿ ಕಾಡಾದಿ, ಕವಿತಾ ಮಠಪತಿ, ಕೈಲಾಸ ಮಂಗಲಗಿ, ಸಂಜೀವಕುಮಾರ ಪೂಜಾರಿ, ರೂಪೇಶ ಭೋಸ್ಲೆ, ರಮೇಶ ಗರುಡಕರ್, ಬಸವರಾಜ ಕಾಸ್ಲೆ, ಮಿಥಿಲಾ ಬಿರಾದಾರ ಉಪಸ್ಥಿತರಿದ್ದರು. ಪ್ರಶಿಕ್ಷಣಾರ್ಥಿ ಪರುಶುರಾಮ ಸ್ವಾಗತಿಸಿದರೆ, ರೇಣುಕಾ ನಿರೂಪಿಸಿದರು, ಪೂಜಾ ವಂದಿಸಿದರು.

ಹೆಚ್ಚುತ್ತಿರುವ ದುರ್ಘಟನೆ ಮುಕ್ತಿಗೆ ಯಜ್ಞ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 23 ಡಿಸೆಂಬರ್ 2024
23 DECEMBER 2024

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಲೋಕ ಕಲ್ಯಾಣಕ್ಕಾಗಿ ಪ್ರಾರ್ಥಿಸಿ ಹಿಂದುಪರ ಸಂಘಟನೆಗಳ ಯುವ ಮುಖಂಡರು ನಗರದ ವಿಘ್ನೇಶ್ವರ ದೇವಸ್ಥಾನದಲ್ಲಿ ಹೋಮ-ಹವನ, ಯಜ್ಞ ನಡೆಸಿ ಪ್ರಾರ್ಥನೆ ಸಲ್ಲಿಸಿದರು.

ವಿಶ್ವ ಹಿಂದು ಪರಿಷತ್, ಬಜರಂಗ ದಳ ಹಾಗೂ ಸಂಗಮೇಶ ವಾತಡೆ ಗೆಳೆಯರ ಬಳಗ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪಿಂಟು ಪಾಠಕ್ ಮಹಾರಾಜ ನೇತೃತ್ವದ ತಂಡ ಯಜ್ಞ ನಡೆಸಿಕೊಟ್ಟಿತು.

ಅಕಾಲಿಕ ನಿಧನ, ಅಪಘಾತ ಹಾಗೂ ಆತ್ಮಹತ್ಯೆಯಂಥ ಪ್ರಕರಣಗಳಲ್ಲಿ ಹಿಂದು ಯುವಕರೇ ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾಗುತ್ತಿದ್ದು, ಇಂಥ ದುರಂತ ಮರುಕಳಿಸದಿರಲಿ ಎಂಬ ಆಶಯದೊಂದಿಗೆ ವಿಘ್ನ ನಿವಾರಕ ಗಣೇಶ ದೇವರಲ್ಲಿ ಯಜ್ಞದ ಮೂಲಕ ಯುವಕರು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ತ್ರಿಪುರಾಂತ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯ ಮಾತನಾಡಿ, ಸಂಸ್ಕಾರ ಕೊರತೆಯಿಂದಾಗಿ ಯುವ ಸಮೂಹ ದಾರಿ ತಪ್ಪುತ್ತಿರುವುದೇ ಈ ದುರ್ಘಟನೆಗಳಿಗೆ ಕಾರಣ. ಹಿರಿಯರ ಮಾರ್ಗದರ್ಶನದಲ್ಲಿ ಮುನ್ನಡೆಯದೆ ಖಿನ್ನತೆ, ಮಾನಸಿಕ ಒತ್ತಡಗಳಿಂದ ಆತ್ಮಹತ್ಯೆಯಂಥ ನಿರ್ಧಾರಕ್ಕೆ ಬರುತ್ತಾರೆ. ಪಾಲಕರು, ಗುರು-ಹಿರಿಯರ ಮಾರ್ಗದರ್ಶನದಲ್ಲಿ ಜೀವನ ನಡೆಸಿದಾಗ ಉಜ್ವಲ ಭವಿಷ್ಯ ಕಂಡುಕೊಳ್ಳಬಹುದು ಎಂದು ನುಡಿದರು.

ವಿಎಚ್‌ಪಿ ತಾಲೂಕು ಅಧ್ಯಕ್ಷ ಶ್ರೀಶೈಲ ವಾತಡೆ, ಬಜರಂಗದಳ ತಾಲೂಕು ಸಂಯೋಜಕ ರವಿ ನಾವದ್ಗೇಕರ, ಸಂಗಮೇಶ ವಾತಡೆ ಇತರರಿದ್ದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣದಲ್ಲಿ ನಡೆದ ಹೋಮ-ಹವನ, ಯಜ್ಞ ಕಾರ್ಯಕ್ರಮದಲ್ಲಿ ಶ್ರೀ ಡಾ.ಅಭಿನವ ಘನಲಿಂಗ ರುದ್ರಮನಿ ಶಿವಾಚಾರ್ಯ, ಶ್ರೀಶೈಲ ವಾತಡೆ, ಸಂಗಮೇಶ ವಾತಡೆ, ರವಿ ನಾವದ್ಗೇಕರ್ ಇತರರಿದ್ದರು.



ಬಳ್ಳಾರಿಯಲ್ಲಿ ಶ್ರೀ ಮಹಾದೇವ ಎಜುಕೇಷನ್, ಆರ್ಟ್ ಆ್ಯಂಡ್ ಕಲ್ಚರಲ್ ಟ್ರಸ್ಟ್, ಜೆ.ಟಿ. ಫೌಂಡೇಶನ ಎಸ್.ಆರ್.ಎಂ ಸೇವಾ ಸಂಸ್ಥೆ(ರಿ), ಅಖಿಲ ಕರ್ನಾಟಕ ಕನ್ನಡ ರಾಜ್ಯೋತ್ಸವ ಸಮಿತಿಯಿಂದ ಇತ್ತೀಚೆಗೆ 99ನೇ ಕನ್ನಡ ರಾಜ್ಯೋತ್ಸವದ ನಿಮಿತ್ತ ನಡೆದ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮ್ಮೇಳನದಲ್ಲಿ ಬಸವಕಲ್ಯಾಣ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಅವರಿಗೆ ಕರ್ನಾಟಕ ಸಾಧಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಮುಖರಾದ ತಿಮ್ಮಪ್ಪ ಜೋಳದರಾಸಿ, ಬಸವರಾಜ ಬೀಸಳಹಳ್ಳಿ, ಕೆ.ಆರ್.ಮಧು, ಜಿ.ಹರಿಪ್ರಸಾದ, ಸುಮಾ ನಾಡಿಗೇರ, ಕೆ.ತಿಪ್ಪೆರುದ್ರಪ್ಪ ಕೆಆರ್ ಮಧು ಉಪಸ್ಥಿತರಿದ್ದರು.

Scanned with OKEN Scanner

ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿಕೆ

'ಬಸವ ಬೆಳಗಿದ ನಾಡಲ್ಲಿ ದಸರಾ ಧರ್ಮಸಮ್ಮೇಳನ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 34 ನೇ ದಸರಾ ಧರ್ಮ ಸಮ್ಮೇಳನ ನಡೆಯಲಿದೆ
- ಸಭೆಯಲ್ಲಿ ₹52 ಲಕ್ಷ ದೇಣಿಗೆ ಸಂಗ್ರಹ
- ಕಾರ್ಯಕ್ರಮ ಸಮಿತಿ ಅಧ್ಯಕ್ಷರಾಗಿ ಈಶ್ವರ ಖಂಡ್ರೆ ನೇಮಕ



ಬಸವಕಲ್ಯಾಣ ತಾಲ್ಲೂಕಿನ ಹಾರಕೂಡದಲ್ಲಿ ಮಂಗಳವಾರ ನಡೆದ ದಸರಾ ಧರ್ಮಸಮ್ಮೇಳನದ ಪೂರ್ವಸಿದ್ಧತಾ ಸಭೆಯಲ್ಲಿ ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯರು ದೀಪ ಬೆಳಗಿಸಿದರು. ಚನ್ನವೀರ ಶಿವಾಚಾರ್ಯರು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಾಸಕ ಶರಣು ಸಲಗರ ಇದ್ದರು

ಬಸವಕಲ್ಯಾಣ: 'ಬಸವಾದಿ ಶರಣರು ಸಮಾಜಕ್ಕೆ ಬೆಳಕು ನೀಡಿದ ಹಾಗೂ ಘನಲಿಂಗ ರುದ್ರಮುನಿಯವರ ಕಾರ್ಯದಿಂದ ಪಾವನವಾದ ಬಸವಕಲ್ಯಾಣದಲ್ಲಿ 2025ರಲ್ಲಿ ದಸರಾ ಧರ್ಮಸಮ್ಮೇಳನ ಅದ್ಧೂರಿಯಾಗಿ ಹಮ್ಮಿಕೊಳ್ಳಲಾಗುವುದು' ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ.

ತಾಲ್ಲೂಕಿನ ಹಾರಕೂಡ ಹಿರೇಮಠ ಸಂಸ್ಥಾನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ದಸರಾ ಧರ್ಮಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

'ನಾಡಿನ ವಿವಿಧೆಡೆ ಈಗಾಗಲೇ ದಸರಾ ಧರ್ಮಸಮ್ಮೇಳನಗಳು ನಡೆದಿವೆ. ಕಲಬುರಗಿ ವಿಭಾಗದಲ್ಲಿ ಒಂದು ಸ್ಥಳದಲ್ಲಿ ಆಯೋಜಿಸಲಾಗಿತ್ತು. ಬಸವಕಲ್ಯಾಣದಲ್ಲಿ 34ನೇ ಸಮಾರಂಭದ ಅಂಗವಾಗಿ 11 ದಿನಗಳವರೆಗೆ ವಿಶೇಷ ಪೂಜೆ, ಧರ್ಮಚಿಂತನಗೋಷ್ಠಿ ನಡೆಸಲಾಗುತ್ತದೆ. ಕಾರ್ಯಕ್ರಮದಕ್ಕಾಗಿ ಈ ಸಭೆಯಲ್ಲಿ ₹52 ಲಕ್ಷ ದೇಣಿಗೆ ಸಂಗ್ರಹವಾಗಿರುವುದು ಸಂತಸ ತಂದಿದೆ. ಇದುವರೆಗಿನ ಕಾರ್ಯಕ್ರಮಗಳಕ್ಕಿಂತ ಇದು ವಿಶಿಷ್ಟವಾಗಿ ಜರುಗುವುದಕ್ಕೆ ಭಕ್ತಾಧಿಗಳು ಸಹಕರಿಸಬೇಕು. ಕಾರ್ಯಕ್ರಮ ಸಮಿತಿ ಗೌರವ ಅಧ್ಯಕ್ಷರನ್ನಾಗಿ ಹಾರಕೂಡ ಚನ್ನವೀರ ಶಿವಾಚಾರ್ಯರನ್ನು, ಅಧ್ಯಕ್ಷರನ್ನಾಗಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಕಾರ್ಯಾಧ್ಯಕ್ಷರನ್ನಾಗಿ ಶಾಸಕ ಶರಣು ಸಲಗರ ಅವರನ್ನು ನೇಮಿಸಿದ್ದು ಇತರೆ ಉಪ ಸಮಿತಿಗಳನ್ನು ಸಹ ನೇಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು' ಎಂದರು.

ಹಾರಕೂಡ ಚನ್ನವೀರ ಶಿವಾಚಾರ್ಯರು ಮಾತನಾಡಿ, 'ಕಲ್ಯಾಣವು ಅತ್ಯಂತ ಶ್ರೇಷ್ಠ ಮತ್ತು ಕೀರ್ತಿಶಾಲಿ ಆಗಿದ್ದ ಚಾಲುಕ್ಯ ವಿಕ್ರಮಾದಿತ್ಯನ ನಾಡು. ಇಂಥಲ್ಲಿ ರಂಭಾಪುರಿ ಪೀಠದಿಂದ ದಸರಾ ಧರ್ಮಸಮ್ಮೇಳನ ಹಮ್ಮಿಕೊಳ್ಳುತ್ತಿರುವುದು ಪರಮಸೌಭಾಗ್ಯ ಎಂದೇ ತಿಳಿಯಬೇಕು. ಗುರು ವಿರಕ್ತರೆಂಬ ಭೇದವಿಲ್ಲದೆ ಎಲ್ಲರೂ ಪಾಲ್ಗೊಳ್ಳಬೇಕಾಗಿದೆ. ಕಾರ್ಯಕ್ರಮದ ಐದು ದಿನಗಳ ದಾಸೋಹ ಸೇವೆಯ ದೇಣಿಗೆಯನ್ನು ಹಾರಕೂಡ ಮಠದಿಂದ ಕೊಡಲಾಗುವುದು. ಶಾಸಕ ಶರಣು ಸಲಗರ ₹11 ಲಕ್ಷ ದೇಣಿಗೆ ನೀಡಲಿದ್ದಾರೆ' ಎಂದರು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಹಿರೇನಾಗಾಂವ ಜಯಶಾಂತಲಿಂಗ ಸ್ವಾಮೀಜಿ, ಶಾಸಕ ಶರಣು ಸಲಗರ ಮಾತನಾಡಿದರು.

ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಬಸವರಾಜ ಕೋರಕೆ, ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ರಾಜಕುಮಾರ ಶಿರಗಾಪುರ, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಮುಖಂಡರಾದ ಸುನಿಲ ಪಾಟೀಲ, ಶರಣಪ್ಪ ಬಿರಾದಾರ, ಮೇಘರಾಜ ನಾಗರಾಳೆ, ರಮೇಶ ರಾಜೋಳೆ, ಮಲ್ಲಿನಾಥ ಹಿರೇಮಠ ಮತ್ತಿತರರು ಪಾಲ್ಗೊಂಡಿದ್ದರು.

ಪ್ರಜಾವಾಣಿ ಬುಧವಾರ • ನವೆಂಬರ್ 20, 2024

ಧರ್ಮ ಮಾರ್ಗದಲ್ಲಿ ನೆಮ್ಮದಿ ಜೀವನ



ವಿಜಯವಾಣಿ ಚಿತ್ರ

ಬಸವಕಲ್ಯಾಣದ ಬಿರಾದಾರ ಕಾಲನಿಯಲ್ಲಿ ಏರ್ಪಡಿಸಿದ್ದ ಧರ್ಮ ಸಭೆಯನ್ನು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ಉದ್ಘಾಟಿಸಿದರು. ಸಾವಿತ್ರಿ ಸಲಗರ, ಅಲಿಸಾಬ್, ಸವಿತಾ ಸ್ವಾಮಿ ಇತರರಿದ್ದರು.

ಬಸವಕಲ್ಯಾಣ: ಧರ್ಮ ಮಾರ್ಗದಲ್ಲಿ ನಡೆದರೆ ಜೀವನದಲ್ಲಿ ಶಾಂತಿ, ನೆಮ್ಮದಿ ಹಾಗೂ ಸಾರ್ಥಕತೆ ಕಾಣಲು ಸಾಧ್ಯ ಎಂದು ಗವಿಮಠ ಸಂಸ್ಥಾನದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನುಡಿದರು.

ಶ್ರೀ ಸೋಮಶೇಖರಯ್ಯ ಮಠಪತಿ ಗಡಿಲಿಂಗದಳ್ಳಿ 50ನೇ ಹಾಗೂ ಮಾತೋಶ್ರೀ ಮಹಾದೇವಿ ಸೋಮಶೇಖರಯ್ಯ ಅವರ 20ನೇ ಸ್ಮರಣೋತ್ಸವ ನಿಮಿತ್ತ ನಗರದ ಬಿರಾದಾರ ಕಾಲನಿಯಲ್ಲಿ ಬುಧವಾರ ಸಂಜೆ ಏರ್ಪಡಿಸಿದ್ದ ಧರ್ಮ ಸಭೆ, ಪ್ರಶಸ್ತಿ ಪ್ರದಾನ, ಕಲಾವಿದರ ಸನ್ಮಾನ ಮತ್ತು ಸಂಗೀತ ಕಾರ್ಯಕ್ರಮ ಉದ್ಘಾಟಿಸಿದ ಅವರು, ಹಿರಿಯರ ಸ್ಮರಣಾರ್ಥ ಧರ್ಮಸಭೆ ಜತೆಗೆ ಸಂಗೀತ ಕಾರ್ಯಕ್ರಮ ನಡೆಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಲಬುರಗಿ ಪಾಲಿಕೆ ಎಸ್ಟೇಟ್ ಅಧಿಕಾರಿ ಸಾವಿತ್ರಿ ಸಲಗರ, ಸಿಪಿಐ ಅಲಿಸಾಬ್, ಬಿಡಿಪಿಸಿ ನಿರ್ದೇಶಕ ಮಲ್ಲಯ್ಯ ಸ್ವಾಮಿ. ಪ್ರಮುಖರಾದ ರೇವಣಸಿದ್ಧಯ್ಯ ಮಠಪತಿ, ರೇಣುಕಾ ಮಠಪತಿ, ಚನ್ನಯ್ಯ ಸ್ವಾಮಿ ಯಡಪಳ್ಳಿ, ಸವಿತಾ ಸ್ವಾಮಿ, ಸರಸ್ವತಿ ಬೆಂಬಳಿ ಇತರರಿದ್ದರು. ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ರಮೇಶ ರಾಜೋಳ ನಿರೂಪಣೆ ಮಾಡಿದರು. ವೀರಯ್ಯ ಸ್ವಾಮಿ ಗಡಿಲಿಂಗದಳ್ಳಿ ಹಾಗೂ ಮನೋಹರ ಮೂಲಗೆ ಕೋಹಿನೂರ ಅವರಿಗೆ ಸುವರ್ಣ ಸೇವಾರತ್ನ ಪ್ರಶಸ್ತಿ, ವಿವಿಧ ಕ್ಷೇತ್ರದ ಸಾಧಕರಿಗೆ ಧರ್ಮ ಸೇವಾರತ್ನ, ಸಂಘಟನಾ ಸೇವಾರತ್ನ, ಸಂಗೀತ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

- ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ ನುಡಿ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 15 ಫೆಬ್ರವರಿ 2025
15 FEBRUARY 2025

Scanned with OKEN Scanner

UDAYAKALA
Wednesday, December 18, 2024

ಡಾ. ಅಭಿನವ ಘನಲಿಂಗ ಶ್ರೀಗಳಿಗೆ ಅಭಿನಂದನಾ ಸಮಾರಂಭ

ಭಕ್ತರ ಪ್ರೇರಣೆಯಿಂದ ಕರ್ನಾಟಕ ಸಾಧಕ ರತ್ನ ಪ್ರಶಸ್ತಿ ಬಂದಿದೆ: ಅಭಿನವ ಘನಲಿಂಗ ಶ್ರೀ

ಉದಯಕಾಲ ನ್ಯೂಸ್

ಬಸವಕಲ್ಯಾಣ: ನಮ್ಮ ವ್ಯಸನ ಮುಕ್ತ ಸಮಾಜ ಸುಧಾರಣಾ ಕಾರ್ಯಗಳನ್ನು ಗುರುತಿಸಿ, ಬಳ್ಳಾರಿಯ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ವೇದಿಕೆಯು ನಮಗೆ ಕರ್ನಾಟಕ ಸಾಧಕ ರತ್ನ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದ್ದು, ಕೇವಲ ನನಗಲ್ಲ ನಮ್ಮ ಭಕ್ತ ಸಮೂಹಕ್ಕೆ ತಂದ ಗೌರವ. ಹೀಗಾಗಿ ಈ ಪ್ರಶಸ್ತಿಯನ್ನು ನಾನು ನಮ್ಮ ಇಡೀ ಭಕ್ತ ಸಮೂಹಕ್ಕೆ ಅರ್ಪಿಸುತ್ತೇನೆ ಎಂದು ಗವಿಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ನಗರದಲ್ಲಿನ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿಮಠ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರಿಗೆ ಇತ್ತೀಚೆಗೆ ಬಳ್ಳಾರಿಯ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ವೇದಿಕೆಯು ಅವರ ವ್ಯಸನ ಮುಕ್ತ ಸಮಾಜ ಸುಧಾರಣಾ ಕಾರ್ಯಗಳನ್ನು ಗುರುತಿಸಿ ಕರ್ನಾಟಕ ಸಾಧಕ ರತ್ನ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದ ಪ್ರಯುಕ್ತ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಸಮಸ್ತ ಸದ್ಭಕ್ತರು ಸೇರಿ ಸೋಮವಾರ ಸಂಸ್ಥಾನ ಗವಿಮಠದಲ್ಲಿ ಏರ್ಪಡಿಸಿದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ನಾವು ವ್ಯಸನ ಮುಕ್ತ ಸಮಾಜ ಸಂಕಲ್ಪತೊಟ್ಟು ನಮ್ಮ



ಜನ್ಮ ದಿನೋತ್ಸವ ಅಂಗವಾಗಿ ಮರಗಳನ್ನು ಬೆಳಸಿ ಪರಿಸರವನ್ನು ಉಳಿಸಿ, ದುಶ್ಚಟ ಜೋಳಿಗೆ, ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ, ಪ್ಲಾಸ್ಟಿಕ್ ಮುಕ್ತ ಜೀವನ ಹೇಗೆ ಪ್ರತಿವರ್ಷ ಒಂದೊಂದು ಸಾಮಾಜಿಕ ಸಂದೇಶದೊಂದಿಗೆ ನಗರದ ಮುಖ್ಯ ರಸ್ತೆಯಲ್ಲಿ ಪಾದಯಾತ್ರೆ ಕೈಕೊಳ್ಳುವುದರ ಮೂಲಕ ಸಮಾಜ ಸುಧಾರಣೆಯ ಕಾರ್ಯಗಳನ್ನು ಕೈಕೊಳ್ಳುತ್ತಿದ್ದೇವೆ. ಇವುಗಳಿಗೆಲ್ಲ ನಮ್ಮ ಭಕ್ತರೇ ಪ್ರೇರಣೆ. ಹೀಗಾಗಿ ನಿಮ್ಮಂಥ ಭಕ್ತರನ್ನು ಪಡೆದ ನಾನು ಧನ್ಯ. ನಿಮ್ಮ ಮೇಲೆ ಸದಾ ಭಗವಂತನ ಕೃಪೆ ಇರಲಿ ಎಂದು ಶುಭ ಹಾರೈಸಿದರು.

ಬಸವೇಶ್ವರ ದೇವಸ್ಥಾನ ನಿರ್ದೇಶಕರಾದ ಸೋಮ ಶೇಖರ್ ವಸ್ತ್ರದ ಅವರು ಮಾತನಾಡಿ, ಘಟವನ್ನು ಮಠ ಮಾಡಿದ ಪೂಜ್ಯ ಡಾ. ಅಭಿನವ ಗುರುಗಳ ಸಾಧನೆಯನ್ನು ಕೊಂಡಾಡಿದರು.ಶಿಕ್ಷಕ ಮಲ್ಲಿಕಾರ್ಜುನ ಅಲಗುಡೆ, ಶಿಕ್ಷಕ ಚನ್ನವೀರ ಜಮಾದಾರ ಮಾತನಾಡಿದರು. ಕಸಾಪ ತಾಲೂಕ ಅಧ್ಯಕ್ಷ ಶಾಂತಲಿಂಗ ಮಠಪತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅಧ್ಯಕ್ಷತೆ ವಹಿಸಿದ್ದ ಟ್ರಸ್ಟ್ ಕಾರ್ಯಧ್ಯಕ್ಷ ಶರಣಪ್ಪ ಬಿರಾದಾರ ಅವರು ಟ್ರಸ್ಟ್‌ವತಿಯಿಂದ ಡಾ. ಅಭಿನವ ಘನಲಿಂಗ ಗುರುಗಳನ್ನು ಗೌರವಿಸಿ ಅಭಿನಂದಿಸಿದರು.

ಇಂಜಿನಿಯರಿಂಗ್ ವಿದ್ಯಾರ್ಥಿ ಶರಣಬಸಪ್ಪ ಅಲಗುಡೆ ಪ್ರಾರ್ಥನೆ ಹಾಡಿದರು. ಪ್ರೊ. ರುದ್ರೇಶ್ವರ ಗೋರ್ಟಾ ಭಕ್ತಿ ಗೀತೆ ಹಾಡಿದರು. ಮುಖ್ಯ ಶಿಕ್ಷಕ ರಮೇಶ ರಾಜೋಳೆ ನಿರೂಪಿಸಿದರು.

ಈ ಸಂದರ್ಭದಲ್ಲಿ ಪ್ರಾಚಾರ್ಯ ಎ.ಜಿ.ಪಾಟೀಲ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ಲಕ್ಷ್ಮಣ ಸಿಂಗಾರೆ, ರಾಮಚಂದ್ರ ಹುಡುಗೆ, ಮಲ್ಲಿಕಾರ್ಜುನ ಅಲಶೆಟ್ಟಿ, ಪಂಚಾಕ್ಷರಿ ಹಿರೇಮಠ, ರೇವಣಸಿದ್ಧಯ್ಯ ಮಠಪತಿ, ಬರಹಗಾರ ವೀರಶೆಟ್ಟಿ ಪಾಟೀಲ, ಡಾ. ವಿ. ಎಸ್. ರಾಜೋಳೆ, ಪ್ರೊ. ಸಂತೋಷ್ ಮಹಾಜನ್, ರಾಕೇಶ ಪುರವಂತ, ರವಿ ಬಿರಾದಾರ, ಗೋವಿಂದರೆಡ್ಡಿ ಕೊತಾಪಲ್ಲೆ, ಸರೋಜನಿ ಹಿರೇಮಠ, ರೇಖಾ ಚಿಟ್ಟೆ, ಮಹಾನಂದಾ ಪುರವಂತ, ಜ್ಯೋತಿ ಪುರವಂತ, ವಿಶ್ ವಹಿಂದು ಪರಿಷತ್ ತಾಲು ಅರ್ಧಯಕ್ಷ ಶ್ರೀಶೈಲ್ ವಾತಡೆ, ಬಜರಂಗದಳ ತಾಲೂಕ ಅಧ್ಯಕ್ಷ ರವಿಂದ್ರ ನಾವದಗೀಕರ್, ಸಿದ್ರಾಮ ಕವಳೆ, ಬಾಬು ಸ್ವಾಮಿ, ಹರಿಶ್ಚಂದ್ರ ಪಂಚಾಳ, ಸತ್ಯಾವತಿ ಸ್ವಾಮಿ ಪಾಲ್ಗೊಂಡಿದರು.

Scanned with OKEN Scanner

ಪ್ರೊ.ಶಂಭುಲಿಂಗ ಕಾಮಣ್ಣ ಅನಿಸಿಕೆ | ಬಸವಕಲ್ಯಾಣದಲ್ಲಿ ಕವನ ಸಂಕಲನ ಬಿಡುಗಡೆ

ಶರಣರ ವಚನಗಳು ಬದುಕಿಗೆ ದಾರಿದೀಪ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಅಗೋ ಅಲ್ಲೊಂಡಿ ಮತ್ತೆ ಕಲ್ಯಾಣಕ್ಕೆ ಬರುತ್ತಿರುವ ಶರಣರು. ಇದು ಕವನ ಸಂಕಲನದ ಅಪರೂಪದ ಶೀರ್ಷಿಕೆ ಎಂದು ಶರಣ ಸಾಹಿತ್ಯ ಪರಿಷತ್‌ನ ಜಿಲ್ಲಾಧ್ಯಕ್ಷ ಪ್ರೊ.ಶಂಭುಲಿಂಗ ಕಾಮಣ್ಣ ಹೇಳಿದರು.

ನಗರದ ಸಂಸ್ಥಾನ ಗವಿಮಠದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಮತ್ತು ತಾಲೂಕು ಘಟಕ, ಅಭಿನವಶ್ರೀ ಪ್ರಕಾಶನ, ಪ್ರತಿಮಾ ಪ್ರಕಾಶನದ ಸಹಯೋಗದಲ್ಲಿ ಗುರುವಾರ ಸಂಜೆ ಆಯೋಜಿಸಿದ್ದ ಶರಣ ಕಾಯಕ ಪ್ರಶಸ್ತಿ ಪ್ರದಾನ ಹಾಗೂ ವೀರಶೆಟ್ಟಿ ಎಂ. ಪಾಟೀಲ್ ಅವರ 'ಅಗೋ ಅಲ್ಲೊಂಡಿ ಮತ್ತೆ ಕಲ್ಯಾಣಕ್ಕೆ ಬರುತ್ತಿರುವ ಶರಣರು' ಸಂಪಾದಿತ ಕವನ ಸಂಕಲನ ಬಿಡುಗಡೆ ಸಮಾರಂಭದಲ್ಲಿ ಪುಸ್ತಕ ಪರಿಚಯಿಸಿ ಮಾತನಾಡಿದ ಅವರು, ಶರಣರ ವಚನಗಳು ಪ್ರತಿಯೊಬ್ಬರ ಬದುಕಿಗೆ ದಾರಿದೀಪಗಳಾಗಿವೆ ಎಂದರು

ಕವನ ಸಂಕಲನ ಬಿಡುಗಡೆ ಮಾಡಿದ ಸಿಪಿಐ ಅಲಿಸಾಬ್ ಮಾತನಾಡಿ, ವಿದ್ಯಾರ್ಥಿ ಆಗಿದ್ದಾಗ ನಾನು ಕೆಲ ಕವನಗಳನ್ನು ಬರೆದಿದ್ದು, ಸಾಹಿತ್ಯದ ಬಗ್ಗೆ ಆಸಕ್ತಿ ಇದೆ. ಸಮಾಜದಲ್ಲಿ ಪರಿವರ್ತನೆ ತರುವ ಶಕ್ತಿ ಸಾಹಿತ್ಯಕ್ಕೆ ಇದೆ. ಯುವ ಸಮೂಹದಲ್ಲಿ ಪುಸ್ತಕ ಓದುವ ಆಸಕ್ತಿ ಬೆಳೆಸಬೇಕಾದ ಅವಶ್ಯಕತೆ ಇದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಆಶೀರ್ವಚನ ನೀಡಿ,



ವಿಜಯವಾಣಿ

ಬಸವಕಲ್ಯಾಣದಲ್ಲಿಕ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವೀರಶೆಟ್ಟಿ ಪಾಟೀಲ್ ಸಂಪಾದಿತ ಕವನ ಸಂಕಲನವನ್ನು ಸಿಪಿಐ ಅಲಿಸಾಬ್ ಬಿಡುಗಡೆಗೊಳಿಸಿದರು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪ್ರೊ.ಶಂಭುಲಿಂಗ ಕಾಮಣ್ಣ, ಶಿವಶಂಕರ ಟೋಕರೆ, ಶಾಂತಲಿಂಗ ಮಠಪತಿ, ಸಾತ್ವಿಕ ಪಾಟೀಲ್, ವೀರಶೆಟ್ಟಿ ಪಾಟೀಲ್, ಪ್ರತಿಮಾ ಪಾಟೀಲ್ ಇತರರಿದ್ದರು.

ಕಟ್ಟಿರುವ ಕಟ್ಟಡ ಬಿದ್ದು ಹೋಗುತ್ತದೆ. ಕೊಟ್ಟಿರುವ ದುಡ್ಡು ಖರ್ಚಾಗಿ ಹೋಗುತ್ತದೆ. ಆದರೆ ಸಾಹಿತ್ಯ ಶಾಶ್ವತ. ಪ್ರತಿವರ್ಷ ವೀರಶೆಟ್ಟಿ ಎಂ. ಪಾಟೀಲರು ಒಂದೊಂದು ಪುಸ್ತಕ ಲೋಕಾರ್ಪಣೆ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಕಸಾಪ ಕೋಶಾಧ್ಯಕ್ಷ ಶಿವಶಂಕರ ಟೋಕರೆ ಅಧ್ಯಕ್ಷತೆ ವಹಿಸಿದ್ದರು. ಬಾಲಕ ಸಾತ್ವಿಕ ವೀರಶೆಟ್ಟಿ ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಿದರು. ಕಸಾಪ ತಾಲೂಕಾಧ್ಯಕ್ಷ ಶಾಂತಲಿಂಗ ಮಠಪತಿ ಪ್ರಾಸ್ತಾವಿಕ ಮಾತನಾಡಿದರು.

ಪ್ರಮುಖರಾದ ತುಳಸಿರಾಮ ಕುಂಬಾರೆ, ರುದ್ರೇಶ್ವರ ಗೋರ್ಟಾ, ನಾಗಪ್ಪ ನಿಣ್ಣೆ, ಡಾ.ಚಿತ್ರಶೇಖರ ಚಿರಳ್ಳಿ, ಡಾ.ವಿ.ಎಸ್. ಮಂಡಿ, ಡಾ.ವಿ.ಎಸ್.ರಾಜೋಳಿ, ಗೋವಿಂದರೆಡ್ಡಿ ಕೋತಾಪಳ್ಳಿ, ಬಸವರಾಜ ಸೇರಿ, ಮಾಣಿಕ ಸಂಗನಬಟ್ಟಿ, ಮಲ್ಲಿಕಾರ್ಜುನ ಅಲಗೂಡೆ, ಶಶಿಧರ ಪಾಟೀಲ್, ಬಸವರಾಜ ರೋಳಾ ಸ್ವಾಮಿ, ಸೈಯದ್ ಶಾ ಇತರರಿದ್ದರು. ನಿತೀನ ನೀಲಕಂಠೆ ಸ್ವಾಗತಿಸಿದರು. ಪ್ರತಿಮಾ ಪಾಟೀಲ್ ವಂದಿಸಿದರು. ನಾಗೇಂದ್ರ ಬಿರಾದಾರ ನಿರೂಪಣೆ ಮಾಡಿದರು.

ಪ್ರೊ.ಶಂಭುಲಿಂಗ ಕಾಮಣ್ಣ, ಸಂತೋಷ ಅಕ್ಕಣ್ಣ, ನಾಗರಾಜ ಹಾವಣ್ಣ, ವಿಶ್ವನಾಥಯ್ಯ ಮಠಪತಿ, ಸೂರ್ಯಕಾಂತ ಮೈಲಾರೆ, ಅವರಿಗೆ ಶರಣ ಕಾಯಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕವನ ಬರೆದವರಿಗೂ ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲಾಯಿತು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಭಾನುವಾರ 5 ಜನವರಿ 2025
5 JANUARY 2025



ಬಸವಕಲ್ಯಾಣದಲ್ಲಿ ಶುಕ್ರವಾರ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಕವನ ಸಂಕಲನ ಬಿಡುಗಡೆಗೊಳಿಸಿದರು

ಅಭಿನವ ಘನಲಿಂಗರುದ್ರಮುನಿ ಶಿವಾಚಾರ್ಯರ ಅಭಿಮತ

'ಹಣ ಉಳಿಯದು ಸಾಹಿತ್ಯ ಸಾಯದು'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಎಷ್ಟೇ ಹಣ ಗಳಿಸಿದರೂ ಉಳಿಯದು. ಕಟ್ಟಡ ಹಾಳಾಗುವುದು. ಆದರೆ ಸಾಹಿತ್ಯ ರೂಪದ ದಾಖಲೆ ಸಾಯದು' ಎಂದು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ನಗರದ ಗವಿಮಠದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಅಭಿನವಶ್ರೀ ಪ್ರಕಾಶನ ಹಾಗೂ ಪ್ರತಿಮಾ ಪ್ರಕಾಶನದಿಂದ ಶುಕ್ರವಾರ ಹಮ್ಮಿಕೊಂಡಿದ್ದ ಶರಣ ಕಾಯಕ ಪ್ರಶಸ್ತಿ ಪ್ರದಾನ ಮತ್ತು ವೀರಶೆಟ್ಟಿ ಪಾಟೀಲ ಸಂಪಾದಿಸಿದ ಕವನ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಶಂಭುಲಿಂಗ ಕಾಮಣ್ಣ ಮಾತನಾಡಿ, 'ಬಸವಾದಿ ಶರಣರು ವಚನ ಸಾಹಿತ್ಯದ ಮೂಲಕ ಜೀವಂತವಿದ್ದಾರೆ. ಅವರ ತತ್ವ, ಸಂದೇಶ ಎಂದಿಗೂ ಪ್ರಸ್ತುತವಾಗಿವೆ' ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಕೋಶಾಧ್ಯಕ್ಷ ಶಿವಶಂಕರ ಟೋಕರೆ ಮಾತನಾಡಿ, 'ಮಕ್ಕಳ ಜನ್ಮದಿನಕ್ಕೆ ಪ್ರತಿವರ್ಷವೂ ಗ್ರಂಥ ಪ್ರಕಟಿಸುತ್ತಿರುವ ವೀರಶೆಟ್ಟಿ ಪಾಟೀಲರ ಕಾರ್ಯ ಶ್ಲಾಘನೀಯ ಕಾರ್ಯವಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಗರ ಠಾಣೆ ಸಿಪಿಐ ಅಲಿಸಾಬ್, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಶಾಂತಲಿಂಗ ಮಠಪತಿ, ನಾಗೇಂದ್ರ ಬಿರಾದಾರ, ನಿತೀನ ನೀಲಕಂಠೆ, ವೀರಶೆಟ್ಟಿ ಪಾಟೀಲ, ಪ್ರತಿಮಾ ಪಾಟೀಲ ಮಾತನಾಡಿದರು. ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸಂತೋಷ ಅಕ್ಕಣ್ಣ, ನಾಗರಾಜ ಹಾವಣ್ಣ, ತುಳಸಿರಾಮ ಕುಂಬಾರೆ ಉಪಸ್ಥಿತರಿದ್ದರು. ವಿವಿಧ ಕ್ಷೇತ್ರದ ಸಾಧಕರಿಗೆ ಶರಣ ಕಾಯಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಜಾವಾಣಿ ಭಾನುವಾರ • ಜನವರಿ 5, 2025

Scanned with OKEN Scanner

ಸೇನಾ ಲೋಕದ ಚಿತ್ರಣ ಅನಾವರಣ

ಭಾರತೀಯ ಭೂಸೇನಾ ದಿನಾಚರಣೆ: ಆಕರ್ಷಕ ಮೆರವಣಿಗೆ, ಯುದ್ಧದಲ್ಲಿ ಪಾಲ್ಗೊಂಡವರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದಲ್ಲಿ ಬುಧವಾರ ನಡೆದ ಭಾರತೀಯ ಭೂಸೇನಾ ದಿನಾಚರಣೆ ಕಾರ್ಯಕ್ರಮವನ್ನು ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ದೀಪ ಬೆಳಗಿಸಿ ಉದ್ಘಾಟಿಸಿದರು. ಮಾಜಿ ಸೈನಿಕರು ಪಾಲ್ಗೊಂಡಿದ್ದರು



ಬಸವಕಲ್ಯಾಣದಲ್ಲಿ ಬುಧವಾರ ನಡೆದ ಮೆರವಣಿಗೆಯಲ್ಲಿ ಯುದ್ಧ ಟ್ಯಾಂಕರ್‌ನ ಪ್ರತಿಕೃತಿ ಗಮನ ಸೆಳೆಯಿತು

ಬಸವಕಲ್ಯಾಣ: 'ಸೈನಿಕರು ಸುರಕ್ಷತೆ ಒದಗಿಸಿದರೆ ಮಾತ್ರ ಯಾವುದೇ ರಾಷ್ಟ್ರ ಸರ್ವ ರೀತಿಯಿಂದ ಅಭಿವೃದ್ಧಿ ಹೊಂದಬಲ್ಲದು' ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ವಿಜಯಸಿಂಗ್ ಹೇಳಿದರು.

ಮಾಜಿ ಸೈನಿಕರ ಸಂಘದ ತಾಲ್ಲೂಕು ಘಟಕದಿಂದ ಬುಧವಾರ ನಗರದಲ್ಲಿ ನಡೆದ ಭಾರತೀಯ ಭೂಸೇನಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರೈತರು ಅನ್ನ ಒದಗಿಸುತ್ತಾರೆ. ಎಲ್ಲರೂ ಸುಖವಾಗಿ ನಿದ್ರೆ ಮಾಡಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಲು ಸೈನಿಕರು ಸಹಾಯ ಮಾಡುತ್ತಾರೆ. ಅವರಿಗೆ ಎಲ್ಲ ರೀತಿಯಿಂದಲೂ ಸಹಕಾರ ನೀಡಬೇಕಾಗಿದೆ. ಗೌರವ ತೋರುವ ಅಗತ್ಯವಿದೆ' ಎಂದರು.

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 'ಸೈನಿಕರು ಮಾಜಿ ಆಗಿದ್ದರೂ ಅವರಲ್ಲಿನ ಧೈರ್ಯ, ದೇಶಾಭಿಮಾನ ಕಡಿಮೆ ಆಗುವುದಿಲ್ಲ' ಎಂದರು.

ತಡೋಳಾ ರಾಜೇಶ್ವರ ಶಿವಾಚಾರ್ಯರು ಮಾತನಾಡಿ, 'ಮಾಜಿ ಸೈನಿಕರು ಯುವಕರಿಗೆ ಪ್ರೇರಣೆ ದೊರಕುವಂತೆ ಕಾರ್ಯಕ್ರಮ ಆಯೋಜಿಸಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಜಿ ಸೈನಿಕರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಬಾಬು ಗೋರ್ಟೆ, ಪ್ರಕಾಶ ನೇತೆ, ನವಲಿಂಗಕುಮಾರ ಪಾಟೀಲ ಮಾತನಾಡಿದರು.

ಹರಳಯ್ಯ ಪೀಠಾಧ್ಯಕ್ಷೆ ಗಂಗಾಂಬಿಕಾ ಅಕ್ಕ, ನಗರಸಭೆ ಅಧ್ಯಕ್ಷ ಸಗೀರುದ್ದೀನ್, ಸಬ್ ಇನ್‌ಸ್ಪೆಕ್ಟರ್ ಅಂಬರೀಶ ವಾಘಮೋಡೆ, ಸುರೇಶ ಹಜ್ಜರಗಿ, ಸಂಘದ ಜಿಲ್ಲಾಧ್ಯಕ್ಷ ರಾಜಕುಮಾರ ಲದ್ದೆ, ವೆಂಕಟರೆಡ್ಡಿ, ಸೂರ್ಯಕಾಂತ ಮೇತ್ರೆ, ಆರ್.ಡಿ.ಬಿರಾದಾರ, ಮಾರ್ತಂಡ ಜೋಶಿ, ಮಲ್ಲಪ್ಪ ಬಾಗೋಡಿ, ಸಿದ್ರಾಮ ಬೇಲೂರೆ, ಶಿವಾಜಿರಾವ್ ಬಾಲುಕ್ಯ, ಓಂಕಾರ ಬಿರಾದಾರ, ವಿಶ್ವನಾಥ ಬಿರಾದಾರ, ರೇವಣಯ್ಯಸ್ವಾಮಿ, ಬಾಬುರಾವ್ ಮಂಠಾಳ ಗಾಯಕವಾಡ, ವಿಜಯಕುಮಾರ ಮಲ್ಲಪ್ಪ ಚಕ್ರಬಂದೆ, ರಾಮಲಿಂಗಸ್ವಾಮಿ, ಉಪಸ್ಥಿತರಿದ್ದರು.

ಸೈನಿಕರ ಉಡುಪಿನಲ್ಲಿ 'ಸ್ತ್ರೀಶಕ್ತಿ'

ಕಾರ್ಯಕ್ರಮದ ಮೊದಲು ಕೋಟೆಯಿಂದ ಮುಖ್ಯರಸ್ತೆಯ ಮೂಲಕ ಡಾ.ಅಂಬೇಡ್ಕರ್ ವೃತ್ತದವರೆಗೆ ಭವ್ಯ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ 'ಸ್ತ್ರೀಶಕ್ತಿ' ಅನಾವರಣಗೊಂಡಿತು. ಹುತಾತ್ಮ ಹಾಗೂ ಮೃತ ಸೈನಿಕರ ಪತ್ನಿಯರು ಸೈನಿಕರ ಉಡುಪು ತೊಟ್ಟು ಮೆರವಣಿಗೆಯಲ್ಲಿ ಪಾಲ್ಗೊಂಡಿರುವುದು ಗಮನ ಸೆಳೆಯಿತು.

ಇದಲ್ಲದೇ, 150ಕ್ಕೂ ಅಧಿಕ ಮಾಜಿ ಸೈನಿಕರೂ ಸೇನಾ ಉಡುಪುಗಳಲ್ಲಿ ಕಂಗೊಳಿಸಿದರು. ಸೈನ್ಯದಲ್ಲಿದ್ದಾಗ ದೊರೆತ ಹತ್ತಾರು ಪದಕಗಳ ಗುಚ್ಛಗಳ ಎದೆಯ ಮೇಲೆ ಹಚ್ಚಿಕೊಂಡು ಸಡಗರಪಟ್ಟರು.

ಮೆರವಣಿಗೆಯಲ್ಲಿ ಒಂದು ವಾಹನದಲ್ಲಿ ಯುದ್ಧ ಟ್ಯಾಂಕರ್‌ನ ಪ್ರತಿಕೃತಿ ಗಮನ ಸೆಳೆಯಿತು. ಮತ್ತೊಂದು ವಾಹನದಲ್ಲಿ ಭಾರತಮಾತೆಯ ಭಾವಚಿತ್ರವಿತ್ತು. ಎರಡು ಪ್ರತ್ಯೇಕ ವಾಹನಗಳ ಸುತ್ತಲೂ ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದವರ ಭಾವಚಿತ್ರ, ಪರಮವೀರಚಕ್ರ, ವೀರಚಕ್ರ ಮುಂತಾದ ಪ್ರಶಸ್ತಿ, ಪುರಸ್ಕಾರ ಪಡೆದವರ ಮತ್ತು ಭಾರತೀಯ ಸೇನೆಯ ಇದುವರೆಗಿನ ಮೇಜರ್ ಜನರಲ್‌ಗಳ ಭಾವಚಿತ್ರಗಳನ್ನು ಅಳವಡಿಸಲಾಗಿತ್ತು. ಮೆರವಣಿಗೆ ರಸ್ತೆಯಲ್ಲಿನ ಜಾಮೀಯಾ ಮಸೀದಿ ಹತ್ತಿರ ಬಂದಾಗ ಮಸೀದಿ ಸಮಿತಿಯಿಂದ ಮೆರವಣಿಗೆಯ ಮೇಲೆ ಪುಷ್ಪವೃಷ್ಟಿ ಮಾಡಿ ಗೌರವಿಸಲಾಯಿತು.

Scanned with OKEN Scanner

ತಡೋಳಾ ಶ್ರೀ ಬಣ್ಣನೆ | ಬಸವಕಲ್ಯಾಣದಲ್ಲಿ ಭಾರತೀಯ ಭೂ ಸೇನಾ ದಿನಾಚರಣೆ

ಯೋಧರ-ರೈತರ ತ್ಯಾಗ ಸೇವೆ ದೊಡ್ಡದು

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ದೇಶದ ಗಡಿಯಲ್ಲಿ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ದೇಶ ರಕ್ಷಣೆಗೆ ಸಮರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸುವ ಸೈನಿಕರ ಹಾಗೂ ದೇಶಕ್ಕೆ ಅನ್ನ ನೀಡುವ ರೈತರ ಜೈಕಾರವಾಗಬೇಕು. ಎಲ್ಲಡೆ ಅವರ ಮಾನ-ಸನ್ಮಾನವಾಗಬೇಕು. ದೇಶದ ಉನ್ನತಿಗೆ ಇದು ಅವಶ್ಯಕ ಎಂದು ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ನುಡಿದರು.

ನಗರದ ಬಿಕೆಡಿಬಿ ಕಲ್ಯಾಣ ಮಂಟಪದಲ್ಲಿ ತಾಲೂಕು ಮಾಜಿ ಸೈನಿಕರ ಸಂಘದಿಂದ ಬುಧವಾರ ಆಯೋಜಿಸಿದ್ದ 77ನೇ ಭಾರತೀಯ ಭೂ ಸೇನಾ ದಿನಾಚರಣೆಯಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಸೈನಿಕರು ಹಾಗೂ ರೈತರು ಅತ್ಯಂತ ಪ್ರಾಮಾಣಿಕರು. ಅವರ ಸೇವೆ, ತ್ಯಾಗ ದೊಡ್ಡದು. ಅವರಿಗೆ ಮೂಲಸೌಕರ್ಯ ಒದಗಿಸುವ ಕಾರ್ಯ ಸರ್ಕಾರದಿಂದ ನಡೆಯಲಿ ಎಂದರು.

ನೇತೃತ್ವ ವಹಿಸಿದ್ದ ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ದೇಶದ ರಕ್ಷಣೆಗಾಗಿ ಸೈನಿಕರ ಸೇವೆ ಅಪಾರ, ಮಾಜಿ ಸೈನಿಕರಿಗಾಗಿ ನಗರದಲ್ಲಿ ಭವನ ನಿರ್ಮಾಣಕ್ಕೆ ಸರ್ಕಾರದಿಂದ ನಿವೇಶನ ಮಂಜೂರಿ ಮಾಡುವ ಜತೆಗೆ ಭವನ ನಿರ್ಮಾಣಕ್ಕೆ ಅನುದಾನ ಕಲ್ಪಿಸಬೇಕೆಂದರು.



ಬಸವಕಲ್ಯಾಣದಲ್ಲಿ ಬುಧವಾರ ಆಯೋಜಿಸಿದ್ದ 77ನೇ ಭಾರತೀಯ ಭೂ ಸೇನಾ ದಿನಾಚರಣೆಯನ್ನು ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಉದ್ಘಾಟಿಸಿದರು. ಎಂ.ಡಿ.ಸಗೀರೋದ್ದಿನ್, ರಾಜಕುಮಾರ ಲದ್ದೆ, ಬಾಬುರಾವ ಗೋರ್ಟಿ, ಕರ್ನಲ್ ವೆಂಕಟರೆಡ್ಡಿ, ಸೂರ್ಯಕಾಂತ ಮೇತ್ರೆ, ಮಲ್ಲಪ್ಪ ಬಾಗೇವಾಡಿ, ಸಿದ್ರಾಮ ಬೇಲೂರೆ, ವೆಂಕಟ ತೆಲಂಗ, ನವಲಿಂಗ ಪಾಟೀಲ್ ಇತರರಿದ್ದರು.

ವಿಧಾನ ಪರಿಷತ್ ಮಾಜಿ ಸದಸ್ಯ ವಿಜಯಸಿಂಗ್ ಮಾತನಾಡಿ, ಸೈನಿಕರು ದೇಶದ ಗಡಿಯಲ್ಲಿ ನಿಂತು ರಕ್ಷಣೆ ಮಾಡುತ್ತಾರೆ. ಹೀಗಾಗಿ ನಾವೆಲ್ಲರೂ ಸುರಕ್ಷಿತವಾಗಿದ್ದೇನೆ. ಅವರ ದೇಶಭಕ್ತಿ, ಸೇವೆ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು.

ಭಾಲ್ಕಿಯ ಕಿಸಾನ ಸೈಕ್ಷಣಿಕ ಮತ್ತು ಪರಿಸರ ಶಿಕ್ಷಣ ಪ್ರಸಾರಕ ಮಂಡಳಿ ಉಪಾಧ್ಯಕ್ಷ ಆರ್.ಡಿ. ಬಿರಾದಾರ ಮಾತನಾಡಿದರು. ನಗರಸಭೆ ಅಧ್ಯಕ್ಷ ಎಂ.ಡಿ.ಸಗೀರೋದ್ದಿನ್, ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ರಾಜಕುಮಾರ ಲದ್ದೆ, ತಾಲೂಕು ಘಟಕದ ಅಧ್ಯಕ್ಷ ಬಾಬುರಾವ ಗೋರ್ಟಿ, ಗೌರವ ಅಧ್ಯಕ್ಷ ಕರ್ನಲ್ ವೆಂಕಟರೆಡ್ಡಿ, ಗೌರವ ಉಪಾಧ್ಯಕ್ಷ ಮೇಜರ್ ಸೂರ್ಯಕಾಂತ ಮೇತ್ರೆ, ಉಪಾಧ್ಯಕ್ಷ ಮಲ್ಲಪ್ಪ ಬಾಗೇವಾಡಿ, ಕಾರ್ಯದರ್ಶಿ ಸಿದ್ರಾಮ ಬೇಲೂರೆ, ಅಖಿಲ ಭಾರತ ಮಾಜಿ ಸೈನಿಕರ ಸಂಘದ ಸದಸ್ಯ ವೆಂಕಟ ತೆಲಂಗ, ಪಿಎಸ್‌ಐ ಸುರೇಶ ಹಜ್ಜರಗಿ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಜೋಶಿ ಇತರರಿದ್ದರು. ಪ್ರಕಾಶರೆಡ್ಡಿ ಸ್ವಾಗತಿಸಿದರು. ಓಂಕಾರ ಬಿರಾದಾರ ಪ್ರಾಸ್ತಾವಿಕ ಮಾತನಾಡಿದರು. ಆಕಾಶವಾಣಿ ಕಲಾವಿದ ನವಲಿಂಗ ಪಾಟೀಲ್ ನಿರೂಪಣೆ ಮಾಡಿದರು.

ಮೆರವಣಿಗೆ: ಬೆಳಗ್ಗೆ ಹುತಾತ್ಮ ಸೈನಿಕರಿಗೆ ಶ್ರದ್ಧಾಂಜಲಿ ಸಲ್ಲಿಸಿದ ನಂತರ ನಗರದ ಶ್ರೀ ಬಸವೇಶ್ವರ ದೇವಸ್ಥಾನದಿಂದ ಕೋಟೆ ಮೂಲಕ ಮುಖ್ಯರಸ್ತೆ ಮಾರ್ಗವಾಗಿ ಬಿಕೆಡಿಬಿ ಕಲ್ಯಾಣ ಮಂಟಪದವರೆಗೆ ಮೆರವಣಿಗೆ ನಡೆಯಿತು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » KALABURAGI
ಗುರುವಾರ 16 ಜನವರಿ 2025
16 JANUARY 2025

ಮಹಿಳಾ ಸಮಾವೇಶದಲ್ಲಿ ಸಾಹಿತಿ ನೀಲಾಂಬಿಕಾ ಪೊಲೀಸ್ ಪಾಟೀಲ ಅಭಿಮತ

'ಮಹಿಳೆಯರಿಗೆ ಸ್ವಾತಂತ್ರ್ಯ ನೀಡಿದ ನೆಲ ಕಲ್ಯಾಣ'

ಬಸವಕಲ್ಯಾಣ: 'ಬಸವಣ್ಣನವರು ಸ್ತ್ರೀ ಸ್ವಾತಂತ್ರ್ಯ ನೀಡಿದರು. ಸಮಾನತೆ, ಕಾಯಕ ದಾಸೋಹ ತತ್ವ ಸಾರಿದರು' ಎಂದು ಸಾಹಿತಿ ನೀಲಾಂಬಿಕಾ ಪೊಲೀಸ್ ಪಾಟೀಲ ಹೇಳಿದರು.

ತಾಲ್ಲೂಕಿನ ಸಸ್ತಾಪುರದಲ್ಲಿ ಭಾನುವಾರ ಯಲ್ಲಾಲಿಂಗೇಶ್ವರ ಪುಣ್ಯಸ್ಮರಣೋತ್ಸವ ಹಾಗೂ ಮಹಾದೇವಿತಾಯಿ ಅವರ ಷಷ್ಟಬ್ದಿ ಸಮಾರಂಭ ಅಂಗವಾಗಿ ನಡೆದ ಮಹಿಳಾ ಸಮಾವೇಶದಲ್ಲಿ ಮಾತನಾಡಿದರು.

'ಮಹಿಳೆಯರು ಮನಸ್ಸು ಮಾಡಿದರೆ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಬಹುದು. ಅವರ ವ್ಯಕ್ತಿತ್ವ ಉತ್ತಮವಾಗಿ ರೂಪಿಸಬಹುದು. ಈಚೆಗೆ ಮಹಿಳೆ ಸಾಕಷ್ಟು ಅವಮಾನ ಸಹ ಸಹಿಸಬೇಕಾಗಿದೆ. ಅನ್ಯಾಯ, ಅತ್ಯಾಚಾರ, ಕೊಲೆ, ಸುಲಿಗೆ ಹೆಚ್ಚಾಗಿದೆ' ಎಂದರು.

ಸಮಾವೇಶದ ಸರ್ವಾಧ್ಯಕ್ಷತೆ ವಹಿಸಿದ್ದ ಜಯದೇವಿ ಗಾಯಕವಾಡ ಮಾತನಾಡಿ, 'ಮಹಿಳೆಯರು ಪೌಷ್ಟಿಕ ಆಹಾರ ಸೇವಿಸದ ಕಾರಣ ರಕ್ತಹೀನತೆ ಕಾಡುತ್ತಿದೆ. ಈ ಬಗ್ಗೆ ಕಾಳಜಿ ವಹಿಸಬೇಕಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಕೆಲಸ ಮಾಡುವಾಗ ದೌರ್ಜನ್ಯ ಎದುರಿಸಬೇಕಾಗಿದೆ. ಇಂಥ ಪರಿಸ್ಥಿತಿ ಎದುರಿಸುವ ಧೈರ್ಯ ಬರಬೇಕಾಗಿದೆ. ಕಾನೂನಿನ ಸಹಾಯದಿಂದ ಎಲ್ಲವನ್ನೂ ನಿಭಾಯಿಸಬೇಕಿದೆ' ಎಂದರು.



ಭಾನುವಾರ ನಡೆದ ಮಹಿಳಾ ಸಮಾವೇಶದಲ್ಲಿ ನೀಲಾಂಬಿಕಾ ಪೊಲೀಸ್ ಪಾಟೀಲ ದೀಪ ಬೆಳಗಿಸಿದರು. ಮಹಾದೇವಿತಾಯಿ, ಜಯದೇವಿ ಗಾಯಕವಾಡ, ಗವಿಸಿದ್ಧಪ್ಪ ಪಾಟೀಲ ಇದ್ದರು

ಸಂಯೋಜಕ ಗವಿಸಿದ್ಧಪ್ಪ ಪಾಟೀಲ, ತ್ರಿಪುರಾಂತ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಬೇಲೂರು ಪಂಚಾಕ್ಷರಿ ಉರಿಲಿಂಗಪೆದ್ದಿ ಸ್ವಾಮೀಜಿ, ಅಂಬಿಗರ ಚೌಡಯ್ಯ ಪೀಠಾಧ್ಯಕ್ಷ ರತ್ನಾಕಾಂತ ಸ್ವಾಮೀಜಿ, ಫಕೀರಸಾಬ್ ನಂದಕಲ್ಲ, ಜಯಕುಮಾರ ರಡಕೆ, ಪೀರಪ್ಪ ಸಜ್ಜನ, ರಾಜಕುಮಾರ ಮಾಳಗೆ, ಸೂರಜ್ ರಾಂಬಾಣ ಮಾತನಾಡಿದರು.

ಮಹಾದೇವಿತಾಯಿ. ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಶಶಿಕಲಾ, ಭಾಗ್ಯವಂತಿ ಕೌಡಿಯಾಳ, ಎಂ.ಎಂ.ತಂಬಾಕೆ, ರಾಜಮತಿ ಕೊರಾಳೆ ಉಪಸ್ಥಿತರಿದ್ದರು. ಅಂಬಾದಾಸ ಕಾಂಬಳೆ, ಶಿವಪುತ್ರ ಹೋಳ್ಕರ್, ಮಲ್ಲಯ್ಯ ಅತ್ತನೂರ, ಸಿದ್ದಪ್ಪ ಹೊಸಮನಿ, ಡಾಕಪ್ಪ ಮೋತಿಲಾಲ್, ದತ್ತುರಾಯ, ರೇಷ್ಮಾವತಿ ರಾಮಚಂದ್ರ ಅವರಿಗೆ ಸಾಹಿತ್ಯ ಸಿರಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಹಾದೇವಿ ತಾಯಿ ಅವರ 60ನೇ ಜನ್ಮದಿನದ ನಿಮಿತ್ತವಾಗಿ 60 ಜನರಿಂದ ತಾಯಿಯವರ ತುಲಾಭಾರ ನಡೆಸಲಾಯಿತು. ಕಾರ್ಯಕ್ರಮದ ಮೊದಲು ಮೆರವಣಿಗೆ ನಡೆಯಿತು.

ಪ್ರಜಾವಾಣಿ ಸೋಮವಾರ • ಜನವರಿ 27, 2025

Scanned with OKEN Scanner

ಸರ್ವಾಧ್ಯಕ್ಷೆ ಡಾ.ಜಯದೇವಿ ಗಾಯಕವಾಡ ಕರೆ | ಸಸ್ತಾಪುರದಲ್ಲಿ ಪ್ರಥಮ ಮಹಿಳಾ ಸಮಾವೇಶ

ಸವಾಲು ಎದುರಿಸುವ ಆತ್ಮಸ್ಥೈರ್ಯ ಬೆಳೆಸಿಕೊಳ್ಳಿ

ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಮಹಿಳೆಯರು ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಆತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು ಮತ್ತು ಆಲೋಚನೆಗಳನ್ನು ವಿಸ್ತರಿಸಿಕೊಳ್ಳಬೇಕು ಎಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸದಸ್ಯೆ, ಪ್ರಥಮ ಮಹಿಳಾ ಸಮಾವೇಶದ ಸರ್ವಾಧ್ಯಕ್ಷೆ ಡಾ.ಜಯದೇವಿ ಗಾಯಕವಾಡ ಹೇಳಿದರು.

ಸಸ್ತಾಪುರ ಬಳಿಯ ಶ್ರೀ ಸದ್ಗುರು ಯಲ್ಲಾಲಿಂಗೇಶ್ವರ ಆನಂದಾಶ್ರಮದಲ್ಲಿ ಭಾನುವಾರ ಪೂಜ್ಯ ಲಿಂ.ಸದ್ಗುರು ಯಲ್ಲಾಲಿಂಗೇಶ್ವರರ 39ನೇ ಪುಣ್ಯಸ್ಮರಣೋತ್ಸವ ಹಾಗೂ ಪೂಜ್ಯ ಮಹಾದೇವಿತಾಯಿ ಅವರ 60ನೇ ಷಷ್ಟ್ಯಬ್ದಿ ಸಮಾರಂಭ ನಿಮಿತ್ತ ಆಯೋಜಿಸಿದ್ದ ಮಹಿಳಾ ಸಮಾವೇಶದ ಸರ್ವಾಧ್ಯಕ್ಷೀಯ ಭಾಷಣ ಮಾಡಿದ ಅವರು, ಮಹಿಳಾ ಸಂಘಟನೆಗಳನ್ನು ಕಟ್ಟಿಕೊಂಡು ಸಾಮೂಹಿಕ ನೆಲೆಯಲ್ಲಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಹೋರಾಟ ಮಾಡುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಮಹಿಳೆಯರ ಬದುಕಿಗೆ ಮಾರ್ಗದರ್ಶಕ, ಅವರಿಗೆ ಶಕ್ತಿಯಾಗಿ ಬಂದವರು ಗೌತಮ ಬುದ್ಧ. ಅವರು ಮಹಿಳೆಯರ ಸ್ಥಿತಿಗತಿ ಸುಧಾರಿಸಲು ಧಾರ್ಮಿಕ ಸ್ವಾತಂತ್ರ್ಯ ನೀಡಿದರು. ನಂತರ ಇದೇ ನೆಲದಲ್ಲಿ ಬಸವಣ್ಣನವರು ಅನುಭವ ಮಂಟಪದಲ್ಲಿ ಸ್ತ್ರೀಯರಿಗೆ ಸ್ಥಾನಮಾನ ಕಲ್ಪಿಸಿ ಗೌರವಿಸಿದರು. ಡಾ.ಅಂಬೇಡ್ಕರ್ ಅವರು ಮಹಿಳೆಯರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಜತೆಗೆ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಅವಕಾಶಗಳನ್ನು ಸಂವಿಧಾನ ಬದ್ಧವಾಗಿ ನೀಡಿದರು ಎಂದರು.

ಸಂವಿಧಾನ ನೀಡಿದ ಹಕ್ಕಿನಿಂದ ಇಂದು ಅನೇಕ ಮಹಿಳೆಯರು ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಸೇರಿ ಎಲ್ಲ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಪರಿಸ್ಥಿತಿ ಇಂದು ಸ್ವಲ್ಪಮಟ್ಟಿಗೆ ಸುಧಾರಿಸಿದೆ. ಆದರೂ ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಸ್ತ್ರೀಯರು ಶಿಕ್ಷಣದಿಂದ ವಂಚಿತವಾಗಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.



ವಿಜಯವಾಣಿ ಚಿತ್ರ

ಬಸವಕಲ್ಯಾಣ ತಾಲೂಕಿನ ಸಸ್ತಾಪುರನಲ್ಲಿ ಭಾನುವಾರ ಆಯೋಜಿಸಿದ್ದ ಪ್ರಥಮ ಮಹಿಳಾ ಸಮಾವೇಶವನ್ನು ಡಾ.ನೀಲಾಂಬಿಕಾ ಪೊಲೀಸ್‌ಪಾಟೀಲ್ ಉದ್ಘಾಟಿಸಿದರು. ಪೂಜ್ಯ ಮಹಾದೇವಿತಾಯಿ, ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಶ್ರೀ ಪಂಚಾಕ್ಷರಿ ಸ್ವಾಮೀಜಿ, ಶ್ರೀ ರತ್ನಕಾಂತ ಶಿವಯೋಗಿ, ಸರ್ವಾಧ್ಯಕ್ಷೆ ಡಾ.ಜಯದೇವಿ ಗಾಯಕವಾಡ, ಡಾ.ಗವಿಸಿದ್ದಪ್ಪ ಪಾಟೀಲ್, ಸಿದ್ರಾಮಪ್ಪ ಗುದಗೆ ಇದ್ದರು.

ಉದ್ಘಾಟನೆ ನೆರವೇರಿಸಿದ ಸಾಹಿತಿ ಡಾ.ನೀಲಾಂಬಿಕಾ ಪೊಲೀಸ್ ಪಾಟೀಲ್ ಮಾತನಾಡಿ, ಮಹಿಳೆಯರು ಶೈಕ್ಷಣಿಕ ಪ್ರಗತಿಯಲ್ಲಿ ಸಮಾಜದ ಪ್ರಗತಿ ಅಡಗಿದೆ. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪಾಲಕರು ಕಾಳಜಿ ವಹಿಸಬೇಕು. ಮೌಢ್ಯದಿಂದ ಹೊರಬಂದು ವೈಚಾರಿಕ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯ, ಬೇಲೂರಿನ ಶ್ರೀ ಪಂಚಾಕ್ಷರಿ ಸ್ವಾಮೀಜಿ, ಶ್ರೀ ರತ್ನಕಾಂತ ಶಿವಯೋಗಿ, ನಂದಕಲ್ಲಿನ ಫಕೀರಸಾಬ್ ತಾತಾ ಸಾನ್ನಿಧ್ಯ, ತಡೋಳಾ-ಸಸ್ತಾಪುರ ಪೀಠಾಧಿಪತಿ ಪೂಜ್ಯ ಮಹಾದೇವಿತಾಯಿ ನೇತೃತ್ವ ವಹಿಸಿದ್ದರು. ಯರಂಡಗಿಯ ಶಶಿಕಲಾ, ಭಾಗ್ಯವಂತಿ ಕೌಡಿಯಾಳ, ಸಿದ್ರಾಮಪ್ಪ ರಾಜಮಾತೆ ಕೊರಾಳೆ, ಗ್ರಾಪಂ ಅಧ್ಯಕ್ಷ ಬ್ರಹ್ಮಾರಡ್ಡಿ ಕೊಂತಾಮೆ, ಉಪಾಧ್ಯಕ್ಷೆ ವಿಜಯಲಕ್ಷ್ಮೀ, ನಿವೃತ್ತ ಪ್ರಾಚಾರ್ಯ ಎ.ಎಂ. ತಂಬಾಕೆ, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಪ್ರಕಾಶ ಪಾಟೀಲ್ ಇತರರಿದ್ದರು.

ಸಾಹಿತಿ ಡಾ.ಗವಿಸಿದ್ದಪ್ಪ ಪಾಟೀಲ್ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಜಯಕುಮಾರ ರಡಕೆ, ಡಾ.ಪೀರಪ್ಪ ಸಜ್ಜನ ಹಾಗೂ ರಾಜಕುಮಾರ ಮಾಳಗೆ ನಿರೂಪಣೆ ಮಾಡಿದರು. ಸೂರಜ್ ರಾಮಬಾಣ ವಂದಿಸಿದರು. ಕಾರ್ಯಕ್ರಮದಲ್ಲಿ ಮಹಾದೇವಿ ತಾಯಿ ಅವರ ತುಲಾಭಾರ ನಡೆಯಿತು.

ವೈಭವದ ಮೆರವಣಿಗೆ: ಸಸ್ತಾಪುರ ಗ್ರಾಮದ ಪ್ರಮುಖ ರಸ್ತೆಗಳ ಮೂಲಕ ಪೂಜ್ಯ ಲಿಂ.ಯಲ್ಲಾಲಿಂಗೇಶ್ವರರ ಭಾವಚಿತ್ರದೊಂದಿಗೆ ಸಾರೋಟಿನಲ್ಲಿ ಪೂಜ್ಯ ಮಹಾದೇವಿತಾಯಿ, ಸಮಾವೇಶದ ಸರ್ವಾಧ್ಯಕ್ಷೆ ಡಾ.ಜಯದೇವಿ ಗಾಯಕವಾಡ ಅವರ ಮೆರವಣಿಗೆ ಸಾಂಸ್ಕೃತಿಕ ವೈಭವದೊಂದಿಗೆ ಜರುಗಿತು. ವಿಧಾನ ಪರಿಷತ್ ಮಾಜಿ ಸದಸ್ಯ ವಿಜಯಸಿಂಗ್, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ ಚಾಲನೆ ನೀಡಿದರು. ಶಿವಕುಮಾರ ಪಾಟೀಲ್, ಪ್ರತೀಕ ಮುಳೆ, ಭೀಮಾಶಂಕರ ಮುಳೆ, ಮಹಾದೇವರಡ್ಡಿ, ಪ್ರಕಾಶ ಪಾಟೀಲ್, ಡಾ.ಗವಿಸಿದ್ದಪ್ಪ ಪಾಟೀಲ್, ಡಾ.ಶೀಲಾದೇವಿ ಬಿರಾದಾರ್, ಗೌಡಪ್ಪ ಪಾಟೀಲ್, ಆಕಾಶ ತೊಗಣೂರ ಇದ್ದರು. ಗಣರಾಜ್ಯೋತ್ಸವ ನಿಮಿತ್ತ ಧ್ವಜಾರೋಹಣವನ್ನು ಶಿವಕುಮಾರ ಬಿರಾದಾರ್ ನೆರವೇರಿಸಿದರು.

> ಧಾರ್ಮಿಕ ಕಾರ್ಯಕ್ರಮದ ಜತೆಗೆ ಮಹಿಳಾ ಸಮಾವೇಶ ಹಮ್ಮಿಕೊಂಡಿರುವದು ಸ್ವಾಗತಾರ್ಹ. ಇಂಥ ಕಾರ್ಯಕ್ರಮಗಳು ಮಹಿಳೆಯರಲ್ಲಿ ಸ್ಫೂರ್ತಿ ತುಂಬಲು ಸಹಕಾರಿಯಾಗುತ್ತವೆ. ಪ್ರಥಮ ವಚನಕರ್ತಿ ವೈರಾಗ್ಯನಿಧಿ ಅಕ್ಕಮಹಾದೇವಿ ಅವರ ಆದರ್ಶ ಬದುಕು ಇಂದಿನ ಮಹಿಳೆಯರಿಗೆ ಮಾದರಿಯಾಗಬೇಕು.
>
> | ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸಂಸ್ಥಾನ ಗವಿಮಠ

ಸರಸ್ವತಿಪುರದಿಂದ ಸಸ್ತಾಪುರ

ಮೊದಲ ಬಾರಿಗೆ ಅನುಭವ ಮಂಟಪದ ಮೂಲಕ ವಿಶ್ವಕ್ಕೆ ಪ್ರಜಾಪ್ರಭುತ್ವದ ಕಲ್ಪನೆ ನೀಡಿದ ನೆಲ ಕಲ್ಯಾಣ. ಅಂದು ಅನುಭವ ಮಂಟಪದ ಮೂಲಕ ಬಸವಣ್ಣನವರು ಸ್ತ್ರೀ ಸಮಾನತೆ ಕಲ್ಪಿಸಿದ್ದರು ಎಂದು ಹಿರಿಯ ಸಾಹಿತಿ ಡಾ.ನೀಲಾಂಬಿಕಾ ಪೊಲೀಸ್ ಪಾಟೀಲ್ ಹೇಳಿದರು. ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಸ್ತ್ರೀ ಸಮಾಮತೆ ಕಲ್ಪಿಸಿದ್ದ ಬಸವ ಭೂಮಿಯಲ್ಲಿ ಮಹಿಳಾ ಸಮಾವೇಶ ಹಮ್ಮಿಕೊಳ್ಳುವ ಮೂಲಕ ಅವರ ಸಮಸ್ಯೆಗಳನ್ನು ಚರ್ಚಿಸಿ, ಪರಿಹಾರ ಕಂಡುಕೊಳ್ಳಲು ಇದು ಉತ್ತಮ ವೇದಿಕೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಈಗಿನ ಸಸ್ತಾಪುರ ಈ ಹಿಂದೆ ಸರಸ್ವತಿಪುರ ಎಂದು ಕರೆಯಲಾಗುತ್ತಿತ್ತು ಎನ್ನುವುದು ಸಂಶೋಧನೆಯಿಂದ ತಿಳಿದುಬಂದಿದೆ. ಇಲ್ಲಿ ಸಾಹಿತ್ಯದ ಭಂಡಾರವೇ ಇತ್ತು. ಇದಾಗಿದ್ದರಿಂದ ಸರಸ್ವತಿಪುರ ಎಂದು ಕರೆದಿರಬಹುದು. ಕಾಲಾನಂತರ ಹೆಸರು ಬದಲಾಗಿ ಇದೀಗ ಸಸ್ತಾಪುರ ಆಗಿದೆ ಎಂದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಸೋಮವಾರ 27 ಜನವರಿ 2025
27 JANUARY 2025

Scanned with OKEN Scanner

'ದಸರಾ ದರ್ಬಾರ್ ಆಚರಣೆಗೆ ಸಹಕಾರ'

ಪ್ರಜಾವಾಣಿ ವಾರ್ತೆ

ಭಾಲ್ಕಿ: ಪಟ್ಟಣದ ಜಿಲ್ಲಾ ಉಸ್ತುವಾರಿ ಸಚಿವರ ನಿವಾಸದಲ್ಲಿ ಹಾರಕೂಡದ ಚನ್ನವೀರ ಶಿವಾಚಾರ್ಯ ಸಾನ್ನಿಧ್ಯದಲ್ಲಿ ಶುಕ್ರವಾರ ದಸರಾ ಹಬ್ಬದ ಆಚರಣೆ ಪೂರ್ವಭಾವಿ ಸಭೆ ನಡೆಯಿತು. ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರನ್ನು ಸರ್ವಾನುಮತದಿಂದ ದಸರಾ ದರ್ಬಾರ್ ಸ್ವಾಗತ ಸಮಿತಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಬಸವಕಲ್ಯಾಣ ನಗರದಲ್ಲಿ ಸೆ. 22ರಿಂದ ಅ. 2ರವರೆಗೆ ರಂಭಾಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ದಸರಾ ದರ್ಬಾರ್ ಸಮಾರಂಭದ ಜರುಗಲಿದೆ.

ನಂತರ ಹಾರಕೂಡದ ಸ್ವಾಮೀಜಿ ನೇತೃತ್ವದಲ್ಲಿ ಸಚಿವ ಈಶ್ವರ ಖಂಡ್ರೆ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಸಚಿವ ಈಶ್ವರ ಖಂಡ್ರೆ ಮಾತನಾಡಿ, 'ವಿಶ್ವಶಾಂತಿ ಮತ್ತು ಲೋಕ ಕಲ್ಯಾಣಕ್ಕಾಗಿ ಪ್ರತಿವರ್ಷ ರಂಭಾಪುರಿ ಸ್ವಾಮೀಜಿ ರಾಜ್ಯದ ವಿವಿಧೆಡೆ ದಸರಾ ದರ್ಬಾರ್ ಆಚರಿಸಿಕೊಂಡು ಬಂದಿದ್ದಾರೆ. ಈ ಬಾರಿ ಜಿಲ್ಲೆಯ ಬಸವಕಲ್ಯಾಣದಲ್ಲಿ ಆಯೋಜಿಸಿರುವುದು ಸಂತಸ ತರಿಸಿದೆ. ದಸರಾ ದರ್ಬಾರ್ ಅರ್ಥಪೂರ್ಣ ಆಚರಣೆಗೆ ಎಲ್ಲ ರೀತಿಯ ಸಹಾಯ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು.



ಭಾಲ್ಕಿಯ ಜಿಲ್ಲಾ ಉಸ್ತುವಾರಿ ಸಚಿವರ ನಿವಾಸದಲ್ಲಿ ಹಾರಕೂಡ ಚನ್ನವೀರ ಶಿವಾಚಾರ್ಯರ ನೇತೃತ್ವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರನ್ನು ದಸರಾ ದರ್ಬಾರ್ ಸಮಾರಂಭದ ಸ್ವಾಗತ ಸಮಿತಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಸನ್ಮಾನಿಸಲಾಯಿತು

ಬಸವಕಲ್ಯಾಣ ಸಂಸ್ಥಾನ ಗವಿಮಠದ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಸಂಸದ ಸಾಗರ ಖಂಡ್ರೆ, ಬಸವಕಲ್ಯಾಣ ಶಾಸಕ ಶರಣು ಸಲಗರ, ಬಸವೇಶ್ವರ ದೇವಸ್ಥಾನ ವಿಶ್ವಸ್ಥ ಸಮಿತಿ ಅಧ್ಯಕ್ಷ ಶಶಿಕಾಂತ ದುರ್ಗೆ, ಸದ್ಭೋದನಾ ಸಂಸ್ಥೆ ತಾಲ್ಲೂಕು ಘಟಕದ ಅಧ್ಯಕ್ಷ ಬಸವರಾಜ ಸ್ವಾಮಿ, ಮಹಿಳಾ ಘಟಕದ ಅಧ್ಯಕ್ಷೆ ಕಲ್ಪನಾ ಶೀಲವಂತ, ಕಸಾಪ ಅಧ್ಯಕ್ಷ ಶಾಂತಲಿಂಗ ಮಠಪತಿ, ಪ್ರಮುಖರಾದ ರಾಜಕುಮಾರ ಬಿರಾದಾರ, ಮೇಘರಾಜ ನಾಗರಾಳೆ, ಚಂದ್ರಶೇಖರ ಬಿರಾದಾರ, ಸುನಿಲ ಪಾಟೀಲ, ಸೋಮಶೇಖರ ವಸ್ತ್ರದ ಸೇರಿದಂತೆ ಹಲವರು ಹಾಜರಿದ್ದರು.

ಪ್ರಜಾವಾಣಿ ಶನಿವಾರ • ಮಾರ್ಚ್ 1, 2025

ಸರಸ್ವತಿ ಬಹೇನಜಿ ಕರೆ | ಬಸವಕಲ್ಯಾಣದಲ್ಲಿ ಶಿವಲಿಂಗ ಮೆರವಣಿಗೆಗೆ ಚಾಲನೆ

ಶಿವರಾತ್ರಿ ಹಬ್ಬದ ಆಧ್ಯಾತ್ಮಿಕ ಮಹತ್ವ ಅರಿಯಿರಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ದೇಶದಲ್ಲಿ ಆಚರಿಸುವ ಮಹತ್ವದ ಹಬ್ಬಗಳಲ್ಲಿ ಶಿವರಾತ್ರಿ ಹಬ್ಬಕ್ಕೆ ವಿಶೇಷ ಮಹತ್ವ ಪಡೆದುಕೊಂಡಿದ್ದು, ಈ ಹಬ್ಬದವನ್ನು ಎಲ್ಲಡೆ ಭಕ್ತಿ ಶ್ರದ್ಧೆಯಿಂದ ಆಚರಿಸಲಾಗುತ್ತದೆ. ಹಬ್ಬದ ಆಧ್ಯಾತ್ಮಿಕ ಮಹತ್ವವನ್ನು ಅರಿಯುವ ಅವಶ್ಯಕತೆ ಇದೆ ಎಂದು ರಾಜಯೋಗಿನಿಬ್ರಹ್ಮಕುಮಾರಿ ಸರಸ್ವತಿ ಬಹೇನಜಿ ಹೇಳಿದರು.

ಮಹಾ ಶಿವರಾತ್ರಿ ನಿಮಿತ್ತ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸ್ಥಳೀಯ ಕೇಂದ್ರದಿಂದ ಮಂಗಳವಾರ ಆಯೋಜಿಸಿದ್ದ ಶಿವಲಿಂಗ ಮೆರವಣಿಗೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶಿವ ಪರಮಾತ್ಮನ ಸ್ಮರಣೆಯಿಂದ ಎಲ್ಲ ಸಂಕಷ್ಟಗಳಿಂದ ಮುಕ್ತಿ ಹೊಂದಿ ಜೀವನದಲ್ಲಿ ಶಾಂತಿ-ನೆಮ್ಮದಿ ಕಾಣಲು ಸಾಧ್ಯವಿದೆ ಎಂದರು.

ಸಹಾಯಕ ಆಯುಕ್ತ ಮುಕುಲ್ ಜೈನ್ ಮೆರವಣಿಗೆಗೆ ಚಾಲನೆ ನೀಡಿದರು. ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪೂಜ್ಯ ಮಿಲಿಂದ ಗುರೂಜಿ, ಹುಲಸೂರು ತಹಸೀಲ್ದಾರ್ ಶಿವಾನಂದ ಮೇತ್ರೆ, ಸ್ಕೌಟ್ಸ್ ಮತ್ತು ಗೈಡ್ಸ್‌ನ ಕಾರ್ಯದರ್ಶಿ ಅನಿಲ ಶಾಸ್ತ್ರೀ ಬಿಕೆ ಬೀರಪ್ಪ, ಬಿಕೆ ರೇಣುಕಾ ಇತರರಿದ್ದರು.

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಘಟಕದಿಂದ ಸಂಸ್ಥಾಪಕರ ಹುಟ್ಟುಹಬ್ಬ ಮತ್ತು ಚಿಂತನಾ ದಿನಾಚರಣೆ ನಿಮಿತ್ತ ತಾಲೂಕು ಮಟ್ಟದ ರ‍್ಯಾಲಿ ನಡೆಯಿತು.



ವಿಜಯವಾಣಿ ಚಿತ್ರ

ಮಹಾಶಿವರಾತ್ರಿ ನಿಮಿತ್ತ ಬಸವಕಲ್ಯಾಣದಲ್ಲಿ ಶಿವಲಿಂಗದ ಭವ್ಯ ಮೆರವಣಿಗೆಗೆ ಸಹಾಯಕ ಆಯುಕ್ತ ಮುಕುಲ್ ಜೈನ್ ಚಾಲನೆ ನೀಡಿದರು. ರಾಜಯೋಗಿನಿ ಬಿಕೆ ಸರಸ್ವತಿ ಬಹೇನಜಿ, ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶ್ರೀ ಮಿಲಿಂದ ಗುರೂಜಿ, ಹುಲಸೂರು ತಹಸೀಲ್ದಾರ್ ಶಿವಾನಂದ ಮೇತ್ರೆ, ಬಿಕೆ ಬೀರಪ್ಪ ಗುಂಜಟ್ಟಿ, ಅನಿಲ ಶಾಸ್ತ್ರೀ ಇತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ • VIJAYAVANI » KALABURAGI
ಬುಧವಾರ 26 ಫೆಬ್ರವರಿ 2025
26 FEBRUARY 2025

ಬುಧವಾರ 26 ಫೆಬ್ರವರಿ 2025
26 FEBRUARY 2025
ನಂ1 ವಿಜಯವಾಣಿ
• VIJAYAVANI » KALABURAGI

ಗವಿಮಠದಲ್ಲಿಂದು ಸಾಮೂಹಿಕ ಇಷ್ಟಲಿಂಗ ಪೂಜೆ



ಬಸವಕಲ್ಯಾಣ: ತ್ರಿಪುರಾಂತನ ಸಂಸ್ಥಾನ ಗವಿಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್, ಶ್ರೀಮದ್ವೀರಶೈವ ಸದ್ಭೋಧನ ಸಂಸ್ಥೆ ಮತ್ತು ಸಮಸ್ತ ಸದ್ಭಕ್ತರ ಸಹಯೋಗದಲ್ಲಿ ಅಭಿನವ ಶ್ರೀ ಮಹಾಶಿವರಾತ್ರಿ ನಿಮಿತ್ತ ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಬುಧವಾರ ಸಂಜೆ 4ಕ್ಕೆ ಸಾಮೂಹಿಕ ಇಷ್ಟಲಿಂಗ ಪೂಜೆ ಆಯೋಜಿಸಿದ್ದು, ಸದ್ಭಕ್ತರು ಹೆಚ್ಚಿನ ಸಂಖ್ಯೆ ಭಾಗವಹಿಸಬೇಕು ಎಂದು ಕೋರಲಾಗಿದೆ.

Scanned with OKEN Scanner

ಮಲ್ಲಮ್ಮ ನುಡಿ ಮಂಗಳವಾರ 28.01.2025

ಗುರು ಹಿರಿಯರನ್ನು ಪೂಜ್ಯ ಭಾವನೆಯಿಂದ ಕಾಣಿರಿ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ : ಜ.27– ಗುರು ಹಿರಿಯರನ್ನು ಪೂಜ್ಯ ಭಾವನೆಯಿಂದ ಕಾಣಿರಿ ಎಂದು ಯಾದಗಿರಿ ಕಲಬುರ್ಗಿ ಹಾಗೂ ಹುಮನಾಬಾದ ಹಾಗೂ ಇಲ್ಲಿನ ಪರಮಪೂಜ್ಯ ಶ್ರೀ ಶ್ರೀ ಶ್ರೀ ಶ್ರೀ ನಿವಾಸ ಮಹಾಸ್ವಾಮಿಜಿಗಳು ತಿಳಿಸಿದರು. ನಗರದ ಸರ್ವೋದಯಾ ಕಾಲೊನಿಯಲ್ಲಿ ಜಗದ್ಗುರು ಶ್ರೀ ಮೌನೇಶ್ವರ 15 ನೇಯ ಜಾತ್ರಾ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಸಮಾರಂಭ ಬಹು ಉತ್ತಮವಾಗಿ ಹಮ್ಮಿಕೊಂಡಿದ್ದಿರಿ ತಂದೆ ತಾಯಿಗೂ ಸಹ ಉತ್ತಮವಾಗಿ ಕಾಣಿರಿ ನಮಗೆಲ್ಲರಿಗೂ ಮೌನೇಶ್ವರ ಶುಭ ಆಶೀರ್ವಾದ ನಿಡಲಿ ಎಂದು ಶುಭಾ ಹಾರೈಸಿದ್ದರು. ಶಾಹಪೂರದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಕಾಳ ಹಸ್ತೆಂದೃ ಮಹಾಸ್ವಾಮಿಜಿಗಳು. ಮಾತನಾಡಿ ಎಲ್ಲರಿಗೂ ವಳಿತನ್ನು ಮಾಡುವ ಧರ್ಮ ಪಂಚಾಳ ಧರ್ಮ ವಾಗಿದೆ ಈ ಜನಾಂಗ ಕಾಯಕ ಜೀವಿಗಳಾಗಿದ್ದಾರೆ ಎಂದರು. ತಿಪುರಾಂತಿನ ಪೂಜ್ಯ ಶ್ರೀ ಡಾ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ ಮನದ ಮೈಲಿಗೆ ಹೋಗಿಸುವ ಜಾತ್ರೆ ಇದಾಗಿದೆ ಹಿಂದು ಮುಸ್ಲಿಂ ಭಾವ್ಯಕದ ಸಮಾಜವೆ ಪಂಚಾಳ ಜನಾಂಗದ ಎಂದರು. ಬೇಳಗಿ ಪೂಜ್ಯಶ್ರೀ. ಮ.ನಿ.ಪ್ರ. ಶಿವಲಿಂಗೇಶ್ವರ ಮಹಾಸ್ವಾಮಿಜಿ ಮಾತನಾಡಿ ತನಗಾಗಿ ಬದುಕು ಬಾರದು ಸಮಾಜಕ್ಕಾಗಿ ಧರ್ಮ ಕಾಗಿ ಬದುಕಿದರೆ ಆ ಬದುಕು ಶಾಶ್ವತ ಎಂದರು. ಘೇದಿಕೆಯ ಮೇಲೆ ಸಸ್ತಾಪುರ ಬೇಟಬಾಲಕುಂದಾ ಪೂಜ್ಯಶ್ರೀ ಸದಾನಂದ ಅಪ್ಪಗಳ. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ಬಿ ನಾರಾಯಣರಾವ. ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ. ಕಾಂಗ್ರೆಸ್ ಮುಖಂಡರಾದ ಧನರಾಜ ತಾಡಂಪ್ಪಳ್ಳಿ. ಮಾಜಿ ವೆವಸ್ಥಾಪಕ ನಿದರ್ಶಕ ಮಲ್ಲಿಕಾರ್ಜುನಗುಗೆ. ನಗರಸಭೆಯ ಸದಸ್ಯ ನಿರ್ಮಲಾ ಶಿವಣಕರ್ ಮಾತನಾಡಿದರು. ಈ ಸಂದರ್ಭದಲ್ಲಿ ಭಾರತೀಭಾಯಿ ಗುರುತಾಯಿ. ಬೀದರ ವಿಶ್ವಕರ್ಮ ಅಧ್ಯಕ್ಷರಾದ ಮಹೇಶ ಪಂಚಾಳ. ಗುರುನಾಥ ಅರ್ಚಕ. ಬಾಬುರಾವ ಚಿಮಕೋಡ. ಪ್ರವಚನಕಾರ ವೇ/ಮಲ್ಲಿಕಾರ್ಜುನ ಶಾಸ್ತ್ರಿಗಳು ಅಲ್ಲದೆ ಸಮಾಜದ ಅಧ್ಯಕ್ಷರಾದ ಈರಣ್ಣ ಎಸ್. ಪಂಚಾಳ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷರಾದ ಜಯಪ್ರಕಾಶ್ ಎಮ್. ಪೋದ್ದಾರ್. ಸಹ ಕಾರ್ಯದರ್ಶಿ ಲಕ್ಷ್ಮೀ ಕಾಂತ ಪಂಚಾಳ. ಖಜಾಂಚಿ ಜಗನ್ನಾಥ ಬಿ. ಪಂಚಾಳ. ಉಪ ಖಜಾಂಚಿಗಳಾದ ಕ್ರಾಂತಿಕುಮಾರ ಪಂಚಾಳ. ಸದ್ಯಸರಾದ ಸೂರ್ಯಕಾಂತ ಪಂಚಾಳ. ವಿಧ್ಯಾದರ ಪಂಚಾಳ. ಸುಭಾಷ ಪಂಚಾಳ. ವಿಶ್ವನಾಥ ಪಾಂಚಳ. ಶಿವಶಂಕರ ಹರಿಶ್ಚಂದ್ರ ಪಂಚಾಳ. ವಿರಣ್ಣ ಪಂಚಾಳ. ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಸ್ವಾಗತ ಪ್ರಧಾನ ಕಾರ್ಯದರ್ಶಿ ವೈಜನಾಥ ಬಿ. ಪಂಚಾಳ. ರವಿ ಶಂಕರ್ ಪಂಚಾಳ ನಿರೂಪಿಸಿದರು. ಇದಕ್ಕೂ ಮೊದಲು ಸದ್ಗುರು ಮೌನೇಶ್ವರ ಉತ್ಸವ ಮೂರ್ತಿಯ ಪಲ್ಲಕಿ ಮೆರವಣಿಗೆ ಕುಂಬಕಳಸ ದೋದಿಗೆ ಪುರವಂತರ ಸೇವೆಯೊಂದಿಗೆ ನಗರದ ಪ್ರಮುಖ ವೃತ್ತಗಳ ಮುಖಾಂತರ ದೇವಸ್ಥಾನಕ್ಕೆ ಬಂದು ತಲುಪಿತು.

Scanned with OKEN Scanner

ಕಲ್ಯಾಣದಲ್ಲಿ ಬಸವ ರಥಯಾತ್ರೆಗೆ ಸ್ವಾಗತ



ಭಾರತೀಯ ಸಂಸ್ಕೃತಿ ಉತ್ಸವ ನಿಮಿತ್ತ ಬಸವ ರಥಯಾತ್ರೆಗೆ ಬಸವಕಲ್ಯಾಣದ ಶ್ರೀ ಬಸವೇಶ್ವರ ದೇವಸ್ಥಾನದ ಬಳಿ ಸ್ವಾಗತಿಸಲಾಯಿತು. ಶ್ರೀ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಪ್ರಮುಖರಾದ ಬಸವರಾಜ ಕೋರಕೆ, ಮಲ್ಲಿಕಾರ್ಜುನ ಚಿರಡೆ, ಶ್ರೀಕಾಂತ ಬಡದಾಳೆ, ಜಗನ್ನಾಥ ಪತಂಗೆ, ಪ್ರಕಾಶ ಬಿರಾದಾರ ಇತರರಿದ್ದರು.

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಶ್ರೀ ಕೊತ್ತಲ ಬಸವೇಶ್ವರ ಭಾರತಿಯ ಶಿಕ್ಷಣ ಸಮಿತಿ ಹಾಗೂ ವಿಕಾಸ ಅಕಾಡೆಮಿ ಕಲಬುರಗಿ ಮತ್ತು ಭಾರತ ವಿಕಾಸ ಸಂಗಮ ನೇತೃತ್ವದಲ್ಲಿ ನಡೆಯಲಿರುವ 7ನೇ ಭಾರತೀಯ ಸಂಸ್ಕೃತಿ ಉತ್ಸವದ ಪ್ರಚಾರದ ನಿಮಿತ್ತ ಬೀದರ್ ಜಿಲ್ಲೆಯಿಂದ ನಗರಕ್ಕೆ ಆಗಮಿಸಿದ ಉತ್ಸವದ ಬಸವ ರಥಯಾತ್ರೆಗೆ ಅದ್ದೂರಿಯಾಗಿ ಸ್ವಾಗತಿಸಲಾಯಿತು

ಶ್ರೀ ಬಸವೇಶ್ವರ ದೇವಸ್ಥಾನದ ಹತ್ತಿರ ರಥಕ್ಕೆ ಪೂಜೆ ಸಲ್ಲಿಸಿದ ಶ್ರೀ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, 29ರಿಂದ ಫೆ.6ರವರೆಗೆ ನೇಡಂನಲ್ಲಿ ನಡೆಯಲಿರುವ ಭಾರತೀಯ ಸಂಸ್ಕೃತಿ ಉತ್ಸವಕ್ಕೆ ಸಾರ್ವಜನಿಕರು ಆಗಮಿಸಿ ಕಾರ್ಯಕ್ರಮದ ಸದುಪಯೋಗ ಮಾಡಿಕೊಳ್ಳಬೇಕು ಎಂದು ಹೇಳಿದರು.

ಬಿಡಿಪಿಸಿ ಅಧ್ಯಕ್ಷ ಬಸವರಾಜ ಕೋರಕೆ ನಗರದಲ್ಲಿ ಪ್ರಚಾರ ರಥ ಸಂಚಾರಕ್ಕೆ ಚಾಲನೆ ನೀಡಿದರು. ಉಪಾಧ್ಯಕ್ಷ ಮಲ್ಲಿಕಾರ್ಜುನ ಚಿರಡೆ, ಕಾರ್ಯದರ್ಶಿ ಶ್ರೀಕಾಂತ ಬಡದಾಳೆ, ಪ್ರಮುಖರಾದ ಜಗನ್ನಾಥ ಪತಂಗೆ, ಸೂರ್ಯಕಾಂತ ಶೀಲವಂತ, ರಮೇಶ ಧಬಾಲೆ, ಸುನಿಲ್ ಮದಕಟ್ಟಿ, ಶಿವರಾಜ ತಾಟೆ, ಭೀಮಣ್ಣ ಮೈನಾಳೆ, ರಾಜಪ್ಪ ಬಿರಾದಾರ್, ಬಸವರಾಜ ಅಷ್ಟಗಿ, ರಾಜು ಮಮ್ಮಾ, ರಾಜಶೇಖರ ಶೇರಿಕಾರ ಹಾಗೂ ಶಾಲೆ ಮಕ್ಕಳು ಭಾಗವಹಿಸಿದ್ದರು. ಪ್ರಕಾಶ ಬಿರಾದಾರ ಸ್ವಾಗಸಿದರು. ಸಂಗಮೇಶ ತೊಗರಿಖೇಡೆ ನಿರೂಪಣೆ ಮಾಡಿದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಭಾನುವಾರ 26 ಜನವರಿ 2025
26 JANUARY 2025

ಸ್ವಾಗತ ಸಮಿತಿಗೆ ಸಚಿವ ಖಂಡ್ರೆ ಅಧ್ಯಕ್ಷ

ಸಪ್ಟೆಂಬರ್‌ನಲ್ಲಿ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್



ಬಸವಕಲ್ಯಾಣದಲ್ಲಿ ನಡೆಯುವ ಶ್ರೀಮದ್ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್ ಸ್ವಾಗತ ಸಮಿತಿ ಅಧ್ಯಕ್ಷರಾಗಿ ನೇಮಿಸಿದ ನೇಮಕಾತಿ ಪತ್ರವನ್ನು ಅರಣ್ಯ ಸಚಿವ ಈಶ್ವರ ಖಂಡ್ರೆಯವರಿಗೆ ಸಲ್ಲಿಸಲಾಯಿತು.

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಬಸವಕಲ್ಯಾಣದಲ್ಲಿ ಮುಂಬರುವ ಸೆಪ್ಟೆಂಬರ್ 22ರಿಂದ ಅಕ್ಟೋಬರ್ 2ರವರೆಗೆ ಶ್ರೀಮದ್ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್ ಕಾರ್ಯಕ್ರಮದ ಪೂರ್ವಭಾವಿ ಸಭೆ ಭಾಲ್ಕಿಯಲ್ಲಿ ನಡೆಯಿತು.

ಭಾಲ್ಕಿಯ ಖಂಡ್ರೆ ಪರಿವಾರದ ನಿವಾಸದಲ್ಲಿ ಹಾರಕೂಡ ಡಾ.ಚನ್ನವೀರ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ನಡೆದ ಈ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರನ್ನು ಸ್ವಾಗತ ಸಮಿತಿ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ನೇಮಕಾತಿ ಪತ್ರ ಸ್ವೀಕರಿಸಿದ ಸಚಿವ ಖಂಡ್ರೆ ಮಾತನಾಡಿ, ಲೋಕ ಕಲ್ಯಾಣಕ್ಕಾಗಿ ಶ್ರೀಮದ್ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್ ಜಿಲ್ಲೆಯಲ್ಲಿ ಪ್ರಥಮ ಬಾರಿ ನಡೆಯುತ್ತಿರುವುದು ಇತಿಹಾಸಕ್ಕೆ ಸಾಕ್ಷಿಯಾಗಲಿದೆ. ಜಗದ್ಗುರು ಮಹಾಸನ್ನಿಧಿಗಳ ಹಾಗೂ ಪೂಜ್ಯರ ಸಲಹೆಯಂತೆ . ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಎಲ್ಲ ರೀತಿಯ ಸಹಾಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಬಸವಕಲ್ಯಾಣದ ಸಂಸ್ಥಾನ ಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಶಾಸಕ ಶರಣು ಸಲಗರ ಮಾತನಾಡಿದರು.

ಸಂಸದ ಸಾಗರ್ ಖಂಡ್ರೆ, ಬಸವೇಶ್ವರ ದೇವಸ್ಥಾನ ವಿಶ್ವಸ್ಥ ಸಮಿತಿ ಅಧ್ಯಕ್ಷ ಶಶಿಕಾಂತ ದು ರ್ಗೆ, ಬಸವರಾಜ ಸ್ವಾಮಿ ತ್ರಿಪುರಾಂತ, ಕಲ್ಪನಾ ಶೀಲವಂತ, ಶಾಂತಲಿಂಗ ಮಠಪತಿ, ರಾಜಕುಮಾರ ಬಿರಾದಾರ ಸಿರಗಾಪೂರ, ಮೇಘರಾಜ ನಾಗರಾಳೆ ಹಾರಕೂಡ, ಚಂದ್ರಶೇಖರ ಬಿರಾದಾರ, ಸುನೀಲ ಪಾಟೀಲ, ಸೋಮಶೇಖರ ವಸ್ತ್ರದ, ಎ.ಜಿ.ಪಾಟೀಲ, ಪ್ರಭು ಪಾಟೀಲ, ಮಲ್ಲಿಕಾರ್ಜುನ ನಂದಿ, ರಾಮಚಂದ್ರ ಹುಡುಗೆ, ಇಂದ್ರಸೇನ ಬಿರಾದಾರ, ರಮೇಶ ರಾಜೋಳೆ, ವೀರಣ್ಣ ಶೀಲವಂತ, ಪ್ರೊ.ದಯಾನಂದ ಶೀಲವಂತ, ಪ್ರೊ.ಸೂರ್ಯಕಾಂತ ಶೀಲವಂತ, ಪ್ರೊ. ರುದ್ರೇಶ್ವರ ಗೋರ್ಟಾ, ಡಾ. ರಾಚಯ್ಯ ಮಠಪತಿ, ಪ್ರೊ. ಬಸವರಾಜ ಸೇರಿ, ದಿಲೀಪಕುಮಾರ ಸ್ವಾಮಿ, ಸಿದ್ರಾಮ ಕವಳೆ, ಶರಣು ಪವಾಡಶೆಟ್ಟಿ ಸಭೆಯಲ್ಲಿದ್ದರು.

ವಿಜಯ ಕರ್ನಾಟಕ
ನಮ್ಮ ಬೀದರ್ ಶನಿವಾರ,1 ಮಾರ್ಚ್ 2025

Scanned with OKEN Scanner

'ನೆಮ್ಮದಿಯ ಬದುಕಿಗೆ ಗುರುವಿನ ಕೃಪಾಶಿರ್ವಾದ ಅವಶ್ಯಕ'

ಸಂ.ಕ.ಸಮಾಚಾರ ಬಸವಕಲ್ಯಾಣ

ಭಾರತೀಯ ಸಂಸ್ಕೃತಿ, ಪರಂಪರೆಯಲ್ಲಿ ಗುರುವಿಗೆ ಶ್ರೇಷ್ಠ ಸ್ಥಾನವಿದ್ದು, ಶಾಂತಿ, ನೆಮ್ಮದಿಯ ಬದುಕಿಗಾಗಿ ಗುರುವಿನ ಕೃಪಾಶಿರ್ವಾದ ಅತ್ಯವಶ್ಯಕವಾಗಿದೆ ಎಂದು ತ್ರಿಪುರಾಂತ ಗವಿಮಠದ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಶ್ರೀ ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠ ಟ್ರಸ್ಟ್ ಹಾಗೂ ಕಲ್ಯಾಣ ನಾಡು ಗ್ರಾಮೀಣ ಜನಪದ ಕಲಾ ಸಂಘದ ಆಶ್ರಯದಲ್ಲಿ ಗುರುಪೂರ್ಣಿಮೆ ನಿಮಿತ್ತ ಗವಿಮಠದಲ್ಲಿ ಆಯೋಜಿಸಲಾಗಿದ್ದ ಗುರುವಂದನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ, ಆರಾಧಿಸುವ ಗುರುವಿಗೆ ಗೌರವಿಸಿ, ಕೃತಜ್ಞತೆ ಸಲ್ಲಿಸುವುದೇ ಗುರು ಪೂರ್ಣಿಮೆ ಆಚರಣೆಯ ಹಿಂದಿನ ಆಶಯವಾಗಿದೆ ಎಂದರು.

ನಗರಸಭೆ ಪೌರಾಯುಕ್ತ ರಾಜು ಡಿ.ಬಣಕಾರ ಮಾತನಾಡಿ, ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವ ಶಕ್ತಿ ಗುರುವಿನಲ್ಲಿದೆ. ಜೀವನದಲ್ಲಿ ಸನ್ಮಾರ್ಗ ತೋರುವ ಗುರುವಿಗೆ ಗೌರವಿಸುವ ಕಾರ್ಯ ಎಲ್ಲರಿಂದ ನಡೆಯಬೇಕು ಎಂದು ಸಲಹೆ



ಬಸವಕಲ್ಯಾಣ ಗವಿಮಠದಲ್ಲಿ ಆಯೋಜಿಸಲಾಗಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಪಾದಪೂಜೆ ನೆರವೇರಿಸಲಾಯಿತು

ನೀಡಿದರು.ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ವಿರಶೆಟ್ಟಿ ಮಲಶೆಟ್ಟಿ ಮಾತನಾಡಿ, ವಿಶ್ವಕ್ಕೆ ಸಂಸ್ಕೃತಿ, ಪರಂಪರೆ ಪರಿಚಯಿಸಿದ ನಮ್ಮ ಭಾರತ ದೇಶದಲ್ಲಿ ಗುರುವಿಗೆ ಶ್ರೇಷ್ಠ ಸ್ಥಾನವಿದೆ ಎಂದರು. ತಹಸೀಲ್ದಾರ ಡಾ.ದತ್ತಾತ್ರೇಯ ಗಾದಾ, ನಿವೃತ್ತ ನ್ಯಾಯಾಧೀಶ ಸುಭಾಷಚಂದ್ರ ನಾಗರಾಳೆ ಮಾತನಾಡಿದರು. ಸಂಘದ ಅಧ್ಯಕ್ಷ ದಿಲೀಪ ದೇಸಾಯಿ, ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ, ಪ್ರಮುಖರಾದ ದಯಾನಂದ ಶೀಲವಂತ, ಸೂರ್ಯಕಾಂತ ಶೀಲವಂತ, ಮಲ್ಲಿಕಾರ್ಜುನ ಅಲಗುಡೆ, ಸೂರ್ಯಕಾಂತ ಬಿರಾದಾರ, ಶರಣಪ್ಪ ಜಮಾದಾರ, ವಿಠ್ಠಲ್ ದೋಮೆ ಎಕಲೂರ, ಬಸವರಾಜ ಕಣಜೆ ಮುಡಬಿ, ರಾಜಪ್ಪಾ ಹಲಿಂಗೆ ಬೇಲೂರ, ಶಾಮಸುಂದರ ಗುಂಡೂರೆ, ಸುಭಾಷ ಮಂಠಾಳೆ ಉಪಸ್ಥಿತರಿದ್ದರು. ವಿಠ್ಠಲರೆಡ್ಡಿ ನಿರೂಪಿಸಿ, ವಂದಿಸಿದರು. ಸಿದ್ದು ಉಳ್ಳೆ ದಂಪತಿಗಳಿಂದ ಗುರುಗಳ ಪಾದಪೂಜೆ ಜರುಗಿತು. ಶ್ರೀ ಪಂಚಯ್ಯಾ ಸ್ವಾಮಿ ಗೋರ್ಟಾ ಅವರು ಪೂಜೆ ನಡೆಸಿಕೊಟ್ಟರು. ಕಲ್ಯಾಣ ನಾಡು ಗ್ರಾಮೀಣ ಜನಪದ ಕಲಾ ಸಂಘದಿಂದ ತತ್ವಪದ, ಭಜನೆ ಸೇರಿ ಸಂಗೀತ ಕಾರ್ಯಕ್ರಮ ಜರುಗಿತು.

ಶುಕ್ರವಾರ 11 ಜುಲೈ 2025
ಕಲಬುರಗಿ | KALABURAGI

Scanned with OKEN Scanner

ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಹೇಳಿಕೆ

'ನಿಸ್ವಾರ್ಥ ಸೇವೆಗೆ ಜನಮನ್ನಣೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ನಿಸ್ವಾರ್ಥ ಸೇವೆಗೆ ಜನಮನ್ನಣೆ ಅಗತ್ಯವಾಗಿದೆ. ಸಮಾಜ ಕಾರ್ಯಕರ್ತರು ಹಾಗೂ ಪತ್ರಕರ್ತರು ಯಾವುದೇ ಫಲಾಪೇಕ್ಷೆ ಇಲ್ಲದೆ ಶ್ರಮಿಸುತ್ತಾರೆ. ಅಂಥವರ ಬಗ್ಗೆ ಗೌರವ ತೋರುವುದು ಎಲ್ಲರ ಕರ್ತವ್ಯ' ಎಂದು ತ್ರಿಪುರಾಂತ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದ್ದಾರೆ.

ನಗರದ ಪಂಚಾಯತರಾಜ್ ಪದವಿ ಕಾಲೇಜಿನಲ್ಲಿ ಶನಿವಾರ ನಡೆದ ಪ್ರತಿಭಾ ಪುರಸ್ಕಾರ, ಪತ್ರಿಕಾ ದಿನಾಚರಣೆ ಹಾಗೂ ಸಾಧಕರ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಾಮಾಜಿಕ ನ್ಯಾಯಕ್ಕಾಗಿ ಹಲವಾರು ಜನರು ಶ್ರಮಿಸುತ್ತಾರೆ. ಪತ್ರಿಕಾರಂಗವೂ ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿ ಕಾರ್ಯನಿರ್ವಹಿಸುತ್ತದೆ. ಸಮಾಜದ ಅಂಕುಡೊಂಕು ತಿದ್ದಿದಾಗ ಮಾತ್ರ ಸರ್ವಾಂಗೀಣ ಪ್ರಗತಿ ಸಾಧ್ಯ' ಎಂದರು.



ಬಸವಕಲ್ಯಾಣದ ಪಂಚಾಯತ್‌ರಾಜ್ ಪದವಿ ಕಾಲೇಜಿನಲ್ಲಿ ಶನಿವಾರ ನಡೆದ ಪ್ರತಿಭಾ ಪುರಸ್ಕಾರ, ಸಾಧಕರ ಸನ್ಮಾನ ಮತ್ತು ಪತ್ರಿಕಾ ದಿನಾಚರಣೆಯಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು

ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ದಿಲೀಪಕುಮಾರ ಉತ್ತಮ ಮಾತನಾಡಿ, 'ಸತತ ಶ್ರಮದಿಂದ ವಿದ್ಯಾಭ್ಯಾಸಗೈದರೆ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದು ಉತ್ತೀರ್ಣ ಆಗಬಹುದು. ಲೋಕದ ಜ್ಞಾನ ಪಡೆದುಕೊಳ್ಳುವುದಕ್ಕಾಗಿ ಪತ್ರಿಕೆಗಳನ್ನು ಓದುವ ಅಭ್ಯಾಸ ಬೆಳೆಸಿಕೊಳ್ಳಬೇಕು' ಎಂದರು.

ವಿವಿಧ ಕ್ಷೇತ್ರದ ಸಾಧಕರ ಸನ್ಮಾನ

ಕಾರ್ಯಕ್ರಮದಲ್ಲಿ ಪಂಚಾಯತರಾಜ್ ಪ್ರೌಢಶಾಲೆ ಮತ್ತು ಕಾಲೇಜಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ತಾಲ್ಲೂಕಿನ ಪತ್ರಕರ್ತರ, ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು. ಸಂಸ್ಥೆ ಅಧ್ಯಕ್ಷ ಸಿದ್ಧಾರ್ಥ ಬಾವಿದೊಡ್ಡಿ ಎಲ್ಲರಿಗೂ ಪ್ರಮಾಣಪತ್ರ ವಿತರಿಸಿದರು.

ಉಪನ್ಯಾಸಕ ನರಸಿಂಗರೆಡ್ಡಿ ಗದ್ದೆಗಾಂವ ಮಾತನಾಡಿ, 'ಜಗತ್ತಿನಲ್ಲಿ ಎಲ್ಲದರಲ್ಲೂ ಸ್ಪರ್ಧೆ ಇದ್ದು ಅದಕ್ಕೆ ಹೊಂದಿಕೊಂಡು ಕೆಲಸ ನಿರ್ವಹಿಸಬೇಕು. ಕಠಿಣ ಪರಿಶ್ರಮ ಅಗತ್ಯ. ಪತ್ರಿಕೆಗಳಿಂದ ವಿವಿಧ ಸಮಸ್ಯೆಗಳು ಬಗೆಹರಿಯುತ್ತವೆ' ಎಂದರು.

ಸಂಸ್ಥೆ ಅಧ್ಯಕ್ಷ ಸಿದ್ಧಾರ್ಥ ಬಾವಿದೊಡ್ಡಿ, ಮುಖಂಡ ಆಕಾಶ ಖಂಡಾಳೆ, ಪತ್ರಕರ್ತ ಕಲ್ಯಾಣರಾವ್ ಮದರಗಾಂವಕರ್, ಡಾ.ಬಸವರಾಜ ಸ್ವಾಮಿ, ಮಹಾದೇವ ಪೂಜಾರಿ, ಹಣಮಂತ ಕೋಟೆ, ಲಕ್ಷ್ಮಿ ಪೋಪಟೆ ಮತ್ತಿತರರು ಮಾತನಾಡಿದರು.

ನಿರ್ಗುಡಿ ಭಾಗ್ಯವಂತಿ ಮಾತಾಜಿ, ಪಾರ್ವತಿ ಮಹಿಳಾ ಮಂಡಳದ ಅಧ್ಯಕ್ಷೆ ಆಶಾರಾಣಿ ಸಂಗಶೆಟ್ಟಿ ಬಾವಿದೊಡ್ಡಿ, ಪತ್ರಕರ್ತ ಉದಯಕುಮಾರ ಮುಳೆ, ಪ್ರದೀಪ ವಿಸಾಜಿ, ವೀರಶೆಟ್ಟಿ ಮಲಶೆಟ್ಟಿ, ಮಲ್ಲಿಕಾರ್ಜುನ ಬಂಡೆ, ಡಿ.ಕೆ. ಪ್ರಹ್ಲಾದ್, ಮಹಾಲೇಶ, ಉಪನ್ಯಾಸಕರಾದ ರೇಣುಕಾ, ಸುನಿತಾ, ದೇವಿಕಾ, ಮಾಯಾ, ಚಾಂದಸಾಬ, ಪ್ರೀತಿ ಉಪಸ್ಥಿತರಿದ್ದರು.

ಭಾನುವಾರ • ಜುಲೈ 20, 2025
ಪ್ರಜಾವಾಣಿ

Scanned with OKEN Scanner

ಗವಿ ಮಠದಲ್ಲಿ ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ, ಧರ್ಮ ಸಭೆಯಲ್ಲಿ ರಂಭಾಪುರಿ ಜಗದ್ಗುರು ಅಭಿಪ್ರಾಯ

ಧಾರ್ಮಿಕ ತತ್ವಗಳೇ ಜೀವನಕ್ಕೆ ಸಂಜೀವಿನಿ

ಅನುಷ್ಠಾನ ಮಂದಿರ ಕಟ್ಟುವ ಗುರಿ

■ ವಿಕ ಸುದ್ದಿಲೋಕ ಬನವಕಲ್ಯಾಣ

ಮನುಷ್ಯ ಯಂತ್ರದಂತೆ ದುಡಿಯುತ್ತಿದ್ದರೂ, ಭೌತಿಕವಾಗಿ ಸಂಪತ್ತು, ಅಧಿಕಾರ, ಆಂತಸ್ತು ಪಡೆದರೂ ಜೀವನದಲ್ಲಿ ಇರಬೇಕಾದಷ್ಟು ಶಾಂತಿ, ನೆಮ್ಮದಿಯಿಲ್ಲ. ವ್ಯಕ್ತಿತ್ವ ವಿಕಾಸಕ್ಕೆ ಸಂಸ್ಕಾರ, ಸಂಸ್ಕೃತಿಗಳ ಅವಶ್ಯಕತೆಯಿದೆ. ದೇಹದ ಸಂರಕ್ಷಣೆಗಾಗಿ ಜೀವನ ಸತ್ವಗಳ ಅವಶ್ಯಕತೆ ಇರುವಂತೆ ಆತ್ಮ ಸಂತೋಷಕ್ಕೆಗೆ ಧಾರ್ಮಿಕ ತತ್ವಗಳೇ ಜೀವನ ಸಂಜೀವಿನಿಯಾಗಿವೆ ಎಂದು ಬಾಳೆಹೊನ್ನೂರಿನ ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ತಿಳಿಸಿದರು.

ಇಲ್ಲಿಯ ತ್ರೀಪುರಾಂತಕ ಸಂಸ್ಥಾನ ಗವಿಮಠದಲ್ಲಿ ಶನಿವಾರ ಜರುಗಿದ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಸಭೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಭೂಮಿ ಆಗಸಗಳ ಅಂತರ ಕಡಿಮೆಯಾಗುತ್ತಿದ್ದರೂ ಮನುಷ್ಯರ ನಡುವಣ ಅಂತರ ಹೆಚ್ಚುತ್ತಲೇಯಿದೆ. ಜ್ಞಾನ, ವಿಜ್ಞಾನಗಳು ಬೆಳೆಯುತ್ತಿದ್ದರೂ ಜನರಲ್ಲಿ ವಿಶ್ವಾಸ, ನಂಬಿಕೆ, ವಾತ್ಸಲ್ಯದ ಕೊರತೆ ಕಾಣುತ್ತಿದೆ. ಶಿವಾದ್ವೈತ ಜ್ಞಾನ ಸಂಪಾದನೆಯಿಂದ ಬದುಕು ಶ್ರೀಮಂತಗೊಳ್ಳುತ್ತದೆ.

ಶ್ರದ್ಧೆ ಉದ್ಯೋಗಶೀಲತೆ, ನಿರ್ಭಯತೆ, ಸಾತ್ವಿಕತೆ, ಅಹಿಂಸೆ, ದಯೆ, ಕ್ಷಮಾ ಸದ್ಗುಣಗಳನ್ನು ಬದುಕಿನಲ್ಲಿ ಆಳವಡಿಸಿಕೊಂಡು ಬಾಳಬೇಕೆಂದು ಜಗದ್ಗುರು ರೇಣುಕಾಚಾರ್ಯರು ಉಜ್ವಲ ಬದುಕಿಗೆ ಕೊಟ್ಟ ಕೊಡುಗೆ ಆಪಾರವಾದ್ದದ್ದು ಎಂದರು.

ಸಾನ್ನಿಧ್ಯ ವಹಿಸಿದ ಹಿಮವತ್ಕೇದಾರ ಜಗದ್ಗುರು ಭೀಮಾಶಂಕರ ಜಗದ್ಗುರುಗಳು ಮಾತನಾಡಿ, ಜೀವ ಶಿವನಾ ಗಲು ಭವಿ ಭಕ್ತನಾಗಲು ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ತತ್ವ ಸಿದ್ಧಾಂತಗಳು ಅಡಿಪಾಯವಾಗಿವೆ. ನೆಮ್ಮದಿ, ಶಾಂತಿಯ ಬದುಕಿಗೆ ಭಗವಂ



ಬನವಕಲ್ಯಾಣದ ತ್ರೀಪುರಾಂತನ ಸಂಸ್ಥಾನ ಗವಿಮಠದಲ್ಲಿ ಶನಿವಾರ ಜರುಗಿದ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಸಭೆಯನ್ನು ರಂಭಾಪುರಿ ಜಗದ್ಗುರು ಡಾ.ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಹಾಗೂ ಹಿಮವತ್ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು.



ಬನವಕಲ್ಯಾಣದಲ್ಲಿ ಶನಿವಾರ ನಡೆದ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಸಭೆಯಲ್ಲಿ ಪಾಲ್ಗೊಂಡು ಜನರು.

ಸಲಗರಗ ಸಚಿವ ಸ್ಥಾನ ಸಿಗಲಿ

ಶಾಸಕ ಶರಣು ಸಲಗರ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ದೊರೆತು ಕಲ್ಯಾಣದ ಹೆಚ್ಚಿನ ಪ್ರಗತಿಗೆ ಅನುಕೂಲವಾಗಲಿ ಎಂದು ರಂಭಾಪುರಿ ಜಗದ್ಗುರುಗಳು ಅಭಿಪ್ರಾಯಪಟ್ಟರು. ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಅವರು ರಾಜಕೀಯವಾಗಿ ಹೆಚ್ಚು ಬೆಳೆಯಲಿ ಎಂದು ಹಾರೈಸಿದರು.

ಗವಿಮಠ ಸಂಪನ್ಮೂಲ ಯಥಾಸ್ಥಿತಿಯಲ್ಲಿ ಸಂರಕ್ಷಿಸಿ

ಬನವಕಲ್ಯಾಣ ಕ್ಷೇತ್ರ ಪ್ರಗತಿ ಆಗಬೇಕು ಎಂದು ಸರಕಾರ ಬನವಕಲ್ಯಾಣ ಅಭಿವೃದ್ಧಿ ಮಂಡಳಿ ರಚನೆ ಮಾಡಿದೆ. ಜೊತೆಗೆ ಬೇಕಾದಷ್ಟು ಸಂಪನ್ಮೂಲಗಳನ್ನ ಕೊಡುತ್ತಿರುವದು ಸಂತೋಷದ ಸಂಗತಿ. ಈ ಕ್ಷೇತ್ರ ವ್ಯಾಪಕವಾಗಿ ಬೆಳೆಯಲಿ, ಬಕೆಡಿಸಿ ತಪೋ ತಾಣವಾಗಿರುವ ಗವಿಮಠದ ಪುನರನುತ್ಥಾನಕ್ಕೆ ಗಮನ ಹರಿಸಬೇಕು ಎಂದು ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಸಲಹೆ ನೀಡಿದರು. ಅತ್ಯಂತ ಪ್ರಾಚೀನವಾದ ಗವಿ ಮಠದ ಸಂಪನ್ಮೂಲವನ್ನು ಯಥಾರೀತಿ ಸಂರಕ್ಷಿಸಿಕೊಂಡು ಬರುವ ನಿಟ್ಟಿನಲ್ಲಿ ಶಾಸಕರು, ಭಕ್ತರು ವಿಶೇಷ ಗಮನ ಹರಿಸಬೇಕು. ಲೋಕಕ್ಕೆ ಬೆಳಕನ್ನು ನೀಡಿದ ರುದ್ರಮುನಿ ಶಿವಾಚಾರ್ಯರ ತಪೋತಾಣ ಈಗ ಸಾಕಷ್ಟು ಪ್ರಗತಿಯಾಗಿದೆ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ವಯಸ್ಸಿನಲ್ಲಿ ಕಿರಿಯರಾದರೂ ಹಿರಿಯ ಸಾಧನೆ ಮಾಡಿದ್ದಾರೆ ಎಂದರು.

ಐತಿಹಾಸಿಕ ಬನವಕಲ್ಯಾಣದಲ್ಲಿ ಶರನ್ನವರಾತ್ರಿ ದಸರಾ ನಡೆಯಬೇಕು ಎನ್ನುವ ಆಶಯವಿದೆ. ಇದರಿಂದ ಧಾರ್ಮಿಕ ಸಂಸ್ಕೃತಿ ಪುನರುತ್ಥಾನಗೊಳ್ಳಲು ಧದ್ರವಾದ ಅಡಿಪಾಯವಾಗಲಿದೆ. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಅಧರ್ಮದ ವಿರುದ್ಧ ಧರ್ಮದ ದಂಡ ಯಾತ್ರೆ ಬಗ್ಗೆ ಮುನ್ಸೂಚನೆ ಕೇದಾರ ಜಗದ್ಗುರುಗಳು ನೀಡಿದ್ದಾರೆ. ಇದನ್ನು ತಾವು ಸ್ವಾಗತಿಸುವುದಾಗಿ ತಿಳಿಸಿದರು.

ಕಲ್ಯಾಣದಿಂದಲೇ ಧರ್ಮ ದಂಡಯಾತ್ರೆ

ಧರ್ಮದ ಪ್ರಚಾರ- ಪ್ರಸಾರಕ್ಕಾಗಿ ರಂಭಾಪುರಿ ಜಗದ್ಗುರುಗಳು ಹಾಗೂ ಕೇದಾರ ಜಗದ್ಗುರುಗಳು ಧರ್ಮ ದಂಡಯಾತ್ರೆಗೆ ವೇದಿಕೆ ಸಿದ್ಧಪಡಿಸಲು ಚಿಂತನೆ ನಡೆದಿದೆ. ತಪೋತಾಣವಾಗಿರುವ ಗವಿ ಮಕದಿಂದಲೇ ಧರ್ಮಯಾತ್ರೆ ಆರಂಭಿಸುವ ಕುರಿತು ಉಭಯ ಜಗದ್ಗುರುಗಳು ಘೋಷಣೆ

■ ವಿಕ ಸುದ್ದಿಲೋಕ ಬನವಕಲ್ಯಾಣ

ಜಗದ್ಗುರು ರೇಣುಕಾಚಾರ್ಯರು ತೋರಿದ ದಾರಿಯಲ್ಲಿ ಸಾಗಿದರೆ ಮನುಷ್ಯನ ಜೀವನದಲ್ಲಿ ಸುಖ, ಶಾಂತಿ, ನೆಮ್ಮದಿಯ ಜೊತೆಗೆ ಸಂತೃಪ್ತಿ ಲಭಿಸಲು ಸಾಧ್ಯವಾಗುತ್ತದೆ ಎಂದು ತಡೋಳಾದ ರಾಜೇಂದ್ರರ ಹೇಳಿದರು.

ನಗರದ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಸಂಸ್ಥಾನ ಗವಿ ಮಠದಲ್ಲಿ ಶನಿವಾರ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಸಭೆಯಲ್ಲಿ ಮಾತನಾಡಿದರು.

ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯರು ಕಾಲ ಜ್ಞಾನದ ವಾಣಿ ಬರೆದಿದ್ದಾರೆ. ಆ ಮಾತುಗಳು ಈಗ ಸತ್ಯವಾಗುತ್ತಿವೆ. ಬನವಕಲ್ಯಾಣದಲ್ಲಿ ರಾಜ್ಯ ಸರಕಾರ ನೂತನ ಅನುಭವ ಮಂಟಪ ನಿರ್ಮಿಸಲು ಮುಂದಾಗಿದೆ. ಆದರೆ ಗವಿಮಠದ 25 ಎಕರೆ ಸ್ಥಳ ಉಳಿಸುವ ನಿಟ್ಟಿನಲ್ಲಿ ರಂಭಾಪುರಿ ಜಗದ್ಗುರುಗಳ ಆಶೀರ್ವಾದ ಶಾಸಕ ಶರಣು ಸಲಗರ ಅವರಿಗೆ ಸಿಕ್ಕಿದೆ. ಈ ಗವಿ ಮಠದ ಪುಣ್ಯ ಭೂಮಿಯಲ್ಲಿ ಅನುಷ್ಠಾನ ಮಂದಿರ ಕಟ್ಟುವ ನಮ್ಮ ಗುರಿ ಹೊಂದಲಾಗಿದೆ ಎಂದರು.

ಗವಿ ಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಗವಿ ಮಠವು ಸಮಾನವಾದ ಜಾತ್ಯತೀತ ಹಾಗೂ ಪಕ್ಷಾತೀತವಾದ ಮಠವಾಗಿದೆ. ಮಠದ ಭಕ್ತರು ತನು, ಮನ, ಧನ ಅರ್ಪಿಸಿ ಜಗದ್ಗುರುಗಳ ಆಶೀರ್ವಾದ ಪಡೆಯಲು ಬಂದಿದ್ದಾರೆ. ಉಭಯ ಜಗದ್ಗುರುಗಳಲ್ಲಿಯೇ ಪರಮಾತ್ಮನನ್ನು ನೋಡುತ್ತಿದ್ದಾರೆ ಎಂದು ತಿಳಿಸಿದರು.

ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆಯ ತಾಲೂಕು ಅಧ್ಯಕ್ಷ ಬಸವಂತಪ್ಪಾ ಸತ್ಕರಿಸಿದರು. ಅಲ್ಲದೆ ಲೇಖಕ ವೀರಕೆಟ್ಟಿ ಎಂ ಪಾಟೀಲ ಬರೆದ ಕಲ್ಯಾಣದ ಶ್ರೀ ಘನಲಿಂಗ ರುದ್ರಮುನಿ ಗವಿಮಠ ಮಸ್ಥಕ ಮತ್ತು ಬಸವಕಲ್ಯಾಣ ಗವಿಮಠದ ವೆಬ್‌ಸೈಟ್ ಬಿಡುಗಡೆ ಮಾಡಲಾಯಿತು.

ಹಿರನಾಗಾಂವನ ಜಯಶಾಂತ ಲಿಂಗ ಸ್ವಾಮೀಜಿ ಮಾತನಾಡಿದರು. ಕೇದಾರ ಪೀಠದ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರು, ಬಬಲಾದನ ಗುರು ಪಾದಲಿಂಗ ಸ್ವಾಮೀಜಿ, ವಿಶ್ವಾರಾಧ್ಯ ಮುಳೆಂದ್ರ ಶಿವಾಚಾರ್ಯರು, ಕಿಟ್ಟಾದ ಸಿದ್ದೇಶ್ವರ ಶಿವಾಚಾರ್ಯರು, ರಾಜೇಶ್ವರದ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಶಾಸಕ ಈಶ್ವರ ಖಂಡ್ರೆ, ನಗರಸಭೆ ಅಧ್ಯಕ್ಷೆ ಶಾಹಾಜಾನ್ ಬಿರಾದಾರ ಸಿರಗಾಪೂರ, ನಿರ್ಮಲಾ ಮಾನೆಗೋಪಾಳೆ, ಲತಾ ಹಾರಕೂಡೆ, ನೀಲಕಂಠ ರಾಠೋಡ, ಸುಧೀರ ಕಾಡಾದಿ, ಲಕ್ಷ್ಮೀಬಾಯಿ ಭೀಮಾ ಘುಲೆ, ದೀಪಕ ಮಾಲಗಾರ, ಆನಂದ ದೇವಪ್ಪಾ, ಬಸವರಾಜ ಸ್ವಾಮಿ, ಪ್ರದೀಪ ವಾತಾಡೆ, ಅರ್ಜುನ ಕನಕ, ಶಿವರಾಜ ನರಶೆಟ್ಟಿ ಸಿದ್ರಾಮ ಗುದಗೆ ಇದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರೂ ಆದ ಶಾಸಕ ಶರಣು ಸಲಗರ ಸ್ವಾಗತಿಸಿದರು. ಹಾಸ್ಯ ಕಲಾವಿದ ನವಲಿಂಗ ಪಾಟೀಲ ನಿರೂಪಿಸಿದರು.

ಉಭಯ ಜಗದ್ಗುರುಗಳಿಗೆ ಬಂಗಾರ ತೊಡಿಸಿದ ಶಾಸಕ

ರಂಭಾಪುರಿ ಹಾಗೂ ಕೇದಾರ ಜಗದ್ಗುರುಗಳಿಗೆ ಶಾಸಕ ಶರಣು ಸಲಗರ ದಂಪತಿಗಳು ಸತ್ಕರಿಸಿದರು. ಜೊತೆಗೆ ಉಭಯ ಜಗದ್ಗುರುಗಳಿಗೆ ಎರಡೆರೆಡು ತೊಲೆ ಬಂಗಾರ ತೊಡಿಸಿದರು. ಉಭಯ ಜಗದ್ಗುರುಗಳು ಸಲಗರ ದಂಪತಿಗಳಿಗೆ ಸನ್ಮಾನಿಸಿ ಆಶೀರ್ವದಿಸಿದರು.

ಉಭಯ ಜಗದ್ಗುರುಗಳಿಗೆ ಭವ್ಯ ಸ್ವಾಗತ

ಅನುಭವ ಮಂಟಪದ ಕ್ರಾಸ್‌ಬಳಿ ರಂಭಾಪುರಿ ಹಾಗೂ ಕೇದಾರ ಜಗದ್ಗುರುಗಳಿಗೆ ಭವ್ಯವಾಗಿ ಸ್ವಾಗತಿಸಲಾಯಿತು. ಅನುಭವ ಮಂಟಪ ಕ್ರಾಸ್‌ನಿಂದ ವೇದಿಕೆಯವರೆಗೂ ಅದ್ದೂರಿಯಾಗಿ ಬೈಕ್ ರ‍್ಯಾಲಿ ಮೂಲಕ ಕರೆ ತರಲಾಯಿತು. ಅನುಭವ ಮಂಟಪದ ಬಳಿ ಕುಂಭ ಕಳಸ ಹೊತ್ತ ಮಹಿಳೆಯರು ಬರ ಮಾಡಿಕೊಂಡು ಸ್ವಾಗತಿಸಿದರು.

ಕಲಬುರಗಿಯಲ್ಲಿರುವ ನಮಗೆಲ್ಲಾ ಜಗದ್ಗುರುಗಳ ಆಶೀರ್ವಾದ ಅವಶ್ಯವಿದೆ. ಅನೇಕರು ಧರ್ಮದಲ್ಲಿ ಸಾಗದೇ ಅಧರ್ಮದಲ್ಲಿ ಸಾಗುತ್ತಿದ್ದಾರೆ. ಈ ಪದ್ಧತಿ ಬದಲಾಗಬೇಕು. ದಾರಿ ತಪ್ಪುತ್ತಿರುವ ಯುವ ಸಮೂಹ ಜಾಗೃತವಾಗಬೇಕಿದೆ. ಸಮಾಜ ಸಂಘಟಿಸುವ ಏಕತೆ ದಾರಿಯಲ್ಲಿ ನಾವೆಲ್ಲರೂ ಸಾಗಬೇಕಿದೆ. ವೀರಶೈವ ಲಿಂಗಾಯತ ಧರ್ಮಕ್ಕೆ ತನ್ನದೇ ಆದ ವಿಶಿಷ್ಟವಾದ ಕೊಡುಗೆ ಇದೆ.

ಈಶ್ವರ ಖಂಡ್ರೆ, ಶಾಸಕರು ಭಾಲ್ಕಿ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರು

ಮಾನವ ಧರ್ಮಕ್ಕೆ ಜಯವಾಗಲಿ ಎಂಬ ಸಂದೇಶ ಸಾರುವ ಮೂಲಕ ಮಾನವ ಕುಲದ ಹಿತ ಚಿಂತನೆ ತೋರಿದ ರೇಣುಕಾಚಾರ್ಯ ಜಯಂತಿ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಕಲ್ಯಾಣ ಉಳಿಬೇಕು, ಬಸವಕಲ್ಯಾಣ ಕಲ್ಯಾಣ ಆಗಬೇಕು ಎಂದು ರಂಭಾಪುರಿ ಜಗದ್ಗುರುಗಳು ಆಶೀರ್ವಾದ ಮಾಡಿದ ಪ್ರತಿಫಲದಿಂದಾಗಿ ಕ್ಷೇತ್ರದ ಶಾಸಕನಾಗಿ ಜನಸೇವೆ ಮಾಡುತ್ತಿದ್ದೇನೆ.

- ತರಣು ಸಲಗರ, ಶಾಸಕರು ಬನವಕಲ್ಯಾಣ

ವಿಜಯ ಕರ್ನಾಟಕ



ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಧರ್ಮ ಸಭೆಯಲ್ಲಿ ಶ್ರೀಮದ್ವೀರಶೈವ ಸದ್ಭೋಧನಾ ಸಂಸ್ಥೆ ತಾಲೂಕು ಅಧ್ಯಕ್ಷ ಬಸವಂತಪ್ಪಾ ಬಿರಾದಾರ ಅವರಿಗೆ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ನೀಡಿ ಸತ್ಕರಿಸಲಾಯಿತು.

Scanned with OKEN Scanner